# శబ్దరత్నాకరము

BL-C-14

830
617.

ವಚನ ಶಾಸ್ತ್ರ ಸಾರ

ಭಾಗ

೧-೨

617

ಸಂಶೋಧನ ಕೇಂದ್ರ ಗ್ರಂಥಾಲಯ

ವೀ. ಬ. ... ಕಾವ್ಯ ಪ್ರಶಸ್ತಿ ಪಡೆದ ... ಶಿಕ್ಷಕ ನಾಗನೂರ ...

# ಪ್ರಸ್ತಾವನೆ.

BL-C-4

ವಚನ ಗ್ರಂಥಗಳು ಕನ್ನಡ ಭಾಷೆಯಲ್ಲಿ ಬಹುಮಹತ್ವದ ಗ್ರಂಥಗಳಾಗಿವೆ. ಒಂದು ಒಂದು ಬಗೆಯ ವಾಙ್ಮಯವನ್ನೇ ಹುಟ್ಟಿಸಿರುತ್ತವೆಂದು ನಾವು ಹೇಳಬಹುದು. ಈ ವಾಙ್ಮಯವು ಮೊದಲಿಗೆ ಬಸವೇಶ್ವರನ ಕಾಲದಲ್ಲಿ ಉಗಮವಾಯಿತೆಂದು ತೋರುತ್ತದೆ. ಅಂದಿನಿಂದ ಈ ವರೆಗೆ ಅನೇಕ ವಚನಕಾರರು ಉದ್ಭವಿಸಿ, ಲಿಂಗಾಯತ ಮತ ತತ್ವಗಳನ್ನೂ ಅದರ ಪದ್ಧತಿಯನ್ನೂ ಇಂಥ ವಚನಗಳ ರೂಪವಾಗಿ ಅವರು ನಿರೂಪಿಸುತ್ತ ಬಂದಿರುವರು. ಈ ವಚನಕಾರರ ಸಂಖ್ಯೆಯು ಎಷ್ಟು ದೊಡ್ಡದಿರುತ್ತದೆಂಬದರ ಕಲ್ಪನೆಯು ನಾನು ಈ ಗ್ರಂಥದ ಕೊನೆಗೆ ಕೊಟ್ಟ ಪರಿಶಿಷ್ಟ (ಬ) ಇದರಿಂದ ವಾಚಕರಿಗೆ ಕೆಲ ಮಟ್ಟಿಗೆ ಕಂಡುಬರುವಂತೆ ಇದೆ. ಆದರೆ ಅದರಲ್ಲಿ ಕಾಣಿಸಿದಷ್ಟೇ ವಚನಕಾರರು ಕನ್ನಡದಲ್ಲಿ ಆಗಿಹೋಗಿರುವರೆಂದು ಮಾತ್ರ ಯಾರೂ ತಿಳಿಯಬಾರದು. ನಾವು ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಇನ್ನೂ ಹೆಚ್ಚಿಗೆ ಶೋಧಿಸಿದ್ದಾದರೆ, ಅವರ ಸಂಖ್ಯೆಯನ್ನು ಇನ್ನೂ ಹೆಚ್ಚಿಗೆ ಎಷ್ಟೋ ಮಡಿ ಬೆಳಿಸಬಹುದು. ಈ ಮೇರೆಗೆ ಈ ವಚನಕಾರರು ಕನ್ನಡ ವಾಙ್ಮಯವನ್ನು ಬೆಳಿಸಿರುವರಷ್ಟೇ ಅಲ್ಲ, ಅವರು ಕಾಲಕಾಲಕ್ಕೆ ಉತ್ಪನ್ನರಾಗಿ ಕರ್ನಾಟಕದ ಧಾರ್ಮಿಕ ಮತ್ತು ನೈತಿಕ ಉನ್ನತಿಗೋಸ್ಕರ ಬಹಳ ಪ್ರಯತ್ನಿಸಿದ್ದಾರೆ. ಆದ್ದರಿಂದ ಅವರ ಮತ ತತ್ವಗಳಾವವು, ಅವರ ವಿವೇಚನಾಪದ್ಧತಿಯು ಹ್ಯಾಗೆ ಇದೆ, ಮತ್ತು ಅವರ ಭಾಷಾಸರಣಿಯು ಎಂಥದಿರುತ್ತದೆ, ಎಂಬದರ ಕಲ್ಪನೆಯು ನಮ್ಮ ಕರ್ನಾಟಕಸ್ಥರಿಗೆ ಕೆಲಮಟ್ಟಿಗಾದರೂ ಆಗಬೇಕೆಂದು ಉದ್ದೇಶಿಸಿ ನಾನು ಈ ಗ್ರಂಥವನ್ನು ರಚಿಸಿದ್ದೇನೆ.

೧೨ನೇ ಮತ್ತು ೧೩ನೇ ಶತಮಾನಗಳು ಕರ್ನಾಟಕ ದೇಶದ ಇತಿಹಾಸದಲ್ಲಿ ಬಹುಮಹತ್ವದ ಕಾಲಗಳು. ಆ ಕಾಲಕ್ಕೆ ನಮ್ಮ ದೇಶದಲ್ಲಿ ಅನೇಕ ಧಾರ್ಮಿಕ ಮತ್ತು ರಾಜಕೀಯ ಕ್ರಾಂತಿಗಳು ಉತ್ಪನ್ನವಾದವು. ಆಗ ಹಳೇ ರಾಜ್ಯಗಳು ಮುರಿದು ಹೋಗಿ, ಅವುಗಳ ಸ್ಥಳದಲ್ಲಿ ಹೊಸ ರಾಜ್ಯಗಳು ಉದ್ಭವಿಸಿದವು. ಮತ್ತು ಹಳೇ ಧರ್ಮಪದ್ಧತಿಗಳು ಹೊರಟು ಹೋಗಿ, ಹೊಸ ಧಾರ್ಮಿಕ ಪದ್ಧ

ತಿಗಳು ನೆಲೆಗೊಂಡವು. ಈ ಕ್ರಾಂತಿಯ ಕಾಲದಲ್ಲಿಯೇ ಬಸವೇಶ್ವರ, ರಾಮಾನುಜಾಚಾರ್ಯ ಮಧ್ವಾಚಾರ್ಯರು ಉಗಮಿಸಿ ತಮ್ಮ ಮತಗಳನ್ನು ಕರ್ನಾಟಕದಲ್ಲಿ ಪ್ರಸಾರ ಪಡಿಸಿದರು. ದಕ್ಷಿಣ ಕರ್ನಾಟಕದಲ್ಲಿ ರಾಮಾನುಜಾಚಾರ್ಯರು ಹೊಯಿಸಳ ವಿಷ್ಣುವರ್ಧನನ ಬೆಂಬಲವನ್ನು ಪಡೆದವರಾಗಿ, ತಮ್ಮ ಮತವನ್ನು ಅತ್ತ ಹಬ್ಬಿಸಲು ಸಮರ್ಥರಾದರು. ಅದರಂತೆಯೇ ಉತ್ತರ ಕರ್ನಾಟಕದಲ್ಲಿ ಲಿಂಗಾಯತ ಮತವು ಪ್ರಾದುರ್ಭವಿಸಿತು. ಆದರೆ ಆರಂಭದಲ್ಲಿ ಇದಕ್ಕೆ ಅನೇಕ ತೊಂದರೆಗಳು ಉದ್ಭವಿಸಿದವು. ಇದರಿಂದ ಅಲ್ಲಿ ಒಂದು ಮಹತ್ವಾದ ರಾಜಕೀಯ ಮತ್ತು ಧಾರ್ಮಿಕ ಕ್ರಾಂತಿಯೇ ಉಪಸ್ಥಿತವಾಯಿತು. ಆ ಕಾಲಕ್ಕೆ ರಾಜಪಕ್ಷದವರೊಡನೆ ಲಿಂಗಾಯತರು ಒಂದು ಧರ್ಮ ಯುದ್ಧವನ್ನೇ ಹೂಡುವ ಪ್ರಸಂಗವು ಬಂದಿತು. ಈ ಪ್ರಸಂಗದಲ್ಲಿ ಅವರು ಅನೇಕ ಭಯಂಕರ ಕಷ್ಟಗಳನ್ನು ಅನುಭವಿಸಿದರು. ಹೀಗಿದ್ದರೂ ಕಟ್ಟಕಡೆಗೆ ಅವರೇ ಈ ಕ್ರಾಂತಿಯಲ್ಲಿ ಜಯಶೀಲರಾದರು. ಈ ಪ್ರಕಾರ ಅವರು ಜಯಶೀಲರಾಗಬೇಕಾದರೆ, ಜನಸಮುದಾಯದಲ್ಲಿ ಲಿಂಗಾಯತ ಮತ ತತ್ವಗಳ ಸಲುವಾಗಿ ಆಗ ಬೇರೂರಿದ ಒಂದು ವಿಲಕ್ಷಣ ಪ್ರೀತಿಯೇ ಸರಿ. ಈ ಪ್ರೀತಿಯನ್ನು ಹುಟ್ಟಿಸಲಿಕ್ಕೆ ಈ ವಚನಕಾರರೇ ಕಾರಣರು. ಈ ವಚನಕಾರರು ತಮ್ಮ ಉದಾತ್ತ ಶುದ್ಧ ತತ್ವಗಳನ್ನು ಜನರಲ್ಲಿ ಹಬ್ಬಿಸಿದರು. ಇದರಿಂದ ಜನರಲ್ಲಿ ಆಗ ಒಂದು ವಿಲಕ್ಷಣ ಜಾಗ್ರತೆಯು ಉಂಟಾಗಿ ಅನೇಕ ದುರ್ಧರ ಪ್ರಸಂಗಗಳು ಅವರ ಮೇಲೆ ಬಂದೊದಗಿದರೂ ಕೂಡ, ಅವುಗಳನ್ನು ಅವರು ಎದುರಿಸಲು ಸಮರ್ಥರಾದರು. ಹೀಗೆ ಈ ವಚನಗ್ರಂಥಗಳು ಒಂದು ಕಾಲಕ್ಕೆ ಕರ್ನಾಟಕ ದೇಶದಲ್ಲಿ ಉಂಟಾದ ಒಂದು ಮಹತ್ವದ ರಾಜಕೀಯ ಮತ್ತು ಧಾರ್ಮಿಕ ಕ್ರಾಂತಿಯಲ್ಲಿ ಬಹು ದೊಡ್ಡ ಕಾರ್ಯಗಳನ್ನು ಮಾಡಿರುವವು.

ವಚನಗ್ರಂಥಗಳು, ಅವುಗಳಲ್ಲಿ ಮುಖ್ಯವಾಗಿ ಪುರಾತನ ಕಾಲದವುಗಳು, ಹ್ಯಾಗೆ ಈ ಕಾಲಕ್ಕೆ ಒಂದು ಪುಸ್ತಕವನ್ನು ವಿಷಯಗಳಿಗನುಸಾರವಾಗಿ ಕ್ರಮವಾಗಿ ಬರೆಯುವ ಪದ್ಧತಿಯು ಇದೆಯೋ ಹಾಗೆ ಬರೆದುವುಗಳಲ್ಲ. ವಚನಕಾರನ ಮನಸ್ಸಿನಲ್ಲಿ ಯಾವಾಗ ಒಂದು ಸ್ಫೂರ್ತಿಯು ಬಂದಿತೋ, ಆ ಕಾಲಕ್ಕೆ ಅವು ಬರೆದವುಗಳಿರುತ್ತವೆ. ಆದ್ದರಿಂದ ಈ ವಚನಗಳಲ್ಲಿ ಒಂದು ವ್ಯವಸ್ಥಿತ ಸ್ವರೂಪವು ತೋರಿ ಬರುವದಿಲ್ಲ. ಆದರೆ ಹಿಂದುಗಡೆ ಆಗಿ ಹೋಗಿರುವ ವಚನಕಾರರು

ಅವುಗಳ ಈ ಸ್ವರೂಪವನ್ನು ತಪ್ಪಿಸಿ ವಿಷಯಕ್ಕನುಸಾರವಾಗಿ ಅವುಗಳನ್ನು ರಚಿಸಲಿಕ್ಕೆ ಹತ್ತಿದರು. ಮತ್ತು ಅನೇಕ ವಿದ್ವಾಂಸರು ಅವ್ಯವಸ್ಥೆಯಿಂದ ಇದ್ದ ಮೊದಲಿನ ಈ ವಚನಗಳಿಗೆ ಒಂದು ವ್ಯವಸ್ಥಿತ ಸ್ವರೂಪನ್ನು ಕೊಡಹತ್ತಿದರು. ಈ ಪ್ರಸ್ತಾವನೆಯ ಅಂತ್ಯಭಾಗದಲ್ಲಿ ನಾನು ಈ ಗ್ರಂಥರಚನೆಗೆ ಮುಖ್ಯವಾಗಿ ಆಧಾರವಾಗಿಟ್ಟುಕೊಂಡಿರುವ ಗ್ರಂಥಗಳ ಒಂದು ಪಟ್ಟಿಯನ್ನು ಕೊಟ್ಟಿದ್ದು, ಆ ಪಟ್ಟಿಯಲ್ಲಿಯ ಗ್ರಂಥಗಳ ಮೇಲಿಂದ ಈ ಸಂಗತಿಯು ವ್ಯಕ್ತವಾಗುವಂತೆ ಇದೆ ಇವುಗಳಲ್ಲಿ ನಂ|| ೧, ೨, ೩ ಈ ಗ್ರಂಥಗಳಲ್ಲಿ ಬೇರೆ ಬೇರೆ ವಚನಗಳು ಅವುಗಳ ಕರ್ತೃಗಳ ಹೆಸರುಗಳ ಪ್ರಕಾರ ಅನುಕ್ರಮವಾಗಿ ಕೊಡಲ್ಪಟ್ಟಿವೆ. ಆದರೆ ಅವುಗಳಲ್ಲಿಯ ಆಯಾ ವಚನಗಳು ಮಾತ್ರ ವಿಷಯಕ್ಕನುಸಾರವಾಗಿ ಹೊಂದಿಸಲ್ಪಟ್ಟಿಲ್ಲ. ನಂ|| ೪, ೫, ೬ ಈ ಗ್ರಂಥಗಳಲ್ಲಿ ಯಾವ ತರದ ವ್ಯವಸ್ಥೆಯೂ ಇರದೆ ಬೇರೆ ಬೇರೆ ವಚನಕಾರರ ವಚನಗಳು ಬೇಕಾದ ಕಡೆಗೆ ಬೇಕಾದ ಹಾಗೆ ಸೇರಿಸಲ್ಪಟ್ಟವೆ. ಈ ಗ್ರಂಥಗಳಲ್ಲಿ ಒಬ್ಬನೊಬ್ಬ ಸಂಗ್ರಹಕಾರನು ತನಗೆ ಶಿಕ್ಕ ವಚನಗಳನ್ನು ತನಗೆ ಬೇಕಾದ ರೀತಿಯಿಂದ ಕೂಡಿಸುತ್ತ ಹೋದಂತೆ ಕಂಡು ಬರುತ್ತದೆ. ಒಂದು ವೇಳೆ ಪೂರ್ವಿಕರೇ ತಾವಾಗಿಯೇ ವಿಷಯಕ್ಕನುಸಾರವಾಗಿ ಈ ಗ್ರಂಥಗಳನ್ನು ರಚಿಸಿದ್ದರೆ, ಈ ತರದ ಭಿನ್ನತೆಯು ಅವುಗಳಲ್ಲಿ ತೋರಿ ಬರುತ್ತಿದ್ದಿಲ್ಲ. ಆದರೆ ೭ ರಿಂದ ೧೫ರ ವರೆಗಿನ ಗ್ರಂಥಗಳು ಮಾತ್ರ ಹೀಗಿರದೆ, ಅವುಗಳು ವಿದ್ವಾಂಸರಿಂದ ತಾವು ನಿರೂಪಿಸುತ್ತಿರುವ ವಿಷಯುಗಳಿಗನುಸಾರವಾಗಿ ಕ್ರಮವಾಗಿ ಕೂಡಿಸಲ್ಪಟ್ಟಿವೆ. ನಂ|| ೧೬, ೧೭, ೧೮ ಇವು ವಾದದ ವಚನಗಳಿವೆ. ಅಂದರೆ ಬೇರೆ ಬೇರೆ ವಚನಕಾರರ ವಚನಗಳನ್ನು ತೆಗೆದುಕೊಂಡು ವಾಗ್ವಾದ ರೂಪವಾಗಿ ವಿಷಯ ನಿರೂಪಣೆಯು ಇವುಗಳಲ್ಲಿ ಮಾಡಲ್ಪಟ್ಟಿದೆ. ಇವಾದರೂ ಒಂದು ತರದ ಸಂಗ್ರಹಗಳೇ ಇರುತ್ತವೆ. ನಂ|| ೧೯, ೨೦, ೨೧ ಇವು ಬಸವ, ಚನ್ನಬಸವ, ಮತ್ತು ಪ್ರಭುದೇವ ಇವರ ವಚನಗಳು ಇವೆ. ಇವುಗಳಲ್ಲಿ ಒಂದು ವ್ಯವಸ್ಥಿತ ಸ್ವರೂಪು ಇರುತ್ತದೆ. ಆದರೆ ಈ ಸ್ವರೂಪನ್ನು ಅವುಗಳಿಗೆ ಮೂಲ ವಚನಕಾರರೇ ಕೊಟ್ಟರೆಂದು ಹೇಳಲಿಕ್ಕೆ ಬರುವದಿಲ್ಲ. ಹಿಂದುಗಡೆ ಬಲ್ಲವರು ತಮಗೆ ಸಿಕ್ಕ ಇವರ ವಚನಗಳನ್ನು ತೆಗೆದುಕೊಂಡು, ಅವುಗಳಿಗೆ ಈ ಮೇರೆಗೆ ಒಂದು ಸ್ವರೂಪನ್ನು ಕೊಟ್ಟಿರುವರೆಂದು ನನಗೆ ತೋರುತ್ತದೆ. ಯಾಕೆಂದರೆ ಈ ಗ್ರಂಥಗಳಲ್ಲಿ ಇಲ್ಲದಂಥ ಅನೇಕ ವಚನಗಳು ಬೇರೆ ಬೇರೆ

ವಚನ ಸಂಗ್ರಹಗಳಲ್ಲಿ ಹೇರಳವಾಗಿ ದೊರೆಯುತ್ತವೆ. ಆದರೆ ನಂ|| ೨೧, ೨೨, ೨೩, ೨೫, ೨೮, ೩೯, ಈ ಗ್ರಂಥಗಳು ಮೂಲ ವಚನಕಾರರೇ ಅವುಗಳನ್ನು ವಿಷಯಗಳಿಗನುಸಾರವಾಗಿ ಸ್ವತಃ ರಚಿಸಿರುವರೆಂದು ತೋರುತ್ತದೆ. ಆದರೆ ಈ ವಚನಕಾರರೆಲ್ಲ ೧೫ನೇ ಶತಮಾನದಿಂದ ಈಚಿನವರಿರುತ್ತಾರೆ. ನಂ|| ೨೬, ೨೭, ೩೦ ಇವು ಆಯಾ ವಚನಕಾರರ ಅಪೂರ್ಣ ಸಂಗ್ರಹಗಳು ಅವೆ. ಈ ಮೇರೆಗೆ ಯಾರೋ ಒಬ್ಬರು ತಮಗೆ ಸಿಕ್ಕ ವಚನಗಳನ್ನು ಹೀಗೆ ಕೂಡಿಸಿರುತ್ತಾರೆ. ವಚನಕಾರರ ಈ ತರದ ಅಪೂರ್ಣ ಸಂಗ್ರಹಗಳು ಮಠಗಳಲ್ಲಿ ಅಸಂಖ್ಯಾತವಾಗಿ ದೊರೆಯುತ್ತವೆ. ನನ್ನ ಕಣ್ಣಿಗೆ ಬಿದ್ದ ಇವುಗಳನ್ನೆಲ್ಲ ಒಂದು ಪಟ್ಟಿಯಲ್ಲಿ ವಿವರಿಸುವದು ಅಶಕ್ಯವು. ನನಗೆ ದೊರೆದ ಮಹತ್ವದ ಗ್ರಂಥಗಳನ್ನು ಮಾತ್ರ ನನ್ನ ಮೇಲ್ಕಂಡ ಪಟ್ಟಿಯಲ್ಲಿ ಕಾಣಿಸಿದ್ದೇನೆ. ಮೇಲ್ಕಂಡ ಸಂಗತಿಗಳ ಮೇಲಿಂದ ಈ ವಚನ ಗ್ರಂಥಗಳು ಮೊದಲು ಯಾವ ರೀತಿಯಿಂದ ಬರೆಯಲ್ಪಟ್ಟವು, ಮತ್ತು ಅವುಗಳು ಈಗ ಯಾವ ಸ್ಥಿತಿಯಲ್ಲಿ ದೊರಕುತ್ತವೆ, ಎಂಬದರ ಕಲ್ಪನೆಯು ಕೆಲ ಮಟ್ಟಿಗೆ ವಾಚಕರಿಗೆ ಬರಬಹುದು.

೧೯೦೫ನೇ ಇಸ್ವಿಯಲ್ಲಿ ಗುಬ್ಬಿಮಲ್ಲಹಣರು ಮಾಡಿದ ಗಣಭಾಷ್ಯ ರತ್ನಮಾಲೆಯು ಒಂದು ಕೈಬರಹದ ಗ್ರಂಥವು ನನ್ನ ದೃಷ್ಟಿಗೆ ಬಿತ್ತು. ಅದರಲ್ಲಿಯ ಬಹು ಸುಂದರವಾದ ವಚನಗಳು ನನ್ನ ಕಣ್ಣಿಗೆ ಬಿದ್ದವು. ಅಂದಿನಿಂದ ನನಗೆ ಈ ವಚನಗಳ ವಿಷಯವಾಗಿ ಶೋಧ ಮಾಡುವ ಕುತೂಹಲವು ಹುಟ್ಟಿತು. ಆದ್ದರಿಂದ ವಿಜಾಪುರ ಜಿಲ್ಹೆಯಲ್ಲಿದ್ದಾಗ, ನಾನು ಹೋದ ಗ್ರಾಮಗಳಲ್ಲಿ ಅವುಗಳ ವಿಷಯವಾಗಿ ನಾನು ಶೋಧ ಮಾಡುತ್ತಿದ್ದು, ನನಗೆ ದೊರೆದ ವಚನಗಳಲ್ಲಿ ನನಗೆ ಮಹತ್ವವೆಂದು ಕಂಡ ವಚನಗಳನ್ನಷ್ಟೇ ನಾನು ಬರೆದಿಟ್ಟುಕೊಳ್ಳುತ್ತ ಬಂದೆನು. ಈ ನನ್ನ ಶೋಧದಲ್ಲಿ ಈ ಪ್ರಸ್ತಾವನೆಯ ಅಂತ್ಯದಲ್ಲಿ ಕೊಟ್ಟ ದೊಡ್ಡ ದೊಡ್ಡ ಗ್ರಂಥಗಳೂ ನನಗೆ ದೊರೆದವು. ಇವುಗಳಿಂದ ನನ್ನ ಸಂಗ್ರಹಕ್ಕೆ ಬಹಳ ಸಹಾಯವಾಯಿತು. ಈ ಮೇರೆಗೆ ನಾನು ಈ ವಚನಗಳ ಸಂಗ್ರಹ ಮಾಡುತ್ತ ಬಂದು, ೧೯೧೮ನೇ ಇಸ್ವಿಯಲ್ಲಿ ಈ ನನ್ನ ಸಂಗ್ರಹಕ್ಕೆ ಒಂದು ಮೂರ್ತಸ್ವರೂಪ ಕೊಡಲು ಪ್ರಯತ್ನಪಟ್ಟೆನು. ಆದರೆ ಮೊದಲಿಗೆ ಈ ಕಾರ್ಯವು ನನಗೆ ದುಸ್ತರವಾಗಿ ತೋರಿತು. ಯಾಕಂದರೆ ವಚನಗಳ ವಿಚಾರವು ಹೊಸ ತರದವಿರುತ್ತವೆ. ಅವುಗಳಂಥ ವಿಚಾರ ಸರಣಿಯು ಹಿಂದೂ ಧರ್ಮದ ಬೇರೆ ಯಾವ

ವಾಙ್ಮಯದಲ್ಲಿಯೂ ದೊರಕುವದಿಲ್ಲ. ಇದಲ್ಲದೆ ಇವುಗಳಲ್ಲಿ ಸಾಂಕೇತಿಕ ಶಬ್ದಗಳು ಬಹಳ ಇದ್ದು, ಅವುಗಳ ವ್ಯಾಖ್ಯೆಗಳಾಗಲಿ ಇಲ್ಲವೇ ಅವುಗಳ ಪೂರ್ಣ ವಿವರಣೆಯಾಗಲಿ ಒತ್ತಟ್ಟಿಗೆ ಎಲ್ಲಿಯೂ ಶಿಗುವದಿಲ್ಲ. ಅದರಂತೆ ಬೇರೆ ಬೇರೆ ಸ್ಥಲಗಳ ಸಂಬಂಧವನ್ನು ತಿಳಿದುಕೊಳ್ಳುವದೂ ಕಷ್ಟ. ಇದಲ್ಲದೆ ಈ ವಚನಗಳ ಮರ್ಮವನ್ನು ಈ ಕಾಲಕ್ಕೆ ತಿಳಿದವರೂ ಬಹಳ ಸ್ವಲ್ಪ. ಮತ್ತು ಇಂಥ ಜನರು ಅಲ್ಲಲ್ಲಿಗೆ ಇದ್ದರೂ, ಅವರು ಅವುಗಳನ್ನು ವಿವರಿಸದೆ ಗುಪ್ತವಾಗಿಡುವದುಂಟು. ಆದ್ದರಿಂದ ನನ್ನ ಸಂಗ್ರಹಕ್ಕೆ ಒಂದು ವ್ಯವಸ್ಥಿತ ಸ್ವರೂಪನ್ನು ಕೊಡುವದು ಮೊದಲಿಗೆ ದುಸ್ತರವಾಯಿತು. ಆದರೂ ನಾನು ಸಂಗ್ರಹಿಸಿದ ವಚನಗಳನ್ನು ಪರಸ್ಪರ ತುಲನಾತ್ಮಕ ರೀತಿಯಿಂದ ವಿಚಾರಮಾಡುತ್ತಿರಲು, ಅವು ಬಾಹ್ಯತಃ ಅವ್ಯವಸ್ಥಿತವಾಗಿ ಕಂಡರೂ, ಅವುಗಳಲ್ಲಿ ಒಂದು ವ್ಯವಸ್ಥೆಯೂ ಏಕರೂಪತೆಯೂ, ಏಕವಿಚಾರ ಸರಣಿಯೂ ಕಂಡುಬಂದವು. ಈ ಮೇರೆಗೆ ಇವುಗಳ ತತ್ವಗಳನ್ನು ಕಂಡು ಹಿಡಿದು, ನನ್ನ ಸಂಗ್ರಹಕ್ಕೆ ಒಂದು ವ್ಯವಸ್ಥಿತ ಸ್ವರೂಪವನ್ನು ಕೊಟ್ಟಿದ್ದೇನೆ.

ಈಗಿನ ಗ್ರಂಥದಲ್ಲಿ ನಾನು ಲಿಂಗಾಯತ ಮತದ ಸಾಮಾನ್ಯ ತತ್ವಗಳನ್ನು ಮಾತ್ರ ವಿವರಿಸಿದ್ದೇನೆ. ಈ ವಿವರಣೆಯು ಷಟ್‌ಸ್ಥಲಗಳಿಗೆ ಅನುಸಾರವಾಗಿ ಮಾಡಲ್ಪಟ್ಟದೆ. ಆದರೆ ಈ ಷಟ್‌ಸ್ಥಲದ ತತ್ವಗಳನ್ನು ತಿಳಿಯಬೇಕಾದರೆ, ವಚನಕಾರರಲ್ಲಿ ದೇವರು ಮತ್ತು ಲಿಂಗ ಇವುಗಳ ವಿಷಯವಾಗಿ ಯಾವ ವಿಚಾರಗಳಿರುತ್ತವೆ ಎಂಬದನ್ನು ಸ್ಪಷ್ಟವಾಗಿ ತಿಳಿಯದ ಹೊರ್ತು, ಷಟ್‌ಸ್ಥಲ ವಿಷಯಗಳು ಚನ್ನಾಗಿ ಗೊತ್ತಾಗಲಾರವು. ಆದ್ದರಿಂದ ಈ ವಿಷಯಗಳನ್ನು ನಾನು ಗ್ರಂಥಾರಂಭದಲ್ಲಿ ಶೇರಿಸಿದ್ದೇನೆ. ಈ ವಚನಗಳು ಪಾನು ೧ ರಿಂದ ೯೧ರ ವರೆಗೆ ಕೊಡಲ್ಪಟ್ಟಿವೆ. ಇವುಗಳಲ್ಲಿ ವೇದೋಪನಿಷತ್ತುಗಳಲ್ಲಿಯ ಮಹತ್ವದ ತತ್ವಗಳೇ ಅಡಕವಾಗಿವೆ. ಅದರಂತೆ ಲಿಂಗಾಯತ ಮತಪದ್ಧತಿಯಲ್ಲಿ ಬೇರೆ ಬೇರೆ ಸ್ಥಲಗಳು ಯಾವ ಯಾವವು ಇರುತ್ತವೆಂಬದನ್ನು ತಿಳಿಯುವದು ಅವಶ್ಯವಿರುವದರಿಂದ ಅವುಗಳ ಸಂಕ್ಷಿಪ್ತ ವರ್ಣನೆಯು ಪಾನು ೯೧ ರಿಂದ ೯೮ರ ವರೆಗೆ ಕೊಡಲ್ಪಟ್ಟಿದೆ. ಈ ಗ್ರಂಥದಲ್ಲಿ ಅಷ್ಟಾವರಣಗಳಲ್ಲಿ ಮುಖ್ಯವಾಗಿರುವ ಗುರುಲಿಂಗಜಂಗಮದ ಉಲ್ಲೇಖವೂ ಮೇಲಿಂದ ಮೇಲೆ ಬರುತ್ತದೆ. ಆದ್ದರಿಂದ ಅವುಗಳ ಪರಸ್ಪರ ಸಂಬಂಧವನ್ನು ಕುರಿತು ೯೮, ೯೯ ಪಾನುಗಳಲ್ಲಿ ನಾನು ಬಹು ಸಂಕ್ಷೇಪವಾಗಿ

ವಿವರಿಸಿದ್ದೇನೆ. ಆದರೆ ಇವೆರಡೂ ವಿಷಯಗಳ ಸವಿಸ್ತಾರ ವರ್ಣನೆಯು ನಾನು ಮುಂದೆ ರಚಿಸಲೆಣಿಸಿರುವ ೨ನೇ ೩ನೇ ಭಾಗಗಳಲ್ಲಿ ಬರುವದು.

ಆರು ಸ್ಥಲಗಳಲ್ಲಿ ಮೊದಲನೆಯ ಎರಡು ಸ್ಥಲಗಳಾದ ಭಕ್ತಮಾಹೇಶ್ವರ ಸ್ಥಲಗಳಲ್ಲಿ ಭಕ್ತಿ ಮತ್ತು ನೀತಿಯ ವಿಷಯಗಳು ಪ್ರಾಧಾನ್ಯವಾಗಿರುತ್ತವೆ. ಆದ್ದ ರಿಂದ ಈ ವಿಷಯಗಳಿಗೆ ನಾನು ಈ ಸ್ಥಲಗಳ ವಿವೇಚನೆಯಲ್ಲಿ ಮಹತ್ವದ ಸ್ಥಾನವನ್ನು ಕೊಟ್ಟಿದ್ದೇನೆ. ವಚನಕಾರರ ಈ ನೀತಿಯ ವಚನಗಳು ಎಷ್ಟು ಮನೋಹರವಾಗಿರುತ್ತವೆಂಬದನ್ನು ವಾಚಕರು ತಾವೇ ತಿಳಿದು ನೋಡಬೇಕು. ಅವುಗಳು ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ವಿದ್ವಾಂಸರು ಬರೆದ ಯಾವ ನೀತಿ ಯ ಗ್ರಂಥವನ್ನಾದರೂ ಸರಿಗಟ್ಟುವಂತೆ ಇವೆ. ಆದರೆ ಇವುಗಳಲ್ಲಿ ವಚನಕಾ ರರು ಧಾರ್ಮಿಕ ತತ್ವಗಳನ್ನು ಹಿಡಿದುಕೊಂಡು ನೈತಿಕ ತತ್ವಗಳನ್ನು ಹ್ಯಾಗೆ ನಿರೂಪಿಸಿರುವರೆಂಬದನ್ನು ತಿಳಿದುಕೊಳ್ಳುವದು ಬಹಳ ಮಹತ್ವದ್ದಿರುತ್ತದೆ. ಪ್ರಾರ್ಥನೆಯ ವಚನಗಳೆಂದು ನಾನು ಪಾನು ೨೧೪ ರಿಂದ ೨೫೭ರ ವರೆಗೆ ಪ್ರತ್ಯೇಕವಾಗಿ ವಚನಗಳನ್ನು ಸೇರಿಸಿದ್ದೇನೆ. ಇವುಗಳೆಲ್ಲ ಭಕ್ತಿರಸಭರಿತ ವಾಗಿರುತ್ತವೆ. ಮಾಹೇಶ್ವರ ಸ್ಥಲದಲ್ಲಿ ಧೈರ್ಯ, ಸಾಹಸ, ಏಕನಿಷ್ಠತೆಯೇ ಪ್ರಾಧಾನ್ಯಗುಣಗಳು. ಆದ್ದರಿಂದ ಈ ವಿಷಯಕ್ಕೆ ಸಂಬಂಧಿಸಿದ ವಚನಗಳೇ ಇಲ್ಲಿ ಉದಹರಿಸಲ್ಪಟ್ಟವೆ. ಇವುಗಳಲ್ಲಿ ಪಾನು ೨೬೧ ರಿಂದ ೨೭೨ ರ ವರೆಗೆ ಇರುವ ವಚನಗಳು ಬಹಳ ಮಹತ್ವವಾದವುಗಳು. ಇವುಗಳಲ್ಲಿ ಬಸವೇಶ್ವರನ ವಚನಗಳು ಅನೇಕವಿದ್ದು, ಅವುಗಳನ್ನು ನೋಡಿದರೆ, ಆತನು ಅತ್ಯಂತ ಸಂಕಟ ಸಮಯದಲ್ಲಿದ್ದಾಗ, ಅವನು ಅವುಗಳನ್ನು ಬರೆದನೋ ಏನೋ ಎಂಬಂತೆ ಭಾಸವಾಗುತ್ತದೆ. ಅವುಗಳಲ್ಲಿ ಒಬ್ಬ ಮಹಾ ಬಲಶಾಲಿಯಾದ ಕರ್ಮವೀರನಿಗೆ ಒಪ್ಪುವಂಥ ಮಾತುಗಳು ಅನೇಕವಿವೆ. ಪ್ರಸಾದಿ ಮತ್ತು ಪ್ರಾಣಲಿಂಗಿ ಸ್ಥಲ ಗಳು ಮನಸ್ಸಿಗೆ ಸಂಬಂಧಪಟ್ಟವುಗಳು ಇರುತ್ತವೆ. ಪ್ರಸಾದಿ ಸ್ಥಲದ ವಚನಗ ಳನ್ನು ಭಗವದ್ಗೀತೆಯ ತತ್ವಗಳಿಗೆ ಸರಿಹೋಲಿಸಬಹುದು. ಈ ಸ್ಥಲದಲ್ಲಿ ಕ್ರಿಯೆಯ ವಿಚಾರ, ಕಾಯಕದ ಅವಶ್ಯಕತೆ, ಅರ್ಪಣದ ತತ್ವಗಳು ಇವೇ ಮೊದಲಾದ ವಿಷಯಗಳು ಅಡಕವಾಗಿವೆ. ಪ್ರಾಣಲಿಂಗಿ ಸ್ಥಲದಲ್ಲಿ ಯೋಗ ಶಾಸ್ತ್ರದ ತತ್ವಗಳು ಒಳಕೊಂಡಿವೆ. ವಚನಕಾರರು ಹಠಯೋಗದ ತತ್ವಗಳನ್ನು ನಿರಾಕರಿಸಿದರೂ, ಯೋಗಾಭ್ಯಾಸದ ಮುಖ್ಯ ತತ್ವಗಳನ್ನು ಕಂಡುಹಿಡಿದು,

ಅವುಗಳನ್ನು ತಮ್ಮ ಸಾಧನೆಯಲ್ಲಿ ಇಟ್ಟುಕೊಂಡಿದ್ದಾರೆ. ಶರಣ ಮತ್ತು ಐಕ್ಯ ಸ್ಥಲಗಳು ಜ್ಞಾನಕ್ಕೆ ಸಂಬಂಧಪಟ್ಟವಿರುತ್ತವೆ. ಜ್ಞಾನಕ್ಕೂ ಕ್ರಿಯೆಗೂ ಇರುವ ಸಂಬಂಧವನ್ನೂ ಜಂಗಮನ ಆಚರಣೆಯ ವಿಷಯಗಳನ್ನೂ ಶರಣಸ್ಥಲದ ವಚನಗಳಲ್ಲಿ ವಾಚಕರು ಕಂಡುಕೊಳ್ಳಬಹುದು. ಐಕ್ಯ ಸ್ಥಲದಲ್ಲಿ ನಿವೃತ್ತಿಯ ತತ್ವಗಳು ಅಡಕವಾಗಿರುತ್ತವೆ. ನಾನು ಈ ಮೇರೆಗೆ ವಿವರಿಸಿದ ಪದ್ಧತಿಯು ವಾಚಕರಿಗೆ ಹೊಸ ಮಾದರಿಯದಾಗಿ ತೋರಿದರೂ, ನಾನು ಪುರಾತನರ ವಿಚಾರಗಳನ್ನೇ ಇದ್ದಕ್ಕಿದ್ದ ಹಾಗೆ ಇಲ್ಲಿ ಇಟ್ಟಿದ್ದೇನೆ ಹೊರ್ತು ಅವುಗಳಲ್ಲಿ ನಾನು ಏನೊಂದೂ ಬದಲು ಮಾಡಿಲ್ಲ.

ನಾನು ಈ ಗ್ರಂಥದಲ್ಲಿ ನಿರೂಪಿಸಿದ ವಿಚಾರಗಳನ್ನು ಈಗಿನ ಭಾಷೆಯಲ್ಲಿ ಗದ್ಯಾತ್ಮಕವಾಗಿ ವಿವರಿಸಬೇಕೆಂದು ನಾನು ಮೊದಲು ಯೋಚಿಸಿದ್ದೆನು. ಮತ್ತು ಆ ಮೇರೆಗೆ ಗ್ರಂಥವನ್ನೂ ಆರಂಭಿಸಿದ್ದೆನು. ಆದರೆ ಇದರಿಂದ ಕನ್ನಡಿಗರಿಗೆ ಕನ್ನಡದಲ್ಲಿಯ ಒಂದು ಮಹತ್ವದ ವಾಙ್ಮಯದ ಅರಿಕೆಯು ಆಗುವದಿಲ್ಲೆಂದು ತಿಳಿದು, ನಾನು ಆ ಪದ್ಧತಿಯನ್ನು ಬಿಟ್ಟುಕೊಟ್ಟು, ಈಗಿನ ಪದ್ಧತಿಯನ್ನೇ ಸ್ವೀಕರಿಸಿದೆನು. ಆದರೆ ಇದರಿಂದ ಕೆಲವು ಅಪ್ರತಿಹಾರ್ಯ ತೊಂದರೆಗಳುಂಟಾಗಿವೆ. ಇದರಿಂದ ಪ್ರತಿಯೊಂದು ವಿಷಯದ ಮೇಲೆ ಪುನರುಕ್ತಿಗಳು ಬಹಳ ಆಗಿರುತ್ತವೆ. ಇದಲ್ಲದೆ ಓಳಿಯಿಂದ ವಚನಗಳನ್ನು ಕೂಡಿಸುವದೂ ಕಠಿಣವಾಯಿತು. ಈ ನ್ಯೂನತೆಗಳು ಈ ಗ್ರಂಥದಲ್ಲಿ ಉಂಟಾದರೂ, ಇದರಲ್ಲಿ ಅನೇಕ ಉಪಯೋಗಗಳುಂಟೆಂದು ನನಗೆ ತೋರಿದ್ದರಿಂದ, ನಾನು ಕಡೆಗೆ ಈ ಪದ್ಧತಿಯನ್ನೇ ಅವಲಂಬಿಸಿದೆನು. ಇದರಿಂದ ವಚನಕಾರರ ವಿವೇಚನಾಪದ್ಧತಿಯೂ ಅವರು ನಾನಾಬಗೆಯಾಗಿ ಒಂದು ವಿಷಯವನ್ನು ವಿವರಿಸುವ ಜಾಣ್ಮೆಯೂ, ಅವರ ಭಾಷಾಶೈಲಿಗಳೂ ತಿಳಿಯುವದಲ್ಲದೆ, ಆ ವಚನಕಾರರ ಅಧಿಕಾರಯುಕ್ತ ವಾಣಿಯು ಬೇರೆ ಬೇರೆ ವಿಷಯಗಳ ಯುಕ್ತಾಯುಕ್ತತೆಯ ಬಗ್ಗೆ ವಾಚಕರ ಮನಸ್ಸನ್ನು ದೃಢಪಡಿಸಲಿಕ್ಕೆ ಕಾರಣವಾಗುತ್ತದೆ.

ಈ ಗ್ರಂಥ ರಚನೆಯಲ್ಲಿ ನಾನು ಪ್ರತಿಯೊಂದು ಸ್ಥಲದ ಪ್ರಾರಂಭದಲ್ಲಿ ಆ ಸ್ಥಲದ ಸಾಮಾನ್ಯತತ್ವಗಳನ್ನು ಮೊದಲಿಗೆ ನಿರೂಪಿಸಲಿಕ್ಕೆ ಯತ್ನಿಸಿದ್ದೇನೆ. ಆ ಮೇಲೆ ಆ ತತ್ವಗಳಿಗೂ ಆ ಸ್ಥಲದ ಆಚರಣೆಗಳಿಗೂ ಸಂಬಂಧಿಸಿದ ವಿಷಯಗಳನ್ನು ವಿವರಿಸಿದ್ದೇನೆ. ಕಟ್ಟಕಡೆಗೆ ಆ ಸ್ಥಲದ ಆಚಾರಗಳ ಅತಿರೇಕ ಮತ್ತು

ಅವುಗಳ ದುರುಪಯೋಗ ಇವುಗಳನ್ನು ನಿರ್ದೇಶಿಸಿದ್ದೇನೆ. ಈ ಸಂಗತಿಯನ್ನು ಸಾಮಾನ್ಯವಾಗಿ ಪ್ರತಿಯೊಂದು ಸ್ಥಲದಲ್ಲಿಯೂ ವಾಚಕರು ಈ ಗ್ರಂಥದಲ್ಲಿ ಕಂಡುಕೊಳ್ಳಬಹುದು. ಮತ್ತು ಪ್ರತಿಯೊಂದು ವಿಷಯನಿರೂಪಣೆಯಲ್ಲಿ ಪ್ರಥಮ ದಲ್ಲಿ ಆ ವಿಷಯಕ್ಕೆ ಸಂಬಂಧಿಸಿದ ಸುಲಭವಾದ ಮತ್ತು ತೀವ್ರವಾಗಿ ತಿಳಿಯುವ ವಚನಗಳನ್ನು ಕೊಟ್ಟಿದ್ದೇನೆ. ಆ ಮೇಲೆ ಬರಬರುತ್ತ ಕಠಿಣ ವಚನಗಳನ್ನು ಕೊಟ್ಟಿದ್ದೇನೆ. ಆದರೆ ಹಿಂದುಗಡೆ ಈ ಗ್ರಂಥವು ಬಹಳ ದೊಡ್ಡದಾಗುವ ಸಂಭವ ತೋರಿತು. ಇದರಿಂದ ವಾಚಕರಿಗೆ ಬೇಸರಿಕೆಯಾಗಬಹುದೆಂದು ತಿಳಿದು ನಾನು ಯಾವ ವಿಷಯಗಳಲ್ಲಿ ದ್ವಿರುಕ್ತಿಗಳು ಹೆಚ್ಚಾಗಿವೆಯೋ, ಅವುಗಳಲ್ಲಿಯ ವಚನಗಳನ್ನು ತೆಗೆದುಹಾಕಿದೆನು. ಆದರೆ ನೈತಿಕ ವಿಷಯಗಳು ಮತ್ತು ವಚನಕಾರರ ಮತಕ್ಕೆ ಈಗ ವಿರೋಧವಾಗಿ ಪ್ರಚಲಿತವಿರುವ ರೂಢಿಗಳು ಮತ್ತು ಆಚಾರಗಳು ಇವುಗಳ ಸಂಬಂಧದ ವಚನಗಳನ್ನು ಮಾತ್ರ ತೆಗೆದುಹಾಕಿಲ್ಲ. ಅವುಗಳಲ್ಲಿ ಹೆಚ್ಚಿಗೆ ಪುನರುಕ್ತಿಗಳುಂಟಾದರೂ ಕೂಡ ಅವುಗಳನ್ನು ನಾನು ಬುದ್ಧ್ಯಾ ಹಾಗೆಯೇ ಇಟ್ಟಿದ್ದೇನೆ.

ಆರಂಭದಲ್ಲಿ ವಚನಗಳ ವಾಙ್ಮಯದ ವಿಸ್ತಾರವು ನನಗೆ ಗೊತ್ತಿದ್ದಿದ್ದಿಲ್ಲ. ಆದರೆ ಮಹತ್ವಿಕರಾದ ಶಿವಶರಣರ ವಿಚಾರಗಳನ್ನು ಅರಿಯಬೇಕೆಂದು ನನ್ನ ಕುತೂಹಲವಿದ್ದದರಿಂದ, ಅಂಥವರ ವಚನಗಳನ್ನೇ ನಾನು ಮೊದಲು ಸಂಗ್ರಹಿಸಿದೆನು. ಆದರೆ ಇತ್ತಿತ್ತ ವಚನಕಾರರು ಅಸಂಖ್ಯಾತರಾಗಿದ್ದು, ಇವರ ವಚನಗಳಾದರೂ ಬಹು ಮಹತ್ವವಾದವುಗಳೆಂದು ನನಗೆ ತೋರಿಬರಹತ್ತಿತು. ಆದ್ದರಿಂದ ಹಿಂದುಗಡೆ ಅವರ ವಚನಗಳನ್ನೂ ಸಂಗ್ರಹಿಸತೊಡಗಿದೆನು. ಈ ಕಾರಣದಿಂದ ಈ ಗ್ರಂಥದಲ್ಲಿ ಪೂರ್ವದ ಮಹತ್ವಿಕರಾದ ಶಿವಶರಣರ ವಚನಗಳು ಹೆಚ್ಚಾಗಿ ಕಂಡುಬರುತ್ತವೆ. ಆದರೆ ಬೇರೆಯವರ ವಚನಗಳು ಅಷ್ಟು ಹೇರಳವಾಗಿ ಕಂಡುಬರುವದಿಲ್ಲ. ಆದರೂ ಈ ಗ್ರಂಥವು ಅಚ್ಚಾದ ಮೇಲೆ ಇದರಲ್ಲಿ ನಾನು ಉದಹರಿಸಿದ ವಚನಕಾರರ ಸಂಖ್ಯೆಯನ್ನು ನೋಡಲಾಗಿ, ಒಟ್ಟಿಗೆ ೧೩೦ ವಚನಕಾರರ ವಚನಗಳು ಉದಹರಿಸಲ್ಪಟ್ಟದ್ದಾಗಿ ನನಗೆ ತೋರಿಬಂದಿತು. ಅವರ ಹೆಸರುಗಳನ್ನು ಪರಿಶಿಷ್ಟ (ಬ) ಇದರಲ್ಲಿ ವಾಚಕರು ಕಂಡುಕೊಳ್ಳಬಹುದು. ಆದರೆ ಈ ಪರಿಶಿಷ್ಟದಲ್ಲಿ ಒಟ್ಟಿಗೆ ೨೧೩ ವಚನಕಾರರ ಉಲ್ಲೇಖವಿದ್ದು, ಉಳಿದವರಲ್ಲಿ ೪೦-೫೦ ವಚನಕಾರರ ವಚನಗಳು ನನ್ನ ಕಣ್ಣಿಗೆ ಬಿದ್ದರೂ,

ಅವು ಬಹು ಸ್ವಲ್ಪ ವಚನಗಳಿದ್ದದರಿಂದಾಗಲಿ, ಇಲ್ಲವೆ ಅವುಗಳನ್ನು ನಾನು ನೋಡಿದಾಗ, ಅವುಗಳಲ್ಲಿ ಮಹತ್ವದ ವಿಷಯುಗಳು ನನಗೆ ತೋರದೆ ಇದ್ದದರಿಂದಾಗಲಿ, ಅವು ಇಲ್ಲಿ ಉದಾಹೃತವಾಗಿಲ್ಲ. ಕವಿಚರಿತೆಕಾರರು ತಮ್ಮ ಗ್ರಂಥದಲ್ಲಿ ನನಗೆ ಶಿಗದೆ ಇದ್ದಂಥ ಕೆಲವು ವಚನಗಳನ್ನು ಕೊಟ್ಟಿದ್ದಾರೆ. ಅವುಗಳನ್ನೂ ಈ ಪರಿಶಿಷ್ಟದಲ್ಲಿ ನಾನು ಸಮಾವೇಶಮಾಡಿದ್ದೇನೆ. ಅವುಗಳ ಮುದ್ರಿಕೆಗಳು ಯಾವವೆಂದರೆ:—ಗಜೇಶ್ವರಾ, ಗುರುಸಿದ್ಧಮಲ್ಲ, ನಂದಗೋಪೀಯು ಕಂದಪ್ರಿಯನಿಸ್ಸಂಗಲಿಂಗ ರಾಮನಾಥಾ, ಭೌಂಭೇಶ್ವರಾ, ರೇಕನಾಥಯ್ಯಾ, ಘನಗುರು ಪ್ರಿಯ ಸೋಮನಾಥ ಎಂಬ ವಚನಗಳು ಇರುತ್ತವೆ. ಈ ವಚನಗಳಲ್ಲದೆ ಕರಸ್ಥಲದ ನಾಗಿದೇವ, ನಿಜಲಿಂಗ, ಕರಿಬಸವೇಶ್ವರ, ಕೊಂಡಗುಳಿಯು ಕೇಶಿರಾಜ, ಬಿಜ್ಜಳ ದೇವಿ, ಬಾಚಿಕಾಯಕದ ಬಸವಪ್ಪ ಎಂಬವರ ವಚನಗಳಾದರೂ ಬೇರೆ ಇರುತ್ತವೆಂದು ಅವರು ತಮ್ಮ ಗ್ರಂಥದಲ್ಲಿ ಕಾಣಿಸಿರುತ್ತಾರೆ. ಇವಾದರೂ ನನ್ನ ಕಣ್ಣಿಗೆ ಬಿದ್ದಿಲ್ಲ. ಇದಲ್ಲದೆ ನನ್ನ ಆಧಾರಗ್ರಂಥದ ಪಟ್ಟಿಯಲ್ಲಿಯ ನಂಬರ ೧೬ನೆಯ ಗ್ರಂಥವು ನಿಜಾಮ ಇಲಾಖೆಯುಲ್ಲಿಯದಿದ್ದು, ಇದರಲ್ಲಿ ಕಾಣಿಸಿದ ಸುಮಾರು ೩೦ ವಚನಕಾರರು ನನಗೆ ಶಿಕ್ಕ ಬೇರೆ ಯಾವ ಗ್ರಂಥಗಳಲ್ಲಿಯೂ ಕಂಡುಬರುವದಿಲ್ಲ. ಇದರ ಮೇಲಿಂದ ಈ ವಚನಕಾರರು ಆ ಇಲಾಖೆಯುಲ್ಲಿ ಪ್ರಸಿದ್ಧರಾಗಿದ್ದು ಮೈಸೂರು ಮತ್ತು ಧಾರವಾಡ ಪ್ರಾಂತಗಳಲ್ಲಿ ಅವರು ಅಪ್ರಸಿದ್ಧರಿದ್ದ ಕಾರಣ ಅವರ ವಚನಗಳನ್ನು ಇತ್ತಕಡೆಗಿನ ಸಂಗ್ರಹಕಾರರು ತಮ್ಮ ಸಂಗ್ರಹಗಳಲ್ಲಿ ಸೇರಿಸಿಲ್ಲೆಂದು ತೋರುತ್ತದೆ. ಈ ವಚನಕಾರರ ಮುದ್ರಿಕೆಗಳು ಯಾವವೆಂದರೆ:— ಅಣತಿಯಲಿಂಗ, ಅನಂತಗುರು ಅಲ್ಲಮ ಮಹಾಪ್ರಭು, ಕನಕದ ನಾಚಿಲಿಂಗ, ಕಾಳಿಲಿಂಗದೇವ, ಕಿರಾತೇಶ್ವರಲಿಂಗ, ಕುಪ್ಪಸದ ಚಂದೇಶ್ವರಲಿಂಗ, ಕುಮಾರ ಸಂಗ, ತರುಣಸಂಗಮಲಿಂಗದೇವ, ನಿರಂಜನಲಿಂಗ, ನಿರಹಂಕಾರಭೀಮಯ್ಯಾ, ನಿರಾಲಂಬದೇವ, ನಿವೃತ್ತಿಸಂಗಯ್ಯಾ, ಪರ್ವತನಾಥಲಿಂಗ, ಪಡಿಹಾರಿಪ್ರಿಯ ಕೂಡಲಸಂಗಮದೇವಾ, ಭಾರೇಶ್ವರಲಿಂಗ, ಭೀಮೇಶ್ವರಲಿಂಗ, ಮುತ್ತಿನ ಸಂಗ ಲಿಂಗ, ಮೂಲಪ್ರಣಮದೇವ, ಲಿಂಗಸತ್ಯಣ್ಣ, ವೀರಚಂಡಲಿಂಗ, ವೀರರಾಚೋಟಿಲಿಂಗ, ಶಾಂತರಾಮಲಿಂಗ, ಶಾರ್ದೂಲಲಿಂಗ, ಶಿವಾನಂದಲಿಂಗ, ಶ್ರೀಗುರು ಪಂಚಾಕ್ಷರಲಿಂಗ, ಸುಂದರ ಶಿವಲಿಂಗಯ್ಯ, ಕ್ಷೇತ್ರನಾಥಲಿಂಗ. ಇವರ ವಚನಗಳು ಮೇಲ್ಕಂಡ ನಂ. ೧೬ನೇ ಗ್ರಂಥದಲ್ಲಿ ಅಲ್ಲಲ್ಲಿ ಇರುವದರಿಂದ, ಇವರ

ವಚನಗಳು ಈ ಗ್ರಂಥದಲ್ಲಿ ಬಹು ಸ್ವಲ್ಪವಾಗಿ ಉದಹರಿಸಲ್ಪಟ್ಟವೆ. ಆದರೂ ಈ ಯಾವತ್ತು ವಚನಕಾರರ ಹೆಸರುಗಳು ವಾಚಕರಿಗೆ ಗೊತ್ತಾಗಬೇಕೆಂಬ ಉದ್ದೇಶದಿಂದ ಅವುಗಳೆಲ್ಲವನ್ನೂ ಪರಿಶಿಷ್ಟ (ಬ) ಇದರಲ್ಲಿ ಸೇರಿಸಿದ್ದೇನೆ.

ವಚನ ಸಂಗ್ರಹಗಳಲ್ಲಿ ವಚನಗಳೊಡನೆ ಅವುಗಳನ್ನು ರಚಿಸಿದವರ ಹೆಸರುಗಳನ್ನು ಕೊಡುವ ಸಾಂಪ್ರದಾಯವು ಇಲ್ಲ. ಇದರಿಂದ ವಚನಕಾರರ ಹೆಸರುಗಳನ್ನು ಗೊತ್ತುಪಡಿಸುವದು ಅಸಂಭವವೆಂದು ನನಗೆ ಮೊದಲು ತೋರಿತ್ತು. ಆದರೆ ನನ್ನ ಆಧಾರ ಗ್ರಂಥಗಳ ಪಟ್ಟಿಯಲ್ಲಿ ನಂ. ೧ ಇದು ತಾಡವಾಲೆ ಗ್ರಂಥವಿದ್ದು, ಅದರಲ್ಲಿ ಮಾತ್ರ ಪ್ರತಿಯೊಂದು ಸಂಗ್ರಹದ ಮಗ್ಗಲು ಆ ವಚನಗಳನ್ನು ರಚಿಸಿದವರ ಹೆಸರುಗಳು ಕೊಡಲ್ಪಟ್ಟವೆ. ಇದರಂತೆ ನಂ. ೩ ಈ ಗ್ರಂಥದ ಮೊದಲನೆಯ ಪಾನಿನ ಮೇಲೂ ಕೆಲವು ವಚನಕಾರರ ಹೆಸರುಗಳೂ ಅವರ ಮುದ್ರಿಕೆಗಳೂ ಕೊಡಲ್ಪಟ್ಟವೆ. ಇವೆಲ್ಲವೂ ಒಂದಕ್ಕೊಂದು ಕೂಡುತ್ತವೆ. ನಂ. ೧೬-೧೭-೧೮ ಇವು ವಾದದ ವಚನಗಳು ಅವೆ. ಇವುಗಳಲ್ಲಿ ಬೇರೆ ಬೇರೆ ವಚನಕಾರರಲ್ಲಿ ಅವರವರ ವಚನಗಳಿಂದಲೇ ಸಂಭಾಷಣೆಗಳು ಒದಗಿದಂತೆ ಈ ಗ್ರಂಥಗಳ ರಚನೆಯು ಇರುತ್ತದೆ. ಇವುಗಳಲ್ಲಿಯಾದರೂ ವಚನಕಾರರ ಹೆಸರುಗಳೂ ಅವರ ಮುದ್ರಿಕೆಗಳೂ ದೊರೆಯುತ್ತವೆ. ಇವುಗಳಿಗೂ ನಂ. ೧-೩ ಇವುಗಳಲ್ಲಿ ಕಂಡುಕೊಂಡವುಗಳಿಗೂ ಸರಿಹಚ್ಚಿ ನೋಡಲಾಗಿ, ಅವೆಲ್ಲವುಗಳೂ ಒಂದಕ್ಕೊಂದು ಕೂಡುತ್ತವೆ. ಈ ಮೇರೆಗೆ ಈ ಐದು ಗ್ರಂಥಗಳ ಆಧಾರದಿಂದ ಬೇರೆ ಬೇರೆ ವಚನಗಳ ಕರ್ತೃಗಳ ಹೆಸರುಗಳನ್ನು ಶೋಧಿಸಿ ತೆಗೆದು, ಅವುಗಳನ್ನು ಪರಿಶಿಷ್ಟ (ಬ) ಇದರಲ್ಲಿ ಕಾಣಿಸಿದ್ದೇನೆ.

ನನಗೆ ದೊರೆದ ವಚನಗ್ರಂಥಗಳ ಪ್ರತಿಗಳೆಲ್ಲವೂ ಬಹಳ ಅಶುದ್ಧವಾದವುಗಳು. ಬಹಳಕಡೆ ಅವುಗಳ ಅರ್ಥವೇ ಆಗುವದಿಲ್ಲ. ಆದರೂ ಅವುಗಳಲ್ಲಿಯ ಅಶುದ್ಧತೆಯುನ್ನು ಆದಷ್ಟುಮಟ್ಟಿಗೆ ತಿದ್ದಿ, ಅವುಗಳನ್ನು ನಾನು ಇಲ್ಲಿ ಪ್ರಸಿದ್ಧಿಸಿದ್ದೇನೆ. ಆದರೂ ಅರ್ಥ ತಿಳಿಯದಂಥ ವಾಕ್ಯಗಳು ಈ ಗ್ರಂಥದಲ್ಲಿ ಎಷ್ಟೋ ಉಳಿದಿವೆ. ಇದರಂತೆ ಈ ಪ್ರತಿಗಳಲ್ಲಿ ಇರುವ ಸಂಸ್ಕೃತ ಅವತರಣಗಳಂತೂ ಅತ್ಯಂತ ಅಶುದ್ಧವಾದವುಗಳು. ಸಂಸ್ಕೃತ ಭಾಷೆಯನ್ನರಿಯದವರು ಈ ಪ್ರತಿಗಳನ್ನು ಬರೆದದ್ದೇ ಇದಕ್ಕೆ ಕಾರಣವು. ವಾಚಕರಲ್ಲಿ ಯಾರಿಗಾದರೂ ಈ ಅವತರಣಗಳ ಮತ್ತು ವಚನಗಳ ಶುದ್ಧ ಪಾಠಗಳು ದೊರೆತರೆ, ಅವುಗಳನ್ನು

ಅವರು ನನಗೆ ತಿಳಿಸಿದಲ್ಲಿ, ನಾನು ಅವರಿಂದ ಬಹಳ ಉಪಕೃತನಾಗುವೆನು. ಮತ್ತು ಆ ಮೇರೆಗೆ ಗ್ರಂಥದ ಮುಂದಿನ ಆವೃತ್ತಿಯಲ್ಲಿ ತಿದ್ದುಪಡೆ ಮಾಡಲಿಕ್ಕೆ ಅನುಕೂಲವಾಗುವದು. ಅದರಂತೆ ಪ್ರೂಫುಗಳನ್ನು ನನಗೆ ಅಷ್ಟು ಜಾಗರೂಕತೆ ಯಿಂಧ ಪರೀಕ್ಷಿಸಿ ನೋಡುವದು ಆಗಲಿಲ್ಲ. ಇದರಿಂದ ತಪ್ಪುಗಳು ಈ ಗ್ರಂಥದಲ್ಲಿ ಬಹಳ ಆಗಿವೆ. ಇದಕ್ಕೆ ವಾಚಕರು ನನ್ನನ್ನು ಕ್ಷಮಿಸುವರೆಂದು ಕೋರುತ್ತೇನೆ.

ವಚನಗ್ರಂಥಗಳಲ್ಲಿ ಈಗ ಪ್ರಚಾರದಲ್ಲಿಲ್ಲದ ಹಳೇಗನ್ನಡ ಶಬ್ದಗಳು ಬಹಳ ಅವೆ. ಇವುಗಳು ತಿಳಿಯದಿದ್ದರೆ ವಚನಗಳ ಅರ್ಥವನ್ನು ಚನ್ನಾಗಿ ಮಾಡುವದು ಕಠಿಣವಾದದ್ದು. ಅದ್ದರಿಂದ ಇವುಗಳ ಒಂದು ಸಣ್ಣ ಕೋಶ ವನ್ನು ಸಿದ್ಧಪಡಿಸಿ, ಈ ಗ್ರಂಥದ ಕೊನೆಯಲ್ಲಿ ಕೊಟ್ಟದ್ದೇನೆ.

ಈ ಗ್ರಂಥವು "ವಚನಶಾಸ್ತ್ರಸಾರ"ದ ಒಂದನೇ ಭಾಗವಾಗಿದ್ದು, ಈ ಗ್ರಂಥವಲ್ಲದೆ ಇನ್ನು ೩ ಗ್ರಂಥಗಳನ್ನು ಇದೇ ಮಾದಿರಿಯ ಮೇಲೆ ಪ್ರಸಿದ್ಧಿಸ ಬೇಕೆಂದು ನನ್ನ ಯೋಚನೆ ಇದೆ. ಈ ೧ನೇ ಭಾಗದಲ್ಲಿ ಲಿಂಗಾಯತ ಮತ ತತ್ವಗಳ ಸಾಮಾನ್ಯ ಸ್ವರೂಪು ಮಾತ್ರ ಕೊಡಲ್ಪಟ್ಟದೆ. ೨ನೇ ಭಾಗದಲ್ಲಿ ೨೧೬ ಸ್ಥಲಗಳ ವರೆಗೆ ಅನೇಕ ಸ್ಥಲಗಳು ಇದ್ದು, ಅವುಗಳ ವಿವರಣೆಯು ಕೊಡಲ್ಪಡು ವದು. ೩ನೇ ಭಾಗವು ಅಷ್ಟಾವರಣ ಮೊದಲಾದ ಆಚಾರ ವಿಷಯಕವಾಗಿರು ವದು. ೪ನೇ ಭಾಗದಲ್ಲಿ ಲಿಂಗಾಯುತ ಸಮಾಜದ ಧಾರ್ಮಿಕ, ಸಾಮಾಜಿಕ ಮತ್ತು ರಾಜಕೀಯ ಇತಿಹಾಸವು ಕೊಡಲ್ಪಡುವದು. ಈ ಮೇರೆಗೆ ಗ್ರಂಥಗಳನ್ನು ಕ್ರಮವಾಗಿ ಪ್ರಸಿದ್ಧಿಸಬೇಕೆಂದು ನನ್ನ ಯೋಚನೆ ಇರುವದು.

ಲಿಂಗಾಯತ ಮತದ ವಿಷಯವಾಗಿ ಮತ್ತು ಅದರ ಪ್ರಚಾರಕರ ವಿಷಯ ವಾಗಿ ಈಗಿನ ಕಾಲಕ್ಕೆ ಅನೇಕ ನಿಂದಾಯುಕ್ತ ಕುತರ್ಕಗಳು ಉತ್ಪನ್ನವಾಗಿರು ತ್ತವೆ. ಈ ಸ್ಥಿತಿಯುಂಟಾಗಬೇಕಾದರೆ, ಕೆಲಮಟ್ಟಿಗೆ ಜೈನಗ್ರಂಥಗಳು ಕಾರಣ ಗಳಾಗಿರುವದಲ್ಲದೆ, ಲಿಂಗಾಯತ ಪುರಾಣಗ್ರಂಥಗಳಾದರೂ ಕಾರಣಗಳಾಗಿರು ತ್ತವೆ. ಆದರೆ ಈ ತರದ ಕಲ್ಪನೆಗಳು ಈ ವಚನಗ್ರಂಥದಿಂದ ಕೆಲಮಟ್ಟಿಗಾದರೂ ದೂರಾಗುವವೆಂದು ನಾನು ನಂಬಿದ್ದೇನೆ. ಈ ಗ್ರಂಥದಲ್ಲಿ ಅನೇಕ ಮಹತ್ವದ ನೈತಿಕ ಮತ್ತು ಧಾರ್ಮಿಕ ತತ್ವಗಳು ವಿವೇಚಿಸಲ್ಪಟ್ಟದ್ದು, ಅವುಗಳ ಯೋಗ್ಯಾ ಯೋಗ್ಯತೆಯನ್ನು ವಿಚಾರಮಾಡುವ ಭಾರವನ್ನು ನಾನು ವಾಚಕರಿಗೆ ಬಿಟ್ಟು

ಕೊಡುತ್ತೇನೆ. ಆದರೂ ಇವುಗಳಲ್ಲಿ ಕೆಲವು ವಿಷಯಗಳನ್ನು ಮಾತ್ರ ವಾಚಕರ ದೃಷ್ಟಿಗೆ ವಿಶೇಷವಾಗಿ ತರಬೇಕೆಂದು ನನಗೆ ಅವಶ್ಯ ತೋರಿದ್ದರಿಂದ, ಅವುಗಳನ್ನು ನಾನು ಇಲ್ಲಿ ಸಂಕ್ಷೇಪವಾಗಿ ವಿವರಿಸುತ್ತೇನೆ.

ವಚನಕಾರರಲ್ಲಿ ದ್ವೈತಾದ್ವೈತ ಮೊದಲಾದ ಯಾವ ತರದ ಕಲಹಗಳು ಕಂಡುಬರುವದಿಲ್ಲ. ಇಂಥ ಹೋರಾಟಗಳಿಗೆ ಅವರು ಮನಸ್ಸು ಹಾಕಿಲ್ಲ. ಆದರೆ ಅವರು ಮನುಷ್ಯನ ಧಾರ್ಮಿಕ ಮತ್ತು ಮಾನಸಿಕ ಉನ್ನತಿಗೆ ಹೆಚ್ಚಾಗಿ ಲಕ್ಷ ಕೊಟ್ಟಿರುವರು. ಇದು ಬಹಳ ಮಹತ್ವವಾದದ್ದು. ಅವರು ವೇದಾಗಮೋಪನಿಷತ್ತುಗಳಲ್ಲಿಯ ತತ್ವಗಳನ್ನೇ ತೆಗೆದುಕೊಂಡು, ಅವುಗಳನ್ನು ಹ್ಯಾಗೆ ವ್ಯವಹರಣೆಯಲ್ಲಿ ತರಬೇಕೆಂಬದರ ವಿಷಯವಾಗಿ ಹೆಚ್ಚಾಗಿ ಲಕ್ಷಕೊಟ್ಟಿರುವರು.

ವಚನಕಾರರು ನೀತಿ ಮತ್ತು ಸದ್ವರ್ತನೆ ಇವುಗಳಿಗೆ ಬಹಳ ಮಹತ್ವ ಕೊಟ್ಟಿರುವರು. ಈ ವಿಷಯವನ್ನು ಅವರು ಪದೇ ಪದೇ ವಿವೇಚಿಸಲಿಕ್ಕೆ ಎಂದೂ ಬೇಸರಿಯುವದಿಲ್ಲ. ಇವುಗಳನ್ನು ಈ ಗ್ರಂಥದ ಪ್ರತಿಯೊಂದು **ಪುಟದಲ್ಲಿಯೂ** ಕಾಣಬಹುದು. ಮತ್ತು ಅವುಗಳನ್ನು ನಾನಾರೀತಿಯಿಂದ ಅವರು ವಿವರಿಸುವರು. ಎಲ್ಲಿ ದುರ್ವರ್ತನೆಯು ಕಂಡುಬಂದಿತೋ, ಅವರು ಅದನ್ನು ಸ್ಪಷ್ಟ ಶಬ್ದಗಳಿಂದ ಹಳಿಯದೆ ಬಿಟ್ಟಿಲ್ಲ. ವಚನಕಾರರಲ್ಲಿ ಬಹಳ ಜನರು ಮಠಸ್ಥರಿರುತ್ತಾರೆ. ಆದರೂ ಅವರು ಅನಾಚಾರಿಗಳಾದ ತಮ್ಮ ವರ್ಗದವರನ್ನು ಎಷ್ಟು ಕಠೋರವಾಗಿ ನಿಂದಿಸಿರುವರೆಂಬದನ್ನು ವಾಚಕರು **ಪುಟ ೫೨೩**ರಿಂದ **೫೪೪** ರ ವರೆಗೆ ಇರುವ ವಚನಗಳನ್ನು ನೋಡಿದರೆ, ಅವರಿಗೆ ಗೊತ್ತಾಗುವದು.

ವಚನಕಾರರ ವಿಶ್ವ ಬಂಧುತ್ವದ ವಿಚಾರಗಳು ಬಹು ಶ್ರೇಷ್ಠವಾದವುಗಳು. ಅವರು ಚರಾಚರ ಪ್ರಾಣಿಗಳೆಲ್ಲವನ್ನೂ ದಯಾರ್ದ್ರದೃಷ್ಟಿಯಿಂದ ನೋಡುವವರಾಗಿರುತ್ತಾರೆ. ಅವರ ಈ ವಿಚಾರಗಳನ್ನು **ಪುಟ** ೧೦೭ರಿಂದ **ಪುಟ** ೧೧೦ರ ವರೆಗಿನ ವಚನಗಳಲ್ಲಿ ನೋಡಬಹುದು.

ಜಾತಿವಿಶಿಷ್ಟ ತಾರತಮ್ಯಭಾವಗಳು ವಚನಕಾರರಲ್ಲಿಲ್ಲ. ಆದರಂತೆ ಸ್ತ್ರೀ ಪುರುಷ ಭೇದಭಾವಗಳೂ ಅವರಲ್ಲಿಲ್ಲ. ಎಲ್ಲರೂ ಸಮಾನರೆಂದು ಭಾವಿಸಿ, ಎಲ್ಲಿ ನಡೆನುಡಿಗಳು ಚನ್ನಾಗಿವೆಯೋ, ಅದಕ್ಕೆ ಅವರು ಮಹತ್ವ ಕೊಟ್ಟಿರುವರು. ಅವರು ಸ್ತ್ರೀಯರಿಗೆ ಎಷ್ಟು ಮಹತ್ವವನ್ನು ಕೊಟ್ಟಿರುವರೆಂಬ ಸಂಗತಿಯು **ಪುಟ**

೧೪೧ ರಿಂದ ಪುಟ ೧೪೩ ರ ವರೆಗಿನ ವಚನಗಳಿಂದ ಸ್ಪಷ್ಟವಾಗುತ್ತದೆ. ಪುಟ ೩೧೭ ರಿಂದ ೩೩೫ ಮತ್ತು ಪುಟ ೧೧೧ ರಿಂದ ೧೧೪ ಈ ವರೆಗಿನ ಪುಟಗಳಲ್ಲಿಯ ವಚನಗಳ ಮೇಲಿಂದ ಅವರು ಜಾತಿಭೇದಕ್ಕೂ ಜಾತಿಮತ್ಸರಕ್ಕೂ ಇಂಬುಗೊಟ್ಟಿಲ್ಲೆಂಬದು ಸ್ಪಷ್ಟವಾಗುತ್ತದೆ. ಅವರು ಯಾವಾಗಲೂ ಸದಾಚಾರ ಸದ್ವರ್ತನೆಗೆ ಮಹತ್ವವನ್ನು ಕೊಟ್ಟಿದ್ದು, ಇವು ಯಾರಲ್ಲಿ ಇವೆಯೋ ಅವರೇ ಕುಲಜರೆಂದು ಅವರು ಭಾವಿಸಿರುತ್ತಾರೆ.

ಬಹು ಜನರು ಲಿಂಗಾಯತ ಧರ್ಮವು ಬ್ರಾಹ್ಮಣ ವಿರೋಧೀ ಧರ್ಮವೆಂದು ತಿಳಿಯುವದುಂಟು. ಇದು ತೀರ ತಪ್ಪಾದದ್ದೆಂದು ನನಗೆ ತೋರುತ್ತದೆ. ಲಿಂಗಾಯತ ಮತತತ್ವಗಳನ್ನರಿಯದ ಪಾಶ್ಚಿಮಾತ್ಯ ಪಂಡಿತರು ಈ ತಪ್ಪು ತಿಳುವಳಿಕೆಯನ್ನು ಮೊದಲು ಹುಟ್ಟಿಸಿದರು. ಅದರಂತೆಯೇ ಲಿಂಗಾಯತ ಧರ್ಮವನ್ನರಿಯದ ಬ್ರಾಹ್ಮಣರೂ ಲಿಂಗಾಯತರೂ ಹಾಗೆಯೇ ತಿಳಿಯುತ್ತ ಬಂದರು. ಆದರೆ ಈ ಗ್ರಂಥದಲ್ಲಿ ನಾನು ಲಿಂಗಾಯತ ಮತತತ್ವಗಳನ್ನು ಸವಿಸ್ತಾರವಾಗಿ ನಿರೂಪಿಸಿದ್ದು, ಅವುಗಳಲ್ಲಿ ಎಲ್ಲಿಯೂ ಬ್ರಾಹ್ಮಣ ದ್ವೇಷವು ಕಂಡುಬರುವದಿಲ್ಲ. ಅದರಂತೆಯೇ ಜೈನ ಮೊದಲಾದ ಬೇರೆ ಯಾವ ಧರ್ಮದವರ ದ್ವೇಷವೂ ಇಲ್ಲ. ವಚನಕಾರರು ಜಾತಿ ವಿಷಯದಲ್ಲಿ ಬಹು ಉಚ್ಚ ಭಾವವುಳ್ಳವರಿರುತ್ತಾರೆ. ಅವರು ಯಾರನ್ನೂ ದ್ವೇಷಮಾಡುವವರಲ್ಲ. ಹಗೆಗಳನ್ನು ಸಹ ಮಿತ್ರರಂತೆ ಕಾಣುವವರು. ಈ ಸಂಗತಿಯು ಪುಟ ೧೧೮ ಮತ್ತು ಪುಟ ೧೧೫ ರಿಂದ ೧೧೬ ವರೆಗಿನ ವಚನಗಳಿಂದ ತಿಳಿದುಬರುವಂತೆ ಇದೆ. ಅದರಂತೆ ಜಾತಿಭೇದವಿಷಯದ ವಚನಗಳಲ್ಲಿಯೂ ಕೂಡ, ಬ್ರಾಹ್ಮಣ ದ್ವೇಷವು ಕಂಡುಬರುವದಿಲ್ಲ.

ಆದರೆ ವಚನಕಾರರು ವೇದ ಶಾಸ್ತ್ರಾಗಮ ಪುರಾಣಗಳ ವಿಷಯವಾಗಿ ಆಗಿಂದಾಗ್ಗೆ ಕಡುತರವಾದ ಟೀಕೆಗಳನ್ನು ಮಾಡುವದುಂಟು. ಪುಟ ೩೧೨ ರಿಂದ ೩೧೭ ರ ವರೆಗಿನ ವಚನಗಳನ್ನು ನೋಡಿರಿ. ಆಗಮ ಗ್ರಂಥಗಳಿಗೂ ವಚನಕಾರರ ತತ್ವಗಳಿಗೂ ಪ್ರತ್ಯಕ್ಷ ಸಂಬಂಧವುಂಟು. ಆಗಮ ಗ್ರಂಥಗಳಲ್ಲಿಯೇ ಷಟ್‌ಸ್ಥಲದ ವಿವರಣೆ ಇರುತ್ತದೆ. ಹೀಗಿದ್ದರೂ ಆಗಮಗ್ರಂಥಗಳ ಮೇಲೆ ಸಹ ಅವರು ಟೀಕೆಗಳನ್ನು ಮಾಡದೆ ಬಿಟ್ಟಿಲ್ಲ. ಇದು ಪುರಾಣ ಮತವಾದಿಗಳಿಗೆ ಬಹು ಅಸಹ್ಯಕರವಾಗಿ ತೋರುತ್ತದೆ. ಆದರೆ ವಚನಗ್ರಂಥಗಳನ್ನು

ನಾವು ಒಟ್ಟಿನಿಂದ ನೋಡಿದರೆ, ಹ್ಯಾಗೆ ಜೈನ ಬೌದ್ಧರು ವೇದ ಮತವನ್ನು ತಿರಸ್ಕರಿಸಿ ಬಿಟ್ಟರೋ, ಹಾಗೆ ವಚನಕಾರರು ಅದನ್ನು ಬಿಟ್ಟು ಕೊಟ್ಟರೆಂದು ಹೇಳಲಿಕ್ಕೆ ಬರಲಾರದು. ಅವರ ತತ್ವಗಳೆಲ್ಲ ವೇದಾಗಮೋಪನಿಷತ್ತುಗಳೊಳಗಿಂದಲೇ ತೆಗೆದುಕೊಂಡವಿರುತ್ತವೆ. ಮತ್ತು ಅವರ ವಚನಗಳಲ್ಲಿ ಅವುಗಳಲ್ಲಿಯ ಅವತರಣಗಳು ತುಂಬಿಹೋಗಿರುತ್ತವೆ. ಒಂದುವೇಳೆ ಅವರು ಈ ಗ್ರಂಥಗಳನ್ನು ಅವಿಶ್ವಸಿಸುತ್ತಿದ್ದರೆ, ಅವುಗಳಲ್ಲಿಯ ಉಕ್ತಿಗಳನ್ನು ಹೀಗೆ ತಮಗೆ ಆಧಾರವಾಗಿಟ್ಟುಕೊಂಡು, ಎಂದೂ ಅವುಗಳನ್ನು ಉದಹರಿಸುತ್ತಿದ್ದಿಲ್ಲ. ವಚನಕಾರರು ಹಿಂದೂ ಧರ್ಮದಲ್ಲಿಯ ಒಂದು ಬಗೆಯ ವಿಚಾರವಾದಿ ( Rationalists ) ಗಳೆಂದು ನಾವು ಎನ್ನಬಹುದು. ಇಂಥ ವಿಚಾರವಾದಿಗಳು ಕ್ರಿಶ್ಚನ್ ಮತ್ತು ಮಹಮ್ಮದೀ ಧರ್ಮಗಳಲ್ಲಿ ಹುಟ್ಟಿ, ಅವುಗಳ ಶುದ್ಧತೆಯನ್ನು ಬಹಳಮಟ್ಟಿಗೆ ಕಾದಿದ್ದಾರೆ. ಅಂದರೆ ಇವರು ಯಾವುದು ವಿಚಾರಕ್ಕೆ ಯೋಗ್ಯವೋ, ಸಮಂಜಸವೋ ಅದನ್ನೇ ಅನುವರ್ತಿಸುವವರಿರುವರು. ಅಂಧಪರಂಪರೆಯಿಂದ ನಡೆದುಬಂದದ್ದು ಪುರಾತನಕಾಲದ್ದೆಂದು ಅದನ್ನು ಅವರು ಅನುವರ್ತಿಸುವವರಲ್ಲ. ಯಾವುದು ಅಂತಃಕರಣ, ನೀತಿ, ಸದಸದ್ವಿಚಾರಕ್ಕೆ ಸಮ್ಮತವೋ, ಆದನ್ನೇ ಅನುವರ್ತಿಸುವವರು. ಉಳಿದುದನ್ನು ಅಲ್ಲಗಳೆಯುವವರು. ಹಿಂದೂ ಧರ್ಮದಲ್ಲಿ ಶೃತಿಸ್ಮೃತ್ಯಾದಿ ಗ್ರಂಥಗಳಲ್ಲಿ ಪರಸ್ಪರ ವಿರೋಧಗಳೂ, ಮತಾಂತರಗಳೂ ಉತ್ಪನ್ನವಾಗಿವೆ. ಆಗಮ ಗ್ರಂಥಗಳಲ್ಲಿಯೂ ಇದೇ ತೆರನಾಗಿದುತ್ತದೆ. ಹಿಂದೂಧರ್ಮಕ್ಕೆ ಈ ಸ್ಥಿತಿಯುಂಟಾಗಲು, ಶಂಕರಾಚಾರ್ಯ ಮೊದಲಾದ ಭಾಷ್ಯಕಾರರು ಉತ್ಪನ್ನರಾಗಿ, ತಮಗೆ ಯುಕ್ತ ಕಂಡ ಮಾರ್ಗವನ್ನು ಅದರೊಳಗಿಂದ ಹುಡಿಕಿ ತೆಗೆದು, ಅದನ್ನು ಜನರಿಗೆ ಬೋಧಿಸುವವರಾದರು. ಆದರೆ ಇದರಲ್ಲಿ ಅವರು ತಮ್ಮ ಮಾರ್ಗಕ್ಕೆ ವಿರೋಧವಿರುವ ವಿಷಯಗಳಿಗೆ ಯುಕ್ತಿಪ್ರಯುಕ್ತಿಗಳಿಂದ ಬೇರೆ ಬೇರೆ ಅರ್ಥಗಳನ್ನು ಕಲ್ಪಿಸಿ, ತಮ್ಮ ತಮ್ಮ ರೀತಿಯಿಂದ ಭಾಷ್ಯಗಳನ್ನು ಬರೆದು, ತಮ್ಮ ತೊಂದರೆಗಳನ್ನು ಪರಿಹರಿಸಿಕೊಂಡಿರುತ್ತಾರೆ. ಆದರೆ ಈ ರೀತಿಯ ಯುಕ್ತಿಪ್ರಯುಕ್ತಿಗಳು ವಚನಕಾರರ ಸ್ವಭಾವಕ್ಕೆ ಸಲ್ಲದವು. ಅವರು ಇಂಥ ಪ್ರಸಂಗಗಳಲ್ಲಿ ತಮಗೆ ವಿರೋಧವಿರುವ ಸಂಗತಿಗಳನ್ನು ನಿರ್ಭಿಡೆಯಿಂದಲೂ ಸ್ಪಷ್ಟ ಶಬ್ದಗಳಿಂದಲೂ ಅಲ್ಲಗಳೆದು, ತಮ್ಮ ಮಾರ್ಗವನ್ನು ಪ್ರಸ್ಥಾಪಿಸಿರುವರು. ಇಂಥ ಪ್ರಸಂಗದಲ್ಲಿ ಅವರು ವೇದಾಗಮಗಳ ಮೇಲೆಯೂ ಟೀಕೆಗಳನ್ನು ಮಾಡಿದ್ದಾರೆ. ಇಷ್ಟೇ

ಹೊರ್ತು ಅವರಿಗೆ ವೇದಶಾಸ್ತ್ರಾಗಮೋಪನಿಷತ್ತುಗಳ ಮೇಲೆ ಭಕ್ತಿಯು ಇದ್ದಿಲ್ಲ ವೆಂದು ಹೇಳಲಿಕ್ಕೆ ಬರಲಾರದು.

ಪ್ರತಿಯೊಂದು ಧರ್ಮದಲ್ಲಿ ಅದಕ್ಕೆ ಹೊಲ್ಲದ ರೂಢಿಗಳು ಕಾಲಾನು ಸಾರವಾಗಿ ಸೇರಿಕೊಳ್ಳುತ್ತ ಬರುತ್ತವೆ. ಕೆಲವು ಕಾಲದ ಮೇಲೆ ಈ ರೂಢಿ ಗಳಿಗೆ ಧರ್ಮದ ಸ್ವರೂಪವೂ ಬರಹತ್ತುತ್ತದೆ. ಈ ತರದ ರೂಢಿಗಳು ನಮ್ಮ ಹಿಂದೂ ಧರ್ಮದಲ್ಲಿ ಈಗಲೂ ಬಹಳ ಸೇರಿಕೊಂಡಿರುವವು. ವಚನಕಾರರು ಇಂಥವುಗಳನ್ನು ಧೈರ್ಯದಿಂದ ಕಿತ್ತುಹಾಕಿರುವರು. ಪುಟ ೩೯೩ ರಿಂದ ೩೩೫ರ ವರೆಗಿನ ವಚನಗಳಲ್ಲಿಯ ವಿಷಯಗಳು ಈ ಮಾದರಿಯವಿರುತ್ತವೆ. ಕೇವಲ ನಿವೃತ್ತಿಮಾರ್ಗಾಚರಣೆಯುಳ್ಳವರ ಖಂಡನೆಯನ್ನು ಪುಟ ೩೮೮ ರಿಂದ ೩೯೮ರ ವರೆಗಿನ ವಚನಗಳಲ್ಲಿ ವಾಚಕರು ಕಾಣಬಹುದು. ಹಠ ಯೋಗಾಭ್ಯಾಸಿ ಗಳ ಖಂಡನೆಯನ್ನು ಪುಟ ೪೫೧ ರಿಂದ ೪೬೬ರ ವರೆಗೆ ಕಾಣಬಹುದು. ವಚನ ಕಾರರು ಲಿಂಗಾಯತ ಮತಸ್ಥರ ಮೇಲೆ ಸಹ ಟೀಕೆ ಮಾಡುವದನ್ನು ಬಿಟ್ಟಿಲ್ಲ. ಕೇವಲ ಲಿಂಗಪೂಜೆಯಲ್ಲಿ ಆಸಕ್ತರಾಗಿ ಮಡಿ, ಮೈಲಿಗೆ, ಶೀಲ ವೆಂದು ತಮ್ಮ ಆಯುಷ್ಯವನ್ನು ಕಳೆಯುವವರನ್ನು ಪುಟ ೨೭೬ ರಿಂದ ೨೮೦ ಮತ್ತು ಪುಟ ೧೯೪ರಿಂದ ೧೯೮ ರ ವರೆಗೆ ಹಳಿದಿರುವರು. ಪುಟ ೨೮೧ ರಿಂದ ೩೯೨ ಮತ್ತು ೩೯೬ ರಿಂದ ೩೦೨ ರ ವರೆಗಿನ ವಚನಗಳು ಲಿಂಗಾಯತರಲ್ಲಿರುವ ಬೇರೆ ಬೇರೆ ರೂಢಿಗಳ ಮೇಲೆ ಟೀಕೆಗಳು ಇರುತ್ತವೆ. ವಚನಕಾರರು ನಿಜ ವಾದ ಸಮಾಜಸುಧಾರಕರಿರುವರು. ಅದ್ದರಿಂದ ತತ್ವಕ್ಕೆ ವಿರೋಧವಿರುವ ರೂಢಿ ಗಳು ಯಾರಲ್ಲಿದ್ದರೂ, ಅವುಗಳನ್ನು ಅವರು ಬೈಲಿಗೆಳೆಯದೆ ಬಿಟ್ಟಿಲ್ಲ. ಅದ್ದ ರಿಂದಲೇ ವಚನಕಾರರು ಅಪ್ರತಿಹತವಾಗಿ ಕರ್ನಾಟಕದಲ್ಲಿ ತಮ್ಮ ಸುಧಾರಣಾ ಕಾರ್ಯವನ್ನು ಜರಿಗಿಸಲಿಕ್ಕೆ ಸಮರ್ಥರಾದರೆಂದು ನನ್ನ ತಿಳಿವಳಿಕೆ ಇದೆ.

ವಚನಕಾರರು ಉದ್ಯೋಗ ಅಂದರೆ ಕಾಯಕಗಳಿಗೆ ಬಹಳ ಮಹತ್ವ ಕೊಟ್ಟಿರುವರು. ಅಂದರೆ ಮನುಷ್ಯನು ಸ್ವತಃ ದುಡಿದು, ಸ್ವತಂತ್ರತೆಯಿಂದಿದ್ದು ಲಿಂಗಾರ್ಪಣ ಭಾವದಿಂದ ವರ್ತಿಸುವದೇ ಮಹತ್ವದ್ದೆಂದು, ಅವರು ಅಭಿಪ್ರಾಯ ಪಟ್ಟಿರುವರು. ಅವರು ಯಾಚನೆಗೆ ಮಹತ್ವ ಕೊಟ್ಟಿಲ್ಲ. ಆದ್ದರಿಂದ ನಾನಾತರದ ಕೈಗಾರಿಕೆಗಳು ಶೂದ್ರರ ಹೋರೆಗಳೆಂದು ಭಾವಿಸಿ, ಅವುಗಳನ್ನು ಅವರು ಕಡಿಮೆ ಯಾಗಿ ತಿಳಿಯಲಿಲ್ಲ. ಆದರೆ ಅವರು ಅವುಗಳಿಗೆ ಬಹು ಉದಾತ್ತ ಸ್ವರೂಪನ್ನು

ಕೊಟ್ಟಿರುವರು ಈ ಸಂಗತಿಯು ಪುಟ ೩೪೮ ರಿಂದ ೩೫೨ ಮತ್ತು ಪುಟ ೫೩೪ ರಿಂದ ೫೩೭ ರ ವರೆಗಿನ ಪುಟಗಳಲ್ಲಿಯ ವಚನಗಳಿಂದ ವಾಚಕರಿಗೆ ತಿಳಿದು ಬರುವದು.

ವಚನಕಾರರು ದೇವರ ಸ್ವರೂಪದ ವಿಷಯವಾಗಿ ವೇದೋಪನಿಷತ್ತುಗಳಲ್ಲಿಯ ಶುದ್ಧ ಅಭಿಪ್ರಾಯಗಳನ್ನೇ ಸ್ವೀಕರಿಸಿರುತ್ತಾರೆ. ಪಾನು ೧ ರಿಂದ ೩೪ ರ ವರೆಗೆ ನೋಡಿರಿ. ಆದರಂತೆಯೇ ಲಿಂಗದ ವಿಷಯಕ್ಕಾದರೂ ಅವರು ಒಂದು ವಿಶಿಷ್ಟತರದ ಅಭಿಪ್ರಾಯವುಳ್ಳವರಿರುತ್ತಾರೆ. ಪುಟ ೪೬ ರಿಂದ ೬೯ ರ ವರೆಗೆ ಮತ್ತು ೨೯೬ ರಿಂದ ೩೦೨ ರ ವರೆಗೆ ಇರುವ ವಚನಗಳನ್ನು ನೋಡಿರಿ. ಈ ವಿಚಾರಗಳಿಂದ ಲಿಂಗಾಯತರಲ್ಲಿ ಮೂರ್ತಿಪೂಜೆಯು ಅತಿರೇಕಗಳು ಬಹಳ ಕಡಿಮೆಯಾಗಿವೆ. ಇದು ಪುಟ ೨೮೧ ರಿಂದ ೨೯೬ ರ ವರೆಗಿನ ವಚನಗಳಿಂದಲೂ ಸ್ಪಷ್ಟವಾಗುತ್ತದೆ.

ವಚನಕಾರರು ಸ್ವತಂತ್ರ ವಿಚಾರದವರಿದ್ದು, ವೇದಾಗಮೋಪನಿಷತ್ತುಗಳ ತತ್ವಗಳ ಮೇಲಿಂದ ತಮ್ಮದೊಂದು ಸಿದ್ಧಾಂತವನ್ನೇ ಏರ್ಪಡಿಸಿದ್ದಾರೆ. ಇದಕ್ಕೆ ಷಟ್‌ಸ್ಥಲ ಸಿದ್ಧಾಂತವೆಂಬ ಹೆಸರು. ಇವರು ಹಿಂದೂಧರ್ಮದ ಯಾವತ್ತು ವಿಷಯಗಳಲ್ಲಿಯ ಸಾರವನ್ನು ತೆಗೆದುಕೊಂಡು ಅದನ್ನು ಈ ತಮ್ಮ ಸಿದ್ಧಾಂತದಲ್ಲಿ ನೆಲೆಗೊಳಿಸಲು ಪ್ರಯತ್ನಿಸಿದ್ದಾರೆ. ಇದರಲ್ಲಿ ಪ್ರವೃತ್ತಿ ನಿವೃತ್ತಿ ಮಾರ್ಗಗಳ ಸಮ್ಮೇಳನವೂ, ಭಕ್ತಿ, ಜ್ಞಾನ, ವೈರಾಗ್ಯದ ಸಮಾವೇಶವೂ, ಯೋಗಾಭ್ಯಾಸ ನೈತಿಕ ತತ್ವಗಳ ಸಂಘಟನೆಯೂ ಉಂಟಾಗಿ, ಒಂದು ಆಶ್ಚರ್ಯಕರವಾದ ಸಿದ್ಧಾಂತವಾಗಿರುವದು. ವಚನಕಾರರು ಈ ಸಿದ್ಧಾಂತಗಳ ತತ್ವಗಳನ್ನು ಕನ್ನಡದಲ್ಲಿಯೇ ಸುಲಭವಾಗಿ ಬೋಧಿಸಿದ್ದಾರೆ. ಅವರು ಏರ್ಪಡಿಸಿದ ಈ ಕನ್ನಡ ವಾಙ್ಮಯಕ್ಕೆ **ವಚನಶಾಸ್ತ್ರ**ವೆಂಬ ಹೆಸರು ಉಂಟಾಗಿದೆ.

ಈ ಷಟ್‌ಸ್ಥಲ ಶಾಸ್ತ್ರಕ್ಕೆ ಮುಚ್ಚುಮರೆಗಳಿಲ್ಲ. ಎಲ್ಲ ಜಿಜ್ಞಾಸುಗಳಿಗೂ ಅದು ತೆರೆದದ್ದಿರುತ್ತದೆ. ಯಾವನು ಈ ಮತತತ್ವಗಳನ್ನು ಪ್ರೀತಿಸುವನೋ, ಅವನು ಅವುಗಳಂತೆ ನಡೆಯಲು ಅರ್ಹನಾಗುತ್ತಾನೆ. ಆದ್ದರಿಂದ ದೀಕ್ಷೆಯನ್ನು ಹೊಂದಿ ಈ ಮತವನ್ನವಲಂಬಿಸಲಿಕ್ಕೆ ಯಾವನಿಗೂ ಪ್ರತ್ಯವಾಯವಿಲ್ಲ. ಈ ಸಂಗ

ತಿಯು ಪುಟ ೭೩ ರಿಂದ ೭೭ ಮತ್ತು ೬೯ ರಿಂದ ೭೩ರ ವರೆಗಿನ ವಚನಗಳಿಂದ ವ್ಯಕ್ತವಾಗುತ್ತದೆ. ಇದೆ. ಮತ್ತು ಇದರಂತೆಯೇ ವಚನಕಾರರೆಲ್ಲರೂ ವರ್ತಿಸಿರುತ್ತಾರೆ. ಅವರ ಕಾಲಕ್ಕೆ ಲಿಂಗಾಯತ ಮತವು ಈಗಿನಂತೆ ಒಂದು ಜಾತಿಯ ಸ್ವರೂಪನ್ನು ಹೊಂದಿರಲಿಲ್ಲ. ಆದ್ದರಿಂದ ಬಸವೇಶ್ವರನ ಕಾಲಕ್ಕೆ ಜೈನ, ಬ್ರಾಹ್ಮಣ ಮೊದಲ್ಗೊಂಡು ಅಂತ್ಯಜರವರೆಗೂ ಅಸಂಖ್ಯ ಜನರು ವಚನಕಾರರ ಮತಾವಲಂಬಿಗಳಾದರು.

ವಚನಕಾರರು ತಮ್ಮ ವಿಚಾರಗಳನ್ನು ಬಹು ವಿಲಕ್ಷಣವಾದ ಶೈಲಿಯಲ್ಲಿ ಬರೆದಿರುವರು. ಇದರಿಂದ ಅವರ ವಿಚಾರಗಳು ಬಹು ಸ್ಪಷ್ಟವಾಗಿ ಮನಸ್ಸಿನಲ್ಲಿ ಮೂಡುತ್ತವೆ. ಇದರಂಥ ವಾಙ್ಮಯುವು ಬೇರೆ ಯಾವ ಭಾಷೆಯಲ್ಲಿಯೂ ಸಿಗಲಾರದು. ಆದರೆ ತಮ್ಮ ವಿಚಾರಗಳನ್ನು ಪ್ರಕಟಮಾಡುವದರಲ್ಲಿ ಇವರು ವ್ಯಾಕರಣದ ಕಟ್ಟುಗಳಿಗೆ ಮೀರಿದವರಾಗಿರುತ್ತಾರೆ. ಅವರ ವಾಕ್ಯರಚನೆಗಳೇ ಚಮತ್ಕಾರವಾದವುಗಳು. ಅವರ ಕರ್ತೃ ಕ್ರಿಯಾಪದಗಳು ವಾಕ್ಯದ ಬೇಕಾದ ಕಡೆಗೆ ಬಿದ್ದಿರುತ್ತವೆ ಕರ್ತೃವಿದ್ದರೆ ಕ್ರಿಯಾಪದವಿಲ್ಲ. ಕ್ರಿಯಾಪದವಿದ್ದರೆ, ಕರ್ತೃವಿಲ್ಲ. ಒಮ್ಮೊಮ್ಮೆ ಎರಡೂ ಹಾರಿ ಹೋಗಿರುತ್ತವೆ. ವಾಕ್ಯದ ಆರಂಭದಲ್ಲಿ ಉತ್ತಮ ಪುರುಷವಾಚಕವಿದ್ದರೆ, ಅದು ಕಟ್ಟಕಡೆಗ್ಗೆ ಮಧ್ಯಮ ಪುರುಷವಾಚಕವಾಗಿರುತ್ತದೆ. ಈ ರೀತಿಯಾಗಿ ವ್ಯಾಕರಣದ ಅವ್ಯವಸ್ಥೆಯು ಇವುಗಳಲ್ಲಿ ಕಂಡರೂ, ಅವರ ಅಭಿಪ್ರಾಯಗಳಲ್ಲಿ ಮಾತ್ರ ಲವಲೇಶವಾದರೂ ಅನಿಶ್ಚಿತತ್ವವು ಇರುವದಿಲ್ಲ. ಈ ಮೇರೆಗೆ ಈ ವಚನ ಗ್ರಂಥಗಳು ಕನ್ನಡ ಭಾಷೆಯಲ್ಲಿ ಬಹು ಆಶ್ಚರ್ಯಕರವಾದ ಗ್ರಂಥಗಳಾಗಿವೆ.

ಆದರೆ ಈಗಿನ ಕಾಲಕ್ಕೆ ಲಿಂಗಾಯತರಲ್ಲಿ ಈ ವಚನಗ್ರಂಥಗಳ ಬಗ್ಗೆ ಪೂಜ್ಯಭಾವವು ಹೋಗಿಬಿಟ್ಟಿರುತ್ತದೆ. ಇದು ಬಹು ಖೇದಕರವಾದದ್ದು. ಈ ೫೦-೬೦ ವರ್ಷಗಳಿಂದ ಅವರ ಲಕ್ಷವು ಸಂಸ್ಕೃತದ ಕಡೆಗೆ ಹೋಗಿರುತ್ತದೆ. ಆದರೆ ಉದಾತ್ತ ವಿಚಾರಗಳು ಕನ್ನಡದಲ್ಲಿದ್ದ ಮಾತ್ರದಿಂದ ಅವುಗಳ ಬೆಲೆಯು ಎಂದಿಗೂ ಕಡಿಮೆಯಾಗಲಾರದು. ರಬೀಂದ್ರರು ವಂಗಭಾಷೆಯಲ್ಲಿ ಬರೆದ ತತ್ವಗಳು ಈಗ ಪೃಥ್ವಿಯಲ್ಲಿಯ ಎಲ್ಲ ಜನಾಂಗದವರಿಗೆ ಆದರಣೀಯವಾಗಿರುತ್ತವೆ. ಅದ್ದರಿಂದ ಇಂಥ ವಿಚಾರಗಳನ್ನು ಬಿಟ್ಟುಕೊಟ್ಟು ಅವರ ಗ್ರಂಥಗಳನ್ನು ಉದ್ಧರಿ

ಸುವದು ಲಿಂಗಾಯತ ಸಮಾಜದವರ ಕರ್ತವ್ಯವಾಗಿದೆ. ಈ ಗ್ರಂಥಗಳು ಅಲ್ಲಲ್ಲಿ ಇನ್ನೂ ಉಪಲಬ್ಧವಿವೆ. ಆದ್ದರಿಂದ ಇವುಗಳನ್ನು ಇವರು ಸಂಗ್ರಹಿಸಿ, ಅಚ್ಚುಪಡಿಸುವ ಕಾರ್ಯವನ್ನು ಬೇಗನೇ ಕೈಕೊಳ್ಳುವರೆಂದು ನಾನು ಹಾರೈಸುತ್ತೇನೆ.

ನನಗೆ ವಚನಗ್ರಂಥಗಳನ್ನು ನೋಡಲಿಕ್ಕೆ ಕೊಟ್ಟಂಥವರ ಹೆಸರುಗಳನ್ನು ನನ್ನ ಆಧಾರ ಗ್ರಂಥಗಳ ಪಟ್ಟಿಯಲ್ಲಿ ಕೊಟ್ಟಿದ್ದೇನೆ. ನನ್ನ ವ್ಯವಸಾಯಗಳಲ್ಲಿ ನನಗೆ ಉಳಿದ ವೇಳೆಯಲ್ಲಿ ಈ ಗ್ರಂಥರಚನೆಯ ಕಾರ್ಯ ಮಾಡಬೇಕಾದ್ದರಿಂದ ಬಹಳ ಅವಧಿಯವರೆಗೂ ಅವರು ತಮ್ಮ ಗ್ರಂಥಗಳನ್ನು ನನ್ನ ಕಡೆಗೆ ಕೊಟ್ಟದ್ದಕ್ಕಾಗಿ ನಾನು ಅವರಿಂದ ಬಹಳ ಉಪಕೃತನಾಗಿದ್ದೇನೆ. ಅವರು ಈ ಮೇರೆಗೆ ನನಗೆ ಅನುಕೂಲ ಮಾಡಿಕೊಡದೆ ಇದ್ದ ಪಕ್ಷದಲ್ಲಿ ನನ್ನಿಂದ ಈ ಗ್ರಂಥವನ್ನು ಏರ್ಪಡಿಸುವದು ಅಶಕ್ಯವಾಗುತ್ತಿತ್ತು. ಆದ್ದರಿಂದ ಅವರ ಉಪಕಾರವನ್ನು ನಾನು ಎಷ್ಟು ವಿವರಿಸಿದರೂ ಅಲ್ಪವೇ ಇರುತ್ತದೆ.

ಬೆಳಗಾಂವ<br>ತಾ|| ೧೭-೨-೧೯೨೩. } **ಫ. ಗು. ಹಳಕಟ್ಟಿ.**

# ಈ ಗ್ರಂಥರಚನೆಯಲ್ಲಿ ಆಧಾರವಾಗಿ ತೆಗೆದುಕೊಂಡ ಗ್ರಂಥಗಳ ಪಟ್ಟಿಯು.

(೧). ಸರ್ವ ಪುರಾತನರ ವಚನಗಳು:—ಇದು ಟೀಕೆಯುಳ್ಳದ್ದು. ಅನೇಕ ವಚನಕಾರರ ವಚನಗಳ ಸಂಗ್ರಹವು. ಶ್ರೀಶಿವಯೋಗಮಂದಿರದಿಂದ ದೊರೆದದ್ದು.

(೨). ವಚನಗಳ ಸಂಗ್ರಹವು:—ಅನೇಕ ವಚನಕಾರರ ವಚನಗಳು. ವಿಜಾಪುರ ಜಿಲ್ಹಾ, ಸಿಂದಗಿ ತಾಲೂಕು ಹಿಪ್ಪರಿಗೆಯಲ್ಲಿ ಶಿ. ಮೂ. ನೀಲಪ್ಪ ಪರದೇಶಿಮಠ ಇವರು ಕಳಿಸಿದ್ದು.

(೩). ಬಿಡಗಿನ ವಚನಗಳು:—ಟೀಕೆಯುಳ್ಳದ್ದು, ಅನೇಕ ವಚನಕಾರರ ವಚನಗಳು. ಶಿ. ಮೂ. ಮುರಿಗೆಯ್ಯ ಜಂಗಿನ ಬಾಗಲಕೋಟ ಇವರಲ್ಲಿ ದೊರೆದದ್ದು.

(೪). ವಚನಗಳ ಸಂಗ್ರಹ:—ಅನೇಕ ವಚನಕಾರರ ವಚನಗಳು ಇವೆ. ಶ್ರೀಶಿವಯೋಗ ಮಂದಿರದಲ್ಲಿ ದೊರೆದದ್ದು.

(೫). ವಚನಗಳ ಸಂಗ್ರಹ:—ರಾ. ರಾ. ಮಲಕಪ್ಪ ಷಣಕಲ್ಲ, ರಬಕವಿ ಸಂ. ಸಾಂಗಲಿ ಇವರಲ್ಲಿ ದೊರೆದದ್ದು.

(೬). ವಚನಸಂಗ್ರಹ:—ಇದು "ಅಂಬಿಗರ ಚೌಡಯ್ಯನ ವಚನ" ವೆಂದು ಈಗ ಅಚ್ಚಾಗಿದೆ. ಇದೊಂದು ವಚನಗಳ ಸಂಗ್ರಹ.

(೭). ಲಿಂಗಚಿದಮೃತಬೋಧೆ:—ಇದೊಂದು ವಚನಗಳ ಸಂಗ್ರಹವು. ಶಿ. ಮೂ. ಮುರಿಗೆಯ್ಯ ಜಂಗಿನ, ಬಾಗಲಕೋಟ ಇವರಲ್ಲಿ ದೊರೆದದ್ದು.

(೮). ನಿಜಾಚರಣೆಯ ವಚನಗಳು:—ಇದಾದರೂ ವಚನಗಳ ಸಂಗ್ರಹವಿದೆ. ಕೈ. ವಾ. ಶಿವರುದ್ರಯ್ಯಾ ಮಠ, ಚೊಳಚಗೋಡ ತಾ. ಬದಾಮಿ ಇವರು ಕಳಿಸಿಕೊಟ್ಟದ್ದು.

(೯). ವಚನಗಳ ಸಂಗ್ರಹ:—ಏಕೋತ್ತರ ಶತಸ್ಥಲಪರವಾಗಿ. ಶ್ರೀಗುರು ಪಾದಸ್ವಾಮಿಗಳು ಹಿರೇಮಠ, ಬಬಲೇಶ್ವರ ತಾ. ವಿಜಾಪುರ ಇವರ ಕಡೆಯಿಂದ ಬಂದದ್ದು.

(೧೦). ಏಕೋತ್ತರ ಶತಸ್ಥಲ, ಪುಲಿಗೆರಿಯ ಜಕ್ಕಣ್ಣ ಕೃತ:— ಇದೊಂದು ವಚನಗಳ ಸಂಗ್ರಹ. ತಾ. ಇಂಡಿ, ಜಿಗಜಿನ್ನಿಯ ಪಟ್ಟದ್ದೇವರಲ್ಲಿ ದೊರೆದದ್ದು.

(೧೧). ಗಣಭಾಷ್ಯರತ್ನಮಾಲಾ, ಗುಬ್ಬಿ ಮಲುಹಣಕೃತ:—ಇದು ಅಚ್ಚಾಗಿದೆ.

(೧೨). ಲಿಂಗಲೀಲಾವಿಲಾಸ, ವಿದ್ಯಾನಗರದ ಕಲ್ಲಮಠದ ಪ್ರಭುದೇವಾರ್ಯರು ಮಾಡಿದ್ದು:—ಟೀಕೆಯುಳ್ಳದ್ದು. ಇದೊಂದು ವಚನಗಳ ಸಂಗ್ರಹ. ಶ್ರೀಶಿವಯೋಗಮಂದಿರದಲ್ಲಿ ದೊರೆದದ್ದು.

(೧೩). ಸಂಬಂಧದ ವಚನಗಳು:—ವಚನಗಳ ಸಂಗ್ರಹ.

(೧೪). ಆಚರಣೆಯ ವಚನಗಳು:—ವಚನಗಳ ಸಂಗ್ರಹ.

(೧೫). ಅಷ್ಟಾವರಣದ ವಚನಗಳು:—ವಚನಗಳ ಸಂಗ್ರಹ.

(೧೬). ಸಿದ್ಧರಾಮೇಶ್ವರವಾದ ವಚನ:—ಕಲಬುರ್ಗಿಯಲ್ಲಿ ಲಿಥೋಗ್ರಾಫ್ ಆಗಿದೆ.

(೧೭). ಸಿದ್ಧರಾಮೇಶ್ವರನು ಕಲ್ಯಾಣದಿಂದ ಬಂದ ಬಳಿಕ ವಾದಮಾಡಿದ ವಚನಗಳು:—ಇದು ಒಂದು ವಾದದ ವಚನ. ರಾ. ರಾ. ರೇವಣ ಸಿದ್ಧಪ್ಪ ಉಮ್ಮರ್ಜಿ, ಸೊಲ್ಲಾಪುರ ಇವರು ಕಳಿಸಿದ್ದು.

(೧೮). ಶೂನ್ಯ ಸಂಪಾದನೆ:—ಇದು ವಾದದ ವಚನ. ಶ್ರೀ ಮೂ। ಗುರು ಸಾತಯ್ಯ ಹಿರೇಮಠ, ಬನಹಟ್ಟಿ ಸಂ। ಜಮಖಂಡಿ ಇವರು ಕಳಿಸಿದ್ದು.

(೧೯). ಬಸವಣ್ಣನ ವಚನಗಳು:—ರಾ। ರಾ। ಚನ್ನಬಸಪ್ಪ ಪಾಟೀಲ, ಕುಚ ಬಾಳ ತಾ॥ ಮುದ್ದೇಬಿಹಾಳ ಇವರು ಕಳಿಸಿದ್ದು. ಇದಕ್ಕೆ ಟೀಕೆ ಇದೆ.

(೨೦). ಚನ್ನಬಸವೇಶ್ವರ ವಚನಗಳು:—ಕೈ. ವಾ. ಸಿದ್ಧಲಿಂಗಪ್ಪ ಮಂಚಾಲಿ ಧಾರವಾಡ ಇವರು ಕಳಿಸಿದ್ದು.

(೨೧). ಸಿದ್ಧೇಶ್ವರ ವಚನಗಳು:—ತೋಂಟದಾರ್ಯರು ರಚಿಸಿದ್ದು. ಕೈ. ವಾ. ಜಿಗಜಿನ್ನಿ ಪಟ್ಟದ್ದೇವರು, ತಾ॥ ಇಂಡಿ ಇವರು ಕಳಿಸಿದ್ದು.

(೨೨). ಅಖಂಡೇಶ್ವರನ ವಚನಗಳು:—ಅಚ್ಚಾಗಿದೆ.

(೨೩). ವೇದಸಂಜೀವನೀ:—ಮುಮ್ಮಡಿ ಕಾರ್ಯೇಂದ್ರ ಭೂಪತಿಕೃತ. ಅಚ್ಚಾಗಿದೆ.

( ೨೪ ). ಪ್ರಭುದೇವರ ವಚನಗಳು:—ಟೀಕೆಯುಳ್ಳದ್ದು. ಕೈ. ವಾ. ಶಿದ್ಧಲಿಂಗಪ್ಪ ಮಂಚಾಲಿ, ಧಾರವಾಡ ಇವರು ಕಳಿಸಿದ್ದು.

( ೨೫ ). ಶಿಖಾಚಕ್ರವಚನ:—ರಾ। ರಾ। ಹತಪಾಕಿ, ರಬಕವಿ ಸಂ॥ ಸಾಂಗಲಿ ಇವರಲ್ಲಿ ದೊರೆದದ್ದು.

( ೨೬ ). ಗಣದಾಸಿ ವೀರಣ್ಣೊಡೆಯರ ವಚನ:—ಕೈ. ವಾ. ಗುರುಬಸಯ್ಯ ಕಂತಿ, ಬನಹಟ್ಟಿ. ಸಂ॥ ಜಮಖಂಡಿ ಇವರಲ್ಲಿ ದೊರೆದದ್ದು.

( ೨೭ ). ಘನಲಿಂಗನ ವಚನಗಳು:—

( ೨೮ ). ಕಾಡಸಿದ್ಧೇಶ್ವರ ವಚನ:—ಟೀಕೆಯುಳ್ಳದ್ದು. ಶ್ರೀಶಿವಯೋಗಮಂದಿರ ದಲ್ಲಿ ದೊರೆದದ್ದು.

( ೨೯ ). ಸ್ವತಂತ್ರ ಸಿದ್ಧಲಿಂಗೇಶ್ವರನ ವಚನ:—ಶ್ರೀ ಶಿವಯೋಗಮಂದಿರದಲ್ಲಿ ದೊರೆದದ್ದು.

( ೩೦ ). ಅಂಬಿಗರ ಚೌಡಯ್ಯನ ವಚನ:—ರಾ। ರಾ। ರುದ್ರಪ್ಪ ಚಲವಾದಿ ಸಾ॥ ವಿಜಾಪುರ ಇವರು ಕಳಿಸಿದ್ದು.

---

# ಅನುಕ್ರಮಣಿಕೆ.


| | |
|---|---|
| ಪರಮಾತ್ಮನ ಅವ್ಯಕ್ತಸ್ವರೂಪು | ೧ |
| ಸೃಷ್ಟಿಯ ರಚನೆ | ೩ |
| ಪರಮಾತ್ಮನು ಅಜ್ಞೇಯನು | ೬ |
| ಪರಮಾತ್ಮನು ವಿಶ್ವವ್ಯಾಪಿಯು | ೭ |
| ಪರಮಾತ್ಮನು ಜಗತ್ತಿಗೆ ಆಧಾರಭೂತನಾಗಿದ್ದು, ಅದರ ಉತ್ಪತ್ತಿ ಸ್ಥಿತಿ ಲಯಕ್ಕೆ ಕಾರಣನು | ೧೦ |
| ಪರಮಾತ್ಮನಿಗೆ ಹುಟ್ಟುಸಾವೆಂಬುವಿಲ್ಲ. ಅವನು ನಿತ್ಯನು | ೧೩ |
| ಪರಮಾತ್ಮನು ಸಕಲ ಪದಾರ್ಥಗಳಲ್ಲಿ ಗೌಪ್ಯನಾಗಿರುವನು | ೧೪ |
| ಪರಮಾತ್ಮನು ಸಕಲ ಪದಾರ್ಥಗಳಲ್ಲಿ ಚೈತನ್ಯಾತ್ಮಕನಾಗಿ ವರ್ತಿಸುತ್ತಾನೆ | ೧೬ |
| ಪರಮಾತ್ಮನು ವಿಶ್ವಮಯನು. ಆದರೂ ಆತನು ವಿಶ್ವದ ಗುಣಗಳನ್ನು ಹೊದ್ದನು | ೧೮ |
| ವಿಶ್ವವು ಪರಮಾತ್ಮನಲ್ಲ | ೨೦ |
| ಪರಮಾತ್ಮನು ಧರ್ಮಿಷ್ಠರಲ್ಲಿರುತ್ತಾನೆ | ೨೨ |
| ದೇವರು ಒಬ್ಬನೇ ಇದ್ದಾನೆ | ೨೬ |
| ಬ್ರಹ್ಮ, ವಿಷ್ಣು, ರುದ್ರ ಮೊದಲಾದ ದೇವತೆಗಳು ದೇವರಲ್ಲ | ೨೮ |
| ಅಷ್ಟತನುಮೂರ್ತಿಗಳು ದೇವರಲ್ಲ | ೩೧ |
| ಬೇರೆ ಕಿರುಕುಳ ದೈವಗಳು ದೇವರಲ್ಲ | ೩೨ |
| ಮೋಕ್ಷ ... ... | ೩೪ |
| ಮಾಯೆಯನ್ನು ಹೋಗಲಾಡಿಸುವದು | ೪೦ |
| ಜ್ಞಾನದಿಂದ ಮೋಕ್ಷವು | ೪೨ |
| ಲಿಂಗಧಾರಣದ ತತ್ವವು | ೪೬ |
| ಇಷ್ಟಲಿಂಗದ ಸ್ವರೂಪು ... | ೫೩ |
| ಇಷ್ಟಲಿಂಗವು ಮಹಾಲಿಂಗವೆಂದರಿವುದು | ೬೨ |
| ಇಷ್ಟಲಿಂಗದ ಆವಶ್ಯಕತೆಯು | ೬೪ |

ಸದಾಚಾರಿಯೇ ದೀಕ್ಷೆಗೆ ಯೋಗ್ಯನು ೬೯
ಲಿಂಗದೇಹಿಯು ಪರಿಶುದ್ಧನು ... ೭೧
ದೀಕ್ಷೆಯಲ್ಲಿ ವರ್ಣಜಾತಿಗಳ ಭೇದವಿಲ್ಲ ೭೩
ದೀಕ್ಷೆಯಾದ ಬಳಿಕ ಪೂರ್ವಾಶ್ರಯವನ್ನು ಬೆರಿಸಕೂಡದು ೭೮
ಲಿಂಗವೇ ಪತಿ ಎಂದು ಭಾವಿಸತಕ್ಕದ್ದು ೭೯
( ಸತಿಪತಿ ಭಾವದ ವಚನಗಳು. )
ಲಿಂಗಾಂಗ ಸಾಮರಸ್ಯಭಾವದಿಂದ ಆಚರಿಸುವದು. ೮೩
ಲಿಂಗದ ಕ್ರಮಪ್ರಾಪ್ತಿಯು ೮೯
ಅಂಗಸ್ಥಲಗಳು ಲಿಂಗಸ್ಥಲಗಳು ೯೧
ಮೂರು ಸ್ಥಲಗಳು ೯೩
( ತ್ಯಾಗಾಂಗ, ಭೋಗಾಂಗ, ಯೋಗಾಂಗ. )
ಆರು ಸ್ಥಲಗಳು ( ಷಟ್‌ಸ್ಥಲಗಳು. ) ೯೩
( ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ. )
೩೬ ಸ್ಥಲಗಳ ತತ್ವಗಳು ೯೫
ಸ್ಥಲಗಳ ಪ್ರವೃತ್ತಿ, ನಿವೃತ್ತಿಗಳು ೯೭
ಗುರುಲಿಂಗ ಜಂಗಮದಿಂದ ಆತ್ಮವಿಕಾಸದ ರೀತಿ ೯೮


## ಭಕ್ತಸ್ಥಲ.


ಲಿಂಗಾಂಗಿಯು ಸದಾಚಾರಿಯಾಗಿರತಕ್ಕದ್ದು ೧೦೦
ಸತ್ಯವನ್ನು ನುಡಿ ೧೦೫
ಕಳವು ಮಾಡಬೇಡ ೧೦೭
ಜೀವಹಿಂಸೆ ಮಾಡಬೇಡ ೧೦೭
ಎಲ್ಲರೂ ಸಮಾನರೆಂದು ಭಾವಿಸು ೧೧೧
ಜ್ಞಾನಿಯೇ ಶ್ರೇಷ್ಠನೆಂದು ಭಾವಿಸು ೧೧೩
ಸಮಾಧಾನಿಯಾಗಿರು — ೧೧೫
ಸಿಟ್ಟಾಗಬೇಡ ೧೧೭
ಸೈರಣೆಯುಳ್ಳವನಾಗಿರು ೧೧೮
ದುರಾಶೆಯುಳ್ಳವನಾಗಬೇಡ ೧೧೯

ರಾಜ್ಯ ... ಶಿಕ್ಷಕ
ನಾಗನೂರ್ ತಾ॥ ...


| | |
|---|---|
| ವ್ಯಭಿಚಾರಮಾಡಬೇಡ | ೧೨೨ |
| ದಾನಮಾಡು | ೧೨೬ |
| ಲೋಭಿಯಾಗಬೇಡ | ೧೩೦ |
| ನಿಷ್ಕಪಟಿಯಾಗಿರು | ೧೩೨ |
| ಅಹಂಕಾರಿಯಾಗಬೇಡ | ೧೩೪ |
| ಸಭ್ಯವರ್ತನೆಯಿಂದಿರು | ೧೩೬ |
| ದೈನ್ಯಭಾವದಿಂದಿರು | ೧೩೯ |
| ಭಕ್ತನೆಂಬ ಹೆಮ್ಮೆಯನ್ನು ಬಿಡು | ೧೪೦ |
| ಸ್ತ್ರೀಯರನ್ನು ಮನ್ನಿಸು | ೧೪೧ |
| ಶರಣರನ್ನು ಮನ್ನಿಸು | ೧೪೩ |
| ಪೂಜ್ಯರೊಡನೆ ಸರಸವಾಡಬೇಡ | ೧೪೬ |
| ಸಜ್ಜನರ ಸಂಗಮಾಡು | ೧೪೭ |
| ತನುಮನ ಭಾವದಲ್ಲಿ ಶುದ್ಧನಾಗಿರು | ೧೫೩ |
| ನೀತಿಯ ವಚನಗಳು ... | ೧೫೬ |
| ಗುರುಲಿಂಗ ಜಂಗಮರು ಸದಾಚಾರ ಸದ್ಭಕ್ತಿಯುಳ್ಳವರಾಗಿರತಕ್ಕದ್ದು | ೧೬೨ |
| ಶ್ರದ್ಧೆಯುಳ್ಳವನಾಗಿರು | ೧೬೫ |
| ಲಿಂಗವನ್ನು ಪೂಜಿಸು | ೧೮೧ |
| ಇಷ್ಟಲಿಂಗವು ಪ್ರಾಣಲಿಂಗವೆಂದು ಭಾವಿಸಿ ಪೂಜಿಸು | ೧೮೭ |
| ಯಾವಾಗಲೂ ಲಿಂಗಧಾರಕವಾಗಿ ಸಾಮರಸ್ಯವನ್ನು ಹೊಂದುವವರೆಗೂ ಅದನ್ನು ಪೂಜಿಸು | ೧೮೯ |
| ಲಿಂಗಪೂಜೆಯು ಸದಾಚಾರವಿಲ್ಲದಿದ್ದರೆ ವ್ಯರ್ಥವು | ೧೯೧ |
| ತಾಮಸಲಿಂಗ ಪೂಜೆಯನ್ನು ಬಿಡು | ೧೯೪ |
| ಪರಮಾತ್ಮನನ್ನು ನೆನೆಯು | ೧೯೮ |
| ಅನುಭಾವವುಳ್ಳವನಾಗಿರು | ೨೦೬ |
| ಅಂಧ ಶ್ರದ್ಧೆಯುಳ್ಳವನಾಗಬೇಡ | ೨೦೯ |
| ಪರಮಾತ್ಮನನ್ನು ಮೋಹಿಸು ... | ೨೧೧ |

(ಸತಿಪತಿ ಭಾವದ ವಚನಗಳು)

ಪ್ರಾರ್ಥನೆಗಳು.

(೧) ಸಂಸಾರವು ದುಃಖಮಯವು. ಇದನ್ನು ದೂರಮಾಡಲಿಕ್ಕೆ ಯತ್ನಿಸು ೨೧೪

ಮಾಯೆಯನ್ನು ಹೋಗಲಾಡಿಸು ೨೨೨

(೨) ಮೋಕ್ಷಪದವನ್ನು ಬಯಸು ೨೨೫

(೩) ಪರಮಾತ್ಮನ ರಕ್ಷಣೆಯನ್ನು ಬೇಡಿಕೊಳ್ಳುತ್ತಿರು ೨೨೭

(೪) ಪರಮಾತ್ಮನ ಕ್ಷಮೆಯನ್ನು ಬೇಡು ... ೨೩೧

(೫) ಪರಮಾತ್ಮನ ಕಾರುಣ್ಯವನ್ನು ಬೇಡಿಕೊಳ್ಳು ೨೩೪

(೬) ಪರಮಾತ್ಮನಿಗೆ ಶರಣುಹೋಗು ... ೨೩೯

(೭) ಸದ್ವರ್ತನೆಯನ್ನು ಕರುಣಿಸಲು ಪರಮಾತ್ಮನನ್ನು ಬೇಡಿಕೊಳ್ಳು ೨೪೨

(೮) ಶುದ್ಧ ಮನಸ್ಸನ್ನುಂಟುಮಾಡಲು ಬೇಡಿಕೊಳ್ಳು ೨೪೮

(೯) ಲಿಂಗಾಂಗ ಸಾಮರಸ್ಯವುಳ್ಳವನ ಪ್ರಾರ್ಥನೆಗಳು ೨೫೩

(೧೦) ಪರಮಾತ್ಮನನ್ನು ಕಾಮಿಸು ೨೫೫

(ಸತಿಪತಿ ಭಾವದ ವಚನಗಳು.)

**ಮಹೇಶ್ವರಸ್ಥಲ.**

ನಿಷ್ಠೆಯುಳ್ಳವನಾಗಿರು ... ೨೫೮

ಎಂಥ ಕಷ್ಟಗಳು ಬಂದರೂ, ನಿನ್ನ ಕರ್ತವ್ಯಗಳನ್ನು ಬಿಡಬೇಡ ೨೬೧

ನಿನ್ನ ಕರ್ತವ್ಯಗಳಲ್ಲಿ ಧೈರ್ಯವುಳ್ಳವನಾಗಿರು ೨೬೪

ಬಡತನದಲ್ಲಿ ಧೈರ್ಯಗುಂದಬೇಡ ೨೬೮

ಲೋಕದ ಮಾತಿನ ಮೇಲೆ ಅವಲಂಬಿಸಬೇಡ ೨೬೯

ವ್ರತನಿಯಮಗಳನ್ನು ಬಿಡಬೇಡ ೨೭೧

ವ್ರತಗೇಡಿಗಳ ಸಂಗವನ್ನು ಮಾಡಬೇಡ ೨೭೨

ಶೀಲವುಳ್ಳವನಾಗಿರು ೨೭೩

ತಾಮಸ ಶೀಲವ್ರತಗಳನ್ನು ಪಾಲಿಸಬೇಡ ೨೭೬

ಏಕಲಿಂಗ ನಿಷ್ಠೆಯುಳ್ಳವನಾಗಿರು.

(೧) ಅನ್ಯದೇವತೆಗಳನ್ನು ಭಜಿಸಬೇಡ ೨೮೧

(೨) ಸ್ಥಾವರಲಿಂಗಗಳನ್ನು ಪೂಜಿಸಬೇಡ ೨೮೪

( ೩ ) ಕಿರುಕುಳ ದೈವಗಳನ್ನು ನಂಬಬೇಡ ೨೮೩
( ೪ ) ತೀರ್ಥಯಾತ್ರೆಗಳನ್ನು ಮಾಡಬೇಡ ೨೯೩
ಲಿಂಗ ಹೋದರೆ ಆತ್ಮಘಾತ ಮಾಡಿಕೊಳ್ಳಬೇಡ ೨೯೬
ಜ್ಯೋತಿಷ್ಯವನ್ನು ನಂಬಬೇಡ ೩೦೨
ಮಾರಿ ಮಸಣಿ ಕನಸು ಶಕುನಗಳನ್ನು ನಂಬಬೇಡ ೩೦೫
ಪ್ರಾಯಶ್ಚಿತ್ತಗಳನ್ನು ತೆಗೆದುಕೊಳ್ಳಬೇಡ ೩೦೬
ಯಜ್ಞಗಳನ್ನು ಮಾಡಬೇಡ ೩೦೮
ಶರಣರ ವಚನಗಳನ್ನು ನಂಬು ೩೦೯
ವೇದಶಾಸ್ತ್ರಾಗಮ ಪುರಾಣಗಳಿಗೆ ಮನಸೋಲಬೇಡ ೩೧೨

ಜಾತಿಭೇದ.

( ೧ ) ವರ್ಣಗಳಿಲ್ಲ. ಎಲ್ಲರೂ ಸಮಾನರು ೩೧೭
( ೨ ) ಸದಾಚಾರಿಯೇ ಶ್ರೇಷ್ಠ ಕುಲದವನು ೩೨೨
ಹೊಲೆಯನಾದರೂ ಸದಾಚಾರಿಯೇ ಕುಲಜನು ೩೨೩
( ೩ ) ಲಿಂಗಾಂಗಿಗಳಲ್ಲಿ ಕುಲಭೇದವಿಲ್ಲ ... ೩೨೫
( ೪ ) ಭಕ್ತರು ಪರಸ್ಪರ ಅನ್ನೋದಕ ವ್ಯವಹಾರವನ್ನು ಮಾಡುವದು ೩೨೭
( ೫ ) ಭಕ್ತರು ಪರಸ್ಪರ ಲಗ್ನವ್ಯವಹಾರವನ್ನು ಮಾಡುವದು ೩೩೦
( ೬ ) ಋಷಿಗಳ ಹುಟ್ಟು ಕೀಳತರದ್ದಿದ್ದರೂ, ಅವರು ಸತ್ಕ್ರಿಯೆಯಿಂದ ಶ್ರೇಷ್ಠ ಕುಲದವರು ೩೩೧
( ೭ ) ಭಕ್ತರು ಕುಲದಭಿಮಾನವನ್ನು ಬಿಡುವದು ೩೩೩
ಪಂಚಸೂತಕಗಳಿಲ್ಲ ೩೩೪

## ಪ್ರಸಾದಿಸ್ಥಲ.

( ೧ ) ಕ್ರಿಯೆ ... ... ೩೩೬
( ೨ ) ಫಲಪದವನ್ನು ಅಪೇಕ್ಷಿಸದೆ ಕ್ರಿಯೆಗಳನ್ನು ಮಾಡುವದು ( ನಿಷ್ಕಾಮಕರ್ಮ ). ೩೪೦
( ೩ ) ತಾದಾತ್ಮ್ಯಭಾವವುಳ್ಳವನಾಗಿ ಕ್ರಿಯೆಗಳನ್ನು ಮಾಡುವದು ೩೪೪
( ೪ ) ಲಿಂಗಕಾರ್ಯಕ್ಕೋಸ್ಕರ ಕ್ರಿಯೆಗಳನ್ನು ಮಾಡುವುದು. ೩೪೬
( ೫ ) ಕಾಯಕದಿಂದ ಉಪಜೀವಿಸುವದು. ೩೪೮

(೬) ದಾಸೋಹ ಭಾವದಿಂದ ಕ್ರಿಯೆಗಳನ್ನು ಮಾಡುವದು. ೩೪೯
ಒಂದು ಕಾಯಕವನ್ನು ಅವಲಂಬಿಸಿ ದಾಸೋಹವನ್ನು ಮಾಡುವದು ೩೫೧
ಭಿಕ್ಷೆಯಿಂದ ದಾಸೋಹವನ್ನು ಮಾಡಕೂಡದು. ೩೫೨
ಪ್ರಸಾದದ ತತ್ವಗಳು. ೩೫೩
ಅರ್ಪಣದ ತತ್ವಗಳು. ೩೫೬
ಕಾಯಾರ್ಪಣ ಕರಣಾರ್ಪಣ ಭಾವಾರ್ಪಣ.
೧ನೇ ವಿಧ.
(೧) ಅಂಗಮನ ತೃಪ್ತಿಗಳ ಅರ್ಪಣ ೩೬೧
ಮೇಲ್ಕಂಡ ಅರ್ಪಣದ ಪರಿಣಾಮ ೩೬೨
೨ನೇ ವಿಧ.
(೨) ರೂಪುರುಚಿ ತೃಪ್ತಿಗಳ ಅರ್ಪಣ ೩೬೨
ಮೇಲ್ಕಂಡ ಅರ್ಪಣದ ಪರಿಣಾಮ. ೩೬೩
೧ನೇ ವಿಧಕ್ಕೂ ೨ನೇ ವಿಧಕ್ಕೂ ಇರುವ ಸಂಬಂಧ ೩೬೪
೩ನೇ ವಿಧ.
(೩) ತನುಮನ ಧನಗಳ ಅರ್ಪಣ ೩೬೪
ಮೇಲ್ಕಂಡ ಅರ್ಪಣದ ಪರಿಣಾಮ ೩೬೫
ಕರಣಾರ್ಪಣ.
(೧) ಪಂಚವಿಷಯಗಳ ಅರ್ಪಣ ೩೬೬
(೨) ಮೇಲ್ಕಂಡ ಅರ್ಪಣದ ತತ್ವಗಳು ೩೬೮
(೩) ಮೇಲ್ಕಂಡ ಪ್ರಸಾದಿಯ ಲಿಂಗಸ್ಥಿತಿಯು ೩೭೨
ಭಾವಾರ್ಪಣದ ತತ್ವಗಳು ... ೩೭೩
ಪ್ರಸಾದದ ಪರಿಣಾಮಗಳು ೩೭೬
ಮನೋವಿಕಾರಗಳನ್ನು ದೂರ ಮಾಡುವದು ... ೩೭೭
ಭವವನ್ನು ಛೇದಿಸುವದು ೩೭೮
ಅಶುಚಿಭಾವವನ್ನು ದೂರಮಾಡುವದು ೩೭೯
ಪ್ರಸಾದಿಯ ಕಡೆಯ ಸ್ಥಿತಿ ೩೮೦
ಪ್ರಸಾದಿಯ ಲಿಂಗಪೂಜೆ ... ೩೮೨

ಪ್ರಸಾದಿಯು ತನ್ನ ಕ್ರಿಯೆಗಳನ್ನು ಮಾಡುವ ರೀತಿ ೩೮೩
ವಿಶ್ವಾಸದಿಂದ ಅರ್ಪಿಸುವದು ೩೮೩
ಪ್ರಕಟ ಗುಪ್ತವೆಂಬುದಿಲ್ಲ ೩೮೩
ಸಹಜಭಾವದಿಂದ ಅರ್ಪಿಸುವದು ೩೮೩
ಕಾಮರಹಿತನಾಗಿ ಅರ್ಪಿಸುವದು ೩೮೪
ತನುಮನ ಭಾವ ಶುದ್ಧನಾಗಿ ಅರ್ಪಿಸುವದು ೩೮೫
ಐಕ್ಯಭಾವದಿಂದ ಅರ್ಪಿಸುವದು ೩೮೬

ಕಾಯ.

(೧) ಕಾಯದ ಮಹತ್ವ ೩೮೮
(೨) ಇಂದ್ರಿಯಗಳನ್ನು ವ್ಯಥೆಗೊಳಿಸಬಾರದು ೩೮೯
(೩) ಬ್ರಹ್ಮಚರ್ಯೆಯುಳ್ಳವನಾಗಿರುವದು ೩೯೩
(೪) ಏಕಭುಕ್ತೋಪವಾಸಾದಿಗಳನ್ನು ಮಾಡಕೂಡದು ೩೯೫

ಭೋಜನ.

(೧) ಅರ್ಪಿತ ಭಾವವುಳ್ಳವನಾಗಿರುವದು ೩೯೮
(೨) ಭರಿತಾರ್ಪಣ (ಮಿತಾಹಾರಿಯಾಗಿರುವದು.) ೪೦೨

**ಪ್ರಾಣಲಿಂಗಿಸ್ಥಲ.**

ಪ್ರಾಣಲಿಂಗದ ಸ್ವರೂಪು ೪೦೬
ಇಷ್ಟಲಿಂಗ ಪ್ರಾಣಲಿಂಗಗಳ ಸಂಬಂಧ ೪೦೯
ಇಷ್ಟಲಿಂಗದಿಂದ ಪ್ರಾಣಲಿಂಗದ ಅರಿಕೆ ೪೧೫
ಪ್ರಾಣಲಿಂಗದಿಂದ ಇಷ್ಟಲಿಂಗದ ಅರಿಕೆ ೪೧೮
ಪ್ರಾಣಲಿಂಗಿಯ ಸ್ವರೂಪು ೪೧೯
ಪ್ರಾಣಲಿಂಗಿಯ ಆಚರಣೆ ... ೪೨೩
ಶಿವಯೋಗದ ಸಾಮಾನ್ಯ ಸ್ವರೂಪು ೪೨೮
(ಲಿಂಗಸಾಧನೆ)

ಶಿವಯೋಗಸಾಧನೆಯ ತತ್ವಗಳು.

(೧) ಆಚಾರದಲ್ಲಿ ... ... ೪೩೨

(೨) ಧ್ಯಾನದಲ್ಲಿ ೪೩೪

ಪ್ರಾಣಲಿಂಗದ ಧ್ಯಾನ ೪೩೮

(ಸತಿಪತಿಭಾವದ ವಚನಗಳು)

(೩) ಪೂಜೆಯಲ್ಲಿ ... ೪೪೦

(೪) ಶಿವಯೋಗದ ಅಷ್ಟಾಂಗಗಳು ೪೪೨

ಪ್ರಾಣಲಿಂಗಿಯ ಅಂಗಲಿಂಗ ಸಾಮರಸ್ಯ ೪೪೫

ಸತಿಪತಿ ಭಾವದ ವಚನಗಳು ೪೪೭

ಪ್ರಾಣಲಿಂಗಿಯ ಸಾಮರಸ್ಯ ಸುಖವು ೪೪೯

ಸತಿಪತಿಭಾವದ ವಚನಗಳು ೪೫೦

ಕ್ರಿಯೆವಿರಹಿತ ಧ್ಯಾನವು ವ್ಯರ್ಥವು ... ೪೫೧

ಲಿಂಗಾಂಗ ಯೋಗವಲ್ಲದ ಇತರ ಯೋಗಗಳನ್ನು ನಂಬಬಾರದು ೪೫೩

ಲಿಂಗವಿರಹಿತ ಜಪ ತಪ ಧ್ಯಾನ ನಿತ್ಯ ನೇಮ ಶೀಲಗಳನ್ನು ಮಾಡಕೂಡದು ೪೫೮

ಮಂತ್ರ ತಂತ್ರ ಸಿದ್ಧಿಗಳನ್ನು ಮಾಡಕೂಡದು ೪೬೫

**ಶರಣಸ್ಥಲ.**

ಶರಣನ ಲಕ್ಷಣಗಳು.

(೧) ಶರಣನು ಜ್ಞಾನಯುಕ್ತನು ೪೬೭

(೨) ಶರಣನು ಲಿಂಗರೂಪನು ೪೬೮

(೩) ಶರಣನು ನಿರ್ಲೇಪನು ... ೪೭೨

(೪) ಶರಣನು ದ್ವೈತಾದ್ವೈತವನು ಮೀರಿದವನು ೪೭೪

(೫) ಶರಣನು ದು:ಖರಹಿತನು ... ೪೭೮

(೬) ಬಂಕಣ್ಣಯ್ಯಗಳ ವಚನ (ಶರಣನ ಲಕ್ಷಣಗಳು) ೪೭೯

ಜ್ಞಾನ.

(೧) ಜ್ಞಾನದ ಕಾರ್ಯಗಳು ೪೮೧

(೨) ಜ್ಞಾನದ ಸ್ವರೂಪು ... ೪೮೫

(೩) ಜ್ಞೇಯ ವಸ್ತುವು ತನ್ನಲ್ಲಿಯೇ ಇದೆ ೪೮೭

(೪) ಲಿಂಗಜ್ಞಾನವು ... ೪೮೯

(೫) ಶರಣನ ಜ್ಞಾನವು ಹೇಳಲಿಕ್ಕೂ ಹೇಳಿಸಿಕೊಳಲಿಕ್ಕೂ ಬಾರದು ೪೯೧

(೬) ಪರಿಪೂರ್ಣ ಜ್ಞಾನಿಯ ಸ್ಥಿತಿ ೪೯೨

ಜ್ಞಾನ ಮತ್ತು ಕ್ರಿಯೆ ಇವುಗಳ ಸಂಬಂಧ ೪೯೪

ಜ್ಞಾನ ಕ್ರಿಯೆಗಳಿಂದ ಲಿಂಗದ ಅರಿವು ೪೯೯

ಶರಣನ ಆಚರಣೆಗಳು.

(೧) ಶರಣನು ಸದಾಚಾರಿಯಾಗಿರುವುದು ೫೦೧

ವಿದ್ಯಾವಂತನಾದರೂ ಸದಾಚಾರಿಯಾಗಿರುವುದು ೫೦೪

(೨) ಶರಣನ ಲಿಂಗಾನುಭವವು ೫೦೭

ಲಿಂಗಾನುಭಾವಿಯ ಸ್ಥಿತಿ ೫೦೯

(೩) ಶರಣನ ಸಾಮರಸ್ಯವು ೫೧೧

ಸಾಮರಸ್ಯವುಳ್ಳ ಶರಣನ ಸ್ಥಿತಿ ೫೧೬

ಪರಿಪೂರ್ಣ ಶರಣನ ಸ್ಥಿತಿಯ ವಿವರಣೆ.

(೧) ಶರಣನು ನಿಃಕ್ರಿಯನು ೫೧೮

(೨) ಶರಣರು ನಿರ್ದಾಕ್ಷಿಣ್ಯರು ೫೨೦

(೩) ಶರಣರಲ್ಲಿ ಯಾವತರದ ಭೇದಗಳಿಲ್ಲ ೫೨೧

ಜಂಗಮರ ನಿಜಾಚರಣೆ ( ಟೀಕಾತ್ಮಕ ವಿವೇಚನೆ ).

(೧) ವಿರಕ್ತ, ಗುರು, ಚರ, ಪಟ್ಟದಯ್ಯ, ಮಹಂತರು ೫೨೩

(೨) ಜಂಗಮನ ವೇಷ ಲಾಂಛನಗಳು ೫೩೦

ಜಂಗಮನ ಜಡೆ, ಮುಡಿ, ಬೋಳು ೫೩೨

(೩) ಜಂಗಮನು ಕಾಯಕವನ್ನು ಮಾಡತಕ್ಕದ್ದು ೫೩೪

ಜಂಮನು ಭಿಕ್ಷೆಯನ್ನು ಬೇಡಕೂಡದು ... ೫೩೫

ಜಂಗಮನು ಭಿಕ್ಷಾರ್ಥಿಯಾಗಿ ದೇಶಾಂತರಿಯಾಗಬಾರದು ೫೩೬

(೪) ಬೇಡುವಾತ ಜಂಗಮನಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ ೫೩೭

(೫) ಜಂಗಮನು ಸದಾ ತೃಪ್ತಿಯುಳ್ಳವನಾಗಿರತಕ್ಕದ್ದು ೫೩೯

(೬) ಜಂಗಮನು ಪರಸೇವೆ ಮಾಡಕೂಡದು ೫೪೦

(೭) ಜಂಗಮನು ಭಕ್ತರಿಗೆ ಸತ್ಪಥವನ್ನು ತೋರಿಸುವುದು ೫೪೦

(೮) ವಾಗದ್ವೈತವನ್ನು ಆಚರಿಸಬಾರದು ೫೪೩

## ಐಕ್ಯಸ್ಥಲ.


ಐಕ್ಯಸ್ಥಲದ ಲಕ್ಷಣಗಳು ೫೪೫

ಸ್ಥಲಗಳ ನಿಃಸ್ಥಲತ್ವವು ೫೪೮

ನಿಃಸ್ಥಲತ್ವದ ಸ್ಥಿತಿಯು ೫೫೧

ತನುಮನ ಪ್ರಾಣಭಾವಗಳ ನಿವೃತ್ತಿ ೫೫೩

ಗುರುಲಿಂಗ ಜಂಗಮದ ನಿವೃತ್ತಿ ೫೫೫

ಕ್ರಿಯೆಗಳ ನಿವೃತ್ತಿ ೫೫೬

ಕ್ರಿಯೆಯೊಳಗಣ ಐಕ್ಯತೆಯು ೫೬೦

ಲಿಂಗೈಕ್ಯನ ಸ್ಥಿತಿ ೫೬೧

ಲಿಂಗದೊಡನೆ ಐಕ್ಯವು ೫೬೬

( ಸತಿಪತಿಭಾವದ ವಚನಗಳು )


## ನಿರವಯ.


ಬಯಲು ೫೭೦

ಬಯಲು ಅನಿರ್ವಚನೀಯುವು ೫೭೫

( ಸತಿಪತಿ ಭಾವದ ವಚನಗಳು )


## ಪರಿಶಿಷ್ಟ ( ಅ ).


ಕಠಿಣ ಶಬ್ದಗಳ ಅರ್ಥ ೫೭೭


## ಪರಿಶಿಷ್ಟ ( ಬ ).


ವಚನಕಾರರ ಹೆಸರುಗಳು ಮತ್ತು ಅವರ ಮುದ್ರಿಕೆಗಳು ೫೯೯

# ವಚನಶಾಸ್ತ್ರಸಾರ.

## ಪರಮಾತ್ಮನ ಅವ್ಯಕ್ತ ಸ್ವರೂಪು.

(೧). ಅಂತರವಿಲ್ಲದಂದು, ಬಾಹ್ಯನಿಲ್ಲದಂದು, ಅಡಿಮುಡಿ ಒಡಲು ಮತ್ತೊಂದೆಡೆ ಏನೂ ಇಲ್ಲದಂದು, ದಶದಿಕ್ಕುಗಳು ವಿಶ್ವಪ್ರಪಂಚುಗಳು ಏನೂ ಇಲ್ಲದಂದು, ಸ್ಥಾವರಾತ್ಮಕಂಗಳಿಗೆ ಆಧಾರ ಕರ್ತೃ ಎಂಬ ನಾಮಂಗಳೇನೂ ಇಲ್ಲದಂದು, ಸರ್ವಶೂನ್ಯನಿರಾಲಂಬನಾಗಿರ್ದೆಯಲ್ಲ ಮಹಾಲಿಂಗಗುರಶಿವಸಿದ್ಧೇಶ್ವರಪ್ರಭುವೇ.

(೨). ಅಯ್ಯಾ, ನಿರವಯ ಶೂನ್ಯಲಿಂಗ ಮೂರ್ತಿಯ ನಿಲುಕಡೆ ಎಂತೆಂದೊಡೆ, ಸಾಕಾರನಲ್ಲ ನಿರಾಕಾರನಲ್ಲ ನೋಡಾ. ನಿರವಯ ಶೂನ್ಯಲಿಂಗ ಮೂರ್ತಿ ಆದಿಯಲ್ಲ, ಅನಾದಿಯಲ್ಲ, ಇಹದವನಲ್ಲ, ಪರದವನಲ್ಲ, ಸುಖದವನಲ್ಲ, ದುಃಖದವನಲ್ಲ. ನಿರವಯ ಶೂನ್ಯಲಿಂಗ ಮೂರ್ತಿ ಪುಣ್ಯಪಾಪದವನಲ್ಲ, ಕರ್ತೃ ಭೃತ್ಯನಲ್ಲ, ಕಾರಣ ಕಾರ್ಯನಲ್ಲ, ಧರ್ಮಿ ಕರ್ಮಿಯಲ್ಲ, ಪೂಜ್ಯ ಪೂಜಕನಲ್ಲ, ಇಂತು ಉಭಯವಳಿದು ಬೆಳಗುವ ನೋಡಾ ನಮ್ಮ ಗುಹೇಶ್ವರಲಿಂಗವು.

(೩). ಅಯ್ಯಾ ನಾಟಕನಲ್ಲ, ಬೂಟಕನಲ್ಲ, ಶೀಲಿಗನಲ್ಲ, ಕಪಟನಾಟಕನಲ್ಲ, ರುಂಡಮಾಲಿಗ ಪುಲಿಚರ್ಮಗಜಚರ್ಮನಲ್ಲ, ದಕ್ಷಧ್ವರನಲ್ಲ, ತ್ರಿಪುರಾರಿಯಲ್ಲ, ನಂದಿವಾಹನನಲ್ಲ, ಸರ್ಪಧರಚಂದ್ರಶೇಖರನಲ್ಲ, ಗಂಗಾಧರ ಗೌರೀವರನಲ್ಲ, ಗಿರಿಜಾವಲ್ಲಭ ಪಾರ್ವತೀ ಪ್ರಿಯನಲ್ಲ, ಯೋಗಿಜೋಗಿಯಲ್ಲ, ಶ್ರವಣ ಸನ್ಯಾಸಿಯಲ್ಲ, ಕಾಳಾಮುಖಿಯಲ್ಲ, ಪಾಶುಪತಿಯಲ್ಲ, ನೋಡಾ ನಿರವಯ ಶೂನ್ಯಲಿಂಗಮೂರ್ತಿ ಗುಹೇಶ್ವರಲಿಂಗವು.

(೪). ಅಯ್ಯಾ ಜಲಕೂರ್ಮ ಗಜಫಣಿಯ ಮೇಲೆ ಧರೆವಿಸ್ತರಿಸಿ ನಿಲ್ಲದಂದು, ಗಗನವಿಲ್ಲದಂದು, ಪವನನ ಸುಳುಹಿಲ್ಲದಂದು, ಅಗ್ನಿಗೆ ಕಳೆದೋರದಂದು, ತರುಗಿರಿ ತೃಣ ಕಾಷ್ಠಾದಿಗಳಿಲ್ಲದಂದು, ಯುಗಜುಗ ಮಿಗಿಲೆನಿಸಿದ ಹದಿನಾಲ್ಕು ಭುವನ ನೆಲೆಗೊಳ್ಳದಂದು, ನಿಜವನರಿದೆನೆಂಬ ತ್ರಿಜಗದಾಧಿಪತಿಗಳಿಲ್ಲದಂದು, ತೋರುವ ಬೀರುವ ಭಾವದ ಪರಿಯು ಭಾವದಲ್ಲಿ ಭರಿತ ಅಗಮ್ಯ ಗುಹೇಶ್ವರ ನಿರಾಳವು.

(೫). ಧರೆಯಾಕಾಶವಿಲ್ಲದಂದು, ತ್ರೈಮಂಡಲ ನೆಲೆಗೊಳ್ಳದಂದು, ಹೋಮ, ನೇಮ, ಜಪ, ತಪವಿಲ್ಲದಂದು ನಿಮ್ಮನಾರು ಬಲ್ಲರು? ಹರಿ ಬ್ರಹ್ಮರಿಗೆ ಅಗೋಚರ, ನಿರ್ಲೇಪ, ನಿರಂಜನನಾಗಿ ವೇದಂಗಳರಿಯುವು. ಶಾಸ್ತ್ರ, ಶೃತಿ ಸ್ಮೃತಿಗಳು ನಿಮ್ಮನರಿಯುವು. ಗಗನಕಮಳಕುಸುಮಪರಿಮಳದಿಂದತ್ತಲು, ಗುಹೇಶ್ವರಾ ನಿಮ್ಮ ನಿಲವನಾರು ಬಲ್ಲರು?

(೬). ಬ್ರಹ್ಮಾಬ್ರಹ್ಮರಿಲ್ಲದಂದು, ವಿಷ್ಣುಮಾಯೆ, ಜಗಮಾಯೆಯಿಲ್ಲದಂದು, ಸೃಷ್ಟಿಯ ಸೃಷ್ಟಿ ಇಲ್ಲದಂದು, ಕಾಳಿಂಗಕಳಕಂಠರಿಲ್ಲದಂದು, ಉಮೆಯ ಕಲ್ಯಾಣವಿಲ್ಲದಂದು, ದ್ವಾದಶಾದಿತ್ಯರಿಲ್ಲದಂದು, ನಂದಿಕೇಶ್ವರ ದಂಡನಾಥರಿಲ್ಲದಂದು, ವಿಷವನಮೃತ ಮಾಡದಂದು, ಲಿಂಗಸ್ಥಲ, ಜಂಗಮಸ್ಥಲ, ಪ್ರಸಾದಿಸ್ಥಲವಿಲ್ಲದಂದು, ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ, ನಿಮ್ಮ ನಿಲವನಾರು ಬಲ್ಲರು?

(೭). ಆದಿ ಅನಾದಿ ಇಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು, ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು ಗುಹೇಶ್ವರನೊಬ್ಬನೇ ಇದ್ದಿಯಲ್ಲ, ಇಲ್ಲದಂತೆ.

(೮). ಆದಿ ಅನಾದಿ ಇಲ್ಲದಂದು, ಅಜಾಂಡ ಬ್ರಹ್ಮಾಂಡವಿಲ್ಲದಂದು ತಾನೆ. ನಾದಬಿಂದು ಕಳಾತೀತನು ಜನಪರಮರಿಲ್ಲದಂದು ತಾನೆ. ನಾಮರೂಪು ಕ್ರಿಯಾತೀತನು ಸಚರಾಚರಂಗಳಿಲ್ಲ ರಚನೆಗೆ ಬಾರದಂದು ತಾನೇ. ಅಖಂಡ ಪರಿಪೂರ್ಣನು, ಅಪ್ರಮಾಣ, ಅಗಮ್ಯ, ಅಗೋಚರದತ್ತಲಾದ ಮಹಾಘನ ಚೈತನ್ಯಲಿಂಗ ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

(೯). ದ್ವೀಪಾದ್ವೀಪವಿಲ್ಲದಲಿಂದತ್ತತ್ತ, ಕಾಲಕರ್ಮವಿಲ್ಲದಲಿಂದತ್ತತ್ತ, ಮಾಯಾಮೋಹವಿಲ್ಲದಲಿಂದತ್ತತ್ತ, ಏನೂ ಏನೂ ಇಲ್ಲದಲಿಂದತ್ತತ್ತ, ಆದಿ

ಮೂವರಿಲ್ಲದಲಿಂದತ್ತತ್ತ, ಸಿಮುಲಿಗೆಯ ಚನ್ನರಾಮನೆಂಬ ಲಿಂಗವಿಲ್ಲದಲಿಂದತ್ತತ್ತ.

(೧೦). ಅಂಡಜ ಒಡೆಯದುದರಿಂದ ಮುನ್ನ, ದ್ವೀಪಾದ್ವೀಪವಿಲ್ಲದರಿಂದ ಮುನ್ನ, ಅನಲ ಪವನನಿಲ್ಲದರಿಂದ ಮುನ್ನ, ರವಿಶಶಿಗಳಿಲ್ಲದರಿಂದ ಮುನ್ನ, ಇಂತೀ ಚತುರ್ವಿಧ ಒಂದಾಗದ ಮುನ್ನ, ಗುಹೇಶ್ವರಲಿಂಗವಿಲ್ಲದರಿಂದ ಮುನ್ನ.

(೧೧). ಶೂನ್ಯಹೃದಯ ನಿಶ್ಶೂನ್ಯವಿಲ್ಲದಂದು, ಬ್ರಹ್ಮ, ವಿಷ್ಣು ಮಹೇಶ್ವರರಿಲ್ಲದಂದು, ಹದಿನಾಲ್ಕು ಭುವನ ದಿಗ್ವಳಯ ವಿಲ್ಲದಂದು, ಕೂಡಲ ಚನ್ನಸಂಗನೆಂಬ ಹೆಸರು ಮುನ್ನಿಲ್ಲದಂದು.

---

## ಸೃಷ್ಟಿಯ ರಚನೆ.

(೧). ಮಹಾಕರ್ತನು ತನ್ನ ಶಕ್ತಿಯ ವಿನೋದಕ್ಕೆ ಜಗವ ನಿರ್ಮಿಸಿದ. ಅನಂತ ಲೋಕಂಗಳನ್ನು, ಚಂದ್ರ ಸೂರ್ಯ ನಕ್ಷತ್ರ ಸಿಡಿಲು ಮಿಂಚುಗಳನ್ನು, ಕಾಲಕರ್ಮಪ್ರಳಯಂಗಳನ್ನು, ಹೆಣ್ಣು ಗಂಡು ಜಾತಿವಿಜಾತಿಗಳಾದ ನರಸುರ ತಿರ್ಯಗ್ಜಾತಿ ಸ್ಥಲಭೋಗ ಆಯುಷ್ಯ ನಿದ್ರೆ ಮೊದಲಾದ ಸಮಸ್ತ ಪ್ರಪಂಚಗಳನ್ನು, ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳನ್ನು ಹುಟ್ಟಿಸಿದ ತನ್ನ ವಿನೋದಕ್ಕೆ. ಯಂತ್ರವಾಹಕನು ಮಾಡಿದ ಕಟ್ಟಣೆಯನಾರಿಗೂ ತಿಳಿಯಬಾರದು ನೋಡಾ. ಸರ್ವಾತ್ಮರು ಮಲಪಾಶದಿಂದ ಬಂಧಿಸಿಕೊಂಬ ಪಶುಗಳಾದರು, ತಾ ಪಶುಪತಿಯಾದ ನಮ್ಮ ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರನು.

(೨). ಶಿವ ಜಗವಾಗಬಲ್ಲ, ಶಿವ ಜಗವಾಗದಿರಲೂ ಬಲ್ಲ, ಶಿವ ರೂಪಾಗಬಲ್ಲ, ಶಿವ ರೂಪಾಗದಿರಲೂ ಬಲ್ಲ, ಶಿವ ಅಜಾಂಡ ಕೋಟಿಗಳ ಮಾಡಬಲ್ಲ, ಮಾಡದಿರಲೂ ಬಲ್ಲ, ಶಿವ ಕೆಡಿಸಬಲ್ಲ, ಕೆಡಿಸದಿರಲೂ ಬಲ್ಲ, ಶಿವನು ಜಂಗಮವಾಗಿ ಪೂಜಿಸಬಲ್ಲ, ಶಿವಲಿಂಗವಾಗಿ ತಾನೇ ಪೂಜೆಯ ಕೊಳಲೂ ಬಲ್ಲ, ಶಿವ ಹೊರಗಾಗಿ ಮತ್ತನ್ಯವಿಲ್ಲವೆಂಬ ವೇದ ಉಂಟೇ? ಎಂದೊಡೆ ಉಂಟು. ಅಥರ್ವವೇದ “ಶಿವೋ ಉಮಾ ಪಿತರಾ ಪಿತೃದೇವೋ ಭವತಿ ಪಿತರಾ ತಸ್ಯ ಮಹಿ” ಎಂದುದಾಗಿ ದೇವನು ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರನು ನಮಗೆಲ್ಲ ಮಾತಾಪಿತನು.

(೩). ಮರದೊಳಗಣ ಪತ್ರಫಲಂಗಳು ಮರಕಾಲವಶದಲ್ಲಿ ತೋರುವಂತೆ, ಹರನೊಳಗಣ ಪ್ರಕೃತಿ ಸ್ವಭಾವಂಗಳು ಹರಭಾದಿಚ್ಛೆಗೆ ತೋರುವವು. ಲೀಲೆಯಾದಡೆ ಉಮಾಪತಿ, ಲೀಲೆ ತಪ್ಪಿದಡೆ ಸ್ವಯಂಭು ಗುಹೇಶ್ವರಾ.

(೪). ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚನು. ತನ್ನ ವಿನೋದಕ್ಕೆ ತಾನೇ ತಿರಿಗಿಸಿದ ಅನಂತ ದುಃಖಂಗಳಲ್ಲಿ, ಇಂತೆನ್ನ ಚನ್ನಮಲ್ಲಿಕಾರ್ಜುನನೆಂಬ ಪರಶಿವನು ಜಗದ್ವಿಲಾಸ ಸಾಕಾದಡೆ, ಮತ್ತೆ ಪರಿವನಾಮಾಯಾಪಾಶವನು.

(೫). ಹೊದ್ದು ಹೊದ್ದೆಂಬುದು ಇಲ್ಲದದೇವಾ, ನಿಮ್ಮಿಂದ ನೀವೇ ಶೂನ್ಯದಲ್ಲಿ ನಿಂದು, ಸ್ವಯಂಭುವಾದಿರಲ್ಲಾ! ಬೀಜವೃಕ್ಷದಂತೆ ಸಾಕಾರ ನಿರಾಕಾರವು ನೀವೇಯಾದಿರಲ್ಲಾ! ಮಹಾ ಕರ್ತನು ತನ್ನ ಶಕ್ತಿಯ ವಿನೋದಕ್ಕೆ ಜಗವನಿರ್ಮಿಸಿದ ಸ್ವತಂತ್ರ ಸಿದ್ಧಲಿಂಗೇಶ್ವರಾ.

(೬). ಘನಗಂಭೀರ ಮಹಾ ವಾರುಧಿಯಲ್ಲಿ ಫೇನತರಂಗ ಬುದ್ಬುದಗಳುದಯವಲ್ಲದೆ, ಬೇರಾಗಬಲ್ಲವೇ? ಆತ್ಮನೆಂಬ ಅಂಬುಧಿಯಲ್ಲಿ ಸಕಲ ಬ್ರಹ್ಮಾಂಡಕೋಟಿಗಳಾದವಲ್ಲದೆ ಬೇರಾಗಬಲ್ಲವೇ? ಇದು ಬೇರೆಂಬ ಅರಿಮರುಳುಗಳನೇನೆಂಬೆ? ವಿಶ್ವವನರಿದು ನೋಡಲು, ಸಿಮಲಿಗೆಯ ಚನ್ನರಾಮನೆಂಬ ಲಿಂಗವು ಬೇರಿಲ್ಲ.

(೭). ಬಯಲವೊಳಗಿ ಮಳೆ ಸೃಜಿಸಿ, ಆ ಬಯಲು ಆ ಮಳೆಯನೊಡಗೂಡಿ ದೃಷ್ಟವಪ್ಪ ವಾರಿಗಲ್ಲಾಗಿ ತೋರಿದಂತೆ, ನಿಮ್ಮ ನೆನೆಹೇ ನಿನಗೆ ಶಕ್ತಿಯಾಯಿತ್ತಲ್ಲಾ. ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ ನಾಮ ಸೂಚನೆಯಾಯಿತ್ತಲ್ಲಾ. ಮಹಾಲಿಂಗಕಲ್ಲೇಶ್ವರಾ, ನಿಮ್ಮ ಆದಿಗೆ ಇದೇ ಪ್ರಥಮವಾಯಿತ್ತಲ್ಲಾ.

**ಟೀಕು:**—ಆಕಾಶದ ಶಬ್ದನಾದಂಗಳಿಂದ ವಾಯುಜಲಂಗಳು ಹುಟ್ಟಿದವು. ಆ ಹುಟ್ಟಿದ ವಾಯು ಜಲದಲ್ಲಿ ಶಬ್ದನೆಂಬ ನಾದಾಕಾಶ ವಾಯುರೂಪಾಗಿ ಕೂಡಲು ವಾರಿಗಲ್ಲಾಯಿತ್ತೆಂಬುದೀಗ ಬಯಲು ವೊಳಗಿ ಮಳೆ ಸೃಜಿಸಿ, ಆ ಬಯಲು ಆ ಮಳೆಯನೊಡಗೂಡಿ ದೃಷ್ಟವಪ್ಪ ವಾರಿಗಲ್ಲಾಗಿ ತೋರಿದಂತೆ ಎಂಬ ಶಬ್ದಕ್ಕರ್ಥ. ಈ ದೃಷ್ಟದಂತೆ ನಿಃಕಲವಾಗಿಪ್ಪ ಪರಬ್ರಹ್ಮವೆಲ್ಲ ಪರಮ ಚೈತನ್ಯ

ಚಿತ್‌ಸ್ವರೂಪು, ಅಂತಪ್ಪ ಪರಬ್ರಹ್ಮವು ತನ್ನ ಸ್ವಚಿತ್ತಿನಿಂದ ತನ್ನ ನೆನೆವೃತ್ತಿಪ್ಪ ಚಿತ್‌ಸಾಮರ್ಥ್ಯವೇ ತನಗೆ ಚಿತ್‌ಶಕ್ತಿಯಾಯಿತ್ತೆಂಬುದೀಗ ನಿನ್ನ ನೆನಹೇ ನಿನಗೆ ಶಕ್ತಿಯಾಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವು ತನ್ನ ಅಭಿನ್ನ ಶಕ್ತಿಯಪ್ಪ ಚಿತ್ತುವಿನ ನೆನಹಿನ ರತಿಸುಖದಿಂದ ಅತಿಶಯುವಾಗಿ ಅಖಂಡ ತೇಜೋಮೂರ್ತಿಯಾದ ಮಹಾಲಿಂಗವಾಯಿತ್ತೆಂಬುದೀಗ ಆ ನಿಮ್ಮಿಬ್ಬರ ಸಮರತಿಯೇ ನಿಮಗೆ ಅಖಂಡವೆಂಬ ನಾಮಸೂಚನೆಯಾಯಿತ್ತಲ್ಲಾ ಎಂಬ ಶಬ್ದಕ್ಕರ್ಥ. ಅಂತು ತನ್ನ ಚಿದ್ವಿಲಾಸಾನಂದ ಲೀಲೆಯಿಂದಲಾದ ಮಹಾಲಿಂಗಮೂರ್ತಿಯೇ ಶಿವನ ಸಾಕಾರಮೂರ್ತಿಗಳಿಗೆ ಪ್ರಥಮವೆಂಬುದೀಗ ಮಹಾಲಿಂಗಕಲ್ಲೇಶ್ವರಾ ನಿಮ್ಮ ಆದಿಗೆ ಪ್ರಥಮವಾಯಿತ್ತಲ್ಲಾ ಎಂಬ ಶಬ್ದಕ್ಕರ್ಥ.

(೮). ಶೃತಿ ತತಿಯು ಮಸ್ತಕದ ಅತಿಶಯುದ ಬೆಳಗಿನೊಳು ಸಕಲ ಲೋಕಂಗಳು ಬೆಟ್ಟವಾಗಿ ಒಸರುವ ಸಾನಂದ ಬೆಳಗು ಬಿಂದುಗಳಾಗಿ ಬೆಳಗುತಿದ್ದಿತು ಬ್ರಹ್ಮ ಯೋಗಿನಾಥಾ.

**ಟೀಕು:**—ವೇದಂಗಳ ಶಿರಸ್ಸುಗಳಲ್ಲಿ ಹೇಳುವ ಶೃತಿಗಳ ಹೊಗಳತೆಗೆ ಉಪಮಿಸಬಾರದ ಅಖಂಡ ಬೆಳಗೆ ಪರಬ್ರಹ್ಮವೆಂಬುದೀಗ ಶೃತಿ ತತಿಯು ಮಸ್ತಕದಲ್ಲಿ ಅತಿಶಯುದ ಬೆಳಗೆಂಬ ಶಬ್ದಕ್ಕರ್ಥ. ಅಂತಪ್ಪ ಮಹಾ ಪ್ರಕಾಶವನುಳ್ಳ ಪರಬ್ರಹ್ಮವು ತನ್ನ ಚಿದ್ವಿಲಾಸಾನಂದ ಲೀಲೆಯಿಂದ ಹೆಚ್ಚಿ ಮಿಗೆವರಿದ ಚಿದಾನಂದದ ಬೆಳಗೆ ಷಟ್‌ಸ್ಥಲ ಶಕ್ತಿಸಮೇತವಾದ ಲಿಂಗಮೂರ್ತಿ ಎಂಬುದೀಗ ಒಸರುವ ಸಾನಂದ ಬೆಳಗು ಬಿಂದುಗಳಾಗಿ ಎಂಬ ಶಬ್ದಕ್ಕರ್ಥ. ಅಂತಾದ ಲಿಂಗಕಳಾ ಶಕ್ತಿಗಳಿಂದ ಅನಂತ ಬ್ರಹ್ಮಾಂಡಂಗಳು ಸಚರಾಚರಂಗಳು ಅದವೆಂಬುದೀಗ ಸಕಲ ಲೋಕಂಗಳು ಬೆಟ್ಟವಾಗಿ ಎಂಬ ಶಬ್ದಕ್ಕರ್ಥ. ಅಂತು ಸಕಲನಾಗಿ, ಸಕಲ ನಿಃಕಲನಾಗಿ ಅನಂತ ಬ್ರಹ್ಮಾಂಡ ಪಿಂಡಾಂಡಂಗಳಾಗಿ ಬೆಳಗುತ್ತಿರ್ದ ಪರಬ್ರಹ್ಮ ಒಂದೇ ಎಂಬುದೀಗ ಬೆಳಗುತ್ತಿದ್ದಿತ್ತು ಬ್ರಹ್ಮಯೋಗಿನಾಥಾ ಎಂಬ ಶಬ್ದಕ್ಕರ್ಥ.

## ಪರಮಾತ್ಮನು ಅಜ್ಞೇಯನು.

(೧). ಏನೆಂದೆನಲಿಲ್ಲ, ನುಡಿದು ಹೇಳಲಿಕ್ಕಿಲ್ಲ, ನಿಜದಲ್ಲಿರ್ದ ಬೆರಗು ಕುರುಹ ಅರಿವುದೇ? ಅದು ತನ್ನಲ್ಲಿ ತಾನಿಲ್ಲ. ಏನೆಂದೆನಲಿಲ್ಲದ ಬಯಲು ಅಲ್ಲಿ ಏನನೂ ಅರಸಲಿಲ್ಲ. ಇದಿರಿಲ್ಲ, ತಾನಿಲ್ಲ, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

**ಟೀಕು:**—ನಾನೀನೆಂಬ ಲಿಂಗಾಂಗವೆರಡಾಗಿ ತೋರದೆ ನಿಃಕಲವಾಗಿರ್ದ ನಿಜವಸ್ತುವ ಉಪಮಿಸಿ ಹೇಳಬಾರದೆಂಬುದೀಗ ವಚನದ ತಾತ್ಪರ್ಯಾರ್ಥ.

(೨). ಅಸುರರ ಮಾಲೆಗಳಿಲ್ಲ, ತ್ರಿಶೂಲಡಮರುಗವಿಲ್ಲ, ಬ್ರಹ್ಮಕಪಾಲವಿಲ್ಲ, ಭಸ್ಮಭೂಷಣನಲ್ಲ, ಋಷಿಯ ಮಗಳೊಡನಿರ್ದಾತನಲ್ಲ, ಎಸಗುವ ಸಂಸಾರದ ಕುರುಹಿಲ್ಲದಾತಂಗೆ ಹೆಸರಾವುದೆಂದ ನಂಬಿಗ ಚೌಡಯ್ಯ?

(೩). ತರುಗಳ ಮುರಿದು ಗಗನಕ್ಕೀಡಾಡುವ ಅನಿಲ ರೂಪೋ ನಿರೂಪೋ, ಬಲ್ಲರೆ, ನೀವು ಹೇಳಿಭೋ. ಗಜಸಿಂಹಶಾರ್ದೂಲವೆಂಬ ಅಧಿಕ ಮೃಗಂಗಳ ಮುರಿದೊತ್ತಿ ಕೆಡಹುತ್ತಿಪ್ಪ ವ್ಯಾಧರೂಪೋ ನಿರೂಪೋ, ಬಲ್ಲರೆ ನೀವು ಹೇಳಿ ಭೋ. ಕಾಣಲೀಯದೆ ಕೇಳಲೀಯದೆ ಅವಿಧಾನಂಗಳ ಕೆಡಿಸುತ್ತಿಪ್ಪ ನಿದ್ರೆರೂಪೋ ನಿರೂಪೋ, ಬಲ್ಲರೆ ನೀವು ಹೇಳಿ ಭೋ. ಇಂತಾಳಿವಾಳಿನ ಕೀಳಾಳಿನ ಅಂತಸ್ಥವನಾರಿಗೂ ಅರಿಯಬಾರದು. ಅನಾದಿ ಮೂಲದೊಡೆಯನ ಬಲ್ಲೆನೆಂಬವರಿ ಇನ್ನೆಂತೋ? ರೂಪೆಂದಡೆ ಶಬ್ದ, ನಿರೂಪೆಂದಡೆ ಶೂನ್ಯ, ಈ ಎರಡರ ಆದಿಯಿಂದತ್ತತ್ತ ಕಾಣಾ ನಮ್ಮ ತಂದೆ ಕಪಿಲ ಸಿದ್ಧಮಲ್ಲಿಕಾರ್ಜುನ ಲಿಂಗವು ಗುರುಕರುಣವುಳ್ಳವರಿಗಲ್ಲದೆ ಅರಿಯಬಾರದು.

(೪). ನಿಮ್ಮ ತೇಜವ ನೋಡಲೆಂದು ಹೆರಸಾರಿ ನೋಡುತ್ತಿರಲು ಶತಕೋಟಿ ಸೂರ್ಯರು ಮೂಡಿದಂತೆ ಇದ್ದುದಯ್ಯ. ಮಿಂಚಿನ ಬಳ್ಳಿಯ ಸಂಚವ ಕಂಡಡೆ ಎನಗಿದು ಸೋಜಿಗವಾಯಿತ್ತು. ಗುಹೇಶ್ವರಾ, ನೀನು ಜ್ಯೋತಿರ್ಲಿಂಗವಾದಡೆ, ಉಪಮಿಸಿ ನೋಡಬಲ್ಲವರಿಲ್ಲವಯ್ಯ.

(೫). ಕಾಲಕಲ್ಪಿತಂಗಳಿಲ್ಲದೆ ನಿನ್ನಿಂದ ನೀನೇಯಾಗಿರ್ದೆಯಲ್ಲ. ನಿಮ್ಮ ಪರಮಾನಂದದ ಪ್ರಭಾವದ ಪರಿಣಾಮದಲ್ಲಿ ಅನಂತಕಾಲವಿದ್ದಿರಲ್ಲಾ. ನಿಮ್ಮ ಆದ್ಯಂತವ ನೀವೇ ಅರಿವುತಿದ್ದಿರಲ್ಲಾ. ನಿಮ್ಮ ನಿಜಭಾವವ ನೀವೇ ಬಲ್ಲಿರಿ ಕೂಡಲ ಚನ್ನಸಂಗಮದೇವಾ.

(೬). ಸನಕಸನಂದ ಮುನಿಜನಾದಿಗಳು ಅರಿಯರಯ್ಯ ನಿಮ್ಮ ಅಂತು ವನು. ಒಂದರಲ್ಲಿ ಹಲವಾಗಿ, ಹಲವರಲ್ಲಿ ಒಂದಾಗಿ, ಸಾಕಾರನಿರಾಕಾರವಾಗಿ ಪ್ಪಲ್ಲಿ ಏಕವಾಗಿಪ್ಪ ಕಪಿಲ ಸಿದ್ಧಮಲ್ಲ ನಾಥ ನೀವೇಯಾಗಿ.

(೭). ಅರಿದೆವೆಂದಡೆ ಅರಿಯಬಾರದು ನೋಡಾ. ಘನಕ್ಕೆ ಘನ ತಾನೇ ನೋಡಾ. ಚನ್ನಮಲ್ಲಿಕಾರ್ಜುನನ ನಿರ್ಣಯವಿಲ್ಲದೆ ಪೋದೆನು.

(೮). ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರವೆಂಬ ಸಂದಣಿ ತಲೆದೋರದ ಮುನ್ನ, ಅಲ್ಲಿಂದತ್ತತ್ತ ಬಯಲೇ ಸ್ವರೂಪವಾಯಿತ್ತು. ಆ ಸ್ವರೂಪಿನಘ ನಡೆಯನುಪಮಿಸಬಾರದು. ನೋಡಬಾರದ ಬೆಳಗು, ಕೂಡ ಬಾರದ ಮೂರ್ತಿ ಅಖಂಡ ಅಪ್ರತಿಮ ಗುಹೇಶ್ವರಲಿಂಗದ ಬೆಳಗಿನ ಮೂಲವ ಲಿಂಗ ಸಂಗಿಗಳಲ್ಲದ ಮಿಕ್ಕಿನ ಅಂಗವಿಕಾರಿಗಳೆತ್ತ ಬಲ್ಲರು?

(೯). ವೇದಾತೀತ, ಷಡ್ವರ್ಣರಹಿತ, ಅಷ್ಟತ್ರಿಂಶತ್ಕಳಾತೀತ, ವ್ಯೋಮಾತೀತ, ಅಗಮ್ಯ, ಅಗೋಚರ ಕೂಡಲಸಂಗಮದೇವಾ.

(೧೦). ತೋರುವನಯ್ಯ ಶಿವನು, ಅಡಗುವ ಸಗಲುವನಯ್ಯ ಶಿವನು. ಕಂಗಳ ಮುಂದೆ ಕಾಯಗೊಂಡು, ಮನದ ಮುಂದೆ ಕಸವಾಗಿ ಕಾಡುವನಯ್ಯ ಶಿವನು. ಒಲ್ಲದಡೆ ಅಲ್ಲೇ ಇದ್ದು, ಹಲವೆಡೆಯಲ್ಲಿ ತೋರುವನು. ಹಲವೆಡೆಯ ಲ್ಲೈದಿ ಒಂದೇ ರೂಪಾಗಿರ್ಪನು. ಕೂಡಲಸಂಗಮದೇವನು ಚಿನ್ಮಯನಾಗಿ ಎನಗೆ ಆಪಾಧ್ಯನಾದನು.

---

## ಪರಮಾತ್ಮನು ವಿಶ್ವ ವ್ಯಾಪಿಯು.

(೧). ಸಕಲ ನಿಷ್ಕಲವ ಕೂಡಿಕೊಂಡಿಪ್ಪೆಯಾಗಿ, ಸಕಲ ನೀನೇನಿ ಷ್ಕಳ ನೀನೇಕಂಡಯ್ಯ. ವಿಶ್ವತೋ ಚಕ್ಷು ನೀನೇ ದೇವಾ, ವಿಶ್ವತೋ ಮುಖ ನೀನೇದೇವಾ ಕೂಡಲಸಂಗಮ ದೇವಾ.

(೨). ಶೃತಿ ತತಿ ಶಿರದ ಮೇಲೆ ಅತ್ಯತಿಷ್ಠದ್ದಶಾಂಗುಲನನೇನೆಂಬೆ ನಯ್ಯ. ಘನಕ್ಕೆ ಘನಮಹಿಮನ, ಮನಕ್ಕಗೋಚರನ, ಅಣೋರಣೀಯಾನ್, ಮಹತೋಮಹೀಯಾನ್ ಮಹಾದಾನಿ ಕೂಡಲಸಂಗಮದೇವಾ.

(೩). ವಿಶ್ವದೊಳಗೆಲ್ಲ ನೀನೇದೇವಾ. ವಿಶ್ವಭರಿತನು ನೀನೇದೇವಾ. ವಿಶ್ವರೂಪನು ನೀನೇದೇವಾ. ವಿಶ್ವಪತಿ ನೀನೇದೇವಾ. ವಿಶ್ವಾತೀತನು ನೀನೇ ದೇವಾ ಅಖಂಡೇಶ್ವರಾ.

(೪). ಎತ್ತೆತ್ತ ನೋಡಿದಡತ್ತತ್ತ ನೀನೇದೇವಾ, ಸಕಲ ವಿಸ್ತಾರದ ರೂಹು ನೀನೇದೇವಾ, ವಿಶ್ವತೋ ಚಕ್ಷು ನೀನೇದೇವಾ, ವಿಶ್ವತೋ ಮುಖ ನೀನೇದೇವಾ, ವಿಶ್ವತೋ ಬಾಹು ನೀನೇದೇವಾ, ವಿಶ್ವತೋ ಪಾದ ನೀನೇದೇವಾ, ಕೂಡಲಸಂಗಮ ದೇವಾ.

(೫). ಕುರುಹುಂಟೇ ಮರಳಿ ಲಿಂಗಕ್ಕೆ? ತೆರಹುಂಟೇ ಮರಳಿ ಲಿಂಗ ಕ್ಕೆ? ಎಲ್ಲೆಡೆಯೊಳು ಪರಿಪೂರ್ಣವಾದ ಪರಾತ್ಪರ ಲಿಂಗದ ನಿಲವನರಿಯದೆ, ಹುಸಿಯ ಕಲ್ಪಿಸಿ, ಹುಸಿಯನೇ ಪೂಜಿಸಿ, ಹುಸಿಯ ಫಲಪದವನುಂಡು, ಹುಸಿ ಯಾಗಿ ಹೋದವರ ಕಂಡು ನಗುತಿರ್ದಯ್ಯ ನಮ್ಮ ಅಖಂಡೇಶ್ವರಾ.

(೬). ಸಹಸ್ರ ಶೀರ್ಷನಾದಿಪುರುಷನು, ತ್ರಿಪಾದೂರ್ಧ್ವ ಪುರುಷ ನೊಬ್ಬ ಪುರುಷನು, ಉದನ್ಮುಖನೊಬ್ಬ ಪುರುಷನು, ಉದಯ ಪುರುಷನೊಬ್ಬ ಪುರುಷನು, ವಿರಾಟ್ ಪುರುಷನೊಬ್ಬ ಪುರುಷನು, ಆದಿ ಪುರುಷನೊಬ್ಬ ಪುರು ಷನು, ತದ್ವಿಯತ್ಪುರುಷ, ಪುರುಷರಿಲ್ಲದ ಪ್ರಭೆಯ ನೋಡಿರೇ. ವೇದ ನಾದಾ ತೀತ, ತುರೀಯ ಪರಮಾನಂದ ನಿರವಯ, ಷಟ್ ತ್ರಿಂಶತ್ ಪ್ರಭಾಪಟಲದ ಬೆಳ ಗಿದೆ ನೋಡಿರೋ. ಬೆಳಗಿನೊಳಗಿನ ಮಹಾಬೆಳಗಿನ ಬೆಳಗು ನಮ್ಮ ಕೂಡಲ ಸಂಗಮ ದೇವಯ್ಯ.

(೭). ಪಾತಾಳದಿಂಕೆಳಗೆ ಪಾದ, ಸುವರ್ಲೋಕದಿಂ ಮೇಲೆ ಉತ್ತು ಮಾಂಗ, ಬ್ರಹ್ಮಾಂಡವೇ ಮಕುಟ, ಗಗನವೇ ಮುಖ, ಚಂದ್ರಾರ್ಕಾಗ್ನಿಗಳೇ ನೇತ್ರ, ದಶದಿಕ್ಕುಗಳು ಬಾಹುಗಳು, ಮಹದಾಕಾಶವೇ ಶರೀರ, ತರುಗಳೇ ತನೂರುಹ, ಶೂನ್ಯವೇ ಕರಸ್ಥಲದ ಲಿಂಗ, ನಕ್ಷತ್ರಗಳೇ ಪುಷ್ಪ, ನಿತ್ಯವೇ ಪೂಜೆ, ಮೇಘವೇ ಜಡೆ, ಬೆಳದಿಂಗಳೇ ವಿಭೂತಿ, ಪರ್ವತಗಳೇ ರುದ್ರಾಕ್ಷಿ, ಪಂಚ ಬ್ರಹ್ಮವೇ ಪಂಚಾಕ್ಷರ, ತತ್ವಂಗಳೇ ಜಪಮಾಲೆ, ಮೆರುವೇ ದಂಡ, ಜಗವೇ ಕಂಥಾ, ಅನಂತನೇ ಕೌಪೀನ, ತ್ರಿಗುಣ ಒಂದಾದುದೇ ಕರ್ಪೂರ, ಚತುರ್ಯು ಗಂಗಳೇ ಗಮನ, ಮಿಂಚೇ ಅಂಗರುಚಿ, ಸಿಡಿಲವೇ ಧ್ವನಿ, ವೇದಾಗಮವೇ ವಾಕ್ಯ

ಜ್ಞಾನಮುದ್ರೆಯೇ ಉಪದೇಶ, ಪೃಥ್ವಿಯೇ ಸಿಂಹಾಸನ ದಿವಾರಾತ್ರಿಯೇ ಅರಮನೆ, ಶಿವಜ್ಞಾನವೇ ಐಶ್ವರ್ಯ, ನಿರಾಳವೇ ತೃಪ್ತಿ ಇಂಥ ಚೈತನ್ಯ ಜಂಗಮಕ್ಕೆ ನಾನು ನಮೋ ನಮೋ ಎನುತಿರ್ದೆನಯ್ಯ ಸೌರಾಷ್ಟ್ರಸೋಮೇಶ್ವರಾ.

(೮). ಗಿರಿಗಳ ಗುಹೆಗಳ ಕಂದರದಲ್ಲಿ ನೆಲಹೊಲದಲ್ಲಿ ಇಪ್ಪೆ, ದೇವಾ. ಎಲ್ಲಿ ನೋಡಿದಡಲ್ಲಿ ಇಪ್ಪೆದೇವಾ. ಮನಕ್ಕಗಮ್ಯ ಅಗೋಚರವಾಗಿ, ಅಲ್ಲಲ್ಲಿ ಎಲ್ಲಿಯೂ ನೀನೇ ಇಪ್ಪೆಯಯ್ಯಾ, ಗುಹೇಶ್ವರಾ, ನಿಮ್ಮನಗಲಕ್ಕೆ ಹರಿವರಿದು ಕಂಡೆ ನಾನು.

(೯). ವನವೆಲ್ಲ ನೀವೇ, ವನದೊಳಗಣ ದೇವತರುವೆಲ್ಲ ನೀವೇ. ತರುವಿನೊಳಗಾಡುವ ಮೃಗವೆಲ್ಲ ನೀವೇ, ಚನ್ನಮಲ್ಲಿಕಾರ್ಜುನ ಸರ್ವಭರಿತನಾಗಿ, ಎನಗೆ ಮುಖದೋರ.

(೧೦). ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಬೀಸುವ ವಾಯು ನಿಮ್ಮದಾನ, ನಿಮ್ಮದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ರಾಮನಾಥಾ ?

ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ, ಕಾಯ ಜೀವವುಳ್ಳಲ್ಲಿಯೇ ಪೂಜಿಸದ ಅನ್ಯಾಯಿಗಳನೇನೆಂಬೆ ಹೇಳಾ ರಾಮನಾಥಾ ?

ಎತ್ತು ನಿಮ್ಮ ದಾನ, ಬಿತ್ತು ನಿಮ್ಮದಾನ, ಸುತ್ತಿ ಹರಿವ ಸಾಗರವೆಲ್ಲ ನಿಮ್ಮ ದಾನ, ನಿಮ್ಮ ದಾನವನುಂಡು ಅನ್ಯರ ಹೊಗಳುವ ಕುನ್ನಿಗಳನೇನೆಂಬೆ ಹೇಳಾ ರಾಮನಾಥಾ ?

ಇಂತೆಂದ ಭೂಮಿಯ, ಇಂತೆಂದ ಗಗನವ, ಇಂತೆಂದ ಸಪ್ತಸಾಗರವ, ಇಂತೀ ಲೋಕದೊಳಗೆ ತಿಂಥಿಣಿಯಾಗಿಪ್ಪ ಅಂಚಿತ್ಯನನಾರು ಬಲ್ಲರೈ ರಾಮನಾಥಾ ?

(೧೧). ನೆಲದೀಪದೊಡೆಯನು, ಜಲತಂಪಿನೊಡೆಯನು, ಹಿರಿಯ ಪೆಂಪಿನೊಡೆಯನು, ಅಗ್ನಿಉಷ್ಣದೊಡೆಯನು, ಚಂದ್ರಕಾಂತದೊಡೆಯನು, ಸೂರ್ಯಕಾಂತದೊಡೆಯನು, ಸಕಲದೈವಂಗಳಿಗೆ ಆಯುಷ್ಯಭಾಷೆಯ ಕೊಟ್ಟ ಭೋಗದೊಡೆಯನು ಜಗತ್ಪ್ರಭುಸೊಡ್ಡಳಾ.

(೧೨). ಎಲ್ಲೆಲ್ಲಿ ನೋಡಿದಡಲ್ಲಲ್ಲಿ ನೀನೇ ದೇವಾ. ಪಿಂಡಾಂಡಂಗಳೊಳಗೆಲ್ಲ ನೀನೇ ದೇವಾ. ಮಹದಾಕಾಶರೂಪ, ನಿರುಪಾಧಿಕ ಪರಂಜ್ಯೋತಿ ನೀನೇ ದೇವಾ. ಉಪಮಾತೀತ ವಾಙ್ಮನಕ್ಕಗೋಚರ ನೀನೇ ದೇವಾ. ಸ್ವಾನುಭೂತಿ ಸ್ವರೂಪ ಶರಣ ಜನಮನೋವಲ್ಲಭ ನೀನೇ ದೇವಾ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೧೩). ಅಣುವಿಂಗೆ ಅಣು, ಮಹತ್ತಿಂಗೆಮಹತ್ತಾಗಿ, ಎಣಿಸಬಾರದ ಬಹುಳಬ್ರಹ್ಮಕ್ಕೆ ಎಣೆಯಾವುದು ಹೇಳಾ? ಅಗಣಿತನಕ್ಷಯ, ಸರ್ವಜೀವಮನಃ ಪ್ರೇರಕ, ಸರ್ವಜ್ಞ, ಏಕೋದೇವ ಸಂವಿತ್ ಪ್ರಕಾಶ ಪರಮೇಶ್ವರನು ಮನವೆಂಬ ದರ್ಪಣದೊಳಗೆ ಬಿಂದ್ವಾಕಾಶ ರೂಪವಾಗಿ ಬೆಳಗಿ ತೋರುವ ಶಿವನ ಅಂದವ ತಿಳಿದು ನೋಡಿ ಕೂಡ ಬಲ್ಲಾತನೇ ಪರಶಿವಯೋಗಿ, ಆತ ಜನನಮರಣ ವಿರಹಿತ, ಆತನೇ ಸರ್ವಜ್ಞನು ಆತನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೇ.

---

## ಪರಮಾತ್ಮನು ಜಗತ್ತಿಗೆ ಆಧಾರಭೂತನಾಗಿದ್ದು, ಅದರ ಉತ್ಪತ್ತಿ, ಸ್ಥಿತಿ, ಲಯಕ್ಕೆ ಕಾರಣನು.

(೧). ತನ್ನಲ್ಲಿ ಅನಂತಕೋಟಿ ಬ್ರಹ್ಮರುತ್ಪತ್ತಿ ಸ್ಥಿತಿ, ಲಯ, ನೋಡಾ. ತನ್ನಲ್ಲಿ ಅನಂತಕೋಟಿ ವಿಷ್ಣ್ವಾದಿಗಳುತ್ಪತ್ತಿ, ಸ್ಥಿತಿ, ಲಯ ನೋಡಾ. ತನ್ನಲ್ಲಿ ಅನಂತಕೋಟಿ ದೇವತೆಗಳುತ್ಪತ್ತಿ, ಸ್ಥಿತಿ, ಲಯ, ನೋಡಾ. ತಾನೇ ಅಖಂಡಿತ ಅಪ್ರಮೇಯ, ಅಗಣಿತ, ಅಗಮ್ಯ, ಅಗೋಚರ ನೋಡಾ, ಅಪ್ರಮಾಣಕೂಡಲ ಸಂಗಮದೇವಾ.

(೨). ಅಯ್ಯಾ ನೀನು ನಿರಾಳ ನಿರ್ಮಾಯನಾಗಿಪ್ಪೆಯಾಗಿ ಆಕಾಶದ ಪ್ರಕಾಶವಿಲ್ಲದಂದು, ಸಾಕ್ಷಿ ಸಭೆಗಳಿಲ್ಲದಂದು, ಸಚರಾಚರವೆಲ್ಲ ರಚನೆಗೆ ಬಾರದಂದು, ಆಧಾರದೊಳಗಣ ವಿಭೂತಿಯ ತೆಗೆದು, ಭೂಮಿಯ ನೆಲೆಗೊಳಿಸಲು, ಪಂಚಾಶತ್ಕೋಟಿ ವಿಸ್ತೀರ್ಣ ಭೂಮಂಡಲಕ್ಕೆ ಸುತ್ತಿ ಹರಿದವು ಸಪ್ತಸಮುದ್ರಂಗಳು. ಎಂಬತ್ತಾರು ಕೋಟಿ, ತೊಂಬತ್ತೇಳು ಲಕ್ಷ, ಭುವನಮಂಡಲಕ್ಕೆ

ಉದಯ. ಬ್ರಹ್ಮಾಂಡ ಅರುವತ್ತಾರು ಕೋಟಿ. ತಾರಾಮಂಡಲವೆಂದಡೆ, ಬೆಳಗಿ ತೋರಿದ ಹನ್ನೆರಡು ಜ್ಯೋತಿಯ. ನಿಲಿಸಿ ತೋರಿದ ಹದಿನಾಲ್ಕು ಭುವನವ. ಈ ಜಗದ ಜಂಗುಳಿಯ ಕಾವಗೋವಳ ತಾನಾಗಿ, ಎಂಬತ್ತು ನಾಲ್ಕು ಲಕ್ಷ ಜೀವ ರಾಶಿಗಳಿಗೆ ರಾಶಿವಾಳ ತಾನಾಗಿ, ಸಕಲದ ಅಳಿವಿನ, ಉಳಿವಿನ, ನಿಂದ, ನಿಜದ ನಿಲವ ನೋಡಿ ಕಂಡೆನು, ಗುಹೇಶ್ವರಾ ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

(೩). ರುದ್ರಮುಖದಲ್ಲಿ ವಿಷ್ಣು ಭುಜದಲ್ಲಿ ಜಂಘೆಯಲ್ಲಿ ಅಜನ ಜನನವು. ಇಂದ್ರಪಾದದಲ್ಲಿ ಚಂದ್ರ ಮನದಲ್ಲಿ, ಚಕ್ಷುವಿನಲ್ಲಿ ಸೂರ್ಯನ ಜನನವು. ನೊಸಲಲ್ಲಿ ಅಗ್ನಿಯು, ಪ್ರಾಣದಲ್ಲಿ ವಾಯು, ನಾಭಿಯಲ್ಲಿ ಅಂತರಿಕ್ಷ ಜನನವು. ಶಿರದಲುದಯ ಮೂವತ್ತು ಮೂರು ಕೋಟಿ ದೇವರ್ಕಳು. ಪಾದತಳದಲ್ಲಿ ಭೂಮಿಯ ಜನನವು. ಶ್ರೋತ್ರದಲ್ಲಿ ದಶದಿಕ್ಕು, ಜಗವ ನಿಕ್ಷೇಪಿಸಿದ ಕುಕ್ಷಿಯಲ್ಲಿ. ಅಕ್ಷಯನಗಣಿತನು, ಸಾಸಿರ ತಲೆ, ಸಾಸಿರ ಕಣ್ಣು, ಸಾಸಿರ ಕೈ, ಸಾಸಿರಪಾದ ಸಾಸಿರ ಸನ್ನಿಹಿತ ನಮ್ಮ ಕೂಡಲಸಂಗಮ ದೇವಾ.

(೪). ನಿಮ್ಮ ನಿಜದಂತ್ಯವನಾರು ಬಲ್ಲರಯ್ಯಾ? ಚತುರ್ದಶ ಭುವನಂಗಳೆಲ್ಲ ನಿಮ್ಮಾಧೀನವಯ್ಯ. ನಿಮಗೆಣೆಯಪ್ಪ ದೇವರುಂಟೇ ಕಪಿಲ ಸಿದ್ಧಮಲ್ಲಿಕಾರ್ಜುನಾ ?

(೫). ಸರ್ಪನೂ, ಕೂರ್ಮನೂ, ದಿಕ್ಕರಿಗಳೆಂಟೂ, ಭೂಮಿಯ ಹೊತ್ತಿರ್ದಹರೆಂದು, ಅಹರ್ನಿಶ ಹೊತ್ತಿರ್ಪವರಿಗೆ ಅತ್ತಲಾಧಾರ, ಇತ್ತಲಾಧಾರ. ಉತ್ತರ ಕೊಡುವವರಿಗೆ ಇಕ್ಕುವೆ ಮುಂಡಿಗೆಯ. ಎತ್ತುವರುಳ್ಳೊಡೆ, ತೋರಿರೈ, ರಾಮನಾಥಾ?

(೬). ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ. ಅಂಬರಕ್ಕೆ ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಎಲೆ ಮೃಡನೇ, ನೀನಲ್ಲದೆ ಉಳಿದ ದೈವಂಗಳಿಗಹುದೇ ರಾಮನಾಥಾ.

(೭). ಕಲಿವೀರ ಕಡಿವಲ್ಲಿ, ಬಲುವಿಷವು ಸುಡುವಲ್ಲಿ ನೆಲೆಗೆಟ್ಟು ಮೊರೆಯೋ ಎಂಬಲ್ಲಿ, ನಿಮ್ಮ ತಲೆಗಾದು ರಕ್ಷಿಸಿದ ಸುಲಭನ ಸರಿಯಿರೇ, ಹೊಲೆಯರಿರಾ, ಸಲೆನಂಬಿ ಬದುಕಿರೋ ರಾಮನಾಥನಾ.

(೮). ಸ್ವರ್ಗಲೋಕತಾನಿರ್ದಲ್ಲಿ, ಜ್ಯೋತಿರ್ಮಯ ಲೋಕತಾನಿರ್ದಲ್ಲಿ, ಸಚರಾಚರಂಗಳೆಲ್ಲ ತಾನಿರ್ದಲ್ಲಿ, ತನ್ನಿಂದಧಿಕವಪ್ಪ ದೈವ ಒಂದಿಲ್ಲವಾಗಿ, ಇವೆಲ್ಲ ತನ್ನಾಧೀನವಲ್ಲದೆ, ಅವರಾಧೀನ ತಾನಲ್ಲ ನೋಡಾ, ಅಪ್ರಮಾಣಕೂಡಲಸಂಗಮ ದೇವಾ.

(೯). ಬ್ರಹ್ಮ ವಿಷ್ಣ್ವಾದಿಗಳು ತಾನಿರ್ದಲ್ಲಿ, ರುದ್ರ ಈಶ್ವರರು ತಾನಿರ್ದಲ್ಲಿ, ಪಂಚಮುಖ ದಶಭುಜವನುಳ್ಳ ಸದಾಶಿವರು ತಾನಿರ್ದಲ್ಲಿ, ನಾಲ್ವತ್ತೆಂಟು ಸಾವಿರ ಮುನಿಗಳು ತಾನಿರ್ದಲ್ಲಿ, ಮೂವತ್ತು ಮೂರು ಕೋಟಿ ದೇವತೆಗಳು ತಾನಿರ್ದಲ್ಲಿ, ತಾನೇ ಅಖಂಡ ಪರಿಪೂರ್ಣನಾಗಿ, ಮಹಾಘನವಲ್ಲದೆ, ತನ್ನಿಂದಧಿಕವಪ್ಪ ಘನವಿಲ್ಲ ನೋಡಾ, ಅಪ್ರಮಾಣಕೂಡಲಸಂಗಮದೇವಾ.

(೧೦). ಸಪ್ತಕೋಟಿ ಮಹಾಮಂತ್ರಂಗಳು, ತಾನಿರ್ದಲ್ಲಿ. ತೊಂಬತ್ತು ನಾಲ್ಕು ವ್ಯೋಮ ವ್ಯಾಪಿಸಿದ ಪದಂಗಳು ತಾನಿರ್ದಲ್ಲಿ. ಅಕಾರಾದಿ ಕ್ಷಕಾರಾಂತ್ಯವಾದ ಐವತ್ತೆರಡಕ್ಷರಗಳು ತಾನಿರ್ದಲ್ಲಿ. ಮೂವತ್ತಾರು ತತ್ವಂಗಳು ತಾನಿರ್ದಲ್ಲಿ. ಷಟ್ಕಳೆ, ದ್ವಾದಶಕಳೆ, ಷೋಡಶಕಲೆಗಳು ತಾನಿರ್ದಲ್ಲಿ. ಅರವತ್ತು ನಾಲ್ಕು ಕಳೆ ಜ್ಞಾನಂಗಳು ತಾನಿರ್ದಲ್ಲಿ. ಇವೆಲ್ಲವು ತನ್ನಲ್ಲಿ ಉತ್ಪತ್ತಿ ಸ್ಥಿತಿಲಯವಾದ ಕಾರಣ, ತನ್ನಿಂದಧಿಕವಪ್ಪ ಘನ ಒಂದಿಲ್ಲವಾಗಿ, ತಾನೇ ಪರಬ್ರಹ್ಮ ನೋಡಾ, ಅಪ್ರಮಾಣಕೂಡಲಸಂಗಮದೇವಾ.

(೧೧). ಎತ್ತನೇರಿದ ಕರ್ತನೊಬ್ಬನೇ ಜಗಕ್ಕೆಲ್ಲ. ಎತ್ತು ಬೆಳೆದ, ಧಾನ್ಯವನುಂಬ ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ರಾಮನಾಥಾ.

(೧೨). ಜಗವೆಲ್ಲ ಗೋವಿನ ಹಂಗ, ನರಸುರಾದಿಗಳೆಲ್ಲರು ಗೋವಿನ ಹಂಗು, ಸಕಲ ಜೀವಾಧಾರ, ಗೋಮಯ, ಗೋಕುಲಕ್ಕೊಡೆಯ ಗೋಪ್ರಣವ ಸ್ವರೂಪ ನಾರಾಯಣ ಪ್ರಿಯ ರಾಮನಾಥಾ

# ಪರಮಾತ್ಮನಿಗೆ ಹುಟ್ಟು ಸಾವೆಂಬುವಿಲ್ಲ. ಅವನು ನಿತ್ಯನು.

(೧). ಹುಟ್ಟು ಮೆಟ್ಟೆಂಬುದು ನಿಮ್ಮಲ್ಲಿಲ್ಲ. ನಿಮ್ಮಿಂದ ನೀವೇ ಸ್ವಯಂಭುವಯ್ಯ. ಇಂತಾದಿರಯ್ಯ, ಇಂತಾದಿರಯ್ಯ, ನೀವಿಂತಾದಿರಯ್ಯ. ನಿಮ್ಮ ಮಹಾತ್ಮೆಯ ನೀವೇ ಬಲ್ಲಿರಿ, ನಿಜಗುರುಕಪಿಲಸಿದ್ಧಮಲ್ಲಿನಾಥಯ್ಯ.

(೨). ಅಮೃತವತಿ ಸೋಮ ಶಂಭುವಿಂಗೆ ಹುಟ್ಟಿದಾತ ಇಂದ್ರ, ಸತ್ಯಋಷಿ ಜ್ಯೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ, ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು, ನಾಭಿರಾಜ ಮರುತಾದೇವಿಗೆ ಹುಟ್ಟಿದಾತ ಅರುಹ, ಇವರೆಲ್ಲರು ಯೋನಿಜರೆಂಬುದು ಜಗವೆಲ್ಲ ಬಲ್ಲದು. ಉತ್ಪತ್ತಿ, ಸ್ಥಿತಿ, ಪ್ರಳಯಕ್ಕೆ ಹೊರಗಾದ ನಮ್ಮ ಕೂಡಲಸಂಗಮದೇವಂಗೆ ಮಾತಾ ಪಿತೃಗಳುಂಟೇ ಹೇಳಿರೇ?

(೩). ಅಮೌಲ್ಯನು, ಅಪ್ರಮಾಣನು, ಅಗೋಚರ ಲಿಂಗವು, ಆದಿಮಧ್ಯಾಂತವಿಲ್ಲದ ಲಿಂಗವು, ಸ್ವತಂತ್ರ ಲಿಂಗವು, ನಿತ್ಯ ನಿರ್ಮಲ ಲಿಂಗವು, ಅಯೋನಿಸಂಭವನಯ್ಯ ನಮ್ಮ ಕೂಡಲಸಂಗಮದೇವಾ.

(೪). ಅಜ ಹರಿಸುರರೆಲ್ಲರೂ ಅಳಿಯದೆ ಉಳಿದವರಿಲ್ಲ. ಶಿವನೇ ನಿತ್ಯನೆಂದು ಹೊಡೆವಡುತ್ತಿವೆ ವೇದಶೃತಿ:—" ಉತ, ಇದಂ, ವಿಶ್ವಭೂತಾನಿ, ಸದೃಷ್ಟೋ ಮೃಡೊಯಾತಿ. ನಮಸ್ತು ನೀಲಗ್ರೀವಾಯ, ಸಹಸ್ರಾಕ್ಷಾಯ, ಈಡುಷೆ" ಬಸವಪ್ರಿಯಕೂಡಲಚನ್ನಸಂಗಯ್ಯನೊಬ್ಬನೇ ನಿತ್ಯನೆಂದು ಹೊಗಳುತ್ತಿದೆ ವೇದ.

(೫). ಅಳಿಯ, ಬೆಳೆಯ, ಸುಳಿವನಲ್ಲ, ಪ್ರಳಯವಿಲ್ಲದ ವಿಜಯನು. ಕಳಾಕುಳದ ಆತ್ಮನ ಅಂಗಸಂಗಿಯಲ್ಲ. ಸುಳುಹಿನೊಳಗಣ ಸೂಕ್ಷ್ಮವ ತಿಳಿದು ನೋಡಿರೇ. ಅಣಿಮಾದಿ ಗುಣರಹಿತನ ಅಕಲ್ಪಿತನನೇನೆಂಬೆ? ಕಳವಳದ ಬಳಿಯ ಭಾವರೂಪಲ್ಲ. ಬೆಳಗಿನೊಳಗಣ ಬೆಳಗು ಗುಹೇಶ್ವರಲಿಂಗವು.

(೬). ತಾಯಿತಂದೆ ಇಲ್ಲದ ಕಂದಾ, ನಿನಗೆ ನೀನೇ ಹುಟ್ಟಿಬೆಳೆದೆಯಲ್ಲಾ! ನಿನ್ನ ಪರಿಣಾಮವೇ ನಿನಗೆ ಪ್ರಾಣತೃಪ್ತಿಯಾಗಿ ಇದ್ದೆಯಲ್ಲಾ! ಭೇದಕರಿಗೆ ಅಭೇದ್ಯನಾಗಿ ನಿನ್ನ ನೀನೇ ಬೆಳಗುತ್ತಿರ್ದೆಯಲ್ಲಾ! ನಿನ್ನ ಚಾರಿತ್ರ ನಿನಗೆ ಸಹಜ ಗುಹೇಶ್ವರಾ.

# ಪರಮಾತ್ಮನು ಸಕಲ ಪದಾರ್ಥಗಳಲ್ಲಿ ಗೌಪ್ಯನಾಗಿರುವನು.

(೧). ಮರೀಚಿಯೊಳಗಣ ಬಿಸಿಲಿನಂತೆ ಇದ್ದಿತ್ತು. ಕ್ಷೀರದೊಳಗಣ ತುಪ್ಪದಂತೆ ಇದ್ದಿತ್ತು. ಚಿತ್ರಿಕನೊಳಡಗಿದ ಚಿತ್ರದಂತೆ ಇದ್ದಿತ್ತು. ಅಲಿಯೊಳಗಡಗಿದ ತೇಜದಂತೆ ಇದ್ದಿತ್ತು. ನುಡಿಯೊಳಡಗಿದ ಅರ್ಥದಂತಿದ್ದಿತ್ತು. ಕೂಡಲ ಚನ್ನಸಂಗಯ್ಯ ನಿಮ್ಮ ನಿಲವು.

(೨). ವಸ್ತುವೆಂದರೆ ಹ್ಯಾಗಾಯಿತ್ತಯ್ಯ ಹೇಳುವೆ ಕೇಳಯ್ಯ ಮಗನೇ. ಕಾಷ್ಟದಲ್ಲಿ ಅಗ್ನಿ ಹ್ಯಾಗೆ ಹಾಗಿಪ್ಪುದು, ಕ್ಷೀರದೊಳಗೆ ಘೃತ ಹ್ಯಾಗೆ ಹಾಗಿಪ್ಪುದು. ಸರ್ವತ್ರ ಎಲ್ಲ ಠಾವಿನಲ್ಲಿಯೂ ವಸ್ತುವಿನ ಕಳೆ ಪರಿಪೂರ್ಣವಾಗಿರ್ಪುದೆಂದೆನಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ.

(೩). ಪಿಂಡದೊಳಗೆ ಪಿಂಡರೂಪಾಗಿ, ಈ ಪರಿಯಲ್ಲಿ ಗೌಪ್ಯವಾಗಿರ್ದು, ಎನ್ನಲ್ಲಿ ಕಾಣಿಸಿಕೊಳ್ಳದಿರ್ದಿರಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೪). ಅಡಗನೊಳಗಣ ಹಾಲು ಅಡಗಿಪ್ಪ ಭೇದವನು ಬೆಡಗಪ್ಪ ತುಪ್ಪದ ಕಂಪಿನ ಪರಿಯಂತೆ, ಎಲೆ ಮೃಡನೇ, ನೀನು ಪ್ರಾಣಪ್ರಕೃತಿಗಳೊಳಗೆ ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

(೫). ಅಕ್ಷರದಲಭ್ಯಾಸವ ಮಾಡಿ, ಬರವತೊಡೆದ ಪರಿಯೆಂತೋ? ಸ್ವರೂಪೆಂಬುದಾವುದು, ನಿರೂಪೆಂಬುದಾವುದು, ಎಂದರಿಯರಾಗಿ, ಆದಿನಿರಾಳ, ಮಧ್ಯನಿರಾಳ, ಊರ್ಧ್ವನಿರಾಳ ಗುಹೇಶ್ವರಾ.

(೬). ಅಂಬುವಿನ ಸಾರ ಒಡಗೂಡಿ ಆ ಮಣ್ಣಿಂಗೆ ಕುಂಭವೆಂಬುದಕ್ಕೆ ಕುರುಹುಗೊಟ್ಟು ಘನಕಿರಿದಲ್ಲದೆ, ಕುಂಭದಲ್ಲಿಯೇಲೀಯ್ಯವಾದಂತೆ, ನಿಷ್ಕಳಂಕ ಮಲ್ಲಿಕಾರ್ಜುನ ಅಂಗದಲ್ಲಿಯೇ ಲೀಯ್ಯ.

(೭). ಸಿಲೆಯೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ, ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಯಬ್ದದಂತೆ ಗುಹೇಶ್ವರಾ ನಿಮ್ಮ ಶರಣ ಸಂಬಂಧ.

**ಅರ್ಥ:**—ಸಿಲೆಯೊಳಗಿಪ್ಪ ಅಗ್ನಿ ಮೈದೋರದ ಹಾಗೆ, ಪರಬ್ರಹ್ಮವು ಪಿಂಡಸ್ಥವಾಗಿದ್ದು ಕಾಣಿಸಬಾರದೆಂಬುದೀಗ, ಸಿಲೆಯೊಳಗಣ ಪಾವಕನಂತೆ

ಎಂಬುದಕ್ಕರ್ಥ. ಆವುದಾನೊಂದು ಪ್ರತಿಬಿಂಬವು ಉದಕದೊಳಗಿರ್ದು ಉದಕದ ಗುಣಧರ್ಮ ಕರ್ಮವ ಹೊದ್ದದ ಹಾಗೆ, ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು, ಆ ಪಿಂಡದ ಗುಣಧರ್ಮ ಕರ್ಮವ ಹೊದ್ದದಿಪ್ಪುದೀಗ, ಉದಕದೊಳಗಣ ಪ್ರತಿಬಿಂಬದಂತೆ ಎಂಬ ಶಬ್ದಕ್ಕರ್ಥ. ಬೀಜದೊಳಗಣ ವೃಕ್ಷದ ಹಾಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು, ಪಿಂಡ ಮಧ್ಯದಲ್ಲಿ ಗೂಢವಾಗಿಪ್ಪುದೆಂಬುದೀಗ ಬೀಜದೊಳಗಣ ವೃಕ್ಷದಂತೆ ಎಂಬ ಶಬ್ದಕ್ಕರ್ಥ. ಶಬ್ದದೊಳಗೆ ನಿಶ್ಶಬ್ದವಿದ್ದುದನು ಭೇದಿಸಬಾರದ ಹಾಗೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ಅಭೇದ್ಯವಾಗಿಪ್ಪುದೆಂಬುದೀಗ, ಶಬ್ದದೊಳಗಣ ನಿಶ್ಶಬ್ದದಂತೆ ಎಂಬುದಕ್ಕರ್ಥ.

(೮). ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೇ? ಬೀಜದೊಳಗಣ ವೃಕ್ಷ ಉಲಿಯಬಲ್ಲುದೇ? ತೋರಲಿಲ್ಲಾಗಿ, ಬೀರಲಿಲ್ಲಾರಿಗೆಯು ಗುಹೇಶ್ವರಾ, ನಿಮ್ಮ ನಿಲವ ಅನುಭವಸುಖಿ ಬಲ್ಲ.

**ಅರ್ಥ**:—ಸಿಲೆಯೊಳಗಿಪ್ಪ ಅಗ್ನಿ ಸ್ಫುರಿಸದಂತೆ, ಪರಬ್ರಹ್ಮವು ಪಿಂಡಸ್ಥವಾಗಿರ್ದು, ಆ ಪಿಂಡದಿಂದ **ವ್ಯತಿರಿಕ್ತ**ವಾಗಿ ತೋರಲರಿಯದೆಂಬುದೀಗ ಕಲ್ಲೊಳಗಣ ಕಿಚ್ಚು ಉರಿಯಬಲ್ಲುದೇ ಎಂಬ ಶಬ್ದಕ್ಕರ್ಥ. ಬೀಜದೊಳಗಡಗಿರ್ಪ ವೃಕ್ಷದಂತೆ ಆ ಪರಬ್ರಹ್ಮವು ಪಿಂಡಸ್ಥವಾಗಿರ್ದು ವ್ಯೆದೋರದಿರ್ಪುದೀಗ ಬೀಜದೊಳಗಣ ವೃಕ್ಷ ಉಲಿಯಬಲ್ಲುದೇ ಎಂಬ ಶಬ್ದಕ್ಕರ್ಥ. ಇಂತಪ್ಪ ಪರಬ್ರಹ್ಮವು ತಾನೊಂದಕ್ಕೆಯೂ ತೋರಿ ಬೀರಲಿಲ್ಲಾಗಿ, ತೋರಲಿಲ್ಲಾಗಿ ಬೀರಲಿಲ್ಲಾರಿಗೆಯೂ ಎಂಬ ಶಬ್ದಕ್ಕರ್ಥ. ಈ ನಿಲವನಾರು ಬಲ್ಲರೆಂದೊಡೆ, ಅಹಂ ಹಮ್ಮೆಂಬ ಉಭಯವಳಿದ ಮಹಾನುಭಾವಿ ಬಲ್ಲನೆಂಬುದೀಗ ಅನುಭವಸುಖಿ ಬಲ್ಲನೆಂಬ ಶಬ್ದಕ್ಕರ್ಥ.

(೯). ನೆಲದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿರ್ದ ಮಿಂಚಿನಂತೆ, ಬಯಲ ಮರೆಯಲಡಗಿರ್ದ ಮರೀಚನಂತೆ ಕಂಗಳ ಮರೆಯಲಡಗಿರ್ದ ಬೆಳಗಿನಂತೆ ಗುಹೇಶ್ವರಾ ನಿಮ್ಮ ನಿಲವು.

**ಅರ್ಥ**:—ಭೂಗತವಾಗಿಪ್ಪ ನಿಧಾನದಂತೆ ಪರಬ್ರಹ್ಮವು ಪಿಂಡಮಧ್ಯದಲ್ಲಿ ಗತವಾಗಿ ಕಾಣಬಾರದಿಪ್ಪುದೀಗ ನೆಲದ ಮರೆಯ ನಿಧಾನದಂತೆ ಎಂಬ ಶಬ್ದಕ್ಕರ್ಥ. ಮೇಘದೊಳಗೆ ಸ್ಫುರಿಸುತಿಪ್ಪ ಕ್ಷಣಿಕದಂತೆ, ಆಪರಬ್ರಹ್ಮವು ಪಿಂಡ ಮಧ್ಯ

ದೊಳಗೆ ಇರ್ದು ಬೇರಿಟ್ಟು ತೋರಲರಿಯದೆಂಬುದೀಗ ಮುಗಿಲಮರೆಯ ಮಿಂಚಿನಂತೆ ಎಂಬ ಶಬ್ದಕ್ಕರ್ಥ. ಬಯಲೊಳಗಡಗಿದ್ದ ಮರೀಚಿಯ ನಿಃಕಂಪಿತದಂತೆ ಆ ಪರಬ್ರಹ್ಮವು ಪಿಂಡದೊಳಗಿರ್ದು ನಿಶ್ಚಲವಾಗಿರ್ಪುದೆಂಬುದೀಗ ಬಯಲಮರೆಯಲಡಗಿದ ಮರೀಚನಂತೆ ಎಂಬ ಶಬ್ದಕ್ಕರ್ಥ. ಕಂಗಳ ಪಟಲದೊಳಗಿರ್ಪ ಪ್ರಭೆಕಂಗಳಿಂದ ವ್ಯತಿರಿಕ್ತವಾಗಿ ವಿವರಿಸಬಾರದಂತೆ, ಆ ಪರಬ್ರಹ್ಮವು ಪಿಂಡಸ್ಥವಾಗಿರ್ಪುದು. ಅದನು ವಿವರಿಸಬಾರದೆಂಬದೀಗ ಕಂಗಳ ಮರೆಯಲಡಗಿರ್ದ ಪ್ರಭೆಯಂತೆ ಎಂಬ ಶಬ್ದಕ್ಕರ್ಥ.

(೧೦). ಆಡಬಾರದ ಬಯುಲು, ನೋಡಬಾರದ ಬಯಲು, ನುಡಿಯಬಾರದ ಬಯುಲು, ಹಿಡಿಯಬಾರದ ಬಯಲು, ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ ಈ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ ?

**ಅರ್ಥ**:—ಭಿನ್ನ ಕ್ರಿವಿಡಿದಾಚರಿಸುವವರಿಗೂ ಅಶಕ್ಯವಾಗಿರ್ಪುದು ಬ್ರಹ್ಮವು. ಅಂತರಂಗದಲ್ಲಿ ಕುರುಹು ಹಿಡಿದವರಿಗೂ ಅಶಕ್ಯವಾಗಿರ್ಪುದು ಬ್ರಹ್ಮವು. ವೇದಾಗಮಂಗಳ ವಾಚ್ಯಕ್ಕೆ ಅನಿರ್ವಾಚ್ಯವಾಗಿರ್ಪ್ಪುದು ಬ್ರಹ್ಮವು. ಆಹ್ವಾನಿಸಿ ಹಿಡಿದಿಹೆನೆಂಬವರಿಗೂ ಅಶಕ್ಯವಾಗಿರ್ಪ್ಪುದು ಬ್ರಹ್ಮವು. ಈ ಸಾಕಾರವಲ್ಲದ ನಿರಾಕಾರವಾದ ಬ್ರಹ್ಮವು, ಶರಣನ ಅಂತರಂಗ, ಬಹಿರಂಗದಲ್ಲಿ ಇಷ್ಟಲಿಂಗ, ಪ್ರಾಣಲಿಂಗವಾಗಿ ಅಡಗಿಪ್ಪುದೊಂದು ಸೂಕ್ಷ್ಮ ವಿಚಾರವನು ಈ ಜಗದಾತ್ಮರು ಅರಿಯರು, ಶರಣಬಲ್ಲನೆಂಬುದರ್ಥ.

---

## ಪರಮಾತ್ಮನು ಸಕಲ ಪದಾರ್ಥಗಳಲ್ಲಿ ಚೈತನ್ಯಾತ್ಮಕನಾಗಿ ವರ್ತಿಸುತ್ತಾನೆ.

(೧). ಮರದೊಳಗಣ ಮಂದಾಗ್ನಿಯ ಉರಿಯುದಂತಿರಿಸಿದೆ. ನೊರೆಹಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ. ಶರೀರದೊಳಗಾತ್ಮನ ಕಾಣದಂತಿರಿಸಿದೆ. ನೀ ಬೆರಿಸುವ ಭೇದಕ್ಕೆ ಬೆರಗಾದೆನೈ ರಾಮನಾಥಾ.

(೨). ಧರಣಿಯು ಪಸರಿಸಿ, ಉರಗನ ಅಡಿ ಇಟ್ಟು, ಶರಧಿ ಏಳಕ್ಕೆ ಎರೆದಸು ಒಕ್ಕುಡಿತೆ ಉದಕವ. ಹರಿಯಜಸುರರಿಗೆ ಪರಿಪರಿಯ ಲೋಕವಕೊಟ್ಟು ಅರಿಯದಂತಿರ್ದೆ, ಕಾಣಾ ರಾಮನಾಥಾ.

(೩). ಬಯಲ ಬಣ್ಣವ ಮಾಡಿ, ಸ್ವಯವ ನಿಲವ ಮಾಡಿ ಸುಳಿದಾತನ ಬೆಡಗ ಬಲ್ಲವರಾರೈ ರಾಮನಾಥಾ?

**ಅರ್ಥ**:—ಮಿಥ್ಯಾ ಸ್ವರೂಪವಾದ ಸಪ್ತಧಾತು ಸಮ್ಮಿಶ್ರವಾದ ದೇಹವ ನುಂಟುಮಾಡಿ, ಆ ದೇಹಕ್ಕೆ ಆತ್ಮನ ಚೈತನ್ಯವ ಮಾಡಿ, ಈ ದೇಹಾತ್ಮರುಗಳಲ್ಲಿ ತಾನೇ ಚೈತನ್ಯವಾಗಿ, ಚರಿಸುವ ಪರಶಿವನ ಕುಶಲತ್ವವ ತಿಳಿದವರಾರು, ಎಂಬಲ್ಲಿ ಆ ಪರವಸ್ತುವನೇ ಗುರುಮುಖದಿಂದ ಅಂಗದಲ್ಲಿ ಧರಿಸಿ, ಮುಕ್ತರಾಗುವರಾರು, ಶರಣರಲ್ಲದೆ ಮತ್ತೊಬ್ಬರಿಲ್ಲವೆಂಬುದರ್ಥ.

(೪). ಹೂವಿನೊಳಗಣ ಕಂಪ ಹೊರಸೂಸಿ ಸುಳಿವ ಅನಿಲನಂತೆ, ಅಮೃತದೊಳಗಣ ರುಚಿಯು ನಾಲಿಗೆಯ ತುದಿಯಲ್ಲಿ ಅರಿವನ ಚೇತನದಂತೆ, ನಿಲವಿಲ್ಲದ ರೂಪ ಕಳೆಯಲ್ಲಿ ವೇಧಿಸುವನ ಪರಿ ರಾಮನಾಥಾ.

(೫). ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ, ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ, ಮೃಡ ನೀ ಪ್ರಾಣ ಪ್ರಕೃತಿಯೊಳಗಡಗಿದ ಭೇದವ, ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

**ಅರ್ಥ**:—ದೇಹದಲ್ಲಿ ಉದರಾಗ್ನಿಯು ಆ ದೇಹ ದಹನವ ಮಾಡದಿಪ್ಪ ವಿಚಾರದ ಹಾಗೆ, ಪಾನವ ಮಾಡಿದ ಜಲದಲ್ಲಿ ಆ ಉದರಾಗ್ನಿಯು ನಾಶವಾಗದೆ ಇಪ್ಪ ವಿಚಾರದ ಹಾಗೆ, ಎಲೆ ಶಿವನೇ, ನೀನು ಪ್ರಕೃತಿ ರೂಪವಾದ ಪ್ರಾಣದಲ್ಲಿ ಅಡಗಿರ್ದು, ಆ ಪ್ರಾಣನ ವರ್ತನೆಯಲ್ಲಿ ಬೆರೆಯದೆ ರಹಸ್ಯವಾಗಿರ್ಪ ವಿಚಾರ ಎಂಬಲ್ಲಿ ಆ ಬ್ರಹ್ಮವನೆ ಇಷ್ಟಲಿಂಗವಾಗಿ ಪಡೆದುಕೊಂಡು ಆಚರಿಸುವದನು ಲೋಕದ ಜೀವರರಿಯರೆಂಬುದರ್ಥ.

(೬). ಎಣ್ಣೆ ಇದ್ದು ಎಳ್ಳು ನನೆಯದ ಭೇದವ, ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ, ಕಾಮವಿದ್ದು ಕನ್ನೆಯನನುಭವಿಸದ ಭೇದವ, ಪರವಿದ್ದು ಪ್ರಾಣನ ಪ್ರಕೃತಿಯು ಹರಿಯದ ಭೇದವ ನರರೆತ್ತ ಬಲ್ಲರೈ ರಾಮನಾಥಾ?

(೭). ಮಣಿಗಳ ಸೂತ್ರದಂತೆ, ತ್ರಿನಯನ, ನೀನಿಪ್ಪೆಯಯ್ಯಾ. ಎಣಿಸುವಡೆ, ತನುಭಿನ್ನ, ಆತ್ಮನೊಬ್ಬನೇ. ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು ಮಣಿವುತಿರ್ಪೆನಯ್ಯಾ ರಾಮನಾಥಾ.

2

# ಪರಮಾತ್ಮನು ವಿಶ್ವಮಯನು ಆದರೂ ಆತನು ವಿಶ್ವದ ಗುಣಗಳನ್ನು ಹೊದ್ದನು.

(೧). ಶಿವ ತನ್ನ ವಿನೋದಕ್ಕೆ ರಚಿಸಿದನು ಅನಂತವಿಶ್ವವನು. ರಚಿಸಿದವನು ವಿಶ್ವಕ್ಕೆ ಹೊರಗಾಗಿರ್ದನೇ? ಇಲ್ಲ. ವಿಶ್ವಮಯ ತಾನಾದನು. ವಿಶ್ವವೆಲ್ಲವೂ ತಾನಾದೊಡೆ, ವಿಶ್ವದುತ್ಪತ್ತಿಸ್ಥಿತಿಲಯಕ್ಕೊಳಗಾದನೇ? ಇಲ್ಲ. ಅದೇನು ಕಾರಣವೆಂದಡೆ ಅಜಾತನಾಗಿ ಉತ್ಪತ್ತಿ ಇಲ್ಲ. ಕರ್ಮರಹಿತನಾಗಿ ಸ್ಥಿತಿಗೊಳಗಲ್ಲ. ಮರಣರಹಿತನಾಗಿ ಲಯಕ್ಕೊಳಗಲ್ಲ. ಇಂತೀ ಗುಣತ್ರಯಂಗಳ ಹೊದ್ದಲರಿಯ. ತಾನಲ್ಲದೆ ವಿಶ್ವಕ್ಕಾಧಾರವಿಲ್ಲಾಗಿ ದೂರಸ್ಥನಲ್ಲ. ತನ್ನಲ್ಲಿ ತಾನಲ್ಲದೆ ಅನ್ಯವು ತೋರಲರಿಯದಾಗಿ, ಇದಿರಿಲ್ಲ. ಇದಿರಿಲ್ಲಾಗಿ ವಿಶ್ವಮಯ ತಾನಾದುದೇ ಸತ್ಯ. ಅರಸು ಕಾಲಾಳಾಗಬಲ್ಲ ತನ್ನ ವಿನೋದಕ್ಕೆ, ಮರಳಿ ಅರಸಾಗಬಲ್ಲ. ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು ಜಗವಾಗಲೂ ಬಲ್ಲ, ಜಗವಾಗದಿರಲೂ ಬಲ್ಲನಯ್ಯ.

(೨). ಜಲದೊಳಗಣ ಸೂರ್ಯನಂತಿರ್ಪನಯ್ಯ ಶಿವನು. ಲೋಕಾದಿಲೋಕಂಗಳೊಳಗಿರ್ದಡೇನು, ಜಗದ ಪುಣ್ಯ, ಪಾಪ, ಸ್ವರ್ಗ, ನರಕ, ಬಂಧಮೋಕ್ಷಕ್ಕೊಳಗಾದಾತನೇ? ಅಲ್ಲ. ಅದೆಂತೆಂದೊಡೆ, ಜಲದೊಳಗಣ ಪ್ರಕೃತಿವಿಕೃತಿಗಳು ಜಲಕ್ಕಲ್ಲದೆ ಸೂರ್ಯಂಗಿಲ್ಲವಾಗಿ, ಲೋಕದ ಸ್ಥಿತಿಗತಿ ಲೋಕಕ್ಕಲ್ಲದೆ, ಶಿವನಿಗಿಲ್ಲವಾಗಿ, ಅನಂತಕೋಟಿ ಬ್ರಹ್ಮಾಂಡಂಗಳು ತನ್ನ ಒಡಲೊಳಗೆ ಅಡಗಿದವೆಂದಡೆ, ತಾ ಹೊರಗಾಗಿ ಅಡಗಲೆಡೆ ಏನುಂಟು? ಇದು ಕಾರಣ ನಮ್ಮ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು ವಿಶ್ವದೊಳಗೆ ಹೊದ್ದಿಯೂ ಹೊದ್ದದಿರಬಲ್ಲ, ವಿಶ್ವಾಧಿಪತಿಯಾಗಲೂ ಬಲ್ಲ.

(೩). ಹಲವು ತೃಣಕಾಷ್ಠಗಳಲ್ಲಿ ಅಗ್ನಿ ಬೆರೆದಿರ್ದಂತೆ, ಹಲವು ಘಟಜಲದಲ್ಲಿ ಸೂರ್ಯಬಿಂಬಿಸುತಿರ್ದಂತೆ ಇದ್ದನಯ್ಯ ಶಿವನು. ಸಕಲ ಜೀವರ ಹೃದಯದಲ್ಲಿ ಬೆರಸಿಯೂ ಬೆರಸದಂತಿಪ್ಪನಯ್ಯ ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

(೪). ಜಲದೊಳಗಣ ಕಿಚ್ಚು ಜಲವ ಸುಡದೆ ಜಲವು ತಾನಾಗಿಯೇ ಇದ್ದಿತ್ತು ನೋಡಾ. ನೆಲೆಯನರಿದು ನೋಡಿಹೆವೆಂದಡೆ, ಅದು ಜಲವು ತಾನಲ್ಲ. ಕುಲದೊಳಗಿರ್ದು, ಕುಲವ ಬೆರಸದೆ ನೆಲೆಗೆಟ್ಟು ನಿಂದುದನಾರು ಬಲ್ಲರು? ಹೊರ

ಗೊಳಗೆ ತಾನಾಗಿರ್ದು ಮತ್ತೆ ತಲೆದೋರದಿಪ್ಪುದು, ಗುಹೇಶ್ವರಾ ನಿಮ್ಮ ನಿಲವು ನೋಡಾ.

**ಅರ್ಥ**— ಶುಕ್ರಶೋಣಿತಾತ್ಮಸಂಗದಿಂದಾದ ಜಲಬುದ್ಬುದಪಿಂಡದೊಳಗೆ ಅಡಗಿಪ್ಪ ಪರಶಿವಜ್ಞಾನಾಗ್ನಿ ಜಡಪಿಂಡವ ದಗ್ಧವ ಮಾಡಲರಿಯದೆ ಅಲ್ಲಿಯೇ ಗತವಾಗಿ ತದ್ರೂಪವಾಗಿತ್ತೆಂಬುದೀಗ ಜಲದೊಳಗಿರ್ದ ಕಿಚ್ಚು ಜಲವ ಸುಡದೆ, ಜಲವು ತಾನಾಗಿದ್ದಿತ್ತೆಂಬುದೀಗ ಜಲದೊಳಗಿರ್ದ ಕಿಚ್ಚು ಜಲವ ಸುಡದೆ ಜಲವು ತಾನಾಗಿದ್ದಿತ್ತೆಂಬ ಶಬ್ದಕ್ಕರ್ಥ. ವಿವೇಕದಿಂತಿಳಿದು ನೋಡಿದಡೆ, ಆ ಶಿವಜ್ಞಾನ ಜಡಪಿಂಡರೂಪಲ್ಲವೆಂಬುದೀಗ ನೆಲೆಯುನರಿಯುಬಲ್ಲಡೆ, ಅದು ಜಲವು ತಾನಲ್ಲ ವೆಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು, ಜಾತಿವರ್ಣಾಶ್ರಮ ಕುಲಗೋತ್ರ ನಾಮಂಗಳೊಳಗೆ ವೇಧಿಸಿಕೊಂಡಿರ್ದು, ಹೊದ್ದಿಯೂ ಹೊದ್ದದೆ ಸರ್ವತೋಧಿಕ ವಾಗಿದ್ದಿತ್ತೆಂಬುದೀಗ, ಕುಲದೊಳಗಿರ್ದು ಕುಲವ ಬೆರಸದೆ ನೆಲೆಗೆಟ್ಟು ನಿಂದುದ ನಾರು ಬಲ್ಲರು ಎಂಬ ಶಬ್ದಕ್ಕರ್ಥ. ಆ ಪರಬ್ರಹ್ಮವು ಅಂತರಂಗ ಬಹಿರಂಗದೊಳಗೆ ಪರಿಪೂರ್ಣವಾಗಿರ್ದು ಅನ್ಯವಾಗಿ ತೋರಿಸಿಕೊಳ್ಳಲರಿಯದೆ ಗೌಪ್ಯವಾಗಿಪ್ಪ ದೆಂಬುದೀಗ ಒಳಹೊರಗೆ ತಾನಾಗಿ ಮತ್ತೆ ತಲೆದೋರದಿಪ್ಪುದೆಂಬ ಶಬ್ದಕ್ಕರ್ಥ.

(೫). ಬಣ್ಣ ಹಲವಪ್ಪಲ್ಲಿ ಬಣ್ಣ ತಾನೊಂದಾಗಿ ಬಣ್ಣ ಮೂಜಗಕ್ಕೆ ಮುಕ್ಕಣ್ಣ ತಾನು ಬಣ್ಣಕರು ಬಣ್ಣದೊಳಗಾಳುವದನೆ ಕಂಡು ಅಣ್ಣ ನಗುತಿ ರ್ದನೈ ಯೋಗಿನಾಥಾ.

**ಅರ್ಥ**:—ಮಹಾಲಿಂಗದ ಚಿತ್‌ಪ್ರಭಾಂಗವೆಂಬುದೀಗ ಬಣ್ಣವೆಂಬ ಶಬ್ದ ಕ್ಕರ್ಥ. ಅಂತಪ್ಪ ಲಿಂಗಕ್ಕೆ ಲೀಲಾವಿಲಾಸ ತೋರಿದಲ್ಲಿ ಚಿತ್‌ಪ್ರಭಾಕಾಶವೇ ಸ್ಫುರಿಸಿ ನಾನಾತ್ವವನ್ನೈದಿ ಪರಿಚ್ಛಿನ್ನಾತ್ಮರಾದರೆಂಬುದೀಗ ಬಣ್ಣ ಹಲವಪ್ಪಲ್ಲಿ ಎಂಬ ಶಬ್ದಕ್ಕರ್ಥ. ಅಂತು ಹಲವಾತ್ಮರಾದ ಚೈತನ್ಯ ಒಂದೇ ಎಂಬುದೀಗ ಬಣ್ಣ ತಾನೊಂದಾಗಿ ಎಂಬ ಶಬ್ದಕ್ಕರ್ಥ. ಅಂತು ಲಿಂಗದ ಚಿತ್‌ಪ್ರಕಾಶವೇ ಮೂಜಗ ವಾಯಿತ್ತೆಂಬುದೀಗ ಬಣ್ಣ ಮೂಜಗಕ್ಕೆ ಮುಕ್ಕಣ್ಣ ತಾನು ಎಂಬ ಶಬ್ದಕ್ಕರ್ಥ. ಅಂತು ಚಿದಂಶಿಕರಾದ ಆತ್ಮರು ದೇಹೇಂದ್ರಿಯ ಕುಲಗೋತ್ರಂಗಳು ಮೊದಲಾದ ನಾನಾಪ್ರಪಂಚಿನ ಬಣ್ಣದ ಸಂಸಾರಸಾಗರದೊಳಗೆ ಮುಳುಗಿ ಆಳುತ್ತಿಪ್ಪ ಜೀವರ ನೋಡಿ ವಿನೋದಿಸುತ್ತ ತಾ ಹೊರಗಾಗಿರ್ದಾತನೆಂಬುದೀಗ ಬಣ್ಣಕರು ಬಣ್ಣದೊ ಳಗಾಳುವದನೆ ಕಂಡು ಅಣ್ಣ ನಗುತಿರ್ದನೈ ಯೋಗಿನಾಥಾ ಎಂಬ ಶಬ್ದಕ್ಕರ್ಥ.

# ವಿಶ್ವವು ಪರಮಾತ್ಮನಲ್ಲ.

(೧). ಸರ್ವವೂ ಶಿವನಿಂದ ಉದ್ಭವಿಸಿದವೆಂದೊಡೆ, ಆ ಉದ್ಭವಿಸಿದುವೆಲ್ಲ ಶಿವನೇ? ಸಕಲ ಬೀಜವ ಬಿತ್ತುವನು ಒಕ್ಕಲಿಗನೆಂದೊಡೆ, ಬೆಳೆ ತಾನೊಕ್ಕಲಿಗನೇ? ಮಡಕೆಯ ಕುಂಬರ ಮಾಡುವನೆಂದೊಡೆ, ಆ ಮಡಕೆ ತಾ ಕುಂಬರನೇ? ಕಬ್ಬುನವ ಕಮ್ಮರ ಮಾಡುವನೆಂದೊಡೆ, ಆ ಕಬ್ಬುನ ತಾ ಕಮ್ಮರನೇ? ಈ ಪರಿಯಲ್ಲಿ ಸಕಲ ಜಗತ್ತು ಸಚರಾಚರವನು ಶಿವನು ಮಾಡುವನೆಂದೊಡೆ, ಆ ಸಚರಾಚರವೆಲ್ಲವೂ ಶಿವನೇ? ಆ ಹಾಗಾದೊಡೆ, ಅಷ್ಟಾದಶ ವರ್ಣಂಗಳೇಕಾದವು? ಎಂಬತ್ತೆಂಟು ಲಕ್ಷ ಜೀವರಾಶಿಗಳೇಕಾದವು? ಸುಖ, ದುಃಖ, ಸ್ವರ್ಗ, ನರಕಂಗಳೇಕಾದವು? ಆಚಾರ ಅನಾಚಾರಗಳೇಕಾದವು? ಪುಣ್ಯ ಪಾಪ ಭವಿ ಭಕ್ತರೆಂದೇಕಾದವು? ಇದು ಕಾರಣ ಸದ್ಭಕ್ತ ಸದಾಚಾರದಲ್ಲಿರ್ಪನು, ಅಂತಲ್ಲದೆ ಸರ್ವವೂ ಶಿವನೆಂದೊಡೆ ಘೋರ ನಾಯಕನರಕ ಕೂಡಲ ಚನ್ನಸಂಗಯ್ಯ.

(೨). ಶಿವನು ಸರ್ವಗತನಾಗಿಯೂ ಇಹನೆಂದೊಡೆ ಎಲ್ಲವೂ ಶಿವನೇ? ಅಲ್ಲ. ಮತ್ತೆಲ್ಲಿಹನೆಂದೊಡೆ, ನಿರ್ಮಲಚಿತ್ತರಾದ ದೇಹಿಗಳಲ್ಲಿ, ಸಂತೋಷಿಗಳಾದ ನಿರಾಶಾಭರಿತರಲ್ಲಿ, ನಿರ್ಮಲ ಪರಮ ಮಾಹೇಶ್ವರರ ಹೃದಯದಲ್ಲಿ ಅತಿ ಪ್ರೇಮದಿಂದಿಹನು ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರನು.

(೩). ಸರ್ವಗತನೆಂಬುದು ಲೋಕವೆಲ್ಲ. ಶಿವಶಿವಾ, ನಿರ್ಬುದ್ಧಿ ಜನಂಗಳನೇನೆಂಬೆ? ಸರ್ವವೂ ಶಿವನಾದೊಡೆ, ಹಿಂದಣ ಯುಗ ಪ್ರಳಯಂಗಳೇಕಾದವು? ಎಂಬತ್ತುನಾಲ್ಕು ಲಕ್ಷ ಜೀವರಾಶಿಗಳೇಕಾದವು? ಸೂತ್ರಧಾರನವರಿಗಾಗಿ ಯಂತ್ರವನಾಡಿಸುವಲ್ಲಿ, ಹೊರಗಿರ್ದಾಡಿಸುವನಲ್ಲದೆ, ತಾನೊಳಗಿರ್ದಾಡಿಸುವನೇ? ಆ ಹಾಗೆ ಶಿವನು ತನ್ನಾಧೀನವಾಗಿರ್ದ ತ್ರಿಜಗದ ಸಚರಾಚರಂಗಳೆಂಬ ಯಂತ್ರವನು ಯಂತ್ರವಾಹಕನಾಗಿ ಆಡಿಸುವನಲ್ಲದೆ, ತಾನಾಡುವನೇ? ಇದು ಕಾರಣ ಸರ್ವವೂ ಶಿವನೆನಲಾಗದು. ಮತ್ತೆಲ್ಲಿಹನೆಂದೊಡೆ ಸದಾಚಾರ ಸದ್ಭಕ್ತಿ ಸನ್ನಿಹಿತ ಲಿಂಗಜಂಗಮದೊಳಗಿರ್ಪ. ಮತ್ತೆಲ್ಲಿಯೂ ಇಲ್ಲ ಕೂಡಲ ಚನ್ನಸಂಗಯ್ಯ.

(೪). ಪರುಷದ ಪುತ್ಥಳಿಗೆ ಕಬ್ಬುನದಾಭರಣ ಉಂಟೇ ಅಯ್ಯಾ? ಲೋಕದೊಳಗೆ ಲಿಂಗ, ಲಿಂಗದೊಳಗೆ ಲೋಕವಾದೊಡೆ, ಹಿಂದಣ ಪ್ರಳಯಂಗಳೇಕಾದವು? ಇನ್ನು ಮುನ್ನಿನ ಪ್ರಳಯಂಗಳಿಗೆಂತೋ? ಲೋಕ ಲೋಕದಂತೆ, ಲಿಂಗವು ಲಿಂಗದಂತೆ, ಈ ಉಭಯದ ಭೇದವ ಗುಹೇಶ್ವರಾ ನಿಮ್ಮ ಶರಣನೇ ಬಲ್ಲ.

(೫). ಸರ್ವಗತ ಶಿವನೆಂದು ಹೇಳುವ ಮರುಳ ಮಾನವರ ಮಾತು ಕೇಳಲಾಗದು. ಅದೆಂತೆಂದೊಡೆ, ಸರ್ವ ಜೀವರುಗಳಂತೆ ವನಿತಾದಿ ವಿಷಯ ಪ್ರಪಂಚದಲಿ ಮಗ್ನನಾಗಿ ಇರುವನೇ? ಶಿವನು ಸರ್ವ ಜೀವರುಗಳಂತೆ, ಪುಣ್ಯ ಪಾಪ, ಸುಖ, ದುಃಖ, ಸ್ವರ್ಗ, ನರಕಗಳೆಂಬ ದ್ವಂದ್ವ ಕರ್ಮಂಗಳಲ್ಲಿ ಹೊಂದಿರ್ಪನೇ? ಶಿವನು ಸರ್ವ ಜೀವರುಗಳಂತೆ ಉತ್ಪತ್ತಿ, ಸ್ಥಿತಿ, ಪ್ರಳಯ, ಬಂಧನಗಳೆಂಬ ಕಷ್ಟಕ್ಕೆ ಸಿಲ್ಕಿಪುದುಕುಳಿಗೊಂಬನೇ ಶಿವನು? ಇಂತೀ ಭೇದವನರಿಯದೆ, ಸರ್ವಗತ ಶಿವನೆಂದು ನುಡಿವ ಕಡುಪಾತಕರ ಜಡಜೀವಿಗಳ ಎನಗೊಮ್ಮೆ ತೋರದಿರಯ್ಯ ಅಖಂಡೇಶ್ವರಾ.

(೬). ಈಡಾ, ಪಿಂಗಳ, ಸುಷುಮ್ನ, ಗಾಂಧಾರಿ, ಹಸ್ತಿ, ಜಿಹ್ವೆ, ಪೂಷ, ಪಯಸ್ವಿನೀ, ಅಲಂಬು, ಲಕುಹ, ಶಂಕಿನಿ ಎಂಬ ದಶನಾಡಿಗಳು ತಾನಿರ್ದಲ್ಲಿ, ಈಡಾ, ಪಿಂಗಳ, ಸುಷುಮ್ನನಾಳಂಗಳೊಳಗೆ ಆಡುವ ವಾಯು, ಪ್ರಾಣಾಪಾನ ವ್ಯಾನ, ಉದಾನ, ಸಮಾನ, ನಾಗ ಕೂರ್ಮ, ಪ್ರಕರ, ದೇವದತ್ತ, ಧನಂಜಯವೆಂಬ ದಶವಾಯುಗಳು ತಾನಿರ್ದಲ್ಲಿ, ಅಗ್ನಿಮಂಡಲ, ಆದಿತ್ಯಮಂಡಲ, ಚಂದ್ರ ಮಂಡಲವೆಂಬ ಮಂಡಲತ್ರಯಂಗಳು ತಾನಿರ್ದಲ್ಲಿ, ತಾನೇ ಯಂತ್ರವಾಹಕನಾಗಿ, ಇವೆಲ್ಲವು ತನ್ನ ಲೀಲಾಮಾತ್ರದಲ್ಲಿ ಆಡಿಸುತ್ತಿಹನಲ್ಲದೆ ತಾನಾಡನು ನೋಡಾ ಅಪ್ರಮಾಣ ಕೂಡಲ ಸಂಗಮದೇವಾ.

(೭). ಶಿವನು ಜಗದ್ಭರಿತನೆಂದೆಂಬವರ ಬಾಯಲ್ಲಿ ಇಕ್ಕಿರೋ ಹನ್ನೆರಡು ವರ್ಷದ ಹಳೆಯ ಪಾದರಕ್ಷೆಯನು. ಅದೇನು ಕಾರಣವೆಂದಡೆ, ಶಿವನು ಜಗದ್ಭರಿತನೇ? ಅಲ್ಲ. ಶಿವನು ಜಗದ್ಭರಿತನಾದೊಡೆ, ಜೀವಕ್ಕೆ ಜೀವ ಭಕ್ಷಿಸಲೇತಕೋ? ಶಿವನು ಜಗದ್ಭರಿತನಾದೊಡೆ, ಪ್ರಾಣಕ್ಕೆ ಪ್ರಾಣ ವಿರೋಧಿಸಲೇತಕೋ? ಶಿವನು ಜಗದ್ಭರಿತನೆಂದರದೊಡೆ, ತಾನೇ ಗುರು, ತಾನೇ ಲಿಂಗ, ತಾನೇ ಜಂಗಮ, ತಾನೇ ಪಾದೋದಕ ಪ್ರಸಾದ ಕಾಣಾ ನಿಃಸಂಗ ನಿರಾಳ ಪ್ರಭುವೇ.

(೮). ಅದ್ವೈತವ ಸಾಧಿಸಿ ಸರ್ವವೂ ಶಿವನೆಂಬರು. ಎನಲಾಗದು. ಸರ್ವಕ್ಕೂ ಲಯುಗಮನ ಉಂಟು, ಶಿವಂಗಿಲ್ಲವಾಗಿ. ಯಂತ್ರವಾಹಕನೆಲ್ಲಿಯೂ ಪರಿಪೂರ್ಣನಾಗಿಹನೆಂದಡೆ ಎಲ್ಲವೂ ಶಿವನಾಗಬಲ್ಲವೇ? ಆಗಲರಿಯವು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ಪದ್ಮಪತ್ರ ಜಲದಂತೆ ಹೊದ್ದಿಯೂ ಹೊದ್ದದಂತಿಹನು.

---

## ಪರಮಾತ್ಮನು ಧರ್ಮಿಷ್ಠರಲ್ಲಿರುತ್ತಾನೆ.

(೧). ಅಣುರೇಣು ಮಹಾತ್ಮನೆಂಬರು. ಅಣುರೇಣು ತೃಣಕಾಷ್ಠದೊಳಗೆ ಇಪ್ಪನೆಂಬರು. ಅಮ್ಮೆನಯ್ಯ ನಾನೆನಲಮ್ಮೆನಯ್ಯ. ಶರಣ ಸನ್ನಿಹಿತನು. ಭಕ್ತಕಾಯ ಮಮಕಾಯನು. ದಾಸೋಹಪರಿಪೂರ್ಣನು. ಸದುಹೃದಯದಲ್ಲಿ ಸಿಂಹಾಸನವಾಗಿ ಅಗಲದಿಪ್ಪನು ಕಲಿದೇವಯ್ಯನು.

(೨). ವೇದದಲುಳ್ಳೊಡೆ ಪ್ರಾಣವಧೆಯುಪ್ಪುದೇ? ಶಾಸ್ತ್ರದಲುಳ್ಳೊಡೆ, ಸಮವಾಗದಿಪ್ಪುದೇ? ಪರ್ವತದಲುಳ್ಳೊಡೆ, ಹೋದವರು ಮರಳಿ ಬಪ್ಪರೇ? ನಿರ್ಬುದ್ಧಿಮಾನವರನೇನೆಂಬೆ? ಮನವಚನಕಾಯ ಶುದ್ಧವಾಗಿಪ್ಪಾತನ ಹೃದಯದಲ್ಲಿ ನಿಮ್ಮ ಕಂಡೆನೆಂದಾತ ಅಂಬಿಗರ ಚೌಡಯ್ಯ.

(೩). ಸರ್ಪನಲ್ಲಿ ವಿಷವಿದ್ದಿತ್ತೆಂದಡೆ, ಸರ್ವಾಂಗದಲ್ಲಿ ವಿಷತಪ್ಪದಿಪ್ಪುದೇ, ವಿಷವಿಪ್ಪಠಾವು ಒಂದಲ್ಲದೆ? ಪೃಥ್ವಿಯಲ್ಲಿ ನಿಕ್ಷೇಪವಿದ್ದಿತ್ತೆಂದಡೆ, ಅಲ್ಲಿ ಎಲ್ಲ ಠಾವಿನಲ್ಲಿ ಅಡಗಿಪ್ಪುದೇ? ಸಮಯಕುಲದಲ್ಲಿ ವಸ್ತು ಪರಿಪೂರ್ಣವೆಂದೊಡೆ, ಪಾಷಂಡಿಗಳಲ್ಲಿ ವಸ್ತು ಪರಿಪೂರ್ಣವಾಗಿಪ್ಪುದೆ? ಇಪ್ಪ ಸತ್ಯಸನ್ಮುಕ್ತರಲ್ಲಿಯಲ್ಲದೆ ಪರಮ ವಿರಕ್ತನಲ್ಲಿಯಲ್ಲದೆ. ನೆಲದಲ್ಲಿರ್ದ ನಿಧಾನವನರಿದು ಅಗಿವುದು. ವಿಷವಿದ್ದ ಬಾಯ ಮುಚ್ಚಿ ಹಿಡಿವುದು. ವಸ್ತುವಿದ್ದ ಠಾವ ನೆರೆಯರಿದು ಪೂಜಿಸುವುದು. ಭೂತಹಿತ ಅರಿವುಳ್ಳವರಲ್ಲಿ ಎರವಿಲ್ಲದ ಕೂಟವು. ಇಂತಿವು ಜಗದಲ್ಲಿ ಅರಿದು ಮಾಡುವ ಪರಿತೋಷ ಗಾರುಡೇಶ್ವರಲಿಂಗದಲ್ಲಿ ಎರಡಳಿದವನ ಕೂಟ.

(೪). ಸಕಲ ವಿಸ್ತಾರದ ರೂಹು ನಿಮ್ಮೊಳಡಗಿರ್ಪುದು. ಎನ್ನ ಮನದಲ್ಲಿ ಅಡಗಿರ್ಪಿರಿ. ಅದೆಂತೆಂದೊಡೆ, ಕರಿಕನ್ನಡಿಯೊಳಡಗಿರ್ಪಂತೆ. ನೀನು ಭಕ್ತಜನ ಮನೋವಲ್ಲಭನಾದಕಾರಣ, ಎನ್ನ ಮನದ ಕೊನೆಯಲ್ಲಿ ಅಡಗಿರ್ಪಿರಯ್ಯ ಅಖಂಡೇಶರಾ.

(೫). ಪೂಜಿಸಿ ಕಂಡಿಹೆನೆಂಬರೆ, ಪೂಜೆಗೆ ತನ್ಮಯ ಮೂರ್ತಿ ನೀನು. ನೆನಹಿನಲ್ಲಿ ಅನುಕರಿಸಿ ಕಂಡಿಹೆನೆಂಬರೆ, ಆ ನೆನಹಿಂಗೆ ಆತ್ಮಸ್ವರೂಪು ನೀನು. ಎಲ್ಲಾ ಎಡೆಯಲ್ಲಿ ಭಿನ್ನವ ಮಾಡಿ ಕಂಡಿಹೆನೆಂದಡೆ, ಅಣೋರಣೀಯಾನ್ ಮಹತೋಮಹಿಯಾನ್ ನೀನು. ಸತ್ಯವೆಲ್ಲಿದ್ದಿತ್ತು, ಅಲ್ಲಿ ತಪ್ಪ ದಿಪ್ಪೆ. ಎನ್ನಯ್ಯ ಪ್ರಿಯ ಇಮ್ಮಡಿನಿಃಕಳಂಕ ಮಲ್ಲಿಕಾರ್ಜುನನು ವಿಶ್ವಾಸವೆಲ್ಲಿಪ್ಪುದು ಅಲ್ಲಿ ತಪ್ಪ ದಿಪ್ಪನು.

(೬). ಮಣ್ಣನಿತ್ತು ನಿನ್ನ ಕಂಡಿಹೆನೆಂದರೆ ಜಗಭರಿತ ನೀನು. ಹೊನ್ನ ನಿತ್ತು ನಿನ್ನ ಕಂಡಿಹೆನೆಂದರೆ, ಹಿರಣ್ಯಮೂರ್ತಿ ನೀನು. ಹೆಣ್ಣನಿತ್ತು ನಿನ್ನ ಕಂಡಿ ಹೆನೆಂದರೆ, ತ್ರಿವಿಧಶಕ್ತಿಮೂರ್ತಿ ನೀನು. ಎನಗೇನು ನಿನಗಿತ್ತು ಕಾಂಬಕಾಣಿಕೆ? ನೀನು ಸಿಕ್ಕುವುದಕ್ಕೆ, ಕ್ರಿಯಲ್ಲಿ ನಿರುತ ಸದ್ಭಾವದಲ್ಲಿ ಶುದ್ಧ ಹಿಡಿದುದ ಬಿಡದೆ ಬಿಟ್ಟುದ ಹಿಡಿಯದೆ ನಿಶ್ಚಯವಾದ ನಿಜ ಜ್ಞಾನದಲ್ಲಿ ಬೆಚ್ಚಂತಿದ್ದರೆ, ಅಲ್ಲಿ ನೀನು ತಪ್ಪದಿಪ್ಪೆ ಎನ್ನಯ್ಯ ಪ್ರಿಯ ಇಮ್ಮಡಿನಿಃಕಳಂಕಮಲ್ಲಿಕಾರ್ಜುನಾ.

(೭). ಆಗಮಪುರುಷರಿರಾ, ನಿಮ್ಮ ಆಗಮ ಮಾಯವಾಗಿ ಹೋಯಿತ್ತಲ್ಲಾ. ವಿದ್ಯಾಪುರುಷರಿರಾ ನಿಮ್ಮ ವಿದ್ಯೆ ಅವಿದ್ಯೆಯಾಗಿ ಹೋದಲ್ಲಿ, ಬರು ಮುಖರಾಗಿರ್ದಿರಲ್ಲಾ. ವೇದ ಪುರುಷರಿರಾ, ನಿಮ್ಮ ವೇದ ಹೊಲಬುದಪ್ಪಿ ಹೋದಲ್ಲಿ ವೇದವೇ ದೈವವೆಂದು ಕೆಟ್ಟಿರಲ್ಲಾ. ಪುರಾಣ ಪುರುಷರಿರಾ, ನಿಮ್ಮ ಪುರಾಣ ವಿಚಾರಭ್ರಷ್ಟವಾಗಿ ಹೋದಲ್ಲಿ, ನೀವು ಒಡನೆ ಭ್ರಷ್ಟರಾಗಿ ಹೋದಿರಲ್ಲಾ ಶಾಸ್ತ್ರಪುರುಷರಿರಾ, ನಿಮ್ಮ ಶಾಸ್ತ್ರ ಮಹಾಪದದ ಹೊಲಲಲ್ಲಿ ಹೋದಲ್ಲಿ, ಭಕ್ತ ದೇಹಿಕ ದೇವನಂದರಿಯದೆ ಕೆಟ್ಟಿರಲ್ಲಾ. ಯತ್ರಮಹೇಶ್ವರ ಸ್ತತ್ರ ಶಿವನೆಂದು ಹೇಳಿತ್ತು ಮುನ್ನ. ಅಂತು ಭಕ್ತ ನಿತ್ಯ ಸತ್ಯ ಸನ್ನಿಹಿತ ಗುಹೇಶ್ವರಾ ನಿಮ್ಮ ಶರಣ.

(೮). ಆದಿಯಲ್ಲಿ ದೇವ ನಿಮ್ಮನಾರು ಬಲ್ಲರು? ವೇದಂಗಳು ಮುನ್ನ ಲತ್ತತ್ತಲರಿಯವು. ವೇದಿಗಳು ಪರಬ್ರಹ್ಮವೆಂದೆಂಬರು. ನಾದಬಿಂದುಕಳಾ ತೀತ ನೆಂದೆಂಬರು. ಸಾಧುಸಜ್ಜನ ಭಕ್ತರಿಚ್ಛೆಗೆ ಬಂದಿಪ್ಪೆಯಾಗೀಗ ದೇವನಾದೆ ಶಂಭುಜಕ್ಕೇಶ್ವರಾ.

(೯). ಹಸಿಯ ಕಪಾಲದಲ್ಲಿ ಉಂಬನೆಂದೆಂಬರು. ಅದು ಹುಸಿಯೋ, ಭಕ್ತನ ಮುಖದಲ್ಲಿ ಉಂಬನಾಗಿ. ಅಸ್ಥಿಗಳ ತೊಟ್ಟಹನೆಂದೆಂಬರು. ಅದು ಹುಸಿಯೋ,

ಭಕ್ತದೇಹಿಕ ದೇವನಾಗಿ. ಚರ್ಮವ ಹೊದ್ದಿಹನೆಂದೆಂಬರು, ಅದು ಹುಸಿಯೇ, ಆ ಭಕ್ತನಲ್ಲಿ ಸದಾ ಸನ್ನಿಹಿತನಾಗಿಪ್ಪನಾಗಿ. ಅದೆಂತೆಂದೊಡೆ, ಬ್ರಹ್ಮಾಂಡ ಪುರಾಣೆ, ನೈವೇದ್ಯಂ ಪುರುತೋನ್ಯಸ್ತಂ । ದರ್ಶನಾತ್ ಸ್ವೀಕೃತಂ ಮಯಾ । ರಸಾನ್ಸು ಭಕ್ತಸ್ಯ ಜಿಹ್ವಾಗ್ರೆ । ಅಶ್ನಾಮಿಕಮಲೋದ್ಭವಾ ॥ ಎಂದುದಾಗಿ, ವಾತುಲೇ, ಯಾವಂ ನಿರ್ವಹತೆ ಯಸ್ತು ಯಾವಜ್ಜೀವಪ್ರತಿಜ್ಞಯಾ । ಮನುಷ್ಯ ಚರ್ಮಣಾ ಬದ್ಧೋ । ಸರುದ್ರೋನಾತ್ರ ಸಂಶಯಃ ॥ ಎಂದುದಾಗಿ ಮಹಾಲಿಂಗ ಕಲ್ಲೇಶ್ವ ರಯ್ಯ ನಿಮ್ಮ ಸುಳುಹು ಪರಕಾಯ ಪ್ರವೇಶವಾಗಿಹುದು.

(೧೧). ಆಕಾರವಿಲ್ಲ, ನಿರಾಕಾರವಿಲ್ಲ, ಅಡಿ ಇಲ್ಲ, ಅಂತರವಿಲ್ಲ, ಎಡ ನಿಲ್ಲ, ಬಲನಿಲ್ಲ, ಹಿಂದಿಲ್ಲ, ಮುಂದಿಲ್ಲ, ಒಳಗಿಲ್ಲ, ಹೊರಗಿಲ್ಲ, ಈರೇಳರಲ್ಲಿಲ್ಲ, ಮಧ್ಯದಲ್ಲಿಲ್ಲ. ಮತ್ತೆಲ್ಲಿಹುದು ? ಎರಡಳಿದು ಒಂದಿಲ್ಲದೆ ನಿರಾಳದಲ್ಲಿಹುದು, ಎಂದ ನಯ್ಯ ಕಾಡಿನೊಳಗಾದ ಶಂಕರಪ್ರಿಯಚನ್ನಕದಂಬಲಿಂಗನಿರ್ವಾಯಪ್ರಭುವೇ.

**ಅರ್ಥ**:—ಪಂಚಭೂತದೇಹದ ಪ್ರಳಯಕ್ಕೆ ಒಳಗಾದ ಕಾರಣ, ಆ ದೇಹದಲ್ಲಿ ಪರಬ್ರಹ್ಮ ನೆಲೆಗೊಳ್ಳನೆಂಬುದೀಗ ಆಕಾರವಿಲ್ಲವೆಂಬ ಶಬ್ದಕ್ಕರ್ಥ. ಅಂತಪ್ಪ ದೇಹವು ಪ್ರಳಯಕ್ಕೆ ಒಳಗಾದ ಕಾರಣ ಆ ದೇಹಸಂಬಂಧವಾದ ಪ್ರಾಣಕ್ಕೆ ಪ್ರಳಯವಹುದೆಂದು ಆ ಪ್ರಾಣದಲ್ಲಿ ಪರಶಿವನು ನೆಲೆಗೊಳ್ಳನು ಎಂಬು ದೀಗ ನಿರಾಕಾರವಿಲ್ಲವೆಂಬ ಶಬ್ದಕ್ಕರ್ಥ. ಪಾತಾಳಲೋಕದಲ್ಲಿ ಶಿವನಿಪ್ಪನೆಂದಡೆ, ಅದು ಪ್ರಳಯಕ್ಕೆ ಒಳಗಾದ ಕಾರಣ ಆ ಪಾತಾಳಲೋಕದಲ್ಲಿ ಶಿವನಿಲ್ಲವೆಂಬು ದೀಗ ಅಡಿ ಇಲ್ಲವೆಂಬ ಶಬ್ದಕ್ಕರ್ಥ. ಸ್ವರ್ಗಲೋಕದಲ್ಲಿ ಶಿವನಿಪ್ಪನೆಂದಡೆ, ಅದು ಎತ್ತಲಾನುಕಾಲಕ್ಕೆ ಪ್ರಳಯವಹುದೆಂದು ಅಲ್ಲಿ ಪರಶಿವನು ನೆಲೆಗೊಳ್ಳನೆಂಬು ದೀಗ ಅಂತರವಿಲ್ಲವೆಂಬ ಶಬ್ದಕ್ಕರ್ಥ. ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಮೊದ ಲಾದ ಅಷ್ಟದಿಕ್ಕಿನಲ್ಲಿ ಶಿವನಿರ್ಪನೆಂದಡೆ, ಪ್ರಳಯುಕ್ಕೆ ಒಳಗಾದ ಕಾರಣ ಅಲ್ಲೆ ಲ್ಲಿಯೂ ಪರಬ್ರಹ್ಮನು ವಾಸವಾಗನೆಂಬುದೀಗ ಎಡನಿಲ್ಲ ಬಲನಿಲ್ಲವೆಂಬ ಶಬ್ದ ಕ್ಕರ್ಥ. ಕೃತಯುಗ ತ್ರೇತಾಯುಗ ದ್ವಾಪರ ಕಲಿಯುಗವೆಂಬ ಚತುರ್ವಿಧ ಮೊದಲಾದ ಅನಂತ ಯುಗಂಗಳಲ್ಲಿ ಶಿವನಿರ್ಪನೆಂದಡೆ, ಅದು ಪ್ರಳಯಕ್ಕೆ ಒಳ ಗಾದ ಕಾರಣ, ಅಲ್ಲೆಲ್ಲಿಯೂ ಶಿವನಿಲ್ಲವೆಂಬುದೀಗ ಹಿಂದಿಲ್ಲವೆಂಬ ಶಬ್ದಕ್ಕರ್ಥ. ಅಂತಪ್ಪ ಚತುರ್ವಿಧ ಯುಗಂಗಳಲ್ಲಿ ಎಂಬತ್ತು ನಾಲ್ಕು ಲಕ್ಷ ಯೋನಿದ್ವಾರದಿಂದ ಆತ್ಮನು ತಿರುತಿರುಗಿ ಬಳಲಿ ಕಡೆಯಲ್ಲಿ ಮನುಷ್ಯದೇಹವ ತಾಳಿ, ಆ ದೇಹದಿಂದ

ಗುರುಲಿಂಗ ಜಂಗಮವ ಇದಿರಿಟ್ಟು ಪೂಜಿಸಿ ಭಿನ್ನ ಫಲಪದವೆಂಬ ಚತುರ್ವಿಧ ಪದಂಗಳ ಪಡೆದರೇನು? ಅದು ಎತ್ತಲಾನು ಕಾಲಕ್ಕೆ ತೊಡೆದು ಹೋದ ಕಾರಣ ಅಲ್ಲಿಯೂ ಶಿವನಿಲ್ಲವೆಂಬುದೀಗ ಮುಂದಿಲ್ಲವೆಂಬ ಶಬ್ದಕ್ಕರ್ಥ. ಇಂತಪ್ಪ ಪಿಂಡ ಬ್ರಹ್ಮಾಂಡದ ಅಂತರದಲ್ಲಿ ಬಾಹ್ಯದಲ್ಲಿ ಶಿವನೆಂದಡೆ ಅವು ನಾಶವಾದ ಕಾರಣ ಅಲ್ಲಿಯೂ ಶಿವನಿಲ್ಲವೆಂಬುದೀಗ ಒಳಗಿಲ್ಲ ಹೊರಗಿಲ್ಲವೆಂಬ ಶಬ್ದಕ್ಕರ್ಥ. ಸಪ್ತ ಸಮುದ್ರದಲ್ಲಿ ಸಪ್ತ ದ್ವೀಪಾಂತರದಲ್ಲಿ ಅದಲ್ಲದೆ ಚತುರ್ದಶ ಭುವನಂಗಳಲ್ಲಿ ಶಿವನಿರ್ಪನೆಂದಡೆ ಅವು ಪ್ರಳಯಕ್ಕೆ ಒಳಗಾದ ಕಾರಣ ಅಲ್ಲಿಯೂ ಶಿವನಿಲ್ಲ ವೆಂಬುದೀಗ ಈರೇಳರಲ್ಲಿಲ್ಲವೆಂಬ ಶಬ್ದಕ್ಕರ್ಥ. ಸಪ್ತಸಾಗರ ಸಪ್ತದ್ವೀಪಾಂತರ ನಡುಮಧ್ಯದಲ್ಲಿ ಮಹಾಮೇರುಪರ್ವತವಿರ್ಪುದು. ಆ ಪರ್ವತದಲ್ಲಿಯೂ ಶಿವನಿರ್ಪ ನೆಂದಡೆ, ಅದು ಪ್ರಳಯವಾಗುವದು. ಅದೆಂತೆಂದೊಡೆ, ನವಖಂಡ ಭೂಮಂಡ ಲದ ಮೇಲೆ ಇರ್ಪುದು ರಜತಾದ್ರಿ ಪರ್ವತವು. ಆ ಸಕಲ ಬ್ರಹ್ಮಾಂಡವು ಪ್ರಳಯವಾದ ಕಾರಣ ಆ ಪರ್ವತ ಉಳಿಯಬಲ್ಲುದೇ? ಅದುಕಾರಣ ಅಲ್ಲಿಯೂ ಶಿವನಿಲ್ಲವೆಂಬುದೀಗ ಮಧ್ಯದಲ್ಲಿಲ್ಲವೆಂಬ ಶಬ್ದಕ್ಕರ್ಥ. ಇಂತೀ ಸ್ಥಾನಂಗಳಲ್ಲಿಯೂ ಶಿವನಿಲ್ಲ, ಬರಿಯ ಭ್ರಾಂತು. ಶಿವನಿಪ್ಪ ಠಾವು ಪೇಳ್ವೆವೆಂಬುದೀಗ ಮತ್ತೆಲ್ಲಿಹುದು ಎಂಬ ಶಬ್ದಕ್ಕರ್ಥ. ಶಿವಾಂಶಿಕನಾದ ಆತ್ಮಂಗೆ ಶಿವಕೃಪೆಯಿಂ ಸುಜ್ಞಾನೋದಯ ವಾಗಿ ಸಕಲ ಪ್ರಪಂಚ ನಿವೃತ್ತಿಯ ಮಾಡಿ ಶ್ರೀಗುರು ಕಾರುಣ್ಯವ ಹಡೆದು ಲಿಂಗಾಂಗ ಸಂಬಂಧಿಯಾಗಿ ಗುರುಶಿಷ್ಯ, ಲಿಂಗ ಅಂಗ, ದೇವಭಕ್ತನೆಂಬ ಉಭ ಯ ಭಾವ ನಷ್ಟವಾಗಿ ಅಹಂಪರಬ್ರಹ್ಮವೆಂಬ ಶಿವಾಹಂಕಾರವನಳಿದು ಇಹ ಲೋಕದ ಭೋಗ ಪರಲೋಕದ ಮೋಕ್ಷಾಪೇಕ್ಷೆ ಎಂಬ ಉಪಾಧಿರಹಿತನಾಗಿರ್ಪ ಶರಣರಲ್ಲಿ ಪರಬ್ರಹ್ಮವು ಮುಳ್ಳೂರಕ್ಕಿಂಬಿಲ್ಲದೆ ವಾಸವಾಗಿ ಹೆರೆ ಹಿಂಗದೆ ಇರ್ಪನು ಪರಶಿವಲಿಂಗವು ಎಂಬುದೀಗ ಎರಡಳಿದು ಒಂದಿಲ್ಲದೆ ನಿರಾಳದಲ್ಲಿ ಇಹುದು ಎಂಬ ಶಬ್ದಕ್ಕರ್ಥ.

(೧೧) ಕ್ರಿಯೆಯಲ್ಲಿ ಬಲ್ಲಿದರು, ಜ್ಞಾನದಲ್ಲಿ ಸಂಪನ್ನರೆಂದು ಹೇಳಲೇ ತಕ್ಕೋ? ನಡೆನುಡಿಯಲ್ಲಿ ಕಾಣಬಹುದು. ನಡೆನುಡಿ ಶುದ್ಧವಿಲ್ಲದವರಲ್ಲಿ ಇರ ಲೊಲ್ಲನು ನೋಡಾ, ಅಖಂಡೇಶ್ವರಾ.

(೧೨) ಭಕ್ತನ ಕಾಯವೇ ಶಿವನ ಕಾಯ. ಶಿವನ ಕಾಯವೇ ಭಕ್ತನ ಕಾಯ. ಶಿವಶಿವಾ, ಭಕ್ತ ಬೇರೆ ಶಿವ ಬೇರೆಯೇ? ಒಂದೇ ಕಾಣಿರಣ್ಣಾ.

ಅದೆಂತೆಂದೊಡೆ, ಭಕ್ತದೇಹಿಕದೇವ, ದೇಹಿಭಕ್ತನೆಂಬ ಶ್ರುತಿ ಘೋಗಳುವಕಾರಣ, ಭಕ್ತಂಗೂ ದೇವಂಗೂ ಕಾಯ ಒಂದೇ, ಪ್ರಾಣ ಒಂದೇ, ಎರಡೆಂಬ ಪರಿಭಾವಿಯ ನುಡಿಯಲಾಗದು ನಿಜಭಕ್ತರಾದವರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---

## ದೇವರು ಒಬ್ಬನೇ ಇದ್ದಾನೆ.

(೧). ಸ್ವಾಮಿ ನೀನು, ಶಾಶ್ವತನು ನೀನು. ಎತ್ತಿದೆ ಬಿರಿದು ಜಗವೆಲ್ಲರಿಯಲು, ಮಹಾದೇವ ಮಹಾದೇವ ಇಲ್ಲಿಂದ ಮೇಲೆ ಶಬ್ದವಿಲ್ಲ. ಪಶುಪತಿ ಜಗಕ್ಕೆ ಏಕೋದೇವ ಸ್ವರ್ಗ, ಮರ್ತ್ಯ, ಪಾತಾಳದೊಳಗೆ ಒಬ್ಬನೇ ದೇವ ಕೂಡಲಸಂಗಮದೇವ.

(೨). ಶೃತಿಅಗಮ್ಯ, ದ್ವಾದಿಶಾದಿತ್ಯನಪ್ರತಿಮತತ್ವನಪ್ರತಿಮಮಹಿಮಂಗೆ ಪ್ರತಿಯುಂಟೇ? " ಸೋಮಃ ಪವತೆ " ಎಂಬ ಶೃತಿಯನರಿದು, " ಶಿವಮೇಕೋ ದೇವ, ರುದ್ರನ ದ್ವಿತೀಯ " ನೆಂಬುವದು ಕಾಣಿರಣ್ಣಾ. ಕೂಡಲಸಂಗಮದೇವ ನಲ್ಲದೆ ಇಲ್ಲವೆಂದು ಎತ್ತಿದೆ ಬಿರಿದು ಜಗವೆಲ್ಲರಿಯಲು.

(೩). ವೇದ ಸ್ವಯುಂಭುವೆಂಬ ವಾದಿ ಕೇಳೆಲವೋ. ಏಕೋರುದ್ರನ ದ್ವಿತೀಯನೆಂದು ನಂಬುವದು ಕಾಣಿರಣ್ಣಾ. ಓಂ ದೇವಾ ಭೂಮಿ ಜನಯಂ ದೇವಾ, ಏಕೋದೇವ ರುದ್ರನ ದ್ವಿತೀಯನೆಂಬುದು ಕಾಣಿರಣ್ಣಾ. ಚಕಿತಮ ಭಧತ್ತೆ ಎಂದು ಶೃತಿ ಸಾರುತ್ತಿದ್ದಾವೆ. ಜಗದಕರ್ತ ಕೂಡಲಸಂಗಮದೇವ ನೊಬ್ಬನೇ ಕಾಣಿರಣ್ಣಾ.

(೪). ಕುಂಭ ಸಹಸ್ರ ಉದಕದೊಳಗೆ ಬಿಂಬಿಸಿ ತೋರುವ ಸೂರ್ಯ ನೊಬ್ಬನಲ್ಲದೆ, ಮತ್ತೆ ಹಲಬರುಂಟೇನಯ್ಯ? ಸಕಲ ದೇಹಗಳೊಳಗೆ ಭ್ರಮಿಸಿ ತುಂಬಿಪ್ಪ ಪರವಸ್ತು ನೀನೊಬ್ಬನಲ್ಲದೆ ಮತ್ತಾರನೂ ಕಾಣೆನಯ್ಯ ಅಖಂಡೇಶ್ವರಾ.

(೫). ಇಬ್ಬರು ಮೂವರು ದೇವರೆಂದು ಉಬ್ಬಿ ಮಾತನಾಡಬೇಡ. ದೇವನೊಬ್ಬನೇ ಕಾಣಿರೋ. ಇಬ್ಬರೆಂಬದು ಹುಸಿ ನೋಡಾ. ಕೂಡಲಸಂಗಮ ದೇವನೊಬ್ಬನೇ ಅಲ್ಲದೆ ಇಬ್ಬರಿಲ್ಲವೆಂದಿತ್ತುದಾ ವೇದವು.

(೬). ಇಬ್ಬರು ಮೂವರು ದೇವರೆಂದು ತಬ್ಬಿಬ್ಬಿಕೊಂಡು ನುಡಿಯ ಬೇಡ. ಒಬ್ಬನೇ ದೇವ ಕಾಣಿರಣ್ಣಾ. ಶಿವ ಏಕೋ ದೇವನೆಂದು ಸಾರುತ್ತಿವೆ, ಶೃತಿ ಪುರಾಣಂಗಳು. ಇದು ಕಾರಣ ಶಿವನಲ್ಲದೆ ದೈವವಿಲ್ಲವೆಂದರಿದ ಮಹೇಶ್ವರನ ಹೃದಯವಾಸವಾಗಿಪ್ಪ ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

(೭). ಶಿವಲೋಕಕ್ಕೆ ಬೇರೆ ಲೋಕವಿಲ್ಲ. ಶಿವಮಂತ್ರಕ್ಕೆ ಬೇರೆ ಮಂತ್ರವಿಲ್ಲ. ಜಗಕ್ಕೆ ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ ಕೂಡಲಸಂಗಮದೇವನೊಬ್ಬನೇ ದೈವವೆಂದು.

(೮). ಶಿವನಲ್ಲದೆ ದೇವರಿಲ್ಲ ನೋಡಾ ಎನಗೆ. ಶಿವಮಂತ್ರವಲ್ಲದೆ ಬೇರೆ ಮಂತ್ರವಿಲ್ಲ ನೋಡಾ ಎನಗೆ. ಇದು ಕಾರಣ, ಓಂ ನಮಶ್ಶಿವಾಯ ಓಂ ನಮಶ್ಶಿವಾಯ ಎಂಬ ಷಡಕ್ಷರ ಮಂತ್ರವನೆ ಜಪಿಸುತ್ತಿರ್ದೆನು, ಕಾಣಾ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

(೯). ಶಿವನೇ ಜಗತ್ರಯಕ್ಕೊಡೆಯನೆಂದುದು ವೇದ. ಉತ್ಪತ್ತಿ, ಸ್ಥಿತಿ, ಲಯ, ಕಾರಣವೆಂದುದು ವೇದ. "ಈಶ್ವರಸ್ಸರ್ವ ಜಗತ್ ಪ್ರಭುಃ ಪ್ರೇರಕೋ ವಿಶ್ವಭುಕ್" ಎಂಬ ಶೃತಿ. ಇದು ಕಾರಣ, ಕೂಡಲಸಂಗಮದೇವನೊಬ್ಬನೇ ದೇವನು.

(೧೦). ಯುಗಜುಗ ಪ್ರಳಯವನಂದೂ ಕಾಣೆ ಇಂದೂ ಕಾಣೆ. ಧಿಗಿಲು ಭುಗಿಲೆಂದುರಿ ಅಂದೂ ಕಾಣೆ ಇಂದೂ ಕಾಣೆ. ಕೂಡಲಸಂಗಮದೇವನಲ್ಲದೆ ತಲೆದೋರುವ ದೈವಂಗಳನಂದೂ ಕಾಣೆ, ಇಂದೂ ಕಾಣೆ.

(೧೧). ಆ ಪರಮನೆಂಬುದು ನಿಮ್ಮ ಭೇರಿ. ಬೇಡಿದ್ದ ನೀವನೆಂಬುದು ನಿಮ್ಮ ತಂಬಟ. ಜಗವಂದಿತ ಲೋಕದೊಡೆಯನೆಂಬುದು ನಿಮ್ಮ ಶಂಖ. ಶಿವನಲ್ಲದೆ ಪರದೈವವಿಲ್ಲೆಂಬುದು ನಿಮ್ಮ ಡಮರುಗ. ಶಿವ ಕೊಡನೆಂಬವರ ಬಾಯತ್ರಿಶೂಲದಲ್ಲಿರಿವ. ಬಳ್ಳೇಶ್ವರಲಿಂಗದ ಡಂಗುರ ಮೂಜಗದೊಳಯ್ಯ.

# ಬ್ರಹ್ಮ, ವಿಷ್ಣು, ರುದ್ರ ಮೊದಲಾದ ದೇವತೆಗಳು ದೇವರಲ್ಲ.

(೧). ಹುಟ್ಟಿಸುವಾತ ಬ್ರಹ್ಮನಾದೊಡೆ, ಅರ್ಚಿಸಲೇಕೋ ನಿಮ್ಮುವ? ರಕ್ಷಿಸುವಾತ ವಿಷ್ಣುವಾದೊಡೆ ಅರ್ಪಿಸಲೇಕೋ ನಿಮಗೊಂದುವ? ಹೊಂದಿಸುವಾತ ರುದ್ರನಾದೊಡೆ ಮಹತ್ವವ ನುಡಿಯಲೇಕೋ ನಿಮ್ಮವ? ಇಂತೀ ಲೀಲೆಗೆ ಆರಾದಡೂ ಆಗಲಿ, ನಾನಾ ಲೀಲೆಯವನಲ್ಲ, ಇದರ ಹೊಳಹು ನೀನೇ ನಿಃಕಳಂಕಚನ್ನಮಲ್ಲಿಕಾರ್ಜುನಯ್ಯಾ.

(೨). ರುದ್ರನೇ ದೇವರೆಂದು ಆರಾಧಿಸಿ, ಸಿಲೆಯೊಳಗೆ ಹೊರಟಿಗೊಂಡು ಕೆಟ್ಟರಲ್ಲ ಭಕ್ತಜನಂಗಳು. ವಿಷ್ಣುವೇ ದೇವರೆಂದು ಆರಾಧಿಸಿ ಮರನ ಸುತ್ತಿ ಕೆಟ್ಟರಲ್ಲ ಭೂಸುರಾದಿಗಳು. ಬ್ರಹ್ಮನೇ ದೇವರೆಂದಾರಾಧಿಸಿ ಬೆಂಕಿಯೊಳಗೆ ಬೆಂದರಲ್ಲ ಮರ್ತ್ಯಲೋಕದ ಮಹಾಜನಂಗಳು. ಧಾರುಣಿಯೊಳಗೆ ಹೇರಿನಕ್ಕಿ, ಲಳಿಗೆಎಣ್ಣೆ, ಹೂವು, ಕಾಯಿ, ಹಣ್ಣು ಮೊದಲಾದವನು ತಪ್ಪಸಾಧಿಸಿ, ತರಿಸಿಕೊಂಡುಂಬ ಇವುಗಳಿಗೆಲ್ಲಿಯದೋ ನೆಟ್ಟನೆ ದೇವತ್ವ? ಎನ್ನ ದೇವಂಗೆ ಇಂಥವರಂದ ಒಂದೂ ಇಲ್ಲ. ಕಾಲದೊಳಗಾದ ಪ್ರಳಯ ವಿರಹಿತ, ಕರ್ಮದೊಳಗಾದ ಚತುರ್ವಿಧ ಪದರಹಿತ, ಗಂಗೆ ವಾಳುಕಸಮರುದ್ರರೊಳಗಾದ ಬಂಧನವಿರಹಿತ, ಲೀಲೆಗೆ ಹೊರಗಾದ ಸ್ವಯಂಭುವಯ್ಯಾ ಎನ್ನದೇವ. ಇಂತಿವರೆಲ್ಲರೂ ಪ್ರತಿಷ್ಠೆಯನಾರಾಧಿಸಿ ಪ್ರಸನ್ನರಾದರಯ್ಯಾ. ಇಂತೀ ಪುಣ್ಯದ ಫಲ ಎನಗೊಂದೂ ಬೇಡ. ಇವರೆಲ್ಲ ಒಳಗಿರಲಿ ನಾ ಹೊರಗಯ್ಯಾ. ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಅಲಸಿದೆನಲಸಿದೆ, ನಿಮ್ಮ ಕಷ್ಟದ ಸೇವೆ ಏನಯ್ಯಾ. ಎನ್ನ ಹೊರಗಿರಿಸು. ನಿಮ್ಮೊಳಗಾದೆನಯ್ಯಾ ನಿಃಕಳಂಕಮಲ್ಲಿಕಾರ್ಜುನಯ್ಯಾ.

(೩). ಹುಟ್ಟಿಸುವಾತ ಬ್ರಹ್ಮನೆಂಬರು. ರಕ್ಷಿಸುವಾತ ವಿಷ್ಣುವೆಂಬರು. ಬ್ರಹ್ಮನು ತನ್ನ ಶಿರವನೇಕೆ ಹುಟ್ಟಿಸಿಕೊಳ್ಳಲಾರದೆ ಹೋದ? ವಿಷ್ಣು ತನ್ನ ಮಗನನೇಕೆ, ರಕ್ಷಿಸಿಕೊಳ್ಳಲಾರದಾದ? ದುಷ್ಟನಿಗ್ರಹ ಶಿಷ್ಟಪರಿಪಾಲಕ ನಮ್ಮ ಕೂಡಲಸಂಗಮದೇವಯ್ಯಾ.

(೪). ಬ್ರಹ್ಮ ನಿಮ್ಮ ಚರಣವನೊತ್ತುವ. ವಿಷ್ಣು ನಿಮ್ಮ ಶ್ರೀಹಸ್ತವನೊತ್ತುವ. ದೇವರಾಜ ನಿಮ್ಮ ಸತ್ತಿಗೆಯ ಹಿಡಿವ. ವಾಯು ನಿಮ್ಮ ಅಂಗಣವ

ಚೋಹರಿಸುವ. ಉಳಿದ ದೇವರ್ಕಳೆಲ್ಲ ಜಯ ಜಯ ಎಂಬರು. ಮಹಾದೇವ, ಮಹಾದೇವ, ಮಹಾಮಹಿಮ, ಇಂಥ ದೇವರೊಳರೇ? ಮರ್ದಯಂತೆ ಚರಣಾನಿ ಬ್ರಹ್ಮಪಾಣಿ ವಿಷ್ಣು ಸಮಾಯುತಂ। ಛತ್ರಂ ಧಾರಯತೆ ಇಂದ್ರಃ ವಾಯುಃ ಮಾರ್ಗಂ ವಿಶೋಧಯೇತ್, ಅನ್ಯಶ್ಚ ದೇವತಾಸ್ಸರ್ವೆ ಜಯ ಜೀಯ ಇತ್ಯಬ್ರುವತ್ ॥ ಇಂತೆಂಬ ವಚನವಿಡಿದು ನಿಮಗೆ ಸರಿ ಎಂಬವಂದಿರ ತಲೆಯ ಮೆಟ್ಟಿ ನಡೆವೆ. ಮಹಾದೇವ ಮಹಾದೇವ ಮಹಾಮಹಿಮ ಸೊಡ್ಡಳಾ.

(೫). ಒಬ್ಬ ಕೆಂಚ, ಒಬ್ಬ ಕರಿಕ, ಒಬ್ಬ ಶುದ್ಧ ಧವಳಿತನೆಂತಯ್ಯ, ಲಿಂಗವೇ? ಒಬ್ಬರಿಗೊಬ್ಬರು ಘನವೆಂಬರದೆಂತಯ್ಯ? ಒಬ್ಬರಿಗೊಬ್ಬರು ಹಿರಿಯರೆಂದೆಂಬರು. ಅದೆಂತಯ್ಯ? ಬ್ರಹ್ಮಂಗೆ ಪ್ರಳಯ, ವಿಷ್ಣುವಿಂಗೆ ಮರಣ ಉಂಟು, ನಮ್ಮ ಕೂಡಲಸಂಗಮದೇವಂಗೆ ಇಲ್ಲ.

(೬). ಮರೆಯಲಾಗದೆ ಹರಿಯ, ಮರೆಯಲಾಗದೆ ಬ್ರಹ್ಮನ? ಮರೆಯಲಾಗದೆ ಮೂವತ್ತು ಮೂರುಕೋಟಿ ದೇವರ್ಕಳ? ನಮ್ಮ ಕೂಡಲಸಂಗಮದೇವನ ಮರೆಯಬಹುದೇ?

(೭). ಬ್ರಹ್ಮಮೂರ್ತಿಗೂ ಶಿಲೆ ಒಂದೇ, ವಿಷ್ಣುಮೂರ್ತಿಗೂ ಶಿಲೆ ಒಂದೇ, ರುದ್ರಮೂರ್ತಿಗೂ ಶಿಲೆ ಒಂದೇ, ರೂಪಿನವತಾರ ಭಿನ್ನವಾಯಿತ್ತು. ಸೂಕ್ಷ್ಮ, ಸ್ಥೂಲ, ಕಾರಣದಂತೆ, ಕುಂಭ ಜಲಬಿಂಬದಂತೆ ಇನ್ನಾರನಹುದೆಂಬೆ, ಇನ್ನಾರನಿಲ್ಲವೆಂಬೆ? ಬ್ರಹ್ಮನ ಕಾಲು, ವಿಷ್ಣುವಿನ ಕೈ, ರುದ್ರನ ಕಣ್ಣು, ಈಶ್ವರನ ತಲೆ, ಸದಾಶಿವನ ಪ್ರಾಣ ಇವಾದಲ್ಲಿ ಇವು ಸಮಯ. ಈ ಪಂಚಕೋಶಕ್ಕಾಧಾರ ಪರಮ ಜ್ಞಾನ. ಇದ ಭೇದಿಸಲರಿಯದೆ ವಾದವ ಮಾಡಿದರೆಲ್ಲರು. ನಾದಬಿಂದುಗಳಾತೀತನ ನರಿ, ಅಲೇಕನಾದ ಶೂನ್ಯ ಕಲ್ಲಿನೊಳಗಾದವನಾ.

(೮). ಬಯಲು ಮೂರ್ತಿಯಾಗಿನಿಂದನೊಬ್ಬ ಶರಣ. ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ. ಆತನ ಶಾಂತಿಸ್ಥೈರಣೆಯಿಂದ ಹುಟ್ಟಿದಾತ ವಿಷ್ಣು. ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರ. ಈ ಮೂರು ಪೀಠವಂತಿರಲಿ. ಆ ಶರಣನನರಿದು ಶರಣೆನುತಿರ್ದನು ಕೂಡಲಸಂಗಮದೇವಾ.

**ಅರ್ಥ:**—ನಿಃಕಲನಿರವಯ ಪರಿಪೂರ್ಣ ಚೈತನ್ಯ ಜ್ಞಾನ ಪ್ರಭಾ ಬೆಳಗೇ ಮೂರ್ತಿಯಾಗಿ ನಿಂದಿರ್ದ ಮಹಾಲಿಂಗವು ತನ್ನ ಸ್ವಲೀಲೆಯಿಂದ ನಿರವಯ

ವಾಗಿಪ್ಪುದಾಗಿ ಆ ಲಿಂಗವೆಂಬುದೀಗ ಬಯಲೆಂಬ ಶಬ್ದಕ್ಕರ್ಥ. ಅಂತಪ್ಪ ನಿರವಯಲಿಂಗವೇ ಪಂಚಸಾದಾಖ್ಯ ಮುಖವನ್ನೈದಿ ಮೂರ್ತಿಯಾಗಿ ಸದಾಶಿವನೆಂಬ ಶರಣನಾದನೆಂಬುದೀಗ ಬಯಲು ಮೂರ್ತಿಯಾದನೊಬ್ಬ ಶರಣನೆಂಬ ಶಬ್ದಕ್ಕರ್ಥ. ಅಂತು ಅಖಂಡ ಚಿತ್‌ಚೈತನ್ಯ ಪ್ರಭಾಬೆಳಗೇ ಅಂಗಕರ ಚರಣಂಗಳಾಗಿ ಮೂರ್ತಿಯಾದ ಸದಾಶಿವನು ತನ್ನುಪಾವಸ್ಥೆಯ ಮಾಡುವ ಉಪಾಸಕರಿಲ್ಲದಿರಬಾರದೆಂಬ ರಾಜಸಾಹಂಕಾರ ತಲೆದೋರಿ ಜಗತ್ ಸೃಷ್ಟಿಗೆ ಬುದ್ಧಿಯಾದ ಪ್ರಭಾವಜ್ಞಾನಮಂ ಬೇರ್ಪಡಿಸಿ ಆ ಬ್ರಹ್ಮ ಮೊದಲಾದ ಆತ್ಮರುಗಳ ಜಗಸೃಷ್ಟಿಯಾಯಿತ್ತೆಂಬುದೀಗ ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮನೆಂಬ ಶಬ್ದಕ್ಕರ್ಥ. ಅಂತು ಸದಾಶಿವನು ಸೇವ್ಯನಪ್ಪ ರಾಜಸ ಬುದ್ಧಿತೋರೆ ಚಿಂತಿಸಿದ ಚಿತ್ತುವಿನಪ್ರಭಾಕಿರಣ ರಜವೇ ಸೇವಕರಪ್ಪ ಆತ್ಮರುಗಳಾದರು. ಆತ್ಮರುಗಳಿಗೆ ಭೋಗಸುಖಶಾಂತಿಯನಿತ್ತು ನಡಿಸುವ ಸ್ಥಿತಿಧರ್ಮವಂ ಚಿಂತಿಸಿ ಕರುಣ ಶಾಂತಿ ದಯಾಚಿತ್ತನಾದ ಸಾತ್ವಿಕ ಗುಣಬುದ್ಧಿದೋರಿ ಶಿವನ ಚಿತ್ತಿನಲ್ಲಿ ಹೊಳೆಯಲು ಆ ಹೊಳೆದ ಚಿಂತಿನ ಛಾಯೆ ಬುದ್ಧಿಯಂ ಬೇರ್ಪಡಿಸಿ ಆತ್ಮರುಗಳ ದೇಹಕರಣ ಇಂದ್ರಿಯ ವಿಷಯ ಸುಖಭೋಗಂಗಳಾಗಿ ಮಿಥ್ಯಾ ಸ್ಥಿತಿ ಕರ್ಮಂಗಳನುಳ್ಳ ಮಾಯಾಸ್ವರೂಪಮಪ್ಪ ವಿಷ್ಣುವಾಗಲು ಆ ಮಾಯಾಮಿಥ್ಯದ ಸ್ಥಿತಿಧರ್ಮವಳಿಯದಂತೆ ಆ ಮಾಯೆಗೆ ಗುಣತ್ರಾಣ ತಾನಾಗಿ ಸ್ಥಿತಿಯ ನಡಿಸುತ್ತಿಹ ಶಾಂತಿಯನುಳ್ಳ ಶಿವನೆಂಬುದೀಗ ಆತನ ಶಾಂತಿ ಸ್ಥೈರಣೆಯಿಂದ ಹುಟ್ಟಿದಾತ ವಿಷ್ಣುವೆಂಬ ಶಬ್ದಕ್ಕರ್ಥ. ಅಂತು ಶಿವನಿಂದಾದ ಆತ್ಮರುಗಳಿಗೆ ಶಿವಭಾವ ತಲೆದೋರದೆ ದೇಹಸುಖಭೋಗಂಗಳಿಂದ ಶಿವನ ಮರೆದು ಅಹಂಕರಿಸಿದ ಕಾಲಕಾಮ ದಕ್ಷದೈತ್ಯರು ಮೊದಲಾದ ದುಷ್ಟಾತ್ಮರುಗಳ ಕಂಡು ಶಿವನು ಚಿತ್ತಿನಲ್ಲಿ ಕೋಪಿಸಿದ ಕೋಪಾಗ್ನಿ ಜ್ಞಾನಮಂ ಬೇರ್ಪಡಿಸಿ ಲಯೋ ಧರ್ಮವನುಳ್ಳ ರುದ್ರಸ್ವರೂಪವಾಯಿತ್ತೆಂಬುದೀಗ, ಆತನ ಕೋಪಕ್ರೋಧದಿಂದ ಹುಟ್ಟಿದಾತ ರುದ್ರನೆಂಬ ಶಬ್ದಕ್ಕರ್ಥ. ಇಂತು ಶಿವನು ಜಗತ್ಸೃಷ್ಟಿಸ್ಥಿತಿ ಸಂಹಾರಂಗಳಂ ಮಾಡುವ ಕರ್ತೃ ತಾನಾಗಿ ತಾನಲ್ಲದಂತಿಪ್ಪ ಚದುರಿನಿಂದ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿಗುಣಸ್ವರೂಪರಂ ಹುಟ್ಟಿಸಿ ಅಧಿಕಾರವನಿತ್ತು ತಾನಲ್ಲದಂತಿಹನು ಸದಾಶಿವನು. ಆ ಸದಾಶಿವನು ತನ್ನ ಲೀಲಾಸ್ವತಂತ್ರತೆಯಿಂದ ಅಂತು ತ್ರಿಗುಣಾತ್ಮರಾದ ತ್ರಿಮೂರ್ತಿಗಳಂ ಬಿಟ್ಟು ಆ ಸದಾಶಿವಮೂರ್ತಿಯೊಬ್ಬನೇ ಸೇವ್ಯನೆಂದರಿದು ಸೇವಕನಾಗಿ ಶರಣುವೊಕ್ಕು

ಬದುಕಿದೆನೆಂಬುದೀಗ ಈ ಮೂರು ಪೀಠವಂತಿರಲಿ, ಆ ಶರಣನನರಿದು ಶರಣೆನು ತಿರ್ದೆನು ಕೂಡಲಸಂಗಮದೇವಾ ಎಂಬ ಶಬ್ದಕ್ಕರ್ಥ.

## ಅಷ್ಟತನು ಮೂರ್ತಿಗಳು ದೇವರಲ್ಲ.

(೧). ಅಷ್ಟತನು ಮೂರ್ತಿಗಳು ದೇವರೆಂಬ ಭ್ರಷ್ಟಭವಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದಡೆ, ಪೃಥ್ವಿ ದೇವರಾದಡೆ ಅಪ್ಪುವಿನ ಪ್ರಳಯದಲ್ಲಿ ಕರಗುವದೇ? ಅಪ್ಪು ದೇವರಾದರೆ, ಅಗ್ನಿಯ ಪ್ರಳಯದಲ್ಲಿ ಅರತು ಹೋಗುವದೇ? ಅಗ್ನಿ ದೇವರಾದರೆ, ವಾಯುವಿನ ಪ್ರಳಯದಲ್ಲಿ ಹಾರಿಹೋಗು ವದೇ? ವಾಯು ದೇವರಾದರೆ, ಆಕಾಶದ ಪ್ರಳಯದಲ್ಲಿ ಲಯುವಪ್ಪುದೇ? ಆಕಾಶ ದೇವರಾದಡೆ, ಆತ್ಮನಲ್ಲಿ ಅಡಗಿಹೋಗುವದೇ? ಆತ್ಮ ದೇವರಾದಡೆ, ದ್ವಂದ್ವ ಕರ್ಮಂಗಳಲ್ಲಿ ಜನನಮರಣಂಗಳಲ್ಲಿ ಬಂಧನಪಡುವನೇ? ಚಂದ್ರ ಸೂರ್ಯರು ದೇವರಾದಡೆ, ಭವಭಂಧನದಲ್ಲಿ ಸಿಲ್ಕಿ ತೊಳಲಿ ಬಳಲುವರೇ? ಇದು ಕಾರಣ, ಅಷ್ಟತನುಗಳನೆಂತು ದೇವರೆಂಬೆನು? ದೇವ, ದೇವ, ಮಹಾಮಹಿಮ ಎನ್ನೊಡೆಯ ಅಖಂಡೇಶ್ವರನೊಬ್ಬನೇ ದೇವರಲ್ಲದೆ, ಉಳಿದವರೆಲ್ಲ ಹುಸಿ ಎಂಬೆ.

(೨). ಅಷ್ಟತನು ಮೂರ್ತಿಗಳ ಲಿಂಗವೆಂದೆಂಬಿರಿ. ಇವರಾರೆಂದು ನಾವರಿಯೆವಯ್ಯಾ. ಆದಿಯ ಮಗನತೀತ, ಅತೀತನಮಗನಾಕಾಶ, ಆಕಾಶನ ಮಗ ವಾಯು, ವಾಯುವಿನ ಮಗ ಅಗ್ನಿ, ಅಗ್ನಿಯ ಮಗ ಅಪ್ಪು, ಅಪ್ಪುವಿನ ಮಗ ಪೃಥ್ವಿ, ಪೃಥ್ವಿಯ ಮಗ ಸೂರ್ಯ, ಸೂರ್ಯನ ಮಗ ಚಂದ್ರ, ಚಂದ್ರನ ಮಗ ದೇಹ, ದೇಹನ ಮಗನಾತ್ಮ, ಇಂತೀ ಅಷ್ಟತನುವೆಲ್ಲಕ್ಕೆಯೂ ಉತ್ಪತ್ತಿ ಯುಂಟು. ಅಜಾತಜನಿತ ನಮ್ಮ ಕೂಡಲಸಂಗಮದೇವಂಗೆ ಮಾತಾಪಿತರಿಲ್ಲ.

(೩). ಅಷ್ಟತನು ಮೂರ್ತಿ ಲಿಂಗವೆಂದೆಂಬ ಕಷ್ಟದ ಮಾತು ಕೇಳ ಲಾಗದು. ಪೃಥ್ವಿಯಂತೆ ಕಠಿಣವುಳ್ಳಾತನೇ? ಅಪ್ಪುವಿನಂತೆ ಓಟಭರಿತವುಳ್ಳಾ ತನೇ? ಅಗ್ನಿಯಂತೆ ತೃಣಕಾಷ್ಠವಿಲ್ಲದಿರ್ದಡೆ, ನಂದುವಾತನೇ? ವಾಯುವಿ ನಂತೆ, ಚಲನೆಯುಳ್ಳಾತನೇ? ಆಕಾಶದಂತೆ, ಬಚ್ಚಬರಿಯ ಬಯಲಾದಾತನೇ? ಚಂದ್ರ ಸೂರ್ಯರಂತೆ, ದಿವಾರಾತ್ರಿಗಳ ನಡಿಸುವಾತನೇ? ಜೀವಾತ್ಮನಂತೆ ಜನನಮರಣವುಳ್ಳಾತನೇ? ಇದು ಕಾರಣ ಕೂಡಲಚನ್ನಸಂಗಯ್ಯಾ, ನೀನು ನೀನಂತೆ, ಇವರೆಲ್ಲರೂ ನೀನಿರಿಸಿದಂತೆ.

(೪). ಅಷ್ಟತನು ಮೂರ್ತಿ ಶಿವನೆಂಬ ಕಷ್ಟಜೀವಿಗಳ ಮಾತ ಕೇಳಲಾಗದು. ನಾನೇನೆಂಬೆನಯ್ಯ? ಯುಗಜುಗಪ್ರಳಯವಾಹಲ್ಲಿ, ಧರೆ ಜಲದಲ್ಲಿ ಅಡಗಿತ್ತು. ಜಲ ಅಗ್ನಿಯಲ್ಲಿ ಅಡಗಿತ್ತು. ಅಗ್ನಿ ವಾಯುವಿನಲ್ಲಿ ಅಡಗಿತ್ತು. ವಾಯು ಆಕಾಶದಲ್ಲಿ ಅಡಗಿತ್ತು. ಆಕಾಶ ಅತೀತದಲ್ಲಿ ಅಡಗಿತ್ತು. ಅತೀತ ಆದಿಯೊಳಗಡಗಿತ್ತು. ಆದಿ ಅನಾದಿಯೊಳಗಡಗಿತ್ತು. ಅನಾದಿ ನಿಜದೊಳಗಡಗಿತ್ತು. ಇಂತೀ ಅಷ್ಟತನುಗಳು ಒಂದರೊಳಗೊಂದು ಅಡಗುವಲ್ಲಿ ಒಂದರಿಂದೊಂದು ಹುಟ್ಟುವಲ್ಲಿ ಎಂದಳಿದರೆಂಬುದ ಬಲ್ಲರೇ, ನೀವು ಹೇಳಿರೇ. ಎಂದು ಹುಟ್ಟಿದರೆಂಬುದ ನೀವು ಬಲ್ಲರೆ ಹೇಳಿರೇ. ಹುಟ್ಟಿದನಳಿದನೆಂಬ ಕಷ್ಟವಚನವ ನುಡಿಯಲಾಗದು. ಇಂತೀಯಷ್ಟತನುವೆಲ್ಲವು ನಮ್ಮ ಮಹಾಘನಲಿಂಗ ಹುಲಿಗೆರಿಯ ಸೋಮೇಶ್ವರ ಆಗೆಂದಡಾದವು. ಬೇಡೆಂದಡೆ ಮಾದವು.

(೫). ಪೃಥ್ವಿ ಅಪ್ಪು ತೇಜ ವಾಯು ಆಕಾಶ ಚಂದ್ರ ಸೂರ್ಯ ಆತ್ಮನೆಂಬ ಅಷ್ಟತನುಗಳು ಶಿವನ ಅಧಿಷ್ಠಾತೃವಾದವೆಂದಡೆ ಅಷ್ಟತನುಗಳು ಶಿವನಾಗಲರಿಯವು. ಮತ್ತೆ ಶಿವನ ಬಿಟ್ಟು ಬೇರೆ ತೋರಲರಿಯವು. ಅಷ್ಟತನುಗಳೆಲ್ಲ ಸೋಪಾಧಿಕವಲ್ಲದೆ ನಿಜತನುವಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಂಗೆ ಅಷ್ಟತನುಮೂರ್ತಿ ಎಂಬುವು ಉಪಚಾರವು.

---

## ಬೇರೆ ಕಿರುಕುಳ ದೈವಗಳು ದೇವರಲ್ಲ.

(೧). ಅರಗು ತಿಂದು ಕರಗುವ ದೈವ, ಉರಿಯು ಕಂಡರೆ, ಮುರುಟುವ ದೈವ, ಎಂತು ಸರಿ ಎಂಬೆನಯ್ಯ? ಅವಸರ ಬಂದರೆ, ಮಾರುವ ದೈವವನೆಂತು ಸರಿ ಎಂಬೆನಯ್ಯ? ಅಂಜಿಕೆ ಬಂದರೆ, ಹೂಳುವ ದೈವವನೆಂತು ಸರಿ ಎಂಬೆನಯ್ಯ? ಸಹಜ ಭಾವ, ನಿಜೈಕ್ಯ, ಸ್ಥಿರರೂಪ, ನಿರ್ವಿಕಾರ, ನಿರಂಜನ ಕೂಡಲಸಂಗಮದೇವನೊರ್ವನೇ ದೇವ ಕಾಣಿರೋ.

(೨). ಮಾರಿಕವ್ವೆಯನೆಂತು ಕೊರಳಲ್ಲಿ ಕಟ್ಟಿಕೊಂಬರು? ಕಾಲಬಂದರೆ ಮಾರಿಕೊಂಡು ತಿಂಬರು. ಕಾಲಬಂದರೆ ಒತ್ತೆಯನಿಟ್ಟುಕೊಂಬರಯ್ಯ. ಮಾರುವೋಗನೊತ್ತೆವೋಗ ನಮ್ಮ ಕೂಡಲಸಂಗಮದೇವಾ.

(೩). ಉಣಲುಡಲು ಮಾರಿಕವ್ವೆಯಲ್ಲದೆ, ಕೊಲ್ಲಲು ಕಾಯಲು ಮಾರಿಯೇ? ತನ್ನ ಮಗನ ಜವನೊಯ್ವಲ್ಲಿ, ಅದೆತ್ತ ಹೋದಳೋ ಮಾರಿಕವ್ವೆ? ಇವ ಕಾವರೇ? ನಮ್ಮ ಕೂಡಲಸಂಗಯ್ಯನಲ್ಲದೆ, ಮತ್ತೊಂದು ದೈವವಿಲ್ಲ, ದೈವವಿಲ್ಲ.

(೪). ಆವಾಗಲೂ ಲೋಗರ ಮನೆಯ ಬಾಗಿಲ ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು ಹೋಗೆಂದರೆ ಹೋಗವು. ನಾಯಿಂಗೆ ಕರಕಷ್ಟ. ಲೋಗರ ಬೇಡಿಕೊಂಡುಂಬ ದೈವಂಗಳು ಕೆಲವು ತಾವೇನ ಕೊಡುವವೋ? ಏನ ಬೇಡಿದ್ದನೀವ ನಮ್ಮ ಕೂಡಲಸಂಗಮದೇವಾ.

(೫). ಹಾಳು ಮೊರಡಿಗಳಲ್ಲಿ, ಊರ ದಾರಿಗಳಲ್ಲಿ, ಕೆರೆ, ಭಾವಿ, ಹೂಗಿಡ ಮರಂಗಳಲ್ಲಿ, ಗ್ರಾಮದ ಮಧ್ಯದಲ್ಲಿ, ಚೌಪಥಪಟ್ಟಣಪ್ರವೇಶದಲ್ಲಿ, ಹಿರಿಯಾಲದ ಮರದಲ್ಲಿ ಮನೆ ಮಾಡಿ, ಕರವೆಮ್ಮೆಯ, ಹಸುಗೂಸು, ಬಸುರಿ, ಬಾಣತಿ, ಕುಮಾರಿತಿ, ಕೊಡಗೂಸೆಂಬವರ ಹಿಡಿದುಂಬ, ತಿರಿದುಂಬ, ಬೀರಯ್ಯ, ಖೇಚರ, ಗಾವಿಲ, ಅಂತರಬೆಂತರ, ಕಾಳಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರು ಮಡಿಕೆಗೆ ನಮ್ಮ ಕೂಡಲಸಂಗಮದೇವರಿಗೆ ಶರಣೆಂಬುದೊಂದು ದೊಣ್ಣೆ ಸಾಲದೇ?

(೬). ಮಡಿಕೆಯೇ ದೈವವು, ಮರದಲ್ಲಿಯು ದೈವವು, ಬೀದಿಯ ಕಲ್ಲೇ ದೈವವು ಹಣತೆ ದೈವವು ಬಿಲ್ಲುನಾರಿ ದೈವವು ಕಾಣಿರಯ್ಯ. ಕೊಳಗನೇ ದೈವವು ಗಿಣಿಲು ದೈವವು, ಕಾಣಿರಯ್ಯ. ದೈವ ದೈವವೆಂದು ಕಾಲಿಡಲಿಂಬಿಲ್ಲವು. ದೇವನೊಬ್ಬನೇ ಕೂಡಲಸಂಗಮದೇವಾ.

(೭). ಅರಳಿಯ ಮರ, ವಿಷ್ಣುಕಾಂತಿ, ಬನ್ನಿ, ಮುತ್ತುಕ, ತುಳಸಿ, 'ಹರಿ' 'ಹರಿ' ಎಂದು ಹೊಡಹೊಮ್ಮುವಿರಿ. ಎಲ್ಲಿ ಭೋ, ಎಲ್ಲಿ ಭೋ, ನಿಮ್ಮ ಹೊಡೆವಡುವ ದೈವಂಗಳೆಲ್ಲ ಗಿಡುಮರನಾಗಿ ಹೋದವಲ್ಲ! ನಿಮ್ಮ ನಡೆ ಎಲ್ಲ ಅನಾಚಾರ. ನಿಮ್ಮ ನುಡಿ ಎಲ್ಲ ಶಿವದ್ರೋಹ, ಇವಂದಿರ ಗಡಣ ಬೇಡೆಂದ ನಮ್ಮ ಅಂಬಿಗರಚೌಡಯ್ಯ.

(೮). ಅಂಗದ ಮೇಲೆ ಲಿಂಗಸಾಹಿತ್ಯವಾದ ಬಳಿಕ, ಮರಳಿ ಅನ್ಯ ದೈವಂಗಳನಾರಾಧಿಸುವ ಕುನ್ನಿಗಳು ನೀವು ಕೇಳಿ ಭೋ, ವಿಷ್ಣುವೇ ದೈವವೆಂದು ಆರಾಧಿಸಿದ ಬಲಿಗೆ ಬಂಧನವಾಯಿತ್ತು. ವಿಷ್ಣುವೇ ದೈವವೆಂದು ಆರಾಧಿಸಿದ

ಕರ್ಣನ ಕವಚ ಹೋಯಿತ್ತು. ವಿಷ್ಣುವೇ ದೈವವೆಂದು ಆರಾಧಿಸಿದ ನಾಗಾರ್ಜುನನ ಸಿರ ಹೋಯಿತ್ತು. ಅದಂತಿರಲಿ. ಬ್ರಾಹ್ಮಣನೇ ದೈವವೆಂದು ಆರಾಧಿಸಿದ ಗೌತುಮಂಗೆ ಗೋವಧೆ ಯಾಯಿತ್ತು. ಬ್ರಾಹ್ಮಣನೇ ದೈವವೆಂದು ಆರಾಧಿಸಿದ ದಕ್ಷಂಗೆ ಕುರಿದಲೆಯಾಯಿತ್ತು. ಮೈಲಾರನೇ ದೇವರೆಂದಾರಾಧಿಸಿದಾತನು ಕೊರಳಲ್ಲಿ ಕವಡೆಯ ಕಟ್ಟಿ ನಾಯಾಗಿ ಬೊಗಳುತ್ತಿರ್ಪ. ಭೈರವನೇ ದೇವರೆಂದಾರಾಧಿಸಿದವರು ಕೊರಳಲ್ಲಿ ಕವಡೆಯ ಕಟ್ಟಿ ಕುರುಳ ಬೆರಳ ಕಡಿದಿಕ್ಕಿ ಬಾಹಿರರಾದರು. ಮಾಯಿ ರಾಣಿಯೇ ದೈವವೆಂದು ಆರಾಧಿಸಿದಾತನು ಕೊರಳಿಗೆ ಕವಡೆಯ ಕಟ್ಟಿ, ತಲೆಯಲ್ಲಿ ಕೆರಹ ಹೊತ್ತು, ಬೇವಿನ ಸೊಪ್ಪನುಟ್ಟು, ಲಜ್ಜೆಯ ನೀಗಿದ. ಈ ಬಿನುಗು ದೈವಂಗಳ ಭಕ್ತಿ ಬಣಗು ನಾಯಿ ಒಣಗಿದೆಲುವ ಕಚ್ಚಿಕೊಂಡು ಕಂಡಕಂಡೆಡೆಗೆ ಹರಿದಂತಾಯಿತ್ತು ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

---

## ಮೋಕ್ಷ.

( ೧ ). ಆಕಾಶದಲ್ಲಿ ತೋರುವ ಇಂದ್ರಚಾಪವಡಗುವದಕ್ಕೆ ಆಕಾಶವೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇ ಅಯ್ಯ? ಗಾಳಿಯಿಂದ ತೋರಿದ ಸುಳಿಗಾಳಿಯುಡಗುವದಕ್ಕೆ ಗಾಳಿಯೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇ ಅಯ್ಯ? ಅಗ್ನಿಯಲ್ಲಿ ತೋರಿದ ಕಿಡಿಗಳು ಅಡಗುವದಕ್ಕೆ ಅಗ್ನಿಯೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯ ಉಂಟೇ ಅಯ್ಯ? ಅದಿ ಅನಾದಿಯಿಂದ ತ್ರತ್ತವಾದ ಪರವಸ್ತುವಿನಲ್ಲಿ ರೂಪಿಸಿ ತೋರಿದನು ನಿಜೈಕ್ಯವಡಗುವದಕ್ಕೆ ಆ ಪರವಸ್ತುವೇ ಆಶ್ರಯವಲ್ಲದೆ, ಬೇರೆ ಮತ್ತೆ ಆಶ್ರಯವುಂಟೇ ಅಖಂಡೇಶ್ವರಾ?

( ೨ ). ಏನೆಂದೆಂಬೆನೇನೆಂದೆಂಬೆನೊಂದೆರಡಾದುದ? ಏನೆಂದೆಂಬೆನೇನೆಂದೆಂಬೆನೆರಡೊಂದಾದುದ? ಅವಿರಳಘನ ಲಿಂಗೈಕ್ಯವ ಮಹದಾನಿ ಕೂಡಲ ಸಂಗಮದೇವ ತಾನೇ ಬಲ್ಲ.

( ೩ ). ಚಿನ್ನದಿಂದಲಾದ ಹಲವು ಭಂಗಾರವಳಿದು ಕರಗಿದರೆ, ಮುನ್ನಿನ ಚಿನ್ನವೇ ಆದಂತೆ, ಉದಕದಿಂದಾದ ವಾರಿಕಲ್ಲು ಕರಗಿ ಮುನ್ನಿನ ಉದಕವೇ ಆದಂತೆ, ಚಿನ್ಮಯ ವಸ್ತುವಿನಿಂದ ಉದಯವಾದ ಚಿತ್ ಸ್ವರೂಪನಾದ ಶರಣನು

ಆ ಚಿನ್ಮಯ ಪರವಸ್ತುವನೇ ಬೆರಸಿ, ಪರಮ ಶಿವಯೋಗಿಯಾದನಯ್ಯಾ ಮಹಾ ಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೪). ಕನ್ನಡಿಯ ನೋಡುವಲ್ಲಿ ಪ್ರತಿಬಿಂಬ ಕಾಣಿಸುತಿರ್ಪುದು. ಆ ನೋಟ ಮರಳಿದಲ್ಲಿ ಪ್ರತಿರೂಪ ನಿಜರೂಪದಲ್ಲಿ ಅಡಗಿದಂತೆ, ಅನುಪಮ ಬ್ರಹ್ಮ ದಲ್ಲಿ ನೆನಹುದೋರಿ ಚಿತ್ತೆನಿಸಿತ್ತು. ಆ ಚಿತ್ತಿನಿಂದ ಚಿನ್ನಾದ, ಚಿದ್ಬಿಂದು, ಚಿತ್ಕಳೆ ಗಳು ಆ ಮೂಲ ಚಿತ್ತು ಸ್ವರೂಪವಾದ ಶರಣಂಗೆ ದೇಹ ಪ್ರಾಣಾತ್ಮಗಳಾಗಿ ಅಂಗಕ್ಕೆ ಪದಾರ್ಥಂಗಳಾಗಿರ್ಪವು. ಆ ಪದಾರ್ಥವು ಲಿಂಗಮುಖಕ್ಕೆ ಸಮರಸ ವೇದಿಸಿ, ಆ ಚಿತ್ತು ಚಿದ್ಘನವ ಬೆರೆಯುಲು ಮುನ್ನಿನಂತೆ ಐಕ್ಯವಾಯಿತ್ತು ಅಖಂಡೇಶ್ವರಾ.

(೫). ಜಲದೊಳಗಣ ಬೊಬ್ಬುಳಿಕೆ ಜಲಗಟ್ಟಿಗೊಂಡಲ್ಲಿ ಅಡಗುವ ತೆರನ ಬಲ್ಲಡೆ ಬಲ್ಲ. ಮಹೇಂದ್ರಜಾಲವು ಮರೀಚಿಕಾಜಲವು ಎಲ್ಲಿ ಹುಟ್ಟಿ ಎಲ್ಲಿ ಅಡಗುವ ತೆರನ ಬಲ್ಲಡೆ ಬಲ್ಲ. ಮಹಾನಾದ ಸುನಾದ ಸುನಾದಕ್ಕೆ ಕೈಗೈದು ಸುನಾದವು ಮಹಾನಾದದೊಡನೆ ಮಥನಿಸಿ ಇವೆರಡರ ಪ್ರಾಣ ಚೈತನ್ಯ ಒಂದಾಗಿ ಪುಟ್ಟಿ ಅಡಗುವ ಭೇದವ ಬಲ್ಲನಾಗಿ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ಎಂದುದಾಗಿ.

**ಅರ್ಥ:**—ನೀರು ಗುಳ್ಳೆಯು ಉದಕದಲ್ಲಿಯೇ ಹುಟ್ಟಿ ಅಲ್ಲಿಯೇ ಅಡ ಗುವದೆಂಬ ವಿಚಾರವ ಬಲ್ಲಡೆ, ತನ್ನ ನಿಜವ ಬಲ್ಲವ. ಇಂದ್ರಜಾಲವು ಮಹೇಂದ್ರ ಜಾಲವು ಕಿರಣಜಲವು ಬಯಲಲ್ಲೇ ಹುಟ್ಟಿ ಆ ಬಯಲಲ್ಲಿ ಅಡಗುವವೆಂಬ ವಿಚಾ ರವ ಬಲ್ಲಡೆ, ಆತ ತನ್ನ ನಿಜವ ಬಲ್ಲವ. ಮಹಾನಾದವನುಳ್ಳ ಸುನಾದ ಚೈತನ್ಯ ಸ್ವರೂಪನಾದ ಶರಣನು ತನ್ನಂಗದಲ್ಲಿ ಮಹಾನಾದವನುಳ್ಳ ಪರಬ್ರಹ್ಮವೇ ಇಷ್ಟ ಲಿಂಗವಾಗಿ ಸಂಬಂಧಿಸಿಕೊಂಡು ಸುನಾದ ಚೈತನ್ಯವುಳ್ಳ ಶರಣನು ಮಹಾನಾದ ವನುಳ್ಳ ಲಿಂಗವನು ಪೂಜಿಸಿ ಅಂಗಲಿಂಗಕ್ಕೆ ಪ್ರಾಣಚೈತನ್ಯವಾದುದೇ ಭಕ್ತಿ. ಆ ಭಕ್ತಿಯಿಂದ ಅಂಗವು ಲಿಂಗದಲ್ಲಿ ಸಮರಸವಾಗಿ, ಆ ಶರಣ ಲಿಂಗವೆರಡು ಒಂದೇ ವಸ್ತುವಿನಲ್ಲಿ ಹುಟ್ಟಿ, ಒಂದೇ ವಸ್ತುವಿನಲ್ಲಿ ಅಡಗುವ ವಿಚಾರವ ಬಲ್ಲನಾಗಿ ಆತ ಅಂತರಂಗ ಬಹಿರಂಗದಲ್ಲಿ ವಸ್ತು ಭಿನ್ನವಿಲ್ಲ ಇಲ್ಲ ಎಂಬುದರ್ಥ.

(೬). ಆಕಾಶದಲ್ಲಿ ಗುಡಿಗಿ ಅಡಗುವ ಭೇದವ, ಮಿಂಚಿನ ಹರಿತ ಸಂಚಾರವ, ಅದರ ಸಂಚವನಂಜಿಸುವ ಭೇದವ ಮುಂಚ ಬಲ್ಲಡೆ, ವಸ್ತುವಿಪ್ಪೆಡೆಯ ಸಂಚವ ಬಲ್ಲರೆಂಬೆ, ನಿಷ್ಕಳಂಕ ಮಲ್ಲಿಕಾರ್ಜುನಾ.

**ಅರ್ಥ:**—ಮೇಘದಲ್ಲಿ ಹುಟ್ಟಿದ ಗುಡುಗು ಆ ಮೇಘದಲ್ಲಿ ಅಡಗುವ ಹಾಗೆ, ಮಿಂಚಿನಲ್ಲಿ ಹುಟ್ಟುವ ಪ್ರಕಾಶವು, ಆ ಮಿಂಚಿನಲ್ಲಿ ಅಡಗುವ ಹಾಗೆ, ಅದರ ಕೂಟವ ಕೀಳಲ್ಪಡಿಸಿ, ಭಕ್ತನಾಗಿಯಾದರೂ ವಿರಕ್ತನಾಗಿಯಾದರೂ ವೃತಸ್ಥನಾಗಿಯಾದರೂ ತಾನಿಂದ ಸ್ಥಳದಲ್ಲಿ ಮೀರಿ ಆಚರಿಸಬಲ್ಲಡೆ, ಬ್ರಹ್ಮದ ನಿಲುಗಡೆಯನ್ನು ಆ ಬ್ರಹ್ಮದಲ್ಲಿ ಕೂಡುವ ಕೂಟವನು ಬಲ್ಲವರೆಂಬೆನೆಂಬುದರ್ಥ.

(೭). ಅಯ್ಯಾ ಚಂದ್ರನಿಂದಾದ ಕಲೆ ಚಂದ್ರನ ಬೆರಸಿ ಚಂದ್ರನಾದಂತೆ, ಸೂರ್ಯನಿಂದಾದ ಕಿರಣ ಸೂರ್ಯನ ಬೆರಸಿ ಸೂರ್ಯನಾದಂತೆ, ಅಗ್ನಿಯಿಂದಾದ ಕಾಂತಿ ಅಗ್ನಿಯ ಬೆರಸಿ ಅಗ್ನಿಯಾದಂತೆ, ದೀಪದಿಂದಾದ ಬೆಳಗು ದೀಪವ ಬೆರಸಿ ದೀಪವಾದಂತೆ, ಸಮುದ್ರದಿಂದಾದ ನದಿ ಸಮುದ್ರವ ಬೆರಸಿ ಸಮುದ್ರವೆಯಾದಂತೆ ಪರಶಿವ ನಿರವಯಶೂನ್ಯಮೂರ್ತಿ ಸಂಗನಬಸವಣ್ಣನ ಚಿದ್ರೂಪು ರುಚಿ ತೃಪ್ತಿಯೊಳಗೆ ಶುದ್ಧ ಸಿದ್ಧ ಪ್ರಸಿದ್ಧವಾಗಿ ಜನಿಸಿ ಮತ್ತೆಂದಿಸಂತೆ ಗುಹೇಶ್ವರಲಿಂಗ ಪ್ರಭು ಎಂಬ ಉಭಯ ನಾಮವಳಿದು ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಅವಿರಳ ಪರಶಿವ ನಿರವಯ ಶೂನ್ಯಮೂರ್ತಿ ಸಂಗನಬಸವಣ್ಣನ ಚಿದ್ರೂಪು ರುಚಿ ತೃಪ್ತಿ ಪಾದೋದಕ ಪ್ರಸಾದವಪ್ಪುದು ತಪ್ಪದು ನೋಡಾ ಚನ್ನಬಸವಣ್ಣ.

(೮). ಹೊಸಮುತ್ತಿನ ಸುಪ್ಪಾಣಿಯುಂತೆ ಲಿಂಗೈಕ್ಯವು. ಸ್ಫಟಿಕದ ಘಟದೊಳಗಣ ಪ್ರಭೆಯುಂತೆ ಲಿಂಗೈಕ್ಯವು. ವಾಯುವಿನ ಸಂಚಲದ ನಿಲವಿನಂತೆ ಲಿಂಗೈಕ್ಯನ ಸಂಬಂಧವದು ಗುಹೇಶ್ವರಾ.

**ಅರ್ಥ:**—ಮುತ್ತಿನ ಚಿಪ್ಪಿನ ಸಂಗದಿಂದ ಉದಕವು ಬಲಿದು ಮುತ್ತಾಗಿ ಮತ್ತೆ ಉದಕವಾಗದು ಹಾಗೆ ದೇಹಿಯಾಗಿರ್ದ ಆತ್ಮನು ಲಿಂಗಸಂಗದಿಂದ ಲಿಂಗ ಸ್ವರೂಪವಾದ ಬಳಿಕ ಮರಳಿ ದೇಹಿಯಾಗನೆಂಬುದೀಗ ಹೊಸಮುತ್ತಿನ ಸುಪ್ಪಾಣಿಯಂತೆ ಲಿಂಗೈಕ್ಯವು ಎಂಬ ಶಬ್ದಕ್ಕರ್ಥ. ಭೂಮಿಯ ಸಂಗದಿಂದ ಮಾಸಿರ್ದ ಸ್ಫಟಿಕಾಂದವು ಒಪ್ಪವಿಟ್ಟಲ್ಲಿ ತನ್ನ ನಿರ್ಮಲದ ಪ್ರಕಾಶವೆಯಾಗಿಪ್ಪುದು ಹೇಗೆ ಹಾಗೆ ಶಿವಾಂಶಿಕನಾದ ಆತ್ಮನು ದೇಹಸಂಗದಿಂದ ತನ್ನ ನಿಜವ ಮರೆದಿರ್ದಲ್ಲಿ ಜ್ಞಾನಕ್ರಿ

ಘಟಿಸಲು ಜೀವಭಾವವಳಿದು ಆತ್ಮನೆಲ್ಲ ಚಿತ್‌ಪ್ರಭಾಲಿಂಗವೆಯಾಗಿರ್ಪನೆಂಬುದೀಗ ಸ್ಫಟಿಕದ ಘಟದೊಳಗಣ ಪ್ರಭೆಯಂತೆ ಲಿಂಗೈಕ್ಯವು ಎಂಬ ಶಬ್ದಕ್ಕರ್ಥ. ಆಕಾಶದಿಂದ ಉದಯಿಸಿದ ವಾಯು ಆಕಾಶದೊಳಗೆ ಚರಿಸಿ ಆಕಾಶದೊಳಗೆ ಅಡಗುವಂತೆ, ಲಿಂಗದಿಂದುದಿಸಿದ ಶರಣನು ಲಿಂಗಾಂಗ ಸಂಯೋಗಿಯಾಗಿ ಲಿಂಗದೊಳಗೆ ಚರಿಸಿ ಲಿಂಗದೊಳೈಕ್ಯನಪ್ಪುದು. ಅಂತು ಲಿಂಗಾಂಗದ ಐಕ್ಯವೆಂಬುದು ಅಭೇದ್ಯಸಂಬಂಧವೆಂಬುದೀಗ ವಾಯುವಿನ ಸಂಚಲದ ನಿಲವಿನಂತೆ ಲಿಂಗೈಕ್ಯನ ಸಂಬಂಧವದು ಎಂಬ ಶಬ್ದಕ್ಕರ್ಥ.

(೯). ಪೃಥ್ವಿಯಡಗುವದಕ್ಕೆ ಅಪ್ಪುವೇ ಆಶ್ರಯವಾಗಿಪ್ಪುದು. ಅಪ್ಪು ಅಡಗುವದಕ್ಕೆ ಅಗ್ನಿಯೇ ಆಶ್ರಯವಾಗಿಪ್ಪುದು, ಆ ಅಗ್ನಿಯಡಗುವದಕ್ಕೆ ವಾಯುವೇ ಆಶ್ರಯವಾಗಿಪ್ಪುದು. ವಾಯು ಅಡಗುವದಕ್ಕೆ ಆಕಾಶವೇ ಆಶ್ರಯವಾಗಿಪ್ಪುದು. ಆಕಾಶವಡಗುವದಕ್ಕೆ ಆತ್ಮನೇ ಆಶ್ರಯನಾಗಿಪ್ಪುದು. ಆತ್ಮ ಅಡಗುವದಕ್ಕೆ ಆದಿಯೇ ಆಶ್ರಯವಾಗಿಪ್ಪುದು. ಆದಿ ಅಡಗುವದಕ್ಕೆ ಅನಾದಿಯೇ ಆಶ್ರಯವಾಗಿಪ್ಪುದು. ಅನಾದಿ ಅಡಗುವದಕ್ಕೆ ಶೂನ್ಯವೇ ಆಶ್ರಯವಾಗಿಪ್ಪುದು. ಶೂನ್ಯ ಅಡಗುವದಕ್ಕೆ ನಿರವಯವೇ ಆಶ್ರಯವಾಗಿಪ್ಪುದು. ನಿರವಯ ಅಡಗುವದಕ್ಕೆ ನಿಜವೇ ಆಶ್ರಯವಾಗಿಪ್ಪುದು. ನಿಜವು ಅಡಗುವದಕ್ಕೆ ಅಖಂಡೇಶ್ವರಾ, ನಿಮ್ಮ ಪರಮ ಹೃದಯಕಮಂಡಲವೇ ಆಶ್ರಯವಾಗಿರ್ಪುದಯ್ಯಾ.

(೧೦). ವಾಯು ಹಸಿದು ಆಪೋಷಣವ ಕೊಂಬರೆ, ಎಡೆಬಡಿಸುವ ತೆರಪಿನ್ನಾವುದು? ಆಕಾಶ ಉರಿಗಂಜಿದಡೆ, ಸೇರುವ ನೆಳಲಿನ್ನಾವುದು? ಭೂಮಿ ಭಯಕಂಜಿ ಓಡಿದರೆ, ಸೇರುವ ಠಾವಿನ್ನಾವುದು? ಇಂತಿವೆಲ್ಲವೂ ಪರಿಪೂರ್ಣ ತನ್ನಲ್ಲಿ ತೋರಿದುದು ತನ್ನಲ್ಲಿಯೇ ಲೀಯವಲ್ಲದೆ ಬೇರೆ ಭಿನ್ನಭಾವವಿಲ್ಲ. ಆತನ ಶರಣನಿರವು. ಆತನೆಲ್ಲಿದ್ದರೂ ಅಜಾತಮಯನೆಂದು ಗೂಡಿಸಗುಹ್ಮೇಶನಾಥನೊಡೆಯ ಅಗಮ್ಯೇಶ್ವರಲಿಂಗವು ತೋರಿಯೂ ತೋರದ ನಿಲವು.

(೧೧). ಬಯಲರೂಪ ಮಾಡಬಲ್ಲಾತನೇ ಶರಣ, ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ, ಆ ಬಯಲರೂಪ ಮಾಡಲರಿಯದವರ ಎಂತು ಶರಣನೆಂಬೆ? ಆ ರೂಪಬಯಲ ಮಾಡಲರಿಯದವರನೆಂತು ಲಿಂಗಾ

ನುಭಾವಿ ಎಂಬೆ? ಈ ಉಭಯವನೊಂದಾಗಿಯರಿದಡೆ, ನಿಮ್ಮಲ್ಲಿ ತೆರಹುಂಟೇ ಕೂಡಲಸಂಗಮದೇವಾ ?

(೧೨). ಭಕ್ತಿಮುಕ್ತ್ಯಾಂಗನೆಯ ಚಿತ್ತಗಳ ಸಮತೆಯನು ಬಿತ್ತರಿಸದೆ ನಾನು ಕಂಡು ಕಂಡು ಮತ್ತೆ ಮನಸಿನ ಜಲವು ಹತ್ತೆಸಾರದ ಮುನ್ನ ತತ್ವಮಸಿಯಾದೆನೈ ಯೋಗಿನಾಥಾ.

**ಅರ್ಥ**:—ಒಂದೇ ಪರವಸ್ತು ಲಿಂಗಾಂಗವೆರಡಾದಲ್ಲಿ ಆ ಪರವಸ್ತುವಿನ ಸಮೇತವಾಗಿರ್ದ ಚಿತ್‌ಶಕ್ತಿಯೂ ಶಕ್ತಿಭಕ್ತಿಗಳೆಂದೆರಡಾಯಿತ್ತು. ಅಂತು ಲಿಂಗದಲ್ಲಿ ಶಕ್ತಿ ಎನಿಸಿತ್ತು. ಅಂಗದಲ್ಲಿ ಭಕ್ತಿ ಎನಿಸಿತ್ತು. ಅಂತಾದ ಲಿಂಗದ ಶಕ್ತಿಯೇ ಮುಕ್ತ್ಯಾಂಗನೆ ಎನಿಸಿ ಶರಣನೆಂಬ ಅಂಗದ ಭಕ್ತ್ಯಾಂಗನೆಗೆ ಒಲಿದು ಶಕ್ತಿಭಕ್ತಿಗಳೆರಡೂ ಒಂದಾಗಿ ತಾನೇ ಜ್ಞಾನಕ್ರಿಯಗಳೆನಿಸಿ ಶರಣನಂಗದಲ್ಲಿ ಪ್ರಭಾವಿಸಿ ಕಾಣಿಸುತ್ತಿರ್ದರೆಂಬುದೀಗ ಭಕ್ತಿಮುಕ್ತ್ಯಾಂಗನೆಯ ಚಿತ್ತಗಳ ಸಮತೆಯನು ಕಂಡು ಕಂಡು ಎಂಬ ಶಬ್ದಕ್ಕರ್ಥ. ಅಂತು ಜ್ಞಾನಕ್ರಿಸಮ್ಮತವಾಗಿ ತನ್ನಂಗದಲ್ಲಿ ನೆಲೆಗೊಂಡ ಶರಣನು ವಾಗದ್ವೈತಿಯಾಗದೆ ಮರಳಿ ಮನದವಿಕಾರ ಎಡೆಗೊಳ್ಳದ ಮೊದಲೆ ಜ್ಞಾನಕ್ರಿಯೆ ಅಂಗದಲ್ಲಿ ನೆಲೆಗೊಂಡು ತೋರಿದಾಕ್ಷಣವೇ ಲಿಂಗಾಂಗಸಂಬಂಧಿಯಾಗಿ ಲಿಂಗವಾದ ಶರಣನೆಂಬುದೀಗ ಬಿತ್ತರಿಸದೆ ನಾನು ಕಂಡು ಕಂಡು ಮತ್ತೆ ಮನಸಿನ ಜಲವು ಹತ್ತೆಸಾರದ ಮುನ್ನ ತತ್ವಮಸಿಯಾದೆನೈ ಯೋಗಿನಾಥಾ, ಎಂಬ ಶಬ್ದಕ್ಕರ್ಥ.

(೧೩). ಒಡಲುಗೊಂಡು ಒಡಲುವಿಡಿಯದೆ ಒಡಲಿಲ್ಲದ ನಿಜವ ಬೆರಸಲವ್ರೋ. ನರರು ಸುರರು ಕಿನ್ನರರು ಖೇಚರರು ಪರಮ ಪದವಿಯ ನರಿಯದ ಕಾರಣ ಭವದೊಳಗೆ ಸಿಲುಕಿದರು, ಕೂಡಲಚನ್ನಸಂಗನ ನಿಜರೂಪನೇ ಬೆರಸಿರೋ ಮುಮುಕ್ಷುಗಳಿರಾ.

**ಅರ್ಥ**:—ಪರಮಪದವೆಂದರೆ ಮಹಾಘನಲಿಂಗಪದ. ಅಂತಪ್ಪ ಮಹಾಘನಲಿಂಗಪದವೇ ತನ್ನ ನಿಜ ಚೈತನ್ಯವೆಂದು ಅರಿದು ದೇಹೋಹಂ ಭಾವವಳಿದು ತನ್ನಾತ್ಮಾಂಗ ಮೊದಲಾದ ದೇಹಕರಣಂಗಳೆಲ್ಲ ಲಿಂಗವೆಂದು ಲಿಂಗಕ್ಕೆ ಅರ್ಪಿಸಿ ಲಿಂಗದೊಳ ಬೆರೆದ ಮಹಾಘನಲಿಂಗವೆಯಪ್ಪ ಲಿಂಗಾಂಗಸಂಯೋಗದ ಮರ್ಮವನರಿಯದೆ ಸರ್ವ ದೇವತಾದಿಗಳು ಮೊದಲಾದವರೆಲ್ಲರೂ ವೇದಾಂತ ಸಿದ್ಧಾಂತ

ಮೊದಲಾದ ಬಹುಮಾರ್ಗವಿಡಿದು ಭವಕ್ಕೀಡಾದರು. ಅದು ಕಾರಣ ಮೋಕ್ಷಕ್ಕೆ ಲಿಂಗಾಂಗಸಂಬಂಧಿಯಾದಲ್ಲದಿಲ್ಲವೆಂದು ಮೋಕ್ಷಾಪೇಕ್ಷವರಿದು ಲಿಂಗಾಂಗ ಸಂಯೋಗವ ಸಾಧಿಸಿಕೊಳ್ಳಿ ಎಂದು ಶರಣ ಚನ್ನಬಸವಣ್ಣ ನಿರೂಪಿಸಿದರೆಂಬುದೀ ವಚನದ ತಾತ್ಪರ್ಯಾರ್ಥ.

(೧೪). ಸಕಲೇಂದ್ರಿಯಂಗಳಲ್ಲಿ ವಿಕಾರಿಸುವ ಮನವ ಸೆಳೆದುನಿಂದಾತನೇ ಸುಖಿ. ಪಂಚೇಂದ್ರಿಯಂಗಳಿಚ್ಛೆಯಲ್ಲಿ ಕೀಳುಮನಂಗೊಂಡು ಸುಳಿವಾತ ದುಃಖಿ. ಮನಸ್ಸು ಬಹಿರ್ಮುಖವಾಗಲು ಮಾಯಾಪ್ರಪಂಚಿ. ಮನವಂತರ್ಮುಖವಾದರೆ ಅವಿರಳಜ್ಞಾನಿ. ಮನವು ಮಹದಲ್ಲಿ ನಿಂದಿರಲಾತವಮುಕ್ತನು. ಮನೋಲಯವಾದರೆ ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಅಭೇದ್ಯನು.

(೧೫). ಮುಂಚಿದೆನಯ್ಯ ಪರಬ್ರಹ್ಮವ. ಮುಂಚಿದೆನಯ್ಯ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ಪದವಿಯ. ಮುಂಚಿದೆನಯ್ಯ ನಾಚಯ್ಯ ಪ್ರಿಯಮಲ್ಲಿನಾಥಾ ನಿಮ್ಮಿಂದ.

(೧೬). ಅಯ್ಯಾ ಅನಂತಕೋಟಿ ಬ್ರಹ್ಮ ವಿಷ್ಣು ರುದ್ರ ದೇವರ್ಕಳು ಮನಮುನಿಗಳೆಲ್ಲ ಭವಸಂಸಾರಕ್ಕೊಳಗಾದರು ನೋಡಾ. ಅದೆಂತೆಂದೊಡೆ, ಬ್ರಹ್ಮನು ಉತ್ಪತ್ತಿ ಎಂಬ ಸಂಸಾರಕ್ಕೊಳಗಾದ. ವಿಷ್ಣು ಸ್ಥಿತಿ ಎಂಬ ಸಂಸಾರಕ್ಕೊಳಗಾದ. ರುದ್ರ ಲಯವೆಂಬ ಸಂಸಾರಕ್ಕೊಳಗಾದ. ಈಶ್ವರ ತಿರೋಧಾನವೆಂಬ ಸಂಸಾರಕ್ಕೊಳಗಾದ. ಸದಾಶಿವ ಅನುಗ್ರಹವೆಂಬ ಸಂಸಾರಕ್ಕೊಳಗಾದ. ಮನುಮುನಿಗಳು ಹಠಯೋಗವೆಂಬ ಸಂಸಾರಕ್ಕೊಳಗಾದರು. ದೇವದಾನವರೆಲ್ಲ ಅಷ್ಟೈಶ್ವರ್ಯವೆಂಬ ಸಂಸಾರಕ್ಕೊಳಗಾದರು. ಇಂತೀ ಭವಸಂಸಾರಕ್ಕೊಳಗಾಗದೆ, ನಮ್ಮ ಶರಣಗಣಂಗಳೆಲ್ಲ ತಮ್ಮ ತಾವರಿದು ತಮ್ಮ ನಿಜ ಚಿದ್ಬೆಳಗ ರಚಿಸಿ, ಗುಹ್ಯಾಲಂಪಟ ಜಿಹ್ವಾಲಂಪಟದಲ್ಲಿ ಬೀಳದೆ, ಸತ್ತು ಚಿತಾನಂದ ನಿತ್ಯ ಪರಿಪೂರ್ಣವೆಂಬ ಅವಿರಳಾನಂದ ಬೆಳಗಿನೊಳಗೆ ಸಂತೃಪ್ತರಾಗಿ ಭವರೋಗ ವೈದ್ಯ ಶರಣಾಗತ ರಕ್ಷಾಮಣಿಗಳೆಂದು ಸಕಲ ಶಾಸ್ತ್ರಾಗಮಂಗಳಿಂದ ಹೊಗಳಿಸಿ ಅಯೋನಿಸಂಭವರೆನಿಸಿ ಪಾವನಾರ್ಥವಾಗಿ ತಮ್ಮ ನಿಜ ಚಿದ್ಬೆಳಗಿನೊಳಗೆ ಅಂಕುರಿಸಿ, ನಿಜ ಚಿದ್ಬೆಳಗಿನೊಳಗೆ ಬೆಳೆದು, ತಮ್ಮ ನಿಜ ಚಿದ್ಬೆಳಗಿನೊಳಗೆ ಮತ್ತೊಂದಿನಂತೆ ಬಯಲೊಳಗೆ ಮಹಾ ಬಯಲಾದರು ನೋಡಾ, ಅಪ್ರಮಾಣ ಕೂಡಲ ಸಂಗಮದೇವಾ.

# ಮಾಯೆಯನ್ನು ಹೋಗಲಾಡಿಸುವದು.

(೧). ವಾರಿ ಬಲಿದು ವಾರಿಕಲ್ಲಾದಂತೆ, ಶೂನ್ಯವೇ ಸ್ವಯಂಭುವಾಯಿತ್ತು. ಆ ಸ್ವಯಂಭು ಲಿಂಗದಿಂದ ಆಯಿತ್ತು ಮೂರ್ತಿ. ಆ ಮೂರ್ತಿಯಿಂದ ಆಯಿತ್ತು ವಿಶ್ವೋತ್ಪತ್ತಿ. ಆ ವಿಶ್ವೋತ್ಪತ್ತಿಯಿಂದಾಯಿತ್ತು ಸಂಸಾರ. ಆ ಸಂಸಾರದಿಂದಾಯಿತ್ತು ಮರವೆ. ಆ ಮರವೆ ಎಂಬ ಮಹಾ ಮಾಯೆ ವಿಶ್ವವ ಮುಸುಕಿದಲ್ಲಿ ನಾ ಬಲ್ಲೆ ಬಲ್ಲಿದರೆಂಬ ಅರು ಹಿರಿಯರೆಲ್ಲ ತಾಮಸಕ್ಕೊಳಗಾಗಿ ಮೀನಕೇತನನ ಬಲೆಗೆ ಸಿಕ್ಕಿ ಮಾಯೆಯ ಬಾಯ ತುತ್ತಾದರಲ್ಲಾ ಗುಹೇಶ್ವರಾ.

(೨). ವೇದ ವೇದಾಂತಂಗಳಿಂದ ಸಿದ್ಧ ಸಿದ್ಧಾಂತಂಗಳಿಂದ ಎಲ್ಲಿ ನೋಡಿದಡೂ ವಿಚಾರ ಒಂದೇ ಭೇದ. ಅರಿದಲ್ಲಿ ಮಲಕ್ಕೆ ಹೊರಗು, ಮರೆದಲ್ಲಿ ಮಲಕ್ಕೊಳಗು. ಅರಿವುಮರವುನಿಂದಲ್ಲಿ ಸದಾಶಿವಮೂರ್ತಿಲಿಂಗದ ಬೆಳಗು.

(೩). ಮತಿಯೊಳಕೊಂಡು ದುರ್ಮತಿ ಹುಟ್ಟಿದ ಬಳಿಕ ಮತಿಯು ಮಾಯೆಯೊಳಕೊಂಡು ಭವಕ್ಕೆ ಗುರಿಮಾಡಿ ಕೆಡಹಿತ್ತು ನೋಡಾ. ಖಂಡಿತವ ಕಂಡು ಮತಿಯೊಳಗೆ ವೇಧಿಸಲು ಗತಿಗೆಟ್ಟು ನಿಂದಿತ್ತು ಗುಹೇಶ್ವರಾ.

(೪). ಬಲ್ಲೆನೆಂಬುದು ಮಾಯೆ. ಅರಿಯೆನೆಂಬುದು ಮಾಯೆ. ಒಲ್ಲೆನೆಂಬುದು ಮಾಯೆ. ಒಲಿವೆನೆಂಬುದು ಮಾಯೆ. ಜೀವವೆಂಬುದು ಮಾಯೆ. ಮುಕ್ತನೆಂಬುದು ಮಾಯೆ. ಸತಿ ಸುತ ಪಿತ ಮಾಯೆ. ಇವರೆಲ್ಲ ಮಾಯೆ. ಭೃತ್ಯ ಭ್ರಾತ್ರಾದಿಗಳೆಲ್ಲ ಮಾಯೆ. ಆನೆಂಬುದು ಮಾಯೆ. ನೀನೆಂಬುದು ಮಾಯೆ. ಸೌರಾಷ್ಟ್ರ ಸೋಮೇಶ್ವರಾ, ತಾನೆಂಬುದು ಮಾಯೆ.

(೫). ಬ್ರಹ್ಮಂಗೆ ಸರಸ್ವತಿಯಾಗಿ ಬೆನ್ನಿಲಿ ಬಂದಳು ಮಾಯೆ. ವಿಷ್ಣುವಿಂಗೆ ಲಕ್ಷ್ಮಿಯಾಗಿ ಭವಕ್ಕೆ ತಿರಿಗಿಸಿದಳು ಮಾಯೆ. ರುದ್ರಂಗೆ ಉಮಾದೇವಿಯಾಗಿ ಸಿರತೊಡೆಯಲ್ಲಿ ಕಾಡಿದಳು ಮಾಯೆ. ಎಳ್ಳಿಗೆ ಎಣ್ಣೆ, ಮುಳ್ಳಿಗೆ ಮೊನೆಯಾಗಿ, ಹೂವಿಗೆ ಗಂಧವಾಗಿ ಅವರವರಂಗದಲ್ಲಿ ಹಿಂಗದೆ ಪ್ರತಿರೂಪಾಗಿ ಸಂದಿಲ್ಲದೆ ಕಾಡುತಿದ್ದಾಳೆ ಮಾಯೆ. ಢಕ್ಕೆಯ ಉಲುಹು ಅಡಗುವದಕ್ಕೆ ಮುನ್ನವೇ ನಿಶ್ಚೈಸಿಕೊಳ್ಳಿ, ಕಾಲಾಂತಕ ಭೀಮೇಶ್ವರಲಿಂಗವನರಿಯಬಲ್ಲಡೆ.

(೬). ಬ್ರಹ್ಮಂಗೆ ಸರಸ್ವತಿಯಾಗಿ ಕಾಡಿತ್ತು ಮಾಯೆ. ವಿಷ್ಣುವಿಂಗೆ ಲಕ್ಷ್ಮಿಯಾಗಿ ಕಾಡಿತ್ತು ಮಾಯೆ. ರುದ್ರಂಗೆ ಉಮಾದೇವಿಯಾಗಿ ಕಾಡಿತ್ತು ಮಾಯೆ. ಎನಗೆ ನಿಮ್ಮನರಿವ ಬಯಕೆಭಾವ ಮಾಯೆಯಾಗಿ ಕಾಡುತ್ತಿದೆ. ನಾನೀ ಉಳ್ಳನ್ನಕ್ಕ ಉಭಯವೂ ಮಾಯೆಯಾಗಿದೆ. ಸದಾಶಿವಮೂರ್ತಿಲಿಂಗವು ನಾನೀ ಎಂಬುದೇ ಮಾಯೆ.

(೭). ಸಕಲವೆಂಬನ್ನಕ್ಕ ನಿಃಕಲ ಉಂಟು. ನಿಃಕಲವೆಂಬುದು ನಾಮ ರೂಪು. ಅದೆಂತೆಂದೊಡೆ, ತ್ರಿವಿಧವೂ ಕೂಡಿ ಬೆಳಗುವ ಜ್ಯೋತಿಯ ಒಡಲೇ ಘಟವಾಗಿ ಬೆಳಗೆ ಪ್ರಾಣವಾಗಿ ತೋರುವನ್ನಕ್ಕರ ಮಾಯಾಸಂಗಲೇಪವಾಗಿಹುದು. ಅದರ ಬೆಡಗಡಗೆ ಸದಾಶಿವಮೂರ್ತಿಲಿಂಗವು ನಿರ್ಮಾಯೆ.

(೮). ಭಕ್ತನಾಗಿದ್ದಲ್ಲಿ ಪೃಥ್ವಿಯಂಗವೇ ಮಾಯೆ. ಮಹೇಶ್ವರನಾಗಿದ್ದಲ್ಲಿ ಅಪ್ಪುವಿನಂಗವೇ ಮಾಯೆ. ಪ್ರಸಾದಿಯಾಗಿದ್ದಲ್ಲಿ ಅಗ್ನಿಯಂಗವೇ ಮಾಯೆ. ಪ್ರಾಣಲಿಂಗಿ ಶರಣ ಐಕ್ಯವೆಂಬಲ್ಲಿ ಭಾವದ ಕಲೆಯ ವಿಚಾರಿಸುವದೇ ಮಾಯೆ. ಕಾಯದ ಭಾವವುಳ್ಳನ್ನಕ್ಕ ಮರವೆ ಎಂಬ ಮಾರಿಯ ಹೊತ್ತು ತಿರುಗಾಡುತ್ತಿದ್ದೇನೆ. ಮಾರಿಯ ಮರಣದಲ್ಲಿ ಮರವೆಯ ಮಾಡದೆ ಎನ್ನನಾರೈ ಕೋಲಾಂತಕ ಭೀಮೇಶ್ವರಲಿಂಗವೇ.

(೯). ಮಾಯೆಯ ಗೆದ್ದೇನೆಂದು ಮಲೆಯ ಮಂದಿರದಲ್ಲಿ ಕಂದಮೂಲಾದಿಗಳು ಫಲಪರ್ಣಂಗಳಿಂದ ಕಾಲವವಂಚಿಸಿಹೆನೆಂದು ಇದ್ದುದೇ ಮಾಯಾಸಂಬಂಧ. ಅದು ದ್ವೇಷದ ಭ್ರಾಂತಲ್ಲದೆ ಶಾಂತಿಯ ಕಲೆಯಲ್ಲ. ಅರಿದು ಮರೆದವ ಕಾಷ್ಠಕರಿಪಿಯ ಸಂಗದಂತೆ. ಅತನಿರವು ಅಷ್ಟೇ ಭಾವ. ಗುಡಿಯ ಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ ತತ್ಪ್ರಾಣಮೂರ್ತಿ.

(೧೦). ಮಾಯಾಗುಣರೂಪಾದಲ್ಲಿ ಮಲಕೊಡಲಾಯಿತ್ತು. ಮಲಸ್ವರೂಪಾಗಿ ನಿಂದಲ್ಲಿ ಬಲವಂತರೆಲ್ಲರು ಮಲದ ಬೆಂಬಳಿಯಲ್ಲಿ ಮರುಳಾದರು. ಮರುಳಾಟದಲ್ಲಿ ಮಾರಿ ಒಲವರವಾಗಿ ಮನಶುದ್ಧವಿಲ್ಲದವರ ಮನೆಮನೆಯಲ್ಲಿ ತಾನು ವಿಕಾರವ ಮಾಡಿಸುತ್ತಿದ್ದಾಳೆ. ಮಾರಿಯ ಮುರಿದು ದ್ವಾರಾವತಿಯ ಕೆಡಿಸಿ, ಕಯ್ಯುಢಕ್ಕೆಯ ಗತಿ ಹಿಂಗಿ, ಮಾಯೆಯ ಬಾಗಿಲ ಭ್ರಾಂತಿಯ ಬಿಟ್ಟಲ್ಲಿ ಕಾಲಾಂತಕಭೀಮೇಶ್ವರಲಿಂಗವನರಿದುದು.

(೧೧). ಕ್ರಿಯಾಶಕ್ತಿ ಬ್ರಹ್ಮಂಗೆ ಹಿಂಗಿ, ಇಚ್ಛಾಶಕ್ತಿ ವಿಷ್ಣುವಿಂಗೆ ಹಿಂಗಿ, ಜ್ಞಾನಶಕ್ತಿ ರುದ್ರ್ರಂಗೆ ಹಿಂಗಿ, ಉತ್ಪತ್ತಿ ಸ್ಥಿತಿಲಯವೆಂಬುದಕ್ಕೆ ಮಾಯಾದೇವಿ ಒಂದೇ ಗೊತ್ತಾಗಿ, ಬಲ್ಲಬಲ್ಲವರೆಲ್ಲರ ತನ್ನಲ್ಲಿಯೇ ಅಡಗಿಸುತ್ತ ಅರಿದವರಿಗೆಲ್ಲ ದೇವಿಯಾಗಿ, ಮರೆದವರಿಗೆ ಮಾರಿಯಾಗಿ ಮರದೊಳಗೆ ಕೊಂಡು ಬಂದಿದೇನೆ. ಮರಕ್ಕೆ ಮಾರುಗೊಟ್ಟು ತಾಯಗೈದು ಬಾಯ ಬೇಡುವಾತನ ಬಾಯಿ ಒಂದೇಯಾಯಿತ್ತು. ಢಕ್ಕೆಯ ಧ್ವನಿಗೇಳಿ ಬೆಚ್ಚುವದಕ್ಕೆ ಮುನ್ನವೇ ಕಾಲಾಂತಕ ಭೀಮೇಶ್ವರಲಿಂಗವನರಿಯಿರಣ್ಣಾ.

---

## ಜ್ಞಾನದಿಂದ ಮೋಕ್ಷವು.

(೧). ಕಲ್ಲದೇವರು ದೇವರಲ್ಲ. ಮಣ್ಣದೇವರು ದೇವರಲ್ಲ. ಮರ ದೇವರಲ್ಲ. ಪಂಚಲೋಹದಲ್ಲಿ ಮಾಡುವ ದೇವರು ದೇವರಲ್ಲ. ಸೇತುಬಂಧ, ರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮೊದಲಾದ ಅಷ್ಟಾಷಷ್ಟಿ ಪುಣ್ಯತೀರ್ಥಂಗಳು ಪುಣ್ಯಕ್ಷೇತ್ರಂಗಳಲ್ಲಿಹ ದೇವರು ದೇವರಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವನೋಡಾ ಅಪ್ರಮಾಣಕೂಡಲಸಂಗಮದೇವಾ.

(೨). ಅಯ್ಯ, ತನ್ನ ತಾನರಿದಡೆ, ತಾನೇ ಚಿನ್ಮಯನಾದ ಪರಬ್ರಹ್ಮ ನೋಡಾ. ತಾನೇ ಚಿನ್ನಾದ ಚಿದ್ಬಿಂದು ಚಿತ್ಕಳಾಮೂರ್ತಿ ನೋಡಾ. ತಾನೇ ಸಕಲಚೈತನ್ಯ ಚಿತ್ಸೂತ್ರಧಾರಿ ತನ್ನಿಂದಧಿಕ ಪರದೈವವಿಲ್ಲ ನೋಡಾ. ತಾನೇ ಸಚ್ಚಿದಾನಂದಸ್ವರೂಪವಾದ ಚಿದ್ಘನಲಿಂಗ ನೋಡಾ, ಅಪ್ರಮಾಣಕೂಡಲಸಂಗಮದೇವಾ.

(೩). ಆದಿಮಧ್ಯಾವಸಾನಂಗಳಿಂದತ್ತತ್ತಲಾದ ಶಿವಾಂಗರೂಪು ತಾನೆಂದರಿಯದೆ, ನಿತ್ಯನಿರ್ಗುಣನಿರವಯ ಅಗಣಿತ ಲಕ್ಷ್ಮೀಶ್ವರ ತಾನೆಂದರಿಯದೆ, ನಿತ್ಯೋದಿತ ಸ್ವಯಂಪ್ರಕಾಶ ತಾನೆಂದರಿಯದೆ, ಸರ್ವಗತ ಸರ್ವಜ್ಞ ಸರ್ವಶಕ್ತಿಯನುಳ್ಳ ಪರಮಾತ್ಮ ತಾನೆಂದರಿಯದೆ, ಮಹದಾದಿ ತತ್ವಂಗಳ ಮೇಲಿಹ ಸಚ್ಚಿದಾನಂದರೂಪ ತಾನೆಂದರಿಯದೆ, ಅಜ್ಞಾನದ ಬಲದಿಂದ ಅಹಂಕಾರವಶನಾಗಿ, ನಾನು ಕರ್ತನು ನಾನು ಭೋಕ್ತನು ಎಂದು ಬಗೆದು ಇಲ್ಲದ ಮಾಯಾಮೋಹ ರೂಪಾದ

ಕರ್ಮ ಜನ್ಯ ಸಂಸಾರವ ಹೊದಿಸಿಕೊಂಡು ತನ್ನ ನಿಜಸ್ವರೂಪವನರಿಯುದೆ ಶಿವ ಪ್ರಸಾದವ ಪಡೆದು, ಶಿವನೊಳಗಾಗದವರ ಎಂದೆಂದು ಭವದಲ್ಲಿ ಬಳಲುತ್ತಿಹರು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೪). ಅಯ್ಯಾ ತನ್ನ ತಾನರಿದು ತನ್ನ ಅಜ್ಞಾನ ಆಶಾಪಾಶ ಅನಾಚಾರ ಅಸತ್ಯ ನಡೆನುಡಿಗಳ ತಾನರಿದು ತನ್ನ ದುರ್ಗುಣಗಳ ನೀಗಿ ನಿಜದಲ್ಲಿ ನಿಂದಡೆ, ತಾನೇ ಮಾಯಾತೀತ ತಾನೇ ಗುಣಾತೀತ, ತಾನೇ ಸಗುಣ ನಿರ್ಗುಣಕ್ಕಾಧಾರ ಮೂರ್ತಿ ತಾನೇ ಸಾಕಾರ ನಿರಾಕಾರಕ್ಕೆ ಚೈತನ್ಯಮೂರ್ತಿ ನಿಜವಸ್ತು ನೋಡಾ ಅಪ್ರಮಾಣ ಕೂಡಲಸಂಗಮದೇವಾ,

(೫). ಗಂಗಾಧರ ಗೌರೀಶ್ವರ ದೇವರಲ್ಲ. ಶಂಕರ ಶಶಿಧರ ದೇವರಲ್ಲ. ಪಂಚಮುಖ ದಶಭುಜವನುಳ್ಳ ನಂದಿವಾಹನರು ದೇವರಲ್ಲ. ತ್ರಿಶೂಲ ಖಟ್ವಾಂಗ ಧರರು ದೇವರಲ್ಲ. ಬ್ರಹ್ಮಕಪಾಲ, ವಿಷ್ಣುಕಂಕಾಳ ದಂಡವ ಪಿಡಿದಾಡುವ ಪ್ರಳಯಃಕಾಲದ ರುದ್ರರು ದೇವರಲ್ಲ. ನಿರಾಳಸ್ವಯಂಭುಲಿಂಗವೇ ತಾನೆಂದರಿದಡೆ ತಾನೇ ದೇವನೋಡಾ ಅಪ್ರಮಾಣ ಕೂಡಲಸಂಗಮದೇವಾ.

(೬). ಏಕೋ ರುದ್ರ ಮಹೇಶ್ವರರೆಂಬ ಮಹೇಶ್ವರ ತತ್ವ ತಾನಿರ್ದಲ್ಲಿ. ವಿಶ್ವರೂಪ ವಿಶ್ವಾಧಿಕ ಮಹಾರುದ್ರ ತಾನಿರ್ದಲ್ಲಿ. ಶತಕೋಟಿ ಸಾವಿರ ಮಂಡೆ ಜಡೆ ಗಂಗೆ ಗೌರೀವಲ್ಲಭರು ಕೋಟ್ಯಾನುಕೋಟಿ ಕಾಲರುದ್ರರು, ಪ್ರಳಯುಕಾಲ ರುದ್ರರು, ಶತಕೋಟಿ ಸಾವಿರ ಬ್ರಹ್ಮ ಕಪಾಲ ವಿಷ್ಣು ಕಂಕಾಳ ದಂಡವ ಧರಿಸಿದವರು ತಾನಿರ್ದಲ್ಲಿ. ತನ್ನಿಂದಧಿಕವಾದ ವಸ್ತು ಒಂದಿಲ್ಲವಾಗಿ ತಾನೇ ಸಚ್ಚಿದಾನಂದ ನಿತ್ಯಪರಿಪೂರ್ಣಮಯನಾದ ಪರಶಿವ ತತ್ವನೋಡಾ, ಅಪ್ರಮಾಣ ಕೂಡಲಸಂಗಮದೇವಾ.

(೭). ಅಯ್ಯಾ, ತನ್ನ ನಿಜದ ಬೆಳಗಿನ ಮುಂಭಾಗದಲ್ಲಿ ಅನಂತ ಕೋಟಿ ಬ್ರಹ್ಮರುತ್ಪತ್ತಿ ಸ್ಥಿತಿಲಯ ನೋಡಾ. ಅಯ್ಯಾ, ಆ ಬೆಳಗಿನ ಪ್ರಕಾಶ ದಲ್ಲಿ ಅನಂತಕೋಟಿ ಇಂದ್ರಾದಿಗಳ ಉತ್ಪತ್ತಿ ಸ್ಥಿತಿಲಯ ನೋಡಾ. ಅಯ್ಯಾ, ಆ ಬೆಳಗಿನ ಕೊನೆಯಲ್ಲಿ ಅನಂತ ದೇವರ್ಕಳುತ್ಪತ್ತಿ ಸ್ಥಿತಿಲಯ ನೋಡಾ. ಇಂತು ಚಿದ್ಬೆಳಗನರಿದಡೆ, ತಾನೇ ಅಗಮ್ಯ ಅಗೋಚರ ಅಪ್ರಮಾಣ ಕೂಡಲಸಂಗಮ ದೇವಾ.

(೮). ಅಯ್ಯಾ ಸ್ವರ್ಗಲೋಕ ತಾನಿರ್ದಲ್ಲಿ. ಮರ್ತ್ಯ ಪಾತಾಳ ತಾನಿರ್ದಲ್ಲಿ. ಶಾಂಭವ ಶಿವಲೋಕ ತಾನಿರ್ದಲ್ಲಿ. ತನ್ನಿಂದಧಿಕಮಪ್ಪ ಮತ್ತೊಂದು ಲೋಕವಿಲ್ಲಾಗಿ, ಇವೆಲ್ಲ ತನ್ನಾಧೀನವಲ್ಲದೆ, ಅವರಾಧೀನ ತಾನಲ್ಲ ನೋಡಾ, ಅಪ್ರಮಾಣ ಕೂಡಲಸಂಗಮದೇವಾ.

(೯). ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಎಂಬ ಷಡು ಚಕ್ರದೊಳಗಿನ ದಳ, ವರ್ಣ, ಅಕ್ಷರ, ಅಧಿದೇವತೆ, ಶಕ್ತಿ, ಭಕ್ತಿ, ಸಾದಾಖ್ಯಂಗಳ ದೇವರೆಂಬರು. ಅಲ್ಲಲ್ಲ ನೋಡಾ. ವಾಚಾತೀತ, ಮನೋತೀತ, ವರ್ಣಾತೀತ, ಅಕ್ಷರಾತೀತವಾಗಿ ಪರಶಿವತತ್ವ ತಾನೆಂದರಿದಡೆ ತಾನೇ ದೇವ ನೋಡಾ ಅಪ್ರಮಾಣಕೂಡಲಸಂಗಮದೇವಾ.

(೧೦). ಬ್ರಹ್ಮಚಕ್ರ ಸಹಸ್ರದಳ ಪದ್ಮದೊಳು ದೇವರಿಹುದು. ಆ ದೇವರ ಕಂಡೆಹೆನೆಂದು ಹಿತವಾಗಿಹ ಅನ್ನಪಾನಾದಿಗಳಂ ಬಿಟ್ಟು ತನುವ ದಂಡಿಸಿ, ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದು ಮಹಾವಾಯುವಂ ಪಿಡಿದು ಆಡುವ ಬಹುಮೂಲ ಜ್ವಾಲೆಯನೆಬ್ಬಿಸಿ, ಸುಷುಮ್ನನಾಳದ ತುದಿಯನಡರಿಸಿ, ಅಮಳೋಕ್ಯದ್ವಾರದೊಳು ಜಿಹ್ವೆಯನೇರಿಸಿ ಅಮೃತವನುಂಡು, ಅಲ್ಲಿಯ ದೇವರ ಕಂಡೆಹೆನೆಂದು, ಹೊಲಬುಗಾಣದೆ ವಾತಪಿತ್ತ ಶ್ಲೇಷ್ಮಂಗಳಂ ಕುಡಿದು ಸತ್ತ ಕರ್ಮಯೋಗಿಗಳು ಕೋಟ್ಯಾನುಕೋಟಿ; ಅಲ್ಲಿಂದ ಮೇಲೆ ಶಿಖಾಚಕ್ರದ ತ್ರಿದಳ ಪದ್ಮದೊಳಗೆ ದೇವರಿಹುದು, ಆ ದೇವರ ಕಂಡೆಹೆನೆಂದು ಈಡಾಪಿಂಗಳ ಸುಷುಮ್ನನಾಳಂಗಳಲ್ಲಿ ಸೂಸುವ ವಾಯುವ ಸೂಸಲೀಯದೆ ಕುಂಬಾರನ ಚಕ್ರದ ಹಾಗೆ ಒಂದು ಸುತ್ತು ಬಾಹನ್ನಕ್ಕರ ಸಾವಿರ ಸುತ್ತು ಬಾಹ ಮನವನಿಲ್ಲಿಸಿ, ಆ ಮಹಾಪವನ ಸಂಯೋಗದಿಂದ ಏಕಾಗ್ರಚಿತ್ತನಾಗಿ, ಆ ಶಿಖಾಚಕ್ರದ ತ್ರಿದಳ ಪದ್ಮಕರ್ಣಿಕಾಮಧ್ಯದಲ್ಲಿ ದೇವರ ಧ್ಯಾನಿಸಿ ಕಂಡೆಹೆನೆಂಬರು ದೇವರ ಕಾಣದೆ ಸತ್ತ ಧ್ಯಾನಯೋಗಿಗಳು ಕೋಟ್ಯಾನುಕೋಟಿ; ಅಲ್ಲಿಂದ ಮೇಲೆ ಪಶ್ಚಿಮ ಚಕ್ರದೊಳು ಅಪ್ರದರ್ಶನವರ್ಣವಾಗಿಹ ಏಕದಳ ಪದ್ಮಸಿಂಹಾಸನದ ಮೇಲೆ ದೇವರ ಲಕ್ಷವಿಟ್ಟು ನೋಡಿ ಕಂಡಿಹೆನೆಂದು ಹೋದವರು ದೇವರ ಕಾಣದೆ ಸತ್ತ ಭ್ರಾಂತ ಯೋಗಿಗಳು ಕೋಟ್ಯಾನುಕೋಟಿ; ಇಂತೀ ಕರ್ಮಯೋಗ ಲಂಬಿಕಾಯೋಗ, ಧ್ಯಾನಯೋಗಂಗಳೆಂಬ ಯೋಗಂಗಳ ಸಾಧಿಸಿ ದೇವರ ಕಂಡಿಹೆನೆಂದು ಸತ್ತ

ಭ್ರಾಂತಯೋಗಿಗಳಿಗೆ ಕಡೆ ಇಲ್ಲ. ತನ್ನ ತಾನರಿದು ತಾನಾರೆಂದು ತಿಳಿದಡೆ ತಾನೇ ದೇವ ನೋಡಾ ಅಪ್ರಮಾಣ ಕೂಡಲಸಂಗಮದೇವಾ.

(೧೧). ಅಯ್ಯಾ, ಭೂಚರಿಮುದ್ರೆ ದೇವರೆಂಬರು. ಖೇಚರೀಮುದ್ರೆ, ಶಾಂಭವೀಮುದ್ರೆ ದೇವರೆಂಬರು. ಅದು ದೇವರಲ್ಲ. ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದು ಶ್ರೋತ್ರತ್ವಕ್ಕು ನೇತ್ರ, ಜಿಹ್ವೆ, ಘ್ರಾಣ, ಗುದ, ಗುಹ್ಯವೆಂಬ ಕವಾಟಂಗಳ ಸುತ್ತಿ ನೋಡಲು ಅಲ್ಲಿಹ ಕರಣಂಗಳ ಪ್ರಕಾಶಕ್ಕೆ ಭ್ರಮಿಸಿ ಮನೋಭ್ರಾಂತರಾಗಿ ಭ್ರಮೆಯಿಂದ ಕುಲಾಲಚಕ್ರ, ಗಾಣದೆತ್ತು ರಾಟಣದಂತೆ ಆ ಕರಣಂಗಳ ಸಂಸಾರವ್ಯಾಪ್ತಿಯಿಂದ ಶ್ವೇತ, ಪೀತ, ಹರಿತ, ಮಾಂಜಿಷ್ಟ, ಕಪೋತ, ಮಾಣಿಕ್ಯ ವರ್ಣವಾಗಿ ತೋರುವ ಷಣ್ಮುಖೀಮುದ್ರೆಯ ದೇವರೆಂಬರು. ಅದು ದೇವರಲ್ಲ. ಇವೆಲ್ಲಕ್ಕು ಉತ್ಪತ್ತಿ ಸ್ಥಿತಿ ಲಯ ಉಂಟು ನೋಡಾ. ಪರಾತ್ಪರ ದೇವರಿಗೆ ಉತ್ಪತ್ತಿ ಸ್ಥಿತಿ ಲಯ ಉಂಟೇ ಹೇಳಾ. ಆ ನಿಲುಕಡೆ ಎಂತೆಂದೊಡೆ ಆಸೆ ಅಜ್ಞಾನವೇ ಉತ್ಪತ್ತಿ ಸ್ಥಿತಿ ಲಯಕ್ಕೊಳಗು ನೋಡಾ. ನಿರಾಸೆ ಸುಜ್ಞಾನ ಉತ್ಪತ್ತಿ ಸ್ಥಿತಿಲಯಕ್ಕೆ ಹೊರಗುನೋಡಾ. ಈ ವಿಚಾರವ ನರಿದು ಸಂತೃಪ್ತನಾದಡೆ, ತಾನೇ ದೇವನೋಡಾ ಅಪ್ರಮಾಣ ಕೂಡಲಸಂಗಮದೇವಾ.

(೧೨). ಹೃದಯಕಮಲದಲ್ಲಿ ಲಕ್ಷವಿಟ್ಟು ನೋಡುವ ದೇವರು ದೇವರಲ್ಲ. ಭ್ರೂಮಧ್ಯದಲ್ಲಿ ಲಕ್ಷವಿಟ್ಟು ನೋಡುವ ದೇವರು ದೇವರಲ್ಲ. ನಾಸಿಕಾಗ್ರದಲ್ಲಿ ಲಕ್ಷವಿಟ್ಟು ನೋಡುವ ದೇವರು ದೇವರಲ್ಲ. ಅಖಂಡಗೋಳಕಾಕಾರವಾಗಿಹ ಲಿಂಗವು ತಾನೆಂದರಿದಡೆ ತಾನೇ ದೇವ ಅಪ್ರಮಾಣ ಕೂಡಲಸಂಗಮದೇವಾ.

(೧೩). ಅಯ್ಯಾ ಶ್ರೋತ್ರ, ನೇತ್ರ, ತ್ವಕ್ಕು, ಘ್ರಾಣ, ಜಿಹ್ವೆ ಎಂಬ ಜ್ಞಾನೇಂದ್ರಿಯಂಗಳು ತಾನಿರ್ದಲ್ಲಿ. ವಾಕು ಪಾಣಿ ಪಾದ ಪಾಯು ಗುಹ್ಯವೆಂಬ ಕರ್ಮೇಂದ್ರಿಯಂಗಳು ತಾನಿರ್ದಲ್ಲಿ. ವಚನ ಗಮನ ದಹನ ವಿಸರ್ಜನ ಆನಂಗವೆಂಬ ಬುದ್ಧೇಂದ್ರಿಯಂಗಳು ತಾನಿರ್ದಲ್ಲಿ. ಅಷ್ಟತನು ಆತ್ಮಕರಣಂಗಳು ತಾನಿರ್ದಲ್ಲಿ. ಇವೆಲ್ಲ ತನ್ನಲ್ಲಿ ಉತ್ಪತ್ತಿ ಸ್ಥಿತಿಲಯವಾಗಿ ಮತ್ತೆ ತನ್ನಾಧೀನದಲ್ಲಾಡುತಿಹವಲ್ಲದೆ ಸ್ವತಂತ್ರವಿಲ್ಲ ನೋಡಾ. ತಾನೇ ಸ್ವತಂತ್ರ ಪರಬ್ರಹ್ಮಕಾಣಾ ಅಗಮ್ಯ ಅಗೋಚರ ಅಪ್ರಮಾಣ ಕೂಡಲಸಂಗಮದೇವಾ.

(೧೪). ಕಾಯುವೆರಸಿ ಕೈಲಾಸಕ್ಕೆ ಹೋಹೆನೆಂಬರು. ಇದು ಕ್ರಮವಲ್ಲ. ಘನಲಿಂಗ ಕರಸ್ಥಲದೊಳಗಿಪ್ಪ ಅನುವನರಿಯದೆ, ಇಲ್ಲಿ ಕರ್ಮ ಅಲ್ಲಿ ನಿಃಕರ್ಮವೇ? ಹೇಮದ ಮಾಟದ ಒಳಹೊರಗಿನಂತೆ ಮರ್ತ್ಯ ಕೈಲಾಸವೆಂಬ ಕಟ್ಟಳೆ ಇಲ್ಲ. ಆತ್ಮ ನಿಶ್ಚಯವಾದಲ್ಲಿಯೇ ಕೈವಲ್ಯ. ತತ್ವವನರಿದಲ್ಲಿಯೇ ಒಳಗು. ಈ ಗುಣ ಸದಮಲಭಕ್ತನ ಮುಕ್ತಿ, ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನಿಕ್ಕಿದ ಗೊತ್ತು.

(೧೫). ಅಯ್ಯಾ ತನ್ನ ನಿಜ ಚಿದ್ಬೆಳಗಿನಲ್ಲಿ ನಿಂದು ತನ್ನ ತಾನರಿದು ತನ್ನಾಚಾರ ಕ್ರಿಯಾಜ್ಞಾನಗಳೇ ನಿಜಚಿನ್ಮಯ ಗುರುಲಿಂಗ ಜಂಗಮ ನೋಡಾ. ಆ ಗುರುಲಿಂಗ ಜಂಗಮದಲ್ಲಿ ತನುಮನಧನ ವಂಚನೆ ಇಲ್ಲದೆ ಸದ್ಭಕ್ತಿಯಲ್ಲಿ ಸಮರ್ಪಿಸುವ ನಿಜನೈಷ್ಠೆಯೇ ಚಿತ್ಪಾದೋದಕ ಪ್ರಸಾದನೋಡಾ. ತಾನೆಂದಿಗೂ ಮಹಾಜ್ಞಾನಾನಂದದರಿವು ನಿಜಪ್ರಕಾಶವೇ ಚಿದ್ವಿಭೂತಿ ರುದ್ರಾಕ್ಷಿ ಮಂತ್ರ ನೋಡಾ. ತನ್ನ ತಾನೇ ಅಂಕುರವಾಗಿ, ತನ್ನ ತಾನೇ ಭೋಗಮೂರ್ತಿಯಾಗಿ, ತನ್ನ ತಾನೇ ನಿರವಯುಲಾದ ಮಹಾಂತಂಗೆ ನಮೋ ನಮೋ ಎಂಬೆ ಕಾಣಾ ಆಗಮ್ಯ ಅಗೋಚರ ಅಪ್ರಮಾಣ ಕೂಡಲಸಂಗಮದೇವಾ.

(೧೬). ಅಯ್ಯಾ ಚಿದ್ಘನ ಗುರುಲಿಂಗಜಂಗಮ ತಾನೆಂದರಿದಡೆ, ತಾನೇ ಶಿವಶಕ್ತಿಗಾಧಾರಮೂರ್ತಿ ನೋಡಾ. ತಾನೇ ಚಿದ್ಘನ ಪ್ರಣವಸ್ವರೂಪು ನೋಡಾ. ತಾನೇ ಚಿನ್ಮಯಮಂತ್ರಮೂರ್ತಿ ನೋಡಾ. ತಾನೇ ಅನಾದಿಯಿಂದತ್ತತ್ತ ಮೀರಿ ತೋರುವ ನಿರಂಜನಮೂರ್ತಿ ನೋಡಾ ಅಪ್ರಮಾಣಕೂಡಲಸಂಗಮದೇವಾ.

---

## ಲಿಂಗಧಾರಣದ ತತ್ವವು.

(೧). **ಬಯಲ ಮೂರ್ತಿಯ ಮಾಡಿ, ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು. ಬಯಲ ಮೂರ್ತಿಯ ಅಮೂರ್ತಿಯ ಮಾಡಿ, ಎನ್ನ ಪ್ರಾಣದೊಳಗೆ ಇರಿಸಿದನಯ್ಯ ಶ್ರೀಗುರು. ಬಯಲು ಬಯಲನೇ ಬಯಸಿ, ಬಯಲೆಂದೆನಿಸಿ, ಎನ್ನ ಭಾವದಲ್ಲಿರಿಸಿದನಯ್ಯ ಶ್ರೀಗುರು. ಇದು ಕಾರಣ, ಎನ್ನ ಕರಸ್ಥಲ, ಮನಸ್ಥಲ, ಭಾವಸ್ಥಲದಲ್ಲಿ ಧರಿಸಿ, ನಾನು ಅಂಗ, ಲಿಂಗ ಸಂಬಂಧಿಯಾದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.**

(೨). ವೇಧಾದೀಕ್ಷೆ, ಮಂತ್ರದೀಕ್ಷೆ, ಕ್ರಿಯಾದೀಕ್ಷೆ ಎಂಬ ದೀಕ್ಷಾತ್ರಯಂಗಳಿಂದ ತನುತ್ರಯಂಗಳ ಪೂರ್ವಾಶ್ರಯಂಗಳ ಕಳೆದು ಲಿಂಗತ್ರಯಂಗಳ ಸಂಬಂಧಿಸಿದನದೆಂತೆಂದೊಡೆ, ವೇಧಾದೀಕ್ಷೆ ಎಂದು ಶ್ರೀಗುರು ತನ್ನ ಹಸ್ತಶಿಷ್ಯ ಮಸ್ತಕದಲ್ಲಿ ಸಂಯೋಗಮಾಡಿದನು. ಮಂತ್ರದೀಕ್ಷೆ ಎಂದು ಶ್ರೀಗುರು ಪ್ರಣವ ಪಂಚಾಕ್ಷರಿಯ ಮಂತ್ರವ ಕರ್ಣದಲ್ಲಿ ಉಪದೇಶಿಸಿದನು. ಕ್ರಿಯಾದೀಕ್ಷೆ ಎಂದು ಆ ಮಂತ್ರ ಸ್ವರೂಪವನೇ ಇಷ್ಟಲಿಂಗ ಸ್ವರೂಪವನೆ ಮಾಡಿ, ಕರಸ್ಥಲದಲ್ಲಿ ಸಂಬಂಧಿಸಿದನು. ಇದು ಕಾರಣ ವೇಧಾದೀಕ್ಷೆಯಿಂದ ಕಾರಣ ತನುವಿನ ಪೂರ್ವಾಶ್ರಯವ ಕಳೆದು ಭಾವಲಿಂಗ ಸಂಬಂಧವಾಯಿತು. ಮಂತ್ರದೀಕ್ಷೆಯಿಂದ ಸೂಕ್ಷ್ಮತನುವಿನ ಪೂರ್ವಾಶ್ರಯವಳಿದು ಪ್ರಾಣಲಿಂಗ ಸಂಬಂಧವಾಯಿತು. ಕ್ರಿಯಾದೀಕ್ಷೆಯಿಂದ ಸ್ಥೂಲತನುವಿನ ಪೂರ್ವಾಶ್ರಯುವಳಿದು ಇಷ್ಟಲಿಂಗ ಸಂಬಂಧವಾಯಿತು. ಅಂಗತ್ರಯದಲ್ಲಿ ಲಿಂಗತ್ರಯ ಧರಿಸಿದೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೩). ಅಯ್ಯಾ ಎನ್ನ ಹೃದಯದಲ್ಲಿ ನ್ಯಸ್ತವಾಗಿಹ ಪರಮ ಚಿದ್ಬೆಳಗೇ ಹಸ್ತಮಸ್ತಕ ಸಂಯೋಗದಿಂದ ಒಂದುಗೂಡಿ ಮಹಾಬೆಳಗ ಮಾಡಿದಿರಲ್ಲಾ. ಅಯ್ಯಾ, ಎನ್ನ ಮಸ್ತಕದೊಳಗೊಂದುಗೂಡಿದ ಮಹಾ ಬೆಳಗ ತಂದು ಭಾವದೊಳಗೆ ಇಂಬಿಟ್ಟಿರಲ್ಲಾ. ಅಯ್ಯಾ, ಭಾವದೊಳಗೆ ಕೂಡಿದ ಮಹಾ ಬೆಳಗ ತಂದು ಮನಸ್ಸಿನೊಳಗೆ ಇಂಬಿಟ್ಟಿರಲ್ಲಾ. ಅಯ್ಯಾ, ಎನ್ನ ಮನಸ್ಸಿನೊಳಗೆ ಕೂಡಿದ ಮಹಾ ಬೆಳಗ ತಂದು ಕಂಗಳೊಳಗಿಂಬಿಟ್ಟಿರಲ್ಲಾ. ಅಯ್ಯಾ ಎನ್ನ ಕಂಗಳೊಳಗೆ ಕೂಡಿದ ಮಹಾಬೆಳಗ ತಂದು ಕರಸ್ಥಲದೊಳಗೆ ಇಂಬಿಟ್ಟಿರಲ್ಲಾ. ಅಯ್ಯಾ, ಎನ್ನ ಕರಸ್ಥಲದಿ ಥಳಥಳಸಿ ಬೆಳಗಿ ಹೊಳೆವುತ್ತಿಪ್ಪ ಅಖಂಡ ತೇಜವನೇ ಇಷ್ಟಲಿಂಗವೆಂಬ ದೃಷ್ಟವ ತೋರಿ, ನಿಶ್ಚಯವ ಶ್ರೋತ್ರದಲ್ಲಿ ಸೃಜಿಸಿದಿರಲ್ಲಾ. ಅಯ್ಯಾ, ಎನ್ನ ಶ್ರೋತ್ರದಲ್ಲಿ ಸೃಜಿಸಿದ ಮಂತ್ರದೊಳಗೆ ನೀವುನಿಂದು ಮಹತ್ವವಹುದುಗಿದಿರಲ್ಲಾ. ಅಯ್ಯಾ ಎನ್ನ ಆರಾಧ್ಯ ಕೂಡಲಸಂಗಮದೇವಾ ಎನ್ನೊಳಗೆ ನಿಮ್ಮಿರವ ಈ ಪರಿಯಲ್ಲಿ ಕಾಣಿಸುತ್ತಿರ್ದಿರಲ್ಲಾ.

(೪). ಭವಬಂಧನದ ಕುಣಿಕೆಯ ಕಳೆಯಲರಿಯದ ಮಲಿನ ಜೀವಿಗಳ ಮಲಿನವ ತೊಳೆವ ಶ್ರೀಗುರುವಿನ ಉಪದೇಶದ ಪರಿ ಎಂತೆಂದೊಡೆ, ಸ್ಥೂಲ ಪಂಚಭೂತಕಾಯದ ಪಂಚತತ್ವಗಳ ವಿವರಿಸಿ ಬೋಧಿಸಿ ಕಳೆದು, ಸೂಕ್ಷ್ಮ

ಪಂಚಭೂತಕಾಯದ ತನ್ಮಾತ್ರ ಗುಣಂಗಳ ವಿವರದ ಭೇದವ ಭೇದಿಸಿ ತೋರಿ ಕಳೆದು, ಕಾರಣ ಪಂಚಭೂತಕಾಯದ ಕರಣ ವೃತ್ತಿಗಳ ಮಹಾ ವಿಚಾರದಿಂ. ತಿಳಿಸಿ ವಿವರಿಸಿ ಕಳೆದು, ಸ್ಥೂಲಪಂಚಭೂತ ಕಾಯದಲ್ಲಿ ಇಷ್ಟಲಿಂಗವ ಪ್ರತಿಷ್ಠೆಯ ಮಾಡಿ ಸದಾಚಾರ ಕುಳಸ್ಥಲವ ನೆಲೆಗೊಳಿಸಿ, ಸೂಕ್ಷ್ಮ ಪಂಚಭೂತಕಾಯದಲ್ಲಿ ಪ್ರಾಣಲಿಂಗ ಪ್ರತಿಷ್ಠೆಯ ಮಾಡಿ ಮಹಾವಿಚಾರದ ಅನುಭಾವವ ನೆಲೆಗೊಳಿಸಿ, ಕಾರಣ ಪಂಚಭೂತಕಾಯದಲ್ಲಿ ತೃಪ್ತಿಲಿಂಗವ ಪ್ರತಿಷ್ಠೆಯ ಮಾಡಿ ಪರಮಾನಂದ ಸುಜ್ಞಾನವ ನೆಲೆಗೊಳಿಸಿ, ಇಂತೀ ಸ್ಥೂಲಸೂಕ್ಷ್ಮ ಕಾರಣವೆಂಬ ತನುತ್ರಯಂಗಳನು ಏಕೀ ಭವಿಸಿ ತೋರಿ, ಪೂರ್ವಜನ್ಮದ ನಿವೃತ್ತಿಯಮಾಡಿ ಲಿಂಗಜನ್ಮದ ಪ್ರತಿಷ್ಠೆಯಂ ಮಾಡಿ ಎನ್ನ ಕೃತಾರ್ಥನ ಮಾಡಿದ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ ಕೂಡಲ ಚನ್ನಸಂಗಮ ದೇವಾ.

(೫). ತನುವನು ಶ್ರೀಗುರು ಕ್ರಿಯಾದೀಕ್ಷೆಯಿಂದ ತನುಗುಣವನು ಭಸ್ಮೀಕೃತವ ಮಾಡಿದ ಬಳಿಕ, ದೃಶ್ಯ ಜಡತನುವೆಲ್ಲ ಶಿವ ಸತ್ಕ್ರಿಯಾಚಾರದೆ ಮೂಲ ತನುತ್ರಯವೇ ತನ್ನ ತನುವೆಂದರಿವುದು. ಶ್ರೀಗುರು ಮಂತ್ರದೀಕ್ಷೆಯಿಂದ ಮನದ ಪೂರ್ವಾಶ್ರಯವ ಕಳೆದು ಮನಕ್ಕೆ ಘನ ನೆನಹ ಸಂಬಂಧಿಸಿದನಾಗಿ, ಮನ ನಿರ್ಮಲನಾಗಿ ಲಿಂಗಕ್ಕಾಶ್ರಯನೆಂದರಿವುದು. ಶ್ರೀಗುರು ಜ್ಞಾನದೀಕ್ಷೆಯಿಂದ ಪ್ರಾಣ ಪ್ರಪಂಚದ ಪಶುಭಾವವಕಳೆದು ಅಖಂಡಿತ ಜ್ಞಾನಲಿಂಗ ಕಳೆಯ ತನ್ನ ಪ್ರಾಣ ನಾಥನೆಂದು ತಿಳುಹಿದನಾಗಿ ಪ್ರಾಣಮಲಿನವೆಂಬುದು ಪಶುಭಾವವಲ್ಲದೆ ಲಿಂಗ ಭಾವವಲ್ಲ. ಈ ಸಂದೇಹ ಭ್ರಾಂತಿಯುಳ್ಳ ಕಾರಣ ಶೈವಹೊಲ್ಲ ಎನುತಿದ್ದೆನಯ್ಯ. ತಮ್ಮ ತಾವರಿದು ನಿಶ್ಚಯಿಸದಿದ್ದರೆಮಾಣಲಿ. ಗುರು ಉಪದೇಶದಿಂದ ನಿಶ್ಚಯಿಸುವದು ಸಂದೇಹವಿಲ್ಲ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೬). ಪ್ರಾಣಕ್ಕೆ ಉಪದೇಶವ ಮಾಡಿ ಕಾಯಕ್ಕೆ ಲಿಂಗವ ಕೊಡಬೇಕು. ಕಾಯ ಶುದ್ಧವ ಮಾಡಿ ಪ್ರಾಣಕ್ಕೆ ಅರಿವ ಕೊಡಬೇಕು. ಇಷ್ಟನರಿಯದೆ ದೀಕ್ಷೆಯ ಮಾಡಬಾರದು. ಕುರುಡನ ಕಯ್ಯಕೊಳಕಲಿಸಿ ಪ್ರತಿ.ಗುರುಡಂಗೆ ಊಡಿಸಿದಂತಾಯಿತ್ತು. ಮಲಭಾಂಡದ ಜೀವಿಯ ಕಯ್ಯಲ್ಲಿ ಅನುಜ್ಞೆಯ ಪಡೆದ ಶಿಷ್ಯಂಗೆ ಉಭಯ ಕೇಡಾಯಿತ್ತು. ಇದನರಿದು ಅರಿವುಳ್ಳ ಶಿಷ್ಯನು ಶಿವ

ಜ್ಞಾನವಮಾರ್ಗವ ಬಲ್ಲ ಗುರುವಿನ ಕೈಯ್ಯಲ್ಲಿ ಆ ಲಿಂಗವ ಕೊಟ್ಟು ಮರಳಿ ಪಡೆಯ ಬೇಕಣ್ಣಾ. ಸದಾಶಿವಲಿಂಗಮೂರ್ತಿಯನರಿವುದಕ್ಕೇ ಇದೇ ಚಿನ್ಹವು.

(೭). ಗುರುವು ಮನದಲ್ಲಿ ಮಂತ್ರವನ್ನೂ ತನುವಿನಲ್ಲಿ ಲಿಂಗವನ್ನೂ ಸ್ಥಾಪಿಸಿ ಕರುಣಾರಸವನೆರೆಯಲು, ಆ ಮಂತ್ರವು ಜಿಹ್ವೆಯಲ್ಲಂಕುರಿಸಿ ಶರೀರವ ನಾವರಿಸಲು, ಆ ಭೂತತತ್ವವಳಿದು ಮಂತ್ರವೇ ಶರೀರವಾಯಿತ್ತು. ಲಿಂಗವು ನೇತ್ರದಲ್ಲಂಕುರಿಸಿ ಮನವನಾವರಿಸಿ, ಮನದ ಹಂಕಾರವ ತೊಲಗಿಸಿ, ಆ ಮನವೇ ಲಿಂಗವಾಯಿತ್ತು. ಮಂತ್ರವೇ ತನುವಾಗಿ, ಮನವೇ ಲಿಂಗವಾದಲ್ಲಿ ನಾಮಮಧ್ಯ ದಲ್ಲಿ ಪುರುಷನಿರ್ಪಂತೆ, ಮಂತ್ರಮಧ್ಯದಲ್ಲಿ ಲಿಂಗಮಿರ್ಪುದು ಸಹಜಮಾಯಿತ್ತು. ತನುಮನೋಮಧ್ಯದಲ್ಲಿರ್ಪ ಪ್ರಾಣಲಿಂಗವು ಮಂತ್ರದಲ್ಲಿ ಲೀನಮಾಯಿತ್ತು. ಮಂತ್ರದಲ್ಲಿ ಲಿಂಗದಲ್ಲಿ ಸುಷುಪ್ತಿ ನೆಲೆಗೊಂಡು, ಪ್ರಪಂಚವೆಲ್ಲ ಸ್ವಪ್ನಸ್ವರೂಪ ಮಾಗಿ, ಮಂತ್ರದಲ್ಲಿ ಜ್ಞಾನವು ಲಿಂಗದಲ್ಲಿ ಆನಂದವು, ಈ ಎರಡರ ಸಂಗವೇ ನಿಜವು, ನಿಜವೇ ತಾನಾಗಿ, ತನ್ನಿಂದನ್ಯವೇನೂ ಇಲ್ಲದುದೇ ಕೇವಲ ಕೈವಲ್ಯವೆನಿ ಸುವದು ಕಾಣಾ, ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೇ.

(೮). ಗೃಹಸ್ಥಧರ್ಮದ ಗುರುವಿನ ದೀಕ್ಷಾಚಾರ್ಯನ ಭೇದ. ಪಿಂಡೋ ತ್ಪತ್ತಿ, ಜಾತಿ, ಗೋತ್ರ, ಲಕ್ಷಣ, ನೀತಿ, ಭಕ್ತಿಯ ಸಂಪೂರ್ಣಕಳೆಯನರಿತು, ಕುಚಿತ್ತ, ಕುಹಕ, ಕ್ಷುದ್ರ, ಪಿಸುಣತ್ವ, ಅಸಿಘಾತಕ, ಪರದಾರ, ಇಂತೀ ಪೂರ್ವಾ ಶ್ರಯಂಗಳ ಬಿಡಿಸಿ, ಮಾಂಸಪಿಂಡವ ಕಳೆದು, ಮಂತ್ರಪಿಂಡವ ಮಾಡುವಲ್ಲಿ, ಸ್ಥೂಲದ ವ್ಯವಹರಣೆ, ಸೂಕ್ಷ್ಮದ ಪ್ರಕೃತಿ, ಕಾರಣದ ಪ್ರಮೇಯಮಂ ಕಾಣಿಸಿ ಕೊಂಡು, ರಸ ಗಂಧ ರೂಪು ಶಬ್ದ ಸ್ಪರ್ಶ ಪಂಚೇಂದ್ರಿಯಂಗಳಲ್ಲಿ ಸಂಶಯಮಂ ಪರಿಹರಿಸಿ, ಮನ ವಚನ ಕಾಯ ತ್ರಿಕರಣ ಶುದ್ಧಾತ್ಮನಂ ಮಾಡಿ, ಈಶ್ವರಧ್ಯಾನ ದಿಂದ ಕರಕಮಲವಂ ಕಪಾಲದ ಮೇಲೆ ಮೂರ್ತಿಗೊಳಿಸಿ, ಧ್ಯಾನಪ್ರಯೋಗ ಮಂ ಕಲ್ಪಿಸಿ, ಜ್ಞಾನಪ್ರಯೋಗನುಂ ವೇಧಿಸಿ, ಮೇಲೆ ಪ್ರಾಣಲಿಂಗಪ್ರತಿಷ್ಠೆಯಂ ಮಾಡುವಲ್ಲಿ, ಅಂಗಕ್ಕೆ ಆಚಾರ, ಆತ್ಮಾಂಗಕ್ಕೆ ಅರಿವು, ಈ ಗುಣ ಸಂಭವಿಸಿದ ಮೇಲೆ ಹಸ್ತಮಸ್ತಕ ಸಂಯೋಗವ ಇಷ್ಟತನುವಿಂಗೆ ಇಷ್ಟಲಿಂಗವು ಸಂಬಂಧಿ ಸಬೇಕು. ಇದು ಚತುರ್ವಿಧ ಮಠದಾಚಾರ್ಯನಂಗ, ಗುರುಸ್ಥಲದ ಭಕ್ತಿ, ಚನ್ನ ಬಸವಣ್ಣ ಪ್ರಿಯ ಭೋಗ ಮಲ್ಲಿಕಾರ್ಜುನಲಿಂಗದಲ್ಲಿ ಗುರುದೀಕ್ಷಾಸೂತ್ರ.

(೯). ರೂಪಿಂಗೆ ರೂಪು, ಜ್ಞಾನಕ್ಕೆ ಸುಜ್ಞಾನ, ಪ್ರಾಣಕ್ಕೆ ಪ್ರಸಾದ ಲಿಂಗತ್ರಯವೆದೆಯಿಂದವೆ ತಂದು: ಅವರವರ ಕರದಲ್ಲಿ ದೀಕ್ಷೆಯ ಮಾಡಿದನು. ಗುರು ಚನ್ನಬಸವಣ್ಣ ಕಪಿಲಸಿದ್ಧ ಮಲ್ಲಿಕಾರ್ಜುನಾ.

**ಅರ್ಥ:**—ಶಿವನ ಸ್ಥೂಲರೂಪದ ಕಳೆಯುನೆ ಇಷ್ಟಲಿಂಗವೆಂದೆನಿಸಿ ತನುವಿಂಗೆ ಸಾಹಿತ್ಯವ ಮಾಡಿ, ಆ ಇಷ್ಟಲಿಂಗದ ಕಳೆಯ ಪ್ರಾಣಕ್ಕೆ ಪ್ರಸನ್ನತ್ವವ ಮಾಡಿಕೊಟ್ಟು ಪ್ರಾಣಲಿಂಗವೆಂದೆನಿಸಿ, ಆ ಪ್ರಾಣಲಿಂಗದ ಪ್ರಸನ್ನತ್ವವ ಕಾಂಬ ಜ್ಞಾನದ ಭಿನ್ನಭಾವವಳಿದು ಅಭಿನ್ನಜ್ಞಾನವನಿತ್ತು ಮಹಾಲಿಂಗವ ಸಾಹಿತ್ಯವ ಮಾಡಿ ಎನ್ನ ತ್ರಿವಿಧ ಲಿಂಗಸ್ವರೂಪಿಯ ಮಾಡಿದ ಗುರುಚನ್ನಬಸವಣ್ಣನೆಂದು ಸಿದ್ಧರಾಮಯ್ಯದೇವರು ನುಡಿದರೆಂಬುದೀವಚನದ ತಾತ್ಪರ್ಯಾರ್ಥ.

(೧೦). ಒಂದು ಧನು:ವಿಂಗೆ ಮೂರಂಬ ಹಿಡಿದೆ. ಒಂದು ಬಾಣವ ಬಿಡಲಾಗಿ ಪದ್ಮೋದ್ಭವನ ಸೃಷ್ಟಿಯು ಕಟ್ಟಿತ್ತು. ಮತ್ತೊಂದು ಬಾಣವ ಬಿಡಲಾಗಿ ಪದ್ಮೋದ್ಭವನ ಹೆಡೆಗಯ್ಯ ಕಟ್ಟಿತ್ತು. ಕಡೆಯ ಬಾಣವ, ರುದ್ರನ ಹಣೆಯನೊಡೆದು ಅಲಗು ಮುರಿಯಿತ್ತು. ಗಾರಿಜಾರಿತ್ತು, ನಾರಿಯು ಹೂಳುವ ಹಿಳಿಕು ಹೋಳಾಯಿತ್ತು, ಗುಹೇಶ್ವರನ ಶರಣ ಅಲ್ಲಮ ಹಿಡಿದ ಬಿಲ್ಲು ಮುರಿಯಿತ್ತು.

**ಅರ್ಥ:**—ಭಾವವೆಂಬ ಬಿಲ್ಲಿಗೆ ಮನವೆಂಬ ನಾರಿಯ ಹೂಡಿ ಕ್ರಿಜ್ಞಾನ ಭಾವವೆಂಬ ಮೂರು ಬಾಣವ ಪಿಡಿದೆನು. ಸ್ಥೂಲತನುವಿನಲ್ಲಿ ಸತ್‌ಕ್ರಿಯಾಚಾರವ ನಳವಡಿಸಿಕೊಳ್ಳಲಾಗಿ, ಅಲ್ಲಿ ಇಷ್ಟಲಿಂಗ ಸಂಬಂಧವಾಗಿ ಬ್ರಹ್ಮನ ಉತ್ಪತ್ತಿ ನಷ್ಟವಾಯಿತ್ತು. ಸೂಕ್ಷ್ಮತನುವಿನಲ್ಲಿ ಸುಜ್ಞಾನವನಳವಡಿಸಿಕೊಳ್ಳಲಾಗಿ ಅಲ್ಲಿ ಪ್ರಾಣಲಿಂಗ ಸಂಬಂಧವಾಗಿ ವಿಷ್ಣುವಿನ ಸ್ಥಿತಿಭೋಗ ನಷ್ಟವಾಯಿತ್ತು. ಕಾರಣ ತನುವಿನಲ್ಲಿ ಸದ್ಭಾವವ ನಳವಡಿಸಿಕೊಳ್ಳಲಾಗಿ ಅಲ್ಲಿ ಭಾವಲಿಂಗ ಸಂಬಂಧವಾಗಿ ರುದ್ರನ ಭಿನ್ನಜ್ಞಾನ ಮೊದಲಾದ ಲಯೋಧರ್ಮ ನಷ್ಟವಾಯಿತ್ತು. ಮಹಾಜ್ಞಾನವು ಭಾವಲಿಂಗ ನಿಷ್ಪತ್ತಿಯಾಯಿತ್ತು. ಆ ತ್ರಿವಿಧ ಲಿಂಗಸಂಬಂಧಿಯಾದ ಶರಣಂಗೆ ಭಿನ್ನಜ್ಞಾನ ಭಿನ್ನಕ್ರಿಯೆಗಳು ನಷ್ಟವಾದವು. ಮನಸ್ಸು ಪ್ರಾಣಲಿಂಗದಲ್ಲಿ ಅಡಗಿಸುವ ನೈಷ್ಠೆಯು ಇಷ್ಟಲಿಂಗದಲ್ಲಿ ನಿಷ್ಪತ್ತಿಯಾಯಿತ್ತು. ಲಿಂಗಕ್ಕೆ ಚಿತ್ಪಭಾಂಗಸ್ವರೂಪವಾದ ಶರಣನು ಅರುವಿನ ಹಸ್ತದಲ್ಲಿ ಪಿಡಿದ ಶಿವಭಾವವೆಂಬಲ್ಲು ಭಾವದಲ್ಲಿ ನಿಷ್ಪತ್ತಿಯಾಯಿತ್ತೆಂಬುದರ್ಥ.

(೧೧). ಶ್ರೀಗುರು ಶಿಷ್ಯನ ಮಸ್ತಕದಲ್ಲಿ ತನ್ನ ಹಸ್ತಕಮಲವನಿರಿಸಿ ಈ ಪ್ರಕಾರವಪ್ಪ ಲಿಂಗಕಳೆಯು ಪ್ರತಿಷ್ಠೆಯ ಮಾಡಿದನಾಗಿ ಗುರುವಿನ ಹಸ್ತದಿಂದ ಆ ಕಳೆ ಹುಟ್ಟಿ, ಅದೇ ಕರಸ್ಥಲಕ್ಕೆ ಇಷ್ಟಲಿಂಗವಾಯಿತ್ತು, ಮನಸ್ಥಲಕ್ಕೆ ಪ್ರಾಣಲಿಂಗವಾಯಿತ್ತು, ಭಾವಭರಿತವಾಗಿ ಭಾವಲಿಂಗವಾಯಿತ್ತು. ಇಷ್ಟಪ್ರಾಣ ಭಾವವೆಂಬ ಲಿಂಗವು ತಾನೇ ಆಚಾರಲಿಂಗ ಗುರುಲಿಂಗ ಶಿವಲಿಂಗ ಜಂಗಮ ಲಿಂಗ, ಪ್ರಸಾದಲಿಂಗ ಮಹಾಲಿಂಗ ಇಂತೀ ಲಿಂಗಪಂಚಕವು ಆಚಾರಲಿಂಗದಲ್ಲಿ ಗರ್ಭೀಕೃತವಾಗಿ, ಆಚಾರಲಿಂಗವೆಂದು ಕ್ರಿಯಾಲಿಂಗವೆಂದು ಒಂದೇ ಪರಿಯಾಯವಾಗಿ ಕ್ರಿಯಾಲಿಂಗವೆಂದು ಇಷ್ಟಲಿಂಗವೆಂದು ಒಂದೇ ಪರಿಯಾಯವಾಗಿ, ಇಂತಿವೆಲ್ಲವನೊಳಕೊಂಡು ನಿನ್ನ ಕರಸ್ಥಲಕ್ಕೆ ಬಂದಿತ್ತು ವಸ್ತು. ಈ ಕರಸ್ಥಲದ ಮಹಾ ಘನದನಿಲವನು ಹೀಗೆಂದರಿವುದೆಂದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೨). ಶ್ರೀಗುರು ಶಿವನ ಗಣಂಗಳ ಮಧ್ಯದಲ್ಲಿ ಎನಗೆ ಉಪದೇಶಿಸುವಲ್ಲಿ ಪರಮೇಶ್ವರನ ಪಂಚಮುಖವನೇ ಪಂಚಕಲಶವಾಗಿ ಮೂರ್ತಿಗೊಳಿಸಿ, ಗಣಂಗಳ ಸಾಕ್ಷಿಯಾಗಿ ಕರಸ್ಥಲಕ್ಕೆ ಶಿವಲಿಂಗವ ಕೊಟ್ಟು ಈ ಲಿಂಗವೇ ಗಂಡ ನೀನೇ ಹೆಂಡತಿ ಎಂದು ಹೇಳಿ ಲಲಾಟದಲ್ಲಿ ವಿಭೂತಿಯ ಪಟ್ಟವಂ ಕಟ್ಟಿ ಹಸ್ತದಲ್ಲಿ ಕಂಕಣವ ಕಟ್ಟಿ, ಪಾದೋದಕಪ್ರಸಾದವನಿತ್ತು ಎಂದೆಂದಿಗೂ ಸತಿಪತಿಭಾವ ತಪ್ಪದೆ ಇರಲಿ ಎಂದು ನಿರೂಪಿಸಿದನಯ್ಯ ಶ್ರೀಗುರು. ಆ ನಿರೂಪವ ಮಹಾ ಪ್ರಸಾದವೆಂದು ಕೈಕೊಂಡೆನಯ್ಯ. ಇದು ಕಾರಣ ಪತಿಯಲ್ಲದೆ ಅನ್ಯವನರಿಯೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

(೧೩). ನೋಡಿದಿರೋ, ನೋಡಿದಿರೋ ಒಂದು ವಿಚಿತ್ರವ. ಶಿಷ್ಯನೆಂಬ ಹೆಂಡತಿಯು ಶ್ರೀಗುರುವೆಂಬ ಗಂಡನು ಹಸ್ತಮಸ್ತಕ ಸಂಯೋಗವೆಂಬ ಕೂಟವ ಮಾಡಲು, ಷಡಕ್ಷರವೆಂಬ ಮಂತ್ರವೆಂಬ ವೀರ್ಯವು ಚಲನೆಯಾಗಿ ಶಿಷ್ಯನೆಂಬ ಹೆಂಡತಿಯ ಕರ್ಣವೆಂಬ ಗರ್ಭಪ್ರವೇಶವಾಗಲು, ಮನ ಬಸುರಾಗಿ, ಕಂಗಳೆಂಬ ಯೋನಿಯಲ್ಲಿ ಲಿಂಗವೆಂಬ ಮಗುವಂ ಹಡೆದು ಅಂಗಯ್ಯೆಂಬ ತೊಟ್ಟಿಲಲ್ಲಿಕ್ಕಿ, ಮಂಗಳಸ್ತೋತ್ರವೆಂಬ ಜೋಗುಳವಂ ಹಾಡಿ ಅಖಂಡೇಶ್ವರನೆಂದು ಹೆಸರಿಟ್ಟರು ನೋಡಾ. ಇದು ಕಾರಣ ನೀನೆಮಗೆ ಮಗನಾದಿರಿ, ನಾನಿನಗೆ ತಾಯಾದೆನಯ್ಯ ಅಖಂಡೇಶ್ವರಾ.

(೧೪). ದೇಹದೊಡನೆ ಪ್ರಾಣ ಹುಟ್ಟಿತ್ತಯ್ಯ. ಆ ದೇಹದೊಡನೆ ಮಿಶ್ರವಾದ ಪ್ರಾಣನು ಶ್ರೀಗುರುವಿನ ಕರಕಮಲದಲ್ಲಿ ಉತ್ಪತ್ತಿಯಾಗಿ ಅಂಗದ ಮೇಲೆ ಲಿಂಗಸ್ವಾಯತವ ಮಾಡಿ ಉರುತರ ಲಿಂಗದಲ್ಲಿ ಭರಿತ ಚರಿತ ಚಾರಿತ್ರನ ಮಾಡಿದನಾಗಿ ಲಿಂಗದೇಹಿ ಲಿಂಗಪ್ರಾಣಿ ಎನಿಸಿಕೊಂಡು ಬದುಕಿದೆನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

(೧೫). ಸದುರುಸ್ವಾಮಿ ಶಿಷ್ಯಂಗೆ ಅನುಗ್ರಹವ ಮಾಡುವಲ್ಲಿ ತಚ್ಛಿಷ್ಯನ ಮಸ್ತಕದ ಮೇಲೆ ತನ್ನ ಶ್ರೀಹಸ್ತವನಿರಿಸಿದಡೆ ಲೋಹದ ಮೇಲೆ ಪರುಷ ಬಿದ್ದಂತಾಯಿತ್ತಯ್ಯ. ಒಪ್ಪುವ ಶ್ರೀವಿಭೂತಿಯ ನೊಸಲಿಂಗೆ ಪಟ್ಟವ ಕಟ್ಟಿದಡೆ, ಮುಕ್ತಿಸಾಮ್ರಾಜ್ಯದೊಡೆತನಕ್ಕೆ ಪಟ್ಟಗಟ್ಟಿದಂತಾಯಿತ್ತಯ್ಯ. ಸದ್ಯೋಜಾತ ವಾಮದೇವ ಅಘೋರ ತತ್ಪುರುಷ ಈಶಾನ್ಯವೆಂಬ ಪಂಚಕಳಶದ ಅಭಿಷೇಕವ ಮಾಡಿಸಲು ಶಿವನ ಕರುಣಾಮೃತಸೊನೆ ಸುರಿದಂತಾಯಿತ್ತಯ್ಯ. ನೆರೆದ ಶಿವಗಣಂಗಳ ಮಧ್ಯದಲ್ಲಿ ಮಹಾಲಿಂಗವನು ಕರಸ್ಥಲಾಮಳಕವಾಗಿ ಶಿಷ್ಯನ ಕರಸ್ಥಲಕ್ಕೆ ಇತ್ತು, ಅಂಗದಲ್ಲಿ ಪ್ರತಿಷ್ಠಿಸಿ ಪ್ರಣಮಪಂಚಾಕ್ಷರಿಯನುಪದೇಶವ ಕರ್ಣದಲ್ಲಿ ಹೇಳಿ ಕಂಕಣವ ಕಟ್ಟಿದಲ್ಲಿ ಕಾಯವೇ ಕೈಲಾಸವಾಯಿತ್ತು, ಪ್ರಾಣವು ಪಂಚಬ್ರಹ್ಮಮಯ ಲಿಂಗವಾಯಿತ್ತು. ಇಂತು ಮುಂದೆ ತೋರಿ ಹಿಂದೆ ಬಿಡಿಸಿದ ಶ್ರೀಗುರುವಿನ ಸಾನ್ನಿಧ್ಯದಿಂದ ಅಸು ಬದುಕಿದೆನಯ್ಯ ಚನ್ನಮಲ್ಲಿಕಾರ್ಜುನಯ್ಯ.

(೧೬). ಬಿಸಿಲಿನ ಮುಂದಣ ಮಂಜಿನಂತಾಯಿತ್ತು. ದಿಟದ ಮುಂದಣ ಸಟೆಯಂತಾಯಿತ್ತು. ಪುಣ್ಯದ ಮುಂದಣ ಪಾಪದಂತಾಯಿತ್ತು. ಯೋಗಿಯ ಮುಂದಣ ಸಂಸಾರದಂತಾಯಿತ್ತು. ಧೀರನ ಮುಂದಣ ಹೇಡಿಯಂತಾಯಿತ್ತು. ಉರಗನ ಮುಂದಣ ಭೇಡುಕನಂತಾಯಿತ್ತು. ಹರಿಯ ಮುಂದಣ ಕರಿಯಂತಾಯಿತ್ತು. ವಿವೇಕಿಯ ಮುಂದಣ ದುಃಖದಂತಾಯಿತ್ತು. ಪುಣ್ಯಾರಣ್ಯದಹನ ಭೀಮೇಶ್ವರನೆಂಬ ಸದ್ಗುರು ಕಾರುಣ್ಯವಾಗಲೊಡನೆ ಎನ್ನ ಸುತ್ತಿಹ ಪ್ರಪಂಚು ಸರ್ವವೂ ಓಡಿದವಯ್ಯಾ.

(೧೭). ಎನ್ನ ಕರಸ್ಥಳದ ಮಧ್ಯದಲ್ಲಿ ಪರಮ ನಿರಂಜನ ಕುರುಹು ದೊರಿದ. ಆ ಕುರುಹಿನ ಮಧ್ಯದಲ್ಲಿ ಅರುಹಿನ ಕಳೆ ತೋರಿದ. ಆ ಕಳೆಯ ಮಧ್ಯದಲ್ಲಿ ಮಹಾಜ್ಞಾನದ ಬೆಳಗ ತೋರಿದ. ಆ ಬೆಳಗಿನ ನಿಲವಿನೊಳಗೆ ಎನ್ನ ತೋ

ರಿದ. ಎನ್ನೊಳಗೆ ತನ್ನ ತೋರಿದ. ತನ್ನೊಳಗೆ ಎನ್ನನಿಂಬಿಟ್ಟುಕೊಂಡ ಮಹಾ ಗುರುವಿಗೆ ನಮೋ ನಮೋ ಎನುತಿರ್ಪೆನಯ್ಯ ಅಖಂಡೇಶ್ವರಾ.

(೧೮). ಪರುಷ ಮುಟ್ಟಿದ ಲೋಹದಂತೆ ಮಾಡಿತೆನ್ನ ಶ್ರೀಗುರುವಿನುಪ ದೇಶ. ಕರ್ಪುರ ಜ್ಯೋತಿಯಂತೆ ಮಾಡಿತೆನ್ನ ಶ್ರೀಗುರುವಿನುಪದೇಶ. ಉರಿ ಉಂಡ ತೃಣದಂತೆ ಮಾಡಿತೆನ್ನ ಶ್ರೀಗುರುವಿನುಪದೇಶ. ಈಡಾಕುಂಡಲಿಯಂತೆ ಮಾಡಿ ತೆನ್ನ ಶ್ರೀಗುರುವಿನುಪದೇಶ. ಒರೆಗಲ್ಲು ಪುಥ್ಥಳಿಯೊಪ್ಪವ ನೋಡಿದಂತೆ ಅಖಂಡೇಶ್ವರಾ ನಿಮ್ಮ ವಚನೋಪದೇಶ.

(೧೯). ಗುರುವಿನ ಕೃಪೆಯಿಂದ ಸಾಧಾರಣ ತನುವ ಮರೆದೆ. ಗುರು ವಿನ ಕೃಪೆಯಿಂದ ಮಲತ್ರಯದ ಪಂಕವ ತೊಳೆದೆ. ಗುರುವಿನ ಕೃಪೆಯಿಂದ ದೀಕ್ಷಾ ತ್ರಯದಿಂದ ಅನುಭಾವಿಯಾದೆ. ಗುರುವಿನ ಕೃಪೆಯಿಂದ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವನರಿದೆ. ಎನಗಾಧಿಕ್ಯವಪ್ಪ ವಸ್ತು ಬೇರೊಂದಿಲ್ಲ. ಅದೇನು ಕಾರಣ? ಅವನಾನಾದೆನಾಗಿ. ಗುರುವೇ, ಎನ್ನ ತನುವಿಂಗೆ ಲಿಂಗದೀಕ್ಷೆಯ ಮಾಡಿ, ಎನ್ನ ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯ ಮಾಡಿ, ಎನ್ನ ತನುಮನ ಧನದಲ್ಲಿ ವಂಚನೆ ಇಲ್ಲದೆ ಮಾಡಲೆಂದು ಜಂಗಮದೀಕ್ಷೆಯ ಮಾಡಿ, ಎನ್ನ ಸರ್ವಾಂಗವು ನಿನ್ನ ವಿಶ್ರಾಮಸ್ಥಾನ ಶುದ್ಧ ಮಂಟಪವಾದ ಕಾರಣ, ಲೋಕವ್ಯಾಪ್ತಿಯ ನರಿಯದೆ, ಲೋಕವೆನ್ನೊಳಗಾಯಿತ್ತು, ಆ ಲೋಕಕ್ಕೆ ಹೊರಗಾದೆನಾಗಿ. ಅದೇನು ಕಾರಣ? ಜನನಮರಣ ಪ್ರಳಯಕ್ಕೆ ಹೊರಗಾದೆನಾಗಿ. ಗುರುವೇ, ಸದ್ಗುರುವೇ, ಎನ್ನ ಭವದ ಬೇರ ಹರಿದ ಗುರುವೇ, ಭವಪಾಶವಿಮೋಚನ ಅವ್ಯಯ ಮನದ ಸರ್ವಾಂಗಲೋಲುಪ್ತಿ ಭುಕ್ತಿ ಮುಕ್ತಿ ಫಲದಾಯಕ ಗುರುವೇ, ಬಸವಣ್ಣ ಕಪಿಲ ಸಿದ್ಧಮಲ್ಲಿಕಾರ್ಜುನ ಚನ್ನಬಸವಣ್ಣ ಪ್ರಭು ಮೊದಲಾದ ಅಸಂಖ್ಯಾತರನೆಲ್ಲರನು ತೋರಿದ ಗುರುವೇ.

---

## ಇಷ್ಟಲಿಂಗದ ಸ್ವರೂಪು.

(೧). ಲಿಂಗವೆಂಬುದು ಪರಶಕ್ತಿಯುತ ಪರಶಿವನ ನಿಜದೇಹ. ಲಿಂಗ ವೆಂಬುದು ಪರಶಿವನ ಘನತೇಜ. ಲಿಂಗವೆಂಬುದು ಪರಶಿವನ ನಿರತಿಶಯಾನಂದ ಸುಖವು. ಲಿಂಗವೆಂಬುದು ಪರಶಿವನ ಪರಮಜ್ಞಾನ. ಲಿಂಗವೆಂಬುದು ಷಡಧ್ವ

ಮಯ ಜಗಜ್ಜನ್ಮಭೂಮಿ. ಲಿಂಗವೆಂಬುದು ಅಖಂಡಿತವೇದ, ಪಂಚಸಂಜ್ಞಿ. ಲಿಂಗವೆಂಬುದು ತಾ ಹರಿಬ್ರಹ್ಮರ ನಡುಮನೆಗಳ ಜ್ಯೋತಿರ್ಲಿಂಗ. ಶ್ಲೋ॥ ಅಖಿಲಾರ್ಣವಲಯಾನಾಂ । ಲಿಂಗಮುಖ್ಯ ಪರಂತಥಾ ॥ ಪರಂ ಗೂಢಂ ಶರೀರಸ್ಥಂ । ಲಿಂಗಕ್ಷೇತ್ರಮನಾದಿವತ್ ॥ ಯದಾದಿಮಿೂಶತೇಜಂ । ತಲ್ಲಿಂಗಪಂಚಸಂಜ್ಞಕಂ ॥ ಎಂದಿದು ಲಿಂಗದಮರ್ಮ ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ, ಲಿಂಗದೊಳಿದ ತಿಳಿಯಬಲ್ಲವನೇ ಬಲ್ಲವನು.

(೨). ಲಿಂಗವೆಂಬುದು ಸರ್ವಕಾರಣ ನಿರ್ಮಲ. ಲಿಂಗವೆಂಬುದು ಸಚ್ಚಿದಾನಂದ ನಿತ್ಯಪರಿಪೂರ್ಣ. ಲಿಂಗವೆಂಬುದು ಸರ್ವ ಲೋಕೋತ್ಪತ್ತಿಗೆ ಕಾರಣ. ಲಿಂಗವೆಂಬುದು ಸರ್ವ ತತ್ವಪೂರಣ ನಿಜಚೈತನ್ಯವು. ಲಿಂಗವೆಂಬುದು ಜನ್ಮವಾರುಧಿಯ ದಾಂಟಿಸುವ ಛತ್ರವು. ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ ಜ್ಯೋತಿರ್ಮಯ ಲಿಂಗವು. ಇಂತೀ ಲಿಂಗದ ಮರ್ಮವನರಿದವನೇ ಅರಿದವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೩). ಜಗವನೊಳಕೊಂಡ ಲಿಂಗವು ಸೊಗಸಿದ್ದೆನ್ನ ಕರಸ್ಥಲಕ್ಕೆ ಬಂದಿರಲು ಕಂಡು ಹಗರಣವಾಯಿತ್ತೆನಗೆ. ಆಹಾ ಎನ್ನ ಪುಣ್ಯವೇ! ಆಹಾ, ಎನ್ನ ಭಾಗ್ಯವೇ! ಆಹಾ ಅಖಂಡೇಶ್ವರಾ, ನಿಮ್ಮ ಘನವಕಂಡು ಎನ್ನಮನಕ್ಕೆ ಮಂಗಳವಾಯಿತ್ತು ನೋಡಾ!

(೪). ಅಣುವಿಗೆ ಅಣುವು, ಮಹತ್ತಿಗೆ ಮಹತ್ತು ಎನಿಸುವ ಲಿಂಗದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ಉಪಮಾತೀತ ವಾಙ್ಮನಕ್ಕ ಗೋಚರನೆನಿಸುವ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ಶೃತಿತತಿ ಶಿರದಮೇಲೆ ದಶಾಂಗುಲನೆನಿಸುವ ದೇವನ ಕಂಡೆನಯ್ಯ ನಾನನ್ನ ಕರಸ್ಥಲದಲ್ಲಿ. ಭಾವಭರಿತ ಜ್ಞಾನಗಮ್ಯನೆನಿಸುವ ದೇವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ. ಅಖಂಡೇಶ್ವರನೆಂಬ ಅನಾದಿ ಪರಶಿವನ ಕಂಡೆನಯ್ಯ ಎನ್ನ ಕರಸ್ಥಲದಲ್ಲಿ.

(೫). ವಟಬೀಜ ವಟವೃಕ್ಷಕೋಟಿಯ ನುಂಗಿಪ್ಪಂತೆ, ಸಟೆಯಿಂದಾದ ಅಜಾಂಡಕೋಟಿಗಳ ನುಂಗಿಪ್ಪ ಲಿಂಗವೇ, ದಿಟಪುಟ ಕಣ್ಣುಮನ ಕರಸ್ಥಲಕ್ಕೆ ಬಂದು ಪ್ರಕಟವಾದೆ. ಮಝುಭಾಪು, ಮಝುಭಾಪು ಲಿಂಗವೇ, ನಚರೇಣು

ನಚಕ್ಷುವೆನಿಸುವ ಲಿಂಗವೇ, ಉತ್ಪತ್ತಿ ಸ್ಥಿತಿಲಯಕ್ಕೆ ಹೊರಗಾದೆನಯ್ಯ ನಿನ್ನ ಮುಟ್ಟಿದ ಕಾರಣ, ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೬). ಯತೋವಾಚೋನಿವರ್ತಂತೆ ಅಪ್ರಾಪ್ಯಮನಸಾಸಹ ಎಂದೆನಿಸುವಲಿಂಗವು, ಅತ್ಯತಿಷ್ಠದ್ದಶಾಂಗುಲ ಎಂದೆನಿಸುವ ಲಿಂಗವು, ಚಕಿತಮಭಿಧತ್ತೇ ಎಂದೆನಿಸುವ ಲಿಂಗವು, ಅಣೋರಣೀಯಾನ್ ಮಹತೊಮಹೀಯಾನ್ ಎಂದೆನಿಸುವ ಲಿಂಗವು, ಅಯಂಮೇ ಭಗವಾನ್ ಅಯಂಮೇ ಭಗವತ್ತರಂ ಎಂದೆನಿಸುವ ಲಿಂಗವು, ಏಕಮೂರ್ತಿ ಸ್ತ್ರಿಧಾಭೇದವೆಂದೆನಿಸಿ ಶ್ರೀಗುರುಲಿಂಗ ಜಂಗಮರೂಪಾಗಿ, ಇಷ್ಟಪ್ರಾಣಸ್ತಥಾ ಭಾವಂ ತ್ರಿಧಾವ್ಯೈಕ್ಯವೆಂದು ತ್ರಿವಿಧವೇಕೀಭವಿಸಿ ಲಿಂಗ ರೂಪಾಗಿ ಎನ್ನ ಕರಸ್ಥಲಕ್ಕೆ ಬಂದು ಕರತಳಾಮಳಕದಂತೆ ತೋರುತ್ತಿದ್ದಾನೆ, ಆಹಾ ಎನ್ನ ಪುಣ್ಯವೇ, ಆಹಾ ಎನ್ನ ಭಾಗ್ಯವೇ, ಆಹಾ ಎನ್ನ ಸತ್ಯವೇ, ಆಹಾ ಎನ್ನ ನಿತ್ಯನೇ, ಶಿವಶಿವಾ ಮಹಾದೇವ ನೀನೇ ಬಲ್ಲೆ, ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

(೭). ಪಾತಾಳವಿತ್ತಿತ್ತ, ಪಾದಂಗಳತ್ತತ್ತ. ದಶದಿಕ್ಕು ಇತ್ತಿತ್ತ ದಶ ಭುಜಗಳತ್ತತ್ತ. ಬ್ರಹ್ಮಾಂಡವಿತ್ತಿತ್ತ, ಮಣಿಮುಕುಟತ್ತತ್ತ. ಚನ್ನಮಲ್ಲಿಕಾರ್ಜುನಯ್ಯ ನೀನೆನ್ನ ಕರಸ್ಥಲಕ್ಕೆ ಬಂದು ಚುಳುಕಾದಿರಲ್ಲಾ ಲಿಂಗವೇ.

(೮). ತನುವಿಂಗೆ ಕುರುಹ ಕೊಟ್ಟು, ಮನಕ್ಕೆ ಅರಿವ ಕೊಟ್ಟು, ಘನಕ್ಕೆ ವಿಶ್ರಾಂತಿಯ ಕೊಟ್ಟು ಸುಳಿದಾಡುವ ಪರಿಪೂರ್ಣಂಗೆ ನಮೋನಮೋ ಎಂಬೆ ನಿಷ್ಕಳಂಕಮಲ್ಲಿಕಾರ್ಜುನಾ.

(೯). ಕರಸ್ಥಲದ ಜ್ಯೋತಿಯದು. ಕುರುಹದು, ಎರಕವದು, ಅದರ ನೆಲೆಯ ತಿಳಿದರೆ ನಿಜಾನಂದವು. ಹೊಲಬುದೋರದಿಹ ನಿಸ್ಸೀಮನ ಹೊಲಬನರಿದು ಕೂಡಿದಾತನೇ ಮೃಡನು ಕಾಣಾ ರಾಮನಾಥಾ.

(೧೦). ಪೃಥ್ವಿ ಅಪ್ಪುವಿನ ಆಧಾರದಿಂದ ಬೀಜ ಒಡೆದು ಬೆಳೆವಂತೆ, ಅರುಹು ಅರುಹಿಸಿಕೊಂಬ ಈ ಉಭಯದ ಮಧ್ಯದಲ್ಲಿ ಜ್ಞಾನಕುರುಹಾಗಿ ಚಿದ್ಘನವಸ್ತುವಾಗಿ, ಉಭಯ ಒಂದುಗೂಡಿ ಮೇಲನರಿತಲ್ಲಿ ಸದಾಶಿವಮೂರ್ತಿಲಿಂಗವು ಬಚ್ಚಬಯಲು.

(೧೧). ಅರಿದರಿವು ಬರು ದೊರೆವ್ಹೋಯಿತ್ತು. ಕುರುಹುದೋರಿದಡೆಂತು ನಂಬರು. ತೆರಹಿಲ್ಲದ ಘನವ ನೆನೆದು ಗುರುಶರಣೆಂಬುದಲ್ಲದೆ, ಮರಹು ಬಂದಿಹುದೆಂದು ಗುರು ಕುರುಹ ಕಯ್ಯಲ್ಲಿ ತೋರಿದ. ಅರಿಯಬಲ್ಲಡೆ ಗುಹೇಶ್ವರಲಿಂಗವು ಹೃದಯದಲ್ಲಿದ್ದಾನೆ.

**ಅರ್ಥ:**—ಮನದೊಳಗೆ ಅಳವಟ್ಟ ಘನಲಿಂಗದ ನಿಜವ ನೋಡಬೇಕೆಂದು ಕಯ್ಯೊಳಗೆ ಕನ್ನಡಿಯ ನೋಡುವಂತೆ, ಗುರುಸ್ವಾಮಿ ಕರಸ್ಥಲಕ್ಕೆ ಲಿಂಗವ ಕೊಟ್ಟನಲ್ಲದೆ ಮತ್ತೇನೂ ಮರೆಗನ್ನಡವಿಲ್ಲ. ಇದುಕಾರಣ ಅರಿಯಬಲ್ಲಡೆ ಲಿಂಗವೆಂಬುದು ಮನದೊಳಗೆ ಇಪ್ಪದೆಂಬುದೀವಚನದ ತಾತ್ಪರ್ಯಾರ್ಥ.

(೧೨). ಜ್ಯೋತಿಯ ಬೆಳಗಿನಲ್ಲಿ ಜ್ಯೋತಿಯ ಕಪಟವ ಕಾಂಬಂತೆ, ಕಣ್ಣಿನಿಂದ ಕನ್ನಡಿಯ ನೋಡಿ ಕಣ್ಣ ಕಲೆಯ ಕಾಂಬಂತೆ, ತನ್ನಿಂದ ತಾ ನೋಡಿ ತನ್ನ ನರಿಯಬೇಕು. ತನ್ನನರಿಯದವ ನಿಮ್ಮನೆತ್ತ ಬಲ್ಲನೋ? ತನ್ನನರಿವುದಕ್ಕೆ ದೃಷ್ಟವ ಕಯ್ಯಲ್ಲಿ ಕೊಟ್ಟ. ಕಾಣದುದಕ್ಕೆ ಚಿತ್ತವ ನೆನಹಿಂಗೆ ಇತ್ತ. ಚಿತ್ತ ಇಷ್ಟದಲ್ಲಿ ಅಚ್ಚೊತ್ತಿದ. ಮತ್ತೆ ದೃಷ್ಟವ ಕಾಂಬುದಿನ್ನೇನೋ? ಉರಿಯೊಳಗಣ ಕರ್ಪುರ, ಅನಲನೊಳಗಣ ಪಾವಕ, ಸಿಲೆಯುಂಡ ಎಣ್ಣೆ, ಅಳತೆಯುಂಟೇ ಅಯ್ಯಾ? ಲಿಂಗವ ಮಚ್ಚಿದ ಅಂಗಕ್ಕೆ ಜಗದ ಹಂಗಿಲ್ಲ. ಅನಂಗ ಅತೀತ ನಿಷ್ಕಳಂಕಮಲ್ಲಿಕಾರ್ಜುನ ಲಿಂಗವೇ ತಾನಾದ ಶರಣಂಗೆ.

(೧೩). ಮೃತ್ಕಾಷ್ಠ ಪಾಷಾಣಂಗಳಿಂದಾದವೆಲ್ಲ ಲಿಂಗವೇ? ಲೋಹ ಬೆಳ್ಳಿ ತಾಮ್ರ ಸುವರ್ಣದಿಂದಾದವೆಲ್ಲ ಲಿಂಗವೇ? ಅಲ್ಲ. ಅಲ್ಲಿ ಭಾವಿಸುವ ಮನದ ಕೊನೆಯ ಮೊನೆಯ ಮೇಲೆ ಬೆಳಗುವ ನಿಜಬೋಧಾರೂಪು ಲಿಂಗವಲ್ಲದೆ, ಇವೆಲ್ಲ ಲಿಂಗವೇ? ತಿಳಿದು ನೋಡಲು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನೇ ಲಿಂಗವು.

(೧೪). ಶ್ರೀಗುರುಸದ್ಭಾವ ಜಾತಲಿಂಗವು ಶಿವಕಳೆ ಸಂಪೂರ್ಣವಾಗಿ ಕರಸ್ಥಲದಲ್ಲಿ ಮೂರ್ತಿಗೊಂಡಿರಲು, ಕಂಗಳಲ್ಲಿದ್ದಡೆ ತನ್ನಳವೇ? ಪರಿಪೂರ್ಣ ಪರಶಿವನು ಆರಾರ ಭಾವಕಲ್ಪನೆ ಹೇಗೆ ಹಾಗೆ ತೋರಿತ್ತೆಂದಡೆ, ತೋರಿದಂತೆ ಖಂಡಿತನೇ? ಅಗಲರಿಯನು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

(೧೫). ತತ್ಪದ ಲಿಂಗವೆಂದರುಹಿ, ತ್ವಂಪದ ಅಂಗವೆಂದರುಹಿ, ಅಸಿಪದ ಪ್ರಾಣವೆಂದರುಹಿ, ಅಂಗವೇ ಲಿಂಗ, ಲಿಂಗವೇ ಪ್ರಾಣವೆಂದು ಶ್ರೀಗುರು ಇಷ್ಟಲಿಂಗವ ಕೊಟ್ಟು ದೃಷ್ಟಲಿಂಗವ ತೋರಿದ ಬಳಿಕ ತತ್ವಮಸಿಪದ ನಿಮ್ಮ ಶರಣರು ಉರಲಿಂಗ ಪೆದ್ದಿ ಪ್ರಿಯವಿಶ್ವೇಶ್ವರಾ.

(೧೬). ಕರಸ್ಥಲದ ಅಚಲದಲ್ಲಿ ಸಕಲವ್ಯಾಪ್ತಿಯ ಕೂಡಿ ಅನುಕರಿಸಿ ಇಪ್ಪುದದು ಭೇದ ನೋಡಾ. ಬಹುಳ ಘನತೆಯನೊಂದು ಮಾಡಿ ಕರದೊಳಗಿಟ್ಟ ಭೇದ ನಿನ್ನಯ ರೂಪು ಯೋಗಿನಾಥಾ.

**ಅರ್ಥ:**—ಶ್ರೀಗುರು ಕರುಣಿಸಿ ಅಖಂಡ ಪರಬ್ರಹ್ಮವ ಸೂಕ್ಷ್ಮವ ಮಾಡಿ ಕರಸ್ಥಲದ ಶಿಲಾಮೂರ್ತಿಯಲ್ಲಿ ನೆಲೆಗೊಳಿಸಿ ಇರ್ದಲಿಂಗಮೂರ್ತಿಯೇ ಶಿವನೆಂಬುದೀ ವಚನದ ತಾತ್ಪರ್ಯಾರ್ಥ.

(೧೭). ಎಪ್ಪತ್ತೈದು ಗ್ರಾಮದೊಳಗೊಪ್ಪಿಪ್ಪ ನಿನ್ನುವನು ಉತ್ತುಮಾಂಗಕ್ಕೆ ತಂದು ಕರಸ್ಥಲದಲ್ಲಿ ತತ್ವತೂರ್ಯಾರ್ಥದಿಂದತ್ತತ್ತಲಾಗಿಹ ಬ್ರಹ್ಮ ಮತ್ತೀ ನೀನಾನಾದೆ ಯೋಗಿನಾಥಾ.

**ಅರ್ಥ:**—ಎಪ್ಪತ್ತೈದು ತತ್ವಸ್ವರೂಪಾಗಿಪ್ಪ ಶರೀರವೆಂಬುದೇ ಗ್ರಾಮ ಆ ಗ್ರಾಮದಲ್ಲಿಪ್ಪ ಜೀವನ ಪರಮ ಚೈತನ್ಯವಾಗಿಪ್ಪ ಶಿವಕಳೆಯ ಶ್ರೀಗುರು ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸಿ ಮಥನಿಸಿ ತೆಗೆದು ಕರಸ್ಥಲದಲ್ಲಿ ಇರಿಸಿದ ಇಷ್ಟಲಿಂಗವೆಂಬ ತತ್ಪದವು ಆತ್ಮವೆಂಬ ಅಂಗವು ಸಂಬಂಧವಾಗಿ ಭೇದವಳಿದ ಅರಿವಿಂದ ಪರಬ್ರಹ್ಮವೆಂಬುದೀ ವಚನದ ತಾತ್ಪರ್ಯಾರ್ಥ.

(೧೮). ಹೆಸರಿಡಲಿಕ್ಕಳವಲ್ಲ. ಹೆಸರುಗೆಟ್ಟು ಸೀಮೆ ಪಸರಿಸಿತ್ತಿಕ್ಕ. ಮತ್ತಾನಂದದಾ ಹೆಸರಿಡುವ ಸೀಮೆಯನು ಗುರುವಾಗಿ ಪಸರಿಸಲು, ವಸುಧೆ ಕಂಡಿತು ಒಂದು ಲಿಂಗ ರೂಪಾ ಆನಂದರೂಪು. ಕಪಿಲ ಸಿದ್ಧಮಲ್ಲಿಕಾರ್ಜುನನ ಸೀಮೆಯೊಳಗಡಗಿಪ್ಪುದು ಅನಂತ ಬ್ರಹ್ಮಾಂಡವು.

**ಅರ್ಥ:** – ವಾಙ್ಮನಕ್ಕೆ ಬಾರದ ಅಖಂಡಾನಂದ ಸ್ವರೂಪಾಗಿಪ್ಪ ಪರಬ್ರಹ್ಮವು ನಾಮರೂಪಗಳಿಲ್ಲದೆ ಇರ್ದು ತನ್ನ ಸ್ವಲೀಲೆಯಿಂದ ತಾನೇ ಗುರುರೂಪಾಗಿ ತನ್ನ ನಿಜ ಚೈತನ್ಯವ ತಾನೇ ನಾಮರೂಪಿಗೆ ತಂದು ಲಿಂಗವೆಂದೆನಿಸಿ ತೋರಿದನಾಗಿ, ಆ ಲಿಂಗದ ದರುಶನ ಸ್ಪರ್ಶನದಿಂದ ಜಗತ್ತು ಪುಣ್ಯರಾದರು. ಆ ಗುರು

ಕರುಣಿಸಿದ ಇಷ್ಟಲಿಂಗವು ಅನಂತ ಬ್ರಹ್ಮಾಂಡಂಗಳನೊಳಕೊಂಡಿಪ್ಪ ಪರಬ್ರಹ್ಮನೆಂದರಿದ ಶರಣನು ಪರಬ್ರಹ್ಮವೆಯಪ್ಪನೆಂಬುದೀ ವಚನದ ತಾತ್ಪರ್ಯಾರ್ಥ.

(೧೯). ಸೇವ್ಯನಾಗಿ ಸ್ವಯವಾದೆ. ಸಂಗಿಯಾಗಿ ನಿಸ್ಸಂಗಿಯಾದೆ. ಆನಂದನಾಗಿ ಅನಾಮಯನಾದೆ. ಸರ್ವರೊಳಗು ಆದಿಸಾದಾಖ್ಯ ತತ್ವವಿಮೀರಿದೆ. ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ ನಿಜಸ್ವರೂಪವನರುಹಿ ಎನಗೆ ಚುಳುಕಾದೇ ನೀ.

**ಅರ್ಥ**:—ಪರಶಿವನು ತನ್ನ ಚಿದಂಶಿಕರಾದ ಆತ್ಮರುಗಳಿಗೆ ಜಡದೇಹ ಸಂಬಂಧಿಗಳ ಮಾಡಿ ಸೇವಕರೆನಿಸಿ ತಾನು ಸೇವ್ಯನಾಗಿ ತನ್ನ ನಿಜಕ್ಕೆ ಭಂಗವಿಲ್ಲದಂತೆ ಇರ್ದ ಶಿವನೆಂಬುದೀಗ ಸೇವ್ಯನಾಗಿ ಸ್ವಯವಾದೆ ಎಂಬ ಶಬ್ದಕ್ಕರ್ಥ. ಅಂತಪ್ಪ ಆತ್ಮರುಗಳ ಅಂತರಂಗದಲ್ಲಿ ಪರಮ ಚಿತ್ಕಲಾಸ್ವರೂಪನಾಗಿ ಕೂಡಿರ್ದು ದೇಹಕರ್ಮಂಗಳಿಗೆ ಹೊರಗಾಗಿ ಇರ್ದನು ಶಿವನೆಂಬುದೀಗ ಸಂಗಿಯಾಗಿ ನಿಸ್ಸಂಗಿಯಾದೆ ಎಂಬ ಶಬ್ದಕ್ಕರ್ಥ. ಆತ್ಮರುಗಳ ನಾಮರೂಪಿಗೆ ತಂದು ಭವ ದುಃಖಿಗಳ ಮಾಡಿ ತಾನು ತನ್ನ ನಿಜಾನಂದವ ಹಿಂಗದೆ ವಿಶ್ವಾನಂದನಾಗಿರ್ದು ನಾಮರೂಪಿಗೆ ಬಾರದೆ ಭವರೋಗ ವಿರಹಿತನಾಗಿರ್ದ ಶಿವನೆಂಬುದೀಗ ಆನಂದ ನಾಗಿ ಅನಾಮಯನಾದೆ ಎಂಬ ಶಬ್ದಕ್ಕರ್ಥ. ಪಂಚ ಸಾದಾಖ್ಯದಿಂದಾದ ಪಂಚ ವಿಂಶತಿ ತತ್ವದೇಹದೊಳಗೆ ಪರಮ ಚೈತನ್ಯನಾಗಿರ್ದು ಆ ಪಂಚವಿಂಶತಿ ತತ್ವದೇಹ ಸಂಬಂಧಿಯಲ್ಲದಿರ್ದ ಶಿವನೆಂಬುದೀಗ ಸರ್ವದೊಳಗು ಆದಿಸಾದಾಖ್ಯ ತತ್ವವ ಮೀರಿದೆ ಎಂಬ ಶಬ್ದಕ್ಕರ್ಥ. ಅಂತು ಎನ್ನಲ್ಲಿರ್ದು ಎನಗೆ ಗೋಚರಿಸದೆ ಇರ್ದ ಮಹಾಘನಲಿಂಗವಸ್ತು ಎನ್ನ ಅರಿವಿಂಗೆ ಗೋಚರಿಸಿದನಾಗಿ ಕರಸ್ಥಲಕ್ಕೆ ಬಂದು ಸೂಕ್ಷ್ಮರೂಪಾಗಿ ತೋರಿದೆ ಎಂಬುದೀಗ ನಿಜಸ್ವರೂಪವನರುಹಿ ಎನಗೆ ಚುಳುಕಾದೆ ಎಂಬ ಶಬ್ದಕ್ಕರ್ಥ.

(೨೦). ಕಂಗಳ ಮುಂದಣಿಂದ ಶ್ರೀಗುರುಲಿಂಗ ಹಿಂಗಿದರೆ, ವ್ರತಕ್ಕೆ ಭಂಗವಾದುದೆಂದು ಕೊಟ್ಟನಯ್ಯ ಶ್ರೀಗುರು ಕರಸ್ಥಲದಲ್ಲಿ ಪ್ರಾಣಲಿಂಗವ. ಆ ಲಿಂಗ ಮುಟ್ಟಲೊಡನೆ ತನುಪ್ರಸಾದ ಮನಪ್ರಸಾದ ಧನಪ್ರಸಾದವಾಯಿತ್ತು. ಇಂತು ಸರ್ವಾಂಗಪ್ರಸಾದವಾಯಿತ್ತು ಕೂಡಲಸಂಗಮದೇವಾ.

(೨೧). ಆಚಾರ ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ. ಆ ಇಷ್ಟಲಿಂಗವಿಡಿದಿಹುದೇ ಪ್ರಾಣಲಿಂಗ ಸ್ವಾಯತ. ಪ್ರಾಣಲಿಂಗ ಉದಿಸಿದಲ್ಲದೆ

ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯ ಕಾಣಾಪ್ರಭುವೇ.

(೨೨). ಅಂತರಂಗದಲ್ಲಿರ್ದ್ದ ನಿರವಯಲಿಂಗವನು ಸಾವಯಲಿಂಗವ ಮಾಡಿ ಶ್ರೀಗುರುಸ್ವಾಮಿ ಕರಸ್ಥಲಕ್ಕೆ ತಂದು ಕೊಟ್ಟ ಲಿಂಗವು ಅಂತರಂಗವನಾವರಿಸಿ ಅಂತಃಕರಣ ಕರಣಂಗಳೇ ಕಿರಣಂಗಳಾಗಿ, ಆ ಬೆಳಗುವ ಚಿದಂಶವೇ ಪ್ರಾಣಲಿಂಗವು, ಆ ಮೂಲ ಚೈತನ್ಯವೇ ಭಾವಲಿಂಗವು ಇದನರಿದು ನೋಡುವ ನೋಟಭಾವ ಪರಿಪೂರ್ಣವಾಗಿ ತಾನು ತಾನಹನಲ್ಲದೆ ಇದಿರಿಟ್ಟು ತೋರುವದಿಲ್ಲ. ಅಖಂಡಪರಿಪೂರ್ಣವಪ್ಪ ನಿಲವು ತಾನೇ ಕೂಡಲಸಂಗಮದೇವಾ.

(೨೩). ಶ್ರೀಗುರು ಪ್ರಾಣಲಿಂಗವನು ಕರತಳಾಮಳಕವ ಮಾಡಿ ಕರಸ್ಥಲಕ್ಕೆ ತಂದು ಕೊಟ್ಟನಾಗಿ ಒಳಗೆನ್ನದೆ ಹೊರಗೆನ್ನದೆ ಆ ಲಿಂಗವನಚ್ಚಿ ಮಚ್ಚಿ ಹರುಷದೊಳೋಲಾಡುವೆ. ಅದೆಂತೆಂದೊಡೆ, "ಯತೋ ವಾಚೋ ನಿವರ್ತಂತೆ ಅಪ್ರಾಪ್ಯಮನಸಾ ಸಹ, ನಾದಬಿಂದು ಕಳಾತೀತಂ, ಗುರುಣಾಲಿಂಗಮುದ್ಭವಂ" ಇಂತೆಂದುದಾಗಿ, ಮಹಾಘನಲಿಂಗವ ಪಡೆದು ಆನಂದಿಸುವೆ ಕೂಡಲಸಂಗಮದೇವಾ.

(೨೪). ವೇದವೇದಾಂತಂಗಳಿಗೆ ಅಸಾಧ್ಯವಾದ ಅನುಪಮಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ. ನಾದಬಿಂದು ಕಳೆಗಳಿಗಭೇದ್ಯವಾದ ಅಚಲಿತಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ. ವಾಙ್ಮನಕ್ಕ ಗೋಚರವಾದ ಅಖಂಡಿತಲಿಂಗವ ತಂದು ಕೊಟ್ಟನಯ್ಯ ಸದ್ಗುರು ಎನ್ನ ಕರಸ್ಥಲಕ್ಕೆ. ಇನ್ನು ನಾನು ಬದುಕಿದೆನು. ನಾ ಬಯಸುವ ಬಯಕೆ ಕೈಸಾರಿತೆಂದು ಕೂಡಲಸಂಗಮದೇವಾ.

(೨೫). ಮರೆಯಲ್ಲಿರ್ದ ಸಂಚತೆರೆದರುಶನವಾಗಲಾಗಿ ಅಚ್ಚರಿ ಎಂಬುದು ಬಿಟ್ಟಿತ್ತು. ಅಂಗದ ಮೇಲಣ ಲಿಂಗನಿಲಲಾಗಿ ಕುರುಹೆಂಬ ಭಾವವು ಅಡಗಿತ್ತು. ಸರ್ವೇಂದ್ರಿಯಂಗಳು ಹಿಂಗಿ ಏಕಭಾವ ಸಲೆಸಂದು ಉಭಯದಂಗಲೇಸಾದುದು ಕಾಲಾಂತಕ ಭೀಮೇಶ್ವರ ಲಿಂಗದಲ್ಲಿ ದ್ವಂದ್ವವಳಿದ ನಿಂದಸ್ಥಲ.

(೨೬). ಲಿಂಗವ ಸ್ಥೂಲವೆಂಬದು ಕೆಲರು. ಲಿಂಗಸ್ಥೂಲವಲ್ಲ. ಲಿಂಗವ ಸೂಕ್ಷ್ಮವೆಂಬರು ಕೆಲರು. ಲಿಂಗಸೂಕ್ಷ್ಮವಲ್ಲ. ಸ್ಥೂಲಸೂಕ್ಷ್ಮದ ಮೇಲಣ ಜ್ಞಾನ

ರೂಪು ಪರನಾದ ಪರಬ್ರಹ್ಮವೇ ಲಿಂಗವೆಂದರಿದ ಅರಿವು ಅಖಂಡರೂಪು ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಲವು ತಾನೇ ಬೇರಿಲ್ಲ.

(೨೭) ಕಲ್ಲೊಳಗಣ ಕಿಚ್ಚು ಬೂದಿಯಲ್ಲಿರುವಂತೆ ಇರಿಸಯ್ಯಾ ಎನ್ನ ಲಿಂಗದೊಳಗೆ. ಗಾಳಿ ಗಂಧವನಪ್ಪಿದಂತಿರಿಸಯ್ಯಾ ಎನ್ನ ಲಿಂಗದೊಳಗೆ. ರೇಕಣ್ಣಪ್ರಿಯನಾಗಿನಾಥಾ ನಿಮ್ಮ ನಿಲವಿನೊಳಗಣ ನಿಲವು ಜ್ಯೋತಿಯ ಬೆಳಗಿನೊಳಗಡಗಿದ ತೈಲದಂತಿರಿಸಯ್ಯಾ ಎನ್ನ ಲಿಂಗದೊಳಗೆ.

(೨೮). ಅಷ್ಟವಿಧಾರ್ಚನೆ ಷೋಡಶೋಪಚಾರ ಬಾಹ್ಯಕ್ರಿ ಎಂಬ ಭಾವ ಭ್ರಮಿತರ ಮಾತ ಕೇಳಲಾಗದು. ಧನವುಳ್ಳಾತನು ಅಷ್ಟಸಂಪದದೈಶ್ವರ್ಯವ ಭೋಗಿಸುವನಲ್ಲದೆ ಧನಹೀನ ದರಿದ್ರ ನೇನ ಭೋಗಿಸುವನೋ? ಲಿಂಗವು ಪ್ರಾಣವು ಅವಿರಳಾತ್ಮಕವಾಗಿ ಉತ್ಕೃಷ್ಟವಾಗಿದ್ದಲ್ಲಿ ಅಮಳ ಸೊಂಕು ತುಳುಕಿ ಬಾಹ್ಯಕ್ರಿಯಾಗಿ ಕರಸ್ಥಲಕ್ಕೆ ಬಂದು ಉದಿಸಿದಲ್ಲದೆ ಅದು ಅಂತರಂಗವಲ್ಲ, ಬಹಿರಂಗವಲ್ಲ ನಮ್ಮ ಉರಿಲಿಂಗ ದೇವರು.

(೨೯). ಕಾನನದ ಕಂಗೆಡದ ಭೇದವನು ಸ್ವಾನುಭೂತ್ಯೈಕ್ಯದಲ್ಲಿ ದೀಕ್ಷೆಯಾಗಿ ಮೇಲಾದ ದೀಕ್ಷೆಯೂ ತಾನೆರಡು ಒಂದಾದ ಆನಂದವನು ಕಂಡೆ ಯೋಗಿನಾಥಾ.

**ಅರ್ಥ**:—ಕಾನನವೆಂದರೆ ದೇಹಾರಣ್ಯ. ಅಂತಪ್ಪದೇಹಾರಣ್ಯವೆಲ್ಲ ಅಜ್ಞಾನಾಂಧ ಕಾರಣ್ಯವಾಗಿಪ್ಪುದೆಂಬುದೀಗ ಕಾನನದ ಎಂಬ ಶಬ್ದಕ್ಕರ್ಥ. ಅಂತಪ್ಪ ದೇಹಾರಣ್ಯದ ಅಜ್ಞಾನಾಂಧಕಾರವು ಮನದ ಕಣ್ಣಿಗೆ ಕವಿದು ತನ್ನ ನಿಜವ ಕಾಣಲು ಎಡೆಗೊಡದೆಂಬುದೀಗ ಕಂಗೆಡದ ಭೇದವನು ಎಂಬ ಶಬ್ದಕ್ಕರ್ಥ. ಅಂತು ಮನದ ಕಣ್ಣಿಗೆ ಕಾಣಿಸಿಕೊಳ್ಳದೆ, ದೇಹದ ಅಂತರಂಗದಲ್ಲಿರ್ದು ಪರಮ ಚಿತ್ಕಲಾಲಿಂಗವ ಸ್ವಾನುಭಾವವನಿತ್ತು ಸದ್ಗುರು ಕಾಣಿಸಿ ಕೊಟ್ಟನೆಂಬುದೀಗ ಸ್ವಾನುಭೂತ್ಯೈಕ್ಯದಲ್ಲಿ ದೀಕ್ಷೆಯಾಗಿ ಎಂಬ ಶಬ್ದಕ್ಕರ್ಥ. ಅಂತು ತನ್ನಂತರಂಗದಲ್ಲಿ ಅರುಹಿಸಿ ಕೊಟ್ಟ ಪರಮ ಚಿತ್ಕಲಾಲಿಂಗವನೆ ಬಹಿಷ್ಕರಿಸಿ ತಂದು ಇಷ್ಟಲಿಂಗವ ಮಾಡಿ ಅಂಗಕ್ಕೆ ಸಾಹಿತ್ಯವ ಮಾಡಿದ ಶ್ರೀಗುರುವೆಂಬುದೀಗ ಮೇಲಾದ ದೀಕ್ಷೆಯೂ ಎಂಬ ಶಬ್ದಕ್ಕರ್ಥ. ಅಂತು ಅಂಗದ ಮೇಲೆ ಲಿಂಗಸಾಹಿತ್ಯವಾದಾಕ್ಷಣವೇ ಅಂಗವೆಲ್ಲ ಲಿಂಗವೆಯಾಗಿ ಭಿನ್ನವಿಲ್ಲದೆ ಲಿಂಗಸುಖಾನಂದವ ಪಡೆದ

ಶರಣನೆಂಬುದೀಗ ತಾನೆರಡೂ ಒಂದಾದ ಆನಂದವನು ಕಂಡೆ ಯೋಗಿನಾಥಾ ಎಂಬ ಶಬ್ದಕ್ಕರ್ಥ.

(೩೦). ಕಾಯವಿಲ್ಲದ ಸಂಸಾರ ಚೋದ್ಯ. ಕಾಯದೊಳಗೆ ನಿರಾಳ ಚೋದ್ಯ. ನಿರಾಳದೊಳಗೊಂದು ಕೂಡಲ ಚನ್ನಸಂಗಯ್ಯನೆಂಬ ಶರಣ ಸಮ್ಯಕ್ ಚೋದ್ಯ ಮಹಾ ಚೋದ್ಯ.

**ಅರ್ಥ**:—ನಿರ್ದೇಹಿಯಾಗಿರ್ದ ನಿಃಕಲಲಿಂಗವು ತಾನೇ ಸತಿಯಾಗಿ ಶರಣನೆಂಬ ಪತಿಯು ಕೂಡಿಕೊಂಡು ಸಂಸಾರಿಯಾಗಿಪ್ಪುದು ಚೋದ್ಯವೆಂಬುದೀಗ ಕಾಯವಿಲ್ಲದ ಸಂಸಾರ ಚೋದ್ಯವೆಂಬ ಶಬ್ದಕ್ಕರ್ಥ. ಅಂತುನಿಃಕಲಲಿಂಗವು ಶರಣನಂಗದೊಳಗೆಲ್ಲ ಪರಿಪೂರ್ಣವಾಗಿ ನೆಲೆಗೊಂಡು ಬೆಳಗುತ್ತಿಪ್ಪನಾಗಿ ಅಂತು ಬೆಳಗುತ್ತಿಪ್ಪುದು ಚೋದ್ಯವೆಂಬುದೀಗ ಕಾಯದೊಳಗೆ ನಿರಾಳ ಚೋದ್ಯವೆಂಬ ಶಬ್ದಕ್ಕರ್ಥ. ಅಂತು ಶರಣನಂಗದೊಳಗೆ ಬೆಳಗುತ್ತಿರ್ದ ನಿಃಕಲ ಲಿಂಗವು ಸಾಕಾರವಾಗಿ ಶರಣನ ಕರಸ್ಥಲಕ್ಕೆ ಬಂದು ಶರಣಂಗೆ ಪ್ರತ್ಯಕ್ಷವಾದುದು ಅತಿ ಚೋದ್ಯವೆಂಬುದೀಗ ನಿರಾಳದೊಳಗೊಂದು ಶರಣ ಸಮ್ಯಕ್ ಚೋದ್ಯ ಮಹಾ ಚೋದ್ಯವೆಂಬ ಶಬ್ದಕ್ಕರ್ಥ.

(೩೧). ಅಯ್ಯಾ, ಅರಿವು ಏನಾಗಿ ಧರಿಸಿದರು ಹೇಳಾ ನಿಮ್ಮ ಶರಣರು? ಅರಿವು ಆಕಾರಕ್ಕೆ ಬಂದಲ್ಲಿ ಪ್ರಕೃತಿ ಆಯಿತ್ತು. ಅರಿವು ಹಿಂದಾಗಿ ಪ್ರಕೃತಿ ಮುಂದಾಯಿತ್ತು. ಪ್ರಕೃತಿ ಸ್ವಭಾವವನಳಿಯಬೇಕೆಂದು ಕಲಿದೇವರದೇವ ಇಷ್ಟಲಿಂಗವಾಗಿ ಅಂಗದಲ್ಲಿ ಬೆಳಗಿದನು ನೋಡಾ ಅಲ್ಲಮಯ್ಯ.

(೩೨). ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳೊಳು ಜನಿಸುವದೇ ಜನಿತವೆಲ್ಲರಿಗೆ. ಆ ಜನ್ಮಾಂತರ ಯೋನಿಗಳೊಳು ಜನಿಸಿದಾತನೇ ಯೋಗಿ. ಆ ಯೋಗಿ ಜನ್ಮಾಂತರವ ಕಳೆದ ಪರಿ ಹೇಗೆಂದಡೆ, ಶ್ರೀಗುರು ಕಾರುಣ್ಯ ಕರಸ್ಥಲದಲ್ಲಿ ಬೆಸಲಾಯಿತ್ತಾಗಿ, ಅಂತಾ ಯೋನಿಮುಖ ಜನ್ಮಾಂತರವ ಕಳೆವ ಶರಣಂಗೆ ಭವಮಾಲೆಯುಂಟೇ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

**ಅರ್ಥ**:—ಗುರುವಿನ ಕರದಲ್ಲಿ ಜನಿಸಿದ ಶರಣರು ಲಿಂಗಸಂಬಂಧಿಯಾದನಾಗಿ ಶರಣಂಗೆ ಜನನ ಮರಣವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

( ೩೩ ). ಆನು ಕಾಮಿಸುತ್ತಿಪ್ಪ ಸಾಲೋಕ್ಯವಿದೆ, ಸಾಮೀಪ್ಯವಿದೆ, ಸಾರೂಪ್ಯವಿದೆ, ಸಾಯುಜ್ಯವಿದೆ, ಧರ್ಮವಿದೆ, ಅರ್ಥವಿದೆ, ಕಾಮವಿದೆ, ಮೋಕ್ಷವಿದೆ, ಎನ್ನ ಧ್ಯಾನ ಜಪತಪದಿಂದವೇ ಸಿದ್ಧಿಯಪ್ಪ ಮಹಾಸಿದ್ಧಿ ಇದಿದೆ. ಆನೇನ ಇಚ್ಛೈಸುವ ಇಚ್ಛೆ ಎಲ್ಲವೂ ಇದೇ ನೋಡಾ. ಶ್ರೀಗುರು ಕಾರುಣ್ಯದಿಂದ ಮಹಾವಸ್ತು ಕರಸ್ಥಲಕ್ಕೆ ಬಂದಬಳಿಕ ಸರ್ವ ಸುಖ ಇದೆ ಇದೇ ನೋಡಾ. ಇನ್ನು ಬಯಲ ಭ್ರಮೆಯೊಳಗೆ ಹೊಗಿಸದಿರಯ್ಯ. ನಿಮ್ಮ ಬೇಡಿಕೊಂಬೆನು, ನಿಮಗೆ ಎನ್ನಾಣೆ ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರಾ.

---

## ಇಷ್ಟಲಿಂಗವು ಮಹಾಲಿಂಗವೆಂದರಿವುದು.

( ೩೪ ). ಏತದ ತುದಿಯಲ್ಲಿ ಕಟ್ಟಿದ ಮಡಿಕೆಯಂತೆ, ಅದ ನೀತಿವಂತರು ಮೆಟ್ಟಿದರೆ ಪಾತಾಳದ ಉದಕವ ತಂದು ಪಾತೆಗೆ ಹರಹಿದ ತೆರದಂತೆ, ಸರ್ವಮಯದಲ್ಲಿ ಒಪ್ಪಿಪ್ಪ ವಸ್ತುವನರಿದು ನಿರ್ಜಾತನಾಗಬಲ್ಲರೆ ಆತನೇ ಜೀವನ್ಮುಕ್ತ ನಿಷ್ಕಳಂಕಮಲ್ಲಿಕಾರ್ಜುನಾ.

**ಅರ್ಥ:**—ಏತದ ಗಣೆಯಲ್ಲಿ ಬಂಧಿಸಿದ ಬೊಕ್ಕಣದ ಹಾಗೆ, ಅದ ಬಲ್ಲವರು ತಿಳಿದರೆ, ಭಾವಿಯ ನೀರಮೇಲಕ್ಕೆ ತಂದು ಮಡಿಗಳಿಗಯ್ದಿಸಿ, ಸಸಿಗಳ ವರ್ಧನವ ಮಾಡುವ ಹಾಗೆ, ಚರಾಚರ ಪ್ರಾಣಿಗಳಲ್ಲಿ ಪೂರ್ಣವಾಗಿ ತುಂಬಿಕೊಂಡಿಪ್ಪ ಮಹಾಲಿಂಗವೇ ಇಷ್ಟಲಿಂಗವಾಗಿಪ್ಪದೆಂದು ಅರಿದು ಆ ಅಜಾತ ಸ್ವಯಂಭುವಾದ ಲಿಂಗದಲ್ಲಿ ಕೂಡಿ ಲಿಂಗವೇ ತಾನಾಗಿರಬಲ್ಲಡೆ, ಆ ಶರಣನು ಬಾಳುತ್ತಲೇ ನಿಜಮೋಕ್ಷ ಸ್ವರೂಪನೆಂಬುದರ್ಥ.

( ೩೫ ). ಮಾಡಿದಲ್ಲದೆ ಮನೆಯೊಳಗಾಗದು ಬಯಲು. ಕಣ್ಣ ಕಂಡಲ್ಲದೆ ನಿಶ್ಚೈಯಿಸದುಮನ. ಪರವೆಂದಲ್ಲದೆ, ಪರವಾಗದು. ಈ ಪರಿಯ ನರರೆತ್ತ ಬಲ್ಲರೈ ರಾಮನಾಥಾ?

**ಅರ್ಥ:**—ಮನೆಯ ಕಟ್ಟಿದಲ್ಲದೆ ಮಹದಾಕಾಶವು ಮಠಾಕಾಶನಾಗದು. ನಯನದಲ್ಲಿ ನೋಡಿದಲ್ಲದೆ, ಹಳದಿ, ಬಿಳಿದು, ಹಸರು, ಕೆಂಪೆಂದು ದೃಢೀಕರಿಸದು ಚಿತ್ತ. ಮಹಾಲಿಂಗವೇ ಇಷ್ಟಲಿಂಗವೆಂದು ಅರಿದು ಆಚರಿಸುವದಲ್ಲದೆ,

ಪರಾಪರವಾದ ನಿಜಮೋಕ್ಷವು ಸಾಧ್ಯವಾಗದು. ಈ ನಿಲುಕಡೆಯನು ಜೀವರು ಬಲ್ಲರೇ? ಅರಿಯರೆಂಬುದರ್ಥ.

(೩೬). ಹುಟ್ಟುವದಕ್ಕೆ ಹಂಗಿಗರಾದವರೆಲ್ಲರೂ ಬ್ರಹ್ಮನ ಲೆಂಕರು, ಸುಖವ ಮೆಚ್ಚಿ ಭೋಗಿಸುವರೆಲ್ಲರೂ ವಿಷ್ಣುವಿನ ಲೆಂಕರು. ನಾನಾರುಚಿಗೊಳಗಾಗಿ ಏನೆಂದರಿಯದೆ ಸಾವರೆಲ್ಲರೂ ರುದ್ರನ ಲೆಂಕರು. ರೂಪೆಂಬೆನೆ? ಆಸೆಯ ಬಲ್ಲ. ನಿರೂಪೆಂಬೆನೆ? ನಾನಾ ಯೋನಿಯ ಚಿನ್ಹ. ಚಿದ್ರೂಪೆಂಬೆನೆ? ರುದ್ರನವಂಶೀಭೂತ. ಇಂತಿವನೇನೂ ಎನ್ನದಿಪ್ಪದೇ ಲಿಂಗೈಕ್ಯ ನಿಃಕಳಂಕ ಮಲ್ಲಿಕಾರ್ಜುನಾ.

**ಅರ್ಥ**:—ಮರ್ತ್ಯಲೋಕದಲ್ಲಿ ಹುಟ್ಟಿ ಮರ್ತ್ಯಲೋಕದಲ್ಲಿ ಭೋಗವ ಭೋಗಿಸುವದಕ್ಕೆ ಮಾಡುವ ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಗಳ ವಾಂಛೆಯುಳ್ಳವರೆಲ್ಲರೂ ಬ್ರಹ್ಮನ ಗುಲಾಮರು ಎಂಬಲ್ಲಿ ಬ್ರಹ್ಮನ ಉತ್ಪತ್ತಿಗೊಳಗಾಗಲ್ಪಟ್ಟವರು. ಅಷ್ಟ ಭೋಗಂಗಳ ಮಮಕರಿಸಿ ಕೃತದಿಂದ ಬಂದ ಭೋಗಗಳ ನನುಭವಿಸುವರೆಲ್ಲರು ವಿಷ್ಣುವಿನ ಗುಲಾಮರು, ಎಂಬಲ್ಲಿ ವಿಷ್ಣುವಿನ ಪ್ರಾರಬ್ಧ ಭೋಗಕ್ಕೊಳಗಾಗಲ್ಪಟ್ಟವರು. ಹಲವು ಪ್ರಕಾರವಾದ ಇಂದ್ರಿಯ ವಿಷಯಂಗಳ ಪ್ರಪಂಚಗೀಡಾಗಿ ಇತರೇತರವನರಿಯದೆ, ಭೋಗದಲ್ಲಿ ಆಸಕ್ತರಾಗಿ ಮೃತರಾಗುವರೆಲ್ಲರು ರುದ್ರನ ಗುಲಾಮರು, ಎಂಬಲ್ಲಿ ರುದ್ರನ ಲಯಕ್ಕೊಳಗಾಗಲ್ಪಟ್ಟವರು. ಸಾಕಾರವೇ ದೈವವೆಂಬೆನೆ? ಆ ಸಾಕಾರವಾದ ದೇಹವು ಸಮಸ್ತವು ಆಗಬೇಕೆಂಬ ಬಯಕೆಯನುಳ್ಳ ಸಪ್ತಧಾತು ಸಮ್ಮಿಶ್ರವಾದ ದೇಹವದು. ನಿರಾಕಾರವೇ ದೈವವೆಂಬೆನೆ? ಆ ನಿರಾಕಾರವಾದಾತ್ಮನು ಲಳ ಲಕ್ಷ ಯೋನಿಯಲ್ಲಿ ಹುಟ್ಟಿ ಬರುವ ಜನನವಿಕಾರವುಳ್ಳಾತನು. ಜ್ಞಾನವೇ ದೈವವೆಂಬೆನೆ? ಆ ಜ್ಞಾನವು ಮಹಾಲಿಂಗದಂಶವು. ಹೀಗೆ ಸಾಕಾರ, ನಿರಾಕಾರ ಜ್ಞಾನವೇ ದೈವವೆಂದು ಭಾವಿಸದೆ, ಮಹಾಲಿಂಗವೇ ಇಷ್ಟಲಿಂಗವೆಂದರಿದು, ಆ ಲಿಂಗದ ಕ್ರಿಯೆಯಲ್ಲಿ ಕೂಡಿಪ್ಪದೇ ಲಿಂಗದಲ್ಲಿ ಕೂಡುವ ಕೂಟವೆಂಬುದರ್ಥ.

(೩೭). ಶಿಲೆ ಹಲವು ತೆರದಲ್ಲಿ ಹೊಲಬಿಗರಿಗೆ ಹೊಲಬಾಗಿ, ಒಲವರವಿಲ್ಲದೆ, ಅವರ ಭಾವದಲ್ಲಿ ನಿಲುವದು ಶಿಲೆಯೋ? ಮನವೋ? ಆ ನಿಜದ ನೆಲೆಯ ತಿಳಿವುದು. ದರ್ಪಣದ ತನ್ನೊಪ್ಪದ ಭಾವ ಎನ್ನಯ್ಯ ಚನ್ನರಾಮನನರಿವಲ್ಲಿ.

**ಅರ್ಥ:—**ಶಿಲಾಮೂರ್ತಿಯು ಗುರುವಿನ ದೀಕ್ಷಾತ್ರಯಂಗಳಿಂದ ಜ್ಞಾನಿಗಳಿಗೆ ಚಿತ್ಕಲಾ ಲಿಂಗವಾಗಿ ಪಕ್ಷಪಾತವಿಲ್ಲದೆ ಅವರ ನೆನಹಿನಲ್ಲಿ ನೆಲೆಗೊಂಬುದು ಶಿಲಾಮೂರ್ತಿ ಎಂಬ ಭಾವವೋ, ಚಿತ್ಕಲಾಲಿಂಗವೆಂಬ ಭಾವವೋ, ಎಂಬಲ್ಲಿ ಚಿತ್ಕಲಾಲಿಂಗವೆಂಬ ಭಾವ ಉಂಟಾಗಿರ್ಪುದು. ಸ್ವಕೀಯವಾದ ಲಿಂಗದ ಸ್ವರೂಪ ನರಿವುದು. ಹೇಗೆಂದಡೆ, ದರ್ಪಣವ ನೋಡಿದಲ್ಲಿ ತಾನು ಸುರೂಪಿಯಾಗಲಿ ಕುರೂಪಿಯಾಗಲಿ ತನ್ನ ರೂಪು ಇದ್ದ ಹಾಗೆ, ಆ ಲಿಂಗವು "ಯದ್ಭಾವಂ ತದ್ಭವತಿ" ಎಂದು ತನ್ನ ಭಾವನೆ ಇದ್ದ ಹಾಗೆ ಅಗುವದು. ಆ ಮಹಾಲಿಂಗವೇ ಇಷ್ಟಲಿಂಗವೆಂದು ತಿಳಿದಲ್ಲಿ ಆ ದರ್ಪಣದಂತೆ ಇರದೇ ಕೆಂಬುದರ್ಥ.

---

## ಇಷ್ಟಲಿಂಗದ ಅವಶ್ಯಕತೆಯು.

(೧). ಆಕಾರವಿಡಿದು ಅರ್ಚನೆ ಪೂಜೆಯ ಮಾಡುವದಲ್ಲದೆ, ನಿರಾಕಾರವ ನಂಬಲಾಗದು. ಶ್ರೀಗುರುಲಿಂಗವು ಪ್ರಾಣಲಿಂಗವನು ಕರಸ್ಥಲಕ್ಕೆ ಬಿಜಯಂಗೈಸಿಕೊಟ್ಟಬಳಿಕ, ಬಯಲನರಸಲುಂಟೇ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ?

(೨). ಪಂಚತತ್ವಲ್ಲಿದ್ದು, ಪರತತ್ವವನರಿಯಬೇಕು. ಅದಕ್ಕೆ ದೃಷ್ಟ. ಪಶುವಿನ ಹೊಟ್ಟೆಯಲ್ಲಿ ಕರುವಿದ್ದರೆ, ಕರೆವುದಕ್ಕೆ ಮನೋಹರ ಉಂಟೇ, ಅದು ಭಿನ್ನ ಭಾವವಾಗಿ ಇದಿರಿಟ್ಟು ಉಂಡಲ್ಲದೆ? ಆ ತೆರನನರಿದಲ್ಲಿ, ಅರಿವುದಕ್ಕೊಂದು ಕುರುಹು ಬೇಕು. ಬಲ್ಲಿದ ವೀರನೆಂದೊಡೆ, ಅಲಗಿನ ಮೊನೆಯುಲ್ಲಲ್ಲದೆ, ಗೆಲಬಹುದೇ? ಸದಾಶಿವಮೂರ್ತಿಲಿಂಗವನರಿವುದಕ್ಕೆ, ಇದಿರಿಟ್ಟು ಕಳೆದುಳಿಯಬೇಕು.

(೩). ಮೊನೆ ಇರಿವರೆ, ಕರದಲ್ಲಿ ಪಿಡಿದಲ್ಲದಾಗದು. ಮನವರಿವರೆ, ಕುರುಹಿನ ನಿರಿಗೆಯುಲ್ಲಿ ಸಲೆಸಂದು ನಿಂದಲ್ಲದಾಗದು. ಕ್ರಿಯಾನುಭಾವಶುದ್ಧವಾದಲ್ಲದೆ, ಐಘಟದೂರ ರಾಮೇಶ್ವರಲಿಂಗವ ಕೂಡಬಾರದು.

(೪). ಭಾವ ಮನಕ್ಕೆ ಲಿಂಗವಧರಿಸಿ ಕಾಯಕ್ಕೆ ಲಿಂಗವಿಲ್ಲದಿರಬಹುದೇ? ಎರಡಂಗ ಭಕ್ತರಾಗಿ, ಒಂದಂಗಭವಿಯಾಗಿಪ್ಪರ ಭ್ರಾಂತರ ಮುಖವ ನೋಡಲಾಗದು. ತನು ಮನ ಭಾವದಲ್ಲಿ ಲಿಂಗವಧರಿಸಿ, ಲಿಂಗತ್ರಯಕ್ಕೆ ಅಂಗ

ತ್ರಯಕ್ಕೆ ಅಗಲಿಕೆ ಇಲ್ಲದ ಅಚಲನಾಗಿರ್ದೆನಯ್ಯ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೫). ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ, ಪ್ರಾಣದಲ್ಲಿ ಲಿಂಗಪರಿಣಾಮವನ್ನೈದುವ ಪರಿ ಎಂತಯ್ಯ? ಅಂಗತ್ರಯವುಳ್ಳವರು ಲಿಂಗತ್ರಯಸಂಪನ್ನರಾಗಬೇಕು. ಒಂದಂಗವಿರಹಿತವಾಗಿಪ್ಪವರುಂಟೇ? ಒಂದಂಗವ ಬಿಟ್ಟು, ಒಂದಂಗ ತೋರದಾಗಿ, ಸಂದು ಭೇದವಿಲ್ಲದಿಪ್ಪ ಮಡಿವಾಳನ ನಿಲವು ಕೂಡಲಚನ್ನಸಂಗನಲ್ಲಿ ನಿನಗೆಂತು ಸಾಧ್ಯವಾಯಿತ್ತು ಹೇಳಾ?

(೬). ಆಕಾಶದಲ್ಲಾಡುವ ಪಟಕ್ಕಾದರೂ ಮೂಲ ಸೂತ್ರವಿರಬೇಕು. ಕಲಿಯಾದಡೂ ಸುರಿಗೆಯಿಲ್ಲದಾಗದು. ಭೂಮಿಯಿಲ್ಲದೆ, ಭಂಡಿ ನಡೆವುದೇ? ಅಂಗಕ್ಕೆ ಲಿಂಗವಿಲ್ಲದೆ, ನಿಸ್ಸಂಗವಾಗಬಾರದು. ಕೂಡಲ ಚನ್ನಸಂಗಮದೇವರಲ್ಲಿ, ಸಂಗವಿಲ್ಲದೆ ನಿಸ್ಸಂಗಿ ಎಂದು ನುಡಿಯಬಹುದೇ?

(೭). ಪಟವಾಕಾಶವಡರಿತ್ತು ಎಂದರೆ, ಪಟಸೂತ್ರದ ಸಂಚ ಕೆಳಗಿಪ್ಪುದು ನೋಡಾ. ವ್ಯೋಮದಲ್ಲಿ ಚರಿಸುವ ಸೋಮ ಸೂರ್ಯರೆಂದಡೆ, ಹೇಮಗಿರಿಯ ಸಂಚ ತಪ್ಪದು ನೋಡಾ. ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂಗೆ, ಆ ವ್ಯೋಮದಲ್ಲಿ ನಿಲುವುದಕ್ಕೆ ಒಂದೆಡೆಯುಂಟೇ? ಮಣ್ಣು ಮರನನುಳಿದು, ತೋರುವ ಹಣ್ಣು ರುಚಿಯುಂಟೇ? ನಮ್ಮ ಕೂಡಲಸಂಗನ ಶರಣರೊಳಗಿರ್ದು, ಸೀಮೆಯ ಮೀರಿದ ನಿಸ್ಸೀಮನು ಸಿದ್ಧರಾಮನೆಂಬ ಮಾತು ಅಂತಿರಲಯ್ಯ ಪ್ರಭುವೇ.

(೮). ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದ ಉಂಟೇ? ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೇ? ಆತ್ಮಕ್ಕೆಯೂ ದೇಹಕ್ಕೆಯೂ ಹಂಗುಂಟೇ? ಕ್ಷೀರಕ್ಕೆಯೂ ಸ್ವಾದಕ್ಕೆಯೂ ಭೇದ ಉಂಟೇ? ಇದು ಕಾರಣ ಸಾಕಾರವೇ ನಿರಾಕಾರವೆಂದರಿದು ಅಂಗಲಿಂಗ ಸಂಬಂಧವಿಲ್ಲದವರ ಸಂಗ ಭಂಗವೆಂದು ಕೂಡಲ ಚನ್ನಸಂಗಯ್ಯನ ಶರಣರು ಮೆಚ್ಚರಯ್ಯ ಪ್ರಭುವೇ.

(೯). ಸತಿಯ ಸಂಗವತಿ ಸುಖವೆಂದರಿದಡೇನು, ಗಣಸಾಕ್ಷಿಯಾಗಿ ವಿವಾಹವಾಗದನ್ನಕ್ಕರ? ಕಣ್ಣು ಕಾಂಬುದೆಂದಡೆ, ಕತ್ತಲೆಯಲ್ಲಿ ಕಾಂಬುದೇ ದೀಪವಿಲ್ಲದನ್ನಕ್ಕರ? ಸೂರ್ಯನ ಪ್ರಕಾಶದಿಂದ ಕಂಡು, ತಾವೇ ಕಂಡೆವೆಂಬ

ಜಗದ ನಾಣ್ನುಡಿಯಂತಾಯಿತ್ತು. ಅಂಗವ ಬಿಟ್ಟು ಆತ್ಮನುಂಟೇ? ಶಕ್ತಿಯ ಬಿಟ್ಟು ಶಿವನುಂಟೇ? ಇದು ಕಾರಣ, ಸ್ಥೂಲ, ಸೂಕ್ಷ್ಮ, ಕಾರಣ, ತನುತ್ರಯವಿರಲು, ಇಷ್ಟ, ಪ್ರಾಣ, ಭಾವವೆಂಬ ತ್ರಿವಿಧಲಿಂಗ ಸಂಬಂಧ ಬೇಡವೆಂದಡೆ, ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೇ? ಇದು ಕಾರಣ ಕೂಡಲಚನ್ನ ಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ ನೋಡಲಾಗದಯ್ಯ ಪ್ರಭುವೇ.

(೧೦). ಉಂಬರೆ ಬಂದು, ಬಾಯಿಮುರಿದೆನೆಂದು, ನೆ[illegible] ಇಡುತಿಪ್ಪ ಅರಿಕೆಹೀನನ ತೆರನಂತಾಯಿತ್ತು. ಅರಿಕೆಯನರಿ ಎಂದು ಕುರುಹು ಕೊಟ್ಟಡೆ, ಆ ಕುರುಹ ಮರೆದು, ಅರಿದೆನೆಂಬ ಕುರುಬನ ನೋಡಾ ಜಾಂಬೇಶ್ವರಾ.

(೧೧). ಎಳ್ಳಿಂಗೆ ಪರಿಮಳ ಕಟ್ಟಿದಲ್ಲದೆ, ಎಣ್ಣೆಗೆ ಪರಿಮಳ ವೇಧಿಸದು. ದೇಹದಲ್ಲಿ ಇಷ್ಟಲಿಂಗ ಸ್ಥಾಪಿಸಿದಲ್ಲದೆ, ಪ್ರಾಣಲಿಂಗ ಸಂಬಂಧವಾಗದು. ಇದು ಕಾರಣ ಗುಹೇಶ್ವರ ಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಲ್ಲದೆ, ಪ್ರಾಣಲಿಂಗ ಸಂಬಂಧಿಯಾಗಬಾರದು, ಕಾಣಾ ಸಿದ್ಧರಾಮಯ್ಯ.

(೧೨). ಸರ್ವವು ಲಿಂಗಕುರುಹು ಎಂದಲ್ಲಿ, ಲಿಂಗವೇಕೆ ಧರಿಸಬಾರದು? ಸರ್ವವು ಜಂಗಮು ಚೇತನವೆಂದೊಡೆ, ಜಂಗಮು ಲಿಂಗವನಿಂಬು ಏಕೆ ಮಾಡಬಾರದು? ಸರ್ವವು ಕೇದಾರ ಗುರುವೆಂಬ ಭಾವಬಲಿತರೆ, ಹಾಸ್ಯದ ನುಡಿಯ ನುಡಿಯಬಾರದು ನೋಡಾ.

(೧೩). ಕ್ಷುತ್ಪಿಪಾಂಸೆಯುರತಡೇನು? ಭಕ್ತನಪ್ಪನೇ? ಸ್ವೇಚ್ಛಾಗಮನಿಯಾದಡೇನು? ಭಕ್ತನಪ್ಪನೇ? ಮಹತ್ವವ ಹಲವು ತೋರಿ ಮೆರೆದಿಡೇನು? ಭಕ್ತನಪ್ಪನೇ? ತನು ಬಯಲಾದಡೇನು? ಭಕ್ತನಪ್ಪನೇ? ಅಷ್ಟ ಮಹಾಸಿದ್ಧಿಯುಳ್ಳೊಡೇನು? ಭಕ್ತನಪ್ಪನೇ? ಚತುರ್ವಿಧ ಪದವ ಪಡೆದು ಕೈಲಾಸದಲ್ಲಿದ್ದಡೇನು? ಭಕ್ತನಪ್ಪನೇ? ಅಲ್ಲಲ್ಲ. ಭಕ್ತಿಯಪರಿ ಎಂತೆಂದೊಡೆ, ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾಗಿ, ಗುರು, ಲಿಂಗ, ಜಂಗಮವನಾರಾಧಿಸಿ, ಲಿಂಗತ್ರಯದಲ್ಲಿ ಸಮವೇಧಿಸಿ, ಆ ತ್ರಿವಿಧ ಲಿಂಗಜಂಗಮುವನಾರಾಧಿಸಿ, ಪ್ರಸಾದಗ್ರಾಹಿಯಾದಲ್ಲದೆ, ಭಕ್ತನಲ್ಲವೆಂದು, ಸಿದ್ಧಸೋಮನಾಥನ ಶರಣರು ನುಡಿವರಯ್ಯ ಪ್ರಭುವೇ.

(೧೪). ರತ್ನ ದೀಪ್ತಿಯಾದಡೇನು? ಬಂಧಿಸಿ ಕುಂದಣದಲ್ಲಿ ಸಂಧಿರ ಬೇಕು. ಸ್ವಾದರಸ ರುಚಿಯು ನೀವ ಫಲವೆಂದಡೇನು ವೃಕ್ಷವಿಲ್ಲದನ್ನಕ್ಕರ? ಚಿತ್ರ ಸೌಂದರ್ಯ ನೋಟಕ್ಕೆ ಸುಖವೆಂದಡೇನು, ಭಿತ್ತಿಯುಪಟ ಮುಖ್ಯಸ್ಥಾನವಿಲ್ಲದ ನ್ನಕ್ಕರ? ಅಂಜನ ಸಿದ್ಧಿಯು ನಿಧಾನವ ಕಂಡಡೇನು, ಸಾಧನಕ್ರಿಯಿಂದ ಸಾಧ್ಯವ ಮಾಡಿಕೊಳ್ಳದನ್ನಕ್ಕರ? ಇದು ಕಾರಣ ಕಾಯದ ಕರಸ್ಥಲಕ್ಕೆ ಇಷ್ಟಲಿಂಗ ಸಾಹಿತ್ಯವಿಲ್ಲದಿದ್ದರೆ, ನಿರವಯುವಾದ ಜ್ಞಾನಯೋಗದ ಕೂಟಸಾಧ್ಯವಾಗದು. ಇದು ಕಾರಣ, ಕ್ರಿಯಾಲಿಂಗ ಸಂಬಂಧವೇ ಭಕ್ತಂಗೆ ಮತವು, ಇದೇ ಮಹಾ ಶೌಚವು. ನಮ್ಮ ಗುಹೇಶ್ವರನ ಶರಣರ ಮನ ಒಪ್ಪುವಂತೆ ಸಿದ್ಧರಾಮಂಗೆ ಲಿಂಗ ಸಾಹಿತ್ಯವ ಮಾಡಾ, ಚನ್ನಬಸವಣ್ಣಾ.

(೧೫). ಲಿಂಗದ ಮೇಲೆ ಬಂದು, ಆಚಾರ ಲಿಂಗದ ಹೊಲಬನರಿಯದೆ, ಕೈಲಾಸದ ಮೇಲಿಪ್ಪ ಬಾಲಕೋಟಿ ಸೂರ್ಯಪ್ರಕಾಶವನುಳ್ಳ ಶಿವನನೊಲಿಸಬೇ ಕೆಂದು ಒಂದು ವಸ್ತುವ ಎರಡಿಟ್ಟು ನಡೆವ ಮಂದಮತಿಗಳು ನೀವು ಕೇಳಿರೇ, ಶರ ಣನೇ ಮಹಾ ಮೇರು ಪರ್ವತವು. ಆ ಶರಣನ ಸ್ಥೂಲತನುವೇ ರಜತಾದ್ರಿ, ಸೂಕ್ಷ್ಮತನುವೇ ಹೇಮಾದ್ರಿ, ಕಾರಣ ತನುವೇ ಮಂದರಾದ್ರಿ. ಈ ಮೂರು ಪರ್ವತಂಗಳು. ಅರಮನೆಯಲ್ಲಿ ನೆಲಸಿಪ್ಪ ಶಿವನಾರೆಂದೊಡೆ, ನಿರಾಕಾರ ಶೂನ್ಯ ಬ್ರಹ್ಮವೇ ಶರಣನ ಕುರಿತು ಪಂಚಸಾದಾಖ್ಯಂಗಳನೊಳಕೊಂಡು ಸಾಕಾರವಾಗಿ ಬಂದ ಇಷ್ಟಲಿಂಗವೇ ಶಿವನು. ಶ್ಲೋ॥ ಜ್ವಲತ್ಕಾಲಾನಲಾ ಭೂಷಿತತಟಿತ್ಕೋಟಿ ಸಮಪ್ರಭಾ। ತಸ್ಯೋರ್ಧ್ವಂ ಶಿಖಾ ಸೂಕ್ಷ್ಮ ಚಿದ್ರೂಪ ಪರಮಾತ್ಮಾ ॥೧॥ ಏವ ಭೇದ ಕಳಾದೇವಿ ಸದ್ಗುರು ಶಿಷ್ಯಮಸ್ತಕೆ। ಹಸ್ತಾಬ್ಜಮಥನಂ ಗ್ರಾಹ್ಯಂ ತಸ್ಯ ಭಾವ ಕರೋದಿತಂ ॥೨॥ ಇಂತೆಂದುದಾಗಿ, ಆ ಶಿವನೇ ಶಿವನು. ಆ ಶಿವನ ಧರಿ ಸಿಪ್ಪ ಶರಣನ ಕಾಯವೇ ಕೈಲಾಸ. ಇದಲ್ಲದೆ ಮತ್ತೊಂದು ಕೈಲಾಸ, ಬೇರೊಬ್ಬ ಶಿವನುಂಟೆಂದು ಭ್ರಮೆಗೊಂಡು ಮನವನೆರಡು ಮಾಡಿಕೊಂಬುದು ಅಜ್ಞಾನ ನೋಡಾ. ಉದರದ ಮಧ್ಯದಲ್ಲಿ ಒರಗಿಪ್ಪ ಗಂಡನ ಬಿಟ್ಟು, ಇನ್ನು ನೆರೆಮನೆಯ ಗಂಡರಿಗೆ ಮನವ ನಿಕ್ಕುವ ಹಾದರಗಿತ್ತಿಗೆ ಪತಿಭಕ್ತಿ ಎಲ್ಲಿಯದೋ? ಶ್ರೀಗುರು ನಾಥ ಕರುಣಿಸಿಕೊಟ್ಟ ಕ್ರಿಯಾಲಿಂಗವನು ಅರ್ಚನೆ ಪೂಜನೆಯಿಂದ, ಅರ್ಪಿತಾ ವಧಾನದಿಂದ ಧ್ಯಾನ ಧಾರಣದಿಂದ ಸಮತೆಸಮಾಧಾನದಿಂದ ಧ್ಯಾನ ಉಪಾವ ಸ್ಥೆಯಿಂದ ಕಾಮಿಸಿ ಕಂಬನಿದುಂಬಿ ಕರಸ್ಥಲದಲ್ಲಿಪ್ಪ ಪ್ರಾಣೇಶ್ವರನ ಶ್ರೀಚರಣಕ್ಕೆ

ಊಟ ಪೂಜೆಯಂ ಮಾಡಿ, ಒಲಿಸಿ ಒಡಗೂಡಿ ನಿಜಮುಕ್ತಿ ಪಡೆಯದೆ, ಆಕಾರವ ಮರೆದು ನಿರಾಕಾರವ ಮಾಡಿಹೆನೆಂಬ ಲೋಕದ ಕಾಕು ಮಾನವರೆಲ್ಲ ಕಾಲಕಾಮರಿಗೆ ತುತ್ತಾಗಿ ಕಾಲಾಗ್ನಿರುದ್ರನ ಹೊಡೆಗಿರ್ಚಿನೊಳಗಾದರಯ್ಯಾ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೧೬). ಊರವಂಕದ ಹೊರಗಿರ್ದು, ಮನೆಯ ಬಾಗಿಲ ಕಾಣೆನೆಂದು ಅರಸುವನಂತೆ, ಇದಿರಿನಲ್ಲಿ ತೋರುವ ಕುರುಹ ಮರೆದು, ಶಿವನೊಳಕೊಂಡೆನೆಂಬುವನಂತೆ, ಜಂಬುಕ ಶಸ್ತ್ರದ ಫಳವ ನುಂಗಿ ಜಂಬೂದ್ವೀಪವೆಲ್ಲ ಪ್ರಳಯವಾಯಿತ್ತೆಂದಡೆ, ಅದು ಚಂದವೇ ಜಾಂಬೇಶ್ವರಾ?

**ಅರ್ಥ:—**ಊರ ಅಗಸೆಯ ಬಾಗಿಲ ಹೊರಗಿರ್ದು, ತನ್ನ ಮನೆಯ ಬಾಗಿಲ ಕಾಣೆನೆಂದು ಹುಡಕುವನ ಹಾಗೆ, ತನ್ನ ಕ್ರಿಯಾದೃಷ್ಟಿಯಲ್ಲಿ ಕಾಣಿಸುವ ಇಷ್ಟಲಿಂಗ ಸಂಬಂಧವನು ಮರೆತು ಬಿಟ್ಟು, ಸುಜ್ಞಾನಸ್ವರೂಪವಾದ ಪ್ರಾಣಲಿಂಗಸಂಬಂಧವನವಗ್ರಹಿಸಿಕೊಂಡೆನೆಂಬವನು ಊರ ಬಾಗಿಲ ಹೊರಗೆ ತಾನಿದ್ದು, ತನ್ನ ಮನೆಯ ಬಾಗಿಲ ಕಾಣೆನೆಂದು ಹುಡುಕುವನು ಒಂದೇ ಎಂದೆಂಬುವದಕ್ಕೆ ಒಡಂಬಡಿಕೆ. ನರಿ ಇಟ್ಟಿಯ ಹಣ್ಣು ತಿಂದು ಜಗತ್ತೆಲ್ಲ ಲಯವಾಯಿತ್ತು ಎಂದಡೆ ಅದು ಒಡಂಬಡಿಕೆಯೋ? ಅಲ್ಲ. ಅದು ತನಗೆ ಪ್ರಳಯವಾಗಿಹುದಲ್ಲದೆ, ಜಗತ್ತಿಗೆ ಪ್ರಳಯ ಉಂಟೇ? ಇಲ್ಲವೆಂಬ ಹಾಗೆ, ವೇದಾಂತಿಯು ಶೃತಜ್ಞಾನದಿಂದ ಇಷ್ಟಲಿಂಗ ಸಂಬಂಧ ಕ್ರಿಯೆ ಮಿಥ್ಯೆನಿರಾಕಾರವಾದ ಪ್ರಾಣಲಿಂಗದಲ್ಲಿ ಕೂಡುವದೇ ಸತ್ಯವೆಂದಡೆ, ಅದು ತನ್ನ ಭಿನ್ನಭಾವಕ್ಕೆ ಸಹಜವಲ್ಲದೆ ಶರಣರುಗಳಿಗೆ ಒಡಂಬಡಿಕೆ ಇಲ್ಲವೆಂಬುದರ್ಥ.

(೧೭). ಗರಳವಿಲ್ಲದುರುಗಂಗೆ ಹಲಬರಂಜಿದವರುಂಟೇ? ಕೈದುವಿಲ್ಲದ ಬಂಟ ಗರ್ಜಿಸಿದಡೆ ಅಂಜಿದವರುಂಟೇ? ಬಾಹ್ಯದೃಷ್ಟದ ಮಾತನಾಡಿದಡೆ ನೆಟ್ಟನೇ ಪ್ರಾಣಲಿಂಗಿಯಪ್ಪನೇ? ಇದು ನಿಶ್ಚಯವಲ್ಲ, ನಿಃಕಳಂಕ ಮಲ್ಲಿಕಾರ್ಜುನಾ.

(೧೮). ತಿಲದಮರೆಯ ತೈಲವನರೆದು ಕಾಂಬತೆರನಂತೆ, ಫಲದ ಮರೆಯ ರಸವ ಹಿಳಿದು ಕಾಂಬಸವಿಯ ರುಚಿಯಂತೆ, ತೆರೆಯಮರೆಯ ರೂಪ ತೆಗೆದು ಕಾಂಬಂತೆ, ಇಷ್ಟದ ಮರೆಯಲ್ಲಿರ್ದ ದೃಷ್ಟವ ಉಭಯ ನಿಶ್ಚಯಿಸಿದಲ್ಲಿ ಪ್ರಾಣಲಿಂಗಸಂಬಂಧಿ ನಿಃಕಳಂಕ ಮಲ್ಲಿಕಾರ್ಜುನಾ.

(೧೯). ಇಷ್ಟಲಿಂಗ ಪ್ರಾಣಲಿಂಗವೆಂಬುದನಾರುಬಲ್ಲರು? ಇಷ್ಟಲಿಂಗವೀಗದರ್ಪಣ, ಪ್ರಾಣಲಿಂಗವೀಗ ಪ್ರತಿಬಿಂಬ. ದರ್ಪಣ ಮಸುಳಿಸಿದರೆ ಪ್ರತಿಬಿಂಬವಕಾಣಬಹುದೇ? ಇಷ್ಟಪ್ರಾಣ ತೃಪ್ತಿ ಎಂಬರು ನೋಡಾ. ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರ ಮಸುಳಿಸಿದರೆ, ಪ್ರಾಣಲಿಂಗವ ಕಾಣಬಹುದೇ? "ಇಷ್ಟಲಿಂಗಮವಿಶ್ವಸ್ಯ ಪ್ರಾಣಲಿಂಗಂತು ವರ್ಜಯೇತ್; ದರ್ಪಣಂ ಪ್ರತಿಬಿಂಬಾನಾಂ ಯಥಾರೂಪಂ ತಥಾಭವೇತ್" ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಮದೇವ ಇಷ್ಟದಲ್ಲಿ ಪ್ರಾಣತೃಪ್ತಿಯಾದವರ ತೋರಿ ಬದುಕಿಸಯ್ಯಾ.

---

## ಸದಾಚಾರಿಯೇ ದೀಕ್ಷೆಗೆ ಯೋಗ್ಯನು.

(೧). ಎಲ್ಲರ ದೀಕ್ಷೆಯ ಪರಿಯಂತಲ್ಲ ಎಮ್ಮಯ್ಯನ ದೀಕ್ಷೆ. ನಡೆನುಡಿ ಶುದ್ಧವಾದವರಿಗಲ್ಲದೆ ಅನುಗ್ರಹಿಸ ನೋಡಾ. ಪರಮಾರ್ಥಕ್ಕಲ್ಲದ ಜಡ ನರರ ನೊಲ್ಲನೊಲ್ಲ. ದೀಕ್ಷೆಯ ಕೊಡನು. ಭವಭಾರಿಗಳ ಮುಖದತ್ತ ನೋಡನಯ್ಯಾ ನಮ್ಮ ಕೂಡಲಚನ್ನಸಂಗಯ್ಯನೆಂಬ ಜ್ಞಾನಗುರುವು.

(೨). ಕುಂಬಳದ ಕಾಯಿಗೆ ಕಬ್ಬುನದ ಕಟ್ಟು ಕೊಟ್ಟರೆ, ಕೊಳೆವುದಲ್ಲದೆ, ಬಲುಹಾಗಬಲ್ಲುದೆ? ಅಳಿಮನದವಂಗೆ ಶಿವದೀಕ್ಷೆಯ ಕೊಟ್ಟರೆ, ಭಕ್ತಿ ಎಂತಹುದೋ? ಮುನ್ನಿನಂತೆ. ಕೂಡಲಸಂಗಯ್ಯ ಮಾನಹೀನನ ಮೊಸಲ ಕಾಯ್ದಿರಿಸಿದಂತೆ.

(೩). ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ, ರಂಜನೆಯಹುದಲ್ಲದೆ, ಅದರ ಗಂಜಳ ಬಿಡದಣ್ಣ. ಮಣ್ಣ ಪೃಥ್ವಿಯ ಮಾಣದೆ ಜಲದಲ್ಲಿ ತೊಳೆದರೆ, ನಿಚ್ಚ ನಿಚ್ಚ ಕೆಸರಹುದಲ್ಲದೆ, ಅದರಚ್ಚುಗ ಬಿಡದಣ್ಣ. ಲೋಕದ ಮಾನವಂಗೆ ಶಿವದೀಕ್ಷೆಯ ಕೊಟ್ಟರೆ, ಕೆಟ್ಟವನೇಕೆ ಸದ್ಭಕ್ತನಹನು ಕೂಡಲಸಂಗಮದೇವಾ?

(೪). ಕಬ್ಬುಣದ ಕೋಡಗವ ಪರುಷ ಮುಟ್ಟಲು, ಹೊನ್ನಾದರೇನು, ಮತ್ತೇನಾದರೇನು, ತನ್ನ ಮುನ್ನಿನ ರೂಪ ಬಿಡದನ್ನಕ್ಕರ? ಕೂಡಲಸಂಗಮದೇವಯ್ಯ, ನಿಮ್ಮ ನಂಬಿಯೂ, ನಂಬದ ಡಂಭಕರಿಗಯ್ಯ.

(೫). ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ ಮಾಡಲೇ ನಪ್ಪುದೆಲವೋ? ಅಂಧಕನ ಕಯ್ಯ ಅಂಧಕ ಹಿಡಿದಂತೆ, ಮುಂದೇನಪ್ಪುದು ಹೇಳೆಲೋ ಮರುಳೇ? ಬರುಮಾತಿನರಂಜನೆಯನಾಡದಿರು. ಸಿಮಲಿಗೆಯ ಚನ? ರಾಮನೆಂಬ ಲಿಂಗವ ಪುಸಿಯ ಹಸರಧವನಲ್ಲ.

(೬). ಹೊಟ್ಟೆಯ ಮೇಲೆ ಕಟ್ಟೋಗರದ ಮೊಟ್ಟೆಯ ಕಟ್ಟಿದರೇನು, ಹಸಿವು ಹೋಹುದೇ? ಅಂಗದ ಮೇಲೆ ಲಿಂಗ ಸ್ವಾಯತವಾದರೇನು? ಭಕ್ತ ನಾಗಬಲ್ಲನೇ? ಇಟ್ಟಕಲ್ಲು ಮೆಳೆಯ ಮೇಲೆ ಸಿಕ್ಕಿದರೆ, ಆ ಕಲ್ಲು ಲಿಂಗವೇ, ಆ ಮೆಳೆಭಕ್ತನೇ, ಇಟ್ಟಾತಗುರುವೇ? ಇಂತಪ್ಪವರ ಕಂಡರೆ, ನಾಸು ನಾಚುವೆ ನಯ್ಯ ಗುಹೇಶ್ವರಾ.

(೭). ಅಯ್ಯಾ ಪುಣ್ಯಪಾಪ ಇಹಪರಂಗಳಿಗೆ ಹೊರಗಾದ ಶಿಷ್ಯ ಗುರುಜಂಗಮದ ವಿಚಾರವೆಂತೆಂದೊಡೆ, ತನ್ನ ತಾನೇ ಪಕ್ವವಾಗಿ ವೃಕ್ಷವನೊ ಳಗುಮಾಡಿಕೊಂಡು ಶಿವಾಜ್ಞೆಯಿಂದ ತೊಟ್ಟು ಬಿಟ್ಟ ಹಣ್ಣಿನಂತೆ ಶಿವಭಕ್ತನು ತಾ ಮೊದಲಾಗಿ ಆವಜಾತಿಯಲ್ಲಿ ಜನಿತನಾದಡೇನು, ಪೂರ್ವಗುಣಧರ್ಮವ ಮುಟ್ಟದೆ, ಲೋಕಾಚಾರವ ಹೊದ್ದದೆ, ಪಂಚಮಹಾಪಾತಕಂಗಳ ಬೆರಿಸದೆ, ಸತ್ಯಶರಣಸಂಗ, ಸತ್ಯನಡೆನುಡಿಯಿಂದಾಚರಿಸಿ, ಲಿಂಗಾಚಾರಮೋಹಿಯಾಗಿ, ಅಡಿಗೆರಗಿ ಬಂದ ಪೂರ್ವಜ್ಞಾನಿ ಪುನರ್ಜಾತಂಗೆ ಪಕ್ಷಿ ಫಲರಸಕ್ಕೆರಗುವಂತೆ ಮೋಹಿಸಿ, ಅಂಗದ ಮಲಿನವ ತೊಡೆದು, ಚಿದಂಗವಮಾಡಿ, ಚಿದ್ಘನಲಿಂಗವ ಸಂಬಂಧಿಸಿ, ಇಪ್ಪತ್ತೊಂದು ದೀಕ್ಷೆಯ ಕರುಣಿಸುವಾತನೇ ತ್ರಿನೇತ್ರವುಳ್ಳ ಗುರು ವೆಂಬೆನಯ್ಯ. ಅಂಥ ಗುರುಕರಜಾತನ ಭೇದಿಸಿ, ತ್ರಿವಿಧಜಪವ ಹೇಳಿ, ತ್ರಿವಿಧ ಲಿಂಗಾನುಭಾವವ ಬೋಧಿಸುವಾತನೇ ಸರ್ವಾಂಗಲೋಚನ ಜಂಗಮವೆಂಬೆ ನೋಡಾ. ಇಂಥ ಸನ್ಮಾರ್ಗಿಗಳಿಗೆ ಭವಬಂಧನನಾಸ್ತಿ ಕಾಣಾ ಶಂಭುಜಕ್ಕೇಶ್ವರಾ.

(೮). ಅಯ್ಯಾ ಗುರುಶಿಷ್ಯರಿಬ್ಬರು ಪುಣ್ಯಪಾಪ ಇಹಪರಂಗಳಿಗೆ ಒಳ ಗಾದ ವಿಚಾರವೆಂತೆಂದೊಡೆ, ಸತ್ಯಸದಾಚಾರಸಂಪತ್ತೆಂಬ ಶಿವಭಕ್ತರ ಹೃದಯ ದಲ್ಲಿ ಜನಿತನಾಗಿ, ಸತ್ಯನಡೆನುಡಿಯನರಿಯದೆ ಲೋಕದ ಜಡಜೀವಿಯಂತೆ ಪಂಚ ಮಹಾಪಾತಕಂಗಳಲ್ಲಿ ವರ್ತಿಸುವದ ಕಂಡು ಅದ ಪರಿಹರಿಸದೆ, ದ್ರವ್ಯಾಭಿಲಾಷೆ ಯಿಂದ ತ್ರಿವಿಧದೀಕ್ಷೆಯ ಮಾಡುವವನೊಬ್ಬ ಗುರು ಹುಟ್ಟಂಧಕನೆಂಬುವೆನಯ್ಯ.

ಅಂಥ ಪರಮಪಾತಕಂಗೆ ಜಪವಹೇಳಿ ಪಾದೋದಕದಲ್ಲಿ ಏಕಭಾಜನವ ಮಾಡಿ ಪ್ರಸಾದವಕೊಟ್ಟು ಷಟ್‌ಸ್ಥಲವ ಹೇಳುವವನೊಬ್ಬ ಜಂಗಮನೊಬ್ಬ ಕೆಟ್ಟ ಕಣ್ಣವನೆಂಬೆನಯ್ಯ. ಇಂತೀ ಅಧಮಗುರುಶಿಷ್ಯ ಜಂಗಮಕ್ಕೆ ಭವಬಂಧನ ತಪ್ಪದುನೋಡಾ ಶಂಭುಜಕ್ಕೇಶ್ವರಾ.

---

## ಲಿಂಗದೇಹಿಯು ಪರಿಶುದ್ಧನು.

(೧). ತನುವನು ಶ್ರೀಗುರು ಕ್ರಿಯಾದೀಕ್ಷೆಯಿಂದ ತನುಗುಣವನು ಭಸ್ಮೀಕೃತವಮಾಡಿದ ಬಳಿಕ ದೃಶ್ಯ ಜಡತನುವಲ್ಲ, ಶಿವಸತ್ಕ್ರಿಯಾಚಾರದ ಮೂಲ ತನುತ್ರಯುವೇ ತನ್ನ ತನುವೆಂದರಿವುದು. ಶ್ರೀಗುರು ಮಂತ್ರದೀಕ್ಷೆಯಿಂದ ಮನದ ಪೂರ್ವಾಶ್ರಯುವ ಕಳೆದು ಮನಕ್ಕೆ ಘನನೆನಹು ಸಂಬಂಧಿಸಿದನಾಗಿ, ಮನ ನಿರ್ಮಲನಾಗಿ ಲಿಂಗಕ್ಕಾಶ್ರಯುವೆಂದರಿವುದು. ಶ್ರೀಗುರುಜ್ಞಾನದೀಕ್ಷೆಯಿಂದ ಪ್ರಾಣಪ್ರಪಂಚದ ಪಶುಭಾವವ ಕಳೆದು ಅಖಂಡಿತ ಜ್ಞಾನಲಿಂಗ ಕಳೆಯು ತನ್ನ ಪ್ರಾಣನಾಥನೆಂದು ತಿಳುಹಿದನಾಗಿ ಪ್ರಾಣಮಲಿನವೆಂಬುದು ಪಶುಭಾವವಲ್ಲದೆ, ಲಿಂಗಭಾವವಲ್ಲ. ಈ ಸಂದೇಹ ಭ್ರಾಂತಿಯುಳ್ಳ ಕಾರಣ ಶೈವ ಹೊಲ್ಲ ಎನುತಿದ್ದೆನಯ್ಯ. ತಮ್ಮ ತಾವರಿದು ನಿಶ್ಚಯಿಸದಿದ್ದರೆ, ವಾಣಲಿ. ಗುರು ಉಪದೇಶದಿಂದ ನಿಶ್ಚಯಿಸುವದು .ಸಂದೇಹವಿಲ್ಲ. ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೨). ಹಸ್ತಾಬ್ಜ ಮಥನದಿಂದೊತ್ತಿ, ಭಸ್ಮವಮಾಡಿ, ಮತ್ತೆ ಪಂಚಾಕ್ಷರಿ ಮರುಜೀವಣಿಯ ಚಿತ್ತಶ್ರೋತ್ರದೊಳು ಧಾರೆಯುನೆರೆಯಲು, ಆತ ನಿನ್ನಂತೆ ಕಾಣಾ ರಾಮನಾಥಾ.

(೩). ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ, ಆ ತೃಣವನಾ ಕಿಚ್ಚು ನುಂಗಿದಂತೆ, ಗುರುಚರಣದ ಮೇಲೆ ತನುವೆಂಬ ತೃಣವ ತಂದಿರಿಸಿದರೆ, ಆತನ ಸರ್ವಾಂಗವೆಲ್ಲವು ಲಿಂಗ ಕಾಣಾ ರಾಮನಾಥಾ.

(೪). ಪೂರ್ವಜನ್ಮವನು ನಿವೃತ್ತಿಯಮಾಡಿ, ಶ್ರೀಗುರುವಿನ ಕರಕಮಲದಲ್ಲಿ ಜನಿಸಿದ ಭಕ್ತನ ಪಂಚಭೌತಿಕದ ತನುವಿನಂತೆ ವರ್ಣಿಸಿ ನುಡಿಯಬಹುದೇ? ಉತ್ತಮಾಧಮ ತೃಣವೊದಲಾದುವೆಲ್ಲವು ಜ್ಯೋತಿಯು ಮುಟ್ಟಿ, ಜ್ಯೋತಿಯಪ್ಪವು ಕೇಳಿರೇ. ಜ್ಯೋತಿರ್ಮಯಲಿಂಗವ ಮುಟ್ಟಿದಾತನು ಕೇವಲ

ಜ್ಯೋತಿರ್ಮಯಲಿಂಗ. ಆಧಾರ, ಸ್ವಾಧಿಷ್ಠ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಬ್ರಹ್ಮರಂಧ್ರ, ದಳ, ವರ್ಣ, ಅಕ್ಷರ, ಅಧಿದೇವತೆ ಎಂದು ಅಲ್ಲಿ ಶುಕ್ಲ ಶೋಣಿತಾತ್ಮಕನಂತೆ ವರ್ಣಿಸಿ ನುಡಿಯಬಹುದೇ ಶಿವಲಿಂಗತನುವ? ಗ್ರಂಥ॥ ಗೌರವಂ ಲೈಂಗಿಕಾಚಾರಂ ಪ್ರಸಾದಂ ಚರಣಾಂಬುಕಂ । ಭಾಕ್ತಿಕಂಚ ಮಯಾಪ್ರೋಕ್ತಂ ಷಡ್ವಿಧಂ ವ್ರತಮಾಚರೇತ್ ॥ ಎಂಬ ಷಡಾಧಾರ ಚಕ್ರವನು ಎನ್ನ ಸರ್ವಾಂಗದಲ್ಲಿ ಪ್ರತಿಷ್ಠೆಯಂ ಮಾಡಿ, ಅಂತರ್ಬಾಹ್ಯದಲ್ಲಿ ಭರಿತನಾಗಿ ಸರ್ವಾಂಗವ ಲಿಂಗವಮಾಡಿದ ಕೂಡಲಚೆನ್ನಸಂಗ ಶ್ರೀಗುರುಲಿಂಗವು.

(೫). ಗುರುಲಿಂಗದ ಕರುಣ ಕೃಪೆಯಲ್ಲಿ ಸಜ್ಜನ ಶರಣರ ಸುಖವ ಕಂಡೆನು. ಏನೆಂದುಪಮಿಸಬಹುದಯ್ಯಾ ಗುರುಲಿಂಗದ ಮಹಿಮೆಯನು! ಮಹಾ ಘನ ಸೋಮೇಶ್ವರನೆಂಬಗುರು ಲಿಂಗವ ತೋರಿದನಾಗಿ ಮಹಾಜ್ಯೋತಿಯ ಸೋಂಕಿದ ಉತ್ತಮಾಧಮ ತೃಣ ಮೊದಲಾದವೆಲ್ಲವು ಮಹಾಜ್ಯೋತಿಯಪ್ಪವು. ನೋಡಿರೆ ದೃಷ್ಟವ! ಮತ್ತೆ ಅಂತಿಂತೆಂದುಪಮಿಸಲುಂಟೆ? ಪರಂಜ್ಯೋತಿ ಸದ್ಗುರು ಲಿಂಗವ ಸೋಂಕಿದ ಸದ್ಭಕ್ತನ ಅಂತರಂಗ ಬಹಿರಂಗ ಸರ್ವಾಂಗ ಪರಂಜ್ಯೋತಿ ಲಿಂಗ. ಮತ್ತೆ ದೇಹವೆಂದು, ಪ್ರಾಣವೆಂದು, ಆಧಾರ ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಬ್ರಹ್ಮರಂಧ್ರವೆಂದು, ವರ್ಣ, ದಳ, ಅಕ್ಷರ, ಅಧಿದೇವತೆ ಎಂದು, ವಿವರಿಸಿ ನುಡಿಯಲುಂಟೆ, ಪಂಚ ಭೌತಿಕ ತನುವಿನಂತೆ? ಪಂಚವಿಂಶತಿ ತತ್ವಗಳ ಸಂಬಂಧಿಸಿ ನುಡಿಯಲುಂಟೆ ಕೇವಲ ಜ್ಯೋತಿರ್ಮಯ ಲಿಂಗ ತನುವಿಂಗೆ? ಸದ್ಭಕ್ತನಂಗ ಲಿಂಗ, ಮನ ಲಿಂಗ ಪ್ರಾಣ ಲಿಂಗ, ಭಾವ ಲಿಂಗ, ಪಂಚವಿಂಶತಿ ತತ್ವಂಗಳೆಲ್ಲವು ಲಿಂಗತತ್ವವು, ಇದು ಕಾರಣ ಲಿಂಗವಂತನು ಸರ್ವಾಂಗ ಲಿಂಗವಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೬). ಜಾತವೇದಿಯಲ್ಲಿ ಶೋಧಿಸಿ ಪುಟವಿಟ್ಟ ಬೂದಿಯಂತಾದೆನಯ್ಯಾ ನಿಮ್ಮ ನಾರಾಧಿಸಿ. ಅಂದೆಂತೆಂದೊಡೆ, "ಜ್ಞಾನಾಗ್ನಿಸ್ಸರ್ವ ಕರ್ಮಾಣಿ ಭಸ್ಮಸಾತ್ಕುರುತೆ ಯಥಾ" ಎಂದುದಾಗಿ ಕಾದಲೋಹದ ಮೇಲೆ ಉದಕವನೆರೆದಂತಾದೆನಯ್ಯಾ ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರಾ.

(೭). ಆತ್ಮಶುದ್ಧಿ, ಗುರು ಹಸ್ತವ ಮಸ್ತಕದಲ್ಲಿ ನ್ಯಸ್ತಮಾಡಿದನಾಗಿ. ಸ್ಥಾನಶುದ್ಧಿ, ಶಿವಲಿಂಗವಿದ್ದುದೇ ಅವಿಮುಕ್ತಿಕ್ಷೇತ್ರವಾಗಿ. ದ್ರವ್ಯಶುದ್ಧಿ, ಶಿವ

ಲಿಂಗ ಸನ್ನಿಧಿಮಾತ್ರ ಪವಿತ್ರೀಕೃತವಾಗಿ. ಮಂತ್ರಶುದ್ಧಿ, ಹರಮಂತ್ರಮಯವಾಗಿ, ಲಿಂಗಶುದ್ಧಿ, ಲಿಂಗವು ನಿರ್ಮಳನಿರುಪಮ ನಿತ್ಯ ಸತ್ಯನಾಗಿ. ಇಂತು ಪಂಚಶುದ್ಧಿ ಎಂದರಿದು ಪ್ರಾಣಲಿಂಗ ಸಂಬಂಧಿಯಾಗಿಪ್ಪುದೇ ಆಗಮ, ಬೇರೆ ಆಗಮವಿಲ್ಲ ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

**ಅರ್ಥ:**—ಶ್ರೀಗುರು ಹಸ್ತವ ಮಸ್ತಕದಲ್ಲಿ ಇರಿಸಿದಾಗವೇ ಆತ್ಮಶುದ್ಧಿ. ಲಿಂಗವಿದ್ದುದೇ ಅವಿಮುಕ್ತಿಕ್ಷೇತ್ರ. ಲಿಂಗನಿರೀಕ್ಷಣೆಯಿಂದವೇ ದ್ರವ್ಯಶುದ್ಧಿ. ಗುರುಪೇಳಿದ ಕರ್ಣಮಂತ್ರದಿಂದವೇ ಮಂತ್ರಕಾಯವಾಯಿತ್ತು. ಗುರುಮುಟ್ಟಿ ಶಿಲಾಭಾವವಳಿದು ಶಿವಕಳೆಯ ಭಾವಿಸಿ ಕರಸ್ಥಲದಲ್ಲಿ ಕೊಟ್ಟುದೇ ಪ್ರಾಣಲಿಂಗ. ಇಂತಪ್ಪ ಗುರುಮತಕ್ರಿಯೆಯಿಂದಾದ ಪ್ರಾಣಲಿಂಗ ಸಂಬಂಧನಪ್ಪ ವೀರಶೈವನ ಪಂಚಶುದ್ಧಿ. ಇದಲ್ಲದೆ ಬೇರೆ ಆಗಮ ಶ್ರುತಿ ಮತವಿಡಿದು ಬೇರೆ ಪಂಚಶುದ್ಧಿಯ ಮಾಡಲಿಲ್ಲ ವೀರಶೈವಂಗೆಂಬುದೀ ವಚನದ ತಾತ್ಪರ್ಯಾರ್ಥ.

(೮). ತನು ಶುದ್ಧವಿಲ್ಲ ಎಂಬಾತ ಅಂಗದ ಮೇಲೆ ಲಿಂಗವ ಧರಿಸಲಾಗದು. ಮನಶುದ್ಧವಿಲ್ಲ ಎಂಬಾತ ಲಿಂಗವ ಹಿಡಿದು ಪೂಜೆಯ ಮಾಡಲಾಗದು. ಪ್ರಾಣಮಲಿನವು ಎಂಬ ಪಶುಗಳಿಗೆ ಪ್ರಾಣಲಿಂಗವೆಲ್ಲಿಯದೊ? ಇದು ಕಾರಣ ಆರು ಶೈವರಲ್ಲಿ ನಡೆವುತ್ತಿಪ್ಪರೆಲ್ಲ ಬಾರದ ಭವದಲ್ಲಿ ಬಪ್ಪುದು ತಪ್ಪದು ಕಾಣಾ ನೀನು ಸಾಕ್ಷಿಯಾಗಿ, ಮಹಾಲಿಂಗ ಗುರುಶಿವ ಸಿದ್ದೇಶ್ವರಾ.

## ದೀಕ್ಷೆಯಲ್ಲಿ ವರ್ಣಜಾತಿಗಳ ಭೇದವಿಲ್ಲ.

(೧). ಬ್ರಾಹ್ಮಣನಾಗಲಿ, ಕ್ಷತ್ರಿಯನಾಗಲಿ, ವೈಶ್ಯನಾಗಲಿ, ಶೂದ್ರನಾಗಲಿ, ಆವ ಜಾತಿಯಲ್ಲಿ ಹುಟ್ಟಿದಾತನಾದರೂ ಆಗಲಿ, ಗುರುಕಾರುಣ್ಯವ ಪಡೆದು, ಅಂಗದ ಮೇಲೆ ಲಿಂಗವ ಧರಿಸಿದವನು, ಆಚಾರ ಸಂಪನ್ನ ಸತ್‌ಕ್ರಿಯನಾದ ಮಹಾತ್ಮನೇ ಮೂರು ಲೋಕಕ್ಕೆ ಅಧಿಕಾರಿಯು ನೋಡಾ ಅಖಂಡೇಶ್ವರಾ.

(೨) ಶ್ರೀಗುರುವಾದಾತನು ಸಕಲಾಗಮಂಗಳ ಹೃದಯವನರಿದು ತನ್ನ ಆದಿ ಮಧ್ಯಾವಸಾನಮಂ ತಿಳಿದು, ಸರ್ವಾಚಾರವು ತನ್ನಲ್ಲಿ ನೆಲೆಗೊಂಡು

ಉಪದೇಶವ ಮಾಡುವ ಪರಿ ಎಂತೆಂದೊಡೆ, ಬ್ರಾಹ್ಮಣನಂ ಮೂರು ವರ್ಷ ನೋಡಬೇಕು, ಕ್ಷತ್ರಿಯನಂ ಆರು ವರ್ಷ ನೋಡಬೇಕು, ವೈಶ್ಯನಂ ಒಂಬತ್ತು ವರ್ಷ ನೋಡಬೇಕು, ಶೂದ್ರನಂ ಹನ್ನೆರಡು ವರ್ಷ ನೋಡಬೇಕು. ಅದೆಂತೆಂದೊಡೆ ವೀರಾಗಮೆ ॥ ಬ್ರಾಹ್ಮಣಂ ತ್ರೀಣಿವರ್ಷಾಣಿ, ಕ್ಷತ್ರಿಯಂ ವರ್ಷ ಷಟ್ಸುಚ ॥ ವೈಶ್ಯಂತು ನವ ವರ್ಷಾಣಿ ॥ ಶೂದ್ರಂ ದ್ವಾದಶ ವರ್ಷಾಣಿ ॥ ಇಂತೀ ಶ್ರುತ್ಯರ್ಥವನರಿಯದೆ, ಉಪಾಧಿವಿಡಿದು ಉಪದೇಶವಂ ಮಾಡಿದಾತ ಗುರುವಲ್ಲ, ಉಪದೇಶವಿಡಿದು, ಉಪಾಧಿಯಲ್ಲಿ ದೀಕ್ಷೆಯಕೊಂಬಾತ ಶಿಷ್ಯನಲ್ಲ. ಇವರಿಬ್ಬರ ನಿಲವು ಒಂದೇ. ಠಕ್ಕನ ಮನೆಗೆ ಠಕ್ಕ ಬಂದಂತೆ ಆ ಗುರು ಶಿಷ್ಯ ರಿಬ್ಬರನು ರೌರವನರಕದಲ್ಲಿಕ್ಕುವ ನಮ್ಮ ಕೂಡಲಚನ್ನಸಂಗಮದೇವಾ.

(೩). ಅಯ್ಯಾ ವೈಷ್ಣವರಾದವರು ತಮ್ಮ ವಿಷ್ಣುವಂಬಿಟ್ಟು ಕಳೆದು ಲಿಂಗಭಕ್ತರಾದರು ಕೆಲವರು. ಅಯ್ಯಾ ಜೈನರಾದವರು ತಮ್ಮ ಜಿನಧರ್ಮವಂ ಬಿಟ್ಟು ಲಿಂಗಭಕ್ತರಾದರು ಅನೇಕರು. ಅಯ್ಯಾ ದ್ವಿಜರಾದವರು ತಮ್ಮ ಕರ್ಮಂಗಳ ಬಿಟ್ಟು ಕಳೆದು ಶಿವಲಿಂಗ ಭಕ್ತರಾದರನೇಕರು. ಶಿವಲಿಂಗವ ಬಿಟ್ಟು ಇವ ಹಿಡಿದವರುಳ್ಳರೇ ಹೇಳಿರಯ್ಯ. ಉಳ್ಳೊಡೆಯೂ, ಅವರು ವ್ರತಗೇಡಿಗಳೆನಿಸಿಕೊಂಬರು, ಯುಕ್ತಿವಂತರಲ್ಲ, ಮುಕ್ತಿವಂತರಲ್ಲ, ಭಕ್ತಿವಂತರಲ್ಲ, ' ಮುಂದೆ ನರಕಕ್ಕೆ ಭಾಜನರಪ್ಪರು. ಅದೆಂತೆಂದೊಡೆ, ಮಹೇಶ್ವರ ವೈಷ್ಣವತ್ವಾದನೇ ಕಾರಾಧನಾದ್ವರೇತ್ । ಏಕ ಹಸ್ತಂ ನಿರಾಲಂಬಂ ನರಕೇ ಕಾಲಮಕ್ಷಯಂ॥ ಎಂದುದಾಗಿ ಅವರದಂತಿರಲಿ, ಇದು ಕಾರಣವಾಗಿ, ಋಷಿಕೃತಕದಿಂದಾದ ಕುಟಿಲ ದೈವಂಗಳ ದಿಟವೆಂದು ಬಗೆದು ಸಟೆಯ ಬಿಡಲಾರದೆ, ದಿಟವ ಸಂಬಲಾರದೆ, ನಷ್ಟವಾಗಿ ಹೋಯಿತ್ತೀಜಗವೆಲ್ಲ ನೋಡಾ. ಸಕಲ ದೈವಂಗಳಿಗೆ ಸಕಲ ಸಮಯಂಗಳಿಗೆ ಘನಮಹಿಮನೆಂದು ನಿಮಗೆ ನಾನು ಶರಣವೊಕ್ಕೆನಯ್ಯ ಬಸವಪ್ರಿಯ ಕೂಡಲ ಚನ್ನಸಂಗಮ್ಮದೇವಾ.

(೪). ಭವಿತನಕ್ಕೆ ಹೇಸಿ ಭಕ್ತನಾಗಬೇಕೆಂಬಾತನು ಸದ್ಗುರುವನರಸಿಕೊಂಡು ಬಂದು ಅವರ ಕಾರುಣ್ಯದಿಂದ ಮುಕ್ತಿಯಂ ಪಡೆದೆವೆಂದು, ಆ ಶ್ರೀಗುರುವಿಗೆ ದಂಡಪ್ರಣಾಮವಂ ಮಾಡಿ, ಭಯಭಕ್ತಿಯಿಂದ ಕರಂಗಳಂ ಮುಗಿದು ನಿಂದಿರ್ದು, ಎಲೆ ದೇವಾ ಎನ್ನ ಭವಿತನವಂ ಹಿಂಗಿಸಿ ನಿಮ್ಮ ಕಾರುಣ್ಯದಿಂದ ಎನ್ನ ಭಕ್ತನಂ ಮಾಡುವದೆಂದು ಶ್ರೀಗುರುವಿಂಗೆ ಬಿನ್ನಹಂ ಮಾಡಲು, ಆ

ಶ್ರೀಗುರುವು ಅಂತಪ್ಪ ಭಯಭಕ್ತಿ ಕಿಂಕರತೆಯೊಳಿಪ್ಪ ಶಿಶುವಂ ಕಂಡು, ತಮ್ಮ ಕೃಪಾವಲೋಕನದಿಂ ನೋಡಿ, ಆ ಭವಿಯ ಪೂರ್ವಾಶ್ರಯಮಂ ಕಳೆದು ಪುನರ್ಜಾತನಂ ಮಾಡಿ ಆತನ ಅಂಗದ ಮೇಲೆ ಲಿಂಗಪ್ರತಿಷ್ಠೆಯ ಮಾಡುವ ಕ್ರಮವೆಂತೆಂದೊಡೆ......ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೫). ತಾವು ಗುರುವೆಂದು ಮುಂದಣವರಿಗೆ ಅನುಗ್ರಹವ ಮಾಡುವರಯ್ಯ. ತಾವು ಗುರುವಾದರೆ, ಎಲ್ಲರಿಗೆ ಒಂದೇ ದೇಹ. ಸಾಕ್ಷಿ:—ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ । ಆತ್ಮ ಜೀವ ಏವ ದೇಹಂ ವರ್ಣಾನಾಂ ಕಿಂ ಪ್ರಯೋಜನಂ ॥ ಎಂದುದಾಗಿ, ಗುರುವೆಂಬದು ತಾನು ಪರುಷವಾದಡೆ, ಆ ಪರುಷ ಮುಟ್ಟಲು ಉಳಿದ ಲೋಹ ಸುವರ್ಣವಾದವಲ್ಲದೆ, ಅದು ಪರುಷವಾಗಲರಿಯದು. ಅದು ಗುರುಸ್ಥಲವಲ್ಲ. ನಿಲ್ಲು, ನಿಲ್ಲು, ಗುರುಸ್ಥಲವೆಂಬುದು ತಾನು ಸ್ವಯಂ ಜ್ಯೋತಿಪ್ರಕಾಶವು. ಅಂತಪ್ಪ ಸ್ವಯಂ ಜ್ಯೋತಿಪ್ರಕಾಶ ಭಾತಿ ಎಂದು ಅದು ಜ್ಯೋತಿಯ ಹೊತ್ತಿಸಿದರೆ, ಆ ಜ್ಯೋತಿ ತನ್ನಂತೆ ಮಾಡಿತ್ತು. ಆದು ಆವ ಜ್ಯೋತಿ ಎಂದಡೆ, ಅದು ಪಶ್ಚಿಮ ಜ್ಯೋತಿ. ಆ ಜ್ಯೋತಿಯ ಬೆಳಗಿನಿಂದ ಪ್ರಾಣಲಿಂಗವ ಕಂಡು ಸುಖಿಯಾದೆನು. ನಾಲ್ಕು ವೇದಾರ್ಥ, ಅಜಪ ಗಾಯಿತ್ರಿ ಅರ್ಥ, ಪ್ರಣವ ಮಯದಿಂದ ಪ್ರಾಣಲಿಂಗ ಸಂಬಂಧವ ಮಾಡಿ, ಇಷ್ಟರಲ್ಲಿ ತಾನು ಸ್ವತಂತ್ರನಾದರೆ, ಇಷ್ಟಲಿಂಗವನು ಆರಿಗಾದರೂ ಕೊಡಬಹುದು. ಅಲ್ಲದಿರ್ದಡೆ ಅಂಧಕನ ಕಯ್ಯ ಅಂಧಕ ಹಿಡಿದಂತೆ ಕಾಣಾ ಕೂಡಲ ಚೆನ್ನಸಂಗಮದೇವಾ.

(೬). ನೀರುಗಟ್ಟಿಗೊಂಡು ಮುತ್ತಪ್ಪುದಲ್ಲದೆ, ಮುತ್ತು ನೀರಪ್ಪುದೇನಯ್ಯ? ಹಾಲು ಹೆಪ್ಪುಗೊಂಡು ತುಪ್ಪ ಆಗುವದಲ್ಲದೆ ತುಪ್ಪ ಹಾಲಪ್ಪುದೇನಯ್ಯ? ಹೀನಜಾತಿಯಲ್ಲಿ ಜನಿಸಿದ ನರನು ಗುರುವಿನ ಕಾರುಣ್ಯದಿಂದ ಶಿವಜಾತಾಭರಣನಾದ ಬಳಿಕ ಮರಳಿ ನರನಪ್ಪನೇನಯ್ಯ ಅಖಂಡೇಶ್ವರಾ?

(೭). ತನ್ನದಾದರೇನು ಕನ್ನಡಿ? ಅನ್ಯರದಾದಡೇನು ಕನ್ನಡಿ? ತನ್ನ ರೂಪ ಕಂಡಡೆ ಸಾಲದೇ? ಸದ್ಗುರು ಆವನಾದಡೇನು? ತನ್ನನರುಹಿದಡೆ ಸಾಲದೇ ಹೇಳಾ ಸಿಮುಲಿಗೆಯ ಚೆನ್ನರಾಮಾ?

(೮). ವಿಷದಷ್ಟವಾಗಿದ್ದ ನರನ ಗಾರುಡ ಮಂತ್ರೌಷಧದಿಂದ ಆರೋಗ್ಯಕಾಯನ ಮಾಡುವಂತೆ, ಶೈವ ಗುರುವಿನ ಕಯ್ಯಲ್ಲಿ ಮಂತ್ರೋಪದಿಷ್ಟನಾದ ಶಿಷ್ಯಂಗೆ ವೀರಶೈವ ಮಂತ್ರೋಪದೇಶದಿಂದ ಆತನ ಕಾಯ ಶುದ್ಧಾತ್ಮನಂ ಮಾಡಿ ಆತನ ಲಿಂಗಕ್ಕೆ ಪ್ರಾಣಪ್ರತಿಷ್ಠೆಯಂ ತುಂಬಿ ಆತನ ಅಂಗದ ಮೇಲೆ ಲಿಂಗವಂ ಬಿಜಯಂಗೈಸಿ ಕೃತಕೃತ್ಯನಂ ಮಾಡಿದ ನಮ್ಮ ವೀರಶೈವ ಗುರು ಕೂಡಲಚನ್ನಸಂಗಮದೇವಾ.

(೯). ಕಳ್ಳನ ಕಯ್ಯಲ್ಲಿ ಒಂದು ಒಳ್ಳೇ ರತ್ನವ ಕಂಡಡೆ, ಎಲ್ಲರೂ ಬಂದು ತಲೆವಿಡಿವರಯ್ಯ. ಆ ರತ್ನವ ರತ್ನದ ವ್ಯವಹಾರಿ ಕೊಂಡರೆ, ಆರೂ ಬಯ್ಯಲಮ್ಮರು. ಅದೆಂತೆಂದೊಡೆ, ಚೋರವಿಕ್ರಯ ರತ್ನಾನಾಂ ಪುನಃ ಕ್ರಯವರಂತಿವೈ। ಶೈವ ದೀಕ್ಷಾತು ಲಿಂಗಾನಾಂ ಪುನರ್ದೀಕ್ಷಾ ವಿಶೇಷತಾ ॥ ಎಂದುದಾಗಿ, ಶೈವ ಗುರುವಿನ ಕಯ್ಯಲ್ಲಿ ಸಾಹಿತ್ಯವಾದ ಲಿಂಗವನು ವೀರಶೈವ ಗುರುವಿನ ಕಯ್ಯಲ್ಲಿ ಕೊಟ್ಟು ಮರಳಿ ಕೊಂಡಡೆ, ಆತ ಇಹಲೋಕಪೂಜ್ಯನು. ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ತಪ್ಪದು ರೇಕಣ್ಣಪ್ರಿಯನಾಗಿನಾಥಾ.

(೧೦). ಶೈವನೇಮಸ್ತರ ಕಯ್ಯಲು ಉಪದೇಶವಾದರೆ ಏನಯ್ಯ? ಅಲ್ಲಿ ಏನೂ ಊನವಿಲ್ಲ, ಪಾರಂಪರ್ಯದಲ್ಲಿ ನಡೆದಿತ್ತುದಾಗಿ. ನದಿಯ ಮೂಲವನು ಗುರುವಿನ ಮೂಲವನು ಅರಸುವರೇ? ಗುರುಲಿಂಗ ಜಂಗಮಸಾಕ್ಷಿಯಾಗಿ ಪಟ್ಟಾಭಿಷೇಕ ಪ್ರಣಮಮಂತ್ರದಿಂದ ಲಿಂಗದರ್ಶನವಾಯಿತ್ತಾಗಿ, ಕಳೆಯಬಾರದು, ಬೆರಸಿ ತನ್ನೊಳಗೆ ತಾನಚ್ಚೊತ್ತಿ ಕರಿಗೊಂಡಿತ್ತಾಗಿ. ಅಂದು ಬಳ್ಳೇಶ್ವರ ಮಲ್ಲಯ್ಯಗಳು ಬಳ್ಳವ ಲಿಂಗವ ಮಾಡಿದರೆಂದು ಕಳೆದರೇ ಎಮ್ಮ ಪ್ರಮಥರು? ಅಂದು ತಿರುಕಾಳ ಹಸ್ತಿಯಲ್ಲಿ ಕಣ್ಣಪ್ಪ ದೇವರು ಸುಜ್ಞಾನಭಕ್ತಿಯಿಂದ ಸ್ಥಾವರವನೇ ಗುರುರೂಪವಮಾಡಿ ಪೂಜಿಸಿದರೆಂದು ಕಳೆದರೇ ನಮ್ಮ ಪುರಾತನರು? ಅಂದು ಕಲ್ಯಾಣದಲ್ಲಿ ಹುಸಿಯನೇ ದಿಟವ ಮಾಡಿ ಬದನೆಯಕಾಯ ಲಿಂಗವ ಮಾಡಿ ಸಲಿಸನೇ ನಮ್ಮ ಬಸವಣ್ಣನು? ಇವರೆಲ್ಲರೂ ನಿಮ್ಮ ಭಜಿಸಿ, ನಿಮ್ಮತ್ತಲಾದರು. ನಾ ನಿನಗೇನ ಮಾಡಿದೆನಯ್ಯ ಉಳಿಯುಮೇಶ್ವರಾ?

(೧೧). ಇಂತಪ್ಪ ಭಿನ್ನ ಗುರುವಿನ ಕಯ್ಯಿಂದ ಪಡೆಕೊಂಡ ಲಿಂಗವ ಮರಳಿ ಜ್ಞಾನಗುರುವಿನ ಕಯ್ಯಲ್ಲಿ ಕೊಟ್ಟು ಲಿಂಗವ ಪಡೆಯಬೇಕು. ಇದಕ್ಕೆ ಸಂಶಯುವಮಾಡುವಿರಿ. ಸಂಶಯ ಮಾಡಲಾಗದು. ಅದು ಅಜ್ಞಾನದೊಳಗು. ಅದಂತೆಂದೊಡೆ, ಇದಕ್ಕೆ ದೃಷ್ಟ. ಲೌಕಿಕದಲ್ಲಿ ಪಂಚಾಳಕುಲದಲ್ಲಿ ಒಬ್ಬ ಪತ್ತಾರ ನಿಗೆ ಒಂದಾಭರಣವ ಮಾಡಿಕೊಡೆಂದು ಕೊಟ್ಟರೆ, ಅವರು ಮಾಡಿಕೊಟ್ಟರು. ತಮಗೆ ಪರಿಣಾಮವಾದರೆ, ಇಟ್ಟುಕೊಂಬರು. ಪರಿಣಾಮ ಇಲ್ಲದಾದರೆ, ಮರಳಿ ಮತ್ತೊಬ್ಬ ಕುಶಲ ಪತ್ತಾರನ ಕಯ್ಯಿಂದ ಮಾಡಿಸಿ ಇಟ್ಟುಕೊಂಬುವರು. ಮತ್ತಂ ಒಬ್ಬ ಬಡಿಗನಿಂದ ಅವುದಾನೊಂದು ಗಳೆಯ ಹಾಯಿಸಿಕೊಂಡೊಯ್ದು ಹೋಗಿ ಭೂಮಿಯಲ್ಲಿ ಹೂಡಿ ಹೊಡೆದರೆ, ನೀಟಾಗಿ ನಡೆದರೆ ಹೊಡೆವರು. ನೀಟಾಗಿ ನಡೆಯದಿದ್ದರೆ, ಮರಳಿ ಮತ್ತೊಬ್ಬ ಬಡಿಗನ ಕರೆದೊಯ್ದು ನೀಟಾಗಿ ಗಳೆಯ ಹಾಕಿಸಿ ಹೊಡೆವರಲ್ಲದೆ, ಹಾಗೇ ಹೊಡೆಯರು. ಒಬ್ಬ ಚಿಂಪಿಗನಲ್ಲಿ ಅವುದಾ ನೊಂದು ಉಡಿಗೆತೊಡಿಗೆಯ ಹೊಲಿಸಿಕೊಂಡು ಉಟ್ಟು ತೊಟ್ಟರೆ ತಮ್ಮಂಗಕ್ಕೆ ಹಿತ ಒಪ್ಪಿದರೆ ಇಟ್ಟುಕೊಂಬರು. ಇಲ್ಲದಾದರೆ ಮತ್ತೊಬ್ಬ ಕುಶಲ ಚಿಂಪಿಗನಲ್ಲಿ ಹೊಲಿಸಿ ತೊಡುವರಲ್ಲದೆ ಹಾಗೇ ತೊಡರು. ಇಂತೀ ತ್ರಿವಿಧವು ಮೊದಲಿಗೆ ಇದ್ದ ಹಾಗೆ ಆಚರಿಸಿದಡೆ, ಅವರಂಗಕ್ಕೆ ದಣುವಲ್ಲದೆ ಹಿತಕರವಾಗಿ ತೋರ ದೆಂಬ ಹಾಗೆ, ಅಂತಪ್ಪ ಭಿನ್ನಭಾವದ ಶೈವಗುರುವಿನ ಉಪದೇಶವ ವಿಸರ್ಜಿಸಿ, ಅಭಿನ್ನಭಾವವೆಂಬ ಸ್ವಾನುಭಾವ ಜ್ಞಾನಗುರು ಮುಖದಿಂ ತಾರಕಮಂತ್ರೋಪ ದೇಶವ ಪಡೆದು ಲಿಂಗಧಾರಣವಾದಡೆ, ವೀರಶೈವದ ಅಚ್ಚು, ಪುರಾತನದ ಮಚ್ಚು, ಸರ್ವಗಣಂಗಳಿಗೆ ಸನ್ಮತ. ಇಂತಪ್ಪ ವಿಚಾರವನರಿಯದೆ ಮೂಢಮತಿ ಯಿಂದ ಕಾಡಲಿಂಗವ ಕಯ್ಯಲ್ಲಿ ಕೊಟ್ಟು ಪೂಜಿಸೆಂದು ಹೇಳುವ ಗುರುವು, ಆ ಕಲ್ಲಲಿಂಗವ ಕಯ್ಯಲ್ಲಿ ಪಿಡಿದು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜಿಸುವ ಶಿಷ್ಯನು ಬಳ್ಳಿಗುರುಡನ ಕಯ್ಯ ಬಳ್ಳಿಗುರುಡಪಿಡಿದು ಕಾಣದೆ ಡೊಂಗುರವ ಬಿದ್ದಂತೆ ಗುರುಶಿಷ್ಯರೆಂಬುಭಯರು ಯಮಗುಂಡದಲ್ಲಿ ಬೀಳುವರು ನೋಡೆಂದ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗನಿರ್ಮಾಯ ಪ್ರಭುವೇ.

# ದೀಕ್ಷೆಯಾದ ಬಳಿಕ ಪೂರ್ವಾಶ್ರಯುವನ್ನು ಬೆರಿಸಕೂಡದು.

(೧). ಗುರುವಿನಿಂದ ಉಪದೇಶವ ಪಡೆದು, ಗುರುಪುತ್ರನೆನಿಸಿಕೊಂಡು, ಬಳಿಕ ಪೂರ್ವದ ತಂದೆ ತಾಯಿ ಎಂದು, ಬಂಧುಬಳಗವೆಂದು, ಮಲಸಂಬಂಧವ ನೆನೆಯಲಾಗದು ಕಾಣಿರೋ. ನೆನೆದಿರಿಯಾದರೆ ಶಿವದ್ರೋಹ ತಪ್ಪದಯ್ಯ. ಇನ್ನು ನಿಮಗೆ ತಾಯಿ ತಂದೆಯ ಹೇಳಿಹೆ ಕೇಳಿರಿ. ಗುರುವೇ ತಾಯಿ, ಗುರುವೇ ತಂದೆ, ಗುರುವೇ ಬಂಧುಗಳು. ಗುರುವಿನಿಂದ ಪರವಿನ್ನಾವುದು? ಇನ್ನಾರೂ ಇಲ್ಲವೆಂದು ನಂಬಬಲ್ಲರೆ, ಶಿಷ್ಯನೆಂಬೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

(೨). ಬಹುಜನರ ಶೌಚದ ಮಲವ ಹಂದಿಯು ತಿಂದು, ತನ್ನ ಒಡಲ ಹೊರೆವುದಯ್ಯ. ತನ್ನ ಶೌಚದ ಮಲವ ಮರಳಿ ತಾ ಮುಟ್ಟದು ನೋಡಾ. ಭವಿ ತನಕ್ಕೆ ಹೇಸಿ ಭಕ್ತನಾದ ಬಳಿಕ ಭವಿಯ ನೆಂಟರು ಹೆತ್ತ ಬಂಧುಗಳೆಂದು ಬೆರಿಸಿದರೆ, ಆ ಹಂದಿಗಿಂತಲೂ ಕರಕಷ್ಟ ಕಾಣಾ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೩). ಭವಿಯ ಕಳೆದು ಭಕ್ತನಾದ ಬಳಿಕ ಭವಿಯ ನಂಟನೆಂದು ಹೊಗಲಾಗದು ನಂಟುತನಕ್ಕೆ. ಆತ್ಮದಿಚ್ಛೆಗೆ ಅಳುಪಿ ಭವಿಯೊಡನುಂಡಡೆ, ಹಂದಿಯ ಬಾಯ ತುತ್ತಡಗಿಂದ ಕರಕಾಷ್ಟ ಕಾಣಾ ರಾಮನಾಥಾ.

(೪). ಅಣ್ಣ ತಮ್ಮ ಹೆತ್ತಪ್ಪ ಗೋತ್ರದವರಾದರೇನು? ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯ, ನಂಟುಭಕ್ತಿನಾಯಕನರಕ ಕೂಡಲಸಂಗಮದೇವಾ.

(೫). ಪಕ್ಕ ಮುರಿದ ಕೋಳಿಯಂತೆ ಬೆಕ್ಕಿನ ಬಾಧೆಗೆ ಸಿಕ್ಕಬೇಡವೆಂದು ಗುರುಲಿಂಗಜಂಗಮದ ಪಾದ ತೀರ್ಥಪ್ರಸಾದದ ದಿಕ್ಕ ತೋರಿ, ದೀಕ್ಷೆಯ ಕೊಟ್ಟ ಮಾರ್ಗವ ಮೀರಿ, ಮರಳಿ ಮಕ್ಕಳು ಮಾತಾಪಿತರು ಬಂಧುಗಳು ಭವಿಗಳಾಗಿರಲು ಅವರ ಮುಖವ ಬಿಡಲಾರದೆ ಕೂಳಿನಾಸೆ ಮಾಡಿ ಹೋದೆನೆಂದಡೆ, ಕೋಳಿ ತಾನು ಬೆಕ್ಕು ನಾಯಿಂದ ಗ್ರಹಕೆ ಗುಟುಕಕೊಳಹೋದ ತೆರನಾಯಿತ್ತು ಕಲಿದೇವರದೇವಯ್ಯ.

---

# ಲಿಂಗವೇ ಪತಿ ಎಂದು ಭಾವಿಸತಕ್ಕದ್ದು.

## ( ಸತಿಪತಿ ಭಾವದ ವಚನಗಳು. )

(೧). ಹರನೇ, ನೀನೆನಗೆ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ. ಹಸೆಯ ಮೇಲಣಮಾತ ಬೆಸಗೊಳಲಟ್ಟಿದರೆ, ಶಶಿಧರನ ಹತ್ತಿರಕ್ಕೆ ಕಳುಹಿದರೆಮ್ಮವರು. ಭಸ್ಮವನೆ ಹೂಸಿ, ಕಂಕಣವನೇ ಕಟ್ಟಿದರು, ಚನ್ನಮಲ್ಲಿಕಾರ್ಜುನ ತನಗೆ ನಾನಾಗಬೇಕೆಂದು.

(೨). ಪಚ್ಚೆಯ ನೆಲಗಟ್ಟು, ಕನಕದ ತೋರಣ, ವಜ್ರದ ಕಂಭ, ಪವಳದ ಚಪ್ಪರವನಿಕ್ಕಿ, ಮುತ್ತುಮಾಣಿಕದ ಮೇಲುಕಟ್ಟ ಕಟ್ಟಿ, ಮದುವೆಯ ಮಾಡಿದರು, ನಮ್ಮವರೆನ್ನ ಮದುವೆಯ ಮಾಡಿದರು. ಕಂಕಣ, ಕೈದಾರ, ಸ್ಥಿರ ಸೇಸೆಯನಿಕ್ಕಿ ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.

(೩). ಬಸವ ಬಂದಿಗಟ್ಟಿ, ಸಂಗಯ್ಯ ಮದುವಳಿಗ, ನಾನು ಮದುವಳಿಗೆ ವಸುಧೆಯ ಭಕ್ತರೆಲ್ಲರು ನಿಬ್ಬಣಿಗರು. ಶುದ್ಧ ಶಿವಾಚಾರವೆಂಬ ಮನೆಯಲ್ಲಿ ಮದುವೆಯಾಯಿತ್ತಾಗಿ, ಕೂಡಲಚನ್ನಸಂಗಮನೊಬ ಅಚಳ, ನಾನು ನಿತ್ಯ ಮುತ್ತೈದೆ.

(೪). ಜಗವೆಲ್ಲರಿಯಲು ಎನಗೊಬ್ಬ ಗಂಡನುಂಟು. ಆನು ಮುತ್ತೈದೆ, ಆನುನಿಷ್ಠೆ, ಕೂಡಲಸಂಗಮದೇವಯ್ಯಂತಪ್ಪ ಎನಗೊಬ್ಬ ಗಂಡನುಂಟು.

(೫). ಹುಟ್ಟಿದೆನು ಶ್ರೀಗುರುವಿನ ಹಸ್ತದಲ್ಲಿ. ಬೆಳೆದೆನು ಅಸಂಖ್ಯಾತರ ಕರುಣದಲ್ಲಿ. ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ, ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ. ಇಂತಪ್ಪ ತ್ರಿವಿಧಾಮೃತವನು ದಣಿಯೆರದು ಸಲಹಿದರೆನ್ನ. ವಿವಾಹವ ಮಾಡಿದಿರಿ. ಸಯವಪ್ಪ ಗಂಡಗೆ ಕೊಟ್ಟಿರಿ. ಕೊಟ್ಟಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರು ನೆರೆದು ಬಂದಿರಿ. ಬಸವಣ್ಣ ಮೆಚ್ಚಲು ಒಗತನವ ಮಾಡುವೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ಮಂಡೆಗೆ ಹೂವ ತಾಹೆನಲ್ಲದೆ, ಹುಲ್ಲ ತಾರೆನು. ಅವಧರಿಸಿ. ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೈವುದು, ಶರಣಾರ್ಥಿ.

(೬). ಎನ್ನ ನಲ್ಲನು ಒಲ್ಲೆನೆಂದು ಕಳುಹಿದಡೆ, ಇಲ್ಲಿಯೇ ಅರಸುವೆನವನ. ಗಂಗೆಯ ನೋಣೆನು, ಗೌರಿಯ ನೋಣೆನು, ಇಲ್ಲಿಯೇ ಅರಸುವೆನವ್ವಾ. ಎನ್ನಂತರಂಗದ ಆತ್ಮಜ್ಯೋತಿಯೇ ಉರಿಲಿಂಗ ದೇವ ಎಂದು ಇಲ್ಲಿಯೇ ಅರಸುವೆನವ್ವಾ.

(೭). ಸಾವಿಲ್ಲದ, ಕೇಡಿಲ್ಲ, ರೂಹಿಲ್ಲದ ಚಲುವನವ್ವಾ. ಎಡೆ ಇಲ್ಲದ, ತೆರಹಿಲ್ಲದ, ಕುರುಹಿಲ್ಲದ, ಚಲುವಂಗಾನೊಲಿದೆ, ಎಲೆ ಅವ್ವಾ. ನೀ ಕೇಳಾ ತಾಯೆ. ಭವವಿಲ್ಲದ, ಭಯವಿಲ್ಲದ, ನಿರ್ಭಯ ಚಲುವಂಗೆ, ಕುಲ ಸೀಮೆ ಇಲ್ಲದ ನಿಸ್ಸೀಮ ಚಲುವಂಗೆ ನಾನೊಲಿದೆ. ಇದು ಕಾರಣ ಚನ್ನ ಮಲ್ಲಿಕಾರ್ಜುನ ಚಲುವ ಗಂಡನೆನಗೆ. ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು.

(೮). ಒಬ್ಬನೆ ಗರುವನು, ಇವನೊಬ್ಬನೆ ಚಲುವನು, ಇವನೊಬ್ಬನೆ ಧನಪತಿ, ಕೇಳಾ ಕೆಳದಿ. ಅವಗೆ ಹಿರಿಯರಿಲ್ಲ ಅವಗೆ ಒಡೆಯರಿಲ್ಲ. ಇಂತಪ್ಪ ನಲ್ಲನು ಲೇಸು, ಕಾಣೆನಗೆ. ನೀವೆಲ್ಲ ಒಂದಾಗಿ ಹಿಡಿದು ಬಡಿದರೆ, ಬಿಡಿಸುವ ಈ ನಲ್ಲ ಲೇಸು ಉರಿಲಿಂಗ ದೇವನು.

(೯). ಅತ್ತೆ ಮಾಯೆ, ಮಾವ ಸಂಸಾರಿ, ಮೂವರು ಮೈದುನರು ಹುಲಿಯಂತವರು. ನಲ್ಲನು ನಗೆವೆಣ್ಣು ಕೆಳದಿಯರ ಭಾವದಲಿರುವನು. ಇವ ದೇವನಲ್ಲ. ಅತ್ತಿಗೆಯರ ಮೀರಲಾರೆನು. ತೊತ್ತುವಿನ ಕಾವಲು. ಹೇಳುವರೆ ಕೇಳು, ಕರ್ಮವೆಂಬ ಗಂಡನ ಬಾಯಟೊಣೆದು ಹಾದರವನಾಡುವೆನು ಹರನ ಕೂಡೆ. ಮನವೆಂಬ ಸಖಿಯ ಪ್ರಸಾದದಿಂದ ಅನುಭಾವವ ಕಲಿತೆನು ಶಿವನೊಡನೆ. ಕರ ಚೆಲ್ವ ಶ್ರೀಶೈಲ ಚನ್ನಮಲ್ಲಿಕಾರ್ಜುನನ ಸಜ್ಜನ ಗಂಡನ ಮಾಡಿಕೊಂಬೆ.

(೧೦). ಎಲ್ಲರ ಗಂಡಂದಿರು ಪರದಳ ವಿಭಾಡರು. ಎನ್ನ ಗಂಡ ಮನೆದಳ ವಿಭಾಡ. ಎಲ್ಲರ ಗಂಡಂದಿರು ಗಜ ಬೇಂಟೆಕಾರರು. ಎನ್ನ ಗಂಡ ಮನ ಬೇಂಟೆಕಾರ. ಎಲ್ಲರ ಗಂಡರು ತಂದಿಕ್ಕಿಸಿಕೊಂಬರು ಎನ್ನ ಗಂಡ ತಾರದೆ ಇಕ್ಕಿಸಿಕೊಂಬ. ಎಲ್ಲರ ಗಂಡರಿಗೆ ಮೂರು. ಎನ್ನ ಗಂಡಗೆ ಒಂದು. ಅದೊಂದು ಸಂದೇಹಬೇಡಾ. ಕದಿರರೆಮ್ಮಿಯೊಡೆಯಗುಮ್ಮೇಶ್ವರಾ.

**ಟೀಕು:**—ಮಾಯಾಶಕ್ತಿಯ ವಲ್ಲಭರಾದ ಖಂಡಿತಜ್ಞಾನಿಗಳೆಲ್ಲರು ಬಹಿರಂಗದ ಪ್ರಪಂಚು ತನುದಂಡನೆಗಳಿಂ ನಿವೃತ್ತಿಮಾಡಬೇಕೆನ್ನುತ್ತಿಹರೆಂಬುದೀಗ

ಎಲ್ಲರ ಗಂಡಂದಿರು ಪರದಳ ವಿಭಾಡರು ಎಂಬ ಶಬ್ದಕ್ಕರ್ಥ. ಚಿತ್ಸ್ವರೂಪವಾದ ಶರಣಸತಿಗೆ ಮಹಾಘನಲಿಂಗವೇ ಪತಿಯಾದ ಕಾರಣ, ಆ ಮಹಾಘನಲಿಂಗವು ಶರಣನ ಸರ್ವಾಂಗವನವಗ್ರಹಿಸಿ ಮನಸ್ಸಿನಿಂ ತೋರುವ ಸಂಕಲ್ಪ ವಿಕಲ್ಪ ಮೊದಲಾದ ಸಕಲ ಪ್ರಪಂಚ ನಿವೃತ್ತಿಯ ಮಾಡಿ ಶಿವಜ್ಞಾನವ ಪ್ರಭಾವಿಸಿ ಕೊಡುತ್ತಿಹುದೆಂಬುದೀಗ ಎನ್ನ ಗಂಡ ಮನೆದಳ ವಿಭಾಡನೆಂಬ ಶಬ್ದಕ್ಕರ್ಥ. ಮಾಯಾಶಕ್ತಿ ವಲ್ಲಭರಾದ ಭಿನ್ನಜ್ಞಾನಿಗಳೆಲ್ಲರು ಬಹಿರಂಗದಷ್ಟಮದಂಗಳ ನಷ್ಟವ ಮಾಡಬೇಕೆನ್ನುತ್ತಿಹರು ಚಿದ್ರೂಪನಾದ ಶರಣನ ಬಾಹ್ಯಾಭ್ಯಂತರಂಗಳ ನೊಳಕೊಂಡು ಪರಿಪೂರ್ಣವಾಗಿರ್ಪ ಪರಶಿವ ತತ್ವವು ಅಂತರಂಗದಷ್ಟಮದಂಗಳು ನಷ್ಟವ ಮಾಡಿ ಚಿದಹಂಕಾರಸ್ವರೂಪವನೆಯ್ದಿಸುತ್ತಿಹನೆಂಬುದೀಗ, ಎಲ್ಲರ ಗಂಡಂದಿರು ಗಜಬೇಂಟೆಕಾರರು ಎನ್ನ ಗಂಡ ಮನ ಬೇಂಟೆಕಾರನೆಂಬ ಶಬ್ದಕ್ಕರ್ಥ. ತಮ್ಮ ನಿಜವೇ ಪರಬ್ರಹ್ಮವೆಂದರಿಯದೆ ದ್ವೈತಭಾವದಿಂದೆ ಲಿಂಗಕ್ಕೆ ಸರ್ವ ಕ್ರಿಯೋಪಚಾರಂಗಳ ಮಾಡಿ ಭಿನ್ನ ಫಲಪದಂಗಳ ಪಡೆದು ಭೋಗಿಸಿದವರು ಭವಹೇತುವಪ್ಪ ಜನ್ಮಾಂತರಕ್ಕೆ ಬಂದು ಮಾಯಾಸಂಬಂಧವಾದ ಸಕಲ ವಿಷಯ ಪದಾರ್ಥಂಗಳ ಜೀವಭಾವದಿಂ ಭುಂಜಿಸುತ್ತಿಹರು ಸುಜ್ಞಾನ ಸನ್ನಿಹಿತವಾದ ಶರಣ ಸತಿಗೆ ಪತಿಯಾಗಿರ್ಪ ಮಹಾಘನಲಿಂಗವು ಫಲಪದಂಗಳ ಕೊಟ್ಟು ಭವಕ್ಕೆ ತಾರದೆ ಅಂಗ ಮನ ಪ್ರಾಣ ಸರ್ವೇಂದ್ರಿಯಂಗಳಲ್ಲಿ ಸಂಬಂಧವಾದ ಸಕಲ ಪದಾರ್ಥಂಗಳ ಭಕ್ತಿಯಿಂದರ್ಪಿಸಿಕೊಂಡು ಪ್ರಸಾದವ ಕರುಣಿಸಿ ನಿತ್ಯವಾದ ಮುಕ್ತಿಯ ಕೊಡುತ್ತಿಹುದು ಶರಣಂಗೆಂಬುದೀಗ, ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು, ಎನ್ನ ಗಂಡ ತಾರದೆ ಇಕ್ಕಿಸಿಕೊಂಬನೆಂಬ ಶಬ್ದಕ್ಕರ್ಥ. ಮಾಯಾಶಕ್ತಿಯ ವಲ್ಲಭರಾದ ಭಿನ್ನ ಜ್ಞಾನಿಗಳು ತ್ರಿಪುಟಿಜ್ಞಾನಸಂಬಂಧಿಗಳಾಗಿಹರು ಚಿತ್ಪ್ರಭಾಂಗಸ್ವರೂಪನಾದ ಶರಣಸತಿಗೆ ಪ್ರಾಣದೊಲ್ಲಭನಾದ ಪರಬ್ರಹ್ಮಲಿಂಗಕ್ಕೆ ಅಖಂಡಜ್ಞಾನಪ್ರಕಾಶ ಒಂದೇ ಶರಣನ ಸರ್ವಾಂಗವ ನವಗ್ರಹಿಸಿ ನಿಷ್ಪತ್ತಿಯಾಯಿತ್ತೆಂಬುದೀಗ, ಎಲ್ಲರ ಗಂಡಂದಿರಗೆ ಮೂರು ಎನ್ನ ಗಂಡಂಗದೊಂದೇ ಅದೊಂದು ಸಂದೇಹ ಕದಿರರೆಮ್ಮಿಯೊಡೆಯಗುಮ್ಮೇಶ್ವರಾ ಎಂಬ ಶಬ್ದಕ್ಕರ್ಥ.

(೧೧). ಎಲ್ಲರ ಹೆಂಡತಿಯರು ತೊಳಸಿಕ್ಕುವರು. ಎನ್ನ ಗಂಡಂಗೆ ತೊಳಸಿಕ್ಕುವರಿಲ್ಲ. ಎಲ್ಲರ ಗಂಡಂದಿರು ಬಸಿವರು. ಎನ್ನ ಗಂಡಂಗೆ ಬಸಿವುದಿಲ್ಲ.

ಎಲ್ಲರ ಗಂಡಂದಿರಗೆ ಅಂಡದ ಬೀಜ ಉಂಟು. ಎನ್ನ ಗಂಡಂಗೆ ಅಂಡದ ಬೀಜ ವಿಲ್ಲ. ಎಲ್ಲರ ಗಂಡಂದಿರು ಮೇಲೆ, ಎನ್ನ ಗಂಡ ಕೆಳಗೆ, ನಾ ಮೇಲೆ ಕದಿರ ರೆಮ್ಮಿಯೊಡೆಯುಗುಮ್ಮೇಶ್ವರಾ.

**ಟೀಕು:**—ಸಾಕಾರವಾದ ಲಿಂಗಕ್ಕೆ ಸತಿಯರೆನಿಸಿಕೊಂಬ ದ್ವೈತಿಗಳು ಭಿನ್ನ ಕ್ರಿಗಳ ಮಾಡಿ, ಫಲಪದಂಗಳ ಪಡೆದು ಭೋಗಿಸಿ ಭವ ಹೇತುವಾಗಿ ಜನನಕ್ಕೆ ಬಂದು ಭಿನ್ನವಿಟ್ಟು ಪದಾರ್ಥಂಗಳ ಲಿಂಗಕ್ಕರ್ಪಿಸಿ ಭೋಗಿಸುತ್ತಿಹರು. ಮಹಾಘನಲಿಂಗವ ಸರ್ವಾಂಗದಲ್ಲಿ ಸಂಬಂಧವ ಮಾಡಿಕೊಂಡಿರ್ಪ ಶರಣ ಸತಿಯು ಸಕಲ ಪದಾರ್ಥಂಗಳ ಅಭಿನ್ನ ಭಾವದಿಂ ಲಿಂಗಕ್ಕರ್ಪಿಸಿ ಲಿಂಗ ಭೋಗೋಪಭೋಗಿಯಾಗಿಹಳಲ್ಲದೆ ಜೀವಭಾವದಿಂ ಜನನಕ್ಕೆ ಬರಲಿಲ್ಲವೆಂಬು ದೀಗ, ಎಲ್ಲರ ಹೆಂಡತಿಯರು ತೊಳಸಿಕ್ಕುವರು, ಎನ್ನ ಗಂಡಂಗೆ ತೊಳಸುವದಿಲ್ಲ ಎಂಬ ಶಬ್ದಕ್ಕರ್ಥ. ಮಾಯಾಶಕ್ತಿಯು ವಲ್ಲಭರಾದ ಭಿನ್ನ ಜ್ಞಾನಿಗಳೆಲ್ಲರು ದೇಹೇಂದ್ರಿಯ ವಿಷಯ ರಸಂಗಳ ನಿವೃತ್ತಿಯ ಮಾಡಬೇಕೆನ್ನುತ್ತಿಹರು. ಸರ್ವಾಂಗಲಿಂಗ ಸಂಬಂಧಿಯಾಗಿರ್ಪ ಶರಣ ಸತಿಯು ದೇಹೇಂದ್ರಿಯ ವಿಷಯ ರಸಂಗಳ ನಿವೃತ್ತಿಯ ಮಾಡಿ ಕಳೆಯಲಿಲ್ಲವೆಂಬುದೀಗ, ಎಲ್ಲರ ಗಂಡಂದಿರು ಬಸಿ ವರು, ಎನ್ನ ಗಂಡಂಗೆ ಬಸಿವುದಿಲ್ಲವೆಂಬ ಶಬ್ದಕ್ಕರ್ಥ. ಮಾಯಾಶಕ್ತಿಯು ವಲ್ಲಭ ರಾದ ದ್ವೈತಿಗಳೆಲ್ಲಕ್ಕು ತಾನೆಂಬ ಹಂಕಾರ ಉಂಟಾಗಿರುತ್ತಿಹುದು. ಶರಣ ಸತಿಗೆ ಚೈತನ್ಯಸ್ವರೂಪವಾದ ಮಹಾಘನಲಿಂಗವೆಂಬ ಪತಿಗೆ ಜನನಕ್ಕೆ ಕಾರಣವಾದ ಅಹಂಕಾರ ನಾಸ್ತಿ ಎಂಬುದೀಗ ಎಲ್ಲರ ಗಂಡಂದಿರಿಗೆ ಬೀಜ ಉಂಟು ಎನ್ನ ಗಂಡಂಗೆ ಅಂಡಜವಿಲ್ಲವೆಂಬ ಶಬ್ದಕ್ಕರ್ಥ. ಮಾಯಾಶಕ್ತಿಯ ವಲ್ಲಭರಾದ ಖಂಡಿ ತ ಜ್ಞಾನಿಗಳೆಲ್ಲರು ಲಿಂಗಕ್ಕೆ ಸರ್ವ ಕ್ರಿಯೋಪಚಾರಂಗಳ ಮಾಡಿ ಫಲಭೋಗ ಪ್ರಾಪ್ತಿಯನೆಯ್ದಿ ಸ್ವರ್ಗದಲ್ಲಿ ತೇಜಿಷ್ಠರಾಗಿಹರು. ಶರಣಸತಿಗೆ ವಲ್ಲಭನಾಗಿರ್ಪ ಮಹಾಘನಲಿಂಗವು ಚತುರ್ವಿಧ ಫಲಪದಂಗಳ ಮುಟ್ಟದೆ ಶರಣನ ಸರ್ವಾಂಗದಲ್ಲಿ ಸಂಬಂಧವಾಗಿರುತ್ತಿರಲು, ಆ ಲಿಂಗಕ್ಕೆ ಶರಣನೇ ಅಧಿಷ್ಠಾಯಿಕನಾಗಿ ಸಮರಸ ಭಾವದಿಂದಿರುತ್ತಿಹನೆಂಬುದೀಗ, ಎಲ್ಲರ ಗಂಡಂದಿರು ಮೇಲೆ ಎನ್ನ ಗಂಡ ಕೆಳಗೆ ನಾಮೇಲೆ ಕದಿರರೆಮ್ಮಿಯೊಡೆಯುಗುಮೇಶ್ವರಾ.

(೧೨). ಮನಕ್ಕೆ ಮನೋಹರವಲ್ಲದ ಗಂಡರು ಮನಕ್ಕೆ ಬಾರರು, ಕೇಳವ್ವ ಕಳದಿ, ಪನ್ನಗ ಭೂಷಣರಲ್ಲದ ಗಂಡರು. ಇನ್ನೆನಗಾದ ಮೊರೆಯ

ನೋಡವ್ವ! ಕನ್ನೆಯಂದಿನ ಕೂಟ ಚಿಕ್ಕಂದಿನ ಬಾಳುವೆ, ನಿಮ್ಮಾಣೆಯಯ್ಯ ಕೂಡಲ ಸಂಗಮ ದೇವಾ.

(೧೩). ಸಂಸಾರವೆಂಬ ಶ್ವಾನನಟ್ಟಿ ಮೀಸಲ ಬೀಸರವ ಮಾಡಿದರಯ್ಯ! ಎನ್ನ ಚಿತ್ತವು ನಿಮ್ಮ ಧ್ಯಾನವಯ್ಯ! ನೀನಲ್ಲದೆ ಮತ್ತೇನು ನಾನರಿಯೆ. ಕನ್ನೆಯಲ್ಲಿ ಕೈವಿಡಿದೆನು. ನಿಮ್ಮಲ್ಲಿ ನೆರೆದೆನು. ಮನ್ನಿಸು ಕಂಡಯ್ಯ. ಮಹಾಲಿಂಗವೇ ಸತಿ ಯಾನು, ಪತಿನೀನು. ಮನೆಯೊಡೆಯ ಮನೆಯನೆ ಕಾಯ್ದಿರ್ಪಂತೆ, ನೀ ಎನ್ನ ಮನವ ಕಾದಿರ್ಪ ಗಂಡನೈ. ನಿಮಗೋತ ಮನವ ಅನ್ಯಕ್ಕೆ ಹರಿಸಿದರೆ, ನಿಮ್ಮ ಭಿಮಾನಕ್ಕೆ ಹಾನಿ, ಕೂಡಲಸಂಗಮ ದೇವಾ.

---

## ಲಿಂಗಾಂಗ ಸಾಮರಸ್ಯಭಾವದಿಂದ ಆಚರಿಸುವದು.

(೧). ಅಂಗವು ಲಿಂಗದಲ್ಲಿ ಸಂಬಂಧವಾದವರ, ಲಿಂಗವೆಂದೇ ಕಾಂಬು ದು: 'ಕೀಟೋಪಿ ಭ್ರಮರಾಯತೆ' ಎಂಬ ನ್ಯಾಯದಂತೆ ಅಂಗ ಲಿಂಗ ಸೋಂಕಿ ಲಿಂಗವಾಯಿತ್ತಾಗಿ, ನೀವೆಂದೇ ಕಾಂಬುದು. ಲಿಂಗಮುಂತಾಗಿಯೇ ನಡೆ, ಲಿಂಗಮುಂತಾಗಿಯೇ ನುಡಿ, ಲಿಂಗಮುಂತಾಗಿಯೇ ನೋಡುವವರಾಗಿ, ಅಂಗೇಂದ್ರಿಯಂಗಳೆಂಬುದಿಲ್ಲ. ಅವೆಲ್ಲವೂ ಲಿಂಗೇಂದ್ರಿಯಂಗಳಾದವಾಗಿ. ಕಾರಣ ಲಿಂಗವೆಂದೇ ಕಾಂಬುದು. ಗ್ರಂಥ ॥ ಸರ್ಪದಷ್ಟಸ್ಯಯದ್ದೇಹಂ ತದ್ದೇಹಂ ವಿಷ ದೇಹವತ್ ॥ ಎಂದುದಾಗಿ, ಸರ್ವಾಂಗ ಲಿಂಗ ಕೂಡಲಚನ್ನಸಂಗಾ ನಿಮ್ಮ ಶರಣ.

(೨). ಜ್ಯೋತಿ ಮುಟ್ಟಿದ ಬತ್ತಿ ಎಲ್ಲಾ ಜ್ಯೋತಿಯಪ್ಪವಯ್ಯ. ಸಾಗ ರವ ಮುಟ್ಟಿದ ನದಿಗಳೆಲ್ಲ ಸಾಗರವಪ್ಪವಯ್ಯ. ಪ್ರಸಾದ ಮುಟ್ಟಿದ ಪದಾರ್ಥ ವೆಲ್ಲ ಪ್ರಸಾದವಪ್ಪವಯ್ಯ. ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗವಪ್ಪವಯ್ಯ. ಸಕ ಳೇಶ್ವರ ದೇವ, ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತಪ್ಪರಯ್ಯ.

(೩). ಘಟವನೊಡೆದು ಬಯಲನೋಡಲದೇಕೆ? ಘಟದೊಳಗಿಪ್ಪದೇ ಬಯಲೆಂದರಿದಡೆ ಸಾಲದೇ? ಪಟವ ಹರಿದು ತಂತುವ ನೋಡಲದೇಕೆ? ಆ ಪಟವ ತಂತುವೆಂದರಿದಡೆ ಸಾಲದೇ? ಕಟಕವ ಮುರಿದು ಕಾಂಚನವ ನೋಡಲ

ದೇಕೆ? ಆ ಕಟಕವೇ ಕಾಂಚನವೆಂದರಿದಡೆ ಸಾಲದೇ? ತನ್ನನಳಿದು ಘನವ ನೋಡಲದೇಕೆ? ತಾನೇ ಘನವೆಂದರಿದಡೆ, ಸಾಲದೇ? ಹೇಳಾ ರಾಮನಾಥಾ.

(೪). ತಾ ಮಿಥ್ಯನಾದ ಮತ್ತೆ ಜಗವೆಲ್ಲವೂ ತನಗೆ ಮಿಥ್ಯೆ. ತಾ ತಥ್ಯನಾದ ಮತ್ತೆ, ಜಗವೆಲ್ಲವೂ ತನಗೆ ತಥ್ಯೆ. ಅಂಗಯ್ಯಲ್ಲಿ ಹಿಡಿದು, ಕೊಯ್ಯು ವದ ನೋಡದೆ ಅಲಗು ಕೆಟ್ಟಿತ್ತೆಂದು ಹಲುಬುವನಂತಾಗದೆ, ತನ್ನ ತಾಮರೆದು ಅನ್ಯರ ದೆಸೆಯಿಂದ ತನ್ನ ಕೇಳುವನಂತಾಗದೆ, ತನ್ನ ನಿಜದ ಅರಿವ ಮರೆಯದೆ, ಇದು ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗದೊಳಗಾದವನ ಇರವು.

(೫). ಕೈ ಕೈದುವ ಹಿಡಿದು ಹೊರುವಾಗ, ಕೈದೋ, ಕೈಯ್ಯೋ, ಮನವೋ? ಅಂಗಲಿಂಗ ಸಂಬಂಧವಾದಲ್ಲಿ, ಸಂಬಂಧಿಸುವಾಗ ಅಂಗವೋ, ಲಿಂಗವೋ, ಆತ್ಮನೋ? ಈ ಮೂರಂಗವನರಿದಲ್ಲಿ ಕಾಲಾಂತಕ ಭೀಮೇಶ್ವರ ಲಿಂಗವನರಿದುದು.

(೬). ಮಣ್ಣೂ ನೀರೂ ಸ್ವಸ್ಥವಾಗಿ, ಮೃತ್ತಿಕೆ ಕುಲಾಲನ ಚಿತ್ತಕ್ಕೆ ಒಪ್ಪಿದಲ್ಲಿ, ಏನ ಹಿಡಿದಡೂ ಲಕ್ಷಿಸುವ ತೆರನಂತೆ, ಚಿತ್ರಜ್ಞ ಜಾತಿವರ್ಗವನರಿದು, ಪೃಥ್ವೀಪಟಂಗಳಲ್ಲಿ ದೃಷ್ಟವ ತೋರಿ ಬರುವಂತೆ, ಇಂತೀ ತನ್ನ ಲಕ್ಷದ ದೃಷ್ಟ ದಲ್ಲಿ ಉಭಯ ತನ್ನಷ್ಟವಾಗಿಪ್ಪ ಭೇದವೆಂಬುದಕ್ಕೆ ಸೂಚನೆ ನಿಷ್ಕಳಂಕ ಮಲ್ಲಿ ಕಾರ್ಜುನಲಿಂಗವನರಿದವನ ಸಂಗಾ.

**ಅರ್ಥ**:—ಮೃತ್ತಿಕೆಯೂ ಜಲವೂ ಕೂಡಿ ಹದವಾಗಿ, ಆ ಹದವಾದ ಮಣ್ಣು ಕುಂಬಾರನ ಮನಕ್ಕೆ ಒಪ್ಪಗೆಯಿಂದ ಆವ ರೂಪ ಮಾಡಬೇಕೆಂದು ನೆನೆದು ಹಿಡಿದಡೂ, ಆ ರೂಪುಗಳೇ ಕುರುಹಾಗುವ ನಿಲುಕಡೆಯ ಹಾಗೆ, ಭಾವ ಚಿತ್ರಿಕನು ಸ್ತ್ರೀವರ್ಗ, ಪುರುಷವರ್ಗ, ಮೃಗವರ್ಗ, ವನವರ್ಗ, ಗಿರಿವರ್ಗ, ದೇವತಾವರ್ಗ, ರಾಕ್ಷಸವರ್ಗ ಮೊದಲಾದವ ಬರೆಯಬೇಕೆಂದು ಮನದಲ್ಲಿ ತಿಳಿದು ಮಣ್ಣುಗೋಡೆಗಳಲ್ಲಿ ಪಾವುಡಂಗಳಲ್ಲಿ ಇಂಥ ರೂಪು ಬರೆವುತ್ತಿದ್ದೇನೆ, ಎಂದು ಹೇಳಿ ಲೇಖನವ ಮಾಡಿದಲ್ಲಿ, ಆ ರೂಪುಗಳೇ ಒಪ್ಪವಾಗುವ ಹಾಗೆ, ಈ ಪ್ರಕಾರದಿಂದ ತನ್ನ ಕುರುಹಾದಂಗದಲ್ಲಿ ಸಾಕಾರವಾದ ಇಷ್ಟಲಿಂಗ ಸಂಬಂಧವ ಮಾಡಿಕೊಂಡು ಆಚರಿಸುವಲ್ಲಿ, ಅಂಗಲಿಂಗವೆಂಬ ಭಾವ ನಷ್ಟವಾಗಿ ಭಿನ್ನಭಾವ ನಷ್ಟವಾಗಿ, ಸಮರಸಭಾವದಿಂದ ಆಚರಿಸಿದಲ್ಲಿ, ಸರ್ವಾಚಾರಸಂಪ

ತ್ರಿನಾಚರಣೆ ಉಂಟಾಗುವದೆಂಬುದಕ್ಕೆ ಸಂಜ್ಞೆ. ಇಷ್ಟಲಿಂಗ ಸಂಬಂಧವ ತಿಳಿದ ಶರಣನಾಚರಣೆ ಎಂಬುದರ್ಥ.

(೭). ಸತ್ತ ಬಳಿಕ ಮುಕ್ತಿಯ ಹಡದಿಹೆನೆಂದು ಪೂಜಿಸಹೋದರೆ, ಆ ದೇವರೇನ ಕೊಡುವರೋ? ಸಾಯದೆ ನೋಯದೆ ಸ್ವತಂತ್ರವಾಗಿ ಸಂದು ಭೇದವಿಲ್ಲದಿರ್ಪ ಗುಹೇಶ್ವರಾ ನಿಮ್ಮ ಶರಣ.

**ಅರ್ಥ**—ಇಹದಲ್ಲಿ ಭಕ್ತಿಯ ಮಾಡಿ, ಸತ್ತಬಳಿಕ ಪರದಲ್ಲಿ ಮುಕ್ತಿಯ ಹಡಿದೆಹೆನೆಂದರೆ ಮುಕ್ತಿ ಘಟಿಸದು. ಅದೇನು ಕಾರಣವೆಂದಡೆ, ಸಾವಿನ ಬೀಜ ಮುಂದೆ ಜನನಕ್ಕೆ ಕಾರಣವಾಗಿ. ಇಂತಲ್ಲದೆ ತನುವಿಡಿದಲ್ಲಿಯೇ ನಿತ್ಯ ನಿರಂಜನ ಪರಶಿವನು ತಾನೆಂದರಿದಾಚರಿಸಿದಡೆ, ಅತ ಸ್ವತಂತ್ರ ಶಿವೈಕ್ಯನೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ ನಿರ್ವಚನ.

(೮). ಇಲ್ಲದ ಶಂಕೆಯನುಂಟೆಂದು ಭಾವಿಸಿ, ಅದು ಕಣ್ಣುಮುಂದೆ ರೂಪಾಗಿ ಕಾಡುತ್ತಿಪ್ಪದು. ಇಲ್ಲದ ತನುವನು ಉಂಟೆಂಬನ್ನಕ್ಕರ, ಅದೇ ಮಾಯೆಯಾಗಿ ಕಾಡುತ್ತಿರ್ಪುದು. ನಿಃಕ್ರಿಯಾ ಲಿಂಗಕ್ಕೆ ಕ್ರಿಯಾಂತಲ್ಲದೆ ಆಗದು ಎಂಬದರ ಸಂದು ಸಂಶಯ ಮುಂದುಗೆಡಿಸುತ್ತಿಪ್ಪದು ಕೇಳಾ. ಮನವ ಮನೆಯ ಮಾಡಿಕೊಂಡಿಪ್ಪ ಲಿಂಗದ ಅನುವನರಿಯಬಲ್ಲಡೆ, ಗುಹೇಶ್ವರನೆಂಬ ಲಿಂಗ ದೂರ ವಿಲ್ಲ ಕೇಳಾ ಮರುಳೇ.

(೯). ಎನಕ್ಕೆಯಾಯಿತ್ತು. ಎನಕ್ಕೆ ಹೋಯಿತ್ತು. ಮತ್ತೆನಕ್ಕೆ ಉಂಟೇ? ನೇಮಕ್ಕೆ ನಿಜಗೊಳ್ಳದು, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ.

**ಅರ್ಥ**:—ಜಗದಲ್ಲಿ ಎಷ್ಟೋ ಆತ್ಮರು ಹುಟ್ಟುತ್ತಿಪ್ಪರು, ಎಷ್ಟೋ ಆತ್ಮರು ಅಳಿವುತ್ತಿಪ್ಪರು, ಮರಳಿ ಜನನ ಮರಣಂಗಳುಳ್ಳವರಿಗೆ ಲಿಂಗದ ಕರುಣ ಸಾಧ್ಯ ವುಂಟೇ? ಭಿನ್ನಕ್ರಿಯಾಚಾರವುಳ್ಳವರಿಗೆ, ಅಭಿನ್ನ ಕ್ರಿಯಾಚಾರ ಇಂಬುಗೊಳ್ಳದು. ಅವರಿಗೆ ಲಿಂಗದ ಕರುಣವಿಲ್ಲವೆಂಬುದರ್ಥ.

(೧೦). ಕರ್ಪುರದ ಪ್ರಣುತೆಯಲ್ಲಿ ಬತ್ತಿಯ ಹಾಕಿ, ಉರುಹಬಹುದೇ? ಕಿಚ್ಚಿನ ಮಧ್ಯದಲ್ಲಿ ನಿಂದು ಕೆಟ್ಟೆತ್ತೆಂದು ಹುಲ್ಲು ಸೊಪ್ಪು ಹಾಕಿ, ಹೊತ್ತಿಸಬ ಹುದೇ? ಅಲಗು ಕೂರವಾಯಿತ್ತೆಂದು, ತನ್ನೊಡಲನಿರಿದು ಅಲಗಿನ ಕೂರ್ಪ

ಸುಲಲಿತವೆನಬಹುದೇ? ಆ ಗುಣ ಅಲ್ಲಲ್ಲಿಗೆ ದೃಷ್ಟ. ಇದು ನಿಶ್ಚಯಃ ನಿಜ ಲಿಂಗಾಂಗಿಯ ಅರಿವಿನ ಭೇದ, ಕಾಲ ಕರ್ಮ ವಿರಹಿತ ತ್ರಿಪುರಾಂತಕ ಲಿಂಗ ದೇವನ ತೆರ.

**ಅರ್ಥ:**—ಮೃತ್ತಿಕೆಯ ಹಣತೆಯಲ್ಲಿ ಎಣ್ಣೆಯ ನೀಡಿ, ಬತ್ತಿಯ ಹಾಕಿ, ಅಗ್ನಿಯ ಮುಟ್ಟಿಸಿದರೆ ಬೇರೆ ಬೇರೆ ಉರಿವುದಲ್ಲದೆ, ಘನಸಾರದ ಹಣತೆಯಲ್ಲಿ ಬತ್ತಿಯ ಹಾಕಿ ಉರಿವುದಕ್ಕಾದೀತೆ? ಆಗದು. ಅದು ಹೇಗೆಂದಡೆ, ಅಗ್ನಿ ಸೋಂಕಿ ದಾಕ್ಷಣವೇ ಉಭಯವೂ ಅವಗವಿಸಿ ಉರಿವುದೆಂಬ ಹಾಗೆ, ಭಿನ್ನಭಾವವುಳ್ಳ ಸಿದ್ಧಾಂತಿಗಳು ಅಂಗವೆಂದು ಲಿಂಗವೆಂದು ಎರಡು ಮಾಡಿಕೊಂಡು ಆಚರಿಸಬಹು ದಲ್ಲದೆ ಸಮರಸಭಾವವುಳ್ಳ ಶರಣನು ಎರಡು ಮಾಡಿಕೊಂಡು ಚರಿಸಬಹುದೇ? ಬಾರದು. ಅದು ಹೇಗೆಂದಡೆ, ಸದ್ವಾಸನಾಸ್ವರೂಪವಾದಂಗದಲ್ಲಿ ಚಿದಗ್ನಿಮಯ ವಾದ ಲಿಂಗಸಂಬಂಧವ ಮಾಡಿಕೊಂಡಾಚರಿಸುವಲ್ಲಿ ಲಿಂಗವು ಅಂಗವನವಗ್ರ ಹಿಸಿ, ಆ ಅಂಗವು ಲಿಂಗದಲ್ಲಿ ಅಡಗಿ, ಅಂಗವು ಲಿಂಗವು ಒಂದೇಯಾಗಿಪ್ಪವು. ಅಗ್ನಿಯ ಮಧ್ಯದಲ್ಲಿ ನಿಂದು ನಂದಿತೆಂದು ತೃಣ ತರಗೆಲೆಗಳ ಹಾಕಿ, ಘಟವ ಮಾಡಬಹುದೇ? ಬಾರದು. ಎಂಬ ಹಾಗೆ ಚಿದಗ್ನಿಮಯವಾದ ಪ್ರಾಣಲಿಂಗ ದಲ್ಲಿ ಪ್ರಾಣವು ಕೂಡಿದ ಶರಣನು ಭಿನ್ನಭಾವವುಳ್ಳ ವೇದಾಂತಿಗಳ ಹಾಗೆ ಪ್ರಾಣ ಪ್ರಾಣಲಿಂಗವೆಂದು ಎರಡು ಮಾಡಿಕೊಂಡು ಆಚರಿಸಬಹುದೇ? ಬಾರದು. ಆಯುಧವು ಮೊನೆಯೋ, ಮೋಟೋ ಎಂದು ತನ್ನಂಗವ ತಿವಿದುಕೊಂಡು ಆಯುಧದ ಮೊನೆಯು ಲೇಸಾಗಿ ಒಪ್ಪಿಗೆಯನುಳ್ಳದೆನಬಹುದೇ? ಬಾರದು ಎಂಬ ಹಾಗೆ ಮಹಾಜ್ಞಾನ ಸ್ವರೂಪವಾದ ಭಾವಲಿಂಗದಲ್ಲಿ ಆತ್ಮನು ಕೂಡಿದ ಶರಣನು ಭಿನ್ನಯೋಗಿಗಳ ಹಾಗೆ ಅಷ್ಟಾಂಗಯೋಗಾಭ್ಯಾಸದಿಂದ ಭಾವಲಿಂಗ ವನು ಕುರುಹಿಡಬಹುದೇ? ಬಾರದು. ಆ ಉಪಮಾನವು ಅಲ್ಲಿಗಲ್ಲಿಗೇ ತಾರ್ಕ ಣೆಯು. ಈ ಸಮರಸಭಾವವು ಯಥಾರ್ಥವಾಗಿಪ್ಪುದು. ಶರಣನಲ್ಲಿ ಮಹಾಲಿಂಗ ಕ್ಯಂಗವಾದ ಶರಣನ ಜ್ಞಾನದ ಸಮರಸವು ಲಿಂಗದಲ್ಲಿ ಕೂಡಲ್ಪಟ್ಟ ಶರಣನ ನಿಲುಕಡೆ ಇದು ಎಂಬುದರ್ಥ.

(೧೧). **ಕೂರ್ಮನಗತಿಯ ಕುಪ್ಪಾಡಯೋಗವು ಕುಹಕ ವಾದಿಗ ಳಿಗೆ ಅಳವಡದು. ಉತ್ತಮಾಂಗವನು ಉರಸ್ಥಲದಲ್ಲಿ ಬಯಚಿಡುವ ಬಯಕೆ**

ಯನು ಅರ್ಥೈದು ನೋಡಾ. ಅರ್ಥೈಸ್ಯಲು ಅಚಲ ನೀನೇ. ಸಿಮುಲಿಗೆಯ ಚನ್ನ ರಾಮನೆಂಬ ಲಿಂಗವು ಎಂದು ಎನಲಿಲ್ಲ.

**ಅರ್ಥ**—ಕೂರ್ಮನು ತನ್ನ ಜ್ಞಾನೇಂದ್ರಿಯಮಪ್ಪ ಶಿರಸ್ಸನ್ನು ತನ್ನ ಹೃದಯಸ್ಥಾನದಲ್ಲಿ ಅಡಗಿಸಿ, ತನ್ನ ಭಿನ್ನವಿಟ್ಟುಕೊಂಬ ಭಾವವನು ಅಳಿದಿಪ್ಪ ಕೂರ್ಮನ ಯೋಗದ ಅನುವಿನಂತೆ ಶಿವನು ತಾನೆಂದರಿದು ಶಿವೋಹಂ ಮೆನುತಿಪ್ಪ ಜ್ಞಾನದ ತೋರಿಕೆಯ ತನ್ನ ನಿಜಾಂತರಂಗದಲ್ಲಿ ಅಡಗಿಸಿದ ಶರಣನೇ ಅಚಲಾನಂದಮಪ್ಪ ಮಹಾ ಘನಲಿಂಗವೆಯಾಗಿಪ್ಪನು. ಅಂತಪ್ಪ ಲಿಂಗೈಕ್ಯದ ಮರ್ಮವು ವಾಗದ್ವೈತಿಗಳಿಗೆ ಅಸಾಧ್ಯವೆಂಬುದೀ ವಚನದ ತಾತ್ಪರ್ಯಾರ್ಥ.

(೧೨). ಕೂಟದ ತುರೀಯದಲ್ಲಿ ಬೇಟ ಮತ್ತೆರಡಾಗಿ ಆಟವನು ಆಡಿದೆನು ಚಿತ್ರತರದಾ. ಕೂಟವು ಬೇಟವು, ಆಟ ಮತ್ತೊಂದಾಗಿ ನೋಟಂಗಳನಃಮಿಷ ದೃಷ್ಟಿನಟ್ಟು, ತಾನು ತಾನಾಗೀಗ ಸಾನಂದ ಸಂಬಂಧ ಆನಂದ ಮುಕ್ತ್ಯಂಗನೈಕ್ಯವಾಗಿ, ಲೋಕದೊಳಗಿರ್ದು ಲೋಕಿ ತಾನಲ್ಲದೆ ಏಕೈಕನಾದೆ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ.

**ಅರ್ಥ**— ತನಗೆ ಅನನ್ಯನಃ ಶಿವನೆಂಬುದನರಿಯದೆ ಶಿವನ ಭಿನ್ನವಿಟ್ಟು ಕೂಡಿ ಮುಕ್ತರಾದೆವೆಂಬ ಭಿನ್ನಜ್ಞಾನಿಗಳಿಗೆ ಶಿವನು ಭಿನ್ನವಾಗಿಪ್ಪನೆಂಬುದೀಗ ಕೂಟದ ತುರೀಯದಲ್ಲಿ ಬೇಟ ಮತ್ತೆರಡಾಗಿ ಎಂಬ ಶಬ್ದಕ್ಕರ್ಥ. ಅಂತಪ್ಪ ಭಿನ್ನ ಜ್ಞಾನದಿಂದ ಶಿವನಲ್ಲಿ ಸಮರಸೈಕ್ಯವಿಲ್ಲದೆ ಫಲಪದಂಗಳ ಪಡೆದು ಮರಳಿ ಭವಕ್ಕೆ ಬಂದು ಹಲವು ದೇಹಂಗಳ ತೊಟ್ಟು ಬಹುರೂಪವ ನಟಿಸಿ ಚರಿಸಾಡುತ್ತಿರ್ದನೆಂಬುದೀಗ ಆಟವನು ಆಡಿದನು ಚಿತ್ರತರದಾ ಎಂಬ ಶಬ್ದಕ್ಕರ್ಥ. ಅಂತಪ್ಪ ಭಿನ್ನಜ್ಞಾನ ಕ್ರಿಗಳೆಲ್ಲ ಭವಕ್ಕೆ ಕಾರಣವೆಂದರಿದು ಅವ ಬಿಟ್ಟು ಅಭಿನ್ನಜ್ಞಾನದಿಂದ ತನ್ನ ನಿಜವೆಲ್ಲ ಪರಶಿವಲಿಂಗವೆಂದರಿದು ಲಿಂಗದಲ್ಲಿ ಅತಿರತಿಯಿಂದ ಮಾಡುವ ಮಾಡಿಸಿಕೊಂಬುವ ಎರಡಾದುದು ಒಂದೇ ವಸ್ತುವೆಂಬ ನೈಷ್ಠಿಕಾಭಕ್ತಿ ಘಟಿಸಿತ್ತು ಶರಣಂಗೆಂಬುದೀಗ ಕೂಟವು ಬೇಟವು ಆಟ ಮತ್ತೊಂದಾಗಿ ನೋಟಂಗಳ ಅನುಮಿಷ ದೃಷ್ಟಿ ನಟ್ಟು ಎಂಬ ಶಬ್ದಕ್ಕರ್ಥ. ಅಂತು ಮಾಡುವ ಮಾಡಿಸಿಕೊಂಬ ಎರಡಾದುದು ಒಂದೇ ವಸ್ತುವೆಂದು ಅಭಿನ್ನಜ್ಞಾನದೃಷ್ಟಿಯಿಂದ ಕಂಡು ದೃಢಭಕ್ತಿ ಘಟಿಸಿತ್ತಾಗಿ ತಾನೆಲ್ಲ ಲಿಂಗಸ್ವರೂಪವೆಯಾಗಿ ಲಿಂಗಾನಂದ

ಸುಖ ದೊರಕಿ ಲಿಂಗದ ಚಿದಾನಂದ ಸಾಮರ್ಥ್ಯ ಶಕ್ತಿಯು ತಾನೆಯಾಗಿರ್ದ ಶರಣನೆಂಬುದೀಗ ತಾನು ತಾನಾಗೀಗ ಸಾನಂದ ಸಂಬಂಧ ಅನಂದ ಮುಕ್ತ್ಯಾಂಗನ್ನೈಕ್ಯವಾಗಿ ಎಂಬ ಶಬ್ದ ಕ್ಕರ್ಥ. ಅಂತು ಮರ್ತ್ಯಲೋಕದ ದೇಹಿಗಳೊಳಗೆ ದೇಹಿಯಾಗಿರ್ದು ದೇಹಿಯಲ್ಲದೆ ದೇಹವಿಡಿದಿರ್ದಂತೆ ಲಿಂಗವಾಗಿರ್ದ ಶರಣನೆಂಬುದೀಗ ಲೋಕದೊಳಗಿರ್ದು ಲೋಕಿ ತಾನಲ್ಲದೆ ಏಕೈಕನಾದೆ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಎಂಬ ಶಬ್ದ ಕ್ಕರ್ಥ.

(೧೩). ಮುತ್ತು ನೀರಲ್ಲಾಯಿತ್ತು, ವಾರಿಕಲ್ಲು ನೀರಲ್ಲಾಯಿತ್ತು, ಉಪ್ಪು ನೀರಲ್ಲಾಯಿತ್ತು. ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು, ಮುತ್ತು ಕರಗಿದುದನಾರೂ ಕಂಡವರಿಲ್ಲ. ಈ ಸಂಸಾರಿ ಮಾನವರು ಲಿಂಗವ ಮುಟ್ಟಿ ಭವಭಾರಿಗಳಾದರು. ನಾನಿಮ್ಮ ಮುಟ್ಟಿ ಕರಿಗೊಂಡೆನಯ್ಯ ಚನ್ನಮಲ್ಲಿಕಾರ್ಜುನಯ್ಯ.

**ಅರ್ಥ**:—ತನ್ನ ನಿಜವ ಮರೆದು ದೇಹಿಗಳಾಗಿರ್ಪ ಆತ್ಮರೊಳಗೆ ದೇಹ ಸಂಸಾರಸುಖಕ್ಕೆ ಮಚ್ಚಿ ದೇಹ ಭೋಗವನೇ ಬಯಸಿ ಭಾವಿಸಿ ಲಿಂಗವ ಪೂಜಿಸಿದವರೆಲ್ಲ ಮರಳಿ ಭವಕ್ಕೆ ಬರುತ್ತಿಹರು. ಅಂತಪ್ಪ ದೇಹಸುಖಕ್ಕೆ ಮೆಚ್ಚದೆ ಲಿಂಗದೇಹಿಯಾಗಿ ಲಿಂಗವನೆ ಬಯಸಿ ಭಾವಿಸಿ ಲಿಂಗವನೆ ಭಜಿಸಿ ಲಿಂಗವಾದರು ಶರಣರೆಂಬುದೀ ವಚನದ ತಾತ್ಪರ್ಯಾರ್ಥ.

(೧೪). ಹದಿನಾಲ್ಕು ಭುವನದಲ್ಲಿ ಮನವೇದ್ಯವನಾರು ಬಲ್ಲರಯ್ಯ? ದೂರದೂರವಾಗಿ ಮನ್ನಿಸುವರು. ದೂರದೂರವಾಗಿ ಸಂಭಾಷಣೆಯ ಮಾಡುವರು. ದೂರದೂರವೆನಲಿಲ್ಲ ಕೂಡಲಚನ್ನಸಂಗಯ್ಯ.

**ಅರ್ಥ**:—ಹದಿನಾಲ್ಕು ಲೋಕಂಗಳೊಳಗಿಪ್ಪ ನರರು ಸುರರು ದೇವತಾದಿಗಳು ಮೊದಲಾದವರೆಲ್ಲರು ಲಿಂಗವ ಭಿನ್ನವಿಟ್ಟರಿದು, ಲಿಂಗವ ಭಿನ್ನವಿಟ್ಟು ಪೂಜಿಸಿ, ಭಿನ್ನಫಲಪದಂಗಳ ಪಡೆದು ಭಿನ್ನರಾಗಿ ಹೋದರು. ಲಿಂಗವು ಮನಕ್ಕೆ ಅನನ್ಯ ಪರಿಪೂರ್ಣವಾಗಿರ್ದುದನರಿದು ಕೂಡಿ ಲಿಂಗವಾಗಿಪ್ಪ ಭಕ್ತಿಮಾರ್ಗವನರಿಯಲರಿಯದೆ ಹೋದರೆಂಬುದೀಗ ಈ ವಚನದ ತಾತ್ಪರ್ಯಾರ್ಥ.

(೧೫). ಲಿಂಗ ಕರದೊಳಗಿರಲು ಅಂಗೈಸಲೇಕಯ್ಯ? ಸಂಗಕ್ಕೆ ಒಳಗಾಗಿ ಲಿಂಗ ಉಂಟೇ? ಸಂಗವೆಲ್ಲವು ಲಿಂಗಸಂಗವಾಗಿಪ್ಪವರ ಲಿಂಗ ನೀನೆಂಬೆನೆ ಯೋಗಿನಾಥಾ.

**ಅರ್ಥ**:—ಅಂತರಂಗದಲ್ಲಿ ಬೆಳಗುತ್ತಿರ್ದ ಚಿದ್ಘನಲಿಂಗವೇ ಬಹಿರಂಗವ ನೊಳಕೊಂಡು ಇಷ್ಟಲಿಂಗವಾಗಿ ಶರಣನ ಕರಸ್ಥಲದಲ್ಲಿ ಭಿನ್ನವಿಲ್ಲದೆ ಬೆಳಗುತ್ತಿಪ್ಪನು. ಅಂತು ಒಳಹೊರಗೆನ್ನದೆ ಪರಿಪೂರ್ಣವಾಗಿ ಲಿಂಗಾಂಗಸಂಯೋಗಿಯಾದ ಶರಣನೆಲ್ಲ ಲಿಂಗವೆಯಾಗಿಪ್ಪನು. ಅಂತಲ್ಲದೆ ಲಿಂಗವ ಅನ್ಯವಿಟ್ಟು ಭಾವಿಸಿ ಕೂಡಿಹೆನೆಂಬ ಭಿನ್ನಭಾವಿಗಳಿಗೆ ಲಿಂಗಸಂಗ ಎಂದೂ ಇಲ್ಲವೆಂದುದೀ ವಚನದ ತಾತ್ಪರ್ಯಾರ್ಥ.

(೧೬). ರೂಪು ಶೂನ್ಯವಾಗಬೇಕು. ಶೂನ್ಯವಂಕುರಿತವಾಗಬೇಕು. ಅಂಕುರಕ್ಕೆ ಸಂದು ತೆರಹಿಲ್ಲದಿರಬೇಕು. ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

**ಅರ್ಥ**:—ರೂಪೆಂದಡೆ ಆತ್ಮಾಂಗವು. ಶೂನ್ಯವೆಂದಡೆ ನಿರಾಕಾರಮಪ್ಪ ಮಹಾಲಿಂಗವು. ಅಂತು ತನ್ನಾತ್ಮಾಂಗವೆಲ್ಲ ಮಹಾಘನಲಿಂಗವೆಂದರಿದು ತನ್ನನೆಲ್ಲ ಲಿಂಗವೆಯಾಗಿ ಕಾಣುತ್ತಿರಬೇಕೆಂಬುದೀಗ ರೂಪು ಶೂನ್ಯವಾಗಬೇಕೆಂಬ ಶಬ್ದಕ್ಕರ್ಥ. ಅಂತು ಅಂತರಂಗದ ಅರಿವಿಂದ ತನ್ನನೆಲ್ಲ ಮಹಾ ಘನಲಿಂಗವೆಯಾಗಿ ಕಂಡು ಭಾವಿಸುತ್ತಿಪ್ಪ ಆ ಸದ್ಭಾವದಿಂದವೇ ಮಹಾಘನಲಿಂಗವೇ ಸಾಕಾರವೇ ಮಾಡಿ ಕರಸ್ಥಲಕ್ಕೆ ತಂದು ಅಂತರಂಗ ಬಹಿರಂಗವೆಲ್ಲ ಲಿಂಗವೆಯಾಗಿ ನೋಡುತ್ತ ಕ್ರಿಯೆಯನು ಆಚರಿಸಬೇಕೆಂಬುದೀಗ ಶೂನ್ಯವಂಕುರಿತವಾಗಬೇಕೆಂಬ ಶಬ್ದಕ್ಕರ್ಥ. ಅಂತು ಸಾಕಾರವಾಗಿ ಬೆಳಗುವ ಇಷ್ಟಲಿಂಗವೇ ತಾನಾಗಿ ಕಂಡು ಭಿನ್ನಭಾವವಿಲ್ಲದೆ ಲಿಂಗವೆಯಾಗಿರ್ದಡೆ ಅದೇ ಲಿಂಗೈಕ್ಯವೆಂಬುದೀಗ ಅಂಕುರಿತಕ್ಕೆ ಸಂದು ತೆರಹಿಲ್ಲದಿರಬೇಕು ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯವು ಎಂಬ ಶಬ್ದಕ್ಕರ್ಥ.

---

## ಲಿಂಗದ ಕ್ರಮಪ್ರಾಪ್ತಿಯು.

(೧). ಭಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲಗೆ. ಯುಕ್ತನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ. ಪಾರಿಶರಣನೆನಿಸುವೆನಯ್ಯಾ ಮೆಲ್ಲ ಮೆಲ್ಲನೆ. ಎಡಹುವ ಗುಳಿಗಳ ಪಾಂಟೆ ಬರಬರ ಲಿಂಗೈಕ್ಯನೆನಿಸುವೆನೆಯ್ಯಾ. ಕೂಡಲಸಂಗಮದೇವಾ ನಿಮ್ಮಿಂದ ಧಿಕನೆನಿಸುವೆನಯ್ಯಾ.

(೨). ಆಚಾರ ಲಿಂಗವಿಡಿದು ಅನುಭಾವಲಿಂಗಸಿದ್ಧಿ. ಅನುಭಾವಲಿಂಗ ವಿಡಿದು ಮಾರ್ಗ ಕ್ರಿಯಾಲಿಂಗಸಿದ್ಧಿ. ಮಾರ್ಗ ಕ್ರಿಯಾಲಿಂಗವಿಡಿದು ಮೀರಿದ ಕ್ರಿಯಾಲಿಂಗಸಿದ್ಧಿ. ಮೀರಿದ ಕ್ರಿಯಾಲಿಂಗವಿಡಿದು ಕ್ರಿಯಾನಿಷ್ಪತ್ತಿಲಿಂಗಸಿದ್ಧಿ. ಲಿಂಗಜಾತಃ ಲಿಂಗಬೀಜಂ ಎಂದುದಾಗಿ, ಇದು ಕಾರಣ ಕೂಡಲಚೆನ್ನಸಂಗಯ್ಯಾ ಲಿಂಗವಿಡಿದು ಲಿಂಗಸಿದ್ಧಿ.

(೩). ಲಿಂಗವಿಡಿದು ಲಿಂಗಮಾಹೇಶ್ವರನೆನಿಸಿಕೊಂಬೆ. ಲಿಂಗವಿಡಿದು ಲಿಂಗಪ್ರಾಣಿ ಎನಿಸಿಕೊಂಬೆ. ಲಿಂಗವಿಡಿದು ಲಿಂಗವೆನಿಸಿಕೊಂಬೆನಯ್ಯಾ. ಅರಿವ ರತ ಕ್ರಿಯಾನುಭಾವವಿಡಿದು ಮೀರಿ ಕೂಡಲಚೆನ್ನಸಂಗ ತಾನಾದಾ.

(೪). ಸಣ್ಣ ನನೆಯೊಳಗಣ ಪರಿಮಳವ ಹೊರಸೂಸಿ ಇದಿರಿಂಗೆ ಅರು ಹಿಸಬಲ್ಲುದೇವಾಯು? ಕೊಡಗೂಸಿನೊಳಗಣ ಮೊಲೆ ಮುಡಿಯು ಹಡೆದ ತಾಯಿತಂದೆಗಳೆಂದಡೆ ಕಾಣಿಸಿ ಕೊಡಬಲ್ಲರೇ ಕಾಂಬುವರ ಕಣ್ಣಿಗೆ? ಪಕ್ವಕ್ಕಲ್ಲದೆ ಪರಿಣಾಮ ಕಾಣಿಸಿದು ಕಾಣಾ ರಾಮನಾಥಾ.

(೫). ಆರಾರನೇ ಮೀರಿ ಮೂರು ಮೂವತ್ತಾರಾಗಿ ಆರನತಿಗಳೆದನೈ. ನಿಶ್ಚಿಂತದಾ ತೋರಿಪ್ಪ ಏಳೆಂಟು ಗಾರು ಮಾಡಿಯೇ ಕಳೆದು ಮೇಲೆ ನಿಂದಾತ ಗುರು ಯೋಗಿನಾಥಾ.

**ಅರ್ಥ**:—ಶ್ರೀಗುರು ಕರುಣಿಸಿದ ಇಷ್ಟಲಿಂಗವೇ ತನುತ್ರಯಂಗಳನವ ಗ್ರಹಿಸಿ, ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗವೆಂದು ಮೂರಾಯಿತ್ತು. ಆ ಮೂರು ಲಿಂಗವೇ ಶರಣನ ಷಡಂಗವನೊಳಕೊಂಡು ಆಚಾರಾದಿ ಮಹಾ ಲಿಂಗಂಗಳೆಂಬ ಆರಾಯಿತ್ತೆಂಬುದೀಗ ಮೂರು ಮೂವತ್ತಾರಾಗಿ ಎಂಬ ಶಬ್ದ ಕ್ಕರ್ಥ. ಅಂಗಮನೇಂದ್ರಿಯಂಗಳೆಲ್ಲ ಲಿಂಗವಾದ ಶರಣಂಗೆ ಪೃಥ್ವೀ ಅಪ್ಪು ತೇಜ ವಾಯು ಆಕಾಶ ಆತ್ಮನೆಂಬ ಆರು ತತ್ವಂಗಳ ವಾಸನೆಯಳಿದು ಹೋಯಿ ತ್ತೆಂಬುದೀಗ ಆರನತಿಗಳೆದನೈ ಎಂಬ ಶಬ್ದಕ್ಕರ್ಥ. ಅಂತು ತನುವಾಸನೆಯಳಿಯಿ ತ್ತಾಗಿ ಸಪ್ತ ವ್ಯಸನಂಗಳು ಅಷ್ಟಮದಂಗಳೆಲ್ಲ ನೇತಿಯಾಗಿ ಹೋದವೆಂಬುದೀಗ ತೋರಿಪ್ಪ ಏಳೆಂಟು ಗಾರು ಮಾಡಿಯೇ ಕಳೆದು ಎಂಬ ಶಬ್ದಕ್ಕರ್ಥ. ಅಂತು ಲಿಂಗಾಂಗ ಸಂಬಂಧಿಯಾದ ಶರಣನು ದೇಹವಾಸನೆಯಳಿದು ಮೂವತ್ತಾರು ತತ್ವಂಗಳ ಮೇಲಿಪ್ಪ ಪರಬ್ರಹ್ಮವೆಯಾಗಿ ನಿಶ್ಚಿಂತ ಪದದಲ್ಲಿ ಸುಖಿಯಾಗಿರ್ದ ಶರ

ಣನೆಂಬುದೀಗ ಆರಾದರನೇ ಮೀರಿ ನಿಶ್ಚಿಂತವಾದ ಮೇಲೆ ನಿಂದಾತ ಗುರು ಯೋಗಿನಾಥಾ ಎಂಬ ಶಬ್ದಕ್ಕರ್ಥ.

---

## ಅಂಗಸ್ಥಲಗಳು ಲಿಂಗಸ್ಥಲಗಳು.

(೧). ಲೋಕಾದಿಲೋಕಂಗಳೇನೂ ಇಲ್ಲದಂದು, ನೆನಹು ನಿಷ್ಪತ್ತಿಯಾಗಿತ್ತು ನೋಡಾ. ನೆನಹಿಲ್ಲದ ಘನವಸ್ತು ನೆನೆದ ನೆನಹೇ ಸವಯವಾಗಿ, ಚಿತ್ತೆನಿಸಿಕೊಂಡಿತ್ತು. ಆ ಚಿತ್ತೇ ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣವೆಂದು ಐದಂಗವನಂಗೀಕರಿಸಿ ನಿಃಕಲ ಶಿವತತ್ವವೆನಿಸಿತ್ತು ನೋಡಾ. ಆ ನಿಃಕಲ ಶಿವತತ್ವ ತಾನೊಂದೆ ತನ್ನ ಶಕ್ತಿಯ ಚಲನೆಮಾತ್ರದಿಂದ ಒಂದೆರಡಾಯಿತ್ತು ನೋಡಾ. ಅದರೊಳಗೆ ಒಂದು ಲಿಂಗಸ್ಥಲ, ಮತ್ತೊಂದು ಅಂಗಸ್ಥಲ, ಹೀಗೆ ಅಂಗಲಿಂಗವೆಂದು, ಉಪಾಸ್ಯ ಉಪಾಸಕರೆಂದು ವರ್ತಿಸುತ್ತಿಹುದು ನೋಡಾ. ಆ ಪರಶಿವನ ಚಿತ್ ಶಕ್ತಿ ತಾನೆ ಎರಡು ತೆರನಾಯಿತ್ತು. ಲಿಂಗಸ್ಥಲವನಾಶ್ರಯಿಸಿ ಶಕ್ತಿ ಎನಿಸಿತ್ತು. ಅಂಗಸ್ಥಲವನಾಶ್ರಯಿಸಿ ಭಕ್ತಿ ಎನಿಸಿತ್ತು. ಶಕ್ತಿಯೇ ಪ್ರವೃತ್ತಿ ಎನಿಸಿತ್ತು. ಭಕ್ತಿಯೇ ನಿವೃತ್ತಿ ಎನಿಸಿತ್ತು. ಶಕ್ತಿ ಭಕ್ತಿ ಎಂದು ಎರಡು ಪ್ರಕಾರವಾಯಿತ್ತು. ಶಿವನು ಲಿಂಗ ಆರು ತೆರನಾಯಿತ್ತು, ಅಂಗವಾರು ತೆರನಾಯಿತ್ತು, ಶಕ್ತಿ ಆರು ತೆರನಾಯಿತ್ತು, ಭಕ್ತಿ ಆರು ತೆರನಾಯಿತ್ತು. ಅದು ಹೇಗೆಂದಡೆ, ಮೊದಲಲ್ಲಿ ಲಿಂಗ ಮೂರು ತೆರನಾಯಿತ್ತು, ಅದು ಹೇಗೆಂದಡೆ, ಭಾವಲಿಂಗವೆಂದು, ಪ್ರಾಣಲಿಂಗವೆಂದು, ಇಷ್ಟಲಿಂಗವೆಂದು ಮೂರು ತೆರನಾಯಿತ್ತು. ಆ ಭಾವಲಿಂಗ, ಪ್ರಾಣಲಿಂಗ, ಇಷ್ಟಲಿಂಗವೆಂಬ ಲಿಂಗತ್ರಯವು ಒಂದೊಂದು ಲಿಂಗ ಎರಡೆರಡಾಗಿ ಆರು ತೆರನಾಯಿತ್ತು. ಅದು ಹೇಗೆಂದಡೆ, ಭಾವಲಿಂಗವು, ಮಹಾಲಿಂಗವೆಂದು, ಪ್ರಸಾದಲಿಂಗವೆಂದು ಎರಡು ತೆರನಾಯಿತ್ತು. ಪ್ರಾಣಲಿಂಗವು, ಜಂಗಮಲಿಂಗವೆಂದು, ಶಿವಲಿಂಗವೆಂದು ಎರಡು ತೆರನಾಯಿತ್ತು. ಇಷ್ಟಲಿಂಗವು, ಗುರುಲಿಂಗವೆಂದು ಆಚಾರಲಿಂಗವೆಂದು ಎರಡು ತೆರನಾಯಿತ್ತು. ಹೀಗೆ ಒಬ್ಬ ಶಿವನು ಆರು ತೆರನಾದನು. ಶಾಂತಾತೀತೋತ್ತರಿ ಎಂಬ ಕಲಾಪರಿಯಾಯವನುಳ್ಳ ಚಿತ್‌ಶಕ್ತಿ, ಶಾಂತಾತೀತ ಎಂಬ ಕಲಾಪರಿಯಾಯವನುಳ್ಳ ಆದಿಶಕ್ತಿ, ಶಾಂತಿ ಎಂಬ ಕಲಾಪರಿಯಾಯವನುಳ್ಳ ಪರಾಶಕ್ತಿ, ವಿದ್ಯಾ ಕಲಾಪರಿಯಾಯವ

ನುಳ್ಳ ಜ್ಞಾನಶಕ್ತಿ, ಪ್ರತಿಷ್ಠಾ ಕಲಾಪರಿಯಾಯವನುಳ್ಳ ಇಚ್ಛಾಶಕ್ತಿ, ನಿವೃತ್ತಿ ಕಲಾಪರಿಯಾಯವನುಳ್ಳ ಕ್ರಿಯಾಶಕ್ತಿ, ಈ ಒಂದೇ ಶಕ್ತಿ ಆರು ತೆರನಾಗಿ ಷಟ್ ಪ್ರಕಾರವಾಹಂಥ ಲಿಂಗಕ್ಕೆ ಅಂಗರೂಪಾಯಿತ್ತು. ಇದು ಲಿಂಗಷಟ್‍ಸ್ಥಲ.

ಇನ್ನು ಒಂದಂಗ ಮೂರು ತೆರನಾಯಿತ್ತು. ಅದು ಹೇಗೆಂದಡೆ, ಯೋಗಾಂಗ ಭೋಗಾಂಗ ತ್ಯಾಗಾಂಗವೆಂದು ಮೂರು ಪ್ರಕಾರವಾಗಿತ್ತು. ಈ ತ್ರಿಯಂಗವೇ ಒಂದೊಂದು ಎರಡಾಗಿ ಆರು ತೆರನಾಯಿತ್ತು. ಅದು ಹೇಗೆಂದಡೆ, ಯೋಗಾಂಗವೇ ಐಕ್ಯನೆಂದು ಶರಣನೆಂದು ಎರಡು ತೆರನಾಯಿತ್ತು. ಭೋಗಾಂಗವೇ, ಪ್ರಾಣಲಿಂಗಿ ಎಂದು ಪ್ರಸಾದಿ ಎಂದು ಎರಡು ತೆರನಾಯಿತ್ತು. ತ್ಯಾಗಾಂಗವೇ, ಮಹೇಶ್ವರನೆಂದು ಭಕ್ತನೆಂದು ಎರಡು ತೆರನಾಯಿತ್ತು. ಹೀಗೆ ಒಬ್ಬ ಶಿವ ಶರಣನು ಆರು ತೆರನಾದನು. ಸಮರಸಭಕ್ತಿ ಆನಂದಭಕ್ತಿ ಅನುಭಾವಭಕ್ತಿ ಅವಧಾನಭಕ್ತಿ ನೈಷ್ಠಿಕಾಭಕ್ತಿ ಸದ್ಭಕ್ತಿ ಎಂದು ಮಹಾಘನ ಅನುಪಮಭಕ್ತಿ ತಾನೇ ಆರು ತೆರನಾಗಿ ಷಟ್‍ಪ್ರಕಾರವಾದ ಶರಣಂಗೆ ಅಂಗರೂಪಾಯಿತ್ತು. ಇದು ಅಂಗಷಟ್‍ಸ್ಥಲ.

ಇನ್ನು ಕ್ರಿಯಾಶಕ್ತಿಯಿಂದ ನಿವೃತ್ತಿ ಕಲೆಯು ಸಂಕಲ್ಪಮಾತ್ರದಿಂದ ಮಾಯಾಶಕ್ತಿ ಹುಟ್ಟಿತ್ತು. ಆ ಮಾಯಾಶಕ್ತಿಯಿಂದ ಸಮಸ್ತ ಜಗತ್ತಿನ ಉತ್ಪತ್ತಿ. ಅಂಗವೆಂದಡೆ ಶರಣ, ಲಿಂಗವೆಂದಡೆ ಶಿವಶರಣಂಗೆ ಆ ಲಿಂಗವು ಆವಾಗಲೂ ಪ್ರಾಣವು, ಆ ಲಿಂಗಕ್ಕೆ ಆ ಶರಣನಾವಾಗಲೂ ಅಂಗವು, ಈ ಶರಣ ಲಿಂಗವೆರಡಕ್ಕೂ ಬೀಜವೃಕ್ಷದ ನ್ಯಾಯದ ಹಾಗಲ್ಲದೆ ಭಿನ್ನವಿಲ್ಲ. ಇದು ಕಾರಣ ಅನಾದಿಯಿಂದಲೂ ಶರಣನೆಂದರೆ ಲಿಂಗ, ಲಿಂಗವೆಂದರೆ ಶರಣ. ಈ ಎರಡಕ್ಕೂ ಭೇದವಿಲ್ಲೆಂಬುದನು ಸ್ವಾನುಭಾವ ವಿವೇಕದಿಂದ ಅರಿದುದು ಅರುಹಲ್ಲದೆ, ಆಗಮಯುಕ್ತಿಯಿಂದ ಅರಿದುದು ಅರುಹಲ್ಲ. ಅದೇನು ಕಾರಣವೆಂದಡೆ, ಶಾಸ್ತ್ರಜ್ಞಾನದಿಂದ ಸಂಕಲ್ಪ ಹಿಂಗದಾಗಿ. ಈ ಷಟ್‍ಸ್ಥಲ ಮಾರ್ಗವು ದ್ವೈತಾದ್ವೈತದ ಪರಿವರ್ತನೆಯಲ್ಲ. ಅದೇನು ಕಾರಣವೆಂದಡೆ, ಇದು ಶಿವಾದ್ವೈತ ಮಾರ್ಗವಾದ ಕಾರಣ. ಈ ಲಿಂಗಾಂಗ ಸಂಬಂಧ ಸಮರಸೈಕ್ಯವ ತಿಳಿದ ಬಳಿಕ, ಬೊಮ್ಮ ಪರಬೊಮ್ಮವೆಂದು ಬೇರುಂಟೇ, ತಾನಲ್ಲದೆ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ?

## ಮೂರು ಸ್ಥಲಗಳು.

### ( ತ್ಯಾಗಾಂಗ, ಭೋಗಾಂಗ, ಯೋಗಾಂಗ ).

( ೧ ). ತನುಗುಣವಳಿದಲ್ಲಿ ತ್ಯಾಗಾಂಗ. ಲಿಂಗದೊಡನೆ ಸಕಲ ಸುಖಂಗಳ ಭೋಗಿಸುವಲ್ಲಿ ಭೋಗಾಂಗ. ನಿಜದಲ್ಲಿ ಬೆರೆಯುಲು ಯೋಗಾಂಗ. ಇಂತೀ ತ್ರಿವಿಧದಲ್ಲಿಯೂ ಯೋಗಾಂಗ. ಇದಲ್ಲದನ್ಯಯೋಗಂಗಳೆಲ್ಲ ವಿಯೋಗವಯ್ಯಾ ಸೌರಾಷ್ಟ್ರ ಸೋಮೇಶ್ವರಾ.

( ೨ ). ಕತ್ತಲೆ ಸತ್ತು, ಬೆಳಗು ಬೀದಿವರಿಯಿತ್ತು. ನೋಡಾ ಎಲೆ ಅಮ್ಮ! ಪಂಚತತ್ವಂಗಳ ಮೇಲಿಪ್ಪ ಆಚಾರಲಿಂಗದ ನೈಷ್ಠೆಯ ಬಲದಿಂದ ಅಖಂಡಿತ ಕರಣಂಗಳನೊಳಕೊಂಡಿಪ್ಪ ಈ ಷಣತ್ರಯಂಗಳಸಿಕ್ಕಿ ತ್ಯಾಗಾಂಗಿಯಾದೆ. ಹದಿನೇಳು ತತ್ವಂಗಳ ಮೇಲಿಪ್ಪ ಜಂಗಮಲಿಂಗದ ಎಚ್ಚರಿನ ಬಲದಿಂದ ಅನಂತ ಸವಿಯನೊಳಕೊಂಡಿಪ್ಪ ಷಡುರಸಂಗಳಲ್ಲಿ ಲಿಂಗಭೋಗೋಪಭೋಗಿಯಾಗಿ ಭೋಗಾಂಗಿಯಾದೆ. ಮೂತತ್ವಗಳ ಮೇಲಿಪ್ಪ ನಿರಾಕಾರಲಿಂಗದ ಅರುಹಿನ ಬಲದಿಂದ ಪ್ರಣಮ ಪಂಚಾಕ್ಷರಿಯ ಸ್ಮರಿಸಿ ಮಹಾಮಹಾಲಿಂಗದಲ್ಲಿ ಯೋಗವಾಗಿ ಯೋಗಾಂಗಿಯಾದೆ. ಚಿದ್ಬ್ರಹ್ಮಾಂಡದೊಳಗಣ ಏಳು ತಾವರೆಯ ಮೇಲಿಪ್ಪ ನಿಷ್ಕಲ ಚಿದ್ಬಿಂದು ಲಿಂಗಕ್ಕೆ ಪ್ರಾಣಪೂಜೆಯ ಮಾಡಿದ ಮಹಾಜ್ಞಾನದ ಬಲದಿಂದ ಲಿಂಗಂಗಳ ಬೆಳಗು ಪಿಂಡಾಂಡದಲ್ಲಿ ಪ್ರಭವಿಸಿ ತೋರುತ್ತಿಪ್ಪುದಾಗಿ ನಾನು ಸರ್ವಾಂಗಲಿಂಗಿಯಾದೆನಯ್ಯಾ ಘನಲಿಂಗಿಯ ಮೊಹದ ಚನ್ನಮಲ್ಲಿಕಾರ್ಜುನಾ.

---

## ಆರು ಸ್ಥಲಗಳು ( ಷಟ್‌ಸ್ಥಲಗಳು ).

### ( ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯ ).

( ೧ ). ಭಕ್ತಂಗೆ ವಿಶ್ವಾಸ, ಮಹೇಶ್ವರಂಗೆ ನೈಷ್ಠೆ, ಪ್ರಸಾದಿಗೆ ಅವಧಾನ, ಪ್ರಾಣಲಿಂಗಿಗೆ ಯೋಗ, ಶರಣಂಗೆ ಮುನ್ನವೇ ಬಿಡುಗಡೆ, ಐಕ್ಯಂಗೆ ಕುರುಹುಗೊಂಬುದಕ್ಕೆ ಮುನ್ನವೇ ನಿರಾಳ ಇಂತೀ ಷಟ್‌ಸ್ಥಲಭೇದ ಎನ್ನಯ್ಯಾ ಪ್ರಿಯ ನಿಷ್ಕಳಂಕ ಮಲ್ಲಿಕಾರ್ಜುನಾ.

(೨). ಭಕ್ತಂಗೆ ಕ್ರಿ, ಮಹೇಶ್ವರಂಗೆ ನಿಶ್ಚಯ, ಪ್ರಸಾದಿಗೆ ಅರ್ಪಣ, ಪ್ರಾಣಲಿಂಗಿಗೆ ಯೋಗ, ಶರಣಂಗೆ ನಿಬ್ಬೆರಗು, ಐಕ್ಯಂಗೆ ನಿರ್ಲೇಪ, ಇಂತೀ ಷಟ್‌ಸ್ಥಲವನವಗ್ರಹಿಸಿ ನಿಂದ ವಿರಕ್ತನ ಸ್ಥಲದಾತ ನಿಜತತ್ವದ ಕೂಟ, ಶಂಭು ವಿಂದಿತ್ತ, ಸ್ವಯಂಭುಗಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನು.

(೩). ವಿಶ್ವಾಸದಿಂದ ಭಕ್ತನಾಗಿ, ಆ ವಿಶ್ವಾಸದೊಳಗಣ ನೈಷ್ಠೆಯಿಂ ಮಹೇಶ್ವರನಾಗಿ, ಆ ನೈಷ್ಠೆಯೊಳಗಣ ಸಾವಧಾನದಿಂ ಪ್ರಸಾದಿಯಾಗಿ, ಆ ಸಾವಧಾನದೊಳಗಣ ಸ್ವಾನುಭಾವದಿಂ ಪ್ರಾಣಲಿಂಗಿಯಾಗಿ, ಆ ಸ್ವಾನುಭಾವ ದೊಳಗಣ ಅರುವಿನಿಂ ಶರಣನಾಗಿ, ಆ ಅರಿವು ನಿಜದಲ್ಲಿ ಸಮರಸಭಾವವ ನೈದಿದ ನಿರ್ಭಾವ ಪದದೊಳು ನಿಂದ ಭೇದವೇ ಐಕ್ಯ ಸ್ಥಲ ಕಾಣಾ ಗುಹೇಶ್ವರಾ.

(೪). ತ್ರಿವಿಧ ಕ್ರಿಯಿಂದ ಭೇದವನರಿತು ಮಾಡುವದು ಭಕ್ತಿಸ್ಥಲ, ಚತುರ್ವಿಧ ಫಲಪ್ರಾಪ್ತಿಯನನುಭವಿಸದೆ ವಸ್ತುವ ಕಾಂಬ ನಿಶ್ಚಯವೇ ಮಹೇಶ್ವರ ಸ್ಥಲ, ಪಂಚೇಂದ್ರಿಯಂಗಳಲ್ಲಿ ಸಂಚಿತದಲ್ಲಿ ಬಂದುದನರಿತು ಲಿಂಗಾರ್ಪಿತ ದಿಂದ ಕಾಂಬುದು ಪ್ರಸಾದಿ ಸ್ಥಲದಿರವು. ಷಡಾಧಾರಂಗಳಿಂದ ಸುಳಿವ ಸೂಕ್ಷ್ಮದ ನೆಲೆಯನರಿದು ಕೂಡುವ ಕೂಟ ಪ್ರಾಣಲಿಂಗಿಯ ಸ್ಥಲದಿರವು. ಸುಖದುಃಖ ವೆಂಬ ಉಭಯವನಳಿದು ಬೆರಗು ನಿಬ್ಬೆರಗಾದುದು ಶರಣಸ್ಥಲದಿರವು. ಸುಗಂಧ ಗಂಧವ ಅಗ್ನಿಯಲ್ಲಿ ಸಂಬಂಧಿಸಿ, ಅಗ್ನಿ ಅಗ್ನಿಯೊಳಗೆ ಅಡಗಿ, ಗಂಧಧೂಮದಲ್ಲಿ ತಲೆದೋರಿ, ಗಂಧ ಹಿಂಗೆ, ಆ ಗಂಧದಲ್ಲಿಯೇ ಅಡಗಿದಂತೆ ನಿಂದುದು ಐಕ್ಯ ಸ್ಥಲ. ಇಂತಿ ಷಟ್‌ಸ್ಥಲ ತ್ರಿಕರಣಶುದ್ಧಾತ್ಮಂಗಲ್ಲದೆ ಸಾಧ್ಯವಲ್ಲ ನೋಡಾ. ಶಂಭುವಿಂದಿತ್ತ ಸ್ವಯಂಭುಗಿಂದತ್ತ ಅತಿಬಳ ನೋಡಾ ಮಾತುಳಂಗ ಮಧು ಕೇಶ್ವರನು.

(೫). ಕಿಂಕುರ್ವಾಣತೆಯಿಂದ ಉಳ್ಳುದನರಿತು ಮಾಡುವಲ್ಲಿ ಭಕ್ತ, ನಿಷ್ಠೆ ನಿಬ್ಬೆರಸಿ ಗಟ್ಟಿಗೊಂಡು ಅಭಿಲಾಷೆ ಸಮನಿಸದೆ ಪರಿಚ್ಛೇದ ಬುದ್ಧಿಯು ಳ್ಳಲ್ಲಿ ಮಾಹೇಶ್ವರ, ಅನರ್ಪಿತವ ಸಮನಿಸದೆ ಬಂದುದ ಕಾಯದ ಕರಣದ ಕೈಗಳಲ್ಲಿ ಕೊಟ್ಟು ಲಿಂಗ ಸಹಿತ ಭೋಗಿಸುವಲ್ಲಿ ಪ್ರಸಾದಿ, ಪ್ರಾಣಕ್ಕೆ ಪ್ರಾಣ ವಾಗಿ, ಕಾಲಸ್ಥಿತಿಯನರಿದು ಎಚ್ಚರಿಕೆಗುಂದದಿಪ್ಪಲ್ಲಿ ಪ್ರಾಣಲಿಂಗಿ, ತನಗೆ ಲಿಂಗ ವಾಗಿ, ಲಿಂಗಕ್ಕೆ ತಾನಾಗಿ ಬೆಚ್ಚುಬೇರಿಲ್ಲದಿರ್ದಡೆ ಶರಣ, ಸದಾಚಾರಸಂಪತ್ತಿ

ನಲ್ಲಿ ಬಂದ ಅನುಭಾವವನು ಮೀರಿ ಹೆಸರಡಗಿದ ಸುಖವದು ಲಿಂಗೈಕ್ಯ. ಇದು ಕಾರಣ ಕೂಡಲ ಚನ್ನಸಂಗಮಯ್ಯನಲ್ಲಿ ಬಸವಣ್ಣಂಗಲ್ಲದೆ ಷಟ್‌ಸ್ಥಲವಪೂರ್ವ.

---

## ೩೬ ಸ್ಥಲಗಳ ತತ್ವಗಳು.

( ಆರು ಸ್ಥಲಗಳ ಪ್ರತಿಯೊಂದು ಸ್ಥಲದಲ್ಲಿಯೂ ಪುನಃ ಆರು ಸ್ಥಲಗಳಾಗುವವು. ಈ ಮೇರೆಗೆ ಒಟ್ಟು ೩೬ ಸ್ಥಲಗಳಾಗುವವು. ಉದಾ:—ಭಕ್ತನಭಕ್ತ, ಭಕ್ತನಮಹೇಶ, ಭಕ್ತನ ಪ್ರಸಾದಿ, ಇತ್ಯಾದಿ. )

( ೧ ). ಪ್ರಥಮದಲ್ಲಿ ಭಕ್ತನಾದೆನೆಂಬರು, ದ್ವಿತೀಯದಲ್ಲಿ ಮಹೇಶ್ವರನಾದೆನೆಂಬರು, ತೃತೀಯದಲ್ಲಿ ಪ್ರಸಾದಿಯಾದೆನೆಂಬರು, ಚತುರ್ಥದಲ್ಲಿ ಪ್ರಾಣಲಿಂಗಿಯಾದೆನೆಂಬರು, ಐದನೆಯದಲ್ಲಿ ಶರಣನಾದೆನೆಂಬರು, ಆರನೆಯದಲ್ಲಿ ಐಕ್ಯನಾದೆನೆಂಬರು. ಆರು ಸ್ಥಲವ ಮೀರಿ ನಿರವಯ ಸ್ಥಲವನೈದಿಹೆನೆಂಬರು. ಇದು ಖಂಡಿತ. ಷಟ್‌ಸ್ಥಲಜ್ಞಾನನಿರ್ಣಯವಲ್ಲ. ಆವಾವಸ್ಥಲವಂಗಂಗೊಂಡರೂ, ಆ ಸ್ಥಲದಲ್ಲಿ ಷಡ್ವಿಧಲಿಂಗದಲ್ಲಿ ಬೆರಸಿ ಬೇರಿಲ್ಲದಿರಬಲ್ಲಡೆ ಸದ್ಭಕ್ತನೆಂಬೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

( ೨ ). ಸ್ಥಳಕುಳವನರಿಯಬೇಕೆಂಬರು. ಭಕ್ತನಾಗಿ ಮಹೇಶ್ವರನಾಗಬೇಕೆಂಬರು. ಮಹೇಶ್ವರನಾಗಿ ಪ್ರಸಾದಿಯಾಗಬೇಕೆಂಬರು. ಪ್ರಸಾದಿಯಾಗಿ ಪ್ರಾಣಲಿಂಗವಾಗಬೇಕೆಂಬರು. ಪ್ರಾಣಲಿಂಗಿಯಾಗಿ ಶರಣನಾಗಬೇಕೆಂಬರು. ಶರಣನಾಗಿ ಐಕ್ಯನಾಗಬೇಕೆಂಬರು. ಯಾತರಿಂದ ಕೂಟವ ನಾನರಿಯೆ. ಒಳಗಣ ಮಾತು ಹೊರಹೊಮ್ಮಿಯಲ್ಲದೆ ಎನಗರಿಯಬಾರದು. ಎನಗೈಕ್ಯನಾಗಿ ಶರಣನಾಗಬೇಕು. ಶರಣನಾಗಿ ಪ್ರಾಣಲಿಂಗಿಯಾಗಬೇಕು. ಪ್ರಾಣಲಿಂಗಿಯಾಗಿ ಪ್ರಸಾದಿಯಾಗಬೇಕು, ಪ್ರಸಾದಿಯಾಗಿ ಮಹೇಶ್ವರನಾಗಬೇಕು. ಮಹೇಶ್ವರನಾಗಿ ಭಕ್ತನಾಗಬೇಕು. ಭಕ್ತನಾಗಿ ಸಕಲಯುಕ್ತನಾಗಬೇಕು. ಯುಕ್ತಿ ನಿಶ್ಚಯವಾದಲ್ಲಿಯೇ ಐಕ್ಯಸ್ಥಲ. ಒಳ ಹೊರಗಾಯಿತ್ತು. ಎನಗೆ ಕಾಣಬಂದಿತ್ತು. ಅಲೇಕನಾದ ಶೂನ್ಯಶಿಲೆಯ ಹೊರಹೊಮ್ಮಿ ಕಂಡೆ ನಿನ್ನನು.

(೩). ಕುಂಭದಲ್ಲಿ ಅಪ್ಪುವಿನ ಸಂಗದಲ್ಲಿ ತಂಡುಲವ ಹಾಕಿ ಅಗ್ನಿಪುಟದಲ್ಲಿ ಬೇಯಿಸಲಿಕ್ಕಾಗಿ, ಒಂದೊಂದು ತಂಡುಲ ಹಿಂಗಿ ಬೆಂದಂತೆ, ಆ ಅಪ್ಪು ಬೆಂಕಿಯ ಸಂಗವ ಮಾಡಿತ್ತು, ಆ ಅಗ್ನಿ ತಂಡುಲಕ್ಕೊಂದೊಂದು ಬಾರಿ ಉರಿಯಿತ್ತು. ಇಂತೀ ವಿವರಂಗಳ ಭೇದವನರಿತು, ಅಂಗದಲ್ಲಾರು ಸ್ಥಲವನಂಗೀಕರಿಸಿದಲ್ಲಿ ಬೇರೆ ಒಂದೊಂದರಲ್ಲಿ ಹಿಂಗಿ ನೋಡಿಹೆನೆಂದಡೆ, ಮೂರಕ್ಕಾರು, ಆರಕ್ಕೆ ಮೂವತ್ತಾರು, ಮತ್ತಿವರೊಳಗಾದ ಗುಣಸಾಮ ಅತೀತಕ್ಕೆ ಅತೀತವಾಗಿಪ್ಪುದು. ಇಂತೀ ಸ್ಥಲಂಗಳ ಅಹುದೆಂದು ಒಪ್ಪದೆ, ಅಲ್ಲಾ ಎಂದು ಬಿಡದೆ, ಅಲ್ಲಿಯ ಸ್ಥಲದಲ್ಲಿ ಏಕೀಕರಿಸಿ ಅಲ್ಲಿಯ ಭಾವವ ತೋರಿದಲ್ಲಿಯೇ ಲೇಪವಮಾಡಿ, ಹಿಡಿದಡೆ ಹಿಡಿಕಿಗೆ ಬಾರದೆ, ಬಿಟ್ಟಡೆ ಹರವರಿಯಲ್ಲಿ ಹರಿಯದೆ, ವಸ್ತುಕದಲ್ಲಿ ವರ್ಣಕ ತೋರಿ, ಆ ವರ್ಣಕಕ್ಕೆ ವಸ್ತುಕ ಅಧೀನವಾಗಿ ಇಪ್ಪ ಉಭಯ ಸ್ಥಲವನು ಅರಿತಲ್ಲಿ ವಿಶ್ವಸ್ಥಲ ನಾಶವಾಗಿ, ಸದ್ಯೋಜಾತಲಿಂಗವು ವಿನಾಶವಾಗಬೇಕು.

(೪). ಆವವರ್ಣ ಕೂಡಿದಡೂ ಅಪ್ಪುಮಯ ತಪ್ಪದಂತೆ, ಸರ್ವಗುಣಸಂಪನ್ನನಾದಲ್ಲಿ ಭಕ್ತನೆಂದಡೂ ತಾನಾಗಿ, ಮಹೇಶ್ವರನೆಂದಡೂ ತಾನಾಗಿ, ಪ್ರಸಾದಿ ಎಂದಡೂ ತಾನಾಗಿ, ಪ್ರಾಣಲಿಂಗಿ ಎಂದಡೂ ತಾನಾಗಿ, ಶರಣನೆಂದಡೂ ತಾನಾಗಿ, ಐಕ್ಯನೆಂದಡೂ ತಾನಾಗಿ ಒಂದನಹುದು, ಒಂದನಲ್ಲ ಎನ್ನದೆ, ಕತ್ತಲೆಯಲ್ಲಿ ಹಾಲಕೊಂಡಡೆ ಸಿಹಿ ತಪ್ಪುವದೇ? ಸತ್ತು ಚಿತ್ತಾನಂದವೆಂಬ ಗೊತ್ತಹರಿದವಂಗೆ ತಟ್ಟುಮುಟ್ಟು ಹತ್ತುವ ಭಾವ ಒಂದೂ ಇಲ್ಲ, ಕಾಮಭೀಮ ಜೀವದನದೊಡೆಯ ತಾನು ತಾನೇ.

**ಅರ್ಥ:**— ಷಡ್ವರ್ಣಂಗಳೊಳಗೆ ಆವ ವರ್ಣದಲ್ಲಿ ಉದಕ ಕೂಡಿದರೂ, ಉದಕವು ಆ ವರ್ಣವಾಗುವದು ಹುಸಿಯುದು. ಹಾಗೆ ಸರ್ವಾಚಾರ ಸಂಪತ್ತಿನ ಆಚರಣೆಯಲ್ಲಿ ಲೋಲುಪ್ತಿಯುಳ್ಳವನಾದಲ್ಲಿ ಶ್ರದ್ಧಾಭಕ್ತಿಯನುಳ್ಳ ಭಕ್ತನೆಂದಡೂ ಶರಣತಾನೆಯಾಗಿಪ್ಪನು. ನೈಷ್ಠಿಕಾಭಕ್ತಿಯನುಳ್ಳ ಮಹೇಶ್ವರನೆಂದಡೂ ತಾನೆಯಾಗಿಪ್ಪನು. ಸಾವಧಾನಭಕ್ತಿಯನುಳ್ಳ ಪ್ರಾಣಲಿಂಗಿ ಎಂದಡೂ ತಾನೆಯಾಗಿಪ್ಪನು. ಆನಂದಭಕ್ತಿಯನುಳ್ಳ ಶರಣನೆಂದಡೂ ತಾನೆಯಾಗಿಪ್ಪನು. ಸಮರಸ ಭಕ್ತಿಯನುಳ್ಳ ಐಕ್ಯನೆಂದಡೂ ತಾನೆಯಾಗಿಪ್ಪನು. ಶರಣನು ಷಟ್‌ಸ್ಥಲಂಗಳು

ತನಗಂಗವಾದ ಕಾರಣ, ಮಾಹೇಶ್ವರ ಸ್ಥಲವೇ ಮೋಕ್ಷಕ್ಕೆ ಕಾರಣವಹುದು ಭಕ್ತಸ್ಥಲವಲ್ಲ, ಪ್ರಸಾದಿ ಸ್ಥಲ ಮೋಕ್ಷಕ್ಕೆ ಕಾರಣವಹುದು ಮಹೇಶ್ವರ ಸ್ಥಲವಲ್ಲ, ಪ್ರಾಣಲಿಂಗಿ ಸ್ಥಲ ಮೋಕ್ಷಕ್ಕೆ ಕಾರಣವಹುದು ಪ್ರಸಾದಿ ಸ್ಥಲವಲ್ಲ, ಶರಣಸ್ಥಲ ಮೋಕ್ಷಕ್ಕೆ ಕಾರಣವಹುದು ಪ್ರಾಣಲಿಂಗಿ ಸ್ಥಲವಲ್ಲ, ಐಕ್ಯಸ್ಥಲವೇ ಮೋಕ್ಷಕ್ಕೆ ಕಾರಣವಹುದು ಶರಣಸ್ಥಲ ಮೋಕ್ಷಕ್ಕೆ ಕಾರಣವಲ್ಲ, ಎನ್ನದೆ ತಾ ಸರ್ವಾಚಾರ ಸಂಪನ್ನನಾದಲ್ಲಿ ಆವ ಸ್ಥಲದಲ್ಲಿ ನಿಂದು ಆಚರಿಸಿದಡೂ ಮೋಕ್ಷವಹುದು. ಅದು ಹೇಗೆಂದಡೆ, ಕಾವಳದಲ್ಲಿ ಕ್ಷೀರವ ಸ್ವೀಕರಿಸಿದಡೆ ಸ್ವಾದ ಕೆಡದು ಎಂಬ ಹಾಗೆ, ತಾನು ಆವ ಸ್ಥಲವಿಡಿದು ಆಚರಿಸಿದಡೂ, ಆ ಸ್ಥಲದಲ್ಲಿ ಷಟ್‌ಸ್ಥಲಂಗಳು ಉಂಟಾದ ಕಾರಣ ಮೋಕ್ಷ ಉಂಟು. ಸದ್ರೂಪುವಾದ ಲಿಂಗ, ಚಿದ್ರೂಪವಾದ ಅಂಗ, ಆನಂದಸ್ವರೂಪವಾದ ಭಕ್ತಿ, ಈ ಅಂಗಭಕ್ತಿಗಳೆಂಬ ಭಿನ್ನವ ನಷ್ಟವ ಮಾಡಿ ಲಿಂಗದಲ್ಲಿ ಕೂಡಿದ ಶರಣಂಗೆ, ಇದು ಅಂಗ, ಇದು ಲಿಂಗ, ಇದು ಭಕ್ತಿ ಎಂಬು ದೊಂದೂ ಇಲ್ಲ, ಲಿಂಗವೇ ತಾನು ತಾನೇ ಲಿಂಗವಾಗಿಪ್ಪನೆಂಬುದರ್ಥ.

---

## ಸ್ಥಲಗಳ ಪ್ರವೃತ್ತಿ, ನಿವೃತ್ತಿಗಳು.

(೧). "ಮಹಾಲಿಂಗಂ ತ್ರಯೋರ್ಲಿಂಗಂ । ತ್ರಿವಿಧಂ ಷಡ್ವಿಧಮುಖಂ । ತ್ರಿವಿಧ ಏಕಮುಖೋಲಿಂಗಂ । ಮಹಾಲಿಂಗಂತು ದರ್ಶನಂ ॥" ಇಂತೆಂದುದಾಗಿ, ಒಂದು ಮೂರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಮೂರ ಆರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಆರ ಮೂವತ್ತಾರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಮೂವತ್ತಾರ ಆರ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಮೂರ ಒಂದ ಮಾಡಿಕೊಂಡನಯ್ಯಾ ನಮ್ಮ ಬಸವಣ್ಣನು. ಆ ಒಂದ ತಾನೇ ಆಗಿಪ್ಪನಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವಾವಧಾನಿಯಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವ ಸಂಗ ಪರಿತ್ಯಾಗಿಯಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವ ನಿರ್ಮುಕ್ತನಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವಾಂಗಲಿಂಗಿಯಯ್ಯಾ ನಮ್ಮ ಬಸವಣ್ಣನು. ಇಂತಪ್ಪ ಸರ್ವ ನಿವಾರ್ಣಿಯಯ್ಯ ನಮ್ಮ ಬಸವಣ್ಣನು. ಇಂತಪ್ಪ ಬಸವಣ್ಣನ ಮಹಿಮೆಯ ನೀವೇ ಬಲ್ಲಿರಿ. ಅಸಂಖ್ಯಾತ ಮಹಾಪುರುಷರು ಪ್ರಭುದೇವರು ಮುಖ್ಯವಾದ ನಿಲವಿನ ಶ್ರೀಚರ

ಣಕ್ಕೆ ನಾನು ಶರಣಾರ್ಥಿ ಶರಣಾರ್ಥಿ ಎಂದು ಶಬ್ದ ಮುಗ್ಧವಾಗಿ ಉರಿಯುಂಡ ಕರ್ಪುರದಂತೆ ನಿಮ್ಮ ಶ್ರೀಚರಣವ ಬೆರಿಸಿದೆನಯ್ಯ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಪ್ರಭುವೇ ಶಾಂತ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸವಣ್ಣನ ಪ್ರಸಾದವ ಕೊಂಡು ನಾನು ಬಸವಣ್ಣನ ಮುಂದೆ ಬಯಲಾಗಿ ಹೋದೆನಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ.

---

## ಗುರುಲಿಂಗಜಂಗಮದಿಂದ ಆತ್ಮವಿಕಾಸದ ರೀತಿ.

(೧). ತನುವಿಡಿದು ಕಾಂಬುವದು ಗುರುವಿನ ಭೇದ. ಮನವಿಡಿದು ಕಾಂಬುವದು ಲಿಂಗದಭೇದ. ಜ್ಞಾನವಿಡಿದು ಕಾಂಬುವದು ಜಂಗಮದ ಭೇದ. ಈ ತ್ರಿವಿಧವಿಡಿದು ಕಾಂಬುವದು ಮಹಪ್ರಕಾಶ. ಮಹಪ್ರಕಾಶದೊಳಗೆ ಮಹವ ಕಂಡು, ಮಹಕ್ಕೆ ಮಹನಾಗಿರ್ದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೨). ಕಾಯವಿದ್ದು ಕಾಂಬುವದು ಗುರುಸ್ಥಲ. ಜೀವವಿದ್ದು ಕಾಂಬುವದು ಲಿಂಗಸ್ಥಲ. ಭಾವವಿದ್ದು ಕಾಂಬುವದು ಜಂಗಮಸ್ಥಲ. ತ್ರಿವಿಧವನೊಡಗೂಡಿ ಕಾಂಬುವದು ಭಕ್ತಿಸ್ಥಲ. ಭಕ್ತಿನಿಶ್ಚಯವಾಗಿ ನಿಂದಲ್ಲಿ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗ ನಿಶ್ಚಯವಾದ ಸ್ಥಲ.

(೩). ಆತ್ಮತೇಜವ ಬಿಟ್ಟಾಗಲೇ ಗುರುವನರಿದ. ಮನವಿಕಾರವ ಬಿಟ್ಟಾಗಲೇ ಲಿಂಗವನರಿದ. ಧನವಿಕಾರವ ಬಿಟ್ಟಾಗಲೇ ಜಂಗಮವನರಿದ. ಇಂತು ತ್ರಿವಿಧನಾಸ್ತಿಯಾದಂಗಲ್ಲದೆ ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಸಹಜ ಭಕ್ತನಲ್ಲ.

(೪). ಗುರುವನರಿತು ಮಾಡುವಲ್ಲಿ ಅಹಂಕಾರವ ಮರೆದು ಮಾಡಬೇಕು. ಲಿಂಗವನರಿತು ಮನಮುಟ್ಟಿದಲ್ಲಿ ಪ್ರಕೃತಿ ತಲೆದೋರದಿರಬೇಕು. ಜಂಗಮವನರಿತು ಮುಟ್ಟಿ ಪೂಜಿಸುವಲ್ಲಿ ಅರ್ಥ ಪ್ರಾಣಾಭಿಮಾನ ಈ ಮೂರರಲ್ಲಿ ನಿಶ್ಚಯವಾಗಿರಬೇಕು. ಸಂಗನಬಸವಣ್ಣಪ್ರಿಯ ಚಂಡೇಶ್ವರ ಲಿಂಗವನರಿಯಬಲ್ಲಡೆ.

(೫). ಅಯ್ಯಾ, ತನುವಿನಾಶೆಯಳಿದಾತನ ಸತ್ತುಚಿತ್ತಾನಂದ ಗುರುವೆಂಬೆ ನೋಡಾ, ಮನದಕಾಂಕ್ಷೆ ಯಳಿದಾತನ ಸರ್ವಾಚಾರಲಿಂಗವೆಂಬೆ ನೋಡಾ.

ಭಾವದ ಭ್ರಮೆಯಳಿದಾತನ ಷಟ್‌ಸ್ಥಲ ಜಂಗಮನೆಂಬೆ ನೋಡಾ. ಪ್ರಾಣನ ಪ್ರಪಂಚವನಳಿದಾತನ ನಿರಾತಂಕನಿರಾಲಂಬ ನಿಃಕಳಂಗ ನಿಜಶರಣನೆಂಬೆ ನೋಡಾ. ಈ ಚತುರ್ವಿಧಪಾಶವಗೆಲಿದಾತನ ಗುಹೇಶ್ವರ ಲಿಂಗವೆಂಬೆ ನೋಡಾ, ಚನ್ನ ಬಸವಣ್ಣ.

(೬). ಅಯ್ಯಾ, ಕ್ರಿಯಾಚಾರದಲ್ಲಿ ಮೋಹವುಳ್ಳಾತನೇ ಸದ್ಗುರುವೆಂಬೆ. ಜ್ಞಾನಾಚಾರದಲ್ಲಿ ನೈಷ್ಠೆಯುಳ್ಳಾತನೇ ಸಚ್ಚಿದಾನಂದ ಲಿಂಗವೆಂಬೆ ನೋಡಾ. ಭಾವಾಚಾರದಲ್ಲಿ ಪ್ರಿಯವುಳ್ಳಾತನೇ ಪರಾತ್ಪರ ಜಂಗಮವೆಂಬೆ ನೋಡಾ. ಈ ತ್ರಿವಿಧಾಚಾರದಲ್ಲಿ ಕಾಂಕ್ಷೆಯುಳ್ಳಾತನ ನಿಜಶರಣನೆಂಬೆ ನೋಡಾ. ಇಂತು ಆಚಾರ ಸನ್ಮಾರ್ಗ ಗುರುಲಿಂಗ ಜಂಗಮ ಶರಣರೇ ಗುಹೇಶ್ವರಲಿಂಗಕ್ಕೆ ಮೋಕ್ಷ ಮಂದಿರವೆಂಬೆ ನೋಡಾ, ಚನ್ನಬಸವಣ್ಣ.

(೭). ತನ್ನ ತಾನರಿದಡೆ ತನ್ನರಿವೇ ಗುರು, ತಾನೇ ಲಿಂಗ, ತನ್ನ ನಿಷ್ಪ ತ್ತಿಯೇ ಜಂಗಮ ಇಂತೀ ತ್ರಿವಿಧವು ಒಂದಾದಡೆ ಕಾಮೇಶ್ವರ ಲಿಂಗವು ತಾನೆ.

(೮). ಗುರುವನೇ ಲಿಂಗವೆಂದರಿದಕಾರಣ ಗುರುವ ಲಿಂಗದಲ್ಲಿ ಕಂಡೆ. ಲಿಂಗವನೇ ಜಂಗಮವೆಂದರಿದ ಕಾರಣ ಲಿಂಗವ ಜಂಗಮದಲ್ಲಿ ಕಂಡೆ. ಜಂಗಮ ವನೇತಾನೆಂದರಿದ ಕಾರಣ ಜಂಗಮವ ನನ್ನಲ್ಲಿ ಕಂಡೆ. ನನ್ನ ನಿನ್ನಲ್ಲಿ ಅರಿದ ಕಾರಣ ನನ್ನ ನಿನ್ನಲ್ಲಿ ಕಂಡೆ. ಈ ಪರಿಯಿಂದ ಗುರುಲಿಂಗ ಜಂಗಮ ಸದಾಸನ್ನಿಹಿ ತನಾಗಿ ನಿನ್ನೊಳಗಾದೆ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

# ಭಕ್ತಸ್ಥಲ.

## ಲಿಂಗಾಂಗಿಯು ಸದಾಚಾರಿಯಾಗಿರತಕ್ಕದ್ದು.

(೧). ಅಂಗಸಂಗಿಯಾದವಂಗೆ ಲಿಂಗ ಸಂಗವಿಲ್ಲ. ಲಿಂಗಸಂಗಿಯಾದವಂಗೆ ಅಂಗ ಸಂಗವಿಲ್ಲ. ಲಿಂಗಸಂಗವೆಂಬುದೇ ಸದಾಚಾರ. ಅಂಗಸಂಗವಾದುದೇ ಅನಾಚಾರ. ಇದು ಕಾರಣವಾಗಿ, ಅಂಗಸಂಗಮಂ ಬಿಟ್ಟು ಲಿಂಗಸಂಗವಾಗಿರಬೇಕು ನಮ್ಮ ಕೂಡಲಚನ್ನಸಂಗಯ್ಯನಲ್ಲಿ.

(೨). ಅಂಗಾಶ್ರಯವಳಿದು ಲಿಂಗಾಶ್ರಯವಾದ ಬಳಿಕ, ಆ ಅಂಗಕ್ಕೆ ಲಿಂಗಾಚಾರವಲ್ಲದೆ, ಅಂಗಕ್ರಿ ಎಂಬುದು ಇಲ್ಲ ನೋಡಾ. ಲಿಂಗದಲ್ಲಿ ನೈಷ್ಠಿಕವಂತನಾದ ಬಳಿಕ, ಅಂಗನಾವುವಿಡಿದು ಬಳಲುವ ಬಳಲಿಕೆ ಎಂತೋ? ಅನಾಚಾರವ ಜರಿದು, ಆಚಾರವನರಿದ ಬಳಿಕ, ನಮ್ಮ ಕೂಡಲಚನ್ನಸಂಗನ ಶರಣರು ಅನ್ಯವನಾಚರಿಸುವವರಲ್ಲ.

(೩). ಅಂಗಜೀವಿಗಳೆಲ್ಲ ಅಶನಕ್ಕೆ ನೆರೆದು, ಲಿಂಗವಾರ್ತೆಯ ನುಡಿವರಯ್ಯ. ಕಾಯಜೀವಿಗಳೆಲ್ಲ ಕಳವಳಿಸಿ ನುಡಿವರಯ್ಯ. ಮನಬಂದ ಪರಿಯಲ್ಲಿ ನುಡಿವವರಿಗೆ ಗುಹೇಶ್ವರನೆಂಬ ಲಿಂಗ ನಿಮಗೆಲ್ಲಿಯದೋ?

(೪). ಭಕ್ತಂಗಾಗಲಿ ಲಿಂಗಕ್ಕಾಗಲಿ ಸದಾಚಾರವೇ ಬೇಕು. ಸದಾಚಾರವುಳ್ಳವರಿಗೆ ಅನಾಯತ ಹೊದ್ದಲಾಗದು. ಅನಾಯತವೆಂಬುದು ಅನುಸರಣೆ. ಅನುಸರಣೆ ಎಂಬುದೇ ಅಂಗದಿಚ್ಛೆ. ಅಂಗದಿಚ್ಛೆ ಎಂಬುದು ಅನಾಚಾರ. ಅನಾಚಾರವೆಂಬುದು ಪಂಚಮಹಾಪಾತಕ. ಇದುಕಾರಣ ಕೂಡಲಚನ್ನಸಂಗಯ್ಯನಲ್ಲಿ ಅನುಸರಿಸಿ ನಡೆದರೆ ಅಘೋರ ನರಕ ತಪ್ಪದು.

(೫). ಆಚಾರವಿಲ್ಲದ ಗುರು ಭೂತಪ್ರಾಣಿ. ಆಚಾರವಿಲ್ಲದ ಲಿಂಗ ಸಿಲೆ. ಆಚಾರವಿಲ್ಲದ ಜಂಗಮ ಮಾನವ. ಆಚಾರವಿಲ್ಲದ ಪಾದೋದಕ ನೀರು. ಆಚಾರವಿಲ್ಲದ ಪ್ರಸಾದ ಎಂಜಲು. ಆಚಾರವಿಲ್ಲದ ಭಕ್ತ ದುಷ್ಕರ್ಮಿ. ಇದು ಕಾರಣ ಅಷ್ಟವನೇರುವದಕ್ಕೆ ನಿಚ್ಚಣಿಕೆಯೇ ಸೋಪಾನವಯ್ಯ. ಹರಪದವನೇರುವ

ದಕ್ಕೆ ಶ್ರೀಗುರು ಹೇಳಿದ ಸದಾಚಾರವೇ ಸೋಪಾನವಯ್ಯಾ. ಗುರು ಉಪದೇಶವ ಮೀರಿ, ಮನಕ್ಕೆ ಬಂದಂತೆ ವರ್ತಿಸುವ ಪಾಪಿಗಳ ಎನಗೊಮ್ಮೆ ತೋರದಿರಯ್ಯಾ ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ.

(೬). ಅಂಗ ಸೋಂಕಿದ ಲಿಂಗ ಸಂಬಂಧಿಯಾದ ಬಳಿಕ, ಸರ್ವ ಸಂಗದ ವಿಕಾರವಳಿಯಬೇಕು. ಅಂಗ ಸೋಂಕಿದ ಲಿಂಗಕ್ಕೆ ಸಜ್ಜೆ ಶಿವಧಾರವಾ ವುದೆಂದರೆ, ಅಂಗವೇ ಸಜ್ಜೆ, ಆಚಾರವೇ ಶಿವಧಾರ, ತ್ರಿಕರಣ ಶುದ್ಧಿಯೇ ಕಾಣಿಕೆ, ಈ ತ್ರಿವಿಧ ಗುಣವನರಿಯಬೇಕು, ತ್ರಿವಿಧ ಸಂಪನ್ನನಾಗಿರಬೇಕು, ಈ ತ್ರಿವಿಧ ಮುಟ್ಟಿ ಲಿಂಗಾರ್ಚನೆಯ ಮಾಡಬೇಕು, ಅಂಗ ಲಿಂಗ ಸಂಬಂಧಕ್ಕೆ ಇದೇ ಕ್ರಮವು ಕೂಡಲಚನ್ನಸಂಗಮದೇವಾ.

(೭). ಹಸಿವು ತೃಷೆ ವ್ಯಸನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಾದಿಯಾದ ತನುಗುಣಂಗಳು ದೇವ ದಾನವ ಮಾನವರಂತಾದರೆ, ಲಿಂಗ ವಂತನಾದ ಪರಿ ಎಂತಯ್ಯಾ? ತನುಗುಣಂಗಳು ಭೂತ ದೇಹಿಯಂತಾದಡೆ, ಲಿಂಗ ದೇಹಿಯಾದ ಪರಿ ಎಂತಯ್ಯಾ? ಲಿಂಗ ಗುಣ, ಲಿಂಗ ಚಿಹ್ನವಿಲ್ಲದಿರ್ದಡೆ, ಲಿಂಗ ದೇಹಿಯಾದ ಪರಿ ಎಂತಯ್ಯಾ? ಹಸಿವು ತೃಷೆ ವ್ಯಸನವಡಗಿದಡೆ ಲಿಂಗ ಚಿಹ್ನ ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವಾದಿಯಾದ ದೇಹಗುಣಂಗಳ ಳಿದರೆ ಲಿಂಗಚಿಹ್ನ ಇಂತಲ್ಲದೆ ದೇಹ ಗುಣಂಗಳು ತನ್ನ ಬಿಡದೆ, ತಾನವ ಕೂಡಿ ಕೊಂಡು ಬಿಡದಿರ್ದು, ತಾ ಲಿಂಗದೇಹಿ ಎಂದಡೆ, ಆ ಲಿಂಗವೆಂತು ಒಲಿವುದು? ಸದ್ಭಕ್ತರೆಂತು ಮೆಚ್ಚುವರಯ್ಯಾ? ಇಂತಾ ಅವಗುಣಂಗಳೆಲ್ಲವೂ ಅಳಿದು, ಗುರು ಲಿಂಗ ಜಂಗಮದಲ್ಲಿ ತನುಮನ ಧನವ ಲೀಯವ ಮಾಡಿದರೆ, ಆತನೇ ಸರ್ವಾಂಗ ಲಿಂಗಿಯಯ್ಯಾ, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

(೮). ತನುವಿನಲ್ಲಿ ನಿರ್ಮೋಹ, ಮನದಲ್ಲಿ ನಿರಹಂಕಾರ, ಪ್ರಾಣದಲ್ಲಿ ನಿರ್ಭಯ, ಚಿತ್ತದಲ್ಲಿ ನಿರಾಪೇಕ್ಷೆ, ವಿಷಯದಲ್ಲಿ ಉದಾಸೀನ, ಭಾವದಲ್ಲಿ ದಿಗಂಬರ, ಜ್ಞಾನದಲ್ಲಿ ಪರಮಾನಂದ ನೆಲೆಗೊಂಡ ಬಳಿಕ, ಸೌರಾಷ್ಟ್ರ ಸೋಮೇಶ್ವರಲಿಂಗವು ಬೇರಿಲ್ಲ ಕಾಣಿರೋ.

(೯). ತನುಗುಣ ಮನಗುಣ ಪ್ರಾಣಗುಣದಲ್ಲಿ ಹುದುಗಿದರೆ, ಪಂಚೇಂದ್ರಿಯ ಅರಿಷಡ್ವರ್ಗಂಗಳೊಳು ಮನಕರ್ತು ಬೆರಸಿದಲ್ಲಿ ಆ ಮನದ

ಹಸ್ತದಲ್ಲಿ ಲಿಂಗವಿಲ್ಲ, ಲಿಂಗವಿಲ್ಲವಾಗಿ ಭಕ್ತಿ ಇಲ್ಲ, ಭಕ್ತಿ ಇಲ್ಲವಾಗಿ ವಿವೇಕವಿಲ್ಲ, ವಿವೇಕವಿಲ್ಲವಾಗಿ ಅರುವಿಲ್ಲ, ಅರುವಿಲ್ಲವಾಗಿ ಸುಜ್ಞಾನವಿಲ್ಲ, ಸುಜ್ಞಾನವಿಲ್ಲವಾಗಿ ಪರಮಾರ್ಥ ಸೂಸದು, ಇವೆಲ್ಲವ ಕಳೆದುಳಿದಲ್ಲಿ ಮನದ ಹಸ್ತದಲ್ಲಿ ಲಿಂಗವಿದ್ದಿತ್ತು, ಲಿಂಗದಲ್ಲಿ ಮನಸಂದಿತ್ತು, ಮನಸಂದಲ್ಲಿ ಸೌರಾಷ್ಟ್ರಸೋಮೇಶ್ವರ ಸ್ಥಿರವಾದನು.

(೧೦). ತಾಯು ಗರ್ಭದಲ್ಲಿ ಶಿಶು ತಾಯ ಕುರುಹನರಿಯದು. ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು. ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು. ಆ ದೇವರು ಭಕ್ತರನೆಂದೂ ಅರಿಯನು ಕಾಣಾ ರಾಮನಾಥಾ.

(೧೧). ಚಿತ್ರದ ಹುಲಿ ಮನುಷ್ಯನ ಕಚ್ಚಬಲ್ಲುದೇ? ಮರ್ತ್ಯದೊಳಗೆ ಈಶನ ಲಾಂಛನವ ಹೊತ್ತವರಿಗೆಲ್ಲ ನಿತ್ಯತ್ವವುಂಟೇ? ಇದರ ರಚ್ಚೆಯ ಹೊರಲಾರದೆ, ಮರ್ತ್ಯಕ್ಕೆ ಹೊರಗೆಂದ ಸಿಶಿಟ ಶರಣ ನಿಷ್ಕಳಂಕ ಮಲ್ಲಿಕಾರ್ಜುನಾ.

**ಅರ್ಥ**:—ಚಿತ್ರದಲ್ಲಿ ಬರೆದ ವ್ಯಾಘ್ರನು ಮನುಷ್ಯನ ಕಚ್ಚಿ ಪ್ರಾಣವ ಕೊಲ್ಲಬಲ್ಲುದೇ? ಭೂಲೋಕದಲ್ಲಿ ಹುಟ್ಟಿದ ಮನುಜರು ಶಿವಲಾಂಛನವ ಧರಿಸಿದವರಿಗೆಲ್ಲಕ್ಕು ಶಿವತತ್ವ ಉಂಟೇ? ಇವರ ಕೂಡೆ ರಚ್ಚೆ ಕಟ್ಟೆಯಲ್ಲಿ ವಾದ ಮಾಡಲಾರದೆ, ಕರಣಂಗಳ ಚಲತ್ವವಿಲ್ಲದ ಶರಣನು ಮರ್ತ್ಯದ ಉಪಾಧಿ ಜಂಗಮಕ್ಕೆ ವಿಲಕ್ಷಣನೆಂದೆನೆಂಬುದರ್ಥ.

(೧೨). ಬಿರುಗಾಳಿ ಬೀಸಿ ಮರ ಮುರಿವಂತೆ ಸುಳುಹ ಸುಳಿಯದೆ, ತಂಗಾಳಿ ಪರಿಮಳದೊಳಗೂಡಿ ಸುಳಿವಂತೆ ಸುಳಿಯಬೇಕು. ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು. ಸುಳಿದಡೆ ನೆಟ್ಟನೆ ಭಕ್ತನಾಗಿ ನಿಲಬೇಕು. ಸುಳಿದು ಜಂಗಮವಾಗಲರಿಯದ ನಿಂದು ಭಕ್ತನಾಗಲರಿಯದ ಉಭಯ ಭ್ರಷ್ಟರನೇನೆಂಬೆ ಗುಹೇಶ್ವರಾ?

(೧೩). ಘನತರ ಚಿತ್ರದ ರೂಹ ಬರೆಯಬಹುದಲ್ಲದೆ, ಪ್ರಾಣವ ಬರೆಯಬಹುದೇ ಅಯ್ಯ? ದಿವ್ಯಾಗಮಂಗಳು ಹೇಳಿದ ಕ್ರಿಯಲು ದೀಕ್ಷೆಯ ಮಾಡಬಹುದಲ್ಲದೆ, ಭಕ್ತಿಯ ಮಾಡಬಹುದೇ ಅಯ್ಯ? ಪ್ರಾಣವಹ ಭಕ್ತಿ ತಾನೇ ನೀನು, ಈ ಗುಣವುಳ್ಳಲ್ಲಿ ನೀನಿಹೆ, ಇಲ್ಲದಲ್ಲಿ ನೀನಿಲ್ಲ, ಗುಹೇಶ್ವರಾ.

(೧೪). ತನ್ನಗಲ್ಲದಾದುದ ಘ್ರಾಣಸೋಂಕಿದಲ್ಲಿ, ಅಲ್ಲಿಯೇ ಕಡಿವೆನು. ತನಗಲ್ಲದಾದುದ ಕೈ ಮುಟ್ಟಿದಲ್ಲಿ, ಅಲ್ಲಿಯೇ ತೆಗೆವೆನು. ತನಗಲ್ಲದಾದುದ ಕಿವಿ ಕೇಳಿದಲ್ಲಿ, ಅಲ್ಲಿಯೇ ಗೂಂಟವ ಬಲಿವೆನು. ತನಗಲ್ಲದಾದುದ ನಾಸಿಕ ವಾಸಿಸಿದಲ್ಲಿ, ಅಲ್ಲಿಯೇ ದಸಿಯ ದಕ್ಕನೇರಿಸುವೆನು. ದೃಷ್ಟಿ ಅನುದಪ್ಪಿ ನೋಡಿದಲ್ಲಿ ಅಲ್ಲಿಯೇ ಕಿತ್ತಿಡುವೆನು. ಚಿತ್ತ ಅನುದಪ್ಪಿ ಮತ್ತೊಂದ ನೆನೆದಡೆ, ಆತ್ಮನನಲ್ಲಿಯೇ ಕಿತ್ತುಹಾಕುವೆನು. ಇದಕ್ಕೆ ನೀವೇ ಸಾಕ್ಷಿ. ಮನಕ್ಕೆ ಮನೋಹರ ಶಂಖೇಶ್ವರ ಲಿಂಗವು.

(೧೫). ಲಿಂಗ ತನುವಿಂಗೆ ಶೃಂಗಾರವಪ್ಪ ತೆರನದೆಂತೆಂದೊಡೆ, ಕಾಮ ಕ್ರೋಧ ಲೋಭ ಮೋಹಾದಿಗಳಲ್ಲಿ ತೆರಪುಗೊಡದಿಪ್ಪುದು. ಲಿಂಗವೇ ಅಂಗವಾಗಿ, ಧ್ಯಾನ ಧಾರಣ ನಿಜ ನಿವಾಸವಾಗಿ, ನಿಶ್ಚಯ ನಿಜತತ್ವವಾಗಿ ನಿಂದುದೇ ಆಭರಣವೆಂದನಂಬಿಗಚೌಡಯ್ಯ.

(೧೬). ಸಕಲ ಭೋಗ ವಿಲಾಸ ಲಿಂಗಕ್ಕೆಂದಲ್ಲಿ ತನ್ನಂಗಕ್ಕೆ ಶೃಂಗಾರ ಉಂಟೇ? ಶ್ರೀರುದ್ರಾಕ್ಷಿ, ವಿಭೂತಿ, ಸ್ವಸ್ಥಾನದಲ್ಲಿ ತನ್ನಂಗಕ್ಕೆ ಶ್ರಿಂಗಾರವೆಂದು ಮಾಡಿದಡೆ, ಆ ನಿಜಪದದಂಗ ಒಂದೂ ಇಲ್ಲೆಂದ ನಂಬಿಗಚೌಡಯ್ಯ.

(೧೭). ಪಾತಕ ಹೊಲೆ ಎಂದರಿದು ಬಿಟ್ಟಲ್ಲಿ, ಮತ್ತವಗುಣವ ಸ್ವೀಕರಿಸಬಹುದೇ? ಇವಲ್ಲವೆಂದು, ಬಲ್ಲತನವ ತಾನರಿದು, ಮತ್ತೊಬ್ಬರಲ್ಲಿ ಬೆರಿಸಬಹುದೇ? ಒಡದ ಹಂಚಿಂಗೆ, ಹಿಡಿದು ಬಿಟ್ಟ ವ್ರತಕ್ಕೆ ಮತ್ತಿವನೊಡಗೂಡಬಹುದೇ? ಇಂತೀ ಬಿಡುಗಡೆಯನರಿದಲ್ಲಿ ಅನುಸರಣೆಯ ಮಾಡಿದಡೆ, ಎನ್ನೊಡೆಯ ಈಶಾನ್ಯಮೂರ್ತಿಮಲ್ಲಿಕಾರ್ಜುನ ಲಿಂಗವಾದಡೂ, ಪುರಶರಣರಿಗೆ ದೂರ.

(೧೮). ತಮ್ಮ ಮಲವ ತಾವು ಮುಟ್ಟವು ಆವ ಜಾತಿಯು. ತ್ರಿವಿಧ ಮಲಕ್ಕೆ ಹೊರಗಾಗಿ, ಮತ್ತೆ ಮಲತ್ರಯಕ್ಕೆ ಬೀಳುವ ಮಲಭಾಂಡ ದೇಹಿಗೆ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ ಎಂದೆ.

(೧೯). ಅಂಗ ಸುಖಿಗೆ, ಲಿಂಗಸುಖವಳವಡದು. ಲಿಂಗ ಸುಖಿಗೆ ಅಂಗ ಸುಖವಳವಡದು. ವಾಗದ್ವೈತ, ಕ್ರಿಯಾದ್ವೈತ, ಭಾವಾದ್ವೈತ ಇಂತೀ ತ್ರಿವಿಧಾದ್ವೈತ. ಲಿಂಗ ಸುಖ ಸಾಹಿತ್ಯವಾದಲ್ಲಿ, ನರಕವಿಲ್ಲ, ಕರ್ಮವಿಲ್ಲ, ಭವವಿಲ್ಲ.

ಘಲವಿಲ್ಲ, ಪರವಿಲ್ಲ, ಇಹವಿಲ್ಲ, ಪರವಿಲ್ಲ. ಸೌರಾಷ್ಟ್ರಸೋಮೇಶ್ವರ, ನೀಸಾಕ್ಷಿಯಾಗಿ, ಅಂಗಸುಖಿಗೆ ಲಿಂಗಸುಖ ದೊರಕೊಳ್ಳದು.

(೨೦). ಉಚ್ಚೆಯ ಜವುಗಿನ ಬಚ್ಚಲ ತಂಪಿನಲ್ಲಿ ನಿಚ್ಚಕ್ಕೆನಿಚ್ಚ ಹೊರಳುವ ಹಂದಿಯಂತೆ, ಶಿವನಿಚ್ಚೆಯನರಿಯದೆ, ಮಾತನಾಡುವರ ಮೆಚ್ಚುವನೇ ಗುಹೇಶ್ವರಲಿಂಗವು?

(೨೧). ಕುಲಸ್ವಾಮಿ ನಿನ್ನಿಂದ ಹೆಜ್ಜೆಯಲ್ಲದೆ ನಾನೊಂದು ಹೆಜ್ಜೆಯನಿಡೆನಯ್ಯ. ಎನಗೊಂದು ಹೆಜ್ಜೆ ಇಲ್ಲ. ನಿನ್ನ ಹೆಜ್ಜೆ ಎನ್ನ ಹೆಜ್ಜೆ, ಒಂದಾದ ಭೇದವ ಜಗದನ್ಯಾಯಿಗಳೆತ್ತ ಬಲ್ಲರೈ ರಾಮನಾಥಾ?

(೨೨). ಪರುಷ ಸೋಂಕಿಯೂ, ಲೋಹ ಶುದ್ಧವಾಗದಿದ್ದರೆ, ಆ ಪರುಷದ ಗೊಡವೆ ಏತಕಯ್ಯ? ಅಗ್ನಿಯು ಸೋಂಕಿ, ಕಾಷ್ಠದ ಗುಣವಳಿಯದಿದ್ದರೆ ಅಗ್ನಿಯ ಗೊಡವೆ ಏತಕಯ್ಯ? ಗರುಡನಿರ್ದು ಸರ್ಪನ ಭಯ ಹಿಂಗದಿದ್ದರೆ, ಆ ಗರುಡನ ಗೊಡವೆ ಏತಕಯ್ಯ? ವಜ್ರಾಂಗಿಯ ತೊಟ್ಟು, ಬಾಣದ ಭಯ ಹಿಂಗದಿದ್ದರೆ, ಆ ವಜ್ರಾಂಗಿಯ ಗೊಡವೆ ಏತಕಯ್ಯ? ಆನೆಯನೇರಿ, ಶ್ವಾನನ ಭಯ ಹಿಂಗದಿದ್ದರೆ, ಆ ಆನೆಯ ಗೊಡವೆ ಏತಕ್ಕೆ? ಜ್ಯೋತಿ ಇದ್ದು ಕತ್ತಲೆಯು ಹರಿಯದಿದ್ದರೆ, ಆ ಜ್ಯೋತಿಯು ಗೊಡವೆ ಏತಕಯ್ಯ? ಅಂಗದ ಮೇಲೆ ಚಿದ್ಘನಲಿಂಗವ ಧರಿಸಿದ್ದು, ತನು ಮನ ಅವಗುಣವ ಹಿಂಗದಿದ್ದರೆ, ಆ ಲಿಂಗದ ಗೊಡವೆ ಏತಕಯ್ಯ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ?

(೨೩). ತಾನರಿಯದೆ ಮಾಡಿದ ದೋಷಕ್ಕೆ ಘೋರವಿಲ್ಲ. ಅದು ಜಗದ ಹುದುಗು. ತಾನರಿದು, ಅಲ್ಲ ಅಹುದೆಂದು ಎಲ್ಲರಿಗೆ ಹೇಳಿ, ಪರಧನದಲ್ಲಿ ಪರಸ್ತ್ರೀಯರಲ್ಲಿ, ಅನ್ಯರ ನಿಂದೆಯಲ್ಲಿ, ವ್ರತಾಚಾರ ಭಂಗಿತರಲ್ಲಿ, ಇದನರಿತು ಅನುಸರಣೆಯ ಮಾಡಿದಡೆ, ಕುಂಭಿನೀನರಕದಲ್ಲಿ ಹಿಂಗದಿರ್ಪನು, ಕಾಲಾಂತಕ ಭೀಮೇಶ್ವರ ಲಿಂಗಕ್ಕೆ ಸ್ವಪ್ನದಲ್ಲಿಯೂ ದೂರಸ್ಥನು.

# ಸತ್ಯವನ್ನು ನುಡಿ.

(೧). ದೇವಲೋಕ ಮರ್ತ್ಯಲೋಕವೆಂಬುವು ಬೇರಿಲ್ಲ ಕಾಣಿರೋ. ಸತ್ಯವ ನುಡಿವುದೇ ದೇವಲೋಕ. ಅಸತ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ. ಅನಾಚಾರವೇ ನರಕ. ಇದಕ್ಕೆ ನೀವೇ ಪ್ರಮಾಣು ಕೂಡಲ ಸಂಗಮದೇವಾ.

(೨). ಹೊಲೆಯರ ಭಾವಿಯಲ್ಲೊಂದು ಎಲುಸಟ್ಟಿದ್ದರೆ ಹೊಲೆ ಹೊಲೆ ಎಂಬುದೀ ಲೋಕವೆಲ್ಲ. ಹಲವೆಲುವಿದ್ದ ಬಾಯಲ್ಲಿ ಅಲ್ಲದುದ ನುಡಿದರೆ, ಅದು ಹೊಲೆಯರ ಭಾವಿಂದ ಕರಕಷ್ಟ ಕಾಣಾ ರಾಮನಾಥಾ.

(೩). ಸತ್ಯದಲ್ಲಿ ನಡೆವುದು ಶೀಲ. ಸತ್ಯದಲ್ಲಿ ನುಡಿವುದು ಶೀಲ. ಸಜ್ಜನ ಸದಾಚಾರದಲ್ಲಿ ವರ್ತಿಸಿ, ಸತ್ಯವನರಿವುದೇ ಶೀಲ ಕಾಣಿರೋ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೪). ಜಂಬೂದ್ವೀಪ ನವಖಂಡ ಪೃಥ್ವಿಯೊಳಗೆ ಕೇಳಿರಣ್ಣಾ ಎರಡಾಳಿನ ಭಾಷೆಯ ? ಕೊಲುವೆನೆಂಬ ಭಾಷೆ ದೇವನದು, ಗೆಲುವೆನೆಂಬ ಭಾಷೆಭಕ್ತನದು. ಸತ್ಯವೆಂಬ ಕೂರಲಗನೇ ಕಳೆದುಕೊಂಡು, ಸದ್ಭಕ್ತರು ಗೆದ್ದರು ಕಾಣಾ ಕೂಡಲಸಂಗಮದೇವಾ.

(೫). ಸುಖವಿಲ್ಲ ಸೂಳೆಗೆ. ಪಥವಿಲ್ಲ ಶೀಲಕ್ಕೆ. ಮಾಡಲಾಗದು ನೇಮವ. ನೋಡಲಾಗದು ಶೀಲವ. ಸತ್ಯವೆಂಬುದೇ ಸುಶೀಲ ಗುಹೇಶ್ವರಲಿಂಗ ನರಿಯಬಲ್ಲವಂಗೆ.

(೬). ದಿಟವ ನುಡಿವುದು. ನುಡಿದಂತೆ ನಡೆವುದು. ಹುಸಿಯು ನಡೆದು ತಪ್ಪುವ ಪ್ರಪಂಚಿಯನೊಲ್ಲ ಕೂಡಲಸಂಗಮದೇವಾ.

(೭). ಹೆಣನ ಕಂಡರೆ, ನಾಯಿ ಕಚ್ಚದಲ್ಲದೆ ಮಾಣ್ಬುದೇ ? ಹಣವ ಕಂಡರೆ, ಮನಕರಗದಲ್ಲದೆ ಮಾಣ್ಬುದೇ ? ಬಿಸಿಯ ಕಂಡರೆ, ಬೆಣ್ಣೆ ಕರಗದಲ್ಲದೆ ಮಾಣ್ಬುದೇ ? ಹುಸಿಯ ಕಂಡರೆ, ಲೋಕಮೆಚ್ಚುವದು ನೆಚ್ಚುವದು, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೮). ಆಟಮಟವೇ ಆಧಾರ, ಕಪಟವೇ ಸದಾಚಾರ, ಕುಟಿಲವೇ ಘನವಾಯಿತ್ತು ಕೆಲಬರಿಗೆ. ಹುಸಿಮುಸಕವೇ ವರ್ತನವಾಯಿತ್ತು ಕೆಲಬರಿಗೆ. ಯಂತ್ರ ತಂತ್ರವೇ ವ್ಯವಹಾರವಾಯಿತ್ತು ಕೆಲಬರಿಗೆ. ಸಟೆಯ ಸಾಗರದೊಳಗೆ ತೇಂಕಾಡುತಿರ್ದರು ಕೆಲಬರು, ಸಕಳೇಶ್ವರ ದೇವರ ನಂಬಲರಿಯದವರೆಲ್ಲರು.

(೯). ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು, ಲಕ್ಷಕ್ಕೊಮ್ಮೆ ನುಡಿಯಲಾಗದು, ಕೋಟಿಗೊಮ್ಮೆ ನುಡಿಯಲಾಗದು. ಸುಡಲವಂದಿರೊಡತನ. ಮಾರಿಹೊರಲಿ. ಗುಹೇಶ್ವರಾ ನಿಮ್ಮ ಶರಣರಲ್ಲದವರೊಡನೆ ಬಾಯ್ದೆರೆಯಲಾಗದು.

(೧೦). ಸಟೆ ದಿಟವೆಂಬುವೆರಡುವಿಡಿದು ನಡೆವುದೀ ಲೋಕವೆಲ್ಲವು. ಸಟೆ ದಿಟವೆಂಬುವೆರಡುವಿಡಿದು ನಡೆವ ಲೋಕದೊಡನೆ ಶರಣನು. ಗುರುಲಿಂಗ ಜಂಗಮದಲ್ಲಿ ಸಟೆಯ ಬಳಸಿದಡೆ, ಆತನು ತ್ರಿವಿಧಕ್ಕೆ ದ್ರೋಹಿ, ಅಘೋರ ನರಕಿ, ಉಂಬುದೆಲ್ಲ ಕಿಲ್ಬಿಷ, ತಿಂಬುದೆಲ್ಲ ಅಡಗು, ಕುಡಿವುದೆಲ್ಲ ಸುರೆ. ಹುಸಿ ಎಂಬುದು ಹೊಲೆ. ಶಿವಭಕ್ತಂಗೆ ಹುಸಿ ಎಂಬುದುಂಟೇ ಅಯ್ಯ? ಹುಸಿಯನಾಡಿ, ಲಿಂಗವ ಪೂಜಿಸಿದಡೆ ಹೊಳ್ಳಬಿತ್ತಿ, ಫಲವನರಸುವಂತೆ ಕಾಣಾ ಚನ್ನಮಲ್ಲಿಕಾರ್ಜುನಾ.

(೧೧). ಹುಸಿಯಂಕುರಿಸಿತ್ತು ಹೊಲೆಯನಲ್ಲಿ. ಹುಸಿ ಎರಡೆಲೆಯಾಯಿತ್ತು ಮಾದಿಗನಲ್ಲಿ. ಹುಸಿ ನಾಲ್ಕೆಲೆಯಾಯಿತ್ತು ಸಮ್ಮಗಾರನಲ್ಲಿ. ಹುಸಿ ಆರೆಲೆಯಾಯಿತ್ತು ಅಸಗನಲ್ಲಿ. ಹುಸಿ ಎಂಟೆಲೆಯಾಯಿತ್ತು ವ್ಯವಹಾರಿಯಲ್ಲಿ. ಹುಸಿ ಸಸಿಯಾಯಿತ್ತು ಹಾದರಿಗನಲ್ಲಿ. ಹುಸಿ ಗಿಡವಾಯಿತ್ತು ಮದ್ಯಪಾನಿಯಲ್ಲಿ. ಹುಸಿ ಮರನಾಯಿತ್ತು ಜೂಜುಗಾರನಲ್ಲಿ. ಹುಸಿ ಹೂವಾಯಿತ್ತು ಡೊಂಬನಲ್ಲಿ. ಹುಸಿ ಕಾಯಾಯಿತ್ತು ಅಕ್ಕಸಾಲಿಗನಲ್ಲಿ. ಹುಸಿ ಹಣ್ಣಾಯಿತ್ತು ಸೂಳೆಯಲ್ಲಿ. ಹುಸಿ ಹಣ್ಣಾಗಿ ತೊಟ್ಟು ಬಿದ್ದಿತ್ತು ಅರಸನಲ್ಲಿ. ಇಂತೀ ಹುಸಿಯ ನುಡಿವವರಿಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ. ಪಾದೋದಕಪ್ರಸಾದವಿಲ್ಲವಾಗಿ, ಅವರಿಗೆ ಮೋಕ್ಷವಿಲ್ಲಾದ ಕಾರಣ, ನಮ್ಮ ಕೂಡಲಚನ್ನಸಂಗಯ್ಯನ ಶರಣರು ಹುಸಿಯ ಬಿಟ್ಟು ಕಳೆದು ನಿಜಲಿಂಗೈಕ್ಯರಾದರು.

## ಕಳವು ಮಾಡಬೇಡ.

(೧). ಬಟ್ಟೆಯಲ್ಲಿ ಹೊನ್ನುವಸ್ತ್ರ ಬಿದ್ದಿದ್ದರೆ, ನಾನು ಕೈಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಅದೇನು ಕಾರಣವೆಂದಡೆ, ನೀವಿಕ್ಕಿದ ಭಿಕ್ಷೆಯಲ್ಲಿಪ್ಪೆನಾಗಿ. ಇಂತಲ್ಲದೆ ನಾನು ಅಳಿಮನವ ಮಾಡ್ಡಿ, ಪರದ್ರವ್ಯಕ್ಕೆ ಆಶೆಮಾಡಿದೆ ನಾದಡೆ, ನೀನಾಗಲೇ ಎನ್ನ ನರಕದಲ್ಲದ್ದಿ, ನೀನೆದ್ದು ಹೋಗಾ, ಶಂಭುಜಕ್ಕೇಶ್ವರಾ.

(೨). ತೊರೆಯು ಮೀವಣ್ಣಗಳಿರಾ, ತೊರೆಯಿರೋ ಪರಧನವ! ಪರದ್ರವ್ಯವ ಬಿಡದೆ ಹೋಗಿ ತೊರೆಯಲ್ಲಿ ಮಿಂದರೆ, ಆ ತ್ತೊರೆ ಎಲ್ಲಾ ಬರುದೊರೆ ಕಂಡಯ್ಯಾ! ಕಳವ ತೊರೆದು ಮಿಂದರೆ, ಒಲಿದು ಕೂಡಿಕೊಂಬ ನಮ್ಮ ಕೂಡಲ ಸಂಗಮದೇವಾ.

(೩). ಕುಳಿತು ಲಿಂಗವ ಪೂಜಿಸಿ, ಅಲ್ಲದಾಟವನಾಡುವರಯ್ಯಾ! ಬೆಳ್ತಿನ ಮರೆಯಲ್ಲಿ ಹುಲ್ಲೆಗಂಬ ತೊಡುವಂತೆ ಲೋಗರರ್ಥವ ಕಳುವ ಕಳ್ಳರ ಕಯ್ಯ ಪೂಜೆಯನೊಲ್ಲ ನೋಡಾ ನಮ್ಮ ಕೂಡಲಸಂಗಮದೇವಾ.

(೪). ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲಿ, ನಾಳೆ ಆವಿನ ಬೆನ್ನ ಮೇಲೆ ಹರಿಯಲಿ. ಅದೇಕಯ್ಯಾ, ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲ ಸಂಗಮದೇವರುಳ್ಳನ್ನಕ್ಕರ ಬಿಜ್ಜಳನ ಭಂಡಾರ ಎನಗೇಕಯ್ಯಾ?

---

## ಜೀವಹಿಂಸೆ ಮಾಡಬೇಡ.

(೧). ದಯವಿಲ್ಲದ ಧರ್ಮವದಾವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯಾ. ಕೂಡಲಸಂಗಮದೇವ ರಂತಲ್ಲದೊಲ್ಲನಯ್ಯಾ.

(೨). ಬೆಟ್ಟದ ಮೇಲಣ ಗಿಡಗಳು ಬೆಟ್ಟವ ಮುಟ್ಟದಂತಿಪ್ಪವೇ? ವಿವರಿಸಿ ನೋಡಿದಡೆ, ಸೃಷ್ಟಿಯೊಳಗಣ ಪ್ರಾಣಿಗಳು ಪರಮನ ಮುಟ್ಟದಿಪ್ಪವೇ? ಕಷ್ಟರು ಬೇಡವೆಂದು ಬಿಟ್ಟೋಡುತಿಪ್ಪ ಪ್ರಾಣಿಗಳನಟ್ಟಿ, ಹಿಡಿದು ಕೊಂದರೆ,

ಪ್ರತಿಷ್ಠಿಸಿದೀಶ್ವರನಿಕ್ಕದಿರ್ಪನೇ ನರಕದಲ್ಲಿ? ಸಕಲಪ್ರಾಣಿಗಳಲ್ಲಿ ಮೇಲಾರೈಕೆ ನಮ್ಮ ಸಕಳೇಶ್ವರನಲ್ಲದೆ ಮತ್ತೊಬ್ಬರುಂಟೇ?

(೩). ನಾನೊಂದು ಸ್ಸುರಗಿಯನೇನೆಂದು ಹಿಡಿವೆನು? ಏನಕಿತ್ತೇನ ನಿರಿವೆನು? ಜಗವೆಲ್ಲಾ ನೀನಾಗಿಪ್ಪೆ, ಕಾಣಾ ರಾಮನಾಥಾ.

(೪). ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ, ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ! ತನ್ನ ಮನೆಯಲೊಂದು ಶಿಶು ಸತ್ತರೆ, ಅದಕ್ಕೆ ಮರುಗುವಂತೆ, ಅವಕೇಕೆ ಮರುಗನು? ಅಂತೆಂದೊಡೆ, “ ಸ್ವಾತ್ಮನಾಮಿವೇತರಶ್ಚೈವ ದೃಷ್ಟ್ವಾಪ್ಯನಿತ್ಯಾದಿ ಭಿನ್ನತೆ। ಸರ್ವಂಚಿಜ್ಜ್ಯೋತಿ ದೇವೇತಿ ಯಃ ಪಶ್ಯತಿ ಸಪಶ್ಯತಿ। ” ಎಂದುದಾಗಿ ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು, ಜೀವಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯ.

(೫). ಲಿಂಗದ ಗುಣದಿಂದ ಲಿಂಗೈಕ್ಯವೆಂಬರು. ಲಿಂಗದ ಗುಣದಿಂದ ಲಿಂಗೈಕ್ಯವಿಲ್ಲ ನೋಡಾ. ಭಾವಾದ್ವೈತಂ ಪರಹಿತಂ ಕೂಡಲ ಚನ್ನಸಂಗಾ ಲಿಂಗೈಕ್ಯವು.

(೬). ಒಳಗೆ ನೋಡಿಹೆನೆಂದರೆ, ಒಳಗೆ ನೋಡಲಿಲ್ಲ. ಹೊರಗೆ ನೋಡಿಹೆನೆಂದರೆ, ಹೊರಗೆ ನೋಡಲಿಲ್ಲ. ಜ್ಞಾನವೆಂತುಟೋ? ಅಜ್ಞಾನವೆಂತುಟೋ? ಒಲೆಯ ಬೀಸಿ, ಕೊಲುವರ ಮನೆಯಲ್ಲಿ ಸತ್ತರೆ, ಏನು ಅಳುವಿರೋ ಗುಹೇಶ್ವರಾ?

**ಅರ್ಥ**:— ಅಂತರಂಗದಲ್ಲಿ ಅರಿವನರಿಯದೆ, ಬಹಿರಂಗದಲ್ಲಿ ಕ್ರಿಯೆಯನ್ನು ಆಚರಿಸದೆ, ಮತ್ತೆ ಲಿಂಗದ ಕರುಣ ಎನಗಿಲ್ಲವೆಂಬ ಕಿಂಕುರ್ವಾಣವು ಪ್ರಾಣಿಗಳ ಕೊಲ್ಲುವರ ಪುತ್ರಶೋಕವು ಒಂದೇ ಪರಿ ಎಂಬುದೀ ವಚನದ ತಾತ್ಪರ್ಯಾರ್ಥ.

(೭). ಎಲ್ಲವನರಿವಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು ಭೇದ ಉಂಟೇ? ಶಾಸ್ತ್ರವನೆಲ್ಲ ಕಲಿತಲ್ಲಿ ಗೆಲ್ಲಸೋಲಕ್ಕೆ ಹೊರಬೇಕೆಂಬುದು, ಕಡೆಯಲ್ಲಿ ಒಂದು ಸೊಲ್ಲುಂಟೆ? ಪುರಾಣವನೆಲ್ಲವನೋದಿದಲ್ಲಿ, ಸರ್ವಜೀವವ ಕೊಲ್ಲು, ಕೊರೆ, ಎಂಬುದೊಂದು ದಳ್ಳುರಿಯುಂಟೇ? ಶ್ರುತಿಯ ಕೇಳುವಲ್ಲಿ, ಸ್ಮೃತಿಯ ನಂಗೀಕರಿಸುವಲ್ಲಿ, ಸರ್ವಹತವ ಮಾಡಬೇಕೆಂಬುದೊಂದು ಗತಿಯುಂಟೇ?

ಇಂತೀ ಆತ್ಮನಲ್ಲಿ ಸರ್ವಭೂತಹಿತವುಳ್ಳವಂಗೆ, ಆತ ಅತೀತ, ಸ್ವಯಂವಸ್ತು ದಸರೇಶ್ವರಲಿಂಗವು.

**ಅರ್ಥ**:—ಸಮಸ್ತವೇದಂಗಳರ್ಥವ ತಿಳಿದಲ್ಲಿ, ಅಂತ್ಯದಲ್ಲಿ ಜೀವ ಹಿಂಸೆಯ ಮಾಡಬೇಕೆಂಬುದೊಂದು ವೇದದ ಕಡೆಯಲ್ಲಿ ಹೇಳುವದುಂಟೇ? ಷಟ್‌ಶಾಸ್ತ್ರಂಗಳನೆಲ್ಲ ಅಭ್ಯಾಸಿಸಿದಲ್ಲಿ, ತನ್ನ ಮಾತಗೆಲಿಸಿಕೊಂಡು ಅನ್ಯರ ಮಾತ ಗೆಲಿ, ಸೋಲಿಸಬೇಕು, ಎಂಬುದೊಂದು ಅಂತ್ಯದಲ್ಲಿ ಒಂದು ನುಡಿಯ ಹೇಳುವ ದುಂಟೇ? ಅಷ್ಟಾದಶಪುರಾಣಂಗಳೆಲ್ಲವ ಅಭ್ಯಾಸಿಸಿದಲ್ಲಿ ಸಮಸ್ತ ಪ್ರಾಣಿಗಳ ಸಂಹರಿಸು, ಕೈಕಾಲು ಛೇದಿಸು, ಎಂಬುದೊಂದು ಸಂಹಾರವ ಹೇಳುವದುಂಟೇ? ಶೃತಿವಾಕ್ಯವ ಆಲಿಸುವಲ್ಲಿ ಮನುವಾಕ್ಯವ ಒಡಲುಮಾಡಿಕೊಂಡು ಚರಿಸುವಲ್ಲಿ, ಸಮಸ್ತ ಪ್ರಾಣಿಗಳ ಲಯವ ಮಾಡಬೇಕೆಂಬುದೊಂದು ಮಾರ್ಗವ ಹೇಳುವ ದುಂಟೇ? ಇಲ್ಲ. ಅದರಲ್ಲೆಲ್ಲ ಸರ್ವಜೀವದಯಾಪಾರತ್ವವನೇ ಹೇಳುತ್ತಿದ್ದಿತ್ತಾಗಿ. ಈ ಪ್ರಕಾರದಿಂದ ತನ್ನಾತ್ಮನಲ್ಲಿ ಸಮಸ್ತ ಪ್ರಾಣಿಗಳ ಮೇಲೆ ದಯವುಳ್ಳಾತನು ವೇದಶಾಸ್ತ್ರಾಗಮಪುರಾಣಂಗಳನೆಲ್ಲ ಮೀರಿ ತೋರಲ್ಪಟ್ಟಾತನು, ಶುದ್ಧ ಸಿದ್ಧ ಸ್ವಯಂಭುವಾದ ಶಿವನೆಂಬುದರ್ಥ.

(೮). ನುಡಿಯಲ್ಲಿ ಕಿಂಕರತ್ವವನರಿದು, ಕರವಬೀಸುವಲ್ಲಿ ತುಷಾರ ಕೀಟವನರಿದು, ಅಡಿ ಇಡುವಲ್ಲಿ ಪೊಡವಿಯಲ್ಲಿ ಹೊರಹೊಮ್ಮಿದ ಜೀವನ ಚೇತನಾದಿಗಳನರಿದು, ಮತ್ತೆ ಗಿಡವ ಹಿಡಿವಲ್ಲಿ ಮತ್ತೊಂದ ಒಡಗೂಡುವಲ್ಲಿ ಒಡಗೂಡಿಬಿಡುವಲ್ಲಿ, ಸರ್ವದಯಕ್ಕೆ ಪುದಿಪುಚ್ಚವಿಲ್ಲದಿರಬೇಕು. ಇಂತೀ ಸಡ ಗರದ ಚಿತ್ತ ದಸರೇಶ್ವರ ಲಿಂಗವನೊಡಗೂಡುವ ಭಕ್ತಿ.

**ಅರ್ಥ**:—ಒಬ್ಬರ ಕೂಡೆ ಪ್ರಸಂಗವ ಮಾಡುವಲ್ಲಿ, ಅವರು ಕರ್ತೃ, ತಾ ಭೃತ್ಯನೆಂದರಿದು ಮಾತನಾಡುವದು. ದಾರಿಯ ನಡೆವಲ್ಲಿ, ಹಸ್ತವ ಹಿಂದಕ್ಕೆ ಮುಂದಕ್ಕೆ ಬೀಸುವಲ್ಲಿ, ನೊರಜು ಮೊದಲಾದ ರೆಕ್ಕೆಯ ಹುಳಗಳು ನೊಂದಾವು ಸತ್ತಾವು ಎಂದರಿದು ನಡೆವುದು. ಹೆಜ್ಜೆ ಇಡುವಲ್ಲಿ, ಭೂಮಿಯಲ್ಲಿ ಹೊರಹೊರಟು ಬಂದ ಜೀವರುಗಳ ಚೈತನ್ಯವುಳ್ಳ ಇರುಹೆ ಮೊದಲಾದ ಪ್ರಾಣಿಗಳು ನೊಂದಾವು ಸತ್ತಾವೆಂದರಿದು ಮೆಲ್ಲಗೆ ಹೆಜ್ಜೆ ಇಡುವದು. ಮರಳಿ ಪುಷ್ಪದ ಗಿಡವ ಹಿಡಿವಲ್ಲಿ, ಬಳಿಕ ಒಂದು ಕೊನೆಯ ಒಡನೆ ಹಿಡಿವಲ್ಲಿ, ಆ ಕೊನೆಯಿಂದ

ಮತ್ತೊಂದು ಕೊನೆಯ ಹಿಡಿದು, ಮೊದಲು ಹಿಡಿದ ಕೊನೆಯ ಬಿಡುವಲ್ಲಿ, ಮೆಲ್ಲನೇ ಬಿಡುವದು. ಸರ್ವ ಜೀವದಯಾಪಾರತ್ವಕ್ಕೆ ಹೆಚ್ಚುಕಡಿಮೆ ಇಲ್ಲದೆ ಒಂದೇ ಸಮವಾಗಿ ಚರಪ್ರಾಣಿಗಳಲ್ಲಿರ್ದ ದಯವೇ ಅಚರ ಪ್ರಾಣಿಗಳಲ್ಲಿ ಆ ದಯವೇ ಹಿಡಿವ ಬಿಡುವ ಮೊನೆಗಳಲ್ಲೆಲ್ಲ ಇರಬೇಕು. ಇಂತೀ ಸರ್ವಜೀವ ದಯಾಪಾರತ್ವ ಸಂಭ್ರಮವನುಳ್ಳ ನೆನಹೇ ಲಿಂಗದಲ್ಲಿ ಸಮರಸವಾಗುವ ಶ್ರದ್ಧೆಯಾಗಿಪ್ಪುದೆಂಬರ್ಥ.

(೯). ಸರ್ವ ಜೀವ ನಿನ್ನ ಹಾಹೆ ಎಂಬೆನೆ? ಅದು ಭಿನ್ನ ಭಾವ. ತ್ರಿಗುಣಾತ್ಮಕರುಂಟು. ಅವರು ನಿನಗನ್ಯರೆಂಬೆನೆ? ಆ ತ್ರಿಗುಣಾತ್ಮಕರು ನಿನ್ನ ತಿಲಾಂಶ. ಇಂತೀ ಸರ್ವಭೂತಕ್ಕೆ ನಿನ್ನ ದಯೆ. ಎನಗಿದೇಕೆ? ಗೆಲ್ಲ ಸೋಲವೆಂಬ ಖುಲ್ಲತನ ಎಲ್ಲ ಜೀವಕ್ಕೂ ಸರಿ. ಅರುಣೋದಯದಂತೆ, ಎನ್ನ ಚಿತ್ತದಲ್ಲಿ ಸರ್ವಜೀವಕ್ಕೆಲ್ಲಕ್ಕೂ ದಯವಮಾಡು ಚನ್ನದಸರೇಶ್ವರಲಿಂಗಾ.

**ಅರ್ಥ:—** ಸಮಸ್ತ ಪ್ರಾಣಿಗಳು ನಿನ್ನ ಸೂತ್ರದಿಂದ ಚೇಷ್ಟಿಸುವ ಬೊಂಬೆಗಳೆಂಬೆನೆ? ಹಾಂಗೆಂಬುವದು ಖಂಡಿತಭಾವ. ಆ ಪ್ರಾಣಿಗಳೆಲ್ಲವನು ಉತ್ಪತ್ತಿಸ್ಥಿತಿಲಯುಗಳಿಂದಾಡಿಸುವ, ಗುಣತ್ರಯ ಸ್ವರೂಪವಾದ ಬ್ರಹ್ಮ, ವಿಷ್ಣು, ರುದ್ರರೆಂಬ ತ್ರಿದೇವತೆಗಳುಂಟು. ಆ ತ್ರಿದೇವತೆಗಳು ನಿನಗೆ ಭಿನ್ನವೆಂಬೆನೆ? ಆ ಗುಣತ್ರಯ ಸ್ವರೂಪವಾದ ಬ್ರಹ್ಮ, ವಿಷ್ಣು, ರುದ್ರರು ಪರಶಿವನ ಸಮುದ್ರದಲ್ಲಿ ಒಂದು ತುಂತುರ್ವನಿಗಳಾಗಿದ್ದರು. ಇಂತೀ ಸಮಸ್ತ ಪ್ರಾಣಿಗಳಲ್ಲಿ ನಿನ್ನ ಕೃಪೆಯೊಂದೇ ಸರಿ. ಎನಗೆ ಸರ್ವಜೀವದ ದಯಾಪಾರತ್ವವೇಕೆ? ತಾ ಗೆದ್ದು ಅನ್ಯರ ಸೋಲಿಸಬೇಕೆಂಬ ಕೆಡುಕತನ ಎಲ್ಲ ಪ್ರಾಣಿಗಳಲ್ಲಿ ಒಂದೇ ಸಮವಾಗಿಪ್ಪದು. ಸೂರ್ಯೋದಯವಾದಲ್ಲಿ, ಆ ಕಿರಣ ಉತ್ತಮಾಧಮ ಪ್ರಾಣಿಗಳೆನ್ನದೆ, ಶುಚಿ ಅಶುಚಿ ಎನ್ನದೆ ಹೇಗೆ ಸಮಸ್ತರಲ್ಲಿಯೂ ಬಿಂಬಿಸುವದು ಹಾಗೆ ಎನ್ನ ಮನದಲ್ಲಿ ಸಮಸ್ತ ಪ್ರಾಣಿಗಳು ತಥ್ಯ, ಮಿಥ್ಯ, ರಾಗ, ದ್ವೇಷಂಗಳೊಡನೆ ಕೂಡಿ ಚರಿಸುತ್ತಿದ್ದರೂ, ಎನಗಾಗುಣವಿಲ್ಲದೆ ಆ ಜೀವಂಗಳೊಳಗೆಲ್ಲ ಕೃಪೆಯ ಮುಂದುಗೊಂಡಿರುವದನೇ ದಯಮಾಡೆಂಬುದರ್ಥ.

## ಎಲ್ಲರೂ ಸಮಾನರೆಂದು ಭಾವಿಸು.

(೧). ನಾನು ಘನ ತಾನು ಘನವೆಂಬ ಹಿರಿಯರುಂಟೇ ಜಗದೊಳಗೆ? ಹಿರಿಯರ ಹಿರಿಯತನದಿಂದೇನಾಯಿತ್ತು? ಹಿರಿದು ಕಿರಿದೆಂಬ ಶಬ್ದವಡಗಿದರೆ, ಆತನೇ ಶರಣ ಗುಹೇಶ್ವರಾ. ೧೬೬.

(೨). ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೇ? ಒಡೆಯನ ಪ್ರಾಣಕ್ಕೆ ಇದ್ದಿತ್ತೆಯಜ್ಞೋಪವೀತ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ ಕಿಡಿಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥಾ?

**ಅರ್ಥ**:—ಸ್ತ್ರೀಯಳ ಅಂಗದಲ್ಲಿ ಕಚಕುಚಂಗಳಿರ್ದ ಹಾಗೆ, ಅವಳ ಪ್ರಾಣಲಿಂಗಕ್ಕೆ ಕಚಕುಚಂಗಳುಂಟೇ? ಇಲ್ಲ. ವಿಪ್ರನಂಗದಲ್ಲಿ ಶಿಖಾಯಜ್ಞೋಪವೀತ ಇದ್ದ ಹಾಗೆ, ಅವನ ಪ್ರಾಣದಲ್ಲಿ ಶಿಖಾಯಜ್ಞೋಪವೀತಂಗಳುಂಟೇ? ಇಲ್ಲ. ಊರಿಂದ ಹೊರಗಿರ್ದ ಹೊಲೆಯನು ಕಯ್ಯಲ್ಲಿ ಒಂದಾಯುಧವ ಹಿಡಿದ ಹಾಗೆ, ಆತ್ಮನಲ್ಲಿ ಹಿಡಿದಿಪ್ಪನೇ? ಇಲ್ಲ ಪರಶಿವನು ತನ್ನಂಶವಾದ ಆತ್ಮಂಗೆ ಶರೀರ ಸಂಬಂಧವ ಮಾಡಲು, ಹೆಣ್ಣೆಂದು ಗಂಡೆಂದು ವಿಪ್ರನೆಂದು ಹೊಲೆಯನೆಂದು ನೂರೊಂದುಕುಲ ಹದಿನೆಂಟು ಜಾತಿಯನುಂಟುಮಾಡಿ ಒಬ್ಬರಿಗೊಬ್ಬರು ಹೋರಾಡುವ ಬಂಧನವ ಈ ಜಗದ ಅಚೇತನವಾದ ಜೀವರು ಎತ್ತ ಬಲ್ಲರು? ಅರಿಯರೆಂಬುದರ್ಥ.

(೩). ಸರ್ವವನರಿದಲ್ಲಿ, ಸರ್ವಜ್ಞನಾದಲ್ಲಿ, ಇದಿರೆಲ್ಲ ತನ್ನಲ್ಲಿ, ತಾನೆಲ್ಲ ಇದಿರಲ್ಲಿ, ತನ್ನ ಭಿನ್ನಭಾವ, ಅನ್ಯರಲ್ಲಿ ತೋರಿ, ಆ ಗುಣ ತನ್ನನೆ ಅನ್ಯವೆನಿಸುವುದು. ತನ್ನಯ ಶಾಂತಿ ಅನ್ಯರಲ್ಲಿ ತೋರಿ, ಅಲ್ಲಿ ಭಿನ್ನಭಾವವಿಲ್ಲದಿರೆ, ಅವರನ್ಯರಲ್ಲ ಎಮ್ಮವರೆಂಬರು. ಅದು ತನ್ನ ಗುಣ, ಅನ್ಯವಿಲ್ಲ ಎಂಬುದನರಿದು ತನ್ನೊಪ್ಪ ದರ್ಪಣದಲ್ಲಿ ತೋರುವಂತೆ. ಇದಕ್ಕೆ ಕರ್ಕಶವಿಲ್ಲ ದಸರೇಶ್ವರ ಲಿಂಗವನರಿವುದಕ್ಕೆ.

**ಅರ್ಥ**:—ಸಮಸ್ತವು ಶಿವಸ್ವರೂಪವೆಂದು ತಿಳಿದಲ್ಲಿ, ಸರ್ವಕಾಲ ಅಭಿಜ್ಞತ್ವವುಳ್ಳವ ತಾನಾದಲ್ಲಿ, ಪರವಾದ ಆತ್ಮರುಗಳಲ್ಲಿ ಜ್ಞಾನಿಯಾದಾತ ತನ್ನಲ್ಲಿ ತಾನು ಆತ್ಮರುಗಳಿಗೆ ಭಿನ್ನವಿಲ್ಲ, ಆ ಆತ್ಮರುಗಳಿಗೆ ತನಗೆ ಭಿನ್ನವಿಲ್ಲ, ಅವರು ಬೇರೆ ತಾಬೇರೆಂಬುದು ತನ್ನ ಖಂಡಿತಭಾವ. ಆತ್ಮರುಗಳಲ್ಲಿ ಕಾಣಿಸಿದ ಆ ಖಂಡಿತ

ಭಾವವು ತನ್ನನೇ ಭಿನ್ನವೆನಿಸುವದು. ತನ್ನಯ ಕ್ಷಮಾಗುಣವು ಆ ಆತ್ಮರುಗಳಲ್ಲಿ ಕಾಣಿಸಿ ಆ ಆತ್ಮರುಗಳಲ್ಲಿ ಖಂಡಿತಭಾವ ತನಗಿಲ್ಲದಿರಲು, ಆ ಆತ್ಮರುಗಳು ತನಗೆ ಪರರಲ್ಲ, ಎಮಗೆ ಹಿತವರು, ತೆತ್ತಿಗರು, ಆಪ್ತರುಗಳೆಂದೇ ಭಾವಿಸುವದು. ಅದು ತನ್ನ ಶಾಂತಿಗುಣವು. ಅವರಿಗೂ ತನಗೂ ಭಿನ್ನವಿಲ್ಲ ಎಂಬುದ ತಿಳಿದು ತನ್ನ ಸುರೂಪು ಕುರೂಪಂಗಳು ದರ್ಪಣವ ನೋಡಿದಲ್ಲಿ, ಸುರೂಪಿಯಾದರೆ ಸುರೂಪಿಯಾಗಿ, ಕುರೂಪಿಯಾದರೆ ಕುರೂಪಿಯಾಗಿ ಕಾಣಿಸುವದು, ಎಂಬ ಹಾಂಗೆ ತನ್ನಲ್ಲಿ ಭಿನ್ನಭಾವ ತೋರಿದರೆ, ಅವರಲ್ಲಿ ಭಿನ್ನಭಾವ ತೋರುವದು. ತನ್ನಲ್ಲಿ ಸಮರಸಭಾವ ತೋರಿದರೆ, ಅವರಲ್ಲಿ ಸಮರಸಭಾವ ತೋರುವದು. ಇದಕ್ಕೆ ಕರಣ ಮಥನಕರ್ಕಶಬೇಡ. ಲಿಂಗದ ಕರುಣವ ಪಡೆವುದಕ್ಕೆ ಸರ್ವಜೀವ ದಯವೇ ಕಾರಣವೆಂಬುದರ್ಥ.

(೪). ಒಂದನಹುದೆನಬೇಡ, ಒಂದನಲ್ಲ ಎನಬೇಡ. ಉಭಯವುಳ್ಳನ್ನಕ್ಕ ಬಹು ದುಃಖದೊಡಲು. ಅಮೃತವ ಕುಡಿಯುಕೊಟ್ಟು, ವಿಷವ ಕುಡಿದೆನೆನಬೇಡ. ವಿಷವ ಕುಡಿಯುಕೊಟ್ಟು, ಅಮೃತವ ಕುಡಿದೆನೆನಬೇಡ. ಆ ಗುಣ ತಮ್ಮಲ್ಲಿಯೇ ದೃಷ್ಟವಾಗಿ. ಶವವನಿರಿದು ಹಗೆಯ ಹೊರಬೇಡ. ಇಂತೀ ಗುಣವ ನಿನ್ನ ನೀನೇ ತಿಳಿದಡೆ, ನಿನಗದು ಅನ್ಯಭಿನ್ನವಿಲ್ಲ. ಅದು ತನ್ನಯ ಮೂರ್ತಿ ದಸರೇಶ್ವರ ಲಿಂಗವು.

**ಅರ್ಥ**:—ಒಬ್ಬರನಾದರೂ ಸನ್ಮಾರ್ಗವುಳ್ಳವರೆನಬೇಡ. ಒಬ್ಬರನಾದರೂ ದುರ್ಮಾರ್ಗವುಳ್ಳವರೆನಬೇಡ. ಇವರು ಸನ್ಮಾರ್ಗಿಗಳು, ಇವರು ದುರ್ಮಾರ್ಗಿಗಳು ಎಂಬ ಎರಡು ಭಾವ ಉಂಟಾಗಿರುವ ಪರಿಯಂತರ, ಬಹಳವಾದ ಧಾವತಿಗೊಳವು. ಉಂಬುವದಕ್ಕೆ ಅನ್ನ, ಹೊರುವದಕ್ಕೆ ದುಕೂಲ, ತೊಡುವುದಕ್ಕೆ ಆಭರಣವನು ಕೊಟ್ಟು, ಸುಖದಲ್ಲಿಟ್ಟುಕೊಂಡಿದ್ದರೆ, ಮುಂದೆ ಇದರಿಂದ ಕಂಟಕ ಒಂದಿತ್ತು ಎನಬೇಡ. ಒಬ್ಬರ ಸಂಹರಿಸಿ, ಅವರ ದೇಶಕೋಶಂಗಳ ತಕ್ಕೊಂಡು, ಉಂಡು ಉಟ್ಟು ಸುಖದಲ್ಲಿದ್ದೆನೆನಬೇಡ. ಆ ದುರ್ಗುಣವು ತನ್ನಲ್ಲಿ ತೋರಿಕೆಯಾಗಿ, ಸತ್ತವನನಿರಿದು, ದೂರು ಹೊರಬೇಡ ಎಂಬ ಹಾಗೆ, ರಾಜಭಯ, ಚೋರಭಯದಿಂದ ಐಶ್ವರ್ಯವೆಲ್ಲ ಹೋಗಿ ದರಿದ್ರವಾದವರ ಕಂಡು, ಹಾಗಾಗಲೆಂದು ದುರ್ಬುದ್ಧಿಯ ನುಡಿಯು ಕರ್ತೃತ್ವವನುಂಟು ಮಾಡಿಕೊಳಬೇಡ. ಇಂತೀ

ದುರ್ಗುಣವ ಬಲ್ಲವರಿಂದಾಲಿಸಿ ಬಿಟ್ಟಡೆ, ನಿನಗೂ ಅವರಿಗೂ ಭಿನ್ನಭೇದವಿಲ್ಲ. ಆತ್ಮಕರ್ತೃವಾದ ಲಿಂಗವದು ಅವರಲ್ಲಿ ತನ್ನಲ್ಲಿ ಪೂರ್ಣವಾಗಿ ಕಾರಣವೆಂಬುದರ್ಥ.

---

## ಜ್ಞಾನಿಯೇ ಶ್ರೇಷ್ಠನೆಂದು ಭಾವಿಸು.

(೧). ಅಜಕೋಟಿ ವರುಷದವರೆಲ್ಲರೂ ಹಿರಿಯರೇ? ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೇ? ನಡುಮುರಿದು, ತಲೆ ನಡುಗಿ, ನರೆತೆರೆ ಹೆಚ್ಚಿ, ಮತಿಗೆಟ್ಟು, ಒಂದನಾಡಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲರೂ ಹಿರಿಯರೇ? ಅನುವರಿದು, ಘನವ ಬೆರಸಿ, ಹಿರಿದು ಕಿರಿದೆಂಬ ಭೇದವ ಮರೆದು ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು.

(೨). ಕಾಮನಸುಟ್ಟು, ಹೇಮವನುರುಹಿ, ತ್ರಿಪುರಸಂಹಾರದಕೀಲವನರಿಯ ಬಲ್ಲಡೆ, ಯೋಗಿಯಾದಡೇನು ಭೋಗಿಯಾದಡೇನು, ಶೈವನಾದಡೇನು, ಸನ್ಯಾಸಿಯಾದಡೇನು! ಅಶನವತೊರೆದಾತ, ವ್ಯಸನವ ಮರೆದಾತ ಗುಹೇಶ್ವರ ಲಿಂಗದಲ್ಲಿ ಅವರ ಹಿರಿಯರೆಂಬೆನು.

(೩). ಕಿರಿಯರಾದಡೇನು? ಹಿರಿಯರಾದಡೇನು? ಅರುವಿಂಗೆ ಹಿರಿದು ಕಿರಿದುಂಟೇ? ಆದಿ ಅನಾದಿ ಇಲ್ಲದಂದು, ಅಜಾಂಡ ಬ್ರಹ್ಮಾಂಡ ಕೋಟಿಗಳುದಯವಾಗದಂದು, ಗುಹೇಶ್ವರಲಿಂಗದಲ್ಲಿ ನೀನೊಬ್ಬನೇ ಮಹಾಜ್ಞಾನಿ ಎಂಬುದಕಾಣ ಬಂದಿತ್ತು ಕಾಣಾ.

(೪). ಅಹುದಹುದು ಮತ್ತೇನು? ಮರಹಿಂಗೆ ಹಿರಿದು ಕಿರಿದುಂಟಲ್ಲದೆ, ಅರುವಿಂಗೆ ಹಿರಿದು ಕಿರಿದುಂಟೇ ಹೇಳಯ್ಯ? ಸಾವಿಂಗೆ ಭಯ ಉಂಟಲ್ಲದೆ ಅಜಾತಂಗೆ ಭಯ ಉಂಟೇ ಹೇಳಯ್ಯ? ಕಪಿಲಸಿದ್ಧಮಲ್ಲಿನಾಥಯ್ಯನಲ್ಲಿ ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧನಾದೆನು ಕಾಣಾ.

(೫). ವಿದ್ಯಾದಾಸೆಯ ಹಿರಿಯರು ಕೆಲಬರು. ಬುದ್ಧಿಯಾಸೆಯ ಹಿರಿಯರು ಕೆಲಬರು. ಸಮತೆಯಾಸೆಯ ಹಿರಿಯರು ಕೆಲಬರು. ಇವರೆಲ್ಲರೂ ತಮ

ನಿಜವತಾವರಿಯದೆ ಆಚರಿಸಿದರು. ವೇಷನಿರ್ವಯಲಾಗಿ ಆಶಿರೋಷವಬಿಟ್ಟು ದಾಸೋಹಿಯಾಗಿರ್ದಡೆ ಗುಹೇಶ್ವರ ಲಿಂಗವು ತಾನೆ.

(೬). ನಾನು ಹಿರಿಯ ತಾನು ಹಿರಿಯರೆಂದವರೆಲ್ಲ ಹಿರಿಯರೇ? ಕಾಮ ಕ್ರೋಧ ಲೋಭಮೋಹ ಮದಮತ್ಸರದೊಳಗಿಪ್ಪವರೆಲ್ಲ ಹಿರಿಯರೇ? ಆಟಮಟ ಕುಟಿಲಕುಹಕಪಿಸುಣತನದಲ್ಲಿಪ್ಪವರೆಲ್ಲ ಹಿರಿಯರೇ? ಸರ್ಪಸಾವಿರಕಾಲವಿದ್ದರೇನು, ವಿಷಬಿಡುವದೇ? ಹಾವುಮೆಕ್ಕೆಯು ಹಣ್ಣಾದರೇನು, ಮಧುರವಪ್ಪುದೇ? ಅರಿಷಡ್ವರ್ಗದುರುವಣೆಯೊಳಗಾದಾತ ಹಿರಿಯನೇ? ಸಮತೆಸಮಾಧಾನ ತುಂಬಿ ಸುಜ್ಞಾನಭರಿತವಾದಡಾತ ಹಿರಿಯನು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮನರಿಯದೆ ಬರುಮಾತಿನಲ್ಲಿ ಹಿರಿಯನೆಂದಡೆ, ನಾಚಿತ್ತೆನ್ನಮನವು.

(೭). ಆದ್ಯರಲ್ಲ ವೇದ್ಯರಲ್ಲ ಸಾಧ್ಯರಲ್ಲದ ಹಿರಿಯರನೋಡಾ. ತನುವಿಕಾರ ಮನವಿಕಾರ ಇಂದ್ರಿಯವಿಕಾರದ ಹಿರಿಯರನೋಡಾ. ಶಿವಚಿಂತೆ ಶಿವಜ್ಞಾನಿಗಳ ಕಂಡಡೆ, ಅಳಿವಾಡಿ ನುಡಿವರು ಗುಹೇಶ್ವರನನರಿಯದ ಕರ್ಮಿಗಳು.

**ಅರ್ಥ**:—ಮುನ್ನರುದ್ರಲೋಕದೊಳಗೆ ಮಹೇಶ್ವರರಾಗಿರ್ದು ಮರ್ತ್ಯಲೋಕಕ್ಕೆ ಬಂದು ಲಿಂಗಾಂಗದ ಸಂಬಂಧದ ಜ್ಞಾನಕ್ರಿಯಿಡಿದಾಚರಿಸುತ್ತಿರ್ಪವರಿಗೆ ಆದ್ಯರೆಂಬ ಶಬ್ದಕ್ಕರ್ಥ. ಅಂತಲ್ಲದೆ, ಜಗದಾತ್ಮರೊಳೊಬ್ಬ ಆತ್ಮಂಗೆ ಶಿವ ಕೃಪೆಯಾಗಲು ಶಿವಜ್ಞಾನವೇಧಿಸಿ ಲಿಂಗಾಂಗ ಸಂಬಂಧಿಯಾಗಿ ಆಚರಿಸುತ್ತಿಪ್ಪರು ಅಂತಪ್ಪವರಿಗೆ ವೇದ್ಯರೆಂಬ ಶಬ್ದಕ್ಕರ್ಥ. ಅಂತಪ್ಪ ಆದ್ಯರು ವೇದ್ಯರುಗಳೊಳಗೆ ಶಿವಪದಸಾಧ್ಯರುಗಳಾಗಿ ಚರಿಸುತ್ತಿರ್ಪರು ಸಾಧ್ಯರೆಂಬ ಶಬ್ದಕ್ಕರ್ಥ ಇಂತು ಮೂರು ಪ್ರಕಾರದವರು ಲಿಂಗದಲ್ಲಿ ಮುಕ್ತರಪ್ಪರು. ಈ ಮೂರರೊಳಗೆ ಒಂದೂ ಇಲ್ಲದೆ ಹಿರಿಯವೇಷಲಾಂಛನದಿಂದ ಹಿರಿಯರೆನಿಸಿಕೊಂಡುಂಡುದೇಹೇಂದ್ರಿಯ ವಿಷಯವಿಕಾರದಲ್ಲಿ ಆಶಾತೃಷ್ಣರಾಗಿರ್ದು ತಾವು ಹಿರಿಯರೆಂದು ಶಿವಜ್ಞಾನಿಗಳ ಕಂಡಡೆ ಜರಿವುತಿಪ್ಪರು ಶಿವನನರಿಯದ ಪಾಪ ಕರ್ಮರೆಂಬುದೀ ವಚನದ ತಾತ್ಪರ್ಯಾರ್ಥ.

# ಸಮಾಧಾನಿಯಾಗಿರು.

(೧). ದೊರೆಕೊಂಡಂತೆ ಮನದಣಿದಿಪ್ಪವರ, ದುಃಖಕ್ಕೆ ದೂರಾಗಿಪ್ಪವರ, ಒಳಗನರಿದು ಹೊರಗೆ ಮರೆದವರ, ಸದಾನಂದದಲ್ಲಿ ಸುಖಿಯಾಗಿಪ್ಪವರ ಎನಗೊಮ್ಮೆ ತೋರಾ ಸಕಳೇಶ್ವರದೇವಾ, ಎನಗಿದೇ ವರವ ನೀವುದು ಕಂಡ್ಯಾ ತಂದೆ.

(೨). ಆರೇನೆಂದರೂ ಓರಂತಿಪ್ಪುದೇಸಮತೆ. ಆರು ಜರಿದರೂ, ಅವರೆನ್ನ ಮನದ ಕಾಳಿಕೆಯ ಕಳೆದರೆಂಬುದೇ ಸಮತೆ. ಆರು ಸ್ತೋತ್ರಮಾಡಿಹರೆನ್ನ ಜನ್ಮದ ಹಗೆಗಳೆಂಬುದೇ ಸಮತೆ. ಇಂತಿದು ಗುರುಕಾರುಣ್ಯ. ಮನವಚನ ಕಾಯದಲ್ಲಿ ಅಹಿತವಿಲ್ಲದೆ ಕಪಿಲಸಿದ್ಧ ಮಲ್ಲಿಕಾರ್ಜುನಯ್ಯ, ನಿಮ್ಮವರ ನೀನೆಂಬುದೇ ಸಮತೆ.

(೩). ರೂಪು ಕುರೂಪುವಿಕಾರಂಗಳು ಮುಕುರವ ನೋಡುವರ ಗುಣವಲ್ಲದೆ, ಮುಕುರಕ್ಕೆ ವಿಕಾರಗುಣ ಉಂಟೇ? ಪಾಪಿಗಳು ಕೋಪಿಗಳು ಪರಿಭ್ರಷ್ಟರು ದುರ್ವಿಕಾರಗಳು ತಮ್ಮ ತಮ್ಮ ಗುಣದಂತೆ ತಿಳಿದು ಮಾಡಿದರು. ಬಿತ್ತಿದ ಬೆಳೆಯನುಂಬಂತೆ, ನಿಂದಿಸಿದವರು ಪಾಪದ ಫಲವನನುಭವಿಸುವರು. ಸ್ತುತಿಸಿದವರು ಪುಣ್ಯದ ಫಲವನನುಭವಿಸುವರು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಸತ್ಯಶರಣ ನಿತ್ಯ ಮುಕ್ತಂಗೆ ನಿಂದೆಸ್ತುತಿ ಎಂಬುದರಿದು. ಇಹಪರ ಭೋಗಂಗಳ ಹೇಯೋಪಾಯದಿಂದ ತೊಲಗಿಸುವದೇ ವೈರಾಗ್ಯ. ಇದು ಕಾರಣ ವೈರಾಗ್ಯವುಳ್ಳವನೇ ಸದ್ಯನ್ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೪). ಸುಖದುಃಖ ಮೋಹದೊಡಲುಗೊಂಡು ಹುಟ್ಟಿತೀ ಜಗವೆಲ್ಲ. ಆ ಜಗದಂತೆ ಭಕ್ತನಾದತ್ತೆ, ಅವರ ಕುಂದೇನು, ತನ್ನ ಹೆಚ್ಚೇನು? ಜಗವು ಮಾಯೆಯಂತೆ. ಅದಬೇರು ಮಾಡಿ, ತಾ ಶಿವನಂತೆ ಇದ್ದವನ ಇರವು ಶುದ್ಧಜಗದೀಶನು. ಅವರೊಳಗೆ ತೆರಹಿಲ್ಲದಿಪ್ಪನು. ಇದು ಸತ್ಯ ನಿಜಗುರುಸ್ವತಂತ್ರಸಿದ್ಧಲಿಂಗೇಶ್ವರಾ.

(೫). ಇಂದಿಂಗೆಂದು ನಾಳಿಂಗೆಂದು ಚಿಂತಿಸಲೇಕೆ? ತಂದಿಕ್ಕುವಶಿವಂಗೆ ಬಡತನವೇ ರಾಮನಾಥಾ?

(೬). ಆವನಾಗಿ ಒಬ್ಬನು ನಿಡುಮುಳ್ಳಿನ ಮೇಲೆ ಪೊರಳ್ಳುಗೆಯು. ಮೇಣು ಪಾಂಸೆಯ ಹಾಸಿನ ಮೇಲೆ ಪೊರಳ್ಳುಗೆಯು. ಪೊರಳ್ಳಿದಡೆ ಮನವಿಸ್ಪಂದವಾಗದೊಂದೀಯುಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಪೊರ್ದಿಪ್ಪುದು ಹೇಳಾಕಪಿಲ ಸಿದ್ಧಮಲ್ಲಿಕಾರ್ಜುನಾ ?

(೭) ಅವನಾಗಿ ಒಬ್ಬನು ಅವಿಚಾರದಿಂದ ಶಿರಸ್ಸಿನ ಮೇಲೆ ಕೈದುವನಿಕ್ಕುಗೆಯು. ಮೇಣು ಗಂಧಾಕ್ಷತೆ ಪುಷ್ಪದಲ್ಲಿ ಪೂಜಿಮಾಡುಗೆಯು. ಪೂಜಿಮಾಡಿದಡೆ ಮನವಿಸ್ಕವಾಗದೊಂದೀಯುಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊರ್ದಿರ್ಪುದು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

(೮). ಅವನಾನೋರ್ವನು ನಾಸ್ತಿಕವನಾಡಿ ನಗುತಿಪ್ಪುದನು ತಾಕೇಳಿ, ಮತ್ತಾವನಾಗಿ ಬಂದು ಪೇಳ್ದೊಡೆ, ಮನವಿಸ್ಕಂದವಾಗದೊಂದೀಯುಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊರ್ದಿಪ್ಪುದು ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ.

(೯). ಅವನಾಗಿ ಒಬ್ಬನು ಕರವಪಿಡಿದು ಒಡಗೊಂಡೊಯ್ದು ಒಳ್ಳಿತ್ತನಾದಡೂ ನೀಡುಗೆಯು. ಮೇಣುಮಣ್ಣನಾದಡೂ ನೀಡುಗೆಯು. ನೀಡಿದೊಡೆ ಮನ ವಿಸ್ಕಂದವಾಗದೊಂದೀಯುಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊಂದಿರ್ಪುದು ಹೇಳಾಕಪಿಲ ಸಿದ್ಧಮಲ್ಲಿಕಾರ್ಜುನಾ.

(೧೦). ಸಿರಿಯಾಯಿತ್ತೆಂದು ಉಚ್ಚಹದಿಂದುಬ್ಬದೆ, ಕೆಟ್ಟಿತೆಂದು ಮನನೊಂದು ಭಿನ್ನನಾದಂತಿರಬೇಡಾ ಹಿರಿಯರ ಮನ. ಮನವಿಸ್ಕಂದವಾಗದೊಂದೀಯುಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊಂದಿರ್ಪುದು ಹೇಳಾಕಪಿಲ ಸಿದ್ಧಮಲ್ಲಿಕಾರ್ಜುನಾ.

(೧೧). ತಮತಮಗೆ ಸಮತೆಯು ಹೇಳಬಹುದಲ್ಲದೆ, ತಮತಮಗೆ ಸಮತೆಯು ನುಡಿಯಬಹುದಲ್ಲದೆ ಕನಲಿಕೆಯ ಕಳೆದಿಪ್ಪರಾರು ಹೇಳಾ? ಒಬ್ಬರನೊಬ್ಬರು ಹಳಿಯದಿಪ್ಪವರಾರು ಹೇಳಾ? ಮುನಿಸಮುಂದಿಟ್ಟಿಪ್ಪರು. ಇದು ಯೋಗಿ ಮಹಾಯೋಗಿಗಳಿಗರಿದಪ್ಪುದು ನೋಡಾ. ಸಕಳೇಶ್ವರ ದೇವಾ ನೀಕರುಣಿಸಿದವರಿಗಲ್ಲದಿಲ್ಲ.

# ಸಿಟ್ಟಾಗಬೇಡ.

(೧). ಬೆಟ್ಟದ ಮೇಲೊಂದು ಮನೆಯ ಮಾಡಿ, ಮೃಗಂಗಳಿಗಂಜಿದ ಡೆಂತಯ್ಯಾ! ಸಮುದ್ರದ ತಡೆಯಲ್ಲಿ ಮನೆಯ ಮಾಡಿ ನೊರೆತೆರೆಗಳಿಗಂಜಿ ದಡೆಂತಯ್ಯಾ? ಸಂತೆಯೊಳಗೊಂದು ಮನೆಯ ಮಾಡಿ, ಶಬ್ದಕ್ಕೆ ನಾಚಿ ದಡೆಂತಯ್ಯಾ? ಚನ್ನಮಲ್ಲಿಕಾರ್ಜುನ ಕೇಳಯ್ಯಾ! ಲೋಕದೊಳಗೆ ಹುಟ್ಟಿರ್ದ ಬಳಿಕ, ಸ್ತುತಿನಿಂದೆಗಳು ಬಂದಡೆ ಮನದಲ್ಲಿ ಕೋಪವತಾಳದೆ, ಸಮಾಧಾನಿಯಾ ಗಿರಬೇಕು.

(೨). ಲೋಕ ಬಂದನೆಂದಡೆ, ತಾನೊಂದನೆನಬೇಡ. ಮತ್ತಾರನೆಂದ ಡೆಯೂ, ತನ್ನನೆಂದರೆನಬೇಡ. ಶ್ಲೋ॥ ನಾಹಂ ಲೋಕೇ ನ ಲೋಕೋಹಂ ಲೋಕನಿಂದಾ ಕುತೋಮಮ । ಇತಿ ನಿಶ್ಚಯವದ್ಭಾವಶ್ಶಿವಜ್ಞಾನೀತಿ ಕಥ್ಯತೆ ॥ ಎಂದುದಾಗಿ, ಇದನರಿದು, ಭೃತ್ಯಕ್ಕೆ ಬೆಂಗುಂಡನಿಕ್ಕಿದಂತಿರಬೇಕು, ಹಿರಿಯರು ಗುಹೇಶ್ವರಾ

(೩). ತನಗೆ ಮುನಿವರಿಗೆ ತಾ ಮುನಿಯಲೇಕಯ್ಯಾ? ಅವರಿಗಾದಡೆ ಗೇನು? ತನಗಾದಡೆಗೇನು? ತನುವಿನಕೋಪ ತನ್ನ ಹಿರಿಯತನದ ಕೇಡು. ಮನ ದಕೋಪ ತನ್ನ ಅರುವಿನಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆ ಬೇವುದೇ ಕೂಡಲಸಂಗಮದೇವಾ?

(೪). ಕಾಣದ ಠಾವಿನಲ್ಲಿ ಜರಿದರೆ, ಕೇಳಿ ಪರಿಣಾಮಿಸಬೇಕು. ಅದೇಕ್ಕು ಕ್ಕಾರಣ್ಣ? ಕೊಳ್ಳದೆ ಕೊಡದೆ, ಅವರಿಗೆ ಸಂತೋಷವಹುದಾಗಿ. ಎನ್ನ ಮನದ ತದ್ವೇಷವಳಿದು, ನಿಮ್ಮ ಶರಣರಿಗೆ ಶರಣೆಂಬುದ ಕರುಣಿಸು, ಕೂಡಲ ಸಂಗಮದೇವಾ?

(೫). ಮನಕ್ಕೆ ನಾಚದ ವಚನ, ವಚನಕ್ಕೆ ನಾಚದ ಮನ, ಕುಂದು ಹೆಚ್ಚು ನುಡಿವೆ. ಒಂದು ಮಾತಿನಗೆಲಕ್ಕೆ ಹಿಡಿದು ಹೋರುವೆ. ಕೂಡಲಸಂಗನ ಶರಣರು ಎನ್ನಾಳ್ದರಂಬೆ.

## ಸೈರಣೆಯುಳ್ಳವನಾಗಿರು.

(೧). ಹೊಯಿದವರೆನ್ನ ಹೊರೆದವರೆಂಬೆನ್ನು. ಬೈದವರೆನ್ನ ಬಂಧುಗಳೆಂಬೆನು. ನಿಂದಿಸಿದವರೆನ್ನ ತಾಯಿತಂದೆಗಳೆಂಬೆ. ಅಳಿಗೊಂಡವರು ಆಳ್ದರೆಂಬೆ. ಜರಿದವರೆನ್ನ ಜನ್ಮಬಂಧುಗಳೆಂಬೆ. ಕೊಂಡಾಡಿದವರೆನ್ನ ಹೊನ್ನಶೂಲದಲ್ಲಿಕ್ಕಿದವರು, ಕೂಡಲಸಂಗಮದೇವಾ.

(೨). ಇರಿಸಿಕೊಂಡು ಭಕ್ತರಾದರೆಮ್ಮವರು: ತರಿಸಿಕೊಂಡು ಭಕ್ತರಾದರೆಮ್ಮವರು. ಕೊರಿಸಿಕೊಂಡು ಭಕ್ತರಾದರೆಮ್ಮವರು. ಜರಿಸಿಕೊಂಡು ಭಕ್ತರಾದರೆಮ್ಮವರು. ಕೂಡಲಸಂಗನ ಶರಣರಿಗೆ ಮುನಿಸತಾಳಿ, ಎನ್ನ ಭಕ್ತಿಯರೆಯಾಯಿತ್ತು.

(೩). ಚಂದನವ ಕಡಿದು, ಕೊರಡು ತೇದಡೆ, ನೊಂದೆನೆಂದು ಕಂಪಬಿಟ್ಟಿತ್ತೇ? ತಂದು ಸುವರ್ಣವ, ಕಡಿದೊರೆದಡೆ, ಬೆಂದು ಕಳಂಕಹಿಡಿದಿತ್ತೇ? ಸಂದು ಸಂದು ಕಡಿದ ಕಬ್ಬುವ ತಂದು, ಗಾಣದಲಿಕ್ಕಿ, ಬೆಂದು, ಪಾಕಾಗುಳ್ಳ ಸಕ್ಕರೆಯಾಗಿ, ನೊಂದೆನೆಂದು ಸವಿಯುಬಿಟ್ಟಿತ್ತೇ? ನಾಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು, ಹಾನಿಯೇ? ಎನ್ನ ತಂದೆ ಚನ್ನಮಲ್ಲಿಕಾರ್ಜುನದೇವಯ್ಯ, ಕೊಂದಡೆ, ಶರಣೆಂಬುದಮಾಣೆ.

(೪). ಅರ್ಥಕ್ಕೆ ತಪ್ಪಿದರೇನು? ಪ್ರಾಣಕ್ಕೆ ತಪ್ಪಿದರೇನು? ಅಭಿಮಾನಕ್ಕೆ ತಪ್ಪಿದರೇನು? ಶರಣರು ಶರಣರಲ್ಲಿ ಗೂಣವನರಸುವರೇ? ಕೂಡಲಸಂಗನ ಶರಣರು ನೊಂದರೆ, ಸೈರಿಸುವುದು.

(೫). ಒಂದಾಗಿಹವೈದು ಭೂತ. ಚಂದ್ರ, ಸೂರ್ಯ, ಸಂದಿವಾಹನ ನಿಮ್ಮ ತನುವಲ್ಲವೇ? ನಿಂದು ನೋಡಲು, ಜಗಭರಿತನಾಗಿಪ್ಪೆ. ಇನ್ನು ನೋಯಿಸುವೆನಾರನಯ್ಯ ರಾಮನಾಥಾ?

(೬). ಇದಿರೆನ್ನ ಹಳಿವವರು ನುಡಿಯ ಬೆಳಗುವರು. ಮನದ ಕಾಳಿಕೆಯ್ಯ ಕಳೆವವರೆನ್ನ ನಂಟರು. ದುರಾಚಾರದಲ್ಲಿ ನಡೆವವರು ಕನ್ನಡಿ ಎನಗೆ. ಹ್ಯೋಪಾಯವ ತೋರುವರು. ಇದು ಕಾರಣ ಅನ್ಯದೇಶಕ್ಕೆ ಹೋಗಲೊಲ್ಲೆ. ಸಕಳೇಶ್ವರ ದೇವರ ತೋರುವರೊಳರಿಲ್ಲಿಯೇ.

# ದುರಾಶೆಯುಳ್ಳವನಾಗಬೇಡ.

(೧). ಧರೆ ದೆಸೆವಳಯವೆಲ್ಲ ತನಗಾದಡಂ ನಿಲ್ಲಳು. ಇನಿತು ತ್ರಿಭುವನ ರಾಜ್ಯಪದಂಗಳು ತನಗಾದಡೆಯೂ, ನಿಲ್ಲಳು. ಅನಿತರೊಳು ತೃಪ್ತಿನಡೆಯಳು. ಈಯಾಶೆ ಎಂಬ ಪಾತಕಿಯನೆಂದಿಂಗೆ ನೀಗಿ, ನಿಮ್ಮನೊಡಗೂಡಿ ಬೇರಾಗದೆಂದಿಪ್ಪೆನೋ ಕಪಿಲಸಿದ್ಧಮಲ್ಲಿಕಾರ್ಜುನಾ?

(೨). ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ, ತನ್ನ ನೂಲು-ತನ್ನನೇ ಸುತ್ತಿ ಸಾವ ತೆರನಂತೆ, ಮನಬಂದುದ ಬಯಸಿ ಬೇವುತ್ತಿರುವೆನಯ್ಯ! ಎನ್ನ ಮನದ ದುರಾಶೆಯ ಬಿಡಿಸಿ, ನಿಮ್ಮತ್ತ ತೋರಾ ಚನ್ನಮಲ್ಲಿಕಾರ್ಜುನಾ.

(೩). ಆಶೆ ಎಂಬವಳು ಆರನಾದಡೂ ತನ್ನತ್ತಲೆಳೆವಳು ನೋಡಾ. ಈ ಆಶೆ ಎಂಬವಳು ಅವರಿವರೆನ್ನದೆ, ಆರನಾದಡೆಯೂ ಕೊಲಲಿಕ್ಕೆ ಬಗೆವಳು. ಈಯಾಶೆ ಎಂಬವಳಿಂದಲೇ ನಿಮ್ಮೆಡೆಗಾಣದಿಪ್ಪೆ. ಈಯಾಶೆ ಎಂಬವಳ ಎಂದಿಂಗೆ ನೀಗಿ ಎಂದು ನಿಮ್ಮೊಡಗೂಡಿ, ಬೇರಾಗದೆಂದಿಪ್ಪೆನೋ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ?

(೪). ಆಸೆ ಎಂಬ ವೇಶಿ ಆರನಾದರೂ ತನ್ನತ್ತ ಕರೆವಳು. ಈ ಆಶೆ ಎಂಬಳು ಆರನಾದರೆಯೂ ಗಾಸಿಮಾಡಿ ತನುಮನವ ವ್ರಯವಮಾಡುವಳು. ಈ ಆಸೆಯ ವೇಶಿಗೆ ಒತ್ತೆಯ ಕೊಡದ ನಿರಾಸಿಗಳೆಂಬವರಾರನೂ ಕಾಣೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೫). ಆಶೆಯುಳ್ಳಾತ ಒಬ್ಬರಾಧೀನದಲ್ಲಿಪ್ಪನು. ಆಶೆಯ ಮನದ ಕೊನೆಯನರಿದಾತ ಕೈಲಾಸದಾಚೆಯಲ್ಲಿಪ್ಪನೆಂದಾತ ನಮ್ಮ ಅಂಬಿಗರ ಚೌಡಯ್ಯನು.

(೬). ಆಶೆಯುಳ್ಳನ್ನಕ್ಕ ಒಬ್ಬರ ಆಶ್ರಯಿಸುವದು. ಆಶ್ರಯದಾಸ ಕಷ್ಟ ಕಾಣಿರಯ್ಯ. ಆಸೆಯೇ ದಾಸತ್ವ, ನಿರಾಶೆಯೇ ಈಶತ್ವ. ದಾಸತ್ವದ ಈಶತ್ವದ ಈ ಅನುವ ವಿಚಾರಿಸಿ, ನಿರಾಶೆಯಾಗಿಪ್ಪುದೆ ಈಶಪದವಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

(೭). ಹೊನ್ನು ಮಾಯೆ ಎಂಬರು, ಹೆಣ್ಣು ಮಾಯೆ ಎಂಬರು, ಮಣ್ಣು ಮಾಯೆ ಎಂಬರು. ಹೊನ್ನು ಮಾಯೆಯಲ್ಲ, ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ. ಮನದ ಮುಂದ್ಣಾಣಾಸೆಯೇ ಮಾಯೆ ಕಾಣಾ ಗುಹೇಶ್ವರಾ.

(೮). ಆಶೆ ಎಂಬ ಶೂಲದ ಮೇಲೆ, ರೋಷವೆಂಬ ಹೆಣನ ಕುಳ್ಳಿರಿಸಿದರೆ, ಮೇಲುಳ್ಳ ಹಿರಿಯರು ಹೀಗೆ ಸವೆದರು ನೋಡಾ. ಆಶೆಯ ಮುಂದಿಟ್ಟುಕೊಂಡು ಸುಳಿವ ಹಿರಿಯರ ಕಂಡು ಗುಹೇಶ್ವರಲಿಂಗಕ್ಕೆ ಹೇಸಿಕೆಯಾಯಿತ್ತು ಕಾಣಾ ಸಂಗನಬಸವಣ್ಣ.

(೯). ಆಶೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ, ಅಯ್ಯ? ರೋಷವೆಂಬುದು ಯಮದೂತರಿಗಲ್ಲದೆ, ಅಜಾತರಿಗುಂಟೇ? ಈಸಕ್ಕಿಯ ಆಶೆ ನಿಮಗೇಕೆ? ಈಶ್ವರನೊಪ್ಪ. ಮಾರಯ್ಯ ಪ್ರಿಯಅಮಲೇಶ್ವರಲಿಂಗಕ್ಕೆ ದೂರ.

(೧೦). ಪರರಾಶೆ ಎಂಬ ಜ್ವರ ಹತ್ತಿ, ನಾನು ಕಳವಳಿಸಿ ನುಡಿವೆನಯ್ಯ! ಹೊನ್ನು, ಹೆಣ್ಣು, ಮಣ್ಣು, ಬಯಸಿ, ವಿಕಳತೆಗೊಂಡಂತೆ ಪ್ರಲಪಿಸುತ್ತ ನುಡಿವೆನಯ್ಯ! ಈ ಕಳವಳವ ನಿಲಿಸಿ, ನಿಮ್ಮ ಕರುಣಾಮೃತವೆಂಬ ಕಷಾಯವ ನೆರೆದು, ಪರರಾಶೆ ಎಂಬ ಜ್ವರವ ಮಾಣಿಸು, ಬಸವಪ್ರಿಯ ಕೂಡಲಚನ್ನಸಂಗಮದೇವಾ.

(೧೧). ಕಣ್ಣಿನಲ್ಲಿ ಕಂಡು, ಮನದಲ್ಲಿ ಬಯಸಿ, ಬಣ್ಣಗುಂದಿ ಬಳಲುವರಯ್ಯ. ಬಂದರೆ ಹೆಚ್ಚಿ, ಬಾರದಿದ್ದರೆ ಕುಂದಲೇಕೆ? ಕುಂದಿದರೆ ಬಪ್ಪುದೇ? ಹಿರಿದುಜರಿದು, ಕರಗಿ, ಕೊರಗಿ, ಕೋಡಿವರಿದು, ಬೆಂದು, ನಿಂದುರಿದು, ಕಡುನೊಂದು, ಭಂಗ ಬಡುತ್ತಿಪ್ಪರಯ್ಯ.ಒಂದು ನಿಮಿಷಾರ್ಧ ನಿಮ್ಮ ನೆನಹಿಲ್ಲ ನೋಡಾ! ಆಶೆ ಎಂಬ ಮಾಯಾ ಪಾಶದೊಳಗೆ ಸಿಕ್ಕಿ, ದೋಷ ದುರ್ಗುಣದಿಂಧದ್ದು ಬಿದ್ದುರುಳುವ ಪಾಶಬದ್ಧರ ಈಶಲಾಂಛನಧಾರಿಗಳೆಂತೆಂಬೆನಯ್ಯ ಮಹಾಲಿಂಗಗುರು ಶಿವಸಿದ್ಧೇಶ್ವರಪ್ರಭುವೇ?

(೧೨). ಒಂದಾಸೆಯು ಕುರಿತು ಸರ್ವವಾತಿಂಗೊಡಲ್ಲಾಯಿತ್ತು. ಒಂದ್ರಾಸೆಯುರತು ನಿಂದಡೆ, ಈತ ಮೂರ್ತಿತಾನಾಗಿಪ್ಪ. ಇಂತೀ ಉಭಯದಾಸೆಯಲ್ಲಿ ಗಾಸಿಯಾಗುತ್ತ, ಮಾತಿನ ಮಾಲೆ ಬೇಡ ಆಶೆಯ ಪಾಶ ಹರಿದು, ಈಷಣತ್ರಯವರತು, ನಿಜಾರ್ತನಾಗಿರ್ದಲ್ಲಿ, ಸದಾಶಿವಮೂರ್ತಿಲಿಂಗವು ತಾನೆ.

(೧೩). ಕಾಯುವೆಂಬ ಢಕ್ಕೆಯ ಮೇಲೆ, ಜೀವವೆಂಬ ಹಿಡಿಚಂಡು ಬೀಳೆ, ತ್ರಿವಿಧವ ತಾ, ತಾ, ಎಂಬಾಸೆ ಹಿಂ, ಡಿ, ಡಿಂ, ಡಿ, ಎನುತ್ತಿದೆ. ಇಂತೀ ಉಲುಹಿನ ಭೇದದಲ್ಲಿ ಹೊಲಬುದಪ್ಪದೆ ಗೆಲಬೇಕು (ಕಾಲವೆಂಬ?) ಮಾರಿಯ, ಕಾಲಾಂತಕಭೀಮೇಶ್ವರ ಲಿಂಗವನರಿಯ ಬಲ್ಲಡೆ.

(೧೪). ಆಸೆ ಎಂಬ ಸ್ತ್ರೀಗೆ ಮನಸೋತವರೆಲ್ಲ ಕೆಟ್ಟ ಕೇಡನೇನೆಂಬೆನಯ್ಯ? ಯತಿಗಳಾಗಲಿ, ವೇದಾಧ್ಯಾಯಿಗಳಾಗಲಿ, ವ್ರತಿಗಳಾಗಲಿ, ಸರ್ವವಿದ್ಯಾ ಕಲಾವಂತರಾಗಲಿ, ನರರೊಳಗಾಗಲಿ ಸುರರೊಳಗಾಗಲಿ ಇವರೆಲ್ಲರೂ ಧನವುಳ್ಳವರ ಬಾಗಿಲ ಕಾಯಿಸಿದಳು ನೋಡಾ. ಇವಳಿಗಾರೂ ಮರುಳಾಗರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ಶರಣರಲ್ಲದವರ ಕಿವಿಯ ಹಿಡಿದು ಕುಣಿಸಿದಳು ನೋಡಾ.

(೧೫). ಆಸೆ ಎಂಬ ಶೃಂಖಲದಿಂದ ಬಂಧನವಡೆದವರು ಆರಾದರಾಗಲಿ ದೇಶವತೊಳಲಿ ಬಳಲುತ್ತಿಹರುನೋಡಾ. ಆಸೆ ಎಂಬ ಶೃಂಖಲವ ಮುರಿದ ನಿರಾಶಕರು ಆವ ಧಾವತಿಯಿಂದ ಬಳಲದೆ ಸುಖಿವಿಹರು ನೋಡಾ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ಆಸೆಯುಳ್ಳಾತನೇ ಮಾಯೆಯವನು, ನಿರಾಸೆಯುಳ್ಳಾತನೇ ನಿಮ್ಮವನು.

(೧೬). ಬಂದುದ ಕಿರಿದು ಮಾಡಿ, ಬಾರದುದ ಹಿರಿದು ಮಾಡಿ, ಆವಾಗ ಚಿಂತಿಸಿ ಬಳಲುತ್ತಿರಲೇಕೆ? ಇರುಹೆ ಅರುದಿಂಗಳು ದವಸವ ಕೂಡಿ ಹಾಕುವಂತೆ, ತಾಕಿರಿದಾದಡೂ ಆಸೆ ಹಿರಿದಾಯಿತ್ತು. ಸ್ಥೂಲಕಾಯವಾದ ಮದಗಜಕ್ಕೇನು ಮುಂದಕ್ಕೆಬೇಕೆಂಬ ಆಸೆಯುಂಟೇ? ಇಲ್ಲ. ಇರುಹೆಯ ಆಸೆಯ ಅಂತರವ ನೋಡಿರಣ್ಣಾ. ಅರಿದು ಸಲಹುವ ಶಿವನಿದ್ದ ಹಾಗೆ, ಬರಿದೆ ಆಸೆಯಿಂದಲೇಕೆ ಸಾವಿರಿ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾಧೀನವರಿಯದೆ?

(೧೭). ಆಸೆಗೆ ಹುಟ್ಟಿದ ಪ್ರಾಣಿಗಳು ಆಸೆಯನೆ ಕಲಿತು, ಪುಣ್ಯಪದವಿಯ ಬಯಸಿದರೆ, ಭವಮಾಲೆಯ ಬರವು ತಪ್ಪದು. ಬೇಡಲು ಹುಟ್ಟಿದ ಪ್ರಾಣಿಗಳಿಗೆ ಬೇಡಲ್ಲು ವಿಧಿಯೋ? ಸೂಳೆಗೆ ಹುಟ್ಟಿದ ಪ್ರಾಣಿಗೆ ನಿಜಗುಣ ಸಜ್ಜನವಪ್ಪುದೇ? ಲಿಂಗದುದಯ ಶರಣಾವಿಸ್ತಾರವು. ಬಯಸಿದರೊಳವ್ವೇ ಕೂಡಲ ಸಂಗಮದೇವಾ ನಿಮ್ಮಲ್ಲಿ?

(೧೮). ಶಿವಶಿವಾ ಈ ಸಂಸಾರದಂದುಗ ದುಃಖವನಾನೇನೆಂತು ಪೇಳ್ವೆ? ಹೊನ್ನು ನಾನಾ ವ್ಯಾಪಾರವಮಾಡಿ ಧಾವತಿಯಿಂದ ಗಳಿಸುವ ದುಃಖ, ಆ ಹೊನ್ನು ಜೋಕೆಮಾಡುವದು ದುಃಖ, ಆ ಹೊನ್ನು ಹೋದಮೇಲೆ ಅನೇಕ ದುಃಖ. ಹೆಣ್ಣ ತರುವದು ದುಃಖ, ಆ ಹೆಣ್ಣಾಳುವದು ದುಃಖ, ಆ ಹೆಣ್ಣು ಸತ್ತು ಹೋದಮೇಲೆ ಅನೇಕ ದುಃಖ. ಮಣ್ಣ ದೊರಕಿಸುವದು ದುಃಖ, ಆ ಮಣ್ಣಿನ ಧಾವತಿ ಹೋರಾಟಮಾಡುವದು ದುಃಖ, ಆ ಮಣ್ಣು ನಾಶವಾದ ಮೇಲೆ ಅನೇಕ ದುಃಖ. ಇಂತೀ ತ್ರಿವಿಧವು ಮಲಸಮಾನವೆಂದರಿಯದೆ, ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂಬಿರಿ. ಎಲೆ ಹುಚ್ಚು ಮರುಳು ಮಾನವರಿರಾ, ನೀವು ಮರಣವಾದ ಮೇಲೆ, ಅವು ನಿಮ್ಮ ಕೂಡೆ ಬರ್ಪವೇ? ಬರ್ಪುದಿಲ್ಲ ಹೇಳಾ. ಎಲೆ ಹುಚ್ಚು ಮರುಳರಿರಾ, ಅವು ಆರ ಒಡವೆ ಎಂದರೆ, ಬಲ್ಲರೆ ಹೇಳಿರಿ, ಅರಿಯದಿದ್ದರೆ ಕೇಳಿರಿ. ಹೊನ್ನು ರಾಜರದು, ಹೆಣ್ಣು ಅನ್ಯರದು, ಮಣ್ಣು ಬಲ್ಲಿದರದು. ಇಂತೀ ತ್ರಿವಿಧವ ಅನಿತ್ಯವೆಂದು ತನ್ನ ಸ್ವಾತ್ಮಜ್ಞಾನದಿಂ ತಿಳಿದೆಚ್ಚತ್ತು ವಿಸರ್ಜಿಸಿ, ಗುರುಕಾರುಣ್ಯಮಂ ಪಡೆದು ಲಿಂಗಾಂಗ ಸಂಬಂಧಿಯಾಗಿ ಗುರೂಪಾವಸ್ಥೆಯಂ ಮಾಡಿ ಮುಂದೆ ಮೋಕ್ಷದ ಹಾದಿಬೇಕೆಂಬ ಯುಕ್ತಿ ವಿವೇಕವಿಚಾರಬುದ್ಧಿಯನರಿಯದೆ ಅಶನಕ್ಕಾಗಿ ಮಣ್ಣಮಚ್ಚಿ, ವ್ಯಸನಕ್ಕಾಗಿ ಹೆಣ್ಣಮಚ್ಚಿ, ಅಂಗಸುಖಕ್ಕಾಗಿ ಹೊನ್ನುಮಚ್ಚಿ, ಇಂತೀ ತ್ರಿವಿಧಾಸೆ ಅನ್ವೇಷಮಮಕಾರದಿಂದ ಮನಮಗ್ನರಾಗಿ ಮತಿಗೆಟ್ಟು ಮುಂದುಗಾಣದೆ, ಸಟೆಯ ಸಂಸಾರದಲ್ಲಿ ಹೊಡೆದಾಡಿ, ಹೊತ್ತುಗಳೆದು ವ್ಯರ್ಥಸತ್ತು ಹೋಹಕತ್ತೆಸೂಳೆಯ ಮಕ್ಕಳ ಬಾಳ್ವೆ ಶುನಿಸೂಕರ ಕುಕ್ಕುಟನ ಬಾಳ್ವೆಗಿಂದತ್ತತ್ತ ಎಂದಾತ ನಿಮ್ಮ ಶರಣವೀರಾದಿವೀರ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗನಿರ್ಮಾಯ ಪ್ರಭುವೇ.

---

## ವ್ಯಭಿಚಾರಮಾಡಬೇಡ.

(೧). ಹರಿವ ಹಾವಿಂಗಂಜೆ. ಉರಿಯ ನಾಲಿಗೆಗಂಜೆ. ಸುರಿಗೆಯ ಮೊನೆಗಂಜೆ. ಒಂದಕ್ಕಂಜುವೆನೊಂದಕ್ಕಳುಕುವೆ. ಪರಸ್ತ್ರೀ ಎಂಬ ಜೂಜೆಂಗಂಜುವೆ. ಮುನ್ನಂಜದ ರಾವಣನೇವಿಧಿಗೊಳಗಾದ? ಅಂಜುವೆನಯ್ಯಾ ಕೂಡಲಸಂಗಮದೇವಾ.

(೨). ಅಡಗ ತಿಂಬರು, ಕಣಕದಡಿಗೆ ಇರಲ್ಕೆ. ಸುರೆಯ ಕುಡಿವರು ಹಾಲಿರಲ್ಕೆ. ಮ್ರುಕ್ಸುವರು ಭಂಗಿಯ ಸಕ್ಕರೆ ಇರಲ್ಕೆ. ಸ್ವಸ್ತ್ರೀ ಇದ್ದಂತೆ ಪರ ಸ್ತ್ರೀಯರಿಗೆ ಅಳುಪುವರು. ಸತ್ತನಾಯಿ ಭಕ್ಷಿಸುವ ಹಡಿಕಿಗರನೇನೆಂಬೆನಯ್ಯ ರಾಮನಾಥಾ?

(೩). ನೋಡಲಾಗದು, ನುಡಿಸಲಾಗದು. ಪರಸ್ತ್ರೀಯರ ಬೇಟ ಬೇಡ ಕಾಣಿರೋ. ತಗರ ಬೆನ್ನಿನಲ್ಲಿ ಹರಿವ ಸೊಣಗನಂತೆ ಬೇಡ ಕಾಣಿರೋ. ಒಂದಾ ಸೆಗೆ ಸಾಸಿರ ವರುಷ ನರಕದಲ್ಲಿಕ್ಕುವ ಕೂಡಲಸಂಗಮದೇವಯ್ಯ.

(೪). ಹೋಗಬಿಟ್ಟು, ಮರಳಿ ಹಿಂದೆ ನೋಡಿ, ಮತ್ತಾಗಬೇಕೆಂಬ ಸಂದೇಹವುಳ್ಳನ್ನಕ್ಕರ, ಅದೇ ಪರದಾರ. ನಾಯಕನರಕ ತಪ್ಪದು. ಅನ್ಯವಧು ವೆಂಬುದು ನಿಮ್ಮ ರಾಣಿವಾಸ. ಇದೇ ದಿಬ್ಯ, ಕೂಡಲಸಂಗಮದೇವಾ.

(೫). ಹೆಣ್ಣ ಕಂಡು, ಹೆಚ್ಚಿ ಹೆಕ್ಕಳ ಬಡುವಂತೆ, ಕಣ್ಣಿಟ್ಟು ನೋಡ ದಿರಾ. ಶಿವಲಿಂಗದೇವನ ಕರಣದಿಚ್ಛೆಗೆ ಹರಿದು, ನರಕದಲ್ಲಿ ನೆರೆದು ಬರುದೊರೆ ವೋಗದೆ ಪೂಜಿಸು ನಮ್ಮ ರಾಮನಾಥನಾ.

(೬). ಗಂಡನುಳ್ಳಮ್ಮನ ಗೌರಿ ಎಂದು ಕಂಡಡೆ, ಭೂಮಂಡಲಕ್ಕೆ ಅರಸಾಗಿ ಪುಟ್ಟುವನಾತನು. ಗಂಡನುಳ್ಳಮ್ಮನ ಕಂಡು ಒಡವೆರೆದಾತ ನರಕದಲ್ಲಿ ದಿಂಡುಗೆಡೆದಿಪ್ಪನೈ, ರಾಮನಾಥಾ.

(೭). ಬ್ರಹ್ಮದ ಮಾತನಾಡಿ ಕನ್ನೆಯರ ಕಾಲದೆಸೆಯಲ್ಲಿ ಕುಳಿತಲ್ಲಿ, ಪರಬೊಮ್ಮದ ಮಾತು ಅಲ್ಲಿ ನಿಂದಿತೆಂದನಂಬಿಗಚೌಡಯ್ಯ.

(೮). ಒಡೆಯರು ತಮ್ಮ ಮನೆಗೆ ಒಡಗೊಂಡು ಹೋದರೆ, ತುಡುಗುಣಿ ತನದಲ್ಲಿ ಪರವಧುವ ನೋಡುವ ಸರಸ ಬೇಡ, ಕಾಣಿರಣ್ಣಾ. ಒಡೆಯನರಸಿಯ ಸರಸ ಬೇಡವೋ. ಕೂಳ ಸೊಕ್ಕು ತಲೆಗೇರಿ, ರಾಣಿವಾಸದೊಡನೆ ಸರಸ ಬೇಡ ವೋ. ಕೂಡಲಸಂಗಮದೇವ ಕರೆಯಿಸಿ ತಗನಯ್ಯ.

(೯). ದೃಷ್ಟಿ ಕಾಮ್ಯಾರ್ಥದಲ್ಲಿ ನೆಟ್ಟು ನೋಡಿ, ಒಡೆಯರು ಭಕ್ತರ ವಧುಗಳಲ್ಲಿ ಮತ್ತಾ ದೃಷ್ಟಿಯ ಮುಟ್ಟಲೇತಕ್ಕೆ? ಮತ್ತೆ ಇತ್ಯಾದಿಗಳ ಬಿಟ್ಟು, ಹೆಣ್ಣು ವ್ರತಕಟ್ಟೆಂದು ಮಾಡಬಹುದೇ? ಮತ್ತದ ಕಟ್ಟಿಕೊಂಡು ನಿಟ್ಟಯ ಭಂಡರಂತೆ ಕುಟ್ಟಿಯಾಡಬಹುದೇ? ಇಂತೀ ಬಾಹ್ಯದೃಷ್ಟಿಗಳ್ಳರ ಆತ್ಮಚಿತ್ತ

ಗಳ್ಳರ ವ್ರತಸ್ಥರೆಂದು ಎನಲಾಗದು. ಮನಕ್ಕೆ ಮನೋಹರ ಶಂಭೇಶ್ವರಲಿಂಗವು ಅವರುವ ಮುಟ್ಟದಿಹನಾಗಿ.

**ಅರ್ಥ:**—ಸ್ತ್ರೀಯರುಗಳಲ್ಲಿ ನಯನವು ಕಾಮವಿಕಾರದ ಬಯಕೆಯಿಂದ ಕ್ಲೇಶಿಸಿ, ಹಾವಭಾವ ವಿಲಾಸ ವಿಭ್ರಮಂಗಳ ನೋಡಿದಲ್ಲಿ, ಭಕ್ತಮಾಹೇಶ್ವರುಗಳು ಬಳಿಕ ವಿಕಾರದೃಷ್ಟಿಯನಂಗೀಕರಿಸಲೇತಕ್ಕೆ? ಸಮಯದವರುಗಳು ಶೀಲ ವ್ರತಾಚಾರಕ್ಕೆ ತಪ್ಪಿತ್ತೆಂದು ಬೇರ್ಪಡಿಸಿದ ಹೆಣ್ಣನು ಮೇಲುಶೀಲ ಮೇಲುವ್ರತವ ಕಟ್ಟುಮಾಡಬಹುದ್ದೇ?, ಬಳಿಕ ಮೇಲುಶೀಲ ಮೇಲುವ್ರತವ ಕಟ್ಟಿ, ಆ ಹೆಣ್ಣ ಕೂಡಿಕೊಂಡು ಮುಟ್ಟಿ ಕೋಲಿನ ಹಾಗೆ, ಆಚಾರಕ್ಕೆ ತಪ್ಪುಕರಾಗಿ, ಲಜ್ಜೆ ಭಂಡರ ಹಾಗೆ, ತನ್ನ ಸಮಶೀಲವಂತರು ಕಂಡು, ನೀನು ಇಂಥ ಶೀಲವ್ರತಾಚಾರವುಳ್ಳವ, ಆಚಾರ ಭ್ರಷ್ಟೆಯಾದ ಹೆಣ್ಣಿಗೆ ಮೇಲುಶೀಲ ಮೇಲುವ್ರತವ ಕಟ್ಟಿ ಕೂಡಿಕೊಳ್ಳಬಹುದೇ, ಎಂದಲ್ಲಿ, ಅಹುದಲ್ಲಾ ಎಂದು ಅವರೊಡನೆ ಬಡಿದಾಡಬಹುದೇ? ಇಂತೀ ಬಹಳವಾದ ಕಾಣಲ್ಪಟ್ಟಾಚಾರಕ್ಕೆ ತಪ್ಪುಕರಾದವರನು ತನ್ನ ಅರುವಿಂಗೆ ವಂಚಕರಾದವರನು ವ್ರತವುಳ್ಳವರೆಂದು ಹೇಳಬಾರದು, ಪರಶಿವಲಿಂಗವು ಅವರುಗಳಲ್ಲಿ ಬರೆಯದಿಪ್ಪನಾಗಿ ಎಂಬುದರ್ಥ.

(೧೦). ಶಿವಪೂಜೆ ಎತ್ತ? ವಿಷಯದ ಸವಿ ಎತ್ತ? ಆ ವಿಷಯದ ಸವಿ ತಲೆಗೇರಿ ಶಿವಪೂಜೆಯ ಬಿಟ್ಟು, ವೇಶಿಯರ ಎಂಜಲ ಹೇಸದೆ ತಿಂಬ ದ್ರೋಹಿಗಳನೇನೆಂಬೆನೈ ರಾಮನಾಥಾ?

(೧೧). ಸಾಸಿವೆಯಷ್ಟು ಭಕ್ತಿಯುಳ್ಳ ನೈಷ್ಠಿಕರ, ವೇಶಿಯ ಮುಟ್ಟಿದಡೆ, ಹೊಲೆಯರ ಮನೆಯ ಮುರುಹ ಹೊರಗಿರಿಸಿದಡೆ, ಹಂದಿ ಬಂದು ಮೂಸಿ ಮೇವಂತೆ, ಕಾಣಾ ರಾಮನಾಥಾ.

(೧೨). ವೇಶಿಯ ಎಂಜಲತಿಂದು, ಈಶ್ವರಪ್ರಸಾದವ ಭುಂಜಿಸಿದಡೆ, ಅಸರಿಸಿತ್ತಯ್ಯ ಲಿಂಗವು. ಆತ ದ್ರೋಹಿ, ಭಾಷೆತಪ್ಪುಕನವನು, ಭವದಲ್ಲಿ ಬಳಲುವನು. ಅಂತಹವನ ಕಂಡು, ಹೇಸಿ ಕಡೆಗೆ ತೊಲಗಿದೆ ಕಾಣಾ ರಾಮನಾಥಾ.

(೧೩). ದೇಶಗುರಿಯಾಗಿ ಲಯವಾಗಿ ಹೋದವರ ಕಂಡೆ. ತಮಂಧಗುರಿಯಾಗಿ, ಲಯವಾಗಿ ಹೋದವರ ಕಂಡೆ. ಕಾಮಗುರಿಯಾಗಿ ಬೆಂದು ಹೋದವರ ಕಂಡೆ. ನೀಗುರಿಯಾಗಿ ಹೋದವರ ಕಾಣೆ, ಗುಹೇಶ್ವರಾ.

(೧೪). ಅಸುರನೈಶ್ವರ್ಯವನೆಣಿಸುವರೆ, ಸೀತೆಗೆ ಸರಿಮಿಗಿಲೆನಿಸುವ ರೆಂಟುಕೋಟಿ ಮತಿವಂತೆಯರು, ಶಿರಃ ಪ್ರಧಾನರೆಂಟು ಕೋಟಿ; ಲೆಕ್ಕವಿಲ್ಲದ ದಳವು, ಲಕ್ಷಕುಮಾರರು, ದಿಕ್ಪಾಲಕರವನ ಮನೆಯ ಬಂಧನದಲ್ಲಿಪ್ಪರು, ಸುರ ಸತಿಯರನೆಲ್ಲರನಾತ ಸೆರೆಮಾಡಿಯಾಳಿದ. ಶಿವನೇ, ನೀನು ಕರುಣಿಸಿದಂತಿರದೆ, ಪರವಧುವಿನ ಬೇಟವವನ ಪ್ರಾಣವ ಕೊಂಡಿತ್ತು. ಇದನರಿತು ಪರವಧುವಿಗೆಳೆ ಸುವವರ ಕಂಡು, ಗರುಡನ ಕಂಡ ಸರ್ಪ ಧರೆಗಿಳಿವಂತೆ, ಅಡಗಿಪ್ಪೆನಯ್ಯಾ ಕೂಡ ಲಸಂಗಮದೇವಾ.

(೧೫). ಗಂಡನುಳ್ಳ ಹೆಂಡಿರ ಕಂಡು, ಅಳುಪದಿರಾ ಮನವೇ. ಬಂದ ಬಸಿರನು, ಉಂಡ ಮೊಲೆಯುನ್ನು ಕಂಡು, ಮರುಗದಿರಾ ಮನವೇ, ಉದ್ದಂಡತನ ದಲ್ಲಿ ನಡೆವ ಭಂಡರನು ಹುಳುಗೊಂಡದಲ್ಲಿಕ್ಕದೆ ಬಿಡುವನೇ ನಮ್ಮ ದೇವರಾಯ ಸೊಡ್ಡಳಾ?

(೧೬). ಶರಣ ಸತಿ ಲಿಂಗಪತಿ ಎಂದು ಬಣ್ಣಿಸಿ, ಒಪ್ಪವಿಟ್ಟು ನುಡಿದು ಕೊಂಬ ಕುಟಿಲವೆಣ್ಣಲ್ಲವಯ್ಯಾ. ನಾನು ನಿನಗೆ ಮೆಚ್ಚಿ ಮರುಳಾದ ಪತಿವ್ರತೆ. ಅಹುದು ಅಲ್ಲವೆಂಬುದಕ್ಕೆ ದೃಷ್ಟವ ಕೊಟ್ಟು ನುಡಿವುತಿಪ್ಪೆ ಕೇಳಯ್ಯಾ ಗಂಡನೇ. ಮಾನವರ ಸಂಚಾರವಿಲ್ಲದ ಮಹಾಹೇರಡವಿಯಲ್ಲಿ ನಾನು ಹೋಗುತ್ತಿಪ್ಪಾಗ, ಆ ಸಮಯದಲ್ಲಿ ಸೋಮ್ಮಟಿಯು ಸೊಬಗಿನ ನಿಡುಹುಬ್ಬಿನ ಕಡುಜಾಣ್ಮೆ, ಅಲ ರ್ಗಣ್ಣ ಅಂಬುಜಮುಖಿ, ಮುಗುಳ್ನಗೆಯ್ಯ ಸೊಗಸುವೆಣ್ಣು, ಬಂದುಗೆ ಬಾಯ ಅಂದವುಳ್ಳವಳು ನಳಿತೋಳನಾಯಿಕೆ, ಕಕ್ಕಸ ಕುಚದ ಸೊಕ್ಕು ಜವ್ವನೆ, ಸ್ಥಳಿ ನಡುವಿನ್ನಸಿರಿವಂತೆ, ಕುಂಭಸ್ಥಳದ ನಿತಂಬಿನಿ, ಹೊಂಬಾಳೆದೊಡೆಯ ಕಂಬು ಕಂಧರೆ, ಚರಣದ ಮಂದಗಮನೆ, ಇಂತಪ್ಪ ಚಲುವಿನ್ನ ಕೋಮಲ ಲತಾಂಗಿ, ಸರ್ವಾಭರಣಂಗಳಂ ತೊಟ್ಟು, ನವ್ಯದುಕೂಲವನುಟ್ಟು, ಅನುಲೇಪನಗಳನು ಗೆಯ್ದು, ನಡೆತಂದು, ಎನ್ನ ಮರ್ದಪ್ಪಿ, ಆಲಿಂಗಿಸಿ, ಮೋಹಿಸಿ, ಮುದ್ದುಮಾಡಿ, ಕಾಮಾತುರದ ಭಕ್ತಿಯಿಂದ ಎನ್ನ ಕರಮಂ ಪಿಡಿದು, ತನ್ನ ಕೂಟಕ್ಕೆ ಒಡಂಬಡಿ ಸುವ ಕಾಲದಲ್ಲಿ, ನಾನು ಹುಲಿ ಹಿಡಿದ ಕಪಿಲೆಯಂತೆ ನಡುಗುತ್ತಿದ್ದೇನೆ. ಪರ ಮಾತ್ಮನೇ, ನಿನ್ನ ಸತಿಯು ಕೈವಿಡಿದು, ಎನ್ನ ರಕ್ಷಣ್ಯವಂ ಮಾಡು. ಅದಲ್ಲದೆ, ಅವಳಿಗೆ ಕಿಂಚಿತ್ತು ಮನಸೋತೆನಾದರೆ, ನೀ ನೋಕೆನ್ನ ಜನ್ಮ ಜನ್ಮಾಂತರ ಎಕ್ಕಲು

ನರಕದಲ್ಲಿ. ಎನ್ನನು ಇಕ್ಕದಿದ್ದೆಯಾದರೆ, ನಿಮಗೆ ನಿಮ್ಮಾಣೆ, ನಿನ್ನ ಅರ್ಧಾಂಗಿಯಾಣೆ, ನಿಮ್ಮ ಬಸವಾದಿ ಪ್ರಮಥರಾಣೆ. ಎನ್ನ ಅತಿ ಬಿಳಿದಿನ ಭಾಷೆ ಎಂಬುದು ನಿನ್ನ ಕರುಣವಯ್ಯಾ, ಘನಲಿಂಗಿಯ ಮೋಹದ ಚೆನ್ನಮಲ್ಲಿಕಾರ್ಜುನಾ.

(೧೭). ಅಮರಾವತಿ ಪಟ್ಟಣದಲ್ಲಿ ದೇವೇಂದ್ರನಾಳುವ ನಂದನವನವಯ್ಯಾ! ಅತ್ತ ಸಾರೆಲೆ ಕಾಮಮೋಹವೇ. ನೀನು ಲೋಕಾದಿಲೋಕವ ಮರುಳ ಮಾಡಿದೆ ಕಾಮಾ! ಗುಹೇಶ್ವರಲಿಂಗವನರಿಯೆ.

(೧೮). ಎಸೆಯದಿರು, ಎಸೆಯದಿರು ಕಾಮಾ, ನಿನ್ನ ಬಾಣ. ಎಸೆಯಲೇಕೋ? ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಇವು ಸಾಲವೇ? ನಿನಗೆ ಗುಹೇಶ್ವರಲಿಂಗದ ವಿರಹದಲ್ಲಿ ಬೆಂದವರ ಮರಳಿ ಸುಡಲುಂಟೇ ಮರುಳ ಕಾಮಾ?

---

## ದಾನಮಾಡು.

(೧). ಕಾಗೆ ಒಂದಗಳು ಕಂಡರೆ, ಕರೆಯದೇ ತನ್ನ ಬಳಗವನೆಲ್ಲವನು? ಕೋಳಿ ಒಂದು ಗುಟುಕ ಕಂಡರೆ, ಕರೆಯದೇ ತನ್ನ ಕುಲವನೆಲ್ಲವನು? ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದರೆ, ಕಾಗೆ ಕೋಳಿಗಿಂತ ಕರಕಷ್ಟ, ಕೂಡಲಸಂಗಮದೇವಾ.

(೨). ಆಯುಷ್ಯ ಉಂಟು, ಪ್ರಳಯವಿಲ್ಲೆಂದು ಅರ್ಥವ ಮಡಗುವಿರಿ. ಆಯುಷ್ಯತೀರಿ, ಪ್ರಳಯ ಬಂದರೆ, ಆ ಅರ್ಥವನುಂಬುವರಿಲ್ಲ. ನೆಲನನಗದು ಮಡಗದಿರಾ. ನೆಲನುಂಗಿದರುಗುಳುವುದೇ? ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಹಿ, ಉಣ್ಣದೆ ಹೋಗದಿರಾ! ನಿನ್ನ ಮಡದಿಗಿರಲೆಂದರೆ, ನಿನ್ನ ಮಡದಿಯ ಕೃತಕ ಬೇರೆ. ನಿನ್ನ ಒಡಲು ಕೆಡೆಯಲು, ಮತ್ತೊಬ್ಬನಲ್ಲಿಗೆ ಅಡಕದೆ ಮಾಣ್ಬಳೇ? ಹೆರರಿಗಿಕ್ಕಿ ಹೆಗ್ಗುರಿಯಾಗಿ ಕೆಡಬೇಡ. ಕೂಡಲಸಂಗನಶರಣರಿಗೆ ಒಡವೆಯು ಸವಿಸುವದು.

(೩). ಒಡಲು, ಒಡವೆ, ಧರೆ ನಿನಗಾಯಿತ್ತೆಂದು, ಉಣ್ಣಲೊಲ್ಲದಿಪ್ಪ ಮರುಳ ಮಾನವಾ, ನೀನು ಕೇಳಾ. ಅಡವಿಯನೆ ಕಳೆಗೊಂಡು, ನೆಲದೊಳಗೆ ಬೈಚಿಟ್ಟು, ಹೊಲಬುದಪ್ಪಿ ಭೂತಕ್ಕೆ ಕೊಡಲಿಲ್ಲವೆಯೋ? ಹಾಗಕ್ಕೆ ಹಾಗ

ಗಳಿಸಿ ಆಗಾಯಿತ್ತೆಂದು ಉಣಲೊಲ್ಲದಿಪ್ಪ ಮರುಳೇ, ಕೇಳು ಇದನರಿದು ಕಲ್ಯಾಣದ ತ್ರಿಪುರಾಂತಕಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದ ಕೇಳು ಮಾನವಾ.

(೪). ಭಕ್ತರು ದ್ರವ್ಯವ ಗಳಿಸಿದಲ್ಲಿ ತಮ್ಮ ತನುವಿದ್ದಲ್ಲಿಯೇ ಗುರು ಲಿಂಗ ಜಂಗಮಕ್ಕರ್ಪಿಸುವದು. ಇದೇ ಸದ್ಭಕ್ತಿಯ ಹೊಲಬು. ತಾನಳಿದ ಮತ್ತೆ, ಮನೆ ಮಕ್ಕಳಿಗೆಂದಡೆ, ಆಚಾರಕ್ಕೆ ಭಂಗ. ಆತನೇ ಸ್ವಾಮಿಗೆ ಸ್ವಾಮಿ ದ್ರೋಹಿ. ಇದನರಿದು ಕಲ್ಯಾಣದ ತ್ರಿಪುರಾಂತಕಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದ ಕೇಳಿ ಎಲ್ಲರೂ ಸತ್ಯವೆನ್ನಿರಣ್ಣಾ.

(೫). ಎಂಬತ್ತುನಾಲ್ಕು ಲಕ್ಷ ಮುಖದೊಳಗೊಂದೇ ಮುಖವಾಗಿ ಕಾಡಿ ನೋಡೆನ್ನನು. ಬೇಡಿ ನೋಡೆನ್ನನು. ಬೇಡದಿದ್ದರೆ, ಅಯ್ಯಾ, ನಿಮಗೆ ಪ್ರಮಥರಾಣೆ. ನಿಮಗೆ ನೀವಾವ ಮುಖದಲ್ಲಿ ಬಂದು ಬೇಡಿದಡೆ, ಈವೆನು ಕೂಡಲಸಂಗಮದೇವಯ್ಯ.

(೬). ತನುವ ಬೇಡಿದ್ದಡೀವೆ. ಮನವ ಬೇಡಿದಡೀವೆ. ಧನವ ಬೇಡಿದಡೀವೆ. ಬೇಡು ಬೇಡೆಲೆ ಹಂದೆ. ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ. ಕೂಡಲಸಂಗಮದೇವಾ, ನಿಮಗಿತ್ತು ಶುದ್ಧನಾಗಿಪ್ಪ ನಿಮ್ಮ ಪುರಾತನರ ಮನೆಯಲ್ಲಿ.

(೭). ಹುಟ್ಟುತ್ತ ದ್ರವ್ಯವನರಿಯದವಂಗೆ ಐಶ್ವರ್ಯವಂತ ಮಗನಾದರೆ, ಲಕ್ಷಸಂಖ್ಯಾಯ ಹಿರಣ್ಯವ ತಂದು ಸಂತೋಷ ಬಡಿಸುವಂತೆ, ಕಾಳಗ ಮುಖವಾವುದೆಂದರಿಯದ ಹಂದೆ ನೃಪಂಗೆ ಒಬ್ಬ ಕ್ಷತ್ರಿಯನಖ ಕುಮಾರ ಹುಟ್ಟಿ ಕಿಗ್ಗಡಲ ರಕ್ತದ ಹೊನಲಲ್ಲಿ ಕಡಿದು ಮುಳುಗಾಡುವ ಕೊಳಂಗಳ ಕಂಡು ಪರಿಣಾಮಿಸುವಂತೆ, ಅನುಪರಿಣಾಮಿಸುವೆನಯ್ಯ, ಕೂಡಲ ಸಂಗಮದೇವಾ, ನೀವು ಬಂದೆನ್ನ ಬೇಡಿದರೆ.

(೮). ಗೆಜ್ಜಲು ಮನೆಮಾಡಿ, ಸರ್ಪಂಗೀಡಾದಂತೆ, ತಾನತ್ತಣ ದ್ರವ್ಯವ ತಂದು, ಇತ್ತ ಮಾಡಿದಡೆ, ನಿನಗೆತ್ತಣ ಮುಕ್ತಿ ಅಮರೇಶ್ವರ ಲಿಂಗವೇ.

(೯). ಸ್ವಲ್ಪ ಅಮೃತಾನ್ನವನೊಯ್ದು, ಹುತ್ತವೆಂದು ಬಿಲದ್ವಾರದಲ್ಲಿ ಹೊಯ್ವ ತೊತ್ತಿಗೆಲ್ಲಿಯದೋ ಶಿವಾಚಾರ? ಅದು ಎಂತೆಂದೊಡೆ ಕಲ್ಲನಾಗರ

ಕಂಡರೆ, ಹಾಲು ಹೊಯ್ಯೆಂಬಳು. ಬದುಕಿದ ಸಾಗರ ಕಂಡರೆ, ಕೊಲ್ಲು, ಕೊಲ್ಲು, ಎಂಬಳು. ಉಂಬ ದೇವರು ಬಂದರೆ, ಇಲ್ಲವೆಂದು ಅಟ್ಟುವಳು. ಉಣ್ಣದ ಕಲ್ಲುಪ್ರತಿಮೆಯ ಮುಂದಿಟ್ಟು, 'ಉಣ್ಣು' 'ಉಣ್ಣು' ಎಂಬಳು. ಇಂತೀ ವೇಷದ ಡಂಭ ತೊತ್ತಿಗೆ ವಿಚಾರಿಸದೆ, ಲಿಂಗವ ಕೊಡಲಾಗದೆಂದಾತ ನಮ್ಮ ಅಂಬಿಗರ ಚೌಡಯ್ಯ.

(೧೦). ಪರಮಪುರುಷಾರ್ಥವನರಿಯದ ಕೆಟ್ಟ ನರಗುರಿಗಳ್ಳು ನೀವು ಕೇಳಿರೋ. ಪರಮಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು. ಮರಳಿ ಕೊಟ್ಟದ್ದಕ್ಕೆ ಕೀರ್ತಿದೇಹವಂ ಪಡೆದವರ ಪರಿಯು ಕೇಳು. ಮನದೊಳಗೆ ಪರಮಪುರುಷಾರ್ಥಿಯಾದರೆ ವೀರ ವಿಕ್ರಮನಂತಾಗಬೇಕು. ಪರಮಪುರುಷಾರ್ಥಿಯಾದರೆ ಬಸವಕುಮಾರನಂತಾಗಬೇಕು. ಪರಮ ಪುರುಷಾರ್ಥಿಯಾದರೆ ಕಪೋತ ಪಕ್ಷಿಯಂತಾಗಬೇಕು. ಇಂತೀ ಪರಮ ಪುರುಷಾರ್ಥಕ್ಕೆ ಪ್ರಾಣವ ಕೊಟ್ಟವರುಂಟು. ಹಣವೇನು ದೊಡ್ಡಿತ್ತು? ಮಣ್ಣೇನು ದೊಡ್ಡಿತ್ತು? ಉದಕವೇನು ದೊಡ್ಡಿತ್ತು? ವಸ್ತ್ರವೇನು ದೊಡ್ಡಿತ್ತು? ಮಠವೇನು ದೊಡ್ಡಿತ್ತು? ಇಂತಿವುಗಳೊಳು ಒಂದನಾದರೂ ಪರಮಪುರುಷಾರ್ಥಕ್ಕೆ ನೀಡಿ, ಮಾಡದೆ ತನ್ನ ಶರೀರವ ಹೊರೆದುಕೊಂಡು ಬದಕುವೆನೆಂಬ ಮೂಳಂಗೆ ಇಹಪರನಾಸ್ತಿ ಎಂದಾತ ನಮ್ಮ ಅಂಬಿಗರಚೌಡಯ್ಯನು.

(೧೧). ಅರ್ಥಪ್ರಾಣಾಭಿಮಾನವನೊಪ್ಪಿಸಿದಲ್ಲಿ, ಭಕ್ತನಪ್ಪನೇ? ಅಲ್ಲ. ಆದಿರುದ್ರನ ಮಗಳು ಆದಿಶಕ್ತಿ. ಈ ಆದಿಶಕ್ತಿಯ ಮಗ ವಿಷ್ಣು. ಆ ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಎನ್ನ ಮನದೊಡೆಯ ಮಹಾದೇವ, ನಿಮ್ಮ ಸೊಮ್ಮು ನಿಮಗೊಪ್ಪಿಸಿ, ನಾನು ಶುದ್ಧನಪ್ಪೆ ಕಾಣಾ ಕೂಡಲಸಂಗಮದೇವಾ.

(೧೨). ಹತ್ತು ಮತ್ತರಭೂಮಿ, ಬತ್ತದ ಹಯನ, ನಂದಾದೀವಿಗೆಯ ನಡಿಸಿಹೆನೆಂಬವರ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು. ಅಂಡಜ, ಸ್ವೇದಜ, ಉದ್ಭಿಜ, ಜರಾಯುಜವೆಂಬ ಪ್ರಾಣಿಗಳಿಗೆ ಭವಿತವ್ಯವ ಕೊಟ್ಟವರಾರೋ? ಒಡೆಯರಿಗೆ ಉಂಡಿಗೆಯ ಮುರಿದಿಕ್ಕಿದಂತೆ ಎನ್ನಿಂದಲೇ

ಆಯಿತ್ತು ಎನ್ನಿಂದಲೇ ಹೋಯಿತ್ತೆಂಬವನ ಬಾಯಲ್ಲಿ ಮೆಟ್ಟಿ ಹುಡಿಯ ಹೊಯ್ಯದೆ ಮಾಣ್ಬನೇ ಕೂಡಲಸಂಗಮದೇವಾ?

(೧೩). ಅನವರತ ಮಾಡಿಹೆನೆಂದು ಉಪ್ಪರಗುಡಿಯ ಕಟ್ಟಿ ಮಾಡುವ ಭಕ್ತನ ಮನೆಯದು ಅಂದಣಗಿತ್ತಿಯ ಮನೆ. ಸರ್ವ ಜೀವದಯಾಪರನೆಂದು ಭೂತದೈವಕ್ಕಿಕ್ಕುವನ ಮನೆ ಸುಯಿಧಾನದ ಕೇಡು. ಸೂಳೆಯ ಮಗ ಮಾಳವಿಯ ಮಾಡಿದರೆ ತಾಯ ಹೆಸರಾಯಿತ್ತಲ್ಲದೆ ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ.

(೧೪). ಲಿಂಗಜಂಗಮಕ್ಕೆ ಮಾಡುವ ಭಕ್ತಿ ಮನಸ್ಸಾಕ್ಷಿಯಾಗಿರಬೇಕಲ್ಲದೆ, ಇದಿರಿಟ್ಟು ನುಡಿಯಲಾಗದು. ಅದೇನು ಕಾರಣವೆಂದಡೆ ಬಡವನಿಗೆ ಭಾಗ್ಯ ದೊರೆಕೊಂಡಂತಿರಬೇಕಲ್ಲದೆ ಎನ್ನ ಪದಾರ್ಥವ ನಾನು ಮಾಡಿದೆನು ಅವರು ಕೈಕೊಂಡರೆಂದು ತನ್ನ ಖ್ಯಾತಿ ಭಕ್ತಿಯನು ಮನಹಿಗ್ಗಿ ಅನ್ಯರೊಡನೆ ಹೇಳಿಕೊಂಡರೆ ಶಿವನೊಪ್ಪುಗೊಳ್ಳನು, ಪುರಾತನರು ಮೆಚ್ಚರು. ಅಂತಪ್ಪ ಖ್ಯಾತಿ ಭಕ್ತಿ ಎಂತಾಯಿತ್ತೆಂದಡೆ ಹಾವಸಿಗಲ್ಲ ಮೆಟ್ಟಿ ಜಾರಿ ಬಿದ್ದು ಕೊಡನೊಡದಂತಾಯಿತ್ತು ಕಾಣಾ ಅಖಂಡೇಶ್ವರಾ.

(೧೫). ಕೊಡುವವ ಮಾನವನೆಂದೊಡೆ ಹೊಡೆಬಾಯ ಕೆರಹಿನಟ್ಟೆಯಲ್ಲಿ. ಮಾನೀಶನ ಹೃದಯದೊಳು ತಾನೀಶ ಹೊಕ್ಕು ಸಲುವಷ್ಟು ಕೊಡಿಸುವ ಕಾಣಾ ದೇವರಾಯ ಸೊಡ್ಡಳಾ.

(೧೬). ನೀನೀಶನೀಯದೆ ಮಾನೀಶ ನೀವನೇ? ನೀನೀಸುವ ಕಾರಣ ಮಾನೀಶನೀವನು. ಆ ಮಾನೀಶನ ಹೃದಯದೊಳು ಪೊಕ್ಕು, ನೀನೀಸುವ ಕಾರಣದಿಂದ ನೀನೇ ಶರಣೆಂಬೆನಯ್ಯಾ ರಾಮನಾಥಾ.

(೧೭). ಮಾಡುವ ಭಕ್ತಂಗೆಯೂ ಕೊಡುವ ದೇವಂಗೆಯೂ ಎಂದೆಂದಿಗೂ ಕೇಡಿಲ್ಲ. ಮಾಡಿ ಭೋ, ಮಾಡಿ ಭೋ. ಎಲ್ಲವೂ ಸವೆಯಿತ್ತು ಹೋಯಿತ್ತೆಂಬ ಚಿಂತೆ ಸಂತೋಷವಿಲ್ಲದೆ ಮಾಡಿ ಭೋ ನಮ್ಮ ಸಕಳೇಶ್ವರದೇವನರಿದು ಸಲುಹುವನಾಗಿ.

(೧೪). ಹಲವುಕಾಲ ಧಾವತಿಗೊಂಡು ಹಿಡಿದಡೆಯೂ ಒಂದನ್ಯಾಯತ ದಿಂದ ಸಲೆ ಸನ್ನಿಹಿತನಾಗಿಪ್ಪ ಶರಣನ ಭಕ್ತಿ ಒಂದನ್ಯಾಯತದಿಂದ ಕೆಡುವುದು; ಸ್ವಧರ್ಮದಲ್ಲಿ ಗಳಿಸಿದ ಪಿತನ ಧನವ ಅಧರ್ಮದಲ್ಲಿ ಕೆಡಿಸುವ ಸುತನಂತೆ, ಶಿವನ ಸೊಮ್ಮು ಶಿವಂಗೆ ಮಾಡದೆ, ಅನ್ಯಕ್ಕೆ ಮಾಡಿದಡೆ, ತನ್ನ ಭಕ್ತಿ ತನ್ನನೆ ಕೆಡಿಸುವದು ಕೂಡಲಸಂಗಮದೇವಾ.

(೧೫). ಕೆರೆಯಲ್ಲಿ ಉಂಡು ತೊರೆಯ ನೆನೆವನಂತೆ, ಅರುಕೊಟ್ಟ ಒಡವೆಯ ಅರಿಗಿಕ್ಕಿ ತಾನಾರಾಧಿಸಿಕೊಂಬವನ ನೇಹವಾ. ಅಲ್ಲಿ ಗಲ್ಲಿಗೆ ಎಲ್ಲಿಯೂ ತಪ್ಪದು. ಇದನರಿದು ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

---

## ಲೋಭಿಯಾಗಬೇಡ.

(೧). ಸಂಸಾರವೆಂಬುದೊಂದು ಗಾಳಿಯ ಸೊಡರು. ಸಿರಿ ಎಂಬುದೊಂದು ಸಂತೆಯ ಮಂದಿ ಕಂಡೆಯ್ಯಾ. ಇದನು ನೆಚ್ಚಿ ಕೆಡಬೇಡ. ಸಿರಿ ಎಂಬುದ ಮರೆದು, ಪೂಜಿಸು ನಮ್ಮ ಕೂಡಲಸಂಗಮದೇವನ.

(೨). ಎಲೆ ಎಲೆ ಮಾನವ, ಅಳಿಯಾಸೆಬೇಡೆಲೋ, ಕಾಡಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೊಡಲು, ಕೂಡಲಸಂಗಮದೇವನ ಮರೆಯದೆ ಪೂಜಿಸು.

(೩). ಹರನೀವಕಾಲಕ್ಕೆ ಸಿರಿಯು ಬೆನ್ನಲ್ಲಿ ಬಕ್ಕುಂ. ಹರಿದು ಹೆದ್ದೊರೆಯು ಕೆರೆ ತುಂಬಿದಂತಯ್ಯಾ. ನೆರೆಯದ ವಸ್ತು ನೆರೆವುದು ನೋಡಯ್ಯಾ. ಅರಸು ಪರಿವಾರ ಕೈವಾರ ನೋಡಯ್ಯಾ. ಪರಮ ನಿರಂಜನನು ಮರೆವಕಾಲಕ್ಕೆ ತುಂಬಿದ ಹರಿಗೋಲು ಕಲ್ಲು ಕೊಂಡಂತೆ ಕೂಡಲಸಂಗಮದೇವಾ.

(೪). ಕಾಂಚನವೆಂಬ ನಾಯ ನೆಚ್ಚಿ, ನಿಮ್ಮನ್ನು ನಾನು ಮರೆದೆನಯ್ಯಾ. ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆ ಇಲ್ಲ. ಹಿತ್ತಿಕೆಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವಾ!

(೫). ಸಿರಿ ಬಂದೊದಗಿತ್ತೆಂದು, ಹಿರಿದಾಗಿ ಹಿಗ್ಗಬೇಡ. ಸಿರಿ ಎಂಬುದು ಕನಸಿನ ಸ್ತ್ರೀಯಂತೆ ನೋಡಾ. ಎಲೆ ಮರುಳ ಮಾನವ ಇದನರಿತು, ಶ್ರೀಮಹಾದೇವನ ಪೂಜಿಸಿದೊಡೆ, ಸ್ಥಿರವಾದ ಪದವಿಯನೀವ ನಮ್ಮ ಅಖಂಡೇಶ್ವರಾ.

(೬). ಮಡದಿ, ಮಕ್ಕಳು, ಪಡೆದ ದ್ರವ್ಯವು ಎನ್ನೊಡವೆ ಎಂದು ನೆಚ್ಚಬೇಡಿರೋ. ಎಲೆ ಹುಚ್ಚ ಮಾನವರಿರಾ, ಅವು ನಿಮ್ಮ ಒಡವೆಯಾದಡೆ, ನೀವು ಮಡಿದು ಹೋಗುವಾಗ್ಗೆ, ನಿಮ್ಮೊಡನೆ ಬಪ್ಪವೇ ಹೇಳಿರೋ? ಇದನರಿತು ತಡೆಯದೆ ಮೃಡನ ಸೇವೆಯೊಳು ತೊಡಗಿದರೆ, ಕಡೆ ಮೊದಲಿಲ್ಲದ ಪದವು ದೊರೆಕೊಂಬುದು ನೋಡಾ, ನಮ್ಮ ಅಖಂಡೇಶ್ವರ ಲಿಂಗದಲ್ಲಿ.

(೭). ಮುನ್ನ ಗಳಿಸಿದವರೊಡವೆಯು ಈಗ ಕಂಡು, ಮತ್ತೆ ಇನ್ನಾರಿಗೆ ಗಳಿಸಿಹಿರಣ್ಣಾ. ಅಂದಂದಿಂಗೆ ಮಳೆ ಬೆಳೆ ತಾನಿದ್ದಂದಿಗೂ ತಪ್ಪದು. ಇದನರಿದು ಕಲ್ಯಾಣದ ತ್ರಿಪುರಾಂತಕಲಿಂಗದಲ್ಲಿ ಗಾವುದಿಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

(೮). ಪಶುಸಾವುತ್ತ ತನ್ನ ಶಿಶುವಿಂಗೆ ಏನಗಳಿಸಿಕೊಟ್ಟಿತ್ತು? ಪಿಂಡ ಹುಟ್ಟುವಾಗ, ಅದಕ್ಕೆ ಸಂಚಿತ, ಪ್ರಾರಬ್ಧ, ಆಗಾಮಿ ತಪ್ಪದೆಂದೆ. ಆರು ಸತ್ತಡೂ, ಲೇಸಿಗರಿಲ್ಲ. ತಮ್ಮ ತಮ್ಮಷ್ಟಕ್ಕೆ ಲೇಸಿಗರೆಲ್ಲರು. ಇದು ತಪ್ಪದು. ಕಲ್ಯಾಣದ ತ್ರಿಪುರಾಂತಕಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ದಿಟವೆನ್ನಿರಣ್ಣಾ.

(೯). ಧನದಲ್ಲಿ ಶುಚಿ, ಪ್ರಾಣದಲ್ಲಿ ನಿರ್ಭಯ, ಇದಾರಿಂಗಳವಡುವುದಯ್ಯಾ? ಸಧಾನ ತಪ್ಪಿ ಬಂದರೆ, ಒಲ್ಲೆನೆಂಬುವರಿಲ್ಲ. ಪ್ರಮಾದವಶದಿಂ ಬಂದರೆ, ಹುಸಿ ಎಂಬುವರಿಲ್ಲ, ನಿರಾಶೆ ನಿರ್ಭಯ ಕೂಡಲಸಂಗಮದೇವಾ, ನೀನೊಲಿದ ಶರಣಂಗಲ್ಲದಿಲ್ಲ.

(೧೦). ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಕಾಳೋರಗನ. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಹಾರುವ ಪಕ್ಷಿಯನು. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಹೆಬ್ಬುಲಿಯ. ನಿಲ್ಲಿಸಬಹುದಯ್ಯಾ ಒಂದೇ ಮಂತ್ರದಿಂದ ಮೃತ್ಯುವೆಂಬ ಹೆಮ್ಮಾರಿಯ. ಲೋಭವೆಂಬ ಗ್ರಹಹಿಡಿದವರನು ಯಾತ

ರಿಂದಲೂ ಬಿಡಿಸಲಾಗದು. ಈ ಲೋಭಕ್ಕೆ ದರಿದ್ರವೇ ಔಷಧವು. ಹೇಳಿದರೆ ಕೇಳರು, ತಾವು ತಿಳಿಯರು, ಶಾಸ್ತ್ರವ ನೋಡರು, ಭಕ್ತಿಯ ಹಿಡಿಯರು. ಇಂತಹ ಗೊಡ್ಡ ಮೂಳ ಹೊಲೆಯರಿಗೆ ಕರ್ಮವೆಂಬ ಶರಧಿಯಲ್ಲಿ ಬಿದ್ದು ಉರುಳಾಡುವದೇ ಸತ್ಯವೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

(೧೧). ಅರ್ಥವ ಗಳಿಸಿ ಆತ್ಮ ಪುತ್ರರ್ಗಿರಿಸಬೇಡ. ಅರಿಗಾರೂ ಇಲ್ಲ. ಶಿವನಲ್ಲದೆ ಹಿತವರಿಲ್ಲವೆಂದರಿದು ಶಿವನೊಡವೆಯ ಶಿವನವರಿಗೆ ಕೊಡು ಮರುಳೇ. ಅರ್ಥದಲ್ಲೇನೂ ಸುಖವಿಲ್ಲ. ಅರ್ಥವನಾರ್ಜಿಸುವಲ್ಲಿ ದುಃಖ, ಆರ್ಜಿಸಿದ ಧನವ ರಕ್ಷಿಸುವಲ್ಲಿ ದುಃಖ, ನಾಶವಾದಡೆ ದುಃಖ, ವೆಚ್ಚವಾದಡೆ ದುಃಖ ಈ ಸ್ಥಿತಿಯಲ್ಲಿ ಅರ್ಥದಿಂದ ಸದಾ ದುಃಖವಡೆದವರಿಗೆ ಸುಖವಿಲ್ಲೆಂದರಿಯದೆ ಧನದರ್ಥದ ಮರವೆಯಲ್ಲಿ ಬಳಲುತ್ತಿಹ ಮನುಜರಿಗಿನ್ನಾವ ಗತಿಯೂ ಇಲ್ಲವಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---

## ನಿಷ್ಕಪಟಿಯಾಗಿರು.

(೧). ಎನ್ನ ನಡೆಯೊಂದು ಪರಿ. ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯ. ನುಡಿಗೆ ತಕ್ಕ ನಡೆ ಕಂಡರೆ, ಕೂಡಲಸಂಗಮದೇವ ನಿಮ್ಮೊಳಗಿಪ್ಪನಯ್ಯ.

(೨). ಎರಡೆಲೆಯಂತೆ ಒಳಗೊಂದು ಹೊರಗೊಂದಾದರೆ, ಮೆಚುವನೇ ಶಿವನು? ಬಾರದ ಭವಂಗಳಲ್ಲಿ ಬರಿಸುವನಲ್ಲದೆ, ಮೆಚ್ಚುವನೇ? ಅಘೋರ ನರಕವನುಣಿಸುವನಲ್ಲದೆ ಮೆಚ್ಚುವನೇ? ಉಡುಹಿನ ನಾಲಿಗೆಯಂತೆ ಎರಡಾದರೆ, ಕೂಡಲಸಂಗಯ್ಯ ಮೆಚ್ಚುವನೇ?

(೩). ಒಲಿಯ ಬೂದಿಯ ಬಳಿಯಲು ಬೇಡ. ಒಲಿಯಂತೆ ಹೂಸಿಕೊಂಡಿಪ್ಪುದು ಹುಸಿ. ಏನು ಫಲ, ಮನದಲ್ಲಿ ಲೇಸಿಲ್ಲದನ್ನಕ್ಕರ? ಒಂದ ನಾಡ ಹೋಗಿ ಒಂಬತ್ತ ನಾಡುವ ಡಂಭಕರ ಮೆಚ್ಚ ಕೂಡಲಸಂಗಮದೇವಾ.

(೪). ಹುತ್ತವ ಬಡಿದರೆ, ಹಾವು ಸಾಯಬಲ್ಲುದೇನಯ್ಯ? ಅಘೋರ ತಪವ ಮಾಡಿದಡೇನು? ಅಂತರಂಗ ಆತ್ಮಶುದ್ಧವಿಲ್ಲದವರನೆಂತು ನಂಬುವೆನಯ್ಯ, ಕೂಡಲಸಂಗಮದೇವಾ?

(೫). ಸೋಲಬಲ್ಲರು ಅವರು ಗೆಲಲರಿಯರಯ್ಯಾ. ತನುಮನಧನದಲ್ಲಿ ವಂಚನೆಯನರಿಯರಯ್ಯಾ. ದಾಸ ಸಿರಿಯಾಳನವರು ಕೂಡಲಸಂಗನ ಶರಣರು ಬರಿಯ ಉಪಚಾರವನರಿಯರಯ್ಯಾ.

(೬). ಅರ್ಥ ಉಂಟೆಂದು ಅಹಂಕರಿಸಿ ಮಾಡುವನ ಭಕ್ತಿ ತೊತ್ತಿನ ಕೂಟದ ತೂರ್ಯದಂತೆ. ತನುಮನಧನದಲ್ಲಿ ವಂಚನೆಯುಳ್ಳ ಪ್ರಪಂಚಿಯ ಮನೆಯ ಕೂಳು, ಶುನಕನ ಬಾಯಲು ಪ್ರತಿಶುನಕ ತಿಂದಂತೆ ಕಾಣಾ ರಾಮನಾಥಾ.

(೭). ಭಕ್ತಿ ಎಳ್ಳನಿತಿಲ್ಲ, ಯುಕ್ತಿ ಶೂನ್ಯನಯ್ಯಾ ನಾನು. ತನುವಂಚಕ, ಮನವಂಚಕ, ಧನವಂಚಕ ನಾನಯ್ಯಾ. ಕೂಡಲಸಂಗಮದೇವಾ, ಮಳಲೊಟ್ಟಿಲೆನ್ನ ಮಾತು.

(೮). ಕಳ್ಳಗಂಜಿ ಕಾಡಹೊಕ್ಕರೆ, ಹುಲಿ ತಿಂಬುದಮಾಬುದೇ? ಹುಲಿ ಗಂಜಿ ಹುತ್ತವ ಹೊಕ್ಕರೆ, ಸರ್ಪ ತಿಂಬುದಮಾಬುದೇ? ಕಾಲಗಂಜಿ ಭಕ್ತನಾದರೆ, ಕರ್ಮ ತಿಂಬುದಮಾಬುದೇ? ಮೃತ್ಯುವಿನ ಬಾಯ ತುತ್ತಾದ ವೇಷಡಂಭಕರನೇನೆಂಬೆ ಗುಹೇಶ್ವರಾ?

(೯). ಓತಿ ಬೇಲಿವರಿದಂತೆ, ಎನ್ನ ಮನವಯ್ಯಾ. ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆ ಎನ್ನ ಮನವು. ಬಾವುಲ ಬಾಳುವೆಯಂತೆ ಎನ್ನ ಮನವು. ನಡುವಿರುಳೆದ್ದ ಕುರುಡಂಗೆ ಅಗಸಿಯಲ್ಲಿ ಬೆಳಗಾದಂತೆ ಎನಗಿಲ್ಲದ ಭಕ್ತಿಯ ಬಯಸಿದರುಂಟೇ ಕೂಡಲಸಂಗಮದೇವಾ?

(೧೦). ವೇಷ ಎಲ್ಲಿರದು? ಸೂಳೆಯಲ್ಲಿ, ಡೊಂಬನಲ್ಲಿ, ಬಹುರೂಪಿಯಲ್ಲಿ ಇರದೇ? ವೇಷವ ತೋರಿ, ಒಡಲ ಹೊರೆವ ದಾಸಿ ವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದೋ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ?

(೧೧). ಶ್ವಾನಂಗೆ ಪೃಷ್ಠದಲ್ಲಿ ಬಾಲ, ಉಪಾಧಿಕಂಗೆ ಬಾಯಲ್ಲಿ ಬಾಲ, ನೋಡಾ. ಮಮಕಾರವೆಂಬ ನಾಯಿ ಎದ್ದು ಮರುಗಲು, ನಾಲಿಗೆ ಎಂಬ ಬಾಲ ಬಡಿವುತ್ತಿದೆ ನೋಡಾ. ಒಡಲ ಉಪಾಧಿಗೆ ಉಪಚಾರವ ನುಡಿವ ವಿರಕ್ತನ

ನಾಲಿಗೆ ನಾಯಬಾಲಿಗಿಂತ ಕರಕಷ್ಟ ನೋಡಾ. ಪರಮಾರ್ಥ ಪದದಲ್ಲಿ ಪರಿಣಾಮಿಯಾದವನ ಛಾಯಲ್ಲಿ ಪ್ರಪಂಚುಂಟೇ ಹೇಳಾ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ?

---

## ಅಹಂಕಾರಿಯಾಗಬೇಡ.

(೧). ಆಚಾರವನರಿಯದೆ, ಕ್ರಿಯಾಕಾರ ಉಡುಗದೆ, ವಿಭವವಳಿಯದೆ, ಕೋಪವಡಗದೆ, ತಾಪವುರಿಯದೆ, ಬರಿದೆ ನೆನೆದ ಹೊರಸಿನಂತೆ, ಬೆಬ್ಬಳಿಸಿ ಬೆಬ್ಬನೆ ಬೆರೆವರ ಕೇಡಿಂಗೆ ನಾನು ಬೆರಗಾದೆನು ಕಾಣಾ ಗುಹೇಶ್ವರಾ.

(೨). ನಾನೀನೆಂಬ ಅಹಂಕಾರ ತಲೆದೋರಿದಲ್ಲಿ ಆಟಮಾಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು. ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು. ಜ್ಞಾನಜ್ಯೋತಿ ಕೆಡಲೊಡನೆ ನಾ ಬಲ್ಲೆ ಬಲ್ಲಿದರೆಂಬ ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ, ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ.

(೩). ದೇಹನಿರ್ದೇಹವೆನುತಿಪ್ಪರಯ್ಯಾ. ದೇಹನಿರ್ದೇಹವಪ್ಪ ಮಾರ್ಗವನರಿಯರು. ಅಹಂ ಎಂಬುದೇ ದೇಹ, ದಾಸೋಹಂ ಎಂಬುದೇ ನಿರ್ದೇಹ ನೋಡಾ. ಅಕಾಯೋ ಭಕ್ತಕಾಯೋ ವಾ ಎಂದುದಾಗಿ ಅಹಂಭಾವವಳಿದವರ ಕೂಡಲಚೆನ್ನಸಂಗಯ್ಯನಲ್ಲಿ ನಿರ್ದೇಹಿಗಳೆಂಬೆ.

(೪). ತಮ್ಮ ತಾವರಿಯರು. ಹೇಳಿದರೆ ಕೇಳರು. ಅರಿದು ಹೊಲಬನೇನೆಂದರಿಯರು. ಕೆಟ್ಟರೆ ಕಂಟಕವ ಮುನ್ನರಿಯರು. ಏರಿದ ಬೆಟ್ಟವ ಇಳಿಯಲರಿಯದವರನೇನೆಂಬೆ ಗುಹೇಶ್ವರಾ?

(೫). ಲಿಂಗಭಕ್ತನೆಂದು ಜಗವೆಲ್ಲ ಸಾರುತ್ತಿರ್ಪುದು. ಲಿಂಗಭಕ್ತನ ಇಂಬಾವುದೆಂದರಿಯರು. ಲಿಂಗಭಕ್ತ ಹಮ್ಮುಬಿಮ್ಮಿನವನೇ? ಲಿಂಗಭಕ್ತ ಸೀಮೆಯಾದವನೇ ಗುಹೇಶ್ವರಾ?

(೬). ಮಾಡುವ ಭಕ್ತಂಗೆ ಮನವೇ ಸಾಕ್ಷಿ. ಹೊರಹೊಮ್ಮಿ ಬಯಲ ಹೊರಲೇಕೆ? ಹಮ್ಮಿಲ್ಲದೆ ಮಾಡಿ, ಮನದಲ್ಲಿ ಮರುಗದಿರ್ದಡೆ, ಅಲ್ಲಿ ತಾ ಕೂಡಿ ಹಿಂಗದಿರ್ದ ನಂಬಿಗ ಚೌಡಯ್ಯ.

(೭). ನಾನೆಂಬಹಂಕಾರದಲ್ಲಿ ನಾನುಂಡೆನಾದರೆ, ಎನಗದೇ ಭಂಗ. ಸ್ತುತಿನಿಂದೆಗೆ ನೊಂದೆನಾದೊಡೆ, ಅಂಗೈಯಲ್ಲಿದ್ದ ಗುಹೇಶ್ವರಲಿಂಗಕ್ಕೆ ದೂರ.

(೮). ನಿನ್ನ ಹರೆಯದ ರೂಹಿನ, ಚೆಲುವಿನ ನುಡಿಯ, ಜಾಣಿನ, ಸಿರಿಯ ಸಂತೋಷದ, ಕರಿತುರಗರಥಪದಾತಿಯ ನೆರವಿಯ, ಸತಿಸುತರ ಬಂಧುಗಳ ಸಮೂಹದ, ನಿನ್ನ ಕುಲದಭಿಮಾನದ ಗರ್ವವ ಬಿಡು. ಮರುಳಾಗದಿರು. ಅಕಟಕಟಾ ರೋಮಜನಿಂದ ಹಿರಿಯನೇ? ಮಾರನನಿಂ ಚೆಲುವನೇ? ಸುರಪತಿಯಿಂ ಸಂಪನ್ನನೇ? ವಾಮದೇವ ವಶಿಷ್ಠರಿಂದ ಕುಲಜನೇ? ಅಂತಕನ ದೂತರು ಬಂದು ಕೈವಿಡಿದೆಳೆದುಯ್ಯುವಾಗ, ನುಡಿ ತಡವಿಲ್ಲ, ಕೇಳೋ ನರನೇ? ಎನ್ನ ಮಹಾಲಿಂಗ ತ್ರಿಪುರಾಂತಕದೇವರ ಪೂಜಿಸಿದೆಯಾದರೆ, ಕೇಡಿಲ್ಲದ ಪದವು ದೊರೆಕೊಂಬುವದು ಮರುಳೇ.

(೯). ಸಂಸಾರದಲ್ಲಿ ಹುಟ್ಟಿ, ಮತ್ತೊಂದ ಬಯಸಲೇಕಯ್ಯ? ನಗುವದು ನುಡಿವುದು ಶಿವಭಕ್ತರೊಡನೆ, ಸುಮ್ಮನೆ ಹೆಮ್ಮೆಬಿಮ್ಮಾಗಿರಲೇಕಯ್ಯ? "ಅಭ್ಯಾಸಸ್ಯ ವಿಹೀನಸ್ಯ ತಸ್ಯ ಜನ್ಮನಿರರ್ಥಕಂ ॥ ಗುರಾವಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ॥" ಎಂದುದಾಗಿ, ನಮ್ಮ ಕೂಡಲಸಂಗನ ಶರಣರೊಡನೆ ಮನದೆರೆದು ಮಾತನಾಡುವದಯ್ಯ

(೧೦). "ವೇದಾದಿನಾಮ ನಿರ್ನಾಮ ಮಹತ್ತತ್ವಂ ಮಹೇಶ್ವರಃ। ಗುರೂಕ್ತ ಮಂತ್ರ ಮಾರ್ಗೇಣ ಇಷ್ಟಲಿಂಗಂತು ಶಾಂಕರೀ" ಎಂದುದಾಗಿ, ವಚನ ಪಾತಕವೆನ್ನ, ವಚನದೋಷಗಳೆನ್ನ ಕಾಡಿಕಾಡಿ ಕೆಡಿಸಿಹವೆನ್ನ ಕೂಡಲಸಂಗಮದೇವಾ, ಅಹಮೆಂಬ ಅಹಂಕಾರವೆನ್ನ. ಬ.

(೧೧). ಅರಿದೆವರಿದೆವೆಂಬರಿ. ಅರಿದ ಪರಿ ಎಂತು ಹೇಳಿರೇ? ಅರಿದವರು ಅರಿದೆವೆಂಬರೇ? ಅರಿಯಬಾರದ ಘನವನರಿದವರು ಅರಿಯದಂತಿರ್ಪರು ಗುಹೇಶ್ವರಾ.

(೧೨). ಕುರುಡ ಕಾಣನೆಂದು, ಕಿವುಡಕೇಳನೆಂದು, ಹೆಳವ ಇರಿಯನೆಂದು, ಮರುಳ ಬೈದನೆಂದು, ಪಿಶಾಚಿ ಹೋದನೆಂದು ಮನಕದನ ಬಡುವನೇ?

ತಾನರಿವುಳ್ಳಾತ ತತ್ವವನರಿಯದವರಲ್ಲಿ ಗುಣದೋಷವನರಸುವನೆ ಹೇಳಾ ಸಿಮ್ಮು ಲಿಗೆಯ ಚನ್ನರಾಮಾ ?

(೧೩). ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಾಳನೆಂಬೆನೇ ಮಾಚ ಯ್ಯನ? ಡೋಹರನೆಂಬೆನೆ ಕಕ್ಕಯ್ಯನ ! ಮಾದರನೆಂಬೆನೇ ಚನ್ನಯ್ಯನ? ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯ.

(೧೪). ಬಲೀಂದ್ರನ ಸಿರಿಯಿಂದಧಿಕರ ನಾನಾರನೂ ಕಾಣೆ. ಅಂತಹ ಸಂಪತ್ತು ಮೂರಡಿಗ್ಯೆದದೆ ಹೋಯಿತ್ತು. ಕೆಡುವಂತಿದ್ದಿತೇ ಕೌರವನರಾಜ್ಯ? ಮಡಿವಂತಿದ್ದಿತೇ ರಾವಣನ ಬಲ್ಲಾಳಿಕೆ? ಪರಸ್ತ್ರೀ ಲಕ್ಷ್ಮೀದೇವಿಗೊಲಿದು ಒಂದು ನಿಮಿಷದಲ್ಲಿ ಮಡಿದ. ಇದು ಸತ್ಯ, ಇದು ಸತ್ಯ. ಸಿರಿ ಸೌಕರ್ಯವೆಂಬುದು ಆಕಾಶದ ರಚನೆ. ಇದನರಿದು, ದೇಹದಿಚ್ಛೆಯನತಿಗಳೆದು, ನಮ್ಮ ಸಕಳೇಶ್ವರದೇವಂಗೋತು ನಾನೆಂಬ ಭ್ರಮೆಯನಳಿಯಾ ಮರುಳೇ.

---

## ಸಭ್ಯ ವರ್ತನೆಯಿಂದಿರು.

(೧). ಪುಣ್ಯಪಾಪಂಗಳೆಂಬವು ತಮ್ಮ ಇಷ್ಟವು ಕಂಡಿರಯ್ಯ! “ ಅಯ್ಯಾ ” ಎಂದಡೆ ಸ್ವರ್ಗ, “ ಎಲವೋ ” ಎಂದಡೆ ನರಕ. “ ದೇವಭಕ್ತ, ಜಯ ಜಯ ” ಎಂಬ ನುಡಿಯೊಳಗೆ ಕೈಲಾಸವೈದುದು ಕೂಡಲಸಂಗಮದೇವಾ.

(೨). “ ಬನ್ನಿ, ಬಂದಿರಿ, ಹದುಳವಿದ್ದಿರಿ, ” ಎಂದರೆ, ನಿಮ್ಮ ಮೈಸಿರಿ ಹಾರಿ ಹೋಹುದೇ? “ ಕುಳ್ಳಿರಿ ” ಎಂದರೆ, ನೆಲ ಉರುಳಿ ಹೋಹುದೇ? ಒಡನೆ ನುಡಿದರೆ, ಶಿರ ಹೊಟ್ಟೆಯೊಡೆವುದೇ? ಕೊಡಲಿಲ್ಲದಿದ್ದರೂ ಈಯೊಂದು ಗುಣ ವಿಲ್ಲದಿದ್ದರೆ, ಮೂಗ ಕೊಯ್ಯದೆ ಮಾಣ್ಬನೇ ಕೂಡಲಸಂಗಮಯ್ಯ?

(೩). ಕಂಡ ಭಕ್ತಂಗೆ ಕೈಮುಗಿವಾತನೇ ಭಕ್ತ. ಮೃದುವಚನಂಗಳೇ ಸಕಲ ಜಪಂಗಳಯ್ಯ. ಮೃದುವಚನಂಗಳೇ ಸಕಲ ತಪಂಗಳಯ್ಯ. ಸದುವಿನಯವೇ ಸದಾಶಿವನ ಒಲುಮೆಯಯ್ಯ. ಕೂಡಲಸಂಗಮದೇವಯ್ಯನಂತಲ್ಲದೊಲ್ಲನಯ್ಯ.

(೪). "ಇತ್ತ ಬಾರಯ್ಯ, ಇತ್ತ ಬಾರಯ್ಯ," ಎಂದು ಭಕ್ತರೆಲ್ಲರೂ ಕರ್ೊರ್ತು ಹತ್ತೆ ಕರೆವುತ್ತಿರಲು, ಮತ್ತೆ ಕೆಲಕ್ಕೆ ಹೋಗಿ, ಶರಣೆಂದು ಹಸ್ತಬಾಯನೇ ಮುಚ್ಚಿ, ಕಿರಿದಾಗಿ ಭೃತ್ಯಾಚಾರವನುಡಿದು, ವಿನಯಧ್ಯಾನ ಉಳ್ಳರೆ, ಎತ್ತಿಕೊಂಬನಯ್ಯ ಕೂಡಲಸಂಗಮದೇವ, ಪ್ರಮಥರ ಮುಂದೆ.

(೫). ಬಲ್ಲವರು ಬೆಸಗೊಂಡರೆ, ಮೆಲ್ಲನಾರೈದು ಮೆಲ್ಲನೆ ನುಡಿಯಬೇಕು. ಕಲ್ಲು ಕಲ್ಲುತಾಗಿದಂತೆ ಸೊಲ್ಲು ಬಿರಿಯಾದಡೆ, ಅಲ್ಲಿ ನಿಲ್ಲನೈಯ್ಯ ಅಖಂಡೇಶ್ವರಾ.

(೬). ಎನಗೆ ನಾನೇ ಹಗೆ ನೋಡಯ್ಯ! ಎನಗೆ ನಾನೇ ಕೆಳೆ ನೋಡಯ್ಯ! ನಿಮ್ಮ ಸದ್ಭಕ್ತರೊಡನೆ ವಿರೋಧವ ಮಾಡಿದಡೆ, ಎನ್ನ ಕೊಲುವುದಾಗಿ, ನಿಮ್ಮ ಪುರಾತನರಿಗಂಜಿ ಬೆಸಗೊಂಡಡೆ, ಎನ್ನ ಕಾಯ್ವುದಾಗಿ, ಅನ್ಯರು ಹಗೆಯಲ್ಲ, ಕೆಳೆಯಲ್ಲ. ಬಾಗಿದ ತಲೆಯ, ಮುಗಿದ ಕಯ್ಯಾಗಿರಿಸು, ಕೂಡಲಸಂಗಮದೇವಾ.

(೭). ಭಕ್ತನ ಮಠವೆಂದು ಭಕ್ತಹೋದಡೆ, ಆಭಕ್ತ ಭಕ್ತಂಗೆ ಅಡಿಯಿಟ್ಟು ಇದಿರೆದ್ದು ನಡೆದು, ಹೊಡೆಗೆಡೆದು, ಒಡಗೊಂಡು ಬಂದು, ವಿಭೂತಿ ವೀಳೆಯವನಿಕ್ಕಿ, ಪಾದಾರ್ಚನೆಯಂ ಮಾಡಿ, ಸಮಯವನರಿತು ಲಿಂಗಾರ್ಚನೆಯಂ ಮಾಡಿಸಿ, ಓಲಾಡುತಿರ್ಪುದೇ ಭಕ್ತಿ. ಹೀಗಲ್ಲದೆ, ಬೆಬ್ಬನೆ ಬೆರೆತು, ಬೆಬ್ಬನೇ ಬೀಗಿ ಅಹಂಕಾರ ಭರಿತನಾಗಿಪ್ಪನ ಮನೆಯ ಲಿಂಗಸನುಮತರು ಹೊಗರು ಕಾಣಾ ರಾಮನಾಥಾ.

(೮). ಅವರಿವರೆನ್ನದೆ ಚರಣಕ್ಕೆರಗಲು, ಅಯ್ಯ ತನುವೇರಿ ಬೆಬ್ಬನೆ ಬೆರೆವೆ ನಾನು. ಕೆಚ್ಚು ಬೆಳೆಯಿತಯ್ಯ! ಆ ಕೆಚ್ಚಂಗೆ ಕಿಚ್ಚನಿಕ್ಕಿ, ಬೆಳ್ಳಕನ ಮಾಡಿ, ಬೆಳಗಾರದಂತೆ ಮಾಡು ಕೂಡಲಸಂಗಮದೇವಾ.

(೯). ಎಂಜಲ ಮಾತ ನುಡಿವ ರಂಜಕರೆಲ್ಲರೂ ಮಿಗೆ ಮಿಗೆ ಮಿಸಲ ತಾವೆತ್ತ ಬಲ್ಲರೋ? ಮಿಸಲು ಎಂಜಲಹುದೇ? ಎಂಜಲು ಮಿಸಲಹುದೇ? ಮಾತಿನ ಬಣಬೆಯ ಮೇದ ಪಶು ಪ್ರಾಣಿಯಂತೆ ಎಂಜಲಮಾತ ನುಡಿವುತ್ತಿಹರು.

ಲಿಂಗ ಸಕೀಲ ಸಂಗ, ಸಕೀಲ ಸಂಯೋಗ ವರ್ಮಸ್ಥಲವನರೆತ್ತ ಬಲ್ಲರು? ಕೂಡಲಚನ್ನಸಂಗಯ್ಯನಲ್ಲಿ ಶಬ್ದಸೂತಕರೆಲ್ಲರೂ ರೌರವನರಕಿಗಳು.

(೧೦). ಗಣಂಗಳ ಬರವ ಕಂಡು ಕೈಮುಗಿದು ಅಂಜಲೇಬೇಕು. ಶರಣೆನ್ನಲೊಲ್ಲದೀ ಮನವು. ಆಗಿನ ಭಕ್ತಿಯನರಿಯಳಾಗಿ, ಶರಣೆನ್ನಲೊಲ್ಲದೀ ಮನವು. ಆಳ್ದನೆಂದು ನಂಬಿ ನಂಬಲೊಲ್ಲದಾಗಿ, ಸಿಮುಲಿಗೆಯ ಚೆನ್ನರಾಮನೆನ್ನ ಕಡೆನೋಡಿ ನಗುತಲಿದ್ದಾನೆ.

(೧೧). ಮೃಡನನ್ನೇ, ನಿಮ್ಮ ಪುರಾತನರ ಕಾಣುತ್ತ, ತಡೆಯುದೆ ಇದಿರೆದ್ದು ಪೊಡೆಮಡೆನಾಗಿ, ಬಿಡದು ನಾಚಿಕೆ. ಸುಡಲಿ ಎನ್ನ ನುಡಿಯು. ಸಡಿಲದು ಎನ್ನ ಅಹಂಕಾರವು, ನೋಡಯ್ಯ. ಬಡಮನದವನ ಜಡಿದು ನಡಿಸಯ್ಯ, ಗುಹೇಶ್ವರಾ.

(೧೨). ಹಾವಾಡಿಗ ಹಾವನಾಡಿಸುವಲ್ಲಿ ತನ್ನ ಕಾಯ್ದುಕೊಂಡು ಹಾವನಾಡಿಸುವಂತೆ, ಆವಮಾತನಾಡಿಡಡೂ ತನ್ನ ಕಾಯ್ದು ಆಡಬೇಕು. ಅದೆಂತೆಂದೊಡೆ, ತನ್ನ ವಚನವೇ ತನಗೆ ಹಗೆಯಹುದಾಗಿ. ಅಂತ್ರಿಗರಿಂದ ಬಂದಿಕ್ಕೆನಬೇಡ. ಅಳಿವುದು ಉಳಿವುದು ತನ್ನ ವಚನದಲ್ಲಿಯೇ ಅದೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ಹಗೆಯೂ ಕೆಳೆಯೂ ತನ್ನ ವಚನವೇ. ಬೇರಿಲ್ಲ.

(೧೩). ಸುಗಂಧವ ಕೊಡುವ ಮೃಗವೆಂದಡೆ, ನೋಯಿಸಿ ಬಂಧಿಸಿದಡೆ ಗಂಧಬಂದುದುಂಟೇ, ದುರ್ಗಂಧವಲ್ಲದೆ? ಇಂತೀ ಅರಿವಿನ ತೆರದಲ್ಲಿ ನುಡಿವ ಮಾತಿನ ಬ್ರಹ್ಮವ ಬಲ್ಲೆವೆಂದು ಒತ್ತಿ ನುಡಿಯಬಹುದೇ? ಸಾತ್ವಿಕ ಸದಾತ್ಮರ ಅವರಿಚ್ಛೆಯೊಳಿರ್ದು ಸುಚಿತ್ತವನರಿವುದು. ಭೃತ್ಯತ್ವದಿಂದ ತನಗೆ ಸಿಕ್ಕಿಚ್ಛೆಯ ಕಾಣಿಸಿಕೊಳಬೇಕಲ್ಲದೆ, ತಾ ಕಷ್ಟನಾಗಿ ಆ ಮಹಾತ್ಮರ ದೃಷ್ಟವ ನೋಡಿಹೆನೆಂದಡೆ ಸ್ವಪ್ನದಲ್ಲಿಯೂ ತಲೆದೋರನಾಗಿ ಇಂತೀ ನಿಶ್ಚಯದ ವಸ್ತುವನರಿದು ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ ಬೆಚ್ಚಂತಿರಬೇಕು.

## ಭೃತ್ಯಭಾವದಿಂದಿರು.

(೧) ಮೇಲಾಗಲೊಲ್ಲೆನು ಕೀಳಾಗಲೊಲ್ಲದೆ. ಕೀಳಿಂಗಲ್ಲದೆ ಹಯನ ಕರೆವುದೇ? ಮೇಲಾಗಿ ನರಕದೊಳಗೋಲಾಡಲಾರೆನು. ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು, ಮಹಾದಾನಿ ಕೂಡಲಸಂಗಮದೇವಾ.

(೨). ಕಾಗೆ ವೃಷ್ಟಿಸುವ ಹೊನ್ನ ಕಳಶವಹುದರಿಂದ, ಒಡೆಯರು ಜೋಗೈಸುವ ಶಿವಮ್ಮಾವುಗೆಯ ಮಾಡಯ್ಯಾ! ಕರ್ಮಾವಲಂಬನಾಃ ಕೇಚಿತ್ ಕೇಚಿತ್ ಜ್ಞಾನಾವಲಂಬನಂ । ವಯಂತು ಶಿವಭಕ್ತಾನಾಂ ಪಾದುಕಸ್ಯಾವಲಂಬನಂ ॥ ಎಂದುದಾಗಿ ಕೂಡಲಸಂಗಮದೇವಾ, ನಿಮ್ಮ ಸೆರೆಗೊಡ್ಡಿ ಬೇಡುವೆನು, ಇದೊಂದೇ ವರವ ಕರುಣಿಸಯ್ಯಾ.

(೩). ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರ ಲೇಸಯ್ಯಾ. ತಾರೌ ಅಗ್ಗವಣಿಯ, ನೀಡೌ ಪತ್ರೆಯ ಲಿಂಗಕ್ಕೆ, ಬೋನವ ಹಿಡಿಯೌ ಎಂಬರು. ಕೂಡಲಸಂಗನ ಶರಣರ ಮಹಾಮನೆಯಲ್ಲಿ ಒಕ್ಕುದನುಣ್ಣೌ ತೊತ್ತೇ, ಎಂಬರು.

(೪). ಕೀಳು ಡೋಹರ ಕಕ್ಕ, ಕೀಳುಮಾದರ ಚೆನ್ನ, ಕೀಳು ವಹಿಲ ದೇವ, ಕೀಳು ಉದ್ಭಟಯ್ಯ. ಕೀಳಿಂಗಲ್ಲದೆ ಹಯನ ಕರೆಯದು ಕಾಣಾ ರಾಮನಾಥಾ.

(೫). ಎತ್ತಪ್ಪೆ ಶರಣಂಗೆ. ತೊತ್ತಪ್ಪೆ ಶರಣಂಗೆ. ಭೃತ್ಯನಾಗಿ, ಸದ್ಭಕ್ತರ ಮನೆಯಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ. ಕರ್ತಾರ, ನಿನಗೆ ಕರವೆತ್ತಿ ಪೊಡೆವಡುವ ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನ್ನೈ ರಾಮನಾಥಾ.

(೬). ಹಾಸಿಕೆ ಹೊರಸೇಕೆ? ಲೇಸೇಕೆ? ಹೊಲ್ಲಹವೇಕೆ? ನಿಮ್ಮ ಸಾತ್ವಿಕರಿದಿರಲು ನಾನೇಕೆ ಸರಿ? ? ನಿಮ್ಮ ಸರಿಪಂಕ್ತಿ ಎಂಬ ಹೇಸಿಕೆಯುಂಟೇ ರಾಮನಾಥಾ?

(೭). ಎನಗಿಂತ ಕಿರಿಯರಾರಿಲ್ಲ. ಶಿವಭಕ್ತರಿಂಗಿತ್ತ ಹಿರಿಯರಾರಿಲ್ಲ. ನಿಮ್ಮ ಪಾದಸಾಕ್ಷಿ, ಎನ್ನ ಮನಸ್ಸಾಕ್ಷಿ. ಕೂಡಲಸಂಗಮದೇವಾ, ಎನಗಿದೇ ದಿಬ್ಯ.

(೮). ಸಿಂಹದ ಮುಂದೆ ಜಿಗಿದಾಟವೇ? ಪ್ರಳಯಾಗ್ನಿಯ ಮುಂದೆ ಪತಂಗದಾಟವೇ? ಸೂರ್ಯನ ಮುಂದೆ ಕೀಟದಾಟವೇ? ನಿಮ್ಮ ಮುಂದೆ ಎನ್ನಾಟವೇ ಕಲಿದೇವರದೇವಾ?

(೯). ಎನ್ನಲ್ಲಿ ನಿನ್ನ ಮೇಲಣ ಭಕ್ತಿ ಸಾಸಿವೆಯ ಷಡ್ಭಾಗದನಿತಿಲ್ಲ. ಎನ್ನ ಭಕ್ತನೆಂಬರು. ನಾನಾವ ಪಾಪವ ಮಾಡಿದ್ದೆನೋ! ಬೆಳೆಯದ ಮುನ್ನ ಕೊಯ್ಯುವರೇ ಹೇಳಯ್ಯ! ಇರಿಯದ ವೀರ, ಇಲ್ಲದ ಸೊಬಗನು ಎಲ್ಲಾ ಒಡೆಯರು ಏರಿಸಿ ನುಡಿವರು. ಎನಗಿದು ವಿಧಿಯೋ ಕೂಡಲಸಂಗಮದೇವಾ?

(೧೦). ಎನ್ನವರೊಲಿದು ಹೊನ್ನ ಶೂಲದಲ್ಲಿಕ್ಕಿದರು, ಎನ್ನ ಹೊಗಳಿ ಹೊಗಳಿ. ಎನ್ನ ಹೊಗಳತೆ ಎನ್ನ ಮೈಗೊಂಡಿತಲ್ಲಾ! ಅಯ್ಯಾ ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ! ಅಯ್ಯಾ, ನೊಂದೆನು, ಸೈರಿಸಲಾರೆನು. ಕೂಡಲಸಂಗಮದೇವಾ, ನೀವೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡಬಾರಾ, ಧರ್ಮಿ.

(೧೧). ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದವಿಯನೊಲ್ಲೆ, ನಾನಾ ಮತ್ತಾವ ಪದವಿಯನೊಲ್ಲೆನಯ್ಯ. ಕೂಡಲಸಂಗಮದೇವಾ, ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾ ಪದವಿಯನೇ ಕರುಣಿಸಯ್ಯ.

---

## ಭಕ್ತನೆಂಬ ಹೆಮ್ಮೆಯನ್ನು ಬಿಡು.

(೧). ಮಾವಿನ ಕಾಯೊಳಗೊಂದು ಎಕ್ಕೆಯಕಾಯಿ ನಾನಯ್ಯ. ಆನು ಭಕ್ತನೆಂತೆಂಬೆನೆ, ನಿಮ್ಮ ಶರಣರ ಮುಂದೆ ನಾಚಿಕೆ ಇಲ್ಲದೆ? ಕೂಡಲಸಂಗನ ಶರಣರ ಮುಂದೆ ನಾನೆಂತು ಭಕ್ತನಯ್ಯ?

(೨). ಮರದ ನೆಳಲಲ್ಲಿದ್ದು, ತನ್ನ ನೆಳಲನರಸಬಹುದೇ? ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯ? ಆನು ಭಕ್ತನೆಂಬ ನುಡಿಸುಡದೆ ಕೂಡಲಸಂಗಮದೇವಾ?

(೩). ಆನೆ ಆ ದಾರಿಯಲ್ಲಿ ಹೋಯಿತ್ತೆಂದರೆ, ಆಡು ಆ ದಾರಿಯಲ್ಲಿ ಹೋಯಿತ್ತೆನ್ನಬಹುದೇ? ಸಂಗನ ಶರಣರಿಗೆ ಆನುಸರಿಯೋ ಹೇಳಾ ಕೂಡಲಸಂಗಮದೇವಾ?

(೪). ಆ ಕರಿಯಾಕೃತಿಯನು ಸೂಕರನ ಹೋಲಿಸಿದರೆ, ಅದು ಸೂಕರನಾಗಲರಿವುದೇ? ಭೂನಾಗನಾಕೃತಿಯನು ವ್ಯಾಳೇಶನಿಗೆ ಹೋಲಿಸಿದರೆ, ಅದು ವ್ಯಾಳೇಶನಾಗಲರಿವುದೇ? ನಾನು ಭಕ್ತನಾದರೇನಯ್ಯಾ? ನಮ್ಮ ಕೂಡಲ ಸಂಗಮದೇವರ ಸದ್ಭಕ್ತರ ಹೋಲಲರಿವೆನೆ?

(೫). ಮೋಟನ ಮೌಳಿ, ಮೂಕೊರಿತೆಯ ಶೃಂಗಾರ, ಬೇಟ ಕುರುಡಂಗೆ ನಗೆಗೆಡೆಯಾಯಿತ್ತು. ನಮ್ಮ ಕೂಡಲಸಂಗನ ಶರಣರ ಮುಂದೆ ನಾನು ಭಕ್ತನೆಂಬ ನಾಚಿಕೆ ಸಾಲದೇ?

(೬). ತತ್ವವನರಿದಿಹೆನೆಂದು, ಮೃತ್ಯುವ ಕರೆಕೊಂಡೆನಯ್ಯಾ. ನಾನೆತ್ತ ಬಲ್ಲೆನು, ನಿಮ್ಮ ಶರಣರಂತುವನು? ಸರ್ವಾಪರಾಧಿ ನಾನು, ಮನದ ಸೂತಕ ಹಿಂಗದಾಗಿ, ಕೂಡಲಸಂಗಮದೇವಾ.

(೭). ಆನು ಭಕ್ತನಲ್ಲಯ್ಯಾ. ಆನು ವೇಷಧಾರಿಯಯ್ಯಾ. ಕಟುಕ, ಕೆತ್ತುಗ, ಕೊಲ್ಲುಗನೆಂಬುದು ಎನ್ನ ಹೆಸರಯ್ಯಾ. ಕೂಡಲಸಂಗಮದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯಾ.

(೮). ಡಂಬು ಡಳ್ಳು ಎನ್ನದಯ್ಯಾ. ಡಂಬಕನೆಂಬುವ ನಾನಯ್ಯಾ. ನಿಮ್ಮ ನಂಬಿದ ಶರಣರ ಡಿಂಗರಿಗ ನಾನು ಕೂಡಲಸಂಗಮದೇವಾ.

---

## ಸ್ತ್ರೀಯರನ್ನು ಮನ್ನಿಸು.

(೧). ಸ್ತ್ರೀಯರ ಕಂಡು ಅಳುಪದಿರಾ ಮನವೇ, ಉದ್ದಂಡತನದಲಿ ನಡೆವ ಭಂಡರನು ಹುಳುಗೊಂಡದಲ್ಲಿಕ್ಕದೆ ಬಿಡುವನೇ ನಮ್ಮ ದೇವರಾಯ ಸೊಡ್ಡಳಾ?

(೨). ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು. ತಾ ಮಾಡಿದ ಹೆಣ್ಣು ತೊಡೆಯನೇರಿತ್ತು. ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು. ಅದುಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ. ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ ನೋಡಾ.

( ೩ ). ಶಿವಭಕ್ತರು ತಮ್ಮ ನಿಜಕೈಲಾಸಕ್ಕೆ ಹೋದಡೆ, ಅವರರಸಿಯು ಪಾರ್ವತಿಯ ಸರಿ ಎಂದು ಕಾಣಬೇಕು. ಅಲ್ಲಿ ಅನುಸರಣೆಯು ಕೊಟ್ಟು, ಬೆರಸಿ ಮಾತನಾಡುವ ನರಕಿಗಳನೇನೆಂಬೆ ರಾಮನಾಥಾ?

( ೪ ). ಎಲ್ಲಿ ನೋಡಿದಲ್ಲಿ ಮನವೆಳಸಿದಡೆ ಆಣೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರವಧುವನು ಮಹಾದೇವಿ ಎಂದು ಕಾಂಬೆನು ಕೂಡಲಸಂಗಮದೇವಾ.

( ೫ ). ಮುನ್ನ ಪರಸತಿ ಪಾರ್ವತಿ ಎಂದು ನಡಿಸಿತ್ತು, ನುಡಿಸಿತ್ತು, ಗುರುವಚನ. ಬಳಿಕ ಶರಣಸತಿ ಪಾರ್ವತಿ ಎಂದು ನಡಿಸಿತ್ತು ನುಡಿಸಿತ್ತು ಗುರುವಚನ. ಇನ್ನು ಸತಿಯರೆಲ್ಲ ಗುರುಸತಿಯರೆಂದು ನಡಿಸಿತ್ತು ನುಡಿಸಿತ್ತು ಗುರುವಚನ. ಶಂಭುಸೋಮನಾಥಲಿಂಗನ ಸಂಗ ಸುಸಂಗವ ಮಾಡಿತ್ತು ಗುರುವಚನ.

( ೬ ). ಸತಿಪತಿಗಳೊಂದಾದ ಭಕ್ತಿಹಿತವಾಗಿಪ್ಪುದು ಶಿವಂಗೆ. ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರಸಿದಂತೆ ಕಾಣಾ ರಾಮನಾಥಾ.

( ೭ ). ಉಭಯ ದೃಷ್ಟಿಯಿಂದ ದೃಷ್ಟವಕಾಂಬಂತೆ, ದಂಪತಿ ಏಕಭಾವನಾಗಿ ನಿಂದಲ್ಲಿ, ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು ಸಂಗನಬಸವಣ್ಣಾ.

( ೮ ). ಗಂಡ ಶಿವಲಿಂಗದೇವರ ಭಕ್ತ. ಹೆಂಡಿತಿ ಕೊಂಬುದು ಸುರೆಯು ಮಾಂಸ. ಭಾಂಡಭಾಜನಶುದ್ಧಿ ಇಲ್ಲದವರ ಭಕ್ತಿ ಹೆಂಡದ ಮಡಿಕೆಯು ಹೊರಗೆ ತೊಳೆದಂತೆ ಕೂಡಲಸಂಗಮದೇವಾ.

( ೯ ). ಗಂಡ ಭಕ್ತನಾಗಿ, ಹಿಂಡಿತಿ ಭವಿಯಾದಡೆ, ಉಂಡ ಊಟ ಇಬ್ಬರಿಗೂ ಸರಿಭಾಗ, ಸತ್ತನಾಯ ತಂದು ಅಟ್ಟದ ಮೇಲಿಳುಹಿ, ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ ಕಾಣಾ ರಾಮನಾಥಾ.

( ೧೦ ). ಸತಿ ಭಕ್ತೆಯಾದರೆ ಹೊಲೆಗಂಜಲಾಗದು. ಪತಿ ಭಕ್ತನಾದಡೆ ಕುಲಕ್ಕಂಜಲಾಗದು. ಸತಿಪತಿ ಎಂಬ ಅಂಗಸುಖಹಿಂಗಿ ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೇ? ಪತಿಗೆ ಸತಿಯುಂಟೇ ? ಪಾಲುಂಡು ಮೇಲುಂಬುರೇ ಗುಹೇಶ್ವರಾ?

(೧೧). ಕಾಮಾರಿಯ ಗೆಲಿದೆನು ಬಸವ ನಿಮ್ಮ ದಯದಿಂದ. ಸೋಮ ಧರನ ಹಿಡಿತಪ್ಪೆನು ಬಸವ ನಿಮ್ಮ ಕೃಪೆಯಿಂದ. ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು? ಭಾವಿಸಲು ಗಂಡುರೂಪು. ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರನಿಕ್ಕಿ ಎರಡುವರಿಯದೆ ಕೂಡಿದ್ದೆನು ಬಸವ ನಿಮ್ಮ ಕೃಪೆಯಿಂದ.

---

## ಶರಣರನ್ನು ಮನ್ನಿಸು.

(೧). ಅಯ್ಯ, ಮರ ಮರಮಥನದಿಂದೆ ಅಗ್ನಿ ಹುಟ್ಟಿ, ಆ ಮರನೆಲ್ಲವ ಸುಡದಿಪ್ಪುದೇನಯ್ಯ? ಮಹಾನುಭಾವರ ಘನ ಮಥನದಿಂದ ಜ್ಞಾನಾಗ್ನಿ ಪುಟ್ಟಿ, ಎನ್ನ ತನುಗುಣ ಎನ್ನ ಮನಗುಣ ನಾಸ್ತಿ. ಎನ್ನ ಪ್ರಾಣಗುಣಂಗಳು ಸುಡದಿಪ್ಪವೇ ಅಯ್ಯ? ಇದುಕಾರಣ ಕೂಡಲಸಂಗಮದೇವಾ, ನಿಮ್ಮ ಮಹಾನುಭಾವರ ಸಂಗವನೆ ಕರುಣಿಸಯ್ಯ.

(೨). ಎಡದ ಕಯ್ಯಲ್ಲಿ ಹಾಲು ಬಟ್ಟಲು. ಬಲದ ಕಯ್ಯಲ್ಲಿ ಓಜು ಗಟ್ಟಿಗೆ. ಆವಾಗ ಬಂದಾನೋ ನಮ್ಮಯ್ಯ ಬಡಿದು ಹಾಲು ಕುಡಿಸುವ ತಂದೆ? ಶ್ಲೋ ॥ ದಂಡಕ್ಷೀರದ್ವಯಂ ಹಸ್ತಂ । ಜಂಗಮಂ ಭಕ್ತಿಮಂದಿರಂ ॥ ಭಕ್ತಿಲಿಂಗೇನ ಸಂತುಷ್ಟಾ । ಪಸಹ್ಯ ಯಮದಂಡನಂ ॥ ಎಂದುದಾಗಿ ಕೂಡಲಸಂಗಮದೇವಯ್ಯ, ತಾನೇ ಭಕ್ತಿ ಪಥವ ತೋರುವ ತಂದೆ.

(೩). ಕಾಲಿಲೊದೆದು ಜಡಿದು ಬಡಿವರಯ್ಯ. ಭಕ್ತಿಯೈದಲೆಂದು, ಎನ್ನ ಜರಿವರಯ್ಯ, ನುಡಿವರಯ್ಯ, ಕೂಡಲಸಂಗನ ಶರಣರು ಒಡೆಯರಾಗಿ.

(೪). ಮಡಿಕೆಯ ಮಾಡುವರೆ, ಮಣ್ಣೇ ಮೊದಲು. ತೊಡಿಗೆಯ ಮಾಡುವರೆ, ಹೊನ್ನೇ ಮೊದಲು. ಶಿವಪಥವನರಿವಡೆ, ಗುರುಪಥವೇ ಮೊದಲು. ಕೂಡಲಸಂಗಮದೇವರನರಿವಡೆ, ಶರಣರ ಸಂಗವೇ ಮೊದಲು.

(೫). ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬದಯ್ಯ. ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯ. ಜಂಗಮವಾಪ್ಯಾಯನವಾದರೆ ಲಿಂಗ ಸಂತೃಪ್ತಿಯಹುದಯ್ಯ. ಶ್ಲೋ॥ ವೃಕ್ಷಸ್ಯವರ್ಧನಂ ಭೂಮಿಃ ಸ್ಥಾವರಸ್ಯತು ಜಂಗ

ಮಃ ॥ ಅಹಂತುಷ್ಟೋಸ್ಮ್ಯಮಾದೇವಿ ಉಭಯೋಲಿಂಗಜಂಗಮಃ ॥ ಇದುಕಾರಣ ಕೂಡಲಸಂಗಮದೇವರಲ್ಲಿ ಜಂಗಮವಾಪ್ಯಾಯನವಾದರೆ ಲಿಂಗಸಂತುಷ್ಟಿ.

(೬). ಕಾಯದ ವಿಕಾರ ಕಾಡಿಹುದಯ್ಯಾ. ಮನದ ವಿಕಾರ ಕೂಡಿಹುದಯ್ಯಾ. ಇಂದ್ರಿಯ ವಿಕಾರ ಸುಳಿಹುದಯ್ಯಾ. ಸುಳಿವಿನೊಳಗೆ ಸುಳಿಯುತಲಿದ್ದೇನೆ. ಸಿಲುಕಿಸದಿರಯ್ಯಾ. ಅನ್ಯಚಿತ್ತವನಿರಿಸದಿರಯ್ಯಾ. ನಿಮ್ಮ ಚಿತ್ತದಿ ಇರಿಸಯ್ಯಾ. ಅನುಪಮ ಸುಖಸಾರಾಯ ಶರಣರಲ್ಲಿ ಕೂಡಿಸು ಕೂಡಲಸಂಗಮದೇವಯ್ಯಾ.

(೭). ಸತಿ ಇಲ್ಲದಂತೆ, ಪ್ರಪಂಚವಿಲ್ಲದಂತೆ, ವೈತ್ರಿಕವಿಲ್ಲದಂತೆ ನಡಿಸಯ್ಯ ಲಿಂಗತಂದೆ. ಒಂದು ನಿಮಿಷವಾದರೆಯೂ ನಿಮ್ಮ ಶರಣರ ಸಂಗದಲ್ಲಿ ಇರಿಸಯ್ಯಾ. ಬೇರೆ ಮತ್ತೆನ್ನವ ತೋರದಿರಯ್ಯಾ. ಹೊಲಬುಗೆಟ್ಟೆನಯ್ಯ ಕೂಡಲಸಂಗಮದೇವಾ.

(೮). ಕಾಮವ ತೊರೆದಾತ, ಹೇಮವ ಜರಿದಾತ, ಭಾನುವಿನ ಉದಯಕ್ಕೆ ಒಳಗಾಗದಾತ ಶರಣನು. ಅವಾಗಳು ನಿಮ್ಮ ಮಾಣದೆ ನೆನೆವರ ಮನೆಯಲ್ಲಿ ಶ್ವಾನನಾಗಿರಿಸು ಮಹಾದಾನಿ ಕೂಡಲಸಂಗಮದೇವಾ.

(೯). ಅಸತ್ಯವ ನಿಲ್ಲಿಸುವೆನೆಂದರೆ ಮಾಣದು. ಬೇಸತ್ತು ಬಿದ್ದಿದ್ದೆನೆಂದರೆ ಮಾಣದು. ಏನನೇಪೆನೆಂದರೆ, ಮಾಣದು ಕಾಯದ ಕರ್ಮದ ಫಲಭೋಗ. ಕೂಡಲಸಂಗನ ಶರಣರು ಬಂದು ‘ ಹೋ ಅಂಜದಿರು ’ ಎಂದಡೆ, ನಾನು ಬದುಕುವೆನು.

(೧೦). ಸಂಚಲವಿಲ್ಲದ ಭಕ್ತಿ, ವಂಚನೆ ಇಲ್ಲದ ಮಹಂತರ ತೋರಾ. ತನು ಶುಚಿ, ಮನಶುಚಿಗಳ ತೋರಾ. ಇಂತಪ್ಪ ಶಿವಲಿಂಗೈಕ್ಯರ ತೋರಿ ಬದುಕಿಸಾ ಕೂಡಲಸಂಗಮದೇವಾ.

(೧೧). ಮನೆದೈವವು, ಕುಲದೈವವು ನಿಮ್ಮವರಯ್ಯಾ. ತನು ಮೊಸಲು, ಮನ ಮೊಸಲು, ನಯನ ಮೊಸಲು, ಎನ್ನ ಕೂಡಲಸಂಗಮದೇವಯ್ಯ ನಿಮ್ಮ ಶರಣರಿಗೆ.

(೧೨). ಸೂರ್ಯನುದಯ ತಾವರೆಗೆ ಜೀವಾಳ. ಚಂದ್ರಮನುದಯ ನೈದಿಲೆಗೆ ಜೀವಾಳ. ಕೂಪರ ಠಾವಿನಲ್ಲಿ ಕೂಟ ಜೀವಾಳ. ಒಲಿದ ಠಾವಿನಲ್ಲಿ

ನೋಟವೇ ಜೀವಾಳ. ಕೂಡಲಸಂಗನ ಶರಣರ ಬರವೆನಗೆ ಪ್ರಾಣ ಜೀವಾಳವಯ್ಯ.

(೧೩). ಜಜ್ಝನೆ ಜರಿದೆನು, ಜಜ್ಝನೆ ಜರಿದೆನು, ಜಜ್ಝನೆ ಜರಿದೆನು ನೋಡಯ್ಯ. ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ಬಿಬ್ಬನೆ ಬಿರಿದೆನು, ನೋಡಯ್ಯ. ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನಾನೊಬ್ಬನೆ ಉಳಿದೆನು, ನೋಡಯ್ಯ. ಕೂಡಲಸಂಗಮದೇವಾ, ನಿಮ್ಮ ಶರಣರನಗಲಿದ ಕಾರಣ.

(೧೪). ಹೊಲಬುಗೆಟ್ಟ ಶಿಶುವು ತನ್ನ ತಾಯನರಸುವಂತೆ, ಬಟ್ಟೆದಪ್ಪಿದ ಕರು ತನ್ನ ಹಿಂಡ ತಾನರಸುವಂತೆ, ಬಯಸುತಿರ್ದೆನಯ್ಯ ನಿಮ್ಮ ಶರಣರ ಬರವನು. ದಿನಕರನುದಯಕ್ಕೆ ಕಮಲ ವಿಕಸಿತವಾದಂತೆ, ಎನಗೆ ನಿಮ್ಮ ಶರಣರ ಬರವು ಕೂಡಲಸಂಗಮದೇವಾ.

(೧೫). ಇಂದೆನ್ನ ಮನೆಗೆ ಪ್ರಮಥರು ಬಂದಿಹರೆಂದು, ಗುಡಿ ತೋರಣವ ಕಟ್ಟಿ, ಷಡ್ರುಸವ್ಮಾರ್ಜನೆಯ ಮಾಡಿ, ರಂಗವೋಲೆಯನಿಕ್ಕಿ, ಉಘೆ, ಚಾಂಗು, ಭಲಾ, ಎಂಬೆ, ಕೂಡಲಸಂಗನ ಶರಣರು ತಮ್ಮ ಒಕ್ಕುದನಿಕ್ಕಿ ಸಲುಹುವರಾಗಿ.

(೧೬). ಗಿಳಿಯ ಪಂಜರವನಿಕ್ಕಿ, ಸೊಡರಿಂಗೆಣ್ಣೆಯನೆರೆದು, ಬತ್ತಿಯನಿಕ್ಕಿ, ಬರವ ಹಾರುತ್ತಿದ್ದೆನೆಲಗವ್ವಾ. ತರಗೆಲೆ ಗಿರಿಕೆಂದಡೆ, ಹೊರಗೆ ನಾನಾಲಿಸುವೆ. ಅಗಲಿದೆನೆಂದೆನ್ನ ಮನ ಧಿಗಿಲೆಂದಿತ್ತೆಲಗವ್ವ. ಕೂಡಲಸಂಗಮದೇವನ ಶರಣರು ಬಂದು, ಬಾಗಿಲ ಮುಂದೆ ನಿಂದು, ‘ ಶಿವಾ ’ ಎಂದರೆ, ಸಂತೋಷಬಟ್ಟೆನೆಲಗವ್ವ.

(೧೭). ಮಾಘಮಾಸದ ನವಿಲೆಯಂತೆಯಾದೆ, ನೋಡವ್ವ, ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲುಬುತಿರ್ದೆ ನೋಡವ್ವ. ಮಾಗಿಯ ಕೋಗಿಲೆಯಂತೆ ಮೂಗಿಯಾಗಿರ್ದೆ ನೋಡವ್ವಾ. ಮಹಾಲಿಂಗಗಜೇಶ್ವರನ ಅನುಭಾವ ಸಂಬಂಧಿಗಳ ಬರವು ಎನ್ನ ಪ್ರಾಣದ ಬರವು ನೋಡವ್ವ.

(೧೮). ಪರತತ್ವದ ನಿಜಸಂಯುಕ್ತರ ಅನುನೀನೆನ್ನದಿಹ ಶಬ್ದಸುಖಿಗಳ ತೊರಾ ಎನಗೆ. ಮಹಾನುಭಾವರ ತೋರಾ ಎನಗೆ, ಲಿಂಗವೇ. ಲಿಂಗೈಕ್ಯರ ಲಿಂಗ

ಸುಖಿಗಳ ಲಿಂಗಗೂಡಾಗಿಪ್ಪವರ ಲಿಂಗಾಭಿಮಾನಿಗಳ ತೊರಾ ಎನಗೆ. ಅಹೋ ರಾತ್ರಿ ನಿಮ್ಮ ಶರಣರ ಸೇವೆಯಲ್ಲಿರಿಸು ಕೂಡಲಸಂಗಮದೇವಾ.

(೧೯). ಎಲೆಶಿವನೇ, ನಿಮ್ಮಲ್ಲಿ ನಾನೊಂದ ಬೇಡಿಕೊಂಬೆನು. ನಿಮ್ಮ ಶರಣರ ಮೂರ್ತಿಯ ಕಂಡರೆ, ನೀವೆಂದೇ ಕಾಂಬಂತೆ ಮಾಡಯ್ಯ. ನಿಮ್ಮ ಶರಣರ ನುಡಿಯ ಕೇಳಿದರೆ, ನಿಮ್ಮ ನುಡಿಯೆಂದೇ ನಂಬುವಂತೆ ಮಾಡಯ್ಯ. ನಿಮ್ಮ ಶರಣರ ಸುಖವೆಲ್ಲ ನಿಮ್ಮ ಸುಖವೆಂದೇ ತಿಳಿವಂತೆ ಮಾಡಯ್ಯ. ನಿಮ್ಮ ಶರಣರಾಡಿದ್ದೆಲ್ಲ ನಿಮ್ಮ ಲೀಲೆ ಎಂದೇ ಅರಿವಂತೆ ಮಾಡಯ್ಯ ಎನಗೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---

## ಪೂಜ್ಯರೊಡನೆ ಸರಸವಾಡಬೇಡ.

(೧). ಅಡಿಗಡಿಗೆ ದೇವರಾಣೆ, ಅಡಿಗಡಿಗೆ ಭಕ್ತರಾಣೆ, ಅಡಿಗಡಿಗೆ ಗುರುವಿನಾಣೆ ಎಂಬ ವಚನಹೊಲ್ಲ. ಅವರು ಮುಂದೆ ಪದಕ್ಕೆ ಸಲ್ಲರು. ಆದಿಯಿಂದ ಬಂದ ವಚನವೆಂದು ಮುಂದೆ ಶರಣರ ಕೂಡೆ ಸರಸವನಾಡಿದರೆ, ದ್ರೋಹ ತಪ್ಪದು. ನಗುತಲಿರಿದುಕೊಂಡರೆ, ಅಲಗು ನಡದಿಹುದೇ ಕೂಡಲ ಸಂಗಮದೇವಾ ?

(೨). ಅಂಜುವೆ, ಅಂಜುವೆನಯ್ಯ, ಗುರುವಿನಾಣೆ ಇಡಲಮ್ಮದೆ. ಅಂಜುವೆ, ಅಂಜುವೆನಯ್ಯ ಲಿಂಗದಾಣೆ ಇಡಲಮ್ಮದೆ. ಅಂಜುವೆ, ಅಂಜುವೆನಯ್ಯ ಜಂಗಮರಾಣೆ ಇಡಲಮ್ಮದೆ. ಅಂಜುವೆ, ಅಜುವೆನಯ್ಯ ಅಡಿಗಡಿಗೆ ನಮ್ಮ ಶರಣರಾಣೆ ಇಡಲಮ್ಮದೆ, ಅಖಂಡೇಶ್ವರಾ.

(೩). ಅರಗಿನ ಪುಥ್ಥಳಿಯ ಉರಿಯ ನಾಲಿಗೆಯ ಹೊಯ್ದು ಮಾತಾಡಿಸುವ ಸರಸಬೇಡವೋ. ಬೆಣ್ಣೆಯ ಬೆನಕಂಗೆ ಕೆಂಡದುಂಡಲಿಗೆಯನೆ ಮಾಡಿ, ಚಲ್ಲವಾಡಿದರೆ, ಹಲ್ಲು ಹೋಹುದು ಮಾಣ್ಬುದೇ? ಕೂಡಲ ಸಂಗನ ಶರಣರೊಡನೆ ಸರಸವಾಡಿದರೆ, ಅದು ವಿರಸ ಕಾಣಿರಣ್ಣಾ,

(೪). ಹಾವಿನ ಹೆಡೆಯಕೊಂಡು ಕೆನ್ನೆಯ ತುರಿಸಿಕೊಂಬಂತೆ, ಉರಿಯಕೊಳ್ಳಿಯಕೊಂಡು ಮಂಡೆಯ ಸಿಕ್ಕು ಬಿಡಿಸುವಂತೆ, ಹುಲಿಯ ಮೀಸೆಯ

ಹಿಡಿದುಕೊಂಡು ಉಯ್ಯಾಲೆಯನಾಡುವಂತೆ, ಕೂಡಲಸಂಗನ ಶರಣರೊಡನೆ ಮರೆದು ಸರಸವಾಡಿದರೆ, ಸುಣ್ಣದಕಲ್ಲು ಮಡಲಲ್ಲಿ ಕಟ್ಟಿಕೊಂಡು, ಮಡುವಿನಲ್ಲಿ ಬಿದ್ದಂತೆ.

(೫). ಉರಿವ ಕೊಳ್ಳಿಯ ಮಂಡೆಯಲಿಕ್ಕಿದರೆ, ಉರಿವುದು ಮಾಬುದೇ? ಕಲ್ಲಗುಗ್ಗುರಿಯ ಮೆಲ್ಲಿದರೆ, ಹಲ್ಲು ಹೋಹುದು ಮಾಬುದೇ? ಶರಣರೊಡನೆ ಸರಸವಾಡಿದರೆ, ನರಕ ತಪ್ಪದು ಕಾಣಾ ಕೂಡಲಸಂಗಮದೇವಾ.

---

## ಸಜ್ಜನರ ಸಂಗಮಾಡು.

(೧). ಸಾರ ಸಜ್ಜನರ ಸಂಗವ ಮಾಡುವದು. ದುರುಳ ದುರ್ಜನರ ಸಂಗ ಬೇಡವಯ್ಯ. ಅವ ಹಾವಾದಡೇನು? ವಿಷ ಒಂದೇ. ಅಂತವರ ಸಂಗ ಬೇಡವಯ್ಯ. ಅಂತರಂಗದ ಆತ್ಮಶುದ್ಧವಿಲ್ಲದವರ ಸಂಗವು ಸಿಂಗಿಕಾಳಕೂಟ ವಿಷವು ಕೂಡಲಸಂಗಮದೇವಾ.

(೨). ಒಂದಕ್ಕೊಂದು ನುಡಿದು, ಕಣ್ಣಕೆಂಚನೆ ಮಾಡಿ, ಗಂಡುಗೆದರಿ ಮುಡುಹಿಕ್ಕುವ ಕೆಲರ ಕಂಡಂಜುವೆನೋಸರಿಸುವೆ. ಓಡಿದೆನೆಂದು ಭಂಗವಾದಡಾಗಲಿ. ನಮ್ಮ ಕೂಡಲಸಂಗನ ಶರಣರನುಭಾವವಿಲ್ಲದವರ ಹೊಲಮೇರೆಯ ಹೊದ್ದೆ. ಹೊಲ ಬಿಟ್ಟೋಡುವೆ.

(೩). ಸಾರ ಸಜ್ಜನರ ಸಂಗ ಲೇಸು ಕಂಡಯ್ಯಾ. ದುರುಳ ದುರ್ಜನರ ಸಂಗವದು ಭಂಗವಯ್ಯ. ಸಂಗವೆರಡುಂಟು. ಒಂದು ಬಿಡುವದು. ಹಿಡಿ ಮಂಗಳ ಮೂರ್ತಿ ನಮ್ಮ ಕೂಡಲಸಂಗನ ಶರಣರ.

(೪). ತನುಸಾರಾಯರ, ಮನಸಾರಾಯರ, ಜ್ಞಾನಸಾರಾಯರ ತೋರಯ್ಯ ನಿಮ್ಮ ಧರ್ಮ. ಭಾವಸಾರಾಯರ, ಭಕ್ತಿಸಾರಾಯರ ತೋರಯ್ಯ ನಿಮ್ಮ ಧರ್ಮ. ಕೂಡಲಸಂಗಮದೇವಯ್ಯ ನಿಮ್ಮನರಿಯದ ಅವಗುಣಿಗಳ ತೋರದಿರಯ್ಯ.

(೫). ಅರೆ ಭಕ್ತರಾದವರ ನೆರೆಬೇಡ, ಹೊರೆಬೇಡ, ದಾರಿ ಸಂಗಬೇಡ, ದೂರ ನುಡಿಸಲು ಬೇಡ. ಕೂಡಲಸಂಗನ ಶರಣರಲ್ಲಿ ಅಚ್ಚ ಲಿಂಗೈಕ್ಯಂಗೆ ತೊತ್ತಾಗಿಹುದಯ್ಯ.

(೬). ದೂಷಕನೊಬ್ಬ ದೇಶವಕೊಟ್ಟರೆ, ಆಶೆ ಮಾಡಿ ಅವನ ಹೊರೆಯಲ್ಲಿರಬೇಡ. ಮಾದರ ಶಿವಭಕ್ತನಾದರೆ ಆತನ ಹೊರೆಯಲ್ಲಿ ಭೃತ್ಯನಾಗಿ ರ್ಪುದು ಕರಲೇಸಯ್ಯ, ತೊತ್ತಾಗಿರ್ಪುದು ಕರಲೇಸಯ್ಯ. ಕಾಡಸೊಪ್ಪ ತಂದು ಒಲೆಯಲ್ಲಿ ಹುರಿದಿಟ್ಟುಕೊಂಡಿಪ್ಪುದೀಗ ನಮ್ಮ ಕೂಡಲಸಂಗನ ಶರಣರು.

(೭). 'ಇತ್ತಬಾ,' ಎನ್ನದವನ ಹತ್ತೆಹೊದ್ದಲು ಬೇಡ. 'ಇತ್ತಬಾ' ಎಂದ ಸದ್ಭಕ್ತನ ಮನೆಯ ಬಾಗಿಲ ಹತ್ತಿರ್ಪೆ ಕಾಣಾ ರಾಮನಾಥಾ.

(೮). ಹೊಲೆಯು ಹೊಲಬಿಗನಾದಡೆ, ಆತನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯ. ಹೊಲಬುಗೆಡದೆ, ಲಿಂಗಶರಣೆನ್ನಿರಯ್ಯ. ಹೊಲಬುಗೆಡ ಬೇಡ. ಶಿವಶರಣೆನ್ನಿರಯ್ಯ. ನಮ್ಮ ಕೂಡಲಸಂಗನ ಮಹಾಮನೆಯಲ್ಲಿ ಮಾದಾರ ಚೆನ್ನಯ್ಯ ಹೊಲಬಿಗನಯ್ಯ.

(೯). ಜ್ಞಾನದ ಬಲದಿಂದ ಅಜ್ಞಾನ ಕೆಡುವುದು ನೋಡಯ್ಯ. ಜ್ಯೋತಿಯ ಬೆಳಗಿಂದ ಕತ್ತಲೆ ಕೆಡುವುದು ನೋಡಯ್ಯ. ಪರುಷದ ಬಲದಿಂದ ಅವಲೋಹ ಕೆಡುವುದು ನೋಡಯ್ಯ. ಕೂಡಲಸಂಗಮದೇವಯ್ಯ, ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ಭವಕೆಡುವುದು ನೋಡಯ್ಯ.

(೧೦). ಮನಮನವೇಕಾರ್ಥವಾಗದವರಲ್ಲಿ, ತನುಗುಣ ನಾಸ್ತಿಯಾಗದವರಲ್ಲಿ, ಬುದ್ಧಿಗೆ ಬುದ್ಧಿ ಓರಣವಾಗಟವರಲ್ಲಿ, ಭಾವಕ್ಕೆಭಾವ ತಾರ್ಕಣೆಯಾಗದವರಲ್ಲಿ, ಶೀಲಕ್ಕೆಶೀಲ ಸಮಾನವಿಲ್ಲದವರಲ್ಲಿ, ಅವರೊಡನೆ ಕುಳ್ಳಿರಲಾಗದು, ಸಮಗಡಣದಲ್ಲಿ ಮಾತಾಡಲಾಗದು. ಅದೆಂತೆಂದೊಡೆ—"ಸಂಸರ್ಗತೋದೋಷಗುಣಾ ಭವಂತಿ" ಎಂದುದಾಗಿ, ಇದು ಕಾರಣ ಮಹಾಲಿಂಗಕಲ್ಲೇಶ್ವರಾ. ನಿಮ್ಮ ಸದ್ಭಕ್ತಿಯನರಿಯದವರ ಸಂಗದಿಂದ ಕೈಲಾಸಕ್ಕೆ ದೂರವಾಗಿಪ್ಪರಯ್ಯ.

(೧೧) ಅರಿಯದವರೊಡನೆ ಸಂಗಮಾಡಿದರೆ, ಕಲ್ಲುಹೊಯ್ದು ಕಿಡಿಯ ತೆಗೆದುಕೊಂಬಂತೆ. ಬಲ್ಲವರೊಡನೆ ಸಂಗಮಾಡಿದರೆ ಹೊಸೆದು ಬೆಣ್ಣೆಯ ತೆಗೆದುಕೊಂಬಂತೆ. ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ ಸಂಗ ಕರ್ಪುರಗಿರಿಯ ಉರಿಯುಕೊಂಬಂತೆ.

(೧೨). ಆರಾರ ಸಂಗವೇನೇನ ಮಾಡುವದಯ್ಯ! ಕೀಡಿ ಕುಂಡಲಿಗ ನಾಗದೇ ಅಯ್ಯ! ಚಂದನದ ಸನ್ನಿಧಿಯಲ್ಲಿ ಪರಮಳ ತಾಗಿ, ಬೇವು ಬೊಬ್ಬುಲಿ ಶ್ರೀಗಂಧಗಳಾಗವೇ? ನಮ್ಮ ಕೂಡಲಸಂಗನ ಶರಣರ ಸನ್ನಿಧಿಯಿಂದ ಕರ್ಮ ನಿರ್ಮಳವಾಗದಿಹುದೇ?

(೧೩). ಸುಖದ ಸುಖಿಗಳ ಸಂಭಾಷಣೆಯಿಂದ ದುಃಖ ವಿಶ್ರಾಮವಾಯಿತ್ತು. ಭಾವಕ್ಕೆ ಭಾವತ್ಸಾರ್ಕಣಮೂದಲ್ಲಿ, ನೆನಹಕ್ಕೆ ವಿಶ್ರಾಮವಾಯಿತ್ತು. ಬೆಚ್ಚು ಬೆರಿಸಲೊಡನೆ, ಮಚ್ಚು ಒಳಕೊಂಡಿತ್ತು, ಚನ್ನಬಂಕನಾಥನ ಮಹೇಶ್ವರಂಗೆ.

(೧೪). ನಚ್ಚುಮಚ್ಚಿನ ಲಿಂಗವನುಗ್ರಹಿಸುವಲ್ಲಿ, ಮಚ್ಚು ಒಳಕೊಂಡಿತ್ತು. ಕರ್ಪುರದ ಕರಡಿಗೆಯು ಗಾಸಿಮಾಡಿದಂತಾಯಿತ್ತು. ಲಿಂಗಾನುಭಾವಿಗಳ ಸಂಗದಿಂದಾನು ಕಣ್ದೆರೆದೆನು ಕಾಣಾ ಗುಹೇಶ್ವರಾ.

(೧೫). ಗುರುಪೂಜೆಯು ನರಿದೆನೆಂದು ಲಿಂಗಪೂಜೆಯು ಬಿಡಲಾಗದು. ಲಿಂಗಪೂಜೆಯುನರಿದೆನೆಂದು ಜಂಗಮ ಪೂಜೆಯು ಬಿಡಲಾಗದು. ಜಂಗಮಪೂಜೆಯನರಿದೆನೆಂದು, ಶರಣಸಂಗವ ಬಿಡಲಾಗದು. ಇದುಕಾರಣ ಶರಣರ ಸಂಗದ ಸಮ್ಯಜ್ಞಾನದಲಲ್ಲದೆ, ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು.

(೧೬). ಕಿರಣಕ್ಕೆ ಕಿರಣದೊಡೆಯನ ಬಲವಲ್ಲದೆ, ಮತ್ತಾರ ಬಲವಯ್ಯ? ವೃಷ್ಟಿಯ ಧಾರೆಗೆ ಮೇಘದ ಬಲವಲ್ಲದೆ, ಮತ್ತಾರ ಬಲವಯ್ಯ? ಎನಗೆ ನಿಮ್ಮ ಗಣಂಗಳ ಬಲವಲ್ಲದೆ, ಮತ್ತಾರ ಬಲವಯ್ಯ? ಕೂಡಲಸಂಗಮದೇವಾ ಎನಗೆ ನೀನು, ನಿನ್ನ ಸಿದ್ಧರಾಮಯ್ಯನು ಜೋಡು ಕಣ್ಣು ಕೇಳಾ ದೇವಾ.

(೧೭). ಕಾಯವಿಡಿದಿಹನ್ನಕ್ಕರ ಕಯ್ಯಕುರುಹು. ಜೀವವಿಡಿದಿಹನ್ನಕ್ಕರ ಭವಪಾಶ. ಈ ಉಭಯವಿಡಿದಿಹನ್ನಕ್ಕರ ಶರಣರ ಸಂಗಸುಖ ಬೇಕು. ಸುಖ ನಿಶ್ಚಯವಾದಲ್ಲಿ ನಾ, ನೀನು ಎಂಬ ಭಾವ, ಮನಸಂದಿತ್ತು ಮಾರೇಶ್ವರಾ.

(೧೮). ತನಗನ್ಯವಾದುದು ನೋಡಿದಡೆ ಭವಿಸಂಗ. ಸತ್ಯರು ಒಪ್ಪಿದುದನು ಒಪ್ಪದಿರ್ದಡೆ, ಭವಿಸಂಗ ಮಾಡಿಕೊಂಡ ವ್ರತವ ವಿಉರಿದಡೆ, ಭವಿ

ಸಂಗ. ತಾ ಮಾಡಿದ ಭಕ್ತಿಯನಾಡಿಕೊಂಡಲ್ಲಿ, ಭವಿಸಂಗ. ಇಂತವನರಿದಡೆ, ಸದ್ಭಕ್ತಿ ಕಲಿದೇವರದೇವಾ.

(೧೯). ಶ್ಚಿತ ಹಿಡಿದವನ ಕೈ ಮಸಿ ಎಂಬುದ ನಾಡೆಲ್ಲ ಬಲ್ಲರು. ಅವನ ಕೂಡೆ ಆಡಲಾಗದಯ್ಯ, ತನಗಾಮಸಿ ಹತ್ತುವದಾಗಿ. ಲಿಂಗವಿರೋಧಿಯು ಕೈವಿಡಿದಾಡುವನ ಮುನ್ನವೇ ವ್ರತಗೇಡಿ. ಅಂತವನ ಸಂಗ ಬೇಡವಯ್ಯ, ತನಗಾ ಭಂಗ ಬಂದುದಾಗಿ. ಎಂತೆಂದೊಡೆ, ಜಗದಕರ್ತ ಶಿವನ ವಿರೋಧವಮಾಡಿ, ದಕ್ಷನೊಬ್ಬ ಯಾಗವನಿಕ್ಕಲು, ಮೂವತ್ತು ಮೂರುಕೋಟಿ ದೇವರ್ಕಳೆಲ್ಲ ತೊತ್ತಳ ದುಳಿಸಿಕೊಂಡು ನುಚ್ಚುನುರಿಯಾಗಿ ಹೋದರು ನೋಡಾ. ಅವನಂಗಸಂಗದಲ್ಲಿರ್ದ್ದ ಕಾರಣ ಗೆಲವು ಸೋಲಕ್ಕೆ ಇಕ್ಕುಮುಡಿಗೆ ಏರುಮುಡಿಗೆ ಎಂಬ ಮತ್ಸರಕ್ಕೆ ಮುಂದುವಿಡಿದು ಮುಡುಹಿಕ್ಕಿ ಕೆಲೆದಾಡುವರನ್ನೆಲ್ಲ ತಮ್ಮ ಮನದಲ್ಲಿ ತಾವರಿದು, ಒಯ್ಯನೆ ತೊಲಗುವರು. ಮೇಲೆ ಲಿಂಗನಿರೂಪದಿಂದ ಬಂದ ಕಾರ್ಯಕ್ಕೆ ಅಂಜರು. ಏಕಾಂಗವೀರರು ವಾಯುದ ಹರಿಮಾತಿನ ಮಾಲೆಗೆ ಬೆದರಿ ಓಡುವರಲ್ಲ, ಏಕೋಭಾವ ನಿಷ್ಠೆನಿಬ್ಬೆರಗು ಗಟ್ಟಿಗೊಂಡು, ದೃಢಚಿತ್ತವುಳ್ಳ ಸದ್ಭಕ್ತರು. ಇಂತಪ್ಪ ಉಲುಹಡಗಿದ ಶರಣರ ಸುಸಂಗದಲ್ಲಿರಿಸಿ, ಬದುಕುವಂತಿರಿಸಯ್ಯ ವರದ ಶಂಕರೇಶ್ವರಾ.

(೨೦). ಒಡೆಯರಿಲ್ಲದ ಮನೆಯ ತುಡುಗುಣಿ ನಾಯ ಹೊಗುವಂತೆ, ನೀನಿಲ್ಲದವರ ಮನೆಯು ಹೊಗೆನು. ಸಂಗಯ್ಯ ಶ್ವಪಚೋಪಿಗಳಾಗಲಿ, ಕೂಡಲಸಂಗಯ್ಯ ನೀನಿದ್ದವನೇ ಕುಲಜನು.

(೨೧). ಒಲ್ಲೆನಯ್ಯ, ಒಲ್ಲೆನಯ್ಯ, ನಿಮ್ಮವರಲ್ಲದವರ ಸಂಗ. ಒಲ್ಲೆನಯ್ಯ, ಜಗವೆಲ್ಲರಿಯಲು ಒಲ್ಲೆನಯ್ಯ, ಒಲ್ಲೆನಯ್ಯ. ನೀಮುನಿದರೆ ಮುನಿ. ಕೂಡಲಸಂಗಮದೇವಾ ನಿಮ್ಮ ಪುರಾತನರಾಣೆ.

(೨೨). ಅಣ್ಣ, ತಮ್ಮ, ಹೆತ್ತಪ್ಪ ಗೋತ್ರವಾದರೇನು? ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯ! ನಂಟು ಭಕ್ತಿನಾಯಕನರಕ, ಕೂಡಲಸಂಗಮದೇವಾ.

(೨೩). ಆದಿಯಲಾಗಲಿ, ವೇದದಲಾಗಲಿ, ಶಾಸ್ತ್ರದಲಾಗಲಿ, ಸಮಯದಲಾಗಲಿ, ಎನ್ನವರೆನ್ನೆನು. ಎನ್ನವರೆಂದರೆ, ಸಂಗಾ ನಿಮ್ಮಲ್ಲಿಗೆ ದೂರ. ಎನ್ನವರಾದರೆ, ಜನ್ಮಕ್ಕೆ ನಡೆವರೇ? ಎನ್ನವರಲ್ಲ. ಕೂಡಲಸಂಗಮದೇವಾ ನಿಮ್ಮಾಣೆ.

(೨೪). ಅಯ್ಯಾ ನಿಮ್ಮಲ್ಲಿ ಆಯುವ ಬೇಡುವೆನೆ? ಸಂಸಾರಕ್ಕಾನಂಜು ವೆನಯ್ಯ! ನಿಮ್ಮಲ್ಲಿ ಶ್ರೀಯ ಬೇಡುವೆನೇ? ಪರಾಂಗನೆಯು ಪಾಪ. ಅಯ್ಯ, ನಿಮ್ಮಲ್ಲಿ ಮುಕ್ತಿಯ ಬೇಡುವೆನೇ? ಅದು ನಿಮ್ಮ ಪದವಿ. ಸಕಳೇಶ್ವರ ದೇವಾ, ನಾನೇನುವನೊಲ್ಲೆ. ನಿಮ್ಮ ಶರಣರ ಸಂಗವುಳ್ಳರೆ ಸಾಕು.

(೨೫). ಪ್ರಂಚಲವಿಲ್ಲದ ಭಕ್ತಿ, ವಂಚನೆಯಿಲ್ಲದ ಮಹಂತರ ತೋರಾ! ತನುಶುಚಿ ಮನಶುಚಿಗಳನು ತೋರಾ! ಇಂತಹ ಶಿವಲಿಂಗೈಕ್ಯರ ತೋರಿ, ಬದು ಕಿಸಾ ಕೂಡಲಸಂಗಮದೇವಾ.

(೨೬). ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ. ಬ್ರಹ್ಮವ ನುಡಿದು, ನಾನು ಭ್ರಮಿತನಾದೆನಯ್ಯ. ಶೂನ್ಯವ ನುಡಿದು, ನಾನು ಸುಖ ದುಃಖಕ್ಕೆ ಗುರಿಯಾದೆನಯ್ಯ. ಗುಹೇಶ್ವರಾ, ನಿಮ್ಮ ಶರಣ ಸಂಗನಬಸವಣ್ಣನ ಸಾನ್ನಿಧ್ಯದಿಂದಾನು ಸದ್ಭಕ್ತನಾದೆನಯ್ಯ.

(೨೭). ಹಲವು ಕಾಲ ಹಂಸನ ಸಂಗವಿದ್ದರೇನೋ, ಬಕ ಶುಚಿಯಾಗ ಬಲ್ಲುದೇ? ಕಲ್ಪತರುವಿನ ಸಂಗವಿದ್ದರೇನೋ, ಕೊರಡು ಕೊನರಾಗಿ ಫಲಿಸು ವದೇ? ಗಂಗಾನದಿಯೊಳಗೆ ಪಾಷಾಣವಿದ್ದರೇನೋ, ಮೃದುವಾಗಬಲ್ಲುದೇ? ಕಾಶೀ ಕ್ಷೇತ್ರದಲ್ಲಿ ಶುನಕವಿರ್ದರೇನೋ, ಅದರ ಕ್ಷೀರ ಪಂಚಾಮೃತಕ್ಕೆ ಸಲು ವುದೇ? ತೀರ್ಥದಲ್ಲಿ ಗಾರ್ದಭವಿದ್ದರೇನೋ, ಕಾರಣಿಕನಾಗಬಲ್ಲುದೇ? ಖಂಡುಗ ಹಾಲೊಳಗೆ ಒಂದು ಇದ್ದಲೆ ಇದ್ದರೇನೋ, ಬಿಳುಪಾಗಬಲ್ಲುದೆ? ಕೂಡಲ ಸಂಗಮದೇವಾ ನಿಮ್ಮ ಶರಣರ ಸಂಗವಿದ್ದಡೇನೋ, ಅಸಜ್ಜನನು ಸದ್ಭಕ್ತ ನಾಗಬಲ್ಲನೇ?

(೨೮). ಲಿಂಗವನು ಪುರಾತನರನು ಅನ್ಯರ ಮನೆಯೊಳಯಿಂಕೆ ಪೋಗಿ ಪೊಗಳುವರು. ಅದು ತಮ್ಮದೊಂದು ಉದರಕಾಣಾ. ಲಿಂಗವು ಪುರಾ ತನರು ಅಲ್ಲಿಗೆ ಬರಬಲ್ಲರೇ? ಅನ್ಯವನೆ ಮರೆದು ನಿಮ್ಮನೆ ನೆನೆವರ ಎನಗೊಮ್ಮೆ ತೋರಾ ಚನ್ನಮಲ್ಲಿಕಾರ್ಜುನಯ್ಯ.

(೨೯). ಪರವನರಿದ ಸತ್ಪುರುಷರ ಸಂಗದಿಂದ ಶಿವಯೋಗದ ವಚನಾ ಮೃತವನು ಸದ್ಭಕ್ತಿಯುಳ್ಳ ಮಾಹೇಶ್ವರನು ತನ್ನ ಸ್ತ್ರೋತ್ರ ಮುಖದಲ್ಲಿ ಕೇಳಿ, ಮನೋಮುಖದಲ್ಲಿ ಹಾರೈಸಿ, ತೃಪ್ತಿಮುಖದಲ್ಲಿ ಸಂತೋಷವನೈದಬಲ್ಲಡೆ ಆ

ಸುಖವು ಪರಿಣಾಮವನೊಡಗೂಡುವದು. ಹೀಗಲ್ಲದೆ ಸಂಸಾರ ವಿಷಯ ರಸವ ತನ್ನ ಹೃದಯ ಕೂಪದಲ್ಲಿ ತುಂಬಿಕೊಂಡಿಪ್ಪ ಜೀವರುಗಳ ಕಾಯದಲ್ಲಿ ವಚನಾಮೃತವ ತುಂಬಿದಡೆ ಭಿನ್ನಘಟದಲ್ಲಿ ಉದಕವ ಹೊಯಿದಂತೆ ಕಾಣಾ ಗುಹೇಶ್ವರಾ.

( ೩೦ ). ಅರಿವನಾಹಾರಂಗೊಂಬುದೇ ಪರಮಸುಖ. ಮರವೆಯ ತೆರ ಹುಂಟೇ ಶಿವೈಕ್ಯಂಗೆ? ಇತರ ಸುಖ ಬೆವಹಾರ. ಹಿರಿಯರ ಸಂಗಸುಖವೇ ಆಹಾರ. ಶೃತಿಯಿಂದತಿಶಯ. ಆ ಚರಿತ್ರನ ಮನವ ಮಹಾಂತ ಸಕಳೇಶ್ವರ ತಾನೇ ಬಲ್ಲ.

( ೩೧ ). ಅಯ್ಯ 'ವಿಶ್ವತೋಚಕ್ಷುರುತ' ಎಂದುದಾಗಿ ಜಗವೆಲ್ಲ ನೇತ್ರಂಗಳಾಗಿರ್ಪನು ಶಿವನು. ಜಗವೆಲ್ಲ ನೇತ್ರವಾಗಿದ್ದರೆ, ನೇತ್ರದೊಳಗುತ್ತಮ, ಮಧ್ಯಮ ಕನಿಷ್ಠಂಗಳು ಏಕಾದವು, ಎಂದರೆ, ಹೇಳಿಹೆವು ಕೇಳಿರಯ್ಯ. ನೇತ್ರಕ್ಕೆ ನೇತ್ರನಾದ ಜಗನ್ನೇತ್ರಕ್ಕೆ ಪ್ರಕಾಶನಾಗಿ ತನ್ನ ತೋರದೆ ಇದ್ದಂಥಾ ಶ್ರೀಗುರು ಕರುಣಾ ಕಟಾಕ್ಷೆಯಿಂದ ಉದಯವಾದ ಇಷ್ಟಮಹಾಜ್ಯೋತಿರ್ಲಿಂಗ ವನು ನೋಡಿದ ನೇತ್ರವೇ ಲಿಂಗನೇತ್ರವು. ಅದೇ ಸದ್ಧರ್ಮ ಸ್ವರೂಪವಾದ ಉತ್ತಮವೆನಿಸುವದು. ಅಯ್ಯಾ ಖಗಮೃಗ ಫಣಿಕೀಟಕಾದಿಗಳ ನೇತ್ರಂಗಳು ಉಭಯಕರ್ಮಕ್ಕೆ ಒಳಗಿಲ್ಲಾಗಿ ದೃಷ್ಟಿ ದೋಷವಿಲ್ಲಾಗಿ ಅದು ಮಧ್ಯಮವೆನಿ ಸುವದು. ಅಯ್ಯಾ ಇಷ್ಟಮಹಾಜ್ಯೋತಿರ್ಲಿಂಗ ಬಾಹ್ಯಮಾಗಿ ಪಂಚಮಹಾ ಪಾತಕ ಸೂತಕಂಗಳಲ್ಲಿ ವರ್ತಿಸುವ ಅಪಾತ್ರಜೀವಿಗಳಾದ ಭವಿಗಳ ನೇತ್ರಂಗಳು ಉಭಯಕ್ಕೆ ಅನುಕೂಲವಾದ ಕಾರಣ ಚರ್ಮಚಕ್ಷುವೆಂದು ತನ್ನ ತಾನರಿಯದ ಗಾಢಾಂಧಕಾರವೆಂದು, ಮೀನುಗಳೆಂದು, ವಿಷನೇತ್ರವೆಂದು, ಮನ್ಮಥನ ಕೈಗೆ ಸಿಲುಕಿದ ನೀಲೋತ್ಪಲ ಬಾಣನೆಂದು, ತಾಮಸಾಗ್ನಿ ಎಂದು, ಕುರೂಪಾದ ನೇತ್ರೇಂದ್ರಿಯವೆಂದು, ಶಿವಾಚಾರ ಸದ್ಧರ್ಮಿಗಳ ನಿಂದಿಸುವ ಮಹಾಪಾತಕ ದೃಷ್ಟಿ ಎಂದು ಹೇಳಲ್ಪಟ್ಟಿತ್ತು. ಇಷ್ಟಲಿಂಗವಿಲ್ಲಾದ ಕಾರಣ ಕನಿಷ್ಠಚಕ್ಷುವು ಎಂದುದು ನೋಡಾ ಅಯ್ಯ. ಅದರಿಂದ ಸದ್ಭಕ್ತ ಶರಣಗಣಂಗಳು ಅರ್ಚನೆ ಅರ್ಪಿತ ದ್ರವ್ಯವಕೊಡದೆ, ಅವರೊಡನೆ ಸಂಭಾಷಣೆ ದರ್ಶನಸ್ಪರ್ಶನವ ಮಾಡ ಲಿಲ್ಲ ನೋಡಾ ಗುಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯ ಎಂದು ಪ್ರಭುಸ್ವಾಮಿಗಳು ನಿರೂಪಮಂ ಕೊಡುತಿರ್ಪರು ನೋಡಾ ಸಂಗನಬಸವೇಶ್ವರಾ.

---

# ತನುಮನಭಾವದಲ್ಲಿ ಶುದ್ಧನಾಗಿರು.

(೧). ತನುಬತ್ತಲೆ ಇದ್ದರೇನಯ್ಯ, ಮನಶುಚಿಯಾಗದನ್ನಕ್ಕರ? ಮಂಡೆ ಬೋಳಾದಡೇನು, ಭಾವಬಯಲಾಗದನ್ನಕ್ಕರ? ಭಸ್ಮವ ಹೂಸಿದಡೇನು, ಕರಣಾದಿಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ? ಇಂತು ಆಶೆಯು ವೇಷದ ಭಾಷೆಗೆ ಗುಹೇಶ್ವರ ಸಾಕ್ಷಿಯಾಗಿ 'ಛೀ' ಎಂಬೆನು ಕಾಣಾ ಸಂಗನಬಸವಣ್ಣ.

(೨). ಕಾಯ ಕರ್ರನೆ ಕಂದಿದರೇನಯ್ಯ! ಕಾಯ ಮಿರ್ರನೆ ಮಿಂಚಿದರೇನಯ್ಯ! ಅಂತರಂಗ ಶುದ್ಧವಾದ ಬಳಿಕ, ಚನ್ನಮಲ್ಲಿಕಾರ್ಜುನ ಲಿಂಗವು ಒಲಿದ ಕಾಯವು ಹೇಗಿದ್ದರೇನಯ್ಯ!

(೩). ತನುಗುಣವಿವರಿಸಿಹೆನೆಂದರೆ, ಮನಶುದ್ಧವಾಗಬೇಕು. ಮನಗುಣ ವಿವರಿಸಿಹೆನೆಂದರೆ, ಇಂದ್ರಿಯ ಶುದ್ಧವಾಗಬೇಕು. ತನುಮನ ಇಂದ್ರಿಯಂಗಳು ಶುದ್ಧಸುಯಿಧಾನವಾಗಿ, ಲಿಂಗಮುಖಕ್ಕೆ ವೇದ್ಯವಾದಲ್ಲದೆ, ಗುಹೇಶ್ವರನ ಬೆಸಗೊಳ್ಳಬಾರದು, ಕೇಳಾತಾಯೆ.

(೪). ಆಕಾರ ನಿರಾಕಾರವೆಂಬೆರಡು ನಾನೇ, ದಿಟದಿಟ, ತಪ್ಪದು ಕೇಳಾ. ಆಕಾರಕ್ಕೆ ಭಾವವೇ ಪ್ರಾಣ. ನಿರಾಕಾರಕ್ಕೆ ಮಹಾಜ್ಞಾನವೇ ಪ್ರಾಣ. ಇಂತೀ ಉಭಯಕುಳಕ್ಕೆ ಇದು ಲಕ್ಷಣ ಕೇಳಾ. ಎರಡರೊಳಗೆ ಆವ ಮುಖದಲ್ಲಿಪ್ಪಾತನು ಆ ಮುಖದಲ್ಲಿ ಶುದ್ಧವಾಗದನ್ನಕ್ಕರ, ಗುಹೇಶ್ವರಲಿಂಗಕ್ಕೆ ದೂರ ಕೇಳಾ ಬಸವಣ್ಣ.

(೫). ಪರಮಪವಿತ್ರ ನಿರ್ಮಲಲಿಂಗ ತನ್ನಂಗದ ಮೇಲೆ ಇರುತಿರಲು, ಅಂಗ ಶುದ್ಧಸೌಕರ್ಯವಿಲ್ಲದವನ ಮುಖವ ನೋಡಲಾಗದು. ಅವನ ಮುಟ್ಟಲೆಂತೂ ಆಗದು. ಮನದ ಮಲಿನವ ಕಳೆದು, ಪ್ರಾಣಲಿಂಗವ ಧರಿಸಬೇಕು. ತನುವಿನ ಮಲವ ಕಳೆದು, ಇಷ್ಟಲಿಂಗವ ಧರಿಸಬೇಕು. ಜೀವತ್ರಯಂಗಳ ಮಲವ ಕಳೆದು, ಪ್ರಸಾದವ ಧರಿಸಬೇಕು. ಮನದ ಮಲಿನವಾವುದೆಂದಡೆ, ಮನವ್ಯಾಕುಲ. ತನುವಿನ ಮಲಿನವಾವುದೆಂದಡೆ, ತನುಗುಣವ್ಯಾಪ್ತಿ. ತನುತ್ರಯದ ಮಲಿನವಾವುದೆಂದಡೆ, ಈ ಷಣತ್ರಯ. ಜೀವತ್ರಯದ ಮಲಿನವಾವುದೆಂದಡೆ, ಅವಸಾತ್ರಯ. ಕರಣಂಗಳ ಮಲವಾವುದೆಂದಡೆ, ಸಂಕಲ್ಪ, ವಿಕಲ್ಪ,

ಅಸತ್ಯ, ನಿಂದೆ, ಮಿಥ್ಯಾವಾದವಾಡುವ, ತಸ್ಕರಿಸುವ ಅನ್ಯರಿಗೆ ಕಯ್ಯಾನುವ. ಶ್ಲೋ॥ ನಿರ್ಮಲ ಶಾಂತ ನಿರ್ಮಾಲ್ಯ । ಮಲದೇಹಿ ನ ಧಾರಯೇತ್ ॥ ಎಂದುದಾಗಿ, ಲಿಂಗವಿಪ್ಪ ಸುಕ್ಷೇತ್ರಕಾಯದ ಮಲಿನವ ಕಳೆದು, ಪ್ರಸಾದವ ಧರಿಸದಿರ್ದಡೆ, ಭವಮಾಲೆ ಹಿಂಗದು, ನರಕ ತಪ್ಪದಯ್ಯ ಮಹಾಲಿಂಗಕಲ್ಲೇಶ್ವರಾ.

(೬). ಕನ್ನಡಿಯಲ್ಲಿ ಕಪ್ಪು ಹುಟ್ಟಿದಾಗ ಕಳೆದಲ್ಲದೆ, ಕಾಣಬಾರದು. ತನ್ನಯ ಭಾವ ಶುದ್ಧಕ್ಕೆ ದರ್ಪಣದನೊಪ್ಪವನರಸಬೇಕು. ಎನ್ನಯ ಮನದ ಕಪಟ ನಿಮ್ಮಯ ಚಿತ್ತಶುದ್ಧವನರಸಬೇಕು. ನಿಮ್ಮಯ ನಿರ್ಮಲ ಎನ್ನಯ ಮಲದೇಹವ ತೊಳೆಯಬೇಕು. ಅರುವಿನ ಮಾರನ ಬಿನ್ನಹ, ಸದಾಶಿವ ಮೂರ್ತಿಲಿಂಗಕ್ಕೆ ತೆರಪಿಲ್ಲದ ಭಾವ.

(೭). ಮರನನೇರದೆ, ಹಣ್ಣು ಕೊಯ್ಯಬಹುದೇ? ಕುಸುಮವಿಲ್ಲದೆ, ಗಂಧವ ಮುಡಿಯಬಹುದೇ? ಉಪದೃಷ್ಟವಿಲ್ಲದೆ, ನಿಜದೃಷ್ಟವ ಕಾಣಬಹುದೇ? ತ್ರಿಶುದ್ಧವಿಲ್ಲದೆ, ತ್ರಿವಿಧಕರ್ತೃ ತನಗೆ ಸಾಧ್ಯವಪ್ಪನೇ? ಇದು ಕಾರಣ ಗುರುವಿನಲ್ಲಿ ಸದ್ಭಾವ, ಲಿಂಗದಲ್ಲಿ ಮತಿ, ಜಂಗಮದಲ್ಲಿ ತ್ರಿವಿಧ ಮಲ ದೂರಸ್ತನಾಗಿಪ್ಪುದು ಸದ್ಭಕ್ತನಂಗ, ಚಿದ್ಘನ ವಸ್ತುವಿನ ಸಂಗ, ಸದ್ಯೋಜಾತಲಿಂಗಕ್ಕೆ ಸುಸಂಗ.

(೮). ಅನ್ನವನಿಕ್ಕಿದರೇನು? ಪುಣ್ಯವಹುದು. ವಸ್ತ್ರವ ಕೊಟ್ಟರೇನು? ಪುಣ್ಯವಹುದು. ಹಣವ ಕೊಟ್ಟರೇನು? ಸಿರಿಯಹುದು. ತ್ರಿಕರಣಶುದ್ಧವಾದರೆ, ಮುಕ್ತಿಯಹುದು, ಕೂಡಲಚನ್ನಸಂಗಮದೇವಯ್ಯ.

(೯) ಚೇಳಿಂಗೆ ಬಸುರಾದದ್ದೇ ಕಡೆ. ಬಾಳೆಗೆ ಫಲವಾದದ್ದೇ ಕಡೆ, ನೋಡಾ. ರಣರಂಗದಲ್ಲಿ ಓಲೆಕಾರಂಗೆ ಓಸರಿಸಿದ್ದೇ ಕಡೆ. ಮಾಡುವ ಭಕ್ತಂಗೆ, ಮನಹೀನವಾದರೆ, ಅದೇ ಕಡೆ, ಕೂಡಲಸಂಗಮದೇವಾ.

(೧೦). ಸಕಲೇಂದ್ರಿಯಂಗಳಲ್ಲಿ ವಿಕಾರಿಸುವ ಮನವ ಸೆಳೆದು ನಿಂದಾತ ಸುಖಿ. ಪಂಚೇಂದ್ರಿಯಂಗಳಿಚ್ಛೆಯಲ್ಲಿ ಕೀಳು ಮನಂಗೊಂಡು ಸುಳಿವಾತ ದುಃಖಿ. ಮನಸ್ಸು ಬಹಿರ್ಮುಖವಾಗಲು, ಮಾಯಾಪ್ರಪಂಚಿ. ಮನವಂತರ್ಮುಖವಾದರೆ, ಅವಿರಳ ಜ್ಞಾನಿ. ಮನವು ಮಹದಲ್ಲಿ ನಿಂದಿರಲಾತ ಮುಕ್ತನು. ಮನೋಲ್ಲಯವಾದರೆ, ಸೌರಾಷ್ಟ್ರ ಸೋಮೇಶ್ವರಲಿಂಗದಲ್ಲಿ ಅಭೇದ್ಯನು.

(೧೧) ಲೋಕದ ಚೇಷ್ಟೆಗೆ ರವಿ ಬೀಜವಾದಂತೆ, ಕರಣಂಗಳ ಚೇಷ್ಟೆಗೆ ಮನವೇ ಬೀಜ. ಎನಗುಳ್ಳದೊಂದು ಮನ, ಆ ಮನ ನಿಮ್ಮಲ್ಲಿ ಸಿಲ್ಕಿದ ಬಳಿಕ, ಎನಗೆ ಭವವುಂಟೇ ಚನ್ನಮಲ್ಲಿಕಾರ್ಜುನಾ ?

(೧೨). ಧ್ಯಾನ ಅಧ್ಯಾತ್ಮಿಕರಲ್ಲಿ ಕಂಡೆನೆಂಬುದು ಜೀವನಲ್ಲದೆ, ಪರವುನಲ್ಲ. ಜಪತಪನೇಮನಿತ್ಯಂಗಳಿಂದ ಕಂಡೆನೆಂಬುದು ಪ್ರಕೃತಿಯಲ್ಲದೆ ಚಿತ್ತವಲ್ಲ. ಭಾವದಿಂದ ಪ್ರಮಾಣಿಸುವದೇ ಏಕರೂಪ ಗುಹೇಶ್ವರಲಿಂಗವು ತಾನೆ.

(೧೩). ಮೊನೆ ತಪ್ಪಿದಲಗು ಘನವೇನ ಮಾಡುವದು? ಅರಿವು ಹೀನವಾದಲ್ಲಿ ಕ್ರಿಯೆಹರಿವರಿ ಏನಮಾಡುವದು? ವರ್ತನೆ ಶುದ್ಧವಿಲ್ಲದೆ, ಲಾಂಛನದುತ್ಕೃಷ್ಟತೆ ಏನಮಾಡುವದು? ತ್ರಿಕರಣ ಶುದ್ಧವಿಲ್ಲದ ಮಾಟದ್ರವ್ಯದ ಕೇಡು, ಭಕ್ತಿಗೆ ಹಾನಿ. ಇಂತೀ ಗುಣಂಗಳಲ್ಲಿ ಸದಾಶಿವ ಮೂರ್ತಿಲಿಂಗವನರಿಯಬೇಕು.

(೧೪). ಶಿವಭಕ್ತರ ನಡೆಶುದ್ಧ, ನುಡಿಶುದ್ಧ, ಶಿವಭಕ್ತರ ನೋಟಶುದ್ಧ ಮಾಟಶುದ್ಧ, ಶಿವಭಕ್ತರ ನೆನಹು ಶುದ್ಧ, ಅನುಭಾವಶುದ್ಧ, ಶಿವಭಕ್ತರ ಕಾಯ ಶುದ್ಧ, ಪ್ರಾಣಶುದ್ಧ, ಇದು ಕಾರಣ ಶಿವಭಕ್ತರನೇ ಶಿವನೆಂದು ನಂಬುವದು. ನಂಬಿದವರು ಶಿವನಪ್ಪುದು ತಪ್ಪದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೧೫). ಅಂತರಂಗ ಶುದ್ಧವಿಲ್ಲದವರು ಬಹಿರಂಗದಲ್ಲಿ ಸದಾಚಾರ ಸತ್ಕ್ರಿಯೆಯ ಸರ್ವಜನಮೆಚ್ಚು ಮಾಡುತ್ತಿದ್ದರೇನು? ಅದು ಲೋಕದ ರಂಜನೆಯಲ್ಲದೆ ಶಿವಮೆಚ್ಚ, ಶಿವಶರಣರು ಮೆಚ್ಚರು. ಬಿತ್ತಿದ ಬೆಳೆಯನುಂಬಂತೆ ಮಾಡಿದ ಸತ್ಕರ್ಮಫಲವನುಂಬ ಕೈಕೂಲಿಕಾರಂಗೆ ಮುಕ್ತಿಯುಂಟೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

(೧೬). ಅಂತರಂಗ ಶುದ್ಧವಿಲ್ಲದವರೊಳಗು ಅತ್ತಿಯ ಹಣ್ಣಿನಂತೆ ಕ್ಷುದ ಬಿಡದುನೋಡಯ್ಯ. ಅಂತರಂಗ ಶುದ್ಧವುಳ್ಳವರೊಳಗೆ ಬಾಳೆಯ ಹಣ್ಣಿನಂತೆ ಸುಗುಣತೋರುವದು ನೋಡಯ್ಯ. ಇದು ಕಾರಣ ಅಂತರಂಗ ಶುದ್ಧವಿಲ್ಲದವರ ಸಂಗದಲ್ಲಿ ಇರಬಾರದು ಶರಣರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

# ನೀತಿಯ ವಚನಗಳು.

(೧). ಆಡಿ ಅಳುಪದಿರಾ. ಲೇಸಮಾಡಿ ಮರುಗದಿರಾ. ಎಲೆಮನವೇ, ಕೊಡಿ ತಪ್ಪದಿರಾ. ಬೇಡಿದವರಿಗೆ ನೀನಿಲ್ಲೆನ್ನದಿರು, ಕಂಡೆಯಾ. ನಾಡಮಾತು ಬೇಡ. ಸೆರೆಗೊಡ್ಡಿ ಬೇಡು ಕೂಡಲ ಸಂಗಯ್ಯನ ಶರಣರಾ.

(೨). ಕೆಡೆನಡೆಯದೆ, ಕೆಡೆನುಡಿಯದೆ, ಅನ್ಯವನು ಪ್ರತಿಪಾದಿಸದೆ ಇರ್ದಡೆ, ಏನುಕೊಡನಯ್ಯ ಲಿಂಗವು ! ತಾನೇನ ಬೇಡಿದ್ದನೀವನಾಗಿ, ನಂಬುಗೆಯುಳ್ಳ ಶಿವಭಕ್ತಂಗೆ ಇದೇ ದಿಬ್ಯ, ಕೂಡಲಸಂಗಮದೇವಾ.

(೩). ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ. ಮುನಿಯಬೇಡ, ಅನ್ಯರಿಗೆ ಅಸಹ್ಯವ ನುಡಿಯಲುಬೇಡ. ತನ್ನ ಬಣ್ಣಿಸಬೇಡ. ಇದಿರ ಹಳಿಯಲುಬೇಡ. ಇದೇ ಅಂತರಂಗದ ಶುದ್ಧಿ. ಇದೇ ಬಹಿರಂಗದ ಶುದ್ಧಿ. ಇದೇ ನಮ್ಮ ಕೂಡಲಸಂಗಮದೇವರನೊಲಿಸುವಪರಿ.

(೪). ತನ್ನ ಗುಣವ ಹೊಗಳಬೇಡ. ಇದಿರ ಗುಣವ ಹಳಿಯಬೇಡ. ಕೆಮ್ಮನೊರ್ಬರ ನುಡಿಯಬೇಡ. ನುಡಿದು ಗುಂಪಿತನಾಗಬೇಡ. ತನ್ನ ಮನವಿಕಳವಾಗಿ, ಇದಿರ ಮನವನೋಯಿಸಬೇಡ. ತಾಕಿಬದುಕುವವೇಸುದಿನ ? ಸಮತೆ ಸಮಾಧಾನ ತುಂಬಿ ತುಳುಕಬೇಕು. ಮಹಾಲಿಂಗಕಲ್ಲೇಶ್ವರನ ನಿಚಳ ನಿಜವನರಿದಬಳಿಕ, ಸಕಳದೊಳನೆ ಬಚ್ಚಬರಿಯ ಮರುಳಾಗಿರಬೇಕು.

(೫). ಅರ್ಥವಡಗದು, ಕ್ರೋಧ ತೊಲಗದು. ಕ್ರೂರಕುಹಕ, ಕುಭಾಷೆ ಬಿಡದನ್ನಕ್ಕರ, ನೀನೆತ್ತ, ಶಿವನೆತ್ತ, ಹೋಗತ್ತ ಮರುಳೇ. ಭವರೋಗವೆಂಬ ತಿಮಿರ ತಿಳಿಯದನ್ನಕ್ಕರ, ಕೂಡಲಸಂಗಯ್ಯನೆತ್ತ, ನೀನೆತ್ತ ಮರುಳೇ ?

(೬). ತುಮರಿಯ ಕೊಳ್ಳಿಯಂತೆ, ಉರಿವಾತಭಕ್ತನೇ ? ಹುಸಿದು ತಂದು ಮಾಡುವಾತ ಭಕ್ತನೇ ? ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೇ ! ತನ್ನ ಪ್ರಾಣದ ಮೇಲೆ ಬಂದರೂ ಬರಲಿ, ಇವರ ಬಿಡಬೇಕು. ಇವರ ಬಿಡದಿರಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ.

(೭). ಆತ್ಮಸ್ತುತಿ ಪರನಿಂದೆಯ ಕೇಳಿಸದಂತೆ ಇರಿಸಯ್ಯ, ನಿಮ್ಮ ಧರ್ಮ. ಅನುಭಕ್ತ, ಎನ್ನಲ್ಲಿ ಲೇಸುಂಟೆಂದು ಪರಿಣಾಮಿಸಿದರೆ, ನಿಮಗಾನುದ್ರೋಹಿಯಯ್ಯ. ಕೂಡಲಸಂಗಮದೇವಾ, ನಿಮ್ಮ ಶರಣರ ಲೇಸೇ ಎನ್ನಲೇಸಯ್ಯ.

(೮). ನುಡಿದರೆ ಮುತ್ತಿನ ಹಾರದಂತಿರಬೇಕು. ನುಡಿದರೆ, ಲಿಂಗ ಮೆಚ್ಚು ಅಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದರೆ, ಕೂಡಲಸಂಗಮ ದೇವನೆಂತೊಲಿವನಯ್ಯ?

(೯). ಶಿವನೇದೈವ, ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದು ದನೊಲ್ಲದಿಪ್ಪುದೇ ನೇಮ. ಆಶೆ ಇಲ್ಲದಿಪ್ಪುದೇ ತಪ. ರೋಷವಿಲ್ಲದಿಪ್ಪುದೇ ಜಪ. ವಂಚನೆ ಇಲ್ಲದಿಪ್ಪುದೇ ಭಕ್ತಿ. ಹೆಚ್ಚು ಕುಂದಿಲ್ಲದಿಪ್ಪುದೇ ಸಮಯಾಚಾರ. ಇದು ಸತ್ಯ. ಶಿವಬಲ್ಲ. ಶಿವನಾಣೆ, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

(೧೦) ನುಡಿಯಲ್ಲಿ ಕರ್ಕಶವಿಲ್ಲದೆ, ನಡೆಯಲ್ಲಿ ಬೇಸರವ್ಹೋಗದೆ, ಹಿಡಿದಭಕ್ತಿಯ ಕಡೆತನಕ ಬಿಡದೆ, ಬಡತನ ಎಡರು ಕಂಟಕಗಳು ಬಂದಲ್ಲಿ, ಚಿಂತೆಯಿಂದ ಕಾಂತಿಗುಂದದೆ, ಅಡಿಗಡಿಗೆ ‘ ಶಿವಶಿವಾ, ’ ಎಂಬ ನುಡಿಯು ಮರೆಯದಿರ್ಪ ಸದ್ಭಕ್ತರಿಗೆ ಬೇಡಿದ ಪದವಿಯನೀವ ನಮ್ಮ ಅಖಂಡೇಶ್ವರಾ.

(೧೧). ತಪವೆತ್ತ, ಹೇರರ ಕೇಡಿಂಗೆ ಬಗೆವುದೆತ್ತ? ಜಪವೆತ್ತ, ಶರಣರ ಮೇಲೆ ಅನೃತವ ನುಡಿವುದೆತ್ತ? ಪಂಚಾಚಾರವೆತ್ತ, ಪಾತಕಕ್ಕೆ ಮನ ಬಗೆವುದೆತ್ತ? ಇಂತೀ ಹೊರಬಳಕೆಯ ಲೋಕರಂಜನೆಯಲ್ಲಿಪ್ಪವರಿಗೆ ನಾನಂಜುವೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನೀನು ಅಂಜಿ ದೂರದಲ್ಲಿ ಓಡುವೇ.

(೧೨). ಜನಮೆಚ್ಚು ಶುದ್ಧನಲ್ಲದೆ, ಮನಮೆಚ್ಚು ಶುದ್ಧನಲ್ಲವಯ್ಯ. ನುಡಿಯಲ್ಲಿ ಜಾಣನಲ್ಲದೆ, ನಡೆಯಲ್ಲಿ ಜಾಣನಲ್ಲವಯ್ಯ. ವೇಷದಲ್ಲಿ ಅಧಿಕನಲ್ಲದೆ, ಭಾಷೆಯಲ್ಲಿ ಅಧಿಕನಲ್ಲವಯ್ಯ. ಧನದೊರಕದೆ ನಿಸ್ಪೃಹನಲ್ಲದೆ, ಧನದೊರಕಿ ನಿಸ್ಪೃಹನಲ್ಲವಯ್ಯ. ಏಕಾಂತದ್ರೋಹಿ, ಗುಪ್ತಪಾತಕಿ, ಯುಕ್ತಿಶೂನ್ಯಂಗೆ ಸಕಳೇಶ್ವರದೇವರು ಒಲಿ, ಒಲಿ, ಎಂದರೆ ಎಂತೊಲಿವನಯ್ಯ?

(೧೩). ಆಶೆಯಿಂದ ಬಿಟ್ಟು ಕಿರಿಯರಿಲ್ಲ. ನಿರಾಸೆಯಿಂದ ಬಿಟ್ಟು ಹಿರಿಯರಿಲ್ಲ. ದಯದಿಂದ ಬಿಟ್ಟು ಧರ್ಮವಿಲ್ಲ. ವಿಚಾರದಿಂದ ಬಿಟ್ಟು ಸಹಾಯಿಗಳಿಲ್ಲ. ಸಭ್ಯರಾಚಾರಕ್ಕೆ ಸಕಳೇಶ್ವರದೇವರಿಂದ ಬಿಟ್ಟು ದೈವವಿಲ್ಲ.

(೧೪). ಕಂಗಳ ಮುಂದಣ ಕಾಮವ ಕೊಂದು, ಮನದ ಮುಂದಣ ಆಸೆಯ ತಿಂದು, ಆತನನರಿ, ಆತುರವೈರಿ ಮಾರೇಶ್ವರಾ.

(೧೫). ಆಸೆ ಎಂಬುದು ಅರಸಿಂಗಲ್ಲದೆ, ಶಿವಶರಣರಿಗುಂಟೇ? ರೋಷ ವೆಂಬುದು ಯಮದೂತರಿಗಲ್ಲದೆ ಅಜಾತಂಗುಂಟೇ? ಈಸಕ್ಕಿಯ ಆಶೆ ನಿಮಗೇಕೆ, ಮಾರಯ್ಯಪ್ರಿಯ ಅಮಳೇಶ್ವರಲಿಂಗಕ್ಕೆ ಸಲ್ಲದ ನೇಮವು?

(೧೬). ಮಾತಿನಲ್ಲಿ ನಿರ್ವಾಣ, ಆತ್ಮನಲ್ಲಿ ಘಾತಕ, ಕೂಸು ಹೇತು ಕಲಸುವಂತೆ, ತ್ರಿವಿಧದ ಆಶೆಗೆ ಸಿಕ್ಕಿ, ಸಾವ ಪಾತಕರಿಗೆಲ್ಲಿಯದೋ ಲಿಂಗ? ಅದೇ ತರ ನಿರ್ವಾಣ? ಏತದ ಕೂನಿಯಂತೆ, ರಾಟಣದಂತೆ, ಭವಪಾಶದಲ್ಲಿ ಬಿದ್ದು, ಗಾಸಿಯಾದ ಮತ್ತೆ, ನಿನಗಿನ್ನೇತರ ಭಾಷೆಯೋ ನಿಷ್ಕಳಂಕಮಲ್ಲಿಕಾರ್ಜುನಾ?

(೧೭). ಸಾವು ತಡವಿಲ್ಲ. ನರಕ ದೂರವಿಲ್ಲ. ದೇಹದಿಚ್ಛೆಗೆ ಹರಿದು, ಕೆಮ್ಮನೆ ಕೆಡಬೇಡ. ದುರ್ವಿಷಯವ ಬಿಡು ಬೇಗ. ಗುರುಪದವ ನಂಬು. ನಮ್ಮ ಸಿಮ್ಮಲಿಗೆಯ ಚನ್ನರಾಮನಲ್ಲಿ ನೀನು ಸುಖಿಯಪ್ಪೆ ಮರುಳೇ.

(೧೮). ಹಸಿವಿಂಗೆ ಲಯವಿಲ್ಲ. ವಿಷಯಕ್ಕೆ ಕುಲವಿಲ್ಲ. ಮರಣಕ್ಕೆ ಮನ್ನಣೆಯಿಲ್ಲ. ಆಸೆಗೆ ಹವಣಿಲ್ಲ. ವಂಚಕನನಾಮಿಕ, ನಾಚಯ್ಯಪ್ರಿಯ ಚನ್ನ ರಾಮೇಶಯ್ಯ.

(೧೯). ಸ್ಥಾವರವೆಂತೆಂತು ಮನದಲ್ಲಿ ಭಾವಿಸಿ, ಸಕಲಜೀವರಲ್ಲಿ ನಿಂದೆಯ ಮಾಣ್ಬುದು. ಬಂದುದು ಲಿಂಗಾಧೀನವೆಂದು ಕಾಣ್ಬುದು. ಸತ್ಯವ ನುಡಿವುದು. ಶುಚಿಯಾಗಿರ್ಪುದು. ಎರಡುವಿಡಿಯದೆ, ಎರಡು ನಡೆಯದೆ, ಮುನ್ನಿಯ ಪುರಾತನರು ಕೂಡಿದ ಪಥವಿದು, ಸಕಳೇಶ್ವರ ದೇವರನೊಲಿಸಿಹೆನೆಂಬವಂಗೆ.

(೨೦). ಭಕ್ತನು ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು. ಭೂತಹಿತವಹ ವಚನವ ನುಡಿಯಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸುವದು. ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಂಗಳ ತನ್ನ ವಶವ ಮಾಡುವದು. ಇದೇ ಮೊದಲಲ್ಲಿ ಬೇಹ ಶೌಚನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ, ಇದೇ ಸಾಧನ ಕೂಡಲಚನ್ನಸಂಗಮ ದೇವಾ.

(೨೧). ಕ್ರಿಯೆಯಲ್ಲಿ ಬಲ್ಲಿದರು, ಜ್ಞಾನದಲ್ಲಿ ಸಂಪನ್ನರೆಂದು ಹೇಳಲೇ ತಕ್ಕೋ? ನಡೆನುಡಿಯಲ್ಲಿ ಕಾಣಬಹುದು. ನಡೆನುಡಿ ಶುದ್ಧವಿಲ್ಲದವರಲ್ಲಿ ಇರಲೊಲ್ಲನು ನೋಡಾ, ಅಖಂಡೇಶ್ವರಾ.

(೨೨). ಕಾಮವೇಕೋ ಲಿಂಗಪ್ರೇಮಿ ಎನಿಸುವಂಗೆ? ಕ್ರೋಧ ವೇಕೋ ಶರಣವೇದ್ಯನೆನಿಸುವಂಗೆ? ಲೋಭವೇಕೋ ಭಕ್ತಿಲಾಭವನರಸು ವಂಗೆ? ಮದಮತ್ಸರವುಳ್ಳವಂಗೆ ಹೃದಯಶುದ್ಧವೆಲ್ಲಿಯದೋ? ಹದುಳಿಗರಾದ ವರಲ್ಲಿಪ್ಪ ಕೂಡಲಸಂಗಮದೇವಾ.

(೨೩). ಸರ್ವ ಸಂಸಾರಿಯೊಡನಾಡಿ, ಕಟ್ಟುವಡೆಯಿತ್ತು. ಮನದ ತಮಂಧ ಬಿಡದು. ಮನದಕಪಟ ಬಿಡದು. ಶಠೆಯೊಡನೆ ದಿಟವಾಡಿ ಬಯಲ ಬಡಿವಡೆಯಿತ್ತು. ಕಾಯದ ಸಂಗದ ಜೀವವುಳ್ಳನ್ನಕ್ಕರ, ಎಂದೂ ಭವಹಿಂಗದು ಗುಹೇಶ್ವರಾ.

(೨೪). ಸಜ್ಜನ ಸದ್ಭಾವಿ ಅನ್ಯರಲ್ಲಿ ಕಯ್ಯಾಂತುಬೇಡ. ಲಿಂಗವ ಮುಟ್ಟಿದ ಕೈ ಮೀಸಲು. ಕಂಗಳಲ್ಲಿ ಒಸೆದು ನೋಡಾ ಪರವಧುವ. ಮನದಲ್ಲಿ ಅನ್ಯವನೆನೆಯ. ಮಾನವರ ಸೇವೆಯಮಾಡ. ಅಂಗದ ಹಂಗನೊಲ್ಲ. ಧನದಲ್ಲಿ ವಂಚನೆ ಇಲ್ಲ, ಕೂಡಲಸಂಗಮದೇವಾ, ನಿಮ್ಮ ಶರಣ.

(೨೫). ಹುಸಿಯ ನುಡಿಯನು ಭಕ್ತ. ವ್ಯಸನಕ್ಕೆಳಸನು ಭಕ್ತ. ವಿಷ ಯಂಗಳಾತಂಗೆ ತೃಣವು ನೋಡಾ. ಬಯಸುವನಲ್ಲ ಭಕ್ತ. ದಯವೆಂಬುದು ತನ್ನ ಕೈಯ್ಯಲ್ಲಿ. ಸ್ಮರಣೆ ಎಂಬುದು ತನಗೆ ತೊತ್ತಾಗಿಪ್ಪದು. ಕೋಪವೆಂತಹದೆಂದ ರಿಯ. ತಾಪತ್ರಯಂಗಳು ಮುಟ್ಟಲಮ್ಮವು. ವ್ಯಾಪ್ತಿಗಳಡಗಿದವು. ಲಿಂಗವನೊ ಳಕೊಂಡ ಪರಿಣಾಮಿ. ಆತನ ಪಥ ಲೋಕಕ್ಕೆ ಹೊಸತು. ಲೋಕದ ಪಥವಾ ತಂಗೆ ಹೊಸತು. ತನಗೊಮ್ಮೆಯೂ ಲಿಂಗಧ್ಯಾನ. ಲಿಂಗಕ್ಕೊಮ್ಮೆಯೂ ತನ್ನ ಧ್ಯಾನ. ಆತನ ಘನಮಹಿಮೆಯ ಹೊಗಳಲೆನ್ನಳವೇ? ಪನ್ನಗಧರ ಕೇಳಯ್ಯ, ಚನ್ನ ಹಂಪೆಯವಿರುಪಯ್ಯ, ನಿಮ್ಮ ನಂಬಿದ ಸತ್ಯಶರಣ ಪರಿಣಾಮಿ.

(೨೬). ಕಾಯದ ಕಕ್ಕುಲಿತೆಗಾಗಿ ಜೀವಿಗಳ ಬಾಗಿಲವ ಕಾಯದೆ, ಈಷಣತ್ರಯಕ್ಕಾಗಿ ಭವದುಃಖಿಗಳ ಬಾಗಿಲಲ್ಲಿ ನಿಂದು ವೇಳೆಯ ಕಾವಂಗೆ ಭಾವ ರಹಿತ ಬ್ರಹ್ಮವೇಕೆ? ಅದು ನಾಣ್ನುಡಿಗೊಳಗು, ಸದಾಶಿವ ಮೂರ್ತಿಲಿಂಗಕ್ಕೆ ಹೊರಗು.

(೨೭). ತಾನು ಒಳ್ಳೆಯವನಾದರೆ ತನಗೆ ಎಲ್ಲರೂ ಒಳ್ಳೆಯವರಾಗಿ ರ್ಪರು. ತಾಹೀನನಾದರೆ, ತನಗೆ ಸರ್ವರೂ ಹೀನರಾಗಿರ್ಪರು. ತಾನು ಒಳ್ಳೆಯವ

ನಾಗಿ, ತನಗೆ ಸರ್ವರೂ ಹೀನರಾದರೆ, ಅದು ತನ್ನ ಪೂರ್ವದ ಕರ್ಮ. ತಾಹೀನ ನಾಗಿ, ತನಗೆ ಸರ್ವರೂ ಒಳ್ಳೆಯವರಾದರೆ, ಅದು ತನ್ನ ದೈವದ ಬಲವು ನೋಡಾ ಅಖಂಡೇಶ್ವರಾ.

( ೨೮ ). ಆಚಾರವನನಾಚಾರವ ಮಾಡಿ ನುಡಿವರು. ಅನಾಚಾರವನು ಆಚಾರವಮಾಡಿ ನುಡಿವರು. ಸತ್ಯವನು ಅಸತ್ಯವಮಾಡಿ ನುಡಿವರು. ಅಸತ್ಯವ ಸತ್ಯವಮಾಡಿ ನುಡಿವರು. ವಿಷವ ಅಮೃತವೆಂಬರು. ಅಮೃತವ ವಿಷವೆಂಬರು. ಸಹಜವನರಿಯದ ಅಸಹಜರಿಗೆ ಶಿವನೊಲಿ ಎಂದಡೆ, ಎಂತೊಲಿವನಯ್ಯ? ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀಮಾಡಿದಮಾಯೆಯ ನೋಡಿ ನಾನು ಬೆರಗಾದೆನು.

( ೨೯ ). ಪ್ರಾಣಲಿಂಗವೆಂಬುದೊಂದು ಮಾತಿನಂತುಟಲ್ಲ, ನೋಡಾ. ಲೋಕದ ಸುಖದುಃಖ ತನ್ನದೆನ್ನಕ್ಕ, ಚನ್ನಸಿದ್ಧನಾಥನೆಂಬ ಲಿಂಗ ಬರಿದೆ ಒಲಿವನೇ?

( ೩೦ ). ಕೊಲ್ಲೆನಯ್ಯ! ಪ್ರಾಣಿಗಳ ಮೆಲ್ಲೆನಯ್ಯ ಬಾಯಿಚ್ಛೆಗೆ! ಒಲ್ಲೆನಯ್ಯ! ಪರಸತಿಯರ ಸಂಗವ ಬಲ್ಲೆನಯ್ಯ, ಮುಂದೆ ತೊಡಕುಂಟೆಂಬು ದರಿಂದ. ಬಳ್ಳದ ಬಾಯಂತೆ, ಒಂದೇ ಮನವ ಮಾಡಿ, ನಿಲ್ಲೆಂದು ನಿಲ್ಲಿಸಯ್ಯ ಕೂಡಲಸಂಗಮದೇವಾ.

( ೩೧ ). ದಯವಿರಬೇಕು ಸಕಲಪ್ರಾಣಿಗಳಲ್ಲಿ. ಸ್ವಯವಿರಬೇಕು ಸಕಲ ಗುಣಗಳಲ್ಲಿ. ನಯವಿರಬೇಕು ನುಡಿಗಡಣದಲ್ಲಿ. ಇಂತೀ ಗುಣವಿಲ್ಲದವರ ಕಂಡಡೆ, ಸೊಗಸದಯ್ಯ ಎನಗೆ ಅಖಂಡೇಶ್ವರಾ.

( ೩೨ ). ಘಾದರ ಹಸುಗೊಲೆ ವಿಷಯಂಗಳಲ್ಲಿ ಆಧರಿಸಬೇಕು. ಬಲ್ಲ ವರಲ್ಲಿದ್ದು ಸಾಧನೆಯಾಯಿತ್ತು. ಎಲ್ಲರು ಕಲಿತ ಕಲಿಕೆಯಲ್ಲಿ ಇದನು ಭೇದಿಸ ಲರಿಯೆ ಕಾಮಹರಪ್ರಿಯರಾಮನಾಥಾ.

**ಅರ್ಥ:**— ಪರಸ್ತ್ರೀ ಸಂಗಮಾಡುವದನು, ಪ್ರಾಣಿಗಳ ಕೊಲ್ಲುವದನು, ವಿಷಯಂಗಳಲ್ಲಿ ಚರಿಸುವದನು ನಿವೃತ್ತಿಯಾಗಿ ಆಚರಿಸಬೇಕು. ತ್ರಿವಿಧ ಲಿಂಗಾ ನುಭಾವಿಗಳ ಮಧ್ಯದಲ್ಲಿ ಓದುತ್ತ, ಹಾಡುತ್ತ, ಶಿವಾನುಭಾವವ ಕೇಳುತ್ತಿದ್ದು,

ಇವುಗಳ ನಿವೃತ್ತಿಯಲ್ಲಿ ಉಂಟಾಯಿತ್ತು. ದ್ವೈತಾದ್ವೈತಿಗಳಾಚರಿಸುವ ಆಚರಣೆ ಯಲ್ಲಿ ಇವುಗಳ ನಿವೃತ್ತಿಯ ತಿಳಿಯಲರಿಯ ಎಂಬುದರ್ಥ.

(೩೩). ಬೇಕೆಂಬುವನಲ್ಲಯ್ಯ ನಿಮ್ಮ ಶರಣ. ಬೇಡೆಂಬುವನಲ್ಲಯ್ಯ ನಿಮ್ಮ ಶರಣ. ಲೋಕದ ನಡೆಯುಂತೆ ನಡೆಯುನಯ್ಯ ನಿಮ್ಮ ಶರಣ. ಲೋಕದ ನುಡಿಯಂತೆ ನುಡಿಯುನಯ್ಯ ನಿಮ್ಮ ಶರಣ. ಕಾಕು, ಸಟೆ, ಕುಟಿಲ, ಕುಹಕ, ವ್ಯಾಪಾರವ ಹೊರನಯ್ಯ ನಿಮ್ಮ ಶರಣ ಅಖಂಡೇಶ್ವರಾ.

(೩೪). ಲಂಚ ವಂಚನೆಗೆ ಕಯ್ಯಾನದ ಭಾಷೆ. ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ, ಕೈಮುಟ್ಟಿ ಎತ್ತಿದೆನಾದಡೆ, ಅಯ್ಯಾ, ನಿಮ್ಮಾಣೆ ನಿಮ್ಮ ಪ್ರಮಥ ರಾಣೆ. ನೀನಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ, ಶಂಭುಜಕ್ಕೇಶ್ವರಾ, ದೇವಯ್ಯ ನಿಮ್ಮಾಣೆ.

(೩೫). ಎಳ್ಳಿಲ್ಲದ ಗಾಣದಲ್ಲಿ ಎಣ್ಣೆಯುಂಟೆ? ಜೊಳ್ಳು ತೂರಿದಲ್ಲಿ ಬತ ಉಂಟೇ? ಕಳ್ಳ ಹಾದರಿಗರ ಸಂಪಾದನೆ ಹೊಳ್ಳ ಕುಟ್ಟಿ ಕೈಹೊಟ್ಟಾದಂತೆ ಕಾಣಾ ರಾಮನಾಥಾ.

(೩೬). ಗುರುವಿನ ರೂಪವ ಮರೆದು, ಪರವಧುವ ನೆರೆವರು. ಪರಧ ನವನಳುಪುವರು. ಗುರುವಿಲ್ಲವವರಿಗೆ ಇಂತಪ್ಪ ನರಕಿಗಳನೆನಗೊಮ್ಮೆ ತೋರ ದಿರಾ ರಾಮನಾಥಾ.

(೩೭) ಪರವಧುವ ನೆರೆಯದೆ, ಪರಧನವ ತುಡುಕದೆ, ಪರದೈವದಿಚ್ಛೆ ವಡೆಯದೆ, ಗುರುಲಿಂಗ ಜಂಗಮಕ್ಕೆ ವರದಾಸನಾದಾತನೇ ಧರೆಮೂರಕ್ಕೆ ಗುರು ವಾಗಿಪ್ಪನೈ ರಾಮನಾಥಾ.

(೩೮). ಪರಧನ, ಪರಾನ್ನ, ಪರಸ್ತ್ರೀಯರಾಶೆ ಬಿಡದು. ಶರಣನೆಂತೆಂಬೆ? ಸಂಬಂಧಿ ಎಂತೆಂಬೆ ಮರುಳೇ? ಶ್ಲೊ॥ ಜಿಹ್ವಾದಗ್ಧ ಪರಾನ್ನಂಚ ಹಸ್ತದಗ್ಧ ಪ್ರತಿಗ್ರಹಂ। ಚಕ್ಷುದಗ್ಧ ಪರಸ್ತ್ರೀಣಾ ತಸ್ಯ ಜನ್ಮ ನಿರರ್ಥಕಂ॥ ಇಂತೆಂದು ಶೃತಿ ಸಾರಲು, ಮತಿಗೆಡುವಿರಕಟಾ, ನಿವೃತ್ತಿಸಂಗಯ್ಯ ದೇವರೆಂತೊಲಿವನವ್ವಾ?

(೩೯). ಮಾತು ಗಂಟುತನದಿಂದ, ಎಷ್ಟು ಮಾತನಾಡಿದಡೇನು? ಕಾಮಿನಿಯರ ಕಾಲದೆಸೆಯಲ್ಲಿ ಸಿಕ್ಕಿ, ಕ್ರೋಧದದಳ್ಳುರಿಯಲ್ಲಿ ಬೆಂದು, ಆಸೆ

ಎಂಬ ಪಾಶ ಕೊರಳಲ್ಲಿ ಸುತ್ತಿ, ಅದೇಕೋ, ಅದೇತರ ಮಾತೆಂದನಂಬಿಗರ ಚೌಡಯ್ಯ ?

(೪೦). ಹಣ, ಬಂಗಾರ, ವಸ್ತ್ರ, ಕಪ್ಪಟ, ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು, ಕಂಡು ಕಾತರಿಸಿ ಕೈಮುಟ್ಟಿ ಎತ್ತದ ಭಾಷೆ. ಕೊಟ್ಟಡೆ ಮುಟ್ಟದ ಭಾಷೆ. ಪರಧನ ಪರಸತಿಗೆ ಅಳುಪದ ಭಾಷೆ. ಇಂತಿದಕ್ಕಳುಪಿದೆನಾದಡೆ, ಸೌರಾಷ್ಟ್ರ ಸೋಮೇಶ್ವರಾ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ.

(೪೧). ಶೀಲ ಶೀಲವೆಂದು ಗರ್ವಿಸಿ ನುಡಿವುತಿರ್ಪಿರಿ. ಶೀಲವಾವುದೆಂದರಿಯರೇ? ಕೇಳಿರಣ್ಣಾ. ಇದ್ದುದ ವಂಚನೆಯ ಮಾಡದಿರ್ಪುದೇ ಶೀಲ. ಇಲ್ಲದುದಕೆ ಕಡನ ಮಾಡದಿರ್ಪುದೇ ಶೀಲ. ಪರಧನ ಪರಸ್ತ್ರೀಯರ ಮುಟ್ಟದಿರ್ಪುದೇ ಶೀಲ. ಪರದೈವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ. ನಮ್ಮ ಕೂಡಲ ಚನ್ನಸಂಗನ ಶರಣರ ಬರವಿಂಗೆ ಮಯ್ಯಾಂತುದೇ ಅಚ್ಚ ಶೀಲ.

(೪೨). ದರ್ಶನ ತಪ್ಪುಕ ಪ್ರಥಮಪಾತಕ. ಸ್ಪರ್ಶನ ತಪ್ಪುಕ ದ್ವಿತೀಯ ಪಾತಕ. ಗುರು ತಪ್ಪುಕ ತೃತೀಯ ಪಾತಕ. ಪರದಾರ ಚತುರ್ಥ ಪಾತಕ. ಮಾಂಸಾಹಾರ ಪಂಚಮಹಾಪಾತಕ. ಈ ಅಯ್ವರೊಡನೆ ನುಡಿಯಲಿಲ್ಲೈ ರಾಮನಾಥಾ.

(೪೩). ಭಕ್ತರಲ್ಲದವರೊಡನೆ ಆಡದಿರು, ಆಡದಿರು. ಅರ್ಥದಾಸೆಗೆ ದುರ್ಜನರ ಸಂಗ ಮಾಡದಿರು ಮಾಡದಿರು. ಉತ್ತಮರ ಕೆಡೆ ನುಡಿಯದಿರು, ನುಡಿಯದಿರು. ನಿತ್ಯವಲ್ಲದ ದೈವಕ್ಕೆರಗದಿರು, ಎರಗದಿರು. ಕರ್ತ ಸೊಡ್ಡಳನ ನೆರೆ ನಂಬು, ಡಂಭ ಬೇಡಾ.

(೪೪). ಭಕ್ತರಿಗೆ ಹೋಗಿ ಸಮಯೋಚಿತವ ಮಾಡುವನ, ಸದ್ಭಕ್ತರಿಗೆ ಉಣಲಿಕ್ಕೆ ತನ್ನ ಹಸಿವ ಮರೆದಿಪ್ಪವನ, ಸದ್ಭಕ್ತರಿಗೆ ಉಳ್ಳುದೆಲ್ಲವ ಕೊಟ್ಟು, ಎಯ್ದರೆಂದು ಮರುಗುವ, ಏಕೋಗ್ರಾಹಿ, ನೆಟ್ಟನೇ ಶರಣ. ತೊಟ್ಟನೇ ತ್ರೋಳಲಿ, ಅರಸಿಯೂ ಕಾಣದೆ, ಮೂರುತೆರದ ಮುಕ್ತಿಯ ಹಾದಿಯು, ಆರು ತೆರದ ಭಕ್ತಿಯ ಭೇಡವ ಇಂತಪ್ಪ ವರವ ಕೊಟ್ಟಡೆಯೂ, ಒಲ್ಲೆನು. ಸಕಳೇಶ್ವರದೇವ, ನಿಮ್ಮ ಶರಣರ ತೋರಾ ಎನಗೆ.

( ೪೫ ). ಗರ್ವದಿಂದ ಮಾಡುವ ಭಕ್ತಿ ದ್ರವ್ಯದ ಕೇಡು. ನಡೆ ಇಲ್ಲದ
ುಡಿ ಅರುವಿಗೆ ಹಾನಿ, ಕೊಡದೆ ತ್ಯಾಗಿ ಎನಿಸಿಕೊಂಬುದು ಮುಡಿ ಇಲ್ಲದ
ುಂಗಾರ, ದೃಢವಿಲ್ಲದಭಕ್ತಿ ಅಡಿಒಡೆದ ಕುಂಭದಲ್ಲಿ ಸುಜಲವ ತುಂಬಿದಂತೆ,
ಮಳೇಶ್ವರಲಿಂಗವ ಮುಟ್ಟದ ಭಕ್ತಿ.

( ೪೬ ). ಖ್ಯಾತಿಲಾಭಕ್ಕೆ ಮಾಡುವಾತ ಭಕ್ತನಲ್ಲ, ಡಂಭಕಕ್ಕೆ ಡೊಂಬ
ಂತೆ ತಿರುಗುವವ ಜಂಗಮವಲ್ಲ. ತನುತಲೆ ಬತ್ತಲೆಯಾಗಿ, ತ್ರಿವಿಧಾಸೆಯುಳ್ಳ
ಕ್ಕರ ವಿರಕ್ತನಲ್ಲ. ಇಂತೀ ಗುಣವ ಸಂಪಾದಿಸುವನ್ನಕ್ಕರ, ಎನಗೆ ಮುಕ್ತಿ
ಂಬ ಬಟ್ಟೆಇಲ್ಲ. ನೀ ಸತ್ತೆ ನಾಕೆಟ್ಟೆನು, ಮನಸಂದಿತ್ತು ಮಾರೇಶ್ವರಾ.

( ೪೭ ). ಈರೇಳು ಭುವನವನು ಒಡಲೊಳಗೆ ಇಂಬಿಟ್ಟುಕೊಂಡು, ಲಿಂಗ
ೂಪಾಗಿ ಭಕ್ತನ ಕರಸ್ಥಲಕ್ಕೆ ಬಂದು ಪೂಜೆಗೊಂಡಿತ್ತು ನೋಡಾ. ಅಂತಹ
ಗಮ್ಯ, ಅಗೋಚರ ಲಿಂಗವೆಂದರಿದು ಭಕ್ತನು ತಾನು ಹಿಂದೆ ನಡೆದ ಜೂಜು,
ಲೆಂಟೆ, ಚದುರಂಗ, ನೆತ್ತ, ಪಗಡೆಯಾಟಂಗಳಂ, ಪರಿಹಾಸಕರ ಕೂಡಿಕೊಂಡು
ಲೆದಾಡುವುದಂ ಬಿಟ್ಟು, ಶಿವಪಥದಲ್ಲಿ ನಡೆಯಬಲ್ಲಾತನೇ ಸದ್ಭಕ್ತನಲ್ಲದೆ,
ಣದಾಸೆಗೆ ಹಂಗಿಗನಾಗಿ, ಗುಣದಾಸೆಗೆ ಅಮೇಧ್ಯವತಿಂದು, ಬಂಧುಗಳ
ಟ್ಟು, ಭಕ್ತಿ ಇಲ್ಲವೇ ಉಂಟೆಂಬ ಪಂಚಮಹಾಪಾತಕರ ಮುಖವನೋಡಲಾ
ದು. ಅವರ ಮಾತು ಕೇಳಲಾಗದು. ಅದೆಂತೆಂದರೆ, ಕತ್ತೆ ಭಕ್ತನಾದರೆ, ಕಿಸುಕು
ವ ತಿಂಬುದ ಮಾಬುದೇ? ಬೆಕ್ಕು ಭಕ್ತನಾದರೆ, ಇಲಿಯು ತಿಂಬುದ ಮಾಬು
ೇ? ಶುನಕ ಭಕ್ತನಾದರೆ, ಮೂಳೆ ಮಾಂಸವ ತಿಂಬುದ ಮಾಂಬುದೇ? ಕೋ
ಯ ತಂದು, ಪಂಜರದಿ ಇಟ್ಟು, ಅಮೃತಾನ್ನವನಿಕ್ಕಿ ಸಲಹಿದರೆ, ಅದು ತಾನು
ುತ್ತೆ ತಿಂಬ ಹಡಿಕಿಗೆ ಚಿತ್ತವನಿಕ್ಕುವುದಂ ಮಾಂಬುದೇ? ಇಂತೀ ಭವಿತನಕ್ಕೆ
ಕೇಸಿ ಭಕ್ತನಾದ ಬಳಿಕ, ಅನಾಚಾರವ ಬಿಟ್ಟು, ಸದಾಚಾರದಲ್ಲಿ ನಡೆಯಬೇಕು.
ುರುವಾದಡೂ ಆಗಲಿ, ಭಕ್ತನಾದಡೂ ಆಗಲಿ, ತಾನು ಹಿಂದೆ ಭವಿಯಾಗಿ
ದ್ದಾಗ ಭುಂಜಿಸುತ್ತಿದ್ದ ಸುರೆ, ಮಾಂಸ, ಭಂಗಿ, ಭವಿಸಂಗ, ಭವಿಪಾಕ, ಇಂತಿವ
ಡದಿರ್ದವರುಗಳು, ಆ ಕತ್ತೆ, ಆ ಬೆಕ್ಕು, ಸೊಣಗ, ಕೋಳಿಗಿಂದತ್ತತ್ತ ಕಡೆ
ೋಡಿರೋ. ಅದೆಂತೆಂದೊಡೆ, ವೀರಾಗಮಸಾಕ್ಷಿ:-ಕಿಂ ಮಾಂಸಂ ಕಾ ಶಿವೆ
ಕ್ತಿಃ ಕಿಂ ಮದ್ಯಂ ಕಶ್ಶಿವಾರ್ಚನಃ । ಮದ್ಯ ಮಾಂಸಂ ತಾನಾಂ ಚದೂರೆ
ಷ್ಠಾಮಿ ಶಾಂಕರೀ ॥ ಪಶುಂ ಹತ್ವಾಸುರಾಂ ಪೀತ್ವಾ ಕೃತ್ವಾ ಪಲಲಭೋ

ಜಿನಂ । ಯಏವಂ ಗಮ್ಯತೆ ಸ್ವರ್ಗಂ ನರಕಂ ತೆನಗಮ್ಯತೆ ॥ ಎಂದುದಾಗಿ, ಬೆಟ್ಟ ವನೇರಿದವನು ಕಣ್ಣು ಕಾಣದಿಪ್ಪಂತೆ, ಗಣಿಯನೇರಿದ ಡೊಂಬ ಮೈಮರೆದಿಪ್ಪಂತೆ, ನಡುನೀರಿಗೆ ಹೋದ ಹರಿಗೋಲು ತಲೆಕೆಳಗಾದಂತೆ, ಕಾಣಾ ಕೂಡಲ ಸಂಗಮದೇವಾ.

(೪೮). ಬಕಧ್ಯಾನಿಗೆ ಜಪಧ್ಯಾನಮುಂಟೇ? ಚದುರಂಗ ನೆತ್ತ ಪಗಡೆಯ ಪರಿಹಾಸಕರ ಕೂಡಿ ಕೆಲೆವಂಗೆ ಶಿವಮೂರ್ತಿಧ್ಯಾನ ಮುಂಟೇ? ಕುಕ್ಕುಟಂಗೆ ಪಟ್ಟೆಮಂಚಸುಪ್ಪತ್ತಿಗೆ ಅಮೃತಾನ್ನವನಿಕ್ಕಿ ಸಲಹಿದರೂ ಹಡುಹಿಂಗೆ ಚಿತ್ತವನಿಕ್ಕುವದೇ ದಿಟ. ಇಂತೀ ಗುರುಚರ ಅಜ್ಞೆಯ ಮೀರಿದವಂಗೆ ಕುಕ್ಕುಟಂಗತ್ತಣ ಕಡೆ. ಗುರುವಾದಡಾಗಲಿ, ಚರಲಿಂಗವಾದಡಾಗಲಿ, ವರ್ತನ ತಪ್ಪಿ ನಡೆವಂಗೆ ಭಕ್ತಿವಿರಕ್ತಿ ಮೋಕ್ಷ ಮುಮುಕ್ಷತ್ವವಿಲ್ಲ. ಸಂಗನ ಬಸವಣ್ಣ ಸಾಕ್ಷಿಯಾಗಿ, ಚನ್ನಬಸವಣ್ಣನರಿಕೆಯಾಗಿ, ಪ್ರಭುಸಿದ್ಧರಾಮೇಶ್ವರ ಮರುಳು ಶಂಕರ ನಿಜಗುಣಿ ಇಂತಿವರೊಳಗಾದ ನಿಜಲಿಂಗಾಂಗಿಗಳು ಮುಂತಾಗಿ, ಎನ್ನ ಕಾಯಕಕ್ಕೆ ಇಕ್ಕಿದ ಕಟ್ಟು, ನಾಭಕ್ತನೆಂದು ನುಡಿದಡೆ, ಎನಗೊಂದು ತಪ್ಪಿಲ್ಲ, ಅದು ನಿಮ್ಮ ಚಿತ್ತದ ಎಚ್ಚರಿಕೆ, ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗ ಸಾಕ್ಷಿಯಾಗಿ.

(೪೯). ಸದಾಚಾರದಲ್ಲಿ ನಡೆವನ, ಶಿವನಲ್ಲಿ ಭಕ್ತಿಯಾಗಿಪ್ಪನ, ಶಿವಲಾಂಛನವ ಕಂಡಲ್ಲಿ ವಂದನೆಗೆಯ್ವುತಿಪ್ಪನ, ಲಿಂಗಜಂಗಮ ಒಂದೇ ಭಾವದಲ್ಲಿ ಕಂಡು ಭೃತ್ಯಾಚಾರಯುಕ್ತನಾಗಿರಬಲ್ಲಡೆ, ಭಕ್ತಸ್ಥಲವೆಂದೆಂಬೆನಯ್ಯ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೫೦). ಲಿಂಗವಂತನು ಲಿಂಗವಂತರೊಡನೆ ಸತ್ಯವ ನುಡಿವುದು. ಸಹಜದಲ್ಲಿ ನಡೆವುದು. ಪ್ರೇಮದಲ್ಲಿ ಸಂಗವ ಮಾಡುವುದು. ಈ ಕ್ರಿ ಇಹಪರಸಿದ್ಧಿ, ಲಿಂಗವನರಿದುದಕ್ಕೆ ದೃಷ್ಟ. ಲಿಂಗಾರ್ಚನೆಯ ಕ್ರಿ ಲಿಂಗ ಒಲಿದುದಕ್ಕೆ ಚಿಹ್ನ. ಇದು ಸತ್ಯ. ಲಿಂಗವಂತನು ಲಿಂಗವಂತರೊಡನೆ ಹೇಮದಾಸೆಗೆ ಪ್ರೇಮಗುಂದಿ ನಡೆಯಲಾಗದು, ಅಸತ್ಯವ ನುಡಿಯಲಾಗದು, ಕ್ರೋಧಿಸಿ ನುಡಿಯಲಾಗದು. ವೇದಶಾಸ್ತ್ರ ಆಗಮಪುರಾಣ, ಪುರಾತನರ ವಚನ, ಪುರಾತನರ ಚಾರಿತ್ರವನರಿಯದೆ, ಆದಿ ಮಧ್ಯ ಪರಿಪಕ್ವತೆಯನರಿಯದೆ, ತರ್ಕಿಸಿ ನುಡಿಯಲಾಗದು. ದುಶ್ಚಾರಿತ್ರದಲ್ಲಿ ವರ್ತಿಸಲಾಗದು. ಅಜ್ಞಾನಕ್ರಿಯೆ ವರ್ತಿಸಲು, ಇಹಪರವಿಲ್ಲ, ಲಿಂಗವ

ನರಿಯುಬಾರದು, ಲಿಂಗವಂತರನೆಂದೂ ಅರಿಯುಬಾರದು, ಅರಿದವಂಗೆ ಪೂಜಿಸ ಲೆಂತೂಬಾರದು. ಪೂಜೆ ಇಲ್ಲದವಂಗೆ ಭಕ್ತಿ ಎಂತಹುದೋ? ಭಕ್ತಿ ಇಲ್ಲದ ವಂಗೆ ಪ್ರಸಾದವೆಂತಹುದೋ? ಪ್ರಸಾದನಿಲ್ಲದವಂಗೆ ಮುಕ್ತಿ ಇಲ್ಲ. ಇದು ಸತ್ಯ, ಇದನರಿದು, ಲಿಂಗವಂತರಲ್ಲಿ ಸತ್ಯಸಂಭಾಷಣೆ, ಸದ್ಭಕ್ತಿಯೋಗವಾದಡೆ, ಕೇವಲಮುಕ್ತಿ, ಉರಿಲಿಂಗಪೆದ್ದಿಪ್ರಿಯುವಿಶ್ವೇಶ್ವರಾ.

( ೫೧ ). ಸೂಳೆ, ಸುರೆ, ಬೆಕ್ಕು, ನಾಯಿ, ಅನ್ಯದೈವ, ಭವಿ, ತಾಳಹಣ್ಣು ಈಸೊಂದುಳ್ಳನ್ನಕ್ಕರ, ಭಕ್ತನಲ್ಲ, ಶಿವದ್ರೋಹಿ, ವ್ರತಗೇಡಿ. ಈಸೊಂದುಳ್ಳ ನ್ನಕ್ಕರ, ಯುಕ್ತನಲ್ಲ. ಅದೆಂತೆಂದೊಡೆ. ವೀರತಂತ್ರೆ ॥ ಶ್ಲೋ ॥ ಮೃಗಯಾಮದ್ಯ ವೇಶ್ಯಾ ಅನ್ಯದೈವಸ್ಯ ಪೂಜಕಃ। ತತ್ಸಂಗೀಚ ಮಹಾದ್ರೋಹೀನಲಿಂಗೀ. ಭವಿ ನೋಪಮಃ ॥ ಎಂದುದಾಗಿ, ಸೂಕರನು ಅಶುದ್ಧವ ತಿಂದು, ಅದು ಒಂದರ ಮುಸುಡ ಒಂದು ಮೂಸಿ ನೋಡುವಂತೆ, ಇಂತಪ್ಪ ಅನಾಚಾರಿಗಳಂ ಬಿಡದವನು ಆ ಸೂಕರನೋಪಾದಿ ಕಾಣಾ ಕಲಿದೇವರ ದೇವಾ.

( ೫೨ ). ವಿಭೂತಿಯನಿಟ್ಟು, ರುದ್ರಾಕ್ಷಿಯಂ ಧರಿಸಿ, ಪಂಚಾಕ್ಷರಿಯಂ ಜಪಿಸಿ ಕೃತಾರ್ಥರಾದೆವೆಂಬ ಪಂಚಮಹಾಪಾತಕರು ನೀವು ಕೇಳಿರೋ. ಅದೆಂತೆಂದೊಡೆ ವಿಭೂತಿಯನಿಟ್ಟು ವಿಶ್ವಾಸವಿಲ್ಲವಾಗಿ, ರುದ್ರಾಕ್ಷಿಯ ಧರಿಸಿ, ರುದ್ರಗಣಂಗಳನರಿಯರಾಗಿ, ಪಂಚಾಕ್ಷರಿಯ ಜಪಿಸಿ, ಪಂಚಮಹಾಪಾತಕವ ಬಿಡರಾಗಿ, ಅವಾವೆಂದಡೆ, ಹುಸಿ, ಕೊಲೆ, ಕಳವು, ಪರದಾರ, ತಾಮಸಭಕ್ತ ಸಂಗ, ಇಂತಿವ ಬಿಡದನ್ನಕ್ಕರ ಶಿವಭಕ್ತನೆನಿಸಿಕೊಳ್ಳಬಾರದು ನೋಡಾ. ಆಗಮ ಸಾಕ್ಷಿ॥ ಸರ್ವಾಚಾರ ಪರಿಭ್ರಷ್ಟೋ ಶಿವಾಚಾರಯ್ಯ ಮೇಳನಂ । ಶಿವಾ ಚಾರ ಪರಿಭ್ರಷ್ಟೋ ನರಕೇ ಕಾಲಮಕ್ಷಯಂ ॥ ಎಂದುದಾಗಿ ಕಸಕೊಂಡ ಭೂಮಿಯಲ್ಲಿ ಸಸಿ ಪಲ್ಲಯಿಸುವದೇ? ಹುಸಿ ಇದ್ದಲ್ಲಿ ಶಿವಭಕ್ತಿ ನೆಲೆಗೊಂಬುದೇ? ಬಸವಗತಿ ಎನುತ ಹಿರಿದಾಗಿ ಭಸಿತವ ಪೂಸಿಕೊಂಡಿರ್ಪ ಕುನ್ನಿಗಳೆಲ್ಲರೂ ಸದ್ಭಕ್ತರಾಗಬಲ್ಲರೇ? ಅಶನ ಭವಿಪಾಕ ತಿಂಬುದೆಲ್ಲವೂ ಅನ್ಯ ದೈವದೆಂಜಲು. ಮತ್ತೆ ಮರಳಿ ವ್ಯಸನಕ್ಕೆ ದಾಸಿ, ವೇಶಿ, ಹೊಲತಿ, ಮಾದಗಿತ್ತಿ, ಡೊಂಬಿತಿ ಮೊದ ಲಾದವರಿಗೆ ಹೇಸದೆ ಅಳಿಯು ಮಾಡುವವರ ಭಕ್ತಿಯ ತೆರನೆಂತೆಂದೊಡೆ, ಸೂಕ ರನ ದೇಹವ ತೊಳೆದರೆ, ಅದು ಕೂಡೆ ಅಶುದ್ಧದೊಳಗೆ ಹೊರಳಿದ ತೆರನಾಯಿ ತ್ತೆಂದನು ಕಲಿದೇವರದೇವಾ.

( ೫೩ ). ಶಿವನೇ ದೈವ, ಶಿವಭಕ್ತನೇ ಕುಲಜ, ಷಡಕ್ಷರವೇ ಮಂತ್ರ, ಕೊಲ್ಲದಿರ್ಪುದೇ ಧರ್ಮ, ಅಧರ್ಮದಿಂದ ಬಂದುದ ಒಲ್ಲದಿಪ್ಪುದೇ ಭಕ್ತಿ, ನೇಮ ಆಶೆ ಇಲ್ಲದಿಪ್ಪುದೇ ತಪ, ರೋಷವಿಲ್ಲದಿಪ್ಪುದೇ ಜಪ, ವಂಚನೆ ಇಲ್ಲದಿಪ್ಪುದೇ ಸಮಯಾಚಾರ, ಇದು ಸತ್ಯ, ಶಿವಬಲ್ಲ, ಶಿವನಾಣೆ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

( ೫೪ ). ಹಂದಿ ಶ್ರೀಗಂಧವ ಹೂಸಿದಡೇನು, ಗಂಧ ರಾಜನಾಗ ಬಲ್ಲುದೇ? ನವಿಲು ನಲಿಯಿತ್ತೆಂದರೆ, ತಾ ಕೋಳಿ ಪುಚ್ಛವ ತೆರೆದುಕೊಂಡಂತೆ ಕರ್ಮಿಗಳ ಭಕ್ತಿ. ಹೊರವೇಷದ ವಿಭೂತಿ ರುದ್ರಾಕ್ಷಿಯ ಹೂಸಿದಡೇನು? ತೆರ ನನರಿದು ಮರವೆಯ ಕಳೆದು, ಮಾತಿನಂತೆ ನೀತಿಯುಳ್ಳೊಡೆ, ಅವರ ಅಜಾತ ರೆಂಬೆ ಕಾಣಾ ರಾಮನಾಥಾ.

( ೫೫ ). ಕಾಮ ಸನ್ನದ್ಧನಾಗಿ, ತಾ ಚಲುವನಾದಡೆ, ಕಾಮಿನೀ ಜನ ವೆಲ್ಲ ಮೆಚ್ಚಬೇಕು. ದಾನಗುಣವುಳ್ಳವ ಕರೆದೀವನಾದಡೆ, ಯಾಚಕ ಜನವೆಲ್ಲ ಮೆಚ್ಚಬೇಕು. ವೀರನಾದಡೆ ವೈರಿಗಳು ಮೆಚ್ಚಬೇಕು. ಖೂಳನಾದಡೆ, ತನ್ನ ತಾ ಮೆಚ್ಚಿಕೊಂಬ. ಎನ್ನ ದೇವ ತೆಲುಗೇಶ್ವರನಲ್ಲಿ ತಾನು ಭಕ್ತನಾದಡೆ, ದೇವರು ಮೆಚ್ಚೆ ಜಗವು ತಾ ಮೆಚ್ಚುವದು.

( ೫೬ ). ಹೆಣ್ಣು ಬೇಡುವಂಗೆ ಹೆಣ್ಣೇ ಪ್ರಾಣ, ಹೊನ್ನ ಬೇಡುವಂಗೆ, ಹೊನ್ನೇ ಪ್ರಾಣ, ಮಣ್ಣು ಬೇಡುವಂಗೆ ಮಣ್ಣೇ ಪ್ರಾಣ. ಮನದ ಕುರುಹನರಿ ದವರನಾರನೂ ಕಾಣೆ. ಕುರಿತು ಬಂದಲ್ಲಿ, ಕುರುಹಿಂಗೆ ಮಾಡುವದೇ ಶಾಂತಿ ಗುಣ. ಅರಿಕೆವಿಡಿದು ಬಂದಲ್ಲಿ, ತನು ಮನ ಧನ ತೆರಹಿಲ್ಲದೆ ಲೇಸಾಗಿಪ್ಪುದೇ ಅಂಥ ಸದ್ಭಕ್ತನ ಇರವು. ಲಾಂಛನಕ್ಕೆ ನಮಿಸಿ, ಅಪ್ಯಾಯನಕ್ಕೆ ನೀಡಿ, ತಪ್ಪಿಪ್ಪ ಭಕ್ತನ ಒಪ್ಪಕ್ಕೆ ನಮೋ ನಮೋ ನಿಷ್ಕಳಂಕಮಲ್ಲಿಕಾರ್ಜುನಾ.

**ಅರ್ಥ:**—ಹೆಣ್ಣು ಅರ್ಥಿಸುವಂಗೆ, ಆ ಹೆಣ್ಣೇ ಪ್ರಾಣವಾಗಿರ್ಪುದು. ಹೊನ್ನ ಅರ್ಥಿಸುವಂಗೆ, ಹೊನ್ನೇ ಪ್ರಾಣವಾಗಿಪ್ಪುದು. ಹೊಲಗದ್ದೆಗಳ ಅರ್ಥಿ ಸುವಂಗೆ ಅದೇ ಪ್ರಾಣವಾಗಿಪ್ಪುದು. ಮನದ ಕುರುಹಾದ ಪ್ರಾಣಲಿಂಗ ಸಂಬಂಧವನರಿದವರ ಒಬ್ಬರನೂ ಕಾಣೆ. ಭಕ್ತನಿಂದ ವಸ್ತುವ ಪಡೆಯಬೇಕೆಂದು ಕುರುಹಿಟ್ಟು ಬಂದಲ್ಲಿ, ಆ ಕುರಿತು ಬಂದ ಜಂಗಮಕ್ಕೆ ಇಚ್ಛಾಪದಾರ್ಥವ

ಕೊಟ್ಟು ಭಕ್ತಿಯ ಮಾಡುವುದೇ ಭಕ್ತಿಯ ಗುಣವು. ಸತ್ಯಾಸತ್ಯ ವಿಚಾರವ ತಿಳಿದು, ಭಕ್ತಿ, ಜ್ಞಾನ, ವೈರಾಗ್ಯವಿಡಿದಾಚರಿಸುವ ಜ್ಞಾನಿಗಳು ಬಂದಲ್ಲಿ ತನು ಮನ ಧನಂಗಳು ತೆರಪಿಲ್ಲದೆ ಅವರ ಭಕ್ತಿಯಲ್ಲಿ ಕೂಡಿರುವದೇ ತನ್ನ ನಿಜವನು ತಿಳಿದ ಸದ್ಭಕ್ತನ ನಿಲುಕಡೆಯು. ಶಿವಲಾಂಛನ ಸಮೇತವಾದ ಜಂಗಮಕ್ಕೆ ನಮಸ್ಕಾರವಮಾಡಿ ಹಸಿವಿಗನ್ನವನಿಕ್ಕಿ, ಆ ಭಕ್ತಿಯಿಂದಾಗುವ ಫಲಪದಂಗಳಿಗೆ ತಾ ವಿಲಕ್ಷಣವಾಗಿಪ್ಪ ಶಿವಭಕ್ತನ ನಿಲುಕಡೆಗೆ ಸಾಂದ್ರ ನಮಸ್ಕಾರವೆಂಬುದರ್ಥ.

( ೫೭ ). ಮುಂದುಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತ ಸಮಯದಲಿ ಸದ್ಭಕ್ತರ ಮುಖವ ನೋಡುವದು. ಹುಟ್ಟಿದುದಕ್ಕಿದೇ ಸಲಹು ನೋಡಾ. ಸತ್ಯವಚನವಿಂತೆಂದುದು. ಇದಿಲ್ಲದವರ ಕಂಡೊಡೆ, ನಾನೊಲ್ಲೆ ಗುಹೇಶ್ವರಾ.

( ೫೮ ). ಆಚಾರವನರಿಯದೆ, ವಿಭವವಳಿಯದೆ, ಕೋಪವಡಗದೆ, ತಾಪಮುರಿಯದೆ ಬರಿದೆ ಭಕ್ತರಾದೆವೆಂದು ಬೆಬ್ಬನೆ ಬೆರೆವವರ ಕೇಡಿಂಗೆ ನಾನು ಮರಗುವೆ ಕಾಣಾ ಗುಹೇಶ್ವರಾ.

( ೫೯ ). ಅನ್ಯರಜವ ಸೋಂಕದೆ, ತನ್ನ ರಜವ ಬಾಧಿಸದೆ, ರವಿಯ ಬೆಳಸಬಳಸದೆ, ಲಿಂಗದ ಬೆಳಸ ತಂದು, ಜಂಗಮದಲ್ಲಿ ಸವಿಸುತ್ತಿರ್ಪ ಲಿಂಗಭಕ್ತ ಅವನಲ್ಲಿ ಗುಹೇಶ್ವರಲಿಂಗವಿಪ್ಪನು.

**ಅರ್ಥ:—** ಅನ್ಯ ಪಿಂಡವನಾಸೆ ವಿಡಿಯದೆ, ತನ್ನ ಪಿಂಡವ ನೋಯಿಸದೆ, ರೋಷದಾಸೆಯ ಬಳಸದೆ, ಲಿಂಗದಲುದಯವಾದ ಲಿಂಗದ್ರವ್ಯವನೇ ತಂದು ಜಂಗಮದಲ್ಲಿ ಸವಿಸುತ್ತಿರ್ಪ ಭಕ್ತನಲ್ಲಿ ನಿರಂತರಲಿಂಗವಿಪ್ಪನೆಂಬುದೀವಚನದರ್ಥ.

( ೬೦ ). ನಿಜವರಿಯದ ಶರಣರು ಲಿಂಗೈಕ್ಯರು ಗಿರಿಗಹ್ವರದಲ್ಲಿದ್ದು ಫಲವೇನು? ಮನವು ಲೇಸಾದೊಡೆ ಸಾಲದೇ? ಮನವು ಲೇಸಾಗಿ ಪರಮಸುಖಿಯಾಗಿಪ್ಪ ಶರಣನ ಹೃದಯದಲ್ಲಿ ಸದಾಸನ್ನಿಹಿತ ಸಕಳೇಶ್ವರದೇವಾ.

( ೬೧ ). ಅವುದಾನೊಂದು ಕರ್ಮಂಗಳ ವ್ಯಾಪಾರಿಸಿ ಮಾಡುವಲ್ಲಿ ಸತ್ವಕ್ಕೆ ತಕ್ಕ ಸಾಮರ್ಥ್ಯವನರಿತು ಕ್ರಿವರ್ತನೆಗಳ ಹಿಡಿಯದೆ ಇದ್ದಲ್ಲಿ ಹಿಂದಣ ನಗೆಗೆಡೆ ಮುಂದಣ ಹಾಸ್ಯಕ್ಕೊಳಗಲ್ಲದೆ, ನುಡಿದ ಮಾತಿಂಗೆ ನಡೆಶುದ್ಧವಾಗಿ,

ಆ ನಡೆಗೆ ಕ್ರಿಶುದ್ಧವಾಗಿ, ಆ ಕ್ರಿಯಲ್ಲಿ ವ್ರತಭಂಗವಿಲ್ಲದಿಪ್ಪುದು ಸದ್ಭಕ್ತನ ಸಂಬಂಧ. ಈ ಗುಣ ಸಂಗನಬಸವಣ್ಣನ ಶ್ರದ್ಧೆ ಬ್ರಹ್ಮೇಶ್ವರ ಲಿಂಗವನರಿವುದಕ್ಕೆ ಕ್ರಿಯಾಮಾರ್ಗ.

(೬೨). ಭಕ್ತನಾದಡೆ ಬಾಳೆಯ ಹಣ್ಣಿನಂತಿರಬೇಕು. ಭಕ್ತನಾದಡೆ ಬೆಲ್ಲದ ಕುಳ್ಳಿಯಂತಿರಬೇಕು. ಭಕ್ತನಾದಡೆ ಮಾವಿನ ಫಲದಂತಿರಬೇಕು. ಇಂತ ಪ್ಪಾತನೇ ಸದ್ಭಕ್ತ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗನಿರ್ಮಾಯ ಪ್ರಭುವೇ.

**ಅರ್ಥ:—** ಸುಜ್ಞಾನೋದಯನಾದ ವೀರಮಾಹೇಶ್ವರನು ಬಾಳೆಯ ಹಣ್ಣಿನ ತೋಟೆಯ ಸುಲಿದು ನೋಡದರೆಯೂ ಮೃದುವಾಗಿ ತೋರುವದಲ್ಲದೆ ಕಠಿಣವಾಗಿ ತೋರದೆಂಬ ಹಾಗೆ ಶ್ರೀಗುರು ಬಂದು ತನುಮನ ಧನವಮುಟ್ಟಿ ನೋಡಿದಡೆಯೂ ಬಯಲ ರೂಪಾಗಿ ತೋರಬೇಕಲ್ಲದೆ ಸಾಕಾದ ರೂಪಾಗಿ ತೋರಬಾರದೆಂಬುದೀಗ ಭಕ್ತನಾದಡೆ ಬಾಳೆಯ ಹಣ್ಣಿನಂತಿರಬೇಕು ಎಂಬ ಶಬ್ದಕ್ಕರ್ಥ. ಅಂತಪ್ಪ ತ್ರಿವಿಧ ತನುವ ಬಯಲರೂಪಾಗಿ ತೋರಿದ ವೀರಮಾಹೇ ಶ್ವರನು ಬೆಲ್ಲದ ಪೆಂಟೆಯ ಅವಲ್ಲಿ ಕಚ್ಚಿನೋಡಿದಡೆಯೂ ರುಚಿಕರವಾಗಿ ತೋರು ವದಲ್ಲದೆ ವಿಷವಾಗಿ ತೋರದೆಂಬ ಹಾಗೆ ಶ್ರೀಗುರುಶಿಷ್ಯನ ಸಕಲ ಕರಣಂಗಳ ಆವಲ್ಲಿ ಮುಟ್ಟಿ ನೋಡಿದಡೆಯೂ ಅಮೃತಕರವಾಗಿ ತೋರಬೇಕಲ್ಲದೆ ವಿಷವಾಗಿ ತೋರಬಾರದೆಂಬುದೀಗ ಭಕ್ತನಾದಡೆ ಬೆಲ್ಲದ ಕುಳ್ಳಿಯಂತಿರಬೇಕು ಎಂಬ ಶಬ್ದಕ್ಕರ್ಥ. ಸಕಲ ಕರಣಂಗಳು ಅಮೃತಕರವಾಗಿ ತೋರುವ ಶಿವಶರಣನು ಸಕಲ ಫಲಪಕ್ವದೊಳಗೆ ಮೇಲಾಗಿ ತೋರುವದು ಮಾವಿನ ಫಲವು. ಆ ಮಾವಿನ ಫಲ ಸಕಲ ಜನರಿಗೆ ಅಮೃತಮಯವಾಗಿ ತೋರುವದಲ್ಲದೆ ವಿಷವಾಗಿ ತೋರದು ಎಂಬ ಹಾಗೆ ಸಕಲ ಭೂಜನಾತ್ಮರಿಗೆ ಮೇಲಾಗಿ ಪ್ರೀತಿಕರವಾಗಿರಬೇಕಲ್ಲದೆ ಮದಮತ್ಸರದಿಂದ ಶತ್ರುವಾಗಿರಬಾರದೆಂಬುದೀಗ ಭಕ್ತನಾದಡೆ ಮಾವಿನ ಫಲ ದಂತಿರಬೇಕು. ಎಂಬ ಶಬ್ದಕ್ಕರ್ಥ ಇಂತಪ್ಪಗುಣವುಳ್ಳಾತನೇ ಸದ್ವೀರಮಾಹೇಶ್ವ ರನು ಎಂಬದೀಗ ಇಂತಪ್ಪಾತನೇ ಸದ್ಭಕ್ತನೆಂಬ ಶಬ್ದಕ್ಕರ್ಥ.

(೬೩). ದೇಹವೆಂಬ ಹುತ್ತಿನೊಳಗೆ ನಿದ್ರೆ ಎಂಬ ಕಾಳೋರಗನೆದ್ದು ಕಡಿಯಲು ಮೂರ್ಛಿತರಾದರಯ್ಯ ದೇವದಾನವ ಮಾನವರೊಳಗಾದ ಎಲ್ಲ ಜೀವರು. ಆವಾಗ ಬಂದು ಕಡೆಗಿಡಿದಿತ್ತೆಂದು ಕಾಣಬಾರದು. ದಿವಾರಾತ್ರಿ

ಎನ್ನದೆ ಬಂದು ಕಡಿಯಲೊಡನೆ ವಿಷಹತ್ತಿ ಸತ್ತವರಿಗಾಣ್ಕೆ ಎಂಬಂತೆ ಜೀವನ್ಮೃತರಾದರಯ್ಯ. ಶಿವಜ್ಞಾನವೆಂಬ ನಿರ್ವಿಷವಕಾಣದೆ ನಿದ್ರಾಸರ್ಪನ ಬಾಯಿಗೀಡಾದರು ಕಾಣಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೬೪). ಕಾಯದ ಕಳವಳವ ಗೆಲಲರಿಯದವರು ಮಾಯಾಪಾಶದಲ್ಲಿ ಬಂಧನವುಳ್ಳ ಸಂಸಾರಿಗಳಹರಲ್ಲದೆ ಅವರು ಜ್ಞಾನಿಗಳಾಗಲರಿಯರು. ಅವರಿಗಿನ್ನೆಂದಿಂಗೆ ಮುಕ್ತಿಯಹುದೋ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

(೬೫). ಶಮೆದಮೆ ವಿವೇಕ ವೈರಾಗ್ಯ ಪರಿಪೂರ್ಣಭಾವ ಶಾಂತಿ ಕಾರುಣ್ಯ ಶ್ರದ್ಧೆ ಸತ್ಯ ಸದ್ಭಕ್ತಿ ಶಿವಜ್ಞಾನ ಶಿವಾನಂದ ಉದಯವಾದ ಮಹಾಭಕ್ತನಹೃದಯದಲ್ಲಿ ಶಿವನಿಪ್ಪ. ಆತನ ದರ್ಶನ ಸ್ಪರ್ಶನ ಸಂಭಾಷಣೆಯಿಂದ ಕೇವಲ ಮುಕ್ತಿಯಪ್ಪುದು ತಪ್ಪದಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೬೬). ವೇಷವ ಧರಿಸಿ ಭಾಷೆಯ ಕಲಿತು ದೇಶವ ಸುತ್ತಿ ಬಳಲಬೇಡ. ಜಗದೀಶನ ಪಾದವನೊಲಿದು ಪೂಜಿಸಿರಣ್ಣಾ. ಸವಿಯೂಟದಾಶೆಗೆ ಮನವೆಳಸಬೇಡ. ಪರಮೇಶನ ಪಾದವನೊಲಿದು ಪೂಜಿಸಿರಣ್ಣಾ. ತರ್ಕಶಾಸ್ತ್ರ ಆಗಮಜಾಲದ ಹೊರಚಿಯ ಹೊಗದೆ ಮೂಲಮಂತ್ರವ ಮರೆಯದೆ ಸ್ಮರಿಸಿರಣ್ಣಾ. ಸಂಸಾರಿಗಳ ಸಂಗದೊಳಗಿರಬೇಡ. ಸದ್ಭಾವರ ಸಂಗದೊಳಿರ್ದು ನಿತ್ಯವ ಸಾಧಿಸಿಕೊಳ್ಳಿರಣ್ಣಾ. ಪರರ ಯಾಚಿಸಿ ತನುವ ಹೊರೆಯಬೇಡ. ಶಿವನಿಕ್ಕಿದ ಭಿಕ್ಷೆಯೊಳಗಿರ್ದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನನೊಲಿಸಿರಣ್ಣಾ.

(೬೭). ಹರಗಣಂಗಳೆಲ್ಲ ನೆರಗಣಂಗಳಾಗಿ ಒಬ್ಬರಾಗಿಂಗೆ ನೆನೆದು ಒಬ್ಬರ ಚೇಗಿಂಗೆ ನೆನೆದು ನುಡಿವರು. ಒಬ್ಬರು ಒಳ್ಳೆಹರು, ಒಬ್ಬರು ಹೊಲ್ಲಹರು ಎಂದು ತಮ ತಮಗೆಲ್ಲ ನುಡಿವರು. ಇದೇನು ಪಂಚಾಕ್ಷರೀ ಮಂತ್ರವೇ? ಇದೇನು ಮಹಾನುಭಾವರ ನುಡಿಯೇ? ಹೊತ್ತು ಹೋಕಿನ ಮಾತಕಲಿತವರೆಲ್ಲ ಮೃತ್ಯುವಿನಬಾಯ ತುತ್ತಾದುದ ಕಂಡು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಶರಣ ನೋಡಿ ನಗುತಿರ್ದನು.

(೬೮). ಅರ್ಥ ಪ್ರಾಣಾಭಿಮಾನದಲ್ಲಿ ವಂಚನೆ ಇಲ್ಲದಿಹುದೇ ಭಕ್ತಿ. ಹೆಚ್ಚು ಕುಂದಿಲ್ಲದಿಹುದೇ ಸಮಯಾಚಾರ. ತನುವಂಚನೆ ಮನವಿಕಾರವಿಡಿದು ನಾನಿನ್ನೇವೆನಯ್ಯ? ತನುವನಲ್ಲಾಡಿಸಿ ನೋಡುವಲ್ಲಿ, ಮನವನಲ್ಲಾಡಿಸಿ ನೋಡು

ವಲ್ಲಿ ಧನವನಲ್ಲಾಡಿಸಿ ನೋಡುವಲ್ಲಿ, ದೃಢವಿಲ್ಲದಿರ್ದಡೆ, ಒಡೆಯನ ಕಂಡು ನಾಯಿ ಬಾಲವ ಬಡಿದುಕೊಂಬಂತೆ, ಅದಕ್ಕೇನು ವೆಚ್ಚ ಹತ್ತುವದುಂಟೇ ಕೂಡಲಸಂಗಮದೇವಾ?

( ೬೯ ). ತನುವೆಂಬ ಏರಿಗೆ ಮನವೆಂಬ ಕಟ್ಟೆ ಆಚಾರವೆಂಬ ಸೋಪಾನದಿಂದ ಪರಮಾನಂದವೆಂಬ ಜಲವ ತುಂಬಿ ಕೆರೆಯ ಕಟ್ಟಬಲ್ಲವರನಾರನೂ ಕಾಣೆ. ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರಾ ನಿಮ್ಮಾಣೆ.

( ೭೦ ). ಸಂಸಾರವ ಬಿಟ್ಟುದೇ ಆಚಾರವಯ್ಯ. ಕಾಯದಿಚ್ಛೆಗೆ ಕಂಡವರಿಗೆ ಕಾರ್ಪಣ್ಯ ಬಡದಿಪ್ಪುದೇ ಶೀಲ. ಲಿಂಗಾಣತಿಯಿಂದ ಬಂದುದಕೊಂಬುದೇ ವ್ರತ. ಮನಘನವನಗಲದಿಪ್ಪುದೇ ಭಕ್ತಿ. ಸಕಳೇಶ್ವರ ದೇವಾ ನಿಮ್ಮನರಿದವನೇ ಶರಣ.

( ೭೧ ). ಗುಣಸಂಪಾದನೆಯ ಮಾಡುವನ್ನಕ್ಕ ಕಾಮದೊಡಲು, ಕ್ರೋಧದಗೊತ್ತು, ಲೋಭದ ಇಕ್ಕೆ, ಮೋಹದಮಂದಿರ, ಮದದಾವರಣ, ಮತ್ಸರದ ಹೊದಿಕೆ ಆ ಭಯವರತಲ್ಲದೆ ಚನ್ನಮಲ್ಲಿಕಾರ್ಜುನನರಿವುದಕ್ಕೆ ಇಂಬಿಲ್ಲ ಕಾಣಿರಣ್ಣಾ.

( ೭೨ ). ಅಮಲದಪ್ಪವರಾರೆಂದಡೆ ಅನಾದಿಮಲ ಸಂಸಾರವೆಂದರಿದು ನಿರ್ಮೋಹಿಗಳಾದವರು. ಅಕಾಯ ಚರಿತ್ರರಾರೆಂದಡೆ ಸದ್ಗುರುಪಥದಲ್ಲಿ ನಿಂದು ಆನೆಂಬ ತನುಗುಣವಳಿದವರು. ಆದಿ ಅನಾದಿಗಳೆಂಬೆರಡಳಿದವರಾರೆಂದಡೆ ಶಾಂತಿಸ್ಥಾನದಲ್ಲಿ ನಿಂದು ಪರಮಸುಖಿಗಳಾಗಿಪ್ಪವರು. ದ್ವೈತಾದ್ವೈತವನತಿಗಳೆದವರಾರೆಂದಡೆ, ತೋರುವ ತೋರಿಕೆ ನಿರ್ಮತ್ಸರವಾದವರು. ಅವರು ತಾವೇ ನಿಮಗರ್ಪಿತ ನಿಮ್ಮಾಣೆ ಕೂಡಲ ಚನ್ನಸಂಗಮದೇವಾ.

( ೭೩ ). ಮಾಯೆವಿಡಿದು ಜೀವಿಸುವ ಜೀವಕನಲ್ಲ. ಅದೇನು ಕಾರಣವೆಂದಡೆ, ಆತ ಘನಲಿಂಗವಿಡಿದು ಜೀವಿಸುವ ಜೀವಕನಾಗಿ. ವಿಷಯವಿಡಿದು ಭುಂಜಿಸುವ ಭುಂಜಕವಲ್ಲ. ಅದೇನು ಕಾರಣವೆಂದಡೆ ಆತಮಹಾಪ್ರಸಾದವಿಡಿದು ಭುಂಜಿಸುವ ಭುಂಜಿಕನಾಗಿ. ವೇಷವಿಡಿದು ರಂಜಿಸುವ ರಂಜಕನಲ್ಲ. ಅದೇನು ಕಾರಣವೆಂದಡೆ, ಆತ ಸಹಜವಿಡಿದು ರಂಜಿಸುವ ರಂಜಕನಾಗಿ. ಇಂತೀ ತ್ರಿವಿಧವಿಡಿದು ಪರಮಾರ್ಥದಲ್ಲಿ ಆಚರಿಸುವ ಶರಣರಿಗೆ ಶರಣೆಂಬೆನು ಕೂಡಲಚನ್ನಸಂಗಮದೇವಾ.

( ೭೪ ). ಹುಸಿಯುಳ್ಳನ್ನಕ್ಕ ವ್ಯಾಪಾರಬಿಡದು. ಸೀತವುಳ್ಳನ್ನಕ್ಕ ಉಪಾಧಿಕೆಬಿಡದು. ಮಾತುಳ್ಳನ್ನಕ್ಕ ಭೂತಾಟಿಕೆಬಿಡದು. ನಿದ್ರೆಯುಳ್ಳನ್ನಕ್ಕ ಸತಿಸಂಗ ಬಿಡದು. ಇದು ಕಾರಣ ಕ್ಷುತ್ತಿಗೆಭಿಕ್ಷೆ, ಸೀತಕ್ಕೆ ರಗಟೆ, ಮಾತಿಂಗೆಮಂತ್ರ, ಶಯನಕ್ಕೆ ಶಿವಧ್ಯಾನವೆಂದು ಹೇಳಿಕೊಟ್ಟ ಗುರುವಚನವ ಮೀರಿ ನಡಿವವರಿಗೆ ಪರದಲ್ಲಿ ಪರಿಣಾಮುದೊರಕೊಳ್ಳದು ನೋಡಾ. ಇದು ಕಾರಣ ಗುರುವಾಜ್ಞೆಯ ಮೀರಿ ಮನಕ್ಕೆ ಬಂದಂತೆ ನಡೆವವರ ಎನಗೊಮ್ಮೆ ತೋರದಿರಾ ಗುಹೇಶ್ವರಾ.

( ೭೫ ). ನುಡಿಯಬಹುದು ಅದ್ವೈತವನೊಂದು ಕೋಟಿವೇಳೆ, ಒಮ್ಮೆ ನಡೆಯಬಹುದೇ ನಿರ್ಧಾರವಾಗಿ ಸದ್ಭಕ್ತಿ ಆಚಾರವಾಗಿ ? ನುಡಿದಂತೆ ನಡೆವ, ನಡೆದಂತೆ ನುಡಿವ, ಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯ ಪ್ರಭುವೇ ಕಪಿಲ ಸಿದ್ಧಮಲ್ಲಿಕಾರ್ಜುನಾ.

( ೭೬ ). ಸಜ್ಜನ ಸದ್ಭಾವಿ ಅನ್ಯರಲ್ಲಿ ಕಯ್ಯಾಂತುಬೇಡ. ಲಿಂಗವ ಮುಟ್ಟಿದ ಕೈ ಮೀಸಲು. ಕಂಗಳಲ್ಲಿ ಒಸೆದುನೋಡಾ ಪರವಧುವ. ಮನದಲ್ಲಿ ಅನ್ಯವ ನೆನೆಯ. ಮಾನವರ ಸೇವೆಯ ಮಾಡ. ಲಿಂಗವ ಪೂಜಿಸಿ ಲಿಂಗದ ಹಂಗನೊಲ್ಲ. ಧನದಲ್ಲಿ ವಂಚನೆ ಇಲ್ಲ ಕೂಡಲಚನ್ನಸಂಗಾ ನಿಮ್ಮ ಶರಣ.

( ೭೭ ). ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸವೆಂಬ ಬಿತ್ತು ಬಲಿದು, ಉಂಡು ಸುಖಿಯಾಗಿರಬೇಕೆಂದ ಕಾಮ ಭೀಮ ಜೀವದನದೊಡೆಯಾ.

( ೭೮ ). ಅರ್ಚನೆಯ ಮಾಡುವಲ್ಲಿ ವೇಷವರತಿರಬೇಕು. ಪೂಜೆಯ ಮಾಡುವಲ್ಲಿ ಪುಣ್ಯಮೂರ್ತಿಯಾಗಿರಬೇಕು. ಕೊಳುಕೊಡೆಯಲ್ಲಿ ಭೂತಹಿತವಾಗಿರಬೇಕು. ಇಂತೀ ಸಡಗರಿಸಿಕೊಂಡಿಪ್ಪಾತನಡಿಗೆರಗುವೆನೆಂದಾತನಂಬಿಗ ಚೌಡಯ್ಯ.

( ೭೯ ). ದ್ವೇಷವಿಲ್ಲದಭಕ್ತ, ಆಶೆ ಇಲ್ಲದವಿರಕ್ತ, ಸಂಸಾರಪಾಶವಿಲ್ಲದ ಗುರು, ಆತ ಈಶ್ವರರೂಪಲ್ಲ, ಸದಾಶಿವಮೂರ್ತಿಗಿಂದತ್ತ ನಿಃಕಳೆಯಾದ ನಿಃಕಳಂಕಮಲ್ಲಿಕಾರ್ಜುನನು.

( ೮೦ ). ದುಃಸ್ವಪ್ನವ ಕಾಣದಿರಿ. ದುರ್ವಿಕಾರದಲ್ಲಿ ಕೂಡದಿರಿ. ಮನೋವಿಕಾರದಲ್ಲಿ ಹರಿದಾಡದಿರಿ. ಪಂಚಾಕ್ಷರಿಯ ಜಪಿಸಿ. ಷಡಕ್ಷರವ ಸಂಬಂಧಿಸಿ

ಕೊಳ್ಳಿ. ಮೂಲಮಂತ್ರವ ಆತ್ಮಂಗೆ ವೇದಿಸಿಕೊಳ್ಳಿ. ಮರೆಯದಿರಿ ಗುರುವಾಜ್ಞೆಯ. ತೊರೆಯದಿರಿ ಶಿವಪೂಜೆಯ. ಅರಿದು ಮರೆಯದಿರಿ ಚರಸೇವೆಯ. ನೆರೆನಂಬಿ ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗವಾ.

(೮೧). ಲಿಂಗವಿಕಾರವ ಸಾಕೇಳಿ. ಬಹುವಿಧಾಂಗದ ಪ್ರಕೃತಿಯ ಮರೆದೇಳಿ. ನಿಮ್ಮ ಭಕ್ತಿಮುಕ್ತಿಯ ಲಿಂಗದ ಕೂಟವ ನೆನೆದೇಳಿ. ನಿಮ್ಮ ಗುರು ವಾಜ್ಞೆಯ, ನಿಮ್ಮ ವಿರಕ್ತಿಯ ಅರೆವಿನ ಸಾವಧಾನವ ಅರಿದೇಳಿ. ಸಾರಿದೆ. ಎವೆ ಹಳಚಿದಡಿಲ್ಲ, ಶುದ್ಧಸಿದ್ಧಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ.

(೮೨). ಭಾವ ಭ್ರಮೆವಂತರು ಬಾರದಿರಿ. ಜ್ಞಾನಹೀನರು ಬೇಗ ಹೋಗಿ. ತ್ರಿವಿಧ ಮಲಕ್ಕೆ ಕಚ್ಚಿ ಮುಟ್ಟಿ ಹೊಡೆದಾಡುವರು ಅತ್ತಲಿರಿ. ನಿರುತ ಸ್ವಾನುಭಾವರು ಬನ್ನಿ. ಪರಬ್ರಹ್ಮಸ್ವರೂಪರು ಬನ್ನಿ. ಏಕಲಿಂಗನಿಷ್ಠಾಪರರು ದೃಢವಂತರು ಬನ್ನಿ. ಸನ್ಮಾರ್ಗಸತ್ಕ್ರಿಯಾವಂತರು ಬನ್ನಿ, ಎಂದು ಎನಗೆ ಕೊಟ್ಟ ಕಾಯಕ ಕೂಡಲಸಂಗಮದೇವರಲ್ಲಿ ಬಸವಣ್ಣ.

---

## ಗುರುಲಿಂಗ ಜಂಗಮರು ಸದಾಚಾರ ಸದ್ಭಕ್ತಿಯುಳ್ಳವರಾಗಿರತಕ್ಕದ್ದು.

(೧). ಅಯ್ಯ ಸದ್ಭಕ್ತಿ ಸದಾಚಾರವಿಲ್ಲದ ಗುರುತ್ವ ಉಂಟೇನೋ ಮರುಳೇ ? ಸದಾಚಾರ ಸದ್ಭಕ್ತಿ ಇಲ್ಲದ ನಿಜಲಿಂಗ ಉಂಟೇನೋ ಮರುಳೇ ? ನಿಜಜಂಗಮ ಉಂಟೇ ? ಸದಾಚಾರ ಸದ್ಭಕ್ತಿ ಇಲ್ಲದ ಶರಣತ್ವ ಉಂಟೇ ? ಗುಹೇಶ್ವರ ಲಿಂಗದ ಸದಾಚಾರ ಸದ್ಭಕ್ತಿಯಿಂದಲ್ಲದೆ ಮುಕ್ತಿ ಇಲ್ಲ ನೋಡಾ ಚನ್ನ ಬಸವಣ್ಣ.

(೨). ಅಯ್ಯಾ ಸತ್ಕ್ರಿಯೆ ಸಮ್ಯಜ್ಞಾನ ಉಂಟಾದರೆ ಸದಾಚಾರ ಸದ್ಭಕ್ತಿ ಉಂಟೆಂಬೆ. ಸದಾಚಾರ ಸದ್ಭಕ್ತಿ ಸತ್ಕ್ರಿಯ ಸಮ್ಯಜ್ಞಾನ ನಡೆನುಡಿ ಒಂದಾದರೆ, ಆದಿ ಅನಾದಿಯಿಂದತ್ತತ್ತ ಮೀರಿ ತೋರುವ ಪರಿಪೂರ್ಣ ಪರಮಾನಂದ ಪರಬ್ರಹ್ಮ ಗುರುಲಿಂಗ ಜಂಗಮವೆಂಬೆ ನೋಡಾ. ಇಂತು ಸದಾಚಾರ ಸದ್ಭಕ್ತಿ ಸತ್ಕ್ರಿಯೆ ಸಮ್ಯಜ್ಞಾನ ಸತ್ಯ ನಡೆನುಡಿ ಇಲ್ಲವಾದಡೆ ಗುಹೇಶ್ವರ ಲಿಂಗಕ್ಕೆ ದೂರಕಾಣಾ.

( ೩ ). ಅಯ್ಯಾ ಸತ್ಯವ ನುಡಿಯದ, ಸದಾಚಾರದಲ್ಲಿ ನಡೆಯದ, ಸದ್ಭಕ್ತಿಯ ಹಿಡಿಯದ, ನಿಜಮುಕ್ತಿ ಪಡೆಯದ ಸತ್ಕ್ರಿಯೆ ವಶವಾದ ಸಮ್ಯಜ್ಞಾನವ ಮುಟ್ಟದ, ಸುಡು ಸುಡು, ಈ ವೇಷದ ಭಾಷೆಯ ನೋಡಿ ಗುಹೇಶ್ವರ ಲಿಂಗದಲ್ಲಿ ನಗುತ್ತಿದ್ದಾನೆ ಕಾಣಾ ಚನ್ನಬಸವಣ್ಣ.

( ೪ ). ಅಯ್ಯಾ ಮಣ್ಣಿಂಗೆ ಹೊಡೆದಾಡುವಾತನ ಗುರುವೆಂಬೆನೆ? ಹೆಣ್ಣಿಂಗೆ ಹೊಡೆದಾಡುವಾತನ ಲಿಂಗವೆಂಬೆನೆ? ಹೊನ್ನಿಂಗೆ ಹೊಡೆದಾಡುವಾತನ ಜಂಗಮವೆಂಬೆನೆ? ಆತಜಂಗಮವಲ್ಲ. ಈ ತ್ರಿವಿಧಮಲಕ್ಕೆ ಹೊಡೆದಾಡುವಾತನ ಶರಣನೆಂಬೆನೆ? ಆತ ಶರಣನಲ್ಲ ನೋಡಾ. ಈ ವಿಚಾರವನರಿದು ಮಲತ್ರಯಂಗಳ ಸರ್ವಾವಸ್ಥೆಯಲ್ಲಿ ಹೊದ್ದಲೀಯ್ಯದ ಗೌರವ ಬುದ್ಧಿ ಲಿಂಗಲೀಯ್ಯ ಜಂಗಮಾನುಭಾವ ಸರ್ವಾಚಾರ ಸಂಪತ್ತಿನಾಚರಣೆಯ ಶೃತಿಗುರು ಸ್ವಾನುಭಾವದಿಂದರಿದು ಆಚರಿಸಿದರೆ, ಗುಹೇಶ್ವರ ಲಿಂಗದಲ್ಲಿ ಪರಾತ್ಪರ ಗುರುಲಿಂಗ ಜಂಗಮ ಶರಣೆಂಬೆ ನೋಡಾ ಚನ್ನಬಸವಣ್ಣ.

( ೫ ). ಅಯ್ಯಾ ಸದಾಚಾರ ಸದ್ಭಕ್ತಿ ವಿಡಿದಾಚರಿಸಿದ ಗುರುವೇ ಪರಾತ್ಪರ ಬ್ರಹ್ಮ ನೋಡಾ. ಆ ಗುರುವಿಂದ ತ್ರಿವಿಧ ದೀಕ್ಷೆವಡೆದ ಶಿಷ್ಯೋತ್ತಮನೆ ಮೋಕ್ಷಮಂದಿರ ನೋಡಾ. ಆ ಶಿಷ್ಯೋತ್ತಮನ ಕರಮನಭಾವದಲ್ಲಿ ಪೂಜೆಗೊಂಬ ಲಿಂಗಜಂಗಮವೇ ನಿಃಕಲ ಪರಶಿವತತ್ವನೋಡಾ. ಆ ಗುರುಶಿಷ್ಯ ಲಿಂಗ ಜಂಗಮದ ಅಡಿದಾವರೆಯೇ ಗುಹೇಶ್ವರಲಿಂಗ ಸಾಕ್ಷಿಯಾಗಿ ನನಗೂ ನಿನಗೂ ಅವಿಮುಕ್ತಕ್ಷೇತ್ರ ನೋಡಾ ಚನ್ನಬಸವಣ್ಣ.

( ೬ ). ಸದಾಚಾರವೆಂದಡೆ ಗುರುಲಿಂಗಜಂಗಮದರ್ಶನೆ, ಪಾದೋದಕ ಪ್ರಸಾದಸೇವನೆ, ಪಂಚಾಕ್ಷರ ಷಡಕ್ಷರ ಸ್ತೋತ್ರ, ಚಿದ್ಘನ ಮಹಾಲಿಂಗ ಧ್ಯಾನ, ಪರದ್ರವ್ಯ ನಿರಸನ ಇಂತಿದು ಸತ್ಯವೆಂದು ಸದ್ಗುರು ಮುಖದಿಂ ತಿಳಿದು ಭಿನ್ನವಿಲ್ಲದೆ ಆಚರಿಸುವದೇ ಆಚಾರವಲ್ಲದೆ, ಶುದ್ಧ ಶೈವರ ಹಾಗೆ ನಂದಿ, ವೀರಭದ್ರ, ದುರ್ಗೆ, ಪಾವುಗೆ, ಕಂಥೆ, ಕಮಂಡಲು ಮತ್ತೆ ಲಿಂಗಗಳೆಂದು ಇದಿರಿಟ್ಟು ಪೂಜಿಸುವನ ಮನೆಯ ಪಾಕ ಅಮೇಧ್ಯ ಮಾಂಸ ಕಾಣಾ ಕಲಿದೇವರದೇವಾ.

( ೭ ). ಅಯ್ಯಾ ಇಹ ಪರಂಗಳ ಗೆಲಿದ ಭಕ್ತ ಜಂಗಮಕ್ಕೆ ಸದಾಚರಣೆ ವಸ್ತು ನೋಡಾ. ಸದಾಚಾರವನರಿಯದ ಪಾಪಿ ಸೂಕರಗಿಂದ ಕಷ್ಟ ನೋಡಾ.

ಅದೆಂತೆಂದೊಡೆ, ಸದಾಚಾರಂತು ಭಕ್ತಾನಾಂ ಸದಾಚಾರಂತು ಜಂಗಮಃ, । ದುರಾಚಾರ ನಜಾನಾತಿ ಅನಾಚಾರಂತು ಸೂಕರಃ ॥ ಇಂತೆಂದುದಾಗಿ ಭಕ್ತ ಜಂಗಮಕ್ಕೆ ಸದಾಚಾರವೇ ಬೇಕು. ಸದಾಚಾರವಿಲ್ಲದವಂಗೆ ಭವ ಉಂಟು. ಭವ ಉಂಟಾದವಂಗೆ ಆಚಾರವಿಲ್ಲ. ಆಚಾರವಿಲ್ಲದವ ಭಕ್ತನಲ್ಲ, ಜಂಗಮವಲ್ಲ ಕಾಣಾ ಕಲಿದೇವರ ದೇವಾ.

(೮). ಸರ್ವಶೀಲದ ವ್ರತದಾಯತವೆಂತುಟೆಂದಡೆ, ತನ್ನ ವ್ರತವಿಲ್ಲದ ಗುರುವ ಪೂಜಿಸಲಾಗದು. ವ್ರತವಿಲ್ಲದ ಜಂಗಮದ ಪ್ರಸಾದವಕೊಳ್ಳಲಾಗದು. ವ್ರತವಿಲ್ಲದವರ ಅಂಗಳವ ಮೆಟ್ಟಲಾಗದು. ಅದೆಂತೆಂದೊಡೆ ಗುರುವಿಂಗೆ ಗುರು ಉಂಟಾಗಿ, ಲಿಂಗಕ್ಕೆ ಉಭಯ ಸಂಬಂಧ ಉಂಟಾಗಿ, ಆ ಜಂಗಮಕ್ಕು ಗುರು ಲಿಂಗ ಉಭಯ ಉಂಟಾಗಿ ಜಂಗಮವಾದ ಕಾರಣ, ಇಂತೀ ಗುರುಲಿಂಗ ಜಂಗಮಕ್ಕು ಪಂಚಾಚಾರ ಶುದ್ಧವಿರಬೇಕು. ಪುರುಷನ ಆಚಾರದಲ್ಲಿ ಸತಿಯು ನಡೆಯ ಬಲ್ಲಳಲ್ಲದೆ, ಬೇರೆ ನಡೆಯಬಲ್ಲಳೇ? ಇಂತೀ ಒಡೆಯನ ವ್ರತ ಮೊದಲು, ಕಡೆಯಲ್ಲಿ ಭಕ್ತಂಗೆ ಇಂತೀ ಉಭಯದ ವ್ರತಗೂಡಿದಲ್ಲಿ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ವ್ರತವಸ್ತುವು ಕಾಣಾ.

(೯). ಅಯ್ಯಾ ನೇಮಕ್ಕೆ ತಪ್ಪದ ಗುರುವು, ಎನ್ನ ಶೀಲಕ್ಕೆ ತಪ್ಪದ ಲಿಂಗ, ಎನ್ನ ವ್ರತಾಚಾರಕ್ಕೆ ತಪ್ಪದ ಜಂಗಮ, ಎನ್ನ ಮೂರ್ತಿ ಹೀಗಲ್ಲದೆ, ಕ್ರಿಯೆಗೆನಿಲ್ಲದ ಗುರುವು ಆತ ಭವಭಾರಿ, ಆಚಾರಕ್ಕೆ ಸಲ್ಲದ ಲಿಂಗವದು ಪಾಷಾಣ, ವ್ರತದ ಆಚಾರದ ದೆಸೆಯ ದೂಷಣಿಸುವ ಜಂಗಮ ವೇಷಘಾತಕ, ಇಂತೀ ಎನ್ನ ವ್ರತಕ್ಕೆ ಎನ್ನ ಆಚಾರಕ್ಕೆ ಎನ್ನ ಭಾವಕ್ಕೆ ಸಮ ಕ್ರಿಯಾವಂತನಾಗಿ ಸಮ ಶೀಲವಂತನಾಗಿ ಸಮಭಾವವಂತನಾಗಿ, ಸಮಪಥ ಸತ್ಪಥನಾಗಿ ಇಪ್ಪಾತನೇ ಎನ್ನ ತ್ರಿವಿಧಕ್ಕೆ ಒಡೆಯ. ಇದಕ್ಕೆ ಎನಗೆ ನಿಶ್ಚಯ. ಎನ್ನ ವ್ರತಾಚಾರಕ್ಕೆ ಅನುಕೂಲವಾಗದ ಎಲೇಶ್ವರ ಲಿಂಗವಾಯಿತ್ತಾದಡೆಯೂ ಇಹಪರಕ್ಕೆ ಹೊರಗೆಂದು ಡಂಗುರವಿಕ್ಕಿದೆ.

(೧೦). ಅಯ್ಯಾ ವಿಪ್ರಂಗೆ ವೇದಮಂತ್ರವ ಬಿಟ್ಟು ವಿಜಾತಿಯಲಿ ಬೆರಸಲಿಕ್ಕೆ, ಸುಜಾತಿಗೆ ಹೊರಗೆಂಬರು ನೋಡಾ. ಶ್ರೀವಿಭೂತಿ ರುದ್ರಾಕ್ಷಿ ಶಿವಲಿಂಗ ಮುಂತಾದ ನಾನಾ ವ್ರತ ನೇಮ ನಿತ್ಯದ ಭಾವವ ಬಿಟ್ಟು ಬಂದವನರಿತು,

ಗುರುವಾದರೂ ಲಿಂಗವಾದರೂ ಜಂಗಮವಾದರೂ ನೋಡಿದಡೆ ನುಡಿಸಿದಡೆ ಆ ಘಟವಿದ್ದೆಡೆಯಲ್ಲಿ ನಾನಿದ್ದೆನಾದಡೆ, ಎನ್ನ ವ್ರತಕ್ಕೆ ಅದೇ ಭಂಗ. ಅನುಸರಣೆಯಲ್ಲಿ ಬಂದವರ ಕಂಡು ಕೇಳಿ ಅವರ ಅಂಗಣವ ಕೂಡಿಕೊಂಡವರ ಅಂಗೀಕರಿಸಿದೆನಾದಡೆ ಇಹಪರಕ್ಕು ಹೊರಗು. ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗವಾಯಿತ್ತಾದಡೆಯೂ ವ್ರತಬಾಹ್ಯವಾದಡೆ ಎತ್ತಿಹಾಕುವೆ.

(೧೧). ಆಚಾರವಿಲ್ಲದ ಜಂಗಮದಲ್ಲಿ ಪಾದೋದಕ ಪ್ರಸಾದವ ಕೊಳಲಾಗದು. ಆಚಾರವಿಲ್ಲದಾತನ ಜಂಗಮ ದೇವರೆಂದು ಭಾವಿಸಲಾಗದು. ಅದೆಂತೆಂದೊಡೆ, ಆಚಾರಶೂನ್ಯ ಭೂತಂಚ ಎಂದುದಾಗಿ, ಆಚಾರವಿಲ್ಲದ ಅನಾಮಿಕನ ಕಯ್ಯಲ್ಲಿ ಪಾದೋದಕ ಪ್ರಸಾದ ಉಪದೇಶವ ಕೊಂಡಾತಂಗೆ ಅಘೋರನರಕ ತಪ್ಪದು ಕಾಣಾ ಗುಹೇಶ್ವರಾ.

(೧೨) ಪಾಶವರತು ಗುಣವಾಗಬೇಕು. ವೇಷವರತು ಚರವಾಗಬೇಕು. ಭ್ರಾಮಕವರತು ಲಿಂಗವಾಗಬೇಕು. ಸಕಲ ಕೃತಭೇದವರತು ವಿರಕ್ತನಾಗಬೇಕು. ಇಂತೀ ಸಕಲ ಭ್ರಮೆಯಳಿದು ನಿಂದುದೇ ಸದಾಶಿವಮೂರ್ತಿ ಲಿಂಗವು ತಾನೇ.

(೧೩). ಕರ್ಮವಿರಹಿತ ಗುರುವಾಗಬೇಕು. ಕಾಲವಿರಹಿತ ಲಿಂಗವಾಗಬೇಕು. ಭೋಗವಿರಹಿತ ಜಂಗಮವಾಗಬೇಕು. ಇಂತೀ ತ್ರಿವಿಧ ವಿರಹಿತನಾಗಿ ವಿರಕ್ತನಾಗಬೇಕು. ಹಾಗಲ್ಲದೆ ಐಘಟದೂರ ರಾಮೇಶ್ವರಲಿಂಗವ ಕೂಡಬಾರದು.

(೧೪). ದ್ವೇಷವಿಲ್ಲದ ಭಕ್ತ, ಆಸೆ ಇಲ್ಲದ ವಿರಕ್ತ, ಸಂಸಾರಪಾಶವಿಲ್ಲದ ಗುರು, ಇಂತೀ ಮೂವರು ಈಶ್ವರರೂಪ, ಸದಾಶಿವಮೂರ್ತಿಗಿಂದತ್ತತ್ತ ನಿಃಕಳಂಕಮಲ್ಲಿಕಾರ್ಜುನಾ.

---

## ಶ್ರದ್ಧೆಯುಳ್ಳವನಾಗಿರು.

(೧). ನೆರೆನಂಬೋ ನೆರೆನಂಬೋ ದರದುರವಿಲ್ಲದೆ, ಸಾಮವೇದಿಗಳಂತೆ. ನೆರೆನಂಬೋ ನೆರೆನಂಬೋ ದಾಸದುಗ್ಗಳೆಯಂತೆ. ನೆರೆನಂಬೋ ನೆರೆನಂಬೋ ಸಿರಿಯಾಳ ಚಂಗಳೆಯಂತೆ. ನಂಬಿದೆಯಾದರೆ, ತನ್ನ ನೀವ ಕೂಡಲ ಸಂಗಮದೇವಾ.

(೨). ನಂಬಿ ಕರೆದಡೆ ‘ಓ’ ಎಂಬ ಶಿವನು. ನಂಬದೆ ಕರೆದಡೆ, ‘ಓ’ ಎಂಬನೇ ಶಿವನು? ನಂಬಲರಿಯರು, ನಚ್ಚಲರಿಯರು, ಡಂಭಿನ ಭಕ್ತರು. ನಂಬದೆ ನಚ್ಚದೆ ಬರಿದೆ ಕರೆದಡೆ, ಶಂಭು ಮೌನದಲ್ಲಿಪ್ಪ ಕೂಡಲಸಂಗಮದೇವಾ.

(೩). ಬಳ್ಳ ಬೇವಿನ ಕೊರಡು ಆಡಿನ ಹಿಕ್ಕಿ ಲಿಂಗವೇ? ಅಲ್ಲ. ಅದು ಸಟೆ. ಸದ್ಭಾವದಿಂದ ಭಾವಿಸಿ ಲಿಂಗವಮಾಡಿ, ಸದ್ಭಕ್ತರಾದರು ಪುರಾತನರು. ಕೇವಲ ಪರಶಿವ ಮೂರ್ತಿ ತಾನೇ ಲಿಂಗವಾದ. ಆ ಲಿಂಗವನು ವಿಶ್ವಾಸಿಸಿ, ಮುಕ್ತರಾಗಲರಿಯದೆ, ಅವಿಶ್ವಾಸದಿಂದ ಸಟೆಯುಮಾಡಿ ನರಕಕ್ಕಿಳಿವವರ ನೋಡಾ. ಅಕಟಕಟಾ! ಅವರದಂತಾಗಲಿ! ಮನವೇ ನಾನಿನ್ನ ಬೇಡಿ ಕೊಂಬೆನು. ನಂಬು ಕಂಡೆಯಾ ಸಹಜನೆಂದು ಶ್ರೀಗುರುಲಿಂಗ ಜಂಗಮವ. ನಂಬಿದೆಯಾದಡೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರ ಕೂಡಿಕೊಂಬನು.

(೪). ನಂಬರು, ನೆಚ್ಚರು, ಬರಿದೆ ಕರೆವರು. ನಂಬಲರಿಯರು ಲೋಕದ ಮನುಜರು. ನಂಬಿ ಕರೆದಡೆ, ‘ಓ’ ಎನ್ನನೇ ಶಿವನು? ನಂಬದೆ, ನೆಚ್ಚದೆ, ಬರಿದೆ ಕರೆವರ ಕೊಂಬೆ ಮೆಟ್ಟಿ ಕೂಗೆಂದ ನಮ್ಮ ಕೂಡಲಸಂಗಮದೇವಾ.

(೫). ನಾದಪ್ರಿಯನು ಶಿವನೆಂಬರು. ನಾದಪ್ರಿಯ ಶಿವನಲ್ಲವಯ್ಯ. ವೇದಪ್ರಿಯ ಶಿವನೆಂಬರು. ವೇದಪ್ರಿಯ ಶಿವನಲ್ಲವಯ್ಯ. ನಾದವ ನುಡಿಸಿದ ರಾವಣಂಗೆ ಅರೆ ಆಯುಷ್ಯವಾಯಿತ್ತು. ವೇದವನೋದಿದ ಬ್ರಹ್ಮಂಗೆ ಶಿರವು ಹೋಯಿತ್ತು. ನಾದಪ್ರಿಯನು ಅಲ್ಲ, ವೇದಪ್ರಿಯನು ಅಲ್ಲ, ಭಕ್ತಿಪ್ರಿಯನು ನಮ್ಮ ಕೂಡಲಸಂಗಮದೇವಾ.

(೬). ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು. ಇವೆಲ್ಲಕ್ಕಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವಾ.

(೭). ಶಬ್ದಸುಖಕ್ಕೆ ಮೆಚ್ಚಿ, ಮಾತಿಂಗೆ ಮಾತು ಕೊಟ್ಟು ಕೆಟ್ಟೆನಯ್ಯ! ಅನುಭಾವಕ್ಕೆದೆಯಾಗದೆ, ಬೆಬ್ಬನೆ ಬೆರೆತೆನಯ್ಯ. ಅಮೃತದ ಕೊಡನ ತುಂಬಿ, ಒಡೆಯ ಹೊಯ್ದು, ಅರಸಲುಂಟೇ? ಸ್ವಾಮಿಭೃತ್ಯ ಸಂಬಂಧವೆನ್ನ ಭಕ್ತಿ. ಪ್ರತ್ಯುತ್ತರ ನಾಯಕನರಕ ಕೂಡಲಸಂಗಮದೇವಾ.

(೮). ಮಸಿಯುನೇಸುಕಾಲ ಬೆಳಗಿದರೆ, ಬಿಳಿದಾಗಬಲ್ಲುದೆ? ಕರ್ಮ ಸ್ಥಿತಿ ಬೆನ್ನಬಿಡದು. ಆನಂತಕೋಟಿ ಸ್ನಾನವ ಮಾಡಿದಡೇನು? ಒಂದು ನಿಮಿ ಷದ ಉದಾಸೀನವೇ ಕೆಡಿಸಿತ್ತು. ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದ ಡಂಭಕ ನಾನಯ್ಯ.

(೯). ವ್ಯಾಧನೊಂದು ಮೊಲನ ತಂದರೆ, ಸಲುವ ಹಾಗಕ್ಕೆ ಬೆಲೆಗೈವ ರಯ್ಯ. ನೆಲನಾಳ್ವನ ಹೆಣನೆಂದರೆ, ಒಂದು ಹಾಗಕ್ಕೆ ಕೊಂಬುವರಿಲ್ಲ ನೋಡ ಯ್ಯ. ಮಲನಿಂದ ಕರಕಷ್ಟ ನರನ ಬಾಳುವೆ. ಸಲೆನಂಬು ನಮ್ಮ ಕೂಡಲ ಸಂಗಮದೇವನ.

(೧೦). ಬಸವಣ್ಣಂಗೆ ಸರ್ವಗುಣಶೀಲ. ಚನ್ನಬಸವಣ್ಣಂಗೆ ದಿವ್ಯ ಜ್ಞಾನ ಗುಣಶೀಲ. ಪ್ರಭುದೇವರಿಗೆ ಬಸವಣ್ಣ ಚನ್ನಬಸವಣ್ಣನ ಉಭಯ ಗುಣ ಶೀಲ. ಮಡಿವಾಳಯ್ಯಗೆ ವೀರಗುಣಶೀಲ. ಅಜಗಣ್ಣಂಗೆ ಐಕ್ಯಗುಣಶೀಲ. ಚಂದಯ್ಯಂಗೆ ವೈರಾಗ್ಯಗುಣಶೀಲ ನಿಜಗುಣಂಗೆ ಆತ್ಮಗುಣಶೀಲ. ಸಿದ್ಧರಾಮ ಯ್ಯಂಗೆ ಯೋಗ ಗುಣಶೀಲ. ಮೋಳಿಗಯ್ಯಂಗೆ ಭೇದ ಗುಣಶೀಲ. ಘಟ್ಟಿ ವಾಳಂಗೆ ತ್ರಿವಿಧಗುಣಶೀಲ. ಅಕ್ಕಗಳಿಗೆ ನಿರ್ವಾಣಗುಣಶೀಲ. ಮಿಕ್ಕಾದ ಪ್ರಮಥ ರಿಗೆಲ್ಲಕ್ಕ ತಮ್ಮ ತಮ್ಮ ಸ್ವತಂತ್ರಗುಣಶೀಲ. ಎನಗೆ ಎಲೇಶ್ವರಲಿಂಗವು ಕೊಟ್ಟು ದೊಂದೇ ವಿಶ್ವಾಸಗುಣಶೀಲ.

(೧೧). ಕತ್ತೆ ಬಲ್ಲುದೆ, ಕತ್ತುರಿಯ ವಾಸನೆಯ? ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದ? ಭಕ್ತಿಯನರಿಯದ ವ್ಯರ್ಥಜೀವಿಗಳು ನಿಮ್ಮ ನೆತ್ತಬಲ್ಲರೈ ರಾಮನಾಥಾ?

(೧೨). ಬರು ಶಠಗನ ಭಕ್ತಿ ದಿಟವೆಂದು ನೆಚ್ಚಲು ಬೇಡ. ಮಠ ದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು ಕಾಣಾ ರಾಮ ನಾಥಾ.

(೧೩). ಭಕ್ತಿಯ ಬಲ್ಲವರು ನಚ್ಚಿ ಮಚ್ಚಿ ಮನವನೊಚ್ಚತಗೊಡು ವರು. ಭಕ್ತಿಯನರಿಯದ ಬಲುಪಾಪಿ ಜೀವಿಗಳು ಕಚ್ಚುವರು ಬೊಗಳುವರು ರಾಮನಾಥಾ.

(೧೪). ಯಾತಕ್ಕೆ ನಾ ನಿಮ್ಮ ದೇವರೆಂದರಿದೆನು? ಇಂತಾಗಿ ನೀವೆನ್ನ ನಾರೆಂದು ಅರಿಯೆ. ನಂಬಲರಿಯೆ, ನಂಬಿಸಲರಿಯೆ, ಒಲಿಯಲರಿಯೆ, ಒಲಿಸಲರಿಯೆ. ಶ್ಲೋ ॥ ಯಥಾ ಭಾವಸ್ತಥಾ ಲಿಂಗಃ । ಸತ್ಯಂ ಸತ್ಯಂ ನಸಂಶಯಃ ॥ ಯಥಾ ಭಕ್ತಿಸ್ತಥಾ ಸಿದ್ಧಿಃ । ಸತ್ಯ ಸತ್ಯಂನ ಸಂಶಯಃ ॥ ಎಂದುದಾಗಿ ಕೂಡಲ ಸಂಗಮದೇವಯ್ಯ ಕೇಳಯ್ಯ, ಕೋಟಿ ಕೋಟಿ ವರುಷ ಕೋಟಲೆಗೊಂಡೆನಯ್ಯ.

(೧೫). ಭಕ್ತರೇ ಸಮರ್ಥರು, ಅಸಮರ್ಥರೆನಲುಂಟೇ? ಚನ್ನನೆತ್ತ? ಚೋಳನೆತ್ತ? ಚೆನ್ನನೊಡನುಂಡ ಶಿವನು, ಅಹುಯ್ಯ! ಚನ್ನಚೋಳನಮನೆಯ ಕಂಪಣಿಗನಯ್ಯ! ಕೂಡಲ ಸಂಗಮದೇವ ಭಕ್ತಿಲಂಪಟನಯ್ಯ!

(೧೬). ಭಕ್ತಿಯಭಾವನಿಷ್ಠೆ ನಿಬ್ಬೆರಿಸಿಲಾಗಿ ಶಿವನ ತನ್ನ ವಶವಮಾಡಿತ್ತು. ಭಕ್ತಿಶಿವನ ನಡಗಿಸಿತ್ತು, ನುಡಿಸಿತ್ತು. ಭಕ್ತಿಶಿವನ ನುಣಿಸಿ ಉಡಿಸಿ ತೊಡಿಸಿತ್ತು. ಭಕ್ತಿಶಿವನ ಹಾಡಿಸಿ ಕುಣಿದಾಡಿಸಿತ್ತು. ಭಕ್ತಿ ಇದಲ್ಲದೆ ವಿರಕ್ತಿಇಲ್ಲ, ಜ್ಞಾನವಿಲ್ಲ. ಇದುಕಾರಣ ಭಕ್ತಿಯೇ ಮುಕ್ತಿಜನನಿ. ತಾನೆ ಬೇರಿಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವನೆಯ್ದುವಡೆ ಭಕ್ತಿಯಿಂದಲ್ಲದಾಗದು.

(೧೭). ಅಗಣಿತನದ್ವಯನನುಪಮನಪ್ಪ ಅಭವಂಗೆ ಭವವಿರಹಿತನಾಗಿ ಭಕ್ತಿಯ ಮಾಡಬೇಕಲ್ಲದೆ, ತಾನು ಭವದೊಳಗಿರ್ದು, ಬಂಧನಕ್ಕೊಳಗಾಗಿ, ಮರ್ತ್ಯರಿಗೆ ತೊತ್ತಾಗಿ, ಮಾಯಾಪಾಶದ ಕಾಲುಕಣ್ಣಿಯೊಳು ಶಿಲ್ಕಿ, ಕಾಮಂಗೆ ಗುರಿಯಾಗಿ, ಕಾಲಂಗೆ ವಶವಾಗಿ ಮಾಡುವ ಭಕ್ತಿಗೆ ನಾಚರು ನೋಡಾ. ವರ್ಮನನರಿದು ಮಾಡದ ಭಕ್ತಿ ಸೊಣಗನ ಹಿಂದೆ ಸೊಣಗ ಹರಿದಂತಾಯಿತ್ತಯ್ಯ ಸೌರಾಷ್ಟ್ರ ಸೋಮೇಶ್ವರಾ.

(೧೮). ಶಿವಭಕ್ತಿ ಎಂಬುದು ಯುಕ್ತಿಯ ಪರಿಯಂತಲ್ಲ. ಮೂಗರು ಕಂಡಕನಸಿನಂತಿಪ್ಪದು ;ಕಾಣಿರೋ. ಹೇಳಿ ಕೇಳಿ ಮಾಡುವದು ಯುಕ್ತಿ ಭಕ್ತಿ. ಸಾಧಕದಿಂದ ಮಾಡುವದು ಅಭ್ಯಾಸ ಭಕ್ತಿ. ಮನ ಕೂರ್ತು ಮಾಡುವದು ಮುಕ್ತಿ ಭಕ್ತಿ. ಕೇಡಿಲ್ಲದೆ ಮಾಡುವದು ನಿತ್ಯ ಭಕ್ತಿ. ಇದ್ದಂತಿದ್ದು ನಿಜವಪ್ಪುವದು ನಿಜಭಕ್ತಿ. ಈ ನಿಜಭಕ್ತಿಯಲ್ಲಿ ಭರಿತರು ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು.

(೧೯). ಸತ್ಯವಿಲ್ಲದ ಭಕ್ತಿ ಸಾವಿರ ವರುಷ ಮಾಡಿದರೇನೋ? ನಿಷ್ಠೆ ಇಲ್ಲದ ಪೂಜೆ ಏಸು ಕಾಲ ಪೂಜಿಸಿದರೇನೋ? ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ, ಸನ್ಮತವಲ್ಲ, ನಿಜವಲ್ಲ. ಒಬ್ಬರನೊಬ್ಬರ ಕಂಡು ಮಾಡುವರಲ್ಲದೆ, ತಮ್ಮ ತಾವು ವಿಚಾರಿಸಿಕೊಳಲರಿಯರು. ಇಂತಪ್ಪವರು ಭಕ್ತರೆನಿಸಲಾರರು. ಕೂಡಲಚೆನ್ನಸಂಗಮದೇವಾ ನೀ ಸಾಕ್ಷಿಯಾಗಿ, ಛೀ ಛೀ ಎಂಬೆನು.

(೨೦). ಚಂದ್ರಕಾಂತ ಶಿಲೆಯಲ್ಲಿ ಬಿಂದುವಿದ್ದಡೆ, ಹಿಂಡಿ ಹಿಳಿದಿಹೆನೆಂದಡೆ, ಬಂದುದುಂಟೇ? ಆ ಬಿಂದು ವರುಣಶಿಲೆಯಲ್ಲಿ ಉರುಹಿ ನೋಡಲಿಕ್ಕೆ ಉರಿದುದುಂಟೇ ಅನಲ? ಅವು ತಮ್ಮ ಒಲವರಿದ ಸಾಧ್ಯಕ್ಕಲ್ಲದೆ ಫಲಿಸುವದಿಲ್ಲ. ಇಂತೀ ತೆರನಂತೆ ಕ್ರಿಯಾ ಜ್ಞಾನ ಎಲ್ಲವ ಬಲ್ಲೆವೆಂದು, ಅಡ್ಡವಾಯ್ದು ಅಲ್ಲಲ್ಲಿ ನುಡಿದಡೆ, ನಿಜವಸ್ತು ಸಲ್ಲೀಲೆಯಲ್ಲಿಪ್ಪನೇ? ಶ್ರದ್ಧೆ ಸನ್ಮಾರ್ಗಿಗಳಲ್ಲಿಲ್ಲದೆ ಗೆಲ್ಲಗೂಳಿಗರಲ್ಲಿಲ್ಲ, ಸಂಗನ ಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರ ಲಿಂಗವು ಅವರಲ್ಲಿ ಇಲ್ಲವಾಗಿ.

(೨೧). ಚಂದ್ರಕಾಂತದ ಸಿಲೆಯಲ್ಲಿ ಜಲವಿಲ್ಲದನ್ನಕ್ಕ ಸೀತೋದಕ ಒಸರುವಪರಿ ಇನ್ನೆಂತೋ? ಸೂರ್ಯಕಾಂತದ ಸಿಲೆಯಲ್ಲಿ ಅಗ್ನಿ ಇಲ್ಲದನ್ನಕ್ಕ ಉಷ್ಣವ ತೋರುವ ಪರಿ ಇನ್ನೆಂತೋ? ಶರಣಂಗೆ ಭಕ್ತಿಕಾಯವಿಲ್ಲದನ್ನಕ್ಕ ಕೂಡಲಸಂಗಯ್ಯನನರಿವ ಪರಿ ಇನ್ನೆಂತೋ?

(೨೨). ಕೆರೆಯೊಡೆದ ಬಳಿಕ ತುಂಬು ತಡೆಯಬಲ್ಲುದೇ? ಒಡೆದ ಮಡಕಿಗೆ ಒತ್ತು ಮಣ್ಣ ಕೊಟ್ಟರೆ ನಿಲಬಲ್ಲುದೇ? ಮುತ್ತೊಡೆದರೆ ಹತ್ತಬಲ್ಲುದೇ? ಸುರಚಾಪ ನಿರ್ಧರವಾಗಬಲ್ಲುದೇ? ಚಿತ್ತು ಒಡೆದರೆ ಭಕ್ತಿ ನೆಲಗೊಳ್ಳದು. ಭಕ್ತಿ ಬೀಸರವಾದರೆ ಮುಕ್ತಿ ಎಂಬುದು ಎಂದೆಂದಿಗೂ ಇಲ್ಲವಾಗಿ, ಇದುಕಾರಣ ಎನ್ನ ಚಿತ್ತ ಗುಹೇಶ್ವರ ಲಿಂಗವನಪ್ಪಿ ಉಭಯವಾಗದೆ, ಭಕ್ತಿ ಬೀಸರವಿಲ್ಲದೆ ಎನ್ನಿದಿರೊಳಿರುವ ಸಂಗನಬಸವಣ್ಣನ ನಿಜ ಚಿದ್ಬೆಳಗಿನೊಳಗೆ ಕೂಡಿ ನಿಲವು ನೆಳಲ ಕೂಡಿ ಬಯಲ ಸೇರಿದಂತೆ ನಿತ್ಯ ನಿರ್ಮುಕ್ತನಾದೆನಲ್ಲದೆ ಎಲ್ಲರ ಪರಿಯಂತಲ್ಲ ಎನ್ನ ಪರಿ ಬೇರೆ ನೋಡಾ ಸಂಗನಬಸವಣ್ಣ.

(೨೩). ನುಡಿಯೊಳಗೆ ಸತ್ಯ ಹೃದಯದಲ್ಲಿ ಯುಕ್ತಿ ಅರಿವಿನಲ್ಲಿ ವಿರಕ್ತಿ ದೊರೆಕೊಂಡರೆ, ಅಂತವರಲ್ಲಿಯೇ ಭಕ್ತಿ ದೊರೆಕೊಂಬುದು. ಆ ಭಕ್ತಿ ತಾನೆ

ಮುಕ್ತಿಮಾತೆಯಾದ ಕಾರಣ ಭಕ್ತಿಯಿಂದ ಶಿವನಲ್ಲಿ ನಿರ್ಮಲ ಚಿತ್ತವನಿರಿಸಿ ನೆನೆವುದು ನಮ್ಮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾ.

(೨೪). ಶಿವಶಿವಾ, ಶಿವಲಿಂಗನ ಕೊಟ್ಟ ಆಯುಷ್ಯದಲ್ಲಿ ನಿಮಿಷಾರ್ಧವ ಹೆಚ್ಚಿಸಬಾರದು, ನಿಮಿಷಾರ್ಧವ ಕುಂದಿಸಬಾರದು. ಶಿವಶಿವಾ ಲಿಂಗವು ಕೊಟ್ಟ ಭಾಷೆಯಲ್ಲಿ ಕಾಣಿಯ ಹೆಚ್ಚಿಸಬಾರದು, ಕಾಣಿಯ ತಗ್ಗಿಸಬಾರದು. ಹರಿಬ್ರಹ್ಮಾದಿಗಳಿಗಾದರೂ ತೃಣದಂತಪ್ಪ ಕಾರ್ಯವ ಮಾಡಬಾರದು. “ತೇನ ವಿನಾ ತೃಣಾಗ್ರಮಪಿ ನ ಚಲತಿ” ಇಂತೆಂದುದಾಗಿ ಉತ್ಪತ್ತಿ ಸ್ಥಿತಿ ಲಯಂಗಳಿಗೆ ಶಿವನೇ ಕರ್ತನಲ್ಲದೆ ಮತ್ತಾರೂ ಇಲ್ಲ. ಅದೆಂತೆಂದೊಡೆ, “ಉತ್ಪತ್ತಿ ಸ್ಥಿತಿ ನಾಶಾದಿ ಶಿವಾಜ್ಞಾ ಸರ್ವಜಂತುಷಃ ಚಿಂತಾವರ್ಜಯೇತ್ ಸರ್ವತ್ರಂ ಶಿವಚಿಂತಯೇತ್,” ಇದುಕಾರಣ ಅನ್ಯರು ಆಯುಷ್ಯಭಾಷೆಯ ಕೊಟ್ಟಹರೆಂಬ ಆಸೆ ಬೇಡ, ಕೊಡರೆಂಬ ಕ್ಲೇಶ ಬೇಡ, ಸರ್ವವೂ ಶಿವಾಧೀನವೆಂದರಿವುದು. ಕೇವಲ ವಿಶ್ವಾಸದಿಂದ ಲಿಂಗಾರ್ಚನೆಯ ಮಾಡಿದರೆ ಬೇಡಿದ್ದನೀವ ಇಹಪರ ಸಿದ್ಧಿಯು. ನೆರೆನಂಬು ಮನವೇ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಯ್ಯನ.

(೨೫). ಎನ್ನ ವಿಶ್ವಾಸದಿಂದ ನಿನ್ನ ನೋಡಿ ಕಂಡೆಹೆನೆಂದಡೆ ನೀನು ವಿಶ್ವಾಸಹೀನ. ನಿನ್ನ ವಿಶ್ವಾಸವಿದ್ದಲ್ಲಿ ಕರಿಗೊಂಡು ಎನ್ನ ಆ ದೃಢವೇ ನಿನ್ನ ದೃಢವಾಗಿ ನಿಂದಲ್ಲಿ ಲಿಂಗಭಕ್ತ, ಭಕ್ತಲಿಂಗ, ಎಂಬ ಶೃತಿ ತಪ್ಪದು ನಿಃಕಳಂಕಮಲ್ಲಿಕಾರ್ಜುನಾ.

(೨೬). ಅರಸಿನ ಭಕ್ತಿ ಅಹಂಕಾರದಲ್ಲಿ ಹೋಯಿತ್ತು. ವೇಶಿಯ ಭಕ್ತಿ ಎಂಜಲದಲ್ಲಿ ಹೋಯಿತ್ತು. ಬ್ರಾಹ್ಮಣನ ಭಕ್ತಿ ಮುಟ್ಟು ತಟ್ಟಿನಲ್ಲಿ ಹೋಯಿತ್ತು. ಶೀಲವಂತನ ಭಕ್ತಿ ಪ್ರಪಂಚಿನಲ್ಲಿ ಹೋಯಿತ್ತು. ಶೆಟ್ಟಿಯ ಭಕ್ತಿ ಕುಟಿಲ ವ್ಯಾಪಾರದಿಂದ ಹೋಯಿತ್ತು. ನೀವು ಕೇಳಿರೋ ಇಂಥವರ ಭಕ್ತಿಗೆ ಊರಿಂದ ಹೊರಗಣ ಡೊಂಬನೇ ಸಾಕ್ಷಿ, ಕಾಣಾ ಕಲಿದೇವರದೇವಾ.

# ಲಿಂಗವನ್ನು ಪೂಜಿಸು.

(೧). ನೀರಲ್ಲಿ ಪುಟ್ಟಿದ ಗುಳ್ಳೆಗೆ ಕಬ್ಬುನದ ಕಟ್ಟುಕೊಟ್ಟು, ಸುರಕ್ಷಿತವ ಮಾಡುವ ಭರವ ನೋಡಾ. ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ, ಬದುಕೋ ಕಾಯವ ನಿಶ್ಚಯಿಸದೆ.

(೨). ನೆರೆಕೆನ್ನೆಗೆ, ತೆರೆಗಲ್ಲಕ್ಕೆ ಶರೀರಗೂಡ ಹೋಗದ ಮುನ್ನ, ಹಲ್ಲು ಹೋಗಿ, ಬೆನ್ನು ಬಾಗಿ ಅನ್ಯರಿಗೆ ಹಂಗಾಗದ ಮುನ್ನ, ಕಾಲಮೇಲೆ ಕೆಯ್ಯನೂರಿ ಕೋಲ ಹಿಡಿಯದ ಮುನ್ನ, ಮುಪ್ಪಿಂದೊಪ್ಪವಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ, ಪೂಜಿಸು ಕೂಡಲಸಂಗಮದೇವನಾ.

(೩). ಹೊತ್ತಾರೆ ಎದ್ದು, ಅಗವಣಿಪತ್ತರೆಯ ತಂದು ಹೊತ್ತು ಹೋಗದ ಮುನ್ನ ಪೂಜಿಸು ಲಿಂಗವ. ಹೊತ್ತು ಹೋದ ಬಳಿಕ ಏನ್ನನಾರು ಬಲ್ಲರು ? ಹೊತ್ತು ಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ತೊತ್ತುಗೆಲಸವ ಮಾಡು ಕೂಡಲಸಂಗಯ್ಯನ.

(೪). ಜವನಿದ್ದಾನೆ, ಜವನಪಟ್ಟಣವಿದೆ. ಮಾಮರ ಹೂಮರನಿದೆ, ತೋಮರನಿದೆ ನೋಡಯ್ಯಾ. ಆವಕಾರ್ಯವಾದಡೂ, ದೇವಕಾರ್ಯವ ಮಾಡುವದು. ಸಾವಕಾರ್ಯ ತಪ್ಪದು. ನೀನು ಕೆಡಬೇಡ ಕಂಡಿಯಾ. ಬೇಗನಂಬಿ ಪೂಜಿಸು, ಸೊಡ್ಡಳದೇವನ ಮರುಳೇ.

(೫). ಬಿತ್ತಿದಬಿತ್ತು ಪೃಥ್ವಿಯ ಕೂಡಿ, ಅಪ್ಪುವಿನ ದ್ರವದಿಂದ ಮಸ್ತಕ ಒಡೆವುದಲ್ಲದೆ, ಉಷ್ಣದ ದಾವರಕ್ಕೆ ಬೆಂಕಿಯ ಬೇಗೆಗೆ ಮಸ್ತಕ ಒಡೆವುದುಂಟೇ? ಲಿಂಗವು ಭಕ್ತಿಶ್ರದ್ಧೆಗೆ ವಿಶ್ವಾಸದ ಸುಸಂಗಿಗೆ ನಿಶ್ಚಯುವಪ್ಪ ಲಿಂಗವು ದೃಷ್ಟವಪ್ಪುದಲ್ಲದೆ, ಉನ್ಮತ್ತರಪ್ಪ ವಿಶ್ವಾಸಘಾತಕಂಗೆ, ವಂದಿಸಿ ನಿಂದಿಸುವಂಗೆ; ಹಿಂದು ಮುಂದು ಬಂದುದ ಬಾಯ್ಗೆ ಡೆಯುವಂಗೆ, ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಸಂದಿಸನವರಿಗೆ.

(೬). ಮುಂಜಾವದಲೆದ್ದು, ಲಿಂಗದಂಘ್ರಿಯ ಮುಟ್ಟಿ, ಸುಪ್ರಭಾತದಲ್ಲಿ ಶಿವಶರಣರ ಮುಖವ ನೋಡುವದು. ಹುಟ್ಟಿದ ಜನ್ಮಕ್ಕೆ ಇದೇ ಸಫಲವು. ಸತ್ಯವಚನವಿಂತೆಂದುದಾಗಿ ಇಂತಲ್ಲದವರನೊಲ್ಲ ನಮ್ಮ ಕೂಡಲಸಂಗಮದೇವಾ.

( ೭ ). ಮನವೇ ಸರ್ಪ, ತನುವೇ ಹೇಳಿಗೆ, ಹಾವಿನೊಡತಣಹುದು ವಾಳಿಗೆ. ಇನ್ನಾವಾಗ ಕೊಂದಿಹುದೆಂದರಿಯೆ. ಇನ್ನಾವಾಗ ತಿಂದಿಹುದೆಂದ ರಿಯೆ. ನಿಚ್ಚಕ್ಕೆ ನಿಮ್ಮ ಪೂಜಿಸಬಲ್ಲಡೆ, ಅದೇ ಗಾರುಡ, ಕೂಡಲಸಂಗಮ ದೇವಾ.

( ೮ ). ಆಸೆ ಪರಿಣಾಮಕ್ಕೆ ಬೇಸತ್ತು ಹೋಯಿತ್ತು. ಅಶ್ರಯದ ನಿಃಕ್ರಿಕೆಟ್ಟಿತ್ತು, ಗ್ರಾಸಮೆಲ್ಲನಾಯಿತ್ತು. ಸ್ತ್ರೀಯರ ಮೇಲಣ ಇಚ್ಛೆ ಕೆಟ್ಟಿತ್ತು, ಈಶ್ವರಾ ನಿಮ್ಮ ಪಾದಾಂಬುಜಸೇವೆಯಿಂದ ಕಾಣಾ ರಾಮನಾಥಾ.

( ೯ ). ಮನ ಮುಟ್ಟಿನೆನೆವಲ್ಲಿ, ತನು ನಿಮ್ಮದಾಯಿತ್ತು. ತನು ಮುಟ್ಟಿ ಪ್ಪಿ, ಮನಮುಟ್ಟಿ ನೆರೆದು, ವನಿತೆಯರ ಕೂಟಕ್ಕೆ ತೆರೆಪಿಲ್ಲವಾಯಿತ್ತು. ಜನನ ಮರಣದ ಬಾಧೆಹರಿಯಿತ್ತು, ಈಶ್ವರಾ ನಿಮ್ಮ ಪಾದಸೇವೆಯಿಂದ ಕಾಣಾ ರಾಮನಾಥಾ.

( ೧೦ ). ಈಶ್ವರನ ಮೂರ್ತಿಯ ಕರಕಮಲಕ್ಕೆ ತಂದಲ್ಲಿ, ಕಣ್ಮನ ಮೂರ್ತಿ ಧ್ಯಾನದಲ್ಲಿ ಹೆರೆ ಹಿಂಗದೆ, ಅಕ್ಕರಿಂದ ಭಾವಭ್ರಮಿಸದೆ, ಚಿತ್ತಸಂಚರಿ ಸದೆ, ಮನವಚನಕಾಯ ಭಿನ್ನಭಾವವಿಲ್ಲದೆ, ಪೂಜಿಸುವ ಕೈ ತಾನಾಗಿ, ಅರಿವ ಮನವು ತಾನಾಗಿ, ಹೊತ್ತಿಪ್ಪ ಅಂಗದ ನೆಲೆಯು ತಾನಾಗಿ, ಹೆರೆಹಿಂಗದೆ ಪೂಜೆ ಯ ಮಾಡುತಿಪ್ಪಾತನ ಅಂಗವೇ ಲಿಂಗ, ಆತನಿದ್ದುದೇ ಅವಿಮುಕ್ತ ಕ್ಷೇತ್ರ, ಇಂತಪ್ಪ ಮಹಾಮಹಿಮ ನಾರಾಯಣಪ್ರಿಯರಾಮನಾಥ, ತಾನೂ ತಾನೆ.

( ೧೧ ). ಕುರಿಯೊಡೆಯ ಹಲವರ ನಡುವೆ ನಿಂದರೆ, ತನ್ನೊಡೆಯನನರಿ ವಂತೆ, ಸಕಲೇಂದ್ರಿಯ ಬಹು ದುಃಖದಲ್ಲಿದ್ದರೂ, ತತ್ಕಾಲಕ್ಕರ್ಚನೆ ನೇಮ ಕೃತ್ಯ ತಪ್ಪದೆ ಮಾಡಬೇಕು. ಇದು ನಿಶ್ಚಯದಿರವು ಸದಾಶಿವಮೂರ್ತಿಲಿಂಗವನರಿವು ದಕ್ಕೆ ಇದೇ ಗೊತ್ತು.

( ೧೨ ). ಮೊದಲು ಹುಸಿ, ಲಾಭದಿಟವೇ? ನಿರೀಕ್ಷಣೆ ಇಲ್ಲದೆ ಪರೀಕ್ಷೆ ಯುಂಟೇ? ಈಯುವಸರದಂಗವ ಗೌರೇಶ್ವರಲಿಂಗ ನೀನೇ ಬಲ್ಲೆ.

( ೧೩ ). ಉದ್ಧವನೇರುವದಕ್ಕೆ ಗದ್ದುಗೆ ಇಲ್ಲದೆ ಎಯ್ದಬಾರದು. ಚಿದ್ರೂ ಪನನರಿವುದಕ್ಕೆ ಅರ್ಚನೆ ಪೂಜನೆ ನಿತ್ಯ ನೇಮವಿಲ್ಲದೆ, ಕಾಣಬಾರದು. ಅದನು ಸತ್ಯದಿಂದ ಮಾಡಿ ಅಸತ್ಯವ ಮರೆದಡೆ ಇದೇ ಸತ್ಯ, ನಾಸ್ತಿನಾಥಾ.

(೧೪). ಧರೆಯ ಕೃಷೆ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಲ್ಲ. ಅರ್ಚನೆ, ಅರ್ಪಿತ, ಮೂರ್ತಿಧ್ಯಾನದಿಂದಲ್ಲದೆ, ಶುದ್ಧವಿಲ್ಲ. ಇದು ನಿಶ್ಚಯ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗವನರಿವುದಕ್ಕೆ.

(೧೫). ಅಂಗವನರಿವನ್ನಕ್ಕ ಶಿವಲಿಂಗಪೂಜೆಯ ಮಾಡಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತ ಮಾಡಬೇಕು. ಇದು ಅರುವಿನ ಬಿತ್ತು, ಜ್ಞಾನದಗೊತ್ತು, ಸರ್ವಮಯದ ಯುಕ್ತಿ, ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವನರಿವಶಕ್ತಿ.

(೧೬). ಪರುಷವಾದರು ಒಂದರಲ್ಲಿರಿಸಿರಬೇಕು. ರತ್ನ ವಿಶೇಷವೆಂದಡೂ, ಬಂಧಿಸಿದಲ್ಲಿ ಸಂದಿರಬೇಕು. ಲಿಂಗವ ಹಿಡಿದಿದ್ದಲ್ಲಿ ಪೂಜಿಸುವ ಅಂಗವಿರಬೇಕು. ಆ ಗುಣ ಗುಹೇಶ್ವರಲಿಂಗವನರಿದುದು. ಪೂಜೆಯ ಮರೆಯದಿರಲಾಗದು ಚಂದ್ಯೈಯ್ಯ.

(೧೭). ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡದವನ ಸಂಸಾರವೇನವನ, ನಡೆ ಏನವನ, ನುಡಿ ಏನವನ, ಸಂಸಾರವೇನವನ, ಬಾಳುವೆಯೇನವನ, ಬೀಳುವೆಯೇನವನ, ಸಂಸಾರವೇನವನ? ಕೂಡಲಸಂಗಮದೇವಾ, ನಿಮ್ಮ ಮುಟ್ಟಿ ನೋಡಿ ನೆನೆದು ಪೂಜಿಸದವನ ಬದುಕೇನವನ?

(೧೮). ಅಷ್ಟವಿಧಾರ್ಚನೆಯ ಮಾಡುವದು, ಮಾಡಿದ ಪೂಜೆಯ ನೋಡುವುದು, ಶಿವತತ್ವ ಗೀತವ ಪಾಡುವುದು, ಶಿವನ ಮುಂದೆ ಕುಣಿದಾಡುವುದು, ಕೂಡಲಸಂಗಮದೇವರ ಕೂಡುವದು.

(೧೯). ಗಾಂಧಾರಿ ಮಾಂಧಾರಿ ಎಂಬ ಅಹೋರಾತ್ರಿಯಲ್ಲಿ ಲಿಂಗವ ಪೂಜಿಸಬೇಕು. ಊರಕೋಳಿ ಕೂಗದ ಮುನ್ನ, ಕೊಡ್ಡೃಹುಳಿ ಧ್ವನಿಬ್ಬರದ ಮುನ್ನ, ಲಿಂಗವ ಪೂಜಿಸಬೇಕು. ಗೋವುಗಳಕೊಲ್ಲುವ ಹಾಪೆಯ ದನಿಯು ಕೇಳದ ಮುನ್ನ, ತುಂಬಿ ಮುಟ್ಟಿ ಪುಷ್ಪ ನಿರ್ಮಾಲ್ಯವಾಗದ ಮುನ್ನ, ಶಿವಲಿಂಗವ ಪೂಜಿಸಬೇಕು. ಅದೆಂತೆಂದೊಡೆ, "ಯೋಲಿಂಗಂ ಮರ್ಧರಾತ್ರಿಕತು ಶುಚಿರ್ಭೂತ್ವಾ ಪ್ರಪೂಜಯೆತ್ । ಅಗ್ನಿಷ್ಟೋಮ ಸಹಸ್ರಸ್ಯ ಧರ್ಮಸ್ಯ ಲಭತೇ ಫಲಮ್" ॥ ಎಂದುದಾಗಿ ಇದನರಿತು ಶುದ್ಧಾಂತಃಕರಣವಾಗಿ ಶಿವಪೂಜೆಯ ಮಾಡಬೇಕು. ಆತಂಗೆ ಅಗ್ನಿಷ್ಟೋಮ ಸಹಸ್ರಫಲವಹುದು. ತನ್ನಿಷ್ಟನೆ ಮಲಗ್ಗದ್ದ ಸತಿಯ

ನೆಬ್ಬಿಸದೆ, ಶಿವಲಿಂಗಕ್ಕೆರೆವ ಸದ್ಭಕ್ತರ ಶ್ರೀಪಾದವ ತೋರಿಬದುಕಿಸಯ್ಯ ಕೂಡಲ ಸಂಗಮದೇವಾ.

(೨೦). ಉದಯಕಾಲ, ಮಧ್ಯಾಹ್ನಕಾಲ, ಅಸ್ತಮಾನಕಾಲದಲ್ಲಿ ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರ ಮಾಡುವಾತನೇ ಸದ್ಭಕ್ತನು. ಇಂತೀ ತ್ರಿಕಾಲದಲ್ಲಿ ಲಿಂಗಾರ್ಚನೆಯ ಮಾಡುವಲ್ಲಿ ಹಿಂದಣ ಕ್ರಿಯೆಯಿಂದ ಮಾಡಬೇಕು. ಅಂತಲ್ಲದೆ ಸುಮ್ಮನೆ ಲಿಂಗಾರ್ಚನೆಯ ಮಾಡುವಾತ ಭಕ್ತನಲ್ಲ, ಮಹೇಶ್ವರನಲ್ಲ, ಪ್ರಸಾದಿಯಲ್ಲ, ಪ್ರಾಣಲಿಂಗಿಯಲ್ಲ, ಶರಣನಲ್ಲ, ಐಕ್ಯನಲ್ಲ. ಅವನು ಶ್ರೀಗುರುವಿನಾಜ್ಞೆಯನು ಮೀರಿದಾತನು, ಪಂಚಮಹಾಪಾತಕನು, ಘಾತುಕನು, ಲಿಂಗಚೋರಕನು ಕೇಳಿರೇ. ಅದೆಂತೆಂದೊಡೆ, "ಬ್ರಹ್ಮಚಾರೀ ಶುಚಿರ್ಭೂತ್ವಾ ತ್ರಿಸಂಧ್ಯಾಂ ಪೂಜಯೇತ್ ಶಿವಂ । ಪುಣ್ಯಂ ತತ್ಸಕಲಂ ಸಮ್ಯಗ್ಲಭತೆ ರುದ್ರಸ್ಯಾರ್ಚನಾತ್ ॥" ಇದನರಿತು, ತ್ರಿಸಂಧ್ಯಾಕಾಲದಲ್ಲಿ ತನ್ನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಹಿಂದಣ ಕ್ರಿಯೆವಿಡಿದು ಮಾಡುವ ಸದ್ಭಕ್ತಂಗೆ ನಮೋ ನಮೋ ಎಂಬೆ, ಬಸವಪ್ರಿಯ ಕೂಡಲಚನ್ನಸಂಗಮದೇವಾ.

(೨೧). ಅಷ್ಟವಿಧಾರ್ಚನೆ ಮಾಡಿದರೇನು, ತನುಗುಣಂಗಳ ಮೆಟ್ಟಿ ಮುರಿಯದನ್ನಕ್ಕರ? ಷೋಡಶೋಪಚಾರವ ಮಾಡಿದರೇನು ಸೂಳೆಯರಂತೆ? ಹಲವು ಕಡೆಗೆ ಹೋಹಮನವ ನೆನಹಿನ ಹಸ್ತದಿಂದಲಿ ಹಿಡಿದು, ಇಷ್ಟಲಿಂಗದಲ್ಲಿ ನೆನೆವ ಗಟ್ಟಿಗೊಳಿಸಿ, ಕೃತನಿಶ್ಚಯದಿಂ ದೃಢವಿಡಿದು, ಅನಿಷ್ಟ ಪರಿಹರಿಸ ಬಲ್ಲಡೆ, ಆತನೇ ಶಿವಲಿಂಗಾರ್ಚಕನು, ಲಿಂಗಧ್ಯಾನಸಂಪನ್ನನು, ಲಿಂಗವನಲ್ಲದನ್ಯವನರಿಯದ ಅಚಲಿತ ಮಹಿಮನು ನೋಡಾ, ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೨೨). ಕಾಯದ ಮೇಲೆ ಲಿಂಗವ ಧರಿಸಿ, ದೇವಪೂಜೆಯ ಮಾಡಿ, ಕಾಯವಳಿದು, ದೇವತಾಭೋಗವನೆಯ್ದುವೆಂಬ ಗಾವಿಲರ ಎನಗೊಮ್ಮೆ ತೋರದಿರಯ್ಯ! ಕಾಯವನು, ಜೀವವನು ಲಿಂಗದಲ್ಲಿರಿಸಬಲ್ಲಡೆ ಮಹಾದೇವನೆಂದು ಬೇರುಂಟೇ? ಆ ಮಾಹೇಶ್ವರಂಗೆ ನಮೋ ನಮೋ ಎಂಬೆನು ಕಾಣಾ ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ.

(೨೩). ಉದಯವಾಯಿತ್ತ ಕಂಡು, ಉದರಕ್ಕೆ ಕುದಿವರಯ್ಯ! ಕತ್ತ

ಲೆಯಾಯಿತ್ತ ಕಂಡು, ಮಜ್ಜನಕ್ಕೆರೆವರಯ್ಯ! ಲಿಂಗಕ್ಕೆ ನೇಮವಿಲ್ಲ. ಕಾಯ ಒಂದೆಸೆ, ಜೀವ ಒಂದೆಸೆ, ಗುಹೇಶ್ವರನೆಂಬ ಲಿಂಗವು ಒಂದೆಸೆ.

(೨೪). ಶಿವಲಿಂಗದ ಮಹಾತ್ಮೆಯನು, ಶಿವಲಿಂಗದ ಧರ್ಮವನು, ಶಿವಲಿಂಗದ ನಿಶ್ಚಯವನು ಆದಾರಯ್ಯ ಬಲ್ಲವರು, ಆದಾರಯ್ಯ ಅರಿವರು, ಶ್ರೀಗುರು ತೋರಿಕೊಡದನ್ನಕ್ಕರ? ಸರ್ವೈಶ್ವರ್ಯಸುಸಂಪನ್ನಮಾದ್ಯಂ ತತ್ವಾಧಿಕಂ ಧ್ರುವಂ ಎಂದುದಾಗಿ, "ಅಣೋರಣೀಯಾನ್, ಮಹತೊ ಮಹೀಯಾನ್," ಎಂದುದಾಗಿ "ಯತೋವಾಚೋನಿವರ್ತಂತೆ" ಎಂದುದಾಗಿ, 'ಅತ್ಯತಿಷ್ಠದ್ದ ಶಾಂಗುಲಂ' ಎಂದುದಾಗಿ ವೇದಾಗಮಂಗಳು ಸಾರುತ್ತಿರಲು, ಲಿಂಗವು ಹರಿ ಬ್ರಹ್ಮಾದಿ ದಾನವ ಮಾನವರಿಗೂ ಅರಿಯಬಾರದು. "ಚಕಿತ ಮಭಿಧತ್ತೆ ಶ್ರುತಿರಪಿ" ಎಂದುದಾಗಿ ವೇದಪುರುಷರಿಗೆಯೂ ಅರಿಯಬಾರದು. ಅರಿಯ ಬಾರದ ವಸ್ತುವ ರೂಪಿಸಲೆಂತು ಬಾರದು. ರೂಪಿಸಬಾರದ ವಸ್ತುವ ಪೂಜಿಸಲೆಂತು ಬಾರದು. ಪೂಜೆಯಿಲ್ಲವಾಗಿ ಭಕ್ತಿಗಿಲ್ಲ. ಭಕ್ತಿಯಿಲ್ಲವಾಗಿ ಪ್ರಸಾದಕಿಲ್ಲ. ಪ್ರಸಾದವಿಲ್ಲವಾಗಿ ಮುಕ್ತಿ ಇಲ್ಲ. ಮುಕ್ತಿ ಇಲ್ಲದೆ ದೇವ ದಾನವ ಮಾನವರೆಲ್ಲರೂ ಕೆಡುವರು. ಕೆಡದಂತೆ ಮಾಡಿ ರಕ್ಷಿಸಿದನು ಸದ್ಗುರು, ಮಹಾಗುರು ಶ್ರೀಗುರು. "ನ ಗುರೋರಧಿಕಂ" ಎಂದುದಾಗಿ, ಮಹಾಘನ ಗುರುಶಾಂತ ಮೂರ್ತಿ, ಕೃಪಾಮೂರ್ತಿ ಲಿಂಗಪ್ರತಿಷ್ಠೆಯಂ ಮಾಡಿದನು. ಅದೆಂತೆನಲು ಕೇಳಿರೇ—"ಯತೋವಾಚೋ ನಿವರ್ತಂತೆ ಅಪ್ರಾಪ್ಯಮನಸಾಸಹ ನಾದಬಿಂದು ಕಲಾತೀತಂ ಗುರುಣಾಲಿಂಗಮುದ್ಧವಂ" ಎಂದುದಾಗಿ, "ಸದ್ಗುರುರ್ಭಾವ ಲಿಂಗಂಚ ಸರ್ವ ಬ್ರಹ್ಮಾಂಡವಾಸಿನಾಂ, ಸರ್ವಲೋಕಸ್ಯ ವಾಸಸ್ಯಾನ್ಮುಕ್ತಿ ಕ್ಷೇತ್ರ ಸುವಾಸಿನಾಂ" ಎಂದುದಾಗಿ, ಸದ್ಗುರುರ್ದೀಯತೆ ಲಿಂಗಂ ಸದ್ಗುರುರ್ದೀಯತೆ ಕ್ರಿಯಾಂ। ಸದ್ಗುರುರ್ದೀಯತೆ ಮಂತ್ರಂ ಸದ್ಗುರುಸ್ಸರ್ವಕಾರಣಂ ಎಂದುದಾಗಿ, ಸರ್ವಲೋಕಕ್ಕೆಯೂ ಸರ್ವರಿಗೆಯೂ ಲಿಂಗಪ್ರತಿಷ್ಠೆಯಂ ಮಾಡಿ ಕೊಟ್ಟನು. "ಅರೂಪೋ ಭಾವನಂ ನಾಸ್ತಿಯದ್ದೃಷ್ಟಂ ತದ್ವಿನಶ್ಯತಿ। ದೃಷ್ಟ್ವಾ ದೃಷ್ಟ ಸ್ವರೂಪತ್ವಂ ಅಥಾಪ್ಯೇವಂ ಸದಾಭ್ಯಸೇತ್" ಎಂದುದಾಗಿ, ನಿಃಕಲ ರೂಪ ನಿರವಯಧ್ಯಾನ ಪೂಜೆಗನುವಲ್ಲ. ಸಕಲ ತತ್ವ ಸಾಮಾನ್ಯವೆಂದು, ಸಕಲ ನಿಃಕಲವನೊಂದಾಗಿ ಲಿಂಗವ ಮಾಡಿದನು. ॥ ಶ್ಲೋ ॥ ಲಿಂಗಂ ತಾಪತ್ರಯ ಹರಂ ಲಿಂಗಂ ದಾರಿದ್ರ್ಯನಾಶನಂ। ಲಿಂಗಂ ಪಾಪವಿನಾಶಂಚ ಲಿಂಗಂ ಸರ್ವಾ

ರ್ಥಸಾಧನಂ॥ ಎಂದುದಾಗಿ, ಲಿಂಗವು ಪರಂಜ್ಯೋತಿ, ಲಿಂಗವು ಪರಬ್ರಹ್ಮವೆಂದು ಲಿಂಗವನೆ ಪೂಜಿಸಿ, ಭಕ್ತಿ ಪ್ರಸಾದ ಮುಕ್ತಿಯ ಪಡೆಯಲೆಂದು ಮಹಾಘನ ಗುರು ಲಿಂಗಪ್ರತಿಷ್ಠೆಯಂ ಮಾಡಿ ತೋರಿಕೊಟ್ಟನು. ಅದೆಂತೆಂದೊಡೆ "ಬ್ರಹ್ಮ. ವಿಷ್ಣುಶ್ಚ, ರುದ್ರಶ್ಚ, ಈಶ್ವರಶ್ಚ, ಸದಾಶಿವಃ। ಸರ್ವೆ ಲಿಂಗಾರ್ಚನೆರತಾ ಜಾತಸ್ತೆ ಲಿಂಗ ಪೂಜಕಾಃ। ಎಂದುದಾಗಿ, ಮತ್ತಂ "ಗೌರೀಪತಿ ರುಮಾನಾಥ ಅಂಬಿಕಾ ಪಾರ್ವತೀಪತಿಃ। ಗಂಗಾಪತಿರ್ಮಹಾದೇವೋ ಸತತಂ ಲಿಂಗಪೂಜಕಾಃ॥ ಎಂದುದಾಗಿ, ಈ ಮಹಾಪುರುಷರಪ್ಪ ದೇವಗಣ, ರುದ್ರಗಣ, ಪ್ರಮಥಗಣಂಗಳು ವಿಷ್ಣ್ವಾದಿ ದೇವದಾನವ ಮಾನವಾದಿಗಳು ಮಹಾಲಿಂಗವನೇ ಧ್ಯಾನಿಸಿ, ಪೂಜಿಸಿ, ಪರಮ ಸುಖ ಪರಿಣಾಮವಡೆದರೆಂದು ಮಾಡಿದನು ಕೇವಲ ಸದ್ಭಕ್ತ ಜನಂಗ ಳಿಗೆ, ಎಂದುದಾಗಿ, ಆ ಸದ್ಗುರು ಆ ಪರಶಿವನು, ತತ್ಪ್ರಾಣವನು ಏಕೀಭವಿಸಿ। ಸದ್ಭಾವದಿಂದ ಲಿಂಗಪ್ರತಿಷ್ಠೆಯಂ ಮಾಡಿ ಪ್ರಾಣಲಿಂಗವಾಗಿ ಕರಸ್ಥಲದಲ್ಲಿ ಬಿಜ ಯಂಗೈದು, ಅಂತರಂಗ ಬಹಿರಂಗ ಭರಿತನಾಗಿ ಪೂಜೆಗೊಳಲೆಂದು ಕರುಣಿಸಿ ದನು. ಮತ್ತಂ "ಏಕಮೂರ್ತಿಸ್ತ್ರಿಥಾ ಭೇದಂ" ಎಂದುದಾಗಿ ಗುರುಲಿಂಗ ಜಂಗಮಲಿಂಗ, ಪರಶಿವಲಿಂಗ ಒಂದೇ, "ದೇಶಿಕಶ್ಚರಲಿಂಗಂಚ ತ್ರಿವಿಧಂ ಲಿಂಗ ಮುಚ್ಯತೆ" ಎಂದುದಾಗಿ ಲಿಂಗದ ಮರ್ಮವನು, ಲಿಂಗದ ಸ್ವರೂಪವನು, ಲಿಂಗ ದ ನಿಶ್ಚಯವನು ಆದಿಯಲ್ಲಿ ಧ್ಯಾನ ಪೂಜೆ ಮಾಡಿದವರನು ಭಕ್ತಿ ಪ್ರಸಾದ ಮು ಕ್ತಿಯ ಪಡೆದವರನು ವೇದಶಾಸ್ತ್ರಪುರಾಣಾಗಮಂಗಳು ಹೇಳುತ್ತವೆ. ಶಿವನ ವಾಕ್ಯಂಗಳಿಗೆ ಇದೇ ದಿಟ. ಮನವೇ ನಂಬು. ಕೆಡಬೇಡ, ಕೆಡಬೇಡ. ಮಹಾ ಸದ್ಭಕ್ತರ ನಂಬುವದು. ಶಿವಲಿಂಗಾರ್ಚನೆಯ ನಿರಂತರ ಮಾಡುವುದು. ಇದು ನಿಶ್ಚಯ. ಶಿವನು ಬಲ್ಲನಯ್ಯ. ಈ ಕ್ರಿಯೆಯಲ್ಲಿ ಲಿಂಗಜಂಗಮವನರಿದು ವಿಶ್ವಾಸ ಮಂ ಮಾಡಿ, ಸದ್ಭಕ್ತಿ ಕ್ರಿಯೆಯನರಿದು, ಮರ್ಮವನರಿದು, ಸದ್ಭಾವದಿಂದ ಲಿಂಗಾರ್ಚನೆಯ ಮಾಡುವುದಯ್ಯ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

(೨೫). ಕೇಳು ಕೇಳಯ್ಯ ಆತ್ಮನೇ. ಎರಡು ಪ್ರಕಾರದ ಆದಿ ಮಧ್ಯಾ ವಸಾನವ ತಿಳಿದು ನೋಡು, ಕೆಡಬೇಡ, ಕೆಡಬೇಡ. ತಂದೆಯ ದೆಸೆಯಿಂದ ತಾಯಿಯ ಯೋನಿಚಕ್ರದಲ್ಲಿ ಬಂದುದೇ ಆದಿ. ಹೊನ್ನು, ಹೆಣ್ಣು, ಮಣ್ಣು, ನನ್ನ ದೆಂದು ಹಿಡಿದು, ಷಟ್ಕರ್ಮವನಾಚರಿಸಿ, ಸುಖದುಃಖಗಳಲ್ಲಿ ಮುಳುಗಿಪ್ಪುದೇ ಮಧ್ಯ. ಅಂತಕನ ಕೈಯಿಂದ ಅರೆದು ಸಣ್ಣಿಸಿಕೊಂಡು ಭವಕ್ಕೆ ನೂಂಕಿಸಿ

ಕೊಂಬುದೇ ಅವಸಾನ ಇದನರಿದು ಇದಕ್ಕೆ ಹ್ಯೇಯಮಂ ಮಾಡು. ಮತ್ತೆ ಆ ಆದಿ ಮಧ್ಯಾವಸಾನಮಂ ತಿಳಿದು, ನಾನು ಮಹಾಲಿಂಗದ ಗರ್ಭಾಬ್ಧಿಯಲ್ಲಿ ಬಂದೆನೆಂಬುದೇ ಆದಿ. ಲೋಕದ ವ್ಯವಹಾರವಸಾಕು ಮಾಡಿ, ಇಷ್ಟಲಿಂಗ ನೈಷ್ಠಿಯಾಗಿ, ಪ್ರಾಣಲಿಂಗದಲ್ಲಿ ಪರಿಣಾಮಿಯಾಗಿ, ಮೋಕ್ಷ ನಮಿಯಾಗಿಪ್ಪುದೇ ಮಧ್ಯ, ತನುಬಿಡುವಲ್ಲಿ ಮನವ ಪರಬ್ರಹ್ಮಕ್ಕೆ ಸಮರ್ಪಣವ ಮಾಡಿ, ಜನನ ಮರಣವ ಗೆಲುವುದೇ ಅವಸಾನ ಇದನರಿದು ಇದಕೆ ಮೆಚ್ಚಿ, ಲಿಂಗವನೇ ಸಾಧಿಸು, ವೇಧಿಸು. ಕಪಿಯು ಕಯ್ಯ ಕನ್ನಡಿಯಂತೆ, ಕುಣಿದರೆ ಕುಣಿವ, ಎಡ್ಡಿಸಿದರೆ ಎಡ್ಡಿಸಿ, ಹಲುಗಿರಿದರೆ, ಹಲುಗಿರಿದಂತೆ, ಮನವಾಡಿದಂತೆ ನೀನಾಡಬೇಡ. ಮನವಾಡಿದಂತೆ ಆಡಿದವಂಗೆ ಭಕ್ತಿ ಎಲ್ಲಿಯದು, ಜ್ಞಾನವೆಲ್ಲಿಯದು, ವೈರಾಗ್ಯವೆಲ್ಲಿಯದು, ವಿರಕ್ತಿ ಎಲ್ಲಿಯದು, ಮುಕ್ತಿ ಎಲ್ಲಿಯದಯ್ಯಾ, ಘನಲಿಂಗಿಯ ಮೋಹದ. ಚನ್ನಮಲ್ಲಿಕಾರ್ಜುನಾ ?

( ೨೬ ). ಉತ್ಪತ್ತ್ಯದಲ್ಲಿ ಶುಕ್ಲಶೋಣಿತದಿಂದಾದ ಲಜ್ಜೆ ಸಾಲದೆ ? ಅಂತು ಬಲಿದ ಸಪ್ತಧಾತುವಿನ ನರಕ ದೇಹದೊಳಗಿಪ್ಪ ಹೇಸಿಕೆ ಸಾಲದೇ ? ಮತ್ತೆಯೂ ಪಾಪಂಗಳ ಮಾಡಿ ದುರಿತಗಳ ಹೊರೆವ ಎಗ್ಗತನವೇತಕಯ್ಯ ? ಕಾಲನಕಯ್ಯಲ್ಲಿ ಬಡಿಸಿಕೊಂಡು ನರಕಕ್ಕಿಳಿವುದು ವಿಧಿಯ್ಯೋ ? ಎಲೇ ಮನುಜಾ, ಒತ್ತೊತ್ತೆಯ ಜನನವ ಗೆಲುವಡೆ ಕರ್ತನ ಪೂಜಿಸು ನಮ್ಮ ಕೂಡಲಸಂಗಮದೇವನ.

## ಇಷ್ಟಲಿಂಗವು ಪ್ರಾಣಲಿಂಗವೆಂದು ಭಾವಿಸಿ ಪೂಜಿಸು.

( ೧ ). ಪ್ರಾಣಲಿಂಗವ ಪರಲಿಂಗವ ಮಾಡಿ, ಇಷ್ಟವ ಪೂಜಿಪ ಕಷ್ಟವ ನೋಡಾ. ತೊಟ್ಟಿಲ ಶಿಶುವಿಗೆ ಜೋಗುಳವಲ್ಲದೆ, ಹೊಟ್ಟೆಯ ಶಿಶುವಿಗೆ ಜೋಗುಳ ಉಂಟೇ ? ಬಯುಲಾಸೆ ಹಾಸ್ಯವಾಯಿತ್ತು. ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು, ಮಾಣು.

**ಅರ್ಥ:**—ಅಂತರಂಗದಲ್ಲಿ ನೆಲಸಿಪ್ಪ ಚಿಲ್ಲಿಂಗವ ಭಿನ್ನ ಲಿಂಗವಮಾಡಿ, ಪ್ರಾಣಲಿಂಗವ ಬಿಟ್ಟು, ಇಷ್ಟಲಿಂಗವೇ ಪರವಾಗಿ ಪೂಜಿಸುವ ಪೂಜೆಯು ಕ್ಷೀಣ ಕಂಡ್ಯಾ. ಹುಟ್ಟಿದ ಶಿಶುವಿಂಗೆ ಎಣ್ಣೆ, ಬೆಣ್ಣೆ, ಎಳೆವಾಲು, ಕುಚ ಕ್ಷೀರವನ್ನು ಕೊಟ್ಟು ತೊಟ್ಟಿಲೊಳಿರಿಸಿ, ಜೋ, ಜೋ, ಎಂದು ಜೋಗುಳವಾಡಿದರೆ ಒಡಂಬಡುವುದ,

ಲ್ಲದೆ, ಹೊಟ್ಟೆಯೊಳಗಿನ ಶಿಶುವಿಗೆ ಜೋಗಳವಾಡಿದರೆ ಹಾಸ್ಯವ ಮಾಡುವರೆಂಬ ಹಾಗೆ ಅಂತರಂಗದ ಪ್ರಾಣಲಿಂಗವನೇ ಇಷ್ಟಲಿಂಗವಾಗಿ ಪಡೆದುಕೊಂಡು, ಅಷ್ಟವಿಧಾರ್ಚನೆಯಿಂ ಪೂಜೆಯ ಮಾಡಿ, ಕಂದವೃತ್ತ ಗದ್ಯ ಪದ್ಯಂಗಳಿಂದ ಸ್ತೋತ್ರವಮಾಡಲು ಒಡಂಬಡುವದಲ್ಲದೆ, ಇಷ್ಟಲಿಂಗವನು ಬಿಟ್ಟು, ಪ್ರಾಣ ಲಿಂಗಕ್ಕೆ ನಿರ್ಗುಣ ಪೂಜೆಯಿಂದಾರಾಧಿಸಿ ಸ್ತೋತ್ರವ ಮಾಡಲು, ಲಿಂಗಸಂಬಂಧ ವಳವಡುವದೇ ? ನಿರಾಕಾರವಾದ ಲಿಂಗದಲ್ಲಿ ಕೂಡಬೇಕೆಂಬ ಕಾಂಕ್ಷೆಯು ನಗೆ ಗೆಡೆಯಾಯಿತ್ತು. ಅವರಿಗೆ ಲಿಂಗಕರುಣವಿಲ್ಲ, ಇಲ್ಲ ಉಂಟೆಂಬ ಮಾತನು ತಾಳು, ತೆಗೆ, ಬಿಡು ಎಂಬುದರ್ಥ.

(೨). ತಿಲದ ಮರೆಯ ತೈಲವನರೆದು ಕಾಂಬತೆರನಂತೆ, ಫಲದ ಮರೆಯ ರಸವ ಹಿಳಿದು ಕಾಂಬಸವಿಯ ರುಚಿಯಂತೆ, ತೆರೆಯ ಮರೆಯ ರೂಪ ತೆಗೆದು ಕಾಂಬಂತೆ, ಇಷ್ಟದ ಮರೆಯಲ್ಲಿರ್ದ ದೃಷ್ಟವ ಉಭಯ ನಿಶ್ಚಯಿಸಿದಲ್ಲಿ ಪ್ರಾಣಲಿಂಗ ಸಂಬಂಧಿ ನಿಃಕಳಂಕ ಮಲ್ಲಿಕಾರ್ಜುನಾ.

(೩). ಕ್ರಿಯೆ ಹಿಡಿದಲ್ಲಿ ಸಂದೇಹಕ್ಕೊಳಗಾಗಿ, ನಿಃಕ್ರಿಯೆ ಎಂದಲ್ಲಿ, ಆತ್ಮಂಗೆ ಗೊತ್ತುಗಾಣದೆ, ಫಲವಿಲ್ಲದ ವೃಕ್ಷದ ಹೂವ ಕಂಡು, ವಿಹಂಗಕುಲಚರಿ ಸದೆ ಮಚ್ಚಿದಂತೆ, ಕಡೆಯಲ್ಲಿ ಹೊಲಬುಗೆಡದೆ, ಅರಿನಿಜವಸ್ತು ಒಂದೆಂದು ಕುರಿತ ಕುರುಹಿನಲ್ಲಿ ಕುಲಗೆಡದೆ ಕೂಡುವೀರ ಬೀರೇಶ್ವರ ಲಿಂಗವಾ.

**ಅರ್ಥ**:—ಸಾಕಾರ ಮೂರ್ತಿಯಾದ ಇಷ್ಟಲಿಂಗದ ಕ್ರಿಯನು ದೃಢವಿ ಡಿದಲ್ಲಿ ಅಂಗವು ಬೇರೆ, ಲಿಂಗವು ಬೇರೆ, ಎಂಬ ಸಂಕಲ್ಪಕ್ಕೊಳಗಾಗಿ ಅಜ್ಞಾನ ದಿಂದ ಅಹಂಬ್ರಹ್ಮವೆಂದು ನುಡಿದಲ್ಲಿ ಆತ್ಮನಿಗೆ ಗೊತ್ತಾದ ಇಷ್ಟಲಿಂಗದ ಕ್ರಿಯ ಲ್ಲದೆ ಪ್ರಾಣಲಿಂಗದಲ್ಲಿ ಕೂಡುವ ಕೂಟವರಿಯಬಾರದು. ಪ್ರಯೋಜನವಲ್ಲದ ಬೂರಲದ ಮರದ ಹೂವ ನೋಡಿ ಗಿಳಗಳ ಸಮೂಹ ಮುಂದಕ್ಕೆಯ್ದದೆ, ಮಮ ಕರಿಸಿಕೊಂಡಿರ್ದ ಹಾಗೆ ದ್ವೈತಾದ್ವೈತಿಗಳ ಆಚರಣೆ ವ್ಯರ್ಥವಾಯಿತ್ತು. ಆಚರ ಣೆಯ ಅಂತರದಲ್ಲಿ ಶಿವತತ್ವಕ್ಕೆ ಭಿನ್ನವಾಗದೆ, ಒಂದೇ ಪರಬ್ರಹ್ಮವೇ ಅಂತರಂಗ ಬಹಿರಂಗದಲ್ಲಿ ಇಷ್ಟಲಿಂಗ ಪ್ರಾಣಲಿಂಗವಾಗಿಪ್ಪುದೆಂದು ತಿಳಿ. ಅಂಗದಲ್ಲಿ ಕುರು ಹಿಟ್ಟ ಇಷ್ಟಲಿಂಗದಲ್ಲಿ ಅಭಿನ್ನ ಕ್ರಿನಿಷ್ಠವಾಗದೆ ಮಹಾಲಿಂಗದಲ್ಲಿ ಸಮರಸವಾ ಗದೆಂಬುದರ್ಥ.

(೪). ಸಕಲವ ಪೂಜಿಸಿಹೆನೆಂಬವಂಗೆ ಸಕಲವನು ಲಿಂಗದಲ್ಲಿಯೇ ಪೂಜಿಸಬೇಕು. ನಿಃಕಲವ ಪೂಜಿಸಿಹೆನೆಂಬವಂಗೆ ನಿಃಕಲವನು ಲಿಂಗದಲ್ಲಿಯೇ ಪೂಜಿಸಬೇಕು. ಅದೆಂತೆಂದೊಡೆ ಸಕಲ ನಿಃಕಲಾತ್ಮನು, ಸಕಲ ನಿಃಕಲಾತೀತನು ಲಿಂಗಾರ್ಚನೆಯಿಂದ ಪರ ಒಂದು ಇಲ್ಲಾಗಿ ಒಳಹೊರಗೆಂಬ ಭಾವ ಅಳಿದುಳಿದ ಶರಣನ ಅಂತರಂಗ ಬಹಿರಂಗಭರಿತನಾಗಿಹನು ಶಿವನು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

---

## ಯಾವಾಗಲೂ ಲಿಂಗಧಾರಕನಾಗಿ ಸಾಮರಸ್ಯವನ್ನು ಹೊಂದುವ ವರೆಗೂ ಅದನ್ನು ಪೂಜಿಸು.

(೧). ಸೂತ್ರದ ಸಂಚದಿಂದ ಉಭಯಬೊಂಬೆ ನಡೆದು ಹೊಡೆದಾಡಿ ಕೆಡೆದ ಮತ್ತೆ ಸಂಚದ ನೂಲು ಅಲ್ಲಿಗೆ ಲಕ್ಷ. ಇಷ್ಟಪ್ರಾಣ ಒಡಗೂಡಿದ ಮತ್ತೆ, ಕೊಟ್ಟೆಹೆ, ಕೊಂಡಿಹೆನೆಂಬ ಅರಿವು ದೃಷ್ಟವ ಕಂಡದರಲ್ಲಿ ನಷ್ಟ. ಇಂತೀ ಭೇದಂಗಳಲ್ಲಿ ವೇಧಿಸುವನ್ನಕ್ಕರ, ವೀರ ಶೂರ ರಾಮೇಶ್ವರ ಲಿಂಗವ ಉಜ್ಜುತ್ತ ಒರಿಸುತ್ತ ತೊಳೆಯುತ್ತ ಹಿಳಿಯುತ್ತಾ ಪೂಜಿಸಿ ಆಳುತ್ತಾ ಇರಬೇಕು.

**ಅರ್ಥ:**—ನೂಲಿನ ಉಳುಮೆಯಿಂದ ಎರಡು ಬೊಂಬೆಗಳು ಒಂದ ಕ್ಕೊಂದು ಇದಿರಾಗಿ, ಚರಿಸಿ, ಮಥನಿಸಿ ಆಟ ಮುಗಿದು, ಪೆಟ್ಟಿಗೆಯ ಕಟ್ಟಿದ ಬಳಿಕ, ಉಳುಮೆಯುಲಾದವು, ಅಲ್ಲಿಗೆ ಮುಗಿಯಿತ್ತು, ಎಂಬ ಹಾಗೆ ಇಷ್ಟಲಿಂಗ ದಲ್ಲಿ ಲಿಂಗಪ್ರಾಣಿಯಾದ ಶರಣನ ಅಂಗವು ಸಮರಸವಾದ ಬಳಿಕ ಸಕಲ ಪದಾರ್ಥವ ಲಿಂಗಕ್ಕರ್ಪಿಸಿ ಆ ಲಿಂಗ ಪ್ರಸಾದವ ಕೊಳಬೇಕೆಂಬ ಜ್ಞಾನವು ಆದೃಷ್ಟವ ಕಂಡಹಾಗೆ ಆ ಲಿಂಗದಲ್ಲಿಯೇ ನಿಷ್ಪತ್ತಿಯಾಗಿಪ್ಪದು. ಇಂತೀ ಜ್ಞಾನಕ್ರಿಗಳಿಂದ ಅಂಗವು ಲಿಂಗದಲ್ಲಿ ಕೂಡುವ ಪರಿಯಂತರ, ಇಷ್ಟಲಿಂಗವನು ಬೆರಳುಗಳಿಂದ ತಿಕ್ಕುತ್ತ, ಅರಿವೆಯ ಬತ್ತಿಗಳಿಂದ ಒರಿಸುತ್ತ, ಮಜನಕ್ಕೆರೆವುತ್ತ, ದ್ರವವನಾರಿಸುತ್ತ ಅಷ್ಟವಿಧಾರ್ಚನೆಯಿಂದರ್ಚಿಸಿ, ಶಿವೋಹಂ, ಶಿವೋಹಂ, ಎಂದು ಸ್ತೋತ್ರವ ಮಾಡುತ್ತಿರಬೇಕೆಂಬುದರ್ಥ.

(೨). ಲಿಂಗವುಳ್ಳನ್ನಕ್ಕ ಶಿವಲಿಂಗ ಪೂಜೆಯ ಮಾಡಲೇ ಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತವ ಮಾಡಿಕೊಳಲೇ

ಬೇಕು. ಇದೇ ಅರುವಿನ ಬಿತ್ತು, ಜ್ಞಾನದ ಗೊತ್ತು, ಸರ್ವಮಯದ ಯುಕ್ತಿ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವ ಶಕ್ತಿ.

(೩). ಎನ್ನ ಪ್ರಾಣದೊಳಗಿರ್ದ ಪರಮ ಕಲೆಯು ತೆಗೆದು ಶಿವಲಿಂಗ ಮೂರ್ತಿಯ ಮಾಡಿ ಎನ್ನ ಕರಸ್ಥಲಕ್ಕೆ ಕೊಟ್ಟನಯ್ಯ ಶ್ರೀಗುರು. ಆ ಲಿಂಗವ ಸರ್ವಾವಸ್ಥೆಯಲ್ಲಿಯೂ ಅಂಗವ ಬಿಟ್ಟು ಅಗಲಲಾಗದೆಂದು ನಿರೂಪಿಸಿದನಯ್ಯ ಶ್ರೀಗುರು. ಇದು ಕಾರಣ ಅಂಗವ ಬಿಟ್ಟು ಲಿಂಗವು ನಿಮಿಷಾರ್ಧವಗಲಿದರೆ, ನಾಯಕ ನರಕ ತಪ್ಪದೆಂದು ನಿರೂಪಿಸಿದನಯ್ಯ ಶ್ರೀಗುರು. ಇದು ಕಾರಣ ಅಂಗವ ಬಿಟ್ಟು ಲಿಂಗವನಗಲಲಾಗದಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೪). ಕರ್ಮನಾಸ್ತಿ ಎಂಬೆ, ಅನಾಸ್ತಿ ಎಂಬೆ. ಜ್ಞಾನ ಕೊಬ್ಬಿನಲು ಲಿವೆ. ಉಲಿದಂತೆ ನಡೆವೆ. ಸಂಗಡ ಸಹಿತ ಕರಸ್ಥಲಕ್ಕೆ ಬಂದು ನೀನು ಬಯಲಾಗೆ, ಎನ್ನನು ಬಯಲು ಮಾಡಿದೆ ಗುಹೇಶ್ವರಾ.

**ಅರ್ಥ:**— ಆಚರಿಸುವ ಸತ್ಕ್ರಿಯಾಕರ್ಮಂಗಳೆಲ್ಲವೂ ನಾಸ್ತಿಯಾಯಿತ್ತೆಂಬುದೀಗ ಕರ್ಮನಾಸ್ತಿಯಾಯಿತ್ತೆಂಬ ಶಬ್ದಕ್ಕರ್ಥ. ಆ ಸತ್ಕ್ರಿಯಾಕರ್ಮದ ಅದ್ವೈತವನರಿದೆನೆಂದು ದುರ್ವಿವೇಕದಿಂ ಬಿಡದೆ, ಆ ಸತ್ಕ್ರಿಯಾಕರ್ಮಂಗಳೆಲ್ಲವೂ ಲಿಂಗಪ್ರಭೆಯೊಳಡಗಿ, ದಗ್ಧಪಟ ನ್ಯಾಯದಂತೆ ಶಿವಲಿಂಗಕ್ರಿಗಳಾಗಿರ್ದವೆಂಬುದೀಗ ಅನಾಸ್ತಿ ಎಂಬೆನೆಂಬ ಶಬ್ದಕ್ಕರ್ಥ. ಇಂತಪ್ಪ ಸುಜ್ಞಾನಕ್ರಿಯಾವರ್ತನೆಯನು ಇದಿರಿಂಗೆ ನುಡಿದು ತೋರದೆ, ತನ್ನ ಲೀಲಾವಿನೋದದಿಂ ತನಗತಿ ನುಡಿದೆನೆಂಬುದೀಗ ಜ್ಞಾನಕೊಬ್ಬಿನಲುಲಿವೆನೆಂಬ ಶಬ್ದಕ್ಕರ್ಥ. ಆ ನುಡಿಯಂತೆ ಎರಡಿಲ್ಲದೆ ನಡೆವೆನೆಂಬುದೀಗ, ಆ ನುಡಿಯಂತೆ ನಡೆವೆನೆಂಬ ಶಬ್ದಕ್ಕರ್ಥ. ಇಂತು ನಡೆನುಡಿ ಒಂದಾದ ಶರಣನ ಸರ್ವಾಂಗದೊಳಗೆ ಲಿಂಗವು ಸಮರಸವಾಗಿ ಕರಸ್ಥಲದಲ್ಲಿ ಲಿಂಗವು ಕರುಹಳಿದ ಕುರುಹಾಗಿ ನಿಂದಿತ್ತೆಂಬುದೀಗ ಸಂಗಡ ಸಹಿತ ಕರಸ್ಥಲಕ್ಕೆ ಬಂದು ಎಂಬ ಶಬ್ದಕ್ಕರ್ಥ. ಇಂತಪ್ಪ ನಿರ್ಣಯವುಳ್ಳ ಶರಣಂಗೆ ನಿರ್ವಯಲ ಸಮಾಧಿಯುಳವಡಬೇಕೆಂಬುದೀಗ ನೀನು ಬಯಲಾಗೆ ಎನ್ನನೂ ಬಯಲುಮಾಡೆ ಎಂಬ ಶಬ್ದಕ್ಕರ್ಥ.

# ಲಿಂಗಪೂಜೆಯು ಸದಾಚಾರವಿಲ್ಲದಿದ್ದರೆ ವ್ಯರ್ಥವು.

(೧). ಸದಾಚಾರ ಸದ್ಭಕ್ತಿ ಇಲ್ಲದವರ ನಾನೊಲ್ಲೆನಯ್ಯ. ಅವರಾರಾಧನೆ ದಂಡ. ನಿಚ್ಚ, ನಿಚ್ಚ, ಪ್ರಾಯಶ್ಚಿತ್ತರನೊಲ್ಲನಯ್ಯ ಕೂಡಲಸಂಗಮದೇವಾ ಭೂಮಿಭಾರಕರಾ.

(೨). ನೂರನೋದಿನೂರಕೇಳಿದರೇನು ? ಆಶೆಹರಿಯದು, ರೋಷಬಿಡದು. ಮಜ್ಜನಕ್ಕೆರೆದು ಫಲವೇನು ? ಮಾತಿನಂತೆ ಮನವಿಲ್ಲದ ಜಾತಿ ಡೊಂಬರ ನೋಡಿ ನಗುವ ನಮ್ಮ ಕೂಡಲಸಂಗಮದೇವಾ.

(೩). ಸಜ್ಜನನಾಗಿ ಮಜ್ಜನಕ್ಕೆರೆವೆ. ಶಾಂತನಾಗಿ ಪೂಜೆಯ ಮಾಡುವೆ. ಸಮರತಿಯಿಂದ ನಿಮ್ಮ ಹಾಡುವೆ. ಚನ್ನಮಲ್ಲಿಕಾರ್ಜುನಯ್ಯ ನಿಮ್ಮನಗಲದ ಪೂಜೆ ಅನುವಾಯಿತ್ತೆನಗೆ.

(೪). ಕೋಪಿ ಮಜ್ಜನಕ್ಕೆರೆದರೆ ರಕ್ತದಧಾರೆ. ಪಾಪಿ ಹೂವನೇರಿಸಿದರೆ, ಮಸೆದಾಯುಧದ ಗಾಯ. ಕೋಪರನಾರನೂ ಕಾಣೆ, ಮಾದರ ಚನ್ನಯ್ಯನಲ್ಲದೆ. ಕೋಪರನಾರನೂ ಕಾಣೆ, ಡೋಹರ ಕಕ್ಕಯ್ಯನಲ್ಲದೆ. ವ್ಯಾಪ್ತಿಯುಳ್ಳವ ನಮ್ಮ ಮಡಿವಾಳ ಮಾಚಯ್ಯ. ನಿಮ್ಮ ಪತ್ತಿಗರಿವರಯ್ಯ ಕೂಡಲಸಂಗಮದೇವಾ.

(೫). ನುಡಿಯಲ್ಲಿ ಎಚ್ಚತ್ತು, ನಡೆಯಲ್ಲಿ ತಪ್ಪಿದರೆ, ಹಿಡಿದಿರ್ಪ ಲಿಂಗವು ಘಟಸರ್ಪ ನೋಡಯ್ಯ. ನುಡಿಯಲು ಬಾರದು. ನಡೆಯಲು ಬಾರದು. ಲಿಂಗದೇವನೇದಿವ್ಯ ಅಯ್ಯಾ. ಬಡವನ ಕೋಪ ದವಡೆಗೆ ಮೃತ್ಯುವಾದಂತೆ, ಕಡೆಗೆ ದಾಂಟದು ಕಾಣಾ ಕೂಡಲಸಂಗಮದೇವಾ.

(೬). ಕೂಡಿದ ಧನವನೆಲ್ಲವನು ಗುರುಲಿಂಗ ಜಂಗಮಕ್ಕೆ ವಂಚನೆಯ ಮಾಡಿ ಒಳಗಿಟ್ಟುಕೊಂಡು, ನೆಲನತೋಡಿ ಬಚ್ಚಿಟ್ಟುಕೊಂಡು, ಹಲವು ತೆರದ ಆಭರಣಂಗಳಂ ಮಾಡಿಸಿ, ಕರ ಚರಣ ಉರ ಕರ್ಣದೊಳಗಿಟ್ಟು, ಮತ್ತಿಷ್ಟು ಬದುಕಾಗಲೆಂದು ತನ್ನ ಕೈಯ್ಯೊಳಗಿನ ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯಂ ಮಾಡುವ ಲಿಂಗಪೂಜೆಯ ಪರಿ ಎಂತೆಂದೊಡೆ, ಆ ಭಕ್ತನು ಪಂಚಾಭಿಷೇಕದಿಂದ ಲಿಂಗಕ್ಕೆ ಮಜ್ಜನವ ನೀಡಿದರೆ, ಲಿಂಗದ ಚಿತ್ತದಲ್ಲಿ, ಸುಣ್ಣದ ನೀರನೆತ್ತಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಪನ್ನೀರಿನಿಂದ ಮಜ್ಜನವ ನೀಡಿದರೆ, ಲಿಂಗದ

ಚಿತ್ತದಲ್ಲಿ ತಣ್ಣೀರೊಳಗೆದ್ದಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತ ವಿಭೂತಿ ಧರಿಸಿದರೆ ಲಿಂಗದ ಚಿತ್ತದಲ್ಲಿ ಬೂದಿಯ ಬೊಕ್ಕಣ ಕಟ್ಟಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಗಂಧವ ಧರಿಸಿದರೆ, ಅಂಗದ ಚಿತ್ತದಲ್ಲಿ ಚಂಡಿಟ್ಟು ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಅಕ್ಷತೆಯ ನೇರಿಸಿದರೆ, ಲಿಂಗದ ಚಿತ್ತದಲ್ಲಿ ಕಲ್ಲು ಹೊರಿಸಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಪುಷ್ಪವ ಧರಿಸಿದರೆ, ಲಿಂಗದ ಚಿತ್ತದಲ್ಲಿ ಹೇರು ಹೊರಿಸಿದಂತಾಯಿತ್ತಯ್ಯ. ಭಕ್ತನು ಧೂಪವ ಬೀಸಿದರೆ ಲಿಂಗದ ಚಿತ್ತದಲ್ಲಿ ಅರಗವನಿಕ್ಕಿ ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಧೂಪಾರತಿಯ ನೆತ್ತಿದರೆ, ಲಿಂಗದ ಚಿತ್ತದಲ್ಲಿ ಪಂಜುಗಳ್ಳರು ಬಂದು ಮೋರೆಯ ಸುಟ್ಟು ಬಾಧಿಸಿದಂತಾಯಿತ್ತಯ್ಯ. ಆ ಭಕ್ತನು ಸ್ತೋತ್ರ ಮಂತ್ರವ ನುಡಿಸಿದರೆ, ಲಿಂಗದ ಚಿತ್ತದಲ್ಲಿ ಕರ್ಣದೊಳು ತೊನಸಿ ಹೊಕ್ಕು ಗೋಳಿಟ್ಟು ಬಾಧಿಸಿದಂತಾಯಿತ್ತಯ್ಯ. ಇಂತಪ್ಪ ಲಿಂಗಬಾಧಕರನ ಲಿಂಗ ಪೂಜಕರೆನಬಹುದೇ? ಆತನ ಅಂಗಣವ ಮೆಟ್ಟಬಹುದೇ? ಇದರ ಇಂಗಿತವ ನಿಜಭಾವವುಳ್ಳ ಶರಣನು ನೀವೇ ತಿಳಿದು ನೋಡಿರೆಂದಾತ ನಮ್ಮ ಅಂಬಿಗರ ಚೌಡಯ್ಯನು.

(೭). ಶಮೆ ದಮೆಗಳಲ್ಲಿ ತ್ರಿಕರಣದಿಂದ ಶುದ್ಧವಾಗದ ಪರಿಯಂತರ ಪೂಜೆಯೆಲ್ಲಿಹುದು? ಅವರ ಮಹಿಮೆ ಅವರ ಗುಣವು ಪೂಜೆಯಲ್ಲಿ ಕಾಣಬಹುದಲ್ಲದೆ ಬೇರೆ ಅರಸಲುಂಟೇ ತರುಣ ಸಂಗಮಲಿಂಗದೇವಾ?

(೮). ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ. ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ. ಮಾಡುವ ನೀಡುವ ನಿಜಗುಣವುಳ್ಳವರ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ.

(೯). ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ. ಮಾಡಿದೆನನ್ನದಿರಾ ಜಂಗಮಕ್ಕೆ. ಮಾಡಿದೆನೆಂಬುದು ಮನದಲ್ಲಿ ಹೊಳೆಯದಿದ್ದರೆ, ಬೇಡಿದ್ದನೀವ ಕೂಡಲಸಂಗಮದೇವಾ.

(೧೦). ಜಾತಿಗಾರನ ಕಾಲು ಮುಳ್ಳು ತಾಗಿ ನೊಂದಿತ್ತೆಂಬಂತೆ, ಸೂನೆಗಾರನ ಮನೆಯಲ್ಲಿ ಹೆಣಹೋಗಿ ಅಳುವಂತೆ, ಕನ್ನಗಳ್ಳನ ಮನೆಯಲ್ಲಿ ಬಟ್ಟಲು ಹೋಗಿ ಮರುಗುವಂತೆ, ಠಕ್ಕನ ಪೂಜೆಗೆ ಮೆಚ್ಚುವನೇ ನಮ್ಮ ಗುಹೇಶ್ವರನು?

(೧೧). ಕಂಡಿಹರೆಂದು ಕಣ್ಣಮರೆಮಾಡಿದ. ಕೇಳಿಹರೆಂದು ಕಿವಿಗೆ ಮರೆಮಾಡಿದ. ಮುಟ್ಟಿಹರೆಂದು, ಕೈಗೆ ಮರೆಮಾಡಿದ. ಸೋಂಕಿಹರೆಂದು, ತನುವಿಂಗೆ ಮರೆಮಾಡಿದ. ನೆನೆದಿಹರೆಂದು ಮನಕ್ಕೆ ಮರೆಮಾಡಿದ. ಅರಿದಿಹರೆಂದು ಅಂತರಂಗದಲ್ಲಿ ಮರೆಮಾಡಿದ. ಪೂಜಿಸಿಹರೆಂದು ಕ್ರಿಗೆ ಮರೆಮಾಡಿದ. ಕೂಡಲಸಂಗಮದೇವರೊಡನೆ ಅಹಂಕಾರ ಮಾಡಿ, ಕೆಟ್ಟ ಕೇಡನೇನೆಂದು ಪಮಿಸುವೆನು ?

(೧೨). ಅಶನಕುಂದದು. ವ್ಯಸನಮಾಣದು, ಅರ್ಥವಡಗದು, ವ್ಯವಹಾರ ಮಾಣದು, ಮುಜ್ಜನಕ್ಕೆರೆವೆನೆಯ್ಯ. ಕಾಯವಿಕಾರಿಯಾನು, ಮಜನಕ್ಕೆರೆವೆನಯ್ಯ! ಜೀವವಿಕಾರಿಯಾನು, ಮಜ್ಜನಕ್ಕೆರೆವೆನಯ್ಯ! ಶರಣನಲ್ಲ, ಲಿಂಗೈಕ್ಯನಲ್ಲ. ಕೂಡಲಸಂಗಮದೇವರಲ್ಲಿ ಅಂತರಾಭ್ಯಂತರ ನಾನಯ್ಯ.

(೧೩). ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯ. ಮನದ ತಾವು ಸ ಬಿಡದು. ಮನದ ಕಪಟ ಬಿಡದು. ಶಿವಶರಣೆಂಬುದು ಅಳವಡದಯ್ಯ. ಎನ್ನ ಮನದಲ್ಲಿ ಎರಡುಳ್ಳನ್ನಕ್ಕರ ಕೂಡಲಸಂಗಮದೇವರೆಂತೊಲಿವ?

(೧೪). ಕೆಲಕ್ಕೆ ಶುದ್ಧನಾದೆನಲ್ಲದೆ, ಮನಕ್ಕೆ ಶುದ್ಧನಾಗೆನಯ್ಯ. ಕೈಮುಟ್ಟಿ ಪೂಜಿಸುವಡೆ, ಎನ್ನ ಕೈಶುದ್ಧಿ ಇಲ್ಲವಯ್ಯ. ಮನಮುಟ್ಟಿ ಪೂಜಿಸುವಡೆ, ಎನ್ನ ಮನ ಶುದ್ಧವಿಲ್ಲವಯ್ಯ. ಭಾವಶುದ್ಧವಾದಡೆ ಕೂಡಲಸಂಗಮದೇವನಿತ್ತ ಬಾ ಎಂದೆತ್ತಿಕೊಳ್ಳನೇಕಯ್ಯ?

(೧೫). ಹಸಿವಾದಡುಂಬುದನು ಸತಿಯು ಸಂಭೋಗವನು ಆನಾಗಿ ನೀ ಮಾಡೆಂಬುವರುಂಟೇ? ಮಾಡುವದು ಮಾಡುವದು ಮನಮುಟ್ಟಿ. ಮಾಡುವದು ಮಾಡುವದು ತನುಮುಟ್ಟಿ. ತನುಮುಟ್ಟಿ, ಮನಮುಟ್ಟದಿರ್ದರೆ, ಕೂಡಲಸಂಗಮದೇವನೇತರಲ್ಲಿ ಮೆಚ್ಚುವನು?

(೧೬). ತನ್ನಾಶ್ರಯದ ರತಿಸುಖವನು ತಾನುಂಬ ಊಟವನು ಬೇರೆ ಮತ್ತೊಬ್ಬರ ಕೈಯ್ಯಲ್ಲಿ ಮಾಡಿಸಬಹುದೇ? ತನ್ನ ಲಿಂಗಕ್ಕೆ ತಾ ಮಾಡುವ ನಿತ್ಯನೇಮವನು ತಾ ಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೈಯ್ಯಲ್ಲಿ ಮಾಡಿಸಬಹುದೇ? ಕೆಮ್ಮನೆ ಉಪಚಾರಕ್ಕೆ ಮಾಡುವರಲ್ಲದೆ, ನಿಮ್ಮನೆತ್ತಬಲ್ಲರು ಕೂಡಲಸಂಗಮದೇವಾ?

(೧೭). ಸತಿಯರ ಸಂಗವನು ಅತಿಶಯ ಗ್ರಾಸವನು ಪೃಥ್ವಿಗೀಶ್ವರ ಪೂಜೆಯನು ಅರಿವುಳ್ಳರೆ ಹೆರರ ಕಯ್ಯಿಂದ ಮಾಡಿಸುವರೇ ರಾಮನಾಥಾ?

(೧೮). ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು. ಮನಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು. ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು. ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು. ಭಾವಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ ನೀನು. ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು. ತ್ರಿಕರಣಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು. ಹೃದಯಕಮಲವರಳದವರಲ್ಲಿ ಇರಲೊಲ್ಲೆಯಯ್ಯ ನೀನು. ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ ಹೇಳಾ ಚನ್ನಮಲ್ಲಿಕಾರ್ಜುನಯ್ಯ?

---

## ತಾಮಸ ಲಿಂಗಪೂಜೆಯನ್ನು ಬಿಡು.

(೧.). ಮೊಟ್ಟೆ ಮೊಟ್ಟೆ ಪುಷ್ಪವ ಪತ್ರೆಯ ತಂದು, ಒಟ್ಟೆ ಒಟ್ಟೆ ಲಿಂಗವ ಪೂಜಿಸಿದಡೇನು, ತನು, ಮನ, ಧನವ ಕೊಟ್ಟು ತನುವ ಹಂಗದನ್ನಕ್ಕರ? ಹುಸಿಕಳವು ಪರದಾರ ವ್ಯಾಪಾರದಲ್ಲಿ ಹರಿದಾಡುವ ಮರುಳುಬುದ್ಧಿಯ ದುರಾಚಾರಿಗಳಿಗೆ ದೂರವಾಗಿಪ್ಪನು ನೋಡಾ ನಮ್ಮ ಅಖಂಡೇಶ್ವರಾ.

(೨). ಅಗ್ಗವಣೆ, ಪತ್ರೆ, ಪುಷ್ಪ, ಧೂಪ ನಿವಾಳೆಯಲ್ಲಿ ಪೂಜಿಸಿ, ಪೂಜಿಸಿ ಬಳಲುತ್ತಿಪ್ಪಾರೆ. ಏನೆಂದರಿಯರು, ಎಂತೆಂದರಿಯರು. “ ಜನಮರುಳೋ, ಜಾತ್ರೆ ಮರುಳೋ ” ಎಂಬಂತೆ ಎಲ್ಲರೂ ಪೂಜಿಸಿ, ಏನನೂಕಾಣದೆ, ಲಯಕ್ಕೊಳಗಾಗಿ ಹೋದರು ಗುಹೇಶ್ವರಾ.

(೩). ಮಜ್ಜನಕ್ಕೆರೆದು ಫಲವಬೇಡುವರಯ್ಯ. ತಮಗೆಲ್ಲಿಯದೋ ಆ ಫಲವು, ಸಿತಾಳಕ್ಕಲ್ಲದೆ? ಪತ್ರೆಪುಷ್ಪದಲ್ಲಿ ಪೂಜಿಸಿ ಫಲವ ಬೇಡುವರು. ತಮಗೆಲ್ಲಿಯದೋ ಆ ಫಲವು, ಗಿಡಗಳಿಗಲ್ಲದೆ? ಸುಯಿಧಾನವನರ್ಪಿಸಿ ಪ್ರಸಾದದ ಫಲವ ಬೇಡುವರು. ತಮಗೆಲ್ಲಿಯದೋ ಆ ಫಲವು, ಹದಿನೆಂಟು ಧಾನ್ಯಕ್ಕಲ್ಲದೆ? ಲಿಂಗದೊಡವೆಯ ಲಿಂಗಕ್ಕೆ ಕೊಟ್ಟು, ಫಲವ ಬೇಡುವ ಸರ್ವನ್ಯಾಯಿಗಳನೇನೆಂಬೆ ಗುಹೇಶ್ವರಾ?

(೪). ಅಷ್ಟವಿಧಾರ್ಚನೆ ಷೋಡಶೋಪಚಾರವ ಮಾಡುವ ಹುಸ್ಸಿನಲ್ಲಿ ಬೆಂದೆನಯ್ಯಾ. ಗುರುವೆಂದರಿಯೆ, ಲಿಂಗವೆಂದರಿಯೆ, ಜಂಗಮವೆಂದರಿಯೆ, ಪ್ರಸಾದವೆಂದರಿಯೆ. ಅನುಬೆಂದೆನಯ್ಯಾ. ಕೂಡಲಸಂಗಮದೇವಾ, ಆನುಮಾಡುವದೆಲ್ಲ ಬರಿಯ ಉಪಚಾರವಯ್ಯಾ.

(೫). ಬಂಡಿತುಂಬ ಪತ್ರಿಯ ತಂದು, ಕಂಡಕಂಡಲ್ಲಿ ಮಜ್ಜನಕ್ಕೆರೆಸಿರಿ. ತಾಪತ್ರಯವ ಕಳೆದು ಪೂಜಿಸಿ. ತಾಪತ್ರಯವ ಲಿಂಗನೊಲ್ಲ. ಕೂಡಲಸಂಗಮದೇವ ಬರಿಯ ಉದಕದಲ್ಲಿ ನೆನೆವನೇ?

(೬). ಅರಕ್ಯಾರು ಬಿತ್ತಿದ ಗಿಡದ ಹೂವನೇ ಕೊಯ್ದು, ಊರಲ್ಲಿ ಕಟ್ಟಿದ ನೀರನೇ ತಂದು, ನಾಡೆಲ್ಲ ನೋಡಲೆಂದು ಪೂಜಿಸುವ ಪುಣ್ಯವು ಆ ಹೂವಿಗೋ, ಆ ನೀರಿಗೋ, ನಾಡೆಲ್ಲ ನೋಡಲೆಂದು ಪೂಜಿಸಿದಾತಗೋ? ಇದನಾನರಿಯೆ. ನೀವೇ ಬಲ್ಲಡೆ, ಹೇಳೆಂದಾತ ನಮ್ಮ ಅಂಬಿಗರ ಚೌಡಯ್ಯನು.

(೭). ಉದಯದಲೆದ್ದು ಗಡಗಡನೆ ನಡುಗುತ ಹೋಗಿ, ಹೂಗಿಡವ ಪತ್ರಿಯ ಕಡಿವ ದೃಢಗೇಡಿಗಳಿರಾ, ನೀವು ಕೇಳಿರಿ. ಅದು ಕಡು ಪಾಪವಲ್ಲದೆ, ನಿಮಗೆ ನಡುಗಿರೋ. ಪರಧನ ಪರಸ್ತ್ರೀಯರಿಗೆ ನಡುಗಿರೋ. ಕೊಲೆ, ಹುಸಿ, ಕಳವು, ಪರದಾರ, ಕಾಂಕ್ಷೆಗೆ ನಡುಗಿರೋ. ಹರನಿಂದೆ ಗುರುನಿಂದೆ ಶಿವನಿಂದೆ ಕೇಳಲಾರೆವೆಂದು ನಡುಗಿರೋ. ಶಿವಾಚಾರಕ್ಕೆ ನಡುಗದೆ, ಮಹಾಚಳಿಗೆ ನಡುಗಿ, ಹೂವಿನ ಗಿಡವ ತಿರಿವ ಕಡುಪಾಪಿಗಳಿರಾ, ನಿಮಗೆ ಮೃಡನ ಪೂಜೆ ಎಲ್ಲಿಯುದೂ ಇಲ್ಲ ನಿಮಗೆ, ಅಖಂಡ ಪರಿಪೂರ್ಣ ಘನಲಿಂಗ ಗುರುಚನ್ನಬಸವೇಶ್ವರ ಸಾಕ್ಷಿಯಾಗಿ.

(೮). ಮರನ ಹೂವ ಕೊಯ್ದು, ಮರಕ್ಕೇರಿಸಿ, ನದಿಯ ಉದಕವ ನದಿಗೆ ಅರ್ಪಿಸಿ, ಕರುವನಗಲಿಸಿ ತಾಯ ಮೊಲೆವಾಲ ಮರುಗಿಸಿ ಕರೆದುಣಬೇಡವೋ. ಕೂಡಲಸಂಗಮ ಮಾಡಿದ ಮಾಯೆ ಹಲಬರ ಬಾಯುಚಿಗೊಸೆದು ಹೋಯಿತ್ತು.

(೯). ಅಗ್ನಿಸ್ತಂಭ ರಕ್ಷೆ ಇದ್ದು, ಮನೆಬೆಂದಿತ್ತಯ್ಯಾ. ಜಲಮುರಿ ಶಂಖ ಇದ್ದು, ಪದ ಹೋಯಿತ್ತಯ್ಯಾ. ಏಕ ಮುಖ ರುದ್ರಾಕ್ಷಿ ಇದ್ದು, ವಿಘ್ನವಾಯಿತ್ತಯ್ಯಾ. ಇವೆಲ್ಲವ ಸಾಧಿಸಿದರೆ ಏನೂ ಇಲ್ಲದಂತಾಯಿತ್ತು ಗುಹೇಶ್ವರಾ.

**ಅರ್ಥ:**—ಲಿಂಗವ ನಂಬಿ ನಿಷ್ಠೆಯಿಂದ ಪೂಜಿಸಿದರೆ, ಅಸಾಧ್ಯವೆಲ್ಲವೂ ಸಾಧ್ಯವಹುದು. ಲಿಂಗವ ನಂಬದೆ, ಏನ ಸಾಧಿಸಿದಡೆಯೂ ಪ್ರಯೋಜನವಿಲ್ಲ ವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ.

(೧೦). ಎಲ್ಲವ ಕಳೆದುಳಿದ ಹೂವ ತಂದು, ಗೆಲ್ಲ ಸೋಲಕ್ಕೊಳಗಾಗದ ನೀರ ತುಂಬಿ, ಕರಣಂಗಳೆಲ್ಲವು ಕಂಗಳ ತುಂಬಿ ನಿಂದು ನೋಡಿ, ಎಂದೂ ತನ್ನಂಗದಿಚ್ಛೆಯನರಿದು, ಮರೆದು ಲಿಂಗವ ಪೂಜಿಸಬೇಕೆಂದ ನಂಬಿಗರಚೌಡಯ್ಯ.

(೧೧). ನಿತ್ಯ ನೇಮಿಗಳಿಗೆ ಹಿಂಜಾವವಾಯಿತ್ತು. ಕೃತ್ಯ ಪೂಜಕರುಗಳಿಗೆ ಕಾಲವಾಯಿತ್ತು. ಆರು ವ್ರತದ ಲಿಂಗಾಂಗಿಗಳು ನಿಮ್ಮ ಇರವ ಶಿವಲಿಂಗದಲ್ಲಿ ಸಂಬಂಧಿಸಿಕೊಳ್ಳಿ. ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗವ ಕೂಡ ಬಲ್ಲಡೆ.

**ಅರ್ಥ:**—ತಪ್ಪದ ಹಾಗೆ ಲಿಂಗ ಪೂಜಾಕ್ರಿಗಳ ಮಾಡುವವರಿಗೆ ಬೆಳಗಾಯಿತ್ತು. ಕೃತ್ಯವಾಗಿ ಮೂರುವೇಳೆ ಐದುವೇಳೆ ಒಂಬತ್ತು ವೇಳೆ ಲಿಂಗಪೂಜೆಯ ಮಾಡುವರುಗಳಿಗೆ ಅವೇಳ್ಯವಾಯಿತ್ತು. ಆಚರಣೆಯು ಷಡ್ವ್ರತವೇ ಅಂಗವಾಗಿವುಳ್ಳ ಲಿಂಗದೇಹಿಗಳು ನಿಮ್ಮಂಗವ ಇಷ್ಟಲಿಂಗದ ಪೂಜಾಕ್ರಿಗಳಲ್ಲಿ ಅಡಗಿಸಿಕೊಳ್ಳಿ. ಚಿತ್ಶಕ್ತಿವಲ್ಲಭನಾದ ಚಿದ್ಘನಲಿಂಗದಲ್ಲಿ ಸಮರಸವಾಗಬಲ್ಲಡೆ ಎಂಬುದರ್ಥ.

(೧೨). ಅಷ್ಟ ವಿಧಾರ್ಚನೆ ಷೋಡಶೋಪಚಾರ ಹುಸಿಕಾಣಿರೇ. ಗಾಣದೆತ್ತಿನಂತೆ ಮೆಟ್ಟಿದ ಹೆಜ್ಜೆಯ ಮೆಟ್ಟುವ ಭಕ್ತನ ಪರಿಯ ನೋಡಾ. ಕೊಂಬಲ್ಲಿ ಐದುವನು, ಕೊಡುವಲ್ಲಿ ನಾಲ್ಕುವನು, ಒಂಬತ್ತರಾದಲ್ಲಿ ಭಕ್ತಿಭಾಗಕಿನ್ನೆಂತೋ? ಮೂರ್ತಿಯನರಿದು ಮೂರ್ತಿವಿಡಿದು ಇರಲರಿಯರು ಮಾರುವರು ಗುರುಲಿಂಗವನು ತ್ರಿವಿಧಕ್ಕೆ ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಇಲ್ಲ ಇಲ್ಲ.

**ಅರ್ಥ:**—ಲಿಂಗಕ್ಕೆ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿ ಫಲಪದಂಗಳ ಪಡೆದು, ಆ ಭೋಗ ತೀರಿದ ಬಳಿಕ ಮುನ್ನಿನಂತೆ ಜನನ ಮರಣಕ್ಕೆ ಬರುತ್ತಿಹರು ಲಿಂಗಭಕ್ತನ ಪರಿ ಇಂತುಟೆಂಬುದೀಗ ಅಷ್ಟವಿಧಾರ್ಚನೆ ಷೋಡಶೋಪಚಾರ ಹುಸಿಕಾಣಿರೇ. ಗಾಣದ ಎತ್ತಿನಂತೆ ಮೆಟ್ಟಿದ

ಹೆಜ್ಜೆಯ ಮೆಟ್ಟುವ ಭಕ್ತನ ಪರಿಯ ನೋಡಾ, ಎಂಬ ಶಬ್ದಕ್ಕರ್ಥ. ಶಿವನ ಐದು ಮುಖಗಳಿಂದ ಹುಟ್ಟುವ ಐದು ತತ್ವಂಗಳೇ ದೇಹವಾಯಿತ್ತು. ಆ ಐದು ತತ್ವಂಗಳೊಳಗೆ ಆಕಾಶಸ್ವರೂಪನೀಗ ಜೀವನು. ಅಂತ ಶಿವನ ಐದು ಮುಖಂಗಳಿಂದ ಒಗೆದ ಐದು ತತ್ವಂಗಳನು ಶಿವನೈದು ಮುಖಕೆ ಪೂಜೆಯ ಮಾಡಿ ಸಮರ್ಪಿಸಲರಿಯದೆ ನಾಲ್ಕು ತತ್ವಕರಣಂಗಳನರ್ಪಿಸಿ ಜೀವಾತ್ಮನನರ್ಪಿಸಲರಿಯರಾದರೆಂಬುದೀಗ ಕೊಂಬಲ್ಲಿ ಐದುವನು ಕೊಡುವಲ್ಲಿ ನಾಲ್ಕುವನು ಎಂಬ ಶಬ್ದಕ್ಕರ್ಥ. ಅಂತು ಲಿಂಗದ ಐದು ಮುಖಕ್ಕೆ ನಾಲ್ಕು ತತ್ವವನರ್ಪಿಸಿ ಒಂದು ಜೀವಾತ್ಮನುಳಿಯಿತ್ತಾಗಿ ಉಳಿದ ಜೀವಾತ್ಮಂಗೆ ಶಿವನಲ್ಲಿ ಕೂಟವಿಲ್ಲದೆ ಹೋಯಿತ್ತೆಂಬುದೀಗ ಒಂಬತ್ತರಲ್ಲಿ ಭಕ್ತಿ ಭಾಗಕಿನ್ನೆಂತೋ ಎಂಬ ಶಬ್ದಕ್ಕರ್ಥ ಅಂತು ಜೀವನ ಸಾಕಾರವ ಶಿವನ ಸಾಕಾರಕ್ಕರ್ಪಿಸಿ ಮುಕ್ತರಾಗಲರಿಯದೆ ಲಿಂಗವ ಪೂಜಿಸಿ ಹೊನ್ನು ಹೆಣ್ಣು ಮಣ್ಣು ಪಡೆದರೆಲ್ಲರೂ ಲಿಂಗವ ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಅಲಂಕರಿಸಿ ಲಿಂಗವ ಬೆಲೆಮಾಡಿ ಮಾರಿ ಹೊನ್ನು ಹೆಣ್ಣು ಮಣ್ಣು ಕೊಂಡು ಭವಕ್ಕೀಡಾದರು ಲಿಂಗಪೂಜಕರು ಅವರಂಗದಲ್ಲಿ ಶಿವನಿಲ್ಲವೆಂಬುದೀಗ ಮೂರ್ತಿವಿಡಿದು ಮೂರ್ತಿಯನರಿಯದ ಮಾರುವರು ಗುರುಲಿಂಗವನು ತ್ರಿವಿಧಕ್ಕೆ ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಇಲ್ಲ ಇಲ್ಲವೆಂಬ ಶಬ್ದಕ್ಕರ್ಥ.

(೧೩). ಕಾಲವಂಚಕನಾಗಿ ಜಂಗಮಕಿಕ್ಕಿದಡೆ, ಕರ್ಮವೇ ತಿಂಬುದು ಉಪಚರಿಸಿ ಕೊಂಬನಾಗಿ, ತ್ರಿಸಂಧಿಯು ಶಿವಪೂಜೆಯು ಮಾಡಿದಡೆ, ಅದು ಹಸಿವಿಲ್ಲದ ಗ್ರಾಸ. ಅಸಮಾಕ್ಷನ ಮುಟ್ಟದು, ಇದು ಹುಸಿಯಲ್ಲವೆಂದೆ ಕಾಮಹರ ಪ್ರಿಯರಾಮನಾಥಾ.

**ಅರ್ಥ**:—ಹಸಿವಾಗಿ ಬಂದಕಾಲಕ್ಕೆ ಅನ್ನತೃಷೆಯಾಗಿ ಬಂದಕಾಲಕ್ಕೆ ಪಾನೀಯಸೀತ ಗೃಹೀತನಾಗಿ ಬಂದಕಾಲಕ್ಕೆ, ವಸ್ತ್ರ ಕಪ್ಪಟಂಗಳ ಕೊಡದೆ ತತ್ಕಾಲವಂಚಕನಾಗಿ, ಶಿವರಾತ್ರಿ ಯುಗಾದಿ ದೀವಳಿಗೆ ಮೊದಲಾದ ಸ್ಥಿತಿಕಾಲಂಗಳಲ್ಲಿ ನೂರಾರು ಜಂಗಮವ ನೆರಹಿಕೊಂಡು, ಅನ್ನವನಿಕ್ಕಿ, ವಸ್ತ್ರ ಕಪ್ಪಟಂಗಳ ಕೊಟ್ಟು, ಭಕ್ತಿಯ ಮಾಡಿದಡೆ, ಸಂಚಿತಾದಿ ಕರ್ಮವೇ ಅನುಗ್ರಹಿಸುವದು ಶಿವಪೂಜಕನು ಲಿಂಗಾರ್ಚಕನೆಂದು ದೇವಭಕ್ತರಿಂದ ಸತ್ಕರಿಸಿಕೊಂಬವನಾಗಿ

ತ್ರಿಕಾಲಂಗಳಲ್ಲಿ ಲಿಂಗಪೂಜೆಯ ಮಾಡಿದಡೆ ಆ ಪೂಜೆಯು ಹಸಿವಿಲ್ಲದವನು ಅನ್ನವನು ತಗೆದುಕೊಂಡಡೆ ಏಗಡಿಸುವದು ಎಂಬ ಹಾಗೆ ಲಿಂಗಕ್ಕೆ ಸಲ್ಲದು. ಆ ಉಪಾಧಿ ಭಕ್ತಿಯು. ಆ ಉಪಾಧಿಪೂಜೆಯು ಮೂರು ಕಂಗಳನುಳ್ಳ ಪರಶಿವ ಲಿಂಗವ ಸೋಂಕಲರಿಯದು, ಇವು ಸಟೆಯಲ್ಲವೆಂದೆನೆಂಬುದರ್ಥ.

---

## ಪರಮಾತ್ಮನನ್ನು ನೆನೆಯುದು.

(೧). ವಾರವೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯ. ಇರುಳೆಂದರಿಯೆ, ಹಗಲೆಂದರಿಯೆ, ಏನೆಂದರಿಯೆನಯ್ಯ. ನಿಮ್ಮವ ಪೂಜಿಸಿ ಎನ್ನವ ಮರೆದೆ ಕೂಡಲಸಂಗಮದೇವಾ.

(೨). ನಿಮ್ಮ ನೋಟವನಂತ ಸುಖ. ಕೂಟ ಪರಮಸುಖವಯ್ಯ. ಅಷ್ಟಕೋಟಿರೋಮಂಗಳೆಲ್ಲ ಕಂಗಳಾಗಿ ನೋಡುತ್ತಿದ್ದೆನು. ಕೂಡಲಸಂಗಮದೇವಾ, ನಿಮ್ಮ ನೋಡಿ, ಮನದಲ್ಲಿ ರತಿ ಹುಟ್ಟಿ, ನಿಮಿರ್ದವೆನ್ನ ಕಂಗಳೂ.

(೩). ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿಯು ತುಂಬಿ, ಕೂಡಲಸಂಗಮದೇವಾ, ನಿಮ್ಮ ಚರಣಕಮಲದೊಳು ನೊಗದ ಬಂಡನುಂಬ ತುಂಬಿಯಾಗಿರ್ಪೆನು.

(೪). ಅಡಿಗಡಿಗೆ ಲಿಂಗವನಡರಿಯದರಿ, ಕಂಗಳು ಕಡೆಗೋಡಿವರಿದವಯ್ಯ. ಎನ್ನಶ್ರುಜಲಂಗಳು ಆಲಿಗಲ್ಲರೂಪಿನಂತೆ. ತನುಪುಳುಕಿತವಾಗೆ ಅರಗಿನ ಪುತ್ಥಳಿಯಂತೆ. ಬೆವರು ಬಿಂದುಗಳೆಲ್ಲ ಭಕ್ತಿರಸದ್ರವವಯ್ಯ. ಕೂಡಲಸಂಗಮದೇವಯ್ಯ ನಿಮ್ಮ ದರ್ಶನ ಸ್ಪರ್ಶನದಿಂದ ಮನಬಲಿದು ನೆರೆವ ಭರವನಾನೇನೆಂಬೆನಯ್ಯ?

(೫). ಮನ ಮನ ಬೆರಿಸಿದಲ್ಲಿ, ತನುಕರಗದಿದ್ದಡೆ, ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿರ್ದಡೆ, ಕಂಗಳ ಶ್ರುಜಲಂಗಳು ಸುರಿಯದಿರ್ದಡೆ, ನುಡಿವಲ್ಲಿ ಗದ್ಗದಂಗಳು ಹೊರಹೊಣ್ಮದಿರ್ದಡೆ, ಕೂಡಲಸಂಗಮದೇವರ ಭಕ್ತಿಗಿದೇ ಚಿನ್ಹ, ಎನ್ನಲ್ಲಿ ಇಲ್ಲವಾಗಿ ಅನುಡಂಭಕ ಕಾಣಿರೇ.

(೭). ಅಂಗೈಗನ್ನೊಳಗಣ ಲಿಂಗವ ನೋಡುತ್ತ, ಕಂಗಳು ಕಡೆಗೋಡಿ ವರಿಯುತ್ತ, ಎಂದಿಪ್ಪೆನೋ? ನೋಟವೇ ಪ್ರಾಣವಾಗಿ ಎಂದಿಪ್ಪೆನೋ ಕೂಟವೇ ಪ್ರಾಣವಾಗಿ ಎಂದಿಪ್ಪೆನೋ? ಎನ್ನ ಅಂಗವಿಕಾರದ ಸಂಗವಳಿದ. ಕೂಡಲಸಂಗಮಯ್ಯ 'ಜಯ, ಲಿಂಗ, ಲಿಂಗ' ಎನುತಿರ್ಪೆನು.

(೭). ಲಿಂಗಕರಸ್ಥಲಕ್ಕೆ ಬಂದ ಮತ್ತೆ, ಕಂಗಳು ತುಂಬಿವರಿಯದಿರ್ದಡೆ, ಅಂಗಲಿಂಗ ಪೂಜೆ ಏಕೆ? ಲಿಂಗವ ಜಿಹ್ವೆಯಲ್ಲಿ ನೆನೆವಾಗ, ಅಂಗವ ಮರೆಯದಿರ್ದಡೆ, ಆ ಲಿಂಗದ ನೆನಪು ಅದೇಕೆ? ಲಿಂಗವಾರ್ತೆಯ ಕಿವಿತುಂಬ ಕೇಳಿ, ಸರ್ವಾಂಗ ಜೊಂಪಿಸಿ ಮನಮಗ್ನವಾಗಿ ಇರದಿರ್ದಡೆ, ಊರಿಲಿಂಗ ತಂದೆಯ ಸಿರಿಯ ನೆನೆಯಲೇಕೆ?

(೮). ಅಡಿಕಾಲು ದಣಿಯವು. ನೋಡಿ ಕಣ್ಣು ದಣಿಯವು. ಮಾಡಿ ಕೈ ದಣಿಯವು. ಹಾಡಿ ನಾಲಿಗೆ ದಣಿಯದು. ಇನ್ನೇವೆ? ಇನ್ನೇವೆ? ನಾ ನಿಮ್ಮ ಕೈಯ್ಯಾರೆ ಪೂಜಿಸಿ, ಮನದಣಿಯಲೊಲ್ಲದು. ಇನ್ನೇವೆ? ಇನ್ನೇವೆ? ಕೂಡಲ ಸಂಗಮದೇವ ಕೇಳಯ್ಯ, ನಿಮ್ಮುದರವ ಬಗಿದಾನು ಹೊಗುವ ಭರವೆನಗೆ.

(೯). ಕಾಯಸಂಗ ನಿಸ್ಸಂಗವಾಗಿ, ಇನ್ನಾವ ಸಂಗವನರಿಯೆನಯ್ಯ. ಮಿಗೆ ಒಲಿದೆನಾಗಿ, ಅಗಲಲಾರೆನಯ್ಯ. ನಗೆಮೊಗದರಸಾ, ಅವಧಾರು. ಕೂಡಲ ಸಂಗಮದೇವಾ ಬಗಿದು ಹೊಗುವೆನು ನಾ ನಿಮ್ಮ ಮನವ.

(೧೦). ಕಂಡ ಕನಸು. ನಿಧಾನವ ಕಂಡೆನಯ್ಯ. ಬಿಡಲಾರದ ನಿಧಾನವ ಕಂಡೆನಯ್ಯ. ಕೂಡಲಸಂಗಯ್ಯನೆಂಬ ನಿಧಾನವ ಕಂಡು, ಬಿಡಲಾರೆನಯ್ಯ.

(೧೧). ಎನಗೆ ನಿಮ್ಮ ನೆನಹಾದಾಗಳೇ ಉದಯ. ಎನಗೆ ನಿಮ್ಮ ಪಾದ ಮರಹಾದಾಗಳೇ ಅಸ್ತಮಾನ. ಎನಗೆ ನಿಮ್ಮ ನೆನಹವೇ ಜೀವಾಳ. ಎನಗೆ ನಿಮ್ಮ ನೆನಹವೇ ಪ್ರಾಣ, ಕಾಣಾಸ್ವಾಮಿ. ಎನ್ನ ಹೃದಯದಲ್ಲಿ ನಿಮ್ಮ ಚರಣದುಂಡಿಗೆಯ ನೊತ್ತಯ್ಯ. ಎನ್ನ ವದನದಲ್ಲಿ ಷಡಕ್ಷರಿಯ ಬರೆಯಯ್ಯ ಕೂಡಲಸಂಗಮದೇವಾ

(೧೨). ಸುರರು, ಕಿನ್ನರರು, ಕಿಂಪುರುಷರೆಂಬುವರನಾರು ಬಲ್ಲರು! ಎನ್ನ ಚಿತ್ತವು ನಿಮ್ಮ ಮೇಲೆ ಲಿಂಗಯ್ಯ. ಎನ್ನ ಭಾವವು ನಿಮ್ಮ ಮೇಲೆ ಸಂಗಯ್ಯ. ಕೂಡಲಸಂಗಮದೇವಾ ನಾನನ್ಯವೆಂಬುದನರಿಯೆನಯ್ಯ.

(೧೩). ಮಂಗಳ ಮಯ ಲಿಂಗವ ಮನಹಿಂಗದೆ, ಸುಸಂಗಿಯಾಗಿ, ಮಹಾಲಿಂಗ ಪ್ರಸಂಗಿಯಾಗಿಪ್ಪಾತನ ಅಂಗವೆನಗೆ ಮಂಗಳ ತರಂಗ. ಆತನ ಪ್ರಸಂಗದಲ್ಲಿರಿಸಾ ಉರಿಲಿಂಗದೇವಾ.

(೧೪). ತಾಳ ಮಾನ ಸರಸ ನಾನರಿಯೆ. ವಜಿ ಬಜಾವಣೆಯ ಲೆಕ್ಕವ ನರಿಯೆ. ಅಮೃತಗಣ, ದೇವಗಣವನರಿಯೆ. ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ.

(೧೫). ಎನ್ನ ಕಾಯವ ದಂಡಿಗೆಯ ಮಾಡಯ್ಯಾ. ಎನ್ನ ಶಿರವ ಸೋರೆಯ ಮಾಡಯ್ಯಾ. ಎನ್ನ ನರವ ತಂತಿಯ ಮಾಡಯ್ಯಾ. ಎನ್ನ ಬೆರಳ ಕಡ್ಡಿಯ ಮಾಡಯ್ಯಾ. ಮೂವತ್ತೆರಡು ರಾಗವ ಹಾಡಯ್ಯಾ. ಎನ್ನ ಉರದಲೊತ್ತಿ, ನಿನ್ನ ಜಯಗಾನವಂ ಬಾರಿಸು, ಕೂಡಲಸಂಗಮದೇವಾ.

(೧೬). ಆಡಿಹರಯ್ಯಾ, ಹಾಡಿಹರಯ್ಯಾ, ಮನಬಂದ ಪರಿಯಲ್ಲಿ ಶಿವ ಶರಣರ ಮುಂದೆ. ಆಡಿಹರಯ್ಯಾ ಹಾಡಿಹರಯ್ಯಾ. ಕೋಡಂಗಿಯಾಟವ ನಾಡಿದ ಭಕ್ತಂಗೆ ಬೇಡಿದ್ದನೀವ ನಮ್ಮ ಕೂಡಲಸಂಗಮದೇವಾ.

(೧೭) ಎಡರಡಸಿದಲ್ಲಿ, ಮೃಡ, ನಿಮ್ಮ ನೆನೆವರು. ಎಡರಡಸಿದ ವಿಪತ್ತು ಕಡೆಯಾಗಲೊಡನೆ, ಮೃಡ, ನಿಮ್ಮನೆಡಹಿಯೂ ಕಾಣರು ರಾಮನಾಥಾ.

(೧೮). ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಕಮಲಾಂಬುಜಕ್ಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ, ಎನಗೆ ಕೂಡಲಸಂಗಮದೇವರ ನೆನೆವುದೇ ಚಿಂತೆ.

(೧೯). ಬಡತನಕ್ಕೆ ಉಂಬುವ ಚಿಂತೆ, ಉಂಡರೆ ಉಡುವ ಚಿಂತೆ, ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡರ ಚಿಂತೆ, ಹೆಂಡರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ, ಬದುಕಾದರೆ ಕೇಡಿನ ಚಿಂತೆ, ಕೆಡದಿರೆ ಮರಣದ ಚಿಂತೆ, ಇಂತೀ ಹಲವು ಚಿಂತೆಯಲ್ಲಿ ಇಪ್ಪವರನ್ನು ಕಂಡೆನು. ಶಿವ ಚಿಂತೆ ಇದ್ದವರೊಬ್ಬರನೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜ ಶರಣನು.

(೨೦). ಮಹಾಬೆಳಗಿನ ಲಿಂಗವ ಕಯ್ಯಲ್ಲಿ ಕೊಟ್ಟಡೆ, ಕೊರಳಲ್ಲಿ ಕಟ್ಟಿಕೊಳ್ಳಲೇಕೆ? ನೋಡುವ ಕಣ್ಣು ಮುಚ್ಚಿದ ಮತ್ತೆ, ತನಗೆ ಎಡೆಯಾಟ

ಉಂಟೇ? ಲಿಂಗವ ಹಿಂಗದೆ ಅಂಗೈಯ್ಯಲ್ಲಿ ಕೊಟ್ಟ ಮತ್ತೆ, ಚಿತ್ತದಲ್ಲಿ ಹಿಂಗದಿರ ಬೇಕು. ಉರಿಲಿಂಗಕಂದೆಯ ಸಿರಿಯ ಭಾಷೆ.

**ಅರ್ಥ**:—ಚಿತ್ತಿನ ಚಿತ್ಪ್ರಕಾಶವನುಳ್ಳ ಮಹಾಲಿಂಗವನು ಭಾವಾದಿ ನಯನಂಗಳಿಂದ ಬರಸೆಳೆದುಕೊಂಡು ಬಂದು, ಇಷ್ಟಲಿಂಗಮೂರುತಿಯಲ್ಲಿ ಹುದುಗೊಳಿಸಿ, ಚಿತ್ಕಲಾಲಿಂಗವನು ಮಾಡಿ, ಕರಸ್ಥಲದಲ್ಲಿ ಸಂಬಂಧವ ಮಾಡಿಕೊಟ್ಟರೆ, ಅರ್ಚಿಸಿ ಪೂಜಿಸಿ, ಆ ಲಿಂಗದ ಕರುಣವ ಪಡೆಯಲರಿಯದೆ, ಕವಣೆ ಸಜ್ಜೆ ಮೊದಲಾದವುಗಳಿಂದ ಬಂಧಿಸಿಕೊಳ್ಳಲೇಕೆ? ಅನಿಮಿಷ ದೃಷ್ಟಿಯಿಂದ ಲಿಂಗವ ನೋಡುವ ನಯನವು ಮುಚ್ಚಿ ಮರಣವಾದ ಬಳಿಕ ತನಗೆ ಲಿಂಗಪೂಜಾಕ್ರಿಗಳ ಮಾಡುವ ಸಂಚಾರ ಉಂಟೇ? ಲಿಂಗವನು ಭಿನ್ನವಾಗದೆ, ಕರಸ್ಥಲದಲ್ಲಿ ಸಂಬಂಧವ ಮಾಡಿಕೊಂಡು, ಬಳಿಕ ಮನದಲ್ಲಿ ಲಿಂಗಧ್ಯಾನ ಲಿಂಗಸ್ಮರಣೆಯನು ಬಿಡದಿರ ಬೇಕು. ಉರಿಲಿಂಗಯ್ಯಗಳು ಚಿತ್ತಿನ ಚಿದೈಶ್ವರ್ಯದ ಲಿಂಗವೆಂಬುದರ್ಥ.

(೨೧) ಶಿವಕಥೆಗಳ ಕೇಳಿ ಕೇಳಿ ಸಂತೋಷಿಸಿ, ಶಿವಕೀರ್ತನೆಗಳ ಮಾಡಿ ಮಾಡಿ, ದಣುವಿಲ್ಲದೆ ಶಿವನ ನೆನೆನೆನೆದು ಶಿವಸೇವೆಯ ಮಾಡುತ್ತ, ಶಿವಪೂಜೆಯ ನೋಜೆಯಲ್ಲಿ ವಿಸ್ತರಿಸಿ, ಶಿವಶರಣೆಂದು ಶಿವನೊಡವೆಯ ಶಿವನವರಿಗೆ ಅರ್ಪಿಸಿ, ಶಿವನೇತಾನಾದ ಭವರಹಿತ ಭಕ್ತನ ನೋಡಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೨೨). ಅಂಗಯ್ಯ ಲಿಂಗದಲ್ಲಿ ಕಂಗಳುನಟ್ಟು ಎವೆಹಳಚದೆ ಮನಕವ ರಿಡದೆ ಚಿತ್ರದ ರೂಹಿನತೆರನಂತೆ ಲಿಂಗವ ನೋಡಿ ನೋಡಿ ಕಂಗಳಲಚ್ಚೊತ್ತಿ, ಮನದಲ್ಲಿ ನೆನೆನೆನೆದು ಮರೆವ ಲಿಂಗಮುಖಸಂಪನ್ನರನೇ ಲಿಂಗವೆಂಬೆನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೨೩). ನಾನು ಭಕ್ತನಪ್ಪೆನಯ್ಯ ನಿಮ್ಮ ಶ್ರೀ ಚರಣಸೇವಕನಾಗಿ. ನಾನು ಯುಕ್ತನಪ್ಪೆನಯ್ಯ ಮತ್ರಮಾಹೇಶ್ವರಸ್ತತ್ರ ಶಿವನೆಂಬ ವಿಶ್ವಾಸದನುಭಾವಿಯಾಗಿ. ನಾನು ಮುಕ್ತನಪ್ಪೆನಯ್ಯ ಮನಪ್ರಾಣ ನಿಮ್ಮಲ್ಲಿ ನಿಂದು ನಾನೆಂಬುದಿಲ್ಲವಾಗಿ. ಇಂತು ತನುವಿನಲ್ಲಿ ಹೊರೆ ಇಲ್ಲ, ಮನದಲ್ಲಿ ಹೊರೆ ಇಲ್ಲ, ಮನದಲ್ಲಿ ವ್ಯಾಕುಳವಿಲ್ಲ, ಪ್ರಾಣದಲ್ಲಿ ಹಮ್ಮಿಲ್ಲದೆ ತನುಮನ ಪ್ರಾಣ ನಿಮ್ಮಲ್ಲಿ ಸಂದಿಪ್ಪ ನಿಚ್ಚಟ ಭಕ್ತನಾಗಿಪ್ಪೆನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮಲ್ಲಿ.

(೨೪). ಮನಮನ ಬೆರಸಿ ಸ್ನೇಹಬಳಿದ ಬಳಿಕ ನಿನ್ನ ನೆನೆವುತ್ತಿಪ್ಪೆ ನಾನು. ನನ್ನ ನೆನೆವುತ್ತಿಪ್ಪೆ ನೀನು. ನನಗೂ ನಿನಗೂ ಏನೂ ಹೊರೆ ಇಲ್ಲ. ಇದನೀ ಬಲ್ಲೆ, ನಾಬಲ್ಲೆ. ನಿನ್ನನಗಲದಿಪ್ಪೆ ನಾನು, ಚಿನ್ನ ಬಣ್ಣದಂತೆ ಇಪ್ಪೆವಾಗಿ. ಇನ್ನು ಭಿನ್ನ ಉಂಟೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

(೨೫). ಅರಳಿದ ಪುಷ್ಪ ಪರಿಮಳಿಸಿದಲ್ಲದೆ ಮಾಣದು. ಗುರುವಿನಿಂದ ಪಡೆದ ಶಿವಲಿಂಗವ ಹರುಷದಿಂ ನೋಡಿ ನೆನೆದಡೆ, ಆ ಲಿಂಗ ಕಣ್ಮನವ ವೇಧಿಸಿದಲ್ಲದೆ ಮಾಣದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಕೂಡುವರೆ, ನೋಟ ಬೇಟವೆರಡೂ ಆದಲ್ಲದಾಗದು.

(೨೬). ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ ನೆನೆವೆನಯ್ಯಾ. ಬಂಧನಕ್ಕೆ ಬಂದ ಗಿಳಿ ತನ್ನ ಬಂಧುವ ನೆನೆವಂತೆ ನೆನೆವೆನಯ್ಯಾ. ಕಂದ ನೀನಿತ್ತ ಬಾರೆಂದು ನೀವು ನಿಮ್ಮಂದವ ತೋರಯ್ಯಾ ಚನ್ನಮಲ್ಲಿಕಾರ್ಜುನಾ.

(೨೭). ವನದ ಕೋಗಿಲೆ ಮನೆಗೆ ಬಂದರೆ, ತನ್ನ ವನವ ನೆನೆವುದ ಮಾಣ್ಬುದೇ? ಮಲೆಯ ಗಜವು ಮನೆಗೆ ಬಂದರೆ, ತನ್ನ ಮಲೆಯ ನೆನೆವುದ ಮಾಣ್ಬುದೇ? ಕೂಡಲಸಂಗನ ಶರಣರು ಮರೆದು ಮರ್ತ್ಯಕ್ಕೆ ಬಂದರೆ, ತಮ್ಮ ಆದಿ ಮಧ್ಯಾಂತರಂಗದ ಲಿಂಗವ ನೆನೆವುದ ಮಾಣ್ಬರೇ?

(೨೮). ಅಂಗಯ್ಯ ಲಿಂಗವ ಕಂಗಳು ತುಂಬಿ ನೋಡಿ, ಮನ ಹಾರೈಸಿದಲ್ಲಿ ಅಂಗೇಂದ್ರಿಯಂಗಳೆಲ್ಲ ಲಿಂಗೇಂದ್ರಿಯಂಗಳಾದವು. ಅಂಜದಿರು ಮನವೇ, ಲಿಂಗವು ನಿನಗೆ ದೂರವೆಂದು. ಮನೋಮಧ್ಯದಲ್ಲಿಪ್ಪ, ಅಂಗದ ಕಂಗಳಲ್ಲಿಪ್ಪ, ಪ್ರಾಣದ ಭಾವದಲ್ಲಿಪ್ಪ. ಅಂಗಪ್ರಾಣಭಾವ ಭರಿತ ಸರ್ವಾಂಗ ಲಿಂಗವಾದ ಬಳಿಕ, ಲಿಂಗಮಧ್ಯೆ ಪ್ರಾಣ, ಪ್ರಾಣಮಧ್ಯೆ ಲಿಂಗ. ಇದುಕಾರಣ ಉತ್ಪತ್ತಿ ಸ್ಥಿತಿ ಲಯ ಉಂಟೆಂದು ಅಂಜದಿರು. ಅಂಜಿಕೆ ಇಲ್ಲ, ಅಳುಕಿಲ್ಲ. ಬಂದುದೇ ಲಿಂಗದ ಲೀಲೆ, ಇದ್ದುದೇ ಲಿಂಗದಾನಂದ, ಭಾವಲೀಯವಾದುದೇ ಲಿಂಗ ನಿರವಯವು. ಇದು ಸತ್ಯ. ಶಿವಬಲ್ಲ, ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೨೯). ಜಗವ ಸುತ್ತಿಪ್ಪುದು ನಾಶಮಾಯೆಯಯ್ಯಾ. ನಿನ್ನ ಸುತ್ತಿಪ್ಪುದು ಎನ್ನ ಮನನೋಡಯ್ಯಾ. ಜಗಕ್ಕೆ ಬಲ್ಲಿದ ನೀನು. ನಿನಗೆ ಬಲ್ಲಿದ ನಾನು

ಕಂಡಯ್ಯ. ಜಗವು ನಿನ್ನೊಳಗೆ, ನೀನು ಎನ್ನೊಳಗೆ. ಕರಿಯು ಕನ್ನಡಿಯೊಳಗೆ ಅಡಗಿದಂತೆ ನೀನೆನ್ನೊಳಡಗಿದೆ ಕೂಡಲಸಂಗಮದೇವಾ.

( ೩೦ ). ಎನ್ನ ತನುಮನವೆರಡನು ಗುರುಕರುಣದಿಂದ ಲಿಂಗದಲ್ಲಿ ಏಕವ ಮಾಡಿದನಾಗಿ, ಎನ್ನಂತರಂಗಬಹಿರಂಗವೆರಡೂ ನಿಮ್ಮವು ನೋಡಾ. ನಿಮ್ಮಂತರಂಗದೊಳಗೆ ನಿಮ್ಮನೆ ಇಂಬಿಟ್ಟುಕೊಂಬೆ. ನಿಮ್ಮ ಬಹಿರಂಗದೊಳಗೆ ನಿಮ್ಮನೆ ನಿಜವಾಗಿ ಪೂಜಿಸುವೆ. ನಿಮ್ಮ ಅರಿವಿನಿಂದ ನಿಮ್ಮನೆ ಅರಿವೆ ಕಾಣಾ ಕೂಡಲ ಸಂಗಮದೇವಾ,

( ೩೧ ). ಶರಣ ಲಿಂಗದಲ್ಲಿ ಕೂಡಲು ಮಹಾಪಥವಯ್ಯ. ದೃಢಾದೃಢಾಂಗ ಮಧ್ಯಸ್ಥನಾಗಿ ಕೂಡಲ ಸಂಗಮದೇವರ ನಾಮವತಿ ಸುಖವೆಂದುದು.

**ಅರ್ಥ:**—ಶರಣಲಿಂಗದಲ್ಲಿ ಸಮರಸೈಕ್ಯವನೆಯ್ದಿ, ಜ್ಞಾನಕ್ರಿಯಾಮಾರ್ಗವ ಹೇಳುವಡೆ, ಅತಿ ಘನತೆಯುಳ್ಳುದು, ಅದನಾರೂ ಅರಿಯರೆಂಬುದೀಗ ಶರಣ ಲಿಂಗದಲು ಕೂಡಲು ಮಹಾಪಥವಯ್ಯ ಎಂಬ ಶಬ್ದಕ್ಕರ್ಥ. ಅಂತು ಶರಣ ಲಿಂಗವ ಕೂಡುವ ಭಕ್ತಿಮಾರ್ಗವೆಂತೆಂದೊಡೆ, ಸ್ಥಿರವಾದ ಲಿಂಗಕ್ಕೆ ಅಸ್ಥಿರವಾದ ದೇಹೇಂದ್ರಿಯ ಸುಖಂಗಳನೆಲ್ಲವನರ್ಪಿಸುತ್ತ, ಶರಣನು ಲಿಂಗದೇಹ ಮಧ್ಯದಲ್ಲಿ ಭಕ್ತಿಸ್ವರೂಪನಾಗಿರ್ದನೆಂಬುದೀಗ ದೃಢಾದೃಢಾಂಗ ಮಧ್ಯಸ್ಥನಾಗಿ ಎಂಬ ಶಬ್ದಕ್ಕರ್ಥ. ಅಂತು ಶರಣ ಲಿಂಗಕ್ಕೆ ದೇಹವನರ್ಪಿಸಿ ಭಕ್ತಿಜ್ಞಾನದಿಂದ ಲಿಂಗವಾಗಿ ಶಿವೋಹಂ, ಶಿವೋಹಂಮೆಂಬ ಶಿವನ ಅದ್ವಯ ನಾಮಸ್ಮರಣೆ ವಿಡಿದು ಶಿವಸುಖವ ಪಡೆದ ಶರಣನೆಂಬುದೀಗ ಮಧ್ಯಸ್ಥನಾಗಿ ಕೂಡಲಸಂಗಮ ದೇವನ ನಾಮವತಿ ಸುಖವೆಂದುದು ಎಂಬ ಶಬ್ದಕ್ಕರ್ಥ.

( ೩೨ ) ಎನ್ನ ಮನ ನಿಮ್ಮಲ್ಲಿನಟ್ಟು ತೆಗೆಯಬಾರದ ಬೆರಗು ನೋಡಯ್ಯ. ಇಹವೆಂಬುದನರಿಯೆ. ಪರವೆಂಬುದನರಿಯೆ. ಪರಮಾನಂದದೊಳಗಿರ್ದೆ ನೋಡಯ್ಯ. ಪರಮನ ನೆನಹೇ ನೆನಹಾಗಿ, ಪರಮ ಸುಖದಲ್ಲಿ ಸುಖಿಸುತ್ತಿರ್ದೆ ನೋಡಯ್ಯ. ಅಪ್ರತಿಮ ಕೂಡಲಚನ್ನಸಂಗಯ್ಯ, ಎನ್ನ ಬೆರಗಿನ ಭೇದವ ನೀನೇ ಬಲ್ಲೆಯಯ್ಯಾ.

( ೩೩ ). ಆರಾದರೂ ನಿಮ್ಮ ನೆನೆವರಯ್ಯ. ನಾ ನಿಮ್ಮ ನೆನೆವನಲ್ಲ. ಅದೇನು ಕಾರಣವೆಂದಡೆ, ಎನ್ನ ನೆನೆವ ಮನವೇ ನೀವೆಯಾದಿರಾಗಿ. ಆರಾದರೂ

ನಿಮ್ಮ ಪೂಜಿಸುವರಯ್ಯ. ನಾನಿಮ್ಮ ಪೂಜಿಸುವನಲ್ಲ. ಅದೇನು ಕಾರಣವೆಂದರೆ, ಎನ್ನ ತನುವಿಗೆ ನೀವೇ ಪೂಜೆಯಾದಿರಾಗಿ. ಆರಾದರೂ ನಿಮಗರ್ಪಿಸುವರಯ್ಯ. ನಾ ನಿಮಗರ್ಪಿಸುವನಲ್ಲ. ಅದೇನು ಕಾರಣವೆಂದರೆ, ಎನ್ನ ಸರ್ವಾಂಗವೆಲ್ಲವೂ ನಿಮಗರ್ಪಿತವಾಯಿತ್ತಾಗಿ. ಇದು ಕಾರಣ ಭಕ್ತದೇಹಿಕ ದೇವ, ದೇವ ದೇಹಿಕ ಭಕ್ತನೆಂಬ ಶೃತಿಯನರಿದು ನಿಮ್ಮ ಮುಟ್ಟಿ, ನಾನು ಅಭಿನ್ನನಾದೆ ಕಾಣಾ ಕೂಡಲ ಸಂಗಮದೇವಾ.

(೩೪). ನಡೆವ ಕಾಲು, ಅನುವ ಕೈ, ಬೇಡುವ ಬಾಯಿ ಸರ್ವವ ನೊಡಗೂಡುವ ಮನಉಡುಗಿ ಘನಲಿಂಗದಲ್ಲಿ ತಲ್ಲೀಯ್ಯವಾದವನಂಗ ಮರುಳ ಕಂಡ ಕನಸಿನಂತೆ, ಮೂಗನ ಕಾವ್ಯದಂತೆ, ಜಲಲಿಪಿಯಂತೆ, ವಾರಿಯಧೂಪ್ರ ದಂತೆ ಇದಾರಿಗೆಯೂ ಅಸಾಧ್ಯ, ಆತುರವೈರಿಮಾರೇಶ್ವರಾ.

(೩೫). ನಚ್ಚುಗೆ ಮನ ನಿಮ್ಮಲ್ಲಿ, ಮೆಚ್ಚುಗೆ ಮನ ನಿಮ್ಮಲ್ಲಿ, ಸಲುಹುಗೆ ಮನ ನಿಮ್ಮಲ್ಲಿ, ಸೋಲುಗೆ ಮನ ನಿಮ್ಮಲ್ಲಿ, ಅಳಲುಗೆ ಮನ ನಿಮ್ಮಲ್ಲಿ, ಬಳಲುಗೆ ಮನ ನಿಮ್ಮಲ್ಲಿ, ಕರಗುಗೆ ಮನ ನಿಮ್ಮಲ್ಲಿ, ಕೊರಗುಗೆ ಮನ ನಿಮ್ಮಲ್ಲಿ. ಎನ್ನ ಪಂಚೇಂದ್ರಿಯಂಗಳು ಕಪ್ಪುರ ಉಂಡ ಉರಿಯಂತೆ ನಿಮ್ಮಲ್ಲಿ ಬೆರಸುಗೆ ಚನ್ನ ಮಲ್ಲಿಕಾರ್ಜುನಯ್ಯ.

(೩೬). ಹಗಲು ನಾಲ್ಕು ಜಾವ ನಿಮ್ಮ ಕಳವಳದಲ್ಲಿಪ್ಪೆನು. ಇರುಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು. ಹಗಲಿರುಳು ನಿಮ್ಮ ಹಂಬಲ ದಲ್ಲಿ ಮೈ ಮರೆದೊರಗಿದೆನು. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಒಲಿವೆನಟ್ಟು, ಹಸಿವು ತೃಷೆನಿದ್ರೆಯ ತೊರೆದೆನು.

(೩೭). ತನು ನಿಮ್ಮ ರೂಪಾದ ಬಳಿಕ, ಆರಿಗೆ ಮಾಡುವೆ? ಮನ ನಿಮ್ಮ ರೂಪಾದ ಬಳಿಕ ಆರನೆನೆವೆ? ಪ್ರಾಣ ನಿಮ್ಮ ರೂಪಾದ ಬಳಿಕ, ಆರನಾ ರಾಧಿಸುವೆ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ, ಆರನರಿವೆ? ಚನ್ನಮಲ್ಲಿಕಾ ರ್ಜುನಯ್ಯ ನಿಮ್ಮಿಂದ ನೀವೆಯಾದಿರಾಗಿ, ನಿಮ್ಮನೇ ಅರಿವುತಿರ್ದೆನು.

(೩೮). ನೆನೆಯಲರಿಯೆ, ನಿರ್ಧರಿಸಲರಿಯೆ, ಮನವಿಲ್ಲಾಗಿ. ಭಾವಿಸಲ ರಿಯೆ, ಬೆರಿಸಲರಿಯೆ, ಭಾವನಿರ್ಭಾವವಾಯಿತ್ತಾಗಿ. ಧ್ಯಾನಮೌನವನರಿಯೆ

ಶ್ಯನರೂಪಾತೀತ ತಾನೆಯಾಯಿತ್ತಾಗಿ. ಜ್ಞಾತೃಜ್ಞಾನಜ್ಞೇಯವೆಲ್ಲವನು ಮೀರಿ ಭಿನವಮಲ್ಲಿಕಾರ್ಜುನಯ್ಯನಲ್ಲಿ ಪರಮಸುಖಿಯಾದೆನು.

( ೩೯ ). ತನು ನಿಮ್ಮನಪ್ಪಿ ಮಹಾತನುವಾದ ಬಳಿಕ, ತನುವೆಂಬುದು ಿತ್ತೆಲ್ಲಿಯದು ? ಮನ ನಿಮ್ಮನಪ್ಪಿ ಘನಮನವಾದ ಬಳಿಕ, ಮನವೆಂಬುದು ಿತ್ತೆಲ್ಲಿಯದು ? ಭಾವ ನಿಮ್ಮನಪ್ಪಿ ನಿರ್ಭಾವವಾದ ಬಳಿಕ, ಭಾವವೆಂಬುದು ಿತ್ತೆಲ್ಲಿಯದು ? ಇಂತೀ ತ್ರಿವಿಧವು ಲಿಂಗದಲ್ಲಿ ನಿರ್ಲೇಪವಾಗಿ ನೈದೋರದಿರವ ೂಡಲಚೆನ್ನಸಂಗಯ್ಯ ತಾನೇ ಬಲ್ಲ.

( ೪೦ ). ಹರಣವಿದ್ದು ಹರಣವಿಲ್ಲ, ಹರಣಲಿಂಗದಲ್ಲಿ ಸಿರಿಯಾಣವಾ ುತ್ತಾಗಿ. ಮನವಿದ್ದು ಮನವಿಲ್ಲ, ಮನವು ಮಹದಲ್ಲಿ ಲೀಯವನೆಯ್ದಿತ್ತಾಗಿ. ೕವವಿರ್ದು ಜೀವವಿಲ್ಲ, ಜೀವಸಜ್ಜೀವವಾಯಿತ್ತಾಗಿ. ಭಾವವಿದ್ದು ಭಾವವಿಲ್ಲ, ಾವನಿರ್ಭಾವವಾಯಿತ್ತಾಗಿ. ಕರಣಂಗಳಿದ್ದು ಕರಣಂಗಳಿಲ್ಲ, ಕರಣಂಗಳೆಲ್ಲವು ಂಗಕರಣಂಗಳಾಗಿ. ಇಂತೀ ಸರ್ವವು ಇದ್ದು ಸರ್ವವೂ ಇಲ್ಲ. ಇದು ಕಾರಣ ೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು ಉಂಡು ಉಪವಾಸಿಗಳು, ಬಳಸಿ ್ರಹ್ಮಚಾರಿಗಳು.

( ೪೧ ). ಮಣಿಯನೆಣಿಸಿ ದಿನವ ಕಳೆಯಲುಬೇಡ. ಕಣಿಯ ಪೂಜಿಸಿ ನವ ಕಳೆಯಲುಬೇಡ. ಕ್ಷಣವಾದರು ನಿಜದ ನೆನಹೇ ಸಾಕು. ಕ್ಷಣದೊಳಗಣ ರ್ಧವಾದರು ನಿಜದ ನೆನಹೇ ಸಾಕು. ಬೆಂಕಿಯೊಳಗುಳ್ಳ ಬಿಸಿನೀರೊಳ ಂಟೇ ಗುಹೇಶ್ವರಾ ?

( ೪೨ ). ಎದೆ ಬಿರಿವನಕ, ಮನದಣಿವನಕ, ನಾಲಿಗೆ ನಲಿನಲಿದೋಲಾ ುವನಕ ನಿಮ್ಮ ನಾಮಾಮೃತವ ತಂದಿರಿಸು ಕಂಡಯ್ಯ ಎನಗೆ. ಎನ್ನ ತಂದೆ ಬಿರಿ ುಗುಳಂತೆ ಎನ್ನ ಹೃದಯ ನಿಮ್ಮ ಶ್ರೀಚರಣದ ಮೇಲೆ ಬಿದ್ದುರುಳುಗೆ, ಕೂಡ ಸಂಗಮದೇವಯ್ಯ.

## ಅನುಭಾವವುಳ್ಳವನಾಗಿರು.

(೧). ಅನುಭಾವವಿಲ್ಲದವನ ಭಕ್ತಿ ತಲೆ ಕೆಳಗಪ್ಪುದಯ್ಯಾ. ಅನುಭಾವವೇ ಭಕ್ತಿಗಾಧಾರ. ಅನುಭಾವವೇ ಭಕ್ತಿಗೆ ನೆಲೆವನೆ. ಅನುಭಾವವುಳ್ಳವರ ಕಂಡರೆ, ತೂರ್ಯಾತೂರ್ಯ ಸಂಭಾಷಣೆಯ ಮಾಡದಿದ್ದರೆ, ನರಕದಲ್ಲಿಕ್ಕುಯ್ಯ ರಾಮನಾಥಾ ?

(೨). ಭಕ್ತಿಗೆ ಅನುಭಾವವೇ ಬೀಜಕಾಣಿರೋ. ಭಕ್ತಿಗೆ ಅನುಭಾಭಾವವೇ ಆಹಾರಕಾಣಿರೋ. ಅನುಭಾವವಿಲ್ಲದವನ ಭಕ್ತಿ ಎಳತಟಗೊಳಿಸಿತ್ತು. ಅನುಭಾವವ ಮಾಡುವಲ್ಲಿ ವಿನಯದಿಂದ ಕೇಳದಿದ್ದಡೆ, ಕೂಡಲಚನ್ನಸಂಗಯ್ಯ ಘೋರ ನರಕದಲ್ಲಿಕ್ಕದೆ ಬಿಡುವನೇ ?

(೩). ಗುರೂಪದೇಶ ಮಂತ್ರ ವೈದ್ಯ. ಜಂಗಮೋಪದೇಶ ಶಸ್ತ್ರವೈದ್ಯ ನೋಡಯ್ಯಾ. ಭವರೋಗವ ಕಳೆವ ಪರಿಯ ನೋಡಯ್ಯಾ. ಕೂಡಲಸಂಗನ ಶರಣರ ಅನುಭಾವ ಮಡಿವಾಳನ ಕಾಯಕದಂತೆ.

(೪). ಸಂಗದಿಂದಲ್ಲದೆ ಅಗ್ನಿ ಹುಟ್ಟದು. ಸಂಗದಿಂದಲ್ಲದೆ ಬೀಜ ಮೊಳೆದೋರದು. ಸಂಗದಿಂದಲ್ಲದೆ ದೇಹವಾಗದು. ಸಂಗದಿಂದಲ್ಲದೆ ಸರ್ವಸುಖ ದೋರದು. ಚನ್ನಮಲ್ಲಿಕಾರ್ಜುನದೇವಯ್ಯಾ ನಿಮ್ಮ ಶರಣರ ಅನುಭಾವ ಸಂಗದಿಂದ ಆನು ಪರಮ ಸುಖಿಯಾಗಿ ಬದುಕಿದೆನಯ್ಯಾ ಪ್ರಭುವೇ.

(೫). ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ತನು ಹಾಳಾಯಿತ್ತಯ್ಯಾ. ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ಮನಹಾಳಾಯಿತ್ತಯ್ಯಾ. ಅಯ್ಯಾ ನಿಮ್ಮ ಅನುಭಾವದಿಂದ ಎನ್ನ ಕರ್ಮ ಛೇದನವಾಯಿತ್ತಯ್ಯಾ, ನಿಮ್ಮವರು ಅಡಿಗಡಿಗೆ ಹೇಳಿ ಭಕ್ತಿ ಎಂಬ ಒಡವೆಯನು ದಿಟವ ಮಾಡಿ ತೋರಿದ ಕಾರಣ, ಅಲ್ಲಿ ಮಾಡುವರು, ಮಾಡಿಸಿಕೊಂಬುವರು ನೀವೇ ಕೂಡಲಸಂಗಮದೇವಾ.

(೬). ನಾನೊಂದ ನುಡಿದರೆ, ತಾವೊಂದು ನುಡಿವರು. ತಾವೊಂದು ನುಡಿದರೆ, ನಾನೊಂದು ನುಡಿವೆನು. ಇದು ಕಾರಣ, ಅವರಿಗೆ ನಮಗೆ ಮೇಳವಿಲ್ಲ. ಮೇಳವಿಲ್ಲದ ಬಳಿಕ ಅನುಭವಗೋಷ್ಠಿ ಇಲ್ಲ. ಅನುಭವಗೋಷ್ಠಿ ಇಲ್ಲದ ಬಳಿಕ ಗುಹೇಶ್ವರನು ಇಲ್ಲಿಲ್ಲ ಕೇಳಾ ಚನ್ನಬಸವ.

(೭). ಸಮತೆ ಸಮ್ಮತದಿಂದ, ನಿಜಗುಣ ಕಾರಣದಿಂದ ಸತ್ವರಜಸ್ತ ಮದ ಕ್ರೋಧವಳಿಯದನ್ನಕ್ಕರ, ಅನುಭಾವವೆಲ್ಲಿಯದೋ? ಆತ್ಮಸ್ತುತಿ, ಪರನಿಂದೆ, ಅಸಹ್ಯ, ಅನೃತ ತರ್ಕ ಉಡುಗದನ್ನಕ್ಕರ ಅನುಭಾವವೆಲ್ಲಿಯದೋ? ಅರಿಷಡ್ವರ್ಗ ದಶವಾಯುಗಳ ವಿಕಳ ಮನಬಿಡದನ್ನಕ್ಕರ ಅನುಭಾವವೆಲ್ಲಿಯದೋ? ಮದಮತ್ಸರವಳಿದಲ್ಲದೆ ಅನುಭಾವವೆಲ್ಲಿಯದೋ? ಸಮತೆ ಸಜ್ಜನಿಕೆ, ಸಮಯಾಚಾರದ ನಿಜಪಥವು ದುರಾಚಾರಿಗಳಿಗಳವಡುವುದೆ? ನಮ್ಮ ಕೂಡಲಸಂಗನ ಶರಣರಿಗಲ್ಲದೆ ಅನುಭಾವವೆಲ್ಲರಿಗೆಲ್ಲಿಯದೋ?

(೮). ಮಾತಿನ ಮಾತಿನ ಗೀತಂಗಳಲ್ಲಿ ಸುಜಾಣನಾಗಬಹುದು. ಶ್ರೋತ್ರದ ಸೊಗಸಿನ ಪ್ರಾಜ್ಞತೆ, ಪರಿಣತೆಯಲ್ಲಿ ಸುಜಾಣನಾಗಬಹುದು. ಅಂತರಂಗ ಬಹಿರಂಗವಂತನಾಗಬಹುದು. ಗಣಿತ, ಗುಣಿತ, ಶೃತಿಸ್ಮೃತಿಗಳಿಂದ ಕೃತಾರ್ಥನಾಗಿರಬಹುದು. ಭೂತವಿಕಾರ ಪ್ರಕೃತಿಸ್ವಭಾವದ ಭ್ರಾಂತು ತಿಳಿದಿರಬಹುದು. ಶಾಂತಿಯ ರತಿ ಗುಣವರ್ಜಿತನಾಗಿ ಕಾಶೀಕ್ಷೇತ್ರವಾಸಿಗಳಾಗಿರಬಹುದು. ಎನ್ನೊಡೆಯ ಕೂಡಲಚನ್ನಸಂಗನ ನಚ್ಚಿನ ಮಚ್ಚಿನ ಇಚ್ಚಾವಾಸಿ ವ್ರತಿಯಾಗಿರಬಾರದು ಲಿಂಗಾನುಭಾವಿಗಲ್ಲದೆ.

(೯). ವೃಕ್ಷವಾಸಿಯಾಗಿರ್ದು ಭಿಕ್ಷಾಪರಿಣಾಮಿಯಾಗಿರ್ದರೇನು? ಉಟ್ಟುದವಳಿದು ಬತ್ತಲೆಯಾದರೇನು? ಕಾಲರಹಿತರಾದರೇನು? ಕರ್ಮರಹಿತರಾದರೇನು? ಕೂಡಲಚನ್ನನ ಅನುಭಾವವನರಿಯದವರು ಏಸುಕಾಲ ಇರ್ದರೇನು? ವ್ಯರ್ಥಕಾಣಿರೋ.

(೧೦). ಪರಮಾರ್ಥದ ಪರೀಕ್ಷೆಯನರಿಯದೆ ನಿಂದಿಸಿ ನುಡಿವರ ಕಂಡರೆ ಏನೆಂಬೆ? ಅರಳಿಯ ಮರದುಲುಹೆಂಬೆ. ಮಿಗಜಾತಿಯ ಶಬುದವೆಂಬೆನು. ಸಕಳೇಶ್ವರ ದೇವಾ, ನಿಮ್ಮನುಭಾವವನರಿಯದವರ ಕಂಡೆನಾದಡೆ ಹಳಿ, ಹಳಿ, ಎಂಬೆನು.

(೧೧). ಅನುಭಾವ, ಅನುಭಾವವೆಂದೆಂಬಿರಿ. ಅನುಭಾವವೆಂಬುದು ನೆಲದ ಮರೆಯ ನಿಧಾನ ಕಾಣಿರೋ. ಅನುಭಾವವೆಂಬುದು ಅಂತರಂಗದ ರತ್ನ ಕಾಣಿ ಭೋ. ಅನುಭಾವವೆಂಬುದು ಶಿಸು ಕಂಡ ಕನಸು ಕಾಣಿ ಭೋ. ಅನುಭಾವವೆಂಬುದು ರಚ್ಚೆಯ ಮಾತೇ? ಅನುಭಾವವೆಂಬುದು ಸಂತೆಯ ಸುದ್ದಿ

ಯೇ? ಅನುಭಾವವೆಂಬುದು ಬೀದಿಯ ಪಸಾರವೇ? ಏನೆಂಬೆ ಹೇಳಾ ಮಹಾ ಘನವನು? ಆನೆ ಮಾನದೊಳಡಗುವದೇ, ದರ್ಪಣದೊಳಗಡಗುವದಲ್ಲದೆ? ಕಂಡಕಂಡಲ್ಲಿ ಗೋಷ್ಠಿಯಾಗಿ, ನಿಂದಲ್ಲಿಯೇ ಅನುಭಾವ ಬಂದಬಂದಲ್ಲಿ ಪ್ರಸಂಗವ ಮಾಡುವ ಹಂದಿ ಕುನ್ನಿಗಳನೇನೆಂಬೆನಯ್ಯಾ ಕೂಡಲಸಂಗಮದೇವಾ?

(೧೨). ಶರಣರಲ್ಲಿ ವಾದ ಬಂದರೆ, ಶರಣರೇ ಸಮರ್ಥರು. ಸತಿಪತಿಯರಲ್ಲಿ ವಾದ ಬಂದರೆ, ಜನನಿ ಜನಕರೇ ಸಮರ್ಥರು. ರಾಜರಾಜರಲ್ಲಿ ವಾದ ಬಂದರೆ, ಛತ್ರಪತಿಗಳೇ ಸಮರ್ಥರು. ಶಿವ ಗೌರೀವರರಲ್ಲಿ ವಾದ ಬಂದರೆ, ಲೋಕ ಉಳಿವ್ರುದೆಂತು? ಇದುಕಾರಣ ಶಿವನಲ್ಲಿ ಸಿದ್ಧರಾಮನ್ನಲ್ಲಿ ಬಂದವಾದ ವಾದವಲ್ಲ ಪ್ರಮಥರ ಮನಕ್ಕೆ ಮಹಾಮೋದ ಮಹಾದೇವಲಿಂಗದಲ್ಲಿ.

(೧೩). ಆನೆಯು ಜರಿದು ಕೋಣವನೇರಿದರೆ, ಆರೇನು ಮಾಡುವರು? ಕಸ್ತುರಿಯ ಬಿಟ್ಟು, ಕೆಸರು ಪೂಸಿಕೊಂಡರೆ, ಆರೇನಮಾಡುವರು? ಪಾಯಸ ಜರಿದು ಮದ್ಯವ ಕುಡಿದರೆ, ಆರೇನುಮಾಡುವರು? ಅರಿದರಿದು ಗುಹೇಶ್ವರನ ಶರಣರಲ್ಲಿ ವಾದಿಸಿದರೆ ಆರೇನ ಮಾಡುವರು ಹೇಳಾ ಮಡಿವಾಳಾ?

(೧೪). ಶಿವವಚನ ಗುರುವಚನ ಪುರಾತನರ ವಚನವ ಕೇಳಿ ಬದುಕಿರಯ್ಯಾ. ಕೇಳಿದರೆ, ಕೃತಾರ್ಥರಪ್ಪಿರಿ. ತನು ಕರಗಿ, ಮನ ಕರಗಿ, ಭಾವ ಬೆಚ್ಚಿ ಶರಣರಲ್ಲಿ ಅನುಭಾವ ಕೇಳಿದರೆ, ಅದೇ ಮುಕ್ತಿ ನೋಡಿರೇ. ಇಂತಲ್ಲದೆ, ಮನ ವ್ಯಾಕುಲವಾದ ಗೀತಂಗಳಂ ಮನಮುಟ್ಟಿ ಕೇಳಿದಡೆ, ಉಪದೇಶವೆಂತು ಸಲ್ಲುವದಯ್ಯಾ? ಮಹಾಲಿಂಗ ಕಲ್ಲೇಶ್ವರಾ, ಗುರುವಚನ ಪರಾಙ್ಮುಖರಿಗೆ ಭವ ಹಿಂಗದು ನೋಡಾ.

(೧೫). ತರು ಮೂಲಾದಿಗಳಲ್ಲಿ ಹೋಗಿ, ಅನಂತ ಕಾಲ ತಪಸ್ಸು ಮಾಡುವದನು ಒಂದು ನಿಮಿಷ ಗುರುಚರಣ ಸೇವೆ ಸಾಲದೇ? ಅನಂತ ಕಾಲ ಗುರುಚರಣಸೇವೆ ಮಾಡುವದನು ಒಂದು ನಿಮಿಷ ಲಿಂಗಾರ್ಚನೆ ಸಾಲದೇ? ಅನಂತ ಕಾಲ ಲಿಂಗಾರ್ಚನೆಯ ಮಾಡುವದನು ಒಂದು ನಿಮಿಷ ಜಂಗಮಲಿಂಗ ತೃಪ್ತಿ ಸಾಲದೇ? ಅನಂತಕಾಲ ತೃಪ್ತಿಯ ಮಾಡುವದನು ಒಂದು ನಿಮಿಷಾರ್ಧ ನಿಮ್ಮ ಶರಣರ ಅನುಭಾವ ಸಾಲದೇ ಕೂಡಲ ಚನ್ನಸಂಗಮದೇವಾ?

(೧೬). ಅನುಭಾವವ ನುಡಿದು ಅಣ್ಣಗಳಿರಾ, ಅನುಭಾವವೆತ್ತ ನೀವೆತ್ತ ಹೋಗಿರಣ್ಣಾ. ಅನುಭಾವವೆಂಬುದು ಆತ್ಮವಿದ್ಯೆ. ಅನುಭಾವವೆಂಬುದು ತಾನಾರೆಂಬುದ ತೋರುವದು. ಅನುಭಾವವೆಂಬುದು ನಿಜನಿವಾಸದಲ್ಲಿರಿಸುವದು. ಇಂತಪ್ಪ ಅನುಭಾವದನುವನರಿಯದೆ, ಶಾಸ್ತ್ರಜಾಲದ ಪಸಾರವನಿಕ್ಕಿ, ಕೊಳ್ಳದ ಕೊಡದ ವ್ಯವಹಾರವ ಮಾಡುವ ಅಣ್ಣಗಳಿರಾ, ನೀವೆತ್ತ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಅನುಭಾವವೆತ್ತ ಹೋಗಿರಣ್ಣಾ.

(೧೭). ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು. ಅನುಭಾವವಿಲ್ಲದ ಲಿಂಗ ಸಮರಸ ಸುಖವನೀಯದು. ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು. ಅನುಭಾವವಿಲ್ಲದೆ ಅರಿಯಬಾರದು. ತನ್ನಲ್ಲಿ ತಾ ಸನ್ನಿಹಿತವುಳ್ಳರೆ, ಶಿವಶರಣ ಸಂಗವೇತಕ್ಕೆನಲುಂಟೇ? ಕೂಡಲಸಂಗಮದೇವಯ್ಯಾ ನಿಮ್ಮ ಅನುಭಾವವ ಮಾತಿನ ಮಥನವೆನಬಹುದೇ?

(೧೮). ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ. ಲಿಂಗಾನುಭಾವದಿಂದ ನಿಮ್ಮ ಕಂಡೆನ್ನ ಮರೆದೆ ಕೂಡಲಸಂಗಮದೇವಾ.

---

## ಅಂಧಶ್ರದ್ಧೆಯುಳ್ಳವನಾಗಬೇಡ.

(೧). ಆಣವಮಲ ಮಾಯಾಮಲ ಕಾರ್ಮಿಕಮಲವೆಂಬ ಮಲತ್ರಯಂಗಳ ಬಲೆಯಲ್ಲಿ ಬಿದ್ದು ಹೊಡಾಡುವಾತ ಗುರುವಲ್ಲ. ಪ್ರಾಣೇಂದ್ರಿಯಂಗಳಲ್ಲಿ ಮುಸುಕಿದ ಅಜ್ಞಾನ ಅಹಂಕಾರದಲ್ಲಿ ಮುಂದುಗಾಣದೆ ನಡೆಯುವಾತ ಜಂಗಮವಲ್ಲ. ಇವರಿಗೆ ದೇವರೆಂದು ಪೂಜಿಸುವಾತ ಭಕ್ತನಲ್ಲ. ಅರುಹು ಆಚಾರಹೀನರಾದ ಗುರುಲಿಂಗಜಂಗಮರ ದೇವರೆಂದು ಪೂಜಿಸುವ ಭಕ್ತಂಗೆ ಭವರಾಟಣದಲ್ಲಿ ಸತ್ತು ಸತ್ತು, ಹುಟ್ಟಿ ಹುಟ್ಟಿ, ಸುತ್ತಿ ಸುತ್ತಿ, ಇರ್ಪುದು ತಪ್ಪದು ನೋಡಾ ಅಖಂಡೇಶ್ವರಾ.

(೨). ಗುರುವಾದಡೂ, ಆಚಾರಭ್ರಷ್ಟನಾದಡೆ ಅನುಸರಿಸಲಾಗದು. ಲಿಂಗವಾದಡೂ, ಆಚಾರ ಹಳುವಾದಲ್ಲಿ ಪೂಜಿಸಲಾಗದು. ಜಂಗಮವಾದಡೂ, ಆಚಾರ ಅನುಸರಣೆಯಾದಲ್ಲಿ ಕೂಡಲಾಗದು. ಆಚಾರವೇ ವಸ್ತು, ವ್ರತವೇ

ಪ್ರಾಣ, ಕ್ರಿಯವೇ ಜ್ಞಾನ, ಜ್ಞಾನವೇ ಆಚಾರ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವು ತಾನೆ.

(೩). ಮರದ ದೇವರಿಗೆ ಉರಿಯ ಪೂಜೆಯುಂಟೇ? ಮಣ್ಣಿನ ಹರಿಗೋಲಲ್ಲಿ ತುಂಬಿದ ತೊರೆಯ ಹಾಯಲು ಬಹುದೇ? ಇಂತೀ ದೃಷ್ಟವ ಕಂಡು ಕಾಣಿಸಿದಲ್ಲಿ ಪ್ರಮಾಣಿಸಿದಲ್ಲದೆ, ಆವ ತೆರನು? ಹಾಗೆ ಬರಿ ಹುಂಡರ ಆಚಾರ ಭ್ರಷ್ಟರ ಅರ್ಥಿಕಾರರ ಚರ್ಚೆಗೋಷ್ಠಿವಂತರ ಬಹುಯಾಚಕರ ಪಗುಡಿ ಪರಿಹಾಸಕರ ತ್ರಿವಿಧದಲ್ಲಿ ಸೂತಕವನರಸುವರ ವಿಶ್ವಾಸಘಾತಕರ ಅಪ್ರಮಾಣ ಪಾತಕರ, ಭಕ್ತಿ ತೊಟ್ಟಲ್ಲಿ ಭಕ್ತರೆಂದರೆ, ವಿರಕ್ತಿ ತೊಟ್ಟಲ್ಲಿ ಕರ್ತರೆಂದರೆ, ದೀಕ್ಷೆಯ ಮಾಡಿದಲ್ಲಿ ಗುರುವೆಂದಡೆ, ನಾನೀ ತಪ್ಪು ಕಂಡಲ್ಲಿ ಎತ್ತಿ ತೂರುವೆನು. ಗೋಷ್ಠಿಯಲ್ಲಿ ಕುಚಿತ್ತ ಬಿಡದಿರ್ದಡೆ, ಇದು ನಿಮಗೆ ನಿಶ್ಚಯವಲ್ಲ ಎಂಬೆನು. ಮತ್ತೆಯು ಇವ ಕಚ್ಚಿ ಬಿಡಲಾರದಿರ್ದಡೆ, ನಿಃಕಳಂಕ ಕೂಡಲಚನ್ನಸಂಗಮದೇವರಾದಡೂ, ಎತ್ತಿ ಹಾಕುವೆನು.

(೪). ಮರದೊಳಗಣ ಕಿಚ್ಚು ತನ್ನ ತಾನೇ ಉರಿಯಬಲ್ಲುದೇ? ಶಿಲೆಯೊಳಗಣ ದೀಪ್ತಿ ಆ ಬೆಳಗ ತನ್ನ ತಾನೇ ಅರಿಯಬಲ್ಲುದೇ? ಆ ತೆರನಂತೆ ಕುಟಿಲನ ಭಕ್ತಿ, ಕಿಸುಕುಳನ ವಿರಕ್ತಿ, ಮಥನಿಸಿಯಲ್ಲದೆ ದಿಟವ ಕಾಣಬಾರದು. ಸತ್ಯವನು ಅಸತ್ಯವನು ಪ್ರತ್ಯಕ್ಷ ಪ್ರಮಾಣಿಸಿಯಲ್ಲದೆ ನಿಶ್ಚಯವನರಿಯಬಾರದು. ಗುರುವಾದಡು, ಲಿಂಗವಾದಡು, ಜಂಗಮವಾದಡು ಪರೀಕ್ಷಿಸಿ ಹಿಡಿಯದವನ ಭಕ್ತಿ ವಿರಕ್ತಿ, ತೂತ ಕುಂಭದಲ್ಲಿಯ ನೀರು, ಸೂತ್ರ ತಪ್ಪಿದ ಬೊಂಬೆ, ನಿಜನೇತ್ರ ತಪ್ಪಿದ ದೃಷ್ಟಿ. ಬೇರು ಮೇಲಾಗಿ ಸಸಿಗೆ ನೀರಿನಾರೈಕೆಯುಂಟೇ? ಇಂತೀ ಆವ ಕ್ರಿಯೆಯಲ್ಲಿಯೂ ಭಾವಶುದ್ಧವಾಗಿ ಅರೈಕೆ ಬೇಕು. ಇದು ಭೋಗಬಂಕೇಶ್ವರ ಲಿಂಗದ ಸಂಗದ ಶರಣನ ಸುಖ.

(೫). ಭಕ್ತಿಹೀನ ಭಕ್ತಿಯ ಮಾಡುವಲ್ಲಿ ಗುರುಲಿಂಗ ಜಂಗಮದಿರವ ಅರಸಲಿಲ್ಲ. ಭಕ್ತಿಯುಳ್ಳವ ಭಕ್ತಿಯ ಮಾಡುವಲ್ಲಿ ಗುರುವಿನಲ್ಲಿ ಗುಣವನರಸಬೇಕು. ಲಿಂಗದಲ್ಲಿ ಲಕ್ಷಣವನರಸಬೇಕು. ಜಂಗಮದಲ್ಲಿ ವಿರಕ್ತಿಯನರಸಬೇಕು. ಅದೆಂತೆಂದೊಡೆ, ಈ ತ್ರಿವಿಧವು ತನ್ನ ಪ್ರಾಣವಾದ ಕಾರಣ. ಪರುಷ ಶುದ್ಧವಾಗಿಯಲ್ಲದೆ ಲೋಹದ ಕುಲವ ಕೆಡಿಸದು. ತಾ ಹಿಡಿದಾರಾಧಿಸುವ ವಸ್ತು

ಶುದ್ಧವಾಗಿಯಲ್ಲದೆ ಪೂಜಿಸುವ ಭಕ್ತನ ಚಿತ್ತ ಶುದ್ಧವಿಲ್ಲ. ಸದಾಶಿವಮೂರ್ತಿ ಲಿಂಗ ಶುದ್ಧವಾಗಿಯಲ್ಲದೆ, ಎನ್ನಂಗ ಶುದ್ಧವಿಲ್ಲ.

(೬). ಜೀವನಾಡಿಸಿದಂತೆ ಆಡುವರೆಲ್ಲರು ಲಿಂಗಪ್ರಾಣಿಗಳಪ್ಪರೇ? ನಾನಾ ಭವಂಗಳಲ್ಲಿ ಬಂಧಿತರಾದವರೆಲ್ಲರು ಶಿವಲಿಂಗ ಪ್ರಾಣಿಗಳಪ್ಪರೇ? ದಿವ್ಯ ಜ್ಞಾನ ಪರಿಪೂರ್ಣರಪ್ಪರೆಲ್ಲರೂ ತ್ರಿವಿಧ ಮಲದಲ್ಲಿ ಸಿಕ್ಕು, ಆ ಮಲ ಸಂಬಂಧಿಗಳ ದ್ವಾರದಲ್ಲಿ ನಿಂದುದಾಗಳೇ ತಮ್ಮ ದಿವ್ಯಜ್ಞಾನತ್ವ ಮರೆದರೆಂಬುದಕ್ಕೆ ಸೂಚನೆ. ಉಪಾಧಿಕೆಗೆ ಅಂಗವ ಹೊತ್ತು ನಿಃಕಳಂಕಮಲ್ಲಿಕಾರ್ಜುನನ ಅರಿಯದೇ ಹೋದರು.

---

## ಪರಮಾತ್ಮನನ್ನು ಮೋಹಿಸು.

### (ಸತಿಪತಿ ಭಾವದ ವಚನಗಳು).

(೧). ಎನ್ನ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ರೂಹ ಕಂಡು ಆನು ಮರುಳಾದೆನವ್ವಾ. ಆನು ಕಂಡು ಬೆರಗಾದೆನವ್ವಾ, ಎನ್ನಂತರಂಗದ ಆತ್ಮನೊಳಗೆ ಅನುಮಿಷ ನಿಜೈಕ್ಯ ಗುಹೇಶ್ವರನ ಕಂಡು.

(೨). ಅಕ್ಕ ಕೇಳವ್ವ, ಅಕ್ಕಯ್ಯ, ನಾನೊಂದು ಕನಸ ಕಂಡೆ. ಅಕ್ಕಿ ಯಡಕೆ, ಎಲೆ ತೆಂಗಿನಕಾಯಿ ಕಂಡೆ. ಚಿಕ್ಕ ಚಿಕ್ಕ ಜಡಿಗಳ ಸುಲಿಪಲ್ಲಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ. ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು. ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

(೩). ನೀನು ದಂಡುಮಂಡಲಕ್ಕೆ ಹೋಹೆನೆಂದೊಡೆ, ನಾನು ಸುಮ್ಮನಿಹೆನು. ನೀನು ಎನ್ನ ಕೈಯೊಳಗಿದ್ದು, ಎನ್ನ ಮನದೊಳಗಿರ್ದು, ನುಡಿಯದಿರ್ದೊಡಾನು ಎಂತು ಸೈರಿಸುವೆನಯ್ಯಾ? ನೆನಹೆಂಬ ಕುಂಟಿಣಿ ಚನ್ನಮಲ್ಲಿಕಾರ್ಜುನನ ಒಲಿಸದಿರ್ದೊಡೆ, ನಾನೇವೆ ಸಖಿಯೇ?

(೪). ಇಂದ್ರನೀಲ ಗಿರಿಗಳನೇರಿಕೊಂಡು, ಚಂದ್ರಶಿಲೆಗಳ ಮೆಟ್ಟಿಕೊಂಡು, ಕೊಂಬ ಬಾರಿಸುತ, ಹರನೇ, ಎನ್ನ ಕುಂಭ ಕುಚದ ಮೇಲೆ ನಿಮ್ಮ

ಸೈರಿಸ್ವಕೊಂಬೆನಯ್ಯ. ಅಂಗಭಂಗ ಮನಭಂಗವಳಿದು ನಿಮ್ಮನೆಂದಿಂಗೆ ಒವ್ಕೆ ನೆರೆವೆನೋ ಚನ್ನಮಲ್ಲಿಕಾರ್ಜುನಾ.

(೫). ಗಿಡುಮರದ ಕುರುಬಿತಿಯು ಜವ್ವನದಂತೆ ನುಡಿಯಲರಿಯದ ಮುಗ್ಧೆಯಾಗಿರ್ದೆನವ್ವಾ. ಪಗಲನರಿಯದ ಜಕ್ಕವಕ್ಕಿಯಂತೆ ಮನಬಯಸುತಿರ್ದೆನವ್ವಾ. ಹಲವು ಕಾಲ ಎಲವದ ಮರನ ಸಾರಿದ ಅರಗಿಳಿಯಂತಾದೆನವ್ವಾ. ಇದು ಮಹಾಲಿಂಗಗಜೇಶ್ವರನ ನೆರೆಯಲರಿಯದೆ ಇವರೆಲ್ಲರ ವಿಧಿಯ ಹೊತ್ತೆನವ್ವಾ.

(೬). ಇನಿಯಂಗೆ ತವಕವಿಲ್ಲ. ಎನಗೆ ಸೈರಣೆ ಇಲ್ಲ ಮನದಿಚ್ಛೆಯ ನರಿವ ಸಖಿಯರಿಲ್ಲ. ಮನ್ಮಥ ವೈರಿಯ ಬಾಣ ಮನದಲ್ಲಿ ಸಿಲುಕಿ, ಬಿಡದು. ಇನ್ನೇವೆನಿನ್ನೇವೆ? ದಿನ ವೃಥಾ ಹೋಗಿ, ಯವ್ವನ ಬೀಸರ ಹೋಗದ ಮುನ್ನ, ಪಿನಾಕಿಯ ತಂದು, ನೆರಹವ್ವಾ ಶಂಭುಜಕ್ಕೇಶ್ವರನಾ.

(೭). ಮಚ್ಚುಗ್ರಾಹಿಗೊಂಡೆ ನಿನಗಾನು. ವಿಕಳಗೊಂಡೆ. ಶಿವಶಿವಾ, ಪ್ರಾಣಪತಿಯಲ್ಲದೆ ಮತ್ತೊಂದನರಿಯೆ. ಮನವಚನಕಾಯದಲ್ಲಿ ಉಚಿತವೇ ನಿಮಗೆ? ಪುರುಷಲಕ್ಷಣವೇ? ಅತಃಪರ ಗಂಡರ ನಾನು ಬಲ್ಲರೆ ಕರ್ತ ನಿಮ್ಮಾಣೆ ಶಂಭುಜಕ್ಕೇಶ್ವರಾ.

(೮). ಕಾಮನ ಕೊಂದಂದು, ಪಟ್ಟಕ್ಕೆ ನಿಂದ ಗೊರವ ಕಾಮರಾಜನವ್ವಾ. ರಾಜಾಧಿರಾಜ. ಕಂಡವರೆಲ್ಲರ ಹೆಂಡಿರ ಮಾಡಿ ನೆರೆವ ಮಹಾಕಾಮಿ. ಕಾಮಿನೀ ನೀ ಕೇಳಾ, ಇಂತಪ್ಪ ಕಾಮಿಯನು ಅತಿ ಕಾಮದಿಂದ ಕಾಮಿಸಿದೆನವ್ವಾ ಉರಿಲಿಂಗದೇವನಾ.

(೯). ಟಕ್ಕಿಪನಲ್ಲನ ಟಕ್ಕಿಪ ತೆರನನು ಚದುರೇ, ಚದುರಿಸದೆನಗುಸುರಾ. ಸತ್ಯವ ಜಪಿಸಲು ಸಿಕ್ಕುವ ನಲ್ಲನು. ಸತ್ಯವು ಸತ್ಯವು ಕೇಳಾ ಕೆಳದಿ. ಆವನು ಉಂಬಲ್ಲಿ ಉಡುವಲ್ಲಿ ನೇಹವ ಬೆಳಿಸಲು ಸಿಕ್ಕುವನು. ಬಿಡದಿರು ಉರಿಲಿಂಗದೇವನಾ.

(೧೦). ಹಲವು ಕಾಲದಲಿ ಕೇದಾರ ಕಂಡಂತಾದೆನವ್ವಾ. ಮುನಿಸು ನಾಚಿಕೆ ಹೋಗಿ, ಕಂಗಳ ಕೊನೆಯಲ್ಲಿ ಸಿಲುಕಿದನವ್ವಾ. ತನು ಜರ್ಝರಿತ

ನಾಗಿ, ಮನ ಹವ್ವನೆ ಹಾರಿತ್ತವ್ವಾ. ಎನ್ನ ಮಹಾಲಿಂಗಗಜೇಶ್ವರನು ಉಳಿದ ನೆಂದಡೆ, ಆಲಿಕಲ್ಲನುಂಗಿದ ಚಕೋರನಂತಾದೆನವ್ವ.

(೧೧). ಅಪ್ಪಿನ ಸೋಂಕಿನ ಸುಖವನಗಲುವ ಮನಕಿಂದ ಬಂಜೆಯಾಗಿಪ್ಪುದು ಕರಲೇಸು, ನೋಡವ್ವ. ಕಂಗಳ ನೋಟ ಮನಕ್ಕೆ ಸೈರಿಸದು. ಎಣಿಕೆಗೊಂಡು ಬಡವಾದ ಪರಿಯ ನೋಡಾ. ಅವ್ವಾ, ತುಪ್ಪುಳವನಿಕ್ಕಿದ ಹಂಸೆಯಂತಾದೆನವ್ವಾ ಮಹಾಲಿಂಗಗಜೇಶ್ವರನನುಳಿದರೆ.

(೧೨). ಕಾಮಕಂಜಿ ಚಂದ್ರನ ಮರೆಹೊಗಲು, ರಾಹು ಕಂಡಂತಾದಳವ್ವೆ. ಹಾವೆಂದರಿಯದೆ ನೇಸೆಂದರಿಯದೆ ಕ್ಷಣ ನಾಗಭೂಷಣೆಯಾಗಿದ್ದಳವ್ವೆ. ಮಹಾಲಿಂಗಗಜೇಶ್ವರನ ನೆರೆವ ಭರದಿಂದ ಕೊಳಕೆ ಬಂದ ಮೃಗದ ಹಾಗಿಪ್ಪೆನವ್ವಾ.

(೧೩). ಮಾಗಿಯ ಹುಲ್ಲಿನ ಸೋಂಕಿನಂತೆ, ತನು ಪುಳುಕಿತಳಾದಳವ್ವೆ. ನುಡಿ ತೊದಳು. ಅವನೊಲವೇ ಆಧಾರವಾಗಿರ್ದಳವ್ವೆ. ಗಿಳಿಯ ತುಂಬಿಯು ಕುಂಕುಮದ ರಜದಲ್ಲಿ ಬಂಡುಂಡಂತೆ ಮಹಾಲಿಂಗ ಗಜೇಶ್ವರನಲ್ಲಿ ತಾನೇ ರತಿಯಾಗಿರ್ದಳವ್ವೆ.

(೧೪). ಅಗಲಿದ ನಲ್ಲನ ಕನಸಿನಲಪ್ಪಿ ಸುಖಿಯಾದಿರವ್ವಾ. ಕಂಡ ಕನಸು ದಿಟವಾದಡೆ, ಅವ ನಮ್ಮ ನಲ್ಲ. ಮನಸುಳ್ಳವರು ನೀವು ಪುಣ್ಯಗೈದಿರವ್ವಾ. ಮಹಾಲಿಂಗ ಗಜೇಶ್ವರನನಗಲಿದಡೆ, ನಿಃಕ್ರಿ ಎನಗಿಲ್ಲ. ಕನಸೆಲ್ಲಿಂದ ಬಹುದವ್ವಾ.

---

# ಪ್ರಾರ್ಥನೆಗಳು.

## (೧) ಸಂಸಾರವು ದುಃಖಮಯವು. ಇದನ್ನು ದೂರ ಮಾಡಲಿಕ್ಕೆ ಯತ್ನಿಸು.

(೧). ಸಂಸಾರಸಾಗರ ತೆರೆಕೊಬ್ಬಿ, ಮುಖದ ಮೇಲೆ ಅಲೆವುತ್ತಲಿದ್ದುದೇ? ಸಂಸಾರಸಾಗರ ಉರದುದ್ದವೇ ಹೇಳಾ? ಸಂಸಾರಸಾಗರ ಕೊರಳುದ್ದವೇ ಹೇಳಾ? ಸಂಸಾರಸಾಗರ ಶಿರದುದ್ದವಾದ ಬಳಿಕ ಏನ ಹೇಳುವೆನಯ್ಯ? ಅಯ್ಯಾ. ಅಯ್ಯಾ, ಏನ ಹುಯ್ಯಲ ಕೇಳಯ್ಯ. ಕೂಡಲಸಂಗಮದೇವಯ್ಯ, ನಾನೇವೆನೆಯ್ಯ?

(೨). ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವ ಗ್ರಾಸಿಯಾಗಿ ನುಂಗಿತ್ತಯ್ಯ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತಯ್ಯ. ಇನ್ನೆಂದಿಂಗೆ ಮೋಕ್ಷವಹುದೋ ಕೂಡಲಸಂಗಮದೇವಾ?

(೩). ಇಲಿ ಗಡಹನೊಡ್ಡಿದಲ್ಲಿರ್ಪಂತೆ, ಎನ್ನ ಸಂಸಾರತನುವ್ನು ಕೆಡುವನ್ನಕ್ಕ ಮಾಣದು. ಹೆರರ ಛಿದ್ರಿಸುವದನು ತನು ಕೆಡುವನ್ನಕ್ಕ ಮಾಣದು. ಅಕಟಕಟ! ಸಂಸಾರ ಅಸತ್ಯ, ಕೂಡಲಸಂಗಮದೇವಾ.

(೪). ಕಪ್ಪೆ ಸರ್ಪನ ನೆರಳಲ್ಲಿ ಇರ್ಪಂತೆ ಎನಗಾಯಿತ್ತಯ್ಯ. ಅಕಟಕಟಾ! ಸಂಸಾರವು ವೃಥಾ ಹೋಯಿತ್ತಲ್ಲಾ. ಕರ್ತು ಕೂಡಲಸಂಗಮದೇವಾ, ಇವನು ತಪ್ಪಿಸಿ ನನ್ನನು ರಕ್ಷಿಸಯ್ಯ ಪ್ರಭುವೇ.

(೫). ಶೂಲದ ಮೇಲಣ ಭೋಗವೇನಾದರೇನೋ? ನಾನಾ ವರ್ಣದ ಸಂಸಾರ ಹಾವ ಹಾವಡಿಗನ ಸ್ನೇಹದಂತೆ. ತನ್ನಾತ್ಮವೇ ತನಗೆ ಹಗೆಯಾದ ಬಳಿಕ ಬಿನ್ನಾಣವುಂಟೇ ಮಹಾದಾನಿ ಕೂಡಲಸಂಗಮದೇವಾ?

(೬). ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ. ಕಾಯಯ್ಯಾ ಎನ್ನುವನು, ಕಾಯಯ್ಯ ಕಾಯಯ್ಯ. ಪುರುಳಿಲ್ಲ. ಪುರುಳಿಲ್ಲ. ಕೂಡಲಸಂಗಮದೇವಾ, ಶಿವಧೋ, ಶಿವಧೋ.

( ೭ ). ಪಾಪಿ ನಾನೊಂದು ಪಾಪವ ಮಾಡಿದೆ. ಆ ಪಾಪವೆನಗೆ ಸತಿ ಸುತರಾಗಿ ಕಾಡುತ್ತಿದೆ. ಪಾಪವನೆ ಬಿತ್ತಿ, ಕೋಪವನೆ ಬೆಳೆದು, ಈ ಪರಿಯಲ್ಲಿ ದಿನಂಗಳು ಆದವಲ್ಲಾ! ಎನಗಿನ್ನೇನು ಪರಿ ಹೇಳಾ ದೇವರಾಯ ಸೊಡ್ಡಳಾ?

( ೮ ). ಹಳ್ಳದೊಳು ಉರುಳಿ ಬರುತ್ತಿರಲು, ನೆರೆ ತೆರೆಗಳು ತಾಗದಿಪ್ಪವೇ? ಸಂಸಾರಸಾಗರದೊಳಗೆ ಮುಳುಗಾಡುತಿಪ್ಪ ಪ್ರಾಣಿಗಳಗೆ ಸುಖದುಃಖಗಳು ತಾಗದಿಪ್ಪವೇ? ಇದುಕಾರಣ ರೂಪಾದ ಜಗಕ್ಕೆ ಪ್ರಳಯವಾಯಿತ್ತು ಗುಹೇಶ್ವರಾ.

( ೯ ). ಬಟ್ಟೆಯಲ್ಲಿ ಹೋಗುತ್ತಿಪ್ಪ ಮನುಜನೊಬ್ಬನನ್ನು, ಹುಲಿ, ಕಾಡು ಗಿಚ್ಚು, ರಕ್ಕಸಿ, ಕಾಡಾನೆಗಳು ನಾಲ್ಕು ದಿಕ್ಕಿನಲ್ಲಿ ಅಟ್ಟಿ ಬರುತ್ತಿರಲು, ಅವಂ ಕಂಡು, ಭಯದಿಂದ ಹೋಗಲು, ದಿಕ್ಕು ತೋರದೆ, ಹಾಳು ಭಾವಿಯಂ ಕಂಡು, ತಲೆಯೂರಿ ಬೀಳುವಲ್ಲಿ, ಹಾವ ಕಂಡು ಬೀಳಲಮ್ಮದೆ, ಇಲಿ ಕಡಿದ ಬಳ್ಳಿಯಂ ಹಿಡಿದು ನಿಲ್ಲಲು, ಜೇನುಹುಳು ಮೈನೂರುವಾಗ, ಮೂಗಿನ ತುದಿಯಲೊಂದು ಹನಿಯು ಮಧುಬಿಂದು ಬೀಳಲಾಗಿ, ಆ ಮಧುವಂ ಕಂಡು, ಹಿರಿದಪ್ಪ ದುಃಖವ ನೆಲ್ಲವ ಸೈರಿಸಿ, ನಾಲಿಗೆಯಲ್ಲಿ ಆ ಮಧುವ ಸೇವಿಸುವನಂತೆ, ಈ ಸಂಸಾರಸುಖವ ವಿಚಾರಿಸಿ ನೋಡಿದಡೆ, ದುಃಖದಾಗರವು. ಇದನರಿದು ಸಕಲ ವಿಷಯಂಗಳ ಲ್ಲಿಯು ಸುಖವಿಂತುಟೆಂದು ನಿರ್ವಿಷಯಿಯಾಗಿ ನಿಂದ ನಿಲವು ನೀನೇ, ಸಿಮ್ಮಲಿ ಗೆಯ ಚನ್ನರಾಮಾ.

( ೧೦ ). ನೆನಹಿನ ಭಾವಕ್ಕೆ ಈ ಭಾವ. ಮನಸಿನ ಮೋಹವೇ ಸತಿ. ಆಸೆಯೇ ತನ್ನ ಸುತ್ತಿರ್ಪ ಭವಪಾಶದ ಹೇಳಿಗೆ. ತನ್ನಲ್ಲಿ ತೋರಿಪ್ಪ ಮಿಥ್ಯಾತತ್ವ ವೇ ಕೂರಲಗು. ಬೇರೊಂದನರಸಲೇಕೆ ಸಂಸಾರವ ಆತುರವೈರಿಮಾರೇಶ್ವರಾ?

( ೧೧ ). ಅಣ್ಣನೆಂಬಣ್ಣಗಳ ಅಣ್ಣಿಸೋದು ಹೊನ್ನು. ಅಣ್ಣನೆಂಬಣ್ಣಗಳ ಅಣ್ಣಿಸೋದು ಹೆಣ್ಣು. ಅಣ್ಣನೆಂಬಣ್ಣಗಳ ಅಣ್ಣಿಸೋದು ಮಣ್ಣು. ಹೊನ್ನ ಕಂಡ ಬಳಿಕ ಅಣ್ಣದಣ್ಣಗಳಾರು? ಹೆಣ್ಣ ಕಂಡ ಬಳಿಕ ಅಣ್ಣದಣ್ಣಗಳಾರು? ಮಣ್ಣ ಕಂಡ ಬಳಿಕ ಅಣ್ಣದಣ್ಣಗಳಾರು? ಹೆಣ್ಣು ಹಿರಣ್ಯ ಭೂಮಿ ಎಂಬ ಹುಸಿ ಯು ಜಗದ ಕಣ್ಣ ಮೇಲೆ ಹೊಯ್ದು, ನಿಮ್ಮ ನೆನೆವುದಕ್ಕೆ ತೆರಹುಗುಡದಿದೆಯಲ್ಲಾ, ಸೊಡ್ಡಳಾ, ಗರಳಗಳಧರಾ.

(೧೨). ನಿಮಿಷದ ನಿಮಿಷೆಂಬೋ. ಕ್ಷಣದೊಳಗರ್ಧೆಂಬೋ. ಕಣ್ಣಾ ಮುಚ್ಚಿ ಬಿಚ್ಚುವನಿಸು ಬೇಗೆಂಬೋ. ಸಂಸಾರದಾಗೆಂಬೋ. ಸಂಸಾರದ ಹೋಗೆಂಬೋ. ಸಂಸಾರದೊಪ್ಪೆಂಬೋ. ಕೂಡಲಸಂಗಮದೇವ ಮಾಡಿದ ಮಾಯೆಂಬೋ. ಅಭ್ರಚ್ಛಾಯೆಂಬೋ.

(೧೩). ಸಂಸಾರಸಾಗರದಿಂದಲುದಿಸಿದ ಸುಖವೇ ದುಃಖವೆಂದರಿಯದೆ, ಆ ಸುಖವನೇ ಮೆಚ್ಚಿ, ಭವದುಃಖವೆಂಬ ಕ್ರೂರ ಜನ್ಮ ಚಕ್ರಕ್ಕೀಡಾಗಿ, ಅಲ್ಲಿ ತನ್ನ ಮರೆದು, ತನಗಿಲ್ಲದ ಭ್ರಮೆಯ ತನ್ನದೆಂದು, ಅಂತಪ್ಪ ಘೋರದೊಳಗೋಲಾಡುತಿಪ್ಪ ಮುಳುಗಾಡುತಿಪ್ಪ ಅಜ್ಞಾನಿಜೀವಿಗಳು ನಿಮ್ಮನೆತ್ತಬಲ್ಲರಯ್ಯ ಎನ್ನಯ್ಯಪ್ರಿಯ ಈರ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ?

(೧೪). ಸಾಸವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ. ಗಳಿಗೆಯ ಬೇಟವ ಮಾಡಿಹೆನೆಂಬ ಪರಿಯ ನೋಡಾ. ತನ್ನನಿಕ್ಕಿ ನಿಧಾನವ ಸಾಧಿಸಿಹೆನೆಂದಡೆ ಬಿನ್ನಾಣ ತಪ್ಪಿತ್ತು ಗುಹೇಶ್ವರಾ.

**ಅರ್ಥ**:—ಅಲ್ಪ ಸಂಸಾರಸುಖಕ್ಕೆ ಮೆಚ್ಚಿ ಮರುಳಾಗಿ, ಲಯವಾದ ಬಳಿಕ, ಲಿಂಗವ ಕಂಡಿಹೆನೆಂದಡೆ, ಕಾಣಬಾರದೆಂಬುದೀವಚನದ ತಾತ್ಪರ್ಯಾರ್ಥ.

(೧೫). ಶಿವಶಿವಾ ತಾನಾರೆಂಬುದನರಿಯದೆ, ತಮ್ಮ ನಿಜವ ಮರೆದು ಈ ಮರುಳುಮಾನವರು ಕೆಟ್ಟ ಕೇಡ ಪೇಳ್ವೆ. ಬಲ್ಲರೆ ಹೇಳಿರಿ. ಅರಿಯದಿದ್ದರೆ ಕೇಳಿರಿ. ಆನೆ ಮೊದಲು ಇರುಹೆ ಕಡೆ ಒಂದೊಂದು ಜನ್ಮದಲ್ಲಿ ಸಹಸ್ರ ವೇಳೆ ಸತ್ತು, ಸಹಸ್ರ ವೇಳೆ ಹುಟ್ಟಿ, ತೊಡದ ಚೋಹವ ತೊಟ್ಟು, ಮೆಟ್ಟದ ಭೂಮಿಯ ಮೆಟ್ಟಿ, ಉಣ್ಣದ ಆಹಾರವನುಂಡು, ಭವಭವದಲ್ಲಿ ಗಾಸಿಯಾಗಿ ಕಡೆಯಲ್ಲಿ ಮನುಷ್ಯದೇಹವ ತಾಳಿದಲ್ಲಿ, ವಾತ ಪಿತ್ತ ಶ್ಲೇಷ್ಮ ಮೊದಲಾದ ಮುನ್ನೂರರುವತ್ತು ರೋಗಾದಿ ಬಾಧೆಗಳಿಂದ ಕಂದಿಕುಂದಿ ನೊಂದುಬೆಂದು ತಾಪತ್ರಯಾಗ್ನಿಯಿಂದ ದಗ್ಧವಾದ ದುಃಖವ ಪೇಳಲಿಕ್ಕೆ ಸಹಸ್ರ ಹೆಡೆಯ ಶೇಷಂಗೆ ಎರಡು ಸಹಸ್ರ ಜಿಹ್ವೆಯಿಂದ ಪೇಳಲಿಕ್ಕೆ ಅಳವಲ್ಲ. ಸಹಸ್ರ ನೇತ್ರವುಳ್ಳ ದೇವೇಂದ್ರಂಗೆ ಪೇಳ್ವೆನೆಂದರೆ ಅಸಾಧ್ಯ. ಚತುರ್ಮುಖ ಬ್ರಹ್ಮಂಗೆ ಪೇಳಲಿಕ್ಕೆ ಅಗಮ್ಯ ಅಗೋಚರ. ಇಂತಿದನು ಕಂಡು ಕೇಳಿ ಮೈಮರೆದು ದೇಹೋಹಂಮೆಂದು ಮೃತ್ಯುಲೋಕದ

— —

ಅನಿತ್ಯಭೋಗಂಗಳ ಮೆಚ್ಚಿ ಈ ಮಾಯಾಸಂಸಾರದ ವಿಷಯ ಸುಖ ಬಹು ಸವಿ ಎಂದು ತಲೆದೂಗಿ ಹೊಡೆದಾಡಿ ಹೊತ್ತಗಳೆದು ಹೇಸಿಕೆ ಸಂಸಾರದಲ್ಲಿ ಸಿಲ್ಕಿ ಸತ್ತುಹೋಗುವ ಹೇಸಿ ಮೂಳ ಹೊಲೆಮಾದಿಗರಿಗೆ ಶಿವಪಥ ಎಂದೆಂದಿಗೂ ಸಾಧ್ಯವಲ್ಲ, ಅಸಾಧ್ಯವೆಂದಾತ ನಿಮ್ಮ ಶರಣ ವೀರಾದಿ ವೀರ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೇ.

(೧೬) ತೋರಿಯಡಗುವ ಮೇಘಾಡಂಬರದಂತೆ ತನುವಿನ ತೋರಿಕೆ ಹೀಗೆಂದರಿದು ನಿತ್ಯತ್ವವ ಪಡೆದ ಹಾಗೆ, ಮತ್ತೇಕೆ ಈ ದೇಹವ ಮಮಕರಿಸುವೆ? ಆವಾಗ ಬಿದ್ದು ಹೋಹುದೆಂದರಿಯಬಾರದು. ದೇವದಾನವ ಮಾನವರೊಳಗಾದವರೆಲ್ಲ ಅಳಿದು ಹೋಹುದ ಕಂಡು ಕೇಳಿ ಮತ್ತೆ ತನುವಿಗಾಸೆ ಯಾಕೆ? ಬಿಡು ವಿರಕ್ತನಾಗು ಮರುಳೇ. ಕಾಯಜವೈರಿಯ ಪದವ ಪಿಡದಿರು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ನಿನ್ನತ್ತಲೊಯ್ವನು.

(೧೭). ಮೋಹ ಮದ ರಾಗ ವಿಷಾದ ತಾಪ ಶೋಕ ವೈಚಿತ್ಯವೆಂಬ ಸಪ್ತ ಮಲವಾವರಿಸಿ ಮತ್ತರಾಗಿ ತಮ್ಮ ತಾವರಿಯದೆ ಕಣ್ಣಿಂಗೆ ಅಜ್ಞಾನ ತಿಮಿರ ಕವಿದು ಮುಂದುಗಾಣದವರು ಶಿವನನು ಅವರೆತ್ತ ಬಲ್ಲರು? ಗೃಹ ಕ್ಷೇತ್ರ ಸತಿ ಸುತಾದಿ ಪಾಶಂಗಳಲ್ಲಿ ಬಿಗಿವಡೆದ ಪಶುಗಳು ಶಿವನನವರೆತ್ತ ಬಲ್ಲರು? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತಾನವರ ಎತ್ತಲೆಂದೂ ಅರಿಯನು.

(೧೮). ಸಂಸಾರವೆಂಬ ಮಹಾ ಘೋರಾರಣ್ಯದಲ್ಲಿ ಹೊಲಬು ದಪ್ಪಿ ಬಳಲುತ್ತಿಹೆ ನೋಡಯ್ಯ. ಇರುಳು ಹಗಲೆನ್ನದೆ ಸಂಸಾರದಲ್ಲಿ ಸಾವುತ್ತಿಹೆ ನೋಡಯ್ಯ. ಇಂತಪ್ಪ ಸಂಸಾರಾರಣ್ಯದಲ್ಲಿ ಹೊಲಬುಗೆಟ್ಟು ನೆಲೆಯಗಾಣದೆ ಹೋದರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮನರಿಯದೆ.

(೧೯). ಪಂಚೇಂದ್ರಿಯವೆಂಬ ಹೆಡೆಯನುಳ್ಳ ಸಂಸಾರಸರ್ಪ ದಷ್ಟವಾಗಲು, ಪಂಚವಿಷಯವೆಂಬ ವಿಷ ಹತ್ತಿ ಮೂರ್ಛಿತರಾದರೆಲ್ಲ ಸಮಸ್ತ ಲೋಕವೆಲ್ಲ. ಸರ್ವರ ಕಚ್ಚಿ ಕೊಡಿಯಾಡುವ ಸರ್ಪನ ಬಾಯ ಕಟ್ಟಲರಿಯದೆ ಮರಣವಾದರಲ್ಲ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನನರಿಯದವರೆಲ್ಲ.

(೨೦). ಸಂಸಾರ ಸೌಖ್ಯವಲ್ಲ, ಸಂಸಾರ ಸೌಖ್ಯವಲ್ಲ. ಇಹಲೋಕ ಪರಲೋಕ ಸೌಖ್ಯವಲ್ಲ, ಸ್ಥಿರವಲ್ಲ. ಗೃಹಪಾಶಕ್ಷೇತ್ರ ಭ್ರಮೆ ಬಳಸಿ ಬಳಸಿ

ಬರುತ್ತಿದೆ. ಬಿಡು ಬಿಡು ವಾಂಛೆಯ. ಆಗ ಹುಟ್ಟಿ ಬೇಗ ಸಾವವರ ಕಂಡು, ಮತ್ತೇಕೆ ಸಂಸಾರದಾಸೆ? ನಿನ್ನ ದೇಹ ಸ್ಥಿರವಲ್ಲ. ನೀ ಬಂದುದನರಿದು ಹೋಹ ಗತಿ ಪಥವ ತೆರಹು ಮಾಡು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಒಂದಿಹನೆ.

(೨೧). ಆವಾವ ದೇಹ ತೊಟ್ಟರೂ ಆ ದೇಹಕ್ಕೆ ತಕ್ಕ ಸಂಸಾರ ಬಿಡದು. ಆ ಅಧ್ಯಾತ್ಮಿಕ ಆಧಿ ದೈವಿಕ ಆಧಿ ಭೌತಿಕವೆಂಬ ತಾಪತ್ರಯಾಗ್ನಿಯಲ್ಲಿ ಬೇಯದೆ ಮಾಬರೇ? ಹಿಂದೆ ಮಾಡಿದ ಕರ್ಮ ಪೀಡಿಸದೆ ಬಿಡುವುದೇ? ಸುಖ ಲೇಶಮಂ ಕಾಣದೆ ಬಳಲುತ್ತಿದೆ ಜಗವೆಲ್ಲ. ಇದನರಿದು ಮಲಕೋಶ ಶರೀರ ಸಂಸಾರವ ಹೇಸಿ ಬಿಡು ಮರುಳೇ. ಮುಂದೆ ನಿನಗೆ ನಿಜಪದವಹುದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಸುಖಿಯಪ್ಪೆ ಮರುಳೇ.

(೨೨). ಸಂಸಾರವೆಂಬ ಮಹಾವ್ಯಾಧಿ ಬಾಧಿಸಿ ನಡೆವೆಣನ ಮಾಡಿ ಕಾಡುತ್ತಿದೆ ನೋಡಯ್ಯ. ಮುಂದೆ ಸತ್ಪಥದಲ್ಲಿ ಅಡಿ ಇಡಲು ಶಕ್ತಿ ಇಲ್ಲದೆ, ಅಧಮವ ಮಾಡಿ ಕಾಡುತ್ತಿದೆ, ನೋಡಯ್ಯ. ಶಿವನೇ ನಾನು ನಿನ್ನ ಬೇಡಿಕೊಂಬೆನು. ನೀನೇ ಶ್ರೀಗುರುವೆಂಬ ವೈದ್ಯನಾಗಿ ಬಂದು, ಕೃಪಾಪ್ರಸಾದವೆಂಬ ಮದ್ದ ಕೊಟ್ಟು, ಪಂಚಾಕ್ಷರಿ ಎಂಬ ಪಥ್ಯವನೆರೆದು, ಸಂಸಾರವ್ಯಾಧಿಯ ಮಾಣಿಸಯ್ಯ, ನಿಮ್ಮ ಧರ್ಮ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೨೩). ನಿಮ್ಮ ತಂದೆ ಸತ್ತುದ ನೋಡುತ್ತಿದ್ದಿ. ನಿಮ್ಮ ತಂದೆಯ ತಂದೆ ಸತ್ತುದ ಕಾಣುತ್ತಿದ್ದಿ. ನಿಮ್ಮ ಅಜ್ಜ ಪಣಿಜ ಸತ್ತುದ ಕೇಳುತ್ತಿದ್ದಿ. ನಿಮ್ಮ ತಾಯಿ ಸತ್ತುದ ನೋಡುತ್ತಿದ್ದಿ. ನಿಮ್ಮ ತಾಯಿಯ ತಾಯಿ ಸತ್ತುದ ಕಾಣುತ್ತಿದ್ದಿ. ನಿಮ್ಮ ಆಯಿ ಪಣಿಜಿ ಸತ್ತುದ ಕೇಳುತ್ತಿದ್ದಿ. ನಿನ್ನ ಸತಿಸುತರ ಒಡಹುಟ್ಟಿದ ಬಂಧುಗಳು ಸ್ನೇಹಿತರು ಬೀಗರು ಮೊದಲಾದ ಸಕಲ ಲೋಕಾದಿ ಲೋಕಂಗಳು ನಿನ್ನ ಕಣ್ಣ ಮುಂದೆ ವೃಕ್ಷದ ಪರ್ಣಗಳು ಉದುರಿದ ಹಾಗೆ ಸಕಲರು ಅಳಿದು ಹೋಗುವದು ನೋಡುತ್ತಿದ್ದಿ. ಇದಲ್ಲದೆ ದೃಷ್ಟ. ಒಬ್ಬ ರೋಮ ಋಷಿಗೆ ಮೂರುವರೆ ಕೋಟಿ ರೋಮಂಗಳು ಉದುರಿದಲ್ಲಿ ಆ ರೋಮ ಋಷಿ ಎಂಬ ಮುನೀಶ್ವರನು ಪ್ರಳಯವಾಗುವನು. ಮತ್ತೆ ದೇವಲೋಕದ ಸನಕ ಸನಂದಾದಿ ಮುನಿಜನಂಗಳು ಅನಂತಕೋಟಿ ಋಷಿಗಳು ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾ

ಶಿವ ಮೊದಲಾದ ಮೂವತ್ತು ಮೂರು ಕೋಟಿ ದೇವರ್ಕಳು ಇಂತಿವರೆಲ್ಲರು ಎತ್ತಲಾನು ಕಾಲಕ್ಕೆ ಮರಣಕ್ಕೊಳಗಾದುದನು ವೇದಾಗಮ ಶಾಸ್ತ್ರ ಪುರಾಣ ಸ್ಮೃತಿ ಪ್ರಮಾಣಂಗಳಿಂದ ಮತ್ತಂ ಹರಗುರು ಪುರಾತನರ ವಾಕ್ಯಂಗಳಿಂದ ನಿನ್ನ ಉಭಯ ಕರ್ಣದಿಂದ ಕೇಳುತ್ತಿದ್ದಿ. ಇಂತಿವೆಲ್ಲವನು ಕಂಡು ಕೇಳಿ ಗಾಢನಿದ್ರೆಯ ಮನುಷ್ಯನ ಹಾಗೆ ನಿನ್ನ ನಿಜಸ್ವರೂಪವನು ಮರೆದು ತ್ರಿವಿಧ ಮಲವ ಕಚ್ಚಿ ಶುನಿ ಸೂಕರನ ಹಾಗೆ ಕಚ್ಚಿ ಕಡಿದಾಡಿ ಸತ್ತುಹೋಗುವ ವ್ಯರ್ಥಗೇಡಿ ಮೂಳ ಹೊಲೆ ಮಾದಿಗರ ಕಿವಿ ಹರಿದು ಕಣ್ಣಗುಡ್ಡೆಯ ಮೆಟ್ಟಿ ನೆತ್ತಿಯ ಮೇಲೆ ಮೂರು ಪಟ್ಟೆಯನೆ ಕೆತ್ತಿ ಅವನ ಮುಖದ ಮೇಲೆ ಹೆಂಡಗಾರನ ಮುಖದಿಂದೆ ಲೊಟ್ಟ ಲೊಟ್ಟೆವೆ ಉಗುಳಿಸಿ ಪಡುವಲ ದಿಕ್ಕಿಗ ಅಟ್ಟೆಂದ ಕಾಣಾ ವೀರಾದಿ ವೀರ ನಿಮ್ಮ ಶರಣ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ವಾಯಪ್ರಭುವೇ.

(೨೪). ಅಸ್ತಿ ಭಾತಿ ಎಂಬ ಎನ್ನ ಸತ್ಯದಲ್ಲಿ ನಾಮರೂಪು ಎಂಬ ಹುಸಿ ಎಂತು ಜನಿಸಿತ್ತೆಂದರಿಯೆನಯ್ಯಾ. ಇಲ್ಲದ ಹೆಸರುಗಳ ಬಿತ್ತಿಯ ಚಿತ್ತಾರದಂತೆ ದೇಹನಾಮವೀತೆರನೆಂದರಿಯದೆ ತೊಳಲಿ ಬಳಲುತ್ತಿದ್ದೆನಯ್ಯಾ ಕೂಡಲಚನ್ನಸಂಗಯ್ಯಾ ಸಂಸಾರಬಂಧನವೆನಗಿದೇ ಕಂಡಯ್ಯಾ.

**ಅರ್ಥ**:—ಪರಬ್ರಹ್ಮವು ಎಂದೂ ಉಂಟಾದುದು ಚಿತ್ಪ್ರಕಾಶವನುಳ್ಳುದು ಎಂಬುದೀಗ ಅಸ್ತಿ ಭಾತಿ ಎಂಬ ಶಬ್ದಕ್ಕರ್ಥ. ಅಂತು ಸತ್ತು ಚಿತ್ತಾನಂದ ನಿತ್ಯವನುಳ್ಳ ಪರಶಿವನು ಲೀಲೆಯಿಂದ ಚಿಚ್ಚೈತನ್ಯಾಂಶ ಕಲೆಯೊಂದ ಬೇರ್ಪಡಿಸಿ ಆತ್ಮನಾಯಿತ್ತು. ಅಂತಾದ ಆತ್ಮಂಗೆ ಅಹಂಮಮತೆಯುನೆಯ್ದಿಪ್ಪ ಮರವೆಯುಂ ಪುಟ್ಟಿಸಲು ಆ ಮರವೆಯಿಂದ ನಾಮರೂಪಾದ ಹುಸಿದೇಹ ಹುಟ್ಟಿ ಆತ್ಮಂಗೆ ಅದೇ ಸಂಬಂಧವಾಗಲು ಆ ದೇಹ ಸಂಸಾರ ಬಂಧ ಹುಸಿ ಎಂದರಿಯದೆ ಪರಿಭವಕ್ಕೆ ಬರುತ್ತಿಪ್ಪ ಜೀವಿಗಳು ತಾವು ಶಿವಾಂಶಿಕರೆಂದರಿಯರು ತಮಗೆ ಈ ದೇಹ ಸಂಬಂಧವೆಂತಾಯಿತ್ತೆಂಬುದ ತಿಳಿಯಲರಿಯರೆಂಬುದೀ ವಚನದ ತಾತ್ಪರ್ಯಾರ್ಥ.

(೨೫). ಅನಂತಕಾಲ ನಿತ್ಯವೆಂಬಿರಿ. ಸಂಸಾರ ಇದು ಹುಸಿ, ಇದು ಹುಸಿ ಕಂಡ್ಯಾ ಎಲವೋ. ಇಂದಿನಿಂದಿನ ಸುಖ ಇಂದಿಂಗೆ ಪರಿಣಾಮ. ದಿನದಿನದ ಸುಖ ಹುಸಿ ಕಂಡ್ಯಾ ಎಲವೋ. ಘನಘನವೆಂಬ ರೂಪಿಂಗೆ ಗತಿ ಇಲ್ಲವಯ್ಯಾ ಮಹಾಲಿಂಗಕಲ್ಲೇಶ್ವರನಲ್ಲಿ ತಿಳಿದು ನೋಡಾ ಎಲವೋ.

(೨೬). ಜಾತಸ್ಯ ಮರಣಂ ಆವಂಗೆಯೂ ತಪ್ಪದು. ಅರಿದುಮರೆಯ ಬೇಡಯ್ಯ. ಉರಗನಬಾಯ ಕಪ್ಪೆಯಂತೆ ಸಂಸಾರ ಹರೆಗೊಳುತ್ತಿರ್ದರಲ್ಲಾ. ರೋಮಜರು ಮೀನಜರು ಕಾಲಕಲ್ಪಿತಕ್ಕೊಳಗಾದರು. ಮಹಾಲಿಂಗ ಗಜೇಶ್ವರಯ್ಯನೊಬ್ಬನೇ ಶಾಶ್ವತನು.

(೨೭). ಎಲುವಿನ ಹಂಜರ, ಕರುಳಿನ ಜಾಳಿಗೆ, ಅಮೇಧ್ಯದ ಹುತ್ತ, ಮೂತ್ರದಭಾವಿ, ಶ್ಲೇಷ್ಮದ ಕೆಸರು, ಕೀವಿನಸೆಲೆ, ನೆತ್ತರದ ಮಡು, ನಾಡಿಗಳ ಸುತ್ತುವಳ್ಳಿ, ನರವಿನ ನೆಣಜಂತ್ರ, ಮಾಂಸ ಪುಟ್ಟಿಯತಿಪ್ಪ, ಕಿಸುಕುಳದ ಹೇಸಿಕೆ, ಅತಿಹ್ಯೇಯದ ಮಲಿನ ಅಸ್ತಿ ರೋಮ ತೊಗಲ ಪಾಕುಳ, ಕ್ರಿಮಿಯಸಂಕುಳ ಉತ್ಪತ್ತಿ ಸ್ಥಿತಿ ಲಯದ ಬೀಜ, ರೇತರಜಸ್ಸಿನ ಜನಕ, ಆಧಿವ್ಯಾಧಿಯ ತವರ್ಮನೆ, ವಿಷಯಭಯ, ದುಃಖದಾಗರ, ಮೋಹದಬಲೆ, ತೋರಿಕೆಡುವ ತನು ಇದ ನೀನೆಂದು ನಿನ್ನದೆಂದು ಮಾಡಬಾರದ ಪಾಪವಮಾಡಿ ಮುಚ್ಚಿ ಹೂಸಿ ಹೊದಿಸಿ ಈ ದೇಹಂಗೊಂಡು ಮರುಗುವೆ. ಅಘೋರನರಕದಲ್ಲಿಕ್ಕುವಾಗ ಅಡ್ಡ ಬಪ್ಪವರಾರೋ? ಅಹಂಮಮತೆಯ ಬಿಟ್ಟು ಸೋಹಂಬ್ರಹ್ಮಾಸ್ಮಿನ್ ಎಂದು ಕೇಡಿಲ್ಲದ ಪದವಿಯ ಮಾಡಿಕೊಳ್ಳಾ ಮರುಳೇ. ಬೇಡ, ಕೆಡುವೆ, ನಿನ್ನನೀ ತಿಳಿದುನೋಡಾ ಸಿಮ್ಮಲಿಗೆಯ ಚನ್ನರಾಮಾ.

(೨೮). ಶಿವಶಿವಾ, ಈ ಮಾಯಾ ಸಂಸಾರ ಸಂಬಂಧಯುಕ್ತವಾದ ದೇಹದ ಸುಖವ ಹೇಳಲಂಜುವೆ. ಬಲ್ಲರೆ ಹೇಳಿರಿ. ಅರಿಯದಿದ್ದರೆ ಕೇಳಿರಿ. ಈ ದೇಹದ ವಿಸ್ತಾರವಪೇಳ್ವೆ. ಎಲೇ ಮರುಳು ಮಾನವರಿರಾ, ಲಾಲಿಸಿ ಕೇಳಿರಿ. ಎಲುವಿನ ಕಂಭ, ಎಲುವಿನ ತೊಲೆಗಳು, ಸಂದೆಲುಗಳೇ ಬಿಗಿ ಮೊಳೆಗಳು, ಕರುಳು ಜಾಳಿಗೆ ಬಿಗಿ ಜಂತಿಗಳು, ಬರಿಕಿ ಎಲುಗಳು ಜಂತಿಗಳು, ಬೆರಳೆಲುಗಳೇ ಚಿಲಿಕಿಗಳು, ಇಂತೀಗೃಹಕ್ಕೆ ಮಾಂಸದ ಮೇಲುಮುದ್ದೆಗಳು ರಕ್ತದ ಸಾರಣೆಗಳು, ಮಜ್ಜದ ಮಡುಗಳು, ಕೀವಿನ ಕುಳಿಗಳು, ಪಿತ್ತದಕೊಂಡಗಳು, ಶ್ರೋಣಿತದ ಕಾವಲಿಗಳು, ಮೂತ್ರದ ಹಳ್ಳಗಳು, ಅಮೇಧ್ಯದ ಹುತ್ತಗಳು, ಹುಳುವಿನ ಡೋಣಿಗಳು, ಜಂತಿನ ಬಣಬೆಗಳು, ಇಂತಪ್ಪಗೃಹಕ್ಕೆ ಎಂಟು ರವಕ್ಕಿಗಳು, ಬಾಯಿ ಎಂಬುದೇ ಒಂದು ದೊಡ್ಡ ದಾರವಾಜವು, ಇಂತೀ ದುರಾಚಾರ ಯುಕ್ತವಾದ ದೇಹವೆಂಬ ಗೃಹಕ್ಕೆ ಮೂವರು ಕರ್ತೃಗಳಾಗಿಹರು. ಅವರು ಆರೆಂದಡೆ, ಹೊನ್ನೊಂದುಭೂತ, ಹೆಣ್ಣೊಂದುಭೂತ, ಮಣ್ಣೊಂದುಭೂತ, ಇಂತೀ ತ್ರಿವಿಧ

ಭೂತಸ್ವರೂಪರಾದ ಬ್ರಹ್ಮ ವಿಷ್ಣು ರುದ್ರರೆಂಬ ತ್ರಿದೇವತೆಗಳು. ಅದೆಂತೆಂದೊಡೆ, ಹೊನ್ನುರುದ್ರನ ಹಂಗು, ಹೆಣ್ಣು ವಿಷ್ಣುವಿನ ಹಂಗು, ಮಣ್ಣು ಬ್ರಹ್ಮನ ಹಂಗು ಇಂತಪ್ಪ ತ್ರಿಮೂರ್ತಿಗಳ ಹಂಗಿನಿಂದಾದ ದೇಹವು ಮಿಥ್ಯವೆಂದು ತಿಳಿದು ವಿಸರ್ಜಿಸಲರಿಯದೆ ಅನಿತ್ಯದೇಹದ ಸುಖವನು ಮೆಚ್ಚಿ ಮರುಳಾಗಿ ಬಿಡಲಾರದೆ ಈ ಹೇಸಿಕೆ ಹೊಲೆಯ ಸಂಸಾರದಲ್ಲಿ ಸಿಲ್ಕಿ ಮಲತ್ರಯದಾಸೆಗೆ ಹೊಡೆದಾಡಿ ಹೊತ್ತುಗಳೆದು ಸತ್ತು ಹೋಗುವ ಕರ್ತೃಗಳಿಗೆ ಇನ್ನೆತ್ತಣ ಮುಕ್ತಿ ಹೇಳಾ. ಮುಂದೆ ಹೊಲೆಮಾದಿಗರ ಮನೆಯಲ್ಲಿ ಶುನಿಸೂಕರ ಕುಕ್ಕುಟ ಬಸಿರಲ್ಲಿ ಹುಟ್ಟಿಸದೆ ಬಿಡನೆಂಬಾತ ನಿಮ್ಮ ಶರಣ ವೀರಾದಿವೀರ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗ ನಿರ್ಮಾಯಪ್ರಭುವೇ.

(೨೯). ಎತ್ತಣ ಮಾಮರ ನೆತ್ತಣ ಕೋಗಿಲೆ, ಎತ್ತಣಿಂದೆತ್ತ ಸಂಬಂಧವಯ್ಯಾ! ಬೆಟ್ಟದನೆಲ್ಲಿಯಕಾಯಿ ಸಮುದ್ರದ ಉಪ್ಪು ಎತ್ತಣಿಂದೆತ್ತ ಸಂಬಂಧ! ಗುಹೇಶ್ವರಲಿಂಗಕ್ಕೆಯೂ ಎನಗೆಯೂ ಎತ್ತಣಿಂದೆತ್ತ ಸಂಬಂಧವಯ್ಯಾ!

(೩೦). ನೆನೆವ ಮನಕ್ಕೆ ಹೊನ್ನ ತೋರಿದೆ. ನೋಡುವ ಕಂಗಳಿಗೆ ಹೆಣ್ಣ ತೋರಿದೆ. ಪೂಜಿಸುವಕೈಗೆ ಮಣ್ಣ ತೋರಿದೆ. ಇಂತೀ ತ್ರಿವಿಧಕ್ಕೆ ತ್ರಿವಿಧವತೋರಿ ನೀಬೇರಾದ ಬಿನ್ನಾಣಕ್ಕೆ ಬೆರಗಾದೆನ್ನೆ ಅಮರಗುಂಡಮಲ್ಲಿಕಾರ್ಜುನಾ.

(೩೧). ತನುವಿಕಾರ ಮನವಿಕಾರ ಜನನಮರಣ ಸ್ಥಿತಿಕಾರಣ ಹೊನ್ನ ತೋರಿದೆ. ಜಗದ ಕಣ್ಣ ಮೊದಲಿಂಗೆ ಹೆಣ್ಣ ಸುಳಿಸಿದೆ. ಜಗದ ಕಣ್ಣ ಮೊದಲಿಂಗೆ ಮಣ್ಣ ಹರಿಹಿದೆ. ಜಗದ ಕಣ್ಣ ಮೊದಲಿಂಗೆ ತನುವ ತಪ್ಪಿಸಿ ಜಗವ ಸಂಸಾರಕ್ಕೊಪ್ಪಿಸಿ ನುಣ್ಣನೆ ಹೋದೆ ಉಪಾಯದಿ ದೇವರಾಯ ಸೊಡ್ಡಳಾ.

(೩೨). ಊರ ಸೀರೆಗೆ ಅಸಗ ತಡಬಡಗೊಂಬಂತೆ, ಹೊನ್ನೆನ್ನದು, ಹೆಣ್ಣೆನ್ನದು, ಮಣ್ಣೆನ್ನದು ಎಂದು ನೆನನೆನೆದು ನಿಮ್ಮ ನರಿಯದ ಕಾರಣ ಕೆಮ್ಮನೆ ಕೆಟ್ಟೆನಯ್ಯಾ ಚನ್ನಮಲ್ಲಿಕಾರ್ಜುನಾ.

(೩೩). ಗುಬ್ಬಿ ಹೆರರ ಮನೆ ತನ್ನ ಮನೆ ಎಂಬಂತೆ, ಧರೆ ಧನವನಿತೆಯವೆನ್ನವರು ತನ್ನವರೆಂದು ಹೋರಿ ಹೋರಿ ಸಾವುತ್ತಿದ್ದೆ, ಜೀವಸರ್ವಕರ್ತೃ ಕೂಡಲಚನ್ನಸಂಗಯ್ಯನೆಂದರಿಯದೆ.

(೩೪). ಕಾಯದೊಳಗೆ ಕಾಯವಾಗಿರ್ದೆಯಲ್ಲಾ ಹಂಸಾ! ಸಂಸಾರ ಮಾಯಾಪಾಶವ ಬಿಡಲೊಲ್ಲದೆ ಡಿಂಬವನೆಚ್ಚಿ ಕೆಟ್ಟೆಯಲ್ಲಾ ಹಂಸಾ! ಜೀವಶೂನ್ಯವಾಗಿ ಕೂಡಲಸಂಗನ ಶರಣರು ಲಿಂಗವಾಗಿ ಹೋದುದನರಿಯಾ ಹಂಸಾ!

## ಮಾಯೆಯನ್ನು ಹೋಗಲಾಡಿಸು.

(೩೫). ನಾನೊಂದ ನೆನೆದರೆ, ತಾನೊಂದ ನೆನೆವುದು. ನಾನಿತ್ತಲೆಳೆದರೆ, ತಾನತ್ತಲೆಳೆವುದು. ತಾ ಬೇರೆ ಎನ್ನನಳಲಿಸಿ ಕಾಡಿತ್ತು. ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು. ಕೂಡಲಸಂಗಮದೇವನ ಕೂಡಿಹೆನೆಂದರೆ ತಾನೆನ್ನ ಮುಂದುಗೆಡಿಸಿತ್ತು ಮಾಯೆ.

(೩೬). ಇಂದಿಂಗೆಂತು ನಾಳಿಂಗೆಂತು ಚೆಂದೊಡಲ ಹೊರೆಯ ಹೊತ್ತಿತ್ತೆನ್ನ ಸಂಸಾರ. ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹ್ಯೇಯವಿಲ್ಲ. ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿ ಇಲ್ಲ. ಎಂದೆಂದು ಸದಾಶಿವನ ಕುಂದದ ನೆನೆಯಲೀಯದೆ, ಕೊಂದುದಯ್ಯ ಈ ಮಾಯೆ ಕೂಡಲಸಂಗಮದೇವಾ.

(೩೭). ಕಾಯವ ನಿಶ್ಚೈಸಲಿಲ್ಲ, ಜೀವವ ನಿಶ್ಚೈಸಲಿಲ್ಲ. ಕಾಯ ಜೀವಕ್ಕೆಂತು ನೆಲೆ ಇಲ್ಲವಯ್ಯ. ಸುಖವ ನಿಶ್ಚೈಸಲಿಲ್ಲ, ದುಃಖವ ನಿಶ್ಚೈಸಲಿಲ್ಲ. ಸುಖ ದುಃಖಗಳೆಂಬವಕ್ಕೆಂತು ನೆಲೆ ಇಲ್ಲವಯ್ಯ. ರಾಜ್ಯವ ನಿಶ್ಚೈಸಲಿಲ್ಲ, ಲಕ್ಷ್ಮಿಯ ನಿಶ್ಚೈಸಲಿಲ್ಲ. ಅಭ್ರಚ್ಛಾಯೆ. ಮಾಯಾ ಮೋಹ ಮಹೇಂದ್ರ ಜಾಲವೋ. ಎನ್ನದು ಮನೆ, ಎನ್ನದು ಧನ, ಎನ್ನದು ಸ್ತ್ರೀ ಎಂಬುದೆಲ್ಲವೂ ಕನಸಿನ ಕಂಡ ಸಿರಿ. ಕಣ್ಣ ತೆರೆದರೆ ಹೋದಂತೆ. ಹಾಲುಳ್ಳಲ್ಲಿ ಮಾಡು. ಗಾಳಿ ಇದ್ದಲ್ಲಿ ತೂರಿಕೊಳ್ಳಿ. ಬಳಿಕರಿಸಿದರುಂಟೇ ಪರಮ ಸುಖವು? ನಿಜಗುರು ಸ್ವತಂತ್ರ ಕಪಿಲ ಸಿದ್ಧಮಲ್ಲೇಶ್ವರನಲ್ಲಿ ಹರಿಗೋಲು ಪಡೆದಲ್ಲಿ ತೊರೆಯ ದಾಂಟಿಕೊಳ್ಳಿ ಭೋ.

(೩೮). ಅರಿದಿಹೆನೆಂಬ ಅವಸ್ಥೆ ಇದ್ದರೇನು? ಮತ್ತೆ ಮರವೆಗೆ ಕಾರಣವಾದ ಸಂಸಾರದ ಕಾಯ ಕಳವಳಕ್ಕೊಳಗಾದರೆ ಮಾಯೆ ಮನವನೆಡೆಗೊಂಡಿತ್ತು. ಮಾಯೆ ಮನವನೆಡೆಗೊಂಡಲ್ಲಿ ಅರಿವು ಜಾರಿತ್ತು. ಮರಹು ಘನವಾಯಿತ್ತು. ಅರಿವುದಿನ್ನಾರ ಹೇಳಾ. ಕಯ್ಯತುತ್ತು ಬಾಯಿಗೆ ಬಾರದಂತಾಯಿತ್ತು. ಇನ್ನೆಲ್ಲಿಯ ಲಿಂಗ, ಇನ್ನೆಲ್ಲಿಯ ಜಂಗಮ, ಇನ್ನೆಲ್ಲಿಯ ಪ್ರಸಾದ? ಅಕಟಕಟಾ,

ಹಾನಿಯ ಹಿಡಿದು ಹೀನವಾದರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿನ್ನನ ರಿಯದ ಭವಭಾರಿಗಳು.

(೩೯). ಹೊನ್ನು ಹೆಣ್ಣು ಮಣ್ಣೆಂಬ ಸೊಕ್ಕನಿಕ್ಕಿಸಿ ಕೆಡಹಿದನಯ್ಯಾ ಜೀವರ ಮುಕ್ಕಣ್ಣ ಶಿವನು. ಕಾಲನಿಗೊಪ್ಪಿಸಿ, ಜಗವ ಠಕ್ಕಿಸಿ, ಮಿಕ್ಕು ಮೀರಿ ಹೋದನಯ್ಯ ಶಿವನು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

(೪೦). ಜಗವಗಲದ ಮಾಯಾಜಾಲವ ಹಿಡಿದು ಕಾಲನೆಂಬ ಜಾಲ ಗಾರ ಮಾಯಾಜಾಲವ ಬೀಸಿದ ನೋಡಯ್ಯಾ. ಆ ಜಾಲಕ್ಕೆ ಹೊರಗಾದವರನೊಬ್ಬರನೂ ಕಾಣೆ .ಬಲ್ಲ ಬಲ್ಲಿದರೆಂಬವರೆಲ್ಲರ ಬಲೆಯು ಕಲ್ಲಿನೊಳಗೆ ತುಂಬಿದ. ಕಾಲ ಕಾಲನ ಬಲೆಯೊಳಗೆ ಸಿಕ್ಕಿಬೀಳುವೆ ಗೊಳುತ್ತಿದೆ ಜಗವೆಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ತನ್ನವರಿಗೆ ಮೇಲಾರೈಕೆಯಾಗಿಹನು.

(೪೧). ತರಗೆಲೆಯುಮೆದ್ದು ತಪವಿದ್ದರೂ ಬಿಡದು ಮಾಯೆ. ಗಾಳಿಯು ಆಹಾರವಕೊಂಡು ಗುಹೆಯ ಹೊಕ್ಕಡೆಯೂ ಬಿಡದು ಮಾಯೆ. ತನುವಿನ ವ್ಯಾಪಾರ ಮನದಲ್ಲಿ ವ್ಯಾಕುಳವಾಗಿ ಕಾಡಿತ್ತು ಮಾಯೆ. ಆವಾವ ಪರಿಯಲ್ಲಿಯೂ ಘಾತಿಸಿ, ಕೊಲ್ಲುತ್ತಿದೆ ಮಾಯೆ ಈ ಪರಿಯ ಬಾಧೆಯಲ್ಲಿ ಬಳಲುತ್ತಿದೆ ಜಗ ವೆಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿನ್ನವರ ನೀ ಮಾಯಾ ಸಂಸಾರ ದಲ್ಲಿ ಬಾಧೆಯಲ್ಲಿ ಬಳಲದಂತೆ ಮಾಡಯ್ಯಾ ನಿಮ್ಮ ಧರ್ಮ.

(೪೨) ಗಂಡಿಂಗೆ ಹೆಣ್ಣು ರೂಪಾಗಿ ಕಾಡಿತ್ತು ಮಾಯೆ. ಹೆಣ್ಣಿಂಗೆ ಗಂಡು ರೂಪಾಗಿ ಕಾಡಿತ್ತು ಮಾಯೆ. ಆ ಹೆಣ್ಣು ಗಂಡಿಂಗೆ ಸುತರೂಪಾಗಿ ಕಾಡಿತ್ತು ಮಾಯೆ. ಮಣ್ಣು ಹೊನ್ನಾಗಿ ಕಾಡಿತ್ತು ಮಾಯೆ. ಈ ತೊಳದ ಮೇಳದ ಜಗವನಾಳಿ ಗೊಂಡಿತ್ತು ಮಾಯೆ. ಈ ಮಾಯೆ ಎಲ್ಲರ ಮೋಹಿಸಿ ಹಲ್ಲುಕಿತ್ತು ತರಕಟ ಕಾಡಿತ್ತು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮ ಶರಣರಲ್ಲದವರ ಹುಲ್ಲಿಂದ ಕಡೆ ಮಾಡಿತ್ತು ಮಾಯೆ.

(೪೩). ನೋಡಿರೋ, ನೋಡಿರೋ ಪೂರ್ವದತ್ತವ! ವರುಣ ಹೆಳವ, ರವಿಕುಷ್ಠ, ಶುಕ್ರನಂಧಕ, ಶನಿಗೆ ಸಂಕೊಲೆ, ಬಲಿಗೆ ಬಂಧನ, ಸೀತೆಗೆ ಸೆರೆ, ಹದಿಹಂದಿಯಾದ, ಅರ್ಜುನಂಗೆ ಲಜ್ಜೆ, ಬ್ರಹ್ಮನ ಶಿರಹೊಯಿತ್ತು, ಬಲ್ಲಿದನೆಂಬ ವನ ಕೊಡೆವಿಡಿಸದೇ ವಿಧಿ? ಜತ್ತಕನೆಂಬವನ ಕತ್ತೆಯ ಮಾಡಿತ್ತು, ದಶನು

ಖಿನ ನಾಯಡೋಣಿಯಲ್ಲಿ ಉಣಿಸಿತ್ತು, ದೇವೇಂದ್ರನ ಮೆಯ್ಯ ನಾಣುಗೆಡಿಸಿತ್ತು. ಶೂದ್ರಕನ ತಲೆಯ ಕಂಚಿಯೊಲಯದಲ್ಲಿ ಮೆರಿಸಿತ್ತು. ಕೂಡಲ ಸಂಗಮದೇವ ನೀಮಾಡಿದಮಾಯೆ ಅನಂತರನಳಿಗೊಂಡಿತ್ತು.

(೪೪). ಹಂದೆಯ ದಾಡೆಯಲ್ಲಿ ಹೊಂದಿಸಿಕೊಂಡ ಹಿರಣ್ಯಾಕ್ಷ. ಅರೆ ವಾಗಿದುಗುರುಗೊನೆಯಲ್ಲಿ ಸೀಳಿಸಿಕೊಂಡ ಹಿರಣ್ಯಕಶ್ಯಿಪು ತಳಿಗೆಗೆ ತಲೆ ಗೊಟ್ಟ ಶಿಶುಪಾಲಕ. ಕುಮಾರಿಯ ಕಯ್ಯಲ್ಲಿ ಹೊಡಿಸಿಕೊಂಡ ಮಹಿಷಾಸುರ. ಕಪಿಯ ಬಾಲದಲ್ಲಿ ಕಟ್ಟಿಸಿಕೊಂಡ ರಾವಣ. ಹೊಲೆಯಂಗಾಳಾದ ಹರಿಶ್ಚಂದ್ರ. ಜೂಜಿಂದ ಭಂಗಿತರಾದರು ಪಾಂಡವರು. ದುರ್ವಾಸನಿಂದ ಸಮಚಿತ್ತನಾದನು ಪುರಂದರನು. ತಾಯ ತಲೆ ತಿವಿದ ಪರಶುರಾಮನು. ಸತಿ ಹೇಳಿದ್ದ ಕೇಳಿದ ಶ್ರೀರಾಮ. ಹಕ್ಕಿಯಿಂದ ಒಪ್ಪಂಗೆಟ್ಟ ದೇವೇಂದ್ರ. ದರಿದ್ರನಾದ ಕರ್ಣ. ಮಡು ವ ಹೊಕ್ಕಡಗಿದ ದುರ್ಯೋಧನ. ಕೇಡಿಂಗೆ ಮುಂದಾದರು ಭೀಷ್ಮರು. ವೇಶಿ ಯ ಮನೆಯ ಕಂಬಿಯ ಹೊತ್ತ ವಿಕ್ರಮಾದಿತ್ಯ. ಕಲ್ಯಾಣದಲ್ಲಿ ಬೆಳ್ಳಿಯ ಗುಂಪಾದ ವ್ಯಾಳಿ. ಬೆಳ್ಳಿ ಕಂಪಾಲದ ಕೆರೆಯ ಹೊಕ್ಕ ಕೋರಂಟಕ. ಚಕ್ರಕ್ಕೆ ತಲೆಗೊಟ್ಟ ನಾಗಾರ್ಜುನ. ಹಗೆಯ ಕಂಪಲ ಹೊಕ್ಕ ರತ್ನಘೋಷ. ರಾಹುವಿ ಗೊಳಗಾದ ಚಂದ್ರ. ಕಟ್ಟಿಂಗೊಳಗಾದ ಸಮುದ್ರ. ಶಿರವ ಹೋಗಾಡಿಸಿಕೊಂಡ ಬ್ರಹ್ಮ. ಕಾಲಿಂದ ಮರಣವಾಯಿತ್ತು ಕೃಷ್ಣಂಗೆ. ನೀರಿಂದ ಕೆಟ್ಟ ಚೌಡಲಯ್ಯ. ಪುತ್ರರಿಂದ ಕೆಟ್ಟ ದಶರಥ. ಅಭಿಮಾನದಿಂ ಕೆಟ್ಟ ಅಭಿಮನ್ಯು. ವಿಧಿಯಿಂದ ಕೆಟ್ಟ ಶೂದ್ರಿಕ. ನಿದ್ರೆಯಿಂ ಕೆಟ್ಟ ಕುಂಭಕರ್ಣ. ಸೀತೆಯಿಂ ಕೆಟ್ಟ ರಾವಣ. ಬಲಿಗೆ ಬಂಧನವಾಯಿತ್ತು. ಪಟ್ಟಕ್ಕೆ ನಿಂದ ವಿಭೀಷಣ. ಇದುಕಾರಣ ಕೂಡಲ ಸಂಗಮದೇವಾ, ನೀ ಮಾಡಿದ ಮಾಯೆಯ ಮಾಟವಾರನೂ ಅಳಿಗೊಳಿಸಿತ್ತು.

(೪೫). ಉಚ್ಚೆಯ ಬಚ್ಚಲ ದೇವತೆಯ ಮಹಾ ಹಾವಳಿ ನೋಡಿ ರಣ್ಣಾ! ಕರಣ ಹಸಿಗೆಯ ನೋಡುವಣ್ಣಗಳ ಕಾಲಹಿಡಿದೆಳೆಯಿತು ಮಾಯೆ. ಮಿಶ್ರಾರ್ಪಣವ ನೋಡುವಣ್ಣಗಳ ಮೀಸೆಯ ಹಿಡಿದು ಉಯ್ಯಾಲೆಯನಾಡಿಸಿತು ಮಾಯೆ. ಆತ್ಮಸ್ವರೂಪನರಿದ ಅಣ್ಣಗಳ ತನುಗಾಳುಮಾಡಿಕೊಂಡಿತು ಮಾಯೆ. ಶಿವಜ್ಞಾನಮಾಡಿಹೆನೆಂಬ ಅಣ್ಣಗಳ ಕೀಳ ಮಾಡಿತು ಮಾಯೆ. ತತ್ವಸ್ವರೂಪನರಿವ ಅಣ್ಣಗಳ ತನಗೆ ಮುದ್ದುಮಾಡಿ ಮೋಹಿಸಿ ಬತ್ತಲೆಯಲ್ಲಿ ನಿಲಿಸಿತು ಮಾಯೆ. ಮಂತ್ರಗೋಪ್ಯವ ನೋಡುವಣ್ಣಗಳ ಕುಟಿಲವೆಣ್ಣಿನ ಕುಮಂತ್ರಕ್ಕೆ ಸಿಲ್ಕಿಸಿ ಕಾಡಿ

ತು ಮಾಯೆ. ಬರಿಯ ವೈರಾಗ್ಯವಂ ಮಾಡುವಣ್ಣಗಳ ಸ್ತ್ರೀಯರ ಮುಡಿಯ: ಶೃಂಗರಿಸುವಂತೆ ಮಾಡಿತು ಮಾಯೆ. ಜಪಧ್ಯಾನ ಮಾಡುವಣ್ಣಗಳ ಬಕಧ್ಯಾನ ಮಾಡಿಸಿತು ಮಾಯೆ. ಪ್ರಸಾದಲೇಹ್ಯವ ಮಾಡುವಣ್ಣಗಳ ಹೊಸ ಜವ್ವನೆಯರ ತುಟಿಯ ಲೋಳಿಯ ನೆಕ್ಕಿಸಿತು ಮಾಯೆ. ಬೆಡಗಿನ ವಚನವ ನೋಡುವಣ್ಣಗಳ ಸಖಿಯರ ತೊಡೆಯಲ್ಲಿ ಹಾಕಿಕೊಂಡಿತು ಮಾಯೆ. ವಚನವ ನೋಡುವಣ್ಣಗಳ ರಚನೆಗೆ ನಿಲಿಸಿತು ಮಾಯೆ. ಇದುಕಾರಣ ಇಚ್ಛೆಯ ನುಡಿದು ಕುತ್ಸಿತನಾಗಿ ಇರುವ ವಿರಕ್ತನಂತೆ, ಹೊಟ್ಟೆಯ ಹೊರೆದು ಹೊನ್ನು ಹೆಣ್ಣು ದೊರೆದಲ್ಲಿ ಹಿಡಿದಿಹ ಕರ್ಮಿ ಕಾಳ ಮೂಳರಿಗೆಲ್ಲಿಯದೋ ವಿರಕ್ತಿ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ?

---

## ( ೨ ) ಮೋಕ್ಷಪದವನ್ನು ಬಯಸು.

೧. ಚಂದ್ರಮನಂತೆ ಕಳೆ ಸಮನಿಸಿತ್ತೆನಗೆ. ಸಂಸಾರವೆಂಬ ರಾಹು ಸರ್ವ ಗ್ರಾಸಿಯಾಗಿ ನುಂಗಿತ್ತಯ್ಯ. ಇಂದೆನ್ನ ದೇಹಕ್ಕೆ ಗ್ರಹಣವಾಯಿತ್ತು. ಇನ್ನೆಂದಿಂಗೆ ಮೋಕ್ಷವಹುದೋ ಕೂಡಲಸಂಗಮದೇವಾ?

೨. ಎಂದೋ ಸಂಸಾರದಂದುಗ ಹಿಂಗುವದು? ಎಂದೋ ಮನದಲ್ಲಿ ಪರಿಣಾಮವಹುದೆನಗೆ? ಎಂದೋ? ಎಂದೋ? ಕೂಡಲಸಂಗಮದೇವಾ, ಇನ್ನೆಂದೊ? ಪರಮಸಂತೋಷದಲ್ಲಿಹುದೆನಗೆಂದೋ?

೩. ಸುಖವ ಪಡೆದೆನೆಂದು ಹಡೆದಡೆ, ನಿಬ್ಬೆಗದಿಂದ ಮತ್ತೊಂದು ದುಃಖವು ಕೈಕೊಂಬುದು. ದುಃಖಕ್ಕೆ ಎಡೆ ಇಲ್ಲ. ಸಂಸಾರದೊಳಗಣ ಸುಖ ವಿಂತುಟು. ಮತ್ತೆ ಕಡು ದುಃಖವನೆಂದಿಂಗೆ ನೀಗಿ, ಎಂದು ನಿಮ್ಮೊಡಗೂಡಿ ಬೇರಾಗದೆಂದಿಪ್ಪೆನೋ ಕಪಿಲಸಿದ್ಧಮಲ್ಲಿಕಾರ್ಜುನಾ?

( ೪ ). ನಾನೆಲ್ಲಿಂದ ಬಂದೆ, ಎನಗೀದೇಹ ಬಂದ ಪರಿ ಆವುದು, ಇನ್ನು ಮುಂದೆ ಎಯ್ದುವ ಗತಿಯಾವುದು, ಎಂಬ ನಿತ್ಯ ನಿತ್ಯ ವಿಚಾರ ಹುಟ್ಟದವರಿಗೆ ಎಂದೆಂದಿಗೂ ಬಳಲಿಕೆ ಬಿಡದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನೀವು ಬರಿಸಿದ ಭವಾಂತರದಲ್ಲಿ ಬರುತಿಹರಾಗಿ ನಾನು ಕಂಡು ಮರುಗುತ್ತಿರ್ದೆನು.

( ೫ ) ಎನ್ನ ಜೀವ ಮನ ಪ್ರಾಣಂಗಳಿಂದ ಸಮಸ್ತ ಯುಗಾಂತ್ಯದಲ್ಲಿ ಬರಬಾರದ ಯೋನಿಯಲ್ಲಿ ಬಂದೆನಯ್ಯಾ. ಉಣಬಾರದಾಹಾರಂಗಳನುಂಡೆನಯ್ಯಾ. ಮಾಡಬಾರದ ವ್ಯವಹಾರವ ಮಾಡಿದೆನಯ್ಯಾ. ನುಡಿಯಬಾರದ ವಿವಾದವ ಮಾಡಿದೆನಯ್ಯಾ. ನಡೆಯಬಾರದ ಅನಾಚಾರದಲ್ಲಿ ನಡೆದೆನಯ್ಯಾ. ತಿರುಗಬಾರದ ದೇಶವ ತಿರುಗಿದೆನಯ್ಯಾ. ಹುಸಿಯನೆ ಮನೆಗಟ್ಟಿದೆನಯ್ಯಾ. ಹುಸಿಯನೆ ಹಾಸಿ ಹೊದ್ದೆನಯ್ಯಾ. ಹುಸಿಯನೆ ಆಭರಣವ ಮಾಡಿ ಸರ್ವಾಂಗಕ್ಕೆ ಅಚ್ಛಾದಿಸಿಕೊಂಡೆನಯ್ಯಾ. ಎಲೆದೇವಾ ನಿನ್ನೊಲುಮೆಯಿಂದ ಏನಾದಡಾಗಲಿ ಎನ್ನಲ್ಲಿ ನೋಡಿದಡೆ ಅಣುಮಾತ್ರ ಸುಗುಣವಿಲ್ಲಯ್ಯಾ. ಇನ್ನೆನಗೆ ಎಂದಿಂಗೆ ಮೋಕ್ಷವಹುದೋ ನಿಃಪ್ರಪಂಚ ನಿರಾತಂಕ ನಿರಾಲಂಬ ಮೂರ್ತಿ ಶ್ರೀಗುರುಲಿಂಗ ಜಂಗಮವೇ.

( ೬ ). ಜೀವವುಳ್ಳನ್ನಕ್ಕರ ಕ್ರೋಧದ ಮೂಲ. ಕಾಯವುಳ್ಳನ್ನಕ್ಕರ ಕಾಮದ ಮೂಲ. ಸಂಸಾರ ವ್ಯಾಪ್ತಿಯ ಮೋಹವುಳ್ಳನ್ನಕ್ಕರ ಆಶೆಯಮೂಲ. ಇಂತಪ್ಪ ಆಶೆಯ ಕೆಡಿಸಿ ಮೋಕ್ಷದ ಲೇಸತೋರಿ ಬದುಕಿಸಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

( ೭ ). ಶಿವಶಿವಾ ಈ ಮರುಳು ಮಾನವರ ನೇನೆಂಬೆನಯ್ಯಾ. ಎನ್ನ ಮನೆ ಎನ್ನ ಬದುಕು ಎನ್ನ ತಾಯಿ ಎನ್ನ ತಂದೆ ಎನ್ನ ಸತಿಸುತರು ಬಾಂಧವರು ಎಂದು ಮಚ್ಚಿ ನಚ್ಚಿ ಮರುಳಾಗಿದ್ದಿರಯ್ಯಾ. ಹಿಂದೆ ನಾನಾಯೋನಿಯಲ್ಲಿ ಆನೆ ಮೊದಲು ಇರುಹೆ ಕಡೆಯಾಗಿ ಒಂದೊಂದು ಜನ್ಮದಲ್ಲಿ ಸಹಸ್ರವೇಳೆ ಸತ್ತು ಸಹಸ್ರವೇಳೆ ಹುಟ್ಟಿ ಬಂದಲ್ಲಿ ಆವಾಗ ನಿನಗೆ ತಾಯಿ ಯಾರು, ನಿನಗೆ ತಂದೆ ಯಾರು, ನಿನಗೆ ಸತಿಸುತ ಬಾಂಧವರು ಆರು ಬಲ್ಲರೆ ಹೇಳಿ, ಅರಿಯದಿದ್ದರೆ ಕೇಳಿ. ನಿನಗೆ ಶ್ರೀಗುರುವೇ ತಾಯಿ, ನಿನಗೆ ಶ್ರೀಗುರುವೇ ತಂದೆ, ನಿನಗೆ ಶ್ರೀಗುರುವೇ ಸತಿಸುತರು ಬಂಧುಬಳಗವೆಂಬ ನಿರ್ಣಯವನು ಸಮ್ಯಜ್ಞಾನ ಗುರುಮುಖದಿಂ ತಿಳಿದು ವಿಚಾರಿಸಿಕೊಳಬಲ್ಲರೆ ಬಲ್ಲರೆಂಬೆ. ಈ ಭೇದವನರಿಯದೆ ಮಿಥ್ಯಾಸಂಸಾರದ ಮಾತಾಪಿತರು ಸತಿಸುತರು ಬಾಂಧವರು ತನುಮನ ಧನದ ಅಭಿಮಾನದಲ್ಲಿ ಸಿಲ್ಕಿ ಸಟೆಯ ಸಂಸಾರದಲ್ಲಿ ಹೊಡೆದಾಡಿ ಹೊತ್ತುಗಳೆದು ಸತ್ತು ಹೋಗುವ ಮಂಗಮನುಜರಿಗೆ ಇನ್ನೆಂದು ಮೋಕ್ಷವಹುದೋ? ಶಿವಶಿವಾ ಈ ಲೋಕದ ಅಭಿಮಾನವ ಬಿಟ್ಟು ಪರಲೋಕದ ಅಭಿಮಾನವ ಹಿಡಿವಾಪೇಕ್ಷೆ ಎಂದಿಗಹುದೋ? ಇವರ

ಗುರುಲಿಂಗಜಂಗಮರ ಪುತ್ರರೆಂಬೆ, ಪುರಾತನರ ಮಗನೆಂಬೆ. ಇದಿಲ್ಲದಿರೆ ಕಿರಾತರ ಮಗನೆಂಬೆ, ನರಗುರಿಗಳ ಪುತ್ರರೆಂಬೆನೆಂದಾತ ವೀರಾದಿವೀರ ನಿಮ್ಮ ಶರಣ ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

---

## (೩). ಪರಮಾತ್ಮನ ರಕ್ಷಣೆಯನ್ನು ಬೇಡಿಕೊಳ್ಳುತ್ತಿರು.

(೧). ವಿಷಯವೆಂಬ ಹಸರನೆನ್ನ ಮುಂದೆ ತಂದು ಪಸರಿಸದಿರಯ್ಯಾ. ಪಶುವೇನಬಲ್ಲದು ಹಸುರೆಂದೆಳಸುವದಲ್ಲದೆ? ವಿಷಯರಹಿತನ ಮಾಡಿ, ಭಕ್ತಿ ರಸವ ದಣಿಯ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು, ನೋಡಿ ಸಲ ಹಯ್ಯಾ ಕೂಡಲಸಂಗಮದೇವಾ.

(೨). ಕೆಸರಲ್ಲಿ ಬಿದ್ದ ಪಶುವಿನಂತೆ ದೆಸೆದೆಸೆಗೆ ಬಾಯ ಬಿಡುತಿದ್ದೆ ನಯ್ಯಾ. ಆರೈವರಿಲ್ಲ, ಅಕಟಕಟಾ! ಪಶುವೆಂದೆನ್ನ ಕೂಡಲಸಂಗಮದೇವ ಕೊಂಬು ಹಿಡಿದೆತ್ತುವನ್ನಕ್ಕ.

(೩). ಬಡಪಶು ಪಂಕದಲ್ಲಿ ಬಿದ್ದರೆ, ಕಾಲಬಡಿವುದಲ್ಲದೆ ಬೇರೆ ಗತಿ ಯುಂಟೇ? ಶಿವ, ಶಿವಾ. ಹೋದಿಹೆ, ಹೋದಿಹೆನಯ್ಯಾ. ನಿಮ್ಮ ಮನದತ್ತಲೆನ್ನ ತೆಗೆಯಯ್ಯಾ. ಪಶುವಾನು, ಪಶುಪತಿ ನೀನು. ತುಡುಗುಣಿ ಎಂದೆನ್ನ ಹಿಡಿದು ಬಡಿಯದ ಮುನ್ನ, ಒಡೆಯ, ನಿಮ್ಮ ಬಯ್ಯದಂತೆ ಮಾಡು, ಕೂಡಲಸಂಗಮ ದೇವಾ.

(೪). ಬೆಳೆಯುದ ಭೂಮಿಯುಲೊಂದು ಪ್ರಳಯದ ಕಸ ಹುಟ್ಟಿ ತಿಳಿಯ ಲೀಯ್ಯದು, ಎಚ್ಚರಲೀಯ್ಯದು. ಎನ್ನವಗುಣವೆಂಬ ಕಸವ ಕಿತ್ತು ಸಲಹಯ್ಯಾ, ಲಿಂಗ ತಂದೆ. ಸುಳಿ ತೆಗೆದು ಬೆಳೆವೆನು ಕೂಡಲಸಂಗಮದೇವಾ.

(೫). ಅಡವಿಯೊಳಗೆ ಹೊಲಬುಗೆಟ್ಟ ಪಶುವಿನಂತೆ, ಅಂಬಾ, ಅಂಬಾ, ಎಂದು ಕರೆವುತ್ತಲಿದ್ದೇನೆ. ಅಂಬಾ, ಅಂಬಾ ಎಂದು ಒರಲುತ್ತಲಿದ್ದೇನೆ, ಕೂಡಲ ಸಂಗಮದೇವ ಬಾಳುಬಾಳೆಂಬನ್ನಕ್ಕರ.

(೬). ಸಮುದ್ರದೊಳಗಣ ಸಿಂಪಿಯಂತೆ ಬಾಯ ಬಿಡುತ್ತಲಿದ್ದೇನೆ. ನೀವಲ್ಲದೆ ಮತ್ತಾರೂ ಎನ್ನನರಿವರಿಲ್ಲ, ನೋಡಯ್ಯಾ. ಕೂಡಲಸಂಗಮದೇವಾ, ನೀವಲ್ಲದೊಳಕೊಂಬುವರಿಲ್ಲ, ನೋಡಯ್ಯಾ.

(೭). ಅಯ್ಯಾ, ಅಯ್ಯಾ, ಎಂದು ಕರೆಯುತ್ತಲಿದ್ದೇನೆ. ಅಯ್ಯಾ, ಅಯ್ಯಾ, ಎಂದು ಒರಲುತ್ತಿದ್ದೇನೆ. 'ಓ' ಎನ್ನಲಾಗದೇ ಅಯ್ಯಾ? ಆವಾಗಳು ನಿಮ್ಮ ಕರೆವುತ್ತಲಿದ್ದುದು ಎನ್ನ ಮನವು ಕೂಡಲಸಂಗಮದೇವಾ.

(೮). ನೀ ಹುಟ್ಟಿಸಿದಲ್ಲಿ ಹುಟ್ಟದೆ, ನೀ ಕೊಂದಲ್ಲಿ ಸಾಯದೆ ಎನ್ನೊಳವೇ ಅಯ್ಯಾ? ನೀವಿರಿಸಿದಲ್ಲಿ ಇರದೆ ಎನ್ನೊಳವೇ ಅಯ್ಯಾ? ಅಕಟಕಟಾ, ಎನ್ನವ ನೆನ್ನವನೆನ್ನಯ್ಯಾ ಕೂಡಲಸಂಗಮದೇವಾ.

(೯). ನರವಿಂಧ್ಯದೊಳಗೆನ್ನ ಹುಲುಗಿಳಿಯ ಮಾಡಿ, ಸಲುಹುತ್ತ 'ಶಿವಾ' ಎಂದೋದಿಸಯ್ಯಾ. ಭಕ್ತಿ ಎಂಬ ಪಂಜರದೊಳಗಿಕ್ಕಿ, ಸಲಹು ಕೂಡಲ ಸಂಗಮದೇವಾ.

(೧೦). ಅತ್ತಲಿತ್ತ ಸಾರದಂತೆ ಹೆಳವನ ಮಾಡಯ್ಯಾ ತಂದೆ. ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯಾ ತಂದೆ. ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ ತಂದೆ. ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸ ದಂತೆ ಇರಿಸು ಕೂಡಲಸಂಗಮದೇವಾ.

(೧೧). ಸತಿ ಇಲ್ಲದಂತೆ, ಪ್ರಪಂಚವಿಲ್ಲದಂತೆ, ವೈಶಿಕವಿಲ್ಲದಂತೆ ನಡೆಸಯ್ಯಾ ಲಿಂಗತಂದೆ. ಒಂದು ನಿಮಿಷವಾದರೆಯು ನಿಮ್ಮ ಶರಣರ ಸಂಗದಲ್ಲಿ ಇರಿಸಯ್ಯಾ. ಬೇರೆ ಮತ್ತೆನ್ನ ಭವವ ತೋರದಿರಯ್ಯಾ. ಹೊಲಬುಗೆಟ್ಟೆನಯ್ಯಾ ಕೂಡಲಸಂಗಮದೇವಾ.

(೧೨). ಇವನಾರವನಿವನಾರವ ಇವನಾರವನೆಂದೆಣಿಸದಿರಯ್ಯಾ. ಇವ ನಮ್ಮವ ಇವನಮ್ಮವನೆಂದೆಣಿಸಯ್ಯಾ. ಕೂಡಲಸಂಗಮದೇವಯ್ಯಾ ನಿಮ್ಮ ನೆಯ ಮಗನೆಂದೆಣಿಸಯ್ಯಾ.

(೧೩.). ಕಪ್ಪೆ ಸರ್ಪನ ನೆರಳಲ್ಲಿ ಇರ್ಪಂತೆ ಎನಗಾಯಿತ್ತಯ್ಯಾ. ಅಕಟಕಟಾ, ಸಂಸಾರ ವೃಥಾ ಹೋಯಿತ್ತಲ್ಲಾ! ಕರ್ತೃ ಕೂಡಲಸಂಗಮದೇವಾ, ಇವನು ತಪ್ಪಿಸಿ, ನನ್ನನು ರಕ್ಷಿಸಯ್ಯಾ ಪ್ರಭುವೇ.

(೧೪). ಲೇಸ ಕಂಡು, ಮನದಲ್ಲಿ ಬಯಸಿ, ಆಸೆ ಮಾಡಿದಡಿಲ್ಲ, ಕಂಡಯ್ಯಾ. ತಾಳಮರಕ್ಕೆ ಕಯ್ಯ ನೀಡಿ ಮೇಲೆ ನೋಡಿ ಗೋಣು ನೊಂದುದಯ್ಯಾ. ಕೂಡಲಸಂಗಮದೇವಾ ಕೇಳಯ್ಯಾ, ನೀನೀವ ಕಾಲಕ್ಕಲ್ಲದೆ ಇಲ್ಲ ಕಂಡಯ್ಯಾ, ಕೇಳಯ್ಯಾ.

(೧೫). ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯಾ. ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯಾ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಿಂದ ಕಟ್ಟುವಡೆದೆನು. ಹಸಿವು ತೃಷೆ ವ್ಯಸನಂಗಳಿಂದ ಕುದಿವುತ್ತಲಿದ್ದೇನೆ. ಪಂಚೇಂದ್ರಿಯ ಸಪ್ತ ಧಾತು ಹಂಚು ಹರಿಮಾಡಿ ಕಾಡಿಹವಯ್ಯಾ. ಅಯ್ಯೋ ಅಯ್ಯೋ ಎನ್ನ ಹುಯ್ಯಲ ಕೇಳಯ್ಯ ಕೂಡಲಸಂಗಮದೇವಾ.

(೧೬). ಸಕಲ ಲೋಕಾದಿ ಲೋಕಂಗಳು ಉದಯ ಮಧ್ಯಾನ್ಹ ಸಾಯಂಕಾಲ ಪರಿಯಂತರವು ಒಡಲೋಪಾಧಿಯ ಚಿಂತೆಯಿಂದ ತಾಪತ್ರಯಾಗ್ನಿಯಲ್ಲಿ ಬೇವುತ್ತಿರ್ಪರು ನೋಡಾ. ಅದೆಂತೆಂದೊಡೆ, ಉದಯ ಕಾಲಕ್ಕೆ ಹೋರಾಟದ ಚಿಂತೆ, ಮಧ್ಯಾನ್ಹದ ಕಾಲಕ್ಕೆ ಅಶನದ ಚಿಂತೆ, ಸಾಯಂಕಾಲಕ್ಕೆ ವ್ಯಸನದ ಚಿಂತೆ, ಇಂತೀ ತ್ರಿವಿಧ ವ್ಯಸನದಲ್ಲಿ ಮನಮಗ್ನವಾದ ಪ್ರಾಣಿಗಳಿಗೆ ಶಿವಜ್ಞಾನವೆಲ್ಲಿಯದಯ್ಯಾ? ಇಂದಿನ ಚಿಂತೆ ಮಾಡುವರೆಲ್ಲ ಹಂದಿಗಳು. ನಾಳಿನ ಚಿಂತೆ ಮಾಡುವರೆಲ್ಲ ನಾಯಿಗಳು. ಅದೆಂತೆಂದೊಡೆ, ನಿ ಹುಟ್ಟಿದ ಮುನ್ನವೇ ತಾಯ ಗರ್ಭದಲ್ಲಿ ನವಮಾಸ ಪರಿಯಂತರವು ನಿನಗೆ ಆಹಾರವ ಕೊಟ್ಟವರಾರು ಹೇಳಾ ಮರುಳೇ. ಅಖಂಡ ತಂಡಶಿಲೆಯೊಳಗಣ ಮಂಡುಕಕ್ಕೆ ಆಹಾರವ ಕೊಟ್ಟು ಸಲಹಿದವರಾರು ಹೇಳಾ ಮರುಳೇ. ಕಟ್ಟಿಗೆಯೊಳಗಿನ ಭೃಂಗಕ್ಕೆ ಮೊಲೆಗಳ ಕೊಟ್ಟು ಸಲಹಿದವರಾರು ಹೇಳಾ ಮರುಳೇ. ಇರುವೆ ಮೊದಲು ಆನೆ ಕಡೆ ಎಂಬತ್ತು ನಾಲ್ಕು ಲಕ್ಷ ಜೀವರಾಶಿ ಗರ್ಭದಲ್ಲಿ ಹುಟ್ಟಿ ಹುಟ್ಟಿ ಬರುವಲ್ಲಿ ನಿನಗೆ ಆಹಾರವ ಕೊಟ್ಟು ರಕ್ಷಣ್ಯವ ಮಾಡಿದವರಾರು ಹೇಳಾ ಮರುಳೇ. ಇಂತು ಸರ್ವ ಲೋಕಾದಿಲೋಕಂಗಳಿಗೆ ಶಿವನೇ ಕರ್ತನೆಂದು ತಿಳಿದು ನೋಡಾ ಮರುಳೇ. ಇಂತಪ್ಪ ಯುಕ್ತಿ ವಿಚಾರದ ಸುಜ್ಞಾನವಿಲ್ಲದೆ ಬರಿಯ ಒಳಚಿಂತೆಯಲ್ಲಿ ಹೊತ್ತುಗಳೆದು ಸತ್ತುಹೋಗುವ ಹೇಸಿ ಮೂಳರ ಕಂಡು ನಾಚಿದೆನಯ್ಯಾ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗ ನಿರ್ಮಾಯ ಪ್ರಭುವೇ.

(೧೭). ಆಶಾಪಾಶದಿಂದ ತೊಳಲಿತ್ತಯ್ಯಾ ಎನ್ನ ಕಾಯವು. ಆಶೆಯಿಂದ ಹೊದಕುಳಿಗೊಂಡಿತ್ತಯ್ಯಾ ಎನ್ನ ಮನವು. ಆಶೆ ಎಂಬ ಮರವೆಯಲ್ಲಿ ಮನೆಮಾಡಿತ್ತಯ್ಯಾ ಎನ್ನ ಪ್ರಾಣವು. ಆಶೆ ಎಂಬ ಹೊಡೆಗಿಚ್ಚಿನಲ್ಲಿ ಹೊಡೆದಾಡಿ ಸತ್ತಿತ್ತಯ್ಯಾ ಎನ್ನ ಭಾವವು. ಇನ್ನೆನಗೆ ಗತಿ ಪಥವ ತೋರಿ ರಕ್ಷಿಸಯ್ಯಾ ಭವಪಾಶ ರಹಿತ ಪರಬ್ರಹ್ಮಮೂರ್ತಿ ಶ್ರೀಗುರುಲಿಂಗಜಂಗಮವೇ.

(೧೮). ಅಯ್ಯಾ ಇಂತೀ ಆಶೆ ಎಂಬ ಮಾಯಾಮಲಪಾಶದಲ್ಲಿ ಜಡತ್ವದಿಂ ಕಂಗೆಟ್ಟು ಕಂದಿಕುಂದಿ ನಿಜವ ಮರೆದು ನಿಮ್ಮ ಸದ್ಭಕ್ತಿ ಸಮ್ಯಜ್ಞಾನದ ಹೊಲಬನರಿಯದೆ ಅಜ್ಞಾನವೆಂಬ ಆಶೆಯ ಪಾಶದಲ್ಲಿ ಜರೆ ಮರಣದಿಂದ ಇರುವೆ ಮೊದಲಾದಾನೆ ಕಡೆಯಾದ ಎಂಬತ್ತು ನಾಲ್ಕು ಲಕ್ಷ ಜೀವಜಂತುವಿನಲ್ಲಿ ತಿನ್ನಬಾರದಾಹಾರಂಗಳಂ ತಿಂದು ಮಾಡಬಾರದ ಅಪರಾಧ ಕೃತ್ಯವ ಮಾಡಿ ಪರಮಪಾತಕತನದಿಂದ ಬಾಳಿ ಬದುಕಿ ಜೀವಿಸಿದ ಅಜ್ಞಾನ ಜಡತ್ವವ ನೋಡದೆ ನಿಮ್ಮ ದಯಾಂಬುಧಿಯಲ್ಲಿರಿಸಿ ರಕ್ಷಿಸಯ್ಯಾ ಪರಮಪಾವನಮೂರ್ತಿ ಶ್ರೀಗುರುಲಿಂಗ ಜಂಗಮವೇ.

(೧೯). ನಿಮ್ಮ ಶರಣ ಗಣಂಗಳ ತೊತ್ತಿನ ತೊತ್ತಮಾಡಿಸಯ್ಯಾ ಎನ್ನ ಪರಮಾರಾಧ್ಯ. ನಿಮ್ಮ ಶರಣಗಣಂಗಳ ಭೃತ್ಯನ ಮಾಡಿಸಯ್ಯಾ ಎನ್ನ ಸಚ್ಚಿದಾನಂದ ಮೂರುತಿ. ನಿಮ್ಮ ಶರಣ ಗಣಂಗಳ ಬಾಗಿಲ ಕಾಯ್ವದ್ವಾರಪಾಲಕನ ಸೇವ್ಯನ ಮಾಡಿರಯ್ಯಾ ಎನ್ನ ನಿಷ್ಕಳಂಕಮೂರ್ತಿ. ನಿಮ್ಮ ಶರಣಗಣಂಗಳ ಪಾದರಕ್ಷೆಯ ಕಾಯ್ವ ಭೃತ್ಯನೆಂದೆನಿಸಯ್ಯಾ ಎನ್ನ ನಿಶ್ಶೂನ್ಯಮೂರ್ತಿ. ನಿಮ್ಮ ಶರಣಗಣಂಗಳ ಮನೆಯ ಬೀಸುವ ಕಲ್ಲು ಅರಿವ ಕಲ್ಲು ಬಚ್ಚಲ ಕಲ್ಲು, ಮೆಟ್ಟುಗಲ್ಲು ಮಾಡಿರಯ್ಯಾ ಎನ್ನ ನಿರಂಜನ ಮೂರ್ತಿಯೇ. ಎನ್ನ ಜನ್ಮಾಂತರದ ಭವದುಃಖದ ಉದರಾಗ್ನಿ ಮಂದಾಗ್ನಿ ವಡಬಾಗ್ನಿ ಕಾಲಾಗ್ನಿ ಕಾಮಾಗ್ನಿ ಶೋಕಾಗ್ನಿ ಮಾಯಾಗ್ನಿ ಮೊದಲಾದ ನೀವಿಕ್ಕಿದ ಕಿಚ್ಚನೊಂದಿಸಿರಯ್ಯಾ. ನಿಮ್ಮ ಧರ್ಮ, ನಿಮ್ಮ ಧರ್ಮ ಶ್ರೀಗುರುಲಿಂಗ ಜಂಗಮವೇ ಹರಹರಾ ಶಿವಶಿವಾ ಜಯಜಯ ಕರುಣಾಕರ ಮತ್ಪ್ರಾಣನಾಥ ಶ್ರೀಗುರು ಸಿದ್ಧಲಿಂಗೇಶ್ವರಾ.

(೨೦). ಸಂಸಾರ ವಿಷಯರಸವೆಂಬ ಕಾಳಕೂಟ ಹಾಳಾಹಳ ವಿಷವ ಕೊಂಡವರಾರಾದಡೂ ಜೀವಿಸಿದವರುಂಟೇ? ಇಲ್ಲವಾಗಿ, ಎಲ್ಲರೂ ಸಂಸಾರ

ವಿಷಯರಸದಲ್ಲಿ ಸಾವುತ್ತಿದ್ದಾರೆ. ಆ ವಿಷಯ ಗಾಳಿಸೋಂಕಿ ಬಳಲುತ್ತಿದ್ದೆನಯ್ಯ. ನಿಮ್ಮ ಕೃಪಾಪ್ರಸಾದವೆಂಬ ನಿರ್ವಿಷವಕೊಟ್ಟು ರಕ್ಷಿಸಯ್ಯ ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೨೧). ಸಂಸಾರದ ಸುಖವೆತ್ತ? ನಿಮ್ಮ ನಿಜಸುಖವೆತ್ತ? ಕತ್ತಲೆ ಎತ್ತ? ಬೆಳಗೆತ್ತ? ಎನ್ನಂತರಂಗದೊಳಗಿರ್ದು, ತೋರುವೆ, ಅಡಗುವೆ. ಇದೇನು ಗಾರುಡಿಗತನ? ಎನಗೆ ಸವಿವಾಲು ಸಕ್ಕರೆಯನುಣಕಲಿಸಿ ಬೇವಸುಣಕಲಿಸಿ ಹೆನೆಂದಡೆ, ಅದು ಹಿತವಹುದೇ? ನಿನ್ನ ನಿಜಸುಖವ ಸವಿಗಲಿಸಿ, ಸಂಸಾರಸುಖವ ನುಣಿಸಿಹೆನೆಂದರೆ, ಅದು ಮನಕೊಂಬುದೇ? ಎನ್ನೊಡನೆ ವಿನೋದವೇಕೆ? ನನಗೆ ಬೇಡ ಬೇಡ. ಎನ್ನ ನೀನರಿದು ಸಲಹು. ನಿನಗೆ ಎನ್ನಾಣೆಯಯ್ಯ ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೨೨). ಎರವಿನ ಬದುಕು ಸ್ಥಿರವಲ್ಲ. ಅಭ್ರಚ್ಛಾಯೆಯಂತೆ. ನಿಮಿಷದಲ್ಲಿ ತೊರಿಯಡಗಲುಳ್ಳ ಈ ಸಂಸಾರದಲ್ಲಿ ಏನು ಲೇಸ ಕಂಡು ನಚ್ಚುವೆ? ನಚ್ಚದಿರು. ನಚ್ಚಿದವರು ಕೆಟ್ಟ ಕೇಡಿಂಗೆ ಕಡೆ ಇಲ್ಲ. ಬರಿಯ ಬಯಲ ಭ್ರಮೆ ಶಠೆಯ ಸಂಸಾರ. ಇದರಲ್ಲೇನೂ ಲೇಸಿಲ್ಲವೆಂದರಿದು ದೃಢವಿಡಿ ನಿಜಗುರು ಸ್ವತಂತ್ರ ಸಿದ್ಧ ಲಿಂಗೇಶ್ವರನ ಶ್ರೀಚರಣವನು.

(೨೩). ಜನನ ಮರಣಂಗಳಲ್ಲಿ ಬರಿಸಬಾರದ ಭಾಷೆ, ನಿತ್ಯ ನೀನೆಂದು ಮರೆವೊಕ್ಕ ಕಾರಣ. ಇಹದಲ್ಲಿ ಪರದಲ್ಲಿ ಇರಿಸಬಾರದ ಭಾಷೆ, ತನ್ನಲ್ಲಿ ತನಗೆ ವಿವ ರಣೆ ಇಲ್ಲದ ಕಾರಣ. ಪುಣ್ಯಪಾಪಂಗಳ ನುಣ್ಣಿಸಬಾರದ ಭಾಷೆ, ತನ್ನ ಪಾದೋ ದಕ ಪ್ರಸಾದ ಜೀವಿಯಾಗಿ. ತಾಸಹಿತ ನಾನಿಪ್ಪೆ ನಾಸಹಿತ ತಾನಿಪ್ಪ ಕಾರಣ, ವಂಚನೆ ಬಾರದು ಎನಗೆ ತನಗೆ. ಶಂಭುಜಕ್ಕೇಶ್ವರ ದೇವಾ ಸದ್ಗುರು ಅಪ್ಪಣೆ ಯಿಂದ ನೀನೊಲಿದು ಸಲಹೆನ್ನ ಪ್ರಾಣಲಿಂಗವಾಗಿ.

## (೪). ಪರಮಾತ್ಮನ ಕ್ಷಮೆಯನ್ನು ಬೇಡು.

(೧). ಎನ್ನ ತಪ್ಪು ಅನಂತಕೋಟಿ. ನಿಮ್ಮ ಸೈರಣೆಗೆ ಲೆಕ್ಕವಿಲ್ಲ. ಇನ್ನು ತಪ್ಪಿದೆನಾದಡೆ ನಿಮ್ಮ ಪಾದವೇ ದಿಬ್ಯ. ಕೂಡಲಸಂಗಮದೇವಯ್ಯ ನಿಮ್ಮ ಪ್ರಮ ಥರ ಮುಂದೆ ಕಿನ್ನರಿಬೊಮ್ಮಣ್ಣನೇ ಸಾಕ್ಷಿ.

(೨). ಆನು ಮಾಡಿದ ತಪ್ಪನೆಣಿಸಿಹೆನೆಂದರೆ, ಗಣನೆಯಿಲ್ಲ. ನಡೆದು ತಪ್ಪುವೆನು. ಮಾಡಿ ತಪ್ಪುವೆ. ನೀಡಿ ತಪ್ಪುವೆ. ಕೂಡಿ ತಪ್ಪುವೆ. ಅರಿದು ತಪ್ಪುವೆ. ಮರೆದು ತಪ್ಪುವೆ. ಎನ್ನ ತಪ್ಪನೊಪ್ಪಮಾಡಿಕೊಂಬುದಲ್ಲದೆ, ಚಿತ್ತಕ್ಕೆ ತರಲಾಗದು ಕೂಡಲಸಂಗಮದೇವಾ.

(೩). ನುಡಿ ಹಿಡಿದು ತಾರ್ಕಿಕರಂತೆ ತರ್ಕಿಸುವಾತನಾನಲ್ಲ. ಆಡಿದ ಮಾತಿಗೆ ಈಡ ಮಾಡುವ ನುಡಿಯಲ್ಲಿ ವಾಕ್ಪಟುತರವು ನಿಜವಲ್ಲ. ನಡಿಯುವ ನಂದಿ ಕುಂಟುವದುಂಟು. ಹೋಗುವ ಮನುಜ ಎಡಹುವದುಂಟು. ಮಾತಾಡುವ ಶರಣ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ತಪ್ಪಿದರೆ ತಪ್ಪಲ್ಲ ಕೇಳಾ ಪ್ರಭುವೇ.

(೪). ಎಡದ ಪಾದದಲೊದ್ದರೆ, ಬಲದ ಪಾದವ ಹಿಡಿವೆ. ಬಲದ ಪಾದದಲೊದ್ದರೆ, ಎಡದ ಪಾದವ ಹಿಡಿವೆ. ತ್ರಾಹಿ, ತ್ರಾಹಿ, ತಪ್ಪೆನ್ನದು, ಕ್ಷಮೆ ನಿಮ್ಮದು. ಕೂಡಲಸಂಗಮದೇವಾ ನಿಮ್ಮ ಕರುಣದ ಕಂದನಾನು.

(೫). ಹೆಂಡಿರೆನ್ನದೆ ಮಕ್ಕಳೆನ್ನದೆ ತೊತ್ತಿರೆನ್ನದೆ ಬಂಟರೆನ್ನದೆ ಹಗೆಗಳೆನ್ನದೆ, ತಪ್ಪೆನ್ನದಯ್ಯ. ಜಾಗ್ರತ್ಸ್ವಪ್ನಸುಷುಪ್ತಿಯಲ್ಲಿ ತಪ್ಪೆನ್ನದಯ್ಯ. ನಾಚಯ್ಯ ಪ್ರಿಯ ಮಲ್ಲಿನಾಥಯ್ಯ ನೀನು ಇರ್ದವರ ನೀನೆನ್ನದ ತಪ್ಪೆನ್ನದಯ್ಯ.

(೬). ವೇದಶಾಸ್ತ್ರವನೋದುವದಕ್ಕೆ ಹಾರುವನಲ್ಲ. ಇರಿದು ಮೆರೆಯುವದಕ್ಕೆ ಕ್ಷತ್ರಿಯನಲ್ಲ. ವ್ಯವಹರಿಸುವದಕ್ಕೆ ವೈಶ್ಯನಲ್ಲ. ಒಕ್ಕಲ ಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯ ಕಾಮ ಭೀಮ ಜೀವದನದೊಡೆಯ ನೀನೇ ಬಲ್ಲೆ.

(೭). ಎನ್ನಯ್ಯ, ನಿಮ್ಮನರಸುತ್ತಲಿದ್ದೇನೆ. ಎನ್ನಯ್ಯ ಕೂಡಲಸಂಗಮದೇವಾ ಭ್ರಮರಿನ ಲೇಸಿನಂತೆ ಕಾರುಣ್ಯವ ಮಾಡು. ತಪ್ಪೆನ್ನದು. ಶಿವಧೋ, ಶಿವಧೋ. ಅಯ್ಯಾ ಕರ್ಮದಾಗರವ ಹೊಕ್ಕು, ವಿಷಯದ ಬಲೆಯಲ್ಲಿ ಸಿಲುಕಿ, ಅಯ್ಯಾ ದೇಹಮೋಹವೆಂಬ ಮಹಾದುಃಖಕ್ಕೀಡಾಗಿ, ಅಯ್ಯಾ, ಸಾಯುತ್ತಿದ್ದೇನೆ, ಬೇವುತ್ತಿದ್ದೇನೆ. ಅಯ್ಯಾ ತಪ್ಪೆನ್ನದು, ತಪ್ಪೆನ್ನದು. ಈ ಮೊರೆಯ ವಿಚಾರಿಸಿ, ಕಾರುಣ್ಯವ ಮಾಡು. ಅಯ್ಯಾ! ಆಳಿನಪಮಾನ ಆಳ್ದಂಗೆಂಬಂತೆ, ಅಯ್ಯಾ ಎನ್ನಳಲು ತಪ್ಪದು ಎನಗೆ. ಅಯ್ಯಾ ಕಾರುಣ್ಯವ ಮಾಡು, ಕಾರುಣ್ಯವ ಮಾಡು ಕೂಡಲಸಂಗಮದೇವಾ!

(೮). ಕುನ್ನಿಗೆ ರನ್ನದ ಹಲ್ಲಣ ಹಾಕಿದಂತೆ, ಹಂದಿಯ ತಂದು ಅಂದಣವನೇರಿಸಿದಂತೆ, ಎನಗೊಲಿದು ಶಿವಲಾಂಛನವ ಕೊಟ್ಟ ಕಾರಣವೇನಯ್ಯ ಗುರುವೆ? ನಾನು ಲಿಂಗದ್ರೋಹವ ಮಾಡಿ, ಜಂಗಮವ ಕೆಡೆನುಡಿದೆ. ಕೈವಿಡಿದ ಸ್ತ್ರೀಯರ ಕಡಿಖಂಡವ ಮಾಡಿದೆ. ಒಡನಾಡಿದ ಕಡುಗೂಪನನಿರಿದು ಕೊಂದೆ. ನಂಬಿದ ಹಳಿಯರ ಪ್ರಾಣಕ್ಕೆ ಮುನಿದೆ. ಪಶುವಿನ ಶಿಶುವ ತಲೆಗೊಡೆಯನಿಕ್ಕಿದೆ. ಗೋವ ಕೊಂಡವರ ನೋಯಿಸಿ ಕೊಂದೆ. ಪರಧನವ ಕದ್ದು ಸ್ತ್ರೀಯರಿಗಳುಪಿದೆ. ಭವಿ ಹೆಣ್ಣುಗಳ ಕೂಡುಂಡ ಬಾಯ ಹುಳುಕನಾನಯ್ಯ. ನಾನು ಇಂತಪ್ಪ ಪಾತಕಂಗಳ ಮಾಡಿದ ಹೊಲೆಯನಿವನೆಂದ ಬಳಿಕ ಎನಗೆ ವಿರಕ್ತಿ ಎಂಬ ಲಾಂಛನವ ಕೊಟ್ಟರು. ಕೋಪದ ಕರುಣವಲ್ಲದೆ, ಕೃಪೆಯಲ್ಲವಯ್ಯ. ಅದೇನು ಕಾರಣವೆಂದಡೆ, ಬಟ್ಟೆ ಬಡಿವ ಕಳ್ಳ ಬಂಟನ ಭೂಪಾಲ ಬೇಹನಿಕ್ಕಿ, ಹಿಡಿತರಿಸಿ, ನಾಳೆ ಶೂಲವ ತೆಗಿಸುವರೆ, ಇಂದು ಆ ಕಳ್ಳ ಬಂಟಂಗೆ ಪುನುಗು ಜವ್ವರಿಯ ಲೇಪಿಸಿ, ಹೂವಿನ ದಂಡೆ ಕೊರಳು ಮಂಡೆ ಉರದೊಳಗೆ ಅಡ್ಡ ಹಾಕಿ, ಹಾಲುತುಪ್ಪ ಹಣ್ಣುಗಳಂ ಉಣಕೊಟ್ಟು, ಅಡಿಗಡಿಗೆ ಅಡಿಕೆಲೆಯಂ ಮೆಲಕೊಟ್ಟು, ವೀರವಂದದ ಹರೆ ಕಹಳೆಯಂ ಅವನ ಮುಂದೆ ಸಂಭ್ರಮಿಸುವ ಬರಿಯ ಉಪಚಾರದಂತೆ ನಾನು ಮಾಡಿದ ಸರ್ವ ದ್ರೋಹಕ್ಕೆ ನಿನ್ನ ಮನನೊಂದು ಎನ್ನನು ಎಕ್ಕಲ ನರಕಕ್ಕೆ ನೂಂಕುವದಕ್ಕೆ ಕೊಟ್ಟು, ಶಠೆಯುಪಚಾರದಂತೆ ಲಾಂಛನವಲ್ಲದೆ ದಿಟದೊಲವಲ್ಲವಯ್ಯ. ದೇವನೇ, ನಾನು ಮುಂದ ನರಿಯದ ಅಂಧಕನಯ್ಯ. ನಿನ್ನ ಬಾಗಿಲಕಾವ ಗೊಲ್ಲನಯ್ಯ. ನಿನ್ನ ಕುದುರೆಯ ಕಾವ ಗೋಪನಯ್ಯ. ನಿನ್ನ ಚಮ್ಮಾವುಗೆಯ ಹೊತ್ತು ಬದುಕುವ ಭಾವರಲೆಂಕನಯ್ಯ. ನಿನ್ನ ಪಡುಗವ ಹಿಡಿವ ಪಡುದಿಂಡೆಯಯ್ಯ. ನೀನುಗುಳ್ದ ತಾಂಬೂಲವ ಮೆಲುವ ನಿನ್ನಾದಿಯ ಹಳಿಯನಯ್ಯ. ನಿನ್ನಂಗಳದಲ್ಲಿ ಬೊಗಳುವ ಸೊಣಗನಯ್ಯ. ಎನ್ನ ತಪ್ಪ ಕಾಯಯ್ಯ ಕಾಯಯ್ಯ ಶಿವಧೊ, ಶಿವಧೋ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೯). ತ್ರಿವಿಧ ತ್ರಿವಿಧದಲ್ಲಿ ತಪ್ಪಿದ ತಪ್ಪುಕನಾನಯ್ಯ. ಒಮ್ಮೆಗೆ ಕರುಣಿಸಯ್ಯ. ಇದನರಿದು ಇನ್ನು ತಪ್ಪಿದೆನಾದರೆ, ನೀವು ಮಾಡಿದ್ದೇ ಸಲುವುದು; ಕೂಡಲಸಂಗಮದೇವಾ.

(೧೦). ಎನ್ನೊಳಗೆ ನೀವು ಹುಡುಕಿದರೆ ಎಳ್ಳನಿತು ಸುಗುಣವಿಲ್ಲಯ್ಯ. ಅಣುಮಾತ್ರ ಸುಲಕ್ಷಣವಿಲ್ಲಯ್ಯ. ಸಪ್ತಸಮುದ್ರ ಸಪ್ತದ್ವೀಪಗಳಷ್ಟು ಅಪರಾಧ ಉಂಟಯ್ಯ. ತಂದೆ, ಎನ್ನ ಅಪರಾಧವ ನೋಡದೆ ನಿಮ್ಮ ಕರುಣದೃಕ್ಕಿಂದ ಸಲಹಯ್ಯ. ಪರಮಾರಾಧ್ಯ ಪರಾತ್ಪರಮೂರ್ತಿ ಶ್ರೀಗುರುಲಿಂಗ ಜಂಗಮವೇ, ನೀವು ಈರೇಳುಲೋಕಕ್ಕೆ ಅಪರಾಧಕ್ಷಮಿತ್ರರೆಂಬ ಬಿರುದುಂಟು ನೋಡಾ ಹರಹರಾ.

(೧೧). ಎನ್ನೊಳಗೆ ನೋಡಿದರೆ, ಎಳ್ಳನಿತು ಹುರುಡಿಲ್ಲವಯ್ಯ ದೇವಾ. ಹೊನ್ನು ಹೆಣ್ಣು ಮಣ್ಣು ನನ್ನದು, ಪುತ್ರ ಮಿತ್ರ ಕಳತ್ರಾದಿಗಳು ನನ್ನದು, ಧನಧಾನ್ಯ ಆನೆ ಕುದುರೆ ಎತ್ತು ತೊತ್ತು ಮಂದಿಮಕ್ಕಳು ಅಷ್ಟೈಶ್ವರ್ಯದಲ್ಲಿ ನಾ ಬಲ್ಲಿದನೆಂದು ಬಲು ಹಮ್ಮಿನಿಂದ ಗುರುಹಿರಿಯರ ಕಂಡರೆ ತಲೆವಾಗದಯ್ಯ ಎನ್ನ ಚಿತ್ತವು. ಇಂಥ ಚಿತ್ತದಿಂದೆ ನುಗ್ಗುನುರಿಯಾದೆನಯ್ಯ ನಿಃಕಳಂಕ ಮೂರ್ತಿ ಸಚ್ಚಿದಾನಂದ ಎನ್ನಪರಾಧವ ನೋಡದೆ ಕಾಯಯ್ಯ ಕರುಣಾಂಬುನಿಧಿ ಅನಾದಿ ಶ್ರೀಗುರುಲಿಂಗ ಜಂಗಮವೇ.

(೧೨). ನೀವೇ ಸಕಲಲೋಕ ಸೃಷ್ಟಿಕರ್ತರೆಂದು ಹೇಳಿತ್ತಯ್ಯ ವೇದ ಶಾಸ್ತ್ರಾಗಮ ಶೃತಿಗಳು. ನೀವೇ ಸರ್ವ ಲೋಕಾಧಾರ ಮೂರ್ತಿ ಎಂದು ಹೇಳಿದವಯ್ಯ ಸಮಸ್ತ ಪುರಾಣ ಉಪನಿಷತ್ತುಗಳು. ನೀವೇ ಸರ್ವ ಚೈತನ್ಯವೆಂದು ಹೇಳಿದವಯ್ಯ ತರ್ಕವ್ಯಾಕರಣಗಳು. ನೀವೇ ನಿಜಮೋಕ್ಷಮಂದಿರವೆಂದು ಹೇಳಿದವಯ್ಯ ಪ್ರಮಥಗಣಂಗಳ ಎರಡೆಂಬತ್ತು ಕೋಟಿ ವಚನಂಗಳು. ನೀವೇ ಚಿದೈಶ್ವರ್ಯ ಚಿದಾಭರಣ ಚಿದ್ಬ್ರಹ್ಮವೆಂದು ಸೂಚಿಸಿದವಯ್ಯ ಪರಮಬೋಧಾಮೃತಗಳು. ದೇವಾ ಎನ್ನಪರಾಧವೆಂಬ ಅಜ್ಞಾನಕ್ಕೆ ನೀವೇ ಜ್ಞಾನ ಚಕ್ಷುವಯ್ಯ ಶ್ರೀಗುರುಲಿಂಗ ಜಂಗಮವೇ.

---

## (೫) ಪರಮಾತ್ಮನ ಕಾರುಣ್ಯವನ್ನು ಬೇಡಿಕೊಳ್ಳು.

(೧). ಮೇರು ಗುಣವನರಸುವದೇ ಕಾಗೆಯಲ್ಲಿ? ಪರುಷ ಗುಣವನರಸುವದೇ ಕಬ್ಬುನದಲ್ಲಿ? ಸಾಧು ಗುಣವನರಸುವನೇ ಅವಗುಣಿಯಲ್ಲಿ? ಚಂದನ ಗುಣವನರಸುವದೇ ತರುಗಳಲ್ಲಿ? ಸರ್ವಗುಣಸಂಪನ್ನ ಲಿಂಗವೇ, ನೀನೆನ್ನಲ್ಲಿ ಅವಗುಣವನರಸುವದೇ ಕೂಡಲಸಂಗಮದೇವಾ?

(೨). ಎನ್ನ ಭವಭವದಲ್ಲಿ ತೊಳಲಿ ಬಳಲಿಸಿದ ಕಾರಣವೇನಯ್ಯ? ನಾನು ಮಾಡಿದ ಅಪರಾಧವೇನಯ್ಯ? ನೀವು ಮಾಡೆಂದುದ ನಾನು ಮಾಡಿದೆನು. ಎನಗೆ ಬೇರೆ ಸ್ವತಂತ್ರ ಉಂಟೇ ಹೇಳಾ ಅಖಂಡೇಶ್ವರಾ?

(೩). ಅಡವಿಯಲ್ಲಿರ್ದ ಗೋವು ಮನೆಯಲ್ಲಿರ್ದ ಕರುವಿಗೆ ಚಿಂತಿಸಿ, ಬಂದ ಹಾಲನೀಡಿ, ಮೋಹವ ಮಾಡುವದಲ್ಲದೆ, ಆ ಕರುವೆತ್ತಬಲ್ಲುದಯ್ಯಾ? ನಾನು ಕರ್ಮದೇಹವಿಡಿದು ಪರಿಭವದಲ್ಲಿ ತೊಳಲುತ್ತಿರಲು, ನೀನು ದಯಹುಟ್ಟಿ ಎನ್ನ ಮರವೆಯ ಸಂಸಾರವಂ ತೊಲಗಿಸಿ, ಕರುಣದಿಂದ ಸಲಹಬೇಕೆಂಬ ಚಿಂತೆ ನಿನಗಲ್ಲದೆ ನಾನೇನ ಬಲ್ಲೆನಯ್ಯಾ ಅಖಂಡೇಶ್ವರಾ?

(೪). ಹಾವು, ಕಿಚ್ಚು, ಮುಟ್ಟಿಹ ಶಿಶುವೆಂದು, ಹೆತ್ತ ತಾಯಿ ಮಗನ ಬೆಂಬತ್ತಿ ಬಪ್ಪಂತೆ ಇಪ್ಪೆ. ಎನ್ನೊಡನೊಡನೆ ಕೂಡಲಸಂಗಮದೇವಾ ಕಾಯ್ದುಕೊಂಡಿಪ್ಪನಾಗಿ.

(೫). ತನುವೆಂತಿರ್ದಡೇನಯ್ಯ? ಮನ ನಿರ್ಮಲವಾದರೆ ಸಾಲದೇ? ಎಂತಿರ್ದಡೇನು ಲಿಂಗಭಕ್ತ? ಎಂತಿರ್ದಡೇನು ಲಿಂಗಶರಣ? ಎಂತಿರ್ದಡೇನು? ನೋಡಯ್ಯ ಶಿಶುವೆಂದಡೆ, ತಾಯಿ ನೋವಂತೆ ಕೂಡಲಸಂಗಮದೇವಾ.

(೬). ಹುತ್ತ ಹೋರಿನೊಳಗೆ ಕೈಯ್ಯನಿಕ್ಕುವನು ಎನ್ನ ಶಿಶುವೆಂದು ಹೆತ್ತತಾಯಿ ಮಗನ ಬೆಂಬತ್ತಿ ಬಪ್ಪಂತೆ ಇಪ್ಪೆ. "ಭೊ ಅಯ್ಯ" ಎಂದಡೆ, 'ಓ' ಎಂಬೆ. ಅನ್ಯ ವಿಷಯಕ್ಕೆನ್ನ ಹತ್ತಲೀಯ್ಯದೆ, ಎತ್ತ ನೋಡಿದಡತ್ತತ್ತ ಸೊಡ್ಡಳಾ.

(೭). ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವದಯ್ಯ. ಚಂದ್ರ ಕುಂದೆ ಕುಂದುವದಯ್ಯ. ಚಂದ್ರಂಗೆ ರಾಹು ಅಡ್ಡಬಂದಲ್ಲಿ, ಅಂಬುಧಿ ಬೊಬ್ಬಿಟ್ಟೀತೇ? ಅಂಬುಧಿಯ ಮುನಿಯು ಆಪೋಷಣವ ಮಾಡಿಕೊಂಬಲ್ಲಿ, ಚಂದ್ರಮನಡ್ಡ ಬಂದನೇ? ಆರಿಗಾರುಮಿಲ್ಲ, ಕೆಟ್ಟವಂಗೆ ಕೆಳೆ ಇಲ್ಲ. ಜಗದನಂಟ ನೀನೇ ದೇವಾ ಕೂಡಲಸಂಗಮಪ್ರಭುವೇ.

(೮). ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ, ಧರೆಹತ್ತಿ ಉರಿದರೆ ನಿಲ್ಲಬಾರದು. ಏರಿ ನೀರುಂಬರೆ, ಬೇಲಿ ಕೆಯ್ಯಿ ಮೇವರೆ, ನಾರಿ ತನ್ನಯ ಮನೆಯಲ್ಲಿ ಕಳವರೆ, ತಾಯಿ ಮೊಲೆವಾಲು ನಂಜಾಗಿ ಕೊಲುವರೆ, ಇನ್ನಾರಿಗೆ ದೂರುವೆನಯ್ಯ ಕೂಡಲಸಂಗಮದೇವಾ?

(೯). ಭವ ಭವದಲ್ಲಿ ಎನ್ನ ಮನವು ನೀವಲ್ಲದೆ ಸಿಲುಕುವದೇ? ಭವ ರಾಟಣದೊಳು ತುಂಬದೆ, ಕೆಡಹದೆ, ಭವರೋಗ ವೈದ್ಯ ನೀನು, ಭವರಹಿತ ನೀನು, ಅವಧಾರು, ಕರುಣಿಸುವುದಯ್ಯ ಕೂಡಲಸಂಗಮದೇವಾ.

(೧೦). ಎನ್ನ ಶಿರ ನಿಮ್ಮ ಚರಣವ ನೊರಸೊರಿಸಿ ಭೇದವಿಲ್ಲಯ್ಯ. ಎನ್ನ ಕಾಯದ ಕಪಟ, ಎನ್ನ ಮನದ ವಿಕಾರ, ನಿಮ್ಮ ಉಂಗುಷ್ಠದ ಕೊನೆಯ ಸೋಂಕಲೊಡನೆ, ಹರಿದು ಹೋಹುದು ನೋಡಯ್ಯ. ಕೂಡಲಸಂಗಮದೇವಯ್ಯ ನಿಮ್ಮ ಶ್ರೀಪಾದದ ಬೆಳಗ ಕಂಡು, ಎನ್ನ ಅಂಗದ ಕತ್ತಲೆ ತೊಡೆಯಿತ್ತು.

(೧೧). ಎನ್ನ ಅವಗುಣವ ಸಂಪಾದಿಸದಿರಯ್ಯ. ನಿಮಗಾನು ಸರಿದೊರೆಯೇ? ಪ್ರತಿ ಇಲ್ಲದಪ್ರತಿಮ ನೀನು. ನಿಮಗಾನು ಸರಿಯೇ ಅಯ್ಯ? ಅಪ್ರತಿಮ ಕೂಡಲಸಂಗಮದೇವಾ, ನೀವು ಮಾಡಲಾದವ ನಾನು. ಎನ್ನೊಡನೆ ಮುನಿವರೆ ಹೇಳಾ?

(೧೨). ಎಲುದೋರಿ ಸರಸವಾಡುವನ್ನಬರ, ಏನು ಭೃಂಗಿಯೇ? ಸೀಳಿ ಹೊದೆಯಲೇನು ಗಜಾಸುರನೇ? ಹೆಳಲೀಲೆಯಾಡಲೇನು ಅಂಧಕಾಸುರನೇ? ಮನದಲ್ಲಾಡಲೇನು ಸಿರಿಯಾಳನೇ? ನೊಣತೃಣದೋಪಾದಿ ನಾನು. ಎನ್ನನಿನಿತು ಬಳಲಿಸುವರೇ? ಕರುಣಿಸು ಕರುಣಾಕರಾ ಉಳಿಯುಮೇಶ್ವರಾ.

(೧೩). ಅಯ್ಯಾ ಎಳೆಗರು ತಾಯನರಸಿ ಬಳಲುವಂತೆ, ಅಯ್ಯಾ ನಾ ನಿಮ್ಮ ನರಸಿ ಬಳಲುತ್ತಿದ್ದೇನೆ. ಅಯ್ಯಾ, ನೀವೆನ್ನ ಮನಕ್ಕೆ ಪ್ರಸನ್ನವ ಮಾಡಿ, ಕಾರುಣ್ಯವ ಮಾಡಿರಯ್ಯಾ. ನೀವೆನ್ನ ಮನಕ್ಕೆ ನೆಲೆವನೆಯಾಗಿ ಕಾರುಣ್ಯವ ಮಾಡು. ನೀನಿನಿತು ಲೇಸನೀಯಯ್ಯ. ಎಂಬೇಂ ಎಂಬೇಂ ಕೂಡಲಸಂಗಮದೇವಾ.

(೧೪). ಏಕೆನ್ನ ಬಾರದ ಭವಂಗಳಲ್ಲಿ ಬರಿಸಿದೆ? ಏಕೆನ್ನ ಘೋರ ಸಂಸಾರದಲ್ಲಿರಿಸಿದೆ? ಏಕೆನ್ನ ಕರುಣಿಸಲೊಲ್ಲದೆ, ಕಾಡಿಹೆ ಹೇಳಾ? ಹೇಳಾ ಎನ್ನ ಲಿಂಗವೇ, ನಾ ಮಾಡಿದ ತಪ್ಪೇನು! ಸಾಕಲಾದುದೆಂದು ಅತ್ತೊತ್ತಿ ನುಡಿದರೆ, ನಾ ನಿಮ್ಮ ಬಿಡುವೆನೇ ಶಂಭುಜಕ್ಕೇಶ್ವರಾ?

(೧೫). ಮುನಿದೆಯಾದಡೆ, ಒಮ್ಮೆ ಜರಿದಡೆ ಸಾಲದೆ? ಅಕಟಕಟಾ ಮದನಂಗೆ ಮಾರುಗುಡುವರೆ? ಹಗೆಗೆ ಮಾರುಗೊಟ್ಟು, ನಿನ್ನವರನೊಪ್ಪಿಸುವರೇ ಕೂಡಲಸಂಗಮದೇವಾ?

(೧೬). ಆನು ಒಬ್ಬನು. ಸುಡುವರೈವರು. ಮೇಲೆ ಕಿಚ್ಚು ಘನ. ನಿಲ್ಲಲು ಭಾರದು. ಕಾಡಬಸವನ ಹುಲಿಕೊಂಡೊಯ್ವರೆ, ಆರಯ್ಯಲಾಗದೆ ಕೂಡಲ ಸಂಗಮದೇವಾ?

(೧೭). ಅಕಟಕಟಾ, ಶಿವ ನಿನಗಿನಿತು ಕರುಣವಿಲ್ಲ. ಅಕಟಕಟಾ ಶಿವ ನಿನಗಿನಿತು ಕೃಪೆ ಇಲ್ಲ. ಯಾಕೆ ಹುಟ್ಟಿಸಿದೆ ಇಹಲೋಕ ದುಃಖಿಯ? ಯಾಕೆ ಹುಟ್ಟಿಸಿದೆ ಪರಲೋಕದೂರನ? ಯಾಕೆ ಹುಟ್ಟಿಸಿದೆ? ಕೂಡಲಸಂಗಮ ದೇವಾ ಕೇಳಯ್ಯ, ಎನಗೆ ಮತ್ತೊಂದು ತರುಮರಾದಿಗಳಿದ್ದಿಲ್ಲವೇ?

(೧೮). ನರಕೂರಂಬಿನಲ್ಲಿ ಎಚ್ಚವಂಗೊಲಿದೆಯಯ್ಯ. ಅರಳಂಬಿನಲ್ಲಿ ಎಚ್ಚ ಕಾಮನನುರುಪಿದೆ. ಇರುಳು ಹಗಲೆನ್ನದೆ, ಪ್ರಾಣಘಾತಕವ ಮಾಡಿದ ಬೇಡನ ಕೈಲಾಸಕ್ಕೊಯ್ದೆಯಯ್ಯ. ಎನ್ನನೇತಕ್ಕೊಲ್ಲೆ ಕೂಡಲಸಂಗಮದೇವಾ?

(೧೯). ಕಾಳಿದಾಸಂಗೆ ಕಣ್ಣನಿತ್ತೆ. ವಹಿಲಯ್ಯನ ನಿಜಪುರಕೊಯ್ದೆ ನಂಬಿ ಕರೆದಡೆ, 'ಓ' ಎಂದೆ. ತೆಲಗು ಜೊಮ್ಮಯ್ಯಂಗೆ ಒಲಿದೆ. ದೇವಾ ಕೂಡಲಸಂಗಮದೇವಾ, ಎನ್ನನೇತಕ್ಕೊಲ್ಲಿರಯ್ಯ.

(೨೦). ನೀನೊಲಿದರೆ ಕೊರಡು ಕೊನರುವದಯ್ಯ. ನೀನೊಲಿದರೆ ಬರಡು ಹಯನಹುದಯ್ಯಾ. ನೀನೊಲಿದರೆ ವಿಷವೆಲ್ಲ ಅಮೃತವಹುದಯ್ಯ. ನೀ ನೊಲಿದರೆ ಸಕಲ ಪದಾರ್ಥ ಇದಿರಲ್ಲಿಪ್ಪವು ಕೂಡಲಸಂಗಮದೇವಾ.

(೨೧). ದೇವರದೇವ ನೀನೆಂದೆನಿಸಿಕೊಂಡೆ. ಬಾಣನ ಬಾಗಿನ ಕಾ ಯ್ವುದೇನಯ್ಯ? ನಿತ್ಯತೃಪ್ತ ನೀನೆನಿಸಿಕೊಂಡೆ. ಚನ್ನನ ಮನೆಯಲುಂಬುದೇ ನಯ್ಯ? ಕರುಣಾಕರ ನೀನೆನಿಸಿಕೊಂಡೆ. ಸಿರಿಯಾಳನ ಮಗನ ಬೇಡುವರೇನಯ್ಯ? ನಿಮ್ಮ ಮಹಿಮೆಯ ನೀವೇ ಬಲ್ಲಿರಿ. ಎನ್ನನುದ್ಧರಿಸಯ್ಯ ಶಂಭುಜಕ್ಕೇಶ್ವರಾ

(೨೨). ಆಶೆ ಎಂಬ ಪಾಶದಲ್ಲಿ ಭವಬಂಧನನಾಗಿದ್ದೆನಯ್ಯ. ಸಕೃತ್ ನಿಮ್ಮ ನೆನೆಯಲು ಎನಗೆ ತೆರಹಿಲ್ಲವಯ್ಯ. ಕರುಣಾಕರ ಅಭಯಕರ ವರದಾನಿ ಕರುಣಿಸಯ್ಯ. ಸಂಸಾರಬಂಧನವ ಮಾಣಿಸಿ ಎನಗೆ ಕೃಪೆಮಾಡಿ, ನಿಮ್ಮ ಶ್ರೀಪಾ ದಪದ್ಮದಲ್ಲಿ ಭ್ರಮರನಾಗಿರಿಸು, ಭಕ್ತಜನ ಮನೋವಲ್ಲಭ ಕೂಡಲಸಂಗಮ ದೇವಾ.

(೨೩). ಅಷ್ಟವಿಧಾರ್ಚನೆಯ ಮಾಡಿ ಒಲಿಸುವೆನೆ ಅಯ್ಯ? ನೀನು ಬಹಿರಂಗ ವ್ಯವಹಾರ ದೂರಸ್ಥನು. ಅಂತರಂಗದಲ್ಲಿ ಧ್ಯಾನ ಮಾಡಿ ಒಲಿಸುವೆನೆ ಅಯ್ಯ? ನೀನು ವಾಙ್ಮನಾತೀತನು. ಜಪಸ್ತೋತ್ರದಿಂದ ಒಲಿಸುವೆನೆ ಅಯ್ಯ? ನೀನು ನಾದಾತೀತನು. ಭಾವಜ್ಞಾನದಿಂದ ಒಲಿಸುವೆನೆ ಅಯ್ಯ? ನೀನು ಮತಿಗತೀತನು. ಹೃದಯಕಮಲ ಮಧ್ಯದಲ್ಲಿ ಇಂಬಿಟ್ಟುಕೊಂಬೆನೆ ಅಯ್ಯ? ನೀನು ಸರ್ವಾಂಗ ಪರಿಪೂರ್ಣನು. ಒಲಿಸಲೆನ್ನಳವಲ್ಲ. ನೀನು ಒಲಿದುದೇ ಸುಖವಯ್ಯ ಚನ್ನಮಲ್ಲಿಕಾರ್ಜುನಯ್ಯ.

(೨೪). ಭವರೋಗ ವೈದ್ಯನೆಂದು ನಂಬಿದ್ದೆ ನಾನು. ಒಮ್ಮೆಗೆ ಕರುಣಿಸಯ್ಯ. ಭಕ್ತಿಫಲದಾಯಕ ನೀನು. ಒಮ್ಮೆಗೆ ಕರುಣಿಸಯ್ಯ. ಜಯ ಜಯ ಶ್ರೀಮಹಾದೇವ ಎನುತಿರ್ದೆನು. ಕೂಡಲಸಂಗಮದೇವಯ್ಯ ನಿಮ್ಮ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

(೨೫), ಇಂದಿಂಗೆಂದು ನಾಳಿಂಗೆಂದು ಬೆಂದ ಒಡಲಿಂಗೆ ಚಿಂತಿಸಿ ಭ್ರಮೆಗೊಂಡು ಬಳಲಬೇಡ ಮರುಳೇ. ಎಂಬತ್ತು ನಾಲ್ಕು ಲಕ್ಷಯೋನಿಯೊಳಗಾದ ಸಹಸ್ರ ಜೀವರಿಗೆ ಭೋಗವನೂ ಭೋಗವಿಷಯಜ್ಞಾನವನೂ ಕೊಟ್ಟು ಸಲಹುವ ದೇವನು ತನ್ನ ಸಲಹಲಾರನೇ? ಇದನರಿದರಿದು ಮತ್ತೇಕೆ ಚಿಂತಿಸುವೆ ಮರುಳೇ? ಹುಟ್ಟಿಸಿದ ದೇವನು ರಕ್ಷಿಸಿದಲ್ಲದೆ ಮಾಣನೆಂಬುದನರಿಯಾ? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು ಕರುಣಿ ಕೃಪಾಳುವೆಂಬುದನರಿಯಾ ಮರುಳೇ?

(೨೬). ಹೆಗ್ಗಣವನಿಕ್ಕಿ ನೆಲಗಟ್ಟು ಕಟ್ಟಿದಂತೆ ಆಯಿತ್ತೆನ್ನ ಕಾಯಗುಣ. ಅಹಂಕಾರ ಪ್ರಬೋಧೆಗಳೇ ಕಯ್ಯ? ಕಾಮಕ್ರೋಧ ಲೋಭಮೋಹ ಮದಮತ್ಸರಂಗಳ ನಿಕ್ಕಿ ಎನ್ನ ಮಾಡಿದಿರಿ. ಎನ್ನ ಬಾಧಿಸಲೆಂತು ಲಿಂಗಯ್ಯ ತಂದೆ? ಆಧಿವ್ಯಾಧಿಗಳೆಲ್ಲವ ಕಳೆದು ನಿರ್ವಾಣವಪ್ಪ ಪದವ ಕರುಣಿಸಯ್ಯ ಕೂಡಲಚನ್ನ ಸಂಗಮದೇವಾ.

(೨೭). ಒಂದು ಯೋನಿಯಲ್ಲಿ ಬಂದ ದುಃಖವ ಎಂದೆಂದಿಗೂ ಕಳೆಯಲಾರೆ. ಇನ್ನು ಎಂಬತ್ತು ನಾಲ್ಕು ಲಕ್ಷವೆಂದರೆ ನಾ ನಿನ್ನೇವೆನಯ್ಯ? ಒಂದುವನರಿಯದ ಶಿಶು ನಾನೊಂದೆನಯ್ಯ. ಎನ್ನ ಕಂದ ಬಾರೆಂದು ಕಂಬನಿಯ ತೊಡೆದೆತ್ತಿ ಆನಂದದಿಂದ ಕಣ್ದೆರೆವೆಯ ಮಾಡು ಉಳಿಯುಮೇಶ್ವರಾ.

( ೨೮ ). ಅಯ್ಯಾ ನೀ ಮಾಡಲಾದ ಜಗತ್ತು, ಅಯ್ಯಾ ನೀ ಮಾಡಲಾದ ಸಂಸಾರ, ಅಯ್ಯಾ ನೀ ಮಾಡಲಾದ ಮರವೆ, ಅಯ್ಯಾ ನೀ ಮಾಡಲಾದ ದುಃಖ, ಅಯ್ಯಾ ನೀ ಬಿಡಿಸಿದರೆ ಬಿಟ್ಟಿತ್ತು. ತಾಮಸವಯ್ಯಾ! ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿದೇಕೆ ಕೂಡಲಸಂಗಮದೇವಾ ?

( ೨೯ ). ಅರತುದಯ್ಯಾ ಅಂಗಗುಣ. ಒರೆತುದಯ್ಯಾ ಭಕ್ತಿರಸ. ಅವರಿಸಿತಯ್ಯಾ ಅಂಗ ಲಿಂಗವನು. ಏನೆಂದರಿಯೆನಯ್ಯಾ ಲೋಕಲೌಕಿಕದ ಮದವ. ಲಿಂಗ ಭ್ರಾಂತನಾದೆನಯ್ಯಾ ಕೂಡಲಸಂಗಮದೇವಾ ನಿಮ್ಮ ಕರುಣವೆನ್ನನೆಡೆಗೊಂಡಿತ್ತಾಗಿ.

( ೩೦ ). ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೇ ಅಯ್ಯಾ? ಬಯಲಮರೀಚಿಯ ಜಲಕ್ಕೆ ಕೆಸರುಂಟೇ ಅಯ್ಯಾ? ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯ ಉಂಟೇ ಅಯ್ಯಾ? ನೀವು ನೆರೆ ಒಲಿದ ಬಳಿಕ ಎನಗೆ ಭವಉಂಟೇ? ಕೂಡಲಸಂಗಮದೇವ ನಿಮ್ಮ ಚರಣ ಕಮಲದೊಳಗೆ ಎನ್ನನಿಂಬಿಟ್ಟು ಕೊಳ್ಳಯ್ಯಾ.

( ೩೧ ). ನೆನಿಸುವೆ, ಮರೆಸುವೆ. ಎನ್ನ ಗುಣದೋಷ ನಿಮ್ಮದು. ಕೇಳಯ್ಯಾ ಎನ್ನ ಬಿನ್ನಪವ. ನಿಮ್ಮ ನೆನೆವವ ನಾನಲ್ಲ ಕಂಡಯ್ಯಾ. ನಿಮ್ಮಿಂದ ನಿಮ್ಮ ನೆನೆವೆನು ಕೃಪೆಮಾಡು ಕಪಿಲಸಿದ್ಧ ಮಲ್ಲಿಕಾರ್ಜುನಾ.

---

## ( ೬ ) ಪರಮಾತ್ಮನಿಗೆ ಶರಣುಹೊಗು.

( ೧ ). ಹೊಲಬುಗೊಂಡು ಅರಸಬೇಡ. ಬರಿದು ತೆರಬೇಡ. ಒಲಿದರೊಮ್ಮೆ ಶಿವಶರಣೆನ್ನಿರಯ್ಯಾ. ಒಂದು ಸೊಲ್ಲಿಂಗೆ ಮುಕ್ತಿ ಸಿದ್ಧಿ. ಕೂಡಲಸಂಗಮದೇವ, ಭಕ್ತಿಲಂಪಟನಾಗಿ.

( ೨ ). ಹಲವು ಕಾಲದಿಂದ ಅಗಿದಗಿದು ತಿಂದು ಸವಿಗಲಿತ ಮಾಯಾ ರಕ್ಕಸಿ ಬಿಡೆಂದರೆ ಬಿಡುವಳೇ? ಇವಳ ಬಾಧೆಯ ಗೆಲುವರೆ, ಒಂದುಪಾಯವ ಕಾಂಬುದು ಕಾಣಿರಣ್ಣಾ. ಎಲ್ಲ ದೇವರಿಗೆ ಬಲ್ಲಿದ ಪರಶಿವನ ಮರೆಹೊಕ್ಕು ಇವಳ ಬಾಯ ಟೊಣೆವುದಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಬೆರಸಬೇಕಾದರೆ.

(೩), ಗಾಳಿ ಬೀಸಿದಲ್ಲಿ ತೂರಿಕೊಳ್ಳಿರಯ್ಯ. ಗಾಳಿ ನಿಮ್ಮಾಧೀನವಲ್ಲ ಕಂಡೆಯ್ಯ. ನಾಳೆ ತೂರಿಹೆನೆಂದಡೆ ಇಲ್ಲ ಕಂಡಯ್ಯ. ಶಿವಶರಣೆಂಬುದೊಂದು ಗಾಳಿ ಹೊಡೆದಲ್ಲಿ ಬೇಗ ತೂರಿದನಂಬಿಗಚೌಡಯ್ಯ.

(೪). ಕುಧರವನೇಸು ಕಾಲತೊಳೆದರೆಯು, ಕೆಸರು ಮಾಬುದೆ? ಎನ್ನ ಕಾಯದಲುಳ್ಳ ಅವಗುಣಂಗಳ ಕಳೆದು, ಕೃಪೆಯ ಮಾಡಯ್ಯ. ಕಂಬಳಿಯಲ್ಲಿ ಕಣಕವ ನಾದಿದಂತೆ ಕಾಣಿರೆ ಎನ್ನ ಮನ. ಕೂಡಲಸಂಗಮದೇವ, ನಿಮಗೆ ಶರಣೆಂದು ಶುದ್ಧ ಕಾಣಿರಯ್ಯ.

(೫). ತನ್ನ ನರಸಿ ಬಪ್ಪವರ ತಾನರಸಿ ಬಪ್ಪ ನೋಡಾ. ಎನ್ನ ದೇವನು ಎಲ್ಲಿದ್ದನಲ್ಲಿಗೆ ಹೋಗಿ ಬಾರಾ ಎಂದು ಮನದೊಳಗೆ ಅಚ್ಚೊತ್ತಿಕೊಂಬೆನು ಎನ್ನ ಕಪಿಲಸಿದ್ಧಮಲ್ಲಿಕಾರ್ಜುನಾ.

(೬). ನೀನೀಶನೀಯದೆ ಮಾನೀಶನೀವನೇ? ನೀನೀಸುವ ಕಾರಣ ಮಾನೀಶನೀವನು. ಆ ಮಾನೀಶನ ಹೃದಯದೊಳು ಪೊಕ್ಕು, ನೀನೀಸುವ ಕಾರಣದಿಂದ, ನೀನೇ ಶರಣೆಂಬೆನಯ್ಯ ರಾಮನಾಥಾ.

(೭)- ವೇದಪ್ರಿಯನಲ್ಲಯ್ಯ ನೀನು. ಮುಕ್ತಿಪ್ರಿಯನಲ್ಲಯ್ಯ ನೀನು. ಕ್ರಿಪ್ರಿಯನಲ್ಲಯ್ಯ ನೀನು. ನೀನು ಇವೆಲ್ಲಕ್ಕೆ ಅಸಾಧ್ಯ ಕಂಡಯ್ಯ. ನೀನು ಭಕ್ತಿಪ್ರಿಯನೆಂದು ಮರೆಹೊಕ್ಕೆ, ಕಾಯಯ್ಯ, ನೀನು ಕಪಿಲಸಿದ್ಧಮಲ್ಲಿಕಾರ್ಜುನಾ.

(೮). ಎನ್ನ ಯೋಗಕ್ಷೇಮ ನಿಮ್ಮದಯ್ಯ. ಎನ್ನ ಹಾನಿವೃದ್ಧಿ ನಿಮ್ಮದಯ್ಯ. ಎನ್ನ ಮಾನಾಪಮಾನ ನಿಮ್ಮದಯ್ಯ. ಬಳ್ಳಿಗೆ ಕಾಯಿದಿಮ್ಮಿತ್ತೇ ಕೂಡಲಸಂಗಮದೇವಾ?

(೯). ಅಂಗದ ನೋಟವು ಸಿಂಗರದ ಗಾತ್ರವು ಹಿಂಗದು ಮನದಲ್ಲಿ. ನಾನಾವಿಕಾರದಿ ಬೆಂದಿಹೆನೆಂದು ಅರಿಯಲಿಲ್ಲಾಗಿ, ಸಂದೇಹಬಿಡದು. ಮುಂದುಗಾಣದು ಲೋಕ. ಬೆಂದಮಾಯಕ್ಕಂಜಿ, ನಿಮ್ಮ ಮರೆಹೊಕ್ಕೆ ಕೂಡಲಸಂಗಮದೇವಾ.

(೧೦). ವಿಕಳನಾದೆನು ಪಂಚೇಂದ್ರಿಯ ಧಾತುವಿನಿಂದ. ಮತಿಗೆಟ್ಟೆನು ಮನದವಿಕಾರದಿಂದ. ಧೃತಿಗೆಟ್ಟೆನು ಧನದವಿಕಾರದಿಂದ. ಗತಿಗೆಟ್ಟೆನು ಕಾಯವಿಕಾರದಿಂದ. ಶರಣು ಹೊಕ್ಕೆನು ಕೂಡಲಸಂಗಮದೇವಯ್ಯ.

(೧೧). ಹುಲಿಯ ಬಾಯಲ್ಲಿ ಸಿಕ್ಕಿದ ಹುಲ್ಲೆಯಂತೆ, ಸರ್ಪನಬಾಯಲ್ಲಿ ಸಿಕ್ಕಿದ ಕಪ್ಪೆಯಂತೆ, ಸಕಲ ಲೋಕಾದಿಲೋಕಂಗಳು ಮಾಯಾಬಲೆಯಲ್ಲಿ ಸಿಕ್ಕಿ ಸೆರೆಯ ಹೋಗುವದ ಕಂಡು, ನಾನು ಅಂಜಿ, ನಿಮ್ಮ ಮರೆಹೊಕ್ಕೆನು, ಕಾಯಯ್ಯ ಕಾರುಣ್ಯನಿಧಿಯೇ ಅಖಂಡೇಶ್ವರಾ.

(೧೨). ಆಳಿಗೊಂಡಿಹರೆಂದು ಅಂಜಲದೇಕೆ? ನಾಸ್ತಿಕವ ಮಾಡಿಹ ರೆಂದು ನಾಚುವದೇಕೆ? ಆರಾದಡಾಗಲಿ, ಶ್ರೀಮಹಾದೇವಂಗೆ ಶರಣೆನ್ನಿರಿ. ಎನ್ನನು ಅರಿಯನೆಂದು ಮೌನಗೊಂಡಿರಬೇಡ ಕೂಡಲಸಂಗಮದೇವರ ಶರ ಣರ ಮುಂದೆ ‘ ದಂದಣ ’ ‘ ದಂದಣ ’ ಎನ್ನಿ.

(೧೩). ಮಂಡೆಯ ಬೋಳಿಸಿಕೊಂಡು ಗಂಡು ತೊತ್ತಪ್ಪೆನಯ್ಯ. ಲಜ್ಜೆಗೆಟ್ಟಾದರೂ ಲಿಂಗವನೊಲಿಸುವೆ. ನಾಣುಗೆಟ್ಟಾದರೂ, ಲಿಂಗವನೊಲಿಸುವೆ. ಕೇವಲ ಸಂಸಾರಿಗಳು ನಗುತಿರ್ದರೆ, ಇರಲಿ. ಕೂಡಲಸಂಗಮದೇವಾ, ನಿನ್ನ ಶರಣುವೊಕ್ಕೆ. ನೀನೇ ಗತಿ ಎಂದು, ನಿನ್ನ ಚರಣಕ್ಕೆ ಶರಣವೊಕ್ಕೆನಯ್ಯ.

(೧೪). ಎಂತಕ್ಕೆ, ಎಂತಕ್ಕೆ? ಹಡದಕಾರ್ಯ ಬೀಯ್ಯವಾಗದ ಮುನ್ನ ಅಟ್ಟುಣ್ಣೋ. ಬೆರಣಿಯುಳ್ಳಲ್ಲಿ, ಹೊತ್ತು ಹೋಗದ ಮುನ್ನ, ಅಟ್ಟುಣ್ಣೋ. ಮರಳಿ ಭವಕ್ಕೆ ಬಾಹೆ, ಬಾರದಿಹೆ ಕರ್ತ ಕೂಡಲಸಂಗಮದೇವಂಗೆ ಶರ ಣೆನ್ನಿ ಭೋ.

(೧೫). ‘ ಶಿವಾ ’ ಎಂದು ಓದದವನ ಓದು ಗಿಳಿಯೋದು. ಶಿವಾ. ನಿಮ್ಮ ನಾರಾಧಿಸದವನ ಮನೆ ಕೆಮ್ಮನೆ. ಶಿವಾ, ನಿಮ್ಮ ನೋಡದವನ ಕಣ್ಣು, ಹೇಲಿಯ ಕಣ್ಣು. ಶಿವಾ, ನಿಮ್ಮ ಹಾಡದವನ ಬಾಯಿ ಕನ್ನದ ಬಾಯಿ. ಶಿವಾ, ನಿಮ್ಮ ಹೊಗಳದವನ ನಾಲಿಗೆ ಭವಿಯ ನಾಲಿಗೆ. ಬಚ್ಚಲ ತಂಪಿನ ಜಾಗಿನಲ್ಲಿ ಹುಟ್ಟುವ ಬಿಗುಣೆಯಯ್ಯ. ಶಿವಾ, ನಿಮಗೆರಗದ ಕರ್ಮಿ ಶೂಲದ ಮೇಲಣ ಹೆಣನು. ಶಿವಾ, ನಿಮ್ಮ ನೆನೆಯದವನ ದೇಹ ಸಂದೇಹ. ಶಿವಾ, ನಿಮ್ಮ ಭಕ್ತನಲ್ಲ ದವನ ಭೋಗವು, ವಿದ್ಯೆಯು ಕುಲವು, ಶ್ರೀಯು, ಸಾಹಸವು, ಯಶಸ್ಸು, ವಿಮಾ ನದ ಮೇಲಣ ಶವದ ತೋರಿಕೆಯಯ್ಯ. ಅವನೇತಕ್ಕೆ ಬಾತೆ? ಇದು ಕಾರಣ ಭವರೋಗ ನರಕಕ್ಕಾರದೆ, ಶರಣುವೊಕ್ಕೆನಯ್ಯ ಸೊಡ್ಡಳಾ.

(೧೬). ಎನ್ನ ಭವಬಂಧನ ದುರಿತಂಗಳ ಗೆಲುವಡೆ, ಓಂ ನಮಃ ಶಿವಾಯ ಶಿವಶರಣೆಂದಡೆ ಸಾಲದೆ? ಜಯಜಯ ಶಂಕರ ಹರಹರ ಶಂಕರ ಶರಣೆನ್ನುತ್ತಿದ್ದೇನೆ. ಎನ್ನ ಪಾತಕ ಕೋಟಿ ಪರಿಹರ ಕೂಡಲಸಂಗಯ್ಯ ಶರಣೆನ್ನುತ್ತಿದ್ದೇನೆ.

(೧೭). ಮನಮುಟ್ಟಿದ ಅರ್ಪಿತಕ್ಕೆ ತನುವೇ ಅರ್ಪಿತ. ತನು ಮುಟ್ಟಿದ ಭಕ್ತಿಗೆ ಮನವೇ ಅರ್ಪಿತವಯ್ಯ. ಎನ್ನ ತನುಮನವೆಲ್ಲವು ನಿಮ್ಮ ಚರಣಕ್ಕೆ ವೇದ್ಯ ನೋಡಯ್ಯ. "ದೀರ್ಘ ದಂಡ ನಮಸ್ಕಾರಂ ಗುರುಸನ್ನಿಧೌ ಶರೀರ ಪ್ರಾಣಮರ್ಥಂ ಸದ್ಗುರುಭ್ಯೋ ನಿವೇದಯತಿ" ಇಂತೆಂದುದಾಗಿ, ತ್ರಾಹಿ ತ್ರಾಹಿ, ಶರಣಾರ್ಥಿ ನೀವೇ ಬಲ್ಲಿರಿ ಕೂಡಲಸಂಗಮದೇವಾ.

(೧೮). ಶಿವಶರಣೆಂದು ಪೂರ್ವಾರ್ಜಿತವನುಂಡರೆ ಭಂಗ. ಹರ ಶರಣೆಂದು ಭವಮಾಲೆಗೊಳಗಾದರೆ ಭಂಗ. ಹರವಶವೆನಿಸಿ ವಿಧಿವಶವೆನಿಸಿದರೆ ಅದು ನಿಮ್ಮ ಭಂಗ ಕಾಣಾ ಶಂಭುಜಕ್ಕೇಶ್ವರಾ.

---

## ( ೭ ) ಸದ್ವರ್ತನೆಯನ್ನು ಕರುಣಿಸಲು ಪರಮಾತ್ಮನನ್ನು ಬೇಡಿಕೊಳ್ಳು.

(೧). ಆಸೆಯಾಮಿಷ ತಾಮಸಹುಸಿ ವಿಷಯ ಕುಟಿಲ ಕುಹಕ ಕ್ರೋಧ ಕ್ಷುದ್ರ ಮಿಥ್ಯೆ ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು ಕಳೆಯಯ್ಯ. ಅವೆಂತೆಂದೊಡೆ, ನಿಮ್ಮತ್ತಲೆನ್ನ ಬರಲೀಯವು. ಇದು ಕಾರಣ ಇವೆಲ್ಲವ ಕಳೆದು ಎನ್ನ ನಿಮ್ಮಯ ಭಕ್ತನ ಮಾಡು ಕೂಡಲಸಂಗಮದೇವ.

(೨). ಒಡಲುಗೊಂಡವ ಹಸಿವ. ಒಡಲುಗೊಂಡವ ಹುಸಿವ. ಒಡಲುಗೊಂಡವನೆಂದು, ನೀನೆನ್ನ ಜಡಿದೊಮ್ಮೆ ನುಡಿಯದಿರಾ. ನೀನೆನ್ನಂತೆ ಒಡಲುಗೊಂಡು ನೋಡಾ ರಾಮನಾಥಾ.

(೩). ನಡೆ ನೋಟ ಸೊಲ್ಲೆಡೆಯೊಳಗೊಂದು ಕಿಚ್ಚು, ತಡೆದುಂಬ ಎಡೆಯಲ್ಲಿ ಒಂದು ಕಿಚ್ಚು, ಮಡದಿಪುರುಷರೆಡೆಯಲ್ಲಿ ಒಂದು ಕಿಚ್ಚು, ಪಡೆದರ್ಥದೆಡೆಯೊಳೊಂದು ಕಿಚ್ಚು, ಕೂಡಿದ ದ್ರವ್ಯದ ಮೋಹದೆಡೆಯಲ್ಲಿ ಒಂದು ಕಿಚ್ಚು, ಇಂತೀ ಸಂಸಾರದೆಡೆಯಲ್ಲಿ ದುಃಖವಲ್ಲದೆ ಸುಖವಿಲ್ಲ ನೋಡಾ. ಅದೆಂತೆಂದೊಡೆ

ಭಾರ್ಯಾವಿಯೋಗಸ್ಸ್ವಜನಾಪವಾದಃ । ಋಣಸ್ಯ ಶೇಷಂ ಅಧಮಸ್ಯ ಸೇವಾ ॥ ದಾರಿದ್ರ್ಯಕಾಲೇ ಪ್ರಿಯದರ್ಶನಂ ಚ । ವಿನಾಗ್ನಿನಾ ಪಂಚದಹಂತಿ ಕಾಯಂ ॥ ಇಂತೆಂದುದಾಗಿ, ಈಯೈದು ಕಿಚ್ಚನಿಕ್ಕಿ ಮಣ್ಣು ಹೊಯ್ದು ಕೆಡಿಸಿದೆಯಯ್ಯ ರಾಮನಾಥಾ.

(೪). ಎಂತು ಶಿವಭಕ್ತಿಯ ನಾನುಪಮಿಸುವೆನಯ್ಯ? ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯ? ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಿಂದ ಕಟ್ಟುವಡೆದೆನು. ಹಸಿವು ತೃಷೆ ವ್ಯಸನಂಗಳಿಂದ ಕುದಿವುತಿದ್ದೇನೆ. ಪಂಚೇಂದ್ರಿಯ ಸಪ್ತಧಾತು ಹಂಚು ಹರಿಮಾಡಿ ಕಾಡಿಹವಯ್ಯ. ಅಯ್ಯಾ, ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ ಕೂಡಲಸಂಗಮದೇವಾ.

(೫). ಹೋತು ಹುಸಿ, ಆಡು ಬಹುಮಾತಿನ ನೆಲೆ, ಕುರಿ ಸಕಲೇಂದ್ರಿಯದ ನೆಲಹೊಲ, ತಗರು ತಥ್ಯ ಮಿಥ್ಯೆಯ ಹೊರಟೆ, ಹುಲಿ ದ್ವೇಷದಾಗರ, ತೋಳ ಕೊಂದು ತಿಂಬ ಕಾಟ, ಚೋರಮೃತ್ಯು, ಇಂತಿವು ಮೊದಲಾದ ಬಹುವಿಧದ ಪ್ರಕೃತಿಗಳಲ್ಲಿ ಕಾಯದ ನೆಲ ಹೊಲನಲ್ಲಿ ಸಕಲೇಂದ್ರಿಯವೆಂಬ ಹಿಂಡು ಮಂದೆಯಾಗಿವೆ ಏಕೋ? ಇದರ ಸಂಗವ ಬಿಡಿಸು. ನಿಮ್ಮ ನಿಜದಂಗವ ತೋರಿ, ಭವಪಾಶದಂಗವ ಹರಿದು, ನಿಮ್ಮ ಘನಲಿಂಗದಲ್ಲಿರಿಸು. ನೆರೆ ವೀರಬೀರೇಶ್ವರಾ.

(೬). ದೇವಾ ಕಂಬಳಕ್ಕೆ ಹೋಗಿ ಕನಕದ ಕೊಡನ ಕಂಡಂತೆ, ಮರ್ತ್ಯಲೋಕಕ್ಕೆ ಬಂದು, ಮಾನವ ಜನ್ಮವ ಕಂಡೆ. ಆ ಮಾನವಜನ್ಮಕ್ಕೆ ಗುಣಾಕ್ಷರಜ್ಞಿಯಾದಂತೆ, ಲಿಂಗ ಬಂದುದ ಕಂಡೆ. ಎನಗಿದು ಚೋದ್ಯವಯ್ಯ. ಎನಗಿದು ವಿಪರೀತವಯ್ಯಾ. ಇದಕ್ಕೆ ನುಡಿದಂತೆ ನಡಿಸು. ನಡೆದಂತೆ ನುಡಿಸು. ನುಡಿದ ನಡೆಗೆ ಭಿನ್ನವಾದರೆ, ನಿಮ್ಮ ಶರಣರೊಪ್ಪರು. ನಿಮ್ಮ ಶರಣರೊಪ್ಪದಲ್ಲಿಯೇ ನೀನೊಪ್ಪೆ. ನೀನೊಪ್ಪದಲ್ಲಿಯೇ ಎನಗೆ ಬಂದಿತ್ತು ಹಿಂದಣಭವದ ಹೆಮ್ಮಾರಿ. ಅದಕ್ಕೆ ನಾನಂಜುವೆನಯ್ಯಾ. ಅದಕ್ಕೆ ನಾನಳಕುವೆನಯ್ಯ. ನುಡಿ ನಡೆ ಎರಡಾಗದಂತೆ ನಡಿಸಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೭). ಕ್ರಿಯೆನೆ ಭಾವಿಸಿಹೆನೆಂದಡೆ, ಮೃತ್ತಿಕೆಯ ಸಾಕಾರವ ತೊಳೆದು, ನಿರ್ಮಲ ವನರಸುವನಂತೆ. ಶೂನ್ಯದಲ್ಲಿ ವಿಶ್ರಮಿಸಿ ಕಂಡೆಹೆನೆಂದಡೆ, ಕಂಗಳಿಗೆ

ಟ್ಟಿದು, ಕೈಯ್ಯ ಮುಟ್ಟಿದು, ಆತ್ಮಂಗಗೋಚರ. ಇಂತೀ ಉಭಯವನೊಡಗೂಡಿ ಕಂಡೆಹೆನೆಂದರೆ, ಕ್ರಿಗೆ ಅಂಗನಿಲ್ಲದು, ಅರಿವೆಗೆ ಆತ್ಮನಿಲ್ಲದು. ಉಭಯದಾಟ ಕೂಡಿ ನಿನ್ನನರಿವನ್ನಕ್ಕರ, ಕಲ್ಪಾಂತರ ಕೂಟವಾಗುತ್ತಿದೆ. ಇದರಚ್ಚುಗವ ಬಿಡಿಸು, ಗೋಪತಿನಾಥ ವಿಶ್ವೇಶ್ವರಲಿಂಗವೇ.

(೮). ಎನ್ನ ಮಾಯದ ಮದವ ಮುರಿಯಯ್ಯ. ಎನ್ನ ಕಾಯದ ಕಳವಳವ ಕೆಡಿಸಯ್ಯ. ಎನ್ನ ಜೀವದ ಜಂಜಡವ ಬಿಡಿಸಯ್ಯ. ಎನ್ನ ದೇವ ಚನ್ನ ಮಲ್ಲಿಕಾರ್ಜುನಯ್ಯ ಎನ್ನ ಸುತ್ತಿದ ಮಾಯಾಪ್ರಪಂಚವ ಬಿಡಿಸಾ ನಿಮ್ಮ ಧರ್ಮ.

(೯). ಸ್ಥಲಂಗಳನರಿದಿಹೆನೆಂದಡೆ, ತ್ರಿವಿಧ ಸ್ಥಲವೇನಗಿಲ್ಲ. ಷಟ್ಸ್ಥಲವ ಮುನ್ನವೇ ಅರಿಯೆ. ತತ್ವವನರಿದಿಹೆನೆಂದಡೆ ಇಪ್ಪತ್ತೈದರ ಗೊತ್ತಿನವನಾನಲ್ಲ. ಮಿಕ್ಕಾದ ಸತ್ಕ್ರಿಯೆಯನರಿದಿಹೆನೆಂದಡೆ, ಭಕ್ತಿ ಜ್ಞಾನ ವೈರಾಗ್ಯ ತ್ರಿವಿಧ ಲಕ್ಷವಿದ ನಾನಲ್ಲ. ನಿಷ್ಠೆಯಲ್ಲಿ ದೃಷ್ಟವ ಕಂಡಿಹೆನೆಂದಡೆ, ವಿಶ್ವಾಸವೇನಗಿಲ್ಲ. ವಿರಕ್ತಿಯಲ್ಲಿ ಭೇದಿಸಿಹೆನೆಂದಡೆ ತ್ರಿವಿಧ ಮಲದ ಮೊತ್ತದೊಳಗೆ ಮತ್ತನಾಗಿದ್ದೇನೆ. ಮತ್ತೆ ನಿಶ್ಚಯವನರಿದಿಹೆನೆಂದಡೆ ಆತ್ಮಂಗೆ ಲಕ್ಷವಿಪ್ಪುದೊಂದು ಗೊತ್ತು ಕಾಣೆ. ಇಂತೀ ಕಷ್ಟತನುವಿನಲ್ಲಿ ಬಂದು, ಧೂರ್ತನಾಗಿ ಕೆಟ್ಟು ಹೋಗುತ್ತಿದ್ದೇನೆ. ಗುಡಿಸಿದ ಹಿಕ್ಕೆಯಲ್ಲಿ ಬಂದು, ತನ್ನ ನಿಷ್ಠೆಯ ತೋರಿ, ಎನಗೆ ಸದ್ಭಕ್ತಿಯ ಬೀರಿ, ವಿಶ್ವಾಸಿಗಳ ಕೃತ್ಯದೊಳಗಾಗಿ, ನಿತ್ಯನೇಮಂಗಳಲ್ಲಿ ಅಚ್ಚೊತ್ತಿದಂತಿರು. ನೀನೇ ನಿರ್ಮುಕ್ತನಹೆ. ನಿಜನಿತ್ಯನಹೆ. ಜಗಕ್ಕೆ ಕರ್ತುವಹೆ. ಎನ್ನ ಹಿಕ್ಕಿಗೆ ಬಂದು ಸಿಕ್ಕಿದೆಯಲ್ಲಾ, ಮಹಾಮಹಿಮ ವೀರಬೀರೇಶ್ವರಲಿಂಗಾ.

(೧೦). ಎನ್ನ ಕಾಯದ ಕಠಿಣವ ಕಳೆಯಯ್ಯ. ಎನ್ನ ಜೀವದುಪಾಧಿಯ ಕಳೆಯಯ್ಯ. ಎನ್ನ ಪ್ರಾಣದ ಪ್ರಪಂಚವ ತೊಲಗಿಸಯ್ಯ. ಎನ್ನ ಭಾವದ ಭ್ರಮೆಯ ಕೆಡಿಸಯ್ಯ. ಎನ್ನ ಮನದ ವ್ಯಾಕುಳವ ಮಾಣಿಸಯ್ಯ. ಎನ್ನ ಕರಣೇಂದ್ರಿಯಗಳ ಕಷ್ಟಗುಣವ ನಷ್ಟವ ಮಾಡಯ್ಯ. ಎನ್ನೊಳಗೆ ನಿಮ್ಮ ಕರುಣಾಮೃತವ ತುಂಬಯ್ಯಾ ಗುರುವೇ ಅಖಂಡೇಶ್ವರಾ.

(೧೧). ಏನೆಂಬೆ, ಏನೆಂಬೆನಯ್ಯ, ಮತಿಗೆಟ್ಟ ಮಾನವಾ. ಲೋಕಕ್ಕೆ ಬಂದೆ. ಬಂದ ಬರವಿನಲ್ಲಿಯೇ ಭವವೆಂಬ ಭೂಪತಿ ಎನ್ನ ಸೆರೆವಿಡಿದು ಕಾಲ ಕಾಮನ ವಾಸಕ್ಕೆ ಕೊಟ್ಟನಯ್ಯ. ಕಾಲಂಗೆ ಕಾಯವ ದಂಡವ ತೆತ್ತದ್ದು ಲೆಕ್ಕ

ವಿಲ್ಲ. ಮನಸಿಜಂಗೆ ಮನವ ದಂಡವ ತೆತ್ತುದ್ದು ಲೆಕ್ಕವಿಲ್ಲ. ಹೋದಿಹೆನೆಂದಡೆ ಒಳಕಾವಲರು ಹೊರಕಾವಲರು ಹೋಗಲೀಸರು. ನನ್ನ ಸಿರಿ ಏರಿಯಲ್ಲಿ ಬಿಡಿಸಿಕೊಂಡು ಹೋದಿಹೆನೆಂದಡೆ, ನಾನು ದರಿದ್ರನಯ್ಯ. ಎನ್ನ ಬಿಡಿಸಿಕೊಳ್ಳಿರಯ್ಯ, ಬಸವಾದಿ ಪ್ರಮಥರಿರಾ. ನಿಮ್ಮ ಸೆರಗೊಡ್ಡಿ ಬೇಡುವೆನಯ್ಯ. ಭಕ್ತಿಗೆ ಭಂಡಾರವಾಗಿಪ್ಪ ಸಂಗನಬಸವಣ್ಣ, ಎನಗೆ ಹಾಗ ತೂಕ ಭಕ್ತಿಯ ಕೊಡಯ್ಯ. ಪ್ರಸಾದವೇ ಚಿತ್ಪಿಂಡಸ್ವರೂಪವಾದ ಚನ್ನಬಸವಣ್ಣ, ಎನಗೆ ಹಾಗ ತೂಕ ಜ್ಞಾನವ ಕೊಡಯ್ಯ. ಮಾಯಾಕೋಳಾಹಳಮಪ್ಪ ಅಲ್ಲಮಪ್ರಭುವೇ, ಎನಗೆ ಹಾಗ ತೂಕ ವೈರಾಗ್ಯವ ಕೊಡಯ್ಯ. ಬೆಟ್ಟದ ಗುಂಡ ತಂದು ಇಷ್ಟಲಿಂಗದಲ್ಲಿ ಐಕ್ಯವ ಮಾಡಿದ ಘಟ್ಟಿವಾಳಲಿಂಗವೇ, ಎನಗೆ ಹಾಗ ತೂಕ ಲಿಂಗವ ಕೊಡಯ್ಯ. ಆರು ನಾಲ್ಕು ಹಾಗ ಕೂಡಿದಲ್ಲಿಯೇ, ಮನ ಲಿಂಗದಲ್ಲಿ ಅಂದಣವಪ್ಪುದು. ಮನ ಲಿಂಗದಲ್ಲಿ ಅಂದಣವಾದಲ್ಲಿಯೇ ಎನಗೆ ಚಂದ್ರಾಯುಧಂ ದೊರೆಕೊಂಬುದು. ಆ ಚಂದ್ರಾಯುಧಮಂ ಪಿಡಿದು, ಒಳಕಾವಲನಾಲ್ವರಕೊರಳಂ ಕೊಯ್ದು, ಹೊರಕಾವಲ ಐವರ ಹುರಿಹಂಚು ಮಾಡಿ, ಭವದ ಬಳ್ಳಿಯ ಕೊಯ್ದು, ಕಾಲಕಾಮರ ಕಣ್ಣ ಕಳೆದು, ಎಡಬಲದ ಹಾದಿಯ ಹೊದ್ದದೆ, ನಡುವಣ ಸಣ್ಣ ಬಟ್ಟೆಗೊಂಡು ಬಂದು, ರತ್ನಜಾಲವನೇರಿ, ಅಲ್ಲಿಪ್ಪ ಲಿಂಗಮಂ ಬಲಗೊಂಡು, ನೀವಿರ್ದ ಉನ್ಮನಿಯ ಪುರಕ್ಕೆ ಬಂದು, ನಿಮ್ಮ ಪಡುಗ ಪಾದರಕ್ಷಿಯ ಹಿಡಿದು, ನಿಮ್ಮ ಬಾಗಿಲ ಕಾಯ್ದಿಪ್ಪುದೇ ಎನಗೆ ಭಾಷೆ. ಎನ್ನ ಬಿನ್ನಪಮಂ ನೀವು ಮನ ಒಲಿದು ಕರುಣಿಸುವದಯ್ಯ. ಇದಕ್ಕೆ ನೀವೇ ಸಾಕ್ಷಿಯಯ್ಯ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೧೨). ಎಲೆ, ಮನ ಬುದ್ಧಿ ಚಿತ್ತ ಅಹಂಕಾರವೆಂಬ ಚತುರ್ವಿಧ ಎನ್ನ ಮಂತ್ರಿ ಪ್ರಧಾನರು ಕೇಳಿರಯ್ಯ. ನಾನು ಕೆಟ್ಟು ಭ್ರಷ್ಟನಾಗಿ ಹೋದ ಕರ್ಮದಂಡಲೆಯ ಬಗೆಯು. ನಾನು ಸ್ವರ್ಗ ಮರ್ತ್ಯಪಾತಾಳಕೊಳಗುಳ್ಳ ಭೋಗರಾಜ್ಯಕ್ಕೆ ಅರಸಾಗಿ, ಅನಂತಕಾಲ ಪಟ್ಟವನಾಳಿ, ಎನ್ನ ಚತುರಂಗಬಲಕ್ಕೆ ತಪದಿ ಕಂದಾಯಮಂ ಕೊಟ್ಟು ನಷ್ಟವಾಗಿ, ಎನಗೆ ಎರಡು ನಾಲ್ವತ್ತೆರಡು ಲಕ್ಷದ ಭವರಾಟಳದ ಋಣ ಬಿದ್ದಿತ್ತು. ಆ ಋಣಕ್ಕಂಜಿ ಭೋಗರಾಜ್ಯಮಂ ಬಿಟ್ಟು, ದರಿದ್ರನಾದೆನು. ಎನಗೆ ನೀವು ಮಾಡುವ ರಾಜಕಾರ್ಯದ ಮಣಿಹವ ನಿಮಗೆ ತೆಗೆಯಿತ್ತು. ಎನ್ನ ನಂಬಿ ಕೆಡಬೇಡ. ನಿಮ್ಮ ಪೂರ್ವಾಶ್ರಯಕ್ಕೆ ನೀವು ಹೋಗಿ.

ಎಲೆ, ಅಜ್ಞಾನತಮಕ್ಕೆ ಜ್ಯೋತಿಪ್ರಕಾಶವನುಳ್ಳ ಸಮ್ಯಜ್ಞಾನವೇ ಕೇಳಯ್ಯ. ಆತನು ಜ್ಞಾನಸ್ವರೂಪನೆಂದು ವೇದಾಗಮಂಗಳು ಶ್ರುತಿ ಸಾರುತ್ತಿವೆ. ನಾನು ಜೀವಾತ್ಮಮಂ ಅಳಿದು, ಶರಣತ್ವಮಂ ಕೈವಿಡಿದೆ, ಎನ್ನೊಳಗೆ ನೀನು ನನೆಯೊಳಗಣ ಪರಿಮಳದಂತೆ ಹುದುಗಿಪ್ಪೆಯಾಗಿ, ನಿಮ್ಮ ನಾನು ಗೋಳಕಾಕಾರ ಸ್ವರೂಪವಾದ ನಿಃಕಳ ಬ್ರಹ್ಮದಲ್ಲಿ ಉದಯವಾದ ಸಹೋದರರು ಎನ್ನ ಎಂಟು ವೀದಿ ಪಟ್ಟಣದ ಚೌದಾರಿಯ ಏಕಾಂತ ವೀದಿಯ, ಸುವರ್ಣವಣ್ಣದ ಸಿಂಹಾಸನದ ಮೇಲಿಪ್ಪ ಮನೋನಾಥನಂ ಕಾಣಿಸಿ, ನಿನ್ನ ಶ್ರೀಚರಣಮಂ ಎಂದೆಂದು ಪೂಜೆಯಂ ಮಾಡುವ ಭೃತ್ಯನೆಂದು, ಭಯಭಕ್ತಿಯಿಂ ಬಣ್ಣಿಸಿ, ಎನ್ನ ಮಾಯಾಪಾಶಮಂ ಸುಡುವಂತೆ ಒಲವನುಂಟು ಮಾಡು. ಚಿದಾಕಾಶದಲ್ಲಿ ಆರು ಮೂರಾಗಿ, ಮೂರು ಒಂದಾಗಿ, ಎರಡು ವೀಧಿಯ ಮಾಣಿಕ್ಯಪುರವೆಂಬ ಸಂಗಮಸ್ಥಲವೆಂಬ ಅರಮನೆಯಲ್ಲಿ ನೆಲೆಸಿಪ್ಪ ಮಹಾರಾಯನ ಮುಂದೆ ಎನ್ನನಿಕ್ಕಿ, ನಿನ್ನ ಆದಿ ಅನಾದಿಯ ಹಳಿಯನೆಂದು ಬಿನ್ನಪಂಗೆಯ್ದು, ಕರುಣಾರಸಮಂ ಬೆರಿಸಿ, ಎನಗೆ ಮುಕ್ತಿ ರಾಜ್ಯಮಂ ಕೊಡುವಂತೆ ಸಂಧಾನಮಂ ಮಾಡಿ, ಆ ಮುಕ್ತಿರಾಜ್ಯಕ್ಕೆ ಪಟ್ಟಮಂ ಕಟ್ಟಿಸಿ, ಅಭಯ ಹಸ್ತಮಂ ಕೊಡಿ. ಎನ್ನ ಎಂಬತ್ತುನಾಲ್ಕು ಲಕ್ಷ ಭವರಾಟಣದ ಋಣವ ತಿದ್ದುವಂತೆ ಮಾಡಯ್ಯ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೧೩). ಕಪಿ ಕಳ್ಳ ಕುಡಿದು, ಕಡಲ ದಾಂಟುವೆನೆಂದು ಲಂಗಿಸಿ, ನಡುನೀರಿನಲ್ಲಿ ಬಿದ್ದು ಮೀನ ಮೊಸಳಿಗೆ ಆಹಾರವಾಗಿತ್ತಯ್ಯ ಎನ್ನ ಬಾಳುವೆ. ಆದಿಯಲ್ಲಿ ನಿನ್ನ ಗರ್ಭಾಬ್ಧಿಯಲ್ಲಿ ಜನಿಸಿ, ನಿನ್ನ ನೆನಹಿಲ್ಲದೆ ಇಷ್ಟಲಿಂಗವನರಿಯದ ಕಷ್ಟಜೀವಿಗಳ, ಪ್ರಾಣಲಿಂಗವನರಿಯದ ಪರಮಪಾತಕರ, ಭಾವಲಿಂಗವನರಿಯದ ಭವಕ್ಕೊಳಗಾದ ಹುಳು ಮಾನವರ, ತಂದೆ ತಾಯಿ ಬಂಧುಬಳಗವೆಂದು ಭಾವಿಸಿದ ಬಲುಪಾತಕವೆನ್ನನಂಡಲೆದು ಅಮರ್ದಪ್ಪಿ ಅಗಲದ ಕಾರಣ, ನಿನ್ನ ತಾವಿಂಗೆ ನೀರ್ದಳಿವರಯ್ಯ, ಕುಳಿತತಾವಿಗೆ ಹೋಮವನಿಕ್ಕುವರಯ್ಯ, ನಾನು ಬಂದ ಬಟ್ಟೆಯೊಳಗೆ ಓರ್ವರು ಬಾರರಯ್ಯಾ, ಕಾಲನಾಳಿಗೆ ಕಾಲ್ದುಳಿಯಾದೆನಯ್ಯ, ಶುನಕಸೂಕರಾದಿಗಳ ಬಸುರಿನಲ್ಲಿ ಬರುವಂತೆ ಮಾಡಿತ್ತಯ್ಯ, ಎನ್ನ ಮಾಯೆ. “ಓರ್ವರಿಗೆ ಹುಟ್ಟಿ ಮತ್ತೋರ್ವರಲ್ಲಿಪ್ಪ” ಎಂಬ ದುಷ್ಟ ನಾಣ್ನುಡಿಯ ದೃಷ್ಟ ಎನಗಾಯಿತ್ತಯ್ಯ, ಗುರುವೆ. ಈ ದೋಷಮಂ ಕರುಣದಿಂ

ಕಳೆದು, ಶುದ್ಧನ ಮಾಡಿ ನಿನ್ನ ಜನನಿ ಜನಕನೆಂದು ನಿನ್ನ ಭಕ್ತರ ಬಂಧುಬಳಗವೆಂದು, ಸುಜ್ಞಾನಮಂ ಕೊಟ್ಟು, ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ನಿನ್ನತ್ತಲು ಎನ್ನ ಮುಖವ ಮಾಡಿ ಅಕ್ಕರಿಂದೆ ರಕ್ಷಿಪುದಯ್ಯ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೧೪). ಎಲೆ ಕರುಣಿ, ಜನನಿಯ ಜಠರಕ್ಕೆ ಎನ್ನ ತರಬೇಡವಯ್ಯ. ತಂದರೆ ಮುಂದೆ ತಾಪತ್ರಯಕ್ಕೊಳಗಾದ ತರಳೆಯ ದುಃಖದ ಬಿನ್ನಪವ ಕೇಳಯ್ಯ. ಆಚಾರಲಿಂಗಸ್ವರೂಪವಾದ ಘ್ರಾಣ, ಗುರುಲಿಂಗಸ್ವರೂಪವಾದ ಜಿಹ್ವೆ, ಶಿವಲಿಂಗಸ್ವರೂಪವಾದ ನೇತ್ರ. ಜಂಗಮಲಿಂಗಸ್ವರೂಪವಾದ ತ್ವಕ್ಕು, ಪ್ರಸಾದಲಿಂಗಸ್ವರೂಪವಾದ ಶ್ರೋತ್ರ ಮಹಾಲಿಂಗಸ್ವರೂಪವಾದ ಪ್ರಾಣ, ಪಂಚಬ್ರಹ್ಮಸ್ವರೂಪವಾದ ತನು, ಇಂತಿವೆಲ್ಲವು ಕೂಡಿ, ಪರಬ್ರಹ್ಮಸ್ವರೂಪವಾದಾತನಾಗಿ, ಆನೆಯ ರೂಪತಾಳಿ, ಹಾಳುಗೇರಿಯ ಹೋಗುವ ಹಂದಿಯಂತೆ, ಉಚ್ಚೆಯ ಬಚ್ಚಲೆಂಬ ಹೆಬ್ಬಾಗಿಲ ದಿಡ್ಡಿಯಲ್ಲಿ ಎಂತು ನುಸುಳುವೆನಯ್ಯ. ಹೇಸಿ ಹೇಡಿಗೊಂಡೆನಯ್ಯ, ನೊಂದೆನಯ್ಯ, ಬೆಂದೆನಯ್ಯ, ಬೀಗಿವರಿದು ನಿಂದುರಿದೆನಯ್ಯ. ಎನ್ನ ಮೊರೆಯ ಕೇಳಯ್ಯ ಮಹಾಲಿಂಗವೇ, ಎನ್ನ ಭವಕ್ಕೆ ನೂಂಕಬೇಡಯ್ಯ. ನಾನು ಅನಾದಿಯಲ್ಲಿ ಭೋಗಕಾಶೆ ಮಾಡಿದ ಫಲದಿಂದೆ, ಅಂದಿನಿಂ ಇದುಪರಿಯಂತರ ನಾನಾ ಯೋನಿಯಲ್ಲಿ ಬಂದು, ನಾಯಿ ಉಣ್ಣದ ಓಡಿನಲ್ಲಿ ಉಂಡು, ನರಗೊಳೆಗೊಂಡೆನಯ್ಯ. ಎನಗೆ ಹೊನ್ನು ಬೇಡ, ಹೆಣ್ಣು ಬೇಡ, ಮಣ್ಣು ಬೇಡ, ಭೋಗವು ಬೇಡ, ಭಕ್ತಿಯು ಬೇಡ, ಫಲವು ಬೇಡ, ಪಾದವು ಬೇಡ, ನಿಮ್ಮ ಶ್ರೀಪಾದವ ನೋಡಗೂಡಲು ಬೇಡ, ಎನಗೆ ಪುರುಷಾಕಾರವು ಬೇಡವಯ್ಯ. ಎನ್ನ ಮನ ಒಪ್ಪಿ, ಪಂಚೈವರು ಸಾಕ್ಷಿಯಾಗಿ, ನುಡಿವುತಿಪ್ಪೆನಯ್ಯ. ನಿಮ್ಮಾಣೆ. ಎನಗೆ ಮತ್ತೊಂದು ಕರುಣಿಸಯ್ಯ. ತಂದೆ ಡೋಹರಕಕ್ಕಯ್ಯ, ಮಾದಾರ ಚನ್ನಯ್ಯ, ಅಂಬಿಗರ ಚೌಡಯ್ಯ, ಇಂತಪ್ಪ ಶಿವಶರಣರ ಮನೆಯ ಬಾಗಿಲ ಕಾವ ಸೊಣಗನ ಮಾಡಿ, ಎನ್ನನಿರಿಸಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

## (೮). ಶುದ್ಧಮನಸ್ಸನ್ನುಂಟುಮಾಡಲು ಬೇಡಿಕೊಳ್ಳು

(೧). ಭವಕ್ಕೆ ಬೀಜವಾದುದು ತನುವೊ, ಮನವೊ. ಎಂದು ವಿಚಾರಿಸಿ ನೋಡಲು, ಮನವೇ ಕಾರಣವಾಗಿರ್ಪುದರಿಯದೆ, ಕೆಟ್ಟ ಮನದ ಸಂಗದಿಂದೆ ಮರ್ತ್ಯಲೋಕದಲ್ಲಿ ಹುಟ್ಟಿ, ತಾಪತ್ರಯಾಗ್ನಿಯಿಂದೆ ಕುಂದಿ ಕಂದಿ ನೊಂದು ಬೆಂದೆನಯ್ಯಾ. ಈ ಮನದ ಸಂಗದಿಂದೆ ಭವಭವದಲ್ಲಿ ತೊಳಲಿ ಬಳಲಿದೆನಯ್ಯಾ. ಈ ಮನದ ಸಂಗದಿಂದಲೇ ಅನಂತ ಮರವೆಯ ಜೋಹಗಳಲ್ಲಿ ಸೆರೆಸಿಕ್ಕಿದೆನಯ್ಯಾ. ಈ ಮನದ ಸಂಗವ ಬಿಡಿಸಿ, ನಿಮ್ಮ ನೆನಹಿನ ಸಂಗದಲ್ಲಿರಿಸಿ ಸಲಹಯ್ಯಾ ಎನ್ನ ಅಖಂಡೇಶ್ವರಾ.

(೨). ಮನವೆಂಬ ಮರ್ಕಟನು ತನುವೆಂಬ ವೃಕ್ಷವನೇರಿ, ಇಂದ್ರಿಯಂಗಳೆಂಬ ಶಾಖೆಶಾಖೆಗೆ ಹಾರಿ, ವಿಷಯಗಳೆಂಬ ಹಣ್ಣುಫಲಂಗಳ ಗ್ರಹಿಸಿ, ಭವದತ್ತಮುಖವಾಗಿ ಹೋಗುತ್ತಿದೆ ನೋಡಾ. ಈ ಮನವೆಂಬ ಮರ್ಕಟನ ನಿಮ್ಮ ನೆನವೆಂಬ ಪಾಶದಲ್ಲಿ ಕಟ್ಟಿ, ಎನ್ನನುಳಿಹಿಕೊಳ್ಳಯ್ಯಾ ಅಖಂಡೇಶ್ವರಾ.

(೩). ತನುವಿಕಾರ ಕತ್ತಲೆಯಲ್ಲಿ ಸಿಕ್ಕಿ, ಕಂಗೆಟ್ಟು ಕಳವಳಿಸಿ ತೊಳಲಿ ಬಳಲಿದೆನಯ್ಯಾ. ಮನವಿಕಾರ ಮರವೆಯಲ್ಲಿ ಸಿಕ್ಕಿ, ಮಣ್ಣು ಮಸಿಯಾಗಿ ಬಣ್ಣಗೆಟ್ಟೆನಯ್ಯಾ. ಈ ತನುಮನದ ವಿಕಾರವ ಮಾಣಿಸಿ, ನಿಮ್ಮ ಭಕ್ತಿವಿಚಾರದಲ್ಲಿರಿಸಿ ಸಲಹಯ್ಯಾ ಎನ್ನನು ಅಖಂಡೇಶ್ವರಾ.

(೪). ಮತಿಗೆಟ್ಟೆನಯ್ಯಾ ಮನದಾಸೆಯ ಕಚ್ಚಿ. ಧೃತಿಗೆಟ್ಟೆನಯ್ಯಾ ತನುವಿನಾಶೆಯ ಮೆಚ್ಚಿ. ಈ ತನು ಮನದಾಸೆಯ ಕೆಡಿಸಿ, ನಿಮ್ಮ ಭಕ್ತಿಯ ಲೇಸ ತೋರಿಸಿ ಬದುಕಿಸಯ್ಯಾ ಎನ್ನನು ಅಖಂಡೇಶ್ವರಾ.

(೫). ಮನವಿದು ಒಮ್ಮೆ ಪ್ರಪಂಚಿನತ್ತಹರಿವುದು. ಒಮ್ಮೆ ಪರಮಾರ್ಥದತ್ತ ತಿರುಗುವದು. ಒಂದ ಹಿಡಿಸಿ ಒಂದ ಬಿಡಿಸುವದು. ಇಂತೀ ಸಂದೇಹವನಿಕ್ಕಿ ದಂದುಗಗೂಡಿಸಿ, ಮುಂದುಗೆಡಿಸಿ ಕಾಡುತ್ತಿದೆ. ಈ ಮನದ ಮರುಳತನವ ಬಿಡಿಸಿ, ನಿಮ್ಮ ಶ್ರೀಪಾದದಲ್ಲಿರಿಸೆನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೬) ಏನಿದ್ದರೇನಿದ್ದರೊಲ್ಲದು ನಿಮ್ಮನುಭಾವಕ್ಕೆನ್ನ ಮನವು. ಡಂಭಕನೆಂಬವ ನಾನು ಕಂಡಯ್ಯಾ. ಕೂಡಲಸಂಗಮದೇವನ ಪೂಜಿಸಿ, ಮಾನವರಾಸೆ ಬಿಡದಾಗಿ.

(೭). ಒಡೆಯನ ಕಂಡರೆ ಕಳ್ಳನಾಗದಿರು, ಮನವೇ. ಭವದ ಬಾಧೆಯ ತಪ್ಪಿಸಿಕೊಂಬುವರೆ, ನೀನು ನಿಯತವಾಗಿ, ಭಯಭರಿತನಾಗಿ, ಅಹಂಕಾರಿಯಾಗದೆ ಶರಣೆನ್ನು ಮನವೆ. ಕೂಡಲಸಂಗನ ಶರಣರಲ್ಲಿ ಭಕ್ತಿಯ ನೂನುವರೆ, ಕಿಂಕರನಾಗಿ ಬದುಕು ಮನವೇ.

(೮). ಒಳ್ಳಿಹ ಮೈಲಾರನಲ್ಲಿ ಒಳಗೆಲ್ಲ ಸಣಬು. ಹೊರಗಣ ಬಣ್ಣವೇಕರ ಲೇಸಾಯಿತ್ತಯ್ಯ. ಶ್ವಾನನ ನಿದ್ದೆ ಅಜ್ಞಾನಿಯ ತಪದಂತೆ ಆಯಿತ್ತಯ್ಯ ಎನ್ನ ಮತಿ ಕೂಡಲಸಂಗಮದೇವಾ.

(೯). ಲೋಕೋಪಚಾರಕ್ಕೆ ಮಜ್ಜನಕ್ಕೆರೆವೆನಯ್ಯ. ಮನದ ತಾಮಸ ಬಿಡದು. ಮನದ ಕಪಟ ಬಿಡದು. ಶಿವಶರಣೆಂಬುದು ಆಳವಡದಯ್ಯ. ಎನ್ನ ಮನದಲ್ಲಿ ಎರಡುಳ್ಳನ್ನಕ್ಕರ, ಕೂಡಲಸಂಗಮದೇವನೆಂತೊಲಿವ?

(೧೦). ಕೆಲಕ್ಕೆ ಶುದ್ಧನಾದೆನಲ್ಲದೆ ಮನಕ್ಕೆ ಶುದ್ಧನಾಗೆನಯ್ಯ. ಕೈ ಮುಟ್ಟಿ ಪೂಜಿಸುವಡೆ, ಕೈ ಶುದ್ಧಿ ಇಲ್ಲವಯ್ಯ. ಮನಮುಟ್ಟಿ ಪೂಜಿಸುವಡೆ, ಎನ್ನ ಮನಶುದ್ಧವಿಲ್ಲವಯ್ಯ. ಭಾವಶುದ್ಧವಾದಡೆ, ಕೂಡಲಸಂಗಮದೇವಯ್ಯ ನಿತ್ತಬಾ ಎಂದೆತ್ತಿಕೊಳ್ಳನೇಕಯ್ಯ?

(೧೧). ಹೃದಯದಿ ಕತ್ತರಿ, ತುದಿಯ ನಾಲಿಗೆ ಬೆಲ್ಲೆಂಬೋ. ಆಡಿಹೆವೆಂಬೋ. ಹಾಡಿಹೆವೆಂಬೋ. ನಿಚ್ಚನಿಚ್ಚ ಶಿವರಾತ್ರಿಯ ಮಾಡಿಹೆನೆಂಬೋ. ಆನು ಎನ್ನಂತೆ, ಮನ ಮನದಂತೆ, ಕೂಡಲಸಂಗಮದೇವ ತಾನು ತನ್ನಂತೆ.

(೧೨) ಓತಿ ಬೇಲಿವರಿದಂತೆ, ಎನ್ನ ಮನವಯ್ಯ. ಹೊತ್ತಿಗೊಂದು ಪರಿಯಪ್ಪ ಗೋಸುಂಬೆಯಂತೆ ಎನ್ನ ಮನವು. ಬಾವುಲ ಬಾಳುವೆಯಂತೆ ಎನ್ನ ಮನವು. ನಡುವಿರುಳೆದ್ದ ಕುರುಡಂಗೆ ಅಗಸಿಯಲ್ಲಿ ಬೆಳಗಾದಂತೆ, ಎನಗಿಲ್ಲದ ಭಕ್ತಿಯ ಬಯಸಿದರುಂಟೆ ಕೂಡಲಸಂಗಮದೇವಾ?

(೧೩). ಸತ್ಯಸಂಬಂಧಸ್ವಯವಾದ ಭೃತ್ಯಾಚಾರವೆನಗಿಲ್ಲವಯ್ಯಾ. ಅನುದಿನ ನಿಮ್ಮ ನೆನೆಯಲು, ತೆರಹಿಲ್ಲವಯ್ಯ ಎನಗೆ. ಕೂಡಲಸಂಗಮದೇವಾ, ಕರುಣಿಸಿ ಕೃಪೆಯ ಮಾಡಯ್ಯ.

(೧೪). ಶಬ್ದಸಂಭಾಷಣೆಯ ನುಡಿಯ ವರ್ತಿಸಿ ನುಡಿವೆ. ತೊಡೆಹದ ಕೆಲಸದ ಬಣ್ಣದಂತೆ, ಕಡಿಹಕ್ಕೆ ಒರೆಗೆ ಬಾರದು ನೋಡಾ. ಎನ್ನ ಮನದ

ಲೊಂದು, ಹೃದಯುದಲೊಂದು, ವಚನದಲೊಂದು ನೋಡಾ. ಕೂಡಲಸಂಗಮ ದೇವಾ, ಅನುಭಕ್ತನೆಂದು ಹುಸಿಯ ಮುಸಕವನೇನು ಬಣ್ಣಿಸುವೆನಯ್ಯ?

(೧೫). ಲೌಕಿಕರ ಕಂಡು ಆಡುವೆ ಹಾಡುವೆ. ತಾರ್ಕಿಕರ ಕಂಡು ಆಡುವೆ ಹಾಡುವೆ. ಸಹಜ ಗುಣವೆನ್ನಲ್ಲಿಲ್ಲವಯ್ಯ. ನಿಜಭಕ್ತಿ ಎನಗಿಲ್ಲ ತಂದೆ. ಏಕೋಭಾವ ಎನಗುಳ್ಳರೆ, ಯಾಕೆ ನೀ ಕರುಣಿಸಯ್ಯ ಕೂಡಲಸಂಗಮದೇವಾ?

(೧೬). ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವದು ಎನ್ನ ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ಕೂಡಲಸಂಗಮದೇವಾ ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ.

(೧೭). ಅಂದಣವನೇರಿದ ಸೊಣಗನಂತೆ, ಕಂಡಡೆ ಬಿಡದು ತನ್ನ ಮುನ್ನಿನ ಸ್ವಭಾವವನು. ಸುಡು ಸುಡು ಮನವಿದು ವಿಷಯಕ್ಕೆ ಹರಿವುದು. ಮೃಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ ಕೂಡಲಸಂಗಮ ದೇವಾ, ನಿಮ್ಮ ಚರಣವ ನೆನೆವಂತೆ ಕರುಣಿಸು, ಸೆರೆಗೊಡ್ಡಿ ಬೇಡುವೆ, ನಿಮ್ಮ ಧರ್ಮಾ.

(೧೮). ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ ಸಂಸಾರಸಂಗ ಬಿಡದು, ನೋಡೆನ್ನ ಮನವು. ಈ ನಾಯಿತನವ ಮಾಣಿಸು, ಕೂಡಲಸಂಗಮದೇವಯ್ಯ, ನಿಮ್ಮ ಧರ್ಮ.

(೧೯). ಕೋಟ್ಯಾನುಕೋಟಿ ಜಪವನ್ನು ಮಾಡಿ, ಕೋಟಲೆಗೊಳಲೇಕೆ ಮನವೇ? ಕಿಂಚಿದ್ಗೀತವನಂತಕೋಟಿ ಜಪ. ಜಪವೆಂಬುದೇಕೆ ಮನವೇ? ಕೂಡಲಸಂಗನ ಶರಣರ ಕಂಡು ಆಡಿ ಹಾಡಿ ಬದುಕು ಮನವೇ.

(೨೦). ಮನವೇ, ನಿನ್ನ ಜನ್ಮದ ಪರಿಭವವ ಮರೆದೆಯಲ್ಲ. ಮನವೇ, ಲಿಂಗವ ನೆರೆನಂಬು, ಕಂಡೆಯಾ ಮನವೇ. ಜಂಗಮವ ನಂಬು ಕಂಡೆಯಾ, ಮನವೇ. ಕೂಡಲಸಂಗಮದೇವರ ಬಿಡದೆ ಬೆಂಬತ್ತು ಕಂಡೆಯಾ ಮನವೇ.

(೨೧). ಸುರರ ಬೇಡಿದರಿಲ್ಲ, ನರರ ಬೇಡಿದರಿಲ್ಲ. ಬರಿದೆ ಧೃತಿಗೆಡಬೇಡ ಮನವೇ. ಆರ ನಾದಡೆಯೂ ಬೇಡಿ ಬೇಡಿ, ಬರಿದೆ ಧೃತಿಗೆಡಬೇಡ, ಮನವೇ. ಕೂಡಲಸಂಗಮದೇವನಲ್ಲದೆ, ಆರ ಬೇಡಿದರಿಲ್ಲ ಮನವೇ.

(೨೨). ಬೆಲ್ಲವ ತಿಂದ ಕೋಡಗನಂತೆ, ಸಿಹಿಯ ನೆನೆಯದಿರಾ, ಮನವೇ. ಕಬ್ಬ ತಿಂದ ನರಿಯಂತೆ ಹಿಂದನೆಣಿಸದಿರಾ, ಮನವೇ. ಗಗನವನಡರಿದ ಕಾಗೆಯಂತೆ, ದೆಸೆದೆಸೆಗೆ ಹಂಬಲಿಸದಿರಾ, ಮನವೇ. ಕೂಡಲಸಂಗನ ಶರಣರ ಕಂಡು, ಲಿಂಗವೆಂದು ನಂಬು ಕಂಡೆಯಾ, ಮನವೇ.

(೨೩). ನನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯ. ವಿಚಾರಿಸಿದರೆ, ಏನೂ ಹುರುಳಿಲ್ಲವಯ್ಯ. ಪ್ರಪಂಚಿನ ಡಂಭಿನಲ್ಲಿ ಎನ್ನನೊಂದು ರೂಪವಮಾಡಿ, ನೀವಿರಿಸಿದಿರಯ್ಯ ಕೂಡಲಸಂಗಮದೇವಾ.

(೨೪). ಮರನೇರಿದ ಮರ್ಕಟನಂತೆ, ಹಲವು ಕೊಂಬೆಗೆ ಹಾಯುತ ಲಿದ್ದೇನೆ. ಬೆಂದಮನವ ನಾನೆಂತು ನಂಬುವೆನಯ್ಯ? ಎಂತು ನೆಚ್ಚುವೆನಯ್ಯ? ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯ.

(೨೫). ದಂದುಗ ಬಿಡದು ಮನಸಂದೇಹ ಹಿಂಗದಾಗಿ. ಮುನ್ನ ಲಿಂಗವ ಕಂಡೆಹೆನೆಂದಡೆ, ಹುಸಿ ನೋಡಾ. ಬೆಂದ ಕರಣಾದಿಗಳು ಒಂದು ಪಥವನರಿಯವು. ಎಂತು ಶಿವಪಥವೆನಗೆ ಸಾಧ್ಯವಪ್ಪುದಯ್ಯ? ಎನ್ನ ತಂದೆ ಕೂಡಲ ಸಂಗಮದೇವಾ ನಿಮ್ಮ ಶರಣರ ಬಳಿವಿಡಿದರೆ, ಎನ್ನ ದಂದುಗ ಹಿಂಗುವದು.

(೨೬). ತನ್ನಿಚ್ಛೆಯ ನುಡಿದರೆ, ಮೆಚ್ಚುವದೀ ಮನವು ಇದಿರಿಚ್ಛೆಯ ನುಡಿದರೆ, ಮೆಚ್ಚದೀ ಮನವು. ಕೂಡಲಸಂಗನ ಶರಣರ ನೆಚ್ಚದ ಮೆಚ್ಚದ ಮನವ ಕಿಚ್ಚಿನೊಳಗಿಕ್ಕು.

(೨೭). ವಚನದ ಹುಸಿ ನುಸುಳೆಂತು ಮಾಬುದೆನ್ನ? ಮನದ ಮರ್ಕಟ ತನವೆಂತು ಮಾಬುದೆನ್ನ? ಹೃದಯಕಲ್ಮಷವೆಂತು ಮಾಬುದೆನ್ನ? ಕಾಯವಿಕಾರಕ್ಕೆ ತೊರಿ ಸಲುವಾದೆನು. ಇನಗಿದು ವಿಧಿಯೇ ಕೂಡಲಸಂಗಮದೇವಾ?

(೨೮). ಹೃದಯದಲ್ಲಿಪ್ಪುದೆಲ್ಲ ನಂಜು ಕಂಡೆಯ್ಯ. ಕಂಗಳಲೊಬ್ಬನ ಕರೆವಳು. ಮನದಲೊಬ್ಬನ ನೆನೆವಳು. ವಚನದಲೊಬ್ಬನ ನೆರೆವಳು. ಇಂತಿವಳ ತನು ಒಂದೆಸೆ, ಮನ ಒಂದೆಸೆ, ಮಾತೊಂದೆಸೆ, ಈ ಮಾನಸಗಳ್ಳೆಯ ನನ್ನವಳೆಂದು ನಂಬುವ ಕುರಿನರರನೇನೆಂಬೆನಯ್ಯ ಕೂಡಲಸಂಗಮದೇವಾ?

(೨೯). ಮನವಿದು ಕ್ಷಣದೊಳಗೆ ಹೊಗದ ಠಾವಿಂಗೆ ಹೋದಂತೆ ನೆನೆವುತ್ತಿದೆ. ಬಾರದ ಠಾವಿಂಗೆ ಬಂದಂತೆ ನೆನೆವುತ್ತಿದೆ. ಕಾಣದುದ ಕಂಡಂತೆ ನೆನೆ

ವೃತ್ತಿದೆ. ಕೇಳದುದ ಕೇಳದಂತೆ ನೆನೆವುತ್ತಿದೆ. ಕ್ಷಣದೊಳಗೆ ದಶದಿಕ್ಕೆಗೆಯ್ದು ತ್ತಿದೆ. ಶತ ಮರ್ಕಟವಿಧಿ ಒಂದು ಮನಕ್ಕಾದರೆ, ಇದನೆಂತು ತಾಳಬಹುದಯ್ಯ? ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ಈ ಮನವ ಸೆರೆ ಇಟ್ಟುಕೊಳಹಯ್ಯ. ನಿಮ್ಮ ಬೇಡಿಕೊಂಬೆ.

(೩೦). ಹಿಡಿ ಮನದ ಸಖಿತ್ವದಿಂದೇನಾಗದಯ್ಯ? ಇಹ ಪರವೈರಾಗ್ಯವ ಕೆಡಿಸಿ ಹೇಡಿಗೊಳಿಸಿತ್ತು. ಮುಂದಕೊಂದಡಿ ಇಡಲೀಯ್ಯದೆ ಹಿಂದಕ್ಕೆ ಹಿಡಿದೆಳೆವುತ್ತಿದೆ. ಈ ಮನಕ್ಕೆ ಜ್ಞಾನಶಾಸ್ತ್ರವ ಕೊಟ್ಟು ಕಲಿಮಾಡಿ ಎನ್ನಿಚ್ಛೆಯಲ್ಲಿ ನಿಮ್ಮಾಳಾಗಿರಿಸಿಕೊಳ್ಳಯ್ಯ, ಈ ಮನವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೩೧). ತನ್ನ ಜ್ಞಾನ ಮೂಲಾ ಹಂಕಾರದಿಂದೆ ಗುರು ಚರ ಪರಭಕ್ತಗಣಂಗಳ ಕಂಡರೆ ತಲೆವಾಗದಯ್ಯ ಎನ್ನ ಮನವು. ತನ್ನ ಭೈರೂಪದ ಬಿಂಕದಿಂದೆ ಗುರುಹಿರಿಯರು ಮಾತನಾಡಿದರೆ ಭೃತ್ಯ ಭಾವದಿಂದೆ ಮಾತನಾಡದಯ್ಯ ಎನ್ನ ಮನವು. ಯತಿಗಳು ದಾರಿಯುಲ್ಲಿ ಬಂದರೆ, ತನ್ನ ಗರುವಿನಿಂದೆ ಅವರಿಗೆ ಪಾದಿಯ ಬಿಡದಯ್ಯ ಎನ್ನ ಮನವು. ಹರಗುರುವಾಕ್ಯವಿಡಿದು ಆಚರಿಸುವ ನಿಜನಿಷ್ಠ ಶೀಲವ್ರತಿಗಳ ಕಂಡರೆ, ತನ್ನ ಗರ್ವದಿಂದ ಊರ ಮಾರಿಯು ಕೋಣ ತಿರುಗುವಂತೆ ಅವರ ಮೇಲೆ ಮತ್ಸರಿಸಿತಯ್ಯ ಎನ್ನ ಮನವು. ಇಂಥ ಪರಮ ಪಾತಕ ಮನದ ಸಂಗದಿಂದ ನೊಂದು ಬೆಂದು ಕಂಗೆಟ್ಟು ಕಂದಿ ಕುಂದಿ ತೊಳಲಿಬಳಲಿದೆನಯ್ಯ. ಇಂಥ ಕುಮನದ ಸಂಗವ ಪರಿಹರಿಸಯ್ಯ ಶ್ರೀಗುರುಲಿಂಗಜಂಗಮವೇ.

(೩೨). ತನ್ನ ಜನ್ಮಾಂತರದ ಮಹಾ ದುಃಖವ ನೆನೆಸಿಕೊಂಡು, ಒಂದು ವೇಳೆ ಮಹಾತತ್ವಜ್ಞಾನಾನಂದ ನಿಜಜ್ಞಾನಿಯಾಗುವದಯ್ಯ. ಮತ್ತೊಂದು ವೇಳೆ ಮಲತ್ರಯ ಪಾಶಬದ್ಧನಾಗಿ ಮಹಾ ಭ್ರಷ್ಟತನದಿಂದೆ ಚರಿಸುವದಯ್ಯ. ಒಂದುವೇಳೆ ಪರಮವಿರಕ್ತಿಯ ಹೇಳುವದಯ್ಯ. ಒಂದುವೇಳೆ ಭ್ರಷ್ಟತನದಿಂದೆ ಚರಿಸುವದಯ್ಯ. ಒಂದುವೇಳೆ ಪುರಾಣವೈರಾಗ್ಯದಿಂದ ಮಹಾ ತ್ಯಾಗಿಯಾಗುವದಯ್ಯ. ಮಹಾಲೋಭತ್ವದಿಂದೆ ಭವಪಾಶದಲ್ಲಿ ಬಿದ್ದು ತೊಳಲುವದಯ್ಯ. ಇಂಥ ಜಡಜೀವಮನದ ಸಂಗವ ತೊಲಗಿಸಿ ರಕ್ಷಿಸಯ್ಯ. ಎನ್ನ ಸೂತ್ರಧಾರಿ ಸಚ್ಚಿದಾ

ನಂದ ಸಕಲಾಗಮಂಗಳ ಮೂರ್ತಿ ಮೋಕ್ಷಪ್ರದಾಯಕ ಶ್ರೀಗುರುಲಿಂಗಜಂಗಮವೇ.

---

## (೯). ಲಿಂಗಾಂಗ ಸಾಮರಸ್ಯವುಳ್ಳವನ ಪ್ರಾರ್ಥನೆ.

(೧). ನಿಮ್ಮಿಂದಲಾನಾದೆನು. ಎನಗೆ ದೇಹೇಂದ್ರಿಯ ಮನಃಪ್ರಾಣಾದಿಗಳಾದವು. ಆ ದೇಹೇಂದ್ರಿಯ ಮನಃಪ್ರಾಣಾದಿಗಳಿಗೆ ಕರ್ತನು ನೀನೇ. ಅವರ ಆಗುಚಾಗು ಸುಖದುಃಖ ಎಲ್ಲವು ನೀನೇ. ಒಳಗು ನೀನೇ, ಹೊರಗು ನೀನೇ. ನಾನೆಂಬುದು ನಡುವಣ ಭ್ರಾಂತು. ನಿನ್ನ ವಿನೋದ ನೀನೇ ಬಲ್ಲೆ ದೇವರಾಯ ಸೊಡ್ಡಳಾ.

(೨). ಎನ್ನೊಳಗೆ ನೀನು ಪ್ರವೇಶ. ನಿನ್ನೊಳಗೆ ನಾನು ಪ್ರವೇಶ. ದೇವ ನೀನಲ್ಲದಿಲ್ಲ. ಭಕ್ತನಾನಲ್ಲದಿಲ್ಲ. ಈ ಪರಿಯ ಮಾಡುವರಿನ್ನಾರು ಹೇಳಾ? ಎನಗೆ ನೀನೇ ಗತಿ. ನಿನಗೆ ನಾನೇ ಗತಿ. ಇನ್ನೇಕೆ ಜವನಿಕೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ?

(೩). ಪಾಪವೆನ್ನದು, ಪುಣ್ಯನಿನ್ನದೇ? ಎನಗೆ ನೀನೆ. ದ್ವಂದ್ವಕರ್ಮ ಬೇರಾದ ಪರಿ ಇನ್ನೆಂತು ಹೇಳಯ್ಯ? ವಿಚಾರವಾದ ಬಳಿಕ ನಾನು ಲಿಂಗಪ್ರಾಣಿ, ನೀನು ಭಕ್ತಕಾಯನು. ಇದು ಕಾರಣ ದ್ವಂದ್ವಕರ್ಮ ಮುನ್ನವೇ ನಾಸ್ತಿ. ಇನ್ನು ಭಾವಭೇದವೆಂದಡೆ ನಗೆಗೆಡೆಯಪ್ಪುದು. ಹೆಚ್ಚು ಕುಂದು ಎನ್ನದಲ್ಲ ನಿನ್ನದು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೪). ಶಿವಶಿವಾ ಎನ್ನ ಮನವ ನೋಡಿಹೆನೆಂಬೆ. ಎನ್ನ ಗುಣಾವಗುಣವ ಹಿಡಿದಿಹೆನೆಂಬೆ. ಮನವಾರು ನೀನಾರು ಎಂಬುದನರಿಯಾ? ನೀನರಿಯದಿರ್ದಡೂ, ನಾನರಿಯೆನೆ? ನಾನರಿಯದಿರ್ದಡೂ, ನೀನರಿಯೆಯಾ? ಎಂದೆನಗೆ ಪ್ರಾಣಲಿಂಗವಾದೆ, ಅಂದೆ ಲಿಂಗಪ್ರಾಣಿ. ಇನ್ನು ಮನಸ್ಸಿನ್ನಾರದು ಹೇಳಾ? ಇದು ಕಾರಣ ದ್ವಂದ್ವಕರ್ಮ ಮುನ್ನವೇ ನಾಸ್ತಿ. ಇದನು ಶ್ರೀಗುರುಲಿಂಗ ಜಂಗಮ ಪ್ರಸಾದ ವೇದಶಾಸ್ತ್ರ ಪುರಾಣಾಗಮಂಗಳು ಈಸುವ ಬಲ್ಲುದನಾ ತೋರಲೇಕಯ್ಯ ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರಾ?

(೫). ಎನಗೆ ನೀನು ಪ್ರಾಣ. ನಿನಗೆ ನಾನು ಪ್ರಾಣ. ಇನ್ನೇನೋ? ಇನ್ನೇನೋ? ಹಂಗಿಲ್ಲ, ಹರಿ ಇಲ್ಲ. ಮತ್ತೇನೂ ಪ್ರಪಂಚಿಲ್ಲಾಗಿ, ನೀ ನಡಿಸಿದಂತೆ ನಡದೆ, ನೀ ನುಡಿಸಿದಂತೆ ನುಡಿದೆ, ನೀ ನೋಡಿಸಿದಂತೆ ನೋಡಿದೆ, ನೀ ನುಡಿಸಿದಂತೆ ಆಡಿದೆ, ನೀ ಮಾಡಿಸಿದಂತೆ ಮಾಡಿದೆ. ಈ ಸುಖದುಃಖ ಪುಣ್ಯ ಪಾಪಾತ್ಮಕ ನೀನೇ ಅಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೬). ಎನ್ನ ಗತಿ ನಿನ್ನ ಗತಿ. ಎನ್ನ ಕೇಳಿಕೆ ನಿನ್ನ ಕೇಳಿಕೆ. ಎನ್ನ ನೋಟವೇ ನಿನ್ನ ನೋಟ. ಎನ್ನಂಗ ಸ್ಪರ್ಶನವೇ ನಿನ್ನಂಗ ಸ್ಪರ್ಶನ. ಎನ್ನಂಗ ಸುಖಭೋಗವೇ ನಿನ್ನಂಗ ಸುಖಭೋಗ. ಎನ್ನೊಳಗೆ ನೀನು, ನಿನ್ನೊಳಗೆ ನಾನು. ಎನ್ನ ಪ್ರಾಣ ನೀನು, ನಿನ್ನ ಪ್ರಾಣ ನಾನಾದಕಾರಣ ಎನ್ನ ಸೋಂಕಿತೆಲ್ಲ ನಿನ್ನ ಪೂಜೆಯಯ್ಯ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

(೭). ಕಾಲೆರಡರಲ್ಲಿ ನಿನ್ನಾಟವೇ? ಕೈ ಎರಡರಲ್ಲಿ ನಿನ್ನ ಬಂಧವೇ? ಮೈಯ್ಯೊಂದರಲ್ಲಿ ನಿಮ್ಮ ಭೋಗವೇ? ಬಾಯೊಂದರಲ್ಲಿ ನಿನ್ನ ತೃಪ್ತಿಯೇ? ಐದರ ಗುಹೆಯೊಳಗೆ ಗುಹೇಶ್ವರನಾದೆ. ಮೂರರ ಗೂಡಿನೊಳಗೆ ಗುಮ್ಮಟನಾದೆ. ಆರರ ಅಂಗವ ಹರಿದು ಆಗಮ್ಯೇಶ್ವರ ಲಿಂಗವಾದೆ. ಮೀರಿ ಕಾಂಬುದೇನು ಹೇಳಿರಣ್ಣಾ.

(೮). ಎನ್ನರಿವೆ ನಿನ್ನರಿವಯ್ಯಾ. ನಿನ್ನರಿವೇ ಎನ್ನರಿವಯ್ಯಾ. ಎನ್ನ ಜೀವನವೇ ನಿನ್ನ ಜೀವನವಯ್ಯಾ. ನಿನ್ನ ಜೀವನವೇ ಎನ್ನ ಜೀವನವಯ್ಯಾ. ಎನ್ನ ಸುಖವೇ ನಿನ್ನ ಸುಖವಯ್ಯಾ. ನಿನ್ನ ಸುಖವೇ ಎನ್ನ ಸುಖವಯ್ಯಾ. ಎನಗೆ ನಿನಗೆ ಸಂದು ಸಂಶಯವಿಲ್ಲವಯ್ಯಾ. ಸಂದುಂಟೆಂದು ನುಡಿವುದೆಲ್ಲವು ಬಂಧದನುಡಿ ಕಾಣಿರೋ. ಆದಿಯಲು ಸಂದಿಲ್ಲ, ಅನಾದಿಯಲು ಸಂದಿಲ್ಲ, ಎಂದೂ ಸಂದಿಲ್ಲ ಶರಣಲಿಂಗಕ್ಕೆ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೯). ಎನ್ನ ಕಾಯೊಳಗೆ ನಿನ್ನ ಕಾಯವಿಪ್ಪುದು. ನಿನ್ನ ಕಾಯೊಳಗೆ ಎನ್ನ ಕಾಯವಿಪ್ಪುದು. ಎನ್ನ ಜೀವರೊಳಗೆ ನಿನ್ನ ಜೀವವಿಪ್ಪುದು. ನಿನ್ನ ಜೀವದೊಳಗೆ ಎನ್ನ ಜೀವವಿಪ್ಪುದು. ಎನ್ನ ಪ್ರಾಣದೊಳಗೆ ನಿನ್ನ ಪ್ರಾಣವಿಪ್ಪುದು. ನಿನ್ನ ಪ್ರಾಣದೊಳಗೆ ಎನ್ನ ಪ್ರಾಣವಿಪ್ಪುದು. ಎನ್ನ ಇಂದ್ರಿಯಂಗಳೊಳಗೆ ನಿನ್ನ ಇಂದ್ರಿಯಂಗಳಿಪ್ಪವು. ನಿನ್ನ ಇಂದ್ರಿಯಂಗಳೊಳಗೆ ಎನ್ನ ಇಂದ್ರಿಯಂಗಳಿಪ್ಪವು.

ಎನ್ನ ವಿಷಯಂಗಳೊಳಗೆ ನಿನ್ನ ವಿಷಯಂಗಳಿಪ್ಪವು. ನಿನ್ನ ವಿಷಯಂಗಳೊಳಗೆ ಎನ್ನ ವಿಷಯುಗಳಿಪ್ಪವು. ಎನ್ನ ಕರಣಂಗಳೊಳಗೆ ನಿನ್ನ ಕರಣಂಗಳಿಪ್ಪವು. ನಿನ್ನ ಕರಣಂಗಳೊಳಗೆ ಎನ್ನ ಕರಣಂಗಳಿಪ್ಪವು. ಇಂತೀ ನಾನೇ ರೂಪು ನೀನೇ ನಿರೂಪು. ರೂಪಿಂಗೆ ಕೇಡುಂಟು. ನಿರೂಪಿಂಗೆ ಕೇಡಿಲ್ಲ. ನಾನು ಕರ್ಪುರ ನೀನೇ ಜ್ಯೋತಿ. ಆನಿವ್ಮೊಳಡಗಿದೆನು ಕೂಡಲ ಚನ್ನಸಂಗಮದೇವಾ.

---

## (೧೦) ಪರಮಾತ್ಮನನ್ನು ಕಾಮಿಸು.

### (ಸತಿಪತಿಭಾವದ ವಚನಗಳು.)

(೧). ಅಯ್ಯಾ ಹಗಲು ನಾಲ್ಕು ಜಾವ ನಿಮ್ಮ ವಿಕಳದಲ್ಲಿಪ್ಪೆನು. ಇರಳು ನಾಲ್ಕು ಜಾವ ಲಿಂಗದ ವಿಕಳಾವಸ್ಥೆಯಲ್ಲಿಪ್ಪೆನು. ಹಗಲಿರಳು ನಿಮ್ಮ ಹಂಬಲದಲ್ಲಿ ಮೈಮರೆದೊರಗಿದೆನು. ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಒಲುಮೆ ಗೆಟ್ಟು ಹಸಿವು ತೃಷೆ ನಿದ್ರೆಯ ತೊರೆದೆನು ನೊಡಾ.

(೨). ಅರಸಿನವ ಮಿಂದು, ಹೊಂದುಡುಗೆಯನೆ ತೊಟ್ಟೆ. ಪುರುಷ ಬಾರಾ, ಪುಣ್ಯರತ್ನವೇ ನೀ ಬಾ. ನಿನ್ನ ಬರವೆನ್ನಸುವಿನ ಬರವಾದುದೀಗ. ಬಾರಾ. ಬಾರಾ. ಚನ್ನಮಲ್ಲಿಕಾರ್ಜುನ ಬಂದಾನೆಂದು ಬಟ್ಟೆಗಳ ನೋಡಿ ನಾ ಬಾಯಾರುತಿರ್ದೆ,

(೩). ಒಮ್ಮೆ ಕಾಮನ ಕಾಲ ಹಿಡಿವೆ. ಒಮ್ಮೆ ಚಂದ್ರಮಗೆ ಸೆರೆಗೊಡ್ಡಿ ಬೇಡುವೆ. ಸುಡು ವಿರಹವನು. ಆರಿಗೆ ಧೃತಿಗೆಡುವೆ? ಚನ್ನಮಲ್ಲಿಕಾರ್ಜುನನೆನ್ನನೊಲ್ಲದ ಕಾರಣ ಎಲ್ಲರಿಗೆ ಹಂಗಿತಿಯಾದೆನವ್ವಾ.

(೪). ಕಳವಳದ ಮನವು ತಲೆ ಕೆಳಗಾಯಿತವ್ವಾ. ಸುಳಿದು ಬೀಸುವ ಗಾಳಿ ಉರಿಯಾಯಿತವ್ವಾ. ಬೆಳದಿಂಗಳು ಬಿಸಿಲಾಯಿತವ್ವಾ ಕೆಳದಿ. ಹೊಳಲ ಸುಂಕಿಗನಂತೆ ತೊಳಲುತ್ತಿದ್ದೆನವ್ವಾ. ತಿಳುಹು ಬುದ್ಧಿಯ, ಹೇಳಿ ಕರೆತಾರೆಲೆಗವ್ವಾ, ಚನ್ನಮಲ್ಲಿಕಾರ್ಜುನಂಗೆ ಮುನಿಸವ್ವಾ.

(೫). ಅಯ್ಯಾ, ನಿಮ್ಮ ವಿಕಳದಲ್ಲಿ ನೆನವುತ್ತ ಗಾಳಿಯು ಸರವೇ ನೀವೆಂದು ಬಗೆದೆ ಕಂಡಯ್ಯಾ. ಕಪಿಲಸಿದ್ಧಮಲ್ಲಿನಾಥಯ್ಯಾ, ನಿಮ್ಮ ವಿಕಳದಲ್ಲಿ ಮಹಾ ಭ್ರಾಂತಳಾಗಿಹೆನಯ್ಯಾ

(೬). ಅಯ್ಯಾ ನೀನೇಕೆ ಬರಲೊಲ್ಲೆ, ಹೇಳಯ್ಯಾ. ನೀಬಾರದಿರಲಾನು ಕಲ್ಲು ಮರನಾಗಿಹೆನಯ್ಯಾ. ಕಪಿಲಸಿದ್ಧಮಲ್ಲಿನಾಥಯ್ಯಾ, ನೀ ಬಾರಯ್ಯಾ, ನಿಮ್ಮ ಧರ್ಮ, ಹೇಳಯ್ಯಾ.

(೭). ಬಾರೆ, ಏಕಯ್ಯಾ ನಿಮ್ಮ ಬರವ ಹಾರುತ್ತಿಹೆನು. ಸಾರೆ ಏಕಯ್ಯಾ, ನಿಮ್ಮ ಸರವ ಹಾರುತ್ತಿಹೆನು. ತೋರೆ ಏಕಯ್ಯಾ, ನಿಮ್ಮ ಲಿಂಗರೂಪನು ನಿಜಜ್ಞಾನವನು? ಪೂಜೆಗೊಳಲೊಲ್ಲದೆ ಬರಲಾಗದೆ? ಮಹಾಲಿಂಗ ಕಲ್ಲೇಶ್ವರಾ ಕರುಣವಿಲ್ಲವೆ ತಂದೆ?

(೮). ಮನವ ಮಂಚವ ಮಾಡಿ ಚಿತ್ತದಿ ಪಚ್ಚಡಿಸುವೆ, ಬಾರಯ್ಯಾ. ಎನ್ನ ಶಿವಲಿಂಗವೇ, ಬಾರಯ್ಯಾ. ಎನ್ನ ಭಕ್ತವತ್ಸಲನೇ, ಬಾರಯ್ಯಾ. ಎನ್ನ ಭಕ್ತ ದೇಹಿಕ ದೇವನೇ, ಬಾರಯ್ಯಾ. ಎನ್ನ ಅಂತರಂಗದೊಳಿರು ಬಾರಯ್ಯಾ. ಎನ್ನ ಬಹಿರಂಗದೊಳಿರು, ಬಾರಯ್ಯಾ. ಓಂ ನಮಃ ಶಿವಾಯ ಎಂದು ಕರೆವೆನು ಉಳಿಯುಮೇಶ್ವರಾ.

(೯). ದೆಸೆದೆಸೆಯಲಿ ನಿಮ್ಮನೆ ಕಾಂಬೆ. ಎದ್ದು ನೋಡೆ ನಿಮ್ಮನೆ ಕಾಂಬೆ. ನಿದ್ರೆಗೈದು, ನಿಮ್ಮನೆ ಕಾಂಬೆ. ಅಹೋರಾತ್ರಿಯಲ್ಲಿ ನಿಮ್ಮ ಧ್ಯಾನದಲ್ಲಿರಿಸು ಮಹಾಲಿಂಗಕಲ್ಲೇಶ್ವರಾ.

(೧೦). ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ, ನೀವು ಕಾಣಿರೇ? ಕೊಳನ ತಡೆಯಲಾಡುವ ಹಂಸೆಗಳಿರಾ, ನೀವು ಕಾಣಿರೆ, ನೀವು ಕಾಣಿರೇ? ಸರವೆತ್ತಿ ಪಾಡುವ ಕೋಕಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೇ? ಗಿರಿಗಹ್ವರಗಳೊಳಗಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ? ಚನ್ನಮಲ್ಲಿಕಾರ್ಜುನದೇವನೆಲ್ಲಿದ್ದಾನೆಂಬುದ ಬಲ್ಲಿರೆ, ನೀವು ಹೇಳಿರೆ.

(೧೧). ಒಲಿವ ಗಂಡನೆನ್ನ ಒಪ್ಪದಿಪ್ಪ ಕಂಡವ್ವಾ. ತಪ್ಪೆನ್ನದು, ತಪ್ಪೆನ್ನದು. ತನುಮನಧನದಲ್ಲಿ ಮಾಟಕೂಟವೆಂದರಿಯದ ತಪ್ಪೆನ್ನದು, ತಪ್ಪೆನ್ನದು. ಕಡೆ ಇಲ್ಲದ ಹುಸಿ ಎನ್ನದು ಕೂಡಲಸಂಗಮದೇವಾ.

(೧೨). ಇನೆಯುನೀನೆನಗೆ. ನಾನೊಂದರಿಯೆ. ನೀ ನುಡಿಸಲು ನುಡಿವೆ. ನೀ ನಡಿಸಲು ನಡಿವೆ. ನೀನಲ್ಲದರಿಯೆ. ಇನೆಯು ನೀ ಕೇಳಾ. ನೀನೇ ಗತಿ, ನೀನೇ ಮತಿ ನಿನ್ನಾಣೆ, ಉರಿಲಿಂಗದೇವಾ.

(೧೭). ತನು ಮನದ ಮಂಟಪದ ನಡುವಿಪ್ಪ ಗಂಡನೇ, ಮಲತ್ರಯು ದನುವನು ಕೆಡಿಸು. ಎನ್ನ ಘನಪದದಲಿ ಬಿಗಿದು ನೀನಿಪ್ಪ ಅಂಗಣವ ತೆರಹು ಮಾಡೈ ಗುರುವೇ ಯೋಗಿನಾಥ.

(೧೪). ಅಯ್ಯಾ, ನಾ ಸಂತೈಸಲಾರೆನಯ್ಯಾ. ಆಹಾ ಅಯ್ಯಾ, ನಿನ್ನ ಕೂಟದ ಸವಿಗಲೆಗಳ ನೆನನೆನದು, ಬೇಯುದ ಬೇಗೆಯುಲಿ ಬೆಂದೆ, ನೋಡಯ್ಯ. ಅಯ್ಯಾ, ಎನಗಂತಿಂತೆಂದು ಹೇಳಲಳವಲ್ಲ. ಮರೆಯುದ ಕಿಚ್ಚನಿಕ್ಕಿ, ಮರೆಗೆ ಹೋದೆಯಲ್ಲ, ಎನ್ನ ಕಪಿಲಸಿದ್ಧಮಲ್ಲಿನಾಥಯ್ಯ.

(೧೫). ಕಿಚ್ಚಿಲ್ಲದ ಬೇಗೆಯುಲಿ ಬೆಂದೆನವ್ವಾ. ಏರಿಲ್ಲದ ಗಾಯುದಲ್ಲಿ ನೊಂದೆನವ್ವಾ. ಸುಖವಿಲ್ಲದ ಧಾವತಿಗೊಂಡೆನವ್ವಾ. ಚನ್ನಮಲ್ಲಿಕಾರ್ಜುನದೇವಂಗೊಲಿದು ಬಾರದ ಭವಂಗಳಲಿ ಬಂದೆನವ್ವಾ.

# ಮಹೇಶ್ವರಸ್ಥಲ.

## ನಿಷ್ಠೆಯುಳ್ಳವನಾಗಿರು.

(೧). ನೈಷ್ಠೆ ನೆಲೆಗೊಳ್ಳಬೇಕು, ಗುರುಭಕ್ತಿ ಮಾಡುವಲ್ಲಿ. ನೈಷ್ಠೆ ನೆಲೆಗೊಳ್ಳಬೇಕು, ಲಿಂಗಪೂಜೆಯ ಮಾಡುವಲ್ಲಿ. ನೈಷ್ಠೆ ನೆಲೆಗೊಳ್ಳಬೇಕು, ಜಂಗಮವನರ್ಚಿಸುವಲ್ಲಿ. ನೈಷ್ಠೆ ನೆಲೆಗೊಳ್ಳಬೇಕು, ಪಾದೋದಕ ಪ್ರಸಾದವ ಕೊಂಬುವಲ್ಲಿ. ನೈಷ್ಠೆ ನೆಲೆಗೊಳ್ಳಬೇಕು, ನಮ್ಮ ಅಖಂಡೇಶ್ವರನ ಒಲಿಸುವಲ್ಲಿ.

(೨). ನೈಷ್ಠಿಕ ಭಾವ ನಂಬುಗೆ ಇಲ್ಲದ ಬಳಿಕ, ಎಷ್ಟು ಓದಿದರೇನು? ಎಷ್ಟು ಕೇಳಿದರೇನು? ಎಷ್ಟು ಜಪವ ಮಾಡಿದರೇನು? ಅದು ನಿಷ್ಫಲವಲ್ಲದೆ, ದೃಷ್ಟಕ್ಕೆ ಸಂಧಾನವಲ್ಲ ನೋಡಾ. ಇದುಕಾರಣ, ನಿಷ್ಠೆ ಬಲಿದು, ಭಾವ ತುಂಬಿ, ನಂಬುಗೆಯು ಇಂಬುಗೊಂಡು, ಮಾಡುವ ದೇವರ ಪೂಜೆ, ಅದೇ ನಮ್ಮ ಅಖಂಡೇಶ್ವರಲಿಂಗದ ಒಲುಮೆ.

(೩). ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿರ್ದಡೇನು? ಅದು ಪಟ್ಟಣ ವೆಂದೆನ್ನಿಸುವದು. ನಿಷ್ಠೆ ಇಲ್ಲದ ಭಕ್ತ ಪಟ್ಟಣದಲ್ಲಿದ್ದರೂ, ಅದು ನಟ್ಟಡವಿ ಕಾಣಾ ರಾಮನಾಥಾ.

(೪). ಛಲವಿರಬೇಕು ಭಕ್ತಿಯ ಮಾಡುವಲ್ಲಿ, ಹಿಡಿದು ಬಿಡೆನೆಂಬ ಛಲವಿರಬೇಕು. ನಿತ್ಯನೇಮದಲ್ಲಿ ಹಿಡಿದು ಬಿಡೆನೆಂಬ ಛಲವಿರಬೇಕು, ನಮ್ಮ ಅಖಂಡೇಶ್ವರಲಿಂಗವ ಕೂಡಿ ಅಗಲಬಾರದೆಂಬ ನೈಷ್ಠೆಯಲ್ಲಿ.

(೫). ಒಲಿದು ಒಲಿಸಿಕೊಳ್ಳಬೇಕು. ಒಲಿದಲ್ಲದೆ ಇಲ್ಲ. ಹಲವು ಕೊಂಬೆಗೆ ಹಾರದಿರು, ಮರುಳೇ. ಅಟ್ಟಿ ನೋಡುವ, ಮುಟ್ಟಿ ನೋಡುವ, ತಟ್ಟಿ ನೋಡುವ, ಒತ್ತಿನೋಡುವ. ಅಟ್ಟಿದಡೆ, ಮುಟ್ಟಿದಡೆ, ತಟ್ಟಿದಡೆ, ಒತ್ತಿದಡೆ, ನಿಷ್ಠೆಯ ಬಿಡದಿರ್ದಡೆ, ತನ್ನ ನೀವ ಮಹಾಲಿಂಗ ಕಲ್ಲೇಶ್ವರಾ.

(೬). ಮುನ್ನೂರರುವತ್ತು ದಿನ ಶ್ರಮವ ಮಾಡಿ ಕಳನನೇರಿ ಕೈಮರೆ ದಂತೆ ಎನ್ನ ಭಕ್ತಿ. ಎನಿಸುಕಾಲ ಲಿಂಗಾರ್ಚನೆಯ ಮಾಡುವೆನಯ್ಯ ಮನದಲ್ಲಿ

ದೃಢವಿಲ್ಲದನ್ನಕ್ಕರ? ಕೊಡನ ತುಂಬಿದ ಹಾಲ ಕೆಡಹಿ ಉಡುಗಲೆನ್ನಳವೇ ಕೂಡಲಸಂಗಮದೇವಾ?

(೭). ಛಲವ ನೆತ್ತಿಕೊಂಡ ಬಳಿಕ ಬಲುಹ ಸಲಿಸಲೇ ಬೇಕು. ತನ್ನ ಮನವ ತಾನರಿದು ಗೆಲಲೇ ಬೇಕು. ದೇವರೊಲವುಳ್ಳವರ ಕಂಡು ತಾನಾದೆ ನೆಂದಡೆ ಛಲ ಸಲ್ಲದು ಕಂಡೆಯ್ಯಾ. ನೇಮವೆಂದಡೆ ಕಡೆಮುಟ್ಟಸಲೀಯೆ. ತಪ್ಪ ಹಿಡಿವೆ ನೀನು. ಇದುಕಾರಣ ನಾನೇನು ಪೆರತೊಂದನರಿಯದಂತಿರಿಸೆನ್ನ ಸಕಳೇ ಶ್ವರದೇವಾ.

(೮). ಕಡೆಗೆ ಮಾಡದ ಭಕ್ತಿ, ದೃಢವಿಲ್ಲದಾಳುತನ, ಮೃಡನೊಲಿಯ ಹೇಳಿದರೆ ಎಂತೊಲಿವನಯ್ಯಾ? ಮಾಡಲಾಗದು. ಅಳಿಮನವ ಮಾಡಿದಡೆ ಮನ ದೊಡೆಯ ಬಲ್ಲನೈಸೆ. ವಿರಳವಿಲ್ಲದೆ ಮಣಿಯ ಪೋಣಿಸಿಹೆನೆಂದಡೆ ದುರುಳ ಚನ್ನಮಲ್ಲಿಕಾರ್ಜುನಯ್ಯನೆಂತೊಲಿವನಯ್ಯಾ?

(೯). ಮಾರುತನಂತೆ ಮನ, ಮರಾಳನಂತೆ ಬುದ್ಧಿ, ಸಂಚರಿಸದ ಅಂಬು ಧಿಯಂತೆ ಅಂಗ, ಮೊಳೆದೊರದ ವೃಕ್ಷದಂತೆ ಸಲೆ ಸಂದಿಹ ಜ್ಞಾನ, ಬಲುಗಯ್ಯನ ತೋಟಿಯ ತೊಡಕಿನಂತೆ ಇಂದ್ರಿಯ ವರ್ಗಾದಿಗಳ ಗೆಲುವು, ಆತನೇ ಆತುರ ವೈರಿ ಮಾರೇಶ್ವರಾ.

(೧೦). ಕಟ್ಟಿಬಿಡುವನೇ ಶರಣನು? ಬಿಟ್ಟು ಹಿಡಿವನೇ ಶರಣನು? ನಡೆದು ತಪ್ಪುವನೇ ಶರಣನು? ನುಡಿದು ಹುಸಿವನೇ ಶರಣನು? ಭಕ್ತಿಯ ಬಿಡು ವನೇ ಶರಣನು? ಸಹಜ ಸಜ್ಜನಿಕೆ ತಪ್ಪಿದರೆ, ಕೂಡಲಸಂಗಯ್ಯ ಹಲ್ಲುದೋರಿ ಮೂಗ ಕೊಯ್ಯುವಾ.

(೧೧). ಅದಂತೆ ಆಗಲಿ, ಮಾದಂತೆ ಮಾಣಲಿ, ಎನಲಾಗದು. ನೇಮ ದಾತಂಗೆ ಛಲಬೇಕು, ಛಲಬೇಕಯ್ಯಾ. ಹಿಡಿದುದ ಬಿಡಲಾಗದು. ಹುಲಿಗೆರಿಯ ವರದ ಸೋಮನಾಥನ ಮನಮುಟ್ಟಿದ ಧೀರನು ಏತಕ್ಕೂ ಸೋಲುವನಲ್ಲ.

(೧೨). ಹಲ್ಲು ಹತ್ತಿ ನಾಲಿಗೆ ಹೊರಳದಿದ್ದಲ್ಲಿ ಮನವೆರಡಾದರೆ, ಆಣೆ, ನಿಮ್ಮಾಣೆ. ಮಾಡುವ ನೇಮಕ್ಕೆ ಛಲವಿಲ್ಲದಿರ್ದಡೆ, ಆಣೆ ನಿಮ್ಮಾಣೆ. ಕೂಡ ಲಸಂಗಮದೇವಾ, ಎನ್ನ ಮನವ ನೋಡಲೆಂದಟ್ಟಿದ ಪ್ರಸಾದವನಲ್ಲದೆ ಕೊಂಡೆ ನಾದರೆ, ಆಣೆ ನಿಮ್ಮಾಣೆ.

(೧೩). ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ. ಛಲಬೇಕು ಶರಣಂಗೆ ಪರಸತಿಯನೊಲ್ಲೆನೆಂಬ. ಛಲಬೇಕು ಶರಣಂಗೆ ಪರದೈವವನೊಲ್ಲೆನೆಂಬ. ಛಲಬೇಕು ಶರಣಂಗೆ ಪರವಾದಿನಿಗ್ರಹದಲ್ಲಿ. ಛಲಬೇಕು ಶರಣಂಗೆ ಪ್ರಸಾದವಿರಬೇಕೆಂಬ. ಛಲವಿಲ್ಲದಿದ್ದರೆ, ಮೆಚ್ಚನು ನಮ್ಮ ಕೂಡಲಸಂಗಮ ದೇವಯ್ಯ.

(೧೪). ಸತಿ ಸುತ ಮಾತಾ ಪಿತರಿಗೆಂದು ಹಡದಡೆ, ನಿಮ್ಮಾಣೆ ಕಂಡಯ್ಯ. ಮಾನವರ ಸೇವೆ ಮಾಡಿದಡೆ, ನಿಮ್ಮಾಣೆ, ಕಂಡಯ್ಯ. ನೀವಲ್ಲದನ್ಯಕ್ಕೆರಗಿದಡೆ ನಿಮ್ಮಾಣೆ ಕಂಡಯ್ಯ. ಎನ್ನ ಸತಿಯಲ್ಲದನ್ಯ ಸತಿಗಳು ಪಿದಡೆ, ನಿಮ್ಮಾಣೆ ಕಂಡಯ್ಯ. ತನು ಮನು ವಂಚನೆಯಾದಡೆ ನಾಚಯ್ಯ ಪ್ರಿಯಮಲ್ಲಿನಾಥಯ್ಯ, ನಿಮ್ಮಾಣೆ ಕಂಡಯ್ಯ.

(೧೫). ಉಬ್ಬಿನ ನುಡಿಯು ಹಬ್ಬದ ಭೋಜನವಲ್ಲ. ಲಿಂಗದ ಮಾರ್ಗ ಸಿಂಹದ ಹಾರಿಕೆ. ಲಿಂಗದ ಮಾರ್ಗ ಶರಭನ ಶಕ್ತಿ. ಕಲಿದೇವರ ಶರಣ ಅಂಜುವನಲ್ಲ, ಅಳಕುವನಲ್ಲ ಕೇಳಾ.

(೧೬). ಹರಿವ ಹಾವಿಂಗೆ ಹಾಲ ಕೊಟ್ಟು, ಉರಿವ ಕಿಚ್ಚಿಂಗೆ ಕಯ್ಯನಿಕ್ಕಿ, ಅರಿವಾಯುಧಕ್ಕೆ ಕೊರಳ ಕೊಟ್ಟು, ಮತ್ತೆಂತೋ ಅರಿವು ಹಿರಿಯರಾದಿರಿ? ಮುಂದಕ್ಕಾತನನರಿಯಬಲ್ಲಡೆ, ಹರಿವ ಚಿತ್ತವ ನಿಲಿಸಿ, ಕುದಿವ ಆಸೆಯ ಕೆಡಿಸಿ, ಸರ್ವ ವ್ಯಾಪಾರವೆಂಬ ಗೊತ್ತಿಗೆ ಚಿತ್ತವನಿಕ್ಕದೆ, ನಿಶ್ಚಯವಾಗಿ ನಿಂದುದು, ಆತನಿರವು ಸದಾಶಿವಮೂರ್ತಿಲಿಂಗವು ತಾನೆ.

(೧೭) ಆವ ಆಚರಣೆಯ ತೊಟ್ಟಲ್ಲಿ, ಅನುಸರಣೆ ಇಲ್ಲದಿರ್ಪುದೇ ಗುರುಚರಲಿಂಗಪೂಜೆ. ಕಾಯಕಕ್ಕೆ ಇಂದಿಂಗೆ ನಾಳಿಂಗೆಂಬ ಸಂದೇಹವಿಲ್ಲದಲ್ಲಿಯೇ ಸರ್ವಶೀಲ. ತಾಗು ನಿರೋಧ ಬಂದಲ್ಲಿ, ಕಂದದೆ ಕುಂದದೆ ಎಂದಿನಂತಿಪ್ಪುದೇ ಶಿವಲಿಂಗಪೂಜೆ. ಇದಕ್ಕೆ ಹಿಂದು ಮುಂದು ವಿಚಾರಿಸಲಿಲ್ಲ, ಇದಕ್ಕೆ ಐಘಂಟೇಶ್ವರಲಿಂಗ ಸಾಕ್ಷಿಯಾಗಿ.

(೧೮). ವಜ್ರದ ಘಟ ಸೂಜಿಯಲ್ಲಿ ರಂಧ್ರಿಸಿಕೊಂಬುವದೇ? ಭದ್ರಗಜ ಅಜಕುಲದಲ್ಲಿ ಗರ್ಜಿಸಿಕೊಂಬುವದೇ? ನಿರ್ಧರದ ಘಟ ಜೀವಗಳ್ಳನಲ್ಲಿ ಅದ್ದಲಿಸಿಕೊಂಬುವನೇ? ಇಂತೀ ನಿರ್ಧರವ ತಿಳಿದಲ್ಲಿ, ಸಕಲ ವಿಷಯರೋಗ

ರುಜಿಗಳಲ್ಲಿ, ಮಿಕ್ಕಾದ ತಾಪತ್ರಯಂಗಳಲ್ಲಿ ಲಿಂಗಾಂಗಿ ಒಡಲುಗೊಡುವನೇ? ಇಂತಿವ ಕಂಡು, ಮುಂಗೈಯ್ಯಾಭರಣಕ್ಕೆ ಮುಕುರದ ಹಂಗೇಕೆ? ತಾ ಕಂಡು ಕೇಳಿ, ಇನ್ನಾರ ಕೇಳಲೇತಕ್ಕೆ? ಇಂತಿದನರಿದು ಬಸವಣ್ಣ ಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲರಾಜೇಶ್ವರ ಲಿಂಗವು ಘುಟ್ಟುಗೆಟ್ಟ.

---

## ಎಂಥ ಕಷ್ಟಗಳು ಬಂದರೂ, ನಿನ್ನ ಕರ್ತವ್ಯಗಳನ್ನು ಬಿಡಬೇಡ.

(೧). ಭಕ್ತನಾಗಿ, ತನ್ನ ಹಿಡಿದೆನೆಂದು ಹೋದರೆ, ನುಗ್ಗು ಮಾಡುವ, ನುಸಿಯು ಮಾಡುವ. ಮಣ್ಣು ಮಾಡುವ, ನುಸಿಯು ಮಾಡುವ. ಕೂಡಲಸಂಗದೇವರ ನೆರೆನಂಬಿದನಾದರೆ, ಕಡೆಗೆ ತನ್ನಂತೆ ಮಾಡುವನು.

(೨). ಅರೆವನಯ್ಯಾ ಸಣ್ಣವಾಹನ್ನಕ್ಕ. ಒರೆವನಯ್ಯಾ ಬಣ್ಣಗಾಂಬನ್ನಕ್ಕ. ಅರೆದರೆ ಸಣ್ಣಗಾಗಿ, ಒರೆದರೆ ಬಣ್ಣ ಬಂದರೆ, ಕೂಡಲಸಂಗಮದೇವ ನೊಲಿದು ಸಲಹುವ.

(೩). ದೇವನೊಳ್ಳಿದನೆಂದು ಮುಯ್ಯೆನಲುಬೇಡ. ಕರಕಟಕಾಡಿಹ ನೊಳ್ಳಿದನೇ? ಅಳಿಸುವ ನಗಿಸುವನೊಳ್ಳಿದನೇ? ಬೆಚ್ಚದೆ ಬೆದರದೆ, ತೊತ್ತುಗೆಲಸವ ಮಾಡಲು, ತನ್ನ ನೊಚ್ಚತ ತಾನೀವ ಕೂಡಲಸಂಗಮದೇವಾ.

(೪). ಹಾವಸಿಗಲ್ಲ ಮೆಟ್ಟಿ, ಹರಿದು ಗೊತ್ತು ಮುಟ್ಟಬಾರದಯ್ಯಾ. ನುಡಿದಂತೆ ನಡೆಯಲು ಬಾರದಯ್ಯಾ. ಕೂಡಲಸಂಗನ ಶರಣರ ಭಕ್ತಿ ಬಾಳಬಾಯಿ ಧಾರೆ.

(೫). ಭಕ್ತಿ ಎಂಬುದ ಮಾಡಬಾರದು. ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು. ಘಟಸರ್ಪನಲ್ಲಿ ಕೈದುಡುಕಿದರೆ, ಹಿಡಿವುದು ಮಾಬುದೇ ಕೂಡಲಸಂಗಮದೇವಾ?

(೬). ಮಾತಿನ ಮಾಲೆಯುಲ್ಲಪ್ಪುದೇ ಭಕ್ತಿ? ಮಾಡಿ ಸವೆಯದನ್ನಕ್ಕರ, ಮನಸವಿಯುದನ್ನಕ್ಕರ, ಧನಸವಿಯುದನ್ನಕ್ಕರ, ಅಪ್ಪುದೇ ಭಕ್ತಿ? ಕೂಡಲಸಂಗಮದೇವನೊಲಿದರೆ, ಸರಸವಾಡುವನು. ಸೈರಿಸದನ್ನಕ್ಕ ಅಪ್ಪುದೇ ಭಕ್ತಿ?

(೭). ಮನದೊಡೆಯ ಮನವನೋಡಿಹನೆಂದು, ನಾಲ್ಕುದೆಸೆಯಲ್ಲಿ ಭಯುವನೊಡ್ಡಿದರೆ ಹೆದರಿ ಹಿಮ್ಮೆಟ್ಟದಿರು. ಮನವೇ ಕಳವಳಗೊಳ್ಳದೆ, ಸಂಚಲವನಳಿದು, ಅತಿ ಕಲವಂತನಾದೆಯಾದೊಡೆ, ಅಘಹರ ಅಖಂಡೇಶ್ವರನು ನಸುನಗುತ ಬಂದು ಎತ್ತಿಕೊಂಡು ಮುದ್ದಾಡಿ, ತನ್ನೊಳಗಿಂಬಿಟ್ಟುಕೊಂಬನು, ಕೇಳಾ ಎಲೆ ಮನವೇ.

(೮). ಕಿಡಿ ಕಿಡಿಕೆದರಿದರೆ, ಎನಗೆ ಹಸಿವು ತೃಷೆ ಅಡಗಿತೆಂಬೆನು. ಮುಗಿಲು ಹರಿದು ಬಿದ್ದರೆ, ಎನಗೆ ಮಜ್ಜನಕ್ಕೆರೆದೆರೆಂಬೆನು. ಗಿರಿಮೇಲೆ ಬಿದ್ದರೆ, ಎನಗೆ ಪುಷ್ಪವೆಂಬೆನು. ಚನ್ನಮಲ್ಲಿಕಾರ್ಜುನಯ್ಯ, ಶಿರಹರಿದು ಬಿದ್ದಡೆ, ಪ್ರಾಣ ನಿಮಗರ್ಪಿತವೆಂಬೆನು.

(೯). ಆರು ಇಲ್ಲದವಳೆಂದು ಅಳಿಗೊಳಲು ಬೇಡ ಕಂಡಯ್ಯ. ಏನು ಮಾಡಿದಡೂ, ನಾನಂಜುವಳಲ್ಲ. ತರಗೆಲೆಯ ಮೆಲ್ಲಿದ್ದು ನಾನಿಹೆನು. ಸುರಿಗಿಯ ಮೇಲೊರಗಿ ನಾನಿಹೆನು. ಚನ್ನಮಲ್ಲಿಕಾರ್ಜುನಯ್ಯ ಕರಕೆಡೆ ನೋಡಿದಡೆ ಒಡಲನು ಪ್ರಾಣವನು ನಿಮಗೊಪ್ಪಿಸಿ ಶುದ್ಧಳಹೆನು.

(೧೦). ಹುಟ್ಟಿದ ಯೋನಿಯಲ್ಲಿ ಹುಟ್ಟಿಸಿ, ಬಾರದ ಭವಂಗಳಲ್ಲಿ ಬರಿಸಿ, ಉಣ್ಣದ ಊಟವನುಣಿಸಿ, ವಿಧಿಗೊಳಗಾಗಿಸುವ ಕೇಳಿರಣ್ಣಾ. ತನ್ನವರೆಂದರೆ, ಮನ್ನಿಸುವನೇ ಶಿವನು? ಹತ್ತಿರಿರ್ದ ಭೃಂಗಿಯ ಚರ್ಮವ ಕಿತ್ತೀಡಾಡಿಸಿದನು. ಮತ್ತೆ ಕೆಲಂಬರ ಬಲ್ಲನೇ? ಇದನರಿತು ಬಿಡದಿರು. ಚನ್ನಮಲ್ಲಿಕಾರ್ಜುನನಿಂತಹ ಸಿತಗನವ್ವಾ.

(೧೧). ಹರತನ್ನ ಭಕ್ತರ ತಿರಿವಂತೆ ಮಾಡುವ. ಒರೆದು ನೋಡುವ, ಸುವರ್ಣದ ಚಿನ್ನದಂತೆ. ಅರೆದು ನೋಡುವ ಚಂದನದಂತೆ. ಅರಿದು ನೋಡುವ ಕಬ್ಬಿನ ಕೋಲಿನಂತೆ. ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಗೊಂಬ ನಮ್ಮ ರಾಮನಾಥನು.

(೧೨). ನಿಧಾನವ ನೆಗೆವೆನೆಂದು ಹೋದರೆ, ವಿಘ್ನಬಪ್ಪುದು ಮಾಬುದೇ ಅಯ್ಯ? ಸದಾಶಿವನ ಪೂಜಿಸುವೆನೆಂದು ಹೋದಡೆ, ತರುಬಿ ಹಿಡಿವವಯ್ಯ ಸಕಲ ವಿಪತ್ತುಗಳು. ಎದೆ ಭಂಗವಿಲ್ಲದೆ ನಿಲಬಲ್ಲಡೆ, ಸದಮಲಸುಖವ ನೀವ, ನಮ್ಮ ಕೂಡಲ ಚನ್ನಸಂಗಮದೇವರು.

(೧೩). ರುಜೆರೋಗಂಗಳು ಲಿಂಗದೇಹಿಗಳೆಂಬವರ ಸೋಂಕಿದಲ್ಲಿ, ಅಂಗದಿಚ್ಛೆಯನರಿದು ನರಳಿದಲ್ಲಿ, ಲಿಂಗದ ಚಿತ್ತವೆತ್ತ ಹೋಯಿತ್ತು? ಪಂಚಾಕ್ಷರಿ ಪ್ರಣವ ನಷ್ಟವಾಯಿತ್ತು. ಅರ್ಚನೆ ಪೂಜೆ ಕೆಟ್ಟಿತ್ತು. ಕೃತಕದ ನೇಮ ನಷ್ಟ ವಾಯಿತ್ತು. ಇಂತಿವರ ಲಿಂಗದೇಹಿಗಳೆಂದರೆ ಲಿಂಗ ಸಂಗಿಗಳೊಪ್ಪುವರೇ? ಈ ಗುಣ ಸಂಗನಬಸವಣ್ಣಂಗೆ ದೂರ. ಬಸವಣ್ಣ ಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾವಿಮಲರಾಜೇಶ್ವರ ಲಿಂಗಕ್ಕೆ ದೂರ.

(೧೪). ಒಣಗಿಸಿ ಎನ್ನ ಘಣಘಣಲೆಯ ಮಾಡಿದಡೆಯೂ, ಹರಣ ವುಳ್ಳನ್ನಕ್ಕ ನಿಮ್ಮ ಚರಣವ ನೆನೆವುದ ಮಾಣೆ, ಮಾಣೆ, ಶರಣೆಂಬುದ ಮಾಣೆ, ಮಾಣೆ. ಕೂಡಲ ಸಂಗಮದೇವಯ್ಯ, ಎನ್ನ ಹೆಣದ ಮೇಲೆ ಕಂಚಿಟ್ಟುಂಡೊ ಡೆಯೂ, ಮಾಣೆ, ಮಾಣೆ.

(೧೫). ಅರ್ಥವನರ್ಥವ ಮಾಡಿ, ಕೋಳಾಹಳಂಗೈವುತ್ತಿರಲಿ. ಹುಟ್ಟಿದ ಮಕ್ಕಳ ನವಖಂಡವಮಾಡಿ ಕಡಿವುತ್ತಿರಲಿ. ಮುಟ್ಟಿದ ಸ್ತ್ರೀಯ ಕಣ್ಣ ಮುಂದೆ ಅಭಿಮಾನಂಗೊಂಡು ನೆರೆವುತ್ತಿರಲಿ. ಇಂತಿವೆಲ್ಲವು ಹೊರಗಣವು. ಇನ್ನೆನ್ನ ಅಂಗದ ಮೇಲೆ ಬರಲಿ. ಇಕ್ಕುವ ಶೂಲ ಪ್ರಾಪ್ತಿಯಾಗಲಿ. ಹಿಡಿಖಂಡವ ಮಾಡಿ ಕಡಿವುತ್ತಿರಲಿ. ಮತ್ತೆಯೂ ಲಿಂಗಾರಾಧನೆಯ ಮಾಡುವೆ, ಜಂಗಮಾ ರಾಧನೆಯ ಮಾಡುವೆ, ಪ್ರಸಾದಕ್ಕೆ ತಪ್ಪೆ. ಇಂತಪ್ಪ ಭಾಷೆಕಿಂಚಿತ್ತು ಹುಸಿಯಾ ದಡೆ, ನೀನಂದೇ ಮೂಗ ಕೊಯ್ಯಿ ಕೂಡಲಸಂಗಮದೇವಾ.

(೧೬). ಸರ್ವಸಂಗಪರಿತ್ಯಾಗಿ ಎಂದಡೆ ಭೋಗಕ್ಕೆರಗಿಸುವೆ. ಪಾಕ ನೇಮಿ ಎಂದಡೆ, ಷಡ್ರಸಾನ್ನಕ್ಕೆರಗಿಸುವೆ. ಮೌನವೃತ್ತಿ ಎಂದಡೆ ಸನ್ನೆಯಲ್ಲಿ ಬೇಡಿಸುವೆ. ಬ್ರಹ್ಮಚಾರಿ ಎಂದಡೆ, ಅಂಗನೆಯರಿಗೆರಗಿಸುವೆ. ಸಕಳೇಶ್ವರ ದೇವಾ ಎನ್ನ ಅಳಿವಾಡಿ ಕಾಡುವೆ.

(೧೭). ಕಂಟಕಬಂದಲ್ಲಿ ಸಂತೈಸಿಕೊಂಡು, ಆತ್ಮವ ಸಂಚಲಿಸದೆ, ನಿಷ್ಠೆಯಿಂದ ದೃಷ್ಟವ ಕಾಂಬುದು, ಶ್ರದ್ಧೆ ಸದ್ಭಕ್ತನ ಇರವು. ವೃಥಾಳಾಪನ ದಿಂದ ನಿಂದೆ ದುರ್ಜನ ಬಂದಲ್ಲಿ ಅಂಗವ ಬಂಧಿಸದೆ ನಿಜಾತ್ಮನ ಸಂದೇಹಕ್ಕಿಕ್ಕದೆ, ಸಂದು ಸಂಶಯವಿಲ್ಲದೆ ಪರಮಾನಂದನಾಗಿ ಬಂಧಮೋಕ್ಷಂಗಳ ಹರಿದಿಪ್ಪುದು ಸರ್ವಾಂಗಲಿಂಗಿಯ ಇರವು. ಅದು ಕರಿಗೊಂಡು ಎಡೆದೆರಹಿಲ್ಲದೆ ಪರಿಪೂರ್ಣ

ವಾಗಿಪ್ಪುದು ಪರಮ ವಿರಕ್ತನ ಪರಿ, ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗದೊಳಗಾದವನ ಇರವು.

(೧೮). ಜಗದಗಲ ಕಲ್ಲು ನೆಲಕ್ಕೆ ಬಿದ್ದರೆ, ಕೆಲಕ್ಕೆ ಸಾರುವದೆಂತು? ನಗುತ್ತಲು ತಲ್ಲಣಿಸದೆ ಶಿವಶರಣೆನುತ್ತಿಹುದು. ನಗುತ್ತಲು ತಲ್ಲಣಿಸದೆ ಹರಶರಣೆನುತ್ತಿಹುದು. ಸಕಳೇಶ್ವರದೇವ ವಿಮುಖನಾದಡೆ ನೆನಹೆಂಬಲಗಿನಿಂದ ಕೈಮಾಡುತ್ತಿಹುದು.

---

## ನಿನ್ನ ಕರ್ತವ್ಯಗಳಲ್ಲಿ ಧೈರ್ಯವುಳ್ಳವನಾಗಿರು.

(೧). ಎನಿಸೆನಿಸೆಂದಡೆಯೂ ನಾಧೃತಿಗೆಡೆನಯ್ಯಾ. ಎಲುದೋರಿದಡೆಯೂ, ನರಹರಿದಡೆಯೂ, ಕರುಳು ಕುಪ್ಪಳಿಸಿದಡೆಯೂ, ನಾಧೃತಿಗೆಡೆನಯ್ಯಾ. ಸಿರಹರಿದು, ಅಟ್ಟೆ ನೆಲಕ್ಕೆ ಬಿದ್ದಡೆಯೂ, ನಾಲಿಗೆ ' ಸಂಗ ಶರಣು ' ಎನುತಿಪ್ಪುದಯ್ಯಾ.

(೨). ಮುನ್ನಿನ ಕಲಿವೀರರು ಕಾದಿದ ರಣಗಳನು ಪರಿ ಪರಿ ಬಣ್ಣಿಸಿ ಹೇಳಬಹುದಲ್ಲದೆ, ಆ ದಳವಿದಿರಾದಲ್ಲಿ ಬಿರಿದುಚ್ಚರಿಸಿ ಕಾದಿ ತೋರಲುಬಾರದು. ಮುನ್ನಿನ ಪುರುಷವ್ರತಿಯರು ಒಲಿಸಿದ ಆಯುತವ ಪರಿಪರಿಯಲಿ ಬಣ್ಣಿಸಿ ಹೇಳಬಹುದಲ್ಲದೆ, ಪುರುಷ ನಿರ್ವಾಣಕ್ಕುರಿವಗ್ನಿಯ ಹೊಕ್ಕು ತೋರಲುಬಾರದು. ಮುನ್ನಿನ ಪುರಾತನರೆಲ್ಲರು, ತನುಮನ ಧನವ ನಿತ್ತು ಮಾಡಿ ನೀಡಿ ಲಿಂಗವ ಕೂಡಿದ ಪರಿಗಳನು ಅನುಭಾವದಲರ್ಥೈಸಿ ಹೇಳಬಹುದಲ್ಲದೆ, ಮಾಡಿ ನೀಡಿ ತೋರಲುಬಾರದು. ಇಂತೀ ಅರಿವು ಬಿರಿದಿನ ಬಂಟರು ಪುರುಷವ್ರತಿಗಳು ಪುರಾತನರ ಬರಿಯ ಮಾತನಾಡಿ ಹೊರಗೆ ಮೆರೆವರಲ್ಲ. ಪರೀಕ್ಷೆಯುಂಟಾಗಿದ್ದರೆ, ಒಳಗಣವರ ಹೆಸರು ವಿಡಿದು ಪರಿಪರಿಯಲ್ಲಿ ಹೋಗಳುವರು. ಶರೀರಾರ್ಥಪ್ರಾಣವ ಗುರುಲಿಂಗ ಜಂಗಮಕ್ಕೆ ಪರೀಕ್ಷೆಯುಂಟಾಗಿಯೇ, ಆತಮಹೇಶ್ವರ ಪುರಾತನರ ವಳಿ ಎಂಬೆ. ಪರಮ ಬಂಧುಗಳು ಆತನ ನೆನೆದು ಬದುಕುವ್ವುದು. ಇಂತೀ ಅನುಭಾವದ ಓದಿನ ಅಕ್ಷರಾಭ್ಯಾಸವ ಸಾಧಿಸಿ, ತರ್ಕಿಸಿ ನಿಂದಿಸಲಾಗದು. ಕೂಡಲಸಂಗನಶರಣರಿಗಲ್ಲದೆ ಅನುಭಾವವಿಲ್ಲ.

( ೩ ). ಅಂಕ ಕಂಡ ಕೋಲಾಸೆ ಮತ್ತೇಕಯ್ಯ? ಲೆಂಕ ಕಂಡ ಪ್ರಾಣದಾಸೆ ಮತ್ತೇಕಯ್ಯ? ಭಕ್ತಿಯ ಕಂಡಾತಗೆ ತನುಮನಧನದಾಸೆ ಮತ್ತೇಕೆ? ನಿಮ್ಮಂಕೆಗೆ ಝುಂಕೆಗೆ ಶಂಕಿಸಿದೆನಾದಡೆ ಎನ್ನ ಲೆಂಕತನಕ್ಕೆ ಹಾನಿ ಕೂಡಲಸಂಗಮದೇವಾ.

( ೪ ). ಅಟ್ಟಿಟ್ಟಿಕೆಯ ಮಾತನಾಡಲದೇಕೊ? ಮುಟ್ಟಿ ಬಂದುದಕ್ಕಂಜಲದೇಕೊ? ಕಾದಿದಲ್ಲದೆ ಮಾಣೆನು. ಓಡಿದರೆ ಭಂಗಹಿಂಗದಯ್ಯ. ಕೂಡಲಸಂಗಮದೇವಾ, ಎನ್ನ ಭಂಗ ನಿಮ್ಮದಾಗಿ.

( ೫ ). ನೀನಿರಿಸಿದ ಮನದಲ್ಲಿ ನಾನಂಜೆನಯ್ಯ, ಮನವು ಮಹಾಘನಕ್ಕೆ ಶರಣುವೊಕ್ಕುದಾಗಿ. ನೀನಿರಿಸಿದ ಧನದಲ್ಲಿ ನಾನಂಜೆನಯ್ಯ, ಧನವು ಸತಿಸುತ ಮಾತಾಪಿತರಿಗೆ ಹೋಗದಾಗಿ. ನೀನಿರಿಸಿದ ತನುವಿನಲ್ಲಿ ನಾನಂಜೆನಯ್ಯ, ತನು ಸರ್ವಾರ್ಪಿತವಾದಲ್ಲಿ, ನಿಯತ ಪ್ರಸಾದಭೋಗೋಪಭೋಗಿಯಾಗಿ. ಇದು ಕಾರಣ, ವೀರ ಧೀರ ಸಮಗ್ರನಾಗಿ, ನಿಮಗಾನಂಜೆನಯ್ಯ, ಕೂಡಲಸಂಗಮದೇವಾ.

( ೬ ). ಕಾಯದ ಕಳವಳಕಂಜಿ ಕಾಯಯ್ಯ ಎನ್ನೆನು. ಜೀವನೋಪಾಯಕ್ಕಂಜಿ, ಈಯಯ್ಯ ಎನ್ನೆನು. "ಯದ್ಭಾವಂ-ತದ್ಭವತಿ" ಉರಿಬರಲಿ, ಸಿರಿಬರಲಿ, ಬೇಕು ಬೇಡೆನ್ನನಯ್ಯ. ಆನು ನಿಮ್ಮ ಹಾರೆನು. ಮಾನವರ ಬೇಡೆನು. ಆಣೆ, ನಿಮ್ಮಾಣೆಯಯ್ಯ. ಕೂಡಲಸಂಗಮದೇವಾ.

( ೭ ). ನಾಳೆ ಬಪ್ಪುದು ನಮಗಿಂದೇ ಬರಲಿ. ಇದಕಾರಂಜುವರು? ಇದಕಾರಳುಕುವರು? "ಜಾತಸ್ಯ ಮರಣಂ ಧ್ರುವಂ" ಎಂದುದಾಗಿ, ನಮ್ಮ ಕೂಡಲಸಂಗಮದೇವ ಬರೆದ ಬರಹವ ತಪ್ಪಿಸುವರೆ, ಹರಿಬ್ರಹ್ಮಾದಿಗಳವಲ್ಲ.

( ೮ ). ಅಂಜಿದರೆ ಮಾಣದು. ಅಳುಕಿದರೆ ಮಾಣದು. ವಜ್ರಪಂಜರದೊಳಗಿದ್ದಡೂ ಮಾಣದು. ತಪ್ಪದಯ್ಯ ಲಲಾಟ ಲಿಖಿತ. ಕಕ್ಕುಲಿತೆ ಬಟ್ಟರೆ, ಆಗದು ನೋಡಯ್ಯ. ಧೃತಿಗೆಟ್ಟು, ಮನಧಾತುಗೆಟ್ಟರೆ, ಬಪ್ಪುದು ತಪ್ಪದು ಕೂಡಲಸಂಗಮದೇವಾ.

( ೯ ). ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದರೆ, ತಪ್ಪದು ನೋಡಯ್ಯ. ಎನಗಿನ್ನೆಂತೋ, ಎನಗಿನ್ನೆಂತೋ, ಎಂದು ಚಿಂತಿಸಬೇಡ.

“ ನಾಭುಕ್ತಂ ಕ್ಷೀಯತೆ ಕರ್ಮಕಲ್ಪ ಕೋಟಿಶತೈರಪಿ ” ಎಂಬ ಶೃತಿ ತಪ್ಪದು, ಕೂಡಲಸಂಗಮದೇವಾ.

(೧೦). ಪುಣ್ಯಪಾಪವಿಲ್ಲಾಗಿ, ಯಮನ ಹಂಗಿಲ್ಲ. ಬಂದುದನುಂಬುದಾಗಿ, ಮಾನವರ ಹಂಗಿಲ್ಲ. ಭವಗೆಟ್ಟವನಾಗಿ, ದೈವದ ಹಂಗಿಲ್ಲ. ಸತ್ಯಜ್ಞಾನಾನಂದವೇ ತಾನಾಗಿ, ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೇ.

(೧೧). ಸತ್ತ ಶವ ಕಿಚ್ಚ ಬಲ್ಲುದೇ? ನಿಷ್ಠೆನಿಬ್ಬೆರಗಾಗಿ, ಕರ್ಮಸ್ವರೂಪ ಮರ್ತ್ಯರ ಹಂಗುಬಲ್ಲುದೇ? ತೊಟ್ಟು ಬಿಟ್ಟ ಹಣ್ಣು ಮತ್ತೆ ಹತ್ತುವದೇ? ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ, ನಿಲ್ಲು, ಮಾಣು.

(೧೨). ಹುಲಿಯ ಹಾಲು ಹುಲಿಗಲ್ಲದೆ, ಹೊಲದ ಹುಲ್ಲೆಗೆ ಉಣಬಾರದು. ಕಲಿಯ ಕಾಲತೊಡರು ಕಲಿತನದಾಳಿಗಲ್ಲದೆ ಇಕ್ಕಬಾರದು. ಶಿವನೊಡತಣದ ಬಿರಿದು ಇಹಪರ ವೀರಂಗಲ್ಲದೆ, ನುಡಿಯಬಾರದು. ಅಳಿಮನದ ಭಕ್ತಿಯುವರ ಮೂಗ ಹಲ್ಲುದೋರಿ ಕೊಯ್ವನಯ್ಯ, ಕೂಡಲಸಂಗಮದೇವಾ.

(೧೩). ಕಳಹೋದರೆ, ಕನ್ನದುಳಿಯ ಹಿಡಿವೆ. ಬಂದಿವಿಡಿದರೆ, ನಿಮ್ಮಿಂದ ಮುಂದೆ ನಡೆವೆ. ಮನಭೀತಿ ಮನಶಂಕೆಗೊಂಡೆನಾದರೆ, ನಿಮ್ಮಾಣೆ, ನಿಮ್ಮ ಪುರಾತನರಾಣೆ. ಅಳ್ದರ ನಡೆ ಸದಾಚಾರವೆನ್ನದಿರ್ದಡೆ, ಕಟ್ಟಾಳು ಶಿಷ್ಯತನಕ್ಕೆ ಹೋಹ ಕಷ್ಟವ ನೋಡಾ, ಕೂಡಲಸಂಗಮದೇವಾ.

(೧೪). ಅರಿಬಿರಿದು ನುಡಿವರು ಕೇಳಿರೋ. ಕೆರಳಿಕೆಯ ನುಡಿವರು. ನೆರೆದ ಮಂದಿಯ ಕಂಡುಬ್ಬುವರು, ಕೊಬ್ಬುವರು. ನಿರುತದ ಕಾಳಗವೆಂದಡೆ, ಬಿರಿದು ಬಿಸಾಡುವರು. ಅರೆ ಭಕ್ತಿಯ ಮಾಡಿ ನೆರೆಭಕ್ತನೆಂದರೆ, ಎಂದು ಮೆಚ್ಚುವನಯ್ಯ ನಮ್ಮ ದೇವರಾಯಸೊಡ್ಡಳಾ?

(೧೫). ಹೇಡಿ ಬಿರುದು ಕಟ್ಟಿದಡೆ, ಕಲಿಯಪ್ಪನೇ? ಒರೆಯ ಬಿಚ್ಚಿ, ಇರಿಯದಿರ್ದಡೆ, ಲೋಕ ಮೆಚ್ಚುವದೇ? ಚಲ್ಲಣವನುಟ್ಟು, ಗರುಡಿಯ ಕಟ್ಟಿ, ಸಾಧನೆಯ ಮಾಡುವನಂತೆ, ತನ್ನ ತಪ್ಪಿಸಿಕೊಂಡೊಡೆ, ಶಿವನು ಮೆಚ್ಚುವನೇ? ಅರಿಯದವರಿಗೆ ಒಳ್ಳೇ ಹೆಡೆ ಎತ್ತಿ ತೋರಿದಂತೆ, ಬೊಳ್ಳೆಗನ ಭಕ್ತಿ ಕೂಡಲಸಂಗಮದೇವಾ.

(೧೬). ಎಲ್ಲರೂ ವೀರರು, ಎಲ್ಲರೂ ಧೀರರು, ಎಲ್ಲರೂ ಮಹಿಮರು, ಎಲ್ಲರೂ ಪ್ರಮಥರು. ಕಾಳಗದ ಮುಖದಲ್ಲಿ ಕಾಣಬಹುದು. ಓಡುವ ಮುಖದಲ್ಲಿ

ಕಾಣಬಾರದು. ನಮ್ಮ ಕೂಡಲಸಂಗನ ಶರಣರು ಧೀರರು, ಉಳಿದವರೆಲ್ಲ ಅಧೀರರು.

( ೧೭ ). ಕರ್ಮವೆಂಬ ಅಂಕದೊಡನೆ ತೊಡರಿದೆ. ಬಿನ್ನಪವ ಅವಧಾರು, ನಿಮ್ಮಾಳಿನ ಭಾಷೆಯು. ಕಡೆಗಳಕ್ಕೆ ನೂಂಕುವೆ. ಕೆಡುಹುವೆನಂಕವ. ಕರೆದಡೋಸರಿಸಿದರೆ, ನಿಮ್ಮಾಳಲ್ಲ. ಶಿವಶರಣೆಂಬ ದಂಡನೊಡ್ಡಿ, ಗಣಮೇಳಾಪವೆಂಬಲಗಿನಲ್ಲಿರಿವೆ, ಕೂಡಲಸಂಗಮದೇವಾ.

( ೧೮ ). ಆಡುವ ವರ್ಣನೆಯ ಕೇಳಿ, ಮರುಳಾಗುವಾತನಲ್ಲ ಮಡಿವಾಳಯ್ಯನು. ಗಂಗೆವಾಳುಕ ಸಮ ರುದ್ರರು. ರುದ್ರಗಣಂಗಳು ಬಂದರೆ, ಹೆದರುವನಲ್ಲ, ಹೆದರಿ ಓಡುವಾತನಲ್ಲ. ಕರೆದು ನೀ ರಣರಂಗ ಮಾಡದಿದ್ದರೆ, ನಿನಗೆ ಕಲಿದೇವರ ಪಾದದಾಣೆ, ಚಂದ್ರಮೌಳೀ.

( ೧೯ ). ಜೊಳ್ಳುವಾಳಿಯುವ ನಾನಲ್ಲಯ್ಯ. ನಿಮ್ಮ ವೇಳೆಯಾಳಯ್ಯ. ಹಾಳುಗೆಟ್ಟೋಡುವ ಆಳು ನಾನಲ್ಲಯ್ಯ. ಕೇಳು ಕೂಡಲ ಸಂಗಮದೇವಾ ಮರಣವೇ ಮಹಾನವಮಿ ಎನಗೆ.

( ೨೦ ). ಅಡಿಗಡಿಗೆ ಬಂದು ಅಡರುತ್ತಿಪ್ಪ ಕಡುಛಲ ನಿನಗೆ ಬೇಡ, ಕಂಡಿಯಾ. ಮೃಡನೇ, ಎನ್ನೊಡನೆ ತೊಡರಿ, ನೀನು ಸಸಿನೆ ಹೋಗಲರಿಯಾ. ಅದು ಹೇಗೆಂದಡೆ, ನಾನು ನಿನಗಂಜುವನಲ್ಲ. ಗಾಸಿಯಾಗಬೇಡ, ಕಂಡಿಯಾ. ಹರಹರಾ ಶಂಕರಾ, ಎನ್ನ ನೇಮಕ್ಕೆ ಅಡ್ಡಬಾರದಿರು. ಒಡವೆ ಸವಿದಡೆ ಒಡಲನೊಡ್ಡುವೆ. ಕಡಗಿ ನೋಡುವಡೊಮ್ಮೆ ಒಡವನ ಕಯ್ಯ ಕಡುಹ ನೋಡೆನ್ನೊಡೆಯ ಸಂಗಯ್ಯಪ್ರಿಯಬಂಕೇಶ್ವರಾ.

( ೨೧ ). ಕಟ್ಟಿದೆನೊರೆಯು. ಬಿಟ್ಟೆ ಜನ್ನಿಗೆಯು. ನೆರೆಮುಟ್ಟಿ ಬಂದಿರಿದಡೆ, ಓಸರಿಸುವನಲ್ಲ. ಓಡದಿರು, ಓಡದಿರು. ನಿಮ್ಮ ಶರಣರ ಮನೆಯ ಬಿರಿದಿನ ಅಂಕಕಾರ, ಓಡದಿರು, ಓಡದಿರು. ಎಲೆ ದೇವಾ, ಎಲೆಲೆಸ್ವಾಮಿ, ಎಲೆಲೆ ಹಂದೆ, ಓಡದಿರು, ಓಡದಿರು, ಗುಹೇಶ್ವರಾ.

( ೨೨ ). ಓಡುವಾತ ಲೆಂಕನಲ್ಲ, ಬೇಡುವಾತ ಭಕ್ತನಲ್ಲ. ಓಡಲಾಗದು ಲೆಂಕನು. ಬೇಡಲಾಗದು ಭಕ್ತನು. ಓಡೆನಯ್ಯ, ಬೇಡೆನಯ್ಯ, ಕೂಡಲ ಸಂಗಮದೇವಾ.

# ಬಡತನದಲ್ಲಿ ಧೈರ್ಯಗುಂದಬೇಡ.

(೧). ಮನೆ ನೋಡಾ, ಬಡವರ ಮನೆ. ಮನ ನೋಡಾ, ಘನ. ಸೋಂಕಿನಲ್ಲಿ ಶುಚಿ. ಸರ್ವಾಂಗಕಲಿ. ಪಸಾರಕ್ಕನುಕೂಲವಿಲ್ಲ. ಬಂದ ತತ್ಕಾಲ ಕ್ಕುಂಟು. ಕೂಡಲಸಂಗನ ಶರಣರು ಸ್ವತಂತ್ರರು, ಧೀರರು.

(೨). ಅಂಗಕ್ಕೆ ಬಡತನವಲ್ಲದೆ, ಮನಕ್ಕೆ ಬಡತನ ಉಂಟೇ? ಬೆಟ್ಟ ಬಲ್ಲಿತ್ತೆಂದರೆ, ಉಳಿಯ ಮೊನೆಯಲ್ಲಿ ಬಡತನವುಳ್ಳಡೆ, ಒಡೆಯದೆ? ಘನಶಿವಭಕ್ತ ರಿಗೆ ಬಡತನವಿಲ್ಲ. ಸತ್ಯರಿಗೆ ದುಷ್ಕರ್ಮವಿಲ್ಲ. ಎನಗೆ ಮಾರಯ್ಯಪ್ರಿಯ ಅಮಳೇ ಶ್ವರಲಿಂಗವುಳ್ಳನ್ನಕ್ಕರ, ನನಗಾರ ಹಂಗಿಲ್ಲ.

(೩). ಭಕ್ತಿ ವಿಶೇಷವ ಮಾಡುವರೆ, ಹತ್ತು ಬೆರಳುಂಟು. ಹಾಸಿ ದುಡಿ ದರೆ, ತನಗುಂಟು, ತನ್ನ ಪ್ರಮಥರಿಗುಂಟು. ಮಾರಿತಂದೆಗಳಂತೆ ಎನಗೇಕಹು ದಯ್ಯ? ರತ್ನದ ಸಂಕೊಲೆಯನಿಕ್ಕಿ ಕಾಡಿಹ, ಕೂಡಲಸಂಗಮದೇವ, ಶಿವಧೋ, ಶಿವಧೋ.

(೪). ಭಕ್ತರಿಗೆ ಬಡತನ ಉಂಟೇ? ನಿತ್ಯರಿಗೆ ಮರಣ ಉಂಟೇ? ಭಕ್ತರು ಬಡವರೆಂದು, ಮತ್ತೊಂದ ಕೊಟ್ಟಹೆನೆಂದರೆ, ಮಾರಯ್ಯಪ್ರಿಯ ಅಮ ಳೇಶ್ವಲಿಂಗವು ಸತ್ತಂದಿಗಲ್ಲದೆ, ಬಡತನವಿಲ್ಲ.

(೫). ಕಾಣದುದನೆಲ್ಲ ಕಾಣಲಾರೆ, ನೋಡಾ. ಕೇಳದುದನೆಲ್ಲ ಕೇಳ ಲಾರೆನಯ್ಯ. ದ್ರೋಹವಿಲ್ಲ ಎಮ್ಮ ಶಿವನಲ್ಲಿ. ಸೀಮೆಯಯ್ಯ. ಒಲೆಯ ಮುಂದಿ ದ್ದು ಮಾಡದ ಕನಸ ಕಾಂಬವರನೊಲ್ಲನಯ್ಯ, ಕೂಡಲಸಂಗಮದೇವಾ.

(೬). ಮನೆ ನೋಡಾ ಬಡವರು. ಮನನೋಡಾ, ಸಂಪನ್ನರು. ಧನ ನೋಡಾ ಬಡವರು. ಘನ ಮನ ಸಂಪನ್ನರು. ಕೂಡಲಸಂಗನಶರಣರು ಕರುಳಿ ಲ್ಲದ ಕಲಿಗಳು. ಆರಿಗೂ ಉಪಮಿಸಬಾರದು.

(೭). ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯ. ತಾರೌ ಅಗ್ಗವಣಿಯ, ನೀಡೌ ಪತ್ರಿಯ, ಲಿಂಗಕ್ಕೆ ಬೋನವ ಹಿಡಿಯೌ ಎಂಬರು. ನಮ್ಮ ಕೂಡಲಸಂಗನ ಮಹಾಮನೆ ಯಲ್ಲಿ ಒಕ್ಕುದನುಣ್ಣೌ ತೊತ್ತೇ ಎಂಬರು.

(೮). ಒಡದೋಡು ನನ್ನ ಮನೆಯಲ್ಲಿಲ್ಲದಂತೆ ಮಾಡಯ್ಯಾ. ಕೊಡು ದೇವ ಎನ್ನ ಕಯ್ಯಲೊಂದು ಕರಿಕೆಯ. "ಮೃಡ ದೇವ ಶರಣು," ಎಂದು ಭಿಕ್ಷಕ್ಕೆ ಹೋದರೆ, ಅಲ್ಲಿ "ನಡಿ ದೇವ" ಎಂದೆನಿಸೋ ಕೂಡಲಸಂಗಮದೇವ.

(೯). ಮನೆಮನೆದಪ್ಪದೆ ಕೈಯ್ನೊಡ್ಡಿ ಬೇಡುವಂತೆ ಮಾಡಯ್ಯಾ. ಬೇಡಿದರೆ ಇಕ್ಕದಂತೆ ಮಾಡಯ್ಯಾ. ಇಕ್ಕಿದರೆ ನೆಲಕ್ಕೆ ಬೀಳುವಂತೆ ಮಾಡಯ್ಯಾ. ನೆಲಕ್ಕೆ ಬಿದ್ದರೆ, ನಾನೆತ್ತಿಕೊಂಬುವದಕ್ಕೆ ಏನಿಲ್ಲದಂತೆ ಮಾಡಯ್ಯಾ, ಚನ್ನಮಲ್ಲಿಕಾರ್ಜುನಯ್ಯಾ.

(೧೦). ಎನಗಾರು ಇಲ್ಲ, ಎನಗಾರು ಇಲ್ಲ, ಎಂಬರು. ಬಾಣನವ ನಾನು, ಮಯೂರನವನಾನು, ಕಾಳಿದಾಸನವನಾನು. ಕಕ್ಕಯ್ಯ ಹಿರಿಯಯ್ಯಾ. ಚಿಕ್ಕಯ್ಯ ಚನ್ನಯ್ಯ ಎತ್ತಿ ಮುದ್ದಾಡಿಸಿದರೆನ್ನ ಕೂಡಲಸಂಗಯ್ಯಾ.

---

## ಲೋಕದ ಮಾತಿನ ಮೇಲೆ ಅವಲಂಬಿಸಬೇಡ

(೧). ಅಘಟಿತ ಶರಣರು ಜನಕ್ಕೆ ವಿರೋಧ. ಅಘಟಿತ ಶರಣರು ಮನಕ್ಕೆ ವಿರೋಧ. ಜನರಂತೆ ನಡಿಯರು, ಮನದಂತೆ ನಡಿಯರು. ಗುಹೇಶ್ವರ ಲಿಂಗದಲ್ಲಿ ಶರಣರು ಸ್ವತಂತ್ರರಲ್ಲವೇ ಚನ್ನಬಸವಣ್ಣ?

(೨). ಕೀರ್ತಿಗೆ ಜಗಕ್ಕೆಂದು ಮಾಡುವಾತ ಭಕ್ತನೇ? ನಿಂದಿಸಿಹರೆಂದು, ಅಂಜಿಕೊಂಡಿಪ್ಪಾತ ತಪಸಿಯಲ್ಲ. ಜನಮೆಚ್ಚಬೇಕೆಂದು, ಮಾಡುವಾತ ಭಕ್ತನಲ್ಲ. ಇಚ್ಛೆಗೆ ನುಡಿವಾತ ವಿರಕ್ತನಲ್ಲ. ಇದರಚ್ಚುಗ ನಿಮಗೆ. ನಾರಾಯಣ ಪ್ರಿಯ ರಾಮನಾಥ ಒಚ್ಚಿತ್ತು ನಿಮ್ಮನೊಲ್ಲ.

(೩), ಆರು ಮುನಿದು ನಮ್ಮನೇನ ಮಾಡುವರು? ಊರು ಮುನಿದು ನಮ್ಮನೆಂತ ಮಾಡುವರು? ನಮ್ಮ ಕುನ್ನಿಗೆ ಕೂಸ ಕೊಡಬೇಡ! ನಮ್ಮ ಸೊಣಗಂಗೆ ತಳಿಗೆಯಲ್ಲಿಕ್ಕಬೇಡ! ಆನೆಯ ಮೇಲೆ ಹೋಹವನ ಶ್ವಾನ ಕಚ್ಚಬಲ್ಲುದೇ? ನಮ್ಮ ಕೂಡಲಸಂಗಮದೇವರುಳ್ಳನ್ನಕ್ಕರ, ನಮಗೇನಯ್ಯ?

(೪). ನ್ಯಾಯನಿಷ್ಠುರ. ದಯಾದಾಕ್ಷಿಣ್ಯಾಪರನಾನಲ್ಲ. ಲೋಕವಿರೋಧಿ. ಶರಣರಿಗೆಯೂ ಅಂಜುವವನಲ್ಲ, ಕೂಡಲಸಂಗಮದೇವರ ರಾಜತೇಜದೊಳಿಪ್ಪನಾಗಿ.

(೫). ಆಯುಷ್ಯ ತೀರಿದಲ್ಲದೆ ಮರಣವಿಲ್ಲ. ಭಾಗ್ಯತೀರಿದಲ್ಲದೆ ದಾರಿದ್ರ್ಯವಿಲ್ಲ. ಅಂಜಲೇತಕೋ ಲೋಕವಿಗರ್ಭಣೆಗೆ? ಅಳುಕಲೇತಕೋ, ಕೂಡಲಸಂಗಮದೇವಾ, ನಿಮಗಾಳಾಗಿ?

(೬). ಲೋಕದಂತೆ ಬಾರರು, ಲೋಕದಂತೆ ಇರರು, ಲೋಕದಂತೆ ಹೋಗರು, ನೋಡಯ್ಯಾ. ಪುಣ್ಯದಂತೆ ಬಪ್ಪರು, ಜ್ಞಾನದಂತೆ ಇಪ್ಪರು, ಮುಕ್ತಿಯಂತೆ ಹೋಹರು, ನೋಡಯ್ಯಾ. ಉರಿಲಿಂಗದೇವಾ, ನಿಮ್ಮ ಶರಣರು ಉಪಮಾತೀತರಾಗಿ, ಉಪಮಿಸಬಾರದು.

(೭). ಒಬ್ಬರು ಉತ್ತಮನೆಂಬರು, ಒಬ್ಬರು ಮಧ್ಯಮನೆಂಬರು, ಒಬ್ಬರು ಕನಿಷ್ಠನಿಷ್ಠುರಿ ಎಂಬರು. ಎಂದೊಡಾದರೇನು? ಯೋಗಿಗೆ ವಿನಯವು ಕಂಟಕವಲ್ಲದೆ, ಲೋಕಾರ್ಥಕ್ಕೂ ಪರಮಾರ್ಥಕ್ಕೂ ವಿರುದ್ಧ ಕಾಣಾ, ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ.

(೮). ಉಂಡರೆ ಭೂತನೆಂಬರು. ಉಣದಿದ್ದರೆ ಚಾತಕನೆಂಬರು. ಭೋಗಿಸಿದರೆ ಕಾಮಿ ಎಂಬರು. ಭೋಗಿಸದಿದ್ದರೆ ಮುನ್ನ ಮಾಡಿದ ಕರ್ಮಿ ಎಂಬರು. ಊರೊಳಗಿರ್ದರೆ, ಸಂಸಾರಿ ಎಂಬರು. ಅಡವಿಯೊಳಗಿರ್ದರೆ, ಮೃಗಜಾತಿ ಎಂಬರು. ನಿದ್ರೆಗೈದರೆ, ಜಡದೇಹಿ ಎಂಬರು. ಎದ್ದಿದ್ದರೆ ಚಕೋರನೆಂಬರು. ಇಂತೀ ಜನಮೆಚ್ಚಿ ನಡೆದವರ ಎಡದ ಪಾದದ ಕಿರುಗುಣಿಯಲ್ಲಿ ಮನೆಮಾಡು, ಮನೆ ಮಾಡು ಎಂದಾತ ನಮ್ಮ ಅಂಬಿಗರ ಚೌಡಯ್ಯನು.

(೯). ಸರ್ವಸಂಗಪರಿತ್ಯಾಗ ಮಾಡಿದ ಶಿವಶರಣನ ಲೋಕದ ಸಂಸಾರಿಗಳೆಂತು ಮೆಚ್ಚುವರಯ್ಯಾ? ಊರೊಳಗಿದ್ದರೆ, ಉಪಾಧಿಕನೆಂಬರು, ಅಡವಿಯೊಳಗಿದ್ದರೆ, ಮೃಗನೆಂಬರು. ಹೊನ್ನ ಬಿಟ್ಟರೆ, ದರಿದ್ರನೆಂಬರು. ಹೆಣ್ಣ ಬಿಟ್ಟರೆ ನಪುಂಸಕನೆಂಬರು. ಪುಣ್ಯವ ಬಿಟ್ಟರೆ ಪೂರ್ವಕರ್ಮಿ ಎಂಬರು. ಮಾತನಾಡದಿದ್ದರೆ ಮೂಗನೆಂಬರು. ಮಾತನಾಡಿದರೆ ಜ್ಞಾನಿಗೆ ಕಯ್ಯುಮಾತೆಂಬರು. ನಿಜವನಾಡಿದರೆ ನಿಷ್ಠುರಿ ಎಂಬರು. ಸಮತೆಯ ನುಡಿದರೆ, ಅಂಜುವನೆಂಬರು. ಇದುಕಾರಣ ಕೂಡಲಚನ್ನಸಂಗಯ್ಯಾ, ನಿಮ್ಮ ಶರಣ ಲೋಕದಿಚ್ಛೆಯ ನುಡಿಯ, ಲೋಕದಿಚ್ಛೆಯ ನಡೆಯ.

# ವ್ರತನೇಮಗಳನ್ನು ಬಿಡಬೇಡ.

(೧). ವ್ರತವೆಂಬುದು ನಾಯಕರತ್ನ. ವ್ರತವೆಂಬುದು ಸುಪ್ಪಾಣಿಯ ಮುತ್ತು. ವ್ರತವೆಂಬುದು ಜೀವದ ಕಳೆ. ವ್ರತವೆಂಬುದು ಸುಯಿಧಾನ, ಸುಯಿಧಾನ, ಸುಯಿಧಾನ. ವ್ರತತಪ್ಪಲು, ಉರಿಲಿಂಗಪೆದ್ದಿಗಳರಸಬಲ್ಲನವ್ವಾ.

(೨). ಆವ ಕಾಯಕವಾದಡೂ, ಒಂದೇ ಕಾಯಕವಯ್ಯಾ. ಆವ ವ್ರತವಾದಡೂ, ಒಂದೇ ವ್ರತವಯ್ಯಾ. ಆಯ ತಪ್ಪಿದಡೆ, ಸಾವಿಲ್ಲ. ವ್ರತ ತಪ್ಪಿದಡೆ, ಕೂಡಲಿಲ್ಲ. ಕಾಕಪಿಕದಂತೆ ಎಡೆಯಾಡಲು, ನಾಯಕ ನರಕ ಗುಹೇಶ್ವರಲಿಂಗದಲ್ಲಿ.

(೩). ವ್ರತತಪ್ಪಿದಾಗಳೇ ಇಷ್ಟಲಿಂಗದ ಕಳೆ ನಷ್ಟವವ್ವಾ. ಅವರು ಲಿಂಗವಿದ್ದ ಭವಿಗಳು. ಅದು ಹೇಗೆಂದಡೆ, ಪ್ರಾಣವಿಲ್ಲದ ದೇಹದಂತೆ. ಉರಿಲಿಂಗಪೆದ್ದಿಗಳರಸ ಒಲ್ಲನಾಗಿ, ಒಲ್ಲೆನವ್ವಾ.

(೪). ವ್ರತವನಾಶ್ರಯಿಸಿದ ಮೇಲೆ, ಹುಸಿ ಹೊಲೆ ಕಳವು ಪರದಾರ ಮಾಡುವನ್ನಬರ ವ್ರತಸ್ಥನಲ್ಲದೆ, ನೇಮಕ್ಕೆ ಸಲ್ಲ, ಅವಗಾಚಾರವಿಲ್ಲ. ಅವನು ರಾಜನೆಂದು ದ್ರವ್ಯದಾಸೆಗಾಗಿ, ಅವನ ಮನೆಯ ಹೊಕ್ಕು, ವಿಭೂತಿವೀಳೆಯ ಮೊದಲಾದ ಉಪಚಾರಕ್ಕೊಳಗಾದವ ಸತ್ತ ಕುಕ್ಕುರನ ಕೀಟಕ ತಿಂದು, ಅದು ಸತ್ತಡೆ, ತಾ ತಿಂದಂತೆ. ಪಂಚಾಚಾರ ಶುದ್ಧಕ್ಕೆ ಹೊರಗು, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಮುನ್ನವೇ ಹೊರಗು.

(೫). ಎಂದಿಗೂ ಸಾವು ತಪ್ಪದೆಂದರಿದ ಮತ್ತೆ, ವ್ರತಭಂಗಿತನಾಗಿ, ಅಂದಿಗೆ ಸಾಯಲೇತಕ್ಕೊ? ನಿಂದೆಗೆಡೆಯಾಗದ ಮುನ್ನವೇ, ಅಂಗವ ಹಾಕಿ, ಚಿತ್ತ ನಿಜಲಿಂಗವನೆಯ್ದಿ, ಮನಕ್ಕೆ ಮನೋಹರ ಶಂಖೇಶ್ವರಲಿಂಗವ ಕೂಡಿ.

(೬). ಒಡನೆ ಹುಟ್ಟಿದುದಲ್ಲ. ಒಡನೆ ಬೆಳೆದುದಲ್ಲ. ಎದೆಯಲೊಂದು ಉಡಿಗೆಯನುಟ್ಟು ಸಡಿಲಿದರೆ, ಲಜ್ಜೆ ನಾಚಿಕೆಯಾಯಿತ್ತು, ಎಂಬ ನುಡಿ ದಿಟವಾಯಿತ್ತು. ಲೌಕಿಕದಲ್ಲಿ ಹಡೆದ ಗುರುಕರುಣದ ಒಡನೆ ಹುಟ್ಟಿದ ನೇಮವನೆ ಬಿಡದಿರೆಲವೋ. ಬಿಟ್ಟಡೆ, ಕಷ್ಟ. ಕೂಡಲಸಂಗಮದೇವನಡಿಸಿ ಕೆಡಹುವ ನಾಯಕನರಕದಲ್ಲಿ.

(೭). ಕಾಯಕ ತಪ್ಪಿದಡೆ, ಸೈರಿಸಬಾರದು. ವ್ರತತಪ್ಪಿದರೆಂತು ಸೈರಿಸಬಹುದು ಕರ್ಮಹರ ಕಾಳೇಶ್ವರಾ?

(೮). ಅರ್ಚನೆ ಪೂಜನೆ ನೇಮವಲ್ಲ. ಮಂತ್ರತಂತ್ರ ನೇಮವಲ್ಲ. ಧೂಪ ದೀಪಾರತಿ ನೇಮವಲ್ಲ. ಪರಧನ ಪರಸ್ತ್ರೀ ಪರದೈವಂಗಳಿಗೆರಗದಿರ್ಪುದೇ ನೇಮ. ಶಂಭುಜಕ್ಕೇಶ್ವರ ದೇವರಲ್ಲಿ ಇದೇ ಕಾಣಾ ನಿತ್ಯನೇಮ.

(೯). ಬಂದುದ ಕೈಕೊಳ್ಳಬಲ್ಲಡೆ ನೇಮ. ವಂಚನೆಯ ಮಾಡದುದೇ ನೇಮ. ನಡೆದು ತಪ್ಪದಿದ್ದರೆ ನೇಮ. ನುಡಿದು ಹುಸಿಯದಿದ್ದರೆ ನೇಮ. ಕೂಡಲಸಂಗನಶರಣರು ಬಂದರೆ, ಒಡೆಯರಿಗೆ ಒಡವೆಯನೊಪ್ಪಿಸುವದೇ ನೇಮ.

(೧೦). ಪರಧನ ಒಲ್ಲದಿಪ್ಪುದೇ ವ್ರತ. ಪರಸ್ತ್ರೀಯರ ಕೂಡದಿಪ್ಪುದೇ ಶೀಲ. ಸರ್ವ ಜೀವವ ಕೊಲ್ಲದಿಪ್ಪುದೇ ನೇಮ. ತಥ್ಯಮಿಥ್ಯವನಳಿದಿಪ್ಪುದೇ ನಿತ್ಯ ನೇಮ. ಇದು ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗಕ್ಕೆ ಸಂದೇಹವಿಲ್ಲದ ವ್ರತ.

---

## ವ್ರತಗೇಡಿಗಳ ಸಂಗವನ್ನು ಮಾಡಬೇಡ.

(೧). ಕಾಗೆಯ ನಾಯ ತಿಂದವರಿಲ್ಲ. ವ್ರತಭ್ರಷ್ಟನ ಕೂಡಿದವರಿಲ್ಲ. ನಾಯಿಗೆ ನಾರಂಗವಪ್ಪುದೇ? ಲೋಕದ ನರಂಗೆ ವ್ರತವಪ್ಪುದೇ, ಶಿವಬೀಜಕ್ಕಲ್ಲದೆ, ನೀವೇ ಸಾಕ್ಷಿಯಾಗಿ, ನಿಜಗುಣೇಶ್ವರ ಲಿಂಗದಲ್ಲಿ?

(೨). ಬಂಜೆ ಆವಿಂಗೆ ಕ್ಷೀರ ಉಂಟೇ? ವ್ರತಹೀನನ ಬೆರೆಯಲಾಗದು. ಬೆರೆದರೆ ನರಕ ತಪ್ಪದು. ನಾನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ.

(೩). ಕೈತಪ್ಪಿ ಕೆತ್ತಲು, ಕಾಲಿಂಗೆ ಮೂಲ. ಮಾತು ತಪ್ಪಿ ನುಡಿಯಲು, ಬಾಯಿಗೆ ಮೂಲ. ವ್ರತಹೀನನ ನೆರೆಯಲು, ನರಕಕ್ಕೆ ಮೂಲ, ಕರ್ಮಹರ ಕಾಳೇಶ್ವರಾ.

(೪). ಹದ ತಪ್ಪಿ ಕುಟ್ಟಲು, ನುಚ್ಚಲ್ಲದೆ ಅಕ್ಕಿಯಿಲ್ಲ. ವ್ರತಹೀನನ ನೆರೆಯ, ನರಕವಲ್ಲದೆ ಮುಕ್ತಿ ಇಲ್ಲ. ಅರಿಯದಾದರು ಹೋಗಲಿ. ಅರಿದು ಬೆರೆದೆನಾದರೆ, ಕನ್ನಗತ್ತಿಯಲ್ಲಿ ಕಿವಿಯ ಕೊಯ್ವಿರಯ್ಯ. ಒಲ್ಲೆ, ಬಲ್ಲೆನಾಗಿ. ನಿಮ್ಮಾಣೆ, ನಿರ್ಲಜ್ಜೇಶ್ವರಾ.

( ೫ ). ಚರಣಾಯುಧ ವೇಳೆಯನರಿವ್ರದಯ್ಯ. ಭಕ್ತ ವ್ರತಹೀನನರಿದು ನೆರೆಯನಯ್ಯ. ನೆರೆದರೆ ನರಕ ಗುರುಶಾಂತೇಶ್ವರಾ.

( ೬ ). ತನು ಬತ್ತಲೆಯಾದರೇನು? ಮನ ಬತ್ತಲೆಯಾಗದನ್ನಕ್ಕರ, ವ್ರತವಿದ್ದರೇನು? ವ್ರತಹೀನನಾದ ಬಳಿಕ ನೆರೆದರೆ ನರಕವಯ್ಯ, ನಿಂಬೇಶ್ವರಾ.

( ೭ ). ಕದುರು ಮುರಿಯೆ, ಏನೂ ಇಲ್ಲ. ವ್ರತಹೀನನ ನೆರೆಯಲಿಲ್ಲ, ಕದಿರರೆಮ್ಮಿಯೊಡೆಯಗುಮ್ಮೇಶ್ವರಾ.

( ೮ ). ಒತ್ತೆಯ ಹಿಡಿದು, ಮತ್ತೊತ್ತೆಯ ಹಿಡಿದರೆ, ಬತ್ತಲೆ ನಿಲ್ಲಿಸಿ, ಕೊಲ್ಲುವರಯ್ಯ. ವ್ರತಹೀನನರಿದು ಬೆರೆದರೆ ಕನ್ನಗತ್ತಿಯಲ್ಲಿ ಕಿವಿ ಮೂಗ ಕೊಯ್ವಿರಯ್ಯಾ. ಒಲ್ಲೆನೊಲ್ಲೆ, ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.

( ೯ ). ವ್ರತಭ್ರಷ್ಟ ಲಿಂಗಬಾಹ್ಯನ ಕಂಡರೆ, ಸತ್ತನಾಯ ಕಾಗೆಯ ಕಂಡಂತೆ. ಅವರೊಡನೆ ನುಡಿಯಲಾಗದು, ಭೀಮೇಶ್ವರಾ.

( ೧೦ ). ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ. ಗುರುಲಿಂಗಜಂಗಮದ ಕಾಲ ಕಟ್ಟುವೆ. ವ್ರತಭ್ರಷ್ಟರ ನಿಟ್ಟೊರಿಸುವೆ. ಸುಟ್ಟು ತೂರು ತೂರನೆ ತೂರುವೆ. ನಿರ್ಭೀತಿ ನಿಜಲಿಂಗದಲ್ಲಿ.

( ೧೧ ). ಲಿಂಗಬಾಹ್ಯನ, ಆಚಾರಭ್ರಷ್ಟನ ವ್ರತತಪ್ಪುಕನ, ಗುರುಲಿಂಗ ಜಂಗಮಕೊಂದವನ, ಪಾದೋದಕ ಪ್ರಸಾದ ದೂಷಕನ, ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ, ಶಕ್ತಿಯುಳ್ಳೊಡೆ, ಸಂಹಾರಮಾಡುವದು. ಶಕ್ತಿ ಇಲ್ಲದಿರ್ದಡೆ, ಗ್ರಾಮವ ಬಿಡುವುದು. ಇಲ್ಲದಿರ್ದಡೆ ಆ ಸ್ಥಲವ ಬಿಡುವುದು. ಅದಾಗದಿರ್ದಡೆ, ಕರ್ಣ ಮುಚ್ಚಿಕೊಂಬುವದು, ಶಿವಮಂತ್ರ ಜಪಿಸುವುದು. ಅಲ್ಲದಿರ್ದಡೆ, ಕುಂಭಿನೀಪಾತಕನಾಯಕ ನರಕದಲ್ಲಿಕ್ಕುವ ಶ್ರೀಗುರು ಸಿದ್ಧೇಶ್ವರನು.

---

## ಶೀಲವುಳ್ಳವನಾಗಿರು.

( ೧ ). ಶೀಲವಂತರೆಲ್ಲ ಅವರಂತಿರಲಿ. ತಮ್ಮ ತಮ್ಮ ಮನದಿ ಮದವ ಕಳೆದು, ತಮ್ಮೊಳಗಿರ್ದ ಭವಿಗಳ ಭಕ್ತರ ಮಾಡಿ, ತಮ್ಮಲ್ಲಿರುವ ಅಷ್ಟಮದಂಗಳು, ಸಪ್ತ ವ್ಯಸನಂಗಳು, ಅರಿಷಡ್ವರ್ಗಂಗಳು, ಪಂಚ ಭೂತಂಗಳು, ಚತುಃ

ಕರಣಂಗಳು, ತ್ರಿಕರಣಂಗಳು, ದ್ವಿಗುಣಂಗಳು, ಶಿವಸಂಸ್ಕಾರದಿಂದೆ ಲಿಂಗಕರಣಂಗಳೆಂದೆನಿಸಿ ನಿತ್ಯ ಲಿಂಗಾರ್ಚನೆಯ ಮಾಡಬಲ್ಲಾತನೇ ಶೀಲವಂತನಯ್ಯ. ಅವನ ಶ್ರೀಪಾದವನು ಹಸ್ತವನೆತ್ತಿ ಪೊಗಳುತಿರ್ದುವು ವೇದಂಗಳು. ಸಾಕ್ಷಿ:— " ಓಂ ಅಯಂ ಮೇ ಅಸ್ತು ಭಗವಾನ್, ಅಯಂ ಮೇ ಭಗವತ್ತರಂ। ಅಯಂ ಮೆ ವಿಶ್ವಭೇಷಜಃ ಅಯಂ ಮೆ ತತ್, ಅಯಂ ಮೇ ಪಿತಾ " ಇಂತಪ್ಪ ಲಿಂಗಾರ್ಚನೆಯ ಮಾಡಬಲ್ಲಾತನೇ ಸಂಬಂಧಿ ಎನಿಸಿಕೊಳಬಲ್ಲನಯ್ಯ, ಕೂಡಲಚನ್ನಸಂಗಮದೇವಾ.

( ೨ ). ಶ್ರೀಗುರು ಶೀಲ ಶೀಲವೆಂದು ಗರ್ವಿಸಿ ನುಡಿವುತಿಪ್ಪಿರಿ. ಶೀಲವಾವುದೆಂದು ಅರಿಯಿರೆ, ಕೇಳಿರಣ್ಣಾ. ಇದ್ದುದ ವಂಚನೆಯ ಮಾಡದಿರ್ಪುದೇ ಶೀಲ, ಇಲ್ಲದುದಕೆ ಕಡನ ಮಾಡದಿರ್ಪುದೇ ಶೀಲ, ಪರದೈವ ಪರಸಮಯಕ್ಕೆ ಅಳುಪದಿರ್ಪುದೇ ಶೀಲ, ಗುರು ನಿಂದೆ, ಹರನಿಂದೆ, ಚರನಿಂದೆ, ಕೇಳದಿರ್ಪುದೇ ಶೀಲ. ನಮ್ಮ ಕೂಡಲಚನ್ನಸಂಗನಶರಣರ ಬರವಿಂಗೆ ಮಯ್ಯಾಂತುದೇ ಅಚ್ಚ ಶೀಲ.

( ೩ ). ಎಂಜಲ ಮಾತನಾಡುವ ಜಗದ ಜಂಗುಳಿಗಳೆಲ್ಲ ಶೀಲವಂತರೇ? ಭಿನ್ನ ರುಚಿಗಳಿಗೆರಗದೆ ಕಾಮನ ಬೆಂಬಳಿವಿಡಿಯದೆ ಅಂಗನೆಯರ ಸಂಗವ ತೊರೆದಡೆ ಶೀಲವಂತರೆಂಬೆನು. ಲೋಕದ ನಚ್ಚುಮಚ್ಚು ಬಿಟ್ಟು ನಿಶ್ಚಿಂತನಾದಡೆ, ಮೆಚ್ಚುವನಯ್ಯ ನಮ್ಮ ಸಕಳೇಶ್ವರಾ.

( ೪ ). ಆಶೆ ಎಂಬ ಕೂಸನೆತ್ತಲು ರೋಷವೆಂಬ ತಾಯಿ ಮುಂದೆ ಬಂದಿರ್ಪಳು ನೋಡಾ. ಇಂತೀ ಎರಡಿಲ್ಲದ ಕೂಸನೆತ್ತಬಲ್ಲಡೆ ಅವರನಚ್ಚ ಶೀಲವಂತರೆಂಬೆ ಕಾಣಾ ಗುಹೇಶ್ವರಾ.

( ೫ ). ಶೀಲವಂತನಾದೊಡೆ, ಪ್ರಪಂಚನಾಸ್ತಿಯಾಗಿರಬೇಕು. ಸೀಮೆಯಾದೊಡೆ, ಪಂಚೇಂದ್ರಿಯಂಗಳು ನಾಸ್ತಿಯಾಗಿರಬೇಕು. ತನ್ನ ಕರ್ತುವಿನಲ್ಲಿ ಸಕಲ ಸಂಶಯ ನಾಸ್ತಿಯಾದ ಶೀಲಕ್ಕೆ ಭವಂ ನಾಸ್ತಿ. ಭ್ರಮೆನಾಸ್ತಿಯಾದಲ್ಲದೆ ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಶೀಲವಂತನೆನಿಸಬಾರದು. ಈ ವಂಚನೆಯ ಡಂಭಕ ಅಪಸ್ಮಾರಿಗಳಿಗೆಂತಯ್ಯ?

( ೬ ). ಶೀಲ ಶೀಲವೆಂದೇನೋ, ಪ್ರಪಂಚನಾಸ್ತಿಯಾಗದನ್ನಕ್ಕರ? ಸೀಮೆ ಸೀಮೆ ಎಂದೇನೋ, ಪಂಚೇಂದ್ರಿಯ ವಿರಹಿತವಾಗದನ್ನಕ್ಕರ? ಶೀಲಕ್ಕೆ

ಭವಂ ನಾಸ್ತಿ. ಸೀಮೆಗೆ ಭವಂ ನಾಸ್ತಿ. ಇದು ಕಾರಣ ಕೂಡಲಚನ್ನಸಂಗಯ್ಯ, ನಿಮ್ಮ ಶೀಲವಂತರಪೂರ್ವ.

(೭). ಶಿವನೇ ಗುರುವೆಂದು ಗುರುವಿಂಗೆ ತನುವನರ್ಪಿಸಿ, ಶಿವನೇ ಲಿಂಗವೆಂದು, ಲಿಂಗಕ್ಕೆ ಮನವನರ್ಪಿಸಿ, ಶಿವನೇ ಜಂಗಮನೆಂದು ಜಂಗಮಕ್ಕೆ ಧನವನರ್ಪಿಸಿ, ಆ ಗುರುಲಿಂಗ ಜಂಗಮದ ಘನ ಪ್ರಸಾದವ ಪಡೆದು, ನಿಜಮುಕ್ತಿಯ ನೈದಲರಿಯದೆ, ನನ್ನ ಶೀಲ ಹೆಚ್ಚು ತನ್ನ ಶೀಲ ಹೆಚ್ಚೆಂದು, ಕುಲಸೂತಕ ಛಲಗ್ರಾಹಕತೆಯಿಂದ ಒಬ್ಬರನೊಬ್ಬರ ಹಳಿದಾಡುವ ಶೀಲವಂತರ ಮೆಚ್ಚುವನೇ ನಮ್ಮ ಅಖಂಡೇಶ್ವರಾ?

(೮). ಶೀಲವಂತರೆಂದು ಶೀಲಸಂಪಾದನೆಯ ಮಾಡುವ ಕರ್ಮಿಗಳ ನೇನೆಂಬೆನಯ್ಯ? ಗುರುಭಕ್ತಿಯಿಂದೆ ತನುಶುದ್ಧವಾಗಲಿಲ್ಲ. ಲಿಂಗಪೂಜೆಯಿಂದೆ ಮನ ಶುದ್ಧವಾಗಲಿಲ್ಲ. ಜಂಗಮದಾಸೋಹದಿಂದ ಧನವು ಶುದ್ಧವಾಗಲಿಲ್ಲ. ಸಟೆಯ ಸಂಸಾರದ ಶರಧಿಯೊಳಗೆ ಮುಳುಗಿ, ಕುಟಿಲ ವ್ಯಾಪಾರವನಂಗೀಕರಿಸಿ, ನಾವು ದಿಟ ಶೀಲವಂತರೆಂದು ನುಡಿದುಕೊಂಬುವ ಘಟಿಂಗ ಭಂಡರವಿಧಿ ಎಂತಾಯಿತ್ತೆಂದೊಡೆ, ಹೆಂಡದ ಗಡಿಗೆಗೆ ವಿಭೂತಿ ಮಂಡಲವ ಬರೆದಂತಾಯಿತ್ತು ಕಾಣಾ ಅಖಂಡೇಶ್ವರಾ.

(೯). ಇಷ್ಟಲಿಂಗದಲ್ಲಿ ತನುವಡಗಿ, ಪ್ರಾಣಲಿಂಗದಲ್ಲಿ ಮನವಡಗಿ, ಭಾವಲಿಂಗದಲ್ಲಿ ಜೀವವ ನಿಕ್ಷೇಪಿಸಿ, ಆ ಇಷ್ಟಪ್ರಾಣ ಭಾವಲಿಂಗ ಒಂದಾದ ಮಹಾಘನ ಪರಬ್ರಹ್ಮದಲ್ಲಿ ತಾನಡಗಿ, ತಾನೆಂಬ ನೆನಹಡಿಗಿ, ದ್ವಂದ್ವಕರ್ಮಂಗಳ ನೀಗಿ, ಆ ಪರಿಪೂರ್ಣ ಬ್ರಹ್ಮವೇ ತಾನಾದುದೇ ಮಹಾಶೀಲವಯ್ಯ ಅಖಂಡೇಶ್ವರಾ.

(೧೦). ಶೀಲವಂತನಾದರೆ ತಾಸವೆದು ಶೀಲವ ಮಾಡಬೇಕಯ್ಯ. ತಾನಿರ್ದಡೆಯಲ್ಲಿ ಸುಳಿದು ಮಾಡುವಶೀಲ ಕೊಟ್ಟು ಪೂಜಿಸುವ ಕೈಕೂಲಿತನವಿಲ್ಲ. ಪೂಜೆಯ ಫಲ ಕೊಡವಾಲಕರೆವ ಸುರಭಿಯಂತೆ. ಅಟ್ಟಿದರಟ್ಟುವ ಬೇಡಿ ಮರಗುವ ದಾಸಿಯ ಪದದಂತೆ, ತನ್ನುದರ ನಿಮಿತ್ಯವಿಡಿದು ಶೀಲ ಬೇಕೆಂಬ ದುಶ್ಶೀಲರ ಮೆಚ್ಚುವನೇ ಸಕಳೇಶ್ವರಾ?

# ತಾಮಸಶೀಲವ್ರತನೇಮಗಳನ್ನು ಪಾಲಿಸಬೇಡ.

(೧). ಹಾಲ ನೇಮ ಹಿಡಿದವರು ಬೆಕ್ಕಾಗಿ ಹುಟ್ಟುವರು. ಕಡಲೆಯ ನೇಮ ಹಿಡಿದವರು ಕುದುರೆಯಾಗಿ ಹುಟ್ಟುವರು. ಪುಷ್ಪದ ನೇಮ ಹಿಡಿದವರು ತುಂಬಿಯಾಗಿ ಹುಟ್ಟುವರು. ಅಗ್ಗವಣೆಯ ನೇಮ ಹಿಡಿದವರು ಕಪ್ಪೆಯಾಗಿ ಹುಟ್ಟುವರು. ಷಟ್‌ಸ್ಥಳಕ್ಕೆ ಹೊರಗು. ಭಕ್ತಿನಿಷ್ಠೆ ಇಲ್ಲದವರ ಕಂಡಡೆ, ಮೆಚ್ಚ ಗುಹೇಶ್ವರನು.

(೨). ಸುಖವನರಿಯದೆ ಹೆಂಗಸು ಸೂಳೆಯಾದಳು. ಶಿವಲಿಂಗವನರಿಯದ ಕಾರಣ, ಭಕ್ತ ಶೀಲವಂತನಾದ. ಈ ಉಭಯ ಕುಲಸ್ಥಲದರಿವು ನಿಷ್ಪತ್ತಿಯಾಗದನ್ನಕ್ಕರ, ಕೂಡಲಚನ್ನಸಂಗಮದೇವನೆಂತೊಲಿವನು?

(೩). ನೇಮಸ್ಥನೆಂಬ ಕರ್ಮಿ, ಶೀಲವಂತನೆಂಬ ಸಂದೇಹಿ, ಭಾಷ್ಯವಂತನೆಂಬ ಬ್ರಹ್ಮೇತಿಕಾರ, ಇವರು ಮೂವರು ಕುಳಿತಲ್ಲಿ ಕುಳ್ಳಿರಲಾಗದು, ನಿಂದಲ್ಲಿ ನಿಲ್ಲಲಾಗದು, ಹೋಹಬಟ್ಟೆಯಲ್ಲಿ ಹೋಗಲಾಗದು. ಇವರು ಮೂವರಿಗೆ ಗುರುವಿಲ್ಲ, ಲಿಂಗವಿಲ್ಲೆಂದಾತ ನಮ್ಮ ಅಂಬಿಗರಚೌಡಯ್ಯ.

(೪). ಮಡಕೆ ತುಂಬಿ ಪಾವುಡವಕಟ್ಟುವರಲ್ಲದೆ, ಸರ್ವಾಂಗವನು ಸದಾಚಾರವೆಂಬ ಪಾವುಡದಲ್ಲಿ ಕಟ್ಟುವರನಾರನು ಕಾಣೆನಯ್ಯ. ಬಾಯ ತುಂಬಿ ಬಿಗಿಬಿಗಿದು ಪಾವುಡವ ಕಟ್ಟುವರಲ್ಲದೆ, ಮನದ ಬಾಯ ಅರುಹೆಂಬ ಪಾವುಡದಲ್ಲಿ ಕಟ್ಟುವರನಾರನು ಕಾಣೆನಯ್ಯ. ಮುಖ ತುಂಬಿ ಪಾವುಡವ ಕಟ್ಟುವರಲ್ಲದೆ ಮೂಗು ಹೋದವರಂತೆ, ಭಾವ ತುಂಬಿ, ನಿರ್ವಾಣವೆಂಬ ಪಾವುಡವ ಕಟ್ಟುವರನಾರನೂ ಕಾಣೆನಯ್ಯ. ಅಂಗ ಆಚಾರದಲ್ಲಿ ಸಾವಧಾನವಾಗದೆ, ಮನ ಅರುಹಿನಲ್ಲಿ ಸಾವಧಾನವಾಗದೆ, ಭಾವನಿರ್ವಾಣದಲ್ಲಿ ಸಾವಧಾನವಾಗದೆ, ಬರಿದೆ ಶೀಲವಂತರು ಶೀಲವಂತರು ಎಂದೆನಯ್ಯ. ತನುಮನದ ಅವಗುಣವೆಂಬ ಭವಿಯ ಕಳೆಯದೆ, ಹೊರಗೆ ವ್ರತಿಗಳೆಂದರೆ, ಆರು ಮೆಚ್ಚುವರಯ್ಯ? ಹುಚ್ಚರಿರ, ಸುಮ್ಮನಿರಿ. ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ.

(೫). ಅಗ್ಗಣಿ ಮಿಾಸಲಾಗಿರಬೇಕೆಂಬುದು ಶೀಲವೇ? ಪುಷ್ಪಮಿಾಸಲಾಗಿರಬೇಕೆಂಬುದು ಶೀಲವೇ? ಓಗರ ಮಿಾಸಲಾಗಿರಬೇಕೆಂಬುದು ಶೀಲವೇ?

ಇವು ಶೀಲವಲ್ಲ ಕಾಣಿರೋ? ಪಂಚೇಂದ್ರಿಯ ಷಡುವರ್ಗ, ಸಪ್ತ ಧಾತು, ಅಷ್ಟಮದಂಗಳ ತಡೆಯ ಬಲ್ಲಡೆ, ಕೂಡಲಚನ್ನಸಂಗಯ್ಯನಲ್ಲಿ ಅದೇ ಅಚ್ಚಶೀಲ.

(೬). ಭಕ್ತರ ಮಠಕ್ಕೆ ಹೋಗಿ, ಒಳಹೊರಗೆಂಬುದು ಶೀಲವೇ? ನಮ್ಮ ಲಿಂಗಕ್ಕೆ ಒಳ್ಳೆಯ ಅಗ್ಗಣಿಯ ತನ್ನಿ, ಒಳ್ಳೆಯ ಪುಷ್ಪವ ತನ್ನಿ, ಒಳ್ಳೆಯ ಓಗರವ ಮಾಡಿರಿ, ಎಂಬುದು ಶೀಲವೇ? ಅಲ್ಲ. ಪಂಚೇಂದ್ರಿಯ ಸಪ್ತಧಾತು, ಅರಿಷಡ್ವರ್ಗ, ಅಷ್ಟಮದವ ಕೊಂದಾತ ಶೀಲವಂತ ಕೂಡಲಚನ್ನಸಂಗಮದೇವಾ.

(೭). ಚಲುಮೆ ಅಗ್ಗಣಿಯ ಬಿಟ್ಟರೇನೋ, ಸಂಸಾರ ಸೊಕ್ಕು ಉಕ್ಕು ಮುರಿಯದನ್ನಕ್ಕರ? ಪರಿಮಳಾದಿಗಳ ಬಿಟ್ಟರೇನೋ, ಮಾಯಾ ದುರ್ವಾಸನೆಯ ವಿಸರ್ಜಿಸದನ್ನಕ್ಕರ? ಸಪ್ಪಟೆಯನುಂಡರೇನೋ, ಸ್ತ್ರೀಯರ ಅಪ್ಪುಗೆ ಬಿಡದನ್ನಕ್ಕರ? ಅದೇ ತರ ಶೀಲ, ಅದೇ ತರ ವ್ರತ, ಮರುಳೇ? ಅಂಗ ಆಚಾರ ಲಿಂಗವಾಗಿ, ಮನವು ಅರಿವು ಸಂಬಂಧವಾಗಿ, ಸರ್ವ ದುರ್ಭಾವ ಚರಿತ್ರವೆಲ್ಲ ಕೆಟ್ಟು, ಸದ್ಭಾವ ನೆಲೆಗೊಂಡ ಸದ್ಭಕ್ತನ ಸುಶೀಲಕ್ಕೆ ನಮೋ ನಮೋ ಎಂಬೆನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೮). ಬಹು ಜಲಮಂಬಿಟ್ಟು, ಚಲುಮೆಯಂ ತೆಗೆದರೆ, ಎದು ನೆಲ ಶುದ್ಧ ಸೌಕರ್ಯವಲ್ಲದೆ, ಅದು ಶೀಲವಲ್ಲ. ಉಪ್ಪ ಬಿಟ್ಟು, ಸಪ್ಪೆಯನುಂಡರೆ, ಅದು ಮನದ ಹೇಸಿಕೆಯಲ್ಲದೆ, ದೃಢವ್ರತವಲ್ಲ. ವ್ರತ ನಿಶ್ಚಯವಾದರೆ, ಪರಸ್ತ್ರೀ, ಪರಧನ, ಪರದೂಷಣೆಯನರಿತು ಬಿಟ್ಟರೆ, ಅರುವತ್ತಾರು ವ್ರತ ಕಡಿ ಎಂದೆ, ಕಲಿದೇವರದೇವಾ.

(೯). ಮನ ಅರೋಚಕವಾದಲ್ಲಿ, ಲವಣವಾದಿಯಾಗಿ ಪರಪಾಕ ಮುಂತಾದ ರಸದ್ರವ್ಯವನೊಲ್ಲದಿಪ್ಪುದು ವ್ರತವೇ? ಅಲ್ಲ, ಅದು ಸೌಕರ್ಯವಲ್ಲದೆ? ಅದೆಂತೆಂದೊಡೆ, ಪರದ್ರವ್ಯ, ಪರಸತಿ, ಹುಸಿ, ಕೊಲೆ, ಕಳವು, ಅತಿಕಾಂಕ್ಷೆಯಂ ಬಿಟ್ಟು, ಬಂದುದ ನಿಂದಂತೆ ಕಂಡು, ಬಾರದುದಕ್ಕೆ ಆಕಾಂಕ್ಷೆಯ ಮಾಡದಿಪ್ಪುದೇ ಅರವತ್ತುನಾಲ್ಕು ವ್ರತ, ಐವತ್ತಾರು ಶೀಲ, ಮೂವತ್ತೆರಡು ನೇಮ ಸಂದಿತ್ತು, ಈಶಾನ್ಯ ಮೂರ್ತಿಮಲ್ಲಿಕಾರ್ಜುನಲಿಂಗದಲ್ಲಿ ಸರ್ವ ನೇಮ ಸ್ವಯಂಭುವಾಯಿತ್ತು.

(೧೦). ನಿತ್ಯ ಚಲುಮೆಯ ತೋಡುವಾತಂಗೆ, ಉಚ್ಚಿಯ ಭಚ್ಚಲ ತೋಡಲಾಗದು. ಭಕ್ತರನಲ್ಲದೆ, ಭವಿಗಳ ಬೇಡೆನೆಂಬಾತಂಗೆ ಅಚ್ಚೊತ್ತಿದ ಲಕ್ಷ್ಮಿಯ ಮುದ್ರೆಯ ಹಿಡಿಯಲಾಗದು. ಕೊಂಡ ವ್ರತಕ್ಕೆ ಸಂದೇಹ ಕುಳ್ಳಿರೆ, ಅಂಗವ ಹೊರಲಾಗದು. ಇಂತಿವನರಿಯದೆ, ನಾವು ವ್ರತಸ್ಥರೆಂದು ಕೊಂಡಾಡುತಿಪ್ಪ ಭಂಡರನೊಪ್ಪ ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗವು.

(೧೧). ಶೀಲ ಶೀಲವೆಂತೆಂಬಿರಯ್ಯಾ. ಶೀಲದನೆಲೆಯ ಬಲ್ಲರೆ ಹೇಳಿರೋ. ಅರಿಯದಿರ್ದಡೆ ಕೇಳಿರೋ. ಕಾಮ ಒಂದು ಭವಿ, ಕ್ರೋಧ ಎರಡನೇ ಭವಿ, ಲೋಭ ಮೂರನೇ ಭವಿ, ಮೋಹ ನಾಲ್ಕನೇ ಭವಿ, ಮದ ಐದನೇ ಭವಿ, ಮತ್ಸರ ಆರನೇ ಭವಿ, ಆಮಿಷ ಏಳನೇ ಭವಿ, ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು, ಲಿಂಗವಿಲ್ಲದವರ ಭವಿ, ಭವಿ, ಎಂಬರು. ತಮ್ಮಂತರಂಗದಲ್ಲಿರ್ದ್ದ ಲಿಂಗಾಂಗದಸುದ್ಧಿಯನರಿಯದೆ, ಅಚ್ಚಪ್ರಸಾದಿ, ನಿಚ್ಚಪ್ರಸಾದಿ, ಸಮಯ ಪ್ರಸಾದಿಗಳೆಂದು, ಜಲಕ್ಕೆ ಕನ್ನವನಿಕ್ಕಿ, ಉದಕವ ತಂದು, ಲಿಂಗಕ್ಕೆ ಮಜ್ಜನಕ್ಕೆರೆವ ಪಗಲುಗಳ್ಳರಿಗೆ ಮೆಚ್ಚುವನೇ ನಿಃಕಳಂಕಚನ್ನಮಲ್ಲಿಕಾರ್ಜುನಾ?

(೧೨). ಜಲನಿಧಿ ತಟಾಕದಲ್ಲಿ ಕನ್ನವನಿಕ್ಕಿ ಉದಕವ ತಂದು, ಮಜ್ಜನಕ್ಕೆರೆವರೆಲ್ಲ ಶೀಲವಂತರೇ? ಭವಿ ಪಾಕವನೊಲ್ಲೆವೆಂದು ಭುಂಜಿಸುವ ಉದರ ಪೋಷಕರೆಲ್ಲ ಶೀಲವಂತರೇ? ಅವರಲ್ಲ, ನಿಲ್ಲು, ಮಾಣು. ಅಶನವರತು, ವ್ಯಸನಬೆಂದು, ವ್ಯಾಪ್ತಿಗಳು ಅಲ್ಲಿಯೇ ತಲ್ಲೀಯ್ಯವಾಗಿ, ಅಷ್ಟಮದಬೆಂದು ನಷ್ಟವಾಗಿ, ತನುಗುಣ ಸಮಾಧಾನವಾದಡೆ, ಕೂಡಲಚನ್ನಸಂಗಯ್ಯನಲ್ಲಿ ಅಚ್ಚಶೀಲವಂತರೆಂಬೆ.

(೧೩). ಭಿನ್ನದೈವವುಳ್ಳ ಭಕ್ತನ ಮನೆಯಾರೋಗಣೆಯು ಅನ್ಯಾಹಾರವಯ್ಯಾ. ನಂಬಿಗೆ ಇಲ್ಲದ ಭಕ್ತನ ಮನೆಯಾರೋಗಣೆ ಸಂದೇಹದ ಕೂಳು. ಕೊಟ್ಟು, ಕೊಂಡು, ನೀಡಿ, ಮಾಡಿ, ಹಮ್ಮು ನುಡಿವ ಭಕ್ತನ ಮನೆಯಾರೋಗಣೆ ಕಾರಿದ ಕೂಳು. ನಿಮ್ಮ ನಂಬಿದ ಸದ್ಭಕ್ತರ ಮನೆಯಾರೋಗಣೆ ಲಿಂಗಾರ್ಪಿತವಯ್ಯಾ. ಅದೆಂತೆಂದೊಡೆ, ಸದಾಚಾರ, ಶಿವಾಚಾರ, ಲಿಂಗಾಚಾರ, ಗಣಾಚಾರ, ಭೃತ್ಯಾಚಾರ, ಸತ್ಕಾಯಕದಿಂದೆ ಬಂದುದಾಗಿ, ಭಕ್ತಿಪದಾರ್ಥವಯ್ಯಾ. ಕೂಡಲಚನ್ನಸಂಗಮದೇವಾ.

(೧೪). ನದಿಜಲ, ಕೂಪಜಲ, ತಟಾಕಜಲವೆಂಬರು. ಹಿರಿದು ಕಿರಿದ ನರಿಯರು. ಬೇರೆ ಮತ್ತೊಂದು ಭಾಷೆ ವ್ರತ ನೇಮಂಗಳ ಹಿಡಿದ ಶೀಲ ಸಂಬಂಧಿಗಳು ಜಾತ್ಯಂಧಕರು ನಿಮ್ಮ ನೆತ್ತಬಲ್ಲರು ಗುಹೇಶ್ವರಾ?

(೧೫). ಶೀಲ, ಶೀಲವೆಂದು ಗರ್ವಿತದಲ್ಲಿ ನುಡಿವ ಉದ್ದೇಶಿ ಪ್ರಾಣಿಗಳು ಅನಂತಶೀಲರು. ಹೂ, ಭಾವಿ, ಮಠಕ್ಕೆ ಸೀಮೆಯ ಮಾಡಿದಡದು ಶೀಲವಲ್ಲ. ತನ್ನ ಮನಕ್ಕೆ ಸೀಮೆಯ ಮಾಡುವುದು ಶೀಲ. ಹುಸಿಯ ಕಳೆವುದು ಶೀಲವಲ್ಲದೆ, ಭಕ್ತರ ಕಳೆವುದು ಶೀಲವೇ? ಲಿಂಗಪ್ರಾಣಿಗಳನ ಮಾಡುವದು ಶೀಲವಲ್ಲದೆ, ಪ್ರಾಣಲಿಂಗಿಗಳವ ಮಾಡುವದು ಶೀಲವೇ? ಇಂತೆಲ್ಲ ಶೀಲರು ದುಶ್ಶೀಲರಾದರು. ಸಕಳೇಶ್ವರದೇವಾ ನಾನೇನೆಂದರಿಯೆ; ಎನ್ನ ನಿರಿಸಿದಂತಿರ್ಪೆ.

(೧೬). ಶೀಲಶೀಲವೆಂಬುದೇನೋ? ಮಾಡಿದ ಮನೆ, ಹೂಡಿದ ಒಲೆ, ಅಟ್ಟುಂಬ ಮಡಿಕೆ, ಕಟ್ಟಿದ ಕೆರೆ, ಬಿತ್ತಿದ ಹೊಲಕ್ಕೆ ಶೀಲವಲ್ಲದೆ, ತನ್ನ ಮನಕ್ಕೆ ಶೀಲವಿಲ್ಲ. ಶೀಲವಾವುದೆಂದಡೆ, ಲಿಂಗ ಬಂದು ಮನವನಿಂಬುಗೊಂಬುದೇ ಶೀಲ. ಜಂಗಮ ಬಂದು ಧನವನಿಂಬುಗೊಂಬುದೇ ಶೀಲ. ಪ್ರಸಾದ ಬಂದು ತನುವನಿಂಬುಕೊಂಬುದೇ ಶೀಲ. ಇಂತಪ್ಪ ಶೀಲಕ್ಕೆ ನಮೋ ನಮೋ ಎಂಬೆ. ಉಳಿದದುಶ್ಶೀಲರ ಕಂಡರೆ, ಮೆಚ್ಚುವನೇ ನಮ್ಮ ಕೂಡಲಚನ್ನಸಂಗಯ್ಯ?

(೧೭) ಶೀಲ ಶೀಲವೆಂದು ನುಡಿವುತಿರ್ಪರೆಲ್ಲರು ಶೀಲದ ಹೊಲಬನಾರೂ ಅರಿಯರಲ್ಲಾ. ಕೆರೆ, ಭಾವಿ, ಹಳ್ಳ, ಕೊಳ್ಳ, ಹೊಳೆಗಳ ನೀರ ಬಳಸದಿರ್ದೊಡೆ, ಶೀಲವೇ? ಕೊಡಕ್ಕೆ ಪಾವುಡ ಹಾಕಿ, ಚಿಲುಮೆ ಸಿತಾಳ ತಂದರೆ, ಇದು ಶೀಲವೇ? ಬೆಳೆದ ಬೆಳಸು ಕಾಯಿ ಹಣ್ಣುಗಳ ಬಿಟ್ಟರೆ ಶೀಲವೇ? ಉಪ್ಪು ಎಣ್ಣೆ, ಹಾಲು, ತುಪ್ಪ, ಇಂಗು, ಮೆಣಸು, ಅಡಿಕೆ, ಬೆಲ್ಲಗಳ ಬಿಟ್ಟರೆ, ಶೀಲವೇ? ಪರಪಾಕವ ಬಿಟ್ಟು, ಸ್ವಯಂಪಾಕದಲ್ಲಿದ್ದರೇ, ಶೀಲವೇ? ಭವಿಯ ಕಾಣದಂತಿರ್ದಡೆ, ಶೀಲವೇ? ಅಲ್ಲಲ್ಲ. ಅದೇನು ಕಾಣವೆಂದಡೆ, ಇಂತಿವೆಲ್ಲವು ಹೊರಗಣ ವ್ಯವಹಾರವು. ಇನ್ನು ಅಂತರಂಗದ ಅರಿಷಡ್ವರ್ಗಂಗಳೆಂಬ ಭವಿಗಳ ಕಳೆಯಲಿಲ್ಲ. ಮಾಯಾಮೋಹ ಬೆಳೆ ಉಳಗುನ್ನಿಯ ಬಿಡಲಿಲ್ಲ. ಸಂಸಾರವಿಷಯರಸವೆಂಬ ಹಳ್ಳಕೊಳ್ಳ, ಕೆರೆಬಾವಿಗಳಗಲಲಿಲ್ಲ. ಅಷ್ಟಮದಗಳೆಂಬ ಉಪ್ಪು ಎಣ್ಣೆ ತುಪ್ಪ ಹಾಲು ಇಂಗು ಮೆಣಸು ಅಡಿಕೆ ಬೆಲ್ಲಗಳ ಬಿಡಲಿಲ್ಲ. ಸಕಲ ಕರಣಂಗಳೆಂಬೆಳೆ

ಸ್ಥಲಂಗಳ ಬಿಡಲಿಲ್ಲ. ಮನವೆಂಬ ಕೊಡಕ್ಕೆ ಮಂತ್ರವೆಂಬ ಪಾವುಡವ ಮುಚ್ಚ ಲಿಲ್ಲ. ಚಿತ್ಕೊಡನೆಂಬ ಚಿಲುಮೆಯಲ್ಲಿ ಚಿದಮೃತವೆಂಬ ಸಿತಾಳವ ತಂದು, ಚಿನ್ಮ ಯಲಿಂಗಕ್ಕೆ ಅಭಿಷೇಕವ ಮಾಡಲಿಲ್ಲ. ಇಂತೀ ಅಂತರಂಗದ ವಿಚಾರವನರಿ ಯದೆ, ಹಾಳಸಂಕಲ್ಪದಿಂದೆ ಬಹಿರಂಗದ ಪದಾರ್ಥಂಗಳ ಬಿಟ್ಟು, ಮುಕ್ತಿಯ ಪಡೆ ವೆನೆಂಬ ಯುಕ್ತಿಗೇಡಿಗಳಿಗೆ ಭವಬಂಧನಗಳು ಹಿಂಗಲಿಲ್ಲ. ಜನನ ಮರಣಂಗಳು ಜಾರಲಿಲ್ಲ. ಸಂಸಾರ ಮಾಯಾ ಮೋಹವ ನೀಗಲಿಲ್ಲ. ಇಂತಪ್ಪ ಅಜ್ಞಾನಿಗಳ ವಿಧಿ ಎಂತಾಯಿತ್ತೆಂದಡೆ, ಹುತ್ತದೊಳಗಣ ಹಾವು ಕೊಲ್ಲುವೆನೆಂದು, ಮೇಲೆ ಹುತ್ತವ ಬಡಿಯುವ ಮರುಳನಂತಾಯಿತ್ತು ನೋಡಾ ಅಖಂಡೇಶ್ವರಾ.

(೧೮). ಶೀಲವಂತರು ಲಕ್ಷ ಲಕ್ಷ. ನೇಮಸ್ಥರು ಲಕ್ಷ ಲಕ್ಷ. ಅರ್ಥ ಪ್ರಾಣಾಭಿಮಾನವನರ್ಪಿಸಿದ ವೈರಾಗಿಗಳು ಲಕ್ಷ ಲಕ್ಷ. ಕೂಡಲಚನ್ನಸಂಗಯ್ಯ ನಲ್ಲಿ, ಇವರೆಲ್ಲರೂ ಛಲಸಾಧಕರಲ್ಲದೆ, ಲಿಂಗಸಾಧಕರಾರೂ ಇಲ್ಲ.

(೧೯). ಕೇಳಿದಿರಯ್ಯ ಮಾನುವರೇ. ನಮಗೆ ಇನ್ನೊಬ್ಬರ ಎಂಜಲು ಸೇರದು, ನಾನು ಸ್ವಚ್ಛವುಳ್ಳವನು, ಎಂದು ನುಡಿದುಕೊಂಬುವ ಮಾತಿನ ರಂಜ ಕರು ನೀವು ಕೇಳಿರಣ್ಣ. ನೀವು ಕುಡಿಯುವ ನೀರು ಜಲಚರದೆಂಜಲು, ಮೃಗ ಪಶುಪಕ್ಷಿ ಎಂಜಲು; ಆ ನೀರು ತಂದು ಮುಖಮಜ್ಜನವ ಮಾಡುವಲ್ಲಿ, ಜಿಹ್ವೆ ಮುಕ್ಕಳಿಸುವಲ್ಲಿ ಮಾನವರ ಎಂಜಲು, ಇಂತೀ ಹಲವು ಎಂಜಲದಿಂದೆ ಬೆಳೆದ ಸಕಲ ಪದಾರ್ಥವನು ನಲಿನಲಿದುಂಡು ಶೀಲದಲ್ಲಿ ಸಂಪನ್ನರೆನಿಸಿದರೆ, ಇದು ಶೀಲವೇ? ಇದೇ ಧಾನ್ಯವನು ಉದಕವನು ಶಿವಮಂತ್ರದಿಂದೆ ಹಸ್ತಸ್ಪರ್ಶವ ಮಾಡಿ ಭೋಜನವ ಮಾಡಲಿಕ್ಕೆ ಕೊಟ್ಟುಕೊಂಬುವಲ್ಲಿ ಗುರುಪ್ರಸಾದವಾಯಿ ತ್ತು. ಇಂಥ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಕೊಂಬುವ ಶಿವಭಕ್ತನೀಗ ಸರ್ವ ಎಂಜಲದ ಹೊಲೆಯುತನವ ನೀಗುವನು. ಈ ಆಚಾರವನರಿಯದೆ, ಹಲವು ಹೊಲೆ ಯೊಳಗೆ ಮುಳುಮುಳುಗಿ ತಿಂದು ಭವಕ್ಕೊಳಗಾಗುವವರಿಗೆ ಗುರುವಿಲ್ಲ, ಲಿಂಗ ವಿಲ್ಲ, ಜಂಗಮವಿಲ್ಲ, ಅಘೋರ ನರಕಕ್ಕೆ ಹೋಗುವರೆಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

———

# § ಏಕಲಿಂಗನಿಷ್ಠೆಯುಳ್ಳವನಾಗಿರು.

## (೧) ಅನ್ಯದೇವತೆಗಳನ್ನು ಭಜಿಸಬೇಡ.

(೧). ಶ್ರೀಗುರುಸ್ವಾಮಿ ಕರುಣಿಸಿಕೊಟ್ಟ ಇಷ್ಟಲಿಂಗವನ್ನು ಉರದಲ್ಲಿ ಧರಿಸಿಕೊಂಡು, ಅದು ದೇವರೆಂದು ನಂಬದೆ, ಧರೆಯ ಮೇಲೆ ಕಂಡ ಕಂಡ ದೇವರ ಕಂಡು, ಕಲ್ಪಿಸಿ, ಹರಿದಾಡುವ ಭಂಡ ಮಾದಿಗರ ಭಕ್ತರೆಂದರೆ, ಅಘೋರನರಕ ತಪ್ಪದಯ್ಯ ಅಖಂಡೇಶ್ವರಾ.

(೨). ಭಾವದಲೊಬ್ಬ ದೇವರ ಮಾಡಿ, ಮನದಲೊಂದು ಭಕ್ತಿಯ ಮಾಡಿ, ಕಾಯದ ಕಯ್ಯಲ್ಲಿ ಮತ್ತೊಂದು ಭಕ್ತಿಯ ಮಾಡಿ, ವಾಯಕ್ಕೆ ಬಳಲುವರು ನೋಡಾ. ಎತ್ತನೇರಿ, ಎತ್ತ ನರಸುವರು, ಎತ್ತ ಹೋದಿರೈ ಗುಹೇಶ್ವರಾ?

(೩). ಜೀವವಿಲ್ಲದ ಹೆಣವ ಹಿಡಿದಾಡುವರಯ್ಯ. ಪ್ರತಿ ಇಲ್ಲದ ಪ್ರತಿಗೆ ಪ್ರತಿ ಮಾಡುವರಯ್ಯ. ಶಿರವಿಲ್ಲದ ಮುಂಡಕ್ಕೆ ಸೆರೆಯನಿಕ್ಕುವರಯ್ಯ ಗುಹೇಶ್ವರಾ.

(೪). ಒಡಲುವಿಡಿದು ವಾಯಕ್ಕೆ ಹಂಗಿಗರಾದಿರಲ್ಲಾ. ಅಂಗಸಂಗಿಗಳೆಲ್ಲ ಮಹಾಘನವನರಿಯದೆ ಹೋದಿರೋ. ಹುಸಿಯನೆ ಕೊಯ್ದು, ಹುಸಿಯನೆ ಪೂಜಿಸಿ, ಗಸಣಿಗೊಳಗಾದರು, ಗುಹೇಶ್ವರಾ.

(೫). ಕಲ್ಲು ಲಿಂಗವಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು. ಮರ ದೇವರಲ್ಲ, ಉರಿಯಲ್ಲಿ ಬೆಂದಿತ್ತು. ಮಣ್ಣು ದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು. ಇಂತಿವನೆಲ್ಲವ ನರಿವಚಿತ್ತ ದೇವರಲ್ಲ, ಕರಣಂಗಳ ಮೊತ್ತದೊಳಗಾಗಿ, ಸತ್ತಗೆಟ್ಟಿತ್ತು. ಇಂತಿವ ಕಳೆದುಳಿದು ವಸ್ತುವಿಪ್ಪೆಡೆ ಯಾವುದೆಂದಡೆ, ಕಂಡವರೊಳಗೆ ಕೈಕೊಂಡಾಡದೆ, ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಬೆರೆಯದೆ, ವಿಶ್ವಾಸ ಗ್ರಹಿಸಿ ನಿಂದಲ್ಲಿ, ಆ ನಿಜಲಿಂಗವಲ್ಲದೆ, ಮತ್ತೊಂದ ಪೆರತನರಿಯದೆ, ನಿಂದಾತನೇ ಸರ್ವಾಂಗಲಿಂಗಿ, ವೀರಬೀರೇಶ್ವರಲಿಂಗದೊಳಗಾದ ಶರಣ.

---

§ ಈ ವಿಷಯಕ್ಕೆ ಸಂಬಂಧಿಸಿದ ಕೆಳಗಿನ ವಚನಗಳೊಡನೆ ಪಾನು ೨೬ ರಿಂದ ೩೪ರವರೆಗೆ ಇರುವ ವಚನಗಳನ್ನೂ ಅವಲೋಕಿಸಬೇಕು.

(೬). ಹಲವು ಕೊಂಬೆಗೆ ಹಾಯಲು ಬೇಡ. ಬರು ಕಾಯಕೆ ನೀಡ ಬೇಡ. ಲೋಗರಿಗೆ ಕೊಟ್ಟು, ಭ್ರಮಿತನಾಗಬೇಡ. ಆಚಾರವೆಂಬುದೊಂದು ಹಾವಸಿಗಲ್ಲು. ಭಾವತಪ್ಪಿದ ಬಳಿಕ ಏಗೈದಡಾಗದು. ಅಂಜದಿರು, ಅಳುಕದಿರು, ಪರದೈವಕ್ಕೆರಗದಿರು. ಕೂಡಲ ಸಂಗಮದೇವರ ಕಯ್ಯಲ್ಲಿ ಇರಿಸುವದೆನ್ನ ಭಾರ.

(೭). ಸೋಮವಾರ ಉಪವಾಸವಿದ್ದು, ಶಿವಂಗೆ ಅರ್ಪಿತವೆಂಬರು. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರವಳಿದು, ಗ್ರಾಮದ ಅನ್ಯ ಹೊಲ್ಲ ದೈವವನಾರಾಧಿಸಿ, ಅವಕಿಕ್ಕಿ, ಮಿಕ್ಕ ಕೂಳ ಸೋಮಧರಿಗೆ ಅರ್ಪಿತ ವೆಂಬರು. ಅದೆಂತೆಂದೊಡೆ, ಗ್ರಾಮದ ಶುನಕ ಗಂಗೆಯನೀಸಾಡ ಹೋಗಿ, ಶುದ್ಧಾಗಬಲ್ಲುದೇ? ಆ ಶುನಕನ ಮುಖವ ನೋಡಲಾಗದೆಂತಾದ ನಮ್ಮ ಕಲಿ ದೇವರದೇವಯ್ಯನು.

(೮). ಕೆರೆ ದೇಗುಲಂಗಳೆಲ್ಲವು ಹಿಂದಣ ಆದಿ. ವಜಿಗೊಳಿಸು. ಕರ್ಮ ಕಾಂಡಯೋಗಂಗಳೆಲ್ಲವು ಭವದ ತೆಕ್ಕೆಗೆ ಒಳಗು. ಹಿಂದಣ ಮುಂದಣ ಸಂದ ನಳಿದು ಗುಹೇಶ್ವರಲಿಂಗದಲ್ಲಿ ಸಂದಿರಬೇಕು, ಸಿದ್ಧರಾಮಯ್ಯ.

(೯). ದಾಸನ ಕುಲವಾದಾತ ಈಶಂಗಲ್ಲದೆ ಶರಣೆನ್ನ. ಆಸೆ ಮಾಡ ನೋಡಾ, ಅನ್ಯ ದೈವಂಗಳಿಗೆ. ದೇಶದ ಪಿಶಾಚಂಗಳಿಗೆ ಆಸೆ ಮಾಡನೋಡಾ. ಆಸೆಮಾಡಿದನಾದಡೆ, ಅವ ದಾಸನ ಕುಲವಲ್ಲ, ಅವ ಅನ್ಯ ಕುಲ, ಕಾಣಾ ರಾಮನಾಥಾ.

(೧೦). ಈಶ, ನಿಮ್ಮ ಪೂಜಿಸಿದ ಬಳಿಕ, ಅನ್ಯ ದೈವಂಗಳಿಗೆ ಹೇಸಿರ ಬೇಕು. ಹೇಸದೆ, ಅನ್ಯ ದೈವಕ್ಕಾಸೆ ಮಾಡಿದರೆ, ಅವ ನಮ್ಮ ಈಶ್ವರಂಗೆ ಹೊರಗು. ದೋಷರಹಿತ ಭಕ್ತರು ಅವಂಗೆ ಕುಲವೆಂದು ಕೂಸ ಕೊಟ್ಟು ಕೂಡುಂಡರೆ ಮೊಸಲಬೋನ ನಾಯಿ ಮುಟ್ಟಿದಂತೆ, ಕಾಣಾ ರಾಮನಾಥಾ.

(೧೧). ಕರಸ್ಥಲದಲ್ಲಿದ್ದ ಲಿಂಗವ ಬಿಟ್ಟು ಧರೆಯ ಮೇಲಣ ಪ್ರತಿಮೆಗೆ ಎರಗುವ ನಾಯಕನರಕಿಗಳನೇನೆಂಬೆನಯ್ಯ, ಪರಮ ಗುರುಶಾಂತಮಲ್ಲಿ ಕಾರ್ಜುನಾ?

(೧೨). ಉತ್ತಮಾಂಗವೆನಿಸುವ ಶಿರಸ್ಸಿಂಗೆ ನಿತ್ಯವಿದೆಂದು ಹೇಳಿತ್ತು ವೇದ. ನೆಟ್ಟಗೆ ಶಿವನಡಿಗೆರಗುವದು, ಮತ್ತನ್ಯ ದೈವಕ್ಕೆರಗಲಾಗದೆಂದುದುವೇದ.

" ಓಂ ಯಸ್ಯೈನಮಃ ಸಚ್ಛಿರೋ ಧರ್ಮ ಮೂರ್ಧ್ನಿ ಪಾನಾಬ್ರಹ್ಮೋತ್ತರಾಹನು ಯಜ್ಞೋದರಾ ವಿಷ್ಣು ಹೃದಯಂ ಸಂವತ್ಸರ ಪ್ರಜನನಂ ॥ ಎಂದುದುಶೃತಿ. ಬಸವ ಪ್ರಿಯಕೂಡಲಚನ್ನಸಂಗಯ್ಯಂಗಲ್ಲದೆ, ಮತ್ತನ್ಯ ದೈವಕ್ಕೆರಗಿದಡೆ, ನಾಯಕ ನರಕ ತಪ್ಪದು.

(೧೩). ನಾಲಿಗೆಗೆ ಈ ವಿಧಿ ಎಂದು ಹೇಳಿತ್ತು ವೇದ, ಶಿವನನ್ನೇ ಹೊಗಳುವದು, ಮತ್ತನ್ಯ ದೈವಂಗಳ ಹೊಗಳಲಾಗದೆಂದುದು ವೇದ. ಓಂ ಸ್ತುಹಿಶೃತಂ ಗರ್ತ ಸದಂ ಯುವಾನಂ ಮೃಗಂ ನಭೀಮಮುಸ ಹರ್ತು ಮುಗ್ರಂ ಮೃಡಾ ಚರಿತ್ರೆ ರುದ್ರಸ್ತವಾಸ್ಯೋ ಅನ್ಯಂತ ಅಸ್ಮಿನ್ನಿವ ಸಂತುಸೇವಾಃ ॥ ಎಂದುದು ವೇದಶೃತಿ. ಬಸವಪ್ರಿಯಕೂಡಲಚನ್ನಸಂಗಯ್ಯನಲ್ಲದೆ, ಮತ್ತನ್ಯ ದೈವವ ಪೊಗಳಿದಡೆ, ನರಕ ತಪ್ಪದು.

(೧೪). ಜಾಗ್ರತ್ ಸ್ವಪ್ನಸುಷುಪ್ತಿಯಲ್ಲಿ ಮತ್ತೊಂದ ನೆನೆದಡೆ, ತಲೆದಂಡ, ತಲೆದಂಡ. ಹುಸಿದೆನಾದಡೆ, ದೇವಾ, ತಲೆದಂಡ, ತಲೆದಂಡ. ಕೂಡಲಸಂಗಮದೇವಾ, ನೀನಲ್ಲದೆ ಅನ್ಯವನೆನೆದಡೆ, ತಲೆದಂಡ, ತಲೆದಂಡ.

(೧೫). ಅಯ್ಯಾ, ಅಷ್ಟಾವರಣ ಪಂಚಾಚಾರವುಳ್ಳ ಸದ್ಭಕ್ತರ ಉದರದಲ್ಲಿ ಜನಿಸಿ, ಭವಿಸಂಗ ಮಾಡುವುದೇ ಪಾಪ. ಭವಿಸಂಗದಿಂದಲು, ಸುರಾಪಾನಿಯಸಂಗ ಪಾಪ. ಸುರಾಪಾನಿಯು ಸಂಗಕಿಂತಲು, ಮಾಂಸಾಹಾರಿಯು ಸಂಗ ಪಾಪ. ಮಾಂಸಾಹಾರಿಯು ಸಂಗಕಿಂತಲು, ಭಂಗೀಭಕ್ಷಕನ ಸಂಗ ಪಾಪ. ಭಂಗೀಭಕ್ಷಕನಸಂಗಕ್ಕಿಂತಲೂ, ನಾಶಿತಂಬಾಕು ಮಾಡುವವನ ಸಂಗ ಮಹಾಪಾಪ, ನಾಶಿತಂಬಾಕು ಮಾಡುವವನ ಸಂಗಕಿಂತಲು, ಅನ್ಯದೈವದ ಪೂಜೆಯ ಮಾಡುವನ ಸಂಗ ಅದೇ ದೊರೆಹಿರೇನರಕ ಕಾಣಾ, ಎಂದಾತ ನಮ್ಮ ಅಂಬಿಗರಚೌಡಯ್ಯ

(೧೬). ದೇವನೊಬ್ಬ, ನಾಮ ಹಲವು. ಪರಮ ಪತಿವ್ರತೆಗೆ ಗಂಡನೊಬ್ಬ. ಮತ್ತೊಂದಕ್ಕೆರಗಿದಡೆ, ಕಿವಿ ಮೂಗ ಕೊಯ್ಯುವನು ಹಲವು ದೈವದ ಎಂಜಲ ತಿಂಬವರ ನೇನೆಂಬೆನಯ್ಯ, ಕೂಡಲಸಂಗಮದೇವಾ?

(೧೭), ನಂಬಿದ ಹೆಂಡತಿಗೆ ಗಂಡನೊಬ್ಬನೇ ಕಾಣಿರೋ. ನಂಬಬಲ್ಲ ಭಕ್ತಂಗೆ ದೇವನೊಬ್ಬನೇ ಕಾಣಿರೋ. ಬೇಡ, ಬೇಡ. ಅನ್ಯದೈವದ ಸಂಗ

ಹೊಲ್ಲ. ಅನ್ಯದೈವವೆಂಬುದು ಹಾದರ ಕಾಣಿರೋ. ಕೂಡಲಸಂಗಮದೇವರು. ಕಂಡರೆ, ಮೂಗ ಕೊಯ್ಯುವ ಕಾಣಿರೋ.

(೧೮). ಕಂಡಕಂಡವರೆಲ್ಲರ ಗಂಡರೆಂದೆಂಬ ದಿಂಡೆಯನವಳ ಸಜ್ಜನೆ ಎಂದೆನ್ನಬಹುದೇ? ಲಿಂಗಪ್ರಸಾದವನುಂಡು ಅನ್ಯದೈವಂಗಳ ಕೊಂಡಾಡುವವರ ನಮ್ಮ ಕೂಡಲಸಂಗಮದೇವರು ಆ ಭಂಡರಿಗೆ ಮಾಡಿದ ಹುಳುಗೊಂಡವನು.

---

## (೨) ಸ್ಥಾವರಲಿಂಗಗಳನ್ನು ಪೂಜಿಸಬೇಡ.

(೧). ಅಂಗದ ಮೇಲೆ ಪರಶಿವಲಿಂಗವಿರ್ದುಸ್ಥಾವರ ಲಿಂಗಕ್ಕೆ ಶರಣೆನಲಾಗದು. ತನ್ನಲ್ಲಿಯ ಲಿಂಗವಿರ್ದಂತೆ, ಅನ್ಯಲಿಂಗವ ಮುಟ್ಟಿ ದರ್ಶನ ಸ್ಪರ್ಶನವ ಮಾಡುವ ಕುನ್ನಿಗಳನೇನೆಂಬೆನಯ್ಯ? ತನ್ನಂಗದಲಿಂಗ ರಂಗದ ಕಲ್ಲತಾಗಿದಡೆ, ಅವುದು ಹಿರಿದು ಆವುದು ಕಿರಿದು ಎಂಬೆನಯ್ಯ? ಅದೆಂತೆಂದೊಡೆ ಶ್ಲೊ॥ ಪ್ರಾಣಲಿಂಗಂಪರಿತ್ಯಜ್ಯ ಅನ್ಯಲಿಂಗಮುಪಾಸಿತಂ। ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್॥ ಎಂದುದಾಗಿ ಶ್ಲೊ॥ ದೀರ್ಘದಂಡ ಗುರುಸ್ಪರ್ಶನಂ ಕರಲಿಂಗಂ ಸ್ಪರ್ಶನಂಚ। ಶಿರಜಂಗಮ ಸ್ಪರ್ಶನಂ ಚ। ತ್ರಿವಿಧಂ ವಂದನೇ ತಥಾ॥ ಎಂದುದಾಗಿ, ಹತ್ತರಿರ್ದ ಲಿಂಗವಂ ಕಿರಿದು ಮಾಡಿ, ದೂರದಲ್ಲಿರ್ದ ಸ್ಥಾವರವ ಹಿರಿದು ಮಾಡುವ ಅನಾಚಾರಿ ವ್ರತಭ್ರಷ್ಟರ ಎನಗೊಮ್ಮೆ ತೋರದಿರಯ್ಯ ಕೂಡಲಚನ್ನಸಂಗಮದೇವಾ.

(೨). ಕಲ್ಲದೇವರ ಮಾಡಿ, ಕಲ್ಲಮನೆಯ ಮಾಡಿ, ಆ ಕಲ್ಲ ಕಲ್ಲಮೇಲೆ ಕೆಡೆದರೆ, ದೇವರೆತ್ತ ಹೋದರೋ? ಲಿಂಗಪ್ರತಿಷ್ಠೆಯ ಮಾಡುವವಗೆ ನಾಯಕ ನರಕ ತಪ್ಪದು ಗುಹೇಶ್ವರಾ.

(೩). ಲಿಂಗಭಕ್ತನಾದಡೆ, ತನ್ನಂಗದಲ್ಲಿದ್ದರಿವ ಹಿಂಗದಯ್ಯ. ಒಲ್ಲದೆ ಅನ್ಯವನರಿಯದಿರಬೇಕು. ಲಿಂಗದಲ್ಲಿ ನೈಷ್ಠಿಕ ಭಾವ ಇಂಬುಕೊಂಡಿರಬೇಕು. ಶ್ರೀಲಿಂಗವೇ ಪತಿ, ತಾನೇ ಸತಿ ಎಂಬ ದೃಢಬುದ್ಧಿ ನಿಶ್ಚಯವಾಗಿರಬೇಕು. ಹೀಗಲ್ಲದೆ, ತನ್ನ ದೇಹದ ಮೇಲಿರ್ಪ ಲಿಂಗವ ಸಾಮಾನ್ಯವ ಮಾಡಿ, ಕಂಡ ದೇಗುಲದೊಳಗಣ ಕಲ್ಲ ಲಿಂಗವೇ ಅಹುದೆಂದು ಪೂಜಿಸುವ ಗಾವಿಲಮೂಳ ಹೊಲೆಯರ ಮುಖವ ನೋಡಲಾಗದಯ್ಯ ಅಖಂಡೇಶ್ವರಾ.

(೪). ಅಂಗದ ಮೇಲಣ ಲಿಂಗವ ಹಿಂಗಿ, ಸ್ಥಾವರಲಿಂಗಕ್ಕೆರಗುವ ಭಂಗಿತರ ಮುಖವ ನೋಡಲಾಗದು. ಅದೆಂತೆಂದೊಡೆ, ತನ್ನ ಗಂಡನ ಬಿಟ್ಟು ಅನ್ಯ ಗಂಡರಿಗೆರಗುವ ಹಾದರಗಿತ್ತಿಯಂತೆ ಅವಂದಿರ ಭಕ್ತಿ. ಅಂತಪ್ಪ ಪಂಚ ಮಹಾಪಾತಕರ ಮುಖದತ್ತ ತೋರದಿರಾ ಗುಹೇಶ್ವರಾ.

(೫). ದೇಹವೇ ದೇಗುಲವಾಗಿರಲು, ಬೇರೆ ಮತ್ತೆ ದೇಗುಲವೇಕಯ್ಯ? ಪ್ರಾಣವೇ ಲಿಂಗವಾಗಿರಲು, ಬೇರೆ ಮತ್ತೆ ಲಿಂಗವೇಕಯ್ಯ? ಹೇಳಲಿಲ್ಲ, ಕೇಳಲಿಲ್ಲ. ಗುಹೇಶ್ವರಾ, ನೀನು ಕಲ್ಲಾದರೆ, ನಾನೇನಪ್ಪೆನಯ್ಯ?

(೬). ಶೈವ ಕಟ್ಟಿದ ಗುಡಿಯ ಹೊಗಲೇಕೆ? ಶೈವರು ನೆಟ್ಟ ಲಿಂಗವ ಮುಟ್ಟಿ, ಪೂಜಿಸಲೇಕೆ? ಅದೇಕೆ? ಉಪವಾಸವ ಮಾಡಲೇಕೆ? ನೆಟ್ಟಿರ್ದ ಕಲ್ಲಿಗೆ ನೀಡಿ ಕೆಡೆದರೆ, ಕಟ್ಟಿರ್ದ ಕಲ್ಲಿನ ಕಷ್ಟವ ನೋಡಿರೇ. ಕಟ್ಟಿರ್ದ ಕಲ್ಲ ಕಳೆದಿಟ್ಟು ಬಿಟ್ಟು, ನಟ್ಟಿರ್ದಕಲ್ಲಿಗೆ ನಮಿಸುವ ಭ್ರಷ್ಟರಿರ, ತನ್ನ ಗುರು ಕೊಟ್ಟ ಇಷ ಲಿಂಗವು ಕೊಡಲರಿಯದೆಂದು, ನೆಟ್ಟಿರ್ದಲಿಂಗ ಕೊಟ್ಟಹಿತೆಂದು, ಖೊಟ್ಟಿಗಳ ನೋಡಿ, ಹೊಟ್ಟೆ ಹುಣ್ಣಾದಂತೆ ನಗುತಿರ್ದೆನಯ್ಯ. ಅದೇನು ಕಾರಣವೆಂದಡೆ, ಏಕಲಿಂಗ ನಿಷ್ಠಾಚಾರವಿಲ್ಲದ ಕಾರಣ. ಪ್ರಾಣಲಿಂಗಿಗೆ ಈ ಪಾಷಾಣದ ಹಂಗುಂಟೇ? ಆತ್ಮನೊಳಗೆ ಹುಟ್ಟಿದ ಅನುಭಾವಲಿಂಗವ ಶ್ರೀಗುರು ತಂದು ಕರಸ್ಥಲದಲ್ಲಿ ಇಷ್ಟಲಿಂಗವ ಮಾಡಿ, ಇರಿಸಿದನಾಗಿ, ಇಷ್ಟಪ್ರಾಣ ಒಂದೇ ಎಂದು ಆರಾಧಿಸಿ, ಸುಖಿಯಾಗಿರ್ದೆನು ಕಾಣಾ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೭). ಶೈವ ಸಿದ್ಧಾಂತಿಗಳ ಬದ್ಧಭವಿಗಳ ಮುಖವ ನೋಡಲಾಗದು. ಅದೇನುಕಾರಣವೆಂದಡೆ, ಸಾಂಗೋಪಾಂಗ ಶುದ್ಧಶರೀರಿಯಾಗಿ ಉನ್ನತಾಸವ ಗದ್ದುಗೆಯಲ್ಲಿ ಕುಳ್ಳಿರ್ದು, ಕಣ್ಣು ಮುಚ್ಚಿ ಅಂತರಂಗದಲ್ಲಿ ಪರಮಾತ್ಮನ ಕಳೆಯ ಧ್ಯಾನಿಸಿ, ಮನಸ್ಸಿನಲ್ಲಿ ಕಟ್ಟಿ, ದೃಷ್ಟಿಗೆ ತಂದು, ಆ ದೃಷ್ಟಿಯಿಂದ ಪುಷ್ಪದಲ್ಲಿ ತುಂಬಿ, ಮೃತ್ತಿಕೆ ಪಾಷಾಣಾದಿ ನಾನಾತೆರದ ಲಿಂಗಾಕಾರ ಮೂರ್ತಿಯಲ್ಲಿ ಸ್ಥಾಪಿಸುವರೆಂದು ಭಾವಿಸಿ, ಜಲಗಂಧಾಕ್ಷತೆ ಪುಷ್ಪ ದೀಪ ಧೂಪ ತಾಂಬೂಲಾದಿ ಅಷ್ಟವಿಧಾರ್ಚನೆ ಷೋಡಶೋಪಚಾರಗಳನೆ ಮಾಡಿ, ಆ ಪೂಜಾನಂತರದಲ್ಲಿ ಎನ್ನ ಮಲಿನವಾದ ದೇಹದಲ್ಲಿ ನೀನು ನಿರ್ಮಲವಾದ ವಸ್ತು ಇರಬೇಡ ಹೋ

ಗೆಂದು, ತನ್ನ ದೇವರ ಭಾವಿ ಕೆರೆ ಹೊಳೆ ಹಳ್ಳಗಳಲ್ಲಿ ಹಾಕಿ, ಬಿಸಾಡುವ ಶಿವ ದ್ರೋಹಿಗೆ ಕುಂಭಿನೀಪಾತಕ ನಾಯಕನರಕ ತಪ್ಪದಯ್ಯ ಅಖಂಡೇಶ್ವರಾ.

(೮). ಹಾಲ ಹಿಡಿದು ಬೆಣ್ಣೆಯನರಸಲುಂಟೇ? ಲಿಂಗವಹಿಡಿದು ಪುಣ್ಯ ತೀರ್ಥಕ್ಕೆ ಹೋಗಲುಂಟೇ? ಲಿಂಗದ ಪಾದತೀರ್ಥ ಪ್ರಸಾದವಕೊಂಡು, ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇತಕ್ಕೆ? ಇಷ್ಟಲಿಂಗವಿದ್ದಂತೆ ಸ್ಥಾವರ ಲಿಂಗಕ್ಕೆ ಶರಣೆಂದಡೆ, ತಡೆಯದೆ ಹುಟ್ಟಿಸುವ ಶ್ವಾನನ ಗರ್ಭದಲ್ಲಿ. ಅದೆಂತೆಂದೊಡೆ, ಶಿವಧರ್ಮಪುರಾಣದಲ್ಲಿ:—ಇಷ್ಟಲಿಂಗಮ ವಿಶ್ವಸ್ಯ ತೀರ್ಥಲಿಂಗಂ ನಮ್ಮಸ್ಕೃತಃ। ಶ್ವಾನಯೋನಿಶತಂಗತ್ವಾ ಚಾಂಡಾಲಗೃಹಮಾಚರೇತ್॥ ಎಂದುದಾಗಿ ಇದನ ರಿದು, ಗುರುಕೊಟ್ಟಲಿಂಗದಲ್ಲಿಯೇ ಎಲ್ಲ ತೀರ್ಥಂಗಳು ಎಲ್ಲ ಕ್ಷೇತ್ರಂಗಳು ಇಪ್ಪಾವೆಂದು ಭಾವಿಸಿ, ಮುಕ್ತರಪ್ಪುದಯ್ಯ. ಇಂತಲ್ಲದೆ, ಗುರುಕೊಟ್ಟ ಲಿಂಗವ ಕಿರಿದು ಮಾಡಿ, ತೀರ್ಥಲಿಂಗವ ಹಿರಿದು ಮಾಡಿ ಹೋದಾಂತಂಗೆ ಅಘೋರ ನರಕ ತಪ್ಪದುಕಾಣಾ ಚನ್ನಮಲ್ಲಿಕಾರ್ಜುನಾ.

(೯). ಸದ್ಭಕ್ತರಾದವರು ಸ್ಥಾವರಲಿಂಗವಂ ಭಜನೆಯ ಮಾಡಲಾ ಗದು. ಮನದಲ್ಲಿ ಸ್ಥಾವರ ಘನವೆಂದು ನೆನೆಯಲಾಗದು. ಅದೇನು ಕಾರಣ ವೆಂದಡೆ, ಆದಿ ಅನಾದಿಯಿಂದತ್ತಿತ್ತವಾದ ಮಹಾಘನ ವಸ್ತುವನ್ನು ಶ್ರೀಗುರು ಸ್ವಾಮಿ ಭೇದಿಸಿ ತಂದು, ಕೈಯ್ಯಲ್ಲಿ ಇಷ್ಟಲಿಂಗವೆನಿಸಿ, ಕರಸ್ಥಳಕ್ಕೆ ಕೊಟ್ಟ ಬಳಿಕ, ಆ ಲಿಂಗದಲ್ಲಿ ಸಕಲ ಕ್ಷೇತ್ರಂಗಳುಂಟೆಂದು. ಭಾವಿಸಿ, ಮುಕ್ತಿಯಪಡೆಯ ಲರಿಯದೆ, ಖಂಡಿತಬುದ್ಧಿಯಿಂದೆ ಬೇರೆ ಮುಕ್ತಿಯ ಪಡೆವೆನೆಂದು ಕಂಡ ಕಂಡ ತೀರ್ಥಕ್ಷೇತ್ರಂಗಳಿಗೆಡೆಯಾಡಿ, ತೊಳಲಿ ಬಳಲುವ ಭ್ರಷ್ಟಭವಿಗಳಿಗೆ ನರಕವೇ ಪ್ರಾಪ್ತಿಯಯ್ಯ ಅಖಂಡೇಶ್ವರಾ.

(೧೦). ಕಯ್ಯಲ್ಲಿ ಹಣ್ಣಿದ್ದು, ಮರವನೇರಿ, ಕೊಂಬೆಯ ಬಾಗಿಸಿ, ಕಾಯಿಕೊಯ್ವ ಅರಿಮರುಳನಂತೆ, ಅನಾದಿ ಮೂಲದೊಡೆಯ ತನ್ನ ಕರಸ್ಥಲ ಮನಸ್ಥಲದಲ್ಲಿಪ್ಪುದ ತಾನರಿಯದೆ, ಬೇರೆ ಲಿಂಗ ಉಂಟು, ಬೇರೆ ಕ್ಷೇತ್ರ ಉಂಟು. ಎಂದು ಹಲವು ಲಿಂಗಕ್ಕೆ ಹರಿದು ಹಂಬಲಿಸುವ ಈ ಸೂಳೆಗೆ ಹುಟ್ಟಿದವರಿಗೆ ಗುರುವಿಲ್ಲವಾಗಿ ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲ, ಮುಕ್ತಿ ಎಂಬುದು ಎಂದಿಗೂ ಇಲ್ಲ, ಕಾಣಾ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೧೧). ಪತಿವ್ರತೆಯಾದಡೆ, ಅನ್ಯಪುರುಷರ ಸಂಗವೇತಕಯ್ಯಾ? ಲಿಂಗ ಸಂಗಿಯಾದೊಡೆ, ಅನ್ಯದೈವದ ಸಂಗವೇತಕಯ್ಯಾ? ಇದು ಹೇಗೆ. ಕಂಡ ಕಂಡ ವರ ಹಿಂದೆ ಹರಿವ ಚಾಂಡಾಲಗಿತಿಯಂತೆ, ಒಬ್ಬನ ಕೈವಿಡಿದು, ಒಬ್ಬಗೆ ಮಾತು ಕೊಟ್ಟು, ಒಬ್ಬಗೆ ಸನ್ನೆಯ ಮಾಡಿ, ಮತ್ತೊಬ್ಬನ ಸಂಗವ ಮಾಡುವ ಹಾದರಗಿತ್ತಿಯಂತೆ, ಪ್ರಾಣಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಹರಿಸಿ ಪೊಡಮಡುವ ಕ್ರೋಟಲೆ ಏತಕೋ? ಅದೆಂತೆಂದೊಡೆ, ಲೈಂಗ್ಯೇ:— ಮಹಾಲಿಂಗಾರ್ಚಕಶ್ಚೈವ ಬಹುಭಾವ ಗುರುಸ್ತಥಾ। ಬಹುಪ್ರಸಾದಭುಂಜೀಯಾದ್ವೇಶ್ಯಾಪುತ್ರಾಸ್ತ್ರಥೈವ ಚ॥ ಎಂದುದಾಗಿ, ಇದು ಕಾರಣ ಕೂಡಲಚನ್ನಸಂಗಮದೇವಾ, ಇಂತಪ್ಪ ಪಾತಕರ ಮುಖವೆನಗೆ ತೋರದಿರಯ್ಯಾ.

(೧೨). ಕಟ್ಟಿದ ಲಿಂಗವಬಿಟ್ಟು, ಬೆಟ್ಟದ ಲಿಂಗಕ್ಕೆ ಹೋಗಿ, ಹೊಟ್ಟಡಿಯಾಗಿ ಬೀಳುವ ಲೊಟ್ಟೆಮೂಳನ ಕಂಡಡೆ, ಮೆಟ್ಟಿದ್ದ ಎಡಪಾದ ರಕ್ಷೆಯ ತಗೊಂಡು, ಲಟ ಲಟನೆ ಹೊಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯನು.

(೧೩). ಗುರುಸ್ಥಲದಲ್ಲಿ ಲಿಂಗವ ಧರಿಸಿಕೊಂಡು, ಒಟ್ಟಿರ್ದ ಮಣ್ಣಿಗೆ ನೆಟ್ಟಿರ್ದ ಕಲ್ಲಿಗೆ ಹೊಟ್ಟೆ ಅಡಿಯಾಗಿ ಅಡ್ಡ ಬೀಳುವ ಲೊಟ್ಟೆ ಗುಡ್ಡಗಳನೇನೆಂಬೆ ಕಲಿದೇವರ ದೇವಯ್ಯಾ?

---

## (೩) ಕಿರುಕುಳದೈವಗಳನ್ನು ನಂಬಬೇಡ.

(೧). ಗುರುನಿಷ್ಠೆ, ಲಿಂಗನಿಷ್ಠೆ, ಜಂಗಮನಿಷ್ಠೆ, ಇಂತೀ ತ್ರಿವಿಧನಿಷ್ಠೆಯಲ್ಲಿ, ಏಕಾಂಗಲಿಂಗನಿಷ್ಠೆ ವೀರಧೀರಂಗಲ್ಲದಾಗದು. ಇದು ಸಂಗನಬಸವಣ್ಣನಿಂದ ಬಂದ ಸಂತತಿಗಲ್ಲದಾಗದು. ಬ್ರಹ್ಮೇಶ್ವರಲಿಂಗವನರಿವುದಕ್ಕೆ ತ್ರಿಗುಣ ಸಂದೇಹಿಗಳಿಗೆ ವಸ್ತು ಸಂದಿಸದು ನೋಡಾ.

(೨). ಕರ್ತನ ಪೂಜಿಸಿ, ಕುತ್ಸಿತ ದೈವಕ್ಕೆರಗುವದು, ಕತ್ತೆಗೆ ಕುದುರೆಗೆ ಹುಟ್ಟಿದ ಹೇಸರನಂತೆ. ಅವರ ಭಕ್ತರೆಂತೆಂಬೆ? ಭೃತ್ಯರೆಂತೆಂಬೆ? ಶರಣರೆಂತೆಂಬೆ ನವರ? ಎರಡುಳ್ಳ ಪ್ರಪಂಚಿಗಳ ಮೆಚ್ಚ ಕೂಡಲಸಂಗಮದೇವಾ.

(೩). ಗಂಗಾನದಿಯಲ್ಲಿ ಮಿಂದು ಗಂಜಳದಲ್ಲಿ ಹೊರಳುವರೇ? ಚಂದನವಿದ್ದಂತೆ ದುರ್ಗಂಧವ ಮೈಯ್ಯಲ್ಲಿ ಪೂಸುವರೇ? ಸುರಭಿ ಮನೆಯಲ್ಲಿ ಕರೆವು

ತ್ತಿರೆ. ಹರಿವರೇ ಸೊಣಗನ ಹಾಲಿಂಗೆ? ಬಯಸಿದಮೃತವಿದ್ದಂತೆ, ಅಂಬಿಲವ ನೆರೆದುಂಬ ಭ್ರಮಿತಮಾನವ, ನೀಕೇಳಾ, ಪರಮಪದವಿಯುನೀವ ಚನ್ನಸೊಡ್ಡಳ ನಿದ್ದಂತೆ ಸಾವದೈವವನೋಂತರೆ, ಕಾವುದೇ ನಿನ್ನ?

(೪). ಅರಗು ತಿಂದು ಕರಗುವ ದೈವ, ಉರಿಯು ಕಂಡರೆ, ಮುರುಟುವ ದೈವ ಎಂತು ಸರಿ ಎಂಬೆನಯ್ಯ? ಅವಸರ ಬಂದರೆ, ಮಾರುವದೈವವನೆಂತು ಸರಿ ಎಂಬೆನಯ್ಯ? ಅಂಜಿಕೆಯು ಬಂದರೆ, ಹೂಳುವದೈವವನೆಂತು ಸರಿ ಎಂಬೆನಯ್ಯ? ಸಹಜಭಾವ, ನಿಜೈಕ್ಯ, ಸ್ಥಿರರೂಪ, ನಿರ್ವಿಕಾರ, ನಿರಂಜನ ಕೂಡಲ ಸಂಗಮದೇವನೋರ್ವನೇ ದೇವ ಕಾಣಿರೋ.

(೫). ಅಯ್ಯಾ, ನಿರಾಳ ನಿಶ್ಶೂನ್ಯ ಪರಮಭಕ್ತ ಜಂಗಮ ತಾನಾಗಲರಿಯದೆ, ಬರಿದೆ ಅಹಂಕರಿಸಿ, ಮೂರು ಮಲವ ಸ್ವೀಕರಿಸಿ, ನಾವೇ ಭಕ್ತ ಜಂಗಮವೆಂದು ನುಡಿವ ಕರ್ಮಕಾಂಡಿಗಳು, ಕಾಶಿ, ಕೇದಾರ, ಶ್ರೀಶೈಲ, ಗಯಾ, ಪ್ರಯಾಗ, ಶಿವಗಂಗೆ, ಕಂಚಿ, ಕಾಳ ಹಸ್ತಿ, ಪಂಪಾಕ್ಷೇತ್ರ, ವೀರಣ್ಣ, ಬಸವಣ್ಣ, ಕಲ್ಲಣ್ಣ, ಮಲ್ಲಣ್ಣ, ಕಂಥೆ, ಕಮಂಡಲು, ಗದ್ದುಗೆ, ಪಾವುಗೆ, ಭಸ್ಮಘುಟಿಕೆ, ಪುರಾಣ, ದಂಡಾಗ್ರ, ಗಿಳಿಲು, ಶಂಖ, ತಿಥಿ, ವಾರ, ನಕ್ಷತ್ರ, ಹುಣ್ಣಿವೆ, ಅಮಾವಾಸ್ಯೆ, ಸೂರ್ಯ, ಚಂದ್ರ, ಅಗ್ನಿ, ದೀಪಾರತಿ, ಗಂಗೆ, ಗೌರಿ, ವಿಘ್ನೇಶ್ವರ, ಮೊದಲಾಗ ಇವು ದೈವಂಗಳೆಂದು, ಕಲ್ಲು ಮಣ್ಣು ಲೋಹ ಮರದಿಂದ ರಚಿಸಿ, ಸಂದಿ ಹಾದಿ ಮಾಡ ಜಗುಲಿಯ ಮೇಲಿಟ್ಟು, ಅದರ ಬಳಿ ನೀರು ಎಂಜಲು ತಿಂಬುವರ ದೇವ ಭಕ್ತರೆನ್ನಬಹುದೆ? ಇಂತಪ್ಪ ಅನಾಚಾರ ಶ್ವಪಚರ ಭಕ್ತ ಜಂಗಮದೇವರೆಂದು ಪೂಜಿಸಲಾಗದು. ನಿರಾಭಾರಿವೀರಶೈವಾಚಾರ ಕ್ರಿಯಾಜ್ಞಾನ ವೈರಾಗ್ಯ ಸದ್ಭಕ್ತ ಶಿವಶರಣನ ಪೂಜಿಸಿ ಪಾದೋದಕ ಪ್ರಸಾದವ ಕೊಂಡವಗೆ ಭವಪಾಶ ಕರ್ಮಂಗಳು ಮಾಣ್ಬವು ಕಾಣಾ ಗುಹೇಶ್ವರ ಲಿಂಗದಲ್ಲಿ ಚನ್ನಬಸವಣ್ಣ.

(೬). ಒಬ್ಬ ತಂದೆಯು ಬಸಿರಲ್ಲಿ ಒಂಬತ್ತು ಮಕ್ಕಳು ಹುಟ್ಟಿದರೇನಯ್ಯ? ಅವರೊಳಗೆ ಶರಗವ ಒಬ್ಬಗೆ ಕಟ್ಟಿ ಮದುವೆಯು ಮಾಡಿದ ಬಳಿಕ, ಆತಂಗೆ ತನ್ನ ಅಂಗದ ಸುಖವನ್ನು ಒಪ್ಪಿಸಬೇಕಲ್ಲದೆ, ಉಳಿದಾದ ಭಾವ ಮೈದುನರಿಗೆ ಅವನ ಮಕ್ಕಳೆಂದು ಅವರಿಗೆ ತನ್ನ ಶರಗು ಹಾಕಿದವಳನ್ನು ಒಪ್ಪುವರೇ ಲೋಕದೊಳಗೆ? ಪರಮೇಶ್ವರನೆಂಬ ಶಿವಂಗೆ ಹುಟ್ಟಿದಾತ ವಿನಾಯಕ, ಆತಂಗೆ ಸಾಕಾರ

ವಾಗಿ ಹುಟ್ಟಿದಾತ ವೀರಭದ್ರ. ಇವರೆಲ್ಲರು ಶಿವನ ಮಕ್ಕಳು. ಆದರೆ ತನಗೊಂದು ಪ್ರಾಣಲಿಂಗವೆಂದು ಕಂಕಣವಕಟ್ಟಿ ಕರಸ್ಥಲದಲ್ಲಿ ಪಡೆದ ಬಳಿಕ, ಅದೇನೆಂದರೆ ಅನ್ಯದೈವಕ್ಕೆರಗಿದಾತಂಗೆ ನಾಯಕ ನರಕ ತಪ್ಪದು ಎಂದಾತ ನಮ್ಮ ಅಂಬಿಗರ ಚೌಡಯ್ಯ ನಿಜಶರಣನು.

(೭). ವೀರಭದ್ರ, ಬಸವಣ್ಣ, ಮಲ್ಲಿಕಾರ್ಜುನನೆಂಬ ದೈವಂಗಳಿಗೆ ನಮ್ಮ ಕುಲದೈವಂಗಳೆಂದು ಹೇಳುವವರಿಗೆ, ಗುರುವಿಲ್ಲ, ಲಿಂಗವಿಲ್ಲ ಜಂಗಮವಿಲ್ಲ, ಪಾದೋದಕ ಪ್ರಸಾದವಿಲ್ಲ, ಕೂಡಲಚನ್ನಸಂಗಮದೇವಾ

(೮). ಪರ್ವತ ಮಲ್ಲಯ್ಯನ ಯಾತ್ರೆಗೆ ಹೊಗಬೇಕೆಂಬರಯ್ಯ! ಅದೇನು ಕಾರಣವೆಂದಡೆ, ಗ್ರಂಥ ॥ ಶ್ರೀಶೈಲಂ ಶಿಖರಂ ದೃಷ್ಟ್ವಾ । ಪುನರ್ಜನ್ಮ ನ ವಿದ್ಯತೆ ॥ ಎಂದುದಾಗಿ. ಅಂತಪ್ಪ ಪರ್ವತ ಮಲ್ಲಯ್ಯನ ಶಿಖರವ ಕಂಡಾಕ್ಷಣದಲ್ಲಿ ಮೋಕ್ಷವಹುದೆಂದು ಶೃತಿಪುರಾಣ ವಾಕ್ಯಂಗಳ ಕೇಳಬಲ್ಲಂಥ ಭಕ್ತಜನಂಗಳು ಉಳಿದಂಥ ಕೆಲ ಗಣಂಗಳು ಇಂತೀ ಸರ್ವರು ಕೂಡಿ ಸಾಲಕಡಮಾಡಿ ಹೊನ್ನ ತಂದು, ಒಂದೊತ್ತು ಬರಿಗಾಲಿಲಿ ನಡೆವುತ್ತ, ಆಸತ್ತು ಬೇಸತ್ತು, ಅಳಲಿ ಬಳಲಿ, “ ಶಿವ ಶಿವಾ, ” “ ಹರಹರಾ ” ಎಂದು ಮಲ್ಲಯ್ಯನ ನೆನೆವುತ್ತ ಎಡವುತ್ತ ಮುಗ್ಗುತ್ತ “ನಿನ್ನ ಪಾದವ ಎಂದು ಕಂಡೇವು” ಎನ್ನುತ್ತ ಸಕಲ ಲೋಕಾದಿ ಲೋಕಂಗಳೆಲ್ಲ ಇಂತೀ ಪರಿಯಲ್ಲಿ ಹೊಹರಯ್ಯ! ಇವರಿಗೆ ಮಲ್ಲಯ್ಯನ ದರುಶನವಿಲ್ಲ, ಅವನ ಶಿಖರವ ಕಾಣಬಾರದು ನೋಡೆಂದ ನಮ್ಮ ಶರಣ ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

(೯). ಬೆನಕನ ಹರನ ಮಗನೆಂಬ ಪಾತಕರು ನೀವು ಕೇಳಿರೋ, ಪಾರ್ವತಿ ಹರನಸತಿ ಎಂಬ ಶಿವದ್ರೋಹಿಗಳು ನೀವು ಕೇಳಿರೋ, ಸ್ವಾಮಿ ಕಾರ್ತಿಕ ಹರನ ಮಗನೆಂಬ ಲಿಂಗದ್ರೋಹಿಗಳು ನೀವು ಕೇಳಿರೋ, ಅಜಾತ ಪವಿತ್ರ ಪೂರ್ವಾಚಾರಿ ಸಂಗನಬಸವಣ್ಣನೊಬ್ಬನೇ.

(೧೦). ಸತ್ತವರ ಸಮಾಧಿಯಲ್ಲಿ ತಡಿಯ ಕಟ್ಟಿಸಿ, ಹಿರಿಯತ್ತ ಗದ್ದುಗೆ ಎಂದು ಪೂಜಿಸುವವರು ಮಹೇಶ್ವರರಲ್ಲ. ಕಟ್ಟಿಗೆ ಹಾವಿಗೆ, ಬೆಳ್ಳಿಯ ಕಳ್ಳಿಗೆ, ಜಡೆಗಟ್ಟಿದ ಕೂದಲು ಹಿರಿಯರು ಎಂದು ಪೂಜಿಸುವವರು ಮಹೇಶ್ವರರಲ್ಲ. ಸತ್ತ ತಾಯಿ ತಂದೆಗಳ ಪೆಸರು ತಮ್ಮ ಪುತ್ರರಿಂಗೆ ಕಟ್ಟು ಪರರಿಗೆ ನಮ್ಮ ಹಿರಿಯರ

ಹೆಸರೆಂದು ಪೇಳುವವರು ಮಹೇಶ್ವರರಲ್ಲ. ನಮ್ಮ ಹಿರಿಯರು ಗಳಿಸಿದ ಮತಮಾನ್ಯವೆಂದು ಹೋರಾಡಿ, ತಳ್ಳಿ ತಗಾದಿ ಮಾಡಿ ಸರಕಾರಕ್ಕೆ ಹೊನ್ನ ಕೊಟ್ಟವರು ಮಹೇಶ್ವರರಲ್ಲ. ಇಂತವರು ಮಹೇಶ್ವರರೆಂದಡೆ ನಮ್ಮ ಶರಣರು ತಮ್ಮ ಪಾದರಕ್ಷೆಯಿಂದ ಹೊಡೆಯದೆ ಮಾಣ್ಬರೇ ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ?

(೧೧). ಅಯ್ಯಾ, ಸದಾಚಾರವೆಂದಡೆ ಗುರುಲಿಂಗ ಜಂಗಮದರ್ಶನೆ, ಪಾದೋದಕಪ್ರಸಾದಸೇವನೆ, ಪಂಚಾಕ್ಷರ ಷಡಕ್ಷರ ಸ್ತೋತ್ರ, ಚಿದ್ಘನ ಮಹಾಲಿಂಗ ಧ್ಯಾನ, ಪರದ್ರವ್ಯನಿರಸನ ಇಂತಿದು ಸತ್ಯವೆಂದು ಸದ್ಗುರು ಮುಖದಿಂ ತಿಳಿದು ಭಿನ್ನವಿಲ್ಲದೆ ಆಚರಿಸುವದಲ್ಲದೆ, ಶುದ್ಧಶೈವರ ಹಾಗೆ ನಂದಿ, ವೀರಭದ್ರ, ದುರ್ಗಿ, ಪಾವುಗೆ, ಕಂಥೆ, ಕಮುಂಡಲು, ಮತ್ತೆ ಲಿಂಗಗಳೆಂದು ಇದಿರಿಟ್ಟು ಪೂಜಿಸುವನ ಮನೆಯ ಪಾಕ ಅಮೇಧ್ಯ ಮಾಂಸ ಕಾಣಾ, ಕಲಿದೇವರದೇವಾ.

(೧೨). ಕಾಳಿಕಾ, ಚಾಮುಂಡಿ, ಗಂಗೆ, ಗೌರಿ, ಬನಶಂಕರಿ, ಎಲ್ಲಿ, ಎಕ್ಕನಾದಿ, ಹುಲಿಗೆ, ಹೊಸೂರಿ, ಸತ್ತವರು, ಹೆತ್ತವರು, ಇಂತೀ ಹಲವು ಪಿಶಾಚಿಗಳ ಹೆಸರಿಂದ ಇದಿರಿಟ್ಟು ಆರಾಧಿಸಿ, ಅವರ ನೈವೇದ್ಯವೆಂದು ಶ್ರೀಗುರುವಿತ್ತ ಲಿಂಗಕ್ಕೆ ತೋರಿ ಭುಂಜಿಸುವ ಶಿವದ್ರೋಹಿಗಳಿಗೆ, ಗುರುವಿಲ್ಲ, ಲಿಂಗವಿಲ್ಲ, ಜಂಗಮ ಪಾದೋದಕಪ್ರಸಾದವಿಲ್ಲ, ಕಾಣಾ ಸಂಗನಬಸವೇಶ್ವರಾ.

(೧೩). ಸತ್ಯ ಸದ್ಗುರು ಕರುಣಿಸಿ ಕೊಟ್ಟ ನಿತ್ಯ ನಿಃಕಳಲಿಂಗವ ಕರ ಮನ ಭಾವದೊಳಗಿರಿಸಿ ಅರ್ಚಿಸಿ ನಿತ್ಯ ಭೋಗವ ಪಡೆಯಲರಿಯದೆ, ಗುರು ಮಾರ್ಗಾಚಾರಕ್ಕೆ ಹೊರಗಾಗಿ, ಜಗದ ಜಡ ಕಲ್ಲು ಮಣ್ಣು ಮರ ಕಂಚು ಕಾಷ್ಠ ಒರಳು ಒನಕೆ ಪಶು ತಿಥಿ ವಾರ ನಕ್ಷತ್ರ ಹುಣ್ಣಿವೆ ಅಮಾವಾಸ್ಯೆ ತಂದೆ ತಾಯಿಗಳ ತಿಥಿ ಎಂದು ಪೂಜೆ ಮಾಡುವರ ಹಸ್ತ ಭವಿ. ಆ ಹಸ್ತದಿಂದ ಮಾಡಿದ ಪಾಕ ಭವಿ, ಆ ಪಾಕವ ಪರಶಿವ ಲಿಂಗಕ್ಕೆ ಅರ್ಪಿಸಲಾಗದು. ಅದೆಂತೆಂದೊಡೆ, ಭವಿಹಸ್ತಕೃತಂ ಪಾಕಂ ಲಿಂಗ ನೈವೇದ್ಯ ಕಿಲ್ಬಿಷಂ ॥ ಎಂದರಿದು ನಮ್ಮ ಕೂಡಲ ಸಂಗನಶರಣರು ಭವಿಪಾಕವ ಮುಟ್ಟದೆ, ಸರ್ವಮತದಿಂದ ಪದಾರ್ಥವಕೊಂಡು, ಪಾದೋದಕದಿಂದ ಪವಿತ್ರತೆಯಿಂದ ಸ್ವಪಾಕವ ಮಾಡಿ, ಪರಮ ಇಷ್ಟ ಮಹಾ

ಲಿಂಗವೇ ತಾವೆಂದರಿದು ಸುಖಿಸಿ ನಿಜೈಕ್ಯರಾದರು ನೋಡಾ, ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದಲ್ಲಿ.

(೧೪). ಭವಿತನಕ್ಕೆ ಹೇಸಿ ಭಕ್ತನಾದ ಬಳಿಕ, ಕೊರಳಿಗೆ ಕವಡೆಯ ಕಟ್ಟಿ ನಾಯಾಗಿ ಬೊಗಳುವದು ಅದಾವ ವಿಚಾರವಯ್ಯಾ? ಭವಿತನಕ್ಕೆ ಹೇಸಿ ಭಕ್ತ ಹುರಿ ಬೆನ್ನ ಶಿಡಿಬಾಯ ಬೀಗದಲ್ಲಿ ಹೋಗುವದು, ಅದಾವ ವಿಚಾರವಯ್ಯಾ? ಬೇವಿನ ಉಡುಗೆಯನುಟ್ಟು ಹಡಲಿಗೆಯ ಹೊತ್ತು, 'ಉದೋ' ಎಂಬುವದು ಅದಾವ ವಿಚಾರವಯ್ಯಾ? ಇಂಥ ಭವಿಮಾರ್ಗದಲ್ಲಿ ಚರಿಸುವ ಶಿವದ್ರೋಹಿಗಳಿಗೆ ಲಿಂಗಧಾರಣ ಮಾಡುವನೊಬ್ಬ ಗುರುದ್ರೋಹಿ. ಅವರಿಗೆ ಚರಣೋದಕವ ಧರಿಸುವ, ವಿಭೂತಿ ರುದ್ರಾಕ್ಷಿಯ ಕೊಡುವನೊಬ್ಬ ಲಿಂಗದ್ರೋಹಿ. ಅವನು ಭಕ್ತನೆಂದು ಅವನ ಮನೆಯ ಹೊಕ್ಕು ಮಂತ್ರವ ಹೇಳಿ ಅನ್ನವ ತಿಂಬುವನೊಬ್ಬ ಜಂಗಮದ್ರೋಹಿ. ಇಂತೀ ನಾಲ್ವರಿಗೆ ಸೂರ್ಯ ಚಂದ್ರರುಳ್ಳನ್ನಕ್ಕರ, ಎಕ್ಕಲ ಕುಂಡದಲ್ಲಿ ಇಕ್ಕದೇ ಮಾಣ್ಬನೇ ನಮ್ಮ ಅಂಬಿಗರ ಚೌಡಯ್ಯಾ?

(೧೫). ಕಿಚ್ಚು ದೈವವೆಂದು ಹವಿಯ ನಿಕ್ಕುವ ಹಾರುವರ ಮನೆಯಲ್ಲಿ ಕಿಚ್ಚೆದ್ದು ಸುಡುವಾಗ, ಬಚ್ಚಲನೀರು ಬೀದಿಯ ಧೂಳವ ಹೊಯ್ದು, ಬೊಬ್ಬಿಟ್ಟು, ಎಲ್ಲರ ಕರೆವರಯ್ಯಾ! ಕೂಡಲಸಂಗಮದೇವ, ವಂದನೆಯ ಮರೆದು ನಿಂದಿಸುತಲಿಪ್ಪರಯ್ಯಾ!

(೧೬). ಮಾರಿಯ ಪೂಜಿಸಿ, ಮಸಣಕ್ಕೆ ಹೋಗಿ, ಗೋರಿ ಗೊಳಿಸಿ, ಕುರಿಯ ಕೊರಳನೇ ಕೊಯ್ದುಂಬ, ಕ್ರೂರ ಕರ್ಮಿಗಳನವರ ಶಿವಭಕ್ತರೆನ್ನಬಹುದೇ? ಆರಯ್ಯದೆ, ಅವರ ಮನೆಯಲುಂಡ ಭಕ್ತ ಅಘೋರ ನರಕಕ್ಕಿಳಿವ ಕಾಣಾ ರಾಮನಾಥಾ.

(೧೭). ಗಂಡನೆಂಜಲಿಗೆ ಹೇಸುವಳು ಮಿಂಡನೆಂಜಲ ತಿಂಬ ತೆರನೆಂತೆಂದರೆ, ಗುರುವಿನಲ್ಲಿ ಉಪದೇಶವಡೆದು, ಪ್ರಸ್ವಾರ್ಥಕ್ಕೆ ಸೂತಕವ ಮಾಡುವ ಪಂಚಮಹಾಪಾತಕರು ನೀವು ಕೇಳಿ, ಭೋ. ಅಂಡದೊಳಗೆ ಪುಟ್ಟಿದ ಉತ್ಪತ್ತಿ ಎಲ್ಲವು ಗುರುವಿಂದಲಾಯಿತ್ತು. ಮತ್ತೆ ಮರಳಿ, ಮಿಂಡ್ಯ, ಮೈಲಾರ, ಬೀರ, ಭೈರವ, ಎಕ್ಕನಾದಿ, ಕುಕ್ಕನೂರ ಬಸದಿ, ಕ್ಷೇತ್ರ, ಧೂಳನೆಂಬ ಕಿರುದೈವಕ್ಕೆರಗಿ, ನಾನು ಶಿವಭಕ್ತನೆನಿಸಿಕೊಂಬ ಭಂಡ ನಾಯಿಗಳ ಕಂಡು, ಎನ್ನ ಮನ ಹೇಸಿತ್ತು ಕಾಣಾ ಕಲಿದೇವರದೇವಾ.

(೧೮). ತದ್ದು, ತುರಿ, ತಲೆ ಬೇನೆ, ವ್ಯೆಕೆಟ್ಟು, ಸೀತ, ವಾತ, ಬಹು ಜ್ವರ, ಹೊಟ್ಟೆಬೇನೆ, ಕೆಟ್ಟಹುಣ್ಣು, ಮೊದಲಾದ ಇಂತೀ ಮುನ್ನೂರರುವತ್ತು ವ್ಯಾಧಿಯನು ಶಿವನು ಹರಿಯಬಿಟ್ಟು ನೋಡುವ. ಇವೆಲ್ಲವು ಶಿವನ ಕರುಣವಾದಲ್ಲದೆ ಪೋಗವು. ಲೋಕದ ಬುದ್ಧಿಗೇಡಿ ಮನುಜರೆಲ್ಲರು, ಶುದ್ಧಚಿತ್ತವುಳ್ಳ ಜಂಗಮಲಿಂಗದ ಮಾತ ಕೇಳದೆ, ಅದ್ದನ ಜೋಳ, ಅರೆಮಾನ ಎಣ್ಣೆಯಕೊಂಡು, ನೋಟಗಾತಿಯ ಮನೆಗೆ ಹೋಗಿ, ಅವಳು ಹೇಳಿದ ತಾತಿಭೂತದ ಕೋಟಲೆಗೊಳಗಾಗಿ ಕೈಕೊಂಡು ಬಂದು, ಅವಕ್ಕೆ ಊಟವನಿಕ್ಕಿ, ಮಿಕ್ಕಕೂಳ ತಮ್ಮ ಲಿಂಗಕ್ಕೆ ತೋರುವ ಲಿಂಗದ್ರೋಹಿಯ ಮಾತ ಕೇಳಲಾಗದು ಕಲಿದೇವರದೇವಯ್ಯಾ.

(೧೯). ನಿಜಗಂಡನ ಸಂಗವನೊಲ್ಲದೆ ಭುಜಗರ ಸಂಗವ ಮಾಡುವ ಬಾಜಾರಿ ತೊತ್ತಿಗೆಲ್ಲಿಯದೋ ನಿಜ ಮುತ್ತೈದಿತನ? ತ್ರಿಜಗವಂದಿತ ಲಿಂಗವ ಕರಕಮಲದಲ್ಲಿ ಪಿಡಿಕೊಂಡಿರ್ದ ಬಳಿಕ, ಅಲ್ಲಿ ನಂಬಿ ಪೂಜಿಸಿ, ಫಲಪದವಿಯ ಮುಕ್ತಿಯ ಪಡೆಯಲರಿಯದೆ, ಲೋಕದ ಗಜಿಬಿಜಿ ದೈವಂಗಳಿಗೆರಗುವ ಕುನ್ನಿಮಾನವರ ಕಂಡರೆ, ಯಮನು ಜಿಗಿದೆಳೆದೊಯ್ದು ಕೊಲ್ಲದಿಪ್ಪನೇ? ಹಾಗೇ ಸಾಯಲೆಂದಾತ, ನಮ್ಮ ಅಂಬಿಗರ ಚೌಡಯ್ಯನು.

(೨೦). ಒಂದು ಜನ್ಮದಲ್ಲಿ ನಿನ್ನ ಕಲ್ಲದೇವರ ಮಾಡಿ ಪೂಜಿಸಿ, ಜೋಗಿಜಂಗಮುಗೊರವನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಕಟ್ಟಿಗೆ ದೇವರ ಮಾಡಿ ಪೂಜಿಸಿ ಬಡಿಗಕಂಬರನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಮಣ್ಣದೇವರ ಮಾಡಿ ಪೂಜಿಸಿ ತಳವರನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ನೀರ ದೇವರ ಮಾಡಿ ಪೂಜೆಯ ಮಾಡಿ ವಿಪ್ರನಾಗಿ ಹುಟ್ಟಿದೆ. ಒಂದು ಜನ್ಮದಲ್ಲಿ ನಿನ್ನ ಬೆಂಕಿ ದೇವರ ಮಾಡಿ ಪೂಜಿಸಿ ವಿಪ್ರಾಚಾರ್ಯನಾಗಿ ಹುಟ್ಟಿದೆ. ಇಂತಿವೆಲ್ಲವನು ನೀನೆಂದು ಭಾವಿಸಿ ಪೂಜಿಸಿದಲ್ಲಿ ಇಂತೀ ಭವದಲ್ಲಿ ನಾನು ಹುಟ್ಟಿದೆ. ಇಂತೀ ಜಡಸ್ವರೂಪ ನೀನಲ್ಲ, ನೀನು ನಿರಾಳ ನಿಃಶೂನ್ಯನಿರಾಕಾರನೆಂದು ಎನ್ನ ಕರಸ್ಥಲದಲ್ಲಿ ಅರಿದು ಪೂಜಿಸಿ ಸಕಲ ಕುಲದವರಿಗೆ ಹೊರಗಾಗಿ ಕುಲಗೆಟ್ಟು ನಾನಾವ ಜನ್ಮಕ್ಕೆ ಹೋದೆನೆಂದರಿಯೆನಯ್ಯ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗನಿರ್ಮಾಯಪ್ರಭುವೇ.

## (೪). ತೀರ್ಥಯಾತ್ರೆಗಳನ್ನು ಮಾಡಬೇಡ.

(೧). ಒಬ್ಬರ ಮನವ ನೋಯಿಸಿ, ಒಬ್ಬರ ಮನೆಯ ಘಾತವ ಮಾಡಿ, ಗಂಗೆಯ ಮುಳುಗಿದರೆ ಆಗುವದೇನಯ್ಯ? ಚಂದ್ರನು ಗಂಗೆಯ ತಡಿಯಲ್ಲಿದ್ದರೇನು, ಕಲಂಕ ಬಿಡದಾಯಿತಯ್ಯ? ಅದು ಕಾರಣ, ಮನವ ನೋಯಿಸದವನೇ ಘಾತವ ಮಾಡದವನೇ ಪರಮಪಾವನ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ.

(೨). ಗಂಗೆಯಲ್ಲಿ ಮುಳುಗಿ ಬಂದವರೆಲ್ಲ ಪಾಪವ ಮಾಡಿ ಸತ್ತರೆ, ಅವರಿಗೆ ಪುಣ್ಯದ ಪದವಿ ಉಂಟಾದರೆ, ಗಂಗೆ ಘನವೆಂಬೆನು. ಅಲ್ಲದೆ, ಮುಳುಗಿ ಪಾಪವ ಮಾಡದೆ ಸತ್ತು ಹೋದರೆ, ಪುಣ್ಯದ ಪದವಿ ಅವರಿಗುಂಟಾದರೆ, ಘನವೆಂಬೆನು ಕಪಿಲಸಿದ್ಧಮಲ್ಲಿಕಾರ್ಜುನಾ.

(೩). ಗಂಗೆಯೇ ಘನ, ಮುಟ್ಟಿದ ಪ್ರಾಣಿಗಳೆಲ್ಲ ದೇವತೆಗಳೆಂದರೆ, ಸ್ವರ್ಗದಲ್ಲಿ ಗಂಗೆಯ ಸಂಚಾರ ಸಾವಿರಾರು ಗಾವುದ. ಅವುಗಳಲ್ಲಿಯ ಪ್ರಾಣಿಗಳು ಅನಂತನಂತ. ಇಷ್ಟು ಜೀವಿಗಳೆಲ್ಲ ದೇವರಾದರೆ, ಸ್ವರ್ಗದಲ್ಲಿ ನಿಯಮಿತ ದೇವತೆಗಳೆಂಬುದು ಅಪ್ರಸಿದ್ಧ ನೋಡಾ, ಕಪಿಲಸಿದ್ಧಮಲ್ಲಿಕಾರ್ಜುನಾ.

(೪). ಶರಣರ ಸದಾಚರಣೆಗೆ ನದಿ ಕೂಪಂಗಳಿಲ್ಲವೋ. ಹಳ್ಳ ಹೊಂಡಂಗಳಿಲ್ಲವೋ. ಕೆರೆ ಒರತೆಗಳಿಲ್ಲವೋ. ನಾ ಮಾಡಿದೆನೆಂಬುದು ಮನದ ತಾಮಸ. ಇಂತಪ್ಪ ಮನದ ತಾಮಸ, ಕಪಿಲಸಿದ್ಧಮಲ್ಲಿಕಾರ್ಜುನಾ, ಚನ್ನಬಸವಣ್ಣನಿಂದಲೇ ಕಳೆದೆನು, ಕೇಳಾ.

(೫). ನೀರ ಕಂಡಲ್ಲಿ ಮುಳುಗುವರಯ್ಯ! ಮರನ ಕಂಡಲ್ಲಿ ಸುತ್ತುವರಯ್ಯ! ಬತ್ತುವ ಜಲವ ಒಣಗುವ ಮರನ ನೆಚ್ಚಿದವರು ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ?

(೬). ನಿಮ್ಮನರಿಯದ ಕಾರಣ, ಕಯ್ಯಲ್ಲಿ ಹುಲ್ಲು. ನಿಮಗೆರಗದ ಕಾರಣ ಕೊರಳಲ್ಲಿ ನೇಣು. ಹಿಂಡಲೇಕೋ? ತೊಳೆಯಲೇಕೋ? ಮುಳುಗಿ ಮುಳುಗಿ ಮೂಗ ಹಿಡಿಯಲೇಕೋ? ಕೂಡಲಸಂಗನಶರಣರಲ್ಲಿ ದ್ರೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ?

(೭). ಅಷ್ಟಾ ಷಷ್ಟಿಕೋಟಿ ತೀರ್ಥವ ಮಿಂದರಿಲ್ಲ, ಕಾಣಿರಣ್ಣಾ. ಲಕ್ಷಾಲಕ್ಷ ಕೋಟಿ ಜಪವ ನೆನೆಸಿ, ಧ್ಯಾನ, ಮೌನ, ಹೋಮ, ನೇಮ, ಅನು

ಸ್ನಾನವ ಮಾಡಿದರಿಲ್ಲ, ಕಾಣಿರಣ್ಣಾ. ನೂರಿಪ್ಪತ್ತು ವೇಳೆ ಭೂಪ್ರದಕ್ಷಿಣೆಯ ಮಾಡಿದರಿಲ್ಲ, ಕಾಣಿರಣ್ಣಾ. ಕಾಶೀ, ಕೇದಾರ, ಶ್ರೀಶೈಲ, ಶಿವಗಂಗೆಗೆ ಹೋದರಿಲ್ಲ, ಕಾಣಿರಣ್ಣಾ. ಇವು ಎಲ್ಲ ಬರಿಯ ಭ್ರಾಂತಿ, ಕೇಳಿರಣ್ಣಾ. ಇಪ್ಪ ಠಾವು ಹೇಳಿಹೆ, ಕೇಳಿರಣ್ಣಾ. ಶ್ರೀಗುರು ಕರುಣದಿಂದೆ, ಬಿಜಯಂಗೈಸಿ ಕೊಟ್ಟ ಪರಮಲಿಂಗ ತನ್ನ ಕರದಲ್ಲಿ ತುಂಬಿಪ್ಪುದಯ್ಯಾ. ಹಲವು ಕಡೆಗೆ ಹೋಹ ಮನವ ಧ್ಯಾನವೆಂಬ ಹಸ್ತದಲ್ಲಿ ಹಿಡಿದು, ಆ ಲಿಂಗದ ಗೊತ್ತಿನಲ್ಲಿ ಕಟ್ಟಿ, ನೆರೆಯ ಬಲ್ಲರೆ, ಅಲ್ಲಿಪ್ಪನು ಶಂಭು ಪರಮೇಶ್ವರನು. ಇದೇ ನಿಶ್ಚಯ, ಉಳಿದುದೆಲ್ಲ ಹುಸಿ, ಕಂಡೆಯಾ, ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೮). ಜಂಬೂದ್ವೀಪವನೆಲ್ಲ ತಿರಿಗಿದಡೇನು? ಜಂಬುಕ ಶಂಭು ಧ್ಯಾನದಲ್ಲಿ ಸೈವೆರಗಪ್ಪುದೇ? ಕುಂಭಿನಿಯ ತಿರುಗಿ, ಕೋಟಿ ತೀರ್ಥವ ಮಿಂದಡೇನು? ಶಂಭು, ನಿಮ್ಮಲ್ಲಿ ಸ್ವಯವಾಗದವನು ಕುಂಭಿನಿಯ ತಿರುಗಿದ ಡೊಂಬನಂತೆ ಕಾಣಾ, ರಾಮನಾಥಾ.

(೯). ಸುತ್ತಿ ಸುತ್ತಿ ಬಂದಡಿಲ್ಲ. ಲಕ್ಷಗಂಗೆಯ ಮಿಂದಡಿಲ್ಲ. ತುಟ್ಟತುದಿಯ ಮೇರುಗಿರಿಯ ಮೆಟ್ಟಿ ಕೂಗಿದಡಿಲ್ಲ. ನಿತ್ಯ ನೇಮದಿಂದ ತನು ಮುಟ್ಟಿಕೊಂಡಡಿಲ್ಲ. ನಿಚ್ಚಕ್ಕೆ ಮನವನಂದಂದಿಂಗೆ ಅತ್ತಿತ್ತ ಹರಿಯಲೀಯದೆ ಚಿತ್ತದಲ್ಲಿ ಧರಿಸಬಲ್ಲಡೆ, ಬಚ್ಚಬರಿಯ ಬೆಳಗು ಗುಹೇಶ್ವರಲಿಂಗವು.

(೧೦). ಕಾಶಿ, ರಾಮೇಶ್ವರ, ಕೇದಾರ, ಗೋಕರ್ಣ, ಶ್ರೀಶೈಲ, ಹಂಪೆ, ಅಮರಗುಂಡ, ಕಲ್ಯಾಣ, ಸೊನ್ನಲಾಪುರ, ಗಯಾ, ಪ್ರಯಾಗ, ಕೊಲ್ಲಿಪಾಕಿ, ಗಂಗಾಕ್ಷೇತ್ರ, ಶಿವಗಂಗೆ, ನಂಜಿನಗೂಡು, ಉಳುವೆ, ಶಂಭುಲಿಂಗಪರ್ವತ, ಕುಂಭಕೋಣ, ಕಂಚಿ, ಕಾಳಹಸ್ತಿ, ನವನಂದಿಮಂಡಲ, ಕುಮಾರಪರ್ವತ ಮೊದಲಾದ ಕ್ಷೇತ್ರಗಳಲ್ಲಿ, ಕುಂತಳದೇಶ ಮೊದಲಾದ ಐವತ್ತಾರು ದೇಶಗಳಲ್ಲಿ ಭ್ರಾಂತಿಯಿಂದ ಕಲ್ಲು ಮುಳ್ಳು ಮಣ್ಣಿನಲ್ಲಿ ತಿರುತಿರುಗಿ ಸದ್ಭಕ್ತಿಯ ಮಾಡದೆ ಕೆಟ್ಟಿತಯ್ಯಾ, ಮದಿಂದ್ರಿಯ. ಇಂತು ಕೆಡೆಗುಡದೆ ನಿಮ್ಮ ಸದ್ಭಕ್ತ ಹರಳಯ್ಯಗಳ ಮನೆಯ ಬಾಗಿಲವ ಕಾಯ್ವಂತೆ ಮಾಡಯ್ಯ, ಶ್ರೀಗುರುಲಿಂಗಜಂಗಮವೇ.

(೧೧). ಕಾಶೀಯಾತ್ರೆಗೆ ಹೋದೆನೆಂಬ ವೇಶಿಗಳ ಮಾತು ಕೇಳಲಾಗದು. ಕೇದಾರಕ್ಕೆ ಹೋದೆನೆಂಬ ಹೇಸಿ ಹೀನರ ನುಡಿಯ ಲಾಲಿಸಲಾಗದು.

ಸೇತುಬಂಧ ರಾಮೇಶ್ವರಕ್ಕೆ ಹೋದೆನೆಂಬ ಸರ್ವ ಹೀನರ ಮುಖವ ನೋಡ ಲಾಗದು. ಪರ್ವತಕ್ಕೆ ಹೋದೆನೆಂಬ ಪಂಚಮಹಾಪಾತಕರ ಮುಖವ ನೋಡ ಲಾಗದು. ಅದೆಂತೆಂದೊಡೆ, ಕಾಯವೇ ಕಾಶಿ, ಒಡಲೇ ಕೇದಾರ, ಮಾಡಿ ನೀಡುವ ಹಸ್ತವೇ ಸೇತುಬಂಧ ರಾಮೇಶ್ವರ, ಮಹಾಲಿಂಗವ ಹೊತ್ತಿರುವ ಶಿರ ಸ್ಸೇ ಶ್ರೀಶೈಲಪರ್ವತ ನೋಡಾ. ಇಂತಿವನರಿಯದೆ, ಪರ್ವತಕ್ಕೆ ಹೋಗಿ ಪಾತಾ ಳಗಂಗೆಯಲ್ಲಿ ಮುಳುಗಿ ಮುಳುಗಿ, ತಲೆಯ ಬೋಳಿಸಿಕೊಂಡು, ಗಂಗೆಯೊಳು ಕೋಣನ ಹಾಗೆ ಮೈಗೆಟ್ಟು ಘಕ್ಕನೇ ಮುಳುಗಿ ಅಲ್ಲಿಂದ ಬಂದು ಅನ್ನ ವಸ್ತ್ರ ಕುಸುಮವಂ ಕೊಟ್ಟು ಪಾಪ ಹೋಯಿತ್ತೆಂದು ಅಲ್ಲಿಂದ ಬಂದು ಲಿಂಗವಡಿಗಡಿಗೆ ಹೊಯ್ದು, ಬಾರದ ಪಾಪವ ತಾವಾಗ ಬರಿಸಿಕೊಂಡು, ತಗರ ಜನ್ಮದಲ್ಲಿ ಹುಟ್ಟು ವರಯ್ಯಾ. ಕೋಲು ಬುಟ್ಟಿಯುಂ ಕೊಟ್ಟು, ಅಟ್ಟಿಸಿ ಬಿಟ್ಟ ಬಳಿಕ, ಅಲ್ಲಿಂದ ಬಂದ ವರಿಗೆ ಇಲ್ಲಿದ್ದವರು ಹೋಗಿ ಇದಿರುಗೊಂಡು, ಕರೆತರುವದಕ್ಕೆ ಹೋಗುವ ಮೂಳಹೊಲೆಯರಿರಾ, ನೀವು ಕೇಳಿರೋ, ಅದೆಂತೆಂದೊಡೆ, ಶ್ರೀಮಹಾಪರ್ವ ತಕ್ಕೆ ಹೋದವರು ತಿರುಗಿ ಬಪ್ಪರೇ? ಮೇರುಪರ್ವತಕ್ಕೆ ಹೋದವರು ಮರಳಿ ಬಪ್ಪರೇ? ಛೀ ಛೀ ಮೂಳ ದಿಂಡೆಯರಿರಾ, ನೀವು ನೀಳ ಹೊಲೆಯರೆಂದಾತ ನಮ್ಮ ದಿಟ್ಟ ವೀರಾದಿವೀರ ಅಂಬಿಗರಚೌಡಯ್ಯಾ.

(೧೨). ಭಕ್ತರ ಮನೆಯ ಅಂಗಣ ವಾರಣಾಸಿ ಎಂಬುದು ಹುಸಿಯೇ? ಭಕ್ತರ ಮನೆಯ ಅಂಗಣದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲಸಿಪ್ಪವಾಗಿ. ಸುತ್ತಿ ದಡೆ ಶ್ರೀಶೈಲ. ಕೆಲಬಲದಲ್ಲಿ ಕೇದಾರ. ಅಲ್ಲಿಂದ ಹೊರಗೆ ಶ್ರೀವಾರಣಾಸಿ. ವಿರಕ್ತಿ ಬೀಡಾಗಿ, ಭಕ್ತಿ ಮೊಳೆಯಾಗಿ, ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಭಕ್ತರ ಮನೆಯ ಅಂಗಣ ವಾರಣಾಸಿಗಿಂದಲಧಿಕ.

(೧೩). ಅಡಿಗಡಿಗೆ ಸ್ಥಾನನಿಧಿ. ಅಡಿಗಡಿಗೆ ದಿವ್ಯ ಕ್ಷೇತ್ರ. ಅಡಿಗಡಿಗೆ ನಿಧಿನಿಧಾನ ನೋಡಯ್ಯಾ. ಸುತ್ತಿ ಬರೆ ವಾರಣಾಸಿ. ಆತನಿರುವೇ ಅವಿಮುಕ್ತ ಕ್ಷೇತ್ರ, ಕೂಡಲಸಂಗನಶರಣ ಸ್ವತಂತ್ರನಾಗಿ.

(೧೪). ನಿಶ್ಚಲ ಶರಣನ ಅಂಗಣದಲ್ಲಿ ಅಷ್ಟಾಷಷ್ಟಿ ತೀರ್ಥಂಗಳು ನೆಲ ಸಿರ್ಪವಯ್ಯಾ! ನೀನು ಇನಿಸುವೆರಸಿ ಒಲಿದಲ್ಲಿ ನೆಲಸಿರ್ಪವಯ್ಯಾ, ಕಪಿಲಸಿದ್ಧ ಮಲ್ಲಿನಾಥಯ್ಯಾ.

(೧೫). ವಾರಣಾಸಿ ಅವಿಮುಕ್ತ ಇಲ್ಲಿ ಇದ್ದಾನೆ. ಹಿಮದ ಕೇದಾರ ವಿರೂಪಾಕ್ಷ ಇಲ್ಲಿ ಇದ್ದಾನೆ. ಗೋಕರ್ಣ, ಸೇತುರಾಮೇಶ್ವರ ಇಲ್ಲಿ ಇದ್ದಾನೆ. ಶ್ರೀಶೈಲಮಲ್ಲಿನಾಥ ಇಲ್ಲಿ ಇದ್ದಾನೆ. ಸಕಲ ಲೋಕ ಪುಣ್ಯಕ್ಷೇತ್ರ ಇಲ್ಲಿಯೇ ಇದ್ದಿವೆ. ಸಕಳಲಿಂಗ ಉಳಿಯುಮೇಶ್ವರನಿಲ್ಲಿಯೇ ಇದ್ದಾನೆ.

---

## ಲಿಂಗ ಹೋದರೆ ಆತ್ಮಘಾತ ಮಾಡಿಕೊಳ್ಳಬೇಡ.

(೧). ಪ್ರತಿ ಇಲ್ಲದ ಲಿಂಗವು ಭಿನ್ನವಾಯಿತ್ತೆಂದು ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಡು ಆತ್ಮಘಾತಕವ ಮಾಡಿಕೊಂಬ ದ್ರೋಹಿಯ ಮುಖವ ನೋಡಲಾಗದು. ಅದೆಂತೆಂದೊಡೆ, ಮಂತ್ರ ಭಿನ್ನವಿಲ್ಲವಾಗಿ ಪೂಜೆ ಭಿನ್ನವಿಲ್ಲ. ಮಹಾ ಬಯಲೊಳಗಣ ಪ್ರಸಾದದ ಸಂಚವನರಿಯದೆ, ಆತ್ಮಘಾತಕವ ಮಾಡುವ ನರಕಿಗಳನೇನೆಂಬೆನಯ್ಯ ಕೂಡಲಚನ್ನಸಂಗಮದೇವಾ?

(೨). ಮಂತ್ರ ಭಿನ್ನವಾಯಿತ್ತೆಂದು ಕಂಥೆಯ ಬಿಡುವರೇ ಅರಿವುಳ್ಳವರು? ಅದು ದ್ವೇಷವಲ್ಲದೆ ಅರಿವಿಂಗೆ ಸಂಬಂಧವಲ್ಲ. ಮಂತ್ರ ಮಧ್ಯೇ ಭವೇಲ್ಲಿಂಗಂ। ಲಿಂಗಮಧ್ಯೇ ಭವೇನ್ಮಂತ್ರಂ ॥ ಮಂತ್ರ ಲಿಂಗದ್ವಯೋರೈಕ್ಯಂ ಇಷ್ಟಲಿಂಗಂತು ಶಾಂಕರೀ ॥ ಎಂದುದಾಗಿ, ಆ ಮಂತ್ರ ಸರ್ವಾಧಾರ, ಸರ್ವಾತ್ಮಬೀಜವೆಂದರಿಯದ ಈ ಭಾಷೆಹೀನರಿಗೇಕೆ ಶಂಭುಜಕ್ಕೇಶ್ವರಾ?

(೩). ಗುರು ಕಾರುಣ್ಯವುಳ್ಳ ಸದ್ಭಕ್ತನ ಲಿಂಗ ಓಸರಿಸಿದೊಡೆ, ವ್ರತಗೇಡಿ, ಎಂದು ಕಳೆಯಬಾರದು, ಕೊಲ್ಲಬಾರದು, ಮುಂದೆ ಗುರುಕಾರುಣ್ಯ ಮುಂಟಾಗಿ. ಸಾಕ್ಷಿ ॥ ಶುಭ್ರ ಸುಲಭ ಶುದ್ಧಂ ಸಹಸ್ರಜಿತ್ ಪಾವನೇ ॥ ಎಂದುದಾಗಿ, ಮತ್ತೆ ಸಾಕ್ಷಿ ॥ ಅಲಿಂಗಿ ಲಿಂಗರೂಪೇಣ ಯೋ ಲಿಂಗ ಮುಪಜೀವಿತಃ॥ ಸಪಶ್ಯತಿ ಮಹಾಘೋರೆ ನರಕೇ ಕಾಲ ಮಕ್ಷಯಂ ॥ ಎಂದುದಾಗಿ, ಶಸ್ತ್ರ, ಸಮಾಧಿ, ಜಲ, ತಾಡನ, ದಿಗ್ಬಲಿ, ದಹನ, ಈ ಆರರಲ್ಲಿ ಸತ್ತರೆ, ಅಘೋರ ನರಕದಲ್ಲಿಕ್ಕುವ ನಮ್ಮ ಕೂಡಲಚನ್ನಸಂಗಮದೇವಾ.

(೪). ಲಿಂಗ ಬಿದ್ದರೆ, ಸಮಾಧಿಯ ಕೊಂಡೆನೆಂಬರಿ. ಗುರು ಸತ್ತರೇಕೆ ಸಮಾಧಿಯ ಕೊಳ್ಳಿರಣ್ಣಾ? ಬಲ್ಲರೇ ಹೇಳಿ. ಅರಿಯದಿದ್ದರೆ ಕೇಳಿ. ಪೃಥ್ವಿಯಲ್ಲಿ ಹುಟ್ಟಿದ ಕಣಿಯನೇ ತಂದು, ಅಷ್ಟತನುವಿನ ಕಯ್ಯಲ್ಲಿ ಕೊಡಲು, ಇದು

ಮುಟ್ಟಿ ಪೂಜಿಸಲಿಕ್ಕೆ ನಾ ಹ್ಯಾಗೆ ಪೂಜಿಸಲಯ್ಯ? ಲಿಂಗ ಮೂವರಿಗೆ ಹುಟ್ಟಿತು. ಪೃಥ್ವಿಯಲ್ಲಿ ಸಿಲೆಯಾಯಿತ್ತು. ಬಿನ್ನಾಣ ಕಯ್ಯಲ್ಲಿ ರೂಪಾಯಿತ್ತು. ಗುರುವಿನ ಕಯ್ಯಲ್ಲಿ ಮೋಕ್ಷವಾಯಿತ್ತು. ಈ ಲಿಂಗ ಬೀಳಬಲ್ಲುದೇ? ಪೃಥ್ವಿ ತಾಳಬಲ್ಲುದೇ? ಲಿಂಗ ಬಿದ್ದಿತೆಂದು, ಷೋಡಶೋಪಚಾರವ ಮಾಡಲಾಗದು, ಲಿಂಗದ ಗೂಡ ಸಮಾಧಿಯ ಕೊಂಡೆನೆಂತೆಂಬ ಭಕ್ತರಿಗೆ ನಾಯಕ ನರಕ ತಪ್ಪದೆಂದಾತ, ನಿಷ್ಕಳಂಕಮಲ್ಲಿಕಾರ್ಜುನಪ್ರಭುವೇ.

(೫). ದೇವರು ಬಿದ್ದರು, ದೇವರು ಬಿದ್ದರು, ಎಂದು ಸಾಹಿತ್ಯದ ಕೂಡ ಸಾಯಬೇಕೆಂಬಿರಿ. ಅದಾವಾಗ ಬಿದ್ದಿತ್ತೆಂದರಿಯಿರಿ. ಅದಾವಾಗ ಇದ್ದಿತ್ತು, ಅದಾವಾಗ ಬಿದ್ದಿತ್ತೆಂಬುವದು ನೀವು ಬಲ್ಲರೆ ಹೇಳಿರೇ. ಸಾಕ್ಷಿ ॥ ಅದೃಶ್ಯಂ ಭಾವನಾನಾಸ್ತಿ ದೃಶ್ಯಮೇವ ವಿನಶ್ಯತಿ। ಅವರ್ಣಮಕ್ಷರಂ ಬ್ರಹ್ಮತಧ್ಯಾಯಂ ಚವಿಯೋಗಿನಾಂ ॥ ಇದುಕಾರಣ ಕೂಡಲಚನ್ನಸಂಗಯ್ಯ, ನಿಮ್ಮನರಿಯದಾಗ ಬಿದ್ದಿತ್ತು, ಮರೆದಾಗ ಬಿದ್ದಿತ್ತು.

(೬). ಸೃಷ್ಟಿಯ ಮೇಲಣ ಕಣಿಯ ತಂದು, ಇಷ್ಟಲಿಂಗವೆಂದು ಮಾಡಿ, ಅಷ್ಟತನುವಿನ ಕಯ್ಯಲ್ಲಿ ಕೊಟ್ಟು, ಆ ಅಷ್ಟತನುವಿನ ಕಯ್ಯ ತಪ್ಪಿ, ಸೃಷ್ಟಿಯ ಮೇಲೆ ಬಿದ್ದಿತೆಂದು, ಮೆಟ್ಟಿ ಮೆಟ್ಟಿ ಹೂಳಿಸಿಕೊಂಬ ಗುರುದ್ರೋಹಿಗಳ ಮುಖವ ನೋಡಲಾಗದು. ಅವರ ನುಡಿಯ ಕೇಳಲಾಗದು. ಇದಕ್ಕೆ ದೃಷ್ಟಾಂತ. ಗಾರುಡಪುರಾಣೆ:—ಲಿಂಗಮಧ್ಯೆ ಜಗತ್ಸರ್ವಂ ತ್ರೈಲೋಕ್ಯೆ ಸಚರಾಚರಂ। ಲಿಂಗಬಾಹ್ಯ ಪರಂ ನಾಸ್ತಿ ತಸ್ಮೈ ಶ್ರೀಗುರುವೇನಮಃ। “ ಲಿಂಗಂ ಪ್ರಪೂಜಯೇತ್ ” ಇಂತೆಂದುದಾಗಿ, ಇಷ್ಟಲಿಂಗ ಬಿದ್ದರೆ, ಆಚಾರಲಿಂಗ ಬಿದ್ದಿತೇ? ಆಚಾರಲಿಂಗ ಬಿದ್ದರೆ, ಗುರುಲಿಂಗ ಬಿದ್ದಿತೇ? ಗುರುಲಿಂಗ ಬಿದ್ದರೆ, ಶಿವಲಿಂಗ ಬಿದ್ದಿತೇ? ಶಿವಲಿಂಗ ಬಿದ್ದರೆ, ಜಂಗಮಲಿಂಗ ಬಿದ್ದಿತೇ? ಜಂಗಮಲಿಂಗ ಬಿದ್ದರೆ, ಪ್ರಸಾದಲಿಂಗ ಬಿದ್ದಿತೇ? ಪ್ರಸಾದಲಿಂಗ ಬಿದ್ದರೆ, ಮಹಾಲಿಂಗ ಬಿದ್ದಿತೇ? ಅಕಟಕಟ, ಷಡ್ವಿಧಲಿಂಗದ ಭೇದವನರಿಯದೆ, ಕೆಟ್ಟ ಕೇಡ ನೋಡಾ. ಅಭ್ಯಾಸವ ಮಾಡುವಲ್ಲಿ, ಕೋಲು ಬಿದ್ದರೆ, ತನ್ನ ತಾನೇ ಇರಿದುಕೊಂಡು ಸಾಯಬಹುದೇ? ಆ ಕೋಲಿನಲ್ಲಿ ಗರಡಿಯ ಮನೆಯನೇ ಹೊಕ್ಕು, ಅಭ್ಯಾಸವ ಮಾಡಿ, ಸುರಗಿಯ ಮೊನೆಯನೇ ಗೆಲಿಯಬೇಕಲ್ಲದೆ? ಇದುಕಾರಣ, ಜಲ, ಅಗ್ನಿ, ನೇಣು, ವಿಷ, ಅಸಿಪತ್ರ, ಸಮಾಧಿ, ಇಂತಿದರಿಂದ ಪ್ರಾಣಹಿಂಸೆಯ

ಮಾಡುವದು, ಅವರಿಗೆ ಅಘೋರನರಕದಲ್ಲಿ ಎದ್ದೆದ್ದಿಕ್ಕುವ ನಮ್ಮ ಕೂಡಲ ಚನ್ನಸಂಗಮದೇವಾ.

(೭). ಅಂಗದ ಮೇಲಣ ಲಿಂಗ ಹಿಂಗಿತೆಂದು ಆತ್ಮಘಾತಕವ ಮಾಡಿ ಕೊಳ್ಳಬೇಕೆಂಬ ಅಜ್ಞಾನಿಗಳು ನೀವು ಕೇಳಿರೋ. ಅಂಗವಾವುದು ಎಂದರಿಯರಿ, ಲಿಂಗವಾವುದು ಎಂದರಿಯಿರಿ. ಅಂಗವೆಂದಡೆ ಆತ್ಮನು, ಲಿಂಗವೆಂದಡೆ ಸತ್ತು. ಈ ಎರಡರ ಸಂಬಂಧದ ಸಂಚವನರಿಯದೆ, ಅಂಗದ ಮೇಲಣ ಲಿಂಗ ಹಿಂಗಿತೆಂಬವರಿಗೆ ಪ್ರಾಣಲಿಂಗ ನಾಸ್ತಿ. ಪ್ರಾಣಲಿಂಗವಿಲ್ಲದವರಿಗೆ ಪ್ರಸಾದವೆಲ್ಲಿ ಯದೋ? ಆ ಪ್ರಸಾದವಿಲ್ಲದವರಿಗೆ ಮುಕ್ತಿ ಎಲ್ಲಿಯದೋ, ಕೂಡಲಚನ್ನ ಸಂಗಮದೇವಾ?

(೮). ಇಷ್ಟಲಿಂಗ ಪ್ರಾಣಲಿಂಗವೆಂಬ ಕಷ್ಟವೆಲ್ಲಿಯದೋ? ಇಷ್ಟ ಲಿಂಗ ಹೋದಡೆ, ಪ್ರಾಣಲಿಂಗ ಹೋಗದು ನೋಡಾ. ಇಷ್ಟಲಿಂಗ ಪ್ರಾಣ ಲಿಂಗವೆಂಬ ಭೇದವನು ಗುಹೇಶ್ವರಾ, ನಿಮ್ಮ ಶರಣಬಲ್ಲ.

(೯). ವ್ರತಗೇಡಿ, ವ್ರತಗೇಡಿ, ಎಂಬುವ ತಾನೇ ವ್ರತಗೇಡಿ. ವ್ರತ ಗೆಡಲಿಕ್ಕೇನು ಹಾಲಂಬಿಲವೇ? ವ್ರತಗೆಟ್ಟ ಬಳಿಕ, ಘಟ ಉಳಿಯಬಲ್ಲುದೇ? ಕಾಯದೊಳಗೆ ಜೀವವುಳ್ಳನ್ನಕ್ಕರ, ಅದೇ ಪ್ರಾಣಲಿಂಗವು, ಕಾಣಾ ಗುಹೇಶ್ವರಾ.

**ಅರ್ಥ:**—ಕಾಯವೇ ಭಕ್ತ, ಪ್ರಾಣವೇ ಲಿಂಗವಾಗಿರ್ಪ ಭೇದವನರಿಯದೆ, ಬೇರೆ ಮತ್ತೆ ಲಿಂಗ ಬಿದ್ದಿತ್ತೆಂದು ನುಡಿವಮಾತು ಅಜ್ಞಾನವೆಂಬುದೀ ವಚನಾರ್ಥ.

(೧೦). ಸೃಷ್ಟಿಯ ಮೇಲಣ ಕಣಿಯ ತಂದು, ಅಷ್ಟತನುವಿನ ಕಯ್ಯಲ್ಲಿ ಕೊಡಲು, ಅಷ್ಟತನು ತಪ್ಪಿ ಸೃಷ್ಟಿಯ ಮೇಲೆ ಬಿದ್ದರೆ, ಕೆಟ್ಟನಲ್ಲಾ ಅನಾಚಾರಿ, ಎಂದು ಮುಟ್ಟರು ನೋಡಾ. ಮುಟ್ಟದ ಭೇದವನು ಖಂಡಿಸಿದ ಭಾವವನು ವ್ರತಗೇಡಿಗಳು ತಾವೆತ್ತ ಬಲ್ಲರು ಗುಹೇಶ್ವರಾ?

**ಅರ್ಥ:**—ಅಂಗದ ಮೇಲೆ ಲಿಂಗವಿದ್ದು ಅಂಗವಿಕಾರ ಹಿಂಗದಿಪ್ಪವರು ಮುನ್ನವೇ ತಾವು ಲಿಂಗಕ್ಕೆ ಭಿನ್ನವಾಗಿಹರು. ಆ ಸ್ಥಿತಿಯನರಿಯದೆ, ಕಯ್ಯ ಕುರುಹು ನೆಲಕ್ಕೆ ಬಿದ್ದಿತ್ತು ಎಂದು ಸಾವವರು ಉಭಯ ಭ್ರಷ್ಟರೆಂಬುದೀ ವಚನದ ತಾತ್ಪರ್ಯಾರ್ಥ.

(೧೧). ಭಾಷೆಗಿರಿಸಿ ತನುವಿಂಗಲಗುಕೊಂಡರೆ, ಲಿಂಗ ಓಸರಿಸಿತ್ತಯ್ಯಾ. ಆತನು ವೀರನೆನಿನಿಸುವ. ಲಿಂಗಕ್ಕೆ ದೂರ, ಜಂಗಮಕ್ಕೆ ದೂರ, ಪ್ರಸಾದಕ್ಕೆ ದೂರ, ವ್ರತಗೇಡಿಯಹನು, ಕಾಣಿರಣ್ಣಾ. ಇದು ಕಾರಣ, ನಮ್ಮ ಕೂಡಲ ಚನ್ನಸಂಗಯ್ಯಾ, ಇವನು ಬ್ರಹ್ಮೇತಿಕಾರನೆನಿಸುವನು.

(೧೨). ಕಟ್ಟಿದಾತ ಭಕ್ತನಪ್ಪನೇ? ಕೆಡಹಿದಾತ ದ್ರೋಹಿಯಪ್ಪನೆ? ಲಿಂಗವು ಕಟ್ಟಲಿಕ್ಕೆ ತನ್ನ ಕೈಯ್ಯೊಳಗಿಪ್ಪುದೇ? ಕೆಡಹಲಿಕ್ಕೆ ಬೀಳಬಲ್ಲುದೇ? ಆ ಲಿಂಗವು ಬಿದ್ದ ಬಳಿಕ ಜಗವು ತಾಳಬಲ್ಲುದೇ? ಪ್ರಾಣಲಿಂಗವು ಬಿದ್ದ ಬಳಿಕ, ಪ್ರಾಣಲಿಂಗ ಉಳಿಯಬಲ್ಲುದೇ? ಲಿಂಗ ಬಿದ್ದಿತೆಂಬುದು ಸೂತಕದ ಶಬ್ದ, ಭ್ರಾಂತುವಿನ ಪುಂಜ. ಅಂತು ಅದ ಕೇಳಲಾಗದು. ಯುಗಜುಗಂಗಳು ಗತವಹ ವಲ್ಲದೆ, ಲಿಂಗಕ್ಕೆ ಗತ ಉಂಟೇ? ಲಿಂಗವು ಬಿದ್ದಿತೆಂದು ನಿಂದಿಸಿ ನುಡಿವ ದ್ರೋಹಿಯ ಮಾತು ಕೇಳಲಾಗದು, ಕಾಣಾ ಗುಹೇಶ್ವರಾ.

(೧೩). ಅಂಗದೊಳಗೆ ಮಹಾಲಿಂಗವಿರಲು, ಕಯ್ಯಲಿಂಗವು ಬಿದ್ದಿ ತೆಂದು ನೆಲದೊಳಗಂಗವ ಹೂಳುವರು ಭಂಗಬಡುವರಲ್ಲಾ, ಗುಹೇಶ್ವರಾ ಲಿಂಗ ವನರಿಯದ ಜಡರುಗಳು!

(೧೪). ತೆರಹಿಲ್ಲ, ಲಿಂಗಭರಿತವೆಂದು, ನಾಮವಿಡಿದು ಪೂಜಿಸಿ, ಮರಳಿ ಬಿದ್ದಿತ್ತೆಂಬ ನಾಚಿಕೆಯು ನೋಡಾ. ಆರಾರರಿಯರು ಪ್ರಾಣಲಿಂಗದ ನೆಲೆಯನು. ಅರಿದು ಕುರುಹಿಂಗೆ ವೇಳೆಯ ಮಾಡುವರು ಭ್ರಷ್ಟರು. ಅರಿದರಿದು ಸ್ವಯಂಭು ವಾದಲಿಂಗ ಓಸರಿಸಿತ್ತೆಂದು ಒಡನೆ ಸಾವ ವ್ರತಗೇಡಿಗಳನೊಲ್ಲ, ನಮ್ಮ ಕೂಡಲ ಚನ್ನಸಂಗಮದೇವಾ.

(೧೫). ತೆರಹಿಲ್ಲದ ಮಹಾಘನಪರಿಪೂರ್ಣಲಿಂಗವು ಬೀಳಲಿಕ್ಕೆ ತೆರ ಹುಂಟೇ? ಅರಿಯರರಿಯರು ಪ್ರಾಣಲಿಂಗದ ನೆಲೆಯನು. ಅರಿಯದೆ ಅಜ್ಞಾನ ದಲ್ಲಿ ಕುರುಹು ಬಿದ್ದಿತ್ತೆಂದು ಪ್ರಾಣಘಾತಕವ ಮಾಡಿಕೊಂಡು ಸಾವ ಅಜ್ಞಾನಿ ಗಳ ನೋಡಾ! ಅರಿದು ಕೂಡಿ, ಸ್ವಯವಾಗಿರ್ದ ಲಿಂಗವು ಓಸರಿಸಿತ್ತೆಂದು ಆ ಲಿಂಗದೊಡನೆ ಸಾವ ಅಜ್ಞಾನಿಗಳಿಗೆ ಅಘೋರ ನರಕ ತಪ್ಪದು ಕಾಣಾ, ಕೂಡಲಚನ್ನಸಂಗಮದೇವಾ.

(೧೬). ಉಭಯದಳ ನಡೆದು ಬಂದು ಮುಂದೆ ನಿಂದಿರ್ದು, ಭಾಷೆ ಯಾಗಿ ಬಿರಿದ ನುಚ್ಚರಿಸುತ್ತ ಹೊಯ್ದು ಕೂಡಾಡುವ ಕಾಳಗದೊಳಗೆ ಕೆಯ್ದು

ಬಿದ್ದರೆ ಭಂಗವಲ್ಲದೆ, ಶಸ್ತ್ರವಿದ್ಯೆಯ ಕಲಿವೆನೆಂದು ಅಭ್ಯಾಸವ ಮಾಡುವ ಗರಡಿಯಲ್ಲಿ ಕೋಲು ಬಿದ್ದರೆ ಭಂಗವೇ? ಅಲ್ಲ. ಮರುಳೇ ಕೇಳು. ಕೋಲ ಕಳೆದುಕೊಂಡು, ಅಭ್ಯಾಸವ ಮಾಡುವದೇ ಉಚಿತವಲ್ಲದೆ, ಕೋಲು ಬಿದ್ದರೆ, ನಾನಿನ್ನು ಅಭ್ಯಾಸವ ಮಾಡಲಾಗದೆಂಬ ಗಾವಿಲರ ಮಾತು ಕೇಳಲಾಗದು. ದೃಷ್ಟವೇ ಕೋಲು, ಆ ದೃಷ್ಟವೇ ಕೈದು. ಕಾಣಬಾರದ ಲಿಂಗವಕಾಂಬಡೆ ತನ್ನ ಶಕ್ತಿ ಕಾಣಾ, ಕೂಡಲಚನ್ನಸಂಗಮದೇವಾ.

(೧೭). ಶ್ರೀಗುರು ಶಿಷ್ಯಂಗೆ ಮಂತ್ರವ ಮೂರ್ತಿಗೊಳಿಸಬೇಕಾಗಿ, ಪೃಥ್ವಿಯ ಮೇಲಣ ಕಣಿಯ ತಂದು, ಇಷ್ಟಲಿಂಗಮಂ ಮಾಡಿ, ಶಿಷ್ಯನ ತನುವಿನ ಮೇಲೆ ಅವಧರಿಸಿದ ಲಿಂಗವು ಅವದಳವಾಗಿ ಭೂಮಿಯಲ್ಲಿ ಸಿಂಹಾಸನಂಗೊಂಡಿತ್ತೆಂದು ಸಮಾಧಿಯ ಹೋಗುವರಯ್ಯಾ! ಲಿಂಗಕ್ಕೆ ಅವದಳವಾದರೆ, ಭೂಮಿ ತಾಳಬಲ್ಲುದೇ? ಮಾರಾಂತನ ಗೆಲಿವೆನೆಂದು ಗರುಡಿಯ ಹೊಕ್ಕು ಕಠಾರಿಯ ಕೋಲ ಕಳೆದುಕೊಂಡು, ಸಾಧನೆಯ ಮಾಡುವಲ್ಲಿ, ಕೈತಪ್ಪಿ ಕೋಲು ನೆಲಕ್ಕೆ ಬಿದ್ದರೆ, ಆ ಕೋಲಂ ಬಿಟ್ಟು, ಸಾಧನೆಯಂ ಬಿಟ್ಟು ಕಳವರೇ ಅಯ್ಯಾ? ತಟ್ಟು ಮುಟ್ಟಿ ಹಳಚುವಲ್ಲಿ, ಅಲಗು ಬಿದ್ದರೆ ಭಂಗವಲ್ಲದೆ, ಕೋಲು ಬಿದ್ದರೆ ಭಂಗವೇ ಅಯ್ಯಾ? ಆ ಕೋಲಂ ಕಳೆದುಕೊಂಡು ಸಾಧನೆಯಂ ಮಾಡುವದೇ ಕರ್ತವ್ಯ. ಆ ಲಿಂಗ ಹುಸಿ ಎಂದಡೇನಯ್ಯಾ? ಶ್ರೀವಿಭೂತಿ ವೀಳೆಯಕ್ಕೆ ಸಾಕ್ಷಿಯಾಗಿ ಬಂದ ಶಿವಗಣಂಗಳು ಹುಸಿಯೇ? ಆ ಗಣಂಗಳು ಹುಸಿಯಾದಡೆ, ಕರ್ಣಮಂತ್ರ ಹುಸಿಯೇ? ಆ ಕರ್ಣಮಂತ್ರ ಹುಸಿಯಾದಡೆ, ಶ್ರೀಗುರುಲಿಂಗವು ಹುಸಿಯೇ? ಶ್ರೀಗುರುಲಿಂಗವು ಹುಸಿಯಾದಡೆ, ಜಂಗಮಲಿಂಗ ಹುಸಿಯೇ? ಆ ಜಂಗಮಲಿಂಗ ಹುಸಿಯಾದಡೆ, ಪಾದ ತೀರ್ಥ ಪ್ರಸಾದ ಹುಸಿಯೇ? ಇಂತೀ ಷಟ್‌ಸ್ಥಲವ ತುಚ್ಛವ ಮಾಡಿ, ಗುರೂಪದೇಶವ ಹೀನವ ಮಾಡಿ, ಸಮಾಧಿಯ ಹೊಗುವ ಪಂಚಮಹಾಪಾತಕರ ಮುಖವ ನೋಡಲಾಗದು, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

(೧೮). ತೆರಹಿಲ್ಲದ ಘನವು ಭಿನ್ನವಾಯಿತ್ತೆಂದು ತನುವಿನ ಮೇಲೆ ಶಸ್ತ್ರವನ್ನಿಕ್ಕಿಕೊಂಬ ಶಿವದ್ರೋಹಿಯ ಮುಖವ ನೋಡಲಾಗದು. ಕಲುಕುಟಿಗ ಮುಟ್ಟಿ ಚಕ್ಕಳಿವಲ್ಲಿ, ಪ್ರಾಣಲಿಂಗವು ಭಿನ್ನವಾಯಿತ್ತೆ, ಭಾವಲಿಂಗ ಭಿನ್ನವಾಯಿತ್ತೇ, ಪೂಜಾಲಿಂಗವು ಭಿನ್ನವಾಯಿತ್ತಲ್ಲದೆ? ಇಂತೀ ನಿರಾಳದ ನೆಲೆಯ

ಸೋಂಕನರಿಯರಾಗಿ, ಇಷ್ಟಲಿಂಗ ಸಂಬಂಧಿಗಳ ಕಷ್ಟವ ನೋಡಾ ಕೂಡಲ ಚನ್ನಸಂಗಮದೇವಾ.

(೧೯). ಪರುಷದ ಲಿಂಗವಿದ್ದು ಕಾಣಲರಿಯದೆ, ಇಷ್ಟಲಿಂಗ ಬಿದ್ದಿತ್ತೆಂದು ತನುವಿನ ಮೇಲೆ ಶಸ್ತ್ರವನಿಕ್ಕಿಕೊಂಡು ಸಾವರು. ಅರಿದರಿವು ಗುರುಶಿಷ್ಯ ಸಂಬಂಧವು ಅರುಹುಳ್ಳವರಿಗಲ್ಲದೆ, ಮತ್ತಾರಿಗೆಯೂ ಆಗದು. ಕರುಹು ಘನವೋ ಅಂಗ ಘನವೋ? ಅರೆ ಅರುಹುಳ್ಳವರು ನೀವು ಕೇಳಿರೇ, ಮರುಹು ಕವಿದಿಹುದು. ಶ್ರೀಗುರು ಕುರುಹ ತೋರಿದನಲ್ಲದೆ, ಅರುಹ ಮರೆದರೆ ಕೂಡಲಚನ್ನ ಸಂಗನವರಿಂಗಂದೆ ದೂರ.

(೨೦). ಗುರು ಸತ್ತರೆ, ಸಮಾಧಿಯ, ಹೋಗಲೊಲ್ಲರಯ್ಯ! ಲಿಂಗಬಿದ್ದರೆ, ಸಮಾಧಿಯ ಹೊಕ್ಕೆವೆಂಬರು. ಗುರುವಿಂದೆ ಲಿಂಗವಾಯಿತ್ತೇ? ಲಿಂಗದಿಂದ ಗುರುವಾದನೋ? ಅದೆಂತೆಂದೊಡೆ, ಪೃಥ್ವಿಯಲ್ಲಿ ಹುಟ್ಟಿತ್ತು. ಕಲ್ಲುಕುಟಿಗನಿಂದ ರೂಪಾಯಿತ್ತು. ಗುರುವಿನ ಹಸ್ತದಿಂದ ಲಿಂಗವಾಯಿತ್ತು. ಇಂತೀ ಮೂವರಿಗೆ ಹುಟ್ಟಿದ ಲಿಂಗವ ಕಟ್ಟಿ ಜಗವೆಲ್ಲ ಭಂಡಾಯಿತ್ತು ನೋಡಿರೋ. ಅಣ್ಣಾ, ಲಿಂಗಬಿದ್ದಿತ್ತು, ಬಿದ್ದಿತ್ತೆಂದು ನೋಯಲೇಕೆ? ಬಿದ್ದ ಲಿಂಗವನೆತ್ತಿಕೊಂಡು ಷೋಡಶೋಪಚಾರವಮಂ ಮಾಡುವದು. ಹೀಗಲ್ಲದೆ, ಶಸ್ತ್ರ, ಸಮಾಧಿ, ದುರ್ಮರಣವ ಮಾಡಿಕೊಂಡಿಹೆನೆಂಬ ಪಂಚಮಹಾಪಾತಕಂಗೆ ನಾಯಕನರಕ. ಲಿಂಗವು ಬೀಳಬಲ್ಲುದೇ? ಭೂಮಿಯಾನಬಲ್ಲುದೇ? ಸದ್ಗುರುನಾಥನಿಲ್ಲವೇ? ಇಂತೀ ಕಟ್ಟುವ ತೆರ, ಮುಟ್ಟುವ ಭೇದವ ಆರು ಬಲ್ಲರೆಂದಡೆ, ಈರೇಳುಭುವನ ಹದಿನಾಲ್ಕು ಲೋಕದೊಡೆಯ ಪೂರ್ವಾಚಾರಿ ಕೂಡಲಚನ್ನಸಂಗಯ್ಯನಲ್ಲದೆ ಮಿಕ್ಕಿನ ಮಾತಿನಜ್ಞಾನಿಗಳೆತ್ತ ಬಲ್ಲರು?

(೨೧). ಅಂಗದೊಳಗಿಪ್ಪುದು ಲಿಂಗವಲ್ಲ. ಅಂಗದ ಹೊರಗಿಪ್ಪುದು ಲಿಂಗವಲ್ಲ. ಎಲ್ಲಿ ಅಂಗವನೊಳಕೊಂಡಿಪ್ಪ ಲಿಂಗ ಹೋಗುತ್ತ ಬರುತ್ತ ಇಪ್ಪುದಲ್ಲ. ಚಲನೆಯಿಲ್ಲದ ಅಚಲವಪ್ಪ ಲಿಂಗಕ್ಕೆ ಹೋಯಿತ್ತು, ಹೋಯಿತ್ತೆಂಬ ಸಂದೇಹವಿಲ್ಲವೆಂದನಂಬಿಗಚೌಡಯ್ಯ.

(೨೨) ಪೃಥ್ವಿಯ ಪಾಷಾಣ ಪೃಥ್ವಿಯ ಮೇಲೆ ಬಿದ್ದು ಹೋದರೆ ಪ್ರಾಣಲಿಂಗ ಹೋಯಿತ್ತು, ಪ್ರಾಣಲಿಂಗ ಹೋಯಿತ್ತೆಂಬಿರಿ. ಪ್ರಾಣಲಿಂ

ಹೋದರೆ, ನೀವು ನುಡಿವ ಪರಿ ಎಂತೋ? ಅಂತರಂಗದ ಪ್ರಾಣಲಿಂಗದ ಸಂಬಂಧದ ಹೊಲಬನರಿಯರಾಗಿ, ಗುಹೇಶ್ವರ ನೀ ಮಾಡಿದ ಬೆಡಗು ಬಿನ್ನಾಣಕ್ಕೆ ನಾನು ಬೆರಗಾದೆನು.

(೨೩). ಶ್ರೀಗುರುದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲಿರಿಸಿದಾಗಲೇ ಎನ್ನ ಭವಂ ನಾಸ್ತಿಯಾಯಿತ್ತು. ಎನ್ನ ತನ್ನಂತೆ ಮಾಡಿದ. ಎನಗೆ ತನಗೆ ತೆರಹಿಲ್ಲದಂತೆ ಮಾಡಿದನು ನೋಡಾ. ತನ್ನ ಕರಸ್ಥಲದಲ್ಲಿರ್ದ ಮಹಾಲಿಂಗವನೆನ್ನ ಕರಸ್ಥಲದಲ್ಲಿ ಮೂರ್ತಿಗೊಳಿಸಿದ. ಎನ್ನ ಕರಸ್ಥಲದಲ್ಲಿರ್ದ ಮಹಾಲಿಂಗವನು ಎನ್ನ ಮನಸ್ಥಲದಲ್ಲಿ ಮೂರ್ತಿಗೊಳಿಸಿದನು. ಎನ್ನ ಮನಸ್ಥಲದಲ್ಲಿರ್ದ ಮಹಾಲಿಂಗವನು ಎನ್ನ ಭಾವಸ್ಥಲದಲ್ಲಿ ಮೂರ್ತಿಗೊಳಿಸಿದನು. ಎನ್ನ ಭಾವಸ್ಥಲದಲ್ಲಿರ್ದ ಮಹಾಲಿಂಗವನು ಜ್ಞಾನಸ್ಥಲದಲ್ಲಿ ಮೂರ್ತಿಗೊಳಿಸಿದನು. ಎನ್ನ ಜ್ಞಾನಸ್ಥಲದಲ್ಲಿರ್ದ ಮಹಾಲಿಂಗವನು ಎನ್ನ ಒಳಹೊರಗೆ ಸರ್ವಾಂಗದೊಳ್ತೆರಪಿಲ್ಲದಳಿಸಿಕೊಂಡ ಬಳಿಕ, ಕಬ್ಬುಮೆದ್ದು, ತನಿರಸವನುಂಡು, ಹಿಪ್ಪಿಯ ನುಗುಳುವಂತೆ, ಮೆಯ್ಯಮೇಲಣ ಪಾಷಾಣ ಹೋಯಿತ್ತೆಂದು ಆತ್ಮಘಾತಕವ ಮಾಡಿಕೊಂಬ ಬ್ರಹ್ಮೇತಿ ಸೂನೆಗಾರರ ಎನಗೆ ತೋರದಿರಾ ಚನ್ನಮಲ್ಲಿಕಾರ್ಜುನಾ.

---

## ಜ್ಯೋತಿಷ್ಯವನ್ನು ನಂಬಬೇಡ.

(೧). ಸೋಮವಾರ ಮಂಗಳವಾರವೆಂದು ಮಾಡುವ ಭಕ್ತನ ಲಿಂಗಭಕ್ತಂಗೆಂತು ಸರಿ ಎಂಬೆನಯ್ಯ? ದಿನ ಶ್ರೇಷ್ಠವೋ, ಲಿಂಗ ಶ್ರೇಷ್ಠವೋ? ದಿನ ಶ್ರೇಷ್ಠವೆಂದು ಮಾಡುವ ದುರಾಚಾರಿಯ ಮುಖವ ನೋಡಲಾಗದು. ಆತ ದಿನವೇ ಘನವೆಂದು, ದಿನವೇ ದೈವವೆಂದು ಮಾಡುವನಾಗಿ, ಆತ ದಿನದ ಭಕ್ತನು. ಲಿಂಗಭಕ್ತನು ಲಿಂಗವೇ ಘನವೆಂದು, ಲಿಂಗವೇ ದೈವವೆಂದು, ಮಾಡುವನಾಗಿ, ಆತ ಲಿಂಗಭಕ್ತನು. ಅಂತಹ ದಿನದ ಭಕ್ತಂಗೆಯೂ ಲಿಂಗಭಕ್ತಂಗೆಯೂ ಸಮವೆಂದಡೆ, ಪಂಚಮಹಾಪಾತಕ ತಪ್ಪದು. ಅದೆಂತೆಂದೊಡೆ, ಸೌಮೆ ಭೌಮೆ ವ್ಯತೀಪಾತೆ ಸಂಕ್ರಾಂತೆ ಶಿವರಾತ್ರಯೇ। ಏಕಭುಕ್ತೋಪವಾಸೇನ ನರಕೇ ಕಾಲಮಕ್ಷಯಂ। ಎಂದುದಾಗಿ, ಇದುಕಾರಣ ದಿನವಾರಂಗಳು ಶ್ರೇಷ್ಠವೆಂದು,

ಏಕಭುಕ್ತೋಪವಾಸಂಗಳಂ ಮಾಡುವ ಭಕ್ತಂಗೆ ಕುಂಭೀಪಾತಕ ನಾಯಕ ನರಕ ತಪ್ಪದು, ಕೂಡಲಸಂಗಮದೇವಾ.

(೨). ತಿಥಿವಾರವೆಂದರಿಯೆನಯ್ಯಾ. ಲಗ್ನವಿಲಗ್ನವೆಂದರಿಯೆನಯ್ಯಾ. ಇದನರಿತು ಹದಿನಾರು ವಾರ ಹದಿನೆಂಟು ಕುಲವೆಂದೆಂಬರು. ನಾವಿದನರಿಯೆನಯ್ಯಾ. ಇರುಳೊಂದು ವಾರ, ಹಗಲೊಂದು ವಾರ, ಭವಿಯೊಂದು ಕುಲ, ಭಕ್ತನೊಂದು ಕುಲ. ನಾವು ಬಲ್ಲುದು ಇದು ತಾನೆ, ಬಸವಪ್ರಿಯಕೂಡಲಚನ್ನಸಂಗಮದೇವಾ.

(೩). ಅಷ್ಟಮಿೂ ನವಮಿೂ ಎಂಬ ಕಲ್ಪಿತವೇಕೊ ಶರಣಂಗೆ? ತಪ್ಪಿತ್ತು ಗಣಪದವಿ. ಲಿಂಗಕ್ಕೆ ದೂರ. ಒಬ್ಬರಿಗಾಳಾಗಿ, ಒಬ್ಬರನೋಲೈಸುವ ನಿರ್ಬುದ್ಧಿ ಮನುಜರನೇನೆಂಬೆ ಕೂಡಲಸಂಗಮದೇವಾ?

(೪). ಪಂಚಾಂಗ ಪಂಚಾಂಗವೆಂದು ಕಳವಳಗೊಂಡು ಜೋಯಿಸನ ಕರೆಯಿಸಿ, ಕೈಮುಗಿದು ಕಾಣಿಕೆಯನಿಕ್ಕಿ, ಎಲೆ ಅಡಿಕೆಯಂ ಕೊಟ್ಟು, ಜೋಯಿಸನ ವಾಕ್ಯವು ಸಕಲ ಕಾರ್ಯಕ್ಕೆ ಸಿದ್ಧಿ ಎಂದು, ಅವನ ಬಾಯತೊಂಬುಲ ತಿಂಬ ಹಂದಿಗಳೇನು ಬಲ್ಲರಯ್ಯಾ, ಶಿವಾಚಾರ ಪದ್ಧತಿಯನು? ಪಂಚಾಂಗವೆಂಬ ಶಬ್ದಕ್ಕೆ ಅರ್ಥವ ಹೇಳಲರಿಯದೆ ಜೋಯಿಸರು ಕೆಟ್ಟರು. ಕೇಳಲರಿಯದೆ ಅನಂತ ಹಿರಿಯರು ನರಕಕ್ಕೆ ಇಳಿದರು. ಪಂಚಾಂಗವೆಂದೊಡೆ ಹೇಳಿಹೆ, ಕೇಳಿರಣ್ಣಾ. ಪಂಚ ಅಂದರೆ ಐದು, ಅಂಗವೆಂದರೆ ದೇಹವು. ಪ್ರಥ್ವಿ, ಅಪ್, ತೇಜ, ವಾಯು, ಆಕಾಶ ಈ ಪಂಚವು ಕೂಡಿ ದೇಹವಾಯಿತ್ತು. ಆ ದೇಹದೊಳಗೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರದಚ್ಚು ಮುರಿಯುವದೇ ಪಂಚಾಂಗ. ಸತ್ವರಜತಮವೆಂಬ ಅಹಂಕಾರ ತುಳಿವುದೇ ಪಂಚಾಂಗ. ಆಣವ ಮಲ ಮಾಯಾ ಮಲ ಕಾರ್ಮಿಕ ಮಲ ಇವನು ಮುಟ್ಟದಿರುವದೇ ಪಂಚಾಂಗ. ತನ್ನ ಸತಿಯ ಸಂಗವಲ್ಲದೆ, ಪರಸತಿಯರ ಮುಟ್ಟದಿರುವುದೇ ಪಂಚಾಂಗ. ತನ್ನ ಇಷ್ಟಲಿಂಗವಲ್ಲದಕ್ಕೆ ಕೈ ಮುಗಿಯದಿರುವದೇ ಪಂಚಾಂಗ. ಜಾತಿಸೂತಕ, ಜನನಸೂತಕ, ಉಚ್ಛಿಷ್ಟ ಸೂತಕ, ಮೃತಸೂತಕ, ರಜಸೂತಕ, ಈ ಪಂಚಸೂತಕವಳಿವ ಶರಣರು ಕೇಳುವರಾಗಿ, ಶಿವಭಕ್ತರಿಗೆಲ್ಲ ಕ್ರಿಯಾ, ಜ್ಞಾನ, ಇಚ್ಛಾ, ಆದಿ, ಚಿತ್‌ಶಕ್ತಿಯಾದುದೇ ಪಂಚಾಂಗ. ಲಿಂಗಾಚಾರ, ಸದಾಚಾರ, ವೃದ್ಧಾಚಾರ, ಶಿವಾಚಾರ, ಗಣಾಚಾರವೇ ಪಂಚಾಂಗ. ಗುರುಪ್ರಸಾದ ಜಂಗಮಪ್ರಸಾದ ಗಣಪ್ರಸಾದ ಮಹಾಪ್ರ

ಸಾಗ ಕೊಂಬುವದೇ ಪಂಚಾಂಗ. ಇಂತೀ ಪಂಚಾಂಗದ ನಿಲವನರಿಯದೆ, ಪಂಚ ಸೂತಕದೊಳಗೆ ಹೊಡೆದಾಡುವ ಪಂಚಮಹಾಪಾತಕರ ಎನಗೊಮ್ಮೆ ತೋರದಿರಯ್ಯ ನಿಃಸ್ಸಂಗ ನಿರಾಳ ಪ್ರಭುವೇ.

(೫). ಶ್ರೀಮತು ಸಜ್ಜನ ಶುದ್ಧ ಶಿವಾಚಾರರಾಗಿ, ಅಷ್ಟಾವರಣವೇ ಅಂಗವಾಗಿ, ಪಂಚಾಚಾರವೇ ಪ್ರಾಣವಾಗಿ, ಬಸವೇಶ್ವರ ದೇವರ ಸಾಂಪ್ರದಾಯಿಕರೆಂದು ನುಡಿದು ನಡೆಯಬಲ್ಲರೆ, ಭಕ್ತರೆಂಬೆ, ಪುರಾತನರೆಂಬೆ. ಅಂತಪ್ಪ ಭಕ್ತಂಗೆ ಈ ಮೂಜಗವೆಲ್ಲ ಸರಿಯಲ್ಲವೆಂಬೆ. ಆ ಭಕ್ತಗೆ ಶಿವನಗದ್ದುಗೆಯೇ ಕೈಲಾಸವಾಗಿಪ್ಪುದು ನೋಡಾ. ಈ ಶಿವಾಚಾರದ ಪಥವನರಿಯದೆ, ಇರುಳು ಹಗಲು ಅನಂತ ಸೂತಕಪಾತಕಂಗಳೊಳಗೆ ಮುಳುಗಾಡಿ, ಮತಿಗೆಟ್ಟು, ಪಂಚಾಂಗವ ಬೊಗಳುವ ಭ್ರಷ್ಟ ಮಾದಿಗರ ಮಾತು ಅಂತಿರಲಿ. ಪಂಚಾಂಗವ ಕೇಳಿದ ದಕ್ಷಬ್ರಹ್ಮನ ತಲೆ ಯಾಕೆ ಹೋಯಿತು? ಪಂಚಾಂಗವ ಕೇಳಿದ ಪಂಚಪಾಂಡವರು ದೇಶಭ್ರಷ್ಟರಾದರೇಕೆ? ಪಂಚಾಂಗವ ಕೇಳಿದ ಶ್ರೀರಾಮನ ಹೆಂಡತಿ ರಾವಣಗೆ ಸೆರೆಯಾದಳೇಕೆ? ಪಂಚಾಂಗವ ಕೇಳಿ, ಇಂದ್ರನ ಶರೀರವೆಲ್ಲ ಯೋನಿ ಮಂಡಲವೇಕಾಯಿತು? ಪಂಚಾಂಗವ ಕೇಳಿದ ದ್ವಾರಾವತಿಯ ನಾರಾಯಣನ ಹೆಂಡಿರು ಹೊಲೆಮಾದಿಗರ ಕೂಡಿಕೊಂಡರೇಕೆ? ಪಂಚಾಂಗವ ಕೇಳಿದ ಸರಸ್ವತಿಯ ಮೂಗು ಹೋಯಿತೇಕೆ? ಪಂಚಾಂಗವ ಕೇಳಿದ ಕಾಮನು ಸುಟ್ಟು ಭಸ್ಮವಾದನೇಕೆ? ಪಂಚಾಂಗವ ಕೇಳಿದ ಬ್ರಹ್ಮ ವಿಷ್ಣು ಇಂದ್ರ ಮೊದಲಾದ ಮೂವತ್ತು ಮೂರು ಕೋಟಿ ದೇವರ್ಕಳು ತಾರಕಾಸುರನಿಂದ ಬಾಧೆಯಾಗಿ ಕಂಗೆಟ್ಟು ಪ್ರಭುವಿನ ಮರೆಹೊಕ್ಕರೇಕೆ? ಕುರುಡ, ಕುಂಟ, ಹಲ್ಲುಮುರುಕ್ಕ ಗುರುತಲ್ಪಕನ ಬಲವನೇ ಕೇಳಲಾಗದು. ಶುಭದಿನ, ಶುಭಲಗ್ನ, ಶುಭವೇಳೆ, ಶುಭಮುಹೂರ್ತ, ವ್ಯತೀಪಾತ, ದಗ್ಧವಾರ ಎಂದು ಸಂಕಲ್ಪಿಸಿ ಬೊಗಳುವರ ಮಾತು ಕೇಳಲಾಗದು. ಗುರುವಿನಾಜ್ಞೆಯ ಮೀರಿ, ಸತ್ತರೆ ಹೊಲೆ, ಹಡಿದರೆ ಹೊಲೆ, ಮುಟ್ಟಾದರೆ ಹೊಲೆ, ಎಂದು ಸಂಕಲ್ಪಿಸಿಕೊಂಬಿರಿ. ನಿಮ್ಮ ಮನೆ ಹೊಲೆಯಾದರೆ, ನಿಮ್ಮ ಗುರುವು ಕೊಟ್ಟ ಇಷ್ಟಲಿಂಗವೇನಾಯಿತೋ? ವಿಭೂತಿ ಏನಾಯಿತೋ? ರುದ್ರಾಕ್ಷಿ ಏನಾಯಿತೋ? ಮಂತ್ರವೇನಾಯಿತೋ? ಪಾದೋದಕ ವೇನಾಯಿತೋ? ನಿಮ್ಮ ಶಿವಾಚಾರವೇನಾಯಿತೋ? ಮನೆಯೊಳಗಿನ ಬೋನ ಪದಾರ್ಥವೇನಾಯಿತೋ? ನೀವೇನಾದಿರೋ? ಹೇಳಿರಣ್ಣಾ. ಅರಿಯ

ದಿರ್ದರೆ ಕೇಳಿರಣ್ಣಾ. ನಿಮ್ಮ ಲಿಂಗವು ಪೀತಲಿಂಗವು, ನೀವು ಭೂತಪ್ರಾಣಿಗಳು, ನಿಮ್ಮ ಮನೆಯೊಳಗಾದ ಪದಾರ್ಥವೆಲ್ಲ ಹೆಂಡ ಭಾಂಡ. ಅವು ಶುದ್ಧಕಿಲ್ಬಿಷವೆನಿಸಿತು. ಇದು ಕಂಡು ನಾಚದೆ, ಮತ್ತೆ ಮತ್ತೆ ಶುಭಲಗ್ನವ ಕೇಳಿ, ಮದುವೆಯಾದ ಅನಂತ ಜನರ ಹೆಂಡಿರು ಮುಂಡೆಯರಾಗಿ ಹೋದ ದೃಷ್ಟಾಂತವ ಕಂಡು, ಪಂಚಾಂಗವ ಕೇಳಿದವರಿಗೆ ನಾಯಿ ಮಲವ ಹಂದಿ ಕಿತ್ತುಕೊಂಡು ತಿಂದಂತಾಯಿತ್ತು ಕಾಣಾ, ನಿಸ್ಸಂಗನಿರಾಳಪ್ರಭುವೇ.

(೬). ಉದಯ, ಮಧ್ಯಾಹ್ನ, ಸಂಧ್ಯಾಕಾಲವ ನೋಡಿ ಮಾಡುವ ಕರ್ಮಿ ನೀ ಕೇಳಾ. ಉದಯವೆಂದೇನೋ ಶರಣಂಗೆ, ಮಧ್ಯಾಹ್ನವೆಂದೇನೋ ಶರಣಂಗೆ, ಅಸ್ತಮಾನವೆಂದೇನೋ ಶರಣಂಗೆ? ಮಹಾಮೇರುವಿನ ಮರೆಯಲಿರ್ದು, ತನ್ನ ನೆಳಲನರಸುವ ಭಾವ ಭ್ರಮಿತರ ಮೆಚ್ಚ ನಮ್ಮ ಕೂಡಲಚನ್ನ ಸಂಗಮದೇವಾ.

(೭). ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ, ಸಂಗಯ್ಯ? ದೋಷವೆಲ್ಲಿಯದೋ, ದುರಿತವೆಲ್ಲಿಯದೋ ಸಂಗಯ್ಯ? ನಿಮ್ಮ ಮಾಣದೆ ನೆನೆವಂಗೆ, ಭವಕರ್ಮವೆಲ್ಲಿಯದೋ, ಬಂಧನವೆಲ್ಲಿಯದೋ, ಕೂಡಲಸಂಗಮದೇವಾ?

(೮). ಎಮ್ಮವರು ಬೆಸಗೊಂಡರೆ, ಶುಭಲಗ್ನವೆಂದೆನ್ನಿರಯ್ಯ. ರಾಶಿ, ಕೂಟ, ಗಣ, ಸಂಬಂಧ ಉಂಟೆಂದು ಹೇಳಿರಯ್ಯ. ಚಂದ್ರಬಲ ತಾರಾಬಲ ಉಂಟೆಂದು ಹೇಳಿರಯ್ಯ. ನಾಳಿನ ದಿನಕ್ಕೆ ಇಂದಿನದಿನವೇ ಲೇಸೆಂದು ಹೇಳಿರಯ್ಯ. ಕೂಡಲಸಂಗಮದೇವರ ಪೂಜಿಸಿದಫಲ ನಿಮ್ಮದಯ್ಯ.

(೯). ಅಂದು ಇಂದು ಮತ್ತೊಂದು ಎನಬೇಡ. ದಿನಬಂದೇ ಶಿವಶರಣೆಂಬುವಂಗೆ. ದಿನಬಂದೇ ಹರಶರಣೆಂಬುವಂಗೆ. ದಿನಬಂದೇ ನಮ್ಮ ಕೂಡಲಸಂಗನ ಮಾಣದೇ ಮಾಣದೇ ನೆನೆಯುವಂಗೆ.

---

## ಮಾರಿ, ಮಸಣಿ, ಕನಸು, ಶಕುನಗಳನ್ನು ನಂಬಬೇಡ.

(೧). ಮಾರಿ ಮಸಣಿ ಎಂಬಿವು ಬೇರಿಲ್ಲ, ಕಾಣಿರೋ. ಮಾರಿ ಎಂಬುದೇನು? ಕಂಗಳು ತಪ್ಪಿ ನೋಡಿದರೆ, ಮಾರಿ. ನಾಲಿಗೆ ತಪ್ಪಿ ನುಡಿದರೆ, ಮಾರಿ. ನಮ್ಮ ಕೂಡಲಸಂಗಮದೇವರ ನೆನಹುಮರೆದರೆ ಮಾರಿ.

(೨). ಮನಸಿನ ಸಂಶಯು ಕನಸಿನ ಭೂತವಾಗಿ ಕಾಡುವದು, ನೋಡಾ. ಮನಸಿನ ಸಂಶಯು ವಳಿದರೆ, ಕನಸಿನಕಾಟ ಬಿಟ್ಟೋಡಿತ್ತು, ನೋಡಾ ಮಹಾಲಿಂಗಗುರುಶಿವಸಿದ್ದೇಶ್ವರಪ್ರಭುವೇ.

(೩). ಹಾವಾಡಿಗನು ಮೂಕೊರತೆಯು ತನ್ನ ಕಯ್ಯಲ್ಲಿ ಹಾವು, ಮಗನ ಮದುವೆಗೆ ಶಕುನವ ನೋಡ ಹೋಹಾಗ, ಇದಿರಲೊಬ್ಬ ಮೂಕೊರ ತೆಯು ಹಾವಾಡಿಗನ ಕಂಡು ಶಕುನ ಹೊಲ್ಲೆಂಬ ಚದುರನ ನೋಡಾ. ತನ್ನ ಸತಿಯು ಮೂಕೊರತೆಯು, ತನ್ನ ಕಯ್ಯಲ್ಲಿ ಹಾವು. ತನ್ನ ಖಿನ್ನತೆಯನರಿಯದೆ, ಅನ್ಯರನೆಂಬ ಕುನ್ನಿಯನೇನೆಂಬೆ ಕೂಡಲಸಂಗಮದೇವಾ?

(೪). ಒಡೆಯರು ಭಕ್ತರು ತಾವೆಂದು ಅಡಿಮೆಟ್ಟಿ ಹೋಹಲ್ಲಿ, ತಡೆ ಮುತ್ತು ಶಕುನವೆಂದುಳಿದರೆ, ಕಾಗೆ, ವಿಹಂಗ, ಮಾರ್ಜಾಲ, ಮರವಕ್ಕಿ, ಗಾರ್ದಭ ಶೇಷ, ಶಂಕೆಗಳು ಮೊದಲಾದ ಸಂಕಲ್ಪಕ್ಕೊಳಗಾದಲ್ಲಿ ವ್ರತಕ್ಕೆ ಭಂಗ, ಆಚಾ ರಕ್ಕೆ ದೂರ. ಅದೆಂತೆಂದೊಡೆ, ಅಂಗಕ್ಕಾಚಾರವ ಸಂಬಂಧಿಸಿ, ಮನಕ್ಕೆ ಅರಿವು, ಅರಿವಿಂಗೆ ವ್ರತವ ಮಾಡಿದಲ್ಲಿ, ಬೇರೊಂದು ಪರಿ ಹರಿಸುವ ನಿಮಿತ್ಯ ಉಂಟೇ? ಇಂತೀ ಸತ್ಕ್ರಿಯಾವಂತಂಗೆ ಕಷ್ಟಜೀವದ ಲಕ್ಷಣದಲ್ಲಿ ಚಿತ್ತು ಬೀಹನ್ನಕ್ಕ, ಆತನು ಆಚಾರ ಭ್ರಷ್ಟ, ಏಲೇಶ್ವರ ಲಿಂಗಕ್ಕೆ ದೂರ.

---

## ಪ್ರಾಯಶ್ಚಿತ್ತಗಳನ್ನು ತೆಗೆದುಕೊಳ್ಳಬೇಡ.

(೧). ಭಕ್ತಗೊಂದೇ ವಾಕ್ಯ. ಬಾಳೆಗೊಂದೇ ಫಲ. ವಿರಕ್ತ ಬಿಟ್ಟೆದ ಥಿಡಿವಲ್ಲಿ, ಮತ್ತೆ ಮುಟ್ಟಿದಡೆ, ಸತ್ತನಾಯು ಹಡುಹು. ಮತ್ತೆ ಸತ್ಕ್ರಿಯಲ್ಲಿ ನಡೆ ವವ ತನ್ನ ನಿತ್ಯನೇಮವ ತಪ್ಪಿ, ಕೆಟ್ಟು ನಡೆದು, ಮತ್ತೆ ದ್ರವ್ಯವ ಕೊಟ್ಟು, ಭಕ್ತ ರೊಡೆಯರಲ್ಲಿ ತಪ್ಪ ಪರಿಹರಿಸಿಕೊಂಡಿಹೆನೆಂಬ, ಬಹು ಮಿಟ್ಟೆಯ ಭಂಡರ ಕಂಡ ಡೆ ಮರುಳ ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗವಾಯಿತ್ತಾದಡೂ ಒಡಗೂಡ ಕೊಲ್ಲೆ.

(೨). ವ್ರತ ತಪ್ಪಿತ್ತೆಂದು ಘಟವ ಬಿಟ್ಟಲ್ಲಿ ಮೆಚ್ಚುವ ದೈವ ಬೇಡ. ಇಂತೀ ಕ್ರಿಯೋಸರಿಸಿದಲ್ಲಿ, ಬಿಟ್ಟಡೆ ಪ್ರಾಣವ, ಮೆಚ್ಚಿ ಕೈಲಾಸಕ್ಕೆ ಕರೆವ ದೈವ

ವುಂಟೇ! ಇಂತೀ ಉಭಯ ಭ್ರಷ್ಟರಲ್ಲಿ ಸಿಕ್ಕಿತ್ತು ವ್ರತ. ಮನಕ್ಕೆ ಮನೋಹರ ಶಂಭೇಶ್ವರಲಿಂಗ ತಪ್ಪಿದಡೂ ಹೊರಗೆಂಬೆನು.

**ಅರ್ಥ:**—ಮೂವತ್ತೆರಡು ವ್ರತದೊಳಗೆ ಇಂಥ ವ್ರತ ಓಸರಿಸಿತ್ತೆಂದು ದೇಹವ ಬಿಡುವಲ್ಲಿ ಪ್ರಸನ್ನವಾಗುವ ಶಿವನೇ ಬೇಡ. ಅರುವತ್ತು ನಾಲ್ಕು ಶೀಲ ದೊಳಗೆ ಇಂಥ ಶೀಲ ತಪ್ಪಿತ್ತೆಂದು ಪ್ರಾಣವ ಬಿಡುವಲ್ಲಿ ಪುಷ್ಪಕಾರೂಢತ್ವದಿಂದ ಕಾಯುವೆರಸಿ ಕೈಲಾಸಕ್ಕೆ ಹೋಗುವಾ ಬಾ ಎಂಬ ಶಿವನೇ ಬೇಡ. ಇಂತೀ ಇಹಲೋಕಕ್ಕೆ ಪರಲೋಕಕ್ಕೆ ತಪ್ಪುಕನಾದಲ್ಲಿ, ಆತನ ವ್ರತವು ಹಿಡಿತಕ್ಕೆ ಬಂದಿತ್ತು. ಮೂರು ಕಣ್ಣುಳ್ಳ ಶಿವನು ತಪ್ಪಿದಡೂ ಹೊರಹಾಕುವೆನೆಂಬುದರ್ಥ.

( ೩ ). ಆಚಾರ ತಪ್ಪಿದಡೆ, ಪ್ರಾಯಶ್ಚಿತ್ತ ಉಂಟೆಂಬ ಅನಾಚಾರಿಗಳ ಮುಖವ ನೋಡಬಹುದೇ? ಆಚಾರ ನೋಟದ ಹೊನ್ನೇ, ವೊತ್ತದ ಮಡಕಿಯೋ, ಸಂತೆಯು ವ್ಯವಹಾರವೇ, ಜೂಜಿನ ಮಾತೇ, ವೇಶಿಯು ಸತ್ಯವೇ, ಸುಸರ ವಾಕ್ಯವೇ? ಇಂತೀ ವ್ರತದ ನಿಹಿತವ ತಿಳಿದಲ್ಲಿ, ಇಷ್ಟಬಾಹ್ಯನ ವ್ರತ ಭ್ರಷ್ಟನ ನಾನರಿತು ಕೂಡಿದೆನಾದಡೆ, ಅರಿಯದೆ ಕೂಡಿ, ಮತ್ತರಿದಡೆ ಆತನ ಬಿಡದಿರ್ದಡೆ, ಎನಗದೇ ಭಂಗ. ಆಚಾರವೇ ಪ್ರಾಣವಾದ ರಾಮೇಶ್ವರಲಿಂಗವಾದರೂ ತಪ್ಪಿದಡೆ, ಹೊರಗೆಂದು ಮತ್ತೆ ಕೂಡಿಕೊಳ್ಳೆ.

( ೪ ). ಕುಲದಲ್ಲಿ ಹಾರುವನು ಬ್ರಹ್ಮೇತಿಗೆ ಸಾರುವನು. ಆರೋ ಮಾಡುವ ಪಾಪಕ್ಕೆ ತಾನೇ ಕಯ್ಯಾನುವನು. ಸರಿಯೇ ದೇವಭಕ್ತಂಗಿವನು? ಬಡಗಿ ಮಾಚಲದೇವಿಯು ಕುಲಜೆಯು ಮಾಡಿಹೆನೆಂದು, ಹೊನ್ನ ಕಪಿಲೆಯು ಕೊಂದು, ರಾವಣಶಾಕದಲಿ ಉಚ್ಛಿಷ್ಟದ ಹಾಲಿನಿಂದ ಕೂಳನಟ್ಟುಂಬುವರ ನೇನೆಂಬೆನಯ್ಯ ಕೂಡಲಸಂಗಮದೇವಾ?

( ೫ ). ಎಲವೋ, ಎಲವೋ, ಪಾಪಕರ್ಮ ಮಾಡಿದವನೇ, ಎಲವೋ, ಎಲವೋ, ಬ್ರಹ್ಮಹತ್ಯ ಮಾಡಿದವನೇ, ಒಮ್ಮೆ ಶರಣೆನ್ನೆಲವೋ. ಒಮ್ಮೆ ಶರಣೆಂದರೆ, ಪಾಪಕರ್ಮ ಕೆಟ್ಟೋಡುವವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೇ ಇದ್ದವು! ಓರ್ವಂಗೆ ಶರಣೆನ್ನಿ, ನಮ್ಮ ಕೂಡಲಸಂಗಮದೇವಂಗೆ.

( ೬ ). ಪಂಚಮಹಾಪಾತಕವ ಮಾಡಿದಡೆ, ಒಮ್ಮೆ ಹಂಚಿನಲ್ಲಿ ತಿರಿದುಂಡಡೆ, ಪ್ರಪಂಚ ಜನನವನುಂಡರೆ, ಕರ್ಮ ನಿರ್ಮಳ, ಇಹದಲ್ಲಿ ಸುಖ,

ಪರದಲ್ಲಿ ಗತಿ. ಬ್ರಹ್ಮನಶಿರವ ಚಿವುಟಿ, ಬ್ರಹ್ಮೇತಿ ಮುಖತಾಗಿದಡೆ, ಸದ್ಗುರು ಸೊಡ್ಡಳ ತಿರಿದುಂಡಪರಿ.

( ೭ ). ಕೆಸರಲ್ಲಿ ಬಿದ್ದ ಪಶುವಿನ ದೇಹವ ತೊಳೆವರಲ್ಲದೆ, ಲೋಕದೊಳಗೆ ಗಂಜಳದೊಳಗೆ ಹೊರಳಾಡುವ ಸೂಕರನ ದೇಹವ ತೊಳೆವರುಂಟೇ? ಗುರುಕಾರುಣ್ಯವ ಪಡೆದ ಭಕ್ತರ ನಡೆನುಡಿಯಲ್ಲಿ ಎಡಹಿದ ಶಬ್ದಕ್ಕೆ ವಿಭೂತಿಯನಿಟ್ಟು ಶುದ್ಧವ ಮಾಡುವದೇ ಸದಾಚಾರ. ಗುರುಲಿಂಗ ಜಂಗಮವನರಿಯದೆ ದುರಾಚಾರಿಗಳಿಗೆ ಪ್ರಾಯಶ್ಚಿತ್ತವಕೊಟ್ಟು ವಿಭೂತಿಯನಿಡುವ ತೆರನೆಂತೆಂದರೆ, ಸೂಕರನ ದೇಹವ ತೊಳೆದರೆ, ಅದು ಮತ್ತೆ ಮರಳಿ ಆ ಅಶುದ್ಧದ ಪಾಪ ಕುಳಿಯೊಳಗೆ ಹೊರಳುತಿದ್ದ ತೆರನಂತೆ ಕಲಿದೇವರ ದೇವಯ್ಯ.

---

## ಯಜ್ಞಗಳನ್ನು ಮಾಡಬೇಡ.

( ೧ ). ದಕ್ಷಯಾಗವ ನಡಿಸಲೆಂದು ಅಜಮುಖ್ಯವಾದ ಸುರರೆಲ್ಲ ನೆರೆದು ಬಂದು, ಉಂಬುವ ಬಾಯ ನೋಡಾ! ಬಾಯ ತಪ್ಪಿಸಿ, ಉಣಬಂದ ದೈವದ ಬೆಂದ ಬಾಯ ನೋಡಾ! ಉಣದೆ ಉಡದೆ ಹೊಗೆಯ ಕೈಯ್ಯಲ್ಲಿ ಸತ್ತ ಅಣ್ಣಗಳ ಕೇಡ ನೋಡಾ, ಕೂಡಲಸಂಗಮದೇವಾ!

( ೨ ). ನಿಮ್ಮ ವಚನ, ಎನ್ನ ಪುಣ್ಯ, ಎಂಬುದು ಹುಸಿಯಾಯಿತ್ತು ನೋಡಾ. ಶಾಸ್ತ್ರದವಚನ ಹೋತಿಂಗೆ ಮಾರಿ. ಎಂತು ನಂಬುವೆನಯ್ಯ? ನಾನು ಕೊಲ್ಲೆ, ನೇಣು ಕೊಲ್ಲಿತ್ತೆಂದು, ನೇಣು ಸೂನಿಗರ ಮೆಚ್ಚ ನಮ್ಮ ಕೂಡಲಸಂಗಮದೇವಾ.

( ೩ ). ಇಟ್ಟಿಯ ಹಣ್ಣು ನರಿ ತಿಂದು ಸೃಷ್ಟಿ ತಿರುಗಿತೆಂಬಂತೆ, ಮಟ್ಟಿಯನಿಟ್ಟ ದ್ವಿಜರ ಮಾತೇಕೋ? ಹಗಲು ಕಾಣದ ಗೂಗೆ ಇರುಳಾಯಿತೆಂದರೆ, ಜಗಕ್ಕೆ ಇರುಳಪ್ಪುದೇ ಮರುಳೇ? ಹೋಮದ ನೇಮದಲ್ಲಿ ಹೋತವಕೊಂದು ತಿಂಬ ಅನಾಮಿಕರೊಡನಾಡಿ ಗೆಲುವುದೇನು ಕೂಡಲಸಂಗಮದೇವಾ?

( ೪ ). ಮಾತಿನ ಮಾತಿಗೆ ನಿನ್ನ ಕೊಂದಿಹರೆಂದು, ಎಲೇ ಹೋತೇ, ಅಳು ಕಂಡಿಯಾ. ವೇದವ ನೋದಿದವರ ಮುಂದೆ ಅಳು ಕಂಡಿಯಾ ಹೋತೇ.

ಶಾಸ್ತ್ರವ ಕೇಳಿದವರ ಮುಂದೆ ಆಳು ಕಂಡೆಯಾ ಹೋತೇ. ನೀನತ್ತುದಕ್ಕೆ ತಕ್ಕದ್ದು ಮಾಡುವ ಕೂಡಲಸಂಗಮದೇವನವರ.

(೫). ಹೊಲೆಯೊಳಗೆ ಹುಟ್ಟಿ, ಕುಲವನವರಸುವೆ. ಎಲವೋ ಮಾತಂಗಿಯಮಗ ನೀನು. ಸತ್ತುದ ನೆಳೆವನೆತ್ತಣ ಹೊಲೆಯ? ಹೋತುತಂದು ನೀವು ಕೊಲ್ಲುವಿರಿ. ಶಾಸ್ತ್ರವೆಂಬುದು ಹೋತಿಂಗೆ ಮಾರಿ. ವೇದವೆಂಬುದು ನಿಮಗೆ ತಿಳಿಯದು. ನಮ್ಮ ಕೂಡಲಸಂಗನಶರಣರು ಕರ್ಮರಹಿತರು ಶರಣ ಸನ್ನಿಹಿತರು, ಅನುಪಮ ಚರಿತ್ರರು, ಅವರಿಗೆ ತೋರಲು ಪ್ರತಿ ಇಲ್ಲವು.

---

## ಶರಣರ ವಚನಗಳನ್ನು ನಂಬು.

(೧). ಆದ್ಯರ ವಚನ ಪರುಷ ಕಂಡಯ್ಯಾ! ಸದಾಶಿವನೆಂಬ ಲಿಂಗವ ನಂಬುವುದು. ನಂಬಲೊಡನೆ, ನೀವಿಜಯು ಕಂಡಯ್ಯಾ! ಅಧರಕ್ಕೆ ಕಹಿ, ಉದರಕ್ಕೆ ಸಿಹಿ. ಕೂಡಲಸಂಗನಶರಣರ ವಚನಬೇವ ಸವಿದಂತೆ.

(೨). ಪಾತಾಳದಗ್ಗಣಿಯ ನೇಣಿಲ್ಲದೆ, ಸೋಪಾನದ ಬಲದಿಂದಲ್ಲದೆ, ತೆಗೆಯಬಹುದೇ? ಶಬ್ದಸೋಪಾನವ ಕಟ್ಟಿ ನಡಿಸಿದವರು ಪುರಾತನರು ದೇವಲೋಕಕ್ಕೆ ಬಟ್ಟೆ ಕಾಣಿರೋ. ಮರ್ತ್ಯಲೋಕದವರ ಮನದ ಮೈಲಿಗೆಯ ಕಳೆಯಲೆಂದು ಗೀತಮಾತೆಂಬ ಜ್ಯೋತಿಯ ಬೆಳಗಿಕೊಟ್ಟರು ಕೂಡಲಚನ್ನಸಂಗನಶರಣರು.

(೩). ಕಡೆಗೀಲಿಲ್ಲದ ಬಂಡಿ ಹೊಡೆಗೆಡುವುದು ಮಾಬುದೇ? ಕಡೆಗೀಲು ಬಂಡಿಗಾಧಾರ. ಕಡುದರ್ಪವೇರಿದ ಒಡಲೆಂಬ ಬಂಡಿಗೆ ಮೃಡ ಶರಣರ ನುಡಿ ಗಡಣವೇ ಕಡೆಗೀಲು ಕಾಣಾ ರಾಮನಾಥಾ.

(೪). ಕರಿಯನಿತ್ತಡೊಲ್ಲೆ. ಸಿರಿಯನಿತ್ತಡೆ, ಒಲ್ಲೆ. ಹಿರಿದಪ್ಪ ರಾಜ್ಯವಿತ್ತೊಡೆ, ಒಲ್ಲೆ. ನಿಮ್ಮ ಶರಣರ ಸೂಳುನುಡಿಯು ಒಂದರಗಳಿಗೆ ಇತ್ತಡೆ, ನಿನ್ನನಿತ್ತೆ ಕಾಣಾ ರಾಮನಾಥಾ.

(೫). ಹಾಲತೊರೆಗೆ ಬೆಲ್ಲದಂತಹಕೆಸರು, ಸಕ್ಕರೆಯಂತಹ ಮಳಲು, ತವರಾಜದಂತಹ ನೊರೆ ತೆರೆಗಳು, ಇಂತಪ್ಪ ಆದ್ಯರ ವಚನವಿರಲು, ಬೇರೆ

ಬಾವಿಯ ತೋಡಿ, ಉಪ್ಪನೀರ ಸವಿದಂತಾಯಿತ್ತಯ್ಯ ಎನ್ನ ಯುಕ್ತಿ. ನಿಮ್ಮ ವಚನಂಗಳ ಕೇಳದೆ, ಅನ್ಯಪುರಾಣಗಳ ಕೇಳಿ, ಕೆಟ್ಟೆನಯ್ಯ ಕೂಡಲಸಂಗಮ ದೇವಾ.

(೬). ಮುನ್ನಿನ ಆದ್ಯರ ವಚನ ನೋಡಿರೋ! ಲಿಂಗದ ನಡೆ, ಲಿಂಗದ ನುಡಿ, ಜಂಗಮದ ನಡೆ, ಜಂಗಮದ ನುಡಿ, ಪ್ರಸಾದದ ನಡೆ, ಪ್ರಸಾದದ ನುಡಿ: ಇದಕ್ಕೆ ಶ್ರುತಿಯ ತೋರಿ ನುಡಿವರು. ಅದಲ್ಲದೆ, ದೃಷ್ಟವ ತೋರಿ ನಡೆವರು. ವೇದವೆಂಬುದು ಓದಿ ಹೇಳುವ ಮಾತು. ಶ್ರುತಿ ಪುರಾಣಾಗಮಂಗಳಾರಿಂದಾದವು, ಇವ ಬಲ್ಲವೆಂದು ಇವ ಬಲ್ಲವೆಂದು, ನಮ್ಮ ಪುರಾತನರ ವಚನಕ್ಕೆ ಸರಿ ಎಂದು, ಅನುಭಾವವ ಮಾಡುವೆವೆಂಬುವ ಕರ್ಮಕಾಂಡಿಗಳಿಗೆ ನಾನೇನೆಂಬೆನಯ್ಯ? ಲಿಂಗಸಂಧಾನಿಗಳಾದ ಮಹಾನುಭಾವಿಗಳು ಊಚು, ಉಳಿದವರು ನೀಚು. ಹೊನ್ನು ಕೆಂಪೆಂದರೆ, ಹಿತ್ತಾಳೆಯು ಕೆಂಪೆಂದಂತೆ, ಸಿಂಹನ ನಡು ಸಣ್ಣದೆಂದರೆ, ನಾಯಿಯ ನಡು ಸಣ್ಣದೆಂಬಂತೆ, ಈ ಪಂಚಮಹಾಪಾತಕರ ನುಡಿಯ ಕೇಳಲಾಗದು. ಇವರುಗಳ ಮಾತಾಡಿಸಿ, ಗಾಸಿಯಾಗಲೇಕಯ್ಯ ಕೂಡಲಚನ್ನಸಂಗಮ ದೇವಾ?

(೭). ಆಚಾರವಿಚಾರ ತಪ್ಪಿದಲ್ಲಿ, ಶರಣರ ವಾದವಲ್ಲದೆ, ಮತ್ತೊಂದರಲ್ಲಿ ವಾದವಿಲ್ಲ. ಶರಣರ ವಾದ ಮೋಕ್ಷದ ಬೀಡು. ಶರಣರ ವಾದ ಲಿಂಗದ ನಾಡು, ಶರಣರ ವಾದ ಕಾಳಿಲಿಂಗದೇವನು ಮಾಡಿದ ಮಾಯೆಯ ಕೇಡು.

(೮). ನಮ್ಮ ಪುರಾತನರ ವಚನಂಗಳನೆಲ್ಲ ಓದದೆ ಇದ್ದಾರು. ಓದಿಯೂ ನಂಬಿಗೆ ಇಲ್ಲದೆ ಇದ್ದಾರು. ನೂರಕ್ಕೊಬ್ಬರಲ್ಲದೆ ನಂಬರು. ನಮ್ಮ ಆದ್ಯರ ವಚನಂಗಳನೆಲ್ಲ ಜರಿದಾರು. ತಮ್ಮ ಕವಿತ್ವವ ಮೆರೆದಾರು. ನಮ್ಮ ಆದ್ಯರ ವಚನಂಗಳಿಂದೊದಗಿದ ಜ್ಞಾನವೆಂಬುದನರಿಯರು. ನಮ್ಮ ಪುರಾತನರು ತಮ್ಮಂತೆಯಾಗಬೇಕೆಂದು ನುಡಿದರೆಂಬುದನರಿಯರು. ತಾಯಿಂದ ಮಕ್ಕಳಾದರೆಂಬುದನರಿಯರು. ಊರೆಲ್ಲಕ್ಕೆ ಹುಟ್ಟಿದ ಹಾಗೆ ನುಡಿದಾರು. ನಮ್ಮ ಪುರಾತನರ ವಚನವೇ ತಾಯಿತಂದೆ ಎಂದರಿಯರು. ನಮ್ಮ ಆದ್ಯರ ವಚನ ಜ್ಞಾನದ ನೆಲೆಯ ತೆಗೆದಿರಿಸಿತ್ತು, ನಮ್ಮ ಆದ್ಯರ ವಚನ ಮದಮಾತ್ಸರ್ಯಾದಿ ಅರಿಷಡ್ವರ್ಗ, ಸಪ್ತವ್ಯಸನ ಪಂಚೇಂದ್ರಿಯ ದಶವಾಯುಗಳಿಚ್ಛೆಗೆ ಹರಿವ ಮನವ ಸ್ವಸ್ಥವಾಗಿ ನಿಲಿ

ಸಿತ್ತು. ನಮ್ಮ ಆದ್ಯರ ವಚನ ಅಂಗೇಂದ್ರಿಯಂಗಳ ಲಿಂಗೇಂದ್ರಿಯವೆನಿಸಿತ್ತು. ನಮ್ಮ ಆದ್ಯರ ವಚನ ನೂರೊಂದು ಸ್ಥಲವ ಮೀರಿದ ಮಹದಲ್ಲಿ ನೆಲಿಸಿತ್ತು. ನಮ್ಮ ಆದ್ಯರ ವಚನ ಇನ್ನೂರ ಹದಿನಾರು ಲಿಂಗಕ್ಕೆ ಸರ್ವೇಂದ್ರಿಯವ ಸನ್ನಿತವ ಮಾಡಿ, ಸಾಕಾರವ ಸವೆದು ನಿರಾಕಾರವನರಿದು, ನಿರ್ವಯಲ ನಿತ್ಯಸುಖದಲ್ಲಿರಿಸಿತ್ತು. ಇಂತಪ್ಪ ಆದ್ಯರ ವಚನ ಭಂಡಾರವ ನಮ್ಮ ಪ್ರಭುದೇವರು ಮುಖ್ಯವಾದ ಏಳುನೂರೆಪ್ಪತ್ತು ಅಮರ ಗಣಂಗಳು ಅಸಂಖ್ಯಾತ ಪುರಾತನರು ಪ್ರಮಥ ಗಣಂಗಳು ಕೇಳಿ ಹೇಳಿ ಕೊಂಡಾಡಿದ ಕಾರಣ, ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಸರ್ವ ಸುಖವ ಸೂರೆಗೊಂಡು ಸ್ವಯಲಿಂಗವಾದರು. ನಮ್ಮ ಆದಿ ಪುರಾತನರು ಪ್ರಸಾದಕ್ಕೆ ತಪ್ಪದೆ ನಡೆದರು. ನಡೆದಪ್ಪದೆ ನುಡಿದರು. ಇಂತಪ್ಪ ಪುರಾತನರ ವಚನಂಗಳ ಎರಡಿಲ್ಲದೆ ಕೊಂಡಾಡಿ, ತನುಮನಧನವ ಎರಡಿಲ್ಲದೆ ಸಮರ್ಪಿಸುವ ಭಕ್ತರ ಭೃತ್ಯ ನಾನು, ಆಳಿನಾಳಯ್ಯ ನಾನು. ಕೂಡಲ ಚನ್ನಸಂಗನ ಶರಣರು ಸಾಕ್ಷಿಯಾಗಿ ರುದ್ರಮುನಿಲಿಂಗವೇ, ಇಂಥ ಸದ್ಭಕ್ತರನೇ ತೋರಿಸಯ್ಯ ಪ್ರಭುವೇ.

(೯). ಪ್ರಭುವಿನ ವಾದದಿಂದ ವೈರಾಗ್ಯಸಂಪತ್ತು. ಬಸವನ ವಾದದಿಂದ ಭಕ್ತಿಯ ಸಂಪತ್ತು. ಚನ್ನಬಸವನ ವಾದದಿಂದ ಶಿವಪ್ರಸಾದದ ಸಂಪತ್ತು. ಮಡಿವಾಳಯ್ಯನ ವಾದದಿಂದ ಜ್ಞಾನದ ಸಂಪತ್ತು. ಸಕಳೇಶನ ವಾದದಿಂದ ಶಾಂತಿಯ ಸಂಪತ್ತು. ಮೋಳಿಗಯ್ಯನ ವಾದದಿಂದ ದಾಸೋಹದ ಸಂಪತ್ತು. ನೀಲಮ್ಮನ ವಾದದಿಂದ ಲಿಂಗಪೂಜೆಯ ಸಂಪತ್ತು. ನಾಗಮ್ಮನ ವಾದದಿಂಧ ಮಹತ್ವ ಸಂಪತ್ತು. ಇದು ಕಾರಣ ಕಿನ್ನರ ತ್ರಿಪುರಾಂತಕಲಿಂಗ ಸಾಕ್ಷಿಯಾಗಿ ಪ್ರಮಥರ ನುಡಿಯಲ್ಲಿ ಬೇಸರ ಬೀರದಿರು.

(೧೦). ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ. ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ. ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ. ಅಜಗಣ್ಣನ ಐದು ವಚನಕ್ಕೆ ಕೂಡಲಚನ್ನಸಂಗಯ್ಯನಲ್ಲಿ ಮಹಾದೇವಿಯಕ್ಕಗಳ ಒಂದು ವಚನ, ಕಾಣಾ ಸಿದ್ಧರಾಮಯ್ಯ.

## ವೇದಶಾಸ್ತ್ರಾಗಮಪುರಾಣಗಳಿಗೆ ಮನಸೋಲಬೇಡ.

(೧). ವೇದಂಗಳು ದೈವವೆಂಬ ವಿಪ್ರರಂತಹ ಮರುಳರುಂಟೇ ತ್ರಿಜಗದಲ್ಲಿ? ವೇದವೆಂಬುದೊಂದು ಸಾಧಕ ಸಂಪತ್ತು. ವೇದಂಗಳು ಶ್ವೇತ ಅಗಸ್ತ್ಯ ವಿಶ್ವಾಮಿತ್ರ ಮುನಿಗಳಿಂದಾದವು. ಶಬ್ದಗಾಂಭೀರ್ಯ ಶೃತಿಕೋಟಿ ಚರಣಕಮಲನೆಂಬ ಲಿಂಗದ ಕಯ್ಯಲ್ಲಿ ಕಲಿತ ವೇದಂಗಳು ಅಜ್ಞಾನಸಂಗವಾಗಿ ಅಗೋಚರವಾಗಿ ನುಡಿದವು. ಋಗ್ವೇದ "ನಾಹಂಕಾರ ಬ್ರಹ್ಮತೇಜಃ" ಎಂದುದಾಗಿ, ಯಜುರ್ವೇದ "ನಾಹಂಕಾರ ಲಕ್ಷ್ಮೀಪತಿ ವಿಷ್ಣು ತೇಜ" ಎಂದುದಾಗಿ, ಸಾಮವೇದ "ನಾಹಂ ದೇವ ರುದ್ರತೇಜಃ" ಎಂದುದಾಗಿ, ಅಥರ್ವಣ ವೇದ, "ನಾಹಂ ಸ್ಥಲಂ ಸ್ಥಲಂ" ಎಂದುದಾಗಿ. ಕುಲಮದದಿಂದ ಬ್ರಹ್ಮ ಕೆಟ್ಟ, ಬಲ ಮದದಿಂದ ವಿಷ್ಣು ಕೆಟ್ಟ, ದೈವಮದದಿಂದ ರುದ್ರ ಕೆಟ್ಟ, ಛಲಮದದಿಂದ ಇಂದ್ರಕೆಟ್ಟ, ಇಂತೀನಾಲ್ವುಶೃತಿಗಳು ತಮ್ಮ ಗರ್ವದಿಂದ ನೂಂಕಿಸಿಕೊಂಡವು ಶಿವನ ಅರಮನೆಯ ಬಾಗಿಲಲ್ಲಿ. ಮತ್ತಾ ಚತುರ್ವೇದಂಗಳು ಬಂದು, ಲಿಂಗದ ಚತುರ್ದಿಶೆಯಲ್ಲಿ ಓಲೈಸಿ, ಕೈಮುಗಿದುಕೊಂಡು ಹೊಗಳುತ್ತಿದ್ದವು. ಅದೆಂತೆಂದೊಡೆ ಶೃತಿ॥ ಓಂ ಜಯತತ್ವಾ ನಾಂ। ಪುರುಷ ಮೇರು ಕಾಮ್ಯಾನಾಂ। ಪುಣ್ಯ ಜಪಧ್ಯಾನಾನಾಂ। ಸರ್ವಜನ್ಮವಿನಾಶನಾ। ಆದಿ ಅನಾದಿ ಪಿತ್ರೂಣಾಂ। ಅಜಕೋಟಿಸಹಸ್ರ ವಂದ್ಯಾನಾಂ। ದೇವಕೋಟಿ ಚರಣ ಕಮಲಾನಾಂ॥ ಎಂದು ವೇದಂಗಳು ದೇವರ ಚರಣದ ಕುರುಹ ಕಾಣವು. ಆದಿಯಲ್ಲಿ ನಮ್ಮ ಪುರಾತನರು ವೇದವ ನೋದಿದರೆ? ಇಲ್ಲ. ಕಲ್ಲಿಲಿಟ್ಟರು, ಕಾಲಿಲೊದೆದರು, ಬಿಲ್ವಪತ್ರದ ಮರದ ಕೆಳಗೆ ಲಿಂಗವಂ ಪುಟ್ಟಿಸಿ, ನಿಷ್ಠೆಯ ಪಡೆದರು, ಮನೆಯ ಬಾಗಿಲ ಕಾಯಿಸಿಕೊಂಡರು, ಆಡಿಸಿದರು, ಆಡಗಿಸಿದರು, ಒಡಿದ ಲಿಂಗಮಂ ತಂದು ಪ್ರತಿಷ್ಠೆಯಂ ಮಾಡಿದರು, ಇಂತಪ್ಪ ದೃಷ್ಟವ ಸಾಧಿಸಿದರು ನಮ್ಮ ಪುರಾತನರು. ನಿಮ್ಮವರು ವೇದವ ನೋದಿದರೆಂಬುದರಿದು. ಅವರನೊಲ್ಲದೆ ಬಿಟ್ಟಕಾಣಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ.

(೨). ಆಗಮಮೂರ್ತಿ ಅಂತರಾತ್ಮನೊಳು ಇರುತಿರೆ. ಆಗಮವನರಿಯ ಬೇಕೆಂದೇನು ಹೇಳುವಿರೋ? ಆಗಮವ ವಿಚಾರಿಸಿ, ಅರಿಯಬೇಕೆಂಬ

ಮೂರ್ತಿಗೆ ಆಗಮ ವಿಚಾರವೇನು ಹೇಳಾ? ಆಗಮ ಅರುಹಿನ ಮೂರ್ತಿ ಮಾಡಿದರಾದವು ಕಾಣಿರಣ್ಣಾ. ವೇದ ವಿವೇಕಿ ನುಡಿದರಾದವು ಕಾಣಿರಣ್ಣಾ. ಶಾಸ್ತ್ರ ಸರ್ವಜ್ಞ ನಿರ್ಮಿಸಿದರಾದವು ಕಾಣಿರಣ್ಣಾ. ಪುರಾಣ ಅಗ್ರಗಣ್ಯ ಆಗೆಂದರಾದವು ಕಾಣಿರಣ್ಣಾ. ತರ್ಕ ಅರ್ಥಿಗೆ ಆಡಿಸ್ಯಾಡಿ ನೋಡಬೇಕೆಂದು ಮಾಡಿದ ಸೋಡಾ. ವೇದಶಾಸ್ತ್ರ ಪುರಾಣಾಗಮತರ್ಕ ಇವು ಉಪಮೆಯೊಳಗು, ಉಪಮೆಯೊಳಗಾದವು. ಉಪಮಾತೀತನ ಇವೆತ್ತ ಬಲ್ಲವು ಹೇಳಾ? ಆತ್ಮಲಿಂಗದ ಆದ್ಯಂತವನರಿಯದೆ, ದ್ವೈತಾದ್ವೈತಗಳೆಂದು ನುಡಿದುಕೊಂಡು ನಡೆವ ಭವರೋಗಿಗಳನೇನೆಂಬೆನಯ್ಯಾ? ಆಗಮ ಮೂರ್ತಿ ಅಂತರಂಗ ಬಹಿರಂಗ ಸರ್ವಾಂತರ್ಯಾಮಿಯಾಗಿಹುದು. ಶಿವಪ್ರಸನ್ನಪ್ರಸಾದ ಒಧಗಿದ ಸ್ವಾನುಭಾವಿಬಲ್ಲ. ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವಿನಲ್ಲಿ, ಬಸವ, ಪ್ರಭು, ಚನ್ನಬಸವಣ್ಣ, ಮುಖ್ಯವಾದ ನಮ್ಮ ಪ್ರಮಥರು ಬಲ್ಲರು ಶಿವನ ಘನವ.

(೩). ಶಾಸ್ತ್ರ ಘನವೆಂಬೆನೆ? ಕರ್ಮವ ಭಜಿಸುತ್ತಿಹುದು. ವೇದಘನವೆಂಬೆನೇ? ಪ್ರಾಣವಧೆಯ ಹೇಳುತ್ತಿದೆ. ಶ್ರುತಿ ಘನವೆಂಬೆನೆ? ಮುಂದಿಟ್ಟು ಅರಸುತ್ತಿಲಿದ್ದೆ. ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು ಕೂಡಲಸಂಗಮದೇವಾ.

(೪). ಆದಿಪುರಾಣ ಅಸುರರಿಗೆ ಮಾರಿ. ವೇದಪುರಾಣ ಹೋತಿಗೆ ಮಾರಿ. ರಾಮಪುರಾಣ ರಕ್ಕಸರಿಗೆ ಮಾರಿ. ಭಾರತಪುರಾಣ ಗೋತ್ರಕ್ಕೆ ಮಾರಿ. ಇವೆಲ್ಲ ಪುರಾಣವು ಕರ್ಮಕ್ಕೆ ಮೊದಲು. ನಿಮ್ಮ ಪುರಾಣಕ್ಕೆ ಪ್ರತಿ ಇಲ್ಲ ಕೂಡಲಸಂಗಮದೇವಾ.

(೫). ವೇದಂಗಳ ಹಿಂದೆ ಹರಿಯದಿರು, ಹರಿಯದಿರು. ಶಾಸ್ತ್ರಂಗಳ ಹಿಂದೆ, ಸುಳಿಯದಿರು, ಸುಳಿಯದಿರು. ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು. ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು. ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು ಶಬ್ದ ಜಾಲಂಗಳಿಗೆ ಬಳಲದಿರು, ಬಳಲದಿರು.

(೬). ವೇದಶಾಸ್ತ್ರಾಗಮಪುರಾಣಂಗಳೆಂಬುವ ಕೊಟ್ಟಣವ ಕುಟ್ಟುತ್ತ, ನುಚ್ಚು ತೌಡು ಕಾಂಭೋ. ಅವನು ಕುಟ್ಟಲೇಕೆ? ಅತ್ತಿತ್ತ ಹರಿವ ಮನದ ಶಿರವನರಿಯಬಲ್ಲಡೆ, ಬಟ್ಟ ಬಯಲು ಚನ್ನಮಲ್ಲಿಕಾರ್ಜುನಾ.

(೭). ಆಗಮವ ಬಲ್ಲೆವೆಂದು, ಆಗಮಜ್ಞರೆನಿಸಿಕೊಂಬರು, ನೀವು ಕೇಳಿರೋ. ಆಗಮವೆಂದು ನುಡಿವ ವಾಗಿಂದ್ರಿಯವ ಬಲ್ಲರಲ್ಲದೆ, ಆಗಮ ಮೂರ್ತಿ ಹ್ಯಾಗಿರುವದು ಬಲ್ಲರೇ ಹೇಳಿರೋ. ಆಗಮಮೂರ್ತಿ ವಾಙ್ಮನಕ್ಕ ಗೋಚರವಾದ ವಸ್ತುವ ಆಗಮದಿಂದೆ, ಅಂತಿದೆ, ಇಂತಿದೆ, ಎಂದು ಹೇಳುವ ಭ್ರಾಂತಿನ ಭವಭಾರಿಯನೇನೆಂಬೆನಯ್ಯ ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ?

(೮). ವೇದವೇದಿಸಲರಿಯದೆ ಕೆಟ್ಟವು. ಶಾಸ್ತ್ರ ಸಾಧಿಸಲರಿಯದೆ ಕೆಟ್ಟವು. ಪುರಾಣ ಪೂರೈಸಲರಿಯದೆ ಕೆಟ್ಟವು. ಹಿರಿಯರು ತಮ್ಮ ತಾವರಿಯಹೆ ಕೆಟ್ಟರು. ತಮ್ಮ ಬುದ್ಧಿ ತಮ್ಮನೇ ತಿಂದಿತ್ತು. ನಿಮ್ಮನೆತ್ತಬಲ್ಲರು ಗುಹೇಶ್ವರಾ?

(೯). ವೇದ ಯೋನಿಯ ಹಂಗು. ಶಾಸ್ತ್ರ ಯೋನಿಯ ಹಂಗು, ಪುರಾಣ ಯೋನಿಯ ಹಂಗು. ಆಗಮ ಯೋನಿಯ ಹಂಗು, ನಾದದಿಂದುದಿಸಿದವು. ಶ್ರೋತ್ರದ ಹಂಗು. ಹೇಳುವದುವೆಜ್ಜ. ಕೇಳುವದು ವೆಜ್ಜ. ತಾ ಹಿಂದೆ ಬಂದುದು ವೆಜ್ಜ. ಇಂತೀ ವೆಜ್ಜಗನಿಂದ ಮಾಡುವುದು ವೆಜ್ಜ. ಇಂತೀ ವೆಜ್ಜದ ಗುದ್ಧ ಬಿದ್ದವರಿಗೆ ನಿರ್ಧಾರವಿಲ್ಲ, ಆತುರವೈರಿಮಾರೇಶ್ವರಾ.

(೧೦). ವೇದಂಗಳು ನಿಮ್ಮ ಭೇದಿಸಿ ಕಂಡಿಹೆವೆಂದರೆ, ಕಾಣಲರಿಯದೆ ಬಳಲಿ ಬೆಂಡಾಗಿ ಹೋದವು. ಶಾಸ್ತ್ರಂಗಳು ಸಾಧಿಸಿ ಕಂಡಿಹೆವೆಂದರೆ, ಕಾಣಲರಿಯದೆ, ಸಂದೇಹಕ್ಕೊಳಗಾಗಿ ಹೋದವು. ಆಗಮಂಗಳು ಅರಸಿ ಕಂಡಿಹೆವೆಂದರೆ, ಕಾಣಲರಿಯದೆ ಮೂಗಾಗಿ ಹೋದವು. ಇಂತೀ ವೇದಶಾಸ್ತ್ರಾಗಮಂಗಳ ನೋಡಿ, ನಿಮ್ಮ ಕಂಡಿಹೆವೆಂಬವರೆಲ್ಲ ಇನ್ನೆತ್ತ ಕಂಡಿಹರಯ್ಯ ಅಖಂಡೇಶ್ವರಾ?

(೧೧). ವೇದಂಗಳಿಗೆ ಅಭೇದ್ಯವಾದ ಶಿವನ ಭೇದಿಸಿ ಕಂಡರು ನೋಡಾ ಶರಣರು. ಶಾಸ್ತ್ರಂಗಳಿಗಸಾಧ್ಯನಾದ ಶಿವನ ಸಾಧಿಸಿ ಕಂಡರು ನೋಡಾಶರಣರು. ಆಗಮಂಗಳು ಇತಿಹಾಸ ತರ್ಕಕ್ಕಸಾಧ್ಯನಾದ ಶಿವನ ಅರಸಿ ಕಂಡರು ನೋಡಾ ಶರಣರು. ಅಗಮ್ಯ ಅಪ್ರಮಾಣವಾದ ಪರಶಿವನ ಪ್ರಮಾಣಿಸಿ ಕಂಡರು, ಒಳಹೊಕ್ಕು ಬೆರಸಿದರು ನೋಡಾ, ನಮ್ಮ ಶರಣರು ಅಖಂಡೇಶ್ವರಾ.

(೧೨). ವೇದವನೋದಿದ ವೇದಜ್ಞರು ಸರಿಯಲ್ಲ. ಶಾಸ್ತ್ರವ ನೋದಿದ ಶಾಸ್ತ್ರಿಗಳು ಸರಿಯಲ್ಲ. ಆ ಗಮವನೋದಿದ ಆಗಮಜ್ಞರು ಸರಿಯಲ್ಲ. ಆದಿಅನಾದಿಯಿಂದತ್ತವಾದ ಮಹಾಘನವಸ್ತುವ ನೊಡಗೂಡಿದ ಶರಣಂಗೆ ಇವರಾರೂ ಸರಿಯಲ್ಲವಯ್ಯ ಅಖಂಡೇಶ್ವರಾ.

(೧೩). ವೇದಂಗಳು ನಿಜವ ಬಲ್ಲಡೆ, ವೇದಜ್ಞರು ಮೆರೆಯಲೊಲ್ಲದೆ, ಚನ್ನಯ್ಯ ಕಕ್ಕಯ್ಯಂಗಳು ಮೆರೆಯಲೇಕೆ? ಶಾಸ್ತ್ರಂಗಳು ಸತ್ಯವನುಡಿದರೆ, ಶಾಸ್ತ್ರಂಗಳ ಮಾತಿಂಗೆ ಹೇಸಿ, ಕಿರಾತ ಬೊಮ್ಮಯ್ಯ ಕಣ್ಣಪ್ಪಗಳು ಮೆರೆಯಲೇಕೆ? ಆಗಮವೇ ಆಚಾರವನರಿದಡೆ, ಆಗಮವರಿಯಲಿಕ್ಕೆ ಕೆಂಭಾವಿ ಭೋಗಣ್ಣನ ಬೆನ್ನಲುರುಳುತ್ತ ಹೋಗಲೇಕೆ? ವೇದಶಾಸ್ತ್ರಾಗಮ ಪುರಾಣಂಗಳು ಶಿವನಾದಿ ಅಂತ್ಯವನರಿದಡೆ, ಸಾಮವೇದಿಗಳು ಶ್ವಪಚಯ್ಯಂಗೆ ಶಿಷ್ಯರಾಗಲೇಕೆ? ವಾದಿ ಸದಿರೋ ಪ್ರತಿವಾದಿ, ನೀನಂತರಂಗವನರಿಯದೆ. ಅಭೇದ್ಯವು ಘನಕ್ಕೆ ಘನ ಶಂಭುಸೊಡ್ಡಳಾ.

(೧೪). ವೇದದವರನೊಲ್ಲದೆ, ನಮ್ಮ ಮಾದಾರ ಚನ್ನಯ್ಯಂಗೊಲಿದ. ಶಾಸ್ತ್ರದವರನೊಲ್ಲದೆ, ಶಿವರಾತ್ರಿಯ ಸಂಕಣ್ಣಂಗೊಲಿದ. ಕರ್ಮಿಗಳನೊಲ್ಲದೆ, ತೆಲಗು ಜೊಮ್ಮಯ್ಯಂಗೊಲಿದ. ಲಿಂಗದೇವನು ವಶಿಷ್ಠ ಬ್ರಾಹ್ಮಣರನೊಲ್ಲದೆ, ಓಹಿಲ ಉದ್ಭಟರಿಗೊಲಿದ. ಅಣ್ಣ ಕೇಳಾ ಸೋಜಿಗವ, ದಾಸದುಗ್ಗಳೆಗೊಲಿದ. ಮುಕ್ಕಣ್ಣ ಸೊಡ್ಡಳ ಹಾರುವಣ್ಣಗಳಿಗೆ ಹೇಸಿ, ಕದವ ಮುಚ್ಚಿಕೊಂಡನು.

(೧೫). ಹೋ, ಹೋ, ವೇದವೇ ತತ್ವವಾದಡೆ ಮಾದಾರನ ಮನೆಯಲುಂಡಂದು, ಒಬ್ಬ ನಿಧಾನವುಳ್ಳ ಉಪಾಧ್ಯಾಯರಾದರೂ ಇಲ್ಲದಾದರೇ? ಶಾಸ್ತ್ರವೇ ತತ್ವವಾದಡೆ, ಶಿವರಾತ್ರಿಯ ಬೇಡಂಗಿತ್ತಂದು, ಒಬ್ಬರೂ ಸ್ತೋತ್ರಂಗೆಯ್ಯಲಾಗದೆ? ಆಗಮವಿಧಿಯಲ್ಲಿ ಮಂತ್ರಮೂರ್ತಿ ಎಂದೆಂಬ ಮಾತದಂತಿರಲಿ. ಅದ ಕೇಳಲಾಗದು. ಭ್ರಾಂತಿ ಬೇಡ. ಭಾವಮೂರ್ತಿ ಬಲ್ಲ. ಪ್ರಮಾಣವಿದೆ. ಅಕುಲ ಕುಲವೆಂದರೆ, ಕಕ್ಕಯ್ಯನ ಮನೆಯ ಅಕ್ಕರು. ನಿಮ್ಮ ತರ್ಕ ಮುಕ್ಕಾಯಿತ್ತು. ಲೋಕವರಿಯದೆ? ಕಲ್ಲಿಲಿಟ್ಟು, ಕಾಲಿಲೊದ್ದರೆ, ಅಲ್ಲಿ ಮೂರ್ತಿ ನುಡಿಯಿತ್ತಲ್ಲಾ! ಇಂಬಿಲ್ಲದ ದ್ವಿಜರೆಲ್ಲರೂ ಹೇಳಿರೋ. ಸಲ್ಲದು ನಿಮ್ಮ ಮಾತು. ನಿಲ್ಲಿ,

ನಿಲ್ಲಿ. ಬಲ್ಲಿದ ನಡೆದುದೇ ಬಟ್ಟೆ. ಮಹಾಲಿಂಗಕಲ್ಲೇಶ್ವರನಲ್ಲಿ ಲಿಂಗಾಚಾರಿಗಳು ನಿಸ್ಸೀಮರು.

(೧೬). ಆಗಮಾಚಾರವಲ್ಲದೆ, ಶಿವಭಕ್ತರಲ್ಲೆಂಬ ಭ್ರಮಿತರೆಲ್ಲರೂ ನೀವು ಕೇಳಿರೋ. ಮುಕ್ಕುಳಿಸಿದ ನೀರ ಮಜ್ಜನಕ್ಕೆರೆವುದು, ಇದು ಆವ ಆಗಮಾಚಾರ? ಸರುವ ಕಟ್ಟೆ, ಪತ್ರೆಯ ಹರಿದು ಹಾಕುವದಿದಾವ ಮಂತ್ರದೊಳಗು? ಸರ್ಪನೆ ಹರಿತಂದು, ಬಿರ್ರನೆ ಕಲ್ಲಿಲಿಡುವುದಿದಾವ ಪೂಜೆಯೊಳಗು? ಬಹು ಬುದ್ಧಿ ಬೇಡ. ಶರಣೆಂದು ಶುದ್ಧರಪ್ಪುದು. ಮಹಾಲಿಂಗಕಲ್ಲೇಶ್ವರದೇವರೆಲ್ಲವ ಬಲ್ಲನು.

(೧೭). ಭಕ್ತನಾಗಲಿ, ಮಹೇಶ್ವರನಾಗಲಿ, ಏನನೋದಿದರೇನಯ್ಯಾ? ಏನು ಕೇಳಿದರೇನಯ್ಯಾ? ಏನು ಹಾಡಿದರೇನಯ್ಯಾ? ಓದಿಮರುಳಾದಿಯೋ, ಕೂಚ ಭಟ್ಟರೇ ಎಂದು, ಗಿಳಿಯೋದಿ ತನ್ನ ಮಲವ ಭುಂಜಿಸಿದಂತೆ, ಏಕಲಿಂಗ ನಿಷ್ಠಾಚಾರ ಸ್ವಾನುಭಾವವಿವೇಕಸಿದ್ಧಾಂತ ನಿರ್ಣಯವಿಲ್ಲದೆ, ಮಾತಿಗೆ ಮಾತು ಕಲಿತು, ನುಡಿಗೆ ನುಡಿಯು ಕಲಿತು, ತರ್ಕಟ ಮರ್ಕಟರಂತೆ ಹೋರುವ ಬಯಲ ಸಂಭ್ರಮದ ತರ್ಕಿಗಳ ಕಂಡರೆ, ಮಾಗಿಯ ಕೋಗಿಲೆಯಂತೆ ಮೌನಭಾವವಿರುವುದು ನೋಡಾ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ,

(೧೮). ಚತುರ್ವೇದದನುಭವ ಮಾಡುವ ಜಂಗಮವೆಲ್ಲ ಬ್ರಹ್ಮನ ಸಂತತಿ. ಹದಿನೆಂಟು ಪುರಾಣದನುಭವ ಮಾಡುವ ಜಂಗಮವೆಲ್ಲ ವಿಷ್ಣುವಿನ ಸಂತತಿ. ಇಪ್ಪತ್ತೆಂಟು ದಿವ್ಯಾಗಮದನುಭವ ಮಾಡುವ ಜಂಗಮವೆಲ್ಲ ರುದ್ರನ ಸಂತತಿ. ಮೂವತ್ತೆರಡು ಉಪನಿಷದುಗಳನುಭವ ಮಾಡುವ ಜಂಗಮ ಈಶ್ವರನ ಸಂತತಿ. ಆರುಶಾಸ್ತ್ರಗಳನುಭವ ಮಾಡುವ ಜಂಗಮವೆಲ್ಲ ಸದಾಶಿವನ ಸಂತತಿ. ಇಂತೀ ಎಲ್ಲ ಶಬ್ದವನು ಮುಚ್ಚಿ, ಲಿಂಗದನುಭವ ಮಾಡುವ ಜಂಗಮ ಘನ, ನಿತ್ಯ, ಕಾಣಾ ಜಂಗಮಲಿಂಗಪ್ರಭುವೇ.

(೧೯). ವೇದ ವಿಪ್ರರಬಾಧೆ, ಶಾಸ್ತ್ರಸಂತೆಯ ಮಾತು, ಪುರಾಣ ಪುಂಡರಗೋಷ್ಠಿ, ಆಗಮ ಅನೃತದ ನುಡಿ, ತರ್ಕವ್ಯಾಕರಣ ಕನಿಕಷ್ಟವಾದ, ಇಂತಿವರ ಅಂಗದ ಮೇಲೆ ಲಿಂಗವಿಲ್ಲದ ಭಾಷೆ. ಇದುಕಾರಣ ತನ್ನೊಳಗರಿದ ಅನುಭಾವಿಯಲ್ಲಿಂದ ಘನವಿಲ್ಲೆಂದ ನಮ್ಮ ಕಲಿದೇವರದೇವಾ.

(೨೦). ವೇದವನೋದುವರೆಲ್ಲ ಬಂಜೆಯ ಮಕ್ಕಳು ಶಾಸ್ತ್ರವನೋದುವರೆಲ್ಲ ಸೂಳೆಯ ಮಕ್ಕಳು. ಪುರಾಣವ ಹೇಳುವರೆಲ್ಲ ಕುಂಟಣಿಗಿತ್ತಿಯ ಮಕ್ಕಳು. ತರ್ಕತಂತ್ರಗಳನೋದಿ ಹೇಳುವರೆಲ್ಲ ವೈದ್ಯಕಾರಿತಿಯ ಮಕ್ಕಳು. ಇಂತೀ ವೇದಾಗಮ ಶಾಸ್ತ್ರಪುರಾಣ ತರ್ಕ ತಂತ್ರಂಗಳೆಲ್ಲ ಕೇಳಿ ಆಚರಿಸುವರೆಲ್ಲ ಡೊಂಬಜಾತಿಕಾರ್ತಿಯ ಮಕ್ಕಳು. ಇಂತಪ್ಪ ಜಡಮತಿ ವ್ರತಭ್ರಷ್ಟ ಮೂಳಹೊಲೆಯರಿಗೆ ಭವಬಂಧನ ಎಂದೂ ಹಿಂಗದು, ಮುಕ್ತಿದೋರದು. ಇಂತಿವರ ಪುಣ್ಯಕ್ಕೆ ಅಧಿಕಾರಿಗಳಾದ ಬ್ರಹ್ಮ ವಿಷ್ಣು ರುದ್ರ ಮೊದಲಾದ ದೇವತೆಗಳಿಗೆ ಮುನ್ನವೇ ಭವ ಹಿಂಗದು, ಮುಕ್ತಿದೋರದು ಎಂದನಯ್ಯಾ ನಿಮ್ಮ ಶರಣಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

---

# ಜಾತಿಭೇದ.

## (೧). ವರ್ಣಗಳಿಲ್ಲ. ಎಲ್ಲರೂ ಸಮಾನರು.

(೧). ದೇವ ದೇವ ಬಿನ್ನಪವ ಅವಧಾರು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲರನೊಂದೇ ಎಂಬೆ. ಹಾರುವ ಮೊದಲು ಶ್ವಪಚರ ಕಡೆಯಾಗಿ ಭವಿಯಾದವರನೆಲ್ಲರನೊಂದೇ ಎಂಬೆ. ಹೀಗೆಂದು ನಂಬುವದೆನ್ನ ಮನವು. ಈ ನುಡಿದ ನುಡಿಯೊಳಗೆ ಎಳ್ಳ ಮೊನೆಯಷ್ಟು ಸಂದೇಹವುಳ್ಳರೆ, ನೀನಂದೇ ಮೂಗ ಕೊಯ್ಯಾ ಕೂಡಲಸಂಗಮದೇವಾ.

(೨). ಹೊಲೆಗಂಡದಲೆ ಪಿಂಡದ ನೆಲೆಗಾಶ್ರಯವಿಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಆಶೆಯಾಮಿಷ ರೋಷ ಹರುಷ ವಿಷಯಾದಿಗಳೆಲ್ಲ ಒಂದೇ. ಏನನೋದಿ, ಏನಕೇಳಿ, ಏನು ಫಲ? ಕುಲಜನೆಂಬುದಕ್ಕೆ ಆವುದು ದೃಷ್ಟಾಂತ? ಶ್ಲೊ ॥ ಸಪ್ತಧಾತು ಸಮಂ ಸಮಯೋನಿ ಸಮುದ್ಭವಂ। ಆತ್ಮ ಜೀವ ಸಮಾಯುಕ್ತಂ ವರ್ಣಾನಾಂ ಕಿಂಪ್ರಯೋಜನಂ ॥ ಎಂದುದಾಗಿ, ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇದವ ನೋಡಿ ಹಾರುವನಾದ. ಕರ್ಣದಲ್ಲಿ ಜನಿಸಿದವರುಂಟೇ ಜಗದೊಳಗೆ? ಇದುಕಾರಣ, ಕೂಡಲಸಂಗಮದೇವಾ ಲಿಂಗಸಂಗವನರಿತವನೇ ಕುಲಜನು.

(೩). ಶಿಖಿಬ್ರಾಹ್ಮಣ, ನಯನ ಕ್ಷತ್ರಿಯ, ನಾಸಿಕ ಬಣಜಿಗ,, ಅಧರ ಒಕ್ಕಲಿಗ, ಕರ್ಣ ಗೊಲ್ಲ, ಕೊರಳು ಕುಂಬಾರ, ಬಾಹು ಪಾಂಚಾಳ, ಅಂಗೈ ಉಪ್ಪಾರ, ನಖ ನಾಯಿದ, ಒಡಲು ಡೊಂಬ, ಬೆನ್ನು ಅಸಗ, ಚರ್ಮ ಜಾಡ, ಪೃಷ್ಠಸ್ಥಾನ ಕಬ್ಬಿಲಿಗ, ಒಳದೊಡೆ ಹೊಲೆಯ, ಮೊಣಕಾಲು ಈಡಿಗ, ಕಣ ಕಾಲು ಸಮ್ಮಗಾರ, ಮೇಗಾಲು ಮಚ್ಚಿಗ, ಚಲವಾದವೆಂಬ ಅಂಗಾಲು ಶುದ್ಧ ಮಾದಿಗ ಕಾಣಿರೋ. ಇಂತೀ ಹದಿನೆಂಟು ಜಾತಿ ತನ್ನಲ್ಲುಂಟು. ಇವು ಇಲ್ಲ ಎಂದು ಜಾತಿಗೆ ಹೋರುವ ಅಜ್ಞಾನಿಗಳ ನಮ್ಮ ಸೊಡ್ಡಳ ದೇವರು ಮೆಚ್ಚನಯ್ಯ.

(೪). ವೇದಶಾಸ್ತ್ರಕ್ಕೆ ಹಾರುವನಾಗಿ, ವೀರವಿತರಣಕ್ಕೆ ಕ್ಷತ್ರಿಯನಾಗಿ. ಸರ್ವವನಾರೈದು ನೋಡುವಲ್ಲಿ ವೈಶ್ಯನಾಗಿ, ಕೃಷಿಯ ಮಾಡುವದಕ್ಕೆ ಶೂದ್ರ ನಾಗಿ, ಇಂತೀ ಜಾತಿ ಗೋತ್ರದೊಳಗೆ ನೀಚ ಶ್ರೇಷ್ಠವೆಂಬ ಎರಡು ಕುಲವ ಲ್ಲದೆ, ಹೊಲೆ ಹದಿನೆಂಟು ಜಾತಿ ಎಂಬ ಕುಲವಿಲ್ಲ. ಬ್ರಹ್ಮವನರಿದಲ್ಲಿ ಬ್ರಾಹ್ಮಣ. ಸರ್ವಜೀವ ಹತಕರ್ಮಕ್ಕೊಳಗಾದಲ್ಲಿ ಸಮ್ಮಗಾರ. ಈ ಉಭಯವನರಿದು. ಮರೆಯಲಿಲ್ಲ ಕೈಯ್ಯುಳಿಗತ್ತಿ ಅಡಿಗೂಂಟ ಕೆಡೆಯಾಗಬೇಡ ಅರಿನಿಜಾತ್ಮರಾಮ ರಾಮನಾ.

ಅರ್ಥ:—ನಾಲ್ಕುವೇದ ಹದಿನಾರು ಧರ್ಮಶಾಸ್ತ್ರವ ನೋಡುವದಕ್ಕೆ ಬ್ರಾಹ್ಮ ಣಾನೇ ಮುಖ್ಯವಾಗಿ, ರಣಗಳದಲ್ಲಿ ಜಯಿಸುವ ಪರಾಕ್ರಮಕ್ಕೆ ತ್ಯಾಗಗುಣಕ್ಕೆ ಕ್ಷತ್ರಿಯನೇ ಮುಖ್ಯವಾಗಿ ಸಮಸ್ತವಾದ ಗಜಪರೀಕ್ಷೆ ಅಶ್ವಪರೀಕ್ಷೆ ತುರು ಪರೀ ಕ್ಷೆಯ ನೋಡಿ ಕ್ರಯ ವಿಕ್ರಯ ಮಾಡುವಲ್ಲಿ ವೈಶ್ಯನೇ ಮುಖ್ಯವಾಗಿ, ಹಲಾಯು ಧಕೃಷಿಯ ಮಾಡುವುದಕ್ಕೆ ಶೂದ್ರನೇ ಮುಖ್ಯವಾಗಿ ಈ ನಾಲ್ಕು ಜಾತಿಯೊಳ ಡಗಿದ ಗೋತ್ರ ಮೊದಲಾದ ನೂರೊಂದು ಕುಲ ಹದಿನೆಂಟು ಜಾತಿಯೊಳಗೆ ಅಧಮಕುಲ ಉತ್ತಮಕುಲವೆಂಬ ಉಭಯ ಕುಲವಲ್ಲದೆ, ಹೊಲೆಯ ಕಡೆ ಯಾದ ಹದಿನೆಂಟು ಜಾತಿ ನೂರೊಂದು ಕುಲವೆಂಬವಿಲ್ಲ. ಪರಬ್ರಹ್ಮವೇ ಇಷ್ಟ ಲಿಂಗವಾಗಿಪ್ಪುದೆಂದರಿದಾಚರಿಸುವಲ್ಲಿ, ಅತನೇ ಉತ್ತಮ ಜಾತಿಯು. ಸಮಸ್ತ ಪ್ರಾಣಿಗಳ ಧ್ಯೇಯವಿಲ್ಲದೆ ಕೊಲ್ಲುವ ಕ್ರೂರ ಕರ್ಮಕ್ಕೊಳಗಾದಲ್ಲಿ ಅತನೇ ಮಾದಿಗನು. ಬ್ರಹ್ಮವನರಿದವನೇ ಬ್ರಾಹ್ಮಣ, ಪ್ರಾಣಿಗಳ ಕೊಲ್ಲುವನೇ ಸಮ್ಮಗಾ ರನೆಂಬ ಈ ಎರಡು ಭೇದವನು ತಿಳಿದು ಶಿವಾಧಿಕ್ಯವನು ಮರೆದು ಬಿಡಲಿಲ್ಲ ವೆಂಬುದರ್ಥ.

(೫). ವರಕುಲ ಹಲವಾದಲ್ಲಿ ಯೋನಿಯುಲುತ್ಪತ್ಯ ಒಂದೇ ಭೇದ. ಮಾತಿನ ರಚನೆ ಎಷ್ಟಾದಡೇನು? ವಿಹಿತವನರಿವುದು ಒಂದೇ ಭೇದವಸ್ತು. ಜಾತಿ ಗೋತ್ರ ವಿಶೇಷವೆಂಬಲ್ಲಿ ದಿವಾರಾತ್ರಿ ಎಂಬುಭಯವನಳಿವುದಕ್ಕೆ ತಮ ಬೆಳಗಂ ಬವಲ್ಲದಿಲ್ಲ. ಕುಲ ಉಭಯಶಕ್ತಿಪುರುಷತ್ವವಲ್ಲದಿಲ್ಲ. ಬೇರೆ ಹಲವು ತೆರನುಂಟೆಂ ದಡೆ, ಮಿೂರಿ ಕಾಂಬ ಶ್ರುತದೃಷ್ಟವಿನ್ನಾವುದು? ಎಲ್ಲಕ್ಕೂ ನೀರು ನೆಲ ಸೂರ್ಯ ಸೋಮ ಅಗ್ನಿದು ನೋಡುವ ದೃಷ್ಟಿ ಒಂದೇ. ಬೊಂಬೆ ಹಲವ ನೋಡಿ, ಬೊಂಬೆ ಹಲವಂದವ ಕಾಣ್ಬಂತೆ, ಅದರಂವವ ತಿಳಿದು ನಿಂದಲ್ಲಿ, ಹಲವು ಕುಲದ ಹೊಲೆ ಒಂದೂ ಇಲ್ಲವೆಂದೆ. ಕಯ್ಯುಳಿಗತ್ತಿ ಅಡಿಗೂಂಟೆ ಕೆಡೆಯಾಗಬೇಡ ಅರಿ ನಿಜಾತ್ಮರಾಮರಾಮನಾ.

**ಅರ್ಥ:**—ಮನುಷ್ಯಕುಲ ನೂರೊಂದು ಕುಲ ಹದಿನೆಂಟು ಜಾತಿಗಳಾದರೂ ಯೋನಿಯು ಒಂದೇ ಭೇದ, ಉತ್ಪತ್ತಿ ಒಂದೇ ಭೇದವು. ವೇದ ಶಾಸ್ತ್ರಾಗಮಂಗಳ ರಂಜನೆಯು ಅನೇಕ ಪ್ರಕಾರವಾಗಿ ಹೇಳಿದಡೂ, ಮೋಕ್ಷವ ನಿಶ್ಚೈಸಿ ಹೇಳುವದು ಒಂದೇ ವಿಧವು. ನೂರೊಂದು ಎಂಬುವಿಲ್ಲ. ಮತ್ತೆ ನೂರೊಂದು ಕುಲ, ಹದಿನೆಂಟು ಜಾತಿ ಅದರೊಳಗಡಗಿದ ಗೋತ್ರಂಗಳು ಉತ್ತಮ ಅಧಮವೆಂಬಲ್ಲಿ, ಹಗಲು ಇರುಳು ಎಂಬೆರಡನೂ ಪ್ರಮಾಣಿಸುವುದಕ್ಕೆ ಕಾವಳ ಬೆಳಗೆಂಬುಭಯವಲ್ಲದೆ ಮತ್ತೊಂದಿಲ್ಲ. ಹೆಣ್ಣು ಗಂಡೆಂಬ ಎರಡು ಕುಲವಲ್ಲದೆ, ನೂರೊಂದು ಕುಲ ಹದಿನೆಂಟು ಜಾತಿ ಎಂದಡೆ, ನಾವು ಹೇಳಿದ ವಾಕ್ಯವನು ಅತಿ ಕ್ರಮಿಸಿ ಕಾಣುವ ಶಾಸ್ತ್ರ ಪ್ರತ್ಯಕ್ಷ ಜ್ಞಾನವಿನ್ನಾವುದು? ಸಮಸ್ತ ಜಾತಿಗಳು ಬಳಸುವದೊಂದೇ ಭಾವಿಯ ಜಲವು, ಚರಿಸುವದೊಂದೇ ಭೂಮಿಯು, ಸಮಸ್ತರ ಮೇಲೆ ಬಿಂಬಿಸುವ ಸೂರ್ಯನೊಬ್ಬನೇ, ಚಂದ್ರನೊಬ್ಬನೇ, ಪರಾಂಬರಿಸಿ ನಿರೀಕ್ಷಿಸುವ ನಯನ ಒಂದೇ. ಅಲ್ಲಿಯೂ ಆ ಕಣ್ಣಾಲಿಯೂ ನಾನಾ ರೂಪಗಳ ನಿರೀಕ್ಷಿಸಿ ಅಲಿಯು ಹಲವಾದ ಸುರೂಪು ಕುರೂಪು ಉಡಿಗೆ ತೊಡಿಗೆ ಆಭರಣಂಗಳ ಕಾಣುವಂತೆ, ರೂಪುಗಳು ಹಲವಾದರೂ ನೋಡುವ ನಯನ ಒಂದೇ ಎಂದರಿದು ಶಿವಾಧಿಕ್ಯವನುಳ್ಳವನಾಗಿದ್ದಲ್ಲಿ ನೂರೊಂದು ಕುಲ ಹದಿನೆಂಟು ಜಾತಿಗಳ ಸೂತಕ ಒಂದೂ ಇಲ್ಲವೆಂದೆನೆಂಬರ್ಥ.

(೬). ಬ್ರಾಹ್ಮಣನೇ ಅಧಿಕವೆಂದೆಂಬಿರಿ, ಭೋ. ಆ ಮಾತದು ಸತ್ಯ. ಬ್ರಾಹ್ಮಣನಾರೆಂದರಿಯಿರಿ. ಬ್ರಾಹ್ಮಣನೇ ಶಿವನು. ವರ್ಣಾನಾಂ ಬ್ರಾಹ್ಮಣೋ

ದೇವನೆಂಬುದು ನಿಶ್ಚಯ. ಆ ವರ್ಣವಾವುದೆಂದಡೆ, ಬ್ರಹ್ಮ, ವಿಷ್ಣು, ರುದ್ರ, ಇಂದ್ರ. ಈ ನಾಲ್ವರು ಜಾತಿವರ್ಣಕ್ಕೆ ಸಲ್ಲುವರು. ಇಂತೀ ವರ್ಣಂಗಳೆಲ್ಲಕ್ಕೆ ಶಿವನೇ ಗುರು. ಆ ಸದಾಶಿವನ ಗುರುತ್ವಕ್ಕೆ ಏನು ಲಕ್ಷಣವೆಂದಡೆ, ಸರ್ವಭೂತಂಗಳೊಳಗೆ ಚೈತನ್ಯಾತ್ಮಕನಾಗಿ, ಶೃತಿ, "ಅಣೋರಣೀಯಾನ್ ಮಹತೋ ಮಹೀಯಾನ್." ಎಂದುದಾಗಿ, 'ಯತ್ರ ಜೀವಸ್ತತ್ರ ಶಿವ'ನೆಂದುದಾಗಿ 'ಆತ್ಮಾನಾಂ ಪೂರಿತಂ ಸರ್ವಂ' ಎಂದುದಾಗಿ, "ಆತ್ಮಾನಾಂ ಪತ ಯೇ" ಎಂದುದಾಗಿ, "ಆತ್ಮಂ ವರ್ಣಂಚ, ಆತ್ಮಂ ಅಮೂರ್ತಿ, ಆತ್ಮಂಚಿದಂಕರ್ಮ, ಆತ್ಮಂ ಅಕುಲಂ, ಯಥಾ ಆತ್ಮ ಪೂರಿತದೇವಾಯನಮಃ, ಆತ್ಮಾರುದ್ರೋಭವತಿ, ಆತ್ಮಾ ಸದಾಶಿವೋ ವಂಶೋದ್ಭೂತ" ಎಂದುದಾಗಿ, ಆತ್ಮಂಗೆ ಆವಕುಲ ಉಂಟು ಹೇಳಿರೋ? ಅಂತು ಆತ್ಮನು ಸರ್ವಭೂತಂಗಳಿಗೆ ಗುರುವೆನಿಸಿಕೊಂಬ. ಆತ್ಮಂಗೆ ಗುರು ಸದಾಶಿವನು. ಆತ್ಮನು ಸದಾಶಿವನ ಕೂಡಲಿರೆ, ಚೈತನ್ಯಾತ್ಮಕನಾಗಿ ಸರ್ವವೂ ಸದ್ಗುರುವೆನಿಸಿಕೊಂಬ. ವರ್ಣಾನಾಂ ಬ್ರಾಹ್ಮಣೋ ಗುರುವೆಂಬ ಶೃತಿಯನರಿದು ದ್ವಿಜರು ತಾವು ಗುರುವೆಂಬ ಪರಿಯ ನೋಡಾ. ಗುರುವಾದರೆ, ಗುರುತ್ವದ ಲಕ್ಷಣಬೇಡಾ? ಗುರುವಾದಡೆ, ಸಕಲವನು ಕೂಡಿಕೊಂಡಿರಬೇಡಾ? ತಾವು ಗುರುವಾದಡೆ ಕುಲ ಅಕುಲಂಗಳುಂಟೇ? ವರ್ಣಾವರ್ಣಂಗಳುಂಟೇ? ಇಂತು ಕುಲದೊಳಗಿದ್ದು, ಅಕುಲದ ಮಾತನಾಡುವ ದ್ವಿಜಭ್ರಮಿತರನೇನೆಂಬೆದೇವರ ದೇವಸೊಡ್ಡಳಾ?

(೭). ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದಿತ್ತೆ? ಒಡೆಯರ ಪ್ರಾಣಕ್ಕೆ ಇದ್ದಿತ್ತೆಯಜ್ಞೋಪವೀತ? ಕಡೆಯಲ್ಲಿರ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ? ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈರಾಮನಾಥಾ?

**ಅರ್ಥ**:—ಸ್ತ್ರೀಯಳ ಅಂಗದಲ್ಲಿ ಕಚಕುಚಂಗಳಿರ್ದ ಹಾಗೆ, ಅವಳ ಪ್ರಾಣಕ್ಕೆ ಕಚಕುಚಂಗಳುಂಟೇ? ಇಲ್ಲ. ವಿಪ್ರನಂಗದಲ್ಲಿ ಶಿಖಾಯಜ್ಞೋಪವೀತ ಇದ್ದ ಹಾಗೆ, ಅವನ ಪ್ರಾಣದಲ್ಲಿ ಶಿಖಾಯಜ್ಞೋಪವೀತವಿಲ್ಲ. ಊರಿಂದ ಹೊರಗಿರ್ದ ಹೊಲೆಯನು ಕಯ್ಯಲ್ಲೊಂದಾಯುಧವ ಹಿಡಿದ ಹಾಗೆ ಆತ್ಮನಲ್ಲಿ ಹಿಡಿದಿಪ್ಪನೇ? ಇಲ್ಲ. ಪರಶಿವನು ತನ್ನಂಶವಾದ ಆತ್ಮಂಗೆ ಶರೀರ ಸಂಬಂಧವ ಮಾಡಿ

ರಲು ಹೆಣ್ಣೆಂದು ಗಂಡೆಂದು ವಿಪ್ರನೆಂದು ಹೊಲೆಯನೆಂದು ನೂರೊಂದು ಕುಲ ಹದಿನೆಂಟು ಜಾತಿಯನುಂಟು ಮಾಡಿ, ಒಬ್ಬರಿಗೊಬ್ಬರ ಹೋರಾಡುವ ಬಂಧನವ ಈ ಜಗದ ಅಚೇತನರಾದ ಜೀವರು ಎತ್ತ ಬಲ್ಲರು ಅರಿಯರೆಂಬುದರ್ಥ.

(೮). ಶುಕ್ಲ ಶೋಣಿತ ಮಜ್ಜೆ ಮಾಂಸ ಹಸಿವು ತೃಷೆ ವ್ಯಸನ ವಿಷಯಾದಿಗಳೊಂದೇ ಭೇದ. ಮಾಡುವ ಕೃಷಿ ವ್ಯವಸಾಯ ಹಲವಲ್ಲದೆ ತೋರುವ ತೋರಿಕೆ, ಅರಿವಾತ್ಮನೊಂದೇ ಭೇದ. ಆವಕುಲವಾದಡೂ ಅರಿದಲ್ಲಿಯೇ ಪರತತ್ವಭಾವಿ, ಮರೆದಲ್ಲಿಯೇ ಮಲ ಮಾಯಾ ಸಂಬಂಧಿ. ಇಂತೀ ಉಭಯವನರಿದು ಮರೆಯಲಿಲ್ಲ. ಕಯ್ಯುಳಿಗತ್ತಿ ಅಡಿಗೂಂಟ ಕೆಡೆಯಾಗಬೇಡ ಅರಿ ನಿಜಾತ್ಮರಾಮರಾಮನಾ.

**ಅರ್ಥ**:—ಧಾತು, ರಕ್ತ, ಕೊಬ್ಬು, ಗಂಡ, ಪಲಲ ಮೊದಲಾದ ಸಪ್ತ ಧಾತುಗಳು ಸರ್ವ ದೇಹಂಗಳಲ್ಲಿಯೂ ಒಂದೇ ಸಮವಾಗಿಪ್ಪವು. ದೀಪನವು ನೀರಡಿಕೆಯು, ಸ್ತ್ರೀಯರ ಮೇಲಣ ವಿಕಾರವು ಇಂದ್ರಿಯ ವಿಷಯಂಗಳು ಎಲ್ಲರಲ್ಲಿಯೂ ಒಂದೇ ಸಮವಾಗಿರ್ಪವು. ತಾ ಮಾಡುವ ಅಸಿಮಸಿ, ವಾಣಿಜ್ಯ ಗೋಪಾಲಿಕೆಯು, ಹಲಾಯುಧ ಕೃಷಿಯು ಇವರೊಳಗಾದ ತೃಷೆಗಳು ನಾನಾ ಪ್ರಕಾರವಾಗಿಪ್ಪವಲ್ಲದೆ, ಆ ತೃಷೆಗಳಲ್ಲಿ ತೋರುವ ಅಂಗವು, ಆ ತೃಷೆಗಳ ತಿಳಿವಾತ್ಮನು ಒಂದೇ ವಿಧವು. ನೂರೊಂದು ಕುಲ, ಹದಿನೆಂಟು ಜಾತಿಗಳೊಳಗೆ ಆವಾತನಾದರೂ ಆಗಲಿ, ಜ್ಞಾನದಿಂದ ತನ್ನ ನಿಜವನು ತಿಳಿದಲ್ಲಿಯೇ ಶಿವಭಾವವನುಳ್ಳ ಪರಮಾತ್ಮನು. ತನ್ನ ನಿಜವ ಮರೆದು ದೇಹಪ್ರಪಂಚಿನಲ್ಲಿ ಚರಿಸಿದಲ್ಲಿಯೇ ಮಲ ಮಾಯಾ ಕರ್ಮಯುಕ್ತವಾದ ಜೀವಾತ್ಮನು. ಈ ಎರಡು ಭೇದವ ತಿಳಿದು ತನ್ನ ನಿಜವನರಿವ ಜ್ಞಾನವ ಮರೆದು ಬಿಡಲಿಲ್ಲವೆಂಬುದರ್ಥ.

(೯). ವಿರಹದಲುತ್ಪತ್ತ್ಯವಾದವರ ಮಾಯದ ಬೇಳುವೆ ಹತ್ತಿತ್ತಲ್ಲಾ! ಸುರೂಪು ನಿರೂಪವೆಂದರಿಯರು. ಹೆಸರಿಟ್ಟು ಕರೆವ ಕಷ್ಟವ ನೋಡಾ ಗುಹೇಶ್ವರಾ!

**ಅರ್ಥ**:—ವಿರಹದ ವಿಕಾರದಲುದಿಸಿದ ಪ್ರಾಣಿಗಳು ಮಿಥ್ಯಾಪಿಂಡವನೆ ಕುರುಹಿಟ್ಟುಕೊಂಡು, ಜಾತಿ ವರ್ಣಾಶ್ರಮ ನಾಮ ಗೋತ್ರಂಗಳೊಳಗೆ ಸಿಲ್ಕಿ ಮರುಳಾಗಿ ಕೆಡುತಿರ್ಪರೆಂಬುದೀವಚನದ ತಾತ್ಪರ್ಯಾರ್ಥ.

(೧೦). ಬೇಡಂಗೆ ಜೇಡಂಗೆ ಡೋಹರಂಗೆ ಹೊಲೆಯಂಗೆ ರೂಥಿಗೀಶ್ವರನೊಲಿದ ಪರಿಯ ನೋಡಾ! ಲೋಕದ ಮಾನುವರು ಮಾಡುವರು ಸಮಯಂಗಳಂ. ಮಾಡಲಿಕ್ಕೆ ಅವರೇನು ಸ್ವತಂತ್ರರೇ? ಇವಕೊಡ್ಡಿದ ಠಾವಿನಲ್ಲಿ ಕಲ್ಲು ಮುಳ್ಳು ಮೂಡುವವೆಂದಾತ ನಮ್ಮ ಅಂಬಿಗರ ಚೌಡಯ್ಯನು.

(೧೧). ಸಕಲವರಿದಡೂ ಮಲತ್ರಯ ನಾಸ್ತಿಯಾಗಿರಬೇಕು. ಅರಿದು ನಿಂದುದಕ್ಕೆ ಮುಖ್ಯ. ಮೃತ್ತಿಕೆಯು ಕೂಡಿದ ಜಲವಾರದಿರ್ದಡೆ, ಪಂಕದೋರುವಂತೆ, ಏನನರಿತು ನುಡಿದಡೂ ಕುಲಛಲ ಮಲನಾಸ್ತಿಯಾಗಿರಬೇಕು, ಸದಾಶಿವ ಮೂರ್ತಿಲಿಂಗವನರಿವುದಕ್ಕೆ.

---

## (೨). ಸದಾಚಾರಿಯೇ ಶ್ರೇಷ್ಠಕುಲದವನು.

(೧). ನಡೆನುಡಿ ಸಿದ್ಧಾಂತವಾದಲ್ಲಿ ಕುಲ ಹೊಲೆಯಿಲ್ಲ. ನುಡಿ ಲೇಸು, ನಡೆಯಧಮವಾದಲ್ಲಿ, ಅದೇ ಬಿಡುಗಡೆ. ಇಲ್ಲದ ಹೊಲೆ ಕಳವು ಪರದಾರಂಗಳಲ್ಲಿ ಹೊಲಬನರಿಯದೆ ಕೆಟ್ಟು ನಡೆವುತ್ತ ಮತ್ತೆ ಕುಲಜರೆಂಬ ಒಡಲುಂಟೇ? ಆಚಾರವೇ ಕುಲ, ಅನಾಚಾರವೇ ಹೊಲೆ, ಇಂತೀ ಉಭಯವ ತಿಳಿದು ಅರಿಯಬೇಕು, ಕಯ್ಯುಳಿಗತ್ತಿ ಅಡಿಗೂಂಟ ಕೆಡೆಯಾಗಬೇಡ, ಅರಿ ನಿಜಾತ್ಮ ರಾಮರಾಮನಾ.

(೨). ಆದ್ಯರಿಗಲ್ಲದೆ ವೇದ್ಯವಾಗದು. ಮಾಣು ಭೋ, ಮಾಣು ಭೋ. ಶಿವಭಕ್ತನೇ ಕುಲಜ. " ಕೈವರ್ತತೆ ಗರ್ಭಸಂಭವೇ। ಮಾರ್ಕಂಡೇಯ ಮುನಿ ತಪಸ್ಸು ಜಾಯತೆ ವಿಪ್ರಕುಲೆ। ತಸ್ಮಾತ್ ಜಾತಿಭೇದಂ ನಕಾರಯೇತ್ " ಜಾತನಲ್ಲ, ಅಜಾತನಲ್ಲ, ಕೂಡಲಸಂಗನ ಶರಣರು ನಿಸ್ಸೀಮರಯ್ಯ.

(೩). ಜಾತಿವಿಡಿದು ಸೂತಕವನರಸುವರೇ? ಜ್ಯೋತಿವಿಡಿದು ಕತ್ತಲೆಯನರಸುವರೇ? ಇದೇತಕೋ ಮರುಳುಮಾನವಾ? ಜಾತಿಯಲ್ಲಿ ಅಧಿಕನೆಂಬನೆ? ವಿಪ್ರ ಶತಕೋಟಿಗಳಿರ್ದು ಫಲವೇನು? ಭಕ್ತಶಿಖಾಮಣಿ ಎಂದುದು ವಚನ. ನಮ್ಮ ಕೂಡಲಸಂಗನ ಶರಣರ ಪಾದ ಪರುಷವ ನಂಬು, ಕೆಡಬೇಡ ಮನುಜಾ.

( ೪ ). ಎನಿಸು ಓದಿದಡೇನು? ಎನಿಸು ಕೇಳಿದಡೇನು? ಚತುರ್ವೇದ ಸೀವು ಪಾಠವಾದಡೇನು? ಲಿಂಗಾರ್ಚನೆ ವಿಹೀನವಾದಡೆ, ಶಿವಶಿವಾ, ಬ್ರಾಹ್ಮಣ ನೆಂದೆಂಬೆನೆ? ಎನ್ನನು. “ ಜನ್ಮನಾಜಾಯತೆ ಶೂದ್ರಃ ಕ್ರಿಯಯಾ ಜಾಯತೆ ದ್ವಿಜಃ । ಶ್ರುತಂಚ ಶ್ರೋತ್ರಿಯಂಚೈವ ಬ್ರಹ್ಮಚರ್ಯಂತಿ ಬ್ರಾಹ್ಮಣಃ ॥ ಎಂದು ದಾಗಿ, “ ಬ್ರಹ್ಮನಾಸ್ತಿ ಶ್ವಪಚಂ ದಮನೇ ” ಎಂದುದಾಗಿ, ಇದುಕಾರಣ, ಕೂ ಡಲಸಂಗಮದೇವಾ, “ ವೇದಭಾರಾಭರಾ ಕ್ರಾಂತಿಕೋ ಬ್ರಾಹ್ಮಣೋ ಗಾರ್ದ ಭಃ ” ಎಂಬೆನು.

## ಹೊಲೆಯನಾದರೂ ಸದಾಚಾರಿಯೇ ಕುಲಜನು.

( ೫ ). ಚಾಂಡಾಲನಾದರೆಯೂ ಶಿವಭಕ್ತನೇ ಕುಲಜನು. ಆತನೊಡನೆ ನುಡಿಗಡಣವ ಮಾಡಬೇಕೆಂದುದು ವೇದ. ಕುಲವನೋಡಲು ಬೇಡ. ಛಲವ ನೋಡಲು ಬೇಡ. ಆತನೆಲ್ಲರಿಗಿಂತಲೂ ಹಿರಿಯನು. ಆತನಿರುತ್ತಿರ್ದದಲ್ಲಿ ಶಿವ ನಿರುತ್ತಿಹನೆಂದು ವೇದ ನುಡಿವುತ್ತಿದೆ. ಶ್ಲೋ ॥ ಅಪಿವಾಯಶ್ಚಾಂಡಾಲೋ ಶಿವ ಇತಿ ವಾಚ್ಯಂ ದತ್ತೇನರಹಸಾ । ವಸೇತ್ತೇನ ಸಹ ವಿಶೇತ್ತೇನಸಹ ಭುಂಜೀ ಯಾತ್ ॥ ಹೀಗೆಂದು ಉಪನಿಷತ್ತು ನುಡಿವುತ್ತಿದೆ. ಶಿವನೇ ನಿಮ್ಮ ಸದ್ಭಕ್ತರನು ಅವರಿವರೆಂದು ಕುಲವೆತ್ತಿ ನುಡಿದವಂಗೆ ಇಪ್ಪತ್ತೆಂಟು ಕೋಟಿ ನರಕ ತಪ್ಪದು ನೋಡಯ್ಯ ಬಸವಪ್ರಿಯ ಕೂಡಲಚನ್ನಸಂಗಮದೇವಾ.

( ೬ ). ಹೊಲೆಯ ಮಾದಿಗ ಭಕ್ತನಾದೊಡೆ, ಆತನ ಮನೆಯಲ್ಲಿ ಸೂಣ ಗಂಗೆ ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡವೇ, ನೆಲವನುಪ್ಪಡಿಸಿ, ಉಘೇ, ಚಾಂಗು, ಭಲಾ ಎಂದು? ಕುಲದಲಧಿಕ ಹಾರುವಂಗೆ ಸಿದ್ಧಿಗೆಯ್ಯ. ಸಲೆ ನಿಮ್ಮ ಶರಣರ ಮಹಿಮೆಯು ಘನಕ್ಕೆ ಘನ. ಎಲೋ ಕೂಡಲಸಂಗಮದೇವಾ, ನಿಮ್ಮ ನಂಬದವನೇ ಹೊಲೆಯ.

( ೭ ). ಕೊಲ್ಲುವನೇ ಮಾದಿಗನು. ಹೊಲಸುತಿಂಬುವನೇ ಹೊಲೆಯ. ಕುಲವೇನೋ? ಅವಂದಿರ ಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವರು ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು.

( ೮ ). ಚತುರ್ವೇದಿಯಾದರೇನು? ಲಿಂಗವಿಲ್ಲದವನೇ ಹೊಲೆಯ. ಶ್ವಪಚನಾದರೇನು? ಲಿಂಗವಿದ್ದವನೇ ವಾರಣಾಸಿ. ಆತನ ನುಡಿಗಡಣವೇ

ಲೇಸು. ಆತ ಜಗಕ್ಕೆ ಪಾವನ. ಆತನ ಪ್ರಸಾದವೆನಗಮೃತಸೇವನೆ. ಶ್ಲೋ॥ ಮಮ ಪ್ರಿಯ ಚತುರ್ವೇದೋ। ಮದ್ಭಕ್ತಾಶ್ವಪಚೋಪಿವಾನ್ ॥ ತಸ್ಮಾದ್ದೇವಂತಥೋ ಗ್ರಾಹ್ಯಂ। ಸಚಪೂಜ್ಯೋ ಯಥಾಸ್ವಯಂ ॥ ಎಂದುದಾಗಿ ಕೂಡಲಸಂಗಮ ದೇವರನರಿತು ಪೂಜಿಸಿದಾತ ಷಡ್ದರ್ಶನಕ್ಕಧಿಕ ಜಗಕ್ಕೆ ಪಾವನ ನೋಡಾ.

(೯). ದೇವ, ನಿಮ್ಮ ಪೂಜಿಸಿ ಚನ್ನನ ಕುಲ ಚನ್ನಾಯಿತ್ತು. ದೇವ ನಿಮ್ಮ ಪೂಜಿಸಿ ದಾಸನ ಕುಲ ದೇಸೆವಡೆಯಿತ್ತು. ನಿಮ್ಮ ಅಡಿಯಕ್ಕೆರಗಿ ಮಡಿವಾಳ ಮಾಚಯ್ಯ ನಿಮ್ಮಡಿಯಾದ. ನೀನೊಲಿದ ಕುಲಕ್ಕೆ, ನೀನೊಲಿದ ಹೊಲೆಗೆ ಮೇರೆಯುಂಟೇ ಅಯ್ಯ? ಶ್ಲೋ॥ ಶ್ವಪಚೋಪಿ ಮುನಿಶ್ರೇಷ್ಠಃ। ಯಸ್ತುಲಿಂಗಾರ್ಚನೈಸ್ತಥಾ ॥ ಲಿಂಗಾರ್ಚನ ಮಹಿನೋಪಿ। ಬ್ರಾಹ್ಮಣೋಪಿಶ್ವಪಚಾಧಮಃ ॥ ಎಂದುದಾಗಿ, ಜಾತಿ ವಿಜಾತಿಯಾದರೇನು? ಅಜಾತಂಗೆ ಶರಣೆನ್ನದಾತನೇ ಹೊಲೆಯ ಕಾಣಾ ಕೂಡಲಸಂಗಮದೇವಾ.

(೧೦). ಹೊಲೆಯ ಹೊಲೆಯ ಎಂದಡೆ, ಹೊಲೆಯರೆಂತಪ್ಪರಯ್ಯ? ಹೊಲೆಯ ಹೊರಕೇರಿಯಲ್ಲಿರುವರು, ಊರೊಳಗಿಲ್ಲವಯ್ಯ ಹೊಲೆಯರು? ತಾಯಿಗೆ ಬೈದವನೇ ಹೊಲೆಯ. ತಂದೆಗೆ ಉತ್ತರ ಕೊಟ್ಟವನೇ ಹೊಲೆಯ. ತಂದೆಗೆ ಬೈದವನೇ ಹೊಲೆಯ. ಕೊಡುವ ಹಣಕ್ಕೆ ಅಡ್ಡ ಬಂದವನೇ ಹೊಲೆಯ. ನಡುದಾರಿಗೆ ಮುಳ್ಳು ಹಚ್ಚಿದವನೇ ಹೊಲೆಯ. ಬ್ರಾಹ್ಮಣನ ಕುತ್ತಿಗೆಯ ಕೊಯ್ದವನೇ ಹೊಲೆಯ. ಹತ್ತು ಆಡಿದರೆ, ಒಂದು ನಿಜವಿಲ್ಲದವನೇ ಹೊಲೆಯ. ಅರ್ಥಕ್ಕೆ ಪ್ರಾಣಹತ್ಯವ ಮಾಡುವವನೇ ಹೊಲೆಯ. ಚಿತ್ತದಲ್ಲಿ ಪರಸತಿಯ ಬಯಸಿದವನೇ ಹೊಲೆಯ. ಲಿಂಗಮುದ್ರೆಯ ಕಿತ್ತಿದವನೇ, ಲಿಂಗಬಿಟ್ಟು ತಿರುಗುವವನೇ ಹೊಲೆಯ. ನಿಂದೆಯ ಮಾಡುವವನೇ ಹೊಲೆಯ. ಧರ್ಮವ ಮಾಡದವನೇ ಹೊಲೆಯ. ಬಸವನ ಕೊಂದವನೇ ಹೊಲೆಯ. ಬಸವನ ಇರಿದವನೇ ಹೊಲೆಯ. ಲಿಂಗ ಪೂಜೆಯ ಮಾಡದವನೇ ಹೊಲೆಯ. ಇಂತಪ್ಪ ಹೊಲೆಯರು ಊರ ತುಂಬ ಇರಲಾಗಿ, ಹೊರಕೇರಿಯವರಿಗೆ ಹೊಲೆಯರೆನಬಹುದೇ? ಹೊಲೆ ಹುಟ್ಟಿದ ಮೂರುದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು, ಹೊಲೆಯನುಂಡ ಪತ್ರಾವಳಿ ಹೇಳಿಗೆ ಹರಗೋಲವಾಯಿತ್ತು, ಗುರುಗಳಿಗೆ ಚರ್ಮಾವುಗೆಯಾಯಿತ್ತು, ಹೂಡಲಿಕ್ಕೆ ಮಿಣಿಯಾಯಿತ್ತು, ಹೊಡೆಯಲಿಕ್ಕೆ ಬಾರಕೋಲವಾಯಿತ್ತು, ಅರಸರಿಗೆ

ಮೃದಂಗವಾಯಿತ್ತು, ತೊಗಲು ನಗಾರಿಯಾಯಿತ್ತು, ತುಪ್ಪ ತುಂಬಲಿಕ್ಕೆ ಸಿದ್ಧಲಿಕೆ, ಎಣ್ಣೆ ತುಂಬಲಿಕ್ಕೆ ಬುದ್ದಲಿಕೆ. ಸಿದ್ದಲಿಕೇನ ತುಪ್ಪ, ಬುದ್ದಲಿಕೇನ ಎಣ್ಣೆ, ಕಲ್ಲಶೆಟ್ಟಿ ಮಲ್ಲಶೆಟ್ಟಿಗಳ ಕೂಡಿ, ನಾ ಶೀಲವಂತ ತಾ ಶೀಲವಂತ ಎಂದು ಶುದ್ಧಿಸಿಕೊಂಡು ತಿಂದು, ಒಂದು ಸ್ಥಳಕ್ಕೆ ಬಂದಾಗ, ನನ್ನ ಕುಲ ಹೆಚ್ಚು, ನಿನ್ನ ಕುಲ ಕಡಿಮೆ ಎಂದು ಬಡಿದಾಡುವ ಕುನ್ನಿ ನಾಯಿಗಳ ಮೋರೆ ಮೋರೆಯ ಮೇಲೆ ನಮ್ಮ ಪಡಿಹಾರಿ ಉತ್ತಣ್ಣಗಳ ವಾಮಪಾದುಕೆಯ ತಕ್ಕೊಂಡು, ಇವರ ಅಂಗುಳ ಮೆಟ್ಟಿ ಪಟಪಟನೆ ಹೊಡಿ ಎಂದಾತ ನಮ್ಮ ದಿಟ್ಟಧೀರ ಅಂಬಿಗರ ಚೌಡಯ್ಯ ನಿಜಶರಣನು.

(೧೧). ಹೊಲೆ ಹೊಲೆ ಎಂದೆನಯ್ಯ ಬಸವಣ್ಣಾ. ಹೊಲೆ ಹುಟ್ಟಿದ ಮೂರು ದಿನಕ್ಕೆ ಪಿಂಡಕ್ಕೆ ನೆಲೆಯಾಯಿತ್ತು. ನರರಿಗೆ ಹೊಲೆ, ಸುರರಿಗೆ ಹೊಲೆ, ಹರಿಬ್ರಹ್ಮಾದಿಗಳಿಗೆ ಹೊಲೆ. ಇಂತೀ ಹೊಲೆಯಲ್ಲಿ ಹುಟ್ಟಿ, ಹೊಲೆಯನತಿಗಳೆದೆನೆಂಬ ಉಭಯ ಭ್ರಷ್ಟರ ಮುಖವ ನೋಡಲಾಗದು ಕಾಣಾ ಕೂಡಲಚೆನ್ನಸಂಗಯ್ಯ.

---

## (೩). * ಲಿಂಗಾಂಗಿಗಳಲ್ಲಿ ಕುಲಭೇದವಿಲ್ಲ.

(೧). ಕರ್ಮಜಾತನ ಕಳೆದು ಶ್ರೀಗುರುಲಿಂಗವು ಪುಣ್ಯಜಾತನ ಮಾಡಿದ ಬಳಿಕ, ಶಿವಕುಲವಲ್ಲದೆ, ಅನ್ಯಥಾ ಕುಲವುಂಟೇ ಶರಣರಿಗೆ? ಆವ ಕುಲವಾದಡೇನು? ಲಿಂಗವಿದ್ದಾತನೇ ಕುಲಜನು. ಕುಲವನರಸುವರೇ ಶರಣರಲ್ಲಿ ಆಚಾರವನರಸಬೇಕಲ್ಲದೆ, ಜಾತಿ ಸಂಕರನಾದಬಳಿಕ? ಅದೆಂತೆಂದೊಡೆ, ಶಿವಧರ್ಮದಲ್ಲಿ —“ ಶಿವೋ ಜಾತ ಕುಲೇ ಧರ್ಮಃ ಪೂರ್ವಜನ್ಮ ವಿವರ್ಜಿತಃ । ಉಮಾ ಮಾತಾ ಪಿತಾ ರುದ್ರ ಈಶ್ವರಃ ಕುಲಮೇವ ಚ ॥ ಎಂದುದಾಗಿ ನಿಮ್ಮ ಶರಣರ ಕುಲಕ್ಕೆ ಪ್ರತಿಗಾಣೆನು. ನಿಮ್ಮ ಕುಲವಲ್ಲವೇ ಅವರು? ನಿಮ್ಮ ಪ್ರತಿಗಾಣೆನು. ನಿಮ್ಮ ಕುಲಕ್ಕೆ ಪ್ರತಿ ಇಲ್ಲವಾಗಿ, ಕೂಡಲಸಂಗಮದೇವಯ್ಯ, ನಿಮ್ಮ ಶರಣರಲ್ಲಿ ಸೂತಕವನರಸುವರಿಗೆ ನಾಯಕ ನರಕ ತಪ್ಪದು.

---

* ಈ ವಚನಗಳೊಡನೆ ಪುಟ ೬೧ ರಿಂದ ೬೭ ರ ವರೆಗೆ ಇರುವ ವಚನಗಳನ್ನೂ ಅವಲೋಕಿಸಬೇಕು.

( ౨ ). ಪಟ್ಟವ ಕಟ್ಟಿದ ಬಳಿಕ, ಲಕ್ಷಣವನರಸುವರೇ? ಲಿಂಗದೇವನ ಪೂಜಿಸಿ, ಕುಲವನರಸುವರೇ, ಅಯ್ಯಾ ಕೂಡಲಸಂಗಮದೇವಾ, ಭಕ್ತಕಾಯ ಮಮಕಾಯವೆಂದುದಾಗಿ?

( ೩ ). ಎನ್ನ ಭವಿತನವ ಕಳೆದು ಭಕ್ತನ ಮಾಡಿದಿರಯ್ಯಾ. ವಾಯು ಪ್ರಾಣಿಯು ಕಳೆದು, ಲಿಂಗಪ್ರಾಣಿಯು ಮಾಡಿದಿರಯ್ಯಾ. ಅಂಗೇಂದ್ರಿಯವ ಕಳೆದು ಲಿಂಗೇಂದ್ರಿಯವ ಮಾಡಿದಿರಯ್ಯಾ. ಅಂಗವಿಷಯ ಭ್ರಮೆಯು ಕಳೆದು, ಲಿಂಗವಿಷಯು ಭ್ರಾಂತನ ಮಾಡಿದಿರಯ್ಯಾ. ಅಂಗ ಕರಣಂಗಳ ಕಳೆದು, ಲಿಂಗ ಕರಣಂಗಳೇ ಹರಣ ಕಿರಣವಾಗಿ ಬಿಂಬಿಸುವಂತೆ ಮಾಡಿದಿರಯ್ಯಾ. ಕುಲಸೂತಕ, ಛಲಸೂತಕ, ತನುಸೂತಕ, ಮನಸೂತಕ, ನೆನಹುಸೂತಕ, ಭಾವಸೂತಕವೆಂಬ ಇಂತೀ ಭ್ರಮೆಯ ಕಳೆದು ನಿಭ್ರಾಂತನ ಮಾಡಿ ರಕ್ಷಿಸಿದ ಶ್ರೀಗುರುವಿಂಗೆ, ನಮೋ ನಮೋ ಎಂಬೆನಯ್ಯಾ ಮಹಾಲಿಂಗ ಗುರು ಶಿವಸಿದ್ಧೇಶ್ವರಪ್ರಭುವೇ.

( ೪ ). ಶ್ರೀಗುರುಸ್ವಾಮಿ ಪೂರ್ವಾಶ್ರಯಮಂ ಕಳೆದು ಪುನರ್ಜಾತನಂ ಮಾಡಿದ ಬಳಿಕ, ಪಂಚಭೂತಕಾಯವ ಕಳೆದು ಪ್ರಸಾದಕಾಯವ ಮಾಡಿದ ಬಳಿಕ, ವಾಯುಪ್ರಾಣಿಯು ಕಳೆದು ಲಿಂಗಪ್ರಾಣಿಯು ಮಾಡಿದ ಬಳಿಕ, ಎಲ್ಲಿಯ ಕುಲಸೂತಕ, ಎಲ್ಲಿಯ ಛಲಸೂತಕ, ಎಲ್ಲಿಯ ತನುಸೂತಕ, ಎಲ್ಲಿಯ ಮನಸೂತಕ, ಎಲ್ಲಿಯ ನೆನಹುಸೂತಕ, ಎಲ್ಲಿಯ ಭಾವಸೂತಕ? ಇವನೆಂತು ಹಿಡಿಯಲಾಗದು ಸದ್ಭಕ್ತನು. ಕುಲಸೂತಕವುಳ್ಳನ್ನಕ್ಕರ ಭಕ್ತನಲ್ಲ. ಛಲಸೂತಕವುಳ್ಳನ್ನಕ್ಕರ ಮಹೇಶ್ವರನಲ್ಲ. ತನುಸೂತಕವುಳ್ಳನ್ನಕ್ಕರ ಪ್ರಸಾದಿಯಲ್ಲ. ಮನಸೂತಕವುಳ್ಳನ್ನಕ್ಕರ ಪ್ರಾಣಲಿಂಗಿಯಲ್ಲ. ನೆನಹುಸೂತಕವುಳ್ಳನ್ನಕ್ಕರ ಶರಣನಲ್ಲ. ಭಾವಸೂತಕವುಳ್ಳನ್ನಕ್ಕರ ಐಕ್ಯನಲ್ಲ. ಇಂತೀ ಸೂತಕವ ಮುಂದುಗೊಂಡಿಪ್ಪವರ ಮುಖವ ನೋಡಲಾಗದು ಗುಹೇಶ್ವರಾ.

( ೫ ). ಎಂತವನಾದಡೇನು? ಲಿಂಗ ಮುಟ್ಟಿದಾತನೇ ಕುಳಜಾತಿ. ಕುಲವಹುದು ತಪ್ಪದು, ಲಿಂಗವಮುಟ್ಟಲೊಡನೆ. ಹೊನ್ನಹುದು ತಪ್ಪದು, ಪರುಷ ಮುಟ್ಟಲೊಡನೆ. ಕೂಡಲಸಂಗಮದೇವನೊಲ್ಲನು ಸರ್ವ ಸಂದೇಹಿಗಳನು.

( ೬ ). ದೇವ ಸಹಿತ ಭಕ್ತರು ಮನೆಗೆ ಬಂದರೆ, ಕಾಯಕವಾವುದೆಂದು ಬೆಸಗೊಂಡೆನಾದರೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ತಲೆದಂಡ, ತಲೆದಂಡ.

ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ, ನಿಮ್ಮ ರಾಣಿವಾಸದಾಣೆ.

(೭). ಗುರುವೇ ತಂದೆತಾಯಿಯಲ್ಲದೆ ಬೇರೆ ತಂದೆತಾಯಿಗಳಿಲ್ಲವಯ್ಯಾ. ನನಗೆ ಶಿವಶರಣರೇ ಬಂಧುಬಳಗವಲ್ಲದೆ, ಬೇರೆ ಮತ್ತೊಂದು ಬಂಧುಬಳಗವಿಲ್ಲವಯ್ಯಾ. ಎನಗೆ ಶಿವಕುಲವಲ್ಲದೆ, ಬೇರೊಂದು ಕುಲವಿಲ್ಲವಯ್ಯಾ. ಎನಗೆ ಅಖಂಡೇಶ್ವರಾ ನೀವೇ ಎಲ್ಲ ಕುಲದೈವತವಲ್ಲದೆ ಬೇರೆ ಮತ್ತೆ ಕುಲದೈವ ಮನದೈವವಿಲ್ಲವಯ್ಯಾ ಎನಗೆ.

(೮). ಬಲ್ಲಹ ಬಿಡಲು, ಹೊಲೆಗೇರಿ ಎಂಬ ಹೆಸರೊಳವೇ ಅಯ್ಯಾ? ಲಿಂಗವಿದ್ದವರ ಮನೆ ಕೈಲಾಸವೆಂದು ಅರಿಯಲುಬೇಕು. ಶ್ಲೋ॥ ಚಾಂಡಾಲವಾಟಿಕಾಯಾಂವಾ । ಶಿವಭಕ್ತಸ್ಥಿತೋಯದಿ ॥ ತತಸ್ತಚ್ಛಿವಲೋಕಸ್ಯ । ತದ್ಗೃಹಂ ಶಿವಮಂದಿರಮ್ ॥ ಎಂದುದಾಗಿ, ಲೋಕದ ಡಂಭಕರ ಮಾತು ಬೇಡ. ಕೂಡಲಸಂಗಮದೇವಯ್ಯನಿದ್ದುದೇ ಕೈಲಾಸ.

(೯). ದಾಸೀಪುತ್ರನಾಗಲಿ, ವೇಶ್ಯಾ ಪುತ್ರನಾಗಲಿ. ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪೂಜಿಸಿ, ಪಾದೋದಕಪ್ರಸಾದವಕೊಂಬುವದೇ ಯೋಗ್ಯ. ಹೀಗಲ್ಲದೆ, ಉದಾಸೀನವ ಮಾಡಿ ಬಿಡುವವರಿಗೆ ಪಂಚಮಹಾಪಾತಕ ನರಕ ಕಾಣಾ ಕೂಡಲಚೆನ್ನಸಂಗಮದೇವಾ.

---

## (೪). ಭಕ್ತರು ಪರಸ್ಪರ ಅನ್ನೋದಕ ವ್ಯವಹಾರವನ್ನು ಮಾಡುವದು.

(೧). ಭವಿಮನೆಯು ಭವಿಪಾಕವಲ್ಲದೆ, ಭಕ್ತರ ಮನೆಯಲ್ಲಿ ಭವಿಪಾಕವಿಲ್ಲವಯ್ಯಾ. ಆ ಭಕ್ತನ ಸ್ತ್ರೀಯು ಲಿಂಗ ಮುಂತಾಗಿ, ಗುರುಲಿಂಗ ಜಂಗಮಕ್ಕೆ ಬೇಕೆಂದು, ಭಕ್ತಿ ರತಿಯಿಂದೆ, ಲಿಂಗಹಸ್ತದಿಂದೆ, ಮಾಡಿದ ದ್ರವ್ಯ ಸಕಲ ಪದಾರ್ಥಂಗಳೆಲ್ಲ ಶುದ್ಧ ಪಾಕ. ಹಸ್ತಪರುಷದಿಂದ ಅತ್ಯಂತ ಪವಿತ್ರವಾದ ಪಾಕವು. ಅದು ಲಿಂಗಕ್ಕೆ ಸಲ್ಲುವುದು. ಅದನತಿಗಳೆದಡೆ ದ್ರೋಹವಯ್ಯಾ. ಆ ಭಕ್ತಿ ಪದಾರ್ಥವನು ಲಿಂಗಕ್ಕೆ ಕೊಟ್ಟು ಕೊಳ್ಳಬೇಕಯ್ಯಾ, ಕೂಡಲಚೆನ್ನಸಂಗಮದೇವಾ.

(೨). ಭವಿಯಲ್ಲಿ ಭವಿಯ ಹಸ್ತದಲ್ಲಿ ಭವಿಪಾಕವಲ್ಲದೆ, ಭಕ್ತರ ಮನೆಯಲ್ಲಿ ಭಕ್ತರ ಹಸ್ತದಲ್ಲಿ, ಭವಿ ಪಾಕಉಂಟೇ? ಇಲ್ಲವಯ್ಯಾ. ಸುಡಲಿವರ ಯುಕ್ತಿ

ಎಂಥಾದ್ದೋ, ಭಕ್ತಿ ಎಂಥಾದ್ದೋ, ಮುಕ್ತಿ ಎಂಥಾದ್ದೋ? ಆ ಪರಮಸದ್ಭಕ್ತನ ಹಸ್ತದಿಂದೆ ಬಂದ ಸಕಲ ಪದಾರ್ಥಗಳನೆಲ್ಲ ಲಿಂಗ ಪ್ರಸನ್ನತ್ವದಿಂದೆ ಬಂದುದಾಗಿ, ಆ ಪದಾರ್ಥವನು ಶುದ್ಧತೆಯಿಂದ ಲಿಂಗಕ್ಕೆ ಕೊಟ್ಟು ಕೊಂಬುವದೇ ದೇವಭಕ್ತರ ನಡೆ. ಅವರೊಕ್ಕುದು ಮಹಾಪ್ರಸಾದವಯ್ಯ, ಕೂಡಲಚನ್ನಸಂಗಮದೇವಾ.

(೩). ಭಕ್ತರ ಮನೆಯ ನರಸಿಕೊಂಡು ಹೋಗಿ, ಭಕ್ತದೇಹಿಕ ದೇವನೆಂಬ ಶೃತಿ ವಚನವ ಕೇಳಿ, ಭಕ್ತನೇ ದೇವನೆಂದರಿದು, ಮತ್ತೆಯೂ ಮುಕ್ತಿಯ ನರಸುವ ಪಾತಕರ ವಿಧಿಯೆಂತೋ? ಭಕ್ತರ ಮಠಕ್ಕೆ ಹೋಗಿ, ಅದು, ಇದು, ಎಂಬ ಸಂದೇಹ ಪಾತಕಿ ನೀನು ಕೇಳು. ಆ ಭಕ್ತರ ಮಠದೊಳಗೆ ಭಕ್ತಿರತಿಯ ಬೆಳಸು, ಲಿಂಗದ ಕಳೆಯು, ಪ್ರಸಾದದ ರಾಶಿ, ಇಂತಪ್ಪ ಪ್ರಸಾದವಿದ್ದಲ್ಲಿಗೆ ಹೋಗಿ, ಸೂತಕವನರಸುವ ಪಾತಕರ ಮೆಚ್ಚುವನೇ ನಮ್ಮ ಕೂಡಲಚನ್ನ ಸಂಗಮ ದೇವಾ?

(೪). ಕೂಲಿ, ಕೃಷಿ, ಕಾಯಕಂಗಳಿಂದ ಮಾಡುವ ಗುರುಲಿಂಗ ಜಂಗಮದ ಸೇವೆ ಅದಾವತೆರನೆಂದರಿದು, ಭಾವಶುದ್ಧವಾಗಿ ಮಾಡುವ ಸುಕಾಯಕವಂತನಿರವು ಎಂತುಟೆಂದಡೆ, ಮಾಡಿಕೊಂಡ ಕೃತ್ಯದಲ್ಲಿ ಆರಿಗೂ ಒಡಲೆಡೆಗುಡದೆ, ಕೊಂಡುದು ಪ್ರಸಾದ, ನಿಂದುದು ಸುಯಿಧಾನ ವೆನ್ನದೆ, ಉಭಯ ಪ್ರತಿಪಾಕದಲ್ಲಿ ಆದ ಸುಯಿಧಾನಕ್ಕೆ ಸಂಕಲ್ಪವಳಿದು ಉಭಯ ಭಾಂಡವು ಸರಿ ಎಂದ ಪ್ರಸಾದಿಗೆ ಪ್ರಸಾದವ ಎಡೆ ಮಾಡಬೇಕು. ಅದು ನಿರ್ಮಾಲ್ಯವಲ್ಲ. ಅದು ಲಿಂಗಾಂಗ ಕುಂಭದಲ್ಲಿ ನಿಂದಪ್ರಸಾದ. ಇದರ ಸಂದೇಹವ ಹರಿದುಕೊಂಬ ನಿರಂಗ ಪ್ರಸಾದಿಗೆ ಕುಂಭೇಶ್ವರ ಲಿಂಗದಲ್ಲಿರ್ದ್ದ ಜಗನ್ನಾಥ ಸಾಕ್ಷಿಯಾಗಿ, ನಮೋ ನಮೋ ಎನುತಿರ್ದೆನು.

**ಅರ್ಥ**:—ಕೈ ಕಂಬಳವು, ಹಲಾಯುಧ ಕೃಷಿಯು, ಇವು ಮೊದಲಾದ ಷಟ್ ಕೃಷಿ ದ್ರವ್ಯವ ಗಳಿಸಿ, ಗುರುಲಿಂಗಗಜಂಗಮ ಭಕ್ತಿಯ ಮಾಡುವ, ಗುರುಲಿಂಗ ಜಂಗಮಕ್ಕೆ ಮಾಡುವ, ಶುಶ್ರೂಷೆಯ ಅದೆಂತೆಂದರಿದು, ಮನ ನಿರ್ಮಲವಾಗಿ, ಕಾಯಕವ ಮಾಡಿ, ಗುರುಲಿಂಗಜಂಗಮದ ಭಕ್ತಿಯ ಮಾಡುವ ಸಕಾಯಕವುಳ್ಳ ಶರಣನ ನಿಲುಕಡೆಯು ಹೇಗೆಂದಡೆ, ಭಗ್ತಮಾಹೇಶ್ವರರ ಮಧ್ಯದಲ್ಲಿ ಅಂಗೀಕ್ಕರಿಸಿಕೊಂಡ ನೇಮದಲ್ಲಿ ಭಕ್ತಮಾಹೇಶ್ವರರೊಳಗೊಬ್ಬರಿಗೂ, ಇವ ಶೀಲಕೆ

ತಪ್ಪಿದ, ವ್ರತಕ್ಕೆ ತಪ್ಪಿದ, ಆಚಾರಕ್ಕೆ ತಪ್ಪಿದ, ಎಂಬ ಕೊರತೆಯ ನುಡಿಗೆ ತೆರಪುಗೊಡದೆ, ಕೊಂಡದು ಪ್ರಸಾದನಿಂದುದು ಓಗರವೆಂದು, ಪರಾವರಿಯಿಂದನುಭವಿಸದೆ, ಸಮ ಶೀಲವಂತರೀರ್ವರ ಮನೆಯಲ್ಲಿ ಮಾಡಿದಡಿಗೆಯಲ್ಲಿ, ಅಂಥಾ ಪದಾರ್ಥಕ್ಕೆ ನಾವು ಬಣಜಿಗರು, ಇವರು ಜೇಡರು, ಎಷ್ಟು ಸಮಶೀಲವಾದರೂ ಹೇಗೆ ಅನುಭವಿಸಬಹುದೆಂಬ ಸಂದೇಹವಳಿದು ಕೊಳಬೇಕು. ಅವರ ಭಾಂಡಭಾಜನವು ನಮ್ಮ ಭಾಂಡಭಾಜನವು ಒಂದೇ ಎಂದು ಶಿವಪ್ರಸಾದಿಗೆ ಪದಾರ್ಥವ ನೀಡಬೇಕು. ಅದು ಬಿಡಲುತಕ್ಕುದಲ್ಲ. ಆ ಪದಾರ್ಥವು ಲಿಂಗದೇಹಿಗಳಾದ ಶರಣರುಗಳ ಭಾಂಡದಲ್ಲಿರ್ದ ಪದಾರ್ಥವು, ಶೀಲ ಒಂದಾದರೂ ಜಾತಿ ಬೇರೆ, ಹೇಗೆ ಕೊಳಬಹುದು, ಎಂಬ ಸಂಕಲ್ಪವ ಬಿಟ್ಟು ಸಮರಸಭಾವದಿಂದ ಸ್ವೀಕರಿಸುವ ದೇಹೋಪಾಧಿ ಇಲ್ಲದ ಶಿವಪ್ರಸಾದಿಗೆ, ಇಷ್ಟಲಿಂಗದಲ್ಲಿ ಚೈತನ್ಯವಾಗಿರ್ದ ಪ್ರಾಣಲಿಂಗ ತಾರ್ಕಣೆಯಾಗಿ ಸಾಂದ್ರ ನಮಸ್ಕಾರ ಮಾಡುತ್ತಿರ್ದನು ಎಂಬುದರ್ಥ.

(೫). ಎಡೆಗೆ ಬಾರದಾತ ಅಡಿಗೆಗೆ ದೂರ. ಅಡಿಗೆಗೆ ದೂರಾದಾತ ಮನೆಗೆ ದೂರ. ಮನೆಗೆ ದೂರಾದಾತ ಮನಕ್ಕೆ ದೂರ. ಮನಕ್ಕೆ ದೂರಾದಾತ ಗುಹೇಶ್ವರ ಲಿಂಗದನುಭಾವಕ್ಕೆ ದೂರ ಚನ್ನಬಸವಾ.

(೬). ಭಕ್ತರೇ ಸಮರ್ಥರು, ಅಸಮರ್ಥರೆನಲುಂಟೇ ? ಚನ್ನನೆತ್ತ ? ಚೋಳನೆತ್ತ ? ಚನ್ನನೊಡನುಂಡ ಶಿವನು. ಅಹಾ ! ಅಯ್ಯಾ ! ಚನ್ನಚೋಳನ ಮನೆಯ ಕಂಪಣಿಗನಯ್ಯಾ! ಕೂಡಲಸಂಗಮದೇವಾ ಭಕ್ತಿಲಂಪಟನಯ್ಯಾ.

(೭). ವೇದ ನಡನಡುಗಿತ್ತು. ಶಾಸ್ತ್ರವಗಲಿ ಕೆಲಸಾರಿತ್ತಯ್ಯಾ. ತರ್ಕ ತರ್ಕಿಸಲರಿಯದೆ, ಮೂಗವಟ್ಟಿತ್ತಯ್ಯಾ. ಆಗಮ ಹೊರತೊಲಗಿ, ಅಗಲಿದ್ದತಯ್ಯಾ. ನಮ್ಮ ಕೂಡಲಸಂಗಯ್ಯನು ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ.

(೮). ವೇದಕ್ಕೊರೆಯ ಕಟ್ಟುವೆ. ಶಾಸ್ತ್ರಕ್ಕೆ ನಿಗಳವನಿಕ್ಕುವೆ. ತರ್ಕದ ಬೆನ್ನಬಾರನೆತ್ತುವೆ. ಆಗಮದ ಮೂಗ ಕೊಯ್ಯುವೆ. ನೋಡಯ್ಯಾ ಮಹಾದಾನಿ ಕೂಡಲಸಂಗಮದೇವಾ ಮಾದಾರ ಚನ್ನಯ್ಯನ ಮನೆಯಲುಂಡ ಕಾರಣ.

(೯). ಕುಲಹೀನ ಶಿಷ್ಯಂಗೆ ಅನುಗ್ರಹ ಮಾಡಿ, ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು, ಅಕ್ಕಿ ಕಣಕವ ತಕ್ಕೊಂಡು ಹೋಗುವ ಗುರುವಿನ ಕಂಡರೆ, ಕೆಡವಿ ಹಾಕಿ ಮೂಗನೇ ಕೊಯ್ದು, ಇಟ್ಟಂಗಿಯ ಕಲ್ಲಿಲೆ ತಿಕ್ಕಿ, ಸಾಸಿವೆ ಹಿಟ್ಟನೆ ತಳಿದು, ಮೇಲೆ ನಿಂಬಿಯ ಹುಳಿಯನೆ ಹಿಂಡಿ, ಪಡವಲ ಗಾಳಿಗೆ ಹಿಡಿ ಎಂದಾತ ನಮ್ಮ ಅಂಬಿಗರಚೌಡಯ್ಯ.

---

## (೫). ಭಕ್ತರು ಪರಸ್ಪರ ಲಗ್ನವ್ಯವಹಾರವನ್ನು ಮಾಡುವದು.

(೧). ಉಂಬಲ್ಲಿ ಉಡುವಲ್ಲಿ ಕುಲವಳಿಯಿತ್ತೆಂಬಿರಿ. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ ಮಾದಿಗರನೇನೆಂಬೆನಯ್ಯ? ಇವರನೆಂತು ಭಕ್ತರೆಂಬೆನಯ್ಯ? ಇವರನೆಂತು ಯುಕ್ತರೆಂಬೆನಯ್ಯ? ಇವರು ವಚ್ಯೋಚ್ಚಿ ಭಕ್ತರು, ವಚ್ಯೋಚ್ಚಿ ಭವಿಗಳು. ಅದೆಂತೆಂದೊಡೆ ಲೈಂಗ್ಯೆ ॥ ಸ್ತ್ರೀವಾಥಪುರುಷ್ಟಂಥೋ ಚಾಂಡಾಲೋದ್ವಿಜವಂಶಜ: । ನಜಾತಿ ಭೇದೋಲಿಂಗಾರ್ಚನೇ ಸರ್ವೆ ರುದ್ರಗಣಾಃ ಸ್ಮೃತಾ: ॥ ಎಂದುದಾಗಿ, ಇಂತೆಂಬ ಪುರಾಣ ವಾಕ್ಯವ ತಿಳಿದು ನೋಡಿರೋ. ಸರ್ವರೂ ರುದ್ರಗಣಂಗಳೆಂಬೆ. ಸರ್ವರೂ ಸದ್ಭಕ್ತರೆಂದೆ. ಅವರಲ್ಲಿ ಕುಲವ ನೋಡದೆ ಆಚಾರವ ನೋಡಿ, ಅವರಿಂಗೆ ಬೇಕಾದ ಹೆಣ್ಣಕೊಟ್ಟು, ತಮಗೆ ಬೇಕಾದ ಹೆಣ್ಣ ತಂದುಕೊಂಬುದು. ಈ ಕ್ರಮವನರಿಯದವರ ಭಕ್ತಿ ಹೊಲತಿ ಶುದ್ಧ ನೀರ ಮಿಂದಂತಾಯಿತ್ತು ಕೂಡಲಸಂಗಮದೇವಾ.

(೨) ಉಂಬಲ್ಲಿ ಉಡುವಲ್ಲಿ ಕ್ರಿಯೆಯಳಿಯಿತ್ತೆಂಬರು. ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರೆಂತಯ್ಯ? ಅವರ ಭಕ್ತರೆಂತೆಂಬೆನೆ? ಅವರು ಯುಕ್ತರೆಂತೆಂಬೆನಯ್ಯ? ಕೂಡಲಸಂಗಮದೇವ ಕೇಳಯ್ಯ, ಹೊಲತಿ ಶುದ್ಧ ನೀರ ಮಿಂದಂತಾಯಿತ್ತಯ್ಯ.

(೩). ಭಕ್ತನು ತನ್ನ ಜಾತಿ ಸೂತಕವ ಕಳೆದು, ಶಿವಭಕ್ತರ ಕುಲವ ವಿಚಾರಿಸದೆ, ಜಾತಿ ಶಿವಜಾತಿ, ಕುಲ ಶಿವಕುಲವೆಂದರಿದು ಬೆರಸಿಕೊಂಡಿರುತ್ತಿರಲು, ಈಶ್ವರನಿಕ್ಕಿದ ಸೆರೆ ಸಂಕೊಲೆಯಿಂದ ಹೊರಹೊರಟ ನೋಡಯ್ಯ. ಇಂತು ಇದಲ್ಲದೆ ಸಹಜರಾದ ಸದ್ಭಕ್ತರ ಶ್ರೀಪಾದವನೆನಗೆ ತೋರಿಸಿ ಬದುಕಿಸಯ್ಯ ಕೂಡಲಚನ್ನಸಂಗಮದೇವಾ.

(೪). ಆವ ಕುಲವಾದರೇನು? ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿಸಂಕರನಾದ ಬಳಿಕ? ಶ್ಲೋ॥ ಶಿವೇ ಜಾತೇ ಕುಲೇ ಧರ್ಮ ಪೂರ್ವಜನ್ಮವಿವರ್ಜಿತಂ । ಉಮಾಮಾತಾ ಪಿತಾ ರುದ್ರ ಈಶ್ವರಃ ಕುಲಮೇವ ಚ ॥ ಎಂದುದಾಗಿ ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ. ಕೂಡಲಸಂಗಮದೇವಾ ನಂಬುವೆನು ನಿಮ್ಮಯ ಶರಣರನು.

(೫). ಉಂಬುವದು ಉಡುವದು ಶಿವಾಚಾರ, ಕೊಂಬುವದು ಕೊಡುವದು ಕುಲಾಚಾರ ಎಂಬ ಅನಾಚಾರಿಯ ಮಾತ ಕೇಳಲಾಗದು. ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರ ಒಂದೇ ಎಂದು ಕೊಟ್ಟುಕೊಂಬುದು ಸದಾಚಾರವು. ಉಳಿದವೆಲ್ಲವು ಅನಾಚಾರ. ಎಂತೆಂದೊಡೆ, ಪಟಿಕದ ಕೊಡದಲ್ಲಿ ಕಾಳಿಕೆಯನರಸುವ ಹಾಗೆ, ಅಮೃತದೊಳಗೆ ವಿಷವನರಸುವ ಹಾಗೆ, ಸಿಹಿಂಯೊಳಗೆ ಕಹಿಯನರಸುವ ಹಾಗೆ, ಎಂತೆಂದೊಡೆ, ರಜಸೂತಕ, ಕುಲಸೂತಕ, ಜನನಸೂತಕ, ಪ್ರೇತಸೂತಕ, ಉಚ್ಛಿಷ್ಟಸೂತಕ ಎಂದೊಡೆ, ಆತಂಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ತೀರ್ಥವಿಲ್ಲ, ಪ್ರಸಾದವಿಲ್ಲ ಇಂತೀ ಪಂಚಸೂತಕವ ಕಳೆದಲ್ಲದೆ ಭಕ್ತನಾಗ. ಇಂಥ ಭಕ್ತರಲ್ಲಿ ಕೊಟ್ಟುಕೊಂಬುದು ಸದಾಚಾರ ಕೂಡಲ ಚನ್ನಸಂಗಮದೇವಯ್ಯ.

---

## (೬). ಋಷಿಗಳ ಹುಟ್ಟು ಕೀಳತರದ್ದಿದ್ದರೂ ಅವರು ಸತ್ಕ್ರಿಯೆಯಿಂದ ಶ್ರೇಷ್ಠ ಕುಲದವರು.

(೧). ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ, ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ, ಕಶ್ಯಪ ಕಮ್ಮಾರ, ರೋಮಜ ಕಂಚುಗಾರ ಕೌಂಡಿಲ್ಯ, ನಾವಿಂದ ಎಂದುದ ನರಿಯದೆ, ಮತ್ತೆಕುಲ ಉಂಟೆಂದು ಛಲಕ್ಕೆ ಹೋರಲೇತಕ್ಕೆ? ಇಂತೀ ಸಪ್ತ ಋಷಿಗಳೆಲ್ಲರೂ ಸತ್ಯದಿಂದೆ ಮುಕ್ತರಾದುದನರಿಯದೆ ಅಸತ್ಯದಲ್ಲಿ ನಡೆದು, ವಿಪ್ರರು ನಾವು ಘನವೆಂದು ಹೋರುವ ಹೊತ್ತುಹೋಕರ ಮಾತೇತಕ್ಕೆ? ಕಯ್ಯುಳಿಕತ್ತಿ ಅಡಿಗೂಂಟಿ ಕೆಡೆಯಾಗ ಬೇಡ ಅರಿ ನಿಜಾತ್ಮರಾಮರಾಮನಾ.

(೨). ವ್ಯಾಸ ಬೋಯಿತಿಯ ಮಗ. ಮಾರ್ಕಂಡೇಯ ಮಾತಂಗಿಯ ಮಗ, ಮಂಡೋದರಿ ಕಪ್ಪೆಯ ಮಗಳು. ಕುಲವನರಸದಿರಿಂಭೋ. ಕುಲದಿಂದ

ಮುನ್ನೇನಾದಿರಿಂಭೋ. ಸಾಕ್ಷಾದಗಸ್ತ್ಯ ಕಬ್ಬಿಲಿಗ, ದೂರ್ವಾಸಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ ಮೂರು ಲೋಕವರಿಯಲು ನಾಯಿದ ಕಾಣಿರೋ. ನಮ್ಮ ಕೂಡಲಸಂಗನ ವಚನವಿಂತೆಂದುದು ಶ್ವಪಚೋಽಪಿಯಾದ ರೇನು, ಶಿವಭಕ್ತನೇ ಕುಲಜನೆಂಬೋ.

(೩). ಸಂಕಲ್ಪ ವಿಕಲ್ಪವೆಂಬ ಉದಯಾಸ್ತ ಮಾನಗಳಿಗೆ ದೂರವಾದ ಶಿವಶರಣರು ಅಕುಲಜರೆಂದು ಗಳಹುತ್ತಿಪರು ನೋಡಾ! ಈ ಮರುಳು ವಿಪ್ರರು ತಾವು ಮಾತಂಗಿಯ ಗರ್ಭಸಂಭವ ಜ್ಯೇಷ್ಠ ಪುತ್ರರೆಂಬುದನರಿಯದೆ, ನಮ್ಮ ಶಿವಭಕ್ತರನು ಅಂತಹಕುಲ, ಇಂತಹ ಕುಲದವರೆಂದು ನಿಂದಿಸಿ ನುಡಿವ ವಿಪ್ರಹೊ ಲೆಯರು ನೀವು ಕೇಳಿ ಭೋ. ಅದೆಂತೆಂದೊಡೆ ॥ ಸ್ತ್ರೀವಾಥ ಪುರುಷಷ್ಪಂಡೊ ಚಾಂಡಾಲೋ ದ್ವಿಜವಂಶಜಃ । ನ ಜಾತಿಭೇದೋ ಲಿಂಗಾರ್ಚನೇ ಸರ್ವೆರುದ್ರ ಗಣಾ ಸ್ಮೃತಾಃ ॥ ಇಂತೆಂಬ ಪುರಾಣವಾಕ್ಯಗಳನರಿದು, ನಮ್ಮ ಶಿವಭಕ್ತರನು ಹೊಲೆಯ, ಮಾದಿಗ, ಕಬ್ಬಿಲ, ಕಮ್ಮಾರ, ಕಂಚುಗಾರ, ಅಕ್ಕಸಾಲೆ, ಕುಂಬಾರ, ಅಸಗ, ನಾವಿಂದ, ಜೇಡ ಬೇಡನೆಂದು ನುಡಿವುತ್ತಿಪ್ಪರಿ. ನಿಮ್ಮ ಉತ್ತಮ ಸತ್ಕು ಲಂಗಳ ನಾವು ಎತ್ತಿ ನುಡಿಯ ಬಹುದೇ ಎಮಗೆ? ಅದೇಕೆಂದಡೆ, ಮಾರ್ಕಂ ಡೇಯ ಮಾದಿಗನೆಂದು, ಸಾಂಖ್ಯಶ್ವಪಚನೆಂದು, ಕಾಶ್ಯಪ ಕಮ್ಮಾರನೆಂದು, ರೋಮಜ ಕಂಚುಗಾರನೆಂದು ಅಗಸ್ತ್ಯ ಕಬ್ಬಿಲನೆಂದು, ವ್ಯಾಸಬೇಡನೆಂದು, ವಸಿಷ್ಠಡೊಂಬನೆಂದು, ದುರ್ವಾಸಮುಚ್ಚಿಗನೆಂದು, ಕೌಂಡಿಲ್ಯ ನಾವಿಂದನೆಂದು, ಅದೆಂತೆಂದೊಡೆ, ವಾಸಿಷ್ಠದಲ್ಲಿ, ವಾಲ್ಮೀಕೀಚವಶಿಷ್ಠಶ್ಚಾಗಸ್ತ್ಯ ಮಾಂಡವ್ಯ ಗೌತುಮಾ: ಪೂರ್ವಾಶ್ರಯೇ ಕನಿಷ್ಠಾ ಸುದೀಕ್ಷಯಾ ಸ್ವರ್ಗಗಾಮಿನಃ ॥ ಎಂದು ದಾಗಿ ಇವನರಿದು ಮರೆದಿರಿ ನಿಮ್ಮ ಕುಲವನು. ಇನ್ನು ನಿಮ್ಮ ಕುಲದಲ್ಲಿ ಹಿರಿಯ ರುಳ್ಳರೇ, ನೀವು ಹೇಳಿ ಭೋ. ನಿಮ್ಮ ಗೋತ್ರವ ನೋಡಿ, ನಿಮ್ಮ ಹಮ್ಮು ಬಿಡಿ ಭೋ. ಎಮ್ಮ ಶಿವಭಕ್ತರೇ ಕುಲಜರು. ಇದ ನಂಬಿದಿರ್ದಡೆ, ಓದಿ ನೋಡಿ ರಣ್ಣಾ ನಿಮ್ಮ ವೇದವರ್ಗಂಗಳೊಳಗೆ. ಅದೆಂತೆಂದೊಡೆ, ಅಥರ್ವಣವೇದದಲ್ಲಿ:— "ಮಾತಂಗೀ ರೇಣುಕಾಗರ್ಭ ಸಂಭವಾತ್ ಇತಿ ಕಾರುಣ್ಯಾಮೇಧಾವೀ ರುದ್ರಾ ಕ್ಷಿಣಾ ಲಿಂಗಧಾರಣಸ್ಯ ಪ್ರಸಾದಂ ಸ್ವೀಕುರ್ವನ್ ಋಷಿಣಾಂ ವರ್ಣಶ್ರೇಷ್ಠೋ ಘೋರ ಋಷಿ ಸಂಕರ್ಷಣಾತ್ ವೇದ ಬ್ರುವತಿ" "ಇತ್ಯಾದಿ ವೇದವಚನ ಶೃತಿ ಮಾರ್ಗೇಣ" ಎಂದುದಾಗಿ, ಮತ್ತಂ ವಾಯುವೀಯ ಸಂಹಿತಾಯಾಂ

“ಬ್ರಾಹ್ಮಣೋಪಿ ಚಾಂಡಾಲೋ ದುರ್ಗುಣಸ್ಸುಗುಣೋಪಿವಾ । ಭಸ್ಮ ರುದ್ರಾಕ್ಷ ಕಂಠೇವಾ ದೇಹಾಯಾಂ ಸಶಿವಂ ವ್ರಜೇತ್” ಎಂದುದಾಗಿ ಮತ್ತಂ, ಶಿವರಹಸ್ಯದಲ್ಲಿ “ಗ್ರಾಮೇಣ ಮಲಿನಂ ತೋಯಂ ಯಥಾಸಾಗರಂ ಗತಂ। ಶಿವ ಸಂಸ್ಕಾರಸಂಪನ್ನಂ ಜಾತಿಭೇದಂ ನ ಕಾರಯೇತ್” ಎಂದುದಾಗಿ, ಇವರೆಲ್ಲರ ವರ್ಣಂಗಳು ಲಿಂಗಾರಾಧನೆಯಿಂದ ಮರಸಿ ಹೋದವು ಕೇಳಿರಣ್ಣಾ. ಇಂತಪ್ಪ ಋಷಿಜನಂಗಳೆಲ್ಲ ಶ್ರೀಗುರುವಿನ ಕಾರುಣ್ಯವಂ ಪಡೆದು, ವಿಭೂತಿ ರುದ್ರಾಕ್ಷಿಯಂ ಧರಿಸಿ, ಶಿವಲಿಂಗಾರ್ಚನೆಯಂ ಮಾಡಿ, ಪಾದ ತೀರ್ಥ ಪ್ರಸಾದಮಂ ಕೊಂಡು, ಉತ್ತಮ ವರ್ಣ ಶ್ರೇಷ್ಠರಾದರು ಕಾಣಿರೋ. ಇದು ಕಾರಣ ನಮ್ಮ ಕೂಡಲ ಸಂಗಯ್ಯನ ಅರಿದು ಪೂಜಿಸುವಾತನೇ ಉತ್ತಮನು ಸದ್ಬ್ರಾಹ್ಮಣನು, ಅರಿಯದವನೀಗಳೇ ಕೆಟ್ಟ ಹೊಲೆಯ ಕಾಣಿರಣ್ಣಾ.

---

## ( ೭ ). ಭಕ್ತರು ಕುಲದಭಿಮಾನವನ್ನು ಬಿಡುವದು.

( ೧ ). ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ. ಕಕ್ಕಯ್ಯ ನೊಕ್ಕುದನಿಕ್ಕ ನೋಡಯ್ಯಾ. ದಾಸಯ್ಯ ಶಿವದಾನವನೆರೆಯ ನೋಡಯ್ಯಾ. ಮನ್ನಣೆಯ ಚನ್ನಯ್ಯನೆನ್ನುವ ಮನ್ನಿಸ. ಉನ್ನತ ಮಹಿಮ ಕೂಡಲಸಂಗಮದೇವಾ ಶಿವಧೋ ಶಿವಧೋ.

( ೨ ). ಸೆಟ್ಟಿ ಎಂಬೆನೆ ಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ? ಮಾದಾರನೆಂಬೆನೆ ಚನ್ನಯ್ಯನ? ಆನು ಹಾರುವನೆಂದಡೆ, ಕೂಡಲಸಂಗಯ್ಯನಗುವನಯ್ಯಾ.

( ೩ ). ಅಪ್ಪನು ಡೋಹರ ಕಕ್ಕಯ್ಯನಾಗಿ, ಮುತ್ತೈಯ್ಯ ಚನ್ನಯ್ಯನಾದರೆ ಆನು ಬದುಕುವೆನು. ಮತ್ತಾ ಶ್ವಪಚಯ್ಯನ ಸನ್ನಿಧಿಯಿಂದ ಭಕ್ತಿಯ ಸದ್ಗುಣವನಾನು ಅರಿದೆನಯ್ಯಾ. ಕಷ್ಟಜಾತಿ ಜನ್ಮದಲ್ಲಿ ಜನಿಸಿದೆ ಎನಗಿದು ವಿಧಿಯೇ ಕೂಡಲಸಂಗಮದೇವಾ?

( ೪ ). ಹರನು ಮೂಲಿಗನಾಗಿ, ಪುರಾತನರೊಳಗಾಗಿ, ಬಳಿಬಳಿಯಲಿ ಬಂದ ಮಾದಾರನ ಮಗನಾನಯ್ಯಾ. ಕಳೆದ ಹೊಲೆಯ ನಮ್ಮಯ್ಯ ಜಾತಿಸೂತಕ

ಮಾದಾರನ ಮಗನಾನಯ್ಯ. ಪನ್ನಗಭೂಷಣ ಕೂಡಲಸಂಗಯ್ಯ, ಚನ್ನಯ್ಯ ಎನ್ನ ಮುತ್ತಯ್ಯನಜ್ಜನಪ್ಪನಯ್ಯ.

( ೫ ). ಅಪ್ಪನು ನಮ್ಮ ಮಾದಾರ ಚನ್ನಯ್ಯ. ಬೊಪ್ಪನು ನಮ್ಮ ಡೋಹರ ಕಕ್ಕಯ್ಯ. ಚಿಕ್ಕಯ್ಯನೆಮ್ಮಯ್ಯ, ಕಾಣಿರಯ್ಯ. ಅಣ್ಣನು ನಮ್ಮ ಕಿನ್ನರಿ ಬೊಮ್ಮಯ್ಯ. ಎನ್ನನೇತಕ್ಕರಿಯಿರಿ ಕೂಡಲಸಂಗಮದೇವಯ್ಯ?

( ೬ ). ಭಕ್ತಿ ಇಲ್ಲದ ಬಡವನಾನಯ್ಯ. ಕಕ್ಕಯ್ಯನ ಮನೆಯಲ್ಲು ಬೇಡಿದೆ. ದಾಸಯ್ಯನ ಮನೆಯಲ್ಲು ಬೇಡಿದೆ. ಚನ್ನಯ್ಯನ ಮನೆಯಲ್ಲು ಬೇಡಿದೆ. ಎಲ್ಲಾ ಪುರಾತನರು ನೆರೆದು ಭಕ್ತಿಭಿಕ್ಷವನಿಕ್ಕಿದರೆ, ಎನ್ನಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ.

---

## §ಪಂಚಸೂತಕಗಳಿಲ್ಲ.

( ೧ ). ಜಾತಿಸೂತಕ ಬಿಡದು. ಜನನಸೂತಕ ಬಿಡದು. ಪ್ರೇತಸೂತಕ ಬಿಡದು. ರಜಸೂತಕ ಬಿಡದು. ಎಂಜಲಸೂತಕ ಬಿಡದು. ಕುಲಸೂತಕ ಬಿಡದು. ಇವರನೆಂತು ಭಕ್ತರೆಂಬೆ? ಇವರನೆಂತು ಯುಕ್ತರೆಂಬೆ? ಶ್ರೀಗುರು ಸ್ವಾಮಿ ಶಿಷ್ಯನ ಪೂರ್ವಾಶ್ರಯವ ಕಳೆದು, ಹಸ್ತಮಸ್ತಕ ಸಂಯೋಗಮಂ ಮಾಡಿ, ಉಪದೇಶವನಿತ್ತ ಬಳಿಕ ಕಾಡಗಿಚ್ಚಿನ ಕಯ್ಯಲ್ಲಿ ಕರಡವ ಕೊಯಿಸಿದಂತಿರಬೇಕು ಭಕ್ತನು. ಹಿಂದೆ ಮುಂದೆ ನಿಲ್ಲವಿಲ್ಲ. ಇದು ಕಾರಣ ಕೂಡಲ ಚನ್ನಸಂಗಮದೇವಯ್ಯ ಸದ್ಭಕ್ತಂಗೆ ಸೂತಕವ ಮಾಡಲಿಲ್ಲ.

( ೨ ). ಉಪಾಧಿಯುನಳಿದು, ನಿರುಪಾಧಿಯ ತಿಳಿದು, ಸಹಜಮಾಟದಲ್ಲಿ ಸುಳಿದು, ಜಾತಿಸೂತಕ ಜನನಸೂತಕ ಪ್ರೇತಸೂತಕ ಉಚ್ಛಿಷ್ಟಸೂತಕ ರಜಸೂತಕವೆಂಬ ಪಂಚಸೂತಕಂಗಳ ಕಳೆದು, ಸದಾಚಾರ ಲಿಂಗಾಚಾರ ಶಿವಾಚಾರ ಗಣಾಚಾರ ಭೃತ್ಯಾಚಾರವೆಂಬ ಪಂಚಾಚಾರಗಳಿಂ ಪಂಚಭೂತಗಳ ಪರಿಹರಿಸಿ, ಪಂಚಪ್ರಾಣವಾಯುಗಳ ಸಂಚಲಗುಣವಳಿದು, ಪಂಚೇಂದ್ರಿಯಂಗಳಲ್ಲಿ ಪಂಚಲಿಂಗ ಪ್ರತಿಷ್ಠಿಸಿ, ಪಂಚಬ್ರಹ್ಮದ ಮೂಲವಳಿಯುನರಿದು, ಮೂಲೋಕದೊಡೆಯ

---

§ ಇದರೊಡನೆ ಪುಟ ೭೧ ರಿಂದ ೭೩ ರ ವರೆಗೆ ಇರುವ ವಚನಗಳನ್ನೂ ಅವಲೋಕಿಸಬೇಕು.

ನಲ್ಲಿ ಮನವನಡಗಿರ್ಪ ಮಹಾಶರಣರ ಪಾದಕ್ಕೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ.

( ೩ ). ಹೊಲೆಯುಂಟೇ ಲಿಂಗವಿದ್ದೆಡೆಯಲ್ಲಿ? ಕುಲವುಂಟೇ ಜಂಗಮವಿದ್ದೆಡೆಯಲ್ಲಿ? ಎಂಜಲುಂಟೇ ಪ್ರಸಾದವಿದ್ದೆಡೆಯಲ್ಲಿ? ಅಪವಿತ್ರದ ನುಡಿಯ ನುಡಿವ ಸೂತಕವೇ ಪಾತಕ. ನಿಃಕಳಂಕ ನಿಜೈಕ್ಯ ತ್ರಿವಿಧನಿರ್ಣಯ ಕೂಡಲ ಸಂಗಮದೇವಾ ನಿಮ್ಮ ಶರಣಂಗಲ್ಲದಿಲ್ಲ.

( ೪ ). ಲಿಂಗದಲ್ಲಿ ಸೂತಕವ ಹಿಡಿವನ್ನಕ್ಕ, ಪ್ರಾಣಲಿಂಗ ಸಂಬಂಧಿ ಎಂತೆಂಬೆ? ಜಂಗಮವಿದ್ದೆಡೆಯಲ್ಲಿ ಸೂತಕವ ಹಿಡಿವನ್ನಕ್ಕ ಅನುಭಾವ ಸಂಬಂಧಿ ಎಂತೆಂಬೆ? ಪ್ರಸಾದದಲ್ಲಿ ಸೂತಕವ ಹಿಡಿವನ್ನಕ್ಕ ಸ್ವಾಮಿಭೃತ್ಯ ಸಂಬಂಧಿ ಎಂತೆಂಬೆ? ಭಕ್ತನೆಂತೆಂಬೆ? ಪ್ರಸಾದಿ ಎಂತೆಂಬೆ? ಕೂಡಲಚನ್ನಸಂಗನ ಶರಣನೆಂತೆಂಬೆ?

( ೫ ). ಶ್ರೀಗುರು ಕಾರುಣ್ಯ ಕಟಾಕ್ಷದಲ್ಲಿ ಉತ್ಪತ್ಯವಾದ ಅಜಾತಂಗೆ ಜಾತಿಸೂತಕವಿಲ್ಲ, ಜನನಸೂತಕವಿಲ್ಲ, ಪ್ರೇತಸೂತಕವಿಲ್ಲ, ರಜಸೂತಕವಿಲ್ಲ, ಎಂಜಲಸೂತಕವಿಲ್ಲ. ಉಂಟೆಂಬವಂಗೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲವಯ್ಯಾ ಕೂಡಲಚನ್ನಸಂಗಯ್ಯಾ.

# ಪ್ರಸಾದಿಸ್ಥಲ.

## ಕ್ರಿಯೆ.

(೧). ಚಿನ್ನವನೊರೆಯುಬಹುದಲ್ಲದೆ, ಬಣ್ಣವನೊರೆಯುಬಹುದೆ? ಹೂವ ಮುಡಿಯುಬಹುದಲ್ಲದೆ ಗಂಧವ ಮುಡಿಯುಬಹುದೇ? ಕರ್ಮವ ಮಾಡಬಹುದಲ್ಲದೆ ವಸ್ತುವನರಿಯುಬಹುದೇ? ಗುಹೇಶ್ವರಲಿಂಗವೆನಬಹುದಲ್ಲದೆ ಲಿಂಗತಾನಾಗಬಾರದು.

(೨). ಬೀಜದೊಳಗಿಹ ವೃಕ್ಷ ಫಲವ ಸವಿಯುಬಹುದೇ? ಮಳೆವನಿಯೊಳಗಿರ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ ಕೊರಳೊಳು ಧರಿಸಬಹುದೇ? ಹಾಲೊಳಗಿರ್ಪ ತುಪ್ಪವು ಅರಸಿದಡೆ ಸಿಕ್ಕುವದೇ? ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವದೇ? ತನ್ನೊಳಗಿರ್ಪ ಶಿವತತ್ವವು ನೆನೆದಾಕ್ಷಣವೇ ಅನುಭವಕ್ಕೆ ಬರ್ಪುದೇ? ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನತ್ವಮಂ ಮಾಡಿಕೊಂಡು ತದನುಭವಸುಖದೊಳೋಲಾಡುವದು ಅತಿ ಚತುರನಾದ ಶಿವ ಶರಣಂಗಲ್ಲದೆ ಉಳಿದರ್ಗುಂಟೇ ಮಹಾಘನ ದೊಡ್ಡ ದೇಶಿಕಾರ್ಯ ಗುರು ಪ್ರಭುವೇ?

(೩). ಅಂತರಂಗ ಬಹಿರಂಗವೆಂದೆಂಬರು. ಆವುದು ಹಿಂದು, ಆವುದು ಮುಂದು ಎಂದರಿಯರು. ಎಳ್ಳೊಳಗಣ ಎಣ್ಣೆಯಂತೆ, ಕಲ್ಲೊಳಗಿನ ಹೇಮದಂತೆ, ಹಾಲೊಳಗಣ ತುಪ್ಪದಂತೆ, ಕಾಷ್ಠದೊಳಗಣ ಅಗ್ನಿಯಂತೆ, ಪುಷ್ಪದೊಳಗಣ ಪರಿಮಳದಂತೆ, ಭಾವದೊಳಗೆ ಶಿವನಿಪ್ಪನೆಂದಡೆ, ಆ ಶಿವನು ತನಗೆ ಕಾಣಿಸಿಕೊಳ್ಳನು ಮಥನದಿಂದಲ್ಲದೆ. ಅದೆಂತೆಂದೊಡೆ, “ತಿಲಮಧ್ಯೇ ಯಥಾ ತೈಲಂ ಕ್ಷೀರಮಧ್ಯೇ ಯಥಾ ಘೃತಂ । ಪುಷ್ಪಮಧ್ಯೇ ಯಥಾ ಗಂಧೋ ಭಾವ ಮಧ್ಯೇ ತಥಾ ಶಿವಃ ॥” ಎಂದುದಾಗಿ ಇಂತಪ್ಪ ಚಿನ್ಮೂರ್ತಿಯನು ಮನ್ಮಸ್ತಕದಲ್ಲಿ ಶ್ರೀಗುರು ತನ್ನ ಹಸ್ತಾಬ್ಜಮಥನದಿಂದ ಆಕರ್ಷಣವ ಮಾಡಿ ತೆಗೆದು ತಲ್ಲಿಂಗವನಂಗದಲ್ಲಿ ಸ್ಥಾಪ್ಯವ ಮಾಡಿ ಸುಜ್ಞಾನ ಕ್ರಿಯೋಪದೇಶಮಂ ಮಾಡಲು, ಘಟದ ಹೊರಗಿಹ ಅನಲಘಟವ ವೇಧಿಸಿ, ತಜ್ಜಲವ ಹಿಡಿದು ತೆಗೆ

ದುಕೊಂಬಂತೆ ಬಾಹ್ಯದಲ್ಲಿ ಮಾಡುವ ಸತ್ಕ್ರಿಯಾಮಥನದಿಂ ಶಿವಜೀವ ಸಂಯೋಗವಹ ಬಟ್ಟೆಯನರಿಯದೆ ಕೆಟ್ಟರಲ್ಲಾ ಅದ್ವೈತಿಗಳು. ಅದೆಂತೆಂದೊಡೆ, "ಘಟಮಧ್ಯಸ್ಥಿತಂ ತೋಯಂ ಅಗ್ನಿರ್ಜ್ವಲತಿ ಬಾಹ್ಯತಃ । ಅಗ್ನೇರ್ಜ್ವಲನ ಸಂಯೋಗೇ ಉಷ್ಣಂ ಭವತಿ ವಾರಿಣಾಂ ॥" ಎಂದುದಾಗಿ, ಈ ವರ್ಮಕಳ ಸ್ಥಳವ ನರಿಯದೆ ಶಿವಲಿಂಗಪೂಜೆಯ ಬಿಟ್ಟು ಅನ್ಯ ಬಟ್ಟೆಯಲ್ಲಿ ಹರಿವರು ಕರ್ಮ ನಿರ್ಮೂಲರಾದ ಜಡರುಗಳು ಗುರುವಚನಪರಾಙ್ಮುಖರು ಲಿಂಗನಿಷ್ಠಾವಿರಹಿತರು. ಗುರುಕೊಟ್ಟ ಇಷ್ಟಲಿಂಗದಲ್ಲಿ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂ ಕ್ರಿಯೆವಿಡಿದು ಮಾಡಿ ಪ್ರಾಣವೇಧಿಸಿ, ಪ್ರಾಣಲಿಂಗ ಸಂಬಂಧಿಗಳಾಗಲರಿಯದೆ ಕೆಟ್ಟರಲ್ಲಾ ಅದ್ವೈತಿಗಳು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೪). ಅಯ್ಯಾಮರದೊಳಗೆ ಅಗ್ನಿ ಇದ್ದಡೇನಯ್ಯ? ಮಥನಿಸಿ ತೋರುವದಿಲ್ಲನ್ನಕ್ಕರ ಕಾಣಬಹುದೇ? ಜಗದೊಳಗೆ ಕೂಡೆ ಪರಿಪೂರ್ಣಶಿವನೆಂದಡೆ, ಅಂತರಂಗದಲ್ಲಿ ಕಾಣಬಹುದೇ? ಆದಿಲಿಂಗ ಅನಾದಿಶರಣನೆಂಬ ಭೇದವ ತಿಳುಹಿ ನಿಜಪ್ರಾಣದೊಳಗಿಪ್ಪ ಸುಜ್ಞಾನಲಿಂಗವ ಕರಸ್ಥಲಕ್ಕೆ ತಂದು, ಆ ಕರಸ್ಥಲದ ಲಿಂಗವ ಎನ್ನ ಸರ್ವಾಂಗದೊಳಗೆ ಪ್ರತಿಷ್ಠಿಸಿ ತೋರಿ, ನಿತ್ಯ ನಿಜಲಿಂಗೈಕ್ಯದ ಹೊಲಬಿನ ಹರಿಯ ತೋರಿಸಿ, ಮರ್ತ್ಯಲೋಕದೊಳಗೆಲ್ಲ ಇಂದು ಮೊದಲಾಗಿ ಪ್ರಾಣಲಿಂಗದ ಘನವ ಹರಹಿ ಶಿವಭಕ್ತಿಯನುದ್ಧರಿಸಿದನು. ಕೂಡಲಸಂಗಮ ದೇವರಲ್ಲಿ ಚನ್ನಬಸವಣ್ಣನೆನ್ನ ಆಗುಮಾಡಿ ಉಳುಹಿದನಾಗಿ ಇನ್ನು ಮರ್ತ್ಯಲೋಕಕ್ಕೆ ಬಂದೆನಾದರೆ ಚನ್ನಬಸವಣ್ಣನ ಶ್ರೀಪಾದದಾಣೆ.

(೫). ಗತಿ ಮತಿ ಚೈತನ್ಯ ಶಬ್ದವುಳ್ಳನ್ನಕ್ಕ ಕ್ರಿಯಂತಂತೆ ನಡೆವುದು. ಉರುವಣೆಬೇಡ ಕಂಡೆಯಾ, ಮನವೇ. ಎಲೆಮನವೇ, ಕ್ರಿಯಂತಂತೆ ನಡೆವುದು. ಹೂಮಿಡಿಯ ಹರಿದಡೆ ಹಣ್ಣಾಗಬಲ್ಲುದೇ? ಲಿಂಗದಲ್ಲಿ ಮನಲೀಯವಾಗದನ್ನಕ್ಕರ ದೇವಸಕಳೇಶ್ವರನೆಂತೊಲಿವ?

(೬). ಕ್ರಿಯಾಮಥನವಿಲ್ಲದೆ ಕಾಣಬಂದುದೇ ಇಕ್ಷುವಿನೊಳಗಣಮಧುರ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ತಿಲದೊಳಗಣ ತೈಲ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕ್ಷೀರದೊಳಗಣ ತುಪ್ಪ? ಕ್ರಿಯಾಮಥನವಿಲ್ಲದೆ ಕಾಣಬಂದುದೇ ಕಾಷ್ಠದೊಳಗಣ ಅಗ್ನಿ? ಇದುಕಾರಣ ನಮ್ಮ ಗುಹೇಶ್ವರ

ಲಿಂಗವ ತನ್ನೊಳರಿದೆನೆಂಬ ಮಹಾಂತಂಗೆ ಸತ್ಕ್ರಿಯಾಚರಣೆಯೇ ಸಾಧನ ಕಾಣಿ ಭೋ.

(೭). ಶರೀರಕ್ಕೆ ರುಜೆಬಂದು ತೊಡರಿದಲ್ಲಿ ರುಜೆಯ ಭೇದವನರಿತು, ಶರೀರ ಧರ್ಮವನರಿತು ತನುವಿಂಗೆ ಚಿಕಿತ್ಸೆ, ಆತ್ಮಂಗೆ ಸುಖರೂಪ, ಉಭಯವನ ರಿದು ಅರ್ೈವ ಕಾರಣ ಪಂಡಿತನಪ್ಪ. ಇಂತೀ ಭೇದದಂತೆ ಗುರುಚಾರಿತ್ರನಾಗಿ ಶಿವಲಿಂಗ ಪೂಜಕನಾಗಿ, ಚರಸೇವೆಸನ್ನದ್ಧನಾಗಿ, ಇಂತೀ ಸತ್ಕ್ರಿಯೆಗಳಲ್ಲಿ ನಿರ್ಧಾರವಪ್ಪ ಮಹಾಭಕ್ತನಿಪ್ಪದೇ ಸದ್ಯೋಜಾತಲಿಂಗದ ಸೆಜ್ಜೆಗೃಹ.

(೮). ಕ್ರಿಯೆ ಇಲ್ಲದ ಭಕ್ತ ಮನುಜ. ಕ್ರಿಯೆ ಇಲ್ಲದ ಜಂಗಮ ರಾಕ್ಷಸ. ಕ್ರಿಯೆ ಇಲ್ಲದ ಪ್ರಸಾದಿ ಯವನ. ಕ್ರಿಯೆ ಇಲ್ಲದ ಪ್ರಾಣಲಿಂಗಿ ಭವಿ. ಕ್ರಿಯೆ ಇಲ್ಲದ ಶರಣ ಅಜ್ಞಾನಿ. ಕ್ರಿಯೆ ಇಲ್ಲದ ಲಿಂಗೈಕ್ಯ ಜನನಕ್ಕೊಳಗು ನೋಡಾ ಕೂಡಲಚನ್ನಸಂಗಮದೇವಾ.

(೯). ವೇದವೇದಾಂತವನೋದಿ ಜ್ಞಾನಸೂರೆ ಮಾಡುವ ಜಂಗಮ ಕ್ರಿಯಾಹೀನನಾದರೆ ಆಗದು ಸಮರಸ ಆತನಲ್ಲಿ. ಅದೇನು ಕಾರಣವೆಂದಡೆ, ನುಡಿದಂತೆ ನಡೆಯನು. ಅಲ್ಲಿ ಕೂಡಲಚನ್ನಸಂಗಮದೇವ ನಿಲ್ಲಲಾರನು, ಸಿದ್ಧರಾಮಯ್ಯಾ.

(೧೦). ಅಂತರಂಗದಲ್ಲಿ ಅರಿವಾದಡೇನಯ್ಯಾ ಬಹಿರಂಗದಲ್ಲಿ ಕ್ರಿ ಇಲ್ಲದನ್ನಕ್ಕರ? ದೇಹವಿಲ್ಲದಿರ್ದಡೆ ಪ್ರಾಣಕ್ಕಾಶ್ರಯ ಉಂಟೇ? ಕನ್ನಡಿ ಇಲ್ಲದಿರ್ದಡೆ ತನ್ನ ಮುಖವ ಕಾಣಬಹುದೇ? ಸಾಕಾರ ನಿರಾಕಾರ ಏಕೋ ದೇವ ನಮ್ಮ ಕೂಡಲಸಂಗಯ್ಯಾ.

(೧೧). ಕ್ರಿಯೆಮರೆದಲ್ಲಿ ಅರಿವು ಹೀನವಾಗಿಪ್ಪದು. ಅರಿವಮರೆದಲ್ಲಿ ಜ್ಞಾನಹೀನವಾಗಿಪ್ಪದು. ಜ್ಞಾನಹೀನವಾದಲ್ಲಿ ಬೆಳಗಿನ ಕಳೆನಷ್ಟವಾಯಿತ್ತು. ಈಶಾನ್ಯ ಮೂರ್ತಿಮಲ್ಲಿಕಾರ್ಜುನ ಲಿಂಗವು ಅವರಿಗೆ ಮರೆಯಾಗಿ ತೊಲಗಿದನು.

(೧೨). ಗರಳವಿಲ್ಲದುರುಗಂಗೆ ಹಲಬರಂಜಿದವರುಂಟೇ? ಕೆದುವಿಲ್ಲದ ಬಂಟ ಗರ್ಜಿಸಿದಡೆ ಅಂಜಿದವರುಂಟೇ? ಬಾಹ್ಯದೃಷ್ಟವ ಮಾತನಾಡಿದರೆ ನೆಟ್ಟನೇ ಪ್ರಾಣಲಿಂಗಿಯಪ್ಪನೇ? ಇದು ನಿಶ್ಚಯವಲ್ಲ ನಿಃಕಳಂಕ ಮಲ್ಲಿಕಾರ್ಜುನಾ.

(೧೩). ವಿಶ್ವದಲ್ಲಿ ಜ್ಞಾನಪ್ರತಿಷ್ಠೆಯ ಮಾಡುತ್ತಿಪ್ಪರು. ಗೋವಿನ ದೇಹದಲ್ಲಿ ಘೃತವಿಪ್ಪುದಯ್ಯಾ. ಅದು ಆ ಗೋವಿಂಗೆ ಪುಷ್ಟಿಯಾಗಲರಿಯದು. ಆ ಗೋವಪೋಷಿಸಿ, ಹಾಲಕರೆದು, ಕಾಸಿ, ಹೆಪ್ಪನಿಕ್ಕಿ, ಆ ದಧಿಯ ಮಥನವ ಮಾಡಿ, ಬೆಣ್ಣೆಯ ತೆಗೆದು, ಆ ನವನೀತ ತುಪ್ಪವ ಕಾಸಿ, ಆ ಗೋವಿಗೆ ಕುಡಿಸಲಾಗಿ, ದಿನದಿನಕ್ಕೆ ಪುಷ್ಟಿಯಪ್ಪುದು ತಪ್ಪದಯ್ಯಾ. ಈ ಪ್ರಕಾರದಲ್ಲಿ ಸತ್ಕ್ರಿಯೋಪಚಾರವ ಮಾಡಲಾಗಿ ಜ್ಞಾನವಹುದು. ಜ್ಞಾನವಾಗಲಿಕ್ಕೆ ಸಮ್ಯಜ್ಞಾನವಹುದು. ಸಮ್ಯಜ್ಞಾನವಾಗಿ, ಪ್ರಾಣವೇ ಲಿಂಗವಪ್ಪುದು ತಪ್ಪದು. ಸಂದೇಹವಿಲ್ಲವಯ್ಯಾ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೧೪). ಅಂಗವನರಿವನ್ನಕ್ಕ ಶಿವಲಿಂಗ ಪೂಜೆಯ ಮಾಡಲೇಬೇಕು. ಆತ್ಮನ ಕ್ಷುಧೆಯುಳ್ಳನ್ನಕ್ಕ ಬಂದ ಪದಾರ್ಥವ ಲಿಂಗಾರ್ಪಿತವ ಮಾಡಲೇಬೇಕು. ಇದು ಅರುವಿನ ಬಿತ್ತು, ಜ್ಞಾನದ ಗೊತ್ತು, ಸರ್ವಮಯುದಯುಕ್ತಿ, ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗವನರಿವಶಕ್ತಿ.

(೧೫). ಅನುವನರಿವನ್ನಕ್ಕ ಅರ್ಚನೆ ಪುಣ್ಯವನರಿವನ್ನಕ್ಕ ಪೂಜೆ. ಶರೀರವುಳ್ಳನ್ನಕ್ಕ ಸುಖದುಃಖ ಸಂತೋಷಿಸಬೇಕು. ತೆಪ್ಪದಲ್ಲಿನಿಂದು ಹೊಳೆಯ ದಾಂಟುವನಂತೆ ಕ್ರಿಶುದ್ಧವಾದಲ್ಲಿ ಜ್ಞಾನದ ಗೊತ್ತು ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

(೧೬). ತೊಟ್ಟು ಬಿಡುವನ್ನಕ್ಕ ಮತ್ತಾ ಬುಡದಾಸೆಬೇಕು. ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯಶರಣರ ಸಂಗನಿತ್ಯ ಜಂಗಮ ಸೇವೆ ಕೃತ್ಯವಿರಬೇಕು ಅಮರೇಶ್ವರ ಲಿಂಗವನರಿವುದಕ್ಕೆ.

(೧೭). ಹತ್ತಿಯು ಕದಿರು ರಾಟೆಯಲ್ಲಿ ವೊದಲಿಲ್ಲ, ನೂಲುಂಟು. ಸಿಲದಿಯ ಹೃದಯದಲ್ಲಿ ಏನುಂಟು? ನೂಲುಂಟು. ಭಕ್ತನ ಭಾವದಲ್ಲಿ ಲಿಂಗ ಉಂಟು. ರೇಕಣ್ಣಪ್ರಿಯ ನಾಗಿನಾಥನ ಶರಣನ ಮನದ ಕೊನೆಯ ನೆತ್ತಿದರೆ ಲಿಂಗದ ಗೊಂಚಲುಂಟು.

**ಅರ್ಥ:—** ಹತ್ತಿ, ಕದಿರು, ರಾಟೆ ಈ ಮೂರನು ಕೂಡಿತಿರುಪುತ್ತಿರ್ದ ಕ್ರಿಯಾಕಾಲದಲ್ಲಿ ನೂಲು ಬರುತ್ತಿಹುದು. ಆ ತಿರುಹುತ್ತಿರ್ದ ಕ್ರಿಯೆಬಿಟ್ಟರೆ ಇಲ್ಲದೆ ಹೋಹಂತೆ ಶಿವನ ಕುರಿತು ಮಾಡುವ ಕ್ರಿಯಾಕಾಲಂಗಳಲ್ಲಿ ಶಿವನು

ಬಂದಿಹ. ಆ ಕ್ರಿಯೆಬಿಟ್ಟು ವಿಸರ್ಜಿಸಿದಾಗವೇ ಶಿವ ಹೋಹನೆಂಬುದೀಗ ಹತ್ತಿ ಕದಿರು ರಾಟಿಯಲ್ಲಿ ಮೊದಲಿಲ್ಲ, ನೂಲುಂಟು, ಎಂಬ ಶಬ್ದಕ್ಕರ್ಥ. ಸಿಲದಿಯ ಹೃದಯದಲ್ಲಿ ಸದಾಸನ್ನಿಹಿತವಾಗಿ ನೂಲಿಪ್ಪುದಂತಂತೆ ಲಿಂಗಾಂಗ ಸಂಬಂಧಿಯಾಗಿರ್ದ ಭಕ್ತನಂಗಮನ ಭಾವಂಗಳಲ್ಲಿ ಶಿವನು ಸನ್ನಿಹಿತನಾಗಿ ನೆಲಸಿಪ್ಪನೆಂಬುದೀಗ ಸಿಲದಿಯ ಹೃದಯದಲ್ಲಿ ನೂಲುಂಟು ಭಕ್ತನಭಾವದಲ್ಲಿ ಲಿಂಗ ಉಂಟು ಎಂಬ ಶಬ್ದಕ್ಕರ್ಥ. ಅಂತಪ್ಪ ಶಿವಶರಣರ ಮನದರಿವ ಅನುಭಾವದಿಂದ ಮಥನಿಸಿದಡೆ, ಶರಣನ ಸರ್ವೇಂದ್ರಿಯಂಗಳೆಲ್ಲ ಲಿಂಗಂಗಳಾಗಿ ಕಾಣಿಸುತ್ತಿಹುದೆಂಬುದೀಗ, ಶರಣನ ಮನದ ಕೊನೆಯನೆತ್ತಿದರೆ ಲಿಂಗದ ಗೊಂಚಲುಂಟು, ಎಂಬ ಶಬ್ದಕ್ಕರ್ಥ.

---

## ( ೨ ). ಫಲಪದವನ್ನು ಅಪೇಕ್ಷಿಸದೆ ಕ್ರಿಯೆಗಳನ್ನು ಮಾಡುವದು ( ನಿಷ್ಕಾಮಕರ್ಮ. )

( ೧ ). ಫಲಪದದ ಆಶೆ ಮಾಡಲಾಗದು ನಿನ್ನ ಕ್ರಿಯೆಯಲ್ಲಿ. ಅದೇನು ಕಾರಣವೆಂದರೆ, ಬಯಕೆಯ ಭಕ್ತಿಯ ಪೂರ್ವ ಪುರಾತನರು ಮೆಚ್ಚರು. ನಮ್ಮ ಅಖಂಡೇಶ್ವರ ದೇವರು ಹಂಗಿನ ಭಕ್ತರನೊಲ್ಲ ನೋಡಾ.

( ೨ ). ಒತ್ತಿ ಹಣ್ಣುಮಾಡಿದಡೆ, ಅದೆತ್ತಣರುಚಿಯಪ್ಪುದೋ ? ಕಾಮಿಸಿ, ಕಲ್ಪಿಸಿ, ಭಾವಿಸಿದಡೆ, ಭಂಗ. ಭಾವಿಸುವ ಭಾವನೆಯಿಂದ ಸಾವುದೇ ಲೇಸು-ಗುಹೇಶ್ವರಾ.

( ೩ ). ಮಾಡಿ, ನೀಡಿ, ಹೋಹೆನೆಂಬಾಗ, ಕೈಲಾಸವೇನು ಕೈಕೂಲಿಯೋ ? ಮುಂದೊಂದು ಕಲ್ಪಿಸದೆ, ಹಿಂದೊಂದು ಭಾವಿಸದೆ, ಸಲೆಸಂದಿದ್ದಾಗಳೇ, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗವಿದ್ದ ಕೈಲಾಸ.

( ೪ ). ಅಷ್ಟವಿಧಾರ್ಚನೆ, ಷೋಡಶೋಪಚಾರ, ಅಂದಂದಿನ ಕೃತ್ಯ ಅಂದಂದಿಗೆ ಮಾಡಿ, ನಾನು ಶುದ್ಧನಯ್ಯ, ಹಂಗು ಹರಿ ಇಲ್ಲದ ಕಾರಣ. ಕೂಡಲ ಸಂಗಮದೇವಾ, ನಿಃಫಲದಾಯಕನಾಗಿ ನಾನು ಮಾಡಿ, ಶುದ್ಧನಯ್ಯ.

( ೫ ). ದಾಸ ವಸ್ತ್ರವನಿತ್ತ ಠಾವು ಲೇಸಾಯಿತ್ತು. ತವನಿಧಿಯ ಪಡೆದ ಠಾವು ಹೊಲ್ಲಹವಾಯಿತ್ತು. ಸಿರಿಯಾಳ ಮಗನ ನಿತ್ತ ಠಾವು ಲೇಸಾಯಿತ್ತು.

ಮರಳಿ ಬೇಡಿದ ಠಾವು ಹೊಲ್ಲಹವಾಯಿತ್ತು. ಬಲ್ಲಾಳ ವಧುವನಿತ್ತ ಠಾವು ಲೇಸಾಯಿತ್ತು. ಸ್ವಯಲಿಂಗವಾದ ಠಾವು ಹೊಲ್ಲಹವಾಯಿತ್ತು. ಇವರೆಲ್ಲರು ಸಕಳೇಶ್ವರ ದೇವರಲ್ಲಿ ಅಪೇಕ್ಷಿತರಲ್ಲದೆ, ನಿರಪೇಕ್ಷಿತರಾರೂ ಇಲ್ಲ.

(೬). ಫಲಪದಾದಿಗಳ ಭಕ್ತರಿಗೆ ಕೊಟ್ಟೆಹೆನೆಂಬೆ. ಅವರದನೊಲ್ಲರು. ಅವರು ನಿನಗೆ ನಿನ್ನ ರೂಪಿಂಗೆ ತನುಮನಧನಗಳ ಕೊಡುವರು. ಎಲೆ ವಂಚಕ ನಾದ ಶಿವನೇ, ನಿರ್ವಂಚಕರೆಮ್ಮವರು. ನಿನ್ನನೇನ ಬೇಡುವರು? ನೀನೇನವ ರಿಗೆ ಕೊಡುವೆ? ನಿನ್ನ ಕುಡನೆಮ್ಮವರೊಲ್ಲರು ಕಾಣಾ. ಕುಡಕೊಡದೆ ಹೋಗು, ಕಪಿಲಸಿದ್ಧಮಲ್ಲಿಕಾರ್ಜುನಾ.

(೭). ಈ ಸತ್ಕ್ರಿಯೆಗೆ ಈ ಫಲ, ಈ ಪುಷ್ಪಕ್ಕೀಫಲ ಎಂಬ ಕೈಕೂಲಿ ಕಾರರು ಅವರೆಲ್ಲ ಕರ್ಮಿಗಳಯ್ಯ. ಪುಣ್ಯಾಪಾಪವನುಂಬ ಕರ್ಮಿಗಳಯ್ಯ. ಸ್ವರ್ಗನರಕವನುಂಬ ಕರ್ಮಿಗಳಯ್ಯ. ಒಡಲೊಡವೆ, ಪಡೆದರ್ಥ ಮೃಡದೇವ ಸೊಡ್ಡಳನಿಗೆಂಬಾತ ಬೆಡಗಿನ ಶಿವಪುತ್ರ. ಉಳಿದವರೆಲ್ಲ ಜಗದ ಮಿತ್ರರು.

(೮). ತನುವಬೇಡಿದಡೀವೆ, ಮನವಬೇಡಿದಡೀವೆ, ಧನವಬೇಡಿದ ಡೀವೆ, ನಿಮ್ಮ ಶರಣರಿಗೆ. ಎನಗೆಬೇಕೆಂಬ ಭಾವಮನದಲ್ಲಿ ಹೊಳೆದರೆ, ಘನಮ ಹಿಮ ನಿಮ್ಮ ಶರಣರ ಪಾದದಾಣೆ. ಮನ ವಚನ ಕಾಯದಲ್ಲಿ ನೀನಲ್ಲದೆ, ಮತ್ತೊಂದನರಿದಡೆ, ಕೂಡಲಸಂಗಮದೇವ, ಮತ್ತೆ ಮರಳಿ ಭವವೆಂಬ ಘೋರ ದಲ್ಲಿಕ್ಕಯ್ಯ.

(೯), ಅನವರತಮಾಡಿಹೆನೆಂದು ಉಪ್ಪರ ಗುಡಿಯಕಟ್ಟಿ ಮಾಡುವ ಭಕ್ತನಮನೆಯದು ಅಂದಣಗಿತ್ತಿಯಮನೆ. ಸರ್ವಜೀವದಯಾಪರನೆಂದು ಭೂತ ದೈವಕ್ಕಿಕ್ಕುವನಮನೆ ಸುಯಿಧಾನದಕೇಡು. ಸೂಳೆಯು ಮಗವಾಳವಿಯ ಮಾಡಿ ದರೆ, ತಾಯಹೆಸರಾಯಿತ್ತಲ್ಲದೆ, ತಂದೆಯ ಹೆಸರಿಲ್ಲ ಕೂಡಲಸಂಗಮದೇವಾ.

(೧೦). ಹರಸಿಮಾಡುವದು ಹರಕೆಯದಂಡ. ನೆರಹಿಮಾಡುವದು ಡಂಭಿನಭಕ್ತಿ. ಹರಸಬೇಡ, ನೆರಿಸಬೇಡ. ಬಂದಬರವನರಿದಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ.

(೧೧). ತಾಯಿ ಬಂಜೆಯಾದಲ್ಲದೆ, ಶಿಶುಗತವಾಗದು. ಬೀಜನಷ್ಟವಾ ದಲ್ಲದೆ, ಸಸಿಗತವಾಗದು. ನಾಮನಷ್ಟವಾದಲ್ಲದೆ, ನೇಮನಷ್ಟವಾಗದು. ಮೊದ

ಟುಗೆಟ್ಟಲ್ಲದೆ, ಲಾಭದಾಸೆ ಬಿಡದು. ಗುಹೇಶ್ವರನೆಂಬ ಲಿಂಗದ ನಿಜವನೆಯ್ದುವರೆ, ಪೂಜೆಯ ಫಲವಾದಲ್ಲದೆ, ಭವಂ ನಾಸ್ತಿಯಾಗದು.

(೧೨). ಅಮೃತಕ್ಕೆ ಹಸಿವುಂಟೇ? ಜಲಕ್ಕೆ ತೃಷೆಯುಂಟೆ? ಘನಪುರುಷಂಗೆ ವಿಷಯವುಂಟೇ? ಸದ್ಗುರು ಕಾರುಣ್ಯವಿಡಿದು ಲಿಂಗಾರ್ಚನೆಯ ಮಾಡುವ ಮಹಾ ಶರಣಂಗೆ ಮುಕ್ತಿಯ ಬಯಕೆಯುಂಟೇ? ಅವರುಗಳಿಗೆ ಅದು ಸ್ವಯಂಭು, ಸಹಜಸ್ವಭಾವ. ಇನ್ನು ತೃಪ್ತಿ ಅಪ್ಯಾಯನ ಅರಸಲುಂಟೇ ಉರಿ ಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ?

(೧೩). ಅನ್ನವನಿಕ್ಕಿದಡೇನು? ಪುಣ್ಯವಹುದು. ವಸ್ತ್ರವ ಕೊಟ್ಟೊಡೇನು? ಪುಣ್ಯವಹುದು. ಹಣವ ಕೊಟ್ಟೊಡೇನು? ಪುಣ್ಯವಹುದು. ಆಯಾಯ ಫಲಪದದ ಸಿರಿಸಂಪತ್ತಹುದಯ್ಯ, ಕೂಡಲ ಚನ್ನಸಂಗಮದೇವಾ.

(೧೪). ಅನ್ನವನಿಕ್ಕಿ, ನನ್ನಿಯ ನುಡಿದು, ಅರವಟಿಗೆಯನಿಕ್ಕಿ, ಕೆರೆಯ ಕಟ್ಟಿಸಿದಡೆ ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ, ಶಿವನ ನಿಜವು ಸಾಧ್ಯವಾಗದು. ಗುಹೇಶ್ವರನರಿದ ಶರಣಂಗೆ ಆವ ಫಲವೂ ಇಲ್ಲ.

(೧೫). ಅನಲ ಕೊಂಡ ವಸ್ತುವಿಗೆ ಪರಿಪ್ರಕಾರ ಉಂಟೇ? ಶರಧಿ ಕೊಂಡ ಸಾಗರಕ್ಕೆ ಕುರುಹಿನ ತಲೆಯೋ? ಲಿಂಗವ ಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವೆಂಬುದು ಹುಸಿ ನಾಸ್ತಿನಾಥಾ.

(೧೬). ಗತಿ, ಪದ, ಮುಕ್ತಿಯ ಬಯಸಿ ಮಾಡುವಾತ ಭಕ್ತನಲ್ಲ. ಗತಿ, ಪದ, ಮುಕ್ತಿವಿರಹಿತ ಭಕ್ತ. ಹಮ್ಮು ಬಿಮ್ಮು ಗಮನ ನಾಸ್ತಿಯಾದಾತ ಜಂಗಮ. ಮಾಡುವರೆ, ಭಕ್ತಮಾಟದೊಳಗಿಲ್ಲದಿರಬೇಕು. ಬೇಡುವಡೆ, ಜಂಗಮ ಕೊಂಬುವದರೊಳಗಿಲ್ಲದಿರಬೇಕು. ಪ್ರಾಣವಿಲ್ಲದಾತ ಭಕ್ತ, ರೂಹಿಲ್ಲದಾತ ಜಂಗಮ ಎಂದಡೆ, ಪ್ರಚ್ಛನ್ನವಾಗಿ ಲೋಕಕ್ಕೆ ತೋರಿ, ಲೋಕಕ್ಕೆ ಅದೃಶ್ಯವಾಗಿರಬೇಕು. ಜಲಚರಾದಿಗಳ ಪಥದಂತೆ, ಶಿಶು ಕಂಡ ಕನಸಿನಂತೆ, ಮನಉಂಡ ರುಚಿಯಂತೆ, ವೀರಶೈವಾಚಾರ ಸಂಪನ್ನನಾದ ಸಿದ್ಧಾಂತಿಗಿದು ಚಿನ್ಹವು. ಇಂತಲ್ಲದೆ, ಹಗರಣದ ಓಗರ ಹಳಸಿದಂತೆ, ಕುಹಕನ ವಾದ್ಯದಂತೆ ನಗೆಗೆಡೆಯಾಗುತ್ತಿದ್ದಾನೆ. ಬೇರುಂಡು ಬಾಯಿ ಒಡೆದಂತೆ, ಇಂತಪ್ಪರ ಭಕ್ತನೆಂತೆಂಬೆ? ಜಂಗಮವೆಂತೆಂಬೆ? ಆ ಭಕ್ತ ಜಂಗಮದ ಘನವನುಪಮಿಸಬಾರದಯ್ಯ, ಕೂಡಲಚನ್ನಸಂಗಮದೇವಾ.

(೧೭). ಅರ್ಚನೆ ಪೂಜೆಯ ಕುರಿತು ಮಾಡಿದಲ್ಲಿ, ಚತುರ್ವಿಧ ಫಲಪದಂಗಳೆಂಬವು ತನ್ನ ಹಿತ್ತಿಲ ಬೆಳೆ. ಇಷ್ಟಾರ್ಥ, ಮೋಕ್ಷಾರ್ಥ, ಕಾಮ್ಯಾರ್ಥವೆಂಬವು ತನ್ನ ಬಾಗಿಲು ನೆಟ್ಟತಾಣ. ಇವು ಹೊರಗಾಗಿ ಮೀರಿ ಕಂಡ ತೆರ ಉರಿಕೊಂಡ ಕರ್ಪುರದಂತೆ. ಇಂತೀ ಉಭಯ ನಿಶ್ಚಯ ಪೂಜೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನ ಲಿಂಗಕ್ಕೆ ಎರವಿಲ್ಲದ ಭಾವ.

(೧೮). ಇನ್ನು ಮುಕ್ತಿ ಎಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ, ಪ್ರಸಾದ ಲಿಂಗಸಾಹಿತ್ಯವಾದುದಿಲ್ಲ. ಇನ್ನು ಪರವೆಂದು ಮನದಲ್ಲಿ ಹೊಳೆದು ಕಾಮಿಸುವನಕ್ಕರ, ಜಂಗಮಲಿಂಗ ಸಾಹಿತ್ಯವಾದುದಿಲ್ಲ. ಶಿವಲಿಂಗ ಕರಸ್ಥಲದಲ್ಲಿರ್ದಂತೆ ಇನ್ನೊಂದು ಲಿಂಗ ಉಂಟೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕರ, ಶಿವಲಿಂಗ ಸಾಹಿತ್ಯವಾದುದಿಲ್ಲ. ಇನ್ನು ವಿಶೇಷ ತತ್ವ ಉಂಟೆಂದು ಮನದಲ್ಲಿ ಹೊಳೆದು ಕಾಮಿಸುವನ್ನಕ್ಕ, ಗುರುಲಿಂಗ ಸಾಹಿತ್ಯವಾದುದಿಲ್ಲ. ಇಂತೀ ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ ಈ ಚತುರ್ವಿಧ ಲಿಂಗವು ಏಕೀಕರಿಸಿದ ಮಹಾಮಹಿಮಂಗೆ ಇನ್ನು ಕಾಮಿಸಲಿಲ್ಲ ಕಲ್ಪಿಸಲಿಲ್ಲ ಭಾವಿಸಲಿಲ್ಲ ಚಿಂತಿಸಲಿಲ್ಲ, ಆತ ನಿಶ್ಚಿಂತ ಪರಮಸುಖಿ, ಪರಿಣಾಮಿ. ಆತನಿರ್ದುದೇ ಕೈಲಾಸ. ಆತನ ಸರ್ವಾಂಗವೆಲ್ಲ ಲಿಂಗಮಯವಯ್ಯ, ಕೂಡಲಚನ್ನಸಂಗಮದೇವಾ.

(೧೯). ಸಾಲೋಕ್ಯ ಸಾಮೀಪ್ಯ ಸಾರೂಪ್ಯಸಾಯುಜ್ಯ ಪದಂಗಳ ಬಯಸಿ ಅರ್ಚಿಸಿದಡೆ, ಲಿಂಗಸಂಗವಿಲ್ಲ. ಅಂಗಾಭ್ಯಂತರದ ಸಂಗವಿಲ್ಲ. ತಾನು ಹಂಗುಹರಿದು ಅರ್ಚಿಸುವ ಸಂಗಿಗಳಿಗೆ ಲಿಂಗಸಂಗವಕ್ಕು. ಮಂಗಳಾಂಗನೇ, ನಿನ್ನ ಹಂಗಿಲ್ಲದಿರ್ದವರ ಸಂಗ ನಿನ್ನಯರೂಪು, ಯೋಗಿನಾಥಾ.

(೨೦). ಪರಮ ಪದವಿಯ ನಿಮ್ಮ ಕೊರಳಲ್ಲಿ ಕಟ್ಟಿಕೊಳ್ಳಿ. ಪರಮ ಪದವಿಯ ನಿಮ್ಮ ಎದೆಯಲ್ಲಿ ಇರಿದುಕೊಳ್ಳಿ. ಎನಗೆ ನಿಮ್ಮ ತೊತ್ತು ಸೇವೆಯೇ ಸಾಕು. ಮಹಾಲಿಂಗ ಕಲ್ಲೇಶ್ವರದೇವಾ, ಪರಮ ಪದವಿಯ ನಿಮ್ಮ ತಲೆಯಲ್ಲಿ ಸುತ್ತಿಕೊಳ್ಳಿ.

## ( ೩ ). ತಾದಾತ್ಮ್ಯಭಾವವುಳ್ಳವನಾಗಿ ಕ್ರಿಯೆಗಳನ್ನು ಮಾಡುವದು.

( ೧ ). ಮಾಡಿದೆನೆಂಬುದು ಮನದಲ್ಲಿ ಹೊಳೆದರೆ, ಏಡಿಸಿ ಕಾಡಿತ್ತು. ಶಿವನ ಡಂಗುರ. ಮಾಡಿದೆನೆನ್ನದಿರಾ ಲಿಂಗಕ್ಕೆ. ಮಾಡಿದೆನೆಂಬುದು ಮನದಲ್ಲಿ ಇಲ್ಲದಿರ್ದಡೆ, ಬೇಡಿದ್ದನೀವ ನಮ್ಮ ಕೂಡಲಸಂಗಮದೇವಾ.

( ೨ ). ಹರಗಣಂಗಳ ನೆರಹಿ ಮಾಡುವ ಮಾಟ ಉರಿಯ ನಾಲಿಗೆ ಕೊರಳನಪ್ಪಿದಂತಾಯಿತ್ತಯ್ಯ. ಒಡೆವ ಮಡಿಕೆಯಲ್ಲಿ ಅಮೃತವ ತುಂಬಿ ಮುರಿಯ ಕುಟ್ಟಿ, ಅಟ್ಟುಂಡ ತೆರನಾಯಿತ್ತಯ್ಯ. ಭಕ್ತ ದೇಹಿಕ ದೇವ ಮನೆಗೆ ಬಂದರೆ, ಮತ್ತೆ ಮಾಡಿಹೆನೆಂಬುದಿಲ್ಲವು. ಮೂಗಿಲ್ಲದ ಮುಖಕ್ಕೆ ಶೃಂಗಾರವ ಮಾಡಿದಂತಾಯಿತ್ತಯ್ಯ. ಶರಣಸನ್ನಿಹಿತ ಸಕಳೇಶ್ವರ ದೇವರನರಿತು ಅರಿಯದಂತಿರ್ದಡೆ, ಮಳಲಗೌರಿಯ ನೋಂತು, ನದಿಯಲ್ಲಿ ಅದ್ದಿದಂತಾಯಿತ್ತಯ್ಯ.

( ೩ ). ಕಂಗಳ ಮುಂದಣ ಗೊತ್ತುಹರಿಯದು. ಕಾಯದ ಮುಂದಣ ಚಿತ್ತ ಹರಿಯದು. ಮಾಡಿಹೆನೆಂಬ ಮಾಟಕೂಟದ ಚಿತ್ತ ನಿಂದಲ್ಲದೆ ಸ್ವಸ್ಥವಿಲ್ಲ. ಹಾಂಗಲ್ಲದೆ ಗುಹೇಶ್ವರಲಿಂಗನ ಕಾಣಬಾರದು, ಅಯದಕ್ಕಿ ಮಾರಯ್ಯ.

( ೪ ). ಲಿಂಗಜಂಗಮಕ್ಕೆ ಮಾಡಿದ ಭಕ್ತಿ ಮನಕ್ಕೆ ಮನಸಾಕ್ಷಿಯಾಗಿರಬೇಕಲ್ಲದೆ, ಇದಿರಿಟ್ಟು ನುಡಿಯಲಾಗದು. ಅದೇನುಕಾರಣವೆಂದಡೆ, ಬಡವನಿಗೆ ಭಾಗ್ಯ ದೊರಕೊಂಡಂತಿರಬೇಕಲ್ಲದೆ, ಎನ್ನ ಪದಾರ್ಥವ ನಾನು ಮಾಡಿದೆನು, ಅವರು ಕೈಕೊಂಡರೆಂದು ತನ್ನ ಖ್ಯಾತಿ ಭಕ್ತಿಯನು ಮನ ಹಿಗ್ಗಿ ಅನ್ಯರೊಡನೆ ಹೇಳಿಕೊಂಡರೆ, ಶಿವನೊಪ್ಪುಗೊಳ್ಳನು, ಪುರಾತನರು ಮೆಚ್ಚರು. ಅಂತಪ್ಪ ಖ್ಯಾತಿ ಭಕ್ತಿ ಎಂತಾಯಿತ್ತೆಂದರೆ, ಹಾವಸಿಗಲ್ಲ ಮೆಟ್ಟಿ ಜಾರಿಬಿದ್ದು, ಕೊಡನೊಡದಂತಾಯಿತ್ತು, ಕಾಣಾ ಅಖಂಡೇಶ್ವರಾ.

( ೫ ). ಹೆಣ್ಣ ಹಿಡಿದು, ಹೆಣ್ಣ ಭೋಗಿಸಬಾರದು. ಮಣ್ಣ ಹಿಡಿದು, ಮಣ್ಣ ಭೋಗಿಸಬಾರದು. ಹೊನ್ನ ಹಿಡಿದು, ಹೊನ್ನ ಭೋಗಿಸಬಾರದು. ಈ ಅಣಕದ ಭೇದವನಾರೂ ಅರಿಯರು. ಅದೆಂತು ಭಕ್ತಿ ಸ್ಥಲವಳವಡುವುದು ಕಪಿಲಸಿದ್ಧಮಲ್ಲಿಕಾರ್ಜುನಾ ?

(೬). **ಮಾಡಿಹೆ, ಮಾಡಿಹೆನೆನ್ನಬರ, ತನ್ನವಧಿಗೆ ಬಂದುದನರಿವ** ಪರಿ ಇನ್ನೆಂತೋ? ಅಸಗ ನೀರಡಿಸಿ, ಸತ್ತಂತಾಗಬೇಡ, ಗುಹೇಶ್ವರ ಲಿಂಗವ ನರಿವುದಕ್ಕೆ ಮಾರಯ್ಯಾ.

(೭). ಮಾಡುವಲ್ಲಿ ಎನ್ನ ನಾನರಿದು ಮಾಡಿದೆ ನಾದಡೆ, ನೀಡುವಲ್ಲಿ ಎನ್ನನಾನರಿದು ನೀಡಿದೆನಾದಡೆ, ನೀಡುವಲ್ಲಿ ರುಚಿಗೆ ಮನವೆಳಸಿ ಹಾರೈಸಿದೆನಾದಡೆ, ನಿಮಗಂದೆ ದ್ರೋಹವಯ್ಯಾ. ಮಾಡುವಲ್ಲಿ, ನೀಡುವಲ್ಲಿ ಶುದ್ಧನಲ್ಲದಿರ್ದಡೆ, ನೀನಂದೆ ಮೂಗ ಕೊಯ್ಯಾ, ಕೂಡಲಸಂಗಮದೇವಾ.

(೮). ಮಾಡುವದಯ್ಯಾ ಮರುಳುಗೊಂಡಂತೆ. ಮರ್ಮವನರಿಯದೆ ಮಾಡುವ ಮಾಟ ಕರ್ಮದ ಬೆಳಸು, ಸುಯಿಧಾನದ ಕೇಡು. ಕೂಡಲಚನ್ನ ಸಂಗಯ್ಯಾ, ನಿಮ್ಮ ಶರಣರ ಅನುವನರಿದು ಮಾಡುವ ಮಾಟ, ಲಿಂಗಜಂಗಮದ ಕೂಟ, ಭವಭಂಗದೋಟ.

(೯). **ಪೂಜೆಯುಳ್ಳನ್ನಕ್ಕ ಪುಣ್ಯದ** ಗೊತ್ತು ಕಾಣಬಂದಿತ್ತು. ಮಾಟವುಳ್ಳನ್ನಕ್ಕರ ಮಹಾಪ್ರಮಥರ ಭಾಷೆ ಭಾಗ್ಯ ದೊರೆಕೊಂಡಿತ್ತು. ಮಾಟವಿಲ್ಲದವನ ಭಕ್ತಿ ಹಾಳೂರಂಕಕ್ಕೆ ಕೋಲ ಹಿಡಿದಂತಾಯಿತ್ತು. ಮಾಡುವಲ್ಲಿ ಉಭಯವಳಿದು ಮಾಡಬಲ್ಲರೆ, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗವ ಕೂಡುವ ಕೂಟ.

(೧೦). ಇಹಪರವೆಂಬ ಈದೆಸೆಗಾದೆಸೆಯಾದವನ ಪರಿಹೊಸತು. ನೆಯಿಹತ್ತದ ನಾಲಿಗೆಯಂತೆ ಹುಡಿ ಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಅಲಿಯಂತೆ ಇರ್ದೆನಯ್ಯಾ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿಸದಂತೆ ಇರ್ದೆನಯ್ಯಾ.

(೧೧). ಮಾಡುವ ಭಕ್ತನು ನೀನೇ, ಮಾಡಿಸಿಕೊಂಬ ದೇವನು ನೀನೇ ಎಂದರಿದೆ. ಇದು ಕಾರಣ ಅಖಂಡೇಶ್ವರಾ, ನಿಮ್ಮ ಫಲಪದವ ನೋಡಲಿಲ್ಲ ನೀವು ಒಲಿದು ಎನಗೆ ಕೊಡಲಿಲ್ಲ.

(೧೨). ಮಾಟಕೂಟ ಫಲಪ್ರಾಪ್ತಿ ಎಂಬ ಮಾತ ಕೇಳಲಾಗದು. ಶಿವ ಶಿವಾ, ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು ಶ್ರೀಗುರುಲಿಂಗವು ಕೃಪೆ ಮಾಡಿದ

ಕಾರಣ, ಅಲ್ಲಿ ಮಾಡುವವನು ಮಾಡಿಸಿಕೊಂಬುವನು ನೀನೇ ಅಯ್ಯ, ಕೂಡಲ ಸಂಗಮದೇವಾ.

---

## (೪). ಲಿಂಗಕಾರ್ಯಕ್ಕೋಸ್ಕರ ಕ್ರಿಯೆಗಳನ್ನು ಮಾಡುವದು.

(೧). ಕ್ಷೀರಸಾಗರದೊಳಗಿರ್ದು ಹಂಸೆ ಹಾಲ ಬಯಸಲುಂಟೇ? ಪುಷ್ಪದೊಳಗಿರ್ದ ತುಂಬಿ ಪರಿಮಳವನರಸಲುಂಟೇ? ಕಡಲೊಳಗಿರ್ದ ಕಪ್ಪೆ ಜಲವ ಬಯಸಲುಂಟೇ? ಇದೆಂತಯ್ಯ? ತಾ ಲಿಂಗದೊಳಗಿರ್ದು, ಬೇರೆ ಇತರ ಕಾಮ್ಯದೊಳಗಿರ್ಪ ಭ್ರಾಂತರನೇನೆಂಬೆನಯ್ಯ ಗುಹೇಶ್ವರಾ?

(೨). ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ ಎನ್ನೊಡಲಿಂಗೆ ಎನ್ನ ಮಡದಿ ಮಕ್ಕಳಿಗೆಂದು ಕುದಿದೆನಾದಡೆ, ಎನ್ನ ಮನಕ್ಕೆ ಮನವೇ ಸಾಕ್ಷಿ. ಶ್ಲೋ॥ ಅಶನೇ ಶಯನೇ ಯಾನೆ ಸಂಪರ್ಕೇ ಸಹಭೋಜನೇ । ಸಂಚರಂತಿ ಮಹಾ ಘೋರೆ ನರಕೆ ಕಾಲಮಕ್ಷಯಂ ॥ ಎಂದುದಾಗಿ, ಈ ಶೃತಿಯು ಬಸವಣ್ಣನೋದುವನು. ಭವಿಯು ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಗೆ. ಕೊಡಲವ್ವೆನು. ಹೊಲೆ ಹೊಲೆಯರ ಮನೆಯ ಹೊಕ್ಕಾದರೆಯೂ, ಸಲೆ ಕೈಕೂಲಿಯ ಮಾಡಿಯಾದಡೆಯೂ, ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿವೆನಾದಡೆ, ತಲೆದಂಡ, ತಲೆದಂಡ, ಕೂಡಲಸಂಗಮದೇವಯ್ಯ.

(೩). ಸ್ತನಾಮೃತವ ಸೇವಿಸುವ ಶಿಶು ಸಕ್ಕರೆಯು ನಿಚ್ಛೈಸುವದೇ? ಪರುಷದೊರೆಕೊಂಡ ಪುರುಷನು ಜಲವ ತೊಳೆಯಲಿಚ್ಛೈಸುವನೇ? ಸೋಹವ ಮಾಡುವ ಭಕ್ತನು ಮುಕ್ತಿಯನಿಚ್ಛೈಸುವನೇ? ಇವರು ಮೂವರಿಗಿನ್ನಾವುದೂ ಇಚ್ಛೆ ಇಲ್ಲ. ರುಚಿ ಪದಾರ್ಥವಿದ್ದಂತೆ ಲಿಂಗಪದವು ಸಹಜ ಸುಖವಯ್ಯ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

(೪). ನಾನು ಆರಂಭಮಾಡುವೆನಯ್ಯ ಗುರುಪೂಜೆಗೆಂದು. ನಾನು ವ್ಯವಹಾರವ ಮಾಡುವೆನಯ್ಯ ಲಿಂಗಾರ್ಚನೆಗೆಂದು. ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು. ನಾನಾವ ಕರ್ಮಮಾಡಿದಡೆಯೂ ಆ ಕರ್ಮದ ಫಲಭೋಗವ ನೀ ಕೊಡುವೆ ಎಂಬುದ ನಾನು ಅರಿತಿರ್ಪೆನಾಗಿ,

ನೀ ಕೊಟ್ಟ ದ್ರವ್ಯವ ನಿಮಗಲ್ಲದೆ, ಮತ್ತೊಂದಕ್ಕೆ ವ್ರಯ ಮಾಡೆನು. ನಿಮ್ಮ ಸೊಮ್ಮು ನಿಮಗೆ ಸಲ್ಲಿಸುವೆನು. ನಿಮ್ಮಾಣೆ ಕೂಡಲಸಂಗಮದೇವಾ.

( ೫ ). ಸಕಲ ಪ್ರಾಣಿಗಳಿಗೆ ಲೇಸಾಗಲೆಂದು ಮಜ್ಜನಕ್ಕೆರೆವ ಲಾಂಛನ ಧಾರಿಗಳ ವೇಷಕ್ಕೆ ಶರಣೆಂಬೆನಯ್ಯಾ. ಆ ಲಾಂಛನವ ಹೆಚ್ಚು ಕುಂದನರಸದೆ, ಸಕಲ ಪದಾರ್ಥವನು ಒಪ್ಪಿಸಿ, ಭಯಭಕ್ತಿಯಿಂದ ಪರಿಣಾಮಿಸಿ, ಅವರಿಚ್ಛೆಯ ನೀವೆನು. ಆತನಿರ್ದಲ್ಲಿಗೆ ಹೋಗಿ, ಕೂಡಲಚೆನ್ನಸಂಗಯ್ಯನಲ್ಲಿ ನಾನು ಇಲ್ಲ, ನೀನೂ ಇಲ್ಲ. ನಾನಿಲ್ಲದ ಮುನ್ನ ನೀನಿರ್ದುದಿಲ್ಲವಯ್ಯಾ.

( ೬ ). ಕಾಮಿಸುವ ವಸ್ತು ಕರಸ್ಥಲಕ್ಕೆ ಬಂದ ಬಳಿಕ ಕಾಮಿಸಲೇನುಂಟು ? ಇನ್ನೇನ ಕಾಮಿಸುವೆನಯ್ಯಾ ? " ಓಂ ನಮೋಹಿರಣ್ಯ ಬಾಹವೇ। ಹಿರಣ್ಯ ವರ್ಣಾಯ ಹಿರಣ್ಯ ರೂಪಾಯ। ಹಿರಣ್ಯ ಪತಯೇ " ಎಂಬ ವಸ್ತು " ಯೋವೈರುದ್ರಸ್ಸ ಭಗವಾನಯಃಂ ಚಾಮೃತಂ " ಎಂಬ ವಸ್ತು, ಸುಖಸ್ವರೂಪನು, ಅಭಯ ಹಸ್ತನು, ವರದಹಸ್ತನು, ಶಾಂತನು, ಕರುಣಿ, ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರ ಲಿಂಗವು ಕರಸ್ಥಲಕ್ಕೆ ಬಂದಬಳಿಕ ಇನ್ನೇನು ಕಾಮಿಸಲುಂಟು ?

( ೭ ). ನಾನು ಕಾಮಿಸುತ್ತಿಪ್ಪ ವಸ್ತು ಸಾಲೋಕ್ಯವಿದೆ, ಸಾಮೀಪ್ಯವಿದೆ, ಸಾರೂಪ್ಯವಿದೆ, ಸಾಯುಜ್ಯವಿದೆ, ಧರ್ಮವಿದೆ, ಅರ್ಥವಿದೆ, ಕಾಮವಿದೆ, ಮೋಕ್ಷವಿದೆ, ಏನ ನಾನರಸುವ ಬಯಕೆ ಎಲ್ಲವೂ ಇದೆ. ಎನ್ನ ಧ್ಯಾನ ಜಪ ತಪದಿಂದ ಸಾಧ್ಯವಪ್ಪ ಸಿದ್ಧಿ ಎಲ್ಲವೂ ಇದೆ ನೋಡಾ. ಶ್ರೀಗುರುವಿನ ಕಾರುಣ್ಯದಿಂದ ಮಹಾವಸ್ತು ಕರಸ್ಥಲಕ್ಕೆ ಬಂದಬಳಿಕ ಸರ್ವಸುಖಂಗಳೆಲ್ಲವೂ ಇದೆ ಇದೆ ನೋಡಾ. ಇನ್ನು ಎನ್ನ ಬಯಲ ಭ್ರಮೆಯೊಳಗೆ ಹೊಗಿಸದಿರಯ್ಯಾ. ನಿಮ್ಮ ಬೇಃಕೊಂಬೆನು ನಿಮಗೆ ಎನ್ನಾಣೆ, ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ.

( ೮ ). ಭಕ್ತರಲ್ಲದವರನಾಸೆಗೈದರೆ ಕಕ್ಕುಲಿತೆಯಲ್ಲದೆ ಕಾರ್ಯವಿಲ್ಲ. ಆಸೆಗೈದರೆ, ಆಸೆಗೈವುದು ಭಕ್ತರನು. ಆಸೆಗೈದು ಬಂದ ಶಿವಂಗೆ ಸುತನ ಕೊಟ್ಟರು, ಧನವ ಕೊಟ್ಟರು, ಮನವ ಕೊಟ್ಟರು, ಅಸುವ ಕೊಟ್ಟರು. ಶರಣನ ಪರಿಯಾವ ಲೋಕದೊಳಗೂ ಇಲ್ಲ. ಶರಣಭರಿತ ಲಿಂಗವಾಗಿ ಬೇಡಿದ್ದ ಕೊಡುವರಯ್ಯಾ. ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೯). ಲಿಂಗಕ್ಕೆಂದೇ ನೆನೆವೆ. ಲಿಂಗಕ್ಕೆಂದೇ ಮಾಡುವೆ. ಲಿಂಗಕ್ಕೆಂದೇ ಕೂಡುವೆನುನಾನಯ್ಯ. ಸಕಲಪದಾರ್ಥಂಗಳ ಲಿಂಗಕ್ಕೆಂದೇ ಭಾವಿಸುವೆ. ಅಂಗ ಗುಣಂಗಳನರಿಯೆನಯ್ಯ. ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ. ಎನ್ನದೇಹೇಂದ್ರಿಯ ಮನಪ್ರಾಣಾದಿಗಳು ಲಿಂಗದ ಸತಿಯರಾಗಿ ಲಿಂಗಕ್ಕೆಂದೇ ಬಯಸಿ, ಲಿಂಗಪ್ರಾಣಿಗಳಾದ ಕಾರಣ, ಲಿಂಗಕ್ಕೆಂದೇ ಕೈಕೊಂಬೆನು. ಅನರ್ಪಿತವನರಿಯೆ ಕೂಡಲಸಂಗಮದೇವಾ.

---

## (೫). ಕಾಯಕದಿಂದ ಉಪಜೀವಿಸುವದು.

(೧). ತವನಿಧಿ ಬೆಳೆದವಂಗೆ ಕಣಜದ ಹಂಗುಂಟೇ? ವಿರಕ್ತಂಗೆ ಅರ್ಥ ಕೆಗೊಂಬುವರುಂಟೇ? ಕಾಯಕವ ಮಾಡುವ ಭಕ್ತಂಗೆ ಇನ್ನಾರ ಕಾಡಲೇತಕ್ಕೋ? ಆಗುಣ ಅಮಳೇಶ್ವರ ಲಿಂಗಕ್ಕೆ ದೂರ.

(೨). ನೇಮವ ಮಾಡಿಕೊಂಡು, ಭಕ್ತರ ಭವನಂಗಳ ಹೊಕ್ಕು, ಕಾಯಕವ ಬಿಟ್ಟು, ಹೊನ್ನು ಬೇಡಿಹೆನೆಂಬುದು ಕಷ್ಟವಲ್ಲವೇ ಸದ್ಭಕ್ತಂಗೆ? ಆ ಗುಣ ಅಮಳೇಶ್ವರ ಲಿಂಗಕ್ಕೆ ದೂರ.

(೩) ಮನ ಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ, ಚಿತ್ತಶುದ್ಧನಾಗಿ ಕಾಯಕವ ಮಾಡುವಲ್ಲಿ, ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು, ಮಾರಯ್ಯ ಪ್ರಿಯ ಅಮಳೇಶ್ವರ ಲಿಂಗದ ಸೇವೆಯುಳ್ಳನ್ನಕ್ಕರ.

(೪). ಸತ್ಯಶುದ್ಧ ಕಾಯಕದಲ್ಲಿ, ಚಿತ್ತ ಸ್ವಚ್ಛಂದವಾಗದಿರಬೇಕು. ನೇಮದ ಕೂಲಿಯುಂದಿನ ನಿತ್ಯ ಕಾಯಕದಲ್ಲಿ ಸಂದಿರಬೇಕು. ನೇಮದ ಕೂಲಿಯಬಿಟ್ಟು, ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ, ತಾ ಮಾಡುವ ಸೇವೆ ನಷ್ಟವಯ್ಯ. ಈ ನಿನ್ನ ಸೇವೆ ನನಗೆ ನನ್ನ ಪ್ರಸಾದಕ್ಕೆ ಚಂದೇಶ್ವರ ಲಿಂಗಕ್ಕೆ ಪ್ರಾಣವಯ್ಯ.

(೫). ಕಾಯಕದಲ್ಲಿ ನಿರುತನಾದಡೆ, ಗುರುದರ್ಶನವಾದರೂ ಮರೆಯಬೇಕು, ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮ ಮುಂದಿದ್ದಡೂ ಹಂಗುಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ. ಅಮಳೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು.

(೬). ಭಕ್ತಿ ವಿಶೇಷವ ಮಾಡುವರೆ, ಹತ್ತು ಬೆರಳುಂಟು. ಹಾಸಿ ದುಡಿ ದರೆ, ತನಗುಂಟು, ತನ್ನ ಪ್ರಮಥರಿಗುಂಟು. ಮಾರಿ ತಂದೆಗಳಂತೆ, ಎನಗೇಕ ಹುದುಷ್ಯ! ರತ್ನದ ಸಂಕೊಲೆಯನಿಕ್ಕಿ ಕಾಡಿಹ ಕೂಡಲಸಂಗಮದೇವ, ಶಿವಧೊ, ಶಿವಧೋ.

(೭). ಭಕ್ತರು ನಾವೆಂದು, ನಿತ್ಯ ನೇಮವ ಮಾಡಿಕೊಂಡಿಹೆವೆಂದು, ಕಾಯಕವ ಬಿಟ್ಟು ಮನೆಮನೆಯ ಬಾಗಿಲ ಶೊಪ್ಪಲ ಕಾಯಲೇತಕ್ಕೆ? ಇದು ಶಿವಭಕ್ತರಿಗೆ ಒಪ್ಪುವದೇ? ಇಂತೀ ವ್ರತನೇಮವ ಮಾಡಿ, ಘಟವ ಹೊರೆವ ಕುಟಿಲರಿಗಂಜಿ, ಮುನ್ನವೇ ಮನ ಸಂದಿತ್ತು ಮಾರೇಶ್ವರಾ.

(೮). ಕೂಲಿ ಕೃಷಿ ಕಾಯಕಂಗಳಿಂದ ಮಾಡುವ ಸೇವೆ ಆದಾವ ತೆರನೆಂದರಿದು, ಭಾವಶುದ್ಧವಾಗಿ ಮಾಡುವ ಕಾಯಕವಂತನಿರವು ಎಂತು ಟೆಂದೊಡೆ, ಮಾಡಿಕೊಂಡ ಕೃತ್ಯದಲ್ಲಿ ಆರಿಗೂ ಒಡಲೆಡೆಗುಡದೆ, ಸಂಕಲ್ಪವ ಳಿದು ಪ್ರಸಾದವನೆಡೆಮಾಡಬೇಕು. ಅದು ನಿರ್ಮಾಲ್ಯವಲ್ಲ. ಅದು ಲಿಂಗಾಂಗ ಕುಂಭದಲ್ಲಿ ನಿಂದ ಪ್ರಸಾದ. ಇದರ ಸಂದೇಹವ ಹರಿದು ಕಾಯಕಗೊಂಡ ಪ್ರಸಾದಿಗೆ ಕುಂಭೇಶ್ವರ ಲಿಂಗದಲ್ಲಿದ್ದ ಜಗನ್ನಾಥ ಸಾಕ್ಷಿಯಾಗಿ ನಮೋ ನಮೋ ಎನುತಿರ್ದನು.

## (೬) ದಾಸೋಹಭಾವದಿಂದ ಕ್ರಿಯೆಗಳನ್ನು ಮಾಡುವದು.

(೧). ಸದ್ಭಕ್ತನು ತನು ಮನ ಧನ ಪ್ರಾಣಾದಿಗಳನರ್ಪಿಸಿ, ಸಕಲ ಸಾಕಾರ ದ್ರವ್ಯಾದಿಗಳೆಲ್ಲವೂ ಶಿವನ ಸೊಮ್ಮಾಗಿ, ಅದೆಂತೆಂದೊಡೆ:—ಋಗ್ವೇದ, "ಶಿವೋ ದಾತಾ ಶಿವೋ ಭೋಕ್ತಾ ಶಿವಸ್ಸರ್ವಮಿದಂ ಜಗತ್ । ಶಿವೋ ಯಜತಿ ಸರ್ವಸ್ವಂ ಯಶ್ಶಿವಸ್ಸೋಹಮೇವಚ ॥" ಎಂದುದಾಗಿ, ಇದನರಿದು ದಾತೃ, ಭೋಕ್ತೃ ಶಿವನೆಂದು ಅಹಂ ಮಮತೆಗಳಡಗಿ, ಸ್ವಾನುಭಾವವಳವಟ್ಟು, ಬಾಗಿಲುಗಾಹಿಯಾಗಿ ದಾಸೋಹಮಂ ಮಾಡುವದು. ಇದು ಉತ್ತಮ ಕ್ರಿಯೆಯು. ಇದು ಲಿಂಗದೊಡನೆ ಹುಟ್ಟಿ, ಲಿಂಗದೊಡನೆ ಬೆಳೆದು, ಲಿಂಗದೊಡನೆ ಲೀಯವಹ ಮಹಾಲಿಂಗಾಂಗಿಗಲ್ಲದೆ ಸಾಧ್ಯವಾಗದು. ಇದು ಅಳವಡದಿರ್ದಡೆ, ಸದ್ಭಕ್ತನು ತನು, ಮನ, ಧನ, ಪ್ರಾಣ ಮುಂತಾಗಿ, ವಂಚನೆ ಇಲ್ಲದೆ ಸದ್ಭಕ್ತಿಯಿಂ ದಾಸೋಹಮಂ ಮಾಡುವುದು. ಇದು ಮಧ್ಯಮ ಕ್ರಿಯೆಯು. ಇದು

ಸಾಮಾನ್ಯರಿಗಳವಡದು. ಅದು ಅಸಾಧ್ಯವು. ಇದು ಅಳವಡದಿರ್ದಡೆ, ಸದ್ಭಕ್ತನು ತನ್ನ ತನುಮನಪ್ರಾಣಂಗಳು ಬಳಲಿ, ತನಗೆ ಪ್ರಿಯವಾದ ಪುತ್ರ ಮಿತ್ರ ಕಳತ್ರಾದಿ ಗಳಿಗೆ ಹ್ಯಾಗೆ ಸಕಲ ದ್ರವ್ಯಂಗಳಂ ಕೊಡುವನೋ, ಹಾಗೆ ಸ್ನೇಹದಿಂದ ದಾಸೋಹಮಂ ಮಾಡುವದು. ಇದು ಕನಿಷ್ಠ ಕ್ರಿಯೆಯು. ಇದು ಮಹಾಜ್ಞಾನ ಪುರುಷರಿಗಲ್ಲದೆ ಅಳವಡದು. ಇದು ಅಳವಡದಿರ್ದಡೆ, ಶಕ್ತ್ಯಾನುಸಾರದಿಂ ಮಾಡುವದು. ಇದು ನಿಕೃಷ್ಟ ಕ್ರಿಯೆಯು. ಅದೆಂತೆಂದೊಡೆ, "ಶ್ರೂಯತಾಂ ಧರ್ಮಸರ್ವತ್ರಂ ಶೃತ್ವಾ ಚೈವಾವಧಾರ್ಯತಂ । ಆತ್ಮನಃ ಪ್ರತಿಕೂಲಂ ಚ ಪರೀಕ್ಷಾನಂದಮಾಚರೇತ್ ॥" ಎಂದುದಾಗಿ ಇದನರಿತು ತನ್ನಂತೆ ಭಾವಿಸಿಯಾ ದಡೂ ದಾಸೋಹವ ಮಾಡಿ ಪ್ರಸನ್ನತೆಯ ಪಡೆವುದೇ ಸದ್ಭಕ್ತಂತೆ ಪಥವು ನೋಡಾ. ಇಂತಪ್ಪ ಉತ್ತಮ ಮಧ್ಯಮ ಕನಿಷ್ಠ ನಿಕೃಷ್ಟವೆಂಬ ಈ ನಾಲ್ಕು ಪರ್ಯಾಯದಲ್ಲಾದಡೆಯೂ, ಒಂದು ಪರ್ಯಾಯದಲ್ಲಿ ಭಾವಿಸಿಕೊಂಡು, ತನು ಮನ ಧನವನಿತ್ತು ಸ್ನೇಹದಿಂದ ದಾಸೋಹವ ಮಾಡಿ ಪ್ರಸಾದವ ಪಡೆದು ಭೋಗಿಸಿ, ಭಕ್ತರಾಗಬೇಕು. ಈ ಪ್ರಕಾರದಿಂದಲ್ಲದೆ, ಮುಕ್ತಿ ಇಲ್ಲ. ಈ ಚತು ರ್ವಿಧ ಕ್ರಿಯೆಗಳೊಳಗೆ ಆವುದನು ಮಾಡದೆ, ದುಷ್ಕ್ರಿಯೆಯಲ್ಲಿ ವರ್ತಿಸುತ್ತ ದಾಸೋಹವಿಲ್ಲದೆ, ತನ್ನೊಡಲನೆ ಹೊರೆದಡೆ ಅವನು ಸದ್ಭಕ್ತರೊಳಗೆ ಸಲ್ಲ. ಅವಂಗೆ ಪ್ರಸಾದವಿಲ್ಲ. ಪ್ರಸಾದವಿಲ್ಲಾಗಿ ಮುಕ್ತಿ ಇಲ್ಲ. ಅವನು ಉಭಯ ಭ್ರಷ್ಟ. ಇದನರಿತು ತನ್ನಂತೆ ಭಾವಿಸಿ, ವಿಶ್ವಾಸದಿಂ ದಾಸೋಹವಂ ಮಾಡಲು, ಇಹಸಿದ್ಧಿ, ಪರಸಿದ್ಧಿ, ಸರ್ವಸಿದ್ಧಿಯಯ್ಯ, ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೨). ವೇದವನೋದಿ ಕೇಳಿ ವೇದದ ಮರ್ಮವನರಿದ ಫಲ ದಾಸೋ ಹವಯ್ಯ. ಶಾಸ್ತ್ರವನೋದಿ ಕೇಳಿ ಶಾಸ್ತ್ರದ ಮರ್ಮವನರಿದ ಫಲ ದಾಸೋಹ ವಯ್ಯ. ಪುರಾಣವನೋದಿ ಕೇಳಿ ಪುರಾಣದ ಮರ್ಮವನರಿದ ಫಲ ದಾಸೋಹ ವಯ್ಯ. ಆಗಮವನೋದಿ ಕೇಳಿ, ಆಗಮದ ಮರ್ಮವನರಿದ ಫಲ ದಾಸೋಹ ವಯ್ಯ. ಪುರಾತನರ ವಚನವನೋದಿ ಕೇಳಿ ಪ್ರಸಂಗಾನುಭಾವದಲ್ಲಿರ್ದು ಅರಿದ ಫಲ ದಾಸೋಹವಯ್ಯ. ವೇದಶಾಸ್ತ್ರ ಪುರಾಣಾಗಮಂಗಳ ಪುರಾತನರ ವಚನ ಪ್ರಸಂಗವನರಿದು, ದಾಸೋಹವಿಲ್ಲದಿರ್ದಡೆ ಆ ಓದು ಗಿಳಿಯೋದಿನಂತೆ, ಮರು ಳನ ಕೇಳುವೆಯಂತೆ. ಅವನೇತಕ್ಕೆ ಬಾತೆಯಯ್ಯ ಉರಿಲಿಂಗಪೆದ್ದಿ ಪ್ರಿಯ ವಿಶ್ವೇ ಶ್ವರಾ?

(೩). ತನುವಿಡಿದು ದಾಸೋಹವ ಮಾಡಿ ಗುರುಪ್ರಸಾದಿಯಾದ ಬಸವಣ್ಣ. ಮನವಿಡಿದು ದಾಸೋಹವ ಮಾಡಿ ಲಿಂಗಪ್ರಸಾದಿಯಾದ ಬಸವಣ್ಣ. ಧನವಿಡಿದು ದಾಸೋಹವ ಮಾಡಿ ಜಂಗಮಪ್ರಸಾದಿಯಾದ ಬಸವಣ್ಣ. ಇಂತೀ ತ್ರಿವಿಧವಿಡಿದು ದಾಸೋಹವ ಮಾಡಿ ಸದ್ಗುರು ಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಬಸವಣ್ಣ ಸ್ವಯಪ್ರಸಾದಿಯಾದನಯ್ಯ.

(೪). ಮನದ ಮತ್ಸರವ ಕಳೆದು ಮನದ ಕೊನೆಯ ಮೊನೆಯ ಮೇಲೆ ಲಿಂಗವ ಕುಳ್ಳಿರಿಸಬೇಕು. ತನುಗುಣವ ಕಳೆದು ಪ್ರಸಾದಕಾಯವ ಮಾಡಬೇಕು. ಧನಗುಣವ ಕಳೆದು ಮಮಕಾಯವೆನಿಸಬೇಕು. ಈ ತ್ರಿವಿಧ ಗುಣಂಗಳ ಕಳೆದು ತ್ರಿವಿಧ ದಾಸೋಹಿಯಾಗಿರಬೇಕಯ್ಯ ನಮ್ಮ ಕೂಡಲ ಚನ್ನಸಂಗಮ ದೇವನಲ್ಲಿ.

(೫). ಭಕ್ತಿಹೀನನ ದಾಸೋಹವ ಸದ್ಭಕ್ತರು ಸೇವಿಸರು. ಬೇವಿನ ಹಣ್ಣ ಕಾಗಿಗಲ್ಲದೆ ಕೋಗಿಲೆಗೆ ಮೆಲಬಾರದು. ಲಿಂಗಸಂಬಂಧವಿಲ್ಲದವನ ನುಡಿ ಕೂಡಲಚನ್ನಸಂಗನ ಶರಣರಿಗೆ ಸಮನಿಸದು.

## ಒಂದು ಕಾಯಕವನ್ನು ಅವಲಂಬಿಸಿ ದಾಸೋಹವನ್ನು ಮಾಡುವದು.

(೬). ಕಾಯಕವೆಂದು ಕಾಯವ ಬಳಲಿಸದೆ ತನು ಕರಗದೆ ಮನ ನೋಯದೆ ಬೇಡಿ ಕಾಡಿ ಮಾಡುವದು ದಾಸೋಹವೇ? ಆವ ಕಾಯಕವಾದಡೂ ಪ್ರಾಣವೇ ಕಡೆಯಾಗಿ ಚಿತ್ತ ಶುದ್ಧದಲ್ಲಿ ಮೆಯ್ಯಾಂತು, ಬಂದುದನು ಸರಿಗಂಡು ದೇಹಿಗಳನೆಲ್ಲ ಒಂದೇ ಪ್ರಮಾಣದಲ್ಲಿ ಕಂಡರೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗಕ್ಕೆ ತೃಪ್ತಿ.

(೭). ಕೃಷಿಕೃತ್ಯ ಕಾಯಕದಿಂದಾದೊಡೇನು? ತನುಮನ ಬಳಲಿಸಿ ತಂದು ದಾಸೋಹವ ಮಾಡುವ ಪರಮ ಸದ್ಭಕ್ತನ ಪಾದವ ತೋರಯ್ಯ ಎನಗೆ. ಅದೆಂತೆನೆ, ಆತನ ತನುಶುದ್ಧ, ಆತನ ಮನಶುದ್ಧ, ಆತನ ನಡೆಶುದ್ಧ, ನುಡಿ ಎಲ್ಲ ಪಾವನವು. ಆತಂಗೆ ಉಪದೇಶವ ಮಾಡಿದಾತನೇ ಪರಮ ಸದ್ಗುರು. ಅಂತಪ್ಪ ಸದ್ಭಕ್ತನ ಮನೆಯ ಕೈಲಾಸವೆಂದು ಹೊಕ್ಕು ಲಿಂಗಾರ್ಚನೆಯ ಮಾಡುವ ಜಂಗ

ಮವೇ ಜಗತ್ಪಾವನ. ಇಂತಪ್ಪವರ ನಾನು ನೆರೆನಂಬಿ, ನಮೋ ನಮೋ ಎಂಬೆನಯ್ಯ ಕೂಡಲಸಂಗಮದೇವಾ.

(೮). ಕಂದಿಸಿ, ಕುಂದಿಸಿ, ಬಂಧಿಸಿ, ನೋಯಿಸಿ, ಕಂಡಕಂಡವರ ಬೇಡಿ ತಂದು ಮಾಡಿಹೆನೆಂಬುದು ದಂದುಗದೋಗರ. ಲಿಂಗನೈವೇದ್ಯಕ್ಕೆ ಸಲ್ಲದು. ತನು ಕರಗಿ ಮನ ಬಳಲಿ ಬಂದ ತೆರದನುವನರಿದು ಸಂದಿಲ್ಲದೆ ಸಂಶಯವಿಲ್ಲದೆ ದಾಸೋಹವ ಮಾಡುವದೇ ಮಾಟ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ ದುರಾಸೆಯಿಂ ಬಂದುದು ಅನರ್ಪಿತ. ಇದು ಕಾರಣ ಸತ್ಯಶುದ್ಧ ಕಾಯಕದ ನಿತ್ಯದ್ರವ್ಯ ಚಂದೇಶ್ವರಲಿಂಗಕ್ಕೆ ನೈವೇದ್ಯ ಕೇಳಯ್ಯ.

(೯). ಇಷ್ಟಲಿಂಗ ಗುರುವಿನ ಹಂಗು, ಚಿತ್ತಕಾವ್ಯದ ಹಂಗು, ಪೂಜೆ ಪುಣ್ಯ ಮಹಾದೇವನ ಹಂಗು, ಎನ್ನ ದಾಸೋಹ ಆರ ಹಂಗೂ ಇಲ್ಲ. ಚನ್ನಬಸವಣ್ಣ ಪ್ರಿಯಚಂದೇಶ್ವರಲಿಂಗವೇ, ಕಣ್ಣಿಯ ಮಾಡಬಲ್ಲರೆ ಬಾ ಎನ್ನ ತಂದೆ.

## ಭಿಕ್ಷೆಯಿಂದ ದಾಸೋಹವನ್ನು ಮಾಡಕೂಡದು.

(೧೦). ಅಹುದಹುದು. ಗೆದ್ದಲು ಮನೆಯ ಮಾಡಿ, ಸರ್ಪಂಗೆ ಇಂಬಾದಂತೆ, ನಾನತ್ತಣ ದ್ರವ್ಯವ ತಂದು, ಇತ್ತ ಮಾಡಿದಡೆ, ನನಗಿನ್ನೆತ್ತಣ ಮುಕ್ತಿ? ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನ ವೇದ್ಯವಾದ ಬಳಿಕ, ಅರಿವರತುಮರಹು ನಷ್ಟವಾಗಿ ಅಮುಳೇಶ್ವರಲಿಂಗದಲ್ಲಿ ನಿಜಪದವ ಬೆರಸಿ, ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

(೧೧). ತನುಮನ ಬಳಲದೆ ಉದ್ದಂಡವೃತ್ತಿಯಲ್ಲಿ ಧನವ ಗಳಿಸಿ ದಾಸೋಹವ ಮಾಡಿ ಭಕ್ತರಾದೆವೆಂಬವರ ಮುಖವ ತೋರದಿರಯ್ಯ ಎನಗೆ. ಅವನಲ್ಲಿಯೇ ಧನಚೋರ, ಅವಪಾಪಿ ಕೋಪಿ ಪರಿಭ್ರಷ್ಟ. ಅವನ ಕಾಯಕವ ವಿಚಾರಿಸದೆ ಅವನ ಮನೆಯಲ್ಲಿ ಹೊಕ್ಕು, ಲಿಂಗಾರ್ಚನೆಯ ಮಾಡುವ ಜಂಗಮಕ್ಕೆ ಏಳನೆಯ ಪಾತಕ. ಇಂತಪ್ಪ ಗುರುಶಿಷ್ಯ ಜಂಗಮರ ಬಾಳುವೆ ಹುಲಿ ಕವಿಲೆಯ ತಿಂದು ಮಿಕ್ಕಿದ ನರಿ ತಿಂದಂತಾಯಿತ್ತು ಕಾಣಾ ಕೂಡಲಚನ್ನಸಂಗಮದೇವಾ.

# ಪ್ರಸಾದದ ತತ್ವಗಳು.

(೧). ಲಿಂಗ ಗಂಭೀರನಿಸ್ಸಂಗಿಯು ಸಂಗವನೇನೆಂಬೆನಯ್ಯ? ಪರಮಾರ್ಥದಿಂದ ಗಮಿಸುವ ಗಮನವ ನಾನೇನೆಂಬೆನಯ್ಯ? ಕೂಡಲಸಂಗನ ಶರಣರು ಕಾಯದ ನೆವದಿಂದ ಅರ್ಪಿಸುವ ಬೆಡಗ ನಾನೇನೆಂಬೆ?

(೨). ತನುವ ಮುಟ್ಟಿಹ ಮನ, ಮನವ ಮುಟ್ಟಿಹ ತನು, ತನುಮನ ಮುಟ್ಟಿಹ ಸರ್ವ ಕರಣಂಗಳು ನೋಡಾ. ಕಾಯದ ಕರಣಂಗಳ ಮುಟ್ಟಿಹ ಜೀವನ ನೋಡಾ. ಕಾಯ ಜೀವ ಕರಣಂಗಳು ಶುದ್ಧ ಪರಮಾತ್ಮಲಿಂಗದಲ್ಲಿ ಮುಟ್ಟಿಸಬಲ್ಲಡೆ ಅದೇ ಅರ್ಪಿತ, ಅದೇ ಪ್ರಸಾದ ನೋಡಾ. ಆ ಪ್ರಸಾದಿ ಎಂದೂ ಪ್ರಳಯವಿರಹಿತನು ನೋಡಾ ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೩). ಲಿಂಗಕ್ಷೇತ್ರವೆಂಬ ಪವಿತ್ರಸ್ಥಲದಲ್ಲಿ ಪ್ರಸಾದಿ ಭಕ್ತಿಬೀಜವ ಬಿತ್ತಿ, ಶುದ್ಧ ಪದಾರ್ಥವ ಬೆಳೆದು, ಆ ಪದಾರ್ಥವ ಲಿಂಗಾರ್ಪಿತವ ಮಾಡಿ, ಆ ಪ್ರಸಾದವ ತಾನಿಲ್ಲದೆ ಭೋಗಿಸಿ ನಿತ್ಯ ಸುಖಿಯಾದನು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಪ್ರಸಾದಿ.

(೪). ಅರುವನೊಲ್ಲೆನೆಂದು ಅರಣ್ಯಕ್ಕೆ ಹೋಗುವದು ದುರುಳತನ. ಊರೊಳಗಿರ್ದರೆ ನರರ ಹಂಗು. ಅರಣ್ಯದೊಳಗಿರ್ದಡೆ ತರುಗಳ ಹಂಗು. ಬಂದ ಪದಾರ್ಥವ ಲಿಂಗಾರ್ಪಿತ ಮಾಡಿಕೊಂಬ ಶರಣನೇ ಜಾಣ ಸಕಳೇಶ್ವರಾ.

(೫). ನುಡಿವೆ. ನುಡಿಯಲಂಜುವೆನಯ್ಯ. ಲಿಂಗದ ವಿನೋದಕ್ಕಾರ್ಥವಾಗಿ ಗಮನವಂಕುರಿಸಿ, ಒಂದಾನೊಂದು ದೆಸೆಗೆ ಹೋಗುತ್ತಿಪ್ಪಾಗ, ಅರಣ್ಯಮಧ್ಯದಲ್ಲಿ ಹಸಿವೆದ್ದು ಅಸುವನಂಡಲೆವುತ್ತಿರುವಲ್ಲಿ, ತೃಷೆ ಎದ್ದು ಮನವ ಮತಿಗೆಡಿಸಿ ಹಲ್ಲು ಹತ್ತಿ, ನಾಲಿಗೆ ತರಗಾಗಿ ಮೂರ್ಛೆಯಾಗುತ್ತಿರುವ ಸಮಯದಲ್ಲಿ, ಖರ್ಜೂರ, ಮಾವು, ಜಂಬೂಫಲಂಗಳೊಳಗಾದ ಎಲ್ಲ ಫಲಂಗಳು ಕಾಯನ್ಮುಕ್ತಿ, ಜೀವನ್ಮುಕ್ತಿ ಎಂಬ ಸಂಜೀವನ ರಸವ ತುಂಬಿಕೊಂಡು ವೃಕ್ಷಂಗಳಡಿಯಲ್ಲಿ ಬಿದ್ದಿರಲು, ಕಣ್ಣಿನಲ್ಲಿ ನೋಡಿ, ಮನದಲ್ಲಿ ಬಯಸಿ, ಕೈಮುಟ್ಟಿ ಎತ್ತಿದೆನಾದಡೆ, ಎನ್ನ ವಿರತಿ ಎಂಬ ಪತಿವ್ರತಾಭಾವಕ್ಕೆ ಅದೇ ಹಾನಿ ನೋಡಾ. ಅದೇನು ಕಾರಣವೆಂದಡೆ, ಅಂಗಭೋಗ ಅನರ್ಪಿತ, ಲಿಂಗಭೋಗ ಪ್ರಸಾದವೆಂದು ಆದ್ಯರ ವಚನ ಸಾರುತ್ತಿದ್ದಾವೆ ನೋಡಾ. ಇದುಕಾರಣ ಅನರ್ಪಿತವ ಭುಂಜಿಸಿ ತನುವ

ರಕ್ಷಣ್ಯವ ಮಾಡಿ, ಶುನಕನ ಬಸಿರಲ್ಲಿ ಬಂದು, ಹೊಲೆಯರ ಬಾಗಿಲವ ಕಾಯ್ದು, ಹಲನಾಹಾರವನುಂಡುಟ್ಟು, ನರಕಕ್ಕಿಳಿಯಲಾರದೆ, ಮುಂದನರಿಯದೆ ಇಂತು ನುಡಿದೆನಯ್ಯಾ. ಸತಿಯ ಭಾಷೆಗೆ ಪತಿ ತಪ್ಪದಯ್ಯಾ. ರಕ್ಷಿಸಯ್ಯಾ ಘನಲಿಂಗಿಯು ಮೋಹದ ಚನ್ನಮಲ್ಲಿಕಾರ್ಜುನಾ.

(೬). ಕಾಯವೇ ಲಿಂಗಾರ್ಪಿತ. ಅರ್ಪಿತವೇ ಪ್ರಸಾದ. ಅದು ಮತ್ತೆ ಆರ್ಪಿತ ದರ್ಶನದಿಂದಲಾಯಿತ್ತು, ಸ್ಪರ್ಶನದಿಂದಲಾಯಿತ್ತು. ಸೋಂಕು ಸಂಬಂಧದ ಶುದ್ಧ ಸುಖವನರ್ಪಿಸಲರಿಯದೆ, ಬರಿಯವಾಗದ್ವೈತವ ನುಡಿವ ಕುಶಬ್ದರು ವಾಕ್ತಂತ್ರಿಗಳೆನಿಸುವರಯ್ಯಾ ಕೂಡಲಚನ್ನಸಂಗಮದೇವಾ.

(೭). ಅಂಗ ಲಿಂಗವಂತನಾದ ಮತ್ತೆ, ಮುಟ್ಟುವ ತಟ್ಟುವ ಸೋಂಕಿನಲ್ಲಿ ಸುಳಿವ, ಇದಿರಿಟ್ಟು ಬಂದ ಪದಾರ್ಥವ ಅಂಗಲಿಂಗಕ್ಕೆ ಕೊಟ್ಟು ಕೊಳಬೇಕು. ಪ್ರಾಣಲಿಂಗವಾದ ಮತ್ತೆ ಕರಣಂಗಳಿಗಿಂಬುಗೊಡದಿರಬೇಕು. ತನ್ನನರಿದುದಕ್ಕೆ ಉಭಯಾರೂಢನಾಗಿರಬೇಕು. ಉಭಯ ಏಕವಾದ ಮತ್ತೆ ಸಾಕು ಸತ್ಕ್ರಿಯೆ ನಿಷ್ಕಳಂಕಮಲ್ಲಿಕಾರ್ಜುನಾ.

**ಅರ್ಥ:**—ಅಂಗವು ಇಷ್ಟಲಿಂಗ ಸಂಬಂಧವುಳ್ಳುದಾದ ಬಳಿಕ ಶರಣ ತಾ ಹೋಗಿ ಮುಟ್ಟುವ, ತನ್ನ ಬಂದು ತಟ್ಟುವ, ತಟ್ಟಿ ಮುಟ್ಟುವ, ಸೋಂಕಿಗಳ ಸೋಂಕಿನಲ್ಲಿ ಚರಿಸುವ, ಸಾಕ್ಷಾತ್ಕಾರವಾಗಿ ಬಂದ ರೂಪು ಪದಾರ್ಥವನು ಅಂಗದಲ್ಲಿ ಸಂಬಂಧವಾದ ಇಷ್ಟಲಿಂಗಕ್ಕರ್ಪಿಸಿ, ಆ ಲಿಂಗಪ್ರಸಾದವ ಸ್ವೀಕರಿಸಬೇಕು. ಪ್ರಾಣದಲ್ಲಿ ಪ್ರಾಣಲಿಂಗ ಸಂಬಂಧವಾದ ಬಳಿಕ ಮನ ಮೊದಲಾದ ಇಂದ್ರಿಯಂಗಳ ವರ್ತನೆಗೆ ತೆರಪುಗುಡದಿರಬೇಕು. ಆತ್ಮನಲ್ಲಿ ಭಾವಲಿಂಗ ಸಂಬಂಧವ ತಿಳಿದುದಕ್ಕೆ ಜ್ಞಾನಕ್ರಿಯೆಗಳಲ್ಲಿ ಹತ್ತಿಗೆಯುಳ್ಳವನಾಗಿರಬೇಕು. ಅಂಗತ್ರಯಂಗಳು ಲಿಂಗತ್ರಯಂಗಳು ಸಮರಸವಾದ ಬಳಿಕ ಬಹಿರಂಗದ ಕ್ರಿಯೆಗಳನೆಲ್ಲವ ಬಿಟ್ಟು ಸ್ವಲೀಲಾನಂದ ಕ್ರಿವಿಡಿದು ಅಚರಿಸಬೇಕೆಂಬುದರ್ಥ.

(೮). ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ. ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ. ವಿಧಿಯ ಮೀರುವ ಅಸುರರಿಲ್ಲ. ಕ್ಷುಧೆವಿಧಿ ವ್ಯಸನಕ್ಕಂಜಿ ನಾ ನಿಮ್ಮ ಮರೆವೊಕ್ಕು ಬದುಕಿದೆ ಚನ್ನಮಲ್ಲಿಕಾರ್ಜುನಾ.

**ಅರ್ಥ**—ಕ್ಷುತ್ತಿನ ಭಾಧೆಯನು ಕಾಮವಿಕಾರವನು ಬಿಟ್ಟೆಹೆನೆಂದಡೆ ಯೂ ಅವು ಬಿಡದೆ ಹಿಡಿದು ಕಾಡುತ್ತಿಪ್ಪವಾಗಿ ದೇಹಭೋಗ ಹಿಂಗದು. ದೇಹ ಭೋಗ ಹಿಂಗದಾಗಿ, ಜನನ ಮರಣ ತಪ್ಪದು. ಅಂತು ದೇಹೇಂದ್ರಿಯ ವಿಷಯ ಸುಖ ಭೋಗಂಗಳನಾರೂ ಜಯಿಸಲರಿಯದೆ ಷಡುದರ್ಶನಾದಿಗಳು ದೇವತಾದಿ ಗಳೆಲ್ಲರು ಜನನ ಮರಣಕ್ಕೊಳಗಾದರು. ಲಿಂಗದ ಮರೆವೊಕ್ಕ ಶರಣ ಅಂಗ ಭೋಗಂಗಳನೆಲ್ಲವ ಲಿಂಗಕ್ಕರ್ಪಿಸಿ ಲಿಂಗಪ್ರಸಾದ ಭೋಗಿಯಾಗಿ ಶರಣ ನಿತ್ಯ ಮುಕ್ತನಾದನೆಂಬುದೀ ವಚನದ ತಾತ್ಪರ್ಯಾರ್ಥ

(೯). ಪರಿಯಾಣವೇ ಭಾಜನವೆಂಬರು. ಪರಿಯಾಣ ಭಾಜನವಲ್ಲ. ಲಿಂಗಕ್ಕೆ ತನ್ನ ಮನವೇ ಭಾಜನ. ಪ್ರಾಣವನು ಬೀಸರವೋಗದೆ ವಿೂಸಲಾಗಿ ಅರ್ಪಿಸಬಲ್ಲಡೆ ಕೂಡಿಕೊಂಡಿಪ್ಪ ನಮ್ಮ ಕೂಡಲಸಂಗಮದೇವಾ.

(೧೦). ಅರ್ಥ ಪ್ರಾಣಾಭಿಮಾನವನೊಪ್ಪಿಸಿದಲ್ಲಿ ಭಕ್ತನಪ್ಪನೇ? ಅಲ್ಲ. ಅದಿ ರುದ್ರನ ಮಗಳು ಆದಿಶಕ್ತಿ, ಆದಿಶಕ್ತಿಯ ಮಗ ವಿಷ್ಣು, ವಿಷ್ಣುವಿನ ಅರ್ಧಾಂಗಿ ಲಕ್ಷ್ಮಿ. ಈ ತೊತ್ತಿನ ತೊತ್ತಿನ ಪಡಿದೊತ್ತನೊಪ್ಪಿಸಿದಲ್ಲಿ ಭಕ್ತನ ಪ್ಪನೇ? ಅಲ್ಲ. ಎನ್ನ ಮನದೊಡೆಯ ಮಹಾದೇವ, ಎನ್ನ ಮನವ ನಿಮಗೊಪ್ಪಿಸಿ ನಾನು ಶುದ್ಧ ಕಾಣಾ ಕೂಡಲಸಂಗಮದೇವಾ.

(೧೧). ಜೀವ ಭಾವನದಿಂದ ಜೀವ ಜೀವನ ತಿಂದು ಜನನ ಮರ ಣಂಗಳಿಂದ ದುಃಖಪಡುತ್ತಿರ್ಪವು ನೋಡಾ ಸಕಲ ಪ್ರಾಣಿಗಳು. ಅದೆಂತೆಂದೊಡೆ, ಶ್ಲೋ॥ ಪೃಥ್ವೀ ಬೀಜಸ್ತಥಾ ಮಾಂಸಂ ಅಪ್ಪು ದ್ರವ್ಯ ಸುರಾಮಯಂ ಆತ್ಮ ಜೀವ ಸಮಾಯುಕ್ತಂ ಜೀವಂ ಜೀವೇನ ಭಕ್ಷಯೇತ್ ॥ ಎಂದುದಾಗಿ ಇಂತಪ್ಪ ಜೀವ ಮಯವಾದ ಪದಾರ್ಥವನ್ನು ಶುದ್ಧ ಸಂಸ್ಕಾರ ಮಾಡಿ ಪರಮಪ್ರಸಾದವಾಗಿ ಭೋಗಿಸುವಂಥ ಸದ್ಭಕ್ತಂಗೆ ಜನನ ಮರಣಂಗಳು ದೂರವಾಗಿರ್ಪವಯ್ಯಾ ಅಖಂಡೇಶ್ವರಾ.

(೧೨). ಮರಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು ಪ್ರಾಣವ ಕೊಂದುಂಡು ಶರೀರವ ಹೊರೆವ ದೋಷಕ್ಕೆ ಇನ್ನಾವುದು ವಿಧಿಯಯ್ಯಾ? ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ ಜೀವಜಾಲವಲ್ಲವೇ ಚರಾ ಚರವೆಲ್ಲ? ಅದು ಕಾರಣ ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಿದರು.

(೧೩). ಪ್ರಸಾದವೇ ಪರಮುಜ್ಞಾನ. ಪ್ರಸಾದವೇ ಪರಾಪರ. ಪ್ರಸಾದವೇ ಪರಬ್ರಹ್ಮ. ಪ್ರಸಾದವೇ ಪರಮಾನಂದ. ಪ್ರಸಾದವೇ ಗುರು. ಪ್ರಸಾದವೇ ಲಿಂಗ. ಪ್ರಸಾದವೇ ಜಂಗಮ. ಪ್ರಸಾದವೇ ಪರಿಪೂರ್ಣ. ಸೌರಾಷ್ಟ್ರ ಸೋಮೇಶ್ವರ ಲಿಂಗದ ಪ್ರಸನ್ನತೆಯೇ ಪ್ರಸಾದ. ಇಂತಪ್ಪ ಪ್ರಸಾದದ ಮಹಾತ್ಮೆಗೆ ನಮೋ ನಮೋ ಎನುತಿರ್ದೆನು.

---

## ಅರ್ಪಣದ ತತ್ವಗಳು.

(೧). ಗರ್ಭವುಳ್ಳ ಶಿಶುವಿಂಗೆ ತಾಯಿ ಉಂಡಲ್ಲಿಯೇ ಪರಿಣಾಮವಲ್ಲದೆ, ಬೇರೊಂದೆಡೆ ಮಾಡಿ ಉಣ್ಣೆಂದಡೆ, ಉಣಬಲ್ಲುದೇ ಅಯ್ಯ? ಪ್ರಾಣದೊಳಗೆ ಪ್ರಾಣವಾಗಿಪ್ಪ ಲಿಂಗಕ್ಕೆ ಆ ಶರಣನುಂಡಲ್ಲಿಯೇ ತೃಪಿಯಲ್ಲದೆ ಬೇರೆ ಊಡಿಸಿದಡೆ ಉಣಬಲ್ಲುದೇ ಅಯ್ಯ? ಸಂಯೋಗವಿಯೋಗಗಳಲ್ಲಿ ತಟ್ಟುವ ಅಣು ಬಿಂದು ಸುಖಾರ್ಥದನುಭವವು ಎನ್ನಿಂದಲ್ಲದೆ ಇಲ್ಲ ನೋಡಾ. ಲಿಂಗಕ್ಕೆ ಅಂಗವನರ್ಪಿಸಿ ಲಿಂಗದೊಳಗಿರ್ದು ಲಿಂಗಪ್ರಸಾದದೊಳಗೆ ಒಡಗೂಡಿ ಮಹಾಪ್ರಸಾದಿಯಾಗಿ, ಮಹಕ್ಕೆ ಮಹವಾಗಿ ಪರಕ್ಕೆ ಪರವಾಗಿ ಸಾವಧಾನ ಪ್ರಸಾದಿಯಾಗಿರ್ದೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೨). ಅಂಗಭೋಗವನೇ ಕುಂದಿಸಿ ಪ್ರಸಾದವನು ರುಚಿಸುವೆನೆಂಬ ಲಿಂಗವಂತರುಗಳೆಲ್ಲ ಅರಿವುಗೇಡಿಗಳಾಗಿ ಹೋದರು. ಅಂಗಭೋಗವೇ ಲಿಂಗಭೋಗ, ಅಂಗಭೋಗವು ಅರ್ಪಿತವಾಗಿ. ಸಾಕ್ಷಿ ॥ ಸ್ವಯಣಾಪಾಕಸಂಬಂಧಿ । ಭೋಗಜಂಗಮ ವರ್ಜಯೇತ್ ॥ ನಾಸ್ತಿ ಲಿಂಗಾರ್ಚನಂ ಶೈವ । ಪ್ರಸಾದಂ ನಿಷ್ಫಲಂ ಭವೇತ್ ॥ ಎಂದುದಾಗಿ ಅಂಗಕ್ಕೆ ಬಂದರುಚಿ ಲಿಂಗಕ್ಕೆ ಬಾರದೇ ? ಇದು ಕಾರಣ ಕೂಡಲಚನ್ನಸಂಗಯ್ಯ ಪಾಕಸಂಬಂಧಿಗೆ ಪ್ರಸಾದ ದೂರ.

(೩). ತನ್ನ ಮುಟ್ಟಿ ನೀಡಿದುದೇ ಪ್ರಸಾದ. ತನ್ನ ಮುಟ್ಟದೇ ನೀಡಿದುದೇ ಓಗರ. ಲಿಂಗಕ್ಕೆ ಕೊಟ್ಟುಕೊಂಡಡೆ ಪ್ರಸಾದ. ಇದು ಕಾರಣ ಇಂತಪ್ಪ ಭೃತ್ಯಾಚಾರಿಗಲ್ಲದೆ ಪ್ರಸಾದವಿಲ್ಲ ಗುಹೇಶ್ವರಾ.

(೪). ಅರ್ಪಿಸುವ ಸುಖವು ತಪ್ಪದೆ ಇಂಬುಗೊಂಡಿತ್ತಾಗಿ, ಅಲ್ಲಿಯೇ ಅರ್ಪಿತವಾಯಿತ್ತಯ್ಯ. ಅಂಗವೆಂಬ ಶಂಕೆ ತಾನೆತ್ತ ಹೋಯಿತ್ತೆಂದರಿಯೆ. ಕಾಯ

ಸುಖವೇ ಲಿಂಗಸುಖಕ್ಕೀಡಾಯಿತ್ತು. ಅಂತಪ್ಪ ಅರ್ಪಿತದಪ್ಪ ತಳೆಗೇರಿದಲ್ಲಿ ನೀ ಮುಂತಾಗಿರ್ದೆ ಕಾಣಾ ಕೂಡಲಸಂಗಮದೇವಾ.

( ೫ ). ಇಲ್ಲೆಂಬುದನಿಲ್ಲೆನ ಬಲ್ಲರೆ, ಅರ್ಪಿತ. ಉಂಟೆಂಬುದ ಉಂಟೆನ ಬಲ್ಲರೆ, ಪ್ರಸಾದ. ಆ ಪ್ರಸಾದವ ತಾನಿಲ್ಲದೆ ಕೊಳಬಲ್ಲರೆ ಪ್ರಸಾದಿ. ಆ ಪ್ರಸಾದಿಯು ಪರಮ ಪರಿಣಾಮವೇ ಪ್ರಸಾದವಾಗಿ, ಆ ಪ್ರಸಾದವೇ ತಾನಾಗಿ ಬೆಳಗುತ್ತಿಪ್ಪ ನಯ್ಯ ಕೂಡಲಚನ್ನಸಂಗಾ ನಿಮ್ಮ ಶರಣ.

**ಅರ್ಥ:**—ಇಲ್ಲದ ದೇಹ ಕರಣಾದಿಗಳು ತನಗೆ ಇಲ್ಲವೆಂದೆ ಅರಿದು ಕಳೆದು, ತನ್ನನೆಲ್ಲ ಪರಮಲಿಂಗವೆಯಾಗಿ ಕಾಣುತ್ತಿಪ್ಪನ ಸಮ್ಯಜ್ಞಾನ ಘಟಿಸಿದಗೆ, ಆ ಶರಣ ಲಿಂಗಕ್ಕೆ ಅರ್ಪಿತವಪ್ಪನೆಂಬುದೀಗ ಇಲ್ಲೆಂಬುದ ಇಲ್ಲೆನ ಬಲ್ಲರೆ ಅರ್ಪಿತವೆಂಬ ಶಬ್ದಕ್ಕರ್ಥ. ಅಂತು ಅನಿತ್ಯವ ಬಿಟ್ಟು ನಿತ್ಯಪರಿಪೂರ್ಣವನುಳ್ಳ ಪರಮಲಿಂಗವು ತಾನಾಗಿ ಕಂಡು ಭಾವಿಸುತ್ತಿರ್ದ ಆ ಸದ್ಭಾವ ಹಸ್ತದಿಂದ ಆ ಲಿಂಗವ ಕರಸ್ಥಲಕ್ಕೆ ತಂದು ಪ್ರತ್ಯಕ್ಷವಾಗಿ ಉಂಟೆನಿಸಿ, ಒಳಹೊರಗೆನ್ನದೆ ಸಂಶಯವಳಿದಷ್ಟೆ, ಆ ಶರಣ ತಾನೇ ಪರವಸ್ತುವೆಂಬುದೀಗ ಉಂಟೆಂಬುದ ಉಂಟೆನಬಲ್ಲರೆ ಪ್ರಸಾದವೆಂಬ ಶಬ್ದಕ್ಕರ್ಥ. ಅಂತು ತನ್ನ ನಿಜವಪ್ಪ ನಿರಾಕಾರ ಲಿಂಗವು ಸರ್ವಾಂಗವನೊಳಕೊಂಡು ಕರಸ್ಥಲದಲ್ಲಿ ಬೆಳಗುತ್ತಿರ್ದ ಇಷ್ಟಲಿಂಗದ ಪರಮ ಕಳೆ ಎಲ್ಲ ಶರಣ ತಾನೆಯಾಗಿ ಕಂಡು ಲಿಂಗವು ತಾನೆ ಎನುತಿರ್ದನಾಗಿ ಆ ನಾನೇ ಲಿಂಗವೆಂಬ ಅರಿವಿನ ತೋರಿಕೆಯು ಭಿನ್ನವಳಿದು ಲಿಂಗವೆಯಾಗಿ ಇರಬಲ್ಲ ಶರಣಂಗೆ ಲಿಂಗ ಪದ ಸಿದ್ಧಿಯಹುದೆಂಬುದೀಗ ಆ ಪ್ರಸಾದವ ತಾನಿಲ್ಲದೆ ಕೊಳಬಲ್ಲರೆ ಪ್ರಸಾದಿ ಎಂಬ ಶಬ್ದಕ್ಕರ್ಥ. ಅಂತು ಅಂಗ ಲಿಂಗ ಸಂಬಂಧವಾಗಿ ಅರಿವಿನ ತೋರಿಕೆಯ ಭಿನ್ನವಳಿದು ಲಿಂಗವೆಯಾಗಿರಬಲ್ಲ ಶರಣಂಗೆ ಮಹಾಲಿಂಗಾನಂದದಲ್ಲಿ ಪರಿಣಾಮಿಸಿದನಾಗಿ ಆ ಪರಿಣಾಮವೇ ಪರಮ ಪ್ರಸಾದವೆಂಬುದೀಗ ಆ ಪ್ರಸಾದಿಯು ಪರಮ ಪರಿಣಾಮವೇ ಪ್ರಸಾದವಾಗಿ ಎಂಬ ಶಬ್ದಕ್ಕರ್ಥ. ಅಂತು ಅಖಂಡ ಚಿತ್ ಪ್ರಕಾಶಲಿಂಗವೆಯಾಗಿಪ್ಪ ಶಿವಶರಣನೆಂಬುದೀಗ ಆ ಪ್ರಸಾದವೇ ತಾನಾಗಿ ಬೆಳಗುತ್ತಿಪ್ಪನಯ್ಯ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

( ೬ ) ಕಂಗಳು ನೋಡಿದ ಪದಾರ್ಥ ಲಿಂಗಾರ್ಪಿತವಲ್ಲ, ಕಿವಿಗಳು ಕೇಳಿದ ಪದಾರ್ಥ ಲಿಂಗಾರ್ಪಿತವಲ್ಲ. ನಾಸಿಕಮುಟ್ಟಿದ ಪದಾರ್ಥ ಲಿಂಗಾರ್ಪಿ

ತವಲ್ಲ. ಜಿಹ್ವೆ ಸೋಂಕಿದ ಪದಾರ್ಥ ಲಿಂಗಾರ್ಪಿತವಲ್ಲ. ತನುಸೋಂಕಿದ ಪದಾರ್ಥ ಲಿಂಗಾರ್ಪಿತವಲ್ಲ. ಸಂಕಲ್ಪ ವಿಕಲ್ಪ ವಿರಹಿತನಾಗಿ ರೂಪು ರುಚಿ ಗಂಧ ಸ್ಪರ್ಶ ಶಬ್ದವನು ಕೂಡಲಚನ್ನಸಂಗಯ್ಯ ನೀನರಿದಡೆ ಪ್ರಸಾದವೆನಗೆ.

( ೭ ). ಪಂಚೇಂದ್ರಿಯ ಮುಖದಲ್ಲಿ ಅಲ್ಲಲ್ಲಿ ತಾಗಿದ ಸುಖವ ಸುಖಿಸಿ ಲಿಂಗಾರ್ಪಿತವೆಂಬರು. ಅದು ಲಿಂಗಾರ್ಪಿತವೇ? ಅಲ್ಲಲ್ಲ. ಅರ್ಪಿತವ ಮಾಡದೆ, ಅನರ್ಪಿತವ ಹೊದ್ದದೆ ಅರ್ಪಿಸಬೇಕು. ಅರ್ಪಿಸುವ ಈ ಭೇದವಿಲ್ಲದನ್ನಕ್ಕರ ಶರಣನೆನಿಸಬಾರದು ಕೂಡಲಚನ್ನಸಂಗಯ್ಯ.

( ೮ ). ಘನವೆಂಬ ಮನದ ತಲೆವಾಗಿಲಲ್ಲಿ ಸದಾಸನ್ನಿಹಿತನಾಗಿ ನೀನಿಪ್ಪೆಯಲ್ಲಾ, ಎಲೆ ಅಯ್ಯ! ಬಂದ ಪದಾರ್ಥದ ಪೂರ್ವಾಶ್ರಯ ಕಳೆದು ನೀನೆಯವಧರಿಸುತ್ತಿಪ್ಪೆಯಲ್ಲಾ, ಎಲೆ ಅಯ್ಯ! ನಿಮ್ಮ ಮುಟ್ಟಿ ಬಹುದಲ್ಲದೆ, ನಿಮ್ಮ ಮುಟ್ಟದೆ ಬಾರದೆಂಬುದಕ್ಕೆ ನಿಮ್ಮ ಮನಕ್ಕೆ ನೀವೇ ಸಾಕ್ಷಿಯಲ್ಲಾ ಕೂಡಲಚನ್ನ ಸಂಗಮದೇವಾ!

( ೯ ). ಕಾಯಲಿಂಗಾರ್ಪಿತವಾದ ಬಳಿಕ ಕರ್ಮತ್ರಯಂಗಳು ಇರಲಾಗದು ನೋಡಾ. ಜೀವಲಿಂಗಾರ್ಪಿತವಾದ ಬಳಿಕ ಸಂಸಾರವ್ಯಾಪ್ತಿಯಾದ ಜೀವನಗುಣ ಇರಲಾಗದು. ಅದು ಅರ್ಪಿತವಲ್ಲ ನೋಡಾ. ಕರಣಂಗಳು ಲಿಂಗಾರ್ಪಿತವಾದ ಬಳಿಕ, ಕರಣಂಗಳೆಲ್ಲವು ಲಿಂಗಕಿರಣಂಗಳಾಗಿ ಆ ಲಿಂಗಕಿರಣವೇ ಹರಣವಾಗಿರಬೇಕು ನೋಡಾ. ಕಾಯದ ಜೀವದ ಕರಣದ ಗುಣವ ಕಳೆಯದೆ ಲಿಂಗಾರ್ಪಿತ ಪ್ರಸಾದಿಗಳೆಂಬ ಪ್ರಪಂಚಿಗಳ ಮೆಚ್ಚನು ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ.

( ೧೦ ). ಅಂಗಕ್ಕೆ ಆಚಾರವಳವಟ್ಟಲ್ಲಿ ಲಿಂಗಕ್ಕೆ ಆ ಅಂಗವೇ ಅರ್ಪಿತ. ಪ್ರಾಣಕ್ಕೆ ಪ್ರಸಾದ ಸಾಧ್ಯವಾದಲ್ಲಿ ಲಿಂಗಕ್ಕೆ ಆ ಪ್ರಾಣವೇ ಅರ್ಪಿತ. ಮನಮಹವ ನಿಂಬುಗೊಂಡಲ್ಲಿ, ಆ ಮಹಾಲಿಂಗಕ್ಕೆ ಮನವೇ ಅರ್ಪಿತ. ಭಾವಕ್ಕೆ ಭ್ರಮೆಯಳಿದು, ನಿಭ್ರಾಂತನಾದಲ್ಲಿ ಲಿಂಗಕ್ಕೆ ಆ ಭಾವವೇ ಅರ್ಪಿತ. ಜ್ಞಾತೃಜ್ಞಾನಜ್ಞೇಯ ಸಂಪುಟವಾದಲ್ಲಿ ಅರಿವು ನಿರ್ಣಯನಿಃಪತಿಯಾಗಿ ಕುರುಹುಗೆಟ್ಟಲ್ಲಿ ಆ ಲಿಂಗಕ್ಕೆ ಆ ಅರಿವೇ ಅರ್ಪಿತ. ಇಂತು ಸರ್ವಾಂಗ ಅರ್ಪಿತವಾಗಿ ಲಿಂಗಕ್ಕೆ

ಒಡೆತನವನಿತ್ತ ಕಾರಣ ಕೂಡಲಚನ್ನಸಂಗಯ್ಯನಲ್ಲಿ ನಾ ನೀನೆಂಬುದಿಲ್ಲದೆ ನಿಂದ ನಿಜದ ಮಹಾಪ್ರಸಾದಿ.

**ಅರ್ಥ**:—ಜ್ಞಾತೃವೆಂದರೆ ಜೀವನು, ಜ್ಞಾನವೆಂದರೆ ಅರಿವು, ಜ್ಞೇಯು ವೆಂದರೆ ಅರುಹಿಸಿಕೊಂಬ ಲಿಂಗ, ಅಂತು ಶರಣ ತನ್ನ ಜೀವ ಸಂಬಂಧವಾದ ಅಂಗಪ್ರಾಣಮನ ಭಾವಂಗಳೆಲ್ಲವನು ಜ್ಞಾನಮುಖದಿಂ ಅಂಗಕ್ಕರ್ಪಿಸಿ ಜೀವ ಸ್ವರೂಪವಾದ ಅಂಗವೆಲ್ಲವು ಲಿಂಗವ ಕೂಡಿ ಶರಣನೆಲ್ಲ ಲಿಂಗವೆಯಾಗಿ ಲಿಂಗ ತಾನೆಂಬ ಅರವಿನ ತೋರಿಕೆಯುಡಗಿ ಲಿಂಗವೇ ಉಳಿದಲ್ಲಿ ಲಿಂಗವಾಗಿರ್ದ ಶರಣ ನೆಂಬುದೀ ವಚನದ ತಾತ್ಪರ್ಯಾರ್ಥ.

(೧೧). ರೂಪೆಂದಡೆ ರುಚಿಯಾಯಿತ್ತು. ರುಚಿ ಎಂದಡೆ ಸವಿಯಾ ಯಿತ್ತು. ಸವಿ ಎಂದಡೆ ಸಂದಾಯಿತ್ತು. ರೂಪೆನ್ನದೆ, ರುಚಿ ಎನ್ನದೆ, ಸವಿ ಎನ್ನದೆ, ಸಂದೆನ್ನದೆ ಇದ್ದ ಪ್ರಸಾದಿಗೆ ನಮೋ ನಮೋ ಎಂಬೆ ಕೂಡಲಚನ್ನಸಂಗಯ್ಯ.

**ಅರ್ಥ**:—ರೂಪುರುಚಿತೃಪ್ತಿಗಳ ತಾನರಿದರಿದು ಲಿಂಗವ ಭಿನ್ನವಿಟ್ಟು ಅರ್ಪಿಸಿದಡೆ ಅರ್ಪಿತವಾಗದು. ಲಿಂಗದಲ್ಲಿ ಅನನ್ಯಭಾವಿಯಾಗಿ ಭಿನ್ನವಳಿದು ಲಿಂಗಭೋಗೋಪಭೋಗಿಯಾದ ಶರಣನೇ ಲಿಂಗವೆಂದು ನಮಸ್ಕಾರವ ಮಾಡ ಬೇಕೆಂಬುದೀಗ ಈ ವಚನದ ತಾತ್ಪರ್ಯಾರ್ಥ.

(೧೨). ಗುರುಲಿಂಗ ಜಂಗಮದ ಏಕಾರ್ಥವ ನೇನೆಂದುಪಮಿಸಬ ಹುದು? ಗುರುಪ್ರಾಣ, ಲಿಂಗದೇಹ, ಜಂಗಮ ಆಪ್ಯಾಯನವೆಂದುದಾಗಿ, ಪ್ರಾಣ ಮುಟ್ಟಿ ಬಂದರೇನು, ಕಾಯಮುಟ್ಟಿ ಬಂದರೇನು, ಜಿಹ್ವೆಮುಟ್ಟಿ ಬಂದರೇನು, ಜಂಗಮ ಮುಖ ಆಪ್ಯಾಯನವೆಂದುದಾಗಿ, ಇದು ಕಾರಣ ಕೂಡಲಚನ್ನಸಂಗ ಮದೇವ ಜಂಗಮ ಪ್ರಸಾದ ಸರ್ವಸಿದ್ಧಿ.

**ಅರ್ಥ**:—ಗುರು ಪ್ರಣವಮಂತ್ರ ಸ್ವರೂಪವಾದ ಕಾರಣ ಆ ಶ್ರೀಗುರು ವಿನ ಪ್ರಣವ ಮಂತ್ರ ಪ್ರಾಣವ ವೇಧಿಸಿ ವಾಯು ಪ್ರಾಣವೆಲ್ಲ ಲಿಂಗಪ್ರಾಣವಾ ಯಿತ್ತೆಂಬುದೀಗ ಗುರುಪ್ರಾಣವೆಂಬ ಶಬ್ದಕ್ಕರ್ಥ. ಅಂತಪ್ಪ ಪ್ರಾಣಲಿಂಗದ ಕಳೆ ತಾನೇ ಇಷ್ಟಲಿಂಗವಾಗಿ ಕರಸ್ಥಲಕ್ಕೆ ಬಂದು ದೇಹೇಂದ್ರಿಯಂಗಳನೊಳಕೊಂಡು ಸರ್ವಾಂಗ ಲಿಂಗವಾಗಿ ಲಿಂಗಕಾಯವೆನಿಸಿತ್ತೆಂಬುದೀಗ ಲಿಂಗದೇಹವೆಂಬ

ಶಬ್ದಕ್ಕರ್ಥ. ಅಂತು ಒಳಹೊರಗೆನ್ನದೆ ಸರ್ವಾಂಗ ಲಿಂಗವಾದ ಶರಣನಲ್ಲಿ ವಿಷಯ ತೃಷ್ಣೆಯಿಂದ ಸಂಚಲಿಸುವ ಕರಣಂಗಳೆಲ್ಲ ಜ್ಞಾನಜಂಗಮವೆಂಬುದೀಗ ಜಂಗಮದ ಆಪ್ಯಾಯನವೆಂದುದಾಗಿ ಎಂಬ ಶಬ್ದಕ್ಕರ್ಥ. ಅಂತು ಸರ್ವಾಂಗಲಿಂಗವಾದ ಶರಣನ ಕರಣಂಗಳೆಲ್ಲವೂ ಚರಲಿಂಗವಾದ ಕಾರಣ ಆ ಕರಣಂಗಳ ವಿಷಯತೃಷ್ಣೆ ಎಲ್ಲವೂ ಚರಲಿಂಗದ ತೃಪ್ತಿಯಾಯಿತ್ತು. ಅಂತು ದೇಹ ಪ್ರಾಣ ಇಂದ್ರಿಯಂಗಳಲ್ಲಿ ಬಪ್ಪ ಸುಖಂಗಳನೆಲ್ಲವ ಬಯಸಿ ಅರಿದು ಸುಖಿಸುವ ದೀಪನವೆಲ್ಲ ಒಂದೇ ಜಂಗಮವೆಂಬುದೀಗ ಪ್ರಾಣಮುಟ್ಟಿ ಬಂದಡೇನು, ಕಾಯಮುಟ್ಟಿ ಬಂದಡೇನು, ಜಿಹ್ವೆ ಮುಟ್ಟಿ ಬಂದಡೇನು, ಜಂಗಮಮುಖ ಆಪ್ಯಾಯನವೆಂದುದಾಗಿ ಎಂಬ ಶಬ್ದಕ್ಕರ್ಥ. ಅಂತು ಶರಣನ ಅಂಗವೆಲ್ಲ ಇಷ್ಟಲಿಂಗಸ್ವರೂಪು ಪ್ರಾಣವೆಲ್ಲ ಪ್ರಾಣಲಿಂಗಸ್ವರೂಪು, ಅರಿವ ಕರಣಂಗಳೆಲ್ಲ ಜಂಗಮಸ್ವರೂಪು, ಆದಕಾರಣ ಜಂಗಮದ ಪ್ರಸಾದವು ಇಷ್ಟಲಿಂಗ ಪ್ರಾಣಲಿಂಗಂಗಳಿಗೆ ಸಮರ್ಪಿಸಲಾಯಿತ್ತು. ಅಂತು ಸಮರ್ಪಿಸಿ ತ್ರಿವಿಧಲಿಂಗ ಏಕವಾಯಿತ್ತು. ಶರಣಂಗೆ ಅಂತಾದುದ ಉಪಮಿಸಿ ಹೇಳಬಾರದೆಂಬುದೀಗ ಗುರುಲಿಂಗ ಜಂಗಮದ ಏಕಾರ್ಥವನೇನೆಂದು ಉಪಮಿಸಬಹುದು ಎಂಬ ಶಬ್ದಕ್ಕರ್ಥ. ಅಂತು ಉಪಮಿಸಬಾರದ ಲಿಂಗಪದಸಿದ್ಧಿಯಾಯಿತ್ತು ಶರಣಂಗೆ ಜಂಗಮಪ್ರಸಾದದಿಂದಲೆಂಬುದೀಗ ಇದು ಕಾರಣ ಜಂಗಮಪ್ರಸಾದ ಸರ್ವಸಿದ್ಧಿ ಎಂಬ ಶಬ್ದಕ್ಕರ್ಥ.

(೧೩). ಪಿಂಡಪ್ರಸಾದಿಗಳ ಕಂಡುಬಲ್ಲೆ, ಇಂದ್ರಿಯ ಪ್ರಸಾದಿಗಳ ಕಂಡುಬಲ್ಲೆ, ಕರಣಪ್ರಸಾದಿಗಳ ಕಂಡುಬಲ್ಲೆ, ಕಾಯಪ್ರಸಾದಿಗಳ ಕಂಡುಬಲ್ಲೆ, ಜೀವಪ್ರಸಾದಿಗಳ ಕಂಡುಬಲ್ಲೆ, ಭಾವಪ್ರಸಾದಿಗಳ ಕಂಡುಬಲ್ಲೆ. ಲಿಂಗಪ್ರಸಾದಿಗಳಪೂರ್ವವಯ್ಯ. ಭೋಗಲಿಂಗಕ್ಕೆ ಭೋಗವನಿತ್ತು ಭೋಗಿಸಬಲ್ಲ ಅಚ್ಚಲಿಂಗಪ್ರಸಾದಿ. ಸೌರಾಷ್ಟ್ರ ಸೋಮೇಶ್ವರ ಲಿಂಗವ ಭೋಗಸಹಿತ ಬೆರಿಸಿದನಾ ಪ್ರಸಾದಿ.

# ಕಾಯಾರ್ಪಣ, ಕರಣಾರ್ಪಣ, ಭಾವಾರ್ಪಣ.

## ( ೧ನೇ ವಿಧ. )

### (೧) ಅಂಗಮನ ತೃಪ್ತಿಗಳ ಅರ್ಪಣ.

(೧). ಇಷ್ಟಲಿಂಗಕ್ಕೆ ಅಂಗವನರ್ಪಿತವ ಮಾಡಬೇಕು. ಪ್ರಾಣಲಿಂಗಕ್ಕೆ ಮನವ ಸಮರ್ಪಿಸಬೇಕು. ಭಾವಲಿಂಗಕ್ಕೆ ತೃಪ್ತಿಯನರ್ಪಿತವ ಮಾಡಬೇಕು. ಈ ಮರ್ಮವನರಿದು ಮಾಡಬಲ್ಲಡೆ ಪ್ರಸಾದಿ. ಅದೆಂತೆಂದೊಡೆ, "ಇಷ್ಟಲಿಂಗಾರ್ಪಿತಂ ಅಂಗಂ ಪ್ರಾಣಲಿಂಗಾರ್ಪಿತಂ ಮನಃ । ಭಾವಲಿಂಗಾರ್ಪಿತಂ ತೃಪ್ತಿ ಇತಿಭೇದಂ ವರಾನನೇ ॥ ಎಂದುದಾಗಿ ಲಿಂಗಕ್ಕೆಯೂ ತನಗೆಯೂ ಎಡೆ ತೆರಹಿಲ್ಲದೆ ಲಿಂಗಸಹಿತವಾಗಿಯೇ ಕೇಳುವ, ಲಿಂಗಸಹಿತವಾಗಿಯೇ ಘ್ರಾಣಿಸುವ, ಲಿಂಗಸಹಿತವಾಗಿಯೇ ರುಚಿಸುವ, ಲಿಂಗಸಹಿತವಾಗಿಯೇ ನೋಡುವ, ಲಿಂಗಸಹಿತವಾಗಿಯೇ ತೊಳಗುವ ಇಂತಪ್ಪ ಮಹಾಮಹಿಮ ಸದ್ಭಕ್ತನ ಅಂಗವೆಲ್ಲವೂ ಲಿಂಗ, ಸಂಗವೆಲ್ಲವೂ ಲಿಂಗ, ಅಂಗಸಂಗವೆಲ್ಲವೂ ಲಿಂಗಸಂಗವಾದ ಕಾರಣ, ಅಂಗಕ್ರಿಯೆಗಳೆಲ್ಲವೂ ಲಿಂಗಕ್ರಿಯೆಗಳಾದ ಕಾರಣ, ಅಂಗಭೋಗವೆಲ್ಲವೂ ಲಿಂಗಭೋಗವಾದ ಕಾರಣ, ಇಂತಪ್ಪ ಮಹಾಮಹಿಮ ಸದ್ಭಕ್ತನ ಶ್ರೀಚರಣಕ್ಕೆ ಎನ್ನ ಶಿರವನರ್ಪಿಸಿ ಪೂಜಿಸುವೆ ಕಾಣಾ ಶುದ್ಧ ಸಿದ್ಧ ಪ್ರಸಿದ್ಧ ಪ್ರಭುವೇ ಶಾಂತ ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಸದ್ಭಕ್ತನ ನಿಲವಿನ ಪರಿ ನೀವೇ ಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯ? ನಿಮ್ಮ ಧರ್ಮ, ನಿಮ್ಮ ಧರ್ಮ, ನಿಮ್ಮ ಧರ್ಮ.

(೨). ಕಾಯಕ್ಕೆ ಇಷ್ಟಲಿಂಗವೆಂದೆಂಬಿರಿ, ಮನಕ್ಕೆ ಪ್ರಾಣಲಿಂಗವೆಂದೆಂಬಿರಿ, ಆತ್ಮಕ್ಕೆ ತೃಪ್ತಿಲಿಂಗವೆಂದೆಂಬಿರಿ. ಈ ತ್ರಿವಿಧಲಿಂಗದಲ್ಲಿ ತ್ರಿವಿಧ ಸಂಬಂಧವಾಯಿತ್ತೆಂಬಿರಿ. ಮನಭಾವಂಗಳಲ್ಲಿ ಅರ್ಪಿತ, ಕ್ರಿಯೆಯಲ್ಲಿ ಅರ್ಪಿತವಿಲ್ಲ ಎಂಬುದು ಅದು ಅರುಹೇ? ಕ್ರಿಯಕ್ಕೂ ಜ್ಞಾನಕ್ಕೂ ಭಿನ್ನ ಉಂಟೇ ಕುರಿಮಾನವ? ಇದು ಕಾರಣ ಕಾಯದ ಕೈಮುಟ್ಟಿ ಜ್ಞಾನಾರ್ಪಣ. ಭಾವದ ಕೈಮುಟ್ಟಿ ಪರಿಣಾಮಾರ್ಪಣ. ಈ ತ್ರಿವಿಧದೊಳಗೆ ಒಂದು ಬಿಟ್ಟು ಒಂದಕ್ಕೆ ಅರ್ಪಿಸಲಾಗದಯ್ಯ. ಇದು ಕಾರಣ ಎಷ್ಟು ಅರುಹುಳ್ಳಾತನಾದರೂ ಆಗಲಿ, ಇಷ್ಟ ಲಿಂಗಾರ್ಪಿತವಿಲ್ಲದೆ ಪ್ರಾಣಲಿಂಗಾರ್ಪಿತವಾಯಿತೆಂದು ಅನ್ನಪಾನಂಗಳ ಮುಖ್ಯವಾಗಿ ರೂಪಾಗಿ ಬಂದ ಸಮಸ್ತ ಪದಾರ್ಥಂಗಳನ್ನು ಇಷ್ಟಲಿಂಗಕ್ಕೆ ಕೊಡದೆ

ಬ್ಯಾಯಿಚ್ಚೆಗೆ ತಿಂಬ ನರಕಿ ಜೀವಿಯ ಎನಗೊಮ್ಮೆ ತೋರದಿರಯ್ಯಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

## ಮೇಲ್ಕಂಡ ಅರ್ಪಣದ ಪರಿಣಾಮ.

(೩). ಅಂಗವ ಲಿಂಗಮುಖದಿಂದರ್ಪಿಸಿ, ಅಂಗ ಅನಂಗವಾಯಿತ್ತು. ಮನವ ಅರಿವಿಂಗರ್ಪಿಸಿ, ಮನಲಯವಾಯಿತ್ತು. ಭಾವತೃಪ್ತಿಗರ್ಪಿಸಿ ಭಾವಬಯಲಾಯಿತ್ತು. ಅಂಗಮನ ಭಾವವಳಿದ ಕಾರಣ ಕಾಯ ಅಕಾಯವಾಯಿತ್ತು. ಎನ್ನ ಕಾಯದ ಸುಖದ ಭೋಗವ ಲಿಂಗವೇ ಭೋಗಿಸುವದಾಗಿ, ಶರಣ ಸತಿ ಲಿಂಗಪತಿಯಾದೆನು. ಇದು ಕಾರಣ ಚನ್ನಮಲ್ಲಿಕಾರ್ಜುನನೆಂಬ ಗಂಡನ ಒಳ ಹೊಕ್ಕು ಬೆರಸಿದೆನು.

(೪). ಕಾಯಲಿಂಗಾರ್ಪಿತವಾದರೆ ಕರ್ಮವಿಲ್ಲ. ಜೀವಲಿಂಗಾರ್ಪಿತವಾದರೆ ಜನಿತವಿಲ್ಲ. ಭಾವಲಿಂಗಾರ್ಪಿತವಾದರೆ ಭ್ರಮೆ ಇಲ್ಲ. ಅರಿವು ಲಿಂಗಾರ್ಪಿತವಾದ ಬಳಿಕ, ಆ ಪ್ರಸಾದವ ಗ್ರಹಿಸಿದನಾಗಿ, ಕುರುಹು ಮುನ್ನಿಲ್ಲ. ಮಾಯಾಪ್ರಪಂಚವನತಿಗಳೆದು ನಿಮಗರ್ಪಿಸಬಲ್ಲನಾಗಿ ಆತನೇ ಶರಣ. ಬೆಚ್ಚಂತೆ ಬೆರಸಿ ಅಚ್ಚೊತ್ತಿದಂತೆ, ಅಪ್ಪು ಒಳಕೊಂಡ ಆಲಿಕಲ್ಲಿನಂತೆ, ಜ್ಯೋತಿಯುಂಡ ತೈಲದಂತೆ, ಜಲ ಉಂಡ ಮುತ್ತಿನಂತೆ, ಬಯಲುಂಡ ಬೆಳಗಿನಂತೆ ಇದ್ದರಾಗಿ ಮಹಾಘನ ಸದ್ಗುರು ಸಿದ್ಧಸೋಮನಾಥ ನಿಮ್ಮ ಶರಣರ ಹೆಸರಡಗಿದ ಲಿಂಗೈಕ್ಯರೆಂಬೆ.

## ೨ನೇ ವಿಧ.

### (೨). ರೂಪುರುಚಿ ತೃಪ್ತಿಗಳ ಅರ್ಪಣ.

(೫). ರೂಪಾಗಿ ಬಂದುದ ಕಾಯದ ಕಯ್ಯಲ್ಲಿ ಕೊಡುವದು. ರುಚಿಯಾಗಿ ಬಂದುದ ಮನದ ಕಯ್ಯಲ್ಲಿ ಕೊಡುವದು. ತೃಪ್ತಿಯಾಗಿ ಬಂದುದ ಭಾವದ ಕಯ್ಯಲ್ಲಿ ಕೊಡುವದು. ಅರ್ಪಿಸುವ ತೆರನಿದು. ರೂಪುರುಚಿ ತೃಪ್ತಿಯ ಅನುವನರಿದಡೆ ಪ್ರಸಾದಿಯಯ್ಯಾ. ಸಾಕ್ಷಿ:—ಇಷ್ಟಾರ್ಪಿತಂ ಚ ರೂಪಿಣಾಂ। ಪ್ರಾಣಾರ್ಪಿತಂ ಚರುಚಿಸ್ತಥಾ॥ ತೃಪ್ತ್ಯಾರ್ಪಿತಂಚ ಸುಜ್ಞಾನಂ। ಏತಾನಿ ತ್ರಿವಿಧಾತ್ಮಕಂ॥ ಇಂತೆಂದುದಾಗಿ ರೂಪುರುಚಿತೃಪ್ತಿಯ ಕೊಡಬಲ್ಲಡೆ ಭಕ್ತನಯ್ಯಾ ಕೂಡಲಚನ್ನಸಂಗಮದೇವರಲ್ಲಿ.

(೬). ರೂಪಾಗಿ ಬಂದ ಪದಾರ್ಥವ ಕಾಯದ ಕಯ್ಯ್ಲಿ ಇಷ್ಟಲಿಂಗಕ್ಕೆ ಕೊಟ್ಟು ಶುದ್ಧಪ್ರಸಾದವ ಕೊಂಡು ಸರ್ವಾಂಗ ಶುದ್ಧನಾದೆನು ನೋಡಾ. ರುಚಿಯಾಗಿ ಬಂದ ಪದಾರ್ಥವ ಮನದಕಯ್ಯಲ್ಲಿ ಜಿಹ್ವೆಯ ಮುಖದಲ್ಲಿ ಪ್ರಾಣಲಿಂಗಕ್ಕೆ ಕೊಟ್ಟು ಸಿದ್ಧಪ್ರಸಾದ ಗ್ರಾಹಕನಾಗಿ ಮನನಿರ್ಮಲವಾಯಿತ್ತು ನೋಡಾ. ಪರಿಣಾಮವಾಗಿ ಬಂದ ಪದಾರ್ಥವ ಭಾವದಕಯ್ಯಲ್ಲಿ ಹೃದಯ ಮುಖದಲ್ಲಿ ತೃಪ್ತಿಲಿಂಗಕ್ಕೆ ಕೊಟ್ಟು ಪ್ರಸಿದ್ಧ ಪ್ರಸಾದವ ಕೊಂಡು ಶುದ್ಧ ಪರಮಾತ್ಮನಾದೆನು ನೋಡಾ. ಈ ಕ್ರಿಯಾಜ್ಞಾನಾರ್ಪಣವಿರಬೇಕು, ಕಾಯವು ಬಯಲವಾಹನ್ನಕ್ಕರ. ಈ ಕಾಯವು ಜೀವವು ಪರತತ್ವದಲ್ಲಿ ಅಡಗದೆ ಬರಿಯವಾಗದ್ವೈತದಿಂದ ತಾನೇ ಲಿಂಗವಾದೆನೆಂದು ಲಿಂಗಾರ್ಪಣ ಬಿಡುವ ನಾಯ ಮುಖವ ಎನಗೊಮ್ಮೆ ತೋರದಿರಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

## ಮೇಲ್ಕಂಡ ಅರ್ಪಣದ ಪರಿಣಾಮ.

(೭). ರೂಪನರ್ಪಿಸಿದ ಬಳಿಕ ಅಂಗವೆಂಬುದಿಲ್ಲ. ರುಚಿಯನರ್ಪಿಸಿದ ಬಳಿಕ ಪ್ರಾಣವೆಂಬುದಿಲ್ಲ. ಭಾವನಿರ್ಭಾವವ ನಿಜನುಂಗಿತ್ತು. ಅರ್ಪಿಸುವ ಪರಿಇನ್ನೆಂತೋ ? ರೂಪು ಲಿಂಗ, ರುಚಿ ಜಂಗಮ, ಅರ್ಪಿಸುವ ಅರ್ಪಣ ಮುನ್ನಿಲ್ಲ ಕೂಡಲಚನ್ನಸಂಗಮದೇವಾ.

**ಅರ್ಥ:**—ದೇಹಸಂಬಂಧವಾದ ಇಂದ್ರಿಯ ವಿಷಯಗಳ ರೂಪೆಲ್ಲವ ಇಷ್ಟಲಿಂಗಕ್ಕರ್ಪಿಸಿದ ಬಳಿಕ ರೂಪಾಗಿರ್ದ ದೇಹೇಂದ್ರಿಯ ವಿಷಯಂಗಳೆಲ್ಲ ಲಿಂಗವಾದವೆಂಬುದೀಗ, ರೂಪನರ್ಪಿಸಿದ ಬಳಿಕ ಅಂಗವೆಂಬುದಿಲ್ಲ ಎಂಬ ಶಬ್ದಕ್ಕರ್ಥ. ರೂಪಿನೊಳಗಣ ರುಚಿಯೇ ಪ್ರಾಣಸಂಬಂಧ. ಅಂತಪ್ಪ ಪ್ರಾಣಸಂಬಂಧವಾದ ರುಚಿಯ ಪ್ರಾಣಲಿಂಗಕ್ಕೆ ಅರ್ಪಿಸಿದ ಬಳಿಕ ಪ್ರಾಣನು ಲಿಂಗವಾಯಿತ್ತೆಂಬುದೀಗ ರುಚಿಯನರ್ಪಿಸಿದ ಬಳಿಕ ಪ್ರಾಣವೆಂಬುದಿಲ್ಲವೆಂಬ ಶಬ್ದಕ್ಕರ್ಥ. ಭಾವಸಂಬಂಧವೀಗ ತೃಪ್ತಿ. ಅಂತಪ್ಪ ತೃಪ್ತಿ ಎಂಬುದೀಗ ನಿರ್ಭಾವ. ಅಂತು ಭಾವ ಸಂಬಂಧವಾದ ತೃಪ್ತಿಯೇ ಮಹಾಲಿಂಗಕ್ಕರ್ಪಿತವಾದ ಬಳಿಕ ಭಾವತೃಪ್ತಿ ಮಹಾಲಿಂಗವಾಯಿತ್ತೆಂಬುದೀಗ ಭಾವನಿರ್ಭಾವವ ನಿಜನುಂಗಿತ್ತು ಎಂಬ ಶಬ್ದಕ್ಕರ್ಥ. ಅಂತು ಶರಣನ ದೇಹ ಮೊದಲಾದ ರೂಪಾದಿ ಪದಾರ್ಥಂಗಳೆಲ್ಲ ಇಷ್ಟಲಿಂಗಸ್ವರೂಪಾಯಿತ್ತು. ಪ್ರಾಣ ಮೊದಲಾದ ರುಚಿ ಎಲ್ಲ ಚೈತನ್ಯ ಜ್ಞಾನ

ಜಂಗಮವಾಯಿತ್ತಾಗಿ, ಅರ್ಪಿಸುವ ಅರ್ಪಿಸಿಕೊಂಬವೆರಡಿಲ್ಲ. ಅರ್ಪಿಸುವ ಅರ್ಪಿಸಿಕೊಂಬವೆರಡೂ ಲಿಂಗವೆಂಬುದೀಗ ಅರ್ಪಿಸುವ ಪರಿ ಇನ್ನೆಂತೋ ರೂಪು ಲಿಂಗ ರುಚಿ ಜಂಗಮ ಅರ್ಪಿಸುವ ಅರ್ಪಣ ಮುನ್ನಿಲ್ಲ ಎಂಬ ಶಬ್ದಕ್ಕರ್ಥ.

## ೧ನೇ ವಿಧಕ್ಕೂ ೨ನೇ ವಿಧಕ್ಕೂ ಇರುವ ಸಂಬಂಧ.

(೮). ಇಷ್ಟಲಿಂಗಾರ್ಪಣವಾವುದು, ಪ್ರಾಣಲಿಂಗಾರ್ಪಣವಾವುದು, ಭಾವಲಿಂಗಾರ್ಪಣವಾವುದು ಎಂದರೆ ಹೇಳಿಹೆಕೇಳಿರಯ್ಯ. ಇಷ್ಟಲಿಂಗಕ್ಕೆ ಶರೀರವೇ ಸಮರ್ಪಣ, ಪ್ರಾಣಲಿಂಗಕ್ಕೆ ಮನವೇ ಸಮರ್ಪಣ, ಭಾವಲಿಂಗಕ್ಕೆ ತೃಪ್ತಿಯೇ ಸಮರ್ಪಣ. ಶರೀರವೆಂದಡೆ ರೂಪು, ಮನವೆಂದಡೆ ರುಚಿ, ತೃಪ್ತಿ ಎಂಡಡೆ ಸಂತೋಷ. ಈ ತೆರನನರಿದು ಲಿಂಗಕ್ಕೆ ಸಮರ್ಪಿಸಿ ಪ್ರಸಾದಭೋಗಿಸ ಬಲ್ಲಾತನೇ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿ ಎಂದು ಹೇಳಲ್ಪಟ್ಟಿತಯ್ಯ ಮಹಾ ಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ.

(೯). ರೂಪಾರ್ಪಣಕ್ಕೆ ಅಂಗವೇ ಆದಿ. ಆ ಪ್ರಸಾದಲಿಂಗಕ್ಕೆ ಪ್ರಾಣ ವೇ ಆದಿ. ಆ ಪ್ರಾಣಾಂಗವೇ ರುಚಿಯಾರ್ಪಣಕ್ಕಾದಿ. ರೂಪು ರುಚಿ ಉಭ ಯಾರ್ಪಣದ ಸುಖವೇ ಭಾವಾರ್ಪಣವು. ಅಂಗ ಪ್ರಾಣ ಭಾವಂಗಳಲ್ಲಿ ರೂಪು ರುಚಿ ತೃಪ್ತಿಯನರಿದು ಕೊಟ್ಟುಕೊಂಬಾತಂಗೆ ನಿಜಗುರು ಸ್ವತಂತ್ರ ಸಿದ್ಧಲಿಂಗೇ ಶ್ವರನ ನಿತ್ಯಪ್ರಸಾದ ದೊರೆಕೊಂಬುದು.

## ೩ನೇ ವಿಧ.

### (೩) ತನುಮನಧನಗಳ ಅರ್ಪಣ.

(೧೦). ಭಕ್ತನಾದ ಮೇಲೆ ಗುರುವಿಗೆ ತನುವ ನೀಡಬೇಕು, ಲಿಂಗಕ್ಕೆ ಮನವ ನೀಡಬೇಕು, ಜಂಗಮಕ್ಕೆ ಧನವ ನೀಡಬೇಕು. ಇಂತೀ ತ್ರಿವಿಧವ ತ್ರಿವಿಧಕ್ಕೆ ಕೊಟ್ಟು ಹೊಲೆಗೇರಿಯ ಹೊಕ್ಕು ಕುಲಗೆಟ್ಟವನೇ ಭಕ್ತ ಕಾಣಾ, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೇ.

**ಅರ್ಥ:**— ಸುಜ್ಞಾನೋದಯವಾಗಿ ಶ್ರೀಗುರುಕಾರುಣ್ಯವ ಹಡೆದು ಅಂಗದ ಮೇಲೆ ಇಷ್ಟಲಿಂಗ ಧಾರಣವಾದ ಸದ್ಭಕ್ತನು ಆ ಇಷ್ಟಲಿಂಗವನು ಸ್ಥೂಲ ತನುವಿನಲ್ಲಿ ಸಂಬಂಧಿಸಿ, ಆ ಸ್ಥೂಲ ತನುವಿನ ಪ್ರಕೃತಿ ಸತ್ಕ್ರಿಯಾ

ಪ್ರಕಾಶದಲ್ಲಿ ದಹಿಸಿ ಎಂಬುದೀಗ ಭಕ್ತನಾದಡೆ ಗುರುವಿಗೆ ತನುವ ನೀಡಬೇಕು ಎಂಬ ಶಬ್ದಕ್ಕರ್ಥ. ಆ ಇಷ್ಟಬ್ರಹ್ಮದ ಚಿತ್ಕಲಾಸ್ವರೂಪವಾದ ಪ್ರಾಣಲಿಂಗ ವನು ಸೂಕ್ಷ್ಮತನುವಿನಲ್ಲಿ ಸಂಬಂಧಿಸಿ, ಆ ಸೂಕ್ಷ್ಮತನುವಿನಲ್ಲಿ ಸಂಬಂಧವಾದ ಮನೋಪ್ರಕೃತಿ ಸುಜ್ಞಾನಪ್ರಕಾಶದಲ್ಲಿ ದಹಿಸಿ ಎಂಬುದೀಗ ಲಿಂಗಕ್ಕೆ ಮನವ ನೀಡಿ ಎಂಬ ಶಬ್ದಕ್ಕರ್ಥ ಆ ಇಷ್ಟಬ್ರಹ್ಮಾನಂದ ಸ್ವರೂಪವಾದ ಭಾವಲಿಂಗ ವನು ಕಾರಣ ತನುವಿನಲ್ಲಿ ಸಂಬಂಧಿಸಿ ಆ ಕಾರಣ ತನು ಸಂಬಂಧವಾದ ಆತ್ಮ. ಪ್ರಕೃತಿ ಮಹಾಜ್ಞಾನ ಪ್ರಕಾಶದಲ್ಲಿ ದಹಿಸಿ ಎಂಬುದೀಗ, ಜಂಗಮಕ್ಕೆ ಧನವನೀ ಡಬೇಕು ಎಂಬ ಶಬ್ದಕ್ಕರ್ಥ. ಇಂತಪ್ಪ ತ್ರಿವಿಧತನುವಿನಲ್ಲಿ ತ್ರಿವಿಧಲಿಂಗವ ಸ್ವಾಯತವಮಾಡಿ, ಸದ್ಭಕ್ತನು ಹೊಲೆಗೇರಿ ಎಂದಡೆ ಚಿದ್ಗ್ರಾಮ, ಚಿದ್ಗ್ರಾಮ ವೆಂದಡೆ ಬ್ರಹ್ಮರಂಧ್ರ. ಅದೆಂತೆಂದೊಡೆ, ಊರಿಗೆ ಹೊರಗಿರುವದು ಹೊಲೆಗೇರಿ ಅಂತಪ್ಪ ಹೊಲೆಗೇರಿಯೊಳಗೆ ಆವ ಕ್ರಿಯೆಗಳು ಶೀಲವ್ರತಾಚಾರ ಮಡಿಮೈಲಿಗೆ ಇಲ್ಲದ ಕಾರಣ ಪಂಚಮಿಶ್ರವಾದ ದೇಹಕ್ಕೆ ವಿಲಕ್ಷಣವಾದ ಚಿದ್ಗ್ರಾಮ. ಆ ಚಿದ್ಗ್ರಾಮವೆಂಬ ಬ್ರಹ್ಮರಂಧ್ರದಲ್ಲಿಯೂ ಆವ ಕ್ರಿಯೆಗಳು ಶೀಲವ್ರತಾಚಾರ ಮಡಿಮೈಲಿಗೆ ನೇಮನಿತ್ಯಗಳು ಇಲ್ಲೆಂಬ ಹಾಗೆ ಈ ಉಭಯಕ್ಕು ಏಕಪರ್ಯಾ ರ್ಥ. ಅಂತಪ್ಪ ಚಿದ್ಗ್ರಾಮವೆಂಬ ಬ್ರಹ್ಮರಂಧ್ರದಲ್ಲಿ ಪ್ರವೇಶವಾಗಿ ನೂರೊಂದು ಸ್ಥಳಕುಳದ ಆಚರಣೆ ನಷ್ಟವಾದಾತನೇ ಲಿಂಗಾಂಗ ಸಮರಸವಾದ ಸದ್ಭಕ್ತನು ನೋಡಾ ಎಂಬುದೀಗ, ಇಂತೀ ತ್ರಿವಿಧವ ತ್ರಿವಿಧಕ್ಕೆ ಕೊಟ್ಟು, ಹೊಲೆಗೇರಿಯ ಹೊಕ್ಕು ಕುಲಗೆಟ್ಟವನೇ ಭಕ್ತ ಕಾಣಾ ಎಂಬ ಶಬ್ದಕ್ಕರ್ಥ.

## ಮೇಲ್ಕಂಡ ಅರ್ಪಣದ ಪರಿಣಾಮ.

(೧೧). ಇಂತೀ ಕ್ರಮದಲ್ಲಿ ಗುರುಲಿಂಗ ಜಂಗಮಕ್ಕೆ ತನುಮನ ಧನವ ನೀಡಿದ ಭಕ್ತಗಣಂಗಳಿಗೆ ಮೋಕ್ಷವೆಂಬುದು ಕರತಳಾಮಳಕವಾಗಿ ರ್ಪುದು. ಇಂತಪ್ಪ ವಿಚಾರವ ತಿಳಿಯದೆ ಮೂಢಮತಿಯಿಂದ ಗುರುಲಿಂಗ ಜಂಗ ಮಕ್ಕೆ ತನುಮನಧನವ ನೀಡಿದಾತನೇ ಭಕ್ತನೆಂದು ವೇದಾಗಮಶೃತಿ ಪ್ರಮಾಣ ವಾಕ್ಯಂಗಳು ಸಾರುತ್ತಿರ್ಪವು. ಆಶೃತಿ ಸಾರಿದ ವಾಕ್ಯಗಳು ಪ್ರಮಾಣ. ಅದೆಂತೆಂ ದೊಡೆ, ಅಂತಪ್ಪ ಶೃತಿವಾಕ್ಯಗಳು ಕೇಳಿ ಸ್ವಾನುಭಾವ ಗುರುಮುಖದಿಂ ವಿಚಾರಿ ಸಿಕೊಳ್ಳಲರಿಯದೆ ತಮ್ಮಲ್ಲಿ ಸ್ವಯಜ್ಞಾನೋದಯವಾಗಿ ತಾವು ತಿಳಿಯದೆ

ಮೂಢಮತಿಯಿಂದೆ ಅಜ್ಞಾನ ಎಡೆಗೊಂಡು ಗುರುವಿಗೆ ತನುವ ನೀಡಬೇಕೆಂದು ಆ ಗುರುವಿನ ಸೇವಾವೃತ್ತಿಯಿಂದ ತನುವ ದಂಡಣೆಯ ಮಾಡುವರು. ಅದೇನು ಕಾರಣವೆಂದಡೆ, ಗುರುವಿನ ನಿಲುಕಡೆಯ ನರಿಯದ ಕಾರಣ. ಲಿಂಗಕ್ಕೆ ಮನವ ನೀಡಬೇಕೆಂದು ದೀಪಧೂಪ ನೈವೇದ್ಯ ತಾಂಬೂಲ ಮೊದಲಾದ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳ ಮಾಡಿ ಹಸ್ತದಲ್ಲಿರುವ ಇಷ್ಟಲಿಂಗದಲ್ಲಿ ಮನವ ನಿಲ್ಲಿಸಬೇಕೆಂದು ಎವೆಗೆ ಎವೆ ಹೊಡೆಯದೆ ಸತ್ತ ಮೊಲದ ಕಣ್ಣಿನಂತೆ ಕಣ್ಣ ತೆರೆದು ನೋಡಿದಡೆ, ಆ ಕಲ್ಲಲಿಂಗದಲ್ಲಿ ಮನವು ನಿಲ್ಲಬಲ್ಲುದೇ? ನಿಲ್ಲಲರಿಯದು. ಅದೇನು ಕಾರಣವೆಂದಡೆ, ಆ ಇಷ್ಟ ಬ್ರಹ್ಮದ ನಿಜ ನಿಲುಕಡೆಯ ಸ್ವರೂಪು ತಾವೆಂದರಿಯದ ಕಾರಣ. ಇಂತೀ ಪರಿಯಲ್ಲಿ ಮನವ ಬಳಲಿಸುವರು. ಜಂಗಮಕ್ಕೆ ಧನವ ನೀಡಬೇಕೆಂದು ಅನ್ನವಸ್ತ್ರ ಮೊದಲಾದ ಹದಿನೆಂಟು ಧಾನ್ಯ ಸಹವಾಗಿ ನಾನಾಧಾವತಿಯಿಂದ ಗಳಿಸಿ ಸಕಲ ಪದಾರ್ಥವನ್ನು ಜಂಗಮಕ್ಕೆ ನೀಡಿ ಆತ್ಮನ ಬಳಲಿಸುವರು. ಅದೇನು ಕಾರಣವೆಂದಡೆ, ಆ ಜಂಗಮದ ನಿಜ ನಿಲುಕಡೆಯ ಸ್ವರೂಪು ತಾವೆಂದರಿಯದ ಕಾರಣ. ಇಂತೀ ಎಲ್ಲವು ಹೊರಗಣ ಉಪಚಾರ. ಈ ಹೊರಗಣ ಉಪಚಾರವ ಮಾಡಿದವರಿಗೆ ಪುಣ್ಯಫಲಪ್ರಾಪ್ತಿ ದೊರೆಕೊಂಬುವದು. ಆ ಪುಣ್ಯಫಲ ತೀರಿದ ಮೇಲೆ ಮರಳಿ ಭವಬಂಧನವೇ ಪ್ರಾಪ್ತಿ. ಅದೆಂತೆಂದೊಡೆ, ಪುಣ್ಯವೇ ತೈಲ, ಫಲಪದವೇ ಜ್ಯೋತಿ. ತೈಲ ಇರುವ ಪರಿಯಂತರವು ಜ್ಯೋತಿ ಪ್ರಕಾಶ ಇರುವದು. ಆ ತೈಲವು ತೀರಿದ ಹಾಗೆ, ಆ ಜ್ಯೋತಿ ಪ್ರಕಾಶ ಅಡಗುವದು. ಪುಣ್ಯತೀರಿದ ಮೇಲೆ ಫಲಪದನಾಶವಾಗುವದು, ನೋಡೆಂದ ನಿಮ್ಮ ಶರಣ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗನಿರ್ಮಾಯ ಪ್ರಭುವೇ.

## ಕರಣಾರ್ಪಣ.

### (೧) ಪಂಚವಿಷಯಗಳ ಅರ್ಪಣ.

(೧). ಅಧರತಾಗುವ ರುಚಿಯ ಉದರತಾಗುವ ಸುಖವ ಲಿಂಗಾರ್ಪಿತ ವಿಲ್ಲದೆ ಕೊಂಡರೆ, ಕಿಲ್ಬಿಷ ನೋಡಾ. ನೇತ್ರ, ಶ್ರೋತೃ, ಜಿಹ್ವೆ, ಘ್ರಾಣ, ತ್ವಕ್ಕು ಮೊದಲಾದ ಸರ್ವೇಂದ್ರಿಯಂಗಳಲ್ಲಿ ಮುಟ್ಟುವ ಸಕಲ ಪದಾರ್ಥಂಗಳನ್ನು ಸಾವ

ಧಾನದಿಂದ ಲಿಂಗಕ್ಕೆ ಕೊಟ್ಟು ಕೊಂಡರೆ ಅದು ಮಹಾಪ್ರಸಾದವಯ್ಯಾ ಕೂಡಲ ಸಂಗಮದೇವಾ.

(೨). ಲಿಂಗಾರ್ಪಿತ ಮಾಡಿದ ಪ್ರಸಾದವನಲ್ಲದೆ ಭೋಗಿಸುವ ಪ್ರಸಾದಿಗಳಿಗಿನ್ನೆಂತಯ್ಯಾ. ಅನರ್ಪಿತ ಭೋಗವು ಸಂಭವಿಸಿ, ದೋಷವೇ ಪ್ರಾಪ್ತವಾದ ಪರಿಯ ನೋಡಾ. ಅದೆಂತೋ? ಅನರ್ಪಿತವ ನೇತ್ರದಲ್ಲಿ ನೋಡಬಹುದೇ? ಅದೆಂತೋ? ಅನರ್ಪಿತವ ಮನದಲ್ಲಿ ನೆನೆಯಬಹುದೇ? ಅದೆಂತೋ? ಅನರ್ಪಿತವ ಶ್ರೋತ್ರದಲ್ಲಿ ಕೇಳಬಹುದೇ? ಅದೆಂತೋ? ಅನರ್ಪಿತವ ಘ್ರಾಣದಲ್ಲಿ ವಾಸಿಸಬಹುದೇ? ಅದೆಂತೋ? ಅನರ್ಪಿತವ ಹಾಸದಲ್ಲಿ ಸ್ಪರ್ಶಿಸಬಹುದೇ? ಅದೆಂತೋ? ಅನರ್ಪಿತವ ಜಿಹ್ವೆಯಲ್ಲಿ ರುಚಿಸಬಹುದೇ? ಅದೆಂತೋ? ಅಕಟ ಕಟಾ, ಎಂತಯ್ಯಾ? ಅರ್ಪಿತವಿಲ್ಲದೆ ಸರ್ವವಸ್ತುವನು ಅಂಗವಿಸಿ ಭೋಗಿಸುವಪರಿ, ಅಂಗಲಿಂಗವಾಗಿ, ಲಿಂಗಪ್ರಾಣವಾಗಿ, ಪ್ರಾಣಮನವಾಗಿ, ಮನವು ಲಿಂಗಸ್ವಾಯತವಾಗಿ, ಭಾವಶುದ್ಧವಾಗಿ, ಮನವೇ ಲಿಂಗವು, ಲಿಂಗವೇ ಮನವು, ಲಿಂಗ ಮುಂತಾಗಿ, ಮನಹಿಂತಾಗಿ, ಸರ್ವಕ್ರಿವರ್ತಿಸುವದು. ಈಕ್ರಿ ಸರ್ವಾರ್ಪಿತ. ಇದೇ ತಾತ್ಪರ್ಯಕಳೆ, ಇದೇ ಧರ್ಮಕಳೆ, ಇದೇ ಮಹಾಮಹಿಮಂಗೆ ಸರ್ವವೂ ಪ್ರಸಾದ. ಆ ಮಹಾಮಹಿಮನ ಪಂಚೇಂದ್ರಿಯವೆಲ್ಲವೂ ಲಿಂಗಾರ್ಪಿತ, ಆತನ ಭೋಗವೆಲ್ಲವೂ ಪ್ರಸಾದಭೋಗ, ಆತನು ಸದ್ಯನ್ಮುಕ್ತನಯ್ಯಾ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ.

(೩). ನಡೆವ, ನುಡಿವ, ಚೈತನ್ಯವುಳ್ಳನ್ನಕ್ಕರ ಒಡಲಗುಣಂಗಳಾರಿಗೆಯೂ ಬಿಡವು ಕೇಳಿರಣ್ಣಾ. ನೋಡುವನಯನ, ಕೇಳುವ ಶ್ರೋತ್ರ, ವಾಸಿಸುವ ಘ್ರಾಣ, ಮುಟ್ಟುವತ್ವಕ್ಕು, ರುಚಿಸುವ ಜಿಹ್ವೆ, ನೋಡುತ್ತ, ಕೇಳುತ್ತ, ವಾಸಿಸುತ್ತ, ಮುಟ್ಟುತ್ತ, ರುಚಿಸುತ್ತ, ಲಿಂಗಾರ್ಪಿತವ ಮಾಡಿ ಲಿಂಗಭೋಗೋಪಭೋಗಿಯಾದ ಪ್ರಸಾದಿಗೆ ಸರ್ವಾಂಗಶುದ್ಧವೆಂದಿತಯ್ಯಾ. ಕಾಯತ್ರಯಂಗಳು ಜೀವತ್ರಯಂಗಳು ಭಾವತ್ರಯಂಗಳು ಇವುಗಳನೊಂದು ಮಾಡಿ ಸುಖದುಃಖ ಗುಣ ನಿರ್ಗುಣಂಗಳು ಇಂತೀ ಉಭಯವ ಲಿಂಗದಲ್ಲಿ ಏಕವಮಾಡಿ, ಅಹುದು, ಅಲ್ಲ, ಬೇಕು, ಬೇಡವೆಂಬ ಸಂಶಯವ ಕಳೆದು ಕೂಡಲಚೆನ್ನಸಂಗಯ್ಯನಲ್ಲಿ ಆದಿಯ ಪುರಾತನರು ಕೂಡಿದ ಪಥವಿದು.

## (೨) ಮೇಲ್ಕಂಡ ಅರ್ಪಣದ ತತ್ವಗಳು.

(೪). ನಾಸಿಕವಾಚಾರ, ಜಿಹ್ವೆ ಗುರು, ಕಂಗಳು ಲಿಂಗ, ಕರ್ಣ ಪ್ರಸಾದ, ಹಸ್ತ ಜಂಗಮ, ಭಾವ ಮಹಾಲಿಂಗ ಕೂಡಲಚನ್ನಸಂಗಯ್ಯ ನಿಮ್ಮ ಶರಣ ಇಂತು ಸರ್ವಾಂಗಪ್ರಸಾದಿ.

(೫). ಚರಿಸಿ ವರ್ತಿಸುವದೇ ಆಚಾರವಾದಕಾರಣ, ಈಡಾಪಿಂಗಳ ನಾಡಿಯಿಂ ರೇಚಕ ಪೂರಕಂಗಳು ಚರಿಸಿ ವರ್ತಿಸುವ ದೆಸೆಯಿಂ ನಾಸಿಕಕ್ಕೆ ಆಚಾರಲಿಂಗವಾಗಬೇಕಾಯಿತ್ತು. ಮಂತ್ರಮೂರ್ತಿಯೇ ಗುರುವಾದ ಕಾರಣ ಷಡಕ್ಷರಿಯೇ ಷಡ್ರುಚಿಯಾಗಿ ತೋರಿಹುದಾಗಿ ಅಂತಪ್ಪ ಷಡ್ರುಚಿಯೇ ಜಿಹ್ವೆಯ ಮುಖಕ್ಕೆ ಸಲುವ ದೆಸೆಯಿಂ ಜಿಹ್ವೆಗೆ ಗುರುಲಿಂಗವಾಗಬೇಕಾಯಿತ್ತು. ಸ್ವಯಂ ಪ್ರಕಾಶವೇ ನೇತ್ರಂಗಳೊಳಗೆ ನೆಲೆಗೊಂಡು ಸಕಲ ಪದಾರ್ಥಂಗಳ ಕಾಣಿಸಿ ತೋರ್ಪ ದೆಸೆಯಿಂ ನೇತ್ರಕ್ಕೆ ಶಿವಲಿಂಗವಾಗಬೇಕಾಯಿತು. ಚರಲಿಂಗವಾದ ಕಾರಣ ತ್ವಕ್ಕು ಸರ್ವಾಂಗದಲ್ಲಿ ನೆಲೆಗೊಂಡು ಅಲ್ಲಿಗಲ್ಲಿಗೆ ಸ್ಪರ್ಶನವ ನರಿವೃತ್ತಿಹ ದೆಸೆಯಿಂ ತ್ವಕ್ಕಿಂಗೆ ಜಂಗಮಲಿಂಗವಾಗಬೇಕಾಯಿತ್ತು. ನಾದಸುನಾದ ಮಹಾ ನಾದವೇ ಪ್ರಸಾದವಾದ ಕಾರಣ ಪ್ರಸಾದವಪ್ಪ ಶಬ್ದ ಶ್ರೋತ್ರಮುಖಕ್ಕೆ ಸಲುವ ದೆಸೆಯಿಂ ಶ್ರೋತ್ರಕ್ಕೆ ಪ್ರಸಾದಲಿಂಗವಾಗಬೇಕಾಯಿತು. ಇಂತೀ ಪಂಚೇಂದ್ರಿಯಂಗಳಿಗೆ ಪಂಚಲಿಂಗವಾಗಬೇಕಾಯಿತು. ಆತ್ಮನು ನಿರವಯ, ನಿರ್ಗುಣ, ನಿರವಸ್ತು, ನಿರ್ಭಿನ್ನ, ನಿರುಪಮನಾದ ದೆಸೆಯಿಂ ಗೋಪ್ಯವಾದ ಆತ್ಮಂಗೆ ಘನಕ್ಕೆ ಘನತೆಯುನುಳ್ಳ ಮಹಾಲಿಂಗವಾಗಬೇಕಾಯಿತ್ತು. ಇಂತೀ ಷಟ್‌ಸ್ಥಲಂಗಳಾದ ದೆಸೆಯಿಂ ಸೌರಾಷ್ಟ್ರ ಸೋಮೇಶ್ವರನೋರ್ವ ಷಡುಲಿಂಗವಾಗಬೇಕಾಯಿತ್ತಯ್ಯಾ.

(೬). ಶ್ರೋತ್ರದಲ್ಲಿ ಕೇಳುವ ಸುವಾಕ್ಯದ ಪರಿಣಾಮುವನು ಮನದ ಅವಧಾನದಲ್ಲಿ ಲಿಂಗಕ್ಕೆ ಸಮರ್ಪಿಸಬೇಕು. ನೇತ್ರದಲ್ಲಿ ಕಂಡ ರೂಪನು ಮನದ ಅವಧಾನದಲ್ಲಿ ಲಿಂಗಕ್ಕೆ ಸಮರ್ಪಿಸಬೇಕು. ನಾಸಿಕದಲಿ ಬಂದ ಸುಗಂಧದ ಪರಿಣಾಮುವನು ಮನದ ಅವಧಾನದಲ್ಲಿ ಲಿಂಗಕ್ಕೆ ಅರ್ಪಿಸಬೇಕು. ಜಿಹ್ವೆಯಲ್ಲಿ ಬಂದ ಸುರುಚಿಯುನು ಮನದ ಅವಧಾನದಲ್ಲಿ ಲಿಂಗಕ್ಕೆ ಅರ್ಪಿಸಬೇಕು. ಇದೇ ಅರ್ಪಿತದ ಮುಖ ಕೇಳಿರಣ್ಣಾ. ಶ್ಲೋ॥ ಸಂಯೋಗೇಚ ವಿಯೋಗೇಚ ಅಣು ಬಿಂದು ಸುಖಾರ್ಪಿತಂ । ಯಃಕುರ್ಯಾದಿಷ್ಟ ಲಿಂಗೇತಂ ಸಾವಧಾನೇ ನಿರಂ-

ತರಂ ‖ ಎಂದುದಾಗಿ ನಮ್ಮ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನಪ್ರಭುವೇ ಶಾಂತಮಲ್ಲಿಕಾರ್ಜುನಯ್ಯನಲ್ಲಿಯೂ ಈ ಯರ್ಪಿತ ಮುಖವರಿದು ಅರ್ಪಿಸಬಲ್ಲಡೆ ತೃಪ್ತಿಯನೈದುವನು.

( ೭ ). ದೇವಾ ನಿನ್ನ ಭಕ್ತನು ಶ್ರೋತ್ರಮುಖದಲ್ಲಿ ಶಬ್ದ ಪದಾರ್ಥವ ನಿನಗೆ ಕೊಡುವನು. ಆತಂಗೆ ನೀನು ಸುಶಬ್ದ ಪ್ರಸಾದವ ಕೊಡುವೆ. ತನ್ನ ತ್ವಕ್ಕಿನಲ್ಲಿ ಸ್ಪರ್ಶನ ಪದಾರ್ಥವ ನಿನಗೆ ಕೊಡುವನು. ಆತಂಗೆ ನೀನು ಸ್ಪರ್ಶನ ಪ್ರಸಾದವ ಕೊಡುವೆ. ನೇತ್ರಮುಖದಲ್ಲಿ ರೂಪು ಪದಾರ್ಥವ ನಿನಗೆ ಕೊಡುವನು. ಆತಂಗೆ ನೀನು ರೂಪುಪ್ರಸಾದವ ಕೊಡುವೆ. ಜಿಹ್ವೆಯ ಮುಖದಲ್ಲಿ ರಸ ಪದಾರ್ಥವ ನಿನಗೆ ಕೊಡುವನು. ಆತಂಗೆ ನೀನು ರುಚಿಪ್ರಸಾದವ ಕೊಡುವೆ. ಘ್ರಾಣಮುಖದಲ್ಲಿ ಗಂಧಪದಾರ್ಥವ ನಿನಗೆ ಕೊಡುವನು. ಆತಂಗೆ ನೀನು ಗಂಧ ಪ್ರಸಾದವ ಕೊಡುವೆ. ಇನ್ನು ಭಕ್ತ ನಿನಗೆ ಸರ್ವ ಪದಾರ್ಥವ ಕೊಟ್ಟರೆ, ನೀನು ಪ್ರಸಾದವ ಕೊಡುವೆ. ಭಕ್ತಕಾಯ ಮಮಕಾಯವೆಂದು ನಿನ್ನ ವಚನ ದಿಟವಾಗಿ,ನೀನು ಪ್ರಸಾದಿಯನರಿದು ಸಲಹುತಿಪ್ಪೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

( ೮ ). ಕರ್ಣಂಗಳು ಕೇಳಿದ ಶಬ್ದದಿಂದಾದ ಸುಖವನು, ನೇತ್ರಂಗಳು ನೋಡಿದ ರೂಪಿಂದಾದ ಸುಖವನು, ರಸನೆ ಸವಿದ ರಸದಿಂದಾದ ಸುಖವನು, ವಾಸಿಸುವ ಘ್ರಾಣದಿಂದಾದ ಗಂಧ ಸುಖವನು, ಮುಟ್ಟುವ್ಯ ತ್ವಕ್ಕಿನ ಸ್ಪರ್ಶನದಿಂದಾದ ಸುಖವನು ಅರ್ಪಿತವ ಮಾಡಿ ಅನುಭವಿಸುವನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಪ್ರಸಾದಿಯು.

( ೯ ). ಶ್ರೋತ್ರೇಂದ್ರಿಯವನು ಆ ಇಂದ್ರಿಯದೊಡನೆ ಕೂಡಿದ ಆಕಾಶವನು, ತ್ವಗಿಂದ್ರಿಯವನು ಆ ಇಂದ್ರಿಯದೊಡನೆ ಕೂಡಿಹ ವಾಯುವನು, ನೇತ್ರೇಂದ್ರಿಯವನು ಆ ಇಂದ್ರಿಯದೊಡನೆ ಕೂಡಿಹ ಅಗ್ನಿಯನು, ಜಿಹ್ವೇಂದ್ರಿಯವನು ಆ ಇಂದ್ರಿಯದೊಡನೆ ಕೂಡಿಹ ಅಪ್ಪುವನು, ಘ್ರಾಣೇಂದ್ರಿಯವನು, ಆ ಇಂದ್ರಿಯದೊಡನೆ ಕೂಡಿಹ ಪೃಥ್ವಿಯನು ಈ ಭೂತಂಗಳನು ಕೂಡಿ ಸಕಲೇಂದ್ರಿಯ ಶಬ್ದಾದಿವಿಷಯಾರ್ಪಣವ ಮಾಡಿ ಪ್ರಸಾದವ ಪಡೆದರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ ನಿಮ್ಮ ಪ್ರಸಾದಿಗಳು.

(೧೦). ಅರ್ಪಿತದನುವನು ಪ್ರಸಾದದ ಮಹಿಮೆಯನು ಆರಿಗೆಯೂ ಅರಿಯಬಾರದು ನೋಡಾ. ಬ್ರಹ್ಮ ವಿಷ್ಣು ದೇವಾದಿದೇವರ್ಕಳಿಗೆಯೂ ಅರಿಯಬಾರದು ನೋಡಾ. ಋಷಿಜನಂಗಳಿಗೆಯೂ ಅರಿಯಬಾರದು ನೋಡಾ. ದೇವ ದಾನವ ಮಾನವರಿಗೆಯೂ ಅರಿಯಬಾರದು. ಕಿಂಚಿತ್ತರಿದಡೆಯೂ ಅರ್ಪಿಸಬಾರದು. ಕಿಂಚಿತ್ತರ್ಪಿಸಿದಡೆಯೂ ಪ್ರಸಾದವ ಪಡೆಯಬಾರದು. ಕಿಂಚಿತ್ ಪ್ರಸಾದವ ಪಡೆದಡೆಯೂ ಆ ಪ್ರಸಾದವ ಭೋಗಿಸಿ ಮುಕ್ತರಾಗಬಾರದು. ಅದೆಂತೆಂದೊಡೆ, ತನುವ ಗುರುವಿಂಗರ್ಪಿಸಿ ಗುರುಪ್ರಸಾದವ ಪಡೆಯಲರಿಯರು ನೋಡಾ. ಮನವ ಲಿಂಗಕ್ಕರ್ಪಿಸಿ ಲಿಂಗಪ್ರಸಾದವ ಪಡೆಯಲರಿಯರು ನೋಡಾ. ಧನವ ಜಂಗಮಕ್ಕರ್ಪಿಸಿ ಜಂಗಮ ಪ್ರಸಾದವ ಪಡೆಯಲರಿಯರು ನೋಡಾ. ತನುಮನ ಧನವನು ಗುರುಲಿಂಗ ಜಂಗಮಕ್ಕೆ ಕೊಟ್ಟು ಆ ತ್ರಿವಿಧ ಲಿಂಗವನೇಕೀಕರಿಸಿ, ಭಾವ ಸ್ಥಾನದಲ್ಲಿ ಧರಿಸಿ, ಪರಿಣಾಮ ಪದಾರ್ಥವನರ್ಪಿಸಿ, ಭಾವಲಿಂಗದ ಪ್ರಸಾದವ ಪಡೆಯಲರಿಯರು ನೋಡಾ. ಆ ಮಹಾಭಾವಲಿಂಗಮಂ ಮನೋಮಧ್ಯದಲ್ಲಿರಿಸಿ ಸಕಳ ನಿಷ್ಕಳ ದ್ರವ್ಯಂಗಳನರ್ಪಿಸಿ ಮನೋಮಯಲಿಂಗ ಪ್ರಸಾದಮಂ ಪಡೆಯಲರಿಯರು ನೋಡಾ. ಮನೋಮಯಲಿಂಗ ಮೂರ್ತಿಯಂ ತಂದು ಶ್ರೋತ್ರದ ಬಾಗಿಲಲ್ಲಿ ಕುಳ್ಳಿರಿಸಿ ಘಂಟಾದಿನಾದಂಗಳ ಸಮರ್ಪಿಸಿ ಶಬ್ದಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿಲಿಂಗಮಂ ತಂದು ತ್ವಕ್ಕಿನ ಬಾಗಿಲಲ್ಲಿ ಕುಳ್ಳಿರಿಸಿ, ಕಠಿಣಾದಿಸ್ಪರ್ಶನಂಗಳಂ ಸಮರ್ಪಿಸಿ, ಸ್ಪರ್ಶನ ಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿ ಲಿಂಗಮಂ ತಂದು ನೇತ್ರದ ಬಾಗಿಲಲ್ಲಿ ಕುಳ್ಳಿರಿಸಿ ಶ್ವೇತಾದಿವರ್ಣಂಗಳಂ ಅರ್ಪಿಸಿ, ವರ್ಣಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿಲಿಂಗಮಂ ಜಿಹ್ವೆಯ ಬಾಗಿಲಲ್ಲಿ ಕುಳ್ಳಿರಿಸಿ ಮಧುರಾದಿರಸಂಗಳ ಸಮರ್ಪಿಸಿ ರಸಪ್ರಸಾದಮಂ ಪಡೆಯಲರಿಯರು ನೋಡಾ. ಮನೋಮಯ ಮೂರ್ತಿಲಿಂಗಮಂ ಘ್ರಾಣದ ಬಾಗಿಲಲ್ಲಿ ಕುಳ್ಳಿರಿಸಿ, ಗಂಧಾದಿ ಪರಿಮಳಂಗಳನರ್ಪಿಸಿ ಗಂಧ ಪ್ರಸಾದಮಂ ಪಡೆಯಲರಿಯರು ನೋಡಾ. ಆ ಮನೋಮಯ ಮೂರ್ತಿ ಲಿಂಗಮಂ ತಂದು ವಾಙ್ಮೂರ್ತಿಯ ಮಾಡಿ ಸತ್ಯಸುಭಾಷೆಗಳನರ್ಪಿಸಿ ವಚನಪ್ರಸಾದಮಂ ಪಡೆಯಲರಿಯರು ನೋಡಾ. ಇಂತಪ್ಪ ಏಕಾದಶ ಸ್ಥಾನದಲ್ಲಿ ಏಕಾದಶಾರ್ಪಣಮಂ ಮಾಡಿ ಪ್ರಸಾದವನೂ ಪಡೆಲಯರಿಯದ ಕಾರಣ ಪ್ರಸಾದ ಭೋಗದಿಂದಪ್ಪ

ಕೇವಲ ಮುಕ್ತಿ ಯಾರಿಗೆಯೂ ಸಂಭವಿಸದು. ಇದು ಕಾರಣ, ಇಂತಪ್ಪ ಮಹಾಪ್ರಸಾದ ಸ್ಥಳಕುಳವನು ನಿಮ್ಮ ಪ್ರಸಾದಿ ಚನ್ನಬಸವಣ್ಣಂಗೊಬ್ಬಂಗಲ್ಲದೆ, ಮತಾರಿಗೆಯೂ ಅರಿಯಬಾರದಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೧೧). ಶಬ್ದ, ಸ್ಪರ್ಶ, ರೂಪು, ರಸ, ಗಂಧ ಪಂಚೇಂದ್ರಿಯಂಗಳು ಮೊದಲಾಗಿ ನಡೆದವು ಲಿಂಗದತ್ತತ್ತಲೆ. ತಮತಮಗೆ ಬಂದ ಭೋಗ ಸುಖ ಲಿಂಗಾರ್ಪಿತವೆಂದು ನಡೆದವು ಲಿಂಗದತ್ತತ್ತಲೆ, ಕೂಡಲಚನ್ನಸಂಗಯ್ಯಾ, ಲಿಂಗನಿವಾಸಿ ಶರಣಂಗೆ.

(೧೨). ಅಂಗದ ಕೊನೆಯಲ್ಲಿ ಲಿಂಗ ಮುಂತಲ್ಲದೆ ಅನ್ಯವ ನೋಡನಾ ಶರಣ. ಘಟದ ಕೊನೆಯಲ್ಲಿ ಲಿಂಗಮುಂತಲ್ಲದೆ ಅನ್ಯವ ರುಚಿಸನಾ ಶರಣ. ಅದೇನು ಕಾರಣವೆಂದಡೆ, ಕೂಡಲಚನ್ನಸಂಗಯ್ಯಾ, ನಿಮ್ಮ ಶರಣ ಸರ್ವಾಂಗ ಲಿಂಗಿಯಾದ ಕಾರಣ.

(೧೩), ನೆಲತಳವಾರನಾದಡೆ, ಕಳ್ಳಂಗೆ ಹೋಗಲೆಡೆಯುಂಟೇ? ಸರ್ವಾಂಗಲಿಂಗಿಗೆ ಅನರ್ಪಿತ ಉಂಟೇ ನಿಃಕಳಂಕ ಮಲ್ಲಿಕಾರ್ಜುನಾ?

(೧೪). ಇದೇನಯ್ಯಾ ಪ್ರಸಾದ? ಒಡನೆ ನಡೆವುತ್ತಿಪ್ಪುದ ಕಂಡೆ. ಇದೇನಯ್ಯಾ ಪ್ರಸಾದ? ಒಡನೆ ನುಡಿವುತ್ತಿಪ್ಪುದ ಕಂಡೆ. ಪ್ರಾಣನ ಮೇಲೆ ಲಿಂಗ ಪ್ರತಿಷ್ಠೆಯಾದ ಶರಣಂಗೆ ಅದು ತಾನೆ ನಡೆವುದು, ಅದು ತಾನೆ ನುಡಿವುದು. ಎರಡೆಂಬುದಿಲ್ಲವಾಗಿ, ಅದು ತಾನೆ ಒಂದು ಕೂಡಲಚನ್ನಸಂಗಾ ನಿಮ್ಮ ಶರಣ.

**ಅರ್ಥ**:—ಒಂದೇ ಪರಬ್ರಹ್ಮವು ಲಿಂಗಾಂಗವೆರಡಾಯಿತ್ತು. ಆ ಎರಡಾದಲ್ಲಿ ಅಂಗವೇ ಶರಣನಾದ ಕಾರಣ ಆ ಶರಣನ ಅಂಗ ಪ್ರಾಣವೆಲ್ಲವೂ ಲಿಂಗಸ್ವರೂಪು. ಅಂತಾ ಶರಣ ಲಿಂಗ ಪ್ರಾಣವೆಂಬ ಅಂಗದಲ್ಲಿ ಲಿಂಗವೇ ಪ್ರಾಣವಾಗಿ ನೆಲೆಗೊಂಡ ಶರಣನ ಸರ್ವಾಂಗವೆಲ್ಲ ಲಿಂಗವೆಯಾಗಿ ನಡೆವ ನುಡಿವ ನೋಡುವವೆಲ್ಲ ಲಿಂಗವೆಯಾಗಿ ಶರಣನ ಅಂಗಭೋಗೋಪಭೋಗಂಗಳೆಲ್ಲವೂ ಲಿಂಗವೇ ಭೋಗಿಸುತ್ತಿರ್ಪನಾಗಿ ಲಿಂಗವೂ ಶರಣನೂ ಒಂದೇ ವಸ್ತು. ಅಂತಾ ಶರಣನೂ ಲಿಂಗವೂ ಒಂದೇ ವಸ್ತುವೆಂಬುದು ಶರಣಂಗಲ್ಲದೆ ಮತ್ತಾರಿಗೂ ಇಲ್ಲವೆಂಬುದೀ ವಚನ ತಾತ್ಪರ್ಯಾರ್ಥ.

ಶಿವಬಸವ ನಗರ
ಬೆಳಗಾವಿ ೧೦

(೧೫). ಆಯತ ಸ್ವಾಯತ ಅನಾಯತಂಗಳು ಮುಟ್ಟಲಮ್ಮವು ನೋಡಾ. ಕಂಗಳ ಕೈಗಳಲರ್ಪಿಸುವ, ಶ್ರೋತ್ರದ ಕೈಗಳಲರ್ಪಿಸುವ, ಜಿಹ್ವೆಯ ಕೈಗಳಲರ್ಪಿಸುವ, ಮನದ ಕೈಗಳಲರ್ಪಿಸುವ ಅಲ್ಲಲ್ಲಿ ತಾಕಿದ ಸುಖವನಲ್ಲ ಲ್ಲಿಯೇ ಲಿಂಗಾರ್ಪಿತ ಮಾಡಬಲ್ಲನಾಗಿ ಕೂಡಲ ಚೆನ್ನಸಂಗನಲ್ಲಿ ಆತಮಹಾ ಪ್ರಸಾದಿ.

## (೩). ಮೇಲ್ಕಂಡ ಪ್ರಸಾದಿಯ ಲಿಂಗಸ್ಥಿತಿಯು.

(೧೬). ಅಂಗದ ಕೊನೆಯ ಮೊನೆಯಲ್ಲಿ ಸಂಗಿಸುವದು ಲಿಂಗ ತಾನೇ ಅಯ್ಯ. ಕಂಗಳ ಕೊನೆಯ ಮೊನೆಯಲ್ಲಿ ಕಾಣುವದು ಲಿಂಗ ತಾನೇ ಅಯ್ಯ. ನಾಸಿಕದ ಕೊನೆಯ ಮೊನೆಯಲ್ಲಿ ವಾಸಿಸುವದು ಲಿಂಗ ತಾನೇ ಅಯ್ಯ. ಜಿಹ್ವೆಯ ಕೊನೆಯ ಮೊನೆಯಲ್ಲಿ ರುಚಿಸುವದು ಲಿಂಗ ತಾನೇ ಅಯ್ಯ. ತ್ವಕ್ಕಿನ ಕೊನೆಯ ಮೊನೆಯಲ್ಲಿ ಸೋಂಕುವದು ಲಿಂಗ ತಾನೇ ಅಯ್ಯ. ಶ್ರೋತ್ರದ ಕೊನೆಯ ಮೊನೆಯಲ್ಲಿ ಕೇಳುವದು ಲಿಂಗ ತಾನೇ ಅಯ್ಯ. ಭಾವದ ಕೊನೆಯ ಮೊನೆಯಲ್ಲಿ ತೃಪ್ತಿಯಿಂದ ಪರಿಣಾಮಿಸುವದು ಲಿಂಗ ತಾನೇ ಅಯ್ಯ. ಇದು ಕಾರಣ ಲಿಂಗ ಮುಂತಾದ ಐಕ್ಯವ ನೋಡದೆ, ಲಿಂಗ ಮುಂತಲ್ಲದೆ ಅನ್ಯವ ವಾಸಿಸಿದೆನೆಂದು, ತಾರುಚಿಸಿದೆನೆಂದು, ತಾ ಸೋಂಕಿದೆನೆಂದು, ತಾ ಕೇಳಿದೆನೆಂದು, ತಾನೆಂಬುದನೆ ಮುಂದು ಮಾಡಿಕೊಂಡು, ಲಿಂಗವೆಂಬುದನೆ ಹಿಂದು ಮಾಡಿಕೊಂಡು ಭೋಗಿಸುವ ಭೋಗವೆಲ್ಲವು ಅಂಗ ಭೋಗ ಕಾಣಿರೋ. ಅಂಗದಿಚ್ಛೆಗೆ ಉಂಡು ಲಿಂಗಕ್ಕೆಂಬ ಅಧಮ ಜೀವಿಗಳನೇನೆಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೭). ಪ್ರಕಾಶದ್ವಾರ, ಗಂಧದ್ವಾರ, ಶಬ್ದದ್ವಾರವೆಂಬ ಆರು ದ್ವಾರ ಕೂಡಿದ ಠಾವಿನಲ್ಲಿ ನಾದ ಬಿಂದು ಕಲೆ ಎಂಬ ಸಿಂಹಾಸನದ ಮೇಲೆ ಮೂರ್ತಿಗೊಂಡು ಶಬ್ದ ರೂಪು ಗಂಧಂಗಳ ಗ್ರಹಿಸುವಾತ ನೀನಲ್ಲದೆ ಮತ್ತಾರು ಹೇಳಾ? ಗಳದಲ್ಲಿ ನಿಂದುಷಡ್ರಸಾನ್ನದ ರುಚಿಯ ಸ್ವಾದಿಸುವಾತ ನೀನಲ್ಲದೆ ಮತ್ತಾರು ಹೇಳಾ? ಸರ್ವಾಂಗದಲ್ಲಿ ನಿಂದು ತ್ವಗಿಂದ್ರಿಯ ಮುಖದಲ್ಲಿ ಸ್ಪರ್ಶನವ ಕಳೆದುಕೊಂಬಾತ ನೀನಲ್ಲದೆ ಮತ್ತಾರು ಹೇಳಾ? ಮನವೆಂಬ ಮುಖದಲ್ಲಿ ನಿಂದು ಪರಿಣಾಮವನನುಭವಿಸುವಾತ ನೀನಲ್ಲದೆ ಮತ್ತಾರು ಹೇಳಾ? ಸರ್ವಾವಯವಂಗಳ

ಸರ್ವ ಮುಖವಾಗಿ ಭೋಗಿಸಿ ಪ್ರಸಾದವ ಕರುಣಿಸುವ ಕೃಪಾ ಮೂರ್ತಿ, ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನೀನಲ್ಲದೆ ಮತ್ತಾರು ಹೇಳಾ?

(೧೮). ಶಿರಮುಖ ಹೃದಯ ಪಾದ ಬಾಹುಗಳೆಲ್ಲ ಶಿವನ ಅವಯ ವಂಗಳಾದವು. ಶ್ರೋತ್ರ ನೇತ್ರ ಘ್ರಾಣಜಿಹ್ವೆತ್ವಕ್ಕೆಂಬವೆಲ್ಲ ಶಿವನ ಇಂದ್ರಿ ಯಂಗಳಾದವು. ಮನಬುದ್ಧಿ ಚಿತ್ತಾಹಂಕಾರಂಗಳೆಲ್ಲ ಶಿವನ ಕರಣಂಗಳಾದವು. ಪ್ರಾಣಾಪಾನ ವ್ಯಾನೋದಾನ ಸಮಾನವೆಂಬವಲ್ಲಿ ಶಿವಚೈತನ್ಯವಿದ್ದುದಾಗಿ ಒಳ ಗಿದ್ದ ಚೇತನವು ನೀವೇ. ಒಳಗೆ ನೀವು ಹೊರಗೆ ನೀವು, ನಾನೆಂಬುದಿಲ್ಲ. ನಾನೇನ ಮಾಡಿತ್ತ ಎಲ್ಲವೂ ನಿಮ್ಮ ವಿನೋದ. ಎನ್ನ ಸರ್ವ ಭೋಗವೆಲ್ಲ ನಿಮ್ಮ ಭೋಗ ವಯ್ಯಾ. ಕರ್ತೃತ್ವ ನಿಮ್ಮದಾಗಿ, ಎನಗೆ ಕರ್ತೃತ್ವವಿಲ್ಲ. ನಾನಿಮ್ಮೊಳಗು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---

## ಭಾವಾರ್ಪಣದ ತತ್ವಗಳು.

(೧). ಪಂಡಿತನಾಗಲಿ ಮೂರ್ಖನಾಗಲಿ ಸಂಚಿತಕರ್ಮ ಉಂಡಲ್ಲದೆ ಬಿಡದು. ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಬಿಡದು. ಇಂತೆಂದು ಶ್ರುತಿ ಸಾರುತ್ತಿ ಪ್ಪಾವೆ ನೋಡಾ. ತಾನಾವ ಲೋಕದೊಳಗಿದ್ದಡೆಯೂ ಬಿಡದು. ಕರ್ಮಫಲ ಗೂಡಿ ಕೂಡಲಸಂಗಮದೇವಂಗೆ ಆತ್ಮನೈವೇದ್ಯವ ಮಾಡಿದಾತನೇ ಧನ್ಯ ನಯ್ಯಾ.

(೨). ಅಯ್ಯಾ ಪದಾರ್ಥವನರ್ಪಿಸಿ ಪ್ರಸಾದವ ಪಡೆದೆವೆಂಬರು. ನಾವಿ ದನರಿಯೆವಯ್ಯಾ. ಪದಾರ್ಥವಾವುದು ಪ್ರಸಾದವಾವುದೆಂದರಿಯರು. ಪದಾ ರ್ಥವೇ ಆತ್ಮನು. ಪ್ರಸಾದವೇ ಅಖಿಳ ಕೋಟಿ ಬ್ರಹ್ಮಾಂಡಗಳ ಗರ್ಭೀಕರಿಸಿ ಕೊಂಡಂಥ, ಇಷ್ಟಲಿಂಗಕ್ಕೆ ಚಿತ್‌ಚೈತನ್ಯ ಸ್ವರೂಪವಾದಂಥ ಪರವಸ್ತು. ಆ ಆತ್ಮನೆಂಬ ಪದಾರ್ಥವನೇ ಆ ಪರವಸ್ತುವಿನಲ್ಲಿ ಭಿನ್ನವಿಲ್ಲದೆ ಅರ್ಪಿಸಿ ಪದಾರ್ಥ ಭಾವವಿಲ್ಲದೆ ಪ್ರಸಾದವಾದುದೇ ಪ್ರಸಾದ. ಈ ಭೇದವನರಿಯದೆ ಪರದ್ರವ್ಯ ಸಕಲ ಪದಾರ್ಥವ ನರ್ಪಿಸಿ ಪ್ರಸಾದವ ಪಡೆದೆವೆಂದೆಂಬ ಭ್ರಾಂತ ಬಾಲಕರಿಂದ ಬಿಟ್ಟು ಬಾಲಕರುಂಟೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

(೩). ಪದಾರ್ಥ ಪದಾರ್ಥವೆಂದೆಂಬಿರಿ. ಪದವಾವುದು, ಅರ್ಥವಾವುದು ಎಂದರಿಯಿರಿ. ಪದವೇ ಲಿಂಗ, ಅರ್ಥವೇ ಭಕ್ತಿ, ಇದನರಿದು ಪದಾರ್ಥವೆಂದು ತಂದು ಅರ್ಪಿತವ ಮಾಡಬಲ್ಲಡೆ, ಕೂಡಿಪ್ಪನಯ್ಯಾ ನಮ್ಮ ಕೂಡಲಚೆನ್ನ ಸಂಗಮದೇವಾ.

(೪). ಶರಣ ಸನ್ನಿಹಿತ ಲಿಂಗವಾಗಿ, ಲಿಂಗವೇ ಸನ್ನಿಹಿತ ಶರಣನಾಗಿ, ಸಂಗವೇ ಸನುಮತವಾಯಿತ್ತಾಗಿ, ಮತ್ತೊಂದನರಸಲಿನ್ನೆಲ್ಲಿಯದೋ ? ಅಯ್ಯಾ. ಶರಣವೇ ಓಗರ, ಲಿಂಗವೇ ಪ್ರಸಾದ ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ.

**ಅರ್ಥ**:—ಲಿಂಗವು ತನಗೆ ಅನನ್ಯವೆಂದರಿದು ಅಭಿನ್ನಜ್ಞಾನಿಯಾಗಿಪ್ಪ ಶರಣನಲ್ಲಿ ಲಿಂಗವು ಭಿನ್ನವಿಲ್ಲದೆ ಇಪ್ಪನಾಗಿ ಶರಣನೆಂದು ಲಿಂಗವೆಂದು ಬೇರಿಟ್ಟು ಹೇಳಲಿಲ್ಲವೆಂಬುದೀಗ ಶರಣ ಸನ್ನಿಹಿತ ಲಿಂಗವಾಗಿ ಲಿಂಗವೇ ಸನ್ನಿಹಿತ ಶರಣನಾಗಿ, ಸಂಗವೇ ಸನುಮತವಾಯಿತ್ತಾಗಿ, ಮತ್ತೊಂದನರಸಲಿನ್ನೆಲ್ಲಿಯದೋ ಅಯ್ಯಾ ಎಂಬ ಶಬ್ದಕ್ಕರ್ಥ. ಅಂತು ಶರಣ ತಾನೆಲ್ಲ ಲಿಂಗದಲ್ಲಿ ಬೆರೆದು ಭಿನ್ನವಿಲ್ಲದೆ ಏಕತೆಯಾಗಿರ್ದನೆಂಬುದೀಗ ಶರಣನೇ ಓಗರವೆಂಬ ಶಬ್ದಕ್ಕರ್ಥ. ಅಂತು ಶರಣನೆಂಬಅಂಗವೆಲ್ಲ ಲಿಂಗವೆಯಾಗಿ ಉಳಿಯಿತ್ತು. ಆ ಉಳಿದ ಲಿಂಗವೇ ಶೇಷವೆನಿಸಿತ್ತು ಎಂಬುದೀಗ ಲಿಂಗವೇ ಪ್ರಸಾದವೆಂಬ ಶಬ್ದಕ್ಕರ್ಥ. ಅಂತಪ್ಪ ಪ್ರಸಾದ ಸಾಧ್ಯವಾಯಿತ್ತು ಶಿವಶರಣಂಗೆಂಬುದೀಗ ಕೂಡಲಚೆನ್ನಸಂಗಯ್ಯಾ ನಿಮ್ಮ ಶರಣಂಗೆಂಬ ಶಬ್ದಕ್ಕರ್ಥ.

(೫). ಸ್ವಯಮಜ್ಜನ, ಸ್ವಯಪೂಜೆ, ಸ್ವಯಾರ್ಪಿತ ನಾನೀನೆಂಬ ಸಂಶಯನಿಂದ ನಿಲವೆಂತಿದ್ದುತೆಂದಡೆ, ಪರತಂತ್ರವ ಮೀರಿ ಭಾವವ ಬಿಟ್ಟು ಘನರವಿಲೋಚನನಾಗಿ ಅನರ್ಪಿವೇ ಭುಂಜಿತ ಸ್ಥೂಲಸೂಕ್ಷ್ಮ ಘನ ನಿತ್ಯವೆಂದರಿದು ಕಾಯಜೀವ ಪ್ರಸಾದವ ಬಿಟ್ಟು ಸರ್ವಭವ ರುಚಿ ಪ್ರಸಾದಿ ಕೂಡಲಚೆನ್ನಸಂಗಯ್ಯನಲ್ಲಿ ಆತ ಸರ್ವಾಂಗ ಪ್ರಸಾದಿ.

**ಅರ್ಥ**:—ಶರಣ ತನ್ನ ಪ್ರಾಣಲಿಂಗಕ್ಕೆ ತನ್ನ ಷಡ್ವಿವೇಕ ಜಲವೇ ಅಭಿಷೇಕವಾಗಿ ತನ್ನ ಮನೋಪುಷ್ಪವೇ ಪೂಜೆಯಾಗಿ ತನ್ನ ಆತ್ಮವ ನೈವೇದ್ಯವ ಮಾಡಿ ಅರ್ಪಿಸಿದನು ಎಂಬುದೀಗ ಸ್ವಯಮಜ್ಜನ ಸ್ವಯಪೂಜೆ ಸ್ವಯಾರ್ಪಿತವೆಂಬ ಶಬ್ದಕ್ಕರ್ಥ. ಅಂತಾದ ಶರಣ ತನ್ನನೆಲ್ಲ ಲಿಂಗಕ್ಕರ್ಪಿಸಿ ಶರಣ ಲಿಂಗವೆಂಬ

ಭೇದವಳಿದು ಶರಣನೆಲ್ಲ ಲಿಂಗವೆಯಾಗಿರ್ದನೆಂಬುದೀಗ ನಾನೀನೆಂಬ ಸಂಶಯು ನಿಂದನಿಲವೆಂಬ ಶಬ್ದ ಕ್ಕರ್ಥ. ಅಂತಪ್ಪ ಶರಣ ತಾನೇ ಲಿಂಗವೆಂಬ ಸ್ವತಂತ್ರ ಭಾವ ತನಗೆ ಘಟಿಸಿತ್ತಾಗಿ ಶರಣಂಗೆ ಲಿಂಗವ ಭಿನ್ನವಿಟ್ಟು ಭಾವಿಸುವ ಭಾವವಿಲ್ಲದೆ ಹೋಯಿತ್ತೆಂಬುದೀಗ ಪರತಂತ್ರವ ಮೀರಿ ಭಾವವ ಬಿಟ್ಟು ಎಂಬ ಶಬ್ದ ಕ್ಕರ್ಥ. ಅಂತು ಮಹಾಘನಲಿಂಗವು ತಾನೆಂದು ಕಂಡಿರ್ಪ ಅಖಂಡಜ್ಞಾನ ದೃಕ್ಕೇಯಾಗಿರ್ದ ಶರಣನೆಂಬುದೀಗ ಘನರವಿಲೋಚನನಾಗಿ ಎಂಬ ಶಬ್ದಕ್ಕರ್ಥ. ಅಂತು ಮಹಾಜ್ಞಾನದರಿವಿನಿಂದ ಆರೂ ಗ್ರಹಿಸಬಾರದ ಮಹಾಘನಲಿಂಗವು ತನ್ನ ನಿಜವೆಂದೇ ಗ್ರಹಿಸಿ ತಾನೇ ಲಿಂಗವೆಂದು ದ್ವೈತಭಾವವಳಿದಿರ್ದ ಶರಣನೆಂಬುದೀಗ ಅನರ್ಪಿತವೇ ಭುಂಜಿತನೆಂಬ ಶಬ್ದ ಕ್ಕರ್ಥ. ಅಂತಪ್ಪ ಮಹಾಜ್ಞಾನದಿಂದ ನಿತ್ಯವಪ್ಪ ಮಹಾವಸ್ತುವಿನ ಸ್ಥೂಲವೇ ಗುರು ಸೂಕ್ಷ್ಮವೇ ಲಿಂಗ ಕಾರಣವೇ ಜಂಗಮವೆಂದರಿದು ಆ ಗುರುಲಿಂಗ ಜಂಗಮದ ತ್ರಿವಿಧ ಪ್ರಸಾದ ಸೇವಕನಾಗಿ ಕ್ರೀವಿಡಿದಿರ್ದ ಶರಣನೆಂಬುದೀಗ ಸ್ಥೂಲಸೂಕ್ಷ್ಮ ಘನನಿತ್ಯವೆಂದರಿದು ಎಂಬ ಶಬ್ದಕ್ಕರ್ಥ. ಅಂತು ಗುರುಲಿಂಗ ಜಂಗಮದ ಪ್ರಸಾದ ಸೇವನೆಯಿಂಡ ಹಲವು ಪರಿಭವಕ್ಕೆ ಕಾರಣವಾದ ಕಾಯಜೀವದ ವಾಸನಾಶೇಷವೆಲ್ಲವು ಬಿಟ್ಟು ಹೋಗಿ ಸರ್ವಾಂಗಲಿಂಗ ಪ್ರಕಾಶಕಾಯುವಾಯಿತ್ತು ಶರಣಂಗೆಂಬುದೀಗ ಕಾಯುಜೀವ ಪ್ರಸಾದವ ಬಿಟ್ಟು ಸರ್ವಭವರುಚಿ ಪ್ರಸಾದಿ ಎಂಬ ಶಬ್ದಕ್ಕರ್ಥ.. ಅಂತಪ್ಪ ಶರಣನ ಸರ್ವಾಂಗವೆಲ್ಲ ಲಿಂಗವೆಂಬುದೀಗ ಆತಸರ್ವಾಂಗ ಪ್ರಸಾದಿ ಎಂಬ ಶಬ್ದಕ್ಕರ್ಥ.

(೬). ಪ್ರಸಾದ ಪ್ರಸಾದವೆಂದೆಂಬರು ಪ್ರಸಾದ ವಾವುದೆಂದರಿಯರು. ಅನ್ನವೇ ಪ್ರಸಾದವೆಂದು ಕೊಂಬುವಾತ ಶರಣನಲ್ಲ. ಅನ್ನವೇ ಪ್ರಸಾದವೆಂದು ಕೊಂಬುವಾತ ಭಕ್ತನಲ್ಲ. ಅದೆಂತೆಂದೊಡೆ, '' ಅನ್ನಮಾಹಾರ ಚೇತ್ ಸರ್ವಂ। ಅನ್ನಮುತ್ಪತ್ತಿ ಹೇತವೇ ಅನ್ನಮ ಭ್ಯಂತರಂ ಪ್ರಾಣಂ ಸರ್ವಂ ಅನ್ನಮಯುಂ ಜಗತ್ ॥ " ಇಂತೆಂದುದಾಗಿ, ಅನ್ನಜೀವಕ್ಕಾಧಾರ, ಅನ್ನವೇ ಸರ್ವಜಗಕ್ಕೆ ಸನ್ಮತ. ಇದು ಕಾರಣ, ಅನ್ನವು, ಪ್ರಸಾದವಲ್ಲ. ಶರಣನಪ್ಪ ಸದ್ಗುರುಸ್ವಾಮಿ ನೆತ್ತಿಯಲ್ಲಿರ್ದ ಉತ್ತಮ ಪ್ರಸಾದವನರುಹಿ, ಬ್ರಹ್ಮರಂಧ್ರದಲ್ಲಿ ಪ್ರಕಾಶಿಸುತ್ತಿರ್ಪ ಮಹಾಲಿಂಗ ದೋಳ್ಪುಟ್ಟಿದ ಪರಮಾಮೃತವೇ ಪ್ರಸಾದ. ಅಂತಪ್ಪ ಪ್ರಸಾದ ಗ್ರಾಹಕತ್ವವೆಂತಪ್ಪುದೆಂದೊಡೆ, ಅಂಗವ ಮರೆದು, ಮನಮಗ್ನವಾಗಿ, ಉಶ್ವಾಸ

ನಿಶ್ವಾಸಂಗಳಡಗಿ, ಪ್ರಾಣನು ಪ್ರಸಾದದೊಳು ಮುಳುಗಿ, ಪರಮಕಾಷ್ಠಿಯಾಗಿ ನಿಂದಾತನೇ ಸೌರಾಷ್ಟ್ರ ಸೋಮೇಶ್ವರನಲ್ಲಿ ಮಹಾಪ್ರಸಾದಿ ಎನಿಸಿಕೊಂಬನು.

(೭). ತೊಟ್ಟ ಹಣ್ಣಿನ ವಿಧಿ ಎನಗೆ. ಪರಿಭವಕ್ಕೆ ತರುವ ಪಂಚಭೂತಂಗಳೆಂಬ ವಾರಕವ ಪಂಚಬ್ರಹ್ಮಕ್ಕೊಪ್ಪಿಸಿದೆ. ಅಗಣಿತ ಕರಣಂಗಳನೊಳಕೊಂಡು ಸುಖ ಒಂದು ದುಃಖ ಹದಿನಾರಕ್ಕೆ ಒಳಗುಮಾಡುವ ಆತ್ಮನೆಂಬ ವಾರಕವ ಪರಬ್ರಹ್ಮಕ್ಕೊಪ್ಪಿಸಿದೆ. ಉತ್ಪತ್ತಿ ಸ್ಥಿತಿ ಪ್ರಳಯವೆಂಬ ವಾರಕಮಂಮೂ ದೇವರಿಗೊಪ್ಪಿಸಿದೆ. ಇಂತಪ್ಪ ಋಣಂಗಳಂ ತಿದ್ದಿ, ಸಿರಿವಂತನಾಗಿ, ಭವರಾಜನ ಬಲವಗೆಲಿದೆ. ಭೂತಳದ ಭೋಗ ನಚ್ಚುಮಚ್ಚು ಎಂಬ ಕಳವ ನಾನು ಹೊಕ್ಕು ಹೊರಟಾಡುತ, ತ್ರಿಭುವನವೆಂಬ ತ್ರಿಪುರಮಂ ಸುಟ್ಟು, ಸಂಸಾರವೆಂಬ ಸಪ್ತ ಸಮುದ್ರಂಗಳ ದಾಂಟಿದೆ. ಉನ್ಮನಿಪುರದ ಬಚ್ಚ ಬರಿಯ ಬೆಳಗಿನ ಬಯಲ ಬ್ರಹ್ಮವ ಮೊರೆಹೊಕ್ಕೆನಯ್ಯ, ಘನಲಿಂಗಿಯ ಮೋಹದಚನ್ನಮಲ್ಲಿಕಾರ್ಜುನಾ.

(೮). ಸರ್ವಾಂಗವನು ಲಿಂಗನಿಷ್ಠೆಯಿಂದ ಗಟ್ಟಿಗೊಳಿಸಿ ಮನವ ಉನ್ಮನಿಯ ಅವಸ್ಥೆಯ ನೈದಿಸಿ, ಶತಪತ್ರದಲ್ಲಿ ಸೈತಿಟ್ಟು, ಲಿಂಗಕ್ಕೆ ಅರ್ಪಿಸಿದ ನೈವೇದ್ಯವ ಲಿಂಗ ನೆನಹಿನಲ್ಲಿಯೇ ಸ್ವೀಕರಿಸುವದು. ಅಂಗಾರ್ಪಿತವ ವಿಸರ್ಜಿಸುವದಯ್ಯ. ತಟ್ಟುವ ಮುಟ್ಟುವ ಸೋಂಕುವ ಮರ್ಮವನರಿದು ಲಿಂಗಮುಖಕ್ಕೆ ನಿವೇದಿಸಿ, ಲಿಂಗಪ್ರಸಾದವ ಸ್ವೀಕರಿಸುವದಲ್ಲದೆ ಪ್ರಸಾದಿಯ ಸ್ಥಲವಿದೆಂಬೆನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

---

## ಪ್ರಸಾದದ ಪರಿಣಾಮುಗಳು

(೧). ಪ್ರಸಾದವೆಂಬುದು ಪುಣ್ಯಪಾಪವೆಂಬ ಕರ್ಮವ ಸಂಹರಿಸುವದು. ಪ್ರಸಾದವೆಂಬುದು ಉತ್ಪತ್ತಿ ಸ್ಥಿತಿಲಯಂಗಳ ಸಂಹರಿಸುವದು. ಪ್ರಸಾದವೆಂಬುದು ಭವಗಜಕ್ಕೆ ಅಂಕುಶವಾಗಿರ್ಪುದು. ಪ್ರಸಾದವೆಂಬುದು ಪರತರ ಮುಕ್ತಿಗೆ ಹಡಗವಾಗಿರ್ಪುದು. ಪ್ರಸಾದವೆಂಬುದು ಎನ್ನಮರಸಿ ನಿನ್ನರಿವ ತೋರುವದು. ಪ್ರಸಾದವೆಂಬುದು ಪರಮಜ್ಞಾನಿಗಳಾದ ಶಿವಶರಣರಿಗೆ ಅಮೃತಮಯವಾಗಿ ತೋರುವದು. ಪ್ರಸಾದವೆಂಬುದು ಭಿನ್ನಜ್ಞಾನಿಗಳಾದ ಜೀವಾತ್ಮರಿಗೆ ಮಹಾಕಠಿಣವಾಗಿ ತೋರುವದು. ಇಂತಪ್ಪ ಶಿವಪ್ರಸಾದದ ಘನವನರಿಯದೆ

ನುಚ್ಚು ರೊಟ್ಟಿ ಪ್ರಸಾದವೆಂದು ಪಡೆದುಕೊಂಡು ಲಿಂಗಕ್ಕೆ ತೋರಿ ತಮ್ಮಂಗಕ್ಕೆ ಹೊಂದಿದಲ್ಲಿ ದುರ್ಗಂಧವಾಗಿ ಮಲಮೂತ್ರ ವಿಸರ್ಜಿಸುವ ಅಮಂಗಳ ಮೂಳ ಹೊಲೆಯರಿಗೆ ಪ್ರಸಾದಿಗಳೆಂದಡೆ ಮೆಚ್ಚರಯ್ಯಾ ನಿಮ್ಮ ಪ್ರಮಥರು, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗನಿರ್ವಾಣಿಯ ಪ್ರಭುವೇ.

(೨). ಅಗ್ನಿ ಮುಟ್ಟಲು ತೃಣವಗ್ನಿಯಪ್ಪುದು ತಪ್ಪದಯ್ಯಾ. ಗುರುಪ್ರಸಾದವಂಗವ ಸೋಂಕಿದಲ್ಲಿ ಸರ್ವಾಂಗ ಗುರುವಪ್ಪುದು ತಪ್ಪದಯ್ಯಾ. ಲಿಂಗಪ್ರಸಾದ ಮನಸೋಂಕಿದಲ್ಲಿ ಮನಲಿಂಗವಪ್ಪುದು ತಪ್ಪದಯ್ಯಾ. ಜಂಗಮ ಪ್ರಸಾದ ಅರಿವ ಸೋಕಿದಲ್ಲಿ ಅಖಂಡಿತ ಪ್ರಸನ್ನ ಪ್ರಸಾದವಪ್ಪುದು ತಪ್ಪದಯ್ಯಾ. ಶಿವಶಿವಾ ಪ್ರಸಾದದ ಮಹಿಮೆಯನೇನೆಂದು ಪಮಿಸುವೆ? ಪ್ರಸಾದವೇ ಗುರು, ಪ್ರಸಾದವೇ ಲಿಂಗ, ಪ್ರಸಾದವೇ ಜಂಗಮ, ಪ್ರಸಾದವೇ ಪರಾತ್ಪರ, ಪ್ರಸಾದವೇ ಪರಮಾನಂದ, ಪ್ರಸಾದವೇ ಪರಮಾಮೃತ, ಪ್ರಸಾದವೇ ಪರಮಜ್ಞಾನ, ಪ್ರಸಾದವೇ ವಾಙ್ಮನಾತೀತ, ಪ್ರಸಾದವೇ ನಿತ್ಯಪರಿಪೂರ್ಣ ಇಂತಪ್ಪ ಪ್ರಸಾದವ ಕೊಂಡು ಬದುಕಿದೆನಯ್ಯಾ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

## ಮನೋವಿಕಾರಗಳನ್ನು ದೂರಮಾಡುವದು.

(೩). ಲಿಂಗವಿಕಾರಿಗೆ ಅಂಗವಿಕಾರವೆಂಬುದಿಲ್ಲ. ಜಂಗಮವಿಕಾರಿಗೆ ಧನವಿಕಾರವೆಂಬುದಿಲ್ಲ. ಪ್ರಸಾದ ವಿಕಾರಿಗೆ ಮನವಿಕಾರವೆಂಬುದಿಲ್ಲ. ಇಂತೀ ತ್ರಿವಿಧ ಗುಣವನರಿದಾತನು ಅಚ್ಚಲಿಂಗೈಕ್ಯನು, ಅಚಲಿತ ಮಹಾಮಹಿಮನು, ಕೂಡಲಸಂಗಮದೇವಾ.

(೪). ಎನ್ನ ಕಾಯಕ್ಕೆ ಸೀಮೆಯ ಮಾಡುವೆ. ಎನ್ನ ಕಾಯದೊಳಗಿರ್ದ ಕರಣಾದಿ ಗುಣಂಗಳಿಗೆ ಸೀಮೆಯ ಮಾಡುವೆ, ಎನ್ನ ಶ್ರೋತ್ರಕ್ಕೆ ಸೀಮೆಯ ಮಾಡುವೆ. ಎನ್ನ ಶ್ರೋತ್ರದೊಳಗಿರ್ದ ಶಬ್ದಕ್ಕೆ ಸೀಮೆಯ ಮಾಡುವೆ. ಎನ್ನ ತ್ವಕ್ಕಿಂಗೆ ಸೀಮೆಯ ಮಾಡುವೆ. ಎನತ್ವಕ್ಕಿನೊಳಗಣ ಸ್ಪರ್ಶನಕ್ಕೆ ಸೀಮೆಯ ಮಾಡುವೆ. ಎನ್ನ ನೇತ್ರಕ್ಕೆ ಸೀಮೆಯ ಮಾಡುವೆ. ಎನ್ನ ನೇತ್ರದೊಳಗಿರ್ದ ರೂಪಿಂಗೆ ಸೀಮೆಯ ಮಾಡುವೆ. ಎನ್ನ ಜಿಹ್ವೆಗೆ ಸೀಮೆಯ ಮಾಡುವೆ. ಎನ್ನ ಜಿಹ್ವೆಯೊಳಗಿರ್ದ ರುಚಿಗೆ ಸೀಮೆಯ ಮಾಡುವೆ. ಎನ್ನ ಘ್ರಾಣಕ್ಕ ಸೀಮೆಯ ಮಾಡುವೆ. ಎನ್ನ ಘ್ರಾಣದೊಳಗಿರ್ದ ಗಂಧಕ್ಕೆ ಸೀಮೆಯ ಮಾಡುವೆ. ಎನ್ನ

ಮನಕ್ಕೆ ಸೀಮೆಯು ಮಾಡುವೆ. ಎನ್ನ ಮನದೊಳಗಿರ್ದ ಮರವೆಗೆ ಸೀಮೆಯು ಮಾಡುವೆ. ಎನ್ನ ಭಾವಕ್ಕೆ ಸೀಮೆಯು ಮಾಡುವೆ. ಎನ್ನ ಭಾವದೊಳಗಿರ್ದ ಭ್ರಾಂತಿಗೆ ಸೀಮೆಯು ಮಾಡುವೆ. ಎನ್ನ ಪ್ರಾಣಕ್ಕೆ ಸೀಮೆಯು ಮಾಡುವೆ. ಎನ್ನ ಪ್ರಾಣಲಿಂಗದಲ್ಲಿ ಪ್ರಸಾದ ರೂಪಾಗಿ ಹಿಂಗದೆ ನೀನಿರುವ ಕಾರಣ, ಕೂಡಲ ಸಂಗಮದೇವಾ.

## ಭವವನ್ನು ಛೇದಿಸುವದು.

(೫). ಕಬ್ಬುನದ ಗುಂಡಿಗೆಯಲ್ಲಿ ರಸದ ಭಂಡವ ತುಂಬಿ ಹೊನ್ನ ಮಾಡಬಲ್ಲಡೆ, ಅದು ಪರುಷಕಾಣಿರಣ್ಣಾ. ಲಿಂಗ ಬಂದುಂಬಡೆ, ಪ್ರಸಾದಕಾಯ ವಪ್ಪೊಡೆ ಅಂದಂದಿಂಗೆ ಭವಕರ್ಮ ಮುಟ್ಟಲಮ್ಮವು ಕಾಣಿರೇ. ಆದಿಯ ಪ್ರಸಾದಿಗೆ ಬಾಧೆ ಇಲ್ಲ ಕಾಣಿರೇ. ಶಶಿಯಲ್ಲಿ ಕರಗದು, ಬಿಸಲಲ್ಲಿ ಕೊರಗದು ರಸ ಉಂಡ ಹೊನ್ನು ಗುಹೇಶ್ವರಾ ನಿಮ್ಮ ಶರಣಾ.

**ಅರ್ಥ**:—ಅವಲೋಹದ ಕರಡಿಗೆಯೊಳಗೆ ಸಿದ್ಧ ರಸದ ಭಾಂಡವ ತುಂಬಿ ಹೊನ್ನ ಮಾಡುವಂತೆ ಎಂಬುದೀಗ ಕಬ್ಬುನದ ಗುಂಡಿಗೆಯಲ್ಲಿ ರಸದ ಭಂಡವ ತುಂಬಿ ಹೊನ್ನ ಮಾಡಬಲ್ಲಡೆ ಅದು ಪರುಷಕಾಣಿರಣ್ಣಾ ಎಂಬ ಶಬ್ದಕ್ಕರ್ಥ. ಸರ್ವಾಂಗಸುಖವನು ಲಿಂಗಗ್ರಾಹಕತ್ವಮಂ ಮಾಡಲು ಎಂಬುದೀಗ ಲಿಂಗ ಬಂದುಂಬಡೆ ಎಂಬ ಶಬ್ದಕ್ಕರ್ಥ. ಆ ಲಿಂಗ ಗ್ರಾಹಕತ್ವದಿಂ ಅಲ್ಲಿ ಪ್ರಸಾದ ನಿಕ್ಷೇಪವಪ್ಪುದು. ಪ್ರಸಾದ ನಿಕ್ಷೇಪದಿಂ ತನ್ನ ದೇಹಮನ ಪ್ರಾಣೇಂದ್ರಿಯಂಗಳು ಸಹಿತ ಪ್ರಸಾದ ಕಾಯವಾಗಿ ಭವಚ್ಛೇದನವಪ್ಪುದೆಂಬುದೀಗ ಪ್ರಸಾದ ಕಾಯವಪ್ಪೊಡೆ, ಅಂದಂದಿಂಗೆ ಭವಕರ್ಮ ಮುಟ್ಟಲಮ್ಮವು ನೋಡಿರೇ ಎಂಬ ಶಬ್ದಾನ್ವಯ. ಅಂತಪ್ಪ ಪ್ರಸಾದವೇ ಅನಾದಿಸಂಸಿದ್ಧಪ್ರಸಾದವೆಂಬುದೀಗ ಆದಿಯ ಪ್ರಸಾದಕ್ಕೆ ಬಾಧೆ ಇಲ್ಲ ಕಾಣಿರೇ ಎಂಬ ಶಬ್ದಕ್ಕರ್ಥ. ಅಂತಪ್ಪ ಪ್ರಸಾದಕಾಯ ಚಂದ್ರಸೂರ್ಯರ ಪ್ರಭೆಯೊಳಗೆ ಸಿಲ್ಕದೆ ಸಿದ್ಧರಸವನುಂಡ ಮಿಸುನಿಯಂತಿಪ್ಪುದೆಂಬುದೀಗ ಶಶಿಯಲ್ಲಿ ಕರಗದು ಬಿಸಲಲ್ಲಿ ಕೊರಗದು ರಸ ಉಂಡ ಹೊನ್ನು ಗುಹೇಶ್ವರಾ ನಿಮ್ಮ ಪ್ರಸಾದ ಎಂಬ ಶಬ್ದಕ್ಕರ್ಥ.

(೬) ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದವೆಂತೆಂದು ಬೆಸಗೊಂಡಡೆ, ಹೇಳಿಹೇ ಕೇಳಿರಿ. ಶುದ್ಧ ಪ್ರಸಾದ ಗುರುಮುಖದಿಂದ ಬಂದುದು. ಸಿದ್ಧ ಪ್ರಸಾದ ಲಿಂಗ

ಮುಖದಿಂದ ಬಂದುದು. ಪ್ರಸಿದ್ಧ ಪ್ರಸಾದ ಜಂಗಮ ಮುಖದಿಂ ಬಂದುದು. ಇದರೊಳಗಾವುದು ಘನವೆಂಬೆ? ಅವುದು ಕಿರಿದೆಂಬೆ? ಘನಕ್ಕೆ ಘನವಾದ ಮಹಾಘನ ಪ್ರಸಾದ. ಗುರುಪ್ರಸಾದ ತನುಶುದ್ಧ, ಲಿಂಗಪ್ರಸಾದ ಮನಶುದ್ಧ, ಜಂಗಮಪ್ರಸಾದ ಪ್ರಾಣಶುದ್ಧವಾಯಿತ್ತು. ಶರಣರ ಸಂಗದಿಂದ ಸಾಧ್ಯವಾಯಿತ್ತು. ಇದು ಕಾರಣ ಕೂಡಲಚನ್ನಸಂಗಮದೇವಯ್ಯಾ ಈ ತ್ರಿವಿಧ ಪ್ರಸಾದವ ಕೊಂಡು ಎನ್ನ ಭವನಾಸ್ತಿಯಾಯಿತ್ತು.

(೭). ಕಾಯಗುರು, ಪ್ರಾಣಲಿಂಗ, ಜ್ಞಾನಜಂಗಮ. ಕಾಯದಲ್ಲಿ ಶುದ್ಧ ಪ್ರಸಾದ, ಪ್ರಾಣದಲ್ಲಿ ಸಿದ್ಧ ಪ್ರಸಾದ, ಜ್ಞಾನದಲ್ಲಿ ಪ್ರಸಿದ್ಧಪ್ರಸಾದ. ಇಂತೀ ತ್ರಿವಿಧ ಪ್ರಸಾದ ನಿರ್ಣಯ ಕೂಡಚನ್ನಸಂಗಾ ನಿಮ್ಮ ಶರಣಂಗೆ.

## ೬ ಅಶುಚಿಭಾವವನ್ನು ದೂರಮಾಡುವದು.

(೮). ಅವುದಾನೊಂದು ಪದಾರ್ಥವ ಲಿಂಗಾರ್ಪಿತ ಮಾಡಿದ ಬಳಿಕ ಪದಾರ್ಥದ ಪೂರ್ವಾಶ್ರಯವಳಿದು ಪ್ರಸಾದವಾಯಿತ್ತು ನೋಡಾ. ಆ ಪ್ರಸಾದವ ಮುಟ್ಟುವ ಹಸ್ತಪ್ರಸಾದ ಹಸ್ತ. ಆ ಪ್ರಸಾದವಕೊಂಬ ಜಿಹ್ವೆ ಪ್ರಸಾದ ಜಿಹ್ವೆ. ಆ ಪ್ರಸಾದಕ್ಕೆ ಭೋಜನವಾಗಿಪ್ಪ ಸರ್ವಾಂಗವು ಪ್ರಸಾದ ಕಾಯ ನೋಡಾ. ಪ್ರಸಾದವೆಂದಡೆ ಪರಶಿವಸ್ವರೂಪು ತಾನೇ ನೋಡಾ ಈ ಪರಮ ಪ್ರಸಾದ ಗ್ರಾಹಕನಾದ ಪ್ರಸಾದಿಯ ಬಾಹ್ಯಾಭ್ಯಂತರವೆಲ್ಲ ಪ್ರಸಾದಮಯ ನೋಡಾ. ಪ್ರಸಾದ ಸದ್ಭಾವದಲ್ಲಿ ಎಂಜಲೆಂಬ ಸಂಶಯ ಸುಳಿಯಲಾಗದು. ಎಂಜಲೆಂಬ ಸಂಶಯ ಸುಳಿದರೆ ಅದು ಅಜ್ಞಾನ ನೋಡಾ. ಅವಗೆ ಪ್ರಥಮ ಪ್ರಸಾದವಿಲ್ಲ ಕಾಣಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೯). ನಮಗೊಬ್ಬರ ಎಂಜಲು ಸೇರದೆಂದು ಶುಚಿತನದಲ್ಲಿ ಬಂದು ಕುಳಿತಿರ್ದನೆಂದು ಬರಿಯ ಮಾತಿನ ಭುಂಜಕರು ನೀವು ಕೇಳಿರೋ. ನೀವು ತಂದು ಕುಡಿವ ನೀರು ಜಲಚರಾದಿಗಳೆಂಜಲು, ಮೃಗಪಕ್ಷಿಗಳೆಂಜಲು. ಭಾವಿಯ ಹೋಗಿ ಕೈಕಾಲ ತೊಳೆದು ಬಾಯ ಮುಕ್ಕಳಿಸಿದಲ್ಲಿ ನರರ ಎಂಜಲಲ್ಲವೇ? ಇಂತೀ ಹಲವು ಎಂಜಲು ಬೆರಸಿದ ಸಕಲ ಪದಾರ್ಥವನು ನಲಿನಲಿದು ಕುಡಿದಲ್ಲಿ ಎಂಜಲು ಹಿಂಗಿದ ಠಾವ ತೋರಿರಣ್ಣಾ? ಇದ ಬಲ್ಲ ಭಕ್ತರು ಸರ್ವ ಪದಾರ್ಥವನು ಕೊಟ್ಟು ಕೊಂಬಲ್ಲಿ ಪ್ರಸಾದವಾಯಿತ್ತು. ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾ

ದವ ಕೊಂಡಲ್ಲಿ ಸರ್ವ ಎಂಜಲು ಹೋಯಿತ್ತು. ಇದನರಿಯದಿರ್ದಡೆ ಸರ್ವ ಎಂಜಲು ಹೊಟ್ಟೆಯೊಳಗೆ ಮುಳುಗಿದೆನೆಂದಾತ ನಂಬಿಗಚೌಡಯ್ಯ.

---

## ಪ್ರಸಾದಿಯ ಕಡೆಯ ಸ್ಥಿತಿ.

(೧). ಮಾಡುವ ತನುವು ನೀವೇಯಾದಿರಾಗಿ, ನೀಡುವ ದ್ರವ್ಯವು ನೀವೇಯಾದಿರಾಗಿ, ಕೊಡುವ ಮನವು ನೀವೇಯಾದಿರಾಗಿ ಅಖಂಡೇಶ್ವರಾ ನಾನೂ ಇಲ್ಲ, ನೀನೂ ಇಲ್ಲ, ಏನೇನೂ ಇಲ್ಲ.

(೨). ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ. ಮನ ನಿಮ್ಮ ದೆಂದ ಬಳಿಕ ಎನಗೆ ಬೇರೆ ಮನವಿಲ್ಲ. ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ. ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ, ಎನಗೆ ಬೇರೆ ವಿಚಾರ ಉಂಟೇ ಕೂಡಲಸಂಗಮದೇವಾ ?

(೩). ತನುವ ಕೊಟ್ಟು ತನುಬಯಲಾಯಿತ್ತು. ಮನವ ಕೊಟ್ಟು ಮನಬಯಲಾಯಿತ್ತು. ಧನವ ಕೊಟ್ಟು ಧನಬಯಲಾಯಿತ್ತು. ಇಂತೀ ತ್ರಿವಿಧ ವನ್ನು ಕೊಟ್ಟ ಕಾರಣ ಕೂಡಲಸಂಗಯ್ಯನಲ್ಲಿ ಬಸವಣ್ಣಂಗೆ ಬಯಲ ಸಮಾ ಧಿಯಾಯಿತ್ತು.

(೪). ನಾನು ನಾನಾದ ಕಾರಣ ಎನಗೆ ಗುರುವಿಲ್ಲ. ನಾನೆಂಬುದನರಿ ಯೆನಾಗಿ ಎನಗಾಲಿಂಗವಿಲ್ಲ. ನಾಮಾಡದವನಾಗಿ ಎನಗಾಜಂಗಮವಿಲ್ಲ. ಇಂತೀ ಮೂರು ಇಲ್ಲದವಂಗೆ ಭಕ್ತಿ ಪಥವಿಲ್ಲ. ಇದ ನಿನ್ನಾರಕೇಳುವೆ? ರಕ್ಕಸನೊಡೆಯ ಕೊಟ್ಟುದ ಬೇಡಾ.

**ಅರ್ಥ**:—ಭಕ್ತನು ದೀರ್ಘದಂಡ ಮೊದಲಾದ ಭಕ್ತಿಯಿಂದೆ ತನು ಪದಾರ್ಥವ ಗುರುವಿಂಗರ್ಪಿಸಲು, ಅರ್ಪಿತವಾದ ತನುವೆಲ್ಲವು ಗುರುಸ್ವರೂಪ ವಾದ ಕಾರಣ, ಆ ಭಕ್ತಂಗೆ ಗುರುಭಿನ್ನವಿಟ್ಟಿಲ್ಲ. ಮನೋಪ್ರಪಂಚವನರಿಯದೆ, ಅಷ್ಟವಿಧಾರ್ಚನೆ ಮಾಡುವನೆವದಿಂದ ಮನಪದಾರ್ಥವ ಲಿಂಗಕ್ಕರ್ಪಿಸಲು, ಅರ್ಪಿತವಾದ ಮನವೆಲ್ಲವು ಲಿಂಗಸ್ವರೂಪವಾಯಿತ್ತಾಗಿ, ಆ ಭಕ್ತಂಗೆ ಲಿಂಗವು ಭಿನ್ನವಿಟ್ಟಿಲ್ಲ. ಭಿನ್ನವಿಟ್ಟು ಭಕ್ತಿಯು ಮಾಡದೆ, ಸಮರಸಭಾವದಿ ಸೆಜ್ಜೆ, ಶಿವ ಧಾರ ವಸ್ತ್ರ ಕಪ್ಪಟಂಗಳ ಕೊಡುವನೆವದಿಂದ ಧನ ಪದಾರ್ಥವ ಜಂಗಮಕ್ಕ

ರ್ಪಿಸಲು, ಅರ್ಪಿತವಾದ ಪ್ರಾಣಾದಿ ದ್ರವ್ಯವೆಲ್ಲವು ಜಂಗಮಸ್ವರೂಪವಾಯಿತ್ತಾಗಿ, ಆ ಭಕ್ತರಿಗೆ ಜಂಗಮವು ಭಿನ್ನವಿಟ್ಟಿಲ್ಲ. ಇಂತೀ ಗುರುಲಿಂಗ ಜಂಗಮವು ಭಿನ್ನವಿಲ್ಲದೆ, ತನುವೇಗುರು, ಮನವೇಲಿಂಗ, ಧನವೇ ಜಂಗಮವಾದವಂಗೆ, ಉಪಾಧಿಭಕ್ತಿ ಮಾರ್ಗವಿಲ್ಲವೆಂಬುದೊಂದು ಭೇದ. ತನುಮನ ಪ್ರಾಣಂಗಳಲ್ಲಿ ಗುರುಲಿಂಗ ಜಂಗಮವು ಭಿನ್ನವಿಲ್ಲದವಂಗೆ ಶಿವಭಕ್ತಿ ಮಾರ್ಗವು ಭಿನ್ನವಿಲ್ಲ. ಈ ಸಮರಸಭಾವವನು ಉಪಾಧಿಕರಿಂದ ಕೇಳಲೂ ಇಲ್ಲ, ತಾನವರಿಗೆ ಹೇಳಲೂ ಇಲ್ಲ, ಎಂಬುದರ್ಥ.

( ೫ ). ಪುಣ್ಯ ಪಾಪವಿಲ್ಲಾಗಿ, ಯಮನ ಹಂಗಿಲ್ಲ. ಬಂದುದ ನುಂಬನಾಗಿ, ಮಾನವರ ಹಂಗಿಲ್ಲ. ಭವಗೆಟ್ಟನಾಗಿ, ದೈವದ ಹಂಗಿಲ್ಲ. ಸತ್ಯಜ್ಞಾನಾನಂದವೇ ತಾನಾಗಿ, ಇನ್ನಾರ ಹಂಗಿಲ್ಲ. ಇನ್ನಾರ ಹಂಗಿಲ್ಲದಾತ ಗುಹೇಶ್ವರನಲ್ಲಯ್ಯನೊಬ್ಬನೇ.

( ೬ ). ಅನ್ಯವಿಚಾರವ ಮರೆದು, ನಿಮ್ಮ ವಿಚಾರವೆಡೆಗೊಂಡಿತ್ತಾಗಿ, ಪ್ರಾಣದ ನೆಲೆಗೆಟ್ಟಿತ್ತಯ್ಯ. ದಶವಾಯುಗಳ ಸಂಚ ತಪ್ಪಿತ್ತಯ್ಯ. ಕರಣಂಗಳ ಲಿಂಗದ ಕಿರಣಂಗಳು ನುಂಗಿದವಯ್ಯ. ಒಳಗೆ ಕರತಳಾಮಳೋಕ್ಯ ಗೊಂಡೆನಯ್ಯ. ಹೊರಗನೆಂದರಿಯದೆ, ನೀನೇ ಗತಿಯಾಗಿರ್ದೆ ಕೂಡಲಸಂಗಮದೇವಾ.

( ೭ ). ಕರಣಾದಿಗುಣಂಗಳಳಿದು ನವಚಕ್ರಂಗಳು ಭಿನ್ನವಾದ ಬಳಿಕ ಇನ್ನೇನೋ, ಇನ್ನೇನೋ ? ಸ್ವರ್ಗವಿಲ್ಲ, ನರಕವಿಲ್ಲ, ಇನ್ನೇನೋ, ಇನ್ನೇನೋ ? ಪುಣ್ಯವಿಲ್ಲ, ಪಾಪವಿಲ್ಲ, ಇನ್ನೇನೋ, ಇನ್ನೇನೋ ? ಗುಹೇಶ್ವರ ಲಿಂಗ ವೇಧಿಸಿ. ಸುಖಿಯಾದ ಬಳಿಕ ಇನ್ನೇನೋ ಇನ್ನೇನೋ ?

( ೮ ). ಶಬ್ದವೆಂಬೆನೆ, ಶ್ರೋತ್ರದೆಂಜಲು. ಸ್ಪರ್ಶವೆಂಬೆನೆ, ತ್ವಕ್ಕಿನೆಂಜಲು. ರೂಪೆಂಬೆನೇ, ನೇತ್ರದೆಂಜಲು. ರುಚಿಎಂಬೆನೆ, ಜಿಹ್ವೆಯೆಂಜಲು. ಪರಿಮಳವೆಂಬೆನೆ, ಘ್ರಾಣದೆಂಜಲು. ನಾನೆಂಬೆನೆ, ಅರಿವಿನೆಂಜಲು. ಎಂಜಲೆಂಬ ಭಂಗವಳಿದು, ಬೆಳಗಿನೊಳಗಣ ಬೆಳಗು ಗುಹೇಶ್ವರಾ ನಿಮ್ಮ ಶರಣ.

( ೯ ). ಖಂಡಿತಜ್ಞಾನವಳಿದು, ಅಖಂಡಿತಜ್ಞಾನಸ್ವರೂಪುವಾದುದೇ ತೃಪ್ತಿ. ಅಂಥ ತೃಪ್ತಿಯ ಅಮೃತ ಸೇವನೆಯಿಂದ ಪ್ರಸಾದ. ಪ್ರಸಾದಿ ಶರಣಂಗೆ

ಅಂತರಂಗ ಬಹಿರಂಗವೆಂಬ ಉಭಯಾಂಗವಿಲ್ಲ. ಈ ಮಹಾನಂದರೂಪ ಪ್ರಸಾದಿ ದಶದಿಗ್ಭರಿತನಾಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಕೂಡಿಬೆಳಗುತ್ತಿಹನು.

---

## ಪ್ರಸಾದಿಯ ಲಿಂಗಪೂಜೆ.

(೧). ಲಿಂಗಾಂಗ ಸಂಬಂಧದ ಭೇದವನರಿಯದೆ ನಾವು ಲಿಂಗಾಂಗ ಸಂಬಂಧಿಗಳೆಂದು ಅಂದ ಚಂದವಾಗಿ ನುಡಿದುಕೊಂಬ ಕ್ರಿಯಾಭ್ರಾಂತರು ನೀವು ಕೇಳಿರೋ, ಲಿಂಗಾಂಗ ಸಂಬಂಧದ ಉತ್ತರೋತ್ತರ ನಿರ್ಣಯವ. ಹೊರಗಣ ಹೂವನೇ ತಂದು ಸ್ಥೂಲ ತನುವಿನ ಮೇಲಿಪ್ಪ ಆಚಾರ ಲಿಂಗವಂ ಪೂಜೆಯ ಮಾಡಿ ತನುವ ಸಮರ್ಪಿಸಿ ಬೇಡಿಕೊಂಡು ಹೊರಗಣ ಹೆಣ್ಣು ಹೊನ್ನು ಮಣ್ಣು ಷಟ್‌ಕರ್ಮಂಗಳ ಬಿಟ್ಟಡೆ ಇಷ್ಟಲಿಂಗದ ಪೂಜೆ. ಒಳಗಣ ಹೂವನೆ ತಂದು ಸೂಕ್ಷ್ಮ ತನುವಿನ ಮೇಲಿಪ್ಪ ಜಂಗಮ ಲಿಂಗವಂ ಪೂಜೆಯುಮಾಡಿ ಮನವ ಸಮರ್ಪಿಸಿ ಉಪಾವಸ್ಥೆಯಂ ಮಾಡಿ, ಒಳಗಣ ಅಂತಃಕರಣಂಗಳಂ ಸುಟ್ಟರೆ ಪ್ರಾಣಲಿಂಗದ ಪೂಜೆ. ಮನೋ ಮಧ್ಯದೊಳಗಿಪ್ಪ ಭಾವಪುಷ್ಪವನೇ ತಂದು ಕಾರಣ ತನುವಿನ ಮೇಲಿಪ್ಪ ತೃಪ್ತಿ ಲಿಂಗಮಂ ಪೂಜೆಯುಮಾಡಿ ಸಂತೋಷಮಂ ಸಮರ್ಪಿಸಿ ದೈನ್ಯಂಬಟ್ಟು ಜ್ಞಾನ ಕ್ರಿಯೆಗಳಳಿದುದೇ ಭಾವಲಿಂಗ ಪೂಜೆ ಈ ಪ್ರಕಾರದ ಲಿಂಗಾಂಗ ಸಾಧಕತ್ವಮಂ ಶಿವರಾತ್ರಿಯ ಸಂಕಣ್ಣಂಗೊಲಿದಂತೆ ಎನಗೊಲಿದು ಕರುಣಿಸಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೨). ಅಯ್ಯಾ ನಿಮಗೆ ಪತ್ರ ಪುಷ್ಪದಲ್ಲಿ ಪೂಜೆಯ ಮಾಡುತ್ತಿದ್ದರೇನು, ಸರ್ವೇಂದ್ರಿಯಂಗಳು ಸೋಂಕಿದವೆಲ್ಲ ನಿಮ್ಮ ಪೂಜೆಯಾಗಿ ಮಾಡದನ್ನಕ್ಕರ? ಅಯ್ಯಾ ನಿಮ್ಮ ನೆನೆವುತ್ತಿದ್ದರೇನು, ನೆನೆವ ಮನದಲ್ಲಿ ನಿಮ್ಮ ನಲೆಗೊಳಿಸಿ ಮನ ನಿಮ್ಮಲ್ಲಿ ಲೀಯವಾಗದನ್ನಕ್ಕರ? ಅಯ್ಯಾ ನಿಮಗೆ ಸಕಲ ಸುಯಿಧಾನವನರ್ಪಿಸುತ್ತಿದ್ದರೇನು, ಅರ್ಪಣದೊಳಗೆ ತನ್ನ ನಿಮ್ಮಲ್ಲಿ ಅರ್ಪಿಸಿ ನಿಮ್ಮೊಳಗಾಗದನ್ನಕ್ಕರ? ಅದು ಕಾರಣ ತನುಗುಣವಿಡಿದು ಲಿಂಗವಮುಟ್ಟಿ ಪೂಜೆಯ ಮಾಡಿದವರೆಲ್ಲ ನಿಮಗೆ ಮುನ್ನವೇ ದೂರಾದರು. ನಾನಿದನರಿದು ಅವಿರಳ ಲಿಂಗಾರ್ಚನೆಯ ಮಾಡಿ, ನಿಮ್ಮೊಳಗಾದೆನೆಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

---

# ಪ್ರಸಾದಿಯು ತನ್ನ ಕ್ರಿಯೆಗಳನ್ನು ಮಾಡುವ ರೀತಿ.

## ವಿಶ್ವಾಸದಿಂದ ಅರ್ಪಿಸುವದು.

೧ (೧). ನಂಬಿದರೆ ಪ್ರಸಾದ. ನಂಬದಿದ್ದರೆ ವಿಷವು ನೋಡಾ. ತುಡುಕ ಬಾರದು ನೋಡಾ ಲಿಂಗಪ್ರಸಾದ, ಸಂಗನಪ್ರಸಾದ. ಕೂಡಲಸಂಗನ ಪ್ರಸಾದ ಸಿಂಗಿ ಕಾಳಕೂಟ ವಿಷವು.

(೨). ಬೆಕ್ಕು ನಾಯಿ ಶಿವಭಕ್ತರು ಒಕ್ಕು ಮಿಕ್ಕುದ ಕೊಂಡರೆ ಸದಾಚಾರಿಯಾಗಬಲ್ಲವೇ? ಭೃತ್ಯಾಚಾರಿಯಾಗಬಲ್ಲವೇ? ಜಂಗಮಲಿಂಗದಲ್ಲಿ ನಂಬುಗೆ ಇಲ್ಲದವನು ಕೊಂಡ ಪ್ರಸಾದ ಬೆಕ್ಕು ನಾಯಿ ತಿಂದಂತೆ ಕಾಣಾ ರಾಮನಾಥಾ.

(೩). ಹುತ್ತದ ಮೇಲಣ ರಜ್ಜು ಮುಟ್ಟಿದರೆ ಸಾವರು ಶಂಕಿತರಾದವರು. ಸರ್ಪದಷ್ಟವಾದರೆಯೂ ಸಾಯರು ನಿಶ್ಶಂಕಿತರಾದವರು. ಕೂಡಲ ಸಂಗಮದೇವಯ್ಯ ಶಂಕಿತಂಗೆ ಪ್ರಸಾದ ಸಿಂಗಿ ಕಾಳಕೂಟ ವಿಷವು.

## ಪ್ರಕಟಗುಪ್ತವೆಂಬುದಿಲ್ಲ.

(೪). ಪ್ರಕಟದಿಂದೆ ಕೊಂಬುದು ಪ್ರಸಾದವಲ್ಲ. ಗುಪ್ತದಲ್ಲಿ ಕೊಂಬುದು ಪ್ರಸಾದವಲ್ಲ. ಪ್ರಕಟದಂತುಟೇ ಪ್ರಸಾದ? ಗುಪ್ತದಂತುಟೇ ಪ್ರಸಾದ? ಪ್ರಸಾದದ ಅಂತುವನೇನೆಂದು ಹೇಳುವೆನಯ್ಯ? ಈ ಲೋಕದ ಭ್ರಾಂತರೊಡನೆ ಆ ಮಹಾಘನಪ್ರಸಾದದ ಮಹಿಮೆಯನೇನೆಂದುಸುರುವೆನಯ್ಯ? "ಆರೂಢಂ ಚ ಪ್ರಸಾದೇನಾಂ । ಗುಪ್ತಂ ಚ ನಾಂ ಪ್ರಸಾದಿತಂ ॥ ಗೋಪ್ಯೈರೂಢ ಮಯಾ ಸಂಸ್ತಿ ಮಹಾಪ್ರಸಾದಿ ಸಜ್ಜನಂ ॥ ಎಂದುದಾಗಿ ಪ್ರಕಟಗುಪ್ತವ ಕಳೆದು, ನೆಟ್ಟನೆ ಪ್ರಸಾದದ ಕುಳವ ಬಲ್ಲಡೆ, ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಆತನೇ ನಿತ್ಯಪ್ರಸಾದಿ.

## ಸಹಜಭಾವದಿಂದ ಅರ್ಪಿಸುವದು.

(೫). ಮೊಸಲು ಬೀಸರವೋದ ಪರಿಯನೋಡಾ. ಕಾಲು ತಾಕಿದ ಆಗವಣಿ ಕೈಮುಟ್ಟಿದರ್ಪಿತ ಮನಮುಟ್ಟಿದಾರೋಗಣೆ ಏನೆಂತು ಸರಿ ಎಂಬೆ

ನಯ್ಯಾ? ಬಂದ ಪರಿಯಲ್ಲಿ ಪರಿಣಾಮಿಸಿ, ನಿಂದ ಪರಿಯಲ್ಲಿ ನಿಜವಮಾಡಿ, ಆನಂದ ಪರಿಯಲ್ಲಿ ಕೈಕೋ ಕೂಡಲಸಂಗಮದೇವಾ.

(೬). ಶುದ್ಧವಾಯಿತ್ತೆಂಬೆನೆ? ಸುಯಿಧಾನಿನಾನಲ್ಲ. ಅನುವಾಯಿತ್ತೆಂಬೆನೆ? ಅವಧಾನಿನಾನಲ್ಲ. ಸುಯಿಧಾನದ ಅವಧಾನದ ಅರ್ಪಿತವ ನಾನರಿಯೆ. ಇರ್ದಪರಿಯಲ್ಲಿ ನೀಡಿದಡೆ, ಬಂದ ಪರಿಯಲ್ಲಿ ಕೈಕೋ, ಕೂಡಲಸಂಗಮದೇವಾ.

## ಕಾಮರಹಿತನಾಗಿ ಅರ್ಪಿಸುವದು.

(೭). ಹಸಿವಾಯಿತ್ತೆಂದು ಅರ್ಪಿತವ ಮಾಡುವರಯ್ಯಾ. ತೃಷೆಯಾಯಿತ್ತೆಂದು, ಮಜ್ಜನಕ್ಕೆರವರಯ್ಯಾ. ಹಸಿವು ತೃಷೆ ವಿಷಯಕ್ಕೆ ಬಳಲುವರಯ್ಯಾ. ಹಸಿವಾಯಿತ್ತೆಂದು ಅರ್ಪಿತವ ಮಾಡಲಿಲ್ಲ. ತೃಷೆಯಾಯಿತ್ತೆಂದು ಮಜ್ಜನಕ್ಕೆರೆಯಲಿಲ್ಲ. ಇದು ಕಾರಣ ಕೂಡಸಂಗಮದೇವರ ಪೂಜಿಸಿ, ಪ್ರಸಾದವ ಪಡೆದವರೊಬ್ಬರೂ ಇಲ್ಲ.

(೮). ಹಸಿವಾಯಿತ್ತೆಂದು ಹಸಿದು ಮಜ್ಜನಕ್ಕೆರೆವರಯ್ಯಾ. ತೃಷೆಯಾಯಿತ್ತೆಂದು ಅರ್ಪಿತವ ಮಾಡುವರಯ್ಯಾ. ಇದೆಂತು ಭಕ್ತಿ ಸಂಬಂಧ? ಇದೆಂತು ಶರಣ ಸಂಬಂಧ? ಇದೆಂತು ಲಿಂಗಸಂಬಂಧ? ಕಾರಣವಿಲ್ಲದ ಭಕ್ತಿಯ ಕಂಡಡೆ, ಹೋಗನೂಕುವನು ಗುಹೇಶ್ವರಾ.

(೯). ಬಯಸಿ ಬಂದುದು ಅಂಗಭೋಗ. ಬಯಸದೆ ಬಂದುದು ಲಿಂಗಭೋಗ. ಅಂಗಭೋಗವನರ್ಪಿತ, ಲಿಂಗಭೋಗ ಪ್ರಸಾದವಯ್ಯಾ. ಬೇಕೆಂಬುದು ಕಾಯದ ಗುಣ, ಬೇಡೆಂಬುದು ವೈರಾಗ್ಯ. ಬೇಕೆಂಬುವಲ್ಲಿ, ಬೇಡೆಂಬುವಲ್ಲಿ, ಈ ಉಭಯವನತಿಗಳೆದು ಭೋಗಿಸಬಲ್ಲಡೆ, ಕೂಡಲಚನ್ನಸಂಗ ನಿಮ್ಮ ಶರಣನೆಂಬುವೆನು.

(೧೦). ರೂಹಿಲ್ಲದ ಸುಯಿಧಾನವ ನೀಡುವೆ. ರುಚಿ ಇಲ್ಲದ ಪದಾರ್ಥವ ಮಥನಿಸಿದೆ. ನೀಡುವೆನು ಲಿಂಗಕ್ಕೆಂದು. ಲಿಂಗಪದಾರ್ಥವನಂಗ ಮುಖವ ಮರೆದು, ನಿಮಗೆ ನೀಡುವೆ. ಕಾಮಿಸದೆ, ಕಲ್ಪಿಸದೆ, ಭಾವಿಸದೆ, ಭ್ರಮಿಸದೆ, ನಿಮ್ಮ ಪರಿಯಾಣಕ್ಕೆ ನೀಡುವೆನು. ಸುಚಿತ್ತ ಸಮಾಧಾನದಿಂದ ಅವಧರಿಸಬೇಕಯ್ಯಾ ಕೂಡಲಸಂಗಮದೇವಯ್ಯಾ.

(೧೧). **ಹೊನ್ನು, ಹೆಣ್ಣು, ಮಣ್ಣು, ಅನ್ನ ಉದಕ, ದ್ರವ್ಯಂಗಳು ಧರ್ಮದಾಸೆ ಕಾರಣ, ಅರ್ಥದಾಸೆ ಕಾರಣ, ಕಾಮದಾಸೆ ಕಾರಣ, ಮೋಕ್ಷದಾಸೆ ಕಾರಣ, ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯದಾಸೆ ಕಾರಣ, ಪಂಚ ಮಹಾಪಾತಕಂಗಳ ಮಾಡಿದ ದೋಷಂಗಳ ಕಾರಣ, ಅಧಿಕಾರಣ, ವ್ಯಾಧಿ** ಕಾರಣ, ಕೀರ್ತಿಕಾರಣ, ವಾರ್ತೆಕಾರಣ, ಸರ್ವವನು ನಿರಂತರ ಕೊಡುವರು ನಿಷ್ಕಾರಣವಾಗಿ. ನಿರುಪಾಧಿಕರಾಗಿ, ನಿರಾಶ್ರಿತರಾಗಿ, ಶ್ರೀಗುರು ಕರುಣವಾಗಿ, ಲಿಂಗಕಾರಣವಾಗಿ, ಜಂಗಮಕಾರಣವಾಗಿ, ಪ್ರಸಾದಕಾರಣವಾಗಿ, ಈ ನಾಲ್ಕನು ಒಂದು ಮಾಡಿ, ಸದ್ಭಕ್ತಿಯಿಂದ ದ್ವಿವಿಧವು ಪರಿಣಾಮಿಸುವಂತೆ, ಕ್ಷಣ ಮಾತ್ರದಲ್ಲಿ ಅಣುಮಾತ್ರ ದ್ರವ್ಯವ ಕೊಡುವವರಾರನು ಕಾಣೆ, ನಿರ್ವಂಚಕರಾಗಿ. ಆನು ವಂಚಕನು. ಎನಗೆ ಭಕ್ತಿ ಇಲ್ಲ. ಶಿವಶಿವಾ, ಸಂಗನಬಸವಣ್ಣ ನಿರ್ವಂಚಕನು ನಿರಾಶಾಭರಿತನು, ಸುಚರಿತ್ರನು, ಸದ್ಭಕ್ತಿ ಪುರುಷನು, ಮಹಾಪುರುಷನು. ಎನಗೆ ಮಹಾ ಶ್ರೀಗುರುಲಿಂಗ ಜಂಗಮ ಪ್ರಸಾದ ಈ ಚತುರ್ವಿಧವು ಬಸವಣ್ಣನು. ಈ ಬಸವಣ್ಣನ ಭೃತ್ಯರ ಭೃತ್ಯನಾಗಿ ಎನ್ನ ನಿರಿಸಯ್ಯಾ, ಉರಿಲಿಂಗ ಪೆದಿ ಪ್ರಿಯವಿಶ್ವೇಶ್ವರಾ.

## ತನುಮನಭಾವ ಶುದ್ಧವಾಗಿ ಅರ್ಪಿಸುವದು.

(೧೨). ಒಳಗೆ ತೊಳೆಯಲರಿಯದೆ, ಹೊರಗೆ ತೊಳೆದು ಕುಡಿವುತ್ತಿರ್ದ‌ರಯ್ಯಾ! ಪಾದೋದಕ ಪ್ರಸಾದವನರಿಯದೆ ಬಂದ ಬಟ್ಟೆಯಲ್ಲಿ ಮುಳುಗುತ್ತಿದ್ದಾರೆ ಗುಹೇಶ್ವರಾ.

(೧೩). ಅಚ್ಚಪ್ರಸಾದಿ ಅಚ್ಚಪ್ರಸಾದಿ ಎಂಬರು, ಕೇಳಿರಯ್ಯಾ. ನಿಚ್ಚ ನಿಚ್ಚಕ್ಕೆ ಹುಸಿವ ಹುಸಿಗಳ ಕಂಡೆನಲ್ಲ! ನಿಮ್ಮಲ್ಲಿ ವಾಯು ಬೀಸದ ಮುನ್ನ, ಆಕಾಶ ಬಲಿಯದ ಮುನ್ನ, ಲಿಂಗಕ್ಕೆ ಅರ್ಪಿಸುವ ಮುಖವನರಿಯಿರಯ್ಯಾ. ಭೋಜನವ ಮಾಡಿ, ಭಾಜನವನಿಟ್ಟು ಹೋಹಹಿರಿರಿಗೆ ಭಂಗನೋಡಾ ಗುಹೇಶ್ವರಾ.

(೧೪). ಮಾಡಿದ ಓಗರ ಮಾಡಿದಂತಿರ್ದಿತ್ತು. ನೀಡಿದ ಕೈಗಳು ಎಡೆಯಾಡುತ್ತಿರ್ದವು. ಲಿಂಗಕ್ಕರ್ಪಿತವ ಮಾಡಿದೆವೆಂಬರು. ಒಂದರೊಳಗೊಂದು ಸವೆಯದು. ಲಿಂಗವಾರೋಗಣೆಯ ಮಾಡಿದೆವೆಂಬರು. ತಾವು ಉಂಡು ನಿಮ್ಮ ದೂರುವರು ಗುಹೇಶ್ವರಾ.

(೧೫). ಕ್ರಿ ಇಲ್ಲದ ನಿಃಕ್ರಿಯವನೆಂತು ಪಡೆಯಬಹುದಯ್ಯಾ? ಸೀಮೆ ಇಲ್ಲದ ನಿಸ್ಸೀಮನಿಗೆಂತಿರಬಹುದಯ್ಯಾ? ಮೊದಲಿಲ್ಲದ ಲಾಭವನೆಂತೆನಬಹುದಯ್ಯಾ! ಹರಿವ ಮನವನಿಲ್ಲೆಂದು ನಿಲಿಸಿ ಜಿಹ್ವೆಯ ಝುಂಝುಕತ್ವವ ಕಳೆದು, ಲಿಂಗಭೋಗೋಪಭೋಗಿಯಾದಲ್ಲದೆ ಮೆಚ್ಚುವನೇ ನಮ್ಮ ಕೂಡಲಚನ್ನ ಸಂಗಮದೇವಾ?

## ಐಕ್ಯಭಾವದಿಂದ ಅರ್ಪಿಸುವದು.

(೧೬). ತನುವ ಕೊಟ್ಟೆನೆಂದು ನುಡಿದು ಗುರುವಚನಕ್ಕೆ ದೂರವಾದೆ. ಮನವ ಕೊಟ್ಟೆನೆಂದು ಲಿಂಗಮುಖಕ್ಕೆ ದೂರವಾದೆ. ಧನವ ಕೊಟ್ಟೆನೆಂದು ನುಡಿದು ಜಂಗಮ ಮುಖಕ್ಕೆ ದೂರವಾದೆ. ಕೂಡಲಸಂಗಮದೇವಯ್ಯಾ ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ.

(೧೭). ತನು ಅರ್ಪಿತವೆಂದರೆ, ಗುರುದ್ರೋಹ, ಮನ ಅರ್ಪಿತವೆಂದರೆ, ಲಿಂಗದ್ರೋಹ. ಧನ ಅರ್ಪಿತವೆಂದರೆ, ಜಂಗಮದ್ರೋಹ. ಇಂತೀ ತನು ಮನಧನಂಗಳೆಂಬ ಅನಿತ್ಯವನು ನಿತ್ಯಕ್ಕರ್ಪಿಸಿ, ಭಕ್ತನಾದೆನೆಂದರೆ, ಅದು ಅಜ್ಞಾನ ನೋಡಾ. ಒಡೆಯರಿಗೆ ಉಂಡಲಿಗೆಯ ಮುರಿದಿಕ್ಕಿ ನಾಭಕ್ತನಾದೆನೆಂಬ ಮಾತ ಸಮ್ಯಕ್ಚರಣರು ಮೆಚ್ಚುವರೇ? ನಮ್ಮ ಗುಹೇಶ್ವರಲಿಂಗಕ್ಕೆ ನೀವು ಆವುದರಲ್ಲಿ ಏನನರ್ಪಿಸಿ, ಭಕ್ತನಾದೆ ಹೇಳಾ, ಬಸವಣ್ಣ?

(೧೮). ಬಂದಬಂದವರೆಲ್ಲರು ತಾವು ಬಂದಂಗದಲ್ಲಿ ಸುಖಿಗಳು. ಕಂಡ ಕಂಡವರೆಲ್ಲರು ತಾವು ನಿಂದ ಲಿಂಗದಲ್ಲಿಯೇ ಸುಖಿಗಳು. ತನು ಕಾಯಕ, ಮನ ಲಿಂಗ, ದಾಸೋಹ ಜಂಗಮದಲ್ಲಿ ನಾನೆಂಬುದನಳಿದು ಮಾಡುವದು. ಕಾಯವೇನಾದರೂ ಆಗಲಿ, ಆ ಗುಣ ಕಾಲಾಂತಕ ಭೀಮೇಶ್ವರಲಿಂಗಕ್ಕೆ ಅರ್ಪಿತ.

(೧೯). ಶ್ರೋತ್ರೇಂದ್ರಿಯ ಸುಖವುಳ್ಳನ್ನಕ್ಕರ ಗುರುವಚನವನೆಂತು ಕೇಳಿದೆನೆನಬಹುದಯ್ಯಾ? ಘ್ರಾಣೇಂದ್ರಿಯ ಸುಖವುಳ್ಳನ್ನಕ್ಕರ, ಲಿಂಗವ ಭಾವಿಸಿದೆನೆಂತೆನಬಹುದಯ್ಯಾ? ನೇತ್ರೇಂದ್ರಿಯ ಸುಖವುಳ್ಳನ್ನಕ್ಕರ ಲಿಂಗವ ಭಾವಿಸಿದೆನೆಂತೆನಬಹುದಯ್ಯಾ? ಜಿಹ್ವೇಂದ್ರಿಯ ಸುಖವುಳ್ಳನ್ನಕ್ಕರ, ಪ್ರಸಾದವ ಗ್ರಹಿಸಿದೆನೆಂತೆನಬಹುದಯ್ಯಾ? ಸ್ಪರ್ಷೇಂದ್ರಿಯ ಸುಖವುಳ್ಳನ್ನಕ್ಕರ, ಲಿಂಗಾಂಗವಾಯಿ

ತ್ತೆಂದು ಎಂತೆನಬಹುದಯ್ಯ? ಇಂತಿವೆಲ್ಲವಸತಿಗಳೆದಡೆ, ಅವರೇ ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಾಣಲಿಂಗ ಪ್ರಸಾದಿಗಳಯ್ಯ.

(೨೦). ಮುಟ್ಟುವದು ತಟ್ಟುವದು ಸೋಂಕುವದು ಸುಳಿವುದು ಲಿಂಗ ಮುಂತೆಂಬಲ್ಲಿ ಅಂಗ ಹಿಂಚೆಂಬಲ್ಲಿ, ಮುಂದು ಹಿಂದಣ ಉಭಯವನರಿವುದಕ್ಕೆ ಸಂದೇಹಾಸ್ಪದ ಧಾವತಿ ಅದು ಅನರ್ಪಿತದ ಭೇದ ಸದ್ಯೋಜಾತಲಿಂಗಕ್ಕೆ.

(೨೧). ಶಿವಾಚಾರವೇ ಅಂಗ, ಶಿವಭಕ್ತಿಯೇ ಲಿಂಗ, ಶಿವಶರಣರ ನಿಷ್ಠೆಯೇ ಸಂಗ, ಅಂಗ ಲಿಂಗ ಸಂಗವೆಂದು ಹೀಗಾದುದು. ಆವ ಪದಾರ್ಥ ವಾದಡೇನು? ತನ್ನ ನೇಮಿಸಿಬಂದುದ ಸಕಲೇಂದ್ರಿಯಂಗಳ ಹೊದ್ದಲೀಯ್ಯದೆ ಭಾವದ ಮುಖದಲ್ಲಿಯೇ ಸಂಧಿಸಿ, ಕೂಡಲಚೆನ್ನಸಂಗಯ್ಯಂಗರ್ಪಿಸಿಕೊಳಬಲ್ಲಡೆ, ಅದೇ ಅಂಗಲಿಂಗಸಂಗಯೋಗಾ.

(೨೨). ತನುವತಾಗದ ಮುನ್ನ, ಮನವತಾಗದ ಮುನ್ನ, ಅಪ್ಯಾಯನ ಎಡೆಗೊಳ್ಳದ ಮುನ್ನ, ಅರ್ಪಿತವ ಮಾಡಬೇಕು. ಗುರುವಿನ ಕೈಯ್ಯಲ್ಲಿ ಎಳತಟ ವಾಗದ ಮುನ್ನ, ಅರ್ಪಿತವಮಾಡಬೇಕು. ಎಡದ ಕೈಯ್ಯಲ್ಲಿ ಕಿಚ್ಚು, ಬಲದ ಕೈಯ್ಯಲ್ಲಿ ಹುಲ್ಲು, ಉರಿಯಹತ್ತಿತ್ತು ಗುಹೇಶ್ವರಾ, ನಿಮ್ಮ ಪ್ರಸಾದಿಯ

(೨೩). ತನುಮುಟ್ಟದ ಮುನ್ನವೇ ಲಿಂಗಾರ್ಪಿತವ ಮಾಡಬೇಕು. ಶ್ರೋತ್ರನೇತ್ರ ಘ್ರಾಣ ಜಿಹ್ವೆತ್ವಕ್ಕು ಪಂಚೇಂದ್ರಿಯಂಗಳು ಮುಟ್ಟದ ಮುನ್ನವೇ ಲಿಂಗಾರ್ಪಿತವ ಮಾಡಬೇಕು. ನಮ್ಮ ಕೂಡಲ ಚೆನ್ನಸಂಗಯ್ಯನಲ್ಲಿ ಪ್ರಸಾದಿ ಯಾದೊಡೆ ಇಂತಾಗಬೇಕಯ್ಯ. ಇಂತಲ್ಲದವರು ಬರುಕಾಯರೆನಿಸುವರಯ್ಯ.

(೨೪). ಲಿಂಗಭೋಗೋಪಭೋಗಿ ಎಂದು ತಾ ಮುನ್ನ ಬಿಟ್ಟುದ ಮುಟ್ಟಬಹುದೇ? ತನ್ನ ಸುಖಕ್ಕೆ ತಾ ಭೋಗಿಸಿ, ಲಿಂಗ ಮುಂತಾಗಿ ತಾ ಕೂಡಿ ದೆನೆನಬಹುದೇ? ಲಿಂಗದಂಗವನರಿತು ತಾ ಕೂಡಬಲ್ಲಡೆ, ತನ್ನಿಂದ್ರಿಯಂಗಳ ಇಚ್ಛೆಯುಂಟೇ? ತಾ ಕದ್ದ ಕಳವ ಪರಿಹರಿಸಿಕೊಳಲರಿಯದೆ, ಇದಿರು ನೀವು ಬನ್ನಿ ಎಂದು ಕರೆವ ಕಡುಹಕಾರನಂತೆ ಈ ದ್ರವ್ಯ ಇದಿರಿಡಬಾರದ ಕುರುಹು ಲಿಂಗಭೋಗೋಪಭೋಗಿ ತಾನಾದಡೆ, ಉರಿಗೂಡಿಯೇ ಕರಗುವ ಕರ್ಪೂರದಿರ ವಿನಂತಿರಬೇಕು. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿ ಕಾರ್ಜುನನ ಸಂಗ ಗೂಡಿಯೇ ಸುಖಿಸುವ ಲಿಂಗಾಂಗಿಯ ಇರವು.

(೨೫). ದುಕೂಲ ಮುಂತಾದ ವಸ್ತ್ರಂಗಳಲ್ಲಿ, ಹೇಮ ಮುಂತಾದ ಆಭರಣಂಗಳಲ್ಲಿ, ಮೌಕ್ತಿಕ ಮುಂತಾದ ಪಾಷಾಣಂಗಳಲ್ಲಿ, ಚಂದನ ಗಂಧ ಮುಂತಾದ ಸುವಾಸನೆಯಲ್ಲಿ, ಅಂದಣ ಛತ್ರ ಚಾಮರ ಕರಿತುರಗ ಮುಂತಾದ ತಾನು ಸೋಂಕುವ ವೈಭವ ಮುಂತಾದ ಸಕಲ ಸುಖಂಗಳು ಲಿಂಗಕ್ಕೆಂದು ಕಲ್ಪಿಸಿ ಅಂಗೀಕರಿಸುವನ ಇರವು ವಾರಿಕಲ್ಲು ನೋಡನೋಡಲಿಕ್ಕೆ ನೀರಹ ತೆರದಂತೆ, ಅಂಬರದ ವರ್ಣ ನಾನಾ ಚಿತ್ರದಲ್ಲಿ ಸಂಭ್ರಮಿಸಿ, ಕಂಗಳು ಮುಚ್ಚಿ ತೆರೆವುದಕ್ಕೆ ಮುನ್ನವೇ, ಅದರಂದ ಕಳೆ ಅಳಿದಂತಿರಬೇಕು. ಇದು ಲಿಂಗ ಭೋಗೋಪಭೋಗಿಯ ಸಂಗದ ಸುಖ, ನಿರಂಗದ ನಿಶ್ಚಯ. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಲಿಂಗದಲ್ಲಿ ವಿರಳವಿಲ್ಲದ ಪರಮ ಸುಖ.

(೨೬). ಅರ್ಪಿತ ಅನರ್ಪಿತವನಾರುಬಲ್ಲರಯ್ಯ? ಅರ್ಪಿಸಿಕೊಂಬುದು ಅನರ್ಪಿತ. ಅರ್ಪಿಸದೆಕೊಂಬುದು ಅನರ್ಪಿತ. ಅರ್ಪಿಸಿ ಅರ್ಪಿಸದೆಕೊಳಬಲ್ಲಡೆ, ಗುಹೇಶ್ವರಾ ನಿಮ್ಮ ಪ್ರಸಾದಿ.

---

# ಕಾಯ.

## (೧) ಕಾಯದ ಮಹತ್ವ.

(೧). ಕಾಯದಿಂದ ಲಿಂಗದರುಶನ. ಕಾಯದಿಂದ ಜಂಗಮದರುಶನ. ಕಾಯದಿಂದ ಪ್ರಸಾದಸಂಪತ್ತು. ಕೂಡಲಚನ್ನಸಂಗಯ್ಯ ಈ ಕಾಯದಿಂದ ನಿಮ್ಮವ ಕಂಡೆನಯ್ಯ.

(೨). ತನುವಿನೊಳಗಿದ್ದು ತನುವಗೆದ್ದಳು. ಮನದೊಳಗಿದ್ದು ಮನವ ಗೆದ್ದಳು. ವಿಷಯದೊಳಗಿದ್ದು ವಿಷಯಂಗಳಗೆದ್ದಳು. ಅಂಗಸಂಗವ ತೊರೆದು ಭವವಗೆದ್ದಳು. ಕೂಡಲಚನ್ನಸಂಗಯ್ಯನ ಹೃದಯ ಕಮಲವ ಬಗಿದು ಹೊಕ್ಕು ನಿಜಪದವನೈದಿದ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

(೩). ಚಿರಂಜೀವಿ ಎಂದರೆ ನಿರೋಗಿ. ಚಿರಂಜೀವಿ ಎಂದರೆ ಸಶಕ್ತನು. ಚಿರಂಜೀವಿ ಎಂದರೆ ಬಹುಕಾಲ ಬದುಕುವವನು. ಚಿರಂಜೀವಿ ಎಂದರೆ ಪ್ರಳಯವ ಮೀರುವವನಲ್ಲ. ದೇಹ ಚಿರಂಜೀವಿಯಾದಡೆ, ಕಪಿಲಸಿದ್ಧ ಮಲ್ಲಿಕಾರ್ಜುನ ಬ್ರಹ್ಮವೆಂಬ ಶಬ್ದಬೇರುಂಟೇ?

(೪) ಭವಿಮಾಡಲಿಕ್ಕೆ ಪೃಥ್ವಿಯಾಯಿತ್ತು. ಭವಿಮಾಡಲಿಕ್ಕೆ ಅಪ್ಪುವಾಯಿತ್ತು. ಭವಿಮಾಡಲಿಕ್ಕೆ ಅಗ್ನಿಯಾಯಿತ್ತು. ಭವಿಮಾಡಲಿಕ್ಕೆ ವಾಯುವಾಯಿತ್ತು. ಭವಿಮಾಡಲಿಕ್ಕೆ ಆಕಾಶವಾಯಿತ್ತು. ಭವಿಮಾಡಲಿಕ್ಕೆ ಚಂದ್ರಸೂರ್ಯರಾದರು. ಭವಿಮಾಡಲಿಕ್ಕೆ ಬ್ರಹ್ಮ ವಿಷ್ಣುರುದ್ರರಾದರು. ಇದು ಕಾರಣ ಭವಿಯಿಂದಲಾಯಿತ್ತು ಸಕಲ ಜೀವಜಂತುಗಳೆಲ್ಲ. ಭವಿಯ ಕಳೆದೆವೆಂಬ ಮರುಳು ಜನಂಗಳು ನೀವು ಕೇಳಿರೋ. ಭವಿಯಲ್ಲವೇ ನಿಮ್ಮ ತನುಗುಣಾದಿಗಳು? ಭವಿಯಲ್ಲವೇ ನಿಮ್ಮ ಕರಣಾದಿಗುಣಂಗಳು? ಇವರೆಲ್ಲರೂ ಭವಿಗಳ ಹಿಡಿದು ಭವಸಾಗರದೊಳಗಾದರು. ನಾನು ಭವಿಯ ಪೂಜಿಸಿ ಭವಂನಾಸ್ತಿಯಾದೆ ಕಾಣಾ ಗುಹೇಶ್ವರಾ.

(೫). ಭವಿಯ ಭಕ್ತನ ಮಾಡುವದೇ ಅನಾಚಾರ. ಭಕ್ತನ ಭವಿಯ ಮಾಡುವದೇ ಸದಾಚಾರ. ಭವಿಯ ಪ್ರಸಾದವ ಭಕ್ತಕೊಂಬುವದೇ ಸದಾಚಾರ ಭಕ್ತನ ಪ್ರಸಾದವ ಭವಿಕೊಂಬುವದೇ ಅನಾಚಾರ. ಇದು ಕಾರಣ ಭವಿಯ ಪ್ರಸಾದವ ಕೊಂಡು ನಾನು ಭವಂನಾಸ್ತಿಯಾದೆ ಕಾಣಾ ಕೂಡಲಸಂಗಮದೇವಾ.

---

## ( ೨ ) ಇಂದ್ರಿಯಗಳನ್ನು ವ್ಯಥೆಗೊಳಿಸಬಾರದು.

(೧). ಇಂದ್ರಿಯ ನಿಗ್ರಹ ಮಾಡಿದರೆ, ಹೊಂದುವವು ದೋಷಂಗಳು. ಮುಂದೆ ಬಂದು ಕಾಡುವವು ಪಂಚೇಂದ್ರಿಯಂಗಳು. ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು? ಸತಿಪತಿ ರತಿಸುಖ ಭೋಗೋಪಭೋಗವ ಬಿಟ್ಟರೆ ಸಿಂಧುಬಲ್ಲಾಳನು? ನಿಮ್ಮ ಮುಟ್ಟಿ, ಪರಧನ ಪರಸ್ತ್ರೀಗೆಳಸಿದಡೆ, ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಾ?

(೨). ಅರುಹಿನ ಕುರುಹನರಿಯದೆ ತನುವ ಕರಗಿಸಿ, ಮನವ ಬಳಲಿಸಿದಡೇನು ಪ್ರಯೋಜನವು? ಇಂದ್ರಿಯ ನಿಗ್ರಹವಮಾಡಿ ವಿಷಯಂಗಳ ಬಂಧಿಸಿ ಆತ್ಮಗೆ ಬಂಧನವ ಮಾಡಿದರೆ, ಆತ್ಮದ್ರೋಹ ಕಾಣಿರೋ. ಹೀಗೆ ಉದ್ದೇಶದಿಂದ ತನುವ ಒಣಗಿಸಿದರೆ ಹಸಿಯ ಮರನ ತಂದು ಬಿಸಿಲಿಗೆ ಹಾಕಿದಂತೆ, ತನುವ ಒಣಗಿಸಿದರೇನಯ್ಯ? ಮನದ ಮಲಿನವು ಹಿಂಗದನಕ್ಕರ, ಭವಹಿಂಗಿತು ಎಂಬ ಭಂಡರನೇನೆಂಬೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ?

(೩). ಒಲ್ಲೆನೆಂಬುದು ವೈರಾಗ್ಯ. ಒಲಿವೆನೆಂಬುದು ಕಾಯ ಗುಣ. ಆವ ಪದಾರ್ಥವಾದರೇನು, ತಾನಿದ್ದೆಡೆಗೆ ಬಂದುದ ಲಿಂಗಾರ್ಪಿತವ ಮಾಡಿ, ಭೋಗಿಸುವದೇ ಸದಾಚಾರ. ಕೂಡಲಸಂಗಮದೇವರ ಒಲಿಸಬಂದ ಪ್ರಸಾದಕಾಯವ ಕೆಡಿಸಲಾಗದು.

(೪). ಚೇತನವಳಿದು ಅಚೇತನ ವಸ್ತುರೂಪಾಗಿ ಬಂದಿತ್ತದೇಕೆ ಎಂಬುದ ತಿಳಿದು ಬಂಗಾರವ ಕಳೆದು ಬಣ್ಣವ ನೋಡಬಾರದು, ಕುಸುಮವ ಕಳೆದು ಗಂಧವ ಕಾಣಬಾರದು. ದರ್ಪಣದ ಘಟವ ಕಳೆದು ನೋಡಲಿಕ್ಕೆ ಪ್ರತಿಬಿಂಬ ಬಿಂಬಿಸುವದೇ? ಅಂಗವ ಕಳೆದು ಲಿಂಗವನರಿಯಬಾರದು. ಲಿಂಗವ ಕಳೆದು ಆತ್ಮನ ನರಿವ ಪರಿ ಇನ್ನೆಂತೋ? ಆತ್ಮನ ಚೇತನವ ಬಿಟ್ಟು ನಿಹಿತಜ್ಞಾನವನರಿಯಬೇಕೆಂಬ ಅಜ್ಞಾನರು ನೀವು ಹೇಳಿರೋ. ಅಂಗವ ಕಳೆದು ಲಿಂಗವ ಕಂಡೆವೆಂಬುದು, ಲಿಂಗವಳಿದು ಆತ್ಮನನರಿದೆನೆಂಬುದು, ಆತ್ಮನಳಿದು ಅರಿವನರಿದೆನೆಂಬುದು ಅದೇತರ ಪರಿಹೇಳಾ? ತೃಷೆ ಅರತು, ನೀರ ಕೊಳಬಹುದೇ? ಆಪ್ಯಾಯನವರತು ಓಗರವನುಣಬಹುದೇ? ಸತ್ಕ್ರಿಯೆಯಿಲ್ಲದೆ ಲಿಂಗವನರಿಯಬಹುದೇ? ಆ ಲಿಂಗಕ್ಕರ್ಚನೆ ಪೂಜನೆ ಹೀನವಾಗಿ ವಸ್ತುವನರಿತೆನೆಂಬ ನಿಶ್ಚಯವಂತರು ನೀವೇ ಬಲ್ಲಿರಿ ನಿಃಕಳಂಕ ಮಲ್ಲಿಕಾರ್ಜುನಾ.

(೫). ಕಂಗಳೇಕೆ, ನೋಡಬೇಡವೆಂದರೆ, ಮಾಣವು. ಶ್ರೋತ್ರಂಗಳೇಕೆ, ಆಲಿಸಬೇಡವೆಂದರೆ, ಮಾಣವು. ನಾಸಿಕವೇಕೆ, ವಾಸಿಸಬೇಡವೆಂದರೆ, ಮಾಣವು. ತ್ವಕ್ಕೇಕೆ, ಸೋಂಕಬೇಡವೆಂದರೆ, ಮಾಣವು. ಈ ಭೇದವನರಿದು ನುಡಿಯಲು ಸಮಧಾತುವಾಯಿತ್ತು. ಗುಹೇಶ್ವರ ಲಿಂಗಕ್ಕೆ ಒಲಿದ ಕಾರಣ ಅಭಿಮಾನದ ಲಜ್ಜೆಬೇಸತ್ತು ಹೋಯಿತ್ತು.

**ಅರ್ಥ**:— ಪಂಚೇಂದ್ರಿಯಂಗಳು ತಮ್ಮ ತಮ್ಮ ಸ್ವಗುಣ ಧರ್ಮಂಗಳ ಬೇಡವೆಂದರೆ, ಬಿಡವು. ಆದು ಕಾರಣ ಪಂಚೇಂದ್ರಿಯಂಗಳ ತೊರೆದು ಲಿಂಗಸಂಗವ ಮಾಡಬಾರದು. ಮತ್ತೆಂತೆಂದೊಡೆ ಆ ಪಂಚೇಂದ್ರಿಯಂಗಳ ಸುಖವನೇ ಲಿಂಗದೊಳಗೆ ವೇಧಿಸಿ, ಸಾಮರಸ್ಯವ ಮಾಡಿಕೊಳ್ಳಲು ದೇಹೇಂದ್ರಿಯಾದಿ ಅಭಿಮಾನಂಗಳು ಲಯವಪ್ಪವೆಂಬುದೀ ವಚನದ ಬಹು ಶಬ್ದಕ್ಕೇಕಾರ್ಥ.

(೬). ಇಂದ್ರಿಯಂಗಳ ಕೊಂದಿಹೆನೆಂದಡೆ, ಅವು ಕಂದರ್ಪನ ಹಂಗು ಕಂದರ್ಪನ ಕೊಂದಿಹೆನೆಂದಡೆ, ಅವುಕಂಗಳ ಲಾಭ. ಕಂಗಳು ಮುಚ್ಚಿಯಲ್ಲದೆ, ಲಿಂಗವ ಕಾಣಬಾರದು. ಅದು ನಿರಂಗಂಗಲ್ಲದೆ, ಜಗದ ಹಂಗಿನವರಿಗಿಲ್ಲ ಎಂದೆ ಗೌರೇಶ್ವರಾ.

**ಅರ್ಥ:**—ಇಂದ್ರಿಯಂಗಳ ಜಯಸಿಹೆನೆಂದರೆ, ಅವು ಕಾಮನ ಪಂಚ ಬಾಣಂಗಳಾಗಿಪ್ಪವು. ಆ ಕಾಮವಿಕಾರವ ಜಯಸಿಹೆನೆಂದಡೆ, ಅವು ನಯನ ದಲ್ಲಿ ಸ್ತ್ರೀಯರ ನೋಡಿ ಬಯಕೆಯಾದ ಕಾರಣ ಕಂಗಳಲಾಭವೆನಿಸಿತ್ತು. ಭಿನ್ನ ದೃಗ್ವಿಷಯಂಗಳ ನಷ್ಟವ ಮಾಡಿಬಿಟ್ಟು ಲಿಂಗದೃಷ್ಟಿಯಾಗಿ ಅಳವಡಿಸಿಕೊಂಡ ಲ್ಲದೆ, ಲಿಂಗಕರುಣವ ಪಡೆಯಬಾರದು. ಅದು ಅಕಾಯ ಸ್ವರೂಪರಾದ ಶರಣ ರಿಗಲ್ಲದೆ, ಜಡಕಾಯದ ವರ್ತನೆಯುಳ್ಳವರಿಗೆ ದೊರೆಕೊಳ್ಳದೆಂದೆನೆಂಬುದರ್ಥ.

(೭). ಪಂಚೇಂದ್ರಿಯ ಸಪ್ತಧಾತುವನತಿಗಳೆದಲ್ಲಿ ಫಲವೇನು? ಕಾಯ ಕ್ರೋಧ ಲೋಭ ಮೋಹ ಮದ ಮತ್ಸರ ವಿಷಯಗಳನತಿಗಳೆದಲ್ಲಿ ಫಲವೇನು? ಇವೆಲ್ಲವಕೊಂದ ಪಾಪ ನಿಮ್ಮ ತಾಗುವದು ಗುಹೇಶ್ವರಾ.

**ಅರ್ಥ:**—ಸಕಲ ಕರಣಂಗಳು ಲಿಂಗದಲ್ಲಿ ಅಡಗಿ, ಲಿಂಗೈಕ್ಯವಾದಡೆ, ಅದೇ ಲಿಂಗೈಕ್ಯವು. ಅದಲ್ಲದೆ ಕಳೆಯಬಾರದ ಇಂದ್ರಿಯ ವಿಷಯ ಕರಣಾದಿ ವೃತ್ತಿಗಳ ಕಳೆದು, ಪಿಡಿದು, ನೋಯಿಸಿ, ಲಿಂಗವ ಬೆರಸಿಹೆನೆಂದಡೆ ಎಂದೆಂದಿಗೂ ಅಸಾಧ್ಯವೆಂಬುದೀವಚನಾರ್ಥ.

(೮). ಭಕ್ತನ ಮನ ಹೆಣ್ಣಿನೊಳಗಾದರೆ, ವಿವಾಹವಾಗಿ ಕೂಡು ವುದು. ಭಕ್ತನ ಮನ ಮಣ್ಣಿನೊಳಗಾದರೆ, ಕೊಂಡು ಆಲಯವ ಮಾಡುವದು. ಭಕ್ತನ ಮನ ಹೊನ್ನಿನೊಳಗಾದರೆ, ಬಳಲಿ ದೊರಕಿಸುವದು ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.

(೯). ಅಂಗವೇ ಭೂಮಿಯಾಗಿ, ಲಿಂಗವೇ ಬೆಳೆಯಾಗಿ, ವಿಶ್ವಾಸ ವೆಂಬ ಬಿತ್ತ ಬಲಿದು, ಉಂಡು ಸುಖಿಯಾಗಿರಬೇಕೆಂದ ಕಾಮಭೀಮ ಜೀವದನ ದೊಡೆಯ.

(೧೦). ಎಲೆ ಗುಡ್ಡ, ನೀ ನುಡಿದ ನುಡಿಯಿಂದ ನಿನ್ನ ಮನದ ಜಡ್ಡು ಕಳೆಯಿತೆಂದೆನಲಾರೆ. ನಿಜವರಿತ ಬಳಿಕ ಸಂಸಾರ ಬಿಡಬೇಕೋ? ನಿಜವರಿತ

ಬಳಿಕ ಅಂಗೀಕರಿಸಿದ ಹೆಣ್ಣು ಬಿಟ್ಟರ್ಕೆ ಅಘೋರ ನರಕದಲ್ಲಿಕ್ಕುವ ಕೇದಾರ ಗುರುದೇವ ಕೇಳಾ ಅಂದಂದಿಂಗೆ.

(೧೧). ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ, ಕಾಯದ ಸಂಗವೇ ಲೇಸು ಕಂಡಯ್ಯಾ. ತಾಯಿ ರಕ್ಕಸಿಯಾದಂತೆ ಕಾಯ ವಿಕಾರವು. ಚೆನ್ನಮಲ್ಲಿಕಾರ್ಜುನಯ್ಯಾ ನೀನೊಲಿದವರು ಕಾಯಗೊಂಡಿದ್ದರೆನಬೇಡ.

(೧೨). ಕೈದು ಮೊನೆ ಏರುವದಕ್ಕೆ ಮುನ್ನವೇ ಕಟ್ಟಬಲ್ಲಡೆ, ಕೈದೇನ ಮಾಡುವದು! ಹಾವು ಬಾಯಿ ಬಿಡುವುದಕ್ಕೆ ಮೊದಲೆ ಹಿಡಿದ ಮತ್ತೆ ವಿಷವೇನ ಮಾಡುವುದು? ಮನವಿಕಾರಿಸುವದಕ್ಕೆ ಮೊದಲೆ ಮಹದಲ್ಲಿ ನಿಂದ ಮತ್ತೆ ಇಂದ್ರಿಯಂಗಳೇನ ಮಾಡಲಾಪವು ಜಾಂಬೇಶ್ವರಾ?

(೧೩). ಇಂತಪ್ಪ ಭೇದವ ತಿಳಿಯದೆ ಪುರಾತನರ ವಚನವ ನೋಡಿ ಕೇಳಿ ಹೊನ್ನು ಹೆಣ್ಣು ಮಣ್ಣನೇ ಬಿಟ್ಟು, ಪ್ರಪಂಚ ಬಿಟ್ಟೆವು ಎಂಬಿರಿ. ಬಿಟ್ಟ ಪರಿಯ ಪೇಳಿರಯ್ಯಾ. ಹೊನ್ನಲ್ಲವೇ ಆತ್ಮನು? ಹೆಣ್ಣಲ್ಲವೇ ಮನಸ್ಸು? ಮಣ್ಣಲ್ಲವೇ ಪೃಥ್ವಿ ತತ್ವಂಶಿಕವಾದ ದೇಹವು? ಇಂತಪ್ಪ ತ್ರಿವಿಧ ಹೊನ್ನು ಹೆಣ್ಣು ಮಣ್ಣನೇ ಒಳಗಿಟ್ಟುಕೊಂಡು, ಬಾಹ್ಯದ ಹೊನ್ನು ಹೆಣ್ಣು ಮಣ್ಣನೇ ಬಿಟ್ಟರೆ ಬಿಟ್ಟಂತಾಯಿತ್ತೆ ಎಲಾ ಮರುಳು ಮಾನವರಿರಾ? ದೇಹವ ದಗ್ಧವ ಮಾಡಬೇಕೆಂದು ಅನ್ನ ಉದಕವ ಬಿಟ್ಟು ಅರಣ್ಯದಲ್ಲಿಗೆ ಹೋಗಿ, ಕಂದಮೂಲ ಪರ್ಣಾಹಾರವ ಭಕ್ಷಿಸಿ ತನುವ ಒಣಗಿಸಿದರೇನು? ದೇಹ ದಗ್ಧವಾದಂತಾಯಿತ್ತೆ? ಆಗದು. ಹುತ್ತದ ಮೇಲೆ ಬಡಿದು ಸರ್ಪನ ಕೊಂದಂತಾಯಿತ್ತಲ್ಲದೆ, ದೇಹ ದಗ್ಧವಾಗಲರಿಯದು. ಎಲೆ ಮರುಳು ಮಾನವರಿರಾ, ಅದೆಂತೆಂದೊಡೆ, ಶಿವಜ್ಞಾನೋದಯವಾಗಿ ಗುರು ಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಯಾದ ಶಿವಶರಣನ ದೇಹವು ಜ್ಞಾನಾಗ್ನಿಯಲ್ಲಿ ದಗ್ಧವಾಯಿತ್ತಲ್ಲದೆ, ಉಳಿದ ಜೀವಾತ್ಮರ ದೇಹವು ದಗ್ಧವಾಗಲರಿಯದು. ದೇಹದ ಗುಣವ ಬಿಡಬೇಕೆಂಬಿರಿ. ಬಿಡಲಿಕ್ಕೇನು ಕಟ್ಟಿದ ಪಶುಗಳೇ? ಬಿಡಲಿಕ್ಕೇನು ಹಟ್ಟಿಯ ಕುರಿಗಳೇ? ಕಣ್ಣಿಗೆ ಕಾಣಿಸದ ಕೈಗೆ ಸಿಕ್ಕದ ಗುಣಗಳಂ ಬಿಡಬೇಕೆಂಬಿರಿ.! ಇದಕ್ಕೆ ದೃಷ್ಟ. ಸೂರ್ಯನ ಬಿಂಬ ಜಲದಲ್ಲಿ ಕಾಣುವದು. ಆ ಬಿಂಬ ಹಿಡಿಯಬಲ್ಲರೆ, ಗುಣಬಿಟ್ಟರೆಂಬೆ. ಜ್ಯೋತಿಯ ಪ್ರಭೆಯ ಕಡೆಯಕ್ಕೆ ತೆಗೆದು ಹಿಡಿಯಬಲ್ಲರೆ, ಗುಣಬಿಟ್ಟರೆಂಬೆ. ದೇಹದೊಳಗಣ ಪ್ರಾಣವ ಬಹಿಷ್ಕರಿಸಿ ಹಿಡಿಯಬಲ್ಲರೆ, ಗುಣಬಿಟ್ಟರೆಂಬೆ.

ಇಂತೀ ಭೇದವ ತಿಳಿಯದೆ, ತನುಮನವ ಬಳಲಿಸಿ ಭವದತ್ತ ಮುಖವಾಗಿ ಹೋಗುವ ಹೇಸಿ ಮೂಳರ ಕಂಡು ನಾಚಿತ್ತಯ್ಯ ಎನ್ನ ಮನವು ಕಾಡಿನೊಳ ಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯಪ್ರಭುವೇ.

---

## (೩). ಬ್ರಹ್ಮಚರ್ಯವುಳ್ಳವನಾಗಿರುವದು.

(೧). ಶ್ರೋತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ತ್ವಕ್ಕಿನಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ನಾಸಿಕದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ನೇತ್ರದಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಜಿಹ್ವೆಯಲ್ಲಿ ಬ್ರಹ್ಮಚಾರಿಯಾಗಿರಬೇಕು ಶರಣನು. ಇಂತೀ ಪಂಚೇಂದ್ರಿಯಗಳಲ್ಲಿ ಬ್ರಹ್ಮ ಚಾರಿಯಾಗಿ, ಕೂಡಲಸಂಗಮದೇವರಲ್ಲಿ ಎನ್ನನಾಗು ಮಾಡಲಿಕ್ಕೆ ಬ್ರಹ್ಮಚಾರಿ ಯಾದರು ಪ್ರಭುದೇವರು.

(೨). ಪ್ರಾಣಲಿಂಗ ಪ್ರವೇಶಿತನಾಗಿ, ಪ್ರಸಾದದಲ್ಲಿ ಸನ್ನಿಹಿತ ಸನ್ನಿಹಿತ ನಯ್ಯ. ಲಿಂಗಾರ್ಪಿತವಲ್ಲದೆ ಅನರ್ಪಿತವ ಮುಟ್ಟಲೀಯನಯ್ಯ. ಅಂಗಗುಣಂಗ ಳನತಿಗಳೆದು ಪ್ರಸಾದದಲ್ಲಿ ಬ್ರಹ್ಮಚಾರಿಯಾದನು ಕೂಡಲಸಂಗಮದೇವನಲ್ಲಿ ಚನ್ನಬಸವಣ್ಣನು.

(೩). ಬೇಕೆನಲಾಗದು ಶರಣಂಗೆ. ಬೇಡೆನಲಾಗುದು ಶರಣಂಗೆ. ಬಂದ ಸುಖವನತಿಗಳೆಯಲಾಗದು ಶರಣಂಗೆ. ಇದು ಕಾರಣ ಕೂಡಲಚನ್ನಸಂಗಯ್ಯ' ನಿಮ್ಮ ಶರಣರು ಉಂಡು ಉಪವಾಸಿಗಳು, ಬಳಸಿ ಬ್ರಹ್ಮಚಾರಿಗಳು.

(೪). ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಗಳಾದೆವೆಂಬ ದಿಂಡೆಯ ಮಾತಿನ ಹಿರಿಯರುಗಳೆಲ್ಲ ಕೇಳಿರೋ. ಬಲೆಯೊಳಗಾದ ಹುಲಿಗೆ ಬಲಾತ್ಕಾರ ಉಂಟೇ? ಲಲನೆಯರ ಸಂಸರ್ಗದಲ್ಲಿದ್ದು, ಚಲನೆ ಇಲ್ಲದ ಬಿಂದು ಉಂಟೇ? ಸಿಲೆಯೊಳಗಣ ಬೆಂಕಿಗೆ ಅಲಂಕಾರ ಉಂಟೇ? ಸಲಿಲದೊಳಗಣ ತೃಷೆಗೆ ಆಪ್ಯಾ ಯನ ಉಂಟೇ? ಅರಿವನರಿದಂಗೆ ಮರವೆಗೆ ತೆರಪುಂಟೇ? ತೆರನನರಿದು ಹರಿದಲ್ಲಿ ಯರಿಕೆ ತಾನೆ ನಿಃಕಳಂಕಮಲ್ಲಿಕಾರ್ಜುನಾ.

**ಅರ್ಥ**:— ಸಕಲ ಪದಾರ್ಥವ ಲಿಂಗಕ್ಕರ್ಪಿಸಿ ಲಿಂಗಪ್ರಸಾದವ ಸ್ವೀಕರಿ ಸುತ್ತಿರ್ದ ಜಿಹ್ವಾಲಂಪಟತ್ವ ಇಲ್ಲದೆ ಇದ್ದವರು ಸ್ತ್ರೀಯರುಗಳ ಸಂಸರ್ಗವಮಾ

ಹುತ್ತಿರ್ದು, ಮನ್ಮಥವಿಕಾರವಿಲ್ಲದೆ, ಲಿಂಗಭೋಗೋಪಭೋಗಿಗಳಾಗಿದ್ದೇವೆ. ಎಂದು ದಿಂಡೆಯತನದಲ್ಲಿ ಚರಿಸುವ ಜ್ಞಾನಿಗಳೆನಿಸಿಕೊಂಬುವರೆಲ್ಲ ಆಲಿಸಿರೋ, ಬಲೆಯಲ್ಲಿ ಸಿಕ್ಕಿದ ಹುಲಿಗೆ ಆ ಬಲೆಯ ಹರಿದು ಹೊರಗಾಗಿ ಹೋಗುವ ಸಾಮರ್ಥ್ಯ ಉಂಟೇ ಎಂಬ ಹಾಗೆ, ಸ್ತ್ರೀಯರುಗಳ ತತ್ಸಂಗದಲ್ಲಿರ್ದು, ನಾವು ಯತಿಗಳು ಜಿತೇಂದ್ರಿಯರು ಎಂದರೆ, ಆದಾರೆ, ಆಗಲರಿಯರು, ಎಂಬ ಹಾಗೆ ಜಿಹ್ವಾಲಂಪಟ ಗುಹ್ಯಾಲಂಪಟತ್ವಕ್ಕೊಳಗಾಗಿರ್ದು, ನಾವು ಜಿಹ್ವಾಲಂಪಟತ್ವವಿಲ್ಲದವರೆಂದರೆ, ಆಗಲರಿಯರು. ಕಲ್ಲಿನಲ್ಲಿಪ್ಪ ಮಂದಾಗ್ನಿಗೆ ಕುರುಡಿಲ್ಲ ಎಂಬ ಹಾಗೆ ಉದರದೊಳಗಿಪ್ಪ ವಡಬಾಗ್ನಿಗೆ ತೃಷೆ ಇಲ್ಲ ಎಂಬ ಹಾಗೆ, ಮಹಾಲಿಂಗ ಸ್ವರೂಪ ನಾನೆಂದರಿದ ಜ್ಞಾನ ತಿಳಿದಾತಂಗೆ ಜಿಹ್ವಾಲಂಪಟತ್ವ ಗುಹ್ಯಾಲಂಪಟತ್ವವು ಮುಂದುಗೊಂಡು ಚರಿಸುವ ಅಜ್ಞಾನಕ್ಕೆ ತೆರಪಿಲ್ಲ. ಮಹಾಲಿಂಗ ಸ್ವರೂಪನೆ ತಾನೆಂಬ ನಿಲುಕಡೆಯ ತಿಳಿದು ಜಿಹ್ವಾಲಂಪಟ ಗುಹ್ಯಾಲಂಪಟತ್ವದೊಡನೆ ಕೂಡಿ ಚರಿಸುವ ಅಜ್ಞಾನವನು ಛೇದಿಸುವಲ್ಲಿ ಅರಿವು ಸ್ವರೂಪವಾದ ಮಹಾಲಿಂಗವೇ ತಾನಾಗಿರ್ದನೆಂಬುದರ್ಥ.

(೫). ಸತಿಯ ಕಂಡು ಬ್ರತಿಯಾದ ಬಸವಣ್ಣ. ಬ್ರತಿಯಾಗಿ, ಬ್ರಹ್ಮಚಾರಿಯಾದ ಬಸವಣ್ಣ. ಬ್ರಹ್ಮಚಾರಿಯಾಗಿ ಭವಗೆಟ್ಟನಯ್ಯ ಬಸವಣ್ಣ. ಗುಹೇಶ್ವರಾ, ನಿಮ್ಮಲ್ಲಿ ಬಾಲಬ್ರಹ್ಮಚಾರಿಯಾದಾತ ಬಸವಣ್ಣನೊಬ್ಬನೇ.

(೬). ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾರಿಗಳಾಗಬೇಕೆಂದು ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ. ಹೆಣ್ಣ ಬಿಟ್ಟಡೆಯೂ, ಹೊನ್ನ ಬಿಡಿರಿ. ಹೊನ್ನ ಬಿಟ್ಟಡೆಯೂ, ಮಣ್ಣು ಬಿಡಿರಿ. ಒಂದು ಬಿಟ್ಟಡೆಯೂ, ಒಂದ ಬಿಡಿರಿ. ಬ್ರಹ್ಮಚಾರಿಗಳೆಂತಪ್ಪಿರಿ ಹೇಳಿರಣ್ಣಾ? ಹೆಣ್ಣ ಬಿಟ್ಟು ಬ್ರಹ್ಮಚಾರಿಗಳಾಗಬೇಕೆಂದು ಅವರೆಂತು ಹೇಳಿದರು? ನೀವೆಂತು ಕೇಳಿದಿರಿ? ಹೆಣ್ಣನು ಹೆಣ್ಣೆಂದರಿವಿರಿ. ಹೊನ್ನನು ಹೊನ್ನೆಂದರಿವಿರಿ. ಮಣ್ಣನು ಮಣ್ಣೆಂದರಿವಿರಿ. ಬ್ರಹ್ಮಚಾರಿಗಳೆಂತಪ್ಪಿರಣ್ಣಾ? ಬಿಟ್ಟಡೆ, ಹೆಣ್ಣು ಹೊನ್ನು ಮಣ್ಣು ಈ ಮೂರನು ಬಿಟ್ಟು ಜ್ಞಾನದಲ್ಲಿ ಸುಳಿಯಬಲ್ಲಡೆ, ಭವಂನಾಸ್ತಿತಪ್ಪದು. ಹಿಡಿದಡೆ, ಹೆಣ್ಣು, ಮಣ್ಣು, ಹೊನ್ನು ಈ ಮೂರನು ಹಿಡಿದು, ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ, ಭವಂ ನಾಸ್ತಿ ತಪ್ಪದು. ಅದೆಂತೆಂದೊಡೆ, ವೀರಾಗಮೆ, ಮಾತರಃ ಪಿತರ

ಶ್ಚೈವ ಸ್ವಪತ್ನೀನಾಂ ಬಾಲಕಸ್ತಥಾ ॥ ಹೇಮ ಭೂಮಿಶ್ಚ ನ ದು:ಖೀ ಬ್ರಹ್ಮ ಚಾರಿಣಾಂ ॥ ಎಂದುದಾಗಿ, ಹೆಣ್ಣು ಹೊನ್ನು ಮಣ್ಣು ಈ ಮೂರನು ಹಿಡಿದು ಸದ್ಭಕ್ತಿಯಿಂದ ದಾಸೋಹವ ಮಾಡಬಲ್ಲಡೆ, ಭವಂನಾಸ್ತಿ. ಅಲ್ಲಿ ಇದ್ದರೆಯೂ, ನೀರ ತಾವರೆಯಂತಿಪ್ಪರು, ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರಾ, ನಿಮ್ಮ ಶರಣರು.

---

## ( ೪ ) ಏಕ ಭುಕ್ತೋಪವಾಸಾದಿಗಳ್ನು ಮಾಡಕೂಡದು.

(೧). ಪ್ರಾಣಲಿಂಗ ಸಂಬಂಧಿಯಾದ ಲಿಂಗವಂತನು ಏಕಭುಕ್ತೋಪ ವಾಸಂಗಳಂ ಮಾಡಲಾಗದು, ಅದೇನು ಕಾರಣವೆಂದಡೆ, ದೇವರಾರೋಗ ಣೆಯು ತಪ್ಪುವದಾಗಿ, ಅಷ್ಟವಿಧಾರ್ಚನೆ ಷೋಡಶೋಪಚಾರ ಕ್ರಿಯೆಗಳು ತಪ್ಪುವುದಾಗಿ, ಆಗಮಮಾರ್ಗ ತಪ್ಪುವುದಾಗಿ, ಶ್ರೀಗುರುವಿನಾಜ್ಞೆ ತಪ್ಪುವುದಾಗಿ, ತನಗೆ ಮುಂದೆ ಪ್ರಸಾದವಿಲ್ಲವಾಗಿ. ಮುಕ್ತಿ ಇಲ್ಲ. ದೋಷಕಾರಿಯಪ್ಪನು ಕೇಳಿ ರಣ್ಣಾ. ಅದೆಂತೆಂದೊಡೆ, “ ಪ್ರಾಣಲಿಂಗ ಸಮಾಯುಕ್ತ ನ್ಯೆಕಭು ಕ್ತೋಪ ವಾಸಿನಃ । ಪ್ರಸಾದ ನಿಷ್ಫಲಂ ಚೈವ ರೌರವಂ ನರಕಂ ವ್ರಜೇತ್ ॥ ಎಂದುದಾಗಿ, ಇದು ಕಾರಣ ನಿತ್ಯನೈಮಿತ್ಯ ಪಂಚಪರ್ವ ತಿಥಿಗಳಲ್ಲಿ ಆವ ದಿನದಲ್ಲಿಯೂ ಎಂದೆಂದೂ ಅಷ್ಟವಿಧಾರ್ಚನೆ ಷೋಡಶೋಪಚಾರವೇ ಕರ್ತವ್ಯ ನೋಡಾ· ದೇವರಾರೋಗಣೆಯ ಮಾಡಿಸಿ, ಪ್ರಸನ್ನತ್ವವಂ ಪಡೆದು ಪ್ರಸಾದಮಂ ಧರಿಸಿ ಮುಕ್ತರಪ್ಪುದಯ್ಯ, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೨). ಪೌರ್ಣಮಿ ಬಂದನ್ನಕ್ಕರ ಬಾಯಿಬಂಧನದಲ್ಲಿರ್ದ ಚಕೋರ ನಂತೆ ಇರ್ದನಯ್ಯ. ಉಣಲಾಗದೆಂಬ ಶಾಸ್ತ್ರವಿಡಿದು ಇರ್ದವನಲ್ಲ. ಉಣಲಾಗ ದೆಂಬ ಶಾಸ್ತ್ರವುಂಟೇ ಲಿಂಗವಂತಂಗೆ? ಅಹೋರಾತ್ರಿ ಅಷ್ಟ ಭೋಗಂಗಳ ಲಿಂಗಕ್ಕೆ ಕೊಟ್ಟುಕೊಳಬೇಕು, ಮಾಡುವ ನೀಡುವ ನಿಜಭಕ್ತರಿಲ್ಲದ ಕಾರಣ ಬಾಯ್ದೆರೆಯದೆ ಇರ್ದನು. ಮಾಡಿನೀಡಿಹೆನೆಂಬ ಶಬ್ದಕ್ಕೆ ಸಂತೋಷದ ಆಪ್ಯಾ ಯನ ಹಿರಿದಾಯಿತ್ತು. ನೀಡಯ್ಯ ಸಂಗನಬಸವಣ್ಣಾ ಗುಹೇಶ್ವರಂಗೆ.

(೩). ಸೋಮವಾರ, ಮಂಗಳವಾರವೆಂದು ಮಾಡುವ ಭಕ್ತನ ಲಿಂಗ ಭಕ್ತಂಗೆಂತು ಸರಿ ಎಂಬೆನಯ್ಯ? ದಿನ ಶ್ರೇಷ್ಠವೋ? ಲಿಂಗಶ್ರೇಷ್ಠವೋ? ದಿನ ಶ್ರೇಷ್ಠವೆಂದು ಮಾಡುವ ದುರಾಚಾರಿಯ ಮುಖವ ನೋಡಲಾಗದು. ಆತ

ದಿನವೇ ಘನವೆಂದು, ದಿನವೇ ದೈವವೆಂದು ಮಾಡುವನಾಗಿ, ಆತ ದಿನಭಕ್ತನು. ಲಿಂಗಭಕ್ತನು ಲಿಂಗವೇ ಘನವೆಂದು, ಲಿಂಗವೇ ದೈವವೆಂದು ಮಾಡುವನಾಗಿ, ಆತ ಲಿಂಗಭಕ್ತನು. ಅಂತಾ ದಿನದ. ಭಕ್ತಂಗೆಯೂ ಲಿಂಗಭಕ್ತಂಗೆಯೂ ಸಮ ವೆಂದಡೆ ಪಂಚಮಹಾಪಾತಕ ತಪ್ಪದು. ಅದೆಂತೆಂದೊಡೆ, ಸೌಮೆ ಭೌಮೆ ವ್ಯತೀಪಾತೆ ಸಂಕ್ರಾಂತೆ ಶಿವರಾತ್ರಯೋಃ । ಏಕ ಭುಕ್ತೋಪವಾಸೇನ ನರಕೇ ಕಾಲಮಕ್ಷಯಂ ॥ ಎಂದುದಾಗಿ, ದಿನವಾರಂಗಳು ಶ್ರೇಷ್ಠವೆಂದು ಏಕಭುಕ್ತೋ ಪವಾಸಂಗಳಂ ಮಾಡುವ ಭಕ್ತಂಗೆ ಕುಂಭಿನೀಪಾತಕನಾಯಕನರಕ ತಪ್ಪದು ಕೂಡಲ ಸಂಗಮದೇವಾ.

( ೪ ). ದ್ವಾದಶ ಮಾಸದೊಳಗೆ ಶ್ರಾವಣಮಾಸದ ಫಲಪುಣ್ಯ ಮಹಾ ದೊಡ್ಡದೆಂದು ವೇದ ಪುರಾಣ ಶೃತಿ ವಾಕ್ಯಂಗಳಿಂದ ಕೇಳಿ, ಅಂತಪ್ಪ ಶ್ರಾವಣ ಮಾಸ ತಿಂಗಳ ದಿವಸ ಪರಿಯಂತರವಾಗಿ ನಿತ್ಯದಲ್ಲಿ ವ್ರತವನಾಚರಿಸುವರ ಆಚ ರಣೆಯ ಪೇಳ್ವೆ. ಅದೆಂತೆಂದೊಡೆ, ಶ್ರಾವಣಮಾಸ ಪಾಡ್ಯ ದಿವಸ ಮೊದಲು ಮಾಡಿ ನಿತ್ಯದಲ್ಲಿ ಒಬ್ಬ ಜಂಗಮದ ಪಾದವ ಪಿಡಿದು ಪತ್ರಿ ಪುಷ್ಪ ನಿತ್ಯದಲ್ಲಿ ತಂದು ಪಾದಪೂಜೆಯ ಮಾಡಿ ಪಾದೋದಕ ಪ್ರಸಾದವ ಕೊಂಡು ಆ ಜಂಗಮ ಸಹಿತವಾಗಿ ಮೃಷ್ಟಾನ್ನ ಭೋಜನವ ಹಾ, ಹಾ, ಎಂದು ಒಟ್ಟೆಸಿಕೊಂಡು, ಒಡ ಲ ತುಂಬಿಕೊಂಡು, ಮತ್ತೆ ಮರಳಿ ಸಾಯಂಕಾಲಕ್ಕೆ ಫಲಾಹಾರವೆಂದು ಮಾಡಿಸಿ ತಿಂದು ನಾವು ಶ್ರಾವಣಮಾಸ ಒಂದೊತ್ತು ಉಪವಾಸ ನಿತ್ಯದಲ್ಲಿ ಜಂಗಮದ ತೀರ್ಥಪ್ರಸಾದ ತಪ್ಪದೆ ಕೊಂಬವ್ರತವುಳ್ಳವರೆಂದು ತಮ್ಮ ಬಿಂಕದ ಮಾತು ಮೂಢಾತ್ಮರ ಮುಂದೆ ಬೀರುವರಯ್ಯ. ಇಂತಪ್ಪ ತಾಮಸಗುಣವುಳ್ಳ ಅಹಂಕಾ ರಿಗೆ ವೀರಮಾಹೇಶ್ವರರೆಂದಡೆ, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗ ನಿರ್ಮಾಯ ಪ್ರಭುವು ಮೆಚ್ಚುವನೇ ? ಮೆಚ್ಚನಯ್ಯ. ನರಕದಲ್ಲಿಕ್ಕೆಂದ ನೋಡಾ.

( ೫ ). ದ್ವಾದಶಮಾಸ, ದ್ವಾದಶ ಚತುರ್ದಶಿ, ದ್ವಾದಶ ಅಮಾವಾಸ್ಯ ದೊಳಗೆ ಮಾಘಮಾಸ ಚತುರ್ದಶಿ, ಶಿವರಾತ್ರೆ ಅಮಾವಾಸ್ಯ ಫಲಪುಣ್ಯ ಮಹಾ ದೊಡ್ಡದು ಎಂದು ಸ್ಕಂದಪುರಾಣ, ಬ್ರಹ್ಮೋತ್ತರಖಂಡ ಶೃತಿವಾಕ್ಯಗಳಿಂದ ಕೇಳಿ, ಅಂತಪ್ಪ ಮಾಘಮಾಸದ ಚತುರ್ದಶಿ ದಿವಸ ಒಂದೊತ್ತು ಉಪವಾಸ ಮಾಡಿ ಪತ್ರಿಪುಷ್ಪ ಕಡ್ಡಿಬತ್ತಿಯ ತಂದು ಸಾಯಂಕಾಲಕ್ಕೆ ಸ್ನಾನವ ಮಾಡಿ, ಜಂಗಮವ

ಕರೆತಂದು ಅರ್ಚಿಸಿ ಲಿಂಗವ ಪತ್ರಿ ಪುಷ್ಪ ಅಭಿಷೇಕ ಕಡ್ಡಿಬತ್ತಿ ಏಕಾರತಿ ಪಂಚಾರತಿಗಳಿಂದ ಪೂಜಿಸಿ, ಪಾದೋದಕವ ಸೇವಿಸಿ, ಆಮೇಲೆ ತಮ್ಮ ಗೃಹದಲ್ಲಿ ಮಾಡಿದ ಉತ್ತಮವಾದ ಫಲಾಹಾರ ಅಂಜೀರ ದ್ರಾಕ್ಷ ಹಲಸು ತೆಂಗು ಬಾಳೇ ಹಣ್ಣು ಮೊದಲಾದ ಫಲಾಹಾರ, ಮತ್ತಂ ಬೆಂಡು ಬತ್ತಾಸ ಖಜೂರಿ ಬುಂದೆ ಮೊದಲಾದ ಗಿನಸು ಎಡೆಮಾಡಿಸಿ ಪ್ರಸಾದ ಕೈಕೊಂಡು ಲಿಂಗಕ್ಕೆ ತೋರಿ ತೋರಿ, ತಮ್ಮ ಮನಬಂದ ಪದಾರ್ಥವ ಅಂಗಕ್ಕೆ ಗಡಣಿಸಿಕೊಂಡು, ನಾವು ಇಂದಿನ ದಿವಸ ಉದಯದಿಂ ಸಾಯಂಕಾಲ ಪರಿಯಂತರವಾಗಿ ಒಂದೊತ್ತು ಉಪವಾಸವ ಮಾಡಿ ಶಿವಯೋಗವ ಮಾಡಿದೆವೆಂದು ಮೂಢ ಮಂದಮತಿ ಅಧ ಮರ ಮುಂದೆ ತಮ್ಮ ಬಿಂಕವ ಪೇಳಿ ರಾತ್ರಿಯಲ್ಲಿ ಜಾಗ್ರಣ ಮಾಡಬೇಕೆಂದು ತಮ್ಮಂಗದ ಮೇಲಣ ಲಿಂಗವ ಬಿಗಿಬಿಗಿದು ಕಟ್ಟಿಕೊಂಡು ಸ್ಥಾವರ ಲಿಂಗದ ಗುಡಿಗೆ ಹೋಗಿ, ಆ ಲಿಂಗದ ಪೂಜೆಯಿಂದ ಬೆಳಗ ಕಳೆದು ಉದಯಕ್ಕೆ ಶಿವರಾ ತ್ರಿಯು ಅಮಾವಾಸ್ಯೆ ದೊಡ್ಡದೆಂದು ಹಳ್ಳ ಹೊಳೆಗೆ ಹೋಗಿ ಚಳಿಯಲ್ಲಿ ತಣ್ಣೀ ರೊಳಗೆ ಮುಳುಗಿ ಸ್ನಾನವ ಮಾಡಿ ಬಂದು, ಜಂಗಮವ ಕರಿಸಿ, ಮೃಷ್ಟಾನ್ನವ ಹೊಟ್ಟೆತುಂಬ ಗಟ್ಟಿಸಿ, ಶಿವರಾತ್ರಿ ಶಿವಯೋಗದ ಪಾರಾಯಣವಾಯಿತ್ತೆಂದು ಮಹಾ ಉಲ್ಲಾಸದಿಂ ತಮ್ಮೊಳು ತಾವೇ ಇರ್ಪರಯ್ಯಾ! ಇಂತಪ್ಪ ಅವಿಚಾರಿಗ ಳಾದ ಅಜ್ಞಾನ ಜೀವಾತ್ಮರಿಗೆ ವೀರಮಾಹೇಶ್ವರರೆಂದಡೆ ಪರಮಶಿವಯೋಗಿಗ ಳಾದ ಶಿವಶರಣರು ನಗುವರಯ್ಯಾ, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗ ನಿರ್ಮಾಯ ಪ್ರಭುವೇ.

(೬). ಇಂತಪ್ಪ ಆಚರಣೆಯಲ್ಲಿ ಭಿನ್ನಜ್ಞಾನಿಗಳಾಗಿ, ಭಿನ್ನಕ್ರಿಯೆಗಳನಾ ಚರಿಸಿ, ಭಿನ್ನಭಾವ ಮುಂದುಕೊಂಡು ವ್ರತವನಾಚರಿಸುವ ಅಜ್ಞಾನಿಗಳಾದ ಜೀವಾತ್ಮರಿಗೆ ಶಿವನು ಒಲಿ, ಒಲಿ ಎಂದರೆ, ಎಂತೊಲಿವನಯ್ಯಾ? ಮತ್ತೆಂತೆಂದೊಡೆ ಸುಜ್ಞಾನೋದಯವಾಗಿ ಸಕಲ ಪ್ರಪಂಚವ ನಿವೃತ್ತಿಯ ಮಾಡಿ ಶ್ರೀಗುರು ಕಾರು ಣ್ಯವ ಪಡೆದು ಲಿಂಗಾಂಗ ಸಮರಸನಾಗಿ, ಸರ್ವಾಂಗ ಲಿಂಗಮಯ ತಾನೆಂದು ತಿಳಿದು ನೋಡಿ, ಅಂತಪ್ಪ ಘನ ಮಹಾಲಿಂಗ ಇಷ್ಟ ಬ್ರಹ್ಮವನು ತನುವಿನಲ್ಲಿ ಸ್ವಾಯತವ ಮಾಡಿ, ಆ ತನುಪ್ರಕೃತಿಯಳಿದು ಆ ಇಷ್ಟಲಿಂಗ ಸತ್ಕ್ರಿಯೆಯನಾ ಚರಿಸುವದೇ ದಿನಚರ್ಯವಾದ ಸೋಮವಾರ ವ್ರತವೆಂಬೆ. ಅಂತಪ್ಪ ಇಷ್ಟ ಬ್ರಹ್ಮದ ಚಿತ್ಕಲಾಸ್ವರೂಪವಾದ ನಿಃಕಲ ಪ್ರಾಣಲಿಂಗವನು ಮನದಲ್ಲಿ ಸ್ವಾಯ

ತವ ಮಾಡಿ, ಆ ಮನ ಪ್ರಕೃತಿಯನಳಿದು, ಆ ನಿಃಕಲ ಪ್ರಾಣಲಿಂಗದ ಸುಜ್ಞಾನ ಕ್ರಿಯೆಗಳನಾಚರಿಸುವದೇ ದ್ವಾದಶ ಮಾಸದೊಳಗೆ ಶ್ರೇಷ್ಠವಾದ ಶ್ರಾವಣಮಾಸದ ವ್ರತವೆಂಬೆ. ಅಂತಪ್ಪ ಇಷ್ಟಬ್ರಹ್ಮದ ಆನಂದಸ್ವರೂಪವಾದ ನಿರಂಜನ ಭಾವಲಿಂಗವನು ಧನವೆಂದಡೆ ಆತ್ಮ, ಅಂತಪ್ಪ ಆತ್ಮನಲ್ಲಿ ಸ್ವಾಯತವ ಮಾಡಿ ಆ ಆತ್ಮ ಪ್ರಕೃತಿಯನಳಿದು, ಆ ನಿರಂಜನ ಭಾವಲಿಂಗದ ಮಹಾಜ್ಞಾನಾಚರಣೆಯನಾಚರಿಸುವದೇ ದ್ವಾದಶಮಾಸ, ದ್ವಾದಶ ಚತುರ್ದಶಿ, ದ್ವಾದಶ ಅಮಾವಾಸೆಯೊಳಗೆ ಮಾಘಮಾಸ ಚತುರ್ದಶಿ ಶಿವರಾತ್ರಿ ಅಮಾವಾಸ್ಯೆಯ ವ್ರತವೆಂಬೆ. ಇಂತೀ ತ್ರಿವಿಧಲಿಂಗ ಮೊದಲಾದ ಚಿದ್ಘನ ಲಿಂಗವು ತನ್ನ ಸರ್ವಾಂಗದಲ್ಲಿ ಸ್ವಾಯತ ಉಂಟೆಂದು ಶ್ರೀಗುರುಮುಖದಿಂ ತಿಳಿಯದೆ, ಲಿಂಗವಿರಹಿತರಾಗಿ ಬಾಹ್ಯದ ಕ್ರಿಯೆಗಳ ಪಿಡಿದು ವ್ರತವನಾಚರಿಸುವದೆಲ್ಲ ಮಾಯಾವಿಲಾಸ, ಭವದ ಬಟ್ಟೆ, ಎಂದು ತಿಳಿಯದೆ ಭವಭಾರಿಗಳಾಗಿ, ಭವಕ್ಕೆ ಭಾಜನವಾಗಿ ಕೆಟ್ಟು ಮನುಮುನಿ ದೇವದಾನವ ಮಾನವರು ಮೊದಲಾದ ಸಕಲ ಲೋಕಾದಿ ಲೋಂಕಗಳು ತಮ್ಮ ನಿಲವ ತಾನಾರೆಂಬುದನರಿಯದೆ ಇದಿರಿಟ್ಟು ಕೆಟ್ಟು ಹೋದರು ನೋಡೆಂದ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗನಿರ್ವಾಣಿಯ ಪ್ರಭುವೇ.

---

# ಭೋಜನ.

## (೧) ಅರ್ಪಿತ ಭಾವವುಳ್ಳವನಾಗಿರುವದು.

(೧). ಮೌನದಲುಂಬುದು ಆಚಾರವಲ್ಲ. ಲಿಂಗಾರ್ಪಿತ ಮಾಡಿದ ಬಳಿಕ, ತುತ್ತಿಗೊಮ್ಮೆ ಶಿವಶರಣೆನ್ನುತ್ತಿರಬೇಕು. ಕರಣವೃತ್ತಿಗಳಡಗುವವು, ಕೂಡಲಸಂಗಮದೇವನ ನೆನೆಯುತ್ತ ಉಂಡರೆ.

(೨). ಶಿವನ ಪಾದೋದಕವಲ್ಲದೆ ಕೊಳಲಾಗದೆಂದುದು ವೇದ. ಶಿವನ ಪ್ರಸಾದವಲ್ಲದೆ, ಉಣಲಾಗದೆಂದುದು ವೇದ. ಜಾಬಾಲ ಶಾಖಾಯಾಂ:—ರುದ್ರೇಣಾತ್ತಮಶ್ನಂತಿ ರುದ್ರೇಣ ಪೀತಂ ಪಿಬಂತಿ । ರುದ್ರೇಣಾಘ್ರಾತಂ ಜಿಘ್ರಂತಿತಸ್ಮಾತ್ ಬ್ರಾಹ್ಮಣೋ ವಿದ್ವಾನ್ನಿರ್ಮಾಲ್ಯಮೇವ ಸದಾಭಕ್ಷಯೇತ್ । ನಿರ್ಮಾಲ್ಯಮೇವಾಶ್ನಿಯಾತ್ । ಎಂದುದಾಗಿ, ಇದನರಿದು ಶಿವನ ಪಾದೋದಕ ಪ್ರಸಾದವ ಕೊಂಬಾತನೇ ಸದ್ಬ್ರಾಹ್ಮಣ, ಆತನೇ ವಿದ್ವಾಂಸನು, ಆತನೇ ಎಲ್ಲವ ಬಲ್ಲ

ಸರ್ವಜ್ಞನಯ್ಯ. ಇಂತಲ್ಲದೆ, ಶಿವನ ಪಾದೋದಕವಲ್ಲದೆ ಉಳಿದಾದ ಉದಕವ ಕೊಂಡಡೆ, ಸುರಾಪಾನವ ಕೊಂಡ ಸಮಾನ. ಶಿವನ ಪ್ರಸಾದವಲ್ಲದೆ ಕೊಂಡಡೆ, ನಾಯಮಾಂಸವ ಕೊಂಡಸಮಾನ ತಪ್ಪದು, ಬಸವಪ್ರಿಯಕೂಡಲಚನ್ನಸಂಗಮ ದೇವಾ.

(೩). ಶಿವಲಿಂಗಾರ್ಪಿತವಿಲ್ಲದೆ ಕೊಂಬ ಕರ್ಮಿಗಳು ನೀವು ಕೇಳಿ, ಭೋ. ಅನರ್ಪಿತವು ಏನು ಮಾಡುವುದು, ಅನರ್ಪಿತವು ಏನು ಈವುದು, ಎಂದೊಡೆ, ಅದಕ್ಕೆ ಆಗಮವು ಹೇಳುತ್ತಿದೆ. “ಅಸಮರ್ಪ್ಯಪದಂ ಶಂಭೋ ಭುಂಕ್ತೆ ಉದಕಂ ಪಿಬತಿ ಚ । ಸಮಾಂಸಮಸ್ಥಿ ಮಾತ್ರಂಚ ಭುಂಕ್ತೆ, ಖಾದತಿ ಪಿಬತಿ ಚ ॥” ಎಂದುದಾಗಿ ಇದನರಿತು, ಮಹಾಲಿಂಗ ಕಲ್ಲೇಶ್ವರ ದೇವರಿಗೆ ಸಮರ್ಪಿಸದೆ ಕೊಂಡೊಡೆ, ತನ್ನ ಮಾಂಸ ತನ್ನೆಲು ತನ್ನ ಮಲ ಮೂತ್ರವ ಕುಡಿದು ನುಂಗಿದಂತೆ ಕಾಣಿರಣ್ಣಾ.

(೪). ಶಿವಲಿಂಗಾರ್ಚನೆಯ ಮಾಡದೆ, ಶಿವಪೂಜೆಯಂ ಮಾಡದೆ, ಲಿಂಗಾರ್ಪಿತವ ಮಾಡದೆ, ಉಂಬುವರೆಲ್ಲರು ಸತ್ತ ಹೆಣವನ್ನು ಮಲವನ್ನು ಒಂದಾಗಿ ತಿಂಬರಯ್ಯ. ಅಲ್ಲಿ ಏನೂ ಸಂದೇಹವಿಲ್ಲಾಗಿ. ಅದಕ್ಕೆ ಶಿವಧರ್ಮ ಶಾಸ್ತ್ರ:—ಯಸ್ತು ಲಿಂಗಾರ್ಚನಂ ತ್ಯಕ್ತ್ವಾ ಭುಂಕ್ತೆ ಕ್ರಿಮಿಕೀಟ ಭುಕ್ । ಸನ ರೋ ನರಕಗಾಮೀ ಸ್ಯಾತ್ ಸರ್ವಲೋಕ ಬಹಿಷ್ಕೃತಃ । ಅಕೃತ್ವಾ ಪೂಜನಂ ಶಂಭೋ ಯೋ ಭುಂಕ್ತೆ ಪಾಪಕೃತ್ ದ್ವಿಜಃ । ಕುಣಪಂಚಮಲಂಚೈವ ಸಮ ಮಶ್ನಾತಿ ದಿನೇ ದಿನೇ ॥ ಎಂದುದಾಗಿ, ಲಿಂಗಾರ್ಪಿತವಿಲ್ಲದೆ ಕೊಂಬ ಕರ್ಮಿ ಗಳಿಗೆ ಎಂದೆಂದಿಗೂ ನರಕ ತಪ್ಪದಯ್ಯ, ಬಸವಪ್ರಿಯ ಕೂಡಲಚನ್ನಸಂಗವ್ಪ ದೇವಾ.

(೫). ಭಕ್ತರಾದೆವೆಂದು ಭವಿಪಾಕವನೊಲ್ಲೆನೆಂಬಿರಿ. ಭವಿಪಾಕವೆಂಬು ದೆಂತುಟು ಎಂದೊಡೆ ಕೇಳಿರೇ. ಅಂಗತ್ರಯದಿಂದ ನೋಡಿದಡೆ, ಅದು ಭವಿ ಪಾಕ. ಲಿಂಗತ್ರಯ ನೋಟಕ್ಕದು ಸಲ್ಲದು. ಗುರುಕಾರುಣ್ಯಮುಂಟು, ನಾವು ಸದ್ಭಕ್ತರೆಂಬರು. ಅವರಿಗೆ ಅಂಗತ್ರಯ ನೋಟವುಳ್ಳನ್ನಕ್ಕರ ಲಿಂಗತ್ರಯದ ನೋಟ ಇನ್ನೆಲ್ಲಿಹದೋ? ಪಂಚಭೂತ ಕಾಯವ ತಂದು ಸದ್ಭಕ್ತನೆಂದೊಡೆ, ಪ್ರಸಾದ ಶಾಂತಿ ಎಂದುದು ನಮ್ಮ ಕೂಡಲಚನ್ನಸಂಗಯ್ಯನ ವಚನ.

(೬). ಎಡದ ಕೈಯಲಿ ಲಿಂಗವ ಹಿಡಿದುಕೊಂಡು, ಬಲದ ಕಯ್ಯಲಿ ಮುದ್ದಿಯ ಮಾಡಿ, ಉಣ್ಣು, ಉಣ್ಣು, ಎಂದು ಊಡಿಸಿದವರೆಲ್ಲರೂ ಕಾಣಿರಯ್ಯ. ದೇವರುಂಡಿತೆಂದು, ಬಿಗಿಬಿಗಿದು ಕಟ್ಟಿಕೊಂಬಿರಯ್ಯ! ದೇವರಿಗೆ ಸಿಪ್ಪಿಯ ತೋರಿ ರಸವ ನೀವು ಉಂಡು, ದೇವರನೇಕೆ ದೂರುವಿರಯ್ಯ? ದೇವರು ಹೀಗೆ ಒಲ್ಲರು. ಉಂಬುವ ಕ್ರಮವ ಹೇಳಿಹೆ, ಕೇಳಿರಯ್ಯ. ಇಷ್ಟಲಿಂಗಕ್ಕೆ ರೂಪಕೊಟ್ಟಲ್ಲಿ ನೋಡಿ ಪರಿಣಾಮಿಸುವದಲ್ಲದೆ, ಸವಿದು, ಪರಿಣಾಮಿಸುವದು ಎಲ್ಲಿ ಎಂದರೆ ಜಿಹ್ವೆಯ ಕೊನೆಯ ಮೊನೆಯಲ್ಲಿ. ತಟ್ಟುವ, ಮುಟ್ಟುವ, ಷಡ್ರಸಾನ್ನದ ರುಚಿಯ ತಾನೆನ್ನದೆ, ಲಿಂಗವೇ ಸ್ವೀಕರಿಸುತ್ತಿದೆ, ಎಂದು ನಿಶ್ಚಯವುಳ್ಳರೆ, ಸವಿದು ಪರಿಣಾಮಿಸುವದಯ್ಯ. ನಾಸಿಕದ ಕೊನೆಯ ಮೊನೆಯಲ್ಲಿ ವಾಸಿಸುವ ಷಡ್ವಿಧ ಗಂಧಂಗಳ ಭೋಗವನರಿದು ಭೋಗಿಸುವುದು ಲಿಂಗ ತಾನೆ. ನೇತ್ರದ ಕೊನೆಯ ಮೊನೆಯಲ್ಲಿ ತಟ್ಟುವ ಷಡ್ವಿಧ ರೂಪಿನ ಭೋಗಂಗಳ ಭೋಗಿಸಿ ಪರಿಣಾಮಿಸುವುದು ಲಿಂಗ ತಾನೇ ನೋಡಾ. ತ್ವಕ್ಕಿನ ಕೊನೆಯ ಮೊನೆಯಲ್ಲಿ ಸೋಂಕುವ ಷಡ್ವಿಧ ಸ್ಪರ್ಶನದ ಭೋಗಂಗಳ ಭೋಗಿಸಿ ಸುಖಿಸುವುದು ಲಿಂಗ ತಾನೇ ನೋಡಾ. ಶ್ರೋತ್ರದ ಕೊನೆಯ ಮೊನೆಯಲ್ಲಿ ತಟ್ಟುವ ಷಡ್ವಿಧ ಶಬ್ದಂಗಳ ಭೋಗಾದಿ ಭೋಗಂಗಳ ಭೋಗವ ಸುಖಿಸಿ ಪರಿಣಾಮಿಸುವುದು ಲಿಂಗ ತಾನೇ ನೋಡಾ. ಭಾವದ ಕೊನೆಯ ಮೊನೆಯಲ್ಲಿ ತೀವಿ, ಸಲೆ ಪೂರ್ಣವಾಗಿರ್ದು, ಷಡ್ವಿಧ ತೃಪ್ತಿ ಭೋಗಾದಿ ಭೋಗಂಗಳ ಭೋಗಿಸಿ, ಸುಖಿಸಿ, ಪರಿಣಾಮಿಸುವಾತ ಲಿಂಗದೇವನೆಂದರಿದು, ಸರ್ವೇಂದ್ರಿಯ ಮುಖದಲ್ಲಿ ಬಂದ ಸರ್ವತೋ ಮುಖ ಪದಾರ್ಥವ ಸರ್ವತೋಮುಖಲಿಂಗಕ್ಕೆ ಅರ್ಪಿಸಿ, ಸರ್ವಾಂಗವೆಲ್ಲ ಬಯಲಾಗಿ, ಸರ್ವತೋ ಮುಖಪ್ರಸಾದನ ಕೊಂಡು, ಆ ಸರ್ವಜ್ಞ ಪ್ರಸಾದದೊಳಗಡಗಿರ್ದನಯ್ಯ. ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೭). ತೊಗಲ ಕೈಯ್ಯಲ್ಲಿ ಶಿಲೆಯ ಲಿಂಗವ ಹಿಡಿದು, ಮಣ್ಣ ಪರಿಯಾಣದಲ್ಲಿ ಓಗರವನಿಕ್ಕಿ, ಲಿಂಗನೈವೇದ್ಯವ ತೋರಿದಡೆ, ಓಗರ ಸವಿದುದಿಲ್ಲ. ಕೈ ನೈವೇದ್ಯದ ರುಚಿಯನರಿದುದಿಲ್ಲ. ಒಳಗು ಶುದ್ಧವಿಲ್ಲದೆ, ಮುಟ್ಟಿ ಅರ್ಪಿತವೆಂದಡೆ, ಮೆಚ್ಚುವರೇ ಪ್ರಾಣಲಿಂಗ ಸಂಬಂಧಿಗಳು? ಉಂಡವನುಂಡಂತೆ ತೇಗುವ. ಸಂದಳಿದು ದ್ವಂದ್ವ ಹಿಂಗಿ, ನಿಜವಾರೆಂಬುದ ವಿಚಾರಿಸಿಕೊಡುವುದಕ್ಕೆ ಮೊದಲೆ ಕೊಂಡವರಾರು ಎಂಬುದ ಭಾವಿಸಿ, ಭಾವಿಸುವುದಕ್ಕೆ ಮೊದಲೆ, ಭಾವನೆಗೆ

ಬಂದವರಾರೆಂಬುದ ವಿಚಾರಿಸಿ, ಬೀಜನೆರೆ ಬಲಿದು, ಪುನರಪಿ ಬರ್ಪಂತೆ, ಲಿಂಗವು ತಾನಾಗಿ, ಸಂದೇಹವಿಲ್ಲದೆ ಸೋಂಕುವುದಕ್ಕೆ ಮುನ್ನವೇ ಅರ್ಪಿತ ನಿಂದಾಯಿತ್ತಾಗಿ, ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಪ್ರಾಣಲಿಂಗ ಸಮರ್ಪಣ.

**ಅರ್ಥ:**—ಸಮರಸಭಾವವ ತಿಳಿದು ಚರಿಸಲರಿಯದ ಭಿನ್ನಭಾವಿಗಳು ತಮ್ಮ ಜಡಹಸ್ತದಲ್ಲಿ ಚಿತ್ಕಲಾಲಿಂಗವಲ್ಲದ ಜಡಲಿಂಗವನು ಗ್ರಹಿಸಿ, ಮೃತ್ತಿಕೆಯ ಹರಿವಾಣದಲ್ಲಿ ಪದಾರ್ಥವನೆಡೆಮಾಡಿ, ಲಿಂಗಕ್ಕೆ ನೈವೇದ್ಯವಮಾಡಿ ಸಮರ್ಪಿಸಿದಡೆ ಆ ಪದಾರ್ಥವು ಲಿಂಗಕ್ಕೆ ಸಮರ್ಪಿತವಾಗಲಿಲ್ಲ. ಆ ಜಡಹಸ್ತದಿಂದೆ ಪದಾರ್ಥವನರ್ಪಿಸಿಕೊಂಡಡೆ ಅವರಿಗೆ ಪ್ರಸಾದ ಸ್ವೀಕಾರವಳವಡಲಿಲ್ಲ. ಅಂತರಂಗದಲ್ಲಿ ಸಮರಸಜ್ಞಾನವಿಲ್ಲದೆ ಭಿನ್ನಭಾವದಲ್ಲಿ ತೊಗಲ ಕೈಯ್ಯಲ್ಲಿ ಸಿಲೆಯ ಲಿಂಗವ ಪಿಡಿದು, ಮಣ್ಣ ಪರಿಯಾಣದಲ್ಲಿ ಪದಾರ್ಥವನೆಡೆಮಾಡಿ, ಲಿಂಗಕ್ಕರ್ಪಿಸಿದಡೆ, ಪ್ರಾಣಲಿಂಗವೇ ಈ ಇಷ್ಟಲಿಂಗವು, ಅರಿವಿನ ಹಸ್ತವೇ ಈ ಹಸ್ತವು, ಚಿತ್ಪರಿಯಾಣವೇ ಈ ಪರಿಯಾಣವು, ಆತ್ಮನೆಂಬ ನೈವೇದ್ಯವೇ ಈ ನೈವೇದ್ಯವು ಎಂಬ ಸಂಬಂಧವ ತಿಳಿದಾಚರಿಸುವ ಶರಣರುಗಳು ಒಡಂಬಡುವರೇ? ಹುಳಿಯನುಂಡವ ಹುಳಿಯನೇ ತೇಗುವ, ಸಿಹಿಯನುಂಡವ ಸಿಹಿಯನೇ ತೇಗುವ, ಎಂಬ ಹಾಗೆ ಭಿನ್ನಭಾವಿಗಳು ಶರಣಲಿಂಗವೆಂಬೆರಡಳಿದು, ಶರಣಲಿಂಗ ಒಂದೇ ಬ್ರಹ್ಮವೆಂದು ಪರಾಂಬರಿಸಿ ರೂಪ-ಪದಾರ್ಥವನು ಇಷ್ಟಲಿಂಗಕ್ಕೆ ಸಮರ್ಪಿಸಿದಷ್ಟಕ್ಕೆ ಆ ಪದಾರ್ಥ ಕೈಕೊಂಡವರಾರು? ಪ್ರಾಣಲಿಂಗವೇ ಇಷ್ಟಲಿಂಗವಾಗಿ ಅರ್ಪಿಸಿಕೊಂಡಿತ್ತೆಂದು ನೆನೆದು, ಪ್ರಾಣಲಿಂಗವೇ ಇಷ್ಟಲಿಂಗವೆಂದು ನೆನೆದಷ್ಟಕ್ಕೆ ಮನದಲ್ಲಿ ಪ್ರಾಣಲಿಂಗವಾಗಿ ಬಂದವರಾರು? ಇಷ್ಟಲಿಂಗವೇ ಪ್ರಾಣಲಿಂಗವಾಗಿ ಬಂದಿಪ್ಪುದೆಂದು ಪರಾಂಬರಿಸಿ, ಅದು ಹೇಗೆಂದೊಡೆ, ಚಿತ್ತವು ಅಧಿಕವಾಗಿ ದೃಢವಾಗಿ ಮರಳಿ ಅಂಕುರವಾಗುವ ಹಾಗೆ, ಪ್ರಾಣಲಿಂಗವೇ ಇಷ್ಟಲಿಂಗವೆಂಬ ನೈಷ್ಠೆಯುಂಟಾದಲ್ಲಿ, ಇಷ್ಟಲಿಂಗದ ಚಿತ್ಕಲೆಯೇ ಮನದಲ್ಲಿ ಪ್ರಾಣಲಿಂಗವಾಗಿ ಇಷ್ಟಲಿಂಗಬೇರೆ, ಪ್ರಾಣಲಿಂಗಬೇರೆ, ಎಂಬ ಸಂಕಲ್ಪವಿಲ್ಲದೆ, ರೂಪಿನೊಳಗಣ ಪಂಚ ವಿಷಯಂಗಳು ಪಂಚೇಂದ್ರಿಯಂಗಳ ತಟ್ಟಿದಷ್ಟಕ್ಕೆ ಪ್ರಾಣಲಿಂಗವೇ ಇಷ್ಟಲಿಂಗವೆಂದು ರೂಪು ಪದಾರ್ಥವನರ್ಪಿಸಿದಲ್ಲಿ, ಇಷ್ಟಲಿಂಗವೇ ಪ್ರಾಣಲಿಂಗವಾಗಿ, ರೂಪಿನೊಳಗಣ ಪಂಚವಿಷಯಂಗಳನರ್ಪಿಸಿಕೊಂಬುದೆಂಬ ತನ್ನ ಸಮರಸಜ್ಞಾನದಿಂದವೇ ಪ್ರಾಣಲಿಂಗದೊಡನೆ ಕೂಡಿದ ಪಂಚವಿಧ ಲಿಂಗಂಗ

ಳಿಗೆ ಸಮರ್ಪಣೆಯಾದುದಾಗಿ, ರೂಪು ಇಷ್ಟಲಿಂಗಾರ್ಪಣವಾದಲ್ಲಿ, ಆರೂಪಿನೊಳಗಣ ರುಚಿಯು ಪ್ರಾಣಲಿಂಗಕ್ಕರ್ಪಿತವಾಗುತ್ತಿಹುದೆಂಬುದರ್ಥ.

---

## (೨) ಭರಿತಾರ್ಪಣ.

### (ಮಿತಾಹಾರಿಯಾಗಿರುವದು.)

(೧). ಭರಿತಾರ್ಪಣವೆಂದು ಅಪೇಕ್ಷಿಸುವಲ್ಲಿ ಸೂಚನೆಯರತು ಬಂದನೊರದನಿರಿಸೆಂದು ಸಂದಣಿಗೊಳ್ಳುತ್ತ, ಬಂದ ದ್ರವ್ಯವೆಷ್ಟುದೆಂಬು, ತಂದುಸುರಿಎನ್ನುತ್ತ, ಸಂದ ದ್ರವ್ಯವ ಮತ್ತೆ ಉಲ್ಲಂಘಿಸಿ ಇರುತ್ತ, ಮತ್ತೆ ಮಿಶ್ರದಿಂದ ದ್ರವ್ಯಂಗಳು ಬಿಸುರಿ ಬಂದು ಸೋಂಕಲಿಕ್ಕೆ ಮತ್ತಿರಿಸಬಹುದೇ? ಕಟ್ಟಳೆಯ ಮೀರಿ ಸೋಂಕಿದುದ ಮತ್ತೆ ಅರ್ಪಿಸಬಹುದೇ? ಇದು ಕಾರಣವಲ್ಲಿ ಕೆರಹಿನಳತಕ್ಕೆ ಕಾಲ ಕಡಿಯಿಸಿಕೊಳ್ಳದೆ, ಬಸುರಿಂಗಾಗಿ ಬಣ್ಣಾಟೆಯುಡುದೆ, ಕಿರುಚಿತ್ತು ವಿಷಯಲಂಪಟಕ್ಕಾಗಿ ಸಹಪಂಕ್ತಿಗಳಲ್ಲಿ ವಿಶೇಷವನೆಂದೂ ಮುಟ್ಟದೆ, ಅವರು ತಮ್ಮಳವನರಿದು ಮಾಡಿದಂತೆ ತಾ ತನ್ನ ವೇಳೆಯನರಿತು, ಅರ್ಪಿತವ ಮಾಡಿಕೊಂಡು, ಮಹಾನದಿಗಳಲ್ಲಿ ಸ್ಥೂಲ, ಸೂಕ್ಷ್ಮ ಕುಂಭಂಗಳನದ್ದಿ ತೆಗೆದಲ್ಲಿ, ಕುಂಭಕ್ಕೆ ತಕ್ಕ ಅಂಬು ಅಂಗಕ್ಕೆ ತಕ್ಕ ದ್ರವ್ಯ ಪದಾರ್ಥಂಗಳ ಅಂಗೀಕರಿಸುವುದು ಭರಿತಾರ್ಪಣದಸಂಗ, ಇದು ಲಿಂಗಸೋಂಕಿನ ಅಂಗದ ವಿವರ. ಹೀಂಗಲ್ಲದೆ, ತಂದು ಸುರಿಯಿಸಿಕೊಂಡು, ಕೊಂಡಷ್ಟ ಕೊಂಡು, ಇಂತೀ ಭರಿತಾರ್ಪಣ ಲಿಂಗಪ್ರಸಾದವ ಕಂಡವರು ಕೊಂಡು ಹೋಗಿ, ಎಂದು ಕೊಡುವ ಭಂಡನ ಭರಿತಾರ್ಪಣಲಿಂಗಕ್ಕೆ ಸಲ್ಲದಾಗಿ, ಇದು ಕಾರಣದಲ್ಲಿ ತುಂಬಿದ ಶಕಟಕ್ಕೆ ಅಂಗುಲದಷ್ಟು ತೃಣಭಾರವಾದಂತೆ, ಇದು ಶಿವಲಿಂಗಾಂಗಿಗಳು ಒಪ್ಪದತೆರ. ಇಂತೀ ಗುಣ ಭರಿತಾರ್ಪಣಂಗಳಲ್ಲಿ ನಿಂದುದ ಸಂದುದ ಬಂಧಂಗಳಲ್ಲಿ ಆತ್ಮವಿಚ್ಛಂದವಿಲ್ಲದೆ, ಅಲಿಂಗಘಟಕ್ಕೆ ಸಲುವ ಪ್ರಮಾಣಂಗಳನರಿದು ಅರ್ಪಿತವ ಮಾಡುವುದು ಭರಿತಾರ್ಪಣ. ಈ ಗುಣ ಭೋಗ ಬಂಕೇಶ್ವರಲಿಂಗಕ್ಕೆ ಸಮರ್ಪಣ.

**ಅರ್ಥ:—** ಭರಿತಾರ್ಪಣದ ಆಚರಣೆಯುಳ್ಳವರು ನಾವೆಂದು, ನೂತನವಾದ ಪದಾರ್ಥಗಳನ್ನು ಕಂಡು, ಹೆಚ್ಚಾಗಿ ನೀಡಿಸಿಕೊಳ್ಳಬೇಕೆಂದು ಬಯಸುವಲ್ಲಿ, ಶಿವನು ಆವಾತ ಮನದಲ್ಲಿ ಹೊಕ್ಕು, ಪ್ರೇರಿಸಿಕೊಟ್ಟಷ್ಟನು ಅನುಭವಿಸಬೇಕೆಂಬ ಲಿಂಗಾಣತಿಯ ಬಿಟ್ಟು, ಹೆಚ್ಚು ಕೊಂಡು ಪದಾರ್ಥಗಳನು ಚೆಲ್ಲುತ್ತಿ

ನೀಡೆಂದು ಸಂಭ್ರಮಗೊಳ್ಳುತ್ತ, ನೀಡಿದ ಪದಾರ್ಥವು ಸಾಲದೆಂದು ವಿಶೇಷ ವಾಗಿ ತಂದು ನೀಡೆನುತ್ತ ನಿನ್ನೆ ಮೊನ್ನೆ ಅರ್ಪಿಸಿಕೊಂಡ ಪದಾರ್ಥವನು ಬಳಿಕ ಸಾಧನ ದ್ರವ್ಯಂಗಳು ಸಾಲದೆ ಹೋದವೆಂದು ಧಿಃಕರಿಸುತ್ತ ಬಳಿಕ ಹಸ್ತಮಿಶ್ರ ದಿಂದ ಪದಾರ್ಥಗಳನು ಎಡಬಲಕ್ಕೆ ನೀಡುತ್ತ, ಹಸ್ತವ ಬೀಸಿದಲ್ಲಿ ಸಿಡಿದು ಬಂದು ತನ್ನ ಎಡೆಯುಲ್ಲಿ ಬೀಳಲಿಕ್ಕೆ ಬಳಿಕಾ ಎಡೆಯ ಬಿಡಬಹುದೇ? ತನ್ನ ಭರಿ ತಾರ್ಪಣದ ಪ್ರಮಾಣವನು ಮೀರಿ ಕೆಟ್ಟುದುದ ಬಳಿಕ್ಕೆ ಕೊಂಬುದಕ್ಕಾದೀತೆ? ಉಂಬುದಕ್ಕೂ ಬಿಡುವುದಕ್ಕೂ ಆಗದ ಕಾರಣದಲ್ಲಿ, ಕೆರಹಿನ ಪ್ರಮಾಣಕ್ಕೆ ಕಾಲಕಡಿಹಿಸಿಕೊಂಡವನ ಹಾಗೆ ಸಂಕಟಬಿಡದೆ, ಹೊಟ್ಟೆಯುಕಿಚ್ಚಿಂಗೆ ಬಣ ಬೆಯು ಸುಟ್ಟು ಚಿಂತಿಸುವನ ಹಾಗೆ, ದುಃಖಿಕ್ಕೊಳಗಾಗದೆ, ಸ್ವಲ್ಪವಾದ ಜಿಹ್ವಾ ಲಂಪಟಕ್ಕಾಗ ನೂರಾರು ಕಳಿತು ಸಲಿಸುವಲ್ಲಿ ನಾವು ಭರಿತಾರ್ಪಣದ ಆಚರಣೆ ಯುಳ್ಳವರು, ಮೇಲಾಗಿ ನೀಡಿಸಿಕೊಂಬುದಿಲ್ಲ, ಎಂದು ಹೆಚ್ಚಾಗಿ ನೀಡಿಸಿಕೊ ಳ್ಳದೆ, ಆ ನೀಡುವವರು ತಮ್ಮ ಪದಾರ್ಥದ ಪ್ರಮಾಣವ ತಿಳಿದು ನೀಡುವ ಹಾಗೆ ಆ ಭರಿತಾರ್ಪಣದ ಆಚರಣೆಯುಳ್ಳಾತನು ತನ್ನ ಸಮಯವ ತಿಳಿದು ಅನುಭ ವಿಸಿ, ದೊಡ್ಡ ಹೊಳೆಗಳಲ್ಲಿ ದೊಡ್ಡ ಕೊಡ ಚಟ್ಟಿಗೆ ಮೊಗೆಗಳನು ಮುಳುಗಿಸಿ ಮೇಲಕ್ಕೆ ತೆಗೆದಲ್ಲಿ, ಆ ಭಾಂಡಕ್ಕೆ ತಕ್ಕುದಕವು ತುಂಬಿ ಬರುವವು ಎಂಬ ಹಾಗೆ, ತನ್ನ ದೇಹಕ್ಕೆ ಸಲುವಷ್ಟು ಮೇಲುಸಾಧನ ದ್ರವ್ಯಂಗಳನು ಕಡುಬು ಕಜ್ಜಾಯ ಬೋನ ಮೊದಲಾದವನು ನೀಡಿಸಿಕೊಂಡನುಭವಿಸುವದು ಭರಿತಾರ್ಪಣದಾಚರ ಣೆಯು. ಈ ಆಚರಣೆಯು ಲಿಂಗದೇಹಿಗಳಾಗಿರುವ ಶರಣರುಗಳಾಚರಣೆಯು ವಿಚಾರವು. ಇದು ಬಿಟ್ಟು ವಿಪರೀತವಾಗಿ ತರಿಸಿ, ನೀಡಿಸಿಕೊಂಡು, ಉಂಬಷ್ಟು ಉಂಡು ಉಳಿದುದಕ್ಕೆ ನಾವು ಭರಿತಾರ್ಪಣದಾಚರಣೆಯುಳ್ಳವರು ನಮ್ಮ ಲಿಂಗ ಪ್ರಸಾದವನು ಕಂಡ ಕಂಡವರಾರಾದರೂ ಕೊಂಡು ಹೋಗಿ, ಉಣ್ಣಿ, ಎಂದು ಕೊಡುವ ಆಚಾರ ಭ್ರಷ್ಟರ ಆಚರಣೆಯು ಲಿಂಗಕ್ಕೆ ಯೋಗ್ಯವಲ್ಲವಾಗಿ, ಇದು ನಿಮಿತ್ಯವಾಗಿ, ಆವುದಾನೊಂದು ವಸ್ತುಗಳಿಂದ ಪೂರಿತವಾದ ಬಂಡಿಗೆ ಬೆರಳಷ್ಟು ಕಡೆ ಭಾರವಾಗುವದು ಎಂಬ ಹಾಗೆ ತನ್ನ ದೇಹ ಪ್ರಮಾಣವ ಮೀರಿ ನೀಡಿಸಿ ಕೊಂಡು ದಣಿವುದು ಇಷ್ಟಲಿಂಗ ಸಂಬಂಧಿಗಳಾದ ಶರಣರು ಒಡಂಬಡದಾಚರ ಣೆಯು. ಇರತೀ ಸಿದ್ಧಣ ಭರಿತಾರ್ಪಣಂಗಳಲ್ಲಿ ಎಡೆಯುಲ್ಲಿರ್ದುದನುಂಬಷ್ಟು ಉಂಡು, ಉಳಿದುದಕ್ಕೇನ ಮಾಡಬೇಕೆಂಬ ಬಾಧೆಗಳಲ್ಲಿ ಸಂಚಲಿಸದೆ, ಆ

ಲಿಂಗದೇಹಕ್ಕೆ ಸಲುವಳಿಯಾಗುವ ಮಿತಿಗಳ ತಿಳಿದು ಅನುಭವಿಸುವದು ಭರಿತಾರ್ಪಣೆಯಾಚರಣೆಯು, ಈ ಆಚರಣೆಯು ಶಿವನಿಗೆ ಯೋಗ್ಯವೆಂಬುದರ್ಥ.

(೨). ಭರಿತಾರ್ಪಣವೆಂದು ಲಿಂಗಕ್ಕೆ ಸಮರ್ಪಿಸಿದ ಮತ್ತೆ, ಪ್ರತಿಪ್ರಸಾದವೆಂದುಕೊಂಬಲ್ಲಿ ಭರಿತಾರ್ಪಣವೆಂತುಟಾಯಿತ್ತು? ತನ್ನಯ ಘಟದ ಹೆಚ್ಚುಗೆಯೋ? ಅಲ್ಲದೆ ಭರಿತಾರ್ಪಣದ ವ್ರತದ ನಿಶ್ಚಯವೋ? ಕಟ್ಟಿನ ವ್ರತಕ್ಕೆ ಊನತಪಿ ಕ್ರಿಯುಂಟೇ? ಸತ್ಯ ಜಾರಿದ ಮತ್ತೆ, ಮುಕ್ತಿಯ ಪದ ಅವಗುಂಟೇ? ಇಂತೀ ಕಂಡವರ ಕಂಡು, ಕೈಕೊಂಡು, ಅವರೊಂದಾಗಿ ಆಡಿ, ಅವರ ಸಂಸರ್ಗದಂದವ ಕಲಿತು, ಅವರು ಹಿಂಗಿದ ಮತ್ತೆ, ತಾನೆಂದಿನಂತಹ ಕ್ರಿಯಾಭಂಡನು, ಭರಿತಾರ್ಪಣ ಭಂಡನು. ಮತ್ತಾವ ಕ್ರಿಯಲ್ಲಿಯೂ ತಪ್ಪಿ, ಆ ತಪ್ಪಿಗೆ ವ್ರತವ ಹೆಚ್ಚಿಸಿಕೊಂಡೆಹೆನೆಂಬ ದುರ್ಮತ್ತ ಸುರಾಪಾನರಿಂದತ್ತ. ಕಾಣದಿರ್ದಡೆ ಭಕ್ತಿಗೆ ಸಲ್ಲ, ಯುಕ್ತಿಯವಂಗಿಲ್ಲ, ಸದ್ಭಕ್ತರೊಳಗಲ್ಲ, ಮಿಕ್ಕಾದ ಕೃತ್ಯ ಅವಂಗಿಲ್ಲ. ಇದು ಸತ್ಯ, ಭೋಗಬಂಕೇಶ್ವರಲಿಂಗ ಸಾಕ್ಷಿಯಾಗಿ.

**ಅರ್ಥ:**— ನಾವು ಭರಿತಾರ್ಪಣದಾಚರಣೆಯುಳ್ಳವರೆಂದು ಮಾಡಿದ ಪದಾರ್ಥವನೆಲ್ಲ ಒಂದೇವೇಳೆ ನೀಡಿಸಿಕೊಂಡು ಲಿಂಗಕ್ಕೆ ನೈವೇದ್ಯವ ಮಾಡಿ, ಅನುಭವಿಸುತ್ತಿದ್ದ ಬಳಿಕ, ಮೇಲಾಗಿ ಪದಾರ್ಥ ದ್ರವ್ಯಂಗಳು ಬರಲು, ಲಿಂಗಕ್ಕರ್ಪಿಸಿ, ಲಿಂಗಪ್ರಸಾದವಾಯಿತ್ತೆಂದು ಸ್ವೀಕರಿಸುವಲ್ಲಿ, ಭರಿತಾರ್ಪಣದಾಚರಣೆ ಹೇಗಾಯಿತ್ತು? ತನ್ನ ದೇಹದ ಕಕ್ಕುಲಿತೆಯೋ? ಅದು ಅಲ್ಲದೆ, ಭರಿತಾರ್ಪಣದಾಚರಣೆಯ ಯಥಾರ್ಥವೋ? ಕಟ್ಟು ಮಾಡಿಕೊಂಡ ಶೀಲವ್ರತಾಚಾರಂಗಳು ತಪ್ಪಿದಲ್ಲಿ, ಮೇಲುಶೀಲ ಮೇಲುವ್ರತಂಗಳ ಕಟ್ಟು ಮಾಡಿಕೊಂಬುದುಂಟೇ? ಇಲ್ಲವೆಂಬ ಹಾಗೆ, ಭರಿತಾರ್ಪಣದಾಚರಣೆಗೆ ಮೇಲಾಗಿ ನೀಡಿಸಿಕೊಂಬುದುಂಟೇ? ಇಲ್ಲ. ಯಥಾರ್ಥವಾದಾಚರಣೆ ತೊಲಗಿದ ಬಳಿಕ ಮೋಕ್ಷ ಮಾರ್ಗವು ಆತನಿಗುಂಟೇ? ಇಲ್ಲ. ಹೀಗೆ ಕಂಡ ಕಂಡವರ ನೋಡಿ, ಪಾದೋದಕ ಪ್ರಸಾದಕಟ್ಟೆಂದು ಭರಿತಾರ್ಪಣದಾಚರಣೆ ಎಂದು ಕಟ್ಟು ಮಾಡಿಕೊಂಡು, ಅವರೊಡನೆ ಕೂಡಿ ಚರಿಸಿ ಅವರ ತತ್ಸಂಗದಲ್ಲಿರ್ದು, ಅವರಾಚರಣೆಯನಭ್ಯಾಸವ ಮಾಡಿಕೊಂಡು ಚರಿಸುತ್ತಿರ್ದು, ಅವರು ತೊಲಗಿಹೋದ ಬಳಿಕ ತಾ ಮೊದಲಿನ ಹಾಗಾಗುವ ಆಚಾರ ಭ್ರಷ್ಟನ ಎಂಬಲ್ಲಿ ಪಾದೋದಕ ಪ್ರಸಾದದ ಕಟ್ಟಿಗೆ ತಪ್ಪುಕನಾಗಿದ್ದಾತನು ಭರಿತಾರ್ಪಣದಾಚರಣೆ ತಪ್ಪುಕನಾಗಿದ್ದಾತನು. ಬಳಿಕಾ

ವುದಾನೊಂದು ಕ್ರಿಯಲ್ಲಿಯೂ ತಪ್ಪುಕನಾಗಿ ಆ ಅಪರಾಧಕ್ಕೆ ಮೇಲು ಶೀಲ, ಮೇಲು ವ್ರತವ ಮಾಡಿಕೊಂಡೆನೆಂಬ ಅಜ್ಞಾನಿ ಜೀವಕನು ಕರುಳಗುಡಿಕನಿಗಿಂದ ಕ್ಷೀಣನು. ಇದ ಕಾಣದಿರ್ದಡೆ, ಭಕ್ತಿಸ್ಥಲಕ್ಕೆ ಯೋಗ್ಯನಲ್ಲ, ಮೋಕ್ಷವಾತಂಗಿಲ್ಲ, ಶಿವಭಕ್ತರೊಳಗಲ್ಲ, ಉಳಿದಾದ ಆಚರಣೆಯಾತಂಗಿಲ್ಲ, ಇದು ಯಥಾರ್ಥ, ಪರಶಿವ ಲಿಂಗದಲ್ಲಿ ತಾರ್ಕಣೆಯಾಗಿ, ಎಂಬುದರ್ಥ.

(೩). ಲಿಂಗಪ್ರಸಾದವ ಕೊಂಬುತ್ತಿರ್ದ ಮತ್ತೆ, ಪದಾರ್ಥ ದ್ರವ್ಯಂಗಳು ಇದಿರೆಡೆಯಾಗಿ ಬರಲಿಕ್ಕಾಗಿ ಆ ಕರದಲ್ಲಿಯೇ ದ್ರವ್ಯವ ಸಮರ್ಪಿಸಬಹುದೇ? ಅಹುದೆಂದಡೆ, ಕ್ರಿಸೂತಕ. ಅಲ್ಲ ಎಂದಡೆ, ಪ್ರಥಮ ಪ್ರಸಾದ ಆವರಿಗಿಲ್ಲ. ಇಂತೀ ಉಭಯವನರಿದು ಅರ್ಪಿಸಬಲ್ಲಡೆ, ಲಿಂಗಾಂಗ ಸಹ ಭಾಜನವೆಂಬೆ. ಅಲ್ಲದಿರ್ದಡೆ, ಹಡುಹಿಂಗೆ ನೆರೆದ ತುಡುಗುಣಿಗಳಂತೆ ಬಾಯೊಳಗಣ ಕಚ್ಚು ದೇಹದೊಳಗಣ ಮುರುಕು, ಅವಂಗಾವನೇಮವೂ ಇಲ್ಲ. ಇದು ಸತ್ಯ ಭೋಗಬಂಕೇಶ್ವರಲಿಂಗಸಾಕ್ಷಿಯಾಗಿ.

ಅರ್ಥ:— ಭರಿತಾರ್ಪಣದಾಚರಣೆಯುಳ್ಳಾತನು ಸಕಲ ಪದಾರ್ಥವನು ಒಂದೇವೇಳೆ ನೀಡಿಸಿಕೊಂಡು, ಲಿಂಗಕ್ಕರ್ಪಿಸಿ, ಆ ಲಿಂಗಪ್ರಸಾದವ ಸ್ವೀಕರಿಸುತ್ತಿರ್ದ ಬಳಿಕ ನೂತನವಾದ ಕಡುಬು ಕಜ್ಜಾಯ ಮೊದಲಾದ ಮೇಲು ಸಾಧನ ದ್ರವ್ಯಂಗಳು ಮೇಲಾಗಿ ಬರಲಿಕ್ಕಾಗಿ ಆ ಉಂಬುತ್ತಿರ್ದ ಹಸ್ತದಲ್ಲಿಯೇ ಆ ಪದಾರ್ಥಂಗಳ ಸಮರ್ಪಿಸಬಹುದೆಂದಡೆ ಕ್ರಿಯೆಗೆ ಭಿನ್ನವು. ಅರ್ಪಿಸಬಾರದೆಂದಡೆ ಮನದಲ್ಲಿ ಬಯಕೆಯುಂಟಾದ ಕಾರಣ, ಇಷ್ಟಲಿಂಗ ಪ್ರಸಾದ ಆವರಿಗಿಲ್ಲ. ಈ ಎರಡು ಭಾವವನು ಬಿಟ್ಟು, ಬಂದ ಬಂದ ಪದಾರ್ಥವನು ಸಹಜವಾಗಿ ಲಿಂಗಕ್ಕರ್ಪಿಸಿ, ಆ ಲಿಂಗಪ್ರಸಾದವ ಸ್ವೀಕರಿಸಬಲ್ಲಡೆ ಲಿಂಗದೇಹಿಗಳಾದ ಶರಣರೆಂಬೆನು. ಸಕಲ ಪದಾರ್ಥವನು ಒಂದೇ ಪರಿಯಾಣದಲ್ಲಿ ನೀಡಿಸಿಕೊಂಡು, ಲಿಂಗದ ಶೇಷವ ತಾನು ಕೊಂಬುತ್ತ, ತಮ್ಮ ಶೇಷವ ಲಿಂಗಕ್ಕರ್ಪಿಸುತ್ತ, ಲಿಂಗವು ತಾವು ಒಡಒಡನೆ ಸಮವರ್ತಿಯ ಮಾಡುವಂಥ ಸಹಭೋಜನ ಸ್ಥಲದ ಆಚರಣೆಯುಳ್ಳವರೆಂಬೆ. ಇದಿಲ್ಲದಿರ್ದಡೆ, ಮಾಂಸಕ್ಕೆ ನೆರೆದ ಶುನಿಗಳ ಹಾಗೆ ಬಾಯಲ್ಲಿ ಮಾಂಸವ ಕಚ್ಚಿಕೊಂಡು ಮತ್ತೊಂದು ಬಂದಲ್ಲಿ ಗುರ್ರೆಂಬ ಹಾಗೆ, ತನ್ನ ಬಾಯಲ್ಲಿ ಮೇಲಾಗಿ ಬಂದ ಪದಾರ್ಥವನು ಅನುಭವಿಸುತ್ತ, ಎಡಬಲದಲ್ಲಿರ್ದವರು ನಿನ್ನಾಚಾರಕ್ಕಿದು ಸಲ್ಲುವುದೇ ಎಂದಲ್ಲಿ, ದೇಹದಲ್ಲಿ ಕೇಣಧ್ವನಿಗಳ ಮಾಡುವಾತನಿಗಾವ ವ್ರತವೂ ಇಲ್ಲ. ಇದು ಯಥಾರ್ಥವು, ಪರಶಿವಲಿಂಗವು ತಾರ್ಕಣೆಯಾಗಿ, ಎಂಬುದರ್ಥ.

# ಪ್ರಾಣಲಿಂಗಿ ಸ್ಥಲ.

## ಪ್ರಾಣಲಿಂಗದ ಸ್ವರೂಪ.

(೧). ಲಿಂಗದಲ್ಲಿ ಪ್ರಾಣವ ನಿಲಿಸಿ, ಪ್ರಾಣದಲ್ಲಿ ಲಿಂಗವನಿರಿಸಿ ನೆನೆವುತ್ತಿದ್ದ ಕಾರಣ ಪ್ರಾಣಲಿಂಗವಾಯಿತ್ತು. ಆ ಲಿಂಗ ಸರ್ವ ಕರಣಂಗಳ ವೇಧಿಸಿ, ಕರಣಂಗಳು ಲಿಂಗ ಕರಣಂಗಳಾದ ಕಾರಣ, ಒಳಗೆ ಕರತಳಾಮಳಕದಂತೆ ಲಿಂಗ ನೆಲೆಗೊಂಡಿತ್ತಾಗಿ ಹೊರೆದೆನೆಂದು ಅರಿಯನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನೀವು ಪ್ರಾಣಲಿಂಗವಾಗಿ.

(೨). ಎನ್ನ ಮನದ ಕೊನೆಯ ಮೇಲೆ ಅಂಗವಿಲ್ಲದ ರೂಪನ ಕಂಡು, ನಾನು ಬೆರಗಾದೆ. ಅಂತರಂಗದ ಆತ್ಮನೊಳಗೆ ಅನಿಮಿಷ ನಿಜೈಕ್ಯ ಗುಹೇಶ್ವರಲ್ಲಯ್ಯನ ಕಂಡು ಬೆರಗಾದೆನು.

(೩). ಅಂತರಂಗದಲ್ಲಿ ಅವರಿಸಿ, ಬಹಿರಂಗದಲ್ಲಿ ತೋರಿದೆ. ಕಂಗಳ ಕೊನೆಯಲ್ಲಿ ಮೂರುತಿಯಾಗಿ, ಮನದ ಕೊನೆಯಲ್ಲಿ ತೊಳಗುವೆ. ಎನ್ನ ಬ್ರಹ್ಮ ರಂಧ್ರದಲ್ಲಿ ತೋರುವ ಜ್ಯೋತಿ ನೀನೇ ಉರಿಲಿಂಗದೇವನಪ್ಪಾ.

(೪). ತನುವಿಂಗೆ ತನುರೂಪಾಗಿ ತನುವಿಂಗಾಧಾರವಾದೆ. ಮನಕ್ಕೆ ಮನರೂಪಾಗಿ, ಮನಕ್ಕೆ ನೆನಹಿನ ಶಕ್ತಿಯನಿತ್ತು, ಮನಕ್ಕಾಧಾರವಾದೆ. ಪ್ರಾಣಕ್ಕೆ ಪ್ರಾಣರೂಪಾಗಿ ಪ್ರಾಣಕ್ಕಾಧಾರವಾದೆ. ಎನ್ನಂಗ ಮನ ಪ್ರಾಣದಲ್ಲಿ ನೀನೇ ನಿಂದು, ಸರ್ವಕರಣಂಗಳು ನಿಮ್ಮನು ಮಾಡಿಕೊಂಡ ಕಾರಣ ಎನ್ನ ಪ್ರಾಣ ನಿಮ್ಮಲ್ಲಿ ಅಡಗಿತ್ತು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೫). ಒಳಹೊರಗೆ ಆತ್ಮ ಇತ್ತು. ಹೊರಗೆ ಒಳಗಾಯಿತ್ತು. ತಿಳಿದು ನೋಡಲು, ಒಳಹೊರಗೆಂಬುದಿಲ್ಲ ನೋಡಾ. ಒಳಹೊರಗು ಕೂಡಿದ ತ್ರಿಮಂಡಲದ ಬೆಡಗಿನ ತಾವರೆಯ ಒಳಗೆ ಥಳಥಳಿಸುವ ದಿವ್ಯಪೀಠದ ಮೇಲೆ ಹೊಳೆವ ಲಿಂಗವದು ಒಳಹೊರಗೆ ಬೆಳಗುತ್ತಿಪ್ಪ ಶುದ್ಧ ಜ್ಯೋತಿ ನೋಡಯ್ಯ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಲವು ತಾನೇ ನೋಡಾ.

(೬). ಸತ್ವ ರಜ ತಮದ ಮೇಲೆ ನಿಂದು ಬೆಳಗುವ ಜ್ಯೋತಿಯು ಬೆಳಗು ಕತ್ತಲೆಯು ಗೃಹದೊಳಹೊರಗೆ ತಾನೇ ಬೆಳಗುತ್ತಿದೆ ನೋಡಾ. ಆ ಬೆಳಗಿನ ಬೆಂಬಳಿಯ ತಿಳಿವಿಂದ ಅರಿದು ನೋಡಲು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಬೆಳಗಲ್ಲದೆ ಮತ್ತೊಂದು ಬೆಳಗಿಲ್ಲ ನೋಡಾ.

(೭). ಅಂತರಂಗದಲ್ಲಿ ನಿರ್ಮಲ ಪರಂಜ್ಯೋತಿ ಪ್ರಾಣಲಿಂಗವನರಿಯದೆ ಬಹಿರಂಗದಲ್ಲಿ ಬಳಲುತ್ತಿದ್ದರಲ್ಲಾ! ಒಳಗೆ ತೊಳಗಿ ಬೆಳಗಿ ತೋರುವ ಚಿದಾಕಾಶ ಪರಬ್ರಹ್ಮ ಪ್ರಾಣಲಿಂಗವನು ಅವರೆತ್ತ ಬಲ್ಲರು? ಮಹಾನುಭಾವದಿಂದ ತಿಳಿದು ನೋಡಲು, ತನ್ನಲ್ಲಿಯೇ ತೋರುತ್ತಿದೆ! ಹೇಳೆ ಹೇಳಿಹೆನೆಂದಡೆ, ನುಡಿಗೊಳಗಾಗದು. ತಿಳಿದು ನೋಡಲು ತಾನಲ್ಲದೆ, ಮತ್ತೇನೂ ಇಲ್ಲ. ಅದೇ ಪ್ರಾಣಮಯಲಿಂಗ. ತಾನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

(೮). ಅಯ್ಯಾ ನಿಮ್ಮ ಕರಸ್ಥಲದಲ್ಲಿ ನೋಡಿದರೆ, ನೀವೆನ್ನ ಕಂಗಳ ಕೊನೆಯಲ್ಲಿ ತೋರುತಿರ್ಪಿರಿ! ಇದೇನು ನಿಮ್ಮ ಗಾರುಡವಯ್ಯ? ನಿಮ್ಮನೆನ್ನ ಕಂಗಳ ಕೊನೆಯಲ್ಲಿ ನೋಡಿದರೆ, ನೀವೆನ್ನ ಮನದ ಕೊನೆಯಲ್ಲಿ ತೋರುತಿರ್ಪಿರಿ! ಇದೇನು ನಿಮ್ಮ ಗಾರುಡವಯ್ಯ? ಅಯ್ಯಾ, ನಿಮ್ಮ ಮನದ ಕೊನೆಯಲ್ಲಿ ನೋಡಿದರೆ, ನೀವೆನ್ನ ಭಾವದಲ್ಲಿ ತೋರುತಿರ್ಪಿರಿ! ಇದೇನು ನಿಮ್ಮ ಗಾರುಡವಯ್ಯ? ಅಯ್ಯಾ ನಿಮ್ಮ ಪಂಚದಲ್ಲಿ ನೋಡಿದರೆ, ನೀವೆನ್ನ ಸರ್ವಾಂಗದಲ್ಲಿ ತುಂಬಿರ್ಪಿರಿ! ಇದೇನು ನಿಮ್ಮ ಗಾರುಡವಯ್ಯ ಅಖಂಡೇಶ್ವರಾ?

(೯). ದೀಪದೊಳಗೆ ವ್ಯಾಪಿಸಿಕೊಂಡಿರ್ಪುದು ಒಂದೇ ಜ್ಯೋತಿ ನೋಡಾ. ಅದು ರೂಪಲ್ಲ, ನಿರೂಪಲ್ಲ. ಸರ್ವ ವ್ಯಾಪಾರವ ಹೊಂದಿದ ಸ್ವಯಂಜ್ಯೋತಿ ನೋಡಾ. ಅದೇ ಎನ್ನ ಪ್ರಾಣಲಿಂಗವೆಂಬ ಪರತರ ಪರಮಾನಂದ ಪರಂಜ್ಯೋತಿ ನೋಡಾ ಅಖಂಡೇಶ್ವರಾ.

(೧೦). ಅಗ್ನಿ ದಿಟವೆಂದರೆ, ತಾ ಹುಸಿ ಕಾಷ್ಠವಿಲ್ಲದೆ. ಕಾಷ್ಠದಲ್ಲಡಗಿ ಸುಡದಿಪ್ಪ ಭೇದವನರಿತಡೆ, ಪ್ರಾಣಲಿಂಗ ಎಂದೆಂಬೆನೆಂದನಂಬಿಗ ಚೌಡಯ್ಯ.

(೧೧). ನಾನಿಲ್ಲದ ಮುನ್ನ ನೀನಾದೆಯಯ್ಯ. ನೀನಾದಂದು ನಾನಿರ್ದೆನಯ್ಯ. ಎನ್ನ ಕಯ್ಯಲ್ಲಿ ನಿನ್ನ ಕೊಟ್ಟರಲ್ಲದೆ, ನಿನ್ನ ಕಯ್ಯಲ್ಲಿ ಎನ್ನ ಕೊಟ್ಟರೆ ಹೇಳಾ? ಎನಗೆ ನೀನು ಗುರುವೇ? ನಿನಗೆ ನಾನು ಶಿಷ್ಯನೇ? ಎನ್ನ ಕರಸ್ಥಲ

ಕ್ಕೆ ನೀ ಬಂದೆಯಲ್ಲದೆ, ನಿನ್ನ ಕರಸ್ಥಲಕ್ಕೆ ನಾನು ಬಂದೆನೆ? ಕ್ರಿಯದ ಕರ್ಮದ ಕಷ್ಟ ಎನಗೆ. ನಿಃಕ್ರಿಯದ ಸುಖ ನಿನಗೆ. ವ್ರತನೇಮ ಸಂಬಂಧ ಎನಗೆ. ವ್ರತ ನೇಮವಿಲ್ಲದಂಥಾದ್ದು ನಿನಗೆ. ಭಕ್ತಿಯ ಮಾಡುವ ಕುಸ್ತೀ ಸಾಧನೆ ಎನಗೆ. ಯುಕ್ತಿ ಸಾಧನೆ ಮುಕ್ತಿ ನಿನಗೆ. ಅಷ್ಟತನುವಿಧಾರ್ಚನೆ ಎನಗೆ. ಅಷ್ಟದಳ ಮಂಟಪದ ಮಧ್ಯದ ಸುಖ ನಿನಗೆ. ಅಷ್ಟಾಂಗಯೋಗದ ಕಷ್ಟದ ದುಃಖ ಎನಗೆ. ನಿಶ್ಶಿಂದೆ ನಿರಾಲಂಬ ನಿನಗೆ. ಷಡೂರ್ಮೆ ಬಿಂದು ಮುಳುಗುವ ದುಃಖ ಎನಗೆ. ಷಟ್‌ಸ್ಥಲದ ಲಿಂಗಾಂಗದನುಭಾವದ ಸುಖ ನಿನಗೆ. ಎಂಬತ್ತು ನಾಲ್ಕು ಲಕ್ಷದ ಭವಮಾಲೆಯ ನೋಡುವ ಕಂಗಳು ಎನಗೆ. ಲಿಂಗಾಂಗಗೊಂಡು ಅಂಬ ಕಾತ್ಮಕನಾಗಿರುವ ಮೂರ್ತಿಯ ನೋಡುವ ಕಂಗಳು ನಿನಗೆ. ಇಂತೀ ಸರ್ವ ಸುಖದುಃಖದನುಭಾವ ನಿನಗೆ. ಸರ್ವ ದುಃಖದ ಮನದ ಚಿಂತೆ ಎನಗೆ. ಸುಖ ವು ನಿನಗೆ. ದುಃಖವು ಎನಗೆ. ಇಂತೀ ನಾನು ನೀನೆಂಬ ಉಭಯವನೀಗಿ ಏಕ ಮಾದ ಪ್ರಭೆಯೊಳು ಎರಡು ಮಾಡಿ ತೋರುವ ಲಿಂಗದ್ರೋಹ ನಿನ್ನದೋ, ಎನ್ನ ದೋ ಎಂದುದಾಗಿ, ಇದುಕಾರಣ, ನಿನ್ನೊಳಗೆ ನಾನಿಲ್ಲ, ನನ್ನೊಳಗೆ ನೀನಿಲ್ಲ. ಈ ವಚನಾರ್ಥದನುಭಾವದ ತೃಪ್ತಿಯರಿದಡೆ, ನಿನ್ನೊಗೆ ನಾನುಂಟು, ಎನ್ನೊಳಗೆ ನೀನುಂಟು. ಇಂತೀ ನಾನು ನೀನು ಎಂಬುಭಯವನೀಗಿರು ಕಾಣಾ ಶ್ರೀಜಂಗ ಮಲಿಂಗಪ್ರಭುವೇ.

(೧೨). ಬಿಂದುವಿನೊಳಗೆ ನಾದ ಹೊಂದಿರ್ದ ಭೇದವನು, ಹೊಂದಿ ಯೂ ಹೊಂದದಿರ್ದ ಭೇದವನು, ಲಿಂಗದೊಳಗೆ ಶರಣ ಸಂದಿರ್ದ ಭೇದವನು ಲೋಕದ ಸಂದೇಹಿಗಳೆತ್ತ ಬಲ್ಲರಯ್ಯ ರಾಮನಾಥಾ?

**ಅರ್ಥ**:—ಬಿಂದುವೆಂದರೆ ದೇಹ. ನಾದವೆಂದರೆ ಚೈತನ್ಯಾತ್ಮಕನು. ಅಂತ ಪ್ಪ ಚೈತನ್ಯಾತ್ಮಕನು ದೇಹೋಹಂಮೆಂಬ ಭಾವದಿಂದ ದೇಹಿಯಾಗಿ, ದೇಹ ಸಂಬಂಧ ಆತ್ಮಂಗೆ ಬಿಡದಿಹುದೆಂಬುದೀಗ ಬಿಂದುವಿನೊಳಗೆ ನಾದ ಹೊಂದಿರ್ದ ಭೇದವನು ಎಂಬ ಶಬ್ದಕ್ಕರ್ಥ. ಅಂತು ದೇಹಿಯಾಗಿರ್ದ ಜೀವಾತ್ಮನ ಅಂತರಾ ತ್ಮದಲ್ಲಿ ಪರಮಚಿಲ್ಲಿಂಗವಿದ್ದು, ಆ ದೇಹಾತ್ಮರ ಗುಣಧರ್ಮಂಗಳ ಹೊದ್ದದೆ, ಸರ್ವಸಾಕ್ಷಿಕನಾಗಿಪ್ಪನೆಂಬುದೀಗ ಹೊದ್ದಿಯೂ ಹೊದ್ದದೆ ಇರ್ಪ ಭೇದವನು, ಎಂಬ ಶಬ್ದಕ್ಕರ್ಥ. ಅಂತು ಅಂತರಂಗದಲ್ಲಿ ಪರಮ ಚಿತ್ಕಲಾಲಿಂಗವ ಪ್ರತ್ಯಕ್ಷವ ಮಾಡಿಕೊಂಡು ಜ್ಞಾನಕ್ರಿಯಿಂದ ಬೆರೆದ ಭೇದವಳಿದು ಅಂಗಪ್ರಾಣಂಗಳೆಲ್ಲ ಲಿಂಗೆ

ಕಾಗಿರ್ದ ಲಿಂಗಶರಣನ ಇರವ ಲೋಕದ ಅಜ್ಞಾನಿ ಜಡಜೀವರುಗಳು ಅರಿಯ ರೆಂಬುದೀಗ ಲಿಂಗದೊಳಗೆ ಶರಣ ಸಂದಿರ್ದ ಭೇದವನು ಲೋಕದ ಸಂದೇಹಿ ಗಳೆತ್ತ ಬಲ್ಲರಯ್ಯಾ ರಾಮನಾಥಾ ಎಂಬ ಶಬ್ದಕ್ಕರ್ಥ.

(೧೩). ಅಂಗದಿಂದ ಲಿಂಗ ಹಿಂಗಬಾರದೆಂಬರು. ಅಂಗಲಿಂಗ ಸಂಬಂಧ ವಾದಲ್ಲಿ ಫಲವೇನು, ಮನಲಿಂಗ ಸಂಬಂಧವಾಗದನ್ನಕ್ಕರ? ಕೂಡಲಚೆನ್ನ ಸಂಗಾ, ಮನದಿಂದಲೇನೂ ಘನವಿಲ್ಲ.

**ಅರ್ಥ**:—ಅಂಗದಮೇಲೆ ಇಷ್ಟಲಿಂಗವ ಧರಿಸಿ, ಆ ಇಷ್ಟಲಿಂಗದ ಕಳಾಸ್ವರೂಪವ ಮನವರಿದು ಕೂಡುವ ಜ್ಞಾನ ಮನಕ್ಕಿಲ್ಲದಿರ್ದಡೆ, ಅಂಗಲಿಂಗ ಸಂಬಂಧವಾದಲ್ಲಿ ಫಲವೇನೂ ಇಲ್ಲ. ಅದುಕಾರಣ ಇಷ್ಟಲಿಂಗದ ಕಳಾಸ್ವರೂ ಪವ ಮನವರಿದು ಕ್ರಿಯಿಂದ ಮಾಡಿ, ಮನಕ್ಕೆ ಲಿಂಗಸಂಬಂಧವಾದಡೆ, ಆ ಮನ ವೇ ಲಿಂಗವಪ್ಪುದು. ಅಂತು ಮನಲಿಂಗವಾದಡೆ, ಸರ್ವ ದೇಹಕರಣಂಗಳೆಲ್ಲ ಲಿಂಗವಹುದೆಂಬುದೀ ವಚನದ ತಾತ್ಪರ್ಯಾರ್ಥ.

---

## ಇಷ್ಟಲಿಂಗ ಪ್ರಾಣಲಿಂಗಗಳ ಸಂಬಂಧ.

(೧). ಪಥದೊಳಗಣ ಪ್ರತಿಷ್ಠೆಯ ಪೂಜಿಸಿ, ಸ್ವಯಂಭುವನರಿದು ದಿಲ್ಲ. ಅದನರಸಿ ಕಂಡುದಿಲ್ಲ. ಸ್ವಯಕ್ಕೂ ವಚನಕ್ಕೂ ವಿರೋಧವಿಲ್ಲದೆ, ಉಭ ಯುವಳಿದು ನಿಂದ ನಿಜಗುಣಯೋಗಿಯ ಯೋಗೆಂಬುದಿಲ್ಲ.

**ಅರ್ಥ**:—ಮಾರ್ಗಕ್ರಿಯಲ್ಲಿ ನೆಲೆಗೊಂಡಿಪ್ಪ ಇಷ್ಟಲಿಂಗಕ್ಕೆ ಭಿನ್ನವಿಟ್ಟು ಪೂಜೆಯ ಮಾಡಿ, ಪ್ರಾಣಲಿಂಗ ಸಂಬಂಧವನರಿದುದಿಲ್ಲ. ಆ ಪ್ರಾಣಲಿಂಗವನು ಶೃತಜ್ಞಾನದಿಂದ ಹುಡಿಕಿ ಸಾಕ್ಷಾತ್ಕಾರವ ಮಾಡಿಕೊಳ್ಳಲಿಲ್ಲ. ಇಷ್ಟಲಿಂಗಕ್ಕೂ ಪ್ರಾಣಲಿಂಗಕ್ಕೂ ಭಿನ್ನವಿಲ್ಲದೆ ಅಂಗಲಿಂಗ, ಮನ ಪ್ರಾಣಲಿಂಗವೆಂಬ ಭಿನ್ನತೆ ಯಳಿದು, ಅಂಗವು ಇಷ್ಟಲಿಂಗದಲ್ಲಿ, ಮನವು ಪ್ರಾಣಲಿಂಗದಲ್ಲಿ ಸ್ವಸ್ಥವಾದ ಶರ ಣನ ಶಿವಯೋಗವೆಂಬುದು ಭಿನ್ನವಿಲ್ಲವೆಂಬುದರ್ಥ.

(೨). ಲಿಂಗ ಪ್ರಾಣವೆಂಬೆನೆ? ಪ್ರಾಣದ ಹಂಗಿನ ಲಿಂಗ. ಪ್ರಾಣಲಿಂಗ ವೆಂಬೆನೆ? ಲಿಂಗದ ಹಂಗಿನ ಪ್ರಾಣ. ಲಿಂಗ ಪ್ರಾಣವಲ್ಲ. ಪ್ರಾಣ ಲಿಂಗವಲ್ಲ. ಉಭಯ ಸಂದಳಿದವರ ತೋರಿ ಬದುಕಿಸಯ್ಯ, ಕೂಡಲಚೆನ್ನಸಂಗಮದೇವಾ.

(೩). ತನುವಿನಲ್ಲಿಪ್ಪುದು ಇಷ್ಟಲಿಂಗವೆಂಬರು. ಆತ್ಮನ ನೆವಹಿವಲ್ಲಿಪ್ಪುದು ಪ್ರಾಣಲಿಂಗವೆಂದೆಂಬರು. ಇಂತೀ ಘಟಾತ್ಮಕ್ಕೆ ಉಭಯಲಿಂಗ ಉಂಟೇ? ಹೊರಗಣ ಅಸ್ತಿ ಚರ್ಮಕ್ಕೆ ಬೇರೊಂದು ಅಸುವ ಕಲ್ಪಿಸಬಹುದೇ? ಒಳಗಣ ಕರಳು ಮಜ್ಜೆ ಮಾಂಸಕ್ಕೆ ಬೇರೊಂದು ಅಸುವಿನ ಕಲೆಯುಂಟೇ? ಇದಕ್ಕೆ ದೃಷ್ಟವ ಕಂಡಡೆ, ಇಷ್ಟಪ್ರಾಣಲಿಂಗವೆಂಬುದಕ್ಕೆ ಕಟ್ಟು. ಅದು ಅಚೇತನವಪ್ಪುದೊಂದು ಸಾವಯುವ, ಚೇತನವಪ್ಪುದೊಂದು ನಿರವಯುವ. ಸಾವಯುವ ನಿರವಯುವದೊಳಡಗಿ ಕುರುಹಾದ ಭೇದ ಆ ಕಾಯದ ಒಳಹೊರಗಿನ ನೋವಿನ ಭೇದದಂತೆ. ಉಭಯುವನರಿದಾತ್ಮ ಒಂದೇಯಾಗಿ, ಕಾಯದ ಇಷ್ಟವೆಂದು, ಆತ್ಮನ ಅರಿವೆಂದು ಎರಡೆನಿಸುವ ಲಿಂಗವೆಂಬುದೊಂದು ಕುರುಹಿಲ್ಲ. ಅದು ಏಕಮೇವ ಸ್ವರೂಪು, ಅದು ಚಿದ್ಘನಸ್ವರೂಪು, ಅದು ಘಟಮಠದೊಳಗೆ ಗ್ರಹಿಸಿಪ್ಪ ಬಯಲಿನ ಇರವಿನ ಪರಿಯಂತೆ. ಎನ್ನಯ್ಯಪ್ರಿಯ ಇಮ್ಮಡಿನಿಷ್ಕಳಂಕ ಮಲ್ಲಿಕಾರ್ಜುನಲಿಂಗವು ಅತ್ಯತಿಷ್ಠದ್ದಶಾಂಗುಲನಾಗಿಪ್ಪನು.

(೪). ಇಷ್ಟಲಿಂಗ ಪ್ರಾಣಲಿಂಗವೆಂದು ವಿಭೇದಿಸುವಲ್ಲಿ, ಕುಸುಮದ ಗಿಡುವಿಂಗೆ ವಾಸನೆಯುಂಟೆ, ಕುಸುಮಕಲ್ಲಡೆ? ಅದು ಗಿಡುವಿಡಿದಾದ ಕುಸುಮವೆಂದರಿದು, ಗಿಡುವಿನ ಹೆಚ್ಚುಗೆ ಕುಸುಮದ ನಲಿವು, ಸುಗಂಧದ ಬೆಳೆ. ಭಕ್ತಿಗೆ ಕ್ರಿಯೆ, ಕ್ರಿಗೆ ಶ್ರದ್ಧೆ, ಶ್ರದ್ಧೆಗೆ ಪೂಜೆ, ಪೂಜೆಗೆ ವಿಶ್ವಾಸ, ವಿಶ್ವಾಸಕ್ಕೆ ವಸ್ತು ತನ್ನಯವಾಗಿಪ್ಪುದು. ಇದು ತೂರ್ಯಭಕ್ತಿಯ ಇರವು. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಲಿಂಗವ ಮೆಲ್ಲಮೆಲ್ಲನೆ ಕೂಡುವ ಕೂಟ.

(೫). ಅಂಗಕ್ಕೆ ಕುರುಹೆಂಬುದೊಂದು ಲಿಂಗ, ಆತ್ಮಂಗೆ ಅರುಹೆಂಬುದೊಂದು ಲಿಂಗ, ಪರುಷಲೋಹದಂತೆ ಕೂಡುವನ್ನಬರ ಉಭಯನಾಮರೂಪಾಯಿತ್ತು. ಕೂಡಿದ ಮೇಲೆ ಪರುಷವೆಂಬ ನಾಮವಿಲ್ಲ, ಲೋಹವೆಂಬ ಕುರುಹಿಲ್ಲ, ಹೇಮವೆಂಬ ನಾಮವಾಯಿತ್ತು. ಇಷ್ಟ ಪ್ರಾಣ ಹಾಗಾದಲ್ಲಿ, ಮನ ಸಂದಿತ್ತು ಮಾರೇಶ್ವರಾ.

(೬). ಊರೊಳಗಣ ಬಯಲು, ಊರ ಹೊರಗಣ ಬಯಲು ಎಂದುಂಟೇ? ಊರೊಳಗಣ ಬ್ರಾಹ್ಮಣಬಯಲು, ಊರಹೊರಗೆ ಹೊಲೆಬಯಲು ಎಂದುಂಟೇ? ಎಲ್ಲಿ ನೋಡಿದಡೆ ಬಯಲೊಂದೆ. ಭಿತ್ತಿಯಿಂದ ಒಳ

ಹೊರಗೆಂಬ ನಾಮವೈಸೆ. ಎಲ್ಲಿ ನೋಡಿದಡೆ, ಕರೆದಡೆ 'ಓ!' ಎಂಬಾತನೇ ಬಿಡಾಡಿ.

**ಅರ್ಥ:**—ಅಂತರಂಗದಲ್ಲಿ ನೆಲೆಗೊಂಡಿಪ್ಪ ಪ್ರಾಣಲಿಂಗವೆಂದು, ಬಹಿರಂಗದಲ್ಲಿ ನೆಲೆಗೊಂಡಿಪ್ಪ ಇಷ್ಟಲಿಂಗವೆಂದು ಭಿನ್ನ ಉಂಟೇ? ಅಂತರಂಗದಲ್ಲಿಪ್ಪದೇ ಪವಿತ್ರ ಸ್ವರೂಪವಾದ ಪ್ರಾಣಲಿಂಗವೆಂದು, ಬಹಿರಂಗದಲ್ಲಿಪ್ಪದೇ ಜಡ ಸ್ವರೂಪವಾದ ಇಷ್ಟಲಿಂಗವೆಂದು ಉಂಟೇ? ಅಂತರಂಗ, ಬಹಿರಂಗ, ಆತ್ಮಾಂಗ ಷಡ್ವಿಧಾಂಗ ಮೂವತ್ತಾರಂಗದಲ್ಲಿ ನಿರೀಕ್ಷಣೆಯ ಮಾಡಲು, ಒಂದೇ ಬ್ರಹ್ಮವೇ ಪೂರ್ಣವಾಗಿಪ್ಪುದು. ನಿರ್ಗುಣ ಪೂಜೆಗಳಿಂದಾರಾಧಿಸಿ, ಜ್ಞಾನ ಕ್ರಿಯಾಯುಕ್ತನಾಗಿ ಆಚರಿಸುವದರಿಂದೆ ಒಳಗಣ ಪ್ರಾಣಲಿಂಗ ಹೊರಗಣ ಇಷ್ಟಲಿಂಗ ಎಂಬಭಿಧಾನ ಉಂಟಾಯಿತಲ್ಲದೆ, ತ್ರಿವಿಧ ಷಡ್ವಿಧ ಮುವತ್ತಾರಂಗದಲ್ಲೆಲ್ಲ ಒಂದೇ ಬ್ರಹ್ಮವೇ ಪೂರ್ಣವಾಗಿಪ್ಪುದು. ಸಗುಣ ನಿರ್ಗುಣ ಪೂಜೆಗಳಿಂದಾರಾಧಿಸಿ, 'ಶಿವೋ ಹರಿ' 'ಬ್ರಹ್ಮೋ ಹರಿ' ಎಂದು ಸ್ತೋತ್ರಮಂ ಮಾಡಲು, ತನ್ನ ನಿಜವನರಿವ ಜ್ಞಾನವನೆಚ್ಚರಿಸಿ ಕೊಡುವಾತನೇ ಚಿತ್ತಿನಲ್ಲಿ ನೆಲೆಗೊಂಡಿಪ್ಪ ಚಿದ್ಘನಲಿಂಗವು ಎಂಬುದರ್ಥ.

(೭). ಅರಿವ ಅರಿವು ತಾನೊಂದು ಇದಿರಿಟ್ಟು ಆ ಸುವಸ್ತು ಅರಿವೆನ್ನದೆ ಕುರುಹೆನ್ನದೆ, ಮುಕುರ ತನ್ನಿಂದ ತಾ ಮುಕುರದಿಂದ ಉಭಯ ಕುರುಹುಗೊಂಡು, ಹರೆ ಹಿಂಗಿದಂತೆ ಅಲ್ಲಿಯೇ ದೃಷ್ಟವಿಪ್ಪುದೆಂಬುದಕ್ಕೆ ಸೂಚನೆ. ಇಷ್ಟದ ಮೇಲೆ ದೃಷ್ಟವಿಲ್ಲಾ ಎಂಬುದಕ್ಕೆ ಭಿತ್ತಿ, ನಿಷ್ಕಳಂಕ ಮಲ್ಲಿಕಾರ್ಜುನಾ.

**ಅರ್ಥ:**—ತನ್ನ ನಿಜವನು ತಿಳಿಯುವ ಮಹಾಜ್ಞಾನವು ತಾನು ಮಹಾಲಿಂಗವೇ ಇಷ್ಟಲಿಂಗವೆಂದು ಲಕ್ಷವಿಟ್ಟು ಆಚರಿಸುವ ಆಚರಣೆಯ ಭೇದದಿಂದ ಅಂತರಂಗದಲ್ಲಿ ಜ್ಞಾನ, ಬಹಿರಂಗದಲ್ಲಿ ಕ್ರಿಯಾಗಿ ಕುರುಹುದೋರಿತ್ತು. ಆ ಇಷ್ಟಲಿಂಗವು ಜ್ಞಾನದಲ್ಲಿ ಭಿನ್ನವಿಲ್ಲದೆ, ಆ ಜ್ಞಾನದಲ್ಲಿ ಪ್ರಾಣಲಿಂಗವಾಗಿ, ಕ್ರಿಯಲ್ಲಿ ಇಷ್ಟಲಿಂಗವಾಗಿರ್ಪುದು. ದರ್ಪಣವು ಒಬ್ಬಾತ್ಮನಿಂದ ಉಂಟಾಗಿ, ಆ ಆತ್ಮನು ದರ್ಪಣದಿಂದ ಬಿಂಬಪ್ರತಿಬಿಂಬವೆಂಬವೆರಡು ರೂಪಾಗಿ ಭಿನ್ನವಿಲ್ಲದಿರುವ ಹಾಗೆ, ಆ ದರ್ಪಣವ ತೆಗೆದಲ್ಲಿ ಆ ಎರಡು ರೂಪುಗಳು ಅಲ್ಲಿಯೇ ಅಡಗುವವು, ಎಂಬ ಹಾಗೆ ಆ ಮಹಾಜ್ಞಾನವು ಅಂತರಂಗ ಬಹಿರಂಗದಲ್ಲಿ ಜ್ಞಾನಕ್ರಿಯಾಸ್ವರೂಪಿನಿಂದ

ವ್ಯಾಪಿಸಿಕೊಂಡಿರಲು, ಆ ಮಹಾಲಿಂಗವು ಜ್ಞಾನದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಡಿಪ್ಪುದು. ಆ ಜ್ಞಾನಕ್ರಿಯಾಸ್ವರೂಪವಾದ ಮಹಾಜ್ಞಾನವು ಮಹಾಲಿಂಗದಲ್ಲಿ ಅಡಗಲು, ಆ ಎರಡು ರೂಪನೊಳಕೊಂಡು ಆ ಮಹಾಲಿಂಗವು ತಾನೊಂದೇಯಾಗಿಪ್ಪುದೆಂಬುದರ್ಥ. ಇಷ್ಟದ ಮೇಲೊಂದು ಉಪಮಾನವಿಲ್ಲ, ಎಂದರೆ ಕುಂಭದ ಉಪಮಾನವೆಂದರಿವುದೆಂಬುದರ್ಥ.

(೮). ತನ್ನ ಸ್ವಂಕಲ್ಪದಿಂದ ಆಹುದು, ಅಲ್ಲ ಎಂಬುದ ತಿಳಿಯಲರಿಯದೆ, ಜೀವನು ಲಕ್ಷವ ಕಾಣದೆ ಲಕ್ಷಿಸಲರಿಯದೆ ಉಭಯದ ಕುಳದ ಹೊಲಬ ಕಾಣದೆ ತಾನಿಂದುದೇ ನಿರ್ಲಕ್ಷವೆಂದು ಹೋರುವನಂಗದ ಆತ್ಮನ ಸೂಚನೆ ತಾನಿಂದಲ್ಲಿಯೇ ನಿಜವೆಂದು ಮುಂದುಗಾಣದೆ, ಹಿಂದನರಿಯದೆ ಒಂದು ಕೊಂಬಿನಲ್ಲಿಯೇ ಹಿಡಿದು ಹೋರುವ ಮನ ಮರ್ಕಟ ಜೀವನಂಗ ನಿಃಕಳಂಕಮಲ್ಲಿಕಾರ್ಜುನಾ.

**ಅರ್ಥ:**—ತನ್ನ ಭಿನ್ನಜ್ಞಾನದಿಂದ ಶಿವತತ್ವವೇ ಅಹುದು, ಜಗತ್ಪ್ರಪಂಚವೇ ಅಲ್ಲ ಎಂಬುದನರಿಯಲರಿಯದೆ, ಜೀವಾತ್ಮನು ಅಂತರಂಗದಲ್ಲಿ ಕುರುಹಾದ ಪ್ರಾಣಲಿಂಗವನು ಕಾಣದೆ, ಆ ಪ್ರಾಣಲಿಂಗವನು ಕ್ರಿಯೆಯಲ್ಲಿ ಇಷ್ಟಲಿಂಗವಾಗಿ ಕುರುಹಿಡಲರಿಯದೆ, ಅಂತರಂಗ ಬಹಿರಂಗದ ಇಷ್ಟಪ್ರಾಣಲಿಂಗ ಸಂಬಂಧವಾದ ಜ್ಞಾನ ಕ್ರಿವಿಡಿದಾಚರಿಸಲರಿಯದೆ, ತಾನದ್ವೈತಾಹಂಕಾರದಲ್ಲಿ ಇದ್ದ ಹಾಗೆ, ನಿರಾಕಾರವಾದ ಬ್ರಹ್ಮವೇ ತಾನೆಂದು ವಾದಿಸುವನ ಅಂಗದಲ್ಲಿ ಆತ್ಮನಲ್ಲಿ ಇಷ್ಟಪ್ರಾಣಲಿಂಗ ಸಂಬಂಧವಿಲ್ಲವೆಂಬುದೇ ಸಂಜ್ಞೆ. ತಾನದ್ವೈತಾಹಂಕಾರದಲ್ಲಿದ್ದ ಹಾಗೆ, ಸ್ವಕೀಯವಾದ ಬ್ರಹ್ಮವೇ ತಾನೆಂದು ಅವಸಾನದಲ್ಲಿ ಮಹಾಲಿಂಗದಲ್ಲಿ ಕೂಡಲರಿಯದೆ, ಮೊದಲು ನಿಃಕಲ ಬ್ರಹ್ಮಕ್ಕೆ ಜ್ಞಾನಚಿತ್ತಿನಿಂದ ಅಂಗವಾಗಿದ್ದನೆಂದು ತಿಳಿಯಲರಿಯದೆ, ಅದ್ವೈತಾಹಂಕಾರ ಒಂದನೇ ದೃಢವಿಡಿದು, ಅಹಂ ಬ್ರಹ್ಮವೆಂದು ವಾದಿಸುವ ಮರ್ಕಟನೆನಿಸಿಕೊಂಬ ಜೀವಾತ್ಮನಾಚರಣೆ ಎಂಬುದರ್ಥ.

(೯). ಇದ್ದುದ ಇಲ್ಲದಲ್ಲಿ ನೋಡಲಿಕ್ಕೆ ಅಲ್ಲಿಯೇ ಅಡಗಿತ್ತು. ಇಲ್ಲದುದು ಇದ್ದುದೆಂದು ನೋಡಲಿಕ್ಕಾಗಿ, ಇದ್ದಲ್ಲಿಯೇ ತಲ್ಲೀಯ್ಯವಾಯಿತ್ತು. ಇಂತೀ ಉಭಯವ ಕಡೆಗಾಣಿಸಲಾಗಿ ನಿಃಕಳಂಕಮಲ್ಲಿಕಾರ್ಜುನ ಲಿಂಗದಲ್ಲಿಯೇ ಇದ್ದಿತ್ತು.

**ಅರ್ಥ:**— ಅಂಗದಲ್ಲಿ ನೆಲೆಗೊಂಡಿರುವ ಲಿಂಗವನು ಸಕಲ ಪ್ರಪಂಚಿಲ್ಲದ ಜ್ಞಾನದಿಂದ ನೆನೆಯಲೇಕೆ? ಆ ಜ್ಞಾನದಲ್ಲಿಯೇ ಇಷ್ಟಲಿಂಗವೇ ಪ್ರಾಣಲಿಂಗವಾಯಿತ್ತು. ಸಕಲ ಪ್ರಪಂಚಿಲ್ಲದ ಜ್ಞಾನದಿಂದ ಇಷ್ಟಲಿಂಗವೇ ಪ್ರಾಣಲಿಂಗವಾಗಿಪ್ಪುದೆಂದು ನೆನೆಯಲಿಕ್ಕಾಗಿ, ಆ ಇಷ್ಟಲಿಂಗದಲ್ಲಿಯೇ ಪ್ರಾಣಲಿಂಗವಡಗಿತ್ತು. ಇಷ್ಟ ಪ್ರಾಣಲಿಂಗವ ಸಂಬಂಧವ ಮಾಡಿಕೊಂಡು ಜ್ಞಾನಕ್ರಿಯುಕ್ತನಾಗಿ ಆಚರಿಸುವ ಆಚರಣೆಯುನು ಇದರಿಂದ ಬಿಟ್ಟು ಇನ್ನಿಲ್ಲವೆಂದು ಬೋಧಿಸಲಾಗಿ ತನುಮನಂಗಳು ಇಷ್ಟಪ್ರಾಣಲಿಂಗದಲ್ಲಿಯೇ ಕೂಡಿಪ್ಪವೆಂಬುದರ್ಥ.

(೧೦). ಇಷ್ಟಲಿಂಗಪ್ರಾಣಲಿಂಗವೆನುತಿರ್ದರು. ಇಷ್ಟಲಿಂಗದ ಪ್ರಾಣಲಿಂಗದ ಸಂಧಿಯನಾರು ಬಲ್ಲರಯ್ಯ? ಇಷ್ಟಲಿಂಗವನರಿವಡೆ, ಅನಿಷ್ಟ ಪರಿಹರಿಸಬೇಕು ನೋಡಾ. ಪ್ರಾಣಲಿಂಗವನರಿವಡೆ, ಪ್ರಪಂಚನಾಸ್ತಿಯಾಗಿರಬೇಕು ನೋಡಾ. ಇಷ್ಟಪ್ರಾಣ ಒಂದೇ ಎಂದರಿದು ಒಡವೆರಸಿದ ಬಳಿಕ, ಜಾಗ್ರತ್ ಸ್ವಪ್ನ ಸುಷುಪ್ತಿ ಇಂತೆಂಬ ತ್ರಿವಿಧಾವಸ್ಥೆಯಲ್ಲಿ ಲಿಂಗವಲ್ಲದೆ ಮತ್ತೇನನೂ ತೋರಲಾಗದು ನೋಡಾ. ಆ ಮಹಾತ್ಮನ ಸರ್ವಾಂಗ ಪ್ರಾಣಲಿಂಗಮೂರ್ತಿ ಕಾಣಾ ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ.

(೧೧). ಇಷ್ಟಲಿಂಗ ಒಂದು ಪ್ರಾಣಲಿಂಗ ಒಂದು ಎಂಬ ಮಿಟ್ಟೆಯ ಭಂಡರ ಮಾತ ಕೇಳಲಾಗದು. ಅಂಗಳದೊಳಗೊಬ್ಬ ಗಂಡ, ಮನೆಯೊಳಗೊಬ್ಬ ಗಂಡ, ಹಿತ್ತಿಲೊಳಗೊಬ್ಬ ಗಂಡನೆಂಬ ಸತಿಯರ ಲೋಕದ ಮಾನವರು ಮೆಟ್ಟಿ ಮೂಗಕೊಯ್ಯದೆ ಮಾಣ್ಬರೇ ಅಯ್ಯ? ಲಿಂಗತ್ರಯವೆಂದು ತೋರಿದರಾರು? 'ಲಿಂಗಮೇಕಂ ಪರಂ ನಾಸ್ತಿ' ಎಂದು ಸದ್ಗುರುಸ್ವಾಮಿ ಅರುಹಿದನಾಗಿ ಷಟ್ ತ್ರಿಂಶತ್ ತತ್ವಕ್ಕೆ ಆಲಯವಂಥ ಮಹಾಲಿಂಗದ ಬೆಳಗು ಕರಸ್ಥಲದಲ್ಲಿ ಮನಸ್ಥಲದಲ್ಲಿ ವೇದ್ಯವಾದ ಬಳಿಕ ಸರ್ವಾಂಗಲಿಂಗ ಕೂಡಲಚನ್ನಸಂಗಯ್ಯ ನಿಮ್ಮ ಶರಣಂಗೆ.

(೧೨). ಕ್ರಿಯಾಲಿಂಗ ಜ್ಞಾನಲಿಂಗಂಗಳೆಂಬಲ್ಲಿ ಉಭಯ ಎರಡೆಂದು ಕಲ್ಪಿಸುವಾಗ ಅದಕ್ಕೆ ಭಿನ್ನಭೇದವಾವುದು? ಕುಂಭಂಗಳೊಳಗೆ ಹುದಿಗಿಟ್ಟದ್ದ ಕಿಚ್ಚು ಆ ಕುಂಭಂಗಳಿಗೆ ಒಳಗೆ ಮುಟ್ಟದಡೂ, ಹೊರಗೆ ಮುಟ್ಟದಡೂ ಪಾಕ ಪ್ರಯತ್ನ ತಪ್ಪದಾಗಿ, ಇಂತೀ ದೃಷ್ಟದ ಲಕ್ಷಿತದಂತೆ ಹೊರಗಣ ಕ್ರಿಯೆ ಒಳಗಣ

ಜ್ಞಾನಸಂಭವ ಉಭಯದ ಭೇದವಿಲ್ಲ. ಸಕ್ಕರೆಯ ರಾಸಿಗೆ ಕಹಿಯ ಕೇಳಸುಂಟೇ? ನಿಶ್ಚಯದ ಲಿಂಗಾಂಗಿಗೆ ಉಭಯದ ತಟ್ಟಿನ ಮುಟ್ಟಿನ ಹುಟ್ಟಿನ ಕುಲವಿಲ್ಲ, ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಲಿಂಗವು ಸ್ವಯಾನುಭಾವ ಸಿದ್ಧನಾದಕಾರಣ.

(೧೩). ಅಂಗದ ಲಿಂಗ ಆತ್ಮನಲ್ಲಿ ವೇಧಿಸಬೇಕೆಂಬುದಕ್ಕೆ ವಿವರ. ತಿಲದ ರಾಶಿಯಲ್ಲಿ ಸುಗಂಧ ಕುಸುಮವ ದ್ವಂದ್ವವ ಮಾಡಿ ಕೂಡಿ ಇರಿಸಲಿಕ್ಕಾಗಿ ಆ ಗಂಧ ತಿಲದಂಗವ ವೇಧಿಸಿ, ಆ ತಿಲರಸವ ಭೇದಿಸಿದಂತೆ ಆಗಬಲ್ಲಡೆ, ಆ ಲಿಂಗ ಆತ್ಮನಲ್ಲಿ ವೇಧಿಸಿಹುದು. ಕುಸುಮ ಗಂಧ ತಿಲದ ಹಿಪ್ಪೆ ಹೊರಗಾದುದನರಿದು ನಿಶ್ಚಯವ ಕಂಡಲ್ಲಿ ಹೊರಗಣ ಪೂಜೆ ಒಳಗಣ ದಿವ್ಯ ಪ್ರಕಾಶದ ವಸ್ತು ಭಾವದ ಕೂಟ, ಇಷ್ಟಲ್ಲದಿಲ್ಲ. ಮೀರಿ ಕಾಂಬ ನಿಜಲಿಂಗೈಕ್ಯರು ನೀವೇ ಬಲ್ಲಿರಿ. ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನ ಮುಳುಗಿದ್ದೇ ಸಮುದ್ರ.

**ಅರ್ಥ**:—ಎಳ್ಳು ಪುಷ್ಪಂಗಳು ಸಂಯೋಗವಾಗಿ ಎರಡರ ಹಿಪ್ಪೆಯು ಕಳೆದಡೆಯೂ ಪುಷ್ಪಗಂಧ ಎಳ್ಳಿನ ತೈಲವ ಕೂಡಿ ವೇಧಿಸಿ ಬಿಡದಿಪ್ಪಂತೆ, ಇಷ್ಟಲಿಂಗದಲ್ಲಿ ಶಿವಭಾವ ಘಟಿಸಿ ಲಿಂಗಪೂಜಾಕ್ರಿಯೆ ಬಿಡದಿರ್ದಡೆ ಅಂತರಂಗವೆಲ್ಲ ಲಿಂಗಪ್ರಕಾಶವೇ ತುಂಬಿ, ಆತ್ಮನಲ್ಲಿ ಲಿಂಗ ಕಳೆಹಿಂಗದೆ ಬೆಳಗುತ್ತಿಹುದು. ಅಂತಪ್ಪ ಶರಣನ ಅಂಗಲಿಂಗ ತೋರಿಕೆಯಳಿದು ಹೋದರೆಯೂ ಲಿಂಗಕಳೆ ಆತ್ಮನಲ್ಲಿ ಯೋಗವಾಗಿಪ್ಪ ಕಾರಣ, ಲಿಂಗದಲ್ಲಿ ಶರಣನು ಮುಕ್ತನು. ಅಂತಪ್ಪ ಇಷ್ಟಲಿಂಗದಲ್ಲಿ ಶಿವಭಾವ ಘಟಿಸಲಿಲ್ಲದಾತಂಗೆ ಮುಕ್ತಿ ಇಲ್ಲವೆಂಬುದೀವಚನದ ತಾತ್ಪರ್ಯಾರ್ಥ.

(೧೪). ಅರಿದರಿದು ಅರಿವು ಬರುದೊರೆವೋಯಿತ್ತು. ಕುರುಹುದೋರಿಹಡೆಂತು ನಂಬರು? ತೆರಹಿಲ್ಲದ ಘನವ ನೆರೆಯರಿದು ಗುರುಶರಣೆಂಬುದಲ್ಲದೆ ಮರಹಿತ ಬಂದುದೆಂದು ಗುರು ಕುರುಹ ತೋರಿದನಲ್ಲದೆ, ಅರಿಯಬಲ್ಲಡೆ ಗುಹೇಶ್ವರನೆಂಬ ಲಿಂಗವು ಹೃದಯಕಮಲದಲ್ಲಿದ್ದಾನೆ.

**ಅರ್ಥ**:—ಶ್ರೀಗುರು ಕರುಣಿಸಿ ಪರಬ್ರಹ್ಮವ ಸಾಕಾರವ ಮಾಡಿ ಕರಸ್ಥಲಕ್ಕೆ ತಂದು ಕೊಟ್ಟ ಇಷ್ಟಲಿಂಗದಲ್ಲಿ ವಿಶ್ವಾಸ ಕ್ರಿಯೆ ಇಲ್ಲದೆ, ಚರಿಯಂಬಿನಿಂದ ಬ್ರಹ್ಮವನರಿದು ಬ್ರಹ್ಮವಾದೆವೆಂದು ಓದಿ ಶಾಸ್ತ್ರಕಳಾಂಪರು ಭವದತ್ತಲೆಂಬುದೀಗ

ಆದರದು ಅರಿವು ಬರುದೋರುವೋಯಿತ್ತು, ಕುರುಹುದೋರದಡೆಂತು ನಂಬರು ಎಂಬ ಶಬ್ದಕ್ಕರ್ಥ. ಅಂತು ಅಖಂಡಪರಿಪೂರ್ಣ ಲಿಂಗವನರಿ ಎಂದು ಅರಿದು ಆ ಅಖಂಡಪರಿಪೂರ್ಣ ಲಿಂಗವೇ ಗುರುರೂಪಾಯಿತ್ತೆಂದರಿದು ಭಾವಿಸಿ ಗುರುವಿಂಗೆ ಶರಣುವೊಗಬೇಕೆಂಬುದೀಗ ತೆರಹಿಲ್ಲದೆ ಘನವನೆನೆದು ಗುರುಕರುಣೆಂಬುದಲ್ಲದೆ ಎಂಬ ಶಬ್ದಕ್ಕರ್ಥ. ಅಂತು ಶರಣುವೊಕ್ಕ ಭಕ್ತಂಗೆ ಗುರು ಕರುಣಿಸಿದ ಗುರು ತನ್ನ ಅಂತರಂಗವಾಗಿರ್ದ ನಿರಾಕಾರ ಬ್ರಹ್ಮವ ತರವ ತೆಗೆದು ಕರಸ್ಥಲಕ್ಕೆ ಕೊಟ್ಟು ಒಳಹೊರಗೆಲ್ಲ ಲಿಂಗವನೆ ತೋರಿ ತೆರಹು ಮರಹಿಲ್ಲದಂತೆ ಮಾಡಿದ ಶ್ರೀಗುರುವೆಂಬುದೀಗ ಮರಹು ಬಂದುದೆಂದು ಗುರುಕುರುಹ ತೋರಿದನಲ್ಲದೆ ಎಂಬ ಶಬ್ದಕ್ಕರ್ಥ. ಅಂತು ತೋರಿದ ಇಷ್ಟಲಿಂಗದ ಕಳಾಸ್ವರೂಪವ ತನ್ನ ನಿಜವೆಂದರಿದು ಅಭಿನ್ನಜ್ಞಾನಕ್ರಿಯಿಂದ ಆಚರಿಸಲು ಬಲ್ಲ ಶರಣನ ಅಂತರಂಗವೆಲ್ಲ ಲಿಂಗವೆಯಾಗಿ ಭೇದವಿಲ್ಲದಿಪ್ಪುದೆಂಬುದೀಗ ಅರಿಯಬಲ್ಲಡೆ ಗುಹೇಶ್ವರಲಿಂಗವು ಹೃದಯದಲ್ಲಿ ಇರ್ದಾನೆ ಎಂಬ ಶಬ್ದಕ್ಕರ್ಥ.

---

## ಇಷ್ಟಲಿಂಗದಿಂದ ಪ್ರಾಣಲಿಂಗದ ಅರಿಕೆ.

(೧) ಅಂಗದ ಮೇಲಣ ಲಿಂಗ ಪ್ರಾಣದ ಮೇಲೆ ಬಂದು ನಿಲ್ಲುವನಕ್ಕ ಪೂಜಿಸಬೇಕು. ಪ್ರಾಣದ ಮೇಲಣ ಅರಿವು ಕರಿಗೊಂಡನಕ್ಕ ನೆನೆಯಬೇಕು. ನೆನಹುನಿಷ್ಪತ್ತಿಯಾದ ಮತ್ತೆ ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವೆಂಬನಾಮವಡಗಿತ್ತು.

ಅರ್ಥ:—ಸುಜ್ಞಾನೋದಯವಾದ ಶರಣನ ಅಂಗದಲ್ಲಿ ಸಂಬಂಧವಾದ ಇಷ್ಟಲಿಂಗವು ಪ್ರಾಣದಲ್ಲಿ ಪ್ರಾಣಲಿಂಗವಾಗಿ ನೆಲೆಗೊಂಬ ಪರಿಯಂತರ ಪೂಜೆಯ ಮಾಡಬೇಕು. ಪ್ರಾಣಲಿಂಗ ಸಂಬಂಧವಾದ ಜ್ಞಾನವು ಇಂಬುಗೊಂಬ ಪರಿಯಂತರ ಇಷ್ಟಲಿಂಗವ ಸ್ಮರಿಸಬೇಕು. ಇಷ್ಟಲಿಂಗವೇ ಅಂತರಂಗದಲ್ಲಿ ಪ್ರಾಣಲಿಂಗವಾಗಲು, ಆ ಇಷ್ಟಲಿಂಗದ ನೆನಹೇ ಪ್ರಾಣಲಿಂಗದ ಜ್ಞಾನದಲ್ಲಿ ಅಡಗಿದ ಬಳಿಕ ಮಹಾಜ್ಞಾನಸ್ವರೂಪವಾದ ಶರಣಸತಿವಲ್ಲಭನಾದ್ದು ಇಷ್ಟಲಿಂಗವೆಂಬ ಧಾರಣ ನಿಷ್ಪತ್ತಿಯಾಯಿತ್ತು ಎಂಬುದರ್ಥ.

(೨). ಹಿರಿದಪ್ಪದೊಂದು ಭೇರಿಗೆ. ಅಂಗುಲದೊಳಡಗಿದ ಕಾಷ್ಠದ ಕುರುಹಿನಿಂದ ದನಿಯೊದಗುವಂತೆ, ಇಂತೀ ಘಟನಾದದ ಭೇದದ ಎಸಕವ ಬಲ್ಲಡೆ, ನಿಷ್ಕಳಂಕಮಲ್ಲಿಕಾರ್ಜುನಲಿಂಗವ ಬಲ್ಲವ.

**ಅರ್ಥ**:—ದೊಡ್ಡಿತ್ತಾದೊಂದು ನಿಸ್ಸಾಳಕ್ಕೆ ಬೆರಳಿನಲ್ಲಿ ಅಡಗಿದ ಕಟ್ಟಿಗೆ ಎಂಬನಾದ ದಂಡದಿಂದ ಅಬ್ಬರ ಹುಟ್ಟುವ ಹಾಗೆ, ಈ ಪ್ರಕಾರದಿಂದ ಅಂಗದಲ್ಲಿ ಚಿನ್ನಾದಸ್ವರೂಪವಾದ [illegible]ಲಿಂಗಸಂಬಂಧವ ಮಾಡಿಕೊಂಡು ಜ್ಞಾನಕ್ರಿಯಿಂ ದಾಚರಿಸಿ, ಪ್ರಾಣಲಿಂಗ ಸಂಬಂಧವನುಂಟುಮಾಡಿಕೊಳಬಲ್ಲಡೆ, ಆತನೇ ಇಷ್ಟ ಲಿಂಗಸಂಬಂಧವ ಬಲ್ಲನೆಂಬುದರ್ಥ.

(೩). ಗೊಟ್ಟಿಯನೊಡ್ಡಿ ಆಡುವಲ್ಲಿ, ಗೊತ್ತ ಮೀರಿದಡೆ, ಮತ್ತೆ ಆಟವ ಕೊಡೆನೆಂಬವರಂತೆ ದೃಷ್ಟದಲ್ಲಿ ಕೊಟ್ಟ ಲಿಂಗವ ಮನಮಚ್ಚಿ, ಮನಘನದಲ್ಲಿ ಮಚ್ಚಿ ಆ ಘನ ನಾನೀನೆನಲಿಲ್ಲದ ಮತ್ತೆ ತಾನು ತಾನೇ ಜಾಂಬೇಶ್ವರಾ.

**ಅರ್ಥ**:—ಗುರಿಯ ನೋಡಿ ಆಡುವಲ್ಲಿ ಗುರುತ ಮೀರಿದಡೆ, ಮರಳಿ ಆಟ ವಿಲ್ಲ ಎಂಬ ಹಾಗೆ ಶ್ರೀಗುರುದೇವರು ಅಂಗದಲ್ಲಿ ಸಂಬಂಧವ ಮಾಡಿ ಕೊಟ್ಟ ಇಷ್ಟಲಿಂಗದ ಸತ್ಕ್ರಿಯನು ಮೀರಿ, ಅದ್ವೈತ ಭಾವದಿಂದ ಅಹಂ ಬ್ರಹ್ಮ ವೆಂದಡೆ, ತಾ ನೋಡಿದಂತೆ ಬ್ರಹ್ಮತ್ವ ಘಟಿಸದೆಂಬುದರ್ಥ. ಕ್ರಿಯಲ್ಲಿ ಸಂಬಂಧವ ಮಾಡಿಕೊಟ್ಟ ಇಷ್ಟಬ್ರಹ್ಮವನು ಮನಮಚ್ಚಿ ಪೂಜಿಸಿದಲ್ಲಿ ಅದೇ ಅಂತರಂಗದಲ್ಲಿ ಪ್ರಾಣಲಿಂಗವಾಗುವದು. ಆ ಮನವು ಪ್ರಾಣಲಿಂಗವನು ಮಮಕರಿಸಿ, ಇದು ಪ್ರಾಣಲಿಂಗವು ನಾ ಮನವು ಎಂಬೀ ಭಿನ್ನವಳಿದ ಬಳಿಕ ಆ ಮನವೇ ಪ್ರಾಣ ಲಿಂಗವೆಂಬುದರ್ಥ.

(೪). ಮಹಾನಾದ ಕಳೆಯೇ ಲಿಂಗಕ್ಕಾಶ್ರಯವಾಗಿ, ಲಿಂಗದ ಕಳೆ ಯೇ ಹೃದಯಕ್ಕಾಶ್ರಯವಾಗಿ, ಹೃದಯದ ಕಳೆಯೇ ಜ್ಞಾನಕ್ಕಾಶ್ರಯವಾಗಿ, ಜ್ಞಾನದ ಕಳೆಯೇ ನಿತ್ಯಕ್ಕಾಶ್ರಯವಾಗಿ, ನಿತ್ಯ ನಿರವಯ ಚಿಕ್ಕಯ್ಯಪ್ರಿಯ ಸಿದ್ಧ ಲಿಂಗ ಇಲ್ಲ, ಇಲ್ಲ.

**ಅರ್ಥ**:—ಮಹಾನಾದವನುಳ್ಳ ಪರಬ್ರಹ್ಮದ ಚಿತ್ಕಳೆಯೇ ಇಷ್ಟಲಿಂಗ ಕ್ಕೆ ಚೈತನ್ಯವಾಗಿ ಇಷ್ಟಲಿಂಗದ ಚೈತನ್ಯ ಕಳೆಯೇ ಮನದಲ್ಲಿ ಪ್ರಾಣಲಿಂಗವಾ ಗುವದಕ್ಕೆ ಆಸ್ಪದವಾಗಿ, ಮನದಲ್ಲಿ ಬೆಳಗಲ್ಪಟ್ಟ ಪ್ರಾಣಲಿಂಗವೇ ಚಿತ್ಪ್ರಾಣನು

ಒಳಕೊಂಬುದಕ್ಕೆ ಆಶ್ರಯವಾದ ಭಾವಲಿಂಗವಾಗಿ, ಆ ಪ್ರಾಣನೊಳಕೊಂಡಿಪ್ಪ ಭಾವಲಿಂಗವೇ ಆತ್ಮನೊಳಕೊಂಬುವದಕ್ಕೆ ಆಶ್ರಯವಾದ ಮಹಾಲಿಂಗವಾಗಿ, ಶಾಶ್ವತವಾದ ನಿರಾಕಾರವಾದ ಪರಶಿವಲಿಂಗವು ಅಂತರಂಗ ಬಹಿರಂಗದಲ್ಲಿ ಭಿನ್ನ ವಿಲ್ಲವೆಂಬುದರ್ಥ.

(೫). ಕಂಡು ಕಂಡು ಕಾಣಲುಂಟೇ ಅಯ್ಯ? ಕೇಳಿ, ಕಂಡೆಹೆ ನೆಂದಡೆ, ಮನಸ್ಸು ನಾಚಿತ್ತು. ನಾಚಿದ ಮನ[illegible]ನೋಡಿದ ನೋಟಕ್ಕೆ ಭಾವಬತ್ತಲೆಯಾಗದನ್ನಕ್ಕರ ಚಿಕ್ಕಯ್ಯಪ್ರಿಯ ಸ[illegible] ಇಲ್ಲ, ಇಲ್ಲ.

**ಅರ್ಥ:—** ಅಂತರಂಗದಲ್ಲಿ ಸುಜ್ಞಾನದೃಷ್ಟಿಯಿಂದ ಪ್ರಾಣಲಿಂಗವ ಕಂಡು, ಆ ಪ್ರಾಣಲಿಂಗವೇ ಇಷ್ಟಲಿಂಗವಾಗಿ ಕಂಡು, ಇಷ್ಟಲಿಂಗವ ಬಿಟ್ಟು ಪ್ರಾಣಲಿಂಗವನೇ ಪರವಾಗಿ ಕಂಡೆಹೆನೆಂದರೆ ಸಾಧ್ಯವಾಗುವದೇ? ಶೃತಜ್ಞಾನ ವನು ಆಲಿಸಿ, ಅಂತರಂಗದಲ್ಲಿ ಪ್ರಾಣಲಿಂಗ ಸಂಬಂಧವನರಿದಿಹೆನೆಂದಡೆ, ಮನ ದಲ್ಲಿ ನೆಲೆಗೊಂಡಿಪ್ಪ ಪ್ರಾಣಲಿಂಗವು ಅಭಿಮಾನಿಸಿ ಕಡೆಗೆ ತೊಲಗಿತ್ತು. ಅಭಿ ಮಾನಿಸಿದ ಪ್ರಾಣಲಿಂಗಕ್ಕೂ, ಕ್ರಿಯಾದೃಷ್ಟಿಯಲ್ಲಿ ನೋಡಿದ ಇಷ್ಟಲಿಂಗ ಕ್ಕೂ ಭಿನ್ನಭಾವ ನಷ್ಟವಾಗದೆ ಇರುವ ಪರಿಯಂತರ ಆವರಿಗೆ ಲಿಂಗದ ಕರುಣ ಸಾಧ್ಯವಿಲ್ಲ ಇಲ್ಲೆಂಬುದರ್ಥ.

(೬). ಬೆಂಕಿಗೆ ಉರಿ ಮೊದಲೋ, ಹೊಗೆ ಮೊದಲೋ, ಎಂಬುದನರಿ ದಲ್ಲಿ ಇಷ್ಟಲಿಂಗ ಸಂಬಂಧಿ. ಉಭಯುವನಳಿದಲ್ಲಿ ಪ್ರಾಣಲಿಂಗ ಸಂಬಂಧಿ. ಆ ಉಭಯುನಷ್ಟವಾದಲ್ಲಿ, ಏನೂ ಎನಲಿಲ್ಲ, ಜಾಂಬೇಶ್ವರಾ.

**ಅರ್ಥ:—** ಅಗ್ನಿಗೆ ಕಟ್ಟಿಗೆ ಬೆರಣಿಯ ಹಾಕಿದಲ್ಲಿ ಮೊದಲು ಹೊಗೆ ಯಾಗಿ ಕಡೆಯಲ್ಲಿ ಉರಿವುದು ಎಂಬ ಹಾಗೆ, ಇಷ್ಟಲಿಂಗದ ಕ್ರಿಯಿಂದಲೇ ಪ್ರಾಣಲಿಂಗವು ಪ್ರಭಾವಿಸುವದೆಂಬುದ ತಿಳಿದಲ್ಲಿ, ಆತನೇ ಅಂಗದಲ್ಲಿ ಇಷ್ಟ ಲಿಂಗ ಸಂಬಂಧವುಳ್ಳಾತನು. ಅಂಗಲಿಂಗವೆಂಬ ಎರಡು ಭಾವನಷ್ಟವಾದಲ್ಲಿ, ಆತನೇ ಮನದಲ್ಲಿ ಪ್ರಾಣಲಿಂಗ ಸಂಬಂಧವುಳ್ಳಾತನು. ಪ್ರಾಣಪ್ರಾಣಲಿಂಗವೆಂಬ ಎರಡು ಭಾವನಷ್ಟವಾದಲ್ಲಿ ಕ್ರಿವಿಡಿದು ಆಚರಿಸಬೇಕೆನಲಿಲ್ಲ, ಜ್ಞಾನವಿಡಿದು ಆಚರಿಸಬೇಕೆನಲಿಲ್ಲ, ಎಂಬುದರ್ಥ.

(೭). ಇಷ್ಟಲಿಂಗವೇ ಪ್ರಾಣಲಿಂಗವೆಂಬ ಮಿಟ್ಟೆಯಭಂಡರ ಮಾತ ಕೇಳಲಾಗದು. ಇಷ್ಟಲಿಂಗವನು ಕಾಯವನು ಮೆಟ್ಟಿ ಹೂಳುವಲ್ಲಿ, ಬಿಟ್ಟು ಹೋಹಪ್ರಾಣಕ್ಕೆ ಇನ್ನಾವುದೋ ಲಿಂಗವು? ಇಷ್ಟಲಿಂಗದಲ್ಲಿ ಪ್ರಾಣಲಿಂಗವ ನರಿಯದವರು ಕೆಟ್ಟ ಕೇಡಿಂಗೆ ಕಡೆ ಇಲ್ಲ ಗುಹೇಶ್ವರಾ.

(೮). ಗೋವಿನ ಹೊಟ್ಟೆಯಲ್ಲಿ ಘೃತವಿದ್ದಡೇನೋ? ಆಗೋವು ದಿನ ದಿನಕ್ಕೆ ಪುಷ್ಟಿಯಾಗಲುಲ್ಲದೇ? ಅದು ಕಾರಣ ಆಗೋಪ ಪೋಸಿಸಿ ಕರೆದು ಕಾಸಿ, ಘೃತವಮಾಡಿ, ಗೋವಿಂಗೆ ಕುಡಿಯಲೆರೆದಡೆ ಆ ಗೋವು ದಿನ ದಿನಕ್ಕೆ ಪುಷ್ಟಿಯಹುದಲ್ಲದೆ, ಅದು ಹೇಗೆಂದಡೆ ಹಾಗೆ ತನ್ನಲ್ಲಿ ವಸ್ತುವಿದ್ದಡೇನೋ, ವಸ್ತುವ ಗುರುಮುಖದಿಂದ ಕರಸ್ಥಲಕ್ಕೆ ಪಡೆದು ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿದಲ್ಲದೆ, ಪ್ರಾಣಲಿಂಗವಾಗದು. ಕೂಡಲಚನ್ನಸಂಗಯ್ಯನಲ್ಲಿ ಇಷ್ಟಲಿಂಗದ ಸತ್ಕ್ರಿಯೆಯಿಂದ ಪ್ರಾಣಕ್ಕೆ ವೇಧಿಸಿ, ತಾನೆಂಬ ಅನಿಷ್ಟವ ತೊಲಗಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗಬಾರದು.

---

## ಪ್ರಾಣಲಿಂಗದಿಂದ ಇಷ್ಟಲಿಂಗದ ಅರಿಕೆ.

(೧). ಅಂಗದ ಮೇಲೆ ಆಯತವಾದುದೇ ಇಷ್ಟಲಿಂಗ. ಇಷ್ಟಲಿಂಗ ವಿಡಿದು ಪ್ರಾಣಲಿಂಗ ಸ್ವಾಯತ. ಪ್ರಾಣಲಿಂಗ ಉದಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲಡೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

(೨). ಪ್ರಣವಮಂತ್ರವ ಕರ್ಣದಲ್ಲಿ ಹೇಳಿ, ಶ್ರೀಗುರು ಅಂಗದ ಮೇಲೆ ಲಿಂಗಪ್ರತಿಷ್ಠೆಯಂ ಮಾಡಿದ ಬಳಿಕ, ಒಳಗೆ ಲಿಂಗವಿಪ್ಪುದೆಂಬ ಪಂಚಮಹಾಪಾತಕರ ನೋಡಿಯು ಕೇಳಲಾಗದು. ಒಳಗಿಪ್ಪನೇ ಲಿಂಗದೇವನು? ಮಲ ಮೂತ್ರ ಮಾಂಸದ ಹೇಸಿಕೆಯೊಳಗೆ ಪ್ರಾಣವಿಪ್ಪುದಲ್ಲದೆ, ಲಿಂಗವಿಪ್ಪುದೇ? ಆ ಪ್ರಾಣವ ತಂದು ಇಷ್ಟಲಿಂಗದಲ್ಲಿ ಇರಿಸಿ ನೆರೆಯಬಲ್ಲಾತನೇ ಪ್ರಾಣಲಿಂಗ ಸಂಬಂಧಿ. ತನ್ನ ಇಷ್ಟಲಿಂಗದಲ್ಲಿ ದಾಸೋಹವ ಮಾಡಲರಿಯದೆ, ಹಲವು ಬಳ ಕೆಯು ಬಳಸುವ ಮಿಟ್ಟೆಯು ಭಂಡರನೆನಗೊಮ್ಮೆ ತೋರದಿರಾ ಕೂಡಲಚನ್ನ ಸಂಗಯ್ಯ.

(೩). ಪ್ರಮಾಣಿಸಿದ ವಿಶ್ವಾಸದಿಂದ ಧ್ಯಾನಿಸಲಾಗಿ, ಧ್ಯಾನದಲ್ಲಿಯೇ ವೇಧಿಸಿತ್ತು. ಧ್ಯಾನವ ತನ್ಮಯ ಲಕ್ಷದಲ್ಲಿ ಲಕ್ಷಿಸಿ ಇರಲಾಗಿ ಉಭಯದ ಕುರು ಹು ಅಲ್ಲಿಯೇ ಲೇಪವಾಯಿತ್ತೆಂಬುದಕ್ಕೆ ಸೂಚನೆ ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿಯೇ.

**ಅರ್ಥ:**—ತನ್ನಂಗದಲ್ಲಿ ಕುರುಹಿಟ್ಟ ಇಷ್ಟಲಿಂಗವನು ಪ್ರೀತಿ ಪ್ರೇಮ ದಿಂದ ನೆನೆಯಲಿಕ್ಕಾಗಿ, ಜ್ಞಾನದಲ್ಲಿ ಇಷ್ಟಲಿಂಗವೇ ಪ್ರಾಣಲಿಂಗವಾಯಿತ್ತು. ಜ್ಞಾನದಿಂದ ತನ್ಮಯ ಲಕ್ಷವೇ ಇಷ್ಟಲಿಂಗ. ಆ ಇಷ್ಟಲಿಂಗದಲ್ಲಿ ಕುರುಹಿಟ್ಟಿರ ಲಾಗಿ ಆ ಇಷ್ಟಲಿಂಗದಲ್ಲಿ ಪ್ರಾಣಲಿಂಗವಡಗಿತ್ತು. ಆ ಇಷ್ಟ ಪ್ರಾಣಲಿಂಗವು ತನುಮನಂಗಳಲ್ಲಿಯೇ ಅಡಗಿಪ್ಪವೆಂಬುದರ್ಥ. ಆ ಇಷ್ಟಪ್ರಾಣಲಿಂಗದಲ್ಲಿಯೇ ತನುಮನಂಗಳು ಅಡಗಿದವೆಂಬುದರ್ಥ.

(೪). ಹೃದಯ ಕಮಲಮಧ್ಯದಲ್ಲಿಪ್ಪ ಲಿಂಗವ ಸರ್ವಾಂಗದಲ್ಲಿ ವೇಧಿಸಿ ಪರಿಪೂರ್ಣವಪ್ಪ ಲಿಂಗವ ಅಂತರ್ಮುಖದಿಂದ ಬಾಹ್ಯಸ್ಥಾನಕ್ಕೆ ತಂದು, ಪಂಚಸ್ಥಾನದಲ್ಲಿಪ್ಪ ಲಿಂಗವ ಕರಸ್ಥಲದಲ್ಲಿ ಮೂರ್ತಿಗೊಳಿಸಲಿಕ್ಕಾಗಿ ಬಾಹ್ಯದೃಷ್ಟಿಯರತು, ಲಿಂಗದೃಷ್ಟಿ ಪರಿಪೂರ್ಣವಾಗಿ ದೃಕ್ಕಿಂಗೆ ತೋರಿದವೆಲ್ಲವು ಲಿಂಗ ಮಯವಾಗಿ, ಎನ್ನ ಮುಟ್ಟಿ ಹಿಡಿದಲ್ಲಿ ಪುಷ್ಪಮಯವಾಗಿ, ಜಿಹ್ವೆಯಲ್ಲಿ ತೋರುವ ಅಪ್ಪುರಸ ಮುಂತಾದವೆಲ್ಲವು ಅರ್ಪಿತಮಯವಾಗಿ, ಇಂತೀ ಸರ್ವಾಂಗ ಲಿಂಗಿಯ ಅವಧಾನ ಇಷ್ಟದರಿವೆಂದು ಉಭಯದ ಗುಟ್ಟು ಕೆಟ್ಟಲ್ಲಿ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನ ಎಂಬುದಕ್ಕೆ ಇದಿರೆಡೆ ಇಲ್ಲ.

---

## ಪ್ರಾಣಲಿಂಗಿಯ ಸ್ವರೂಪು.

(೧). ಹರಿವ ನದಿಗೆ ಮೈಯೆಲ್ಲ ಕಾಲು. ಉರಿವಗ್ನಿಗೆ ಮೈಯೆಲ್ಲ ನಾಲಿಗೆ. ಬೀಸುವ ಗಾಳಿಗೆ ಮೈಯೆಲ್ಲ ಕೈ. ಗುಹೇಶ್ವರಾ ನಿಮ್ಮ ಶರಣಂಗೆ ಸರ್ವಾಂಗಲಿಂಗ.

(೨). ಇಹಲೋಕದಲ್ಲಿ ಲಿಂಗವ ಪೂಜಿಸಿ ಪರಲೋಕದ ಪದವ ಬಯಸುವವನಲ್ಲ ನೋಡಾ! ಇಹಪರವನೊಳಕೊಂಡ ಪರಿಪೂರ್ಣ ಲಿಂಗವು ತನ್ನ ಸರ್ವಾಂಗದಲ್ಲಿ ಸನ್ನಿಹಿತವಾಗಿರಲು, ಆ ಲಿಂಗದಲ್ಲಿ ತನ್ನಂಗವ ಬೆರಸಿ

ಆ ಶುದ್ಧ ಪರಮಾತ್ಮ ಲಿಂಗವೇ ಗೂಡಾಗಿಪ್ಪ ಲಿಂಗನಿಷ್ಠನು ನೋಡಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೩). ಲಿಂಗವೇ ಪ್ರಾಣ, ಪ್ರಾಣವೇ ಲಿಂಗವಾಯಿತ್ತು. ಅಂಗ ಲಿಂಗವಾಯಿತ್ತು. ಗುಹೇಶ್ವರ ಲಿಂಗದಲ್ಲಿ ಸರ್ವಾಂಗ ಪ್ರಾಣಲಿಂಗ ಸ್ವಾಯತವಾಯಿತ್ತು ಕಾಣಾ, ಚನ್ನಬಸವಣ್ಣಾ.

(೪). ಕಿಚ್ಚಿನ ಕೊಂಡದಂತೆ, ಹೊರೆ ಇಲ್ಲದೆ ಇಪ್ಪೆಯಯ್ಯಾ! ಬೆಂಕಿಯು ಬೆಳಗಿನಂತೆ ನೀನಿಪ್ಪೆಯಯ್ಯಾ! ಇದು ಕಾರಣ ನಿಮ್ಮ ಕಂಡಾ ಪರಮಜ್ಞಾನಿ ಗುಹೇಶ್ವರಾ.

**ಅರ್ಥ:**—ಕಾಷ್ಠದೊಳಗೆ ಅಗ್ನಿ ಭಿನ್ನವಿಲ್ಲದೆ ಪರಿಪೂರ್ಣವಾಗಿಪ್ಪಂತೆ, ಬೆಂಕಿಯಲ್ಲಿ ಪ್ರಕಾಶ ಭಿನ್ನವಿಲ್ಲದೆ ಪರಿಪೂರ್ಣವಾಗಿಪ್ಪಂತೆ, ಶರಣನ ಆತ್ಮಾಂಗದೊಳಗೆ ಚಿತ್ಪರಮಲಿಂಗವು ಭಿನ್ನವಿಲ್ಲದೆ ಪರಿಪೂರ್ಣವಾಗಿ ಇದ್ದಕಾರಣ ಸಮ್ಯಜ್ಞಾನೋದಯವಾಗಿ ಶರಣಲಿಂಗವ ಪ್ರತ್ಯಕ್ಷವಾಗಿ ಕಂಡು ಕೂಡಿ ಲಿಂಗವಾದ ಶರಣನೆಂಬುದೀ ವಚನದ ತಾತ್ಪರ್ಯಾರ್ಥ.

(೫). ದೇಹವೆಂಬ ಅರಮನೆಯಲ್ಲಿ ಮಹಾಲಿಂಗವೆಂಬರಸು ಮನವೆಂಬ ಸಿಂಹಾಸನದ ಮೇಲೆ ಮೂರ್ತಿಗೊಂಡು ಅಂತಃಕರಣಂಗಳೆಂಬ ಪರಿಚಾರಕರ ಕೈಯ್ಯಿಂದ ಪಂಚೇಂದ್ರಿಯಂಗಳೆಂಬ ಪರಿವಾಣದಿಂದ ಶಬ್ದ ಸ್ಪರ್ಶ ರೂಪ ರಸ ಗಂಧಂಗಳೆಂಬ ಪದಾರ್ಥಂಗಳನು ಎಡೆ ಮಾಡಿಸಿಕೊಂಡು ಸವಿವೃತ್ತ ಆನಂದವೇ ಮೂರ್ತಿಯಾಗಿದ್ದ ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರನು.

(೬). ಉದಕ ನಾನಾವರ್ಣದಲ್ಲಿ ಬೆರಸಿ ಅವುಗಳ ಛಾಯಕ್ಕೆ ಭಿನ್ನಭಾವವಿಲ್ಲದೆ, ಆರೂಪಿಂಗೆ ತದ್ರೂವ ಒಡಲಾಗಿ ತೋರುವಂತೆ, ಎನ್ನ ಸರ್ವಾಂಗದಲ್ಲಿ ತೋರುವ ತೋರಿಕೆ ನೀನಾಗಿ ಮುಕುರವ ನೋಡುವ ನೋಟದಂತೆ ಒಳಗೆ ತೋರುವನ ಇರವು ಹೊರಗಣವನ ಪ್ರತಿರೂಪಿನಂತೆ ಇಂತಿವೆಲ್ಲವೂ ನೀನಾಗಿ ತಾನರಿವುದಕ್ಕೆ ತೆರಪಿಲ್ಲ. ಹಾಗೆಂದಲ್ಲಿ ನಿನ್ನುಳುಮೆ ಪುಣ್ಯಾರಣ್ಯ ದಹನ ಭೀಮೇಶ್ವರ ಲಿಂಗನಿರಂಗಸಂಗಾ.

(೭). ಲಿಂಗಮಧ್ಯದಲ್ಲಿ ಜಗವಿರ್ದರೇನೋ? ಆ ಜಗವ ಹೊರಗಿಕ್ಕಿ ಲಿಂಗವನೊಳಗಿಟ್ಟುಕೊಂಡಾ. ಆ ಘನಕ್ಕೆ ಶರಣೆಂಬೆ. ಆ ಮಹಾಘನ ಆಯತ ಕ್ಕೊಳಗು, ಪ್ರಳಯಕ್ಕೆ ಹೊರಗು ಕೂಡಲಚನ್ನಸಂಗಯ್ಯ.

(೮). ಬಂದಲ್ಲಿ ನಿಂದು ಕಂಡು ಸಂದೇಹವಳಿದ ಮತ್ತೆ ಬೇರೊಂದವ ಕೇಳುವದಕ್ಕೆ ಕಂಗಳ ಸೂತಕಕ್ಕೆ ಇಂಬಿಲ್ಲ. ಆ ಉಭಯದಂಗದ ಸಂಗವಮರೆದಲ್ಲಿ ನಿಜಗುಣ ಯೋಗಿಯ ಯೋಗಾ.

**ಅರ್ಥ:**—ಗುರುವಿನ ಕರಗರ್ಭದಲ್ಲಿ ಹುಟ್ಟಿ ಬಂದಲ್ಲಿ ಸರ್ವಾಂಗಲಿಂಗ ಸಂಬಂಧಿಯಾಗಿದ್ದು, ಆ ಇಷ್ಟಲಿಂಗವೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಕಂಡು, ಇಷ್ಟಲಿಂಗ ಪ್ರಾಣಲಿಂಗವೆಂಬ ಸಂಕಲ್ಪವಳಿದು, ಪ್ರಾಣಲಿಂಗವೇ ಇಷ್ಟಲಿಂಗ, ಇಷ್ಟಲಿಂಗವೇ ಪ್ರಾಣಲಿಂಗ, ಎಂಬ ಸಮರಸ ಉಂಟಾದ ಬಳಿಕ, ದ್ವೈತಾದ್ವೈತಗಳಾದ ಉಭಯಲಿಂಗದ ಒಪ್ಪವ ಬೆಸಗೊಂಬುದಕ್ಕೆ ಭಿನ್ನಜ್ಞಾನಕ್ಕೆ ತೆರಪಿಲ್ಲ. ತನುಮನಂಗಳು ಇಷ್ಟಲಿಂಗ ಪ್ರಾಣಲಿಂಗದಲ್ಲಿ ಕೂಡಿ ಕೂಡಿದೆನೆಂಬ ಭಿನ್ನವ ಮರೆದಲ್ಲಿ ಅದೇ ಶರಣನು ಮಹಾಲಿಂಗದಲ್ಲಿ ಕೂಡಿದ ಶಿವಯೋಗವೆಂಬುದರ್ಥ.

(೯). ಎನ್ನ ಪಾದವೇ ಪಾದಶಿಲೆಯಾಗಿ, ಎನ್ನ ಕಾಲೇ ಕಡಹದ ಕಂಬಗಳಾಗಿ, ಎನ್ನ ತೋಳೇ ನಾಗವೇದಿಗೆಯಾಗಿ, ಎನ್ನ ಅಸ್ತಿಯೇ ಸುತ್ತಳ ಜಂತೆಯಾಗಿ, ಎನ್ನ ಅಧರವೇ ಒಳ್ಳಿಹ ಬಾಗಿಲಾಗಿ, ಎನ್ನ ಗುರುಕರುಣವೇ ಲಿಂಗವಾಗಿ, ಎನ್ನಂಗವೇ ರಂಗಮಧ್ಯವಾಗಿ, ಎನ್ನ ಹೃದಯಕಮಲವೇ ಪೂಜಿಯಾಗಿ, ಎನ್ನ ಕಿವಿಗಳೇ ಕೀರ್ತಿಮುಖವಾಗಿ, ಎನ್ನ ನೆನೆವ ನಾಲಿಗೆಯೇ ಗಂಟಿಯಾಗಿ, ಎನ್ನ ಶಿರವೇ ಸುವರ್ಣ ಕಳಶವಾಗಿ, ಎನ್ನ ನಯನವೇ ಕುಂದದ ಜ್ಯೋತಿಯಾಗಿ, ಎನ್ನ ಚರ್ಮವೇ ನಿರ್ಮಲ ಹೊದಿಕೆಯಾಗಿ, ಎನ್ನ ನೆನಹೇ ನಿನಗೆ ಉಪಾಹಾರವಾಗಿ ಗುರುಪುರದ ಮಲ್ಲಯ್ಯನಿಂದನಾಗಿ.

(೧೦). ಉಳ್ಳವರು ಶಿವಾಲಯವ ಮಾಡುವರು. ನಾನೇನ ಮಾಡುವೆನಯ್ಯ? ಬಡವನಯ್ಯ! ಎನ್ನ ಕಾಲೇ ಕಂಭ, ದೇಹವೇ ದೇಗುಲ, ಶಿರ ಹೊನ್ನ ಕಳಶವಯ್ಯ, ನೋಡಯ್ಯ! ಕೂಡಲಸಂಗಮದೇವಯ್ಯ ಕೇಳಯ್ಯ, ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.

(೧೧). ನೇರಿಲದ ಫಲ, ಉತ್ತತ್ತಿ, ಮಾವಿನ ಹಣ್ಣಿನಂತೆ ಇರುವರು ಮರ್ತ್ಯರು. ಹಲಸು, ತೆಂಗು, ದಾಳಿಂಬದಂತೆ ಇರುವರು ಸ್ವರ್ಗರು. ಹಾಲು, ತುಪ್ಪ, ಸಕ್ಕರಿ. ಬೆಲ್ಲದಂತೆ ಇರುವರು ನಿಮ್ಮವರು, ಕಾಡಿನೊಳಗಾದ ಶಂಕರ ಪ್ರಿಯ ಚೆನ್ನ ಕದಂಬಲಿಂಗ ನಿರ್ಮಾಯಪ್ರಭುವೇ.

ಅರ್ಥ:—ನೇರಿಲದ ಹಣ್ಣು, ಉತ್ತತ್ತಿ, ಮಾವಿನ ಫಲ ಸೇವಿಸಿದರೆ, ಮೇಲೆ ರುಚಿಕರವಾಗಿ ತೋರುವದಲ್ಲದೆ ಆ ತ್ರಿವಿಧ ಫಲವ ಒಳಗೆ ನೋಡಿದಡೆ ಕಠಿಣವಾಗಿ ತೋರುವವು. ಹಾಗೆ ಕರ್ಮಜ್ಞಾನಿಗಳಾಗಿ ಕ್ರಿಯೆಯಲ್ಲಿ ಭಕ್ತಿ ಇಲ್ಲದೆ, ಬಾಹ್ಯದಲ್ಲಿ ಆಚರಿಸುವ ಜೀವಾತ್ಮರ ಆಚರಣೆಯು ಲೌಕಿಕಾತ್ಮರಿಗೆ ಮಹಾರಮ್ಯವಾಗಿ ತೋರುವದು. ಅಂತಪ್ಪ ಭಕ್ತರ ಅಂತರಂಗವ ಶಿವಜ್ಞಾನಿಗಳು ಮುಟ್ಟಿ ನೋಡಿದಡೆಯೂ, ಉಕ್ಕಿನ ಸಲಾಕಿಯಂದದಿ ಕಠಿಣವಾಗಿ ತೋರುವದು. ಇಂತಪ್ಪವರು ಭವಭಾರಿಗಳು ಎಂಬುದೀಗ ನೇರಿಲದ ಫಲ, ಉತ್ತತ್ತಿ, ಮಾವಿನ ಹಣ್ಣಿನಂತೆ ಇರುವರು ಮರ್ತ್ಯರು, ಎಂಬ ಶಬ್ದಕ್ಕರ್ಥ. ಹಲಸು ತೆಂಗು ದಾಳಿಂಬ ಮೊದಲಾದ ತ್ರಿವಿಧ ಫಲವು ಬಾಹ್ಯದಲ್ಲಿ ನೋಡಿದಡೆಯೂ ಕಠಿಣವಾಗಿ ತೋರುವದು. ಅಂತರಂಗದಲ್ಲಿ ನೋಡಿದಡೆಯೂ ಸಕಲ ಜನರಿಗೆ ಪ್ರೀತಿಕರವಾಗಿ ತೋರುವವು. ಹಾಗೆ ಭಿನ್ನಭಕ್ತಿಯುಳ್ಳ ಭಕ್ತನು ಗುರುಲಿಂಗ ಜಂಗಮಕ್ಕೆ ಅನ್ನವಸ್ತ್ರ ದ್ರವ್ಯ ಮೊದಲಾದ ಸಕಲ ಪದಾರ್ಥವ ನೀಡಿ ತೃಪ್ತಿಬಡಿಸಬೇಕೆಂಬ ಮಮಕಾರ ಪ್ರೀತಿಮನದಲ್ಲಿ ಉಂಟು, ಬಾಹ್ಯದಲ್ಲಿ ಆ ಗುರುಲಿಂಗ ಜಂಗಮವ ಕಂಡರೆ ಅಡಿಗಡಿಗೆ ಅಡ್ಡ ಬೀಳರು, ಶರಣೆನ್ನರು, ಶರಣೆನ್ನದ ಕಾರಣ ಲೌಕಿಕಾತ್ಮರಿಗೆ ಕಠಿಣವಾಗಿ ತೋರುವರು. ಇಂತಪ್ಪವರು ಫಲದಾಯಕರು ಎಂಬುದೀಗ ಹಲಸು ತೆಂಗು ದಾಳಿಂಬದಂತೆ ಇರುವರು ಸ್ವರ್ಗರು ಎಂಬ ಶಬ್ದಕ್ಕರ್ಥ. ಹಾಲು ತುಪ್ಪ ಸಕ್ಕರಿ ಬೆಲ್ಲವ ಸೇವಿಸಿದರೆ, ಒಳ ಹೊರಗೆ ಸರ್ವಾಂಗವು ಮಹಾರುಚಿಕರವಾಗಿ ಸಕಲ ಜನರಿಗೆ ಪ್ರೀತಿಕರವಾಗಿ ತೋರುವದು. ಹಾಗೆ ಸುಜ್ಞಾನೋದಯವಾಗಿ ಗುರುಕಾರುಣ್ಯವ ಹಡೆದು ಲಿಂಗಾಂಗ ಸಂಬಂಧಿಯಾದ ಶಿವಶರಣರು ಆ ಗುರುಲಿಂಗ ಜಂಗಮದಲ್ಲಿ ಅವಿರಳಭಕ್ತಿಯಿಂ ವಿಶ್ವಾಸ ತುಂಬಿದ ಶಿವಜ್ಞಾನಿಗಳು ಲೌಕಿಕಾತ್ಮರಿಗೆ ತ್ರಿಮೂರ್ತಿಗಳಲ್ಲಿ ಭಿನ್ನಾಚಾರದಿಂ ಗೋಸುಂಬಿ ಫುಳದಂತೆ ರಮ್ಯವಾಗಿ ತೋರರು. ಆ ತ್ರಿಮೂರ್ತಿಗಳಲ್ಲಿ ಸಮರಸಭಾವದಿಂ ಸಕಲಕ್ರಿಯಾಚಾರವನಳಿದು ಪಾಷಾಣದಂತೆ ಕಠಿಣವಾಗಿ ಕಾಣಿಸರು. ಇಂತೀ ಉಭಯವಿಲ್ಲದಿರ್ಪವರು ಎಲೆ ಪರಶಿವಲಿಂಗವೇ ನಿಮ್ಮಲ್ಲಿ ಅವಿರಳ ಸಂಬಂಧಿಯಾದ ಶಿವಯೋಗಿಗಳು ಎಂಬುದೀಗ ಹಾಲು ತುಪ್ಪ ಸಕ್ಕರಿ ಬೆಲ್ಲದಂತೆ ಇರುವರು ನಿಮ್ಮವರು, ಎಂಬ ಶಬ್ದಕ್ಕರ್ಥ.

# ಪ್ರಾಣಲಿಂಗಿಯ ಆಚರಣೆ.

(೧). ಸುಗುಣವೇ ಲಿಂಗಪ್ರಾಣಿಯಯ್ಯ. ದುರ್ಗುಣವೇ ವಾಯು ಪ್ರಾಣಿಯಯ್ಯ. ಸುಗುಣನಿರ್ಗುಣವೆಂಬುಭಯವನತಿಗಳೆದು ಸುಖದುಃಖಾದಿಗಳ ಸಮಾನಗಂಡು, ಹಾಸ್ಯವಿಸ್ಮಯ, ವಿರಹ, ಕರಣ ಹೇಸಿಕೆ ಇಂತೀ ಪ್ರಾಣದ ವಿಷಯ ಭ್ರಾಂತಿಗಳನತಿಗಳೆದು, ಪ್ರಾಣದ ಪೂರ್ವಾಶ್ರಯವನಳಿದು, ಲಿಂಗದ ನೆನಹು ಸಂಬಂಧಿಸಿ, ಲಿಂಗವೇ ಪ್ರಾಣವಾಗಿರಬಲ್ಲಡೆ, ಪ್ರಾಣಲಿಂಗಿಸ್ಥಲವೆಂಬೆನಯ್ಯ, ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೨). ಕ್ರಿಶುದ್ಧವಾದವಂಗೆ ಭಾವಶುದ್ಧ. ಭಾವಶುದ್ಧವಾದವಂಗೆ ಆತ್ಮಶುದ್ಧ. ಆತ್ಮಶುದ್ಧವಾದವಂಗೆ ಅರಿವು ಕರಿಗೊಂಡು ನಿಂದನಿಜವೇ ಪ್ರಾಣಲಿಂಗ ಸಂಬಂಧ ನಿಃಕಳಂಕಮಲ್ಲಿಕಾರ್ಜುನಾ.

(೩). ಸರ್ಪನ ಸಲಹಿದಲ್ಲಿ ಬೇರೆ ವಿಷವ ಸಲಹಲುಂಟೇ? ಸಸಿವೃಕ್ಷಂಗಳ ಸಲಹುವಲ್ಲಿ ಬೇರೆ ಫಲವ ಸಲಹಲುಂಟೇ? ಕ್ರಿಯಾನಿರ್ಧರವಾದಲ್ಲಿ, ಆಚಾರಕ್ಕೆ ಅಂಕುರ. ಆಚಾರ ಅಂಕುರವಾದಲ್ಲಿ ದಿವ್ಯಜ್ಞಾನ ಪಲ್ಲವಿಸಿತ್ತು. ಆ ಪಲ್ಲವದ ಮರೆಯಲ್ಲಿ ಪರತರವಸ್ತು ಫಲವಾಗಿ, ತೊಟ್ಟು ಹರಿದು ಬಿದ್ದ ಹಣ್ಣು ಅಭೇದ್ಯಲಿಂಗಕ್ಕೆ ತೃಪ್ತಿಯಾಯಿತ್ತು. ಇಂತೀ ಭಾವದ ಭ್ರಮೆಯು ಕಳೆದು ಜೀವ ವಿಕಾರವ ಹಿಂಗಿ, ನಾ ನೀನೆಂಬ ಉಭಯದಗುಟ್ಟು ಏನೂ ಇಲ್ಲದೆ ನಿಂದುದು ಪ್ರಾಣಲಿಂಗಿಯ ಸಂಬಂಧ. ಆ ಸಂಬಂಧವ ಸ್ವೀಕರಿಸಿ ನಿಂದುದು ಪ್ರಾಣಲಿಂಗಿಯ ತೃಪ್ತಿ. ಇಂತೀ ನಿಜದಲ್ಲಿ ತಾವು ತಾವಾಗಬಲ್ಲಡೆ, ಆತನೇ ಐಕ್ಯಾನುಭಾವಿ ನಿಃಕಳಂಕಮಲ್ಲಿಕಾರ್ಜುನಾ.

(೪). ಮೂಲದ್ವಾರದ ಬೇರ ಮೆಟ್ಟಿ, ಭೂಮಂಡಲವ ನೇರಿದೆ. ಆಚಾರದ ಬೇರ ಹಿಡಿದು, ಐಕ್ಯದ ತುದಿಯ ನೇರಿದೆ. ವೈರಾಗ್ಯದ ಸೋಪಾನದಿಂದ ಶ್ರೀಗಿರಿಯ ನೇರಿದೆ. ಕೈವಿಡಿದು ತೆಗೆದುಕೊಳ್ಳಾ ಚನ್ನಮಲ್ಲಿಕಾರ್ಜುನಾ.

(೫). ಮಜ್ಜನಕ್ಕೆರೆಯ ಹೇಳಿದರೆ, ನಾನೇನ ಮಜ್ಜನಕ್ಕೆರೆವೆನು? ಒಳಗೊಂದು ಪ್ರಾಣಲಿಂಗವ ಕಂಡೆನಯ್ಯ! ಹೊರಗಣ ಹೂವ ಕೊಯ್ದು, ಹೊರಗೆ ಪೂಜಿಸುವರು. ಉಪಚಾರದ ನೇಮವ ನಾನೊಲ್ಲೆನಯ್ಯ. ಸ್ವಾನುಭಾವದನುವನರಿಯುದವರು ಏತರಸುಖಿ? ಕಪಿಲಸಿದ್ಧ ಮಲ್ಲಿನಾಥನಂಥವರನೊಲ್ಲನಯ್ಯ.

(೬). ಪೃಥ್ವಿಯಪ್ಪು ತೇಜವಾಯ್ವಾಕಾಶ ಪಂಚಭೌತಿಕ ಮನ ಬುದ್ಧಿ ಚಿತ್ತ ಹಂಕಾರ ಚತುಷ್ಟಯ ಕರಣಾದಿ ಗುಣಂಗಳು ಸತ್ವರಜತಮದಲ್ಲಿ ಆತ್ಮನನು ಎತ್ತಲೆಂದರಿಯವು. ಇದನರಿವಡೆ, ಸಮತೆ ಸದಾಚಾರ ಆಶ್ರಯಸ್ಥಾನ ಸಹಸ್ರದಳ ಕಮಲದಲ್ಲಿ ಗುಹೇಶ್ವರನೆಂಬ ಲಿಂಗವು.

**ಅರ್ಥ:**—ಪಂಚಭೂತ ಅಂತಃಕರಣ ಚತುಷ್ಟಯ ಕರಣಾದಿಗುಣಂಗಳು ಸತ್ವರಜತಮವೆಂಬ ಈ ಬಾಹ್ಯಾಂತಃಕರಣದಿಂದ ಆತನ ನೆಲೆಯನರಿಯಬಾರದು. ಮತ್ತೆ ಅರಿವ ಪರಿ ಎಂತೆಂದೊಡೆ, ಸರ್ವಾಂಗವನು ಸಮತೆ ಸದಾಚಾರದಲ್ಲಿ ನಿಲಿಸಲು, ಆ ಬ್ರಹ್ಮರಂಧ್ರದ ಸಹಸ್ರದಳ ಕಮಲದಲ್ಲಿ ಪ್ರಾಣಲಿಂಗ ಪ್ರತಿಷ್ಠೆಯನು ಕಾಣಬಹುದೆಂಬುದೀ ವಚನಾರ್ಥ.

(೭). ಲಿಂಗವೇ ಪ್ರಾಣ, ಪ್ರಾಣವೇ ಲಿಂಗ, ಅಮೃತ ಪಂಚಾಕ್ಷರಂಗಳ ಪಂಚಾಮೃತದಿಂ ಮಜ್ಜನಕ್ಕೆರೆವ. ಆ ಲಿಂಗಕ್ಕೆ ಮನವೇ ಪುಷ್ಪ, ಬುದ್ಧಿಯೇ ಗಂಧ, ಚಿತ್ತವೇ ನೈವೇದ್ಯ, ಅಹಂಕಾರದಿಂದ ಆರೋಗಣೆಯ ಮಾಡಿಸಿ, ಪರಿಣಾಮದ ವೀಳೆಯವನಿತ್ತು, ಸ್ನೇಹದಿಂ ವಂದನೆಯಂ ಮಾಡಿ, ಪ್ರಾಣಲಿಂಗಕ್ಕೆ ಬಹಿರಂಗದ ಪೂಜೆಯಲ್ಲಿ ಅಂತರಂಗದ ಪೂಜೆಯ ಮಾಡುವದು. ಪ್ರಾಣಲಿಂಗಕ್ಕೆ ಅಂತರಂಗದ ವಸ್ತುವನೆಲ್ಲವ ತಂದು, ಬಹಿರಂಗದ ವಸ್ತುವಿನಲ್ಲಿ ಕೂಡಿ, ಲಿಂಗಾರ್ಚನೆಯ ಮಾಡಲು, ಅಂತರಂಗ ಬಹಿರಂಗ ಭರಿತವಾಗಿಪ್ಪನು ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೮). ಹೊರಗನೇ ಕೊಯ್ದು, ಹೊರಗನೆ ಪೂಜಿಸಿದಡೆ, ಪರಿಣಾಮವಿಲ್ಲ, ಪ್ರಯೋಜನವಿಲ್ಲ. ಸುಖ ದೊರಕೊಳ್ಳದು ನೋಡಾ. ಅದೆಂತೆಂದೊಡೆ, ಸರ್ವ ಜೀವಂಗಳಲ್ಲಿ ಹಿಂಸೆಯ ಮಾಡದಿಪ್ಪುದೇ ಪ್ರಥಮ ಪುಷ್ಪ. ಸರ್ವೇಂದ್ರಿಯಂಗಳ ನಿಗ್ರಹಿಸಿ ಕೊಂಡಿರಬಲ್ಲಡೆ, ದ್ವಿತೀಯ ಪುಷ್ಪ. ಸರ್ವಾಹಂಕಾರವರತು, ಶಾಂತನಾಗಿರಬಲ್ಲಡೆ, ತೃತೀಯ ಪುಷ್ಪ. ಸರ್ವ ವ್ಯಾಪಾರವಳಿದು, ನಿರ್ವ್ಯಾಪಾರಿಯಾಗಿರಬಲ್ಲಡೆ, ಚತುಃಪುಷ್ಪ. ದುರ್ಭಾವ ಪ್ರಕೃತಿಯಳಿದು, ಸದ್ಭಾವ ಎಡೆಗೊಂಡಿರಬಲ್ಲಡೆ, ಪಂಚಮ ಪುಷ್ಪ. ಉಂಡು ಉಪವಾಸಿ, ಬಳಸಿ ಬ್ರಹ್ಮಚಾರಿಯಾಗಿರಬಲ್ಲಡೆ, ಷಷ್ಠಮ ಪುಷ್ಪ. ಅನೃತವ ಮರೆದು ಸತ್ಯವ ನುಡಿಯಬಲ್ಲಡೆ, ಸಪ್ತಮ ಪುಷ್ಪ. ಸಕಲ ಪ್ರಪಂಚವಳಿದು, ಶಿವಜ್ಞಾನಸಂಪನ್ನವಾ

ಗಿರಬಲ್ಲಡೆ, ಅಷ್ಟವುು ಪುಷ್ಪ. ಇಂತೀ ಅಷ್ಟದಳಕಮಲದಲ್ಲಿ ಸಹಸ್ರಪೂಜೆಯ ಮಾಡಬಲ್ಲ ಶರಣರು ನಿಮ್ಮ ಪ್ರತಿಬಿಂಬದಂತಿಪ್ಪರು ಕಾಣಾ, ಕೂಡಲಚನ್ನ ಸಂಗಮದೇವಾ.

(೯). ಕಲ್ಲಮರದ ಕೋಡಗದ ತಲೆ ಎಂಟು ಸ್ಥಾನವ ಮೆಟ್ಟಿ ತಿರುಗುವ ತಲೆ ಕಾಲು ಪಕ್ಕವಿಲ್ಲದ ವಿಹಂಗನ ನಡುನೆತ್ತಿ ಸುಳಿ ಏಳು ನಿಲ್ಲಿಸಲು ಹಾಲಬಿಟ್ಟು ಹಾಲಬೇಡುವದು. ಈ ಭೇದವ ತಿಳಿಯಬಲ್ಲಡೆ ಅವರು ಲಿಂಗ ಸಂಬಂಧಿ, ಕಾಡಿ ನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

**ಅರ್ಥ**:—ಜಡರೂಪಮಪ್ಪ ಪಂಚಭೂತ ಮಿಶ್ರವಾದ ದೇಹವೆಂಬ ವೃಕ್ಷ, ಆ ದೇಹವ ನಾಶ್ರಯಿಸಿಕೊಂಡಿರ್ಪ ಸಂಚಲರೂಪವಾದ ಮನವೆಂಬ ಮರ್ಕಟ, ಆ ಮನೋಮರ್ಕಟನ ವೃತ್ತಿಜ್ಞಾನವೆಂಬ ಶಿರಸ್ಸಿನ ಮಧ್ಯದಲ್ಲಿ ಅಷ್ಟ ಸ್ಥಾನವೆಂಬ ಅಷ್ಟದಳಯುಕ್ತವಾದ ಅಜ್ಞಾನವೆಂಬ ಕುಸುಮ, ಆ ಕುಸುಮದ ದಳ ಪ್ರಕೃತಿವಿಡಿದು ಸಂಚರಿಸುವ ಸುಜ್ಞಾನವೆಂಬ ಶಿರಸ್ಸು, ಸಚ್ಚಾರಿತ್ರವೆಂಬ ಚರಣ, ಜ್ಞಾನಕ್ರಿಯೆಯೆಂಬ ಉಭಯರಕ್ಕೆ, ಇಂತೀ ತ್ರಿವಿಧವು ನಿಷ್ಕ್ರಿಯವಾದ ಜೀವಾತ್ಮನೆಂಬ ಹಂಸನು ಎಂಬುದೀಗ ಕಲ್ಲುಮರದ ಕೋಡಗದ ತಲೆ ಎಂಟು ಸ್ಥಾನವ ಮೆಟ್ಟಿ ತಿರುಗುವ ತಲೆ ಕಾಲು ಪಕ್ಕವಿಲ್ಲದ ವಿಹಂಗವೆಂಬ ಶಬ್ದಕ್ಕರ್ಥ. ಅಂತಪ್ಪ ಮನೋಕಮಲದ ಅಷ್ಟದಳದ ಪ್ರಕೃತಿ ವಿಡಿದು ಚರಿಸುವ ಜೀವ ಹಂಸನ ಚಾರಿತ್ರವೆಂತೆಂದೊಡೆ, ಇಂದ್ರದಳಕ್ಕೇರಲು ಧರ್ಮಿಯಾಗಿಹನು. ಅಗ್ನಿ ದಳಕ್ಕೇರಲು ಸುತೃಷೆ ಎಡೆಗೊಂಡು ಕ್ರೋಧಿಯಾಗಿಹನು. ಯಮದಳಕ್ಕೇ ರಲು ಮತ್ಸರಿಯಾಗಿ ಕರ್ಮವ ಬಯಸುವನು. ನೈಋತ್ಯದಳಕ್ಕೇರಲು ನಯನುಡಿ ಮೃದುವಾಕ್ಯಗಳಿಂದ ಮಾತನಾಡುವನು. ವಾಯುದಳಕ್ಕೇರಲು ಸುಂಟರಗಾಳಿ ಯರವದಿಯಂತೆ ಸಂಚಲರೂಪನಾಗಿ ಒಂದು ಸ್ಥಾನದಲ್ಲಿ ಸುಸ್ಥಿರವಾಗಿ ನಿಲ್ಲದೆ ಸಂಚರಿಸುವನು. ವರುಣದಳಕ್ಕೇರಲು ಆನೆ ಕುದುರೆ ಪಲ್ಲಕ್ಕಿ ಮೊದಲಾದ ವಾಹ ನವ ನಿಚ್ಛೈಸುವನು. ಕುಬೇರದಳಕ್ಕೇರಲು ಧನಧಾನ್ಯ ದ್ರವ್ಯವನಿಚ್ಛೈಸುವನು ಈಶಾನ್ಯದಳಕ್ಕೇರಲು ಕಾಮಾತುರನಾಗಿ ಸ್ತ್ರೀಯರ ನಿಚ್ಛೈಸುವನು. ಅದಲ್ಲದೆ, ಪಂಚಕರಣ ವಿಷಯ ಸಪ್ತವ್ಯಸನ ಮೊದಲಾದ ಸಕಲ ಕರ್ಣಂಗಳ ವಿಷಯ್ಯ ನಿಚ್ಛೈಸುವನು. ಇಂತಪ್ಪ ಅಷ್ಟದಳದಲ್ಲಿ ಅಷ್ಟವಿಧಲಿಂಗವ ಸಂಬಂಧಿಸಿ, ಆ ಅಷ್ಟದಳ ಜೀವನ ಪ್ರಕೃತಿಯನಷ್ಟವಮಾಡಿ ನಡುನೆತ್ತಿಸುಳಿ ಎಂದಷ್ಟೆ ಆ

ಮನೋಮರ್ಕಟನ ವೃತ್ತಿಜ್ಞಾನ ಮಧ್ಯದಲ್ಲಿರುವ ಸುಜ್ಞಾನ, ಆ ಸುಜ್ಞಾನಸ್ವರೂಪವಾದ ಪ್ರಾಣಲಿಂಗೆಂಬ ಇಷ್ಟಲಿಂಗದ ಸತ್ಕ್ರಿಯಾಚಾರದಲ್ಲಿ ಜೀವಭಾವವನಳಿದು ಸಜ್ಜೀವಸ್ವರೂಪನಾದಾತ್ಮನೆಂಬ ಹಂಸನ ನಿರ್ಧರಿಸಲು, ಆ ಸಜ್ಜೀವಾತ್ಮಸ್ವರೂಪವಾದ ಜ್ಞಾನಕಲಾತ್ಮನು ಸಂಸಾರಸಾರೆಂಬ ಹಾಲನು ವಿಸರ್ಜಿಸಿ ಆ ಪ್ರಾಣಲಿಂಗವೆಂಬ ಇಷ್ಟಬ್ರಹ್ಮದ ಪರಮಾಮೃತವೆಂಬ ಹಾಲನ ಬಯಸುವದು ಎಂಬುದೀಗ ನಡುನೆತ್ತಿ ಸುಳಿಯೊಳು ನಿಲ್ಲಿಸಲು ಹಾಲಬಿಟ್ಟು ಹಾಲಬೇಡುವದು ಎಂಬ ಶಬ್ದಕ್ಕರ್ಥ. ಇಂತಪ್ಪ ವಿಚಾರವನು ಸ್ವಾನುಭಾವ ಗುರುಮುಖದಿಂ ತಿಳಿದಾತನೇ ಪ್ರಾಣಲಿಂಗಿ ಎಂಬುದೀಗ ಈ ಭೇದವ ತಿಳಿಯಬಲ್ಲಡೆ ಅವರು ಲಿಂಗ ಸಂಬಂಧಿ ಎಂಬ ಶಬ್ದಕ್ಕರ್ಥ.

(೧೦). ತಂಗಳ ಬುತ್ತಿಯ ಕಟ್ಟಿ ಹೊಟ್ಟೆಯ ಮೇಲಿಟ್ಟುಕೊಂಡರೆ ಹಸಿವು ಹೋಗಿ ಅಪ್ಯಾಯನವಡಗುವದೇ? ಅಂಗದ ಮೇಲೆ ಲಿಂಗವಿದ್ದೇನು ಫಲ? ಲಿಂಗವೂ ಅಂಗವೂ ಕೂಡುವ ಈ ಭೇದವನರಿಯದವರು ಗುರುತಲ್ಪಕರು, ಪಂಚಮಹಾಪಾತಕರು. ಅದೆಂತೆಂದೊಡೆ, ದ್ವೈತಂ ಭಾವಿತ ದುಃಖಾನಾಮ ದ್ವೈತಂ ಪರಮಂ ಪದಂ । ಭಾವಮನ್ನಂ ಪಥಶಾಂತೆ ತದ್ಭುಂಕ್ತೆ ಸುಖವಾಹಕಂ॥ ಮತ್ತೆಯುಂ, ಅಂಗೇನಲಿಂಗ ಸಂಬಂಧಂ ಲಿಂಗೇನಪ್ರಾಣ ಸಂಯುತಂ । ನಿಮಿಷಾರ್ಧವಿಯೋಗೇನ ನರಕೇಕಾಲಮಕ್ಷಮಂ ॥ ಎಂದುದಾಗಿ ಅಂಗದಲ್ಲಿ ಲಿಂಗ ಒಡಗಲಿಸಬೇಕು, ಲಿಂಗದಲ್ಲಿ ಅಂಗ ಒಡಗಲಿಸಬೇಕು. ಇದು ಕಾರಣ ಎಲ್ಲರೂ ಅಂಗ ಸಂಬಂಧಿಗಳಲ್ಲದೆ, ಲಿಂಗ ಸಂಬಂಧಿಗಳು ಅಪೂರ್ವ ಕಾಣಾ ಕೂಡಲಸಂಗಮದೇವಾ.

(೧೧). ಕಾಯ ಜೀವದ ಕೀಲನರಿದು, ಜನನಮರಣಂಗಳ ಆಯಾಸವಳಿದು, ಅಂಗಲಿಂಗದೊಳಗೆ ಏಕಾರ್ಥವ ಮಾಡುವ ಭೇದವೆಂತೆಂದೊಡೆ, ಪಂಚಭೂತಂಗಳ ಪೂರ್ವಾಶ್ರಯವನಳಿದು, ಪಂಚಕರಣಂಗಳ ಹಂಚುಹುರಿ ಮಾಡಿ, ಕರ್ಮಬುದ್ಧೇಂದ್ರಿಯಂಗಳ ಮರ್ದಿಸಿ, ದಶವಾಯುಗಳ ಕೆಡಿಸಿ, ಕರಣ ಚತುಷ್ಟಯಗಳ ಕಾಲಮುರಿದು, ಪಂಚವಿಷಯ ತತ್ವಂಗಳ ವಂಚನೆಯನಳಿದು, ಹಸ್ತನಾಡಿಗಳ ವ್ಯತಿಕರಿಸಿ, ಅಷ್ಟತನು ಅಷ್ಟಾತ್ಮಗಳ ನಷ್ಟಮಾಡಿ, ಅಂತರಂಗದ ಅಷ್ಟಮದಗಳನ್ನು ತರಿದು, ಬಹಿರಂಗದ ಮದಂಗಳ ಬಾಯ ಟೊಣೆದು, ಅಷ್ಟಮೂರ್ತಿ ಮದಂಗಳ ಹೊಟ್ಟೆ ಗುಟ್ಟಿ, ಸಪ್ತವ್ಯಸನಂಗಳ ಬಾಸಣಿಸಿ,

ಷಡೂರ್ಮಿ ಷಡ್ವರ್ಗಂಗಳ ಕೆಡೆಮೆಟ್ಟಿ, ಷಡ್‌ಭ್ರಮೆ ಷಡ್ಭಾವದ ವಿಕಾರಂಗಳ ಗಂಟು ಸಡಿಲಿಸಿ, ಪಂಚಕ್ಲೇಶಂಗಳ ಪರಿಹರಿಸಿ, ಅಂಗಚತುಷ್ಟಯಂಗಳ ಶೃಂಗಾರವನಳಿದು, ಗುಣತ್ರಯಂಗಳ ಗೂಡ ಮುಟ್ಟಿ, ಅಹಂಕಾರತ್ರಯಂಗಳ ಶಂಕೆಗೊಳಗುಮಾಡಿ, ತಾಪತ್ರಯಂಗಳ ಭಿನ್ನಮಾಡಿ, ತಲ್ಲಣಗೊಳಿಸಿ, ತನುತ್ರಯಂಗಳ ತರಹರಮಾಡಿ, ಜೀವತ್ರಯಂಗಳ ಆತ್ಮತ್ರಯಂಗಳ ಧಾತುಗೆಡಿಸಿ, ಅವಸ್ಥಾತ್ರಯಂಗಳ ಅವಗುಣವನಳಿದು, ತ್ರಿದೋಷಂಗಳು ಪಲ್ಲಟವಾಗಿ, ಭಾವತ್ರಯಂಗಳ ಬಣ್ಣಗೆಡಿಸಿ, ದುರ್ಭಾವತ್ರಯಂಗಳ ದೂರಮಾಡಿ, ಮಲತ್ರಯಂಗಳ ಮರ್ದನಮಾಡಿ, ಕರಣಂಗಳ ಛಿದ್ರಗೊಳಿಸಿ, ಪಂಚಾಗ್ನಿಗಳ ಸಂಚಲವನತಿಗಳೆದು, ಇಂತೀ ಅಂಗನ ಪ್ರಕೃತಿ ಗುಣಂಗಳು ನಷ್ಟವಾಗಿ, ಸರ್ವಾಂಗದಲ್ಲಿ ಸರ್ವಾಚಾರ ನೆಲೆಗೊಂಡು, ಬಹಿರಂಗದ ಮೇಲಿರ್ಪ ಇಷ್ಟಲಿಂಗದಲ್ಲಿ ನೈಷ್ಠಿಕಾಭಾವದಿಂದ ಇಂಬುಗೊಂಡು, ಅನಿಮಿಷದೃಷ್ಟಿ ಅಚಲಿತವಾಗಿ ಬಲಿದಿರಲು, ಆ ಲಿಂಗವು ಅಂತರಂಗಕ್ಕೆ ವೇಧಿಸಿ, ಪ್ರಾಣಲಿಂಗವೆನಿಸಿಕೊಂಡು, ಷಡಾಚಾರ ಚಕ್ರಂಗಳಲ್ಲಿ ಷಡ್ವಿಧಲಿಂಗವಾಗಿ ನೆಲೆಗೊಂಬುದು. ಆ ಷಡ್ವಿಧ ಲಿಂಗಕ್ಕೆ ಷಡಿಂದ್ರಿಯಂಗಳನೆ ಷಡ್ವಿಧ ಮುಖಂಗಳೆಂದೆಣಿಸಿ, ಆ ಷಡ್ವಿಧ ಮುಖಂಗಳಿಗೆ ಷಡ್ವಿಧ ದ್ರವ್ಯಪದಾರ್ಥಂಗಳೆಂದೆನಿಸಿ, ಷಡ್ವಿಧ ದ್ರವ್ಯ ಪದಾರ್ಥಂಗಳನ್ನು ಷಡ್ವಿಧ ಲಿಂಗಕ್ಕೆ ಷಡ್ವಿಧ ಭಕ್ತಿಯಿಂದ ಸಮರ್ಪಿತವಾಗಲು, ಅಂಗವೆಂಬ ಕರುಹಡಗಿ, ಒಳಹೊರಗೆಲ್ಲ ಮಹಾಲಿಂಗದ ದಿವ್ಯಪ್ರಕಾಶವೇ ತುಂಬಿ ತೊಳಗಿ ಬೆಳಗುತಿರ್ದುದು. ಇಂತಪ್ಪ ಘನಲಿಂಗದ ಬೆಳಗನೊಳಕೊಂಡಿರ್ಪ ಭೇದವೇ ಚಿತ್‌ಪಿಂಡವೆನಿಸುವುದು. ಇಂತಪ್ಪ ಅತಿಸೂಕ್ಷ್ಮವಾದ ಚಿತ್‌ಪಿಂಡದ ವಿಸ್ತಾರವನು ಚಿದ್ಬ್ರಹ್ಮಾಂಡದಲ್ಲಿ ವೇಧಿಸುವುದು. ಆ ಚಿತ್‌ಬ್ರಹ್ಮಾಂಡದ ಅತಿ ಬಾಹುಳ್ಯವನ್ನು ಆ ಚಿತ್ಪಿಂಡದಲ್ಲಿ ವೇಧಿಸಿಕೊಂಡು, "ಪಿಂಡಬ್ರಹ್ಮಾಂಡಯೋರೈಕ್ಯ" ವೆಂಬ ಶೃತಿ ಪ್ರಮಾಣದಿಂದೆ, ಆ ಪಿಂಡಬ್ರಂಹ್ಮಾಂಡಗಳು ಒಂದೇ ಎಂದು ಕಂಡು, ಆ ಪಿಂಡ ಬ್ರಹ್ಮಾಂಡಗಳಿಗೆ ತಾನೇ ಆಧಾರವೆಂದು ತಿಳಿದು, ಆಪಿಂಡಬ್ರಹ್ಮಾಂಡವ ಮನದ ಕೊನೆಯಲ್ಲಿ ಅಡಗಿಸಿ, ಜ್ಞಾನವ ಮಹಾಜ್ಞಾನದಲ್ಲಿ ಅಡಗಿಸಿ, ಮಹಾಜ್ಞಾನವನ್ನು ಪರಾತ್ಪರವಾದ ಪರಿಪೂರ್ಣ ಬ್ರಹ್ಮದಲ್ಲಿ ಅಡಗಿಸಿ, ಆ ಪರಬ್ರಹ್ಮವೇ ತಾನಾದ ಶರಣಂಗೆ ದೇಹಭಾವವಿಲ್ಲದೆ ಹೋಗಿ, ಭಾವವಿಲ್ಲವಾಗಿ, ಜೀವಭಾವವಿಲ್ಲವಾಗಿ, ಫಲಪದದ ಹಂಗಿಲ್ಲವಾಗಿ, ಭವಬಂಧನಗಳು ಮುನ್ನವೇ ಇಲ್ಲವಾಗಿ,

ಆ ಶರಣನು ತಾನು ಎಂತಿರ್ದನಂತೆ ಪರಬ್ರಹ್ಮವೇ ಆಗಿ, ಆತನ ಹೃದಯಾಕಾಶವು ಬಚ್ಚಬಯಲ ಬರಿಯಚ್ಚ ಬಯಲನೈದಿರ್ಪುದು. ಇದು ಕಾರಣ, ಆ ಶರಣನು ದೇಹವಿರ್ದು ಸುಟ್ಟರುವಿಯಂತೆ, ನಿರ್ದೇಹಿಯಾದ ಕಾಣಾ. ಉಪಮಾತೀತ ವಾಙ್ಮನಕ್ಕೆ ಅಗೋಚರವಾಗಿರ್ಪನಯ್ಯ. ಪರಾತ್ಪರ ವಸ್ತುವಿನೊಡಗೂಡಿದ ಪ್ರಾಣಲಿಂಗಿಯ ಒಡಲ ಬೆಳಗಿನ ಗಡಣವೆಂತಿರ್ಪುದೆಂದಡೆ, ಸ್ಫಟಿಕದ ಘಟದೊಳಗೆ ಜ್ಯೋತಿಯನಿರಿಸಿದಂತೆ, ಕತ್ತಲೆಯ ಮನೆಯಲ್ಲಿ ರತ್ನವ ಹರಹಿದಂತೆ, ರತ್ನದ ಸಿರಿಗೆ ರವಿಕೋಟಿ ಕಿರಣಗಳು ಮುಸುಕಿದಂತೆ, ಬೆಳಬೆಳಗು ಹಳಚಿ, ಮಹಾಬೆಳಗಿನೊಬ್ಬುಳಿಯ ನೊಳಕೊಂಡ ಜನಗಂಭೀರವಾದ ಪ್ರಾಣಲಿಂಗಿಗಳ ಪಾದಕಮಲದಲ್ಲಿ ಸಮತೆ ತುಂಬಿ ಇರಿಸಯ್ಯ ಎನ್ನ ಅಖಂಡೇಶ್ವರಾ.

---

## ಶಿವಯೋಗದ ಸಾಮಾನ್ಯ ಸ್ವರೂಪು.

### ( ಲಿಂಗಸಾಧನೆ. )

(೧). ಅಯ್ಯಾ, ಸ್ಥೂಲ, ಸೂಕ್ಷ್ಮ, ಕಾರಣ ಮಯಂಗಳಲ್ಲಿ ಇಷ್ಟ ಪ್ರಾಣಭಾವಂಗಳಲ್ಲಿ ಉಚಿತವನರಿದು ಮಾಡುವದೇ ಶಿವಯೋಗ. ಆ ಯೋಗವ ಪ್ರಯೋಗಿಸಿ ನಿಂದಲ್ಲಿ ಕಾಲಾಂತಕ ಭೀಮೇಶ್ವರಲಿಂಗದಲ್ಲಿ ಉಭಯುವನಳಿದ ಭಾವವು.

(೨). ಮೂಲಾಧಾರ ಮಧ್ಯದಲ್ಲಿ ಮುಟ್ಟಿ, ಪ್ರಾಣಾಪಾನಂಗಳು ಅವಲ್ಲಿ ಮನಸಹಿತ ಲಯವಾದರೆ, ಆ ಲಯಕಾರಣವಾದುದು ಪ್ರಾಣಲಿಂಗ. ಆ ಪ್ರಾಣಲಿಂಗದ ನೆಲೆಯನರಿಯದೆ ಏನಮಾಡಿದರೂ ಫಲದಾಯಕಭಕ್ತಿಯಲ್ಲದೆ, ಮುಕ್ತಿ ಇಲ್ಲ. ಇದು ಕಾರಣ ಪ್ರಾಣಲಿಂಗವನರಿದು ಮನಶಕ್ತಿಸಂಯೋಗವ ಮಾಡಿ ಮುಕ್ತರಹುದಯ್ಯ ಸ್ವತಂತ್ರಸಿದ್ಧಲಿಂಗೇಶ್ವರಾ.

(೩). ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಎಂಬ ಷಡಾಧಾರ ಚಕ್ರಂಗಳಲ್ಲಿ ವರ್ಣದಳ ಅಕ್ಷರ ಅಧಿದೇವತೆಯರಲ್ಲಿ ಕೂಡಿ ತೋರುವ ವಸ್ತು ಒಂದಲ್ಲದೆ ಹಲವುಂಟೇ? ಚಕ್ರಚಕ್ರದಲ್ಲಿ ಲೆಖ್ಖಕ್ಕೆ ಒಳಗಾಗಿ ನಾಮರೂಪಿಂಗೆ ಬಂದು ಸಿಕ್ಕಿದೆಯಲ್ಲಾ! ಯೋಗಿಗಳ ಮನದಲ್ಲಿ ಲಕ್ಷವಿಲ್ಲದ ನಿರ್ಲಕ್ಷಕ್ಕೆ ಬಂದ ಪರಿ ಏನು ಹೇಳಾ! ಕಾಣಬಾರದ ವಸ್ತುವ ಕಾಣಿಸಿ ಹಿಡಿ

ದರು ಶರಣರು. ಭೇದಿಸಬಾರದ ವಸ್ತುವ ಭೇದಿಸಿ ಕಂಡರು, ಸಾಧಿಸಬಾರದ ವಸ್ತುವ ಸಾಧಿಸಿ ಕಂಡರು ನಿಜಗುರು ಸ್ವತಂತ್ರಸಿದ್ಧಲಿಂಗೇಶ್ವರಾ, ನಿಮ್ಮ ಶರಣರು.

(೪). ಒಡಲೆಂಬ ಗುಡಿಯೊಳಗೆ ಒಡೆದು ಮೂಡಿದ ಲಿಂಗವಿದ್ದೆಡೆಯ ನೋಡಲೆಂದು ಹೋದರೆ ನೋಡುವ ನೋಟವೆಲ್ಲ ತಾನೆಯಾಯಿತ್ತು. ಈ ಬೆಡಗು ಬಿನ್ನಾಣದ ಲಿಂಗವ ತುಡುಕಿ ಹಿಡಿದು ಕೂಡಬಲ್ಲಾತ ಮೃಡನಲ್ಲದೆ ಮಾನವನಲ್ಲ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೆಂಬ ನಿಧಾನವ ಸಾಧಿಸಿ ನಾನು ಬದುಕಿದೆನು.

(೫). ಆಜ್ಞಾಚಕ್ರದ ಮಧ್ಯಹೃದಯದಲ್ಲಿ ಭರಿತನಾಗಿ, ನಾದಬಿಂದು ಕಲೆ ಎಂಬ ದಿವ್ಯಪೀಠದ ಮೇಲೆ ತೋರುತ್ತ, ತನ್ನ ಕಲೆಯನೆಲ್ಲ ದ್ವಾರಂಗಳಲ್ಲಿ ಬೀರುತ್ತ, ಮತ್ತೆಲ್ಲವ ಮೀರಿದ ನಿರ್ಮಲಶಿವಲಿಂಗ ರೂಪು ತಾನೇ ಪರಮಪದವು. ಆ ಪರಮಪದವನರಿದ ನಿರ್ಮಲಜ್ಞಾನಿಯೇ ನಿಜಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೬). ಆತ್ಮಪರಮಾತ್ಮಯೋಗವನರಿದೆನೆಂಬುವ ಮಾತಿನ ಮೊದಲು ಜ್ಯೋತಿಯೊಳಗೆ ಆತ್ಮಜ್ಯೋತಿಯನರಿದು, ಮಾತಿನೊಳಗಣ ಪರಮಾತ್ಮನನರಿದಂಗಲ್ಲದೆ, ಆತ್ಮಪರಮಾತ್ಮ ಯೋಗವನರಿಯಬಾರದು. ಆತ್ಮಪರಮಾತ್ಮ ಯೋಗವನರಿದಂಗಲ್ಲದೆ, ಅರಿವು ಮರವೆಗಳು ನಷ್ಟವಾಗವು. ಅರಿವು ಮರವೆಗಳು ನಷ್ಟವಾದಲ್ಲದೆ ಮಾಯೆಹಿಂಗದು. ಮಾಯೆಹಿಂಗಿದಲ್ಲದೆ ಹಮ್ಮುನಷ್ಟವಾಗದು. ಹಮ್ಮುನಷ್ಟವಾದಲ್ಲದೆ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಅದೇ ಜೀವಪರಮೈಕ್ಯವು.

(೭). ಆಶೆ ರೋಷ ಹರುಷಾದಿಗಳೆಂಬ ಕರಣೇಂದ್ರಿಯಂಗಳ ಮುಟ್ಟಲೀಯ್ಯದೆ ಆಚಾರ ಶಿವಾಚಾರವ ಮಾಡುವೆ. ಭಯಭಕ್ತಿಯಿಂದ ತೋರುವೆ. ಮನದಲ್ಲಿ ವಂಚನೆ ಇಲ್ಲದೆ, ಭಾವಶುದ್ಧ ಪೂಜೆಯ ಮಾಡುವೆ. ಎನ್ನ ಪ್ರಾಣಶಕ್ತಿಯಿಂದ ಕೂಡುವೆ ಕೂಡಲಸಂಗಮದೇವರ.

(೮). ನಿಜ ಶಿವಯೋಗಿಯ ನೋಟವೇ ಕೂಟ. ಕೂಟವೇ ಪ್ರಾಣ. ಏಕವೇ ಸಮರಸ. ಸಮರಸವೇ ಲಿಂಗಾಂಗ ಪರಿಪೂರ್ಣ. ಪರಿಪೂರ್ಣವೇ

ಪರಬ್ರಹ್ಮ ತಾನೇ ನೋಡಾ. ಅದೆಂತೆಂದೊಡೆ, ಸಾಕ್ಷಿ:—ನೇತ್ರಬೇವೋ ನ ಚ ಪರಃ ನೇತ್ರಂ ಚ ಸರ್ವಮೇವ ಚ । ನೇತ್ರಮಧ್ಯೋದ್ಭವೇ ಲಿಂಗಂ ನೇತ್ರ ಮಧ್ಯೋದ್ಭವೇ ತ್ರಿಶುಭಂ ॥ ದ್ವಿನೇತ್ರಂ ಕು ಚ ಯೋರ್ಲಿಂಗಂ ಚಕ್ಷುಸ್ಯ ಶಿವ ಪುಷ್ಪ ಚ । ಲಿಂಗಜ್ಯೋತಿಸ್ಥಿತೆನೇತ್ರಂ ಲಿಂಗಾಭಿಷೇಕ ಚಕ್ಷುಯಃ ॥ ಇಂತು ತನ್ನ ತಾನೇ ಬೆಳಗುತಿರ್ಪುದು ನೋಡಾ ಗುಹೇಶ್ವರಲಿಂಗವು.

(೯). ಅಂತರಂಗದಲ್ಲಿ ಬೆಳಗುವ ಜ್ಯೋತಿರ್ಲಿಂಗವು ಸರ್ವ ಜ್ಯೋತಿಸ್ಸುಗಳಿಗೆ ಪರಮಾಶ್ರಯ ತಾನಾಗಿ, ಒಳಹೊರಗೆ ತೆರಹಿಲ್ಲದೆ ವ್ಯಾಪಿಸಿ, ಮನದ ನೆನಹಿನ ವಿಶ್ರಾಮಕ್ಕೆ ಸ್ಥಾನವಾದ ಜ್ಯೋತಿರ್ಲಿಂಗವ ನೆನೆದು ಸುಖಿಯಾದೆ ಎನ್ನ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಾ.

(೧೦). ಇಂದ್ರಿಯಂಗಳುಳ್ಳನ್ನಕ್ಕರ, ಪ್ರಾಣಂಗೆ ಬಂಧನಮಾಣ್ಬುದೇ? ಭವದುಃಖಿಗಳಿರ, ಇಂದ್ರಿಯಂಗಳನೆಲ್ಲವ ಲಿಂಗಸಂಧಾನವ ಮಾಡಬಲ್ಲರೆ, ಪ್ರಾಣದ ಬಂಧನ ಬಿಟ್ಟೋಡುವವು ನೋಡಾ. ಪ್ರಾಣಲಿಂಗಿಯಾಗಿಯಲ್ಲದೆ, ಪ್ರಳಯುವ ಗೆಲಬಾರದು. ಪ್ರಳಯದ ಹಳಿಯರಪ್ಪರ ಪ್ರಾಣಲಿಂಗ ಸಂಬಂಧಿಗಳೆಂತೆಂಬೆನಯ್ಯ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ?

(೧೧). ಹರಿವಮನ ವಾಯುವ ನೊಂದು ಹುರಿಯುಮಾಡಿ, ಮನವ ಸ್ಥಿರಗೊಳಿಸಿ, ಸಗುಣಧ್ಯಾನದಲ್ಲಿ ಮನವ ಸವಿದು, ನಿರ್ಗುಣದಲ್ಲಿ ನಿಂದು, ಆ ನಿರ್ಗುಣ ಧ್ಯಾನಬಲಿದು, ಸಗುಣ ನಿರ್ಗುಣದಲ್ಲಿ ಅಡಗಿ ಆ ನಿರ್ಗುಣವಾದ ನಿಜದಲ್ಲಿ ಮನೋಲಯವಾದುದೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಪರಮ ರಾಜಯೋಗ.

(೧೨). ರೂಪು ಲಿಂಗವೋ, ನಿರೂಪು ಲಿಂಗವೋ, ಎಂಬುದ ವಿವರಿಸಿ ತಿಳಿದು ನೋಡಿ, ರೂಪಲಿಂಗದಲ್ಲಿ ತ್ರಿಭುವನಾಧಾರದ ಶಿವಕಲಾರೂಪ ಚೈತನ್ಯ ನಿರೂಪಲಿಂಗವ ಭಾವಿಸಿ, ಧ್ಯಾನಪೂಜೆಯ ಮಾಡಿ, ಕೋಟಿಸೂರ್ಯ ಪ್ರಕಾಶ ಚಿದ್ರೂಪ ಶಿವಲಿಂಗವ ನೆನಹಿನ ಕೊನೆಯ ಮೇಲಿರಿಸಿ ನೆನೆದು, ನಿತ್ಯ ತೃಪ್ತರಾದ ಸದಾನಂದರೂಪ ಶಿವಯೋಗಿಯ ಯೋಗನಿದ್ರಾ ಮುದ್ರೆಯಲ್ಲಿ ತಾನಿದಿರೆಂಬುದ ಹುಗಿದು, ಭಿನ್ನವಿಲ್ಲದೆ ಶಿವಸುಖದೊಳಗಿಹನು, ನಿಜಗುರುಸ್ವತಂತ್ರ ಸಿದ್ಧಲಿಂಗೇಶ್ವರಾ ನಿಜೈಕ್ಯ ಶರಣನು.

(೧೩). ಶಿರದೊಳಗೆ ಶಿರ, ಕರದೊಳಗೆ ಕರ, ಕರಣದೊಳಗೆ ಕರಣ, ಕಂಗಳೊಳಗೆ ಕಂಗಳು, ಕರ್ಣದೊಳಗೆ ಕರ್ಣ, ಘ್ರಾಣದೊಳಗೆ ಘ್ರಾಣ, ಜಿಹ್ವೆಯೊಳಗೆ ಜಿಹ್ವೆ, ಪಾದದೊಳಗೆ ಪಾದವ ಕೂಡಿ, ಆತ್ಮನು ಜ್ಯೋತಿರ್ಲಿಂಗದೊಳಗೆ ಸ್ವರೂಪಾದನು ಎನಲು, ಜ್ಯೋತಿರ್ಲಿಂಗ ಸಂಗದಿಂದ ಜ್ಯೋತಿಸ್ವರೂಪಾಗಿ ಶಿವನ ನೆನೆವುತ್ತಿಹುದು. ಜ್ಯೋತಿರ್ಲಿಂಗ ಸಂಗದಿಂದ ಶರಣರೊಡನಾಡುವ ನಿನ್ನ ಬೆಡಗಿನ ಲೀಲೆಯನಾರು ಬಲ್ಲರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮ ಶರಣಂಗೆ?

(೧೪). ಧ್ಯಾತೃ, ಧ್ಯಾನ, ಧ್ಯೇಯವೆಂಬ ತ್ರಿವಿಧದ ಭೇದವನರಿದು, ಪದ, ಮಂತ್ರ, ವಾಕ್ಯ, ಪಿಂಡ ಸ್ವಾತ್ಮಚಿಂತನೆ ರೂಪ, ಸರ್ವ ಚಿದ್ರೂಪ, ರೂಪಾತೀತ, ನಿರಂಜನಧ್ಯಾನ, ಚತುರ್ವಿಧವನರಿದು, ಒಂದುಮಾಡಿ, ಧ್ಯಾತೃ ಧ್ಯಾನದೊಳಡಗಿ, ಧ್ಯಾನ ಧ್ಯೇಯದೊಳಡಗಿ, ಧ್ಯೇಯವು ತನ್ನಲ್ಲಿ ತಾನೇ ವಿಶ್ರಮಿಸಿ ನಿಂದಿತ್ತಯ್ಯಾ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೧೫). ಎನ್ನ ರೇಚಕ, ಪೂರಕ, ಕುಂಭಕವೆಲ್ಲ ಶಿವಮಂತ್ರಮಯವಾಗಿ ಸಂಚರಿಸುತಿಪ್ಪವು ನೋಡಾ. ಎನ್ನ ಪೂರಕವೇ 'ಓಂ' ಎಂಬ ಪ್ರಣವ ಸ್ವರೂಪವಾಗಿಪ್ಪುದು. ಎನ್ನ ರೇಚಕವೇ 'ನಮಃ ಶಿವಾಯ' ಎನುತಿಪ್ಪುದು ನೋಡಾ. ಎನ್ನ ಕುಂಭಕವೇ ಪರಶಕ್ತಿಮಯವಾಗಿ ಪರಂಜ್ಯೋತಿಸ್ವರೂಪವಾಗಿ ಪರಮ ಚಿದ್ಬ್ರಾಂಡಸ್ಥಾನವಾಗಿಪ್ಪುದು ನೋಡಾ. ಎನ್ನ ರೇಚಕ ಪೂರಕ ಕುಂಭಕಸ್ವರೂಪಮಪ್ಪ ಶಿವಮಂತ್ರವೇ ಶಿವಲಿಂಗಸ್ವರೂಪವಾಗಿ, ಎನ್ನ ಕರಸ್ಥಲದಲ್ಲಿ ಕರತಲಾಮಲಕವಾಗಿ ಕಾಣಲ್ಪಟ್ಟಿತ್ತಯ್ಯಾ. ಆ ಕರಸ್ಥಲಲಿಂಗವ ಕಂಗಳು ತುಂಬಿ ನೋಡಿ, ಮನಮುಟ್ಟಿ ನೆನೆದು, ಸಂದಿಲ್ಲದೆ, ಇಷ್ಟಲಿಂಗದಲ್ಲಿ ಭಾವ ಬಲಿದು ಲಿಂಗವನಪ್ಪಿ, ಅಗಲದೆ ಲಿಂಗದಲ್ಲಿ ಸದಾಸನ್ನಿಹಿತನಾಗಿರ್ದು 'ಶಿವ ಶಿವಾ' 'ಹರಹರಾ' ಎನುತಿರ್ದೆನಯ್ಯಾ. ನಿಮ್ಮ ನೆನಹುಂಟೆ ನಿಮ್ಮ ನೆನೆವುತಿರ್ದೆನು ಕಾಣಾ ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ.

---

# ಶಿವಯೋಗಸಾಧನೆಯ ತತ್ವಗಳು.

## (೧) ಆಚಾರದಲ್ಲಿ.

(೧). ಅಯ್ಯಾ, ಪ್ರವೃತ್ತಿ ಮಾರ್ಗದಲ್ಲಿ ಚರಿಸುವಲ್ಲಿ, ಅಧೋಕುಂಡಲಿ ಭೇದವೆಂತೆಂದೊಡೆ, ದ್ವಾದಶಕಮಲಂಗಳೇ ಅಂಗವಾಗಿರ್ಪುದಯ್ಯ. ಷೋಡಶ ಮದಂಗಳೇ ಪ್ರಾಣವಾಗಿರ್ಪುದಯ್ಯ. ಸಪ್ತವ್ಯಸನಂಗಳೇ ಸಂಗವಾಗಿರ್ಪು ದಯ್ಯ. ದುರ್ಗುಣಂಗಳೇ ವಸ್ತ್ರಾಭರಣವಾಗಿರ್ಪವಯ್ಯ. ಅನಾಚಾರಂಗಳೇ ನಡೆನುಡಿಯಾಗಿರ್ಪವಯ್ಯ. ಅಸತ್ಯವೇ ವಾಹನವಾಗಿರ್ಪುದಯ್ಯ. ಕುಭಾವಂ ಗಳೇ ಪಿತಮಾತೆಯಾಗಿರ್ಪವಯ್ಯ. ಕುಚಿತ್ತಗಳೇ ಬಂಧುಬಳಗವಾಗಿರ್ಪ ವಯ್ಯ. ಕುಬುದ್ಧಿಗಳೇ ಒಡಹುಟ್ಟಿದವರಾಗಿರ್ಪರಯ್ಯ. ದುರಹಂಕಾರಗಳೇ ನಂಟರಾಗಿರ್ಪರಯ್ಯ. ಕುಮನವೇ ಸ್ತ್ರೀಯಳಾಗಿರ್ಪಳಯ್ಯ. ಅಜ್ಞಾನವೇ ಮಂದಿರವಾಗಿರ್ಪುದಯ್ಯ. ದುರ್ಭಾವವೇ ಆಹಾರವಾಗಿರ್ಪುದಯ್ಯ. ಅರಿಷಡ್ವ ರ್ಗವೇ ದೈವವಾಗಿರ್ಪುದಯ್ಯ. ಷಡ್ಭಾವ ವಿಕಾರಗಳೇ ಅವಯವಗಳಾಗಿರ್ಪ ವಯ್ಯ. ಆಶೆಯೇ ಧನಧಾನ್ಯವಾಗಿರ್ಪುದಯ್ಯ. ಇಂತು ಸಂಸಾರವೆಂಬ ಪಾಶ ದಲ್ಲಿ ಜನ್ಮ ಜರೆಮರಣಂಗಳಿಂದ ತಿರುಗುವ ಜೀವನೇ ಅಧೋಕುಂಡಲಿ ಸರ್ಪ ನೆನಿಸುವನಯ್ಯ. ಆ ಸರ್ಪವೇ ಮೂಲಾಹಂಕಾರವೆಂಬ ಪಟ್ಟಣವ ರಚಿಸಿ, ಜಿಹ್ವಾಲಂಪಟ, ಗುಹ್ಯಾಲಂಪಟದಲ್ಲಿ ಮುಳುಮುಳುಗಿ ತೇಲುತಿರ್ಪರು ನೋಡಾ ಸಂಗನಬಸವೇಶ್ವರಾ.

(೨). ಅಯ್ಯಾ, ನಿವೃತ್ತಿ ಮಾರ್ಗದಲ್ಲಿ ಚರಿಸುವ ಊರ್ಧ್ವ ಕುಂಡಲಿ ಭೇದವೆಂತೆಂದೊಡೆ, ಕಿಂಕುರ್ವಾಣ ಭಕ್ತಿಯೇ ಅಂಗವಾಗಿರ್ಪುದಯ್ಯ. ಸಚ್ಚಿ ದಾನಂದವೇ ವಸ್ತ್ರಾಭರಣವಾಗಿರ್ಪುದಯ್ಯ. ಸನ್ಮಾರ್ಗಾಚಾರಂಗಳೇ ನಡೆನುಡಿ ಯಾಗಿರ್ಪವಯ್ಯ. ಸುಸತ್ಯವೇ ವಾಹನವಾಗಿರ್ಪುದಯ್ಯ. ದಯಾಂತಃಕರಣವೇ ಪಿತಾಮಾತೆಯಾಗಿರ್ಪುದಯ್ಯ. ಸುಚಿತ್ತವೇ ಬಂಧುಬಳಗವಾಗಿರ್ಪುದಯ್ಯ. ಸುಬುದ್ಧಿಗಳೇ ಒಡಹುಟ್ಟಿದವರಾಗಿರ್ಪವಯ್ಯ. ನಿರಹಂಕಾರವೇ ನಂಟರಾಗಿರ್ಪು ದಯ್ಯ. ಸುಮನವೇ ಸ್ತ್ರೀಯಳಾಗಿರ್ಪಳಯ್ಯ. ಸುಜ್ಞಾನವೇ ಮಂದರವಾಗಿ ರ್ಪುದಯ್ಯ. ಸದ್ಭಾವವೇ ಆಹಾರವಾಗಿರ್ಪುದಯ್ಯ. ನಿತ್ಯನಿಜವೇ ದೈವವಾಗಿ ರ್ಪುದಯ್ಯ. ನಿರಾಶೆಯೇ ಅವಯವಂಗಳಾಗಿರ್ಪುದಯ್ಯ. ನಿಃಕಾಮ್ಯಗಳೇ

ಧನಧಾನ್ಯಗಳಾಗಿರ್ಪವಯ್ಯಾ. ಇಂತು ನಿಃಸಂಸಾರವೆಂಬ ಅವಿರಳಾನಂದದಿಂದ ಸದ್ಗುರೂಪಾವಸ್ಥೆಯ ಮಾಡುವ ಸಜ್ಜೀವವೇ ಊರ್ಧ್ವಕುಂಡಲಿ ಸರ್ಪನಯ್ಯಾ. ಆ ಸರ್ಪನೇ ಮಾಯಾಪ್ರಪಂಚವ ಹೇವರಿಸಿ, ಅನಂತಮುಖದಿಂದ ನಿರ್ಮಾಯಸ್ವರೂಪವಾದ ಮಹಾಪ್ರಮಥಗಣಂಗಳತ್ತಭಿಮುಖವಾಗಿರ್ಪುದಯ್ಯಾ. ಈ ಸರ್ಪಂಗೆ ಬೇಕು ಬೇಡೆಂಬ ಜಿಹ್ವಾಲಂಪಟ ಗುಹ್ಯಾಲಂಪಟವಿಲ್ಲ ನೋಡಾ ಸಂಗನಬಸವೇಶ್ವರಾ.

(೩). ಅಯ್ಯಾ, ಇನ್ನು ಪ್ರವೃತ್ತಿ ನಿವೃತ್ತಿ ಅಧೋಕುಂಡಲಿ ಉರ್ಧ್ವಕುಂಡಲಿಗಳೆಂಬ ಉಭಯ ಮಾರ್ಗವ ಶಿವಾಜ್ಞೆಯಿಂದ ತೀರ್ಚಿಸಿ ಶಿವಯೋಗ, ಶಿವಾಚಾರ, ಶಿವಭಕ್ತಿ, ಶಿವಾನಂದ ಪರಿಣಾಮದಲ್ಲಿ ಚರಿಸುವ ಮಧ್ಯಕುಂಡಲಿ ಸ್ವರೂಪವಾದ ಮಹಾಶೇಷನ ಭೇದವೆಂತೆಂದೊಡೆ, ಷೋಡಶವರ್ಣವೇ ಅಂಗವಾಗಿರ್ಪುದಯ್ಯಾ. ಸರ್ವಾಚಾರ ಸಂಪತ್ತಿನಾಚರಣೆಯೇ ಪ್ರಾಣವಾಗಿರ್ಪುದಯ್ಯಾ. ಚತುರ್ದಶಪ್ರಣವಂಗಳೇ ತತ್ಸಂಗವಾಗಿರ್ಪುದಯ್ಯಾ. ಭಕ್ತಿಜ್ಞಾನ ವೈರಾಗ್ಯ ಷಟ್‌ಸ್ಥಲವೇ ವಸ್ತ್ರಾಭರಣವಾಗಿರ್ಪುದಯ್ಯಾ. ಹರಗುರುವಾಕ್ಯವೇ ನಡೆನುಡಿಯಾಗಿರ್ಪುದಯ್ಯಾ. ಪಂಚಾಚಾರಂಗಳೇ ವಾಹನವಾಗಿರ್ಪುದಯ್ಯಾ. ಕರಣ, ವಿನಯ, ಸಮತೆ, ಶುದ್ಧಸಿದ್ಧಪ್ರಸಿದ್ಧವೇ ಪಿತಮಾತೆಯಾಗಿರ್ಪುದಯ್ಯಾ. ಚತುರ್ವರ್ಣ ಮೊದಲಾಗಿ ಐವತ್ತೆರಡು ವರ್ಣಂಗಳೇ ಬಂಧುಬಳಗವಾಗಿರ್ಪವಯ್ಯಾ. ಷಡಕ್ಷರಮಂತ್ರ ಮೊದಲಾಗಿ ನೂರೆಂಟು ಮಂತ್ರ ಮಾಲಿಕೆಯೇ ಒಡಹುಟ್ಟಿದರಾಗಿರ್ಪರಯ್ಯಾ. ಸಪ್ತಕೋಟಿ ಮಹಾಮಂತ್ರಂಗಳೇ ನಂಟರಾಗಿರ್ಪರಯ್ಯಾ. ಷೋಡಶಭಕ್ತಿಗಳೇ ಅರ್ಧಾಂಗಿನಿಯರಾಗಿರ್ಪರಯ್ಯಾ. ನೂರೆಂಟು ಸಕೀಲ ಮೊದಲಾಗಿ ಸಮಸ್ತ ಸಕೀಲಂಗಳೇ ಮಂದಿರವಾಗಿರ್ಪವಯ್ಯಾ. ಸ್ವಾನುಭಾವಸೂತ್ರವೇ ನಿಜ ನೈಷ್ಠೆ ನಿರ್ಲಜ್ಜೆ ನಿರಾಶೆ ಎಂಬ ನಿಃಪ್ರಪಂಚವೇ ಧನಧಾನ್ಯವಾಗಿರ್ಪುದಯ್ಯಾ. ಇಂತು ನಿಃಕಳಂಕ ಪರಮಾನಂದವೆಂಬ ಸತ್ತು ಚಿತ್ತಾನಂದ ನಿತ್ಯಪರಿಪೂರ್ಣ ಅವಿರಳ ಪರಂಜ್ಯೋತಿ ಸ್ವರೂಪದಿಂದ ಕನ್ನಡಿಯ ಪ್ರತಿಬಿಂಬದಂತೆ ಇಹಪರಂಗಳೆಂಬ ಅಧೋಕುಂಡಲಿ ಊರ್ಧ್ವಕುಂಡಲಿ ಎಂಬ ಉಭಯ ಮಧ್ಯದಲ್ಲಿ ನೆಲಸಿರ್ಪ ಪರತತ್ವವೇ ಶಿವಭಕ್ತನೆಂಬ ಮಧ್ಯನಾಮವುಳ್ಳ ಮಹಾಶೇಷ ನೋಡಾ ಸಂಗನಬಸವೇಶ್ವರಾ.

( ೪ ). ಅಯ್ಯಾ, ಇನ್ನು ಹಠಯೋಗವ ಮರೆದು ಶಿವಯೋಗದಲ್ಲಿ ನಿಂದ ಭೇದವೆಂತೆಂದೊಡೆ, ಆ ನಿಲುಕಡೆಯ ಶ್ರೀಗುರು ಕಟಾಕ್ಷೆಯಿಂದ ನಿರೂಪಿಸಿಹೆನು ಕೇಳಯ್ಯ. ವರಕುಮಾರ ದೇಶಿಕೋತ್ತಮನೇ, ವಾಮಭಾಗದ ಚಂದ್ರನಾಳ, ಚಂದ್ರನೇತ್ರ ವಾಮಕರ್ಣ ದ್ವಾರಂಗಳು ಮೂರು ಈಡಾನಾಡಿ ಎನಿಸುವದಯ್ಯ. ದಕ್ಷಿಣಭಾಗದ ಸೂರ್ಯನಾಳ, ಸೂರ್ಯನೇತ್ರ, ದಕ್ಷಿಣಕರ್ಣದ್ವಾರಂಗಳು ಮೂರು ಪಿಂಗಳನಾಡಿ ಎನಿಸುವದಯ್ಯ. ಅಧೋದ್ವಾರ, ಗುಹ್ಯದ್ವಾರ, ಜಿಹ್ವಾದ್ವಾರ ಇವು ಮೂರು ಸುಷುಮ್ನನಾಡಿ ಎನಿಸುವದಯ್ಯ. ಮಣಿಪುರಕನಾಡಿ, ವಿಶುದ್ಧಿನಾಡಿ, ಬ್ರಹ್ಮನಾಡಿ ಇವು ಮೂರು ಇಪ್ಪತ್ತೆರಡು ಸಾವಿರ ನಾಡಿಗಳಿಗೆ ಮೂಲ ಸೂತ್ರವಾದ ಮಧ್ಯನಾಡಿ ಎನಿಸುವದಯ್ಯ. ಇಂತೀ ದ್ವಾದಶದ್ವಾರಂಗಳಲ್ಲಿ ಚರಿಸುವ ಮನ್ಮಥವಿಕಾರಮಂ ಗುರೂಪಾವಸ್ಥೆಯಿಂ ಹಿಂದುಮಾಡಿ, ತನ್ನ ಸತ್ಯವೇ ಮುಂದಾಗಿ, ತನ್ನ ನಡೆನುಡಿಗಳ ತನ್ನ ತಾನೇ ವಿಚಾರಿಸಿ, ಸುದ್ಗುರುಲಿಂಗ ಜಂಗಮದಿಂದ ಶಿವದೀಕ್ಷೆಯ ಪಡೆದು, ಲಿಂಗಾಂಗ ಸಂಬಂಧಿಯಾಗಿ, ಆ ಲಿಂಗ ಚೈತನ್ಯ ಸ್ವರೂಪವಾದ ಪಾದೋದಕ ಪ್ರಸಾದ ಮಂತ್ರದಿಂದ ಆ ತ್ರಿವಿಧ ನಾಡಿಗಳು ಮೊದಲಾಗಿ ದ್ವಾದಶನಾಡಿಗಳೇ ಕಡೆಯಾದ ಸಮಸ್ತನಾಡಿಗಳು ಪವಿತ್ರಸ್ವರೂಪವಾಗಿ, ಸರ್ವಾವಸ್ಥೆಯಲ್ಲಿ ಚಿದ್ಘನ ಮಹಾಲಿಂಗವ ಅಷ್ಟವಿಧಾರ್ಚನೆ ಷೋಡಶೋಪಚಾರವನೊಡಗೂಡಿ, ಪರಿಪರಿಯಿಂದರ್ಚಿಸಿ, ಆಚಾರಭ್ರಷ್ಟರ ತ್ರಿಕರಣಂಗಳಿಂದ ಸೋಂಕದೆ, ಅಂಗಕರಣಂಗಳೆಲ್ಲ ಲಿಂಗಕರಣಂಗಳಾಗಿ, ಸತ್ಕ್ರಿಯೆಜ್ಞಾನಾನಂದವೇ ಪ್ರಭಾವಿಸಿ, ಶ್ರೀಗುರುಲಿಂಗ ಜಂಗಮ, ಪಾದೋದಕ ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ, ಸದಾಚಾರ, ಸದ್ಭಕ್ತಿ, ಸತ್ಕ್ರಿಯೆ, ಸಮ್ಯಜ್ಞಾನ, ಸದ್ವರ್ತನೆ ಎಂಬ ಚಿದೈಶ್ವರ್ಯದಲ್ಲಿ ಸಂತೃಪ್ತರಾಗಿ ನಿಂದ ನಿಲುಕಡೆಯಲ್ಲಿ ಪೂರ್ಣಸ್ವರೂಪ ನಿಜ ಶಿವಯೋಗಿಗಳು ನಿಮ್ಮ ಶರಣರು ನೋಡಾ ಸಂಗನ ಬಸವೇಶ್ವರಾ.

## ( ೨ ) ಧ್ಯಾನದಲ್ಲಿ.

( ೫ ). ಪಶ್ಚಿಮ ಪದ್ಮಾಸನದಲ್ಲಿ ಕುಳಿತು, ನಿಟ್ಟೆಲುವ ಮುರಿದು ತುಟಿ ಮಿಡುಕದೆ ಅಟ್ಟೆ ಆಡಿತ್ತಲ್ಲಾ. ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟೆ ಗುಡಿಯ ಕೂಡಲಸಂಗಮದೇವಾ ಹಿಡಿವಡೆದ.

(೬). **ಪೂರ್ವದ್ವಾರವಬಂಧಿಸಿ ಅಧೋದ್ವಾರವ ಬಲಿದು, ಊರ್ಧ್ವ** ದ್ವಾರವ ತೆಗೆದು, ಎವೆ ಹಳಚದೆ ಒಳಗೆ ನಿಮ್ಮ ನೋಡುತ್ತಿದ್ದೆನಯ್ಯ. ಬಂದುದ ಹೋದುದನರಿಯದೆ ನಿಮ್ಮ ನೋಡುತ್ತಿದ್ದೆನಯ್ಯ. ಮನನಿಂದುದು ನಿಮ್ಮಲ್ಲಿ. ಹೆರೆಹಿಂಗದ ಪರಮಸುಖ ದೊರೆಕೊಂಡಿತ್ತು. ಇನ್ನಂಜೆನಂಜೆ. ಜನನಮರಣವೆರಡೂ ಹೊರಗಾದವು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ನಿಜಸುಖ ಸಮನಿಸಿತ್ತಾಗಿ.

(೭). ಅರದೆರೆದೆವೆ ದೃಷ್ಟಿಯ ನಾಸಿಕಾಗ್ರದಲ್ಲಿರಿಸಿ ನೋಡುತ್ತ, ಹೃದಯಕಮಲದಲ್ಲಿದ್ದ ಅಚಳ ಲಿಂಗದೊಳಗೆ ಜ್ಞಾನಲೋಚನದಿಂ ನೋಡುತ್ತ, ತನು ಮನೇಂದ್ರಿಯ ತರಹರವಾಗಿ ಮನನಿವಾತ ಜ್ಯೋತಿಯಂತೆ ನಿಂದು, ನಿಜವ ಕೂಡ ಬಲ್ಲಾತನೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಸಹಜಯೋಗಿ.

(೮). ಸಹಸ್ರದಳ ಕಮಲ ಮಧ್ಯದಲ್ಲಿ ಪಂಚಪತ್ರ. ಆ ಪತ್ರದ ಮಧ್ಯದಲ್ಲಿ ಮಂಡಲತ್ರಯ. ಆ ಮಂಡಲತ್ರಯ ಮಧ್ಯದಲ್ಲಿ ಪ್ರಣಮಪೀಠ. ಆ ಪ್ರಣಮ ಪೀಠದ ಮಧ್ಯದಲ್ಲಿ ಮೂರ್ತಿಗೊಂಡು ಬೆಳಗುವ ನಿಮ್ಮ ದಿವ್ಯ ಶ್ರೀಮೂರ್ತಿಯ ಕಂಡು ಹರುಷಿತನಾದೆನಯ್ಯ ಅಖಂಡೇಶ್ವರಾ

(೯). ಆರಾಧಾರದ ನಿಚ್ಚಣಿಕೆಯನೇರಿನೋಡಲು, ಮಂದರಗಿರಿ ಎಂಬ ಮಹಾಪರ್ವತವ ಕಾಣಬಹುದು. ಆ ಪರ್ವತದ ತುಟ್ಟ ತುದಿಯನೇರಿ ನೋಡಲು, ಮಹದಾಕಾಶಮಂಟಪ ಉಂಟು. ಆ ಮಂಟಪವ ಹೊಕ್ಕೆಹೆನೆಂದು ವಿಚಾರಿಸಿ ನೋಡಲು, ಅಲ್ಲೊಂದು ಸೂಕ್ಷ್ಮದ್ವಾರ ಉಂಟು. ಆ ಸೂಕ್ಷ್ಮದ್ವಾರ ಕವಾಟವ ತೆಗೆದು ನೋಡಲು, ಅಲ್ಲಿ ನಿರುಪಾಧಿಕ ಜ್ಯೋತಿ ಬೆಳಗುತ್ತಿಪ್ಪುದು. ಆ ಬೆಳಗಿನೊಳಗೆ ಅಚಳನಾಗಿ ನಿಂದ ಪರಿಪೂರ್ಣ ಪೂಜೆಯಾಗಿ, ತನ್ನನೇ ನಿರಾಳಲಿಂಗಕ್ಕೆ ಪೂಜೆಯ ಮಾಡುವಾತನೇ ಪರಮ ನಿರ್ವಾಣಿಯಯ್ಯಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೧೦) ದೇಹವಾಸನೆ ಹರಿದು ಆತ್ಮಭವಬಂಧನದ ಕೀಲ ಮುರಿದು ಪರಾತ್ಪರವಾದ ಪ್ರಾಣಲಿಂಗವ ಕೂಡುವದಕ್ಕೆ ಆವುದು ಸಾಧನವೆಂದರೆ, ಎಲ್ಲ ಗುಣಂಗಳು ತಿಳಿವಂತೆ ಹೇಳುವೆ ಕೇಳಿರಯ್ಯ. ಎಂಬತ್ತೆಂಟು ಆಸನಂಗಳೊಳಗೆ ಮುಖ್ಯವಾಗಿರ್ಪುದು ಶುದ್ಧಾಸನವು. ಆ ಶುದ್ಧಾಸನದ ವಿವರವೆಂತೆಂದೊಡೆ

ಗುದಗುಹ್ಯ ಮಧ್ಯಸ್ಥಾನವಾದ ಯೋನಿಮಂಡಲವೆಂಬ ದ್ವಾರ. ಆ ದ್ವಾರಕ್ಕೆ ಎಡದ ಹಿಮ್ಮಡವನಿಕ್ಕಿ ಬಲಹಿಮ್ಮಡವಂ ಮೇಢ್ರಸ್ಥಾನದಲ್ಲಿರಿಸಿ, ಅತ್ತಿತ್ತಲುಗದೆ, ಬೆನ್ನೆಲುವ ಸೋಂಕಿಸದೆ, ನೆಟ್ಟನೇಕುಳ್ಳಿರ್ದು, ಉಭಯಲೋಚನವನೊಂದು ಮಾಡಿ, ಉನ್ಮನೆಯಸ್ಥಾನದಲ್ಲಿರಿಸಿ, ತ್ವಚ್, ನೇತ್ರ, ಜಿಹ್ವೆ, ಶ್ರೋತ್ರ, ಘ್ರಾಣ, ಹೃದಯವೆಂಬ ಆರು ದ್ವಾರಂಗಳನ್ನು ಆರಂಗುಲದಿಂದೊತ್ತಲು, ಮೂಲಾಧಾರ ದಲ್ಲಿರ್ದ ಮೂಲಾಗ್ನಿ ಪಟುತರವಾಗಿ ಪವನನೊಡಗೂಡಿ ಮನಸ್ಥಿರಗೊಂಡು ಊರ್ಧ್ವಕ್ಕೆ ಹೋಗಿ, ಉಭಯಲಿಂಗದೊಳಗಿರ್ದ ಮಹಾಲಿಂಗದೊಡಗೂಡಿ, ಅನಂತಕೋಟಿ ಸೂರ್ಯಾಗ್ನಿ ಚಂದ್ರ ಪ್ರಕಾಶವನೊಳಕೊಂಡು, ಅಲ್ಲಿ ಸೂಕ್ಷ್ಮ ವಾಗಿ ಅಂಗುಲ ಪ್ರಮಾಣವಾಗಿ ಶುದ್ಧ ತಾರೆಯಂತೆ ಕಂಗಳ ನೋಟಕ್ಕೆ ಕರ ತಲಾಮಲಕವಾಗಿ ಕಾಣಿಸುತ್ತಿಪ್ಪ ಪ್ರಾಣಲಿಂಗದಲ್ಲಿ ಪ್ರಾಣಸಂಭೋಗವ ಮಾಡ ಬಲ್ಲಾತನೇ ಪ್ರಾಣಲಿಂಗ ಸಂಬಂಧಿ, ಆತನೇ ಪ್ರಳಯಾದಿರಹಿತನಯ್ಯ ಅಖಂಡೇ ಶ್ವರಾ.

(೧೧). ಯೋಗದಾಗವನರಿದು ಯೋಗಿಸಿಹೆನೆಂಬ ಯೋಗಿಗಳು ನೀವು ಕೇಳಿ. ನೆಲವಾಗಿಲಮುಚ್ಚಿ, ಜಲವಾಗಿಲಮುಚ್ಚಿ, ತಲೆವಾಗಿಲ ತೆರೆದು ಗಗನಗಿರಿಯ ಪೂರ್ವಪಶ್ಚಿಮ ಉತ್ತರ ದಕ್ಷಿಣದ ನಡುವೆ ಉರಿವ ಅಗ್ನಿಯ ಕಂಡು, ಆ ಅಗ್ನಿಯ ಮೇಲೆ ಸ್ವರನಾಲ್ಕರ ಕೀಲು ಕೂಟದ ಸಂಚವ ಕಂಡು, ಆ ಸಂಚದಲ್ಲಿ ಅಮೃತಸ್ವರವ ಹಿಡಿದು ಕೂಡುವದೇ ಪರಮ ಶಿವಯೋಗ. ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಅದೇ ಪರಮ ನಿರ್ವಾಣ.

(೧೨). ಹೊರಗಣ ಒಂಬತ್ತು ಬಾಗಿಲುಮುಚ್ಚಿ, ಒಳಗೆ ಅಂಬರ ಬಾಗಿಲ ಬೀಗವ ತೆಗೆದು ಒಳಪೊಕ್ಕು ನೋಡಲು, ಗಂಗೆ ಸರಸ್ವತಿ ಯಮುನೆ ಎಂಬ ತ್ರಿನದಿಗಳು ಕೂಡಿದಠಾವಿನಲ್ಲಿ ಸಂಗಮಕ್ಷೇತ್ರವೆಂಬ ರಂಗಮಂಟಪ ಉಂಟು. ಆ ರಂಗಮಂಟಪದೊಳಗೆ ರವಿಕೋಟಿ ಪ್ರಭೆಯಂತೆ ರಾಜಿಸುವ ಮಹಾಲಿಂಗವನು ಕಂಡು, ಆ ಮಹಾಲಿಂಗಕ್ಕೆ ತನ್ನ ಆತ್ಮ ಸಂಬಂಧವಾದ ದ್ರವ್ಯಂಗಳಿಂದರ್ಚಿಸಿ, ಆ ಮಹಾಲಿಂಗದ ಬೆಳಗ ಕಂಗಳು ತುಂಬಿ ನೋಡಿ ಮನಸ್ಸಂತೋಷಂ ಗಂಡು ಅಲ್ಲಿಂದತ್ತ ಪಶ್ಚಿಮ ದಿಕ್ಕಿನಲ್ಲಿ ಮಹಾಕೈಲಾಸವಿರ್ಪು ದನು ತನ್ನ ಸ್ವಾತ್ಮಜ್ಞಾನದಿಂದ ತಿಳಿದು ನೋಡಿ, ಎಡಬಲದ ಬಟ್ಟೆಯ ಮೆಟ್ಟದೆ, ನಡುಮಾರ್ಗವಿಡಿದು, ಕೈಲಾಸದ ಪೂರ್ವದಿಕ್ಕಿನ ಹೆಬ್ಬಾಗಿಲು ಉಪ್ಪರಗೋಪು

ರವ ಕಂಡು, ಒಳಪೊಕ್ಕು ಹೋಗಿ, ಕಂಗಳಿಗೆ ಮಂಗಳವಾದ ಶಿವನ ಸಭೆಯುಂ ಕಂಡು ಕಲ್ಲಿ ಹೊಡೆವ ಭೇರಿನಾದ, ತುಡುಮತಾಳ, ಮದ್ದಾಳೆ, ಗಡಬಡ ಝಲ್ಲೆಂಬ ಸಮ್ಮೇಳ, ಕಂಸಾಳದ ನಾದವ, ನುಡಿಸುವವೀಣೆ, ಕಿನ್ನರಿಸ್ವರಮಂಡಲ, ತಂಬೂರಿ ಕಾಮಾಕ್ಷಿಯನಾದ, ಭೋರಿಡುವಶಂಖ, ಗಂಟೆಯನಾದ, ಸ್ವರಗೈವ ನಾಗಸ್ವರ, ಕೋಕಿಲ, ಕೂಗಿಡುವ ಕಹಳೆ ಹೆಗ್ಗಾಳಿ ಚಿನಿಕಾಳಿ ಕರ್ನೆಯನಾದ, ಇಂತಿವು ಮೊದಲಾದ ನಾನಾತರದ ಪ್ರಮಾಣಂಗಳಂ ಕಂಡು, ಅಲ್ಲಿಂದ ಮುಂದಕ್ಕೆ ಹೋಗಿ, ಅನಲವೀದಿಯು ಹೊಕ್ಕು, ಅಲ್ಲಿ ಅಷ್ಟದಿಕ್ಕುಗಳಲ್ಲಿನಿಂದು, ಓಲಗಂಗೊಡುವ ಚತುರ್ಭಕ್ತಿ ಸಮ್ಮೇಳನವ ಕಂಡು, ಅಲ್ಲಿಂದ ಮುಂದಕ್ಕೆ ಹೋಗಿ ನಟ್ಟ ನಡುವಿರ್ದ ಪರಶಿವನ ಕಂಡು, ತನು ಉಬ್ಬಿ, ಮನಕರಗಿ ಕರಣಂಗಳಲ್ಲಿ ಪರಿಣಾಮಜಲ ಉಕ್ಕಿ, ಕಡೆಗೋಡಿವರಿಯುತ್ತ ಉರಿ ಕರ್ಪುರ ಸಂಯೋಗದಂತೆ ಆನಿಷ್ಕಲ ಪರಶಿವನ ನೊಡೆವೆರೆದು ಪರಿಪೂರ್ಣವಾದ ಮಹಾ ಶರಣರ ತೋರಿಬದುಕಿಸಯ್ಯ ಎನ್ನ ಅಖಂಡೇಶ್ವರಾ.

(೧೩). ಪ್ರಾಣಲಿಂಗ ಸಂಬಂಧಿಗಳೆಂದು ನುಡಿವರು ಅನೇಕರುಂಟು. ಪ್ರಾಣಲಿಂಗ ಕಳೆಯನಾರು ಅರಿಯರಲ್ಲಾ. ಪ್ರಾಣಲಿಂಗದಕಳೆ ಎಂದಡೆ, ಆಧಾರದಲ್ಲಿ ಎಳೆಯ ಸೂರ್ಯನಂತೆ ಬೆಳಗುತ್ತಿರ್ಪುದು ನೋಡಾ. ಸ್ವಾಧಿಷ್ಠಾನದಲ್ಲಿ ಪೌರ್ಣಿಮೆಯ ಚಂದ್ರನಂತೆ ಬೆಳಗುತ್ತಿರ್ಪುದು ನೋಡಾ. ಪ್ರಾಣಲಿಂಗವು ಮಣಿಪೂರಕದಲ್ಲಿ ಮಿಂಚಿನಲತೆಯಂತೆ ಬೆಳಗುತ್ತಿರ್ಪುದು ನೋಡಾ. ಪ್ರಾಣಲಿಂಗವು ಅನಾಹತದಲ್ಲಿ ಸ್ಫಟಿಕದ ಶಲಾಕೆಯಂತೆ ಬೆಳಗುತಿರ್ಪುದು ನೋಡಾ. ಪ್ರಾಣಲಿಂಗವು ವಿಶುದ್ಧಿಯಲ್ಲಿ ಮೌಕ್ತಿಕದ ಗೊಂಚಲಂತೆ ಬೆಳಗುತಿರ್ಪುದು ನೋಡಾ. ಪ್ರಾಣಲಿಂಗವು ಆಗ್ನೆಯದಲ್ಲಿ ರತ್ನದೀಪ್ತಿಯಂತೆ ಬೆಳಗುತಿರ್ಪುದು ನೋಡಾ. ಪ್ರಾಣಲಿಂಗವು ಬ್ರಹ್ಮರಂಧ್ರದಲ್ಲಿ ಸ್ವಯಂ ಜ್ಯೋತಿಯಂತೆ ಬೆಳಗುತಿರ್ಪುದು ನೋಡಾ. ಪ್ರಾಣಲಿಂಗವು ಶಿಖೆಯಲ್ಲಿ ಶುದ್ಧ ತಾರೆಯಂತೆ ಬೆಳಗುತಿರ್ಪುದು ನೋಡಾ. ಪಶ್ಚಿಮದಲ್ಲಿ ಉಳಕ ನಕ್ಷತ್ರದಂತೆ ಬೆಳಗುತಿರ್ಪುದು ನೋಡಾ, ಪ್ರಾಣಲಿಂಗವು. ಇಂತಪ್ಪ ಪ್ರಾಣಲಿಂಗದ ಕಳೆಯನರಿದು ಪ್ರಾಣವ ಸಂಯೋಗಿಸಿ ಪ್ರಳಯವ ಗೆಲಲರಿಯದೆ, ಮಾತಿನ ಮಾತು, ನೀತಿಯಶಾಸ್ತ್ರ, ಘಾತದ ಕಥೆಗಳ ಕಲಿತು, ಓದು ಇಲ್ಲದವರೊಡನೆ ಹೇಳಿ, ಚತುರನೆನಿಸಿಕೊಂಡು ಒಡಲ ಹೊರೆವ ಘಾತಕರ ಪ್ರಾಣಲಿಂಗ ಸಂಬಂಧಿಗಳೆಂತೆಂಬೆನಯ್ಯ ಅಖಂಡೇಶ್ವರಾ?

(೧೪). ಪೃಥ್ವಿ ಅಪ್ಪುಗಳೆರಡು ಆಧಾರಗೊಳಿಸಿ, ಅಗ್ನಿವಾಯುಗಳೆರಡ ಅಂಬರಸ್ಥಾನಕ್ಕೊಯ್ದು, ಆತ್ಮಾಕಾಶವೆರಡ ಅನುಭಾವ ಮುಖಕ್ಕೆ ತಂದು, ಮನದಲನುಮಾನವಳಿದು, ನೆನಹು ನಿಶ್ಚಲವಾಗಿ, ಒಳಗೆ ಜ್ಯೋತಿರ್ಲಿಂಗವ ನೋಡುತ್ತ, ಹೊರಗೆ ಎರಡು ಹುಬ್ಬಿನ ನಡುವೆ ಉಭಯಲೋಚನವನಿರಿಸಿ ಹಿಂದುಮುಂದವನೆಣಿಸದೆ ಸಹವಿಲ್ಲದೆ ಖೇಚರಿಯನಾಚರಿಸಲು, ಲೋಚನ ಮೂರುಳ್ಳ ಶಿವ ತಾನಹುದು. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನಲ್ಲಿ ಆತನೇ ಶಿವಯೋಗಿ.

## ಪ್ರಾಣಲಿಂಗದ ಧ್ಯಾನ.

### (ಸತಿಪತಿ ಭಾವದ ವಚನಗಳು).

(೧೫). ಎಲ್ಲರ ಗಂಡರ ಪರಿಯಂತಲ್ಲ, ನೋಡೆಲೆಗವ್ವ. ನಮ್ಮ ನಲ್ಲ ಸುಳಿಯಲಿಲ್ಲ, ಸುಳಿದು ಸಿಂಗಾರವ ಮಾಡಲಿಲ್ಲ, ಕೂಡಲಸಂಗಮದೇವ ತನ್ನಲ್ಲೆನ್ನ ಬೈಚಿಟ್ಟನಾಗಿ.

(೧೬). ಎನ್ನ ಗಂಡ ಬರಬೇಕೆಂದು ಎನ್ನಂತರಂಗವೆಂಬ ಮನೆಯ ಶಿರಹು ಮಾಡಿ, ಅಷ್ಟದಳ ಕಮಲವೆಂಬ ಓವರಿಯೊಳಗೆ ನಿಜನಿವಾಸವೆಂಬ ಹಾಸಿಗೆಯ ಹಾಸಿ, ಧ್ಯಾನ ಮೌನವೆಂಬ ಮೇಲುಕಟ್ಟು ಕಟ್ಟಿ, ಜ್ಞಾನವೆಂಬ ದೀಪವ ಬೆಳಗಿ, ನಿಷ್ಕ್ರಿಯೆಗಳೆಂಬ ಉಪಕರಣಗಳ ಹರಹಿಕೊಂಡು, ಪಶ್ಚಿಮ ದ್ವಾರವೆಂಬ ಬಾಗಿಲ ತೆಗೆದು, ಕಂಗಳೇ ಪ್ರಾಣವಾಗಿ ಹಾರುತಿರ್ದೆನಯ್ಯ! ನಾನು ಬಾರನೆಂದು ಉಮ್ಮಳಿಸಿಹೆನೆಂದು ತಾನೇ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ ಮೂರ್ತಿಗೊಂಡಡೆ, ಎನ್ನ ಮನದ ಬಯಕೆ ಸಯವಾಯಿತ್ತು. ಹಿಂದೆ ಹನ್ನೆರಡು ವರ್ಷದಲ್ಲಿ ಚಿಂತೆಯಿಂದ ನಿಶ್ಚಿಂತವಾಯಿತ್ತು. ಕೂಡಲಸಂಗಮದೇವಾ ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು.

(೧೭). ಮನವೆಂಬ ಮಂಟಪದ ನೆಳಲಲ್ಲಿ ನೆನಹೆಂಬ ಜ್ಞಾನಜ್ಯೋತಿಯ ಬೆಳಗಿ, ಆ ಘನಪುರುಷ ಪವಡಿಸಿ ಇದ್ದಾನೆ, ಎಲೆ ಅವ್ವಾ! ಅದನೊಂದೆರಡೆನ್ನದೆ, ಮೂರು ಬಾಗಿಲ ಮುಚ್ಚಿ, ನಾಲ್ಕು ಮುಟ್ಟದೆ, ಐದ ತಟ್ಟದೆ ಇರು ಕಂಡ್ಯಾ, ಎಲೆ ಅವ್ವಾ! ಐದೇಳೆಂಟೆಂಬ ವಿಹಂಗ ಸಂಕುಳದ ಉಲುಹು ಪ್ರಬಲವಾದಡೆ, ಕಪಿಲಸಿದ್ಧಮಲ್ಲಿಕಾರ್ಜುನ ನಿದ್ರೆಗೆಟ್ಟಲ್ಲಿಹನು.

(೧೮). ಕೇಳವ್ವ, ಕೇಳವ್ವ, ಕೇಳದಿ ಹೇಳುವೆ ನಿನಗೆ. ಆಹಾ, ಕಂಗಳಲ್ಲಿ ಕಾಂಬೆ, ಮತ್ತೆ ಕಾಣೆ. ಮನದಲ್ಲಿ ಹಿಡಿವೆ, ಹಿಡಿದು ಮತ್ತೆ ಕಾಣೆನವ್ವಾ. ಮಿಂಚಿನ ರವೆಯಂತೆ ತೋರುವನಡಗುವ ನಮ್ಮ ನಲ್ಲನು ಕಪಿಲಸಿದ್ಧ ಮಲ್ಲಿಕಾರ್ಜುನದೇವನು.

(೧೯). ಹೊರಗಿದ್ದಿಹನೆಂದು ನಾನು ಮರೆದು ಮಾತನಾಡಿದೆ, ಅರಿಯಲೀಯದೆ. ಎನ್ನಂತರಂಗದೊಳಿಪ್ಪನು ತೆರಹಿಲ್ಲದ ಭಾವನು ನುಡಿಗೆಡೆಗುಡನು. ಆತನ ಬಯಲಿಂಗೆ ಬೇಟ ಗೊಂಡೆನವ್ವಾ. ಆನೇನ ಮಾಡುವೆನೆಲೆ ತಾಯೇ. ಮರೆದಡೆ ಬೆರಸುವ ಕುರುಹಿನ ಮಿಂಡನು ಅರಿದಡೊಳ್ಳಿದನವ್ವ ಶಂಭುಜಕ್ಕೇಶ್ವರನು.

(೨೦). ಒಳಗೆ ಶೋಧಿಸಿ, ಹೊರಗಳವಡಿಸಿ, ಭಾವದಿಂದ ಗುಡಿ ತೋರಣವ ಕಟ್ಟುವೆನಯ್ಯ. ಎನ್ನ ಲಿಂಗವೇ ಬಾರಯ್ಯ. ಎನ್ನ ದೇವ ಬಾರಯ್ಯ. ಎನ್ನಂತರಂಗದ ಪರಂಜ್ಯೋತಿರ್ಲಿಂಗವ ನಿದಿರುಗೊಂಬೆನು, ಬಾರಯ್ಯ. ಮಹಾಲಿಂಗಕಲ್ಲೇಶ್ವರಾ, ನಿಮ್ಮ ಧರ್ಮವು ಬಾರಯ್ಯಾ.

(೨೧). ಎನ್ನಂತರಂಗದ ಆತ್ಮನೊಳಗೆ ಅಂಗವಿಲ್ಲದ ಅನಾಮಯನ ನೋಡಿ ಕಂಡೆನಯ್ಯ. ಆ ಪುರುಷನ ಮುಟ್ಟಿ ಹಿಡಿದು ದರ್ಶನ ಸ್ಪರ್ಶನವಮಾಡಿ, ಕೂಡಿ, ನೆರೆದೆನೆಂದರೆ, ಚಿತ್ತಮನಕ್ಕೆ ಅಗೋಚರವಾಗಿಪ್ಪನಯ್ಯ. ಈ ಪುರುಷನ ಚಾರಿತ್ರ ವಿಪರೀತ. ವಿಸ್ಮಯವಾಗಿದೆ ನೋಡಾ. ಆತನ ರೂಪುಲಾವಣ್ಯಯುಕ್ತಿ ವಿಧಾನ ಏನನುಪಮಿಸುವೆನಯ್ಯ! ಉಪಮಾತೀತ, ಅವಿರಳಾತ್ಮಕ ಚಿದ್ರೂಪ ಕಾಣಿರೋ. ಕೆಂಜೆಡೆಯ ಭಾಳನೇತ್ರ, ರಂಜಿಪ ರವಿಕೋಟಿ ತೇಜದಿಂದುರವಣಿಸುತ್ತಿದ್ದಾನೆ. ಕೆಂಜಪದಯುಗಳೊಳು ಹೊಳಹುತ್ತಿದ್ದಾನೆ. ನಂಜುಗೊರಳಭವ ಕಾಣಿ ಭೋ. ಭವ ರೋಗವೈದ್ಯ ಭವಹರ, ಎನ್ನ ತಂದೆ ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೆನ್ನ ಹೃದಯದಲ್ಲಿ ಕಂಡು ಮನೋಭಾವದಲ್ಲಿ ಆರಾಧಿಸುತ್ತಿರ್ದೆನಯ್ಯ.

(೨೨). ಗಂಡಿಗೆ ಹೆಣ್ಣಲ್ಲದೆ, ಹೆಣ್ಣಿಂಗೆ ಹೆಣ್ಣುಂಟೇ ಲೋಕದೊಳಗೆ? ಈಯರಿ ಮರುಳ ಶಿವನ ನಾನೇನೆಂಬೆನಯ್ಯ? ಅಸಮಾನವನನ್ಯರಿಗೆ ಕೊಡುವ ದೇವನ ಈ ಮರುಳತನವ ನೋಡಾ! ಅದೇನು ಕಾರಣವೆಂದಡೆ, "ಪತಿರ್ಲಿಂಗ

ಸತಿ ೞಾಹಂ ಮಿತಿರ್ಯುಕ್ತಂ ಸದಾ ತಥಾ । ಪಂಚೇಂದ್ರಿಯ ಸುಖಂ ನಾಸ್ತಿ ಶರಣ ಸ್ಥಲಮುತ್ತಮಂ ॥ ಎಂದುದಾಗಿ, ಮುಕ್ಕಣ್ಣಂಗೆ ನಾ ಹೆಣ್ಣಾದ ಕಾರಣ, ಎನ್ನ ಕರಣೋಪಕರಣಂಗಳೆಲ್ಲವು ಲಿಂಗೋಪಕರಣಂಗಳಾಗಿ, ನಿಮ್ಮ ಚರಣವೇ ಹರಣವಾಗಿರ್ದೆನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

(೨೩). ಎಲ್ಲರ ಪರಿಯಲ್ಲಿ ಎನ್ನ ಗಂಡನಪರಿ. ಒಬ್ಬರು ಬಲ್ಲುದ ತಾನರಿಯ. ತಾಬಲ್ಲುದನೊಬ್ಬರರಿಯರು. ತವಕ ಬಂದಲ್ಲಿ, ಕೂಡುವ. ಅಲ್ಲದೊಡೆ, ಅಲ್ಲದ ಹಾಗಿಪ್ಪ ಕಪಿಲಸಿದ್ಧಮಲ್ಲಿಕಾರ್ಜುನಾ.

(೨೪). ದೇಹ ದೇವಾಲಯವು. ಮೇಲೆ ರತ್ನದ ಕಲಶ. ಆಳು ಪರಿವಾರಕ್ಕೆ ಇಂಬುಗೊಡದೆ, ಅರಮನೆಯೊಳಗೊಂದು ಎಸಳಮಂಟಪವಿಕ್ಕಿ, ಶಶಿಮುಖಿಯ ಸಂಗದೊಳಗಯ್ಯನಿರಲು, ಸಂಗ ಕಂಗಳ ತೆರೆದು, ಸಂಗ ಮತ್ತೊಂದಾಗೆ, ಲಿಂಗ ನಿನ್ನಯ ರೂಪು ಯೋಗಿನಾಥಾ.

## (೩) ಪೂಜೆಯಲ್ಲಿ.

(೨೫). ಗಗನಮಂಟಪದಲ್ಲಿ ಅಘಹರನ ಪೂಜೆ ಒಗುಮಿಗಿಲಾಗುತ್ತಿರ್ಪುದು ನೋಡಾ! ಅಲ್ಲಿ ಧಿಗಿ ಭುಗಿಲೆಂಬ ಶಬ್ದದ ಸೊಗಸು ನೋಡಾ, ಅಖಂಡೇಶ್ವರಾ.

(೨೬). ದೇಹವೆಂಬ ದೇಗುಲದೊಳಗೆ ಭಾವಸಿಂಹಾಸನವನ್ನು ಮಾಡಿ, ಜೀವದೊಡೆಯನ ಪೂಜಿಸಬಲ್ಲ ದೇವರಿಗೆ ದೇವನೆಂಬೆನಯ್ಯಾ ಅಖಂಡೇಶ್ವರಾ.

(೨೭). ಕಮಲಸಾಲೊಳಗೆ ಭ್ರಮರದ ಹಿಂಡು ಝೇಂಕರಿಸುತಿರ್ಪವು ನೋಡಾ. ನಿರ್ಮಲಚಿತ್ತದಿಂದ ಲಾಲಿಸಲು ಅದು ತನ್ನ ಸುಮನ ಸುಜ್ಞಾನದ ನಿಲವು ನೋಡಾ ಅಖಂಡೇಶ್ವರಾ.

(೨೮). ಆಯುತವಾಯಿತ್ತು ಅನುಭಾವ, ಸ್ವಾಯುತವಾಯಿತ್ತು ಶಿವಜ್ಞಾನ, ಸಮಾಧಾನವಾಯಿತ್ತು ಸದಾಚಾರ, ಇಂತೀ ತ್ರಿವಿಧ ಏಕಾರ್ಥವಾಗಿ, ಅರಿವಿನ ಹೃದಯ ಕಣ್ದೆರೆದು, ಅನಂತ ಲೋಕಾದಿಲೋಕದ ಅಸಂಖ್ಯಾತ ಮಹಾಗಣಂಗಳೆಲ್ಲರು ಲಿಂಗಭಾವದಲ್ಲಿ ಭರಿತರಾಗಿ, ಭಕ್ತಿ ರಾಜ್ಯವನೆ ಹೊಕ್ಕು, ನಿಜಲಿಂಗ ಸುಕ್ಷೇತ್ರವನೆ ಕೊಂಡು, ಅಮೃತ ಸರೋವರದೊಳಗಣ ವಿವೇಕ ವೃಕ್ಷ ಪಲ್ಲವಿಸಲು, ವಿರಕ್ತಿ ಎಂಬ ಪುಷ್ಪ ವಿಕಸಿತವಾಗಲು, ಪರಮಾನಂದದ ಮಹ

ದೊಳಗೆ ಪರಿಣಾಮ ಪಶ್ಚಿಮ ಜ್ಯೋತಿಯ ಬೆಳಗಿನೊಳಗೆ ಹರುಷದ ಸಿಂಹಾಸನ ವನಿಕ್ಕಿ ಪ್ರಾಣಲಿಂಗ ಮೂರ್ತಿಗೊಂಡಿರಲು, ದಕ್ಷಿಣವ ದಾಂಟಿ, ಉತ್ತರಾಬ್ಧಿಯಲ್ಲಿ ನಿಂದು ಅಖಂಡ ಪರಿಪೂರ್ಣಪೂಜೆಯ ಮಾಡುವವರಿಗೆ ನಮೋ ನಮೋ ಎಂಬೆ ಗುಹೇಶ್ವರಾ.

(೨೯). ಪ್ರಾಣಲಿಂಗಕ್ಕೆ ಕಾಯವೇ ಸಜ್ಜೆ, ಆಕಾಶಗಂಗೆಯಲ್ಲಿ ಮಜ್ಜನ, ಹೂವಿಲ್ಲದ ಪರಿಮಳದ ಪೂಜೆ, ಹೃದಯಕಮಲದಲ್ಲಿ 'ಶಿವಶಿವಾ' ಎಂಬ ಶಬ್ದ. ಇದು ಅದ್ವೈತ ಕಾಣಾ ಗುಹೇಶ್ವರಾ.

(೩೦). **ಪೂಜಿಸಿ ಕೆಳೆಯಿಂಕೆ ಇಳುಹಲದೇನೋ? ಅನವರತ ಪೂಜೆಯ** ಮಾಡಲದೇನೋ? ದೇಹವೇ ಪೀಠಿಕೆ, ಜೀವವೇ ಲಿಂಗ ಗುಹೇಶ್ವರಾ.

(೩೧). ವರ್ಣವಿಲ್ಲದ ಲಿಂಗಕ್ಕೆ ರೂಪು ಪ್ರತಿಷ್ಠೆಯ ಮಾಡುವರು. ಪ್ರಳಯವಿಲ್ಲದ ಲಿಂಗಕ್ಕೆ ಪ್ರಾಣಪ್ರತಿಷ್ಠೆಯ ಮಾಡುವರು. ನುಡಿಯಬಾರದ ಲಿಂಗಕ್ಕೆ ಜಪಸ್ತೋತ್ರಪೂಜೆಯ ಮಾಡುವರು. ಮುಟ್ಟಬಾರದ ಲಿಂಗವ ಮುಟ್ಟಿ ಕೊಂಡಾಡುವೆವೆಂಬರು. ಬೊಟ್ಟಡಲೆಡೆ ಇಲ್ಲದ ಲಿಂಗವ ಮುಟ್ಟಿ ಪೂಜಿಸುವೆ ನೆಂಬ ಭ್ರಷ್ಟರ ನೋಡಾ ಗುಹೇಶ್ವರಾ.

(೩೨). ಕಲ್ಲ ದೇವರೆಂದು ಪೂಜಿಸುವರು. ಆಗದು ಕಾಣಿರೋ. ಅಗ ಡಿಗರಾದಿರಲ್ಲಾ. ಮುಂದೆ ಹುಟ್ಟುವ ಕೂಸಿಂಗೆ ಇಂದು ಮೊಲೆಯ ಕೊಡುವಂತೆ ಗುಹೇಶ್ವರಾ.

**ಅರ್ಥ:**—ಹೃದಯಕಮಲದಲ್ಲಿಪ್ಪ ಸದಮಲ ಪ್ರಾಣಲಿಂಗವಲ್ಲದೆ, ಬೇರೆ ಮತ್ತೆ ಮಿಥ್ಯಾಭಾವದಿಂದ ಲಿಂಗ ಉಂಟೆಂದು ಅಪವರ್ತಿಸಿ ನುಡಿಯಲಾಗದು. ಅದೆಂತೆಂದೊಡೆ, ಅದು ಮಿಥ್ಯಾಭಾವ, ದೋಷಾರ್ಥ ಎನಿಸಿತ್ತಾಗಿ, ಎಂಬುದೀ ವಚನದ ತಾತ್ಪರ್ಯಾರ್ಥ.

(೩೩). ಎನಗೊಂದು ಲಿಂಗ, ನಿನಗೊಂದು ಲಿಂಗ, ಮನೆಗೊಂದು ಲಿಂಗ ವಾಯಿತ್ತು. ಹೋಯಿತ್ತಲ್ಲಾ ಭಕ್ತಿ ಜಲವ ಕೂಡಿ. ಉಳಿ ಮುಟ್ಟಿದ ಲಿಂಗವ ಮನ ಮುಟ್ಟಬಲ್ಲುದೇ ಗುಹೇಶ್ವರಾ?

**ಅರ್ಥ:**—ವಾಙ್ಮನಕ್ಕಗೋಚರವಾದ ಲಿಂಗವು ಮನೋಮೂರ್ತಿ ಯಾಗಿರ್ದ ಭೇದವನರಿಯದೆ, ಭಿನ್ನಬುದ್ಧಿಯಿಂದ ಇದು ಅನ್ಯ ಲಿಂಗ, ಇದು

ಎನ್ನ ಲಿಂಗ ಎಂಬವರಿಗೆ ಪ್ರಾಣಲಿಂಗ ಸಂಬಂಧ ಘಟಿಸದೆಂಬುದೀ ವಚನದ ತಾತ್ಪರ್ಯಾರ್ಥ.

(೩೪). ಸೃಷ್ಟಿಗೆ ಹುಟ್ಟಿದ ಶಿಲೆ, ಕಲ್ಲು ಕುಟಿಗಂಗೆ ಹುಟ್ಟಿದ ಮೂರುತಿ, ಮಂತ್ರಕ್ಕೆ ಲಿಂಗವಾಯಿತ್ತಲ್ಲಾ! ಈ ಮೂವರಿಗೆ ಹುಟ್ಟಿದ ಮಗನ ಲಿಂಗವೆಂದು ಕೈಯ್ಪಿಡಿವ ಅಚ್ಚ ವ್ರತಗೇಡಿಗಳನೇನೆಂಬೆ ಗುಹೇಶ್ವರಾ?

**ಅರ್ಥ:**—ಮನೋಮೂರ್ತಿಯಾದ ಲಿಂಗವು ಸರ್ವಾಂಗದಲ್ಲಿರ್ಪ ಭೇದವನರಿಯದೆ, ಉಪಾಧಿಯಿಂದ ಇಷ್ಟಲಿಂಗ ಪೂಜಿಸುವವರಿಗೆ ಪ್ರಾಣಲಿಂಗ ಸಂಬಂಧವಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

## (೪) ಶಿವಯೋಗದ ಅಷ್ಟಾಂಗಗಳು.

(೩೫). ಯಮ ನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣ ಸಮಾಧಿ ಈ ಎಂಟು ಅಷ್ಟಾಂಗಯೋಗಗಳು. ಈ ಯೋಗಂಗಳೊಳಗೆ ಉತ್ತರಭಾಗ, ಪೂರ್ವಭಾಗ ಎಂದು ಎರಡು ಪ್ರಕಾರವಾಗಿಹವು. ಯಮಪಂಚಕವೈದು ಪೂರ್ವಯೋಗ. ಧ್ಯಾನ ಧಾರಣ ಸಮಾಧಿ ಎಂದು ಮೂರು ಉತ್ತರಯೋಗ. ಇದಕ್ಕೆ ವಿವರ:- **ಯಮಯೋಗ,** ಅದಕ್ಕೆ ವಿವರ:—ಅನೃತ ಹಿಂಸೆ ಪರಧನ ಪರಸ್ತ್ರೀ ಪರನಿಂದೆ ಇಂತಿವೈದನು ಬಿಟ್ಟು, ಲಿಂಗ ಪೂಜೆಯ ಮಾಡುವದೇ ಯಮಯೋಗ. **ನಿಯಮಯೋಗ,** ಅದಕ್ಕೆ ವಿವರ:—ಬ್ರಹ್ಮಚಾರಿಯಾಗಿ ನಿರಾಪೇಕ್ಷಿತನಾಗಿ ನಡೆವನು. ಶಿವನಿಂದೆಯ ಕೇಳಿದಿಹನು. ಮಾನಸ, ವಾಚಕ ಉಪಾಂಶಿಕವೆಂಬ ತ್ರಿಕರಣದಲ್ಲಿ ಪ್ರಣಮ ಪಂಚಾಕ್ಷರಿಯ ಜಪಿಸುತ್ತ ಶುಚಿಯಾಗಿಹನು. ಅಶುಚಿತ್ವವ ಬಿಟ್ಟು, ವಿಭೂತಿ ರುದ್ರಾಕ್ಷಿಗಳ ಧರಿಸಿ, ಶಿವಲಿಂಗಾರ್ಚನ ತತ್ಪರನಾಗಿಹನು. ಪಾಪಕ್ಕೆ ಭೀತನಾಗಿಹನು. ಇದು ನಿಯಮಯೋಗ. ಇನ್ನು **ಆಸನಯೋಗ,** ಅದಕ್ಕೆ ವಿವರ:—ಸಿದ್ಧಾಸನ ಪದ್ಮಾಸನ ಸ್ವಸ್ತಿಕಾಸನ ಅರ್ಧ ಚಂದ್ರಾಸನ ಪರ್ಯಂಕಾಸನ. ಈ ಐದು ಆಸನಯೋಗಗಳಲ್ಲಿ ಸುಸ್ಥಿರ ಚಿತ್ತನಾಗಿ, ಮೂರ್ತಿಗೊಂಡು, ಶಿವಲಿಂಗಾರ್ಚನೆಯ ಮಾಡುವದೀಗ ಆಸನಯೋಗ. **ಪ್ರಾಣಾಯಾಮ,** ಅದಕ್ಕೆ ವಿವರ:—ಪ್ರಾಣಾಪಾನ ವ್ಯಾನ ಉದಾನ ಸಮಾನ ನಾಗ ಕೂರ್ಮ ಕೃಕರ ದೇವದತ್ತ ಧನಂಜಯವೆಂಬ ದಶವಾಯುಗಳು. ಪ್ರಾಣವಾಯು ಇಂದ್ರನೀಲ ವರ್ಣ, ಹೃದಯಸ್ಥಾನದಲ್ಲಿರ್ದು ಅಂಗುಷ್ಠ,

ತೊಡೆ ಘ್ರಾಣಾಗ್ರಪರಿಯಂತರದಲ್ಲಿ ಸತ್ರಾಣಿಸಿಕೊಂಡು, ಉಶ್ವಾಸ ನಿಶ್ವಾಸಂಗೈದು ಅನ್ನ ಜೀರ್ಣಮಂ ಮಾಡುತ್ತಿಹುದು. ಅಪಾನವಾಯು ಹರಿತವರ್ಣ ಗುದಸ್ಥಾನ ದಲ್ಲಿರ್ದು ಮಲಮೂತ್ರಂಗಳ ವಿಸರ್ಜನೆಯು ಮಾಡಿಸಿ, ಅಧೋದ್ವಾರಮಂ ಬಲಿದು, ಅನ್ನರಸವ್ಯಾಪ್ತಿಯಂ ಮಾಡಿಸುತ್ತಿಹುದು. ವ್ಯಾನವಾಯು ಗೋಕ್ಷೀರ ವರ್ಣ, ಸಂದಿ ಸಂದಿಗಳಲ್ಲಿರ್ದು, ನೀಡಿಕೊಂಬುದನು ಮುದಡಿಕೊಂಬುದನು ಮಾಡಿಸಿ, ಅನ್ನಪಾನವ ತುಂಬಿಸುತ್ತಿಹುದು. ಉದಾನವಾಯು ಎಳೆಮಿಂಚಿನ ವರ್ಣ ಕಂಠಸ್ಥಾನದಲ್ಲಿರ್ದು, ಸೀನುವ ಕೆಮ್ಮುವ ಕನಸು ಕಾಣುವ ಏಳಿಸುವ ನಿರೋಧಂಗಳಂ ಮಾಡಿಸಿ ಅನ್ನರಸಾ ಹಾರ ಸ್ಥಾಪನಂಗೈಸುತ್ತಿಹುದು. ಸಮಾನ ವಾಯು ನೀಲವರ್ಣನಾಭಿಸ್ಥಾನದಲ್ಲಿರ್ದು, ಆಪಾದ ಮಸ್ತಕ ಪರಿಯಂತರ ಪಸರಿಸಿಕೊಂಡು ಅನ್ನರಸವನು ಎಲ್ಲ ರೋಮಂಗಳಿಗೆ ಹಂಚಿಕ್ಕುವದು. ಈ ಐದು ಪ್ರಾಣಪಂಚಕ. ಇನ್ನು ನಾಗವಾಯು ಪೀತವರ್ಣ, ರೋಮನಾಳಂಗಳಲ್ಲಿರ್ದು, ಚಲನೆ ಇಲ್ಲದೆ ಆಡಿಸುತ್ತಿಹುದು. ಕೂರ್ಮವಾಯು ಶ್ವೇತವರ್ಣ ಲಲಾಟದಲ್ಲಿ ರ್ದು, ಶರೀರಮಂ ತೂಳ್ದು, ಪುಷ್ಟಿಯಂ ಮಾಡಿಕೊಂಡು ಬಾಯಿಮುಚ್ಚುತ್ತ, ತೆರೆವುತ್ತ ಉನ್ಮೀಲನಮಂ ಮಾಡಿಸುತ್ತಿಹುದು. ಕ್ರಕರವಾಯು ಅಂಜನ ವರ್ಣ, ನಾಸಿಕಾಗ್ರದಲ್ಲಿರ್ದು ಕ್ಷುಧಾದಿಧರ್ಮಂಗಳಂ ನೆಗಳಿಸಿ, ಗಮನಾಗಮನಂಗಳಂ ಮಾಡಿಸುತ್ತಿಹುದು. ದೇವದತ್ತ ವಾಯು ಸ್ಫಟಿಕವರ್ಣ ಗುಹ್ಯಕಟಿಸ್ಥಾನದಲ್ಲಿ ಕುಳ್ಳಿರ್ದಲ್ಲಿ ಮಲಗಿಸಿ, ಮಲಗಿರ್ದಲ್ಲಿ ಏಳಿಸಿ, ನಿಂದರಿಸಿ, ಚೇತರಿಸಿ, ಒರಲಿಸಿ ಮಾತನಾಡಿಸುತ್ತಿಹುದು. ಧನಂಜಯುವಾಯು ನೀಲವರ್ಣ ಬ್ರಹ್ಮ ರಂಧ್ರದಲ್ಲಿ ರ್ದು ಕರ್ಣದಲ್ಲಿ ಸಮುದ್ರ ಘೋಷಮಂ ಘೋಷಿಸಿ, ಮರಣ ಕಾಲಕ್ಕೆ ನಿರ್ಘೋಷಮುಪ್ಪುದು. ಈ ಪ್ರಕಾರದಲ್ಲಿ ಮೂಲವಾಯು ಒಂದೇ ಸರ್ವಾಂಗದಲ್ಲಿ ಸರ್ವತೋ ಮುಖವಾಗಿ ಚರಿಸುತ್ತಿಹುದು. ಆ ಪವನನೊಡನೆ ಪ್ರಾಣಕೂಡಿ, ಪ್ರಾಣದೊಡನೆ ಪವನ ಕೂಡಿ, ಹೃದಯಸ್ಥಾನದಲ್ಲಿ ನಿಂದು, ಹಂಸನೆನಿಸಿಕೊಂಡು, ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೆ ಎಂಬ ಷಡು ಚಕ್ರಂಗಳ ಮೇಲೆ ಸುಳಿದು, ನವನಾಳಂಗಳೊಳಗೆ ಚರಿಸುತ್ತಿಹುದು. ಅಷ್ಟ ದಳಂಗಳೇ ಆಶ್ರಯುವಾಗಿ, ಅಷ್ಟದಳಂಗಳ ಮೆಟ್ಟಿ ಚರಿಸುವ ಹಂಸನು ಅಷ್ಟ ದಳಂಗಳಿಂದಲಿ ವಿಶುದ್ಧಿ ಚಕ್ರವನೆಯ್ದು ಅಲ್ಲಿಂದ ನಾಸಿಕಾಗ್ರದಲ್ಲಿ ಹದಿನಾರಂಗುಲ ಪ್ರಮಾಣ ಹೊರಸೂಸುತ್ತಲಿಹುದು. ಹನ್ನೆರಡಂಗುಲ ಪ್ರಮಾಣ ಒಳಗೆ

ತುಂಬುತ್ತಿಹುದು. **ಹೀಗೆ ರೇಚಕ ಪೂರಕದಿಂದ** ಮರುತ ಸೂಸುತ್ತಿರಲು, ಸಮಸ್ತ ಪ್ರಾಣಿಗಳ ಆಯುಷ್ಯವು ದಿನದಿನಕ್ಕೆ ಕುಂದುತ್ತಿಹುದು. ಹೀಗೆ ಈಡಾಪಿಂಗಳದಲ್ಲಿ ಚರಿಸುವ ರೇಚಕ **ಪೂರಕಂಗಳ** ಭೇದವನರಿದು, ಮನ ಪವನಂಗಳ ಮೇಲೆ ಲಿಂಗ ಸಂಬಂಧಿಸಿ, ಮನಪವನ ಪ್ರಾಣಂಗಳು ಲಿಂಗದೊಡನೆ ಕೂಡಿ, ಲಿಂಗಸ್ವರೂಪವ ಮಾಡಿ, ವಾಯು ಪ್ರಾಣತ್ವವ ಕಳೆದು, ಲಿಂಗಪ್ರಾಣಿಯ ಮಾಡಿ, ಹೃದಯಕಮಲಮಧ್ಯದಲ್ಲಿ ಪ್ರಣಮವನುಚ್ಚರಿಸುತ್ತ, ಪರಶಿವ ಧ್ಯಾನದಲ್ಲಿ ತರಹರನಾಗಿರ್ಪುದೀಗ ಪ್ರಾಣಾಯಾಮ. ಇನ್ನು **ಪ್ರತ್ಯಾಹಾರಯೋಗ,** ಅದಕ್ಕೆ ವಿವರ:—ಆಹಾರದಿಂ ನಿದ್ರೆ, ನಿದ್ರೆಯಿಂದ ಇಂದ್ರಿಯಂಗಳು, ಇಂದ್ರಿಯಂಗಳಿಂದ ವಿಷಯಂಗಳು ಘನವಾಗುತ್ತಿಹವು ನೋಡಾ. ಆ ವಿಷಯದಿಂದ ದುಷ್ಕರ್ಮಂಗಳ ಮಿಗೆಮಾಡಿ, ಜೀವಂಗೆ ಭವಬಂಧನ ಒಡಗೂಡಿ, ಆಯಾಸಂ ಬಡುತಿರ್ಪರಜ್ಞಾನ ಕರ್ಮಿಗಳು. ಈ ಅವಸ್ಥಿತಿಯ ಹೋಗದಿಹರು ಸುಜ್ಞಾನಿಧರ್ಮಿಗಳು. ಅದರಿಂದ ಆಹಾರಮಂ ಕ್ರಮಕ್ರಮದಿಂದ ಉದರಕ್ಕೆ ಹವಣಿಸುತ್ತ ಬಾಹುದು ಗುರುಕೃಪೆಯಿಂದ. ಈ ಪ್ರಕಾರದಿಂದ ಸರ್ವೇಂದ್ರಿಯಂಗಳನು ಲಿಂಗಮುಖದಿಂದ ಸಾವಧಾನವ ಮಾಡಿಕೊಂಡಿಪ್ಪುದೀಗ ಪ್ರತ್ಯಾಹಾರಯೋಗ. ಈ ಐದು ಪೂರ್ವಯೋಗಂಗಳು. ಇನ್ನು **ಧ್ಯಾನಯೋಗ,** ಅದಕ್ಕೆ ವಿವರ:—ಅಂತರಂಗದ ಶುದ್ಧ ಪರಮಾತ್ಮ ಲಿಂಗವನೇ ಶಿವಲಿಂಗಸ್ವರೂಪವ ಮಾಡಿ ಕರಸ್ಥಲಕ್ಕೆ ಶ್ರೀಗುರು ತಂದು ಕೊಟ್ಟನಾಗಿ, ಆ ಕರಸ್ಥಲದಲ್ಲಿರ್ದ ಶಿವಲಿಂಗವೇ ಪರಮಾತ್ಮ ಚಿನ್ಹವೆಂದರಿದು, ಆ ಲಿಂಗವನೆ ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ, ಬ್ರಹ್ಮರಂಧ್ರ ಮುಖ್ಯವಾದ ಸ್ಥಾನಂಗಳಲ್ಲಿ ಆ ಶಿವಲಿಂಗ ಮೂರ್ತಿಯನೆ ಆಹ್ವಾನ ವಿಸರ್ಜನೆ ಇಲ್ಲದೆ ಧ್ಯಾನಿಸುವದೀಗ ಧ್ಯಾನಯೋಗ. ಆ ಲಿಂಗ ಭಾವ ಕರಣ ಮನಮುಖ್ಯವಾದ ಸರ್ವಾಂಗದಲ್ಲಿ ಧರಿಸುವದೀಗ **ಧಾರಣಯೋಗ.** ಆ ಸತ್ಕ್ರಿಯಾ ಜ್ಞಾನಯೋಗದಿಂದ ಇಷ್ಟಪ್ರಾಣಂಗೆ ಶಿವಕಳೆಯ ಸಂಬಂಧಿಸಿ, ಇಷ್ಟಪ್ರಾಣ ಭಾವವೆಂಬ ಲಿಂಗತ್ರಯವನು ಏಕಾಕಾರವನು ಮಾಡಿ, ಅಖಂಡಪರಿಪೂರ್ಣ ಕೇವಲ ಪರಂಜ್ಯೋತಿಸ್ವರೂಪವಪ್ಪ ಮಹಾಲಿಂಗದೊಳಗೆ ಸಂಯೋಗವಾಗಿ, ಭಿನ್ನವಿಲ್ಲದೆ ಏಕಾರ್ಥವಾಗಿಹುದು **ಸಮಾಧಿಯೋಗ.** ಇಂತೀ ಅಷ್ಟಾಂಗಯೋಗದಲ್ಲಿ ಶಿವಲಿಂಗಾರ್ಚನೆಯ ಮಾಡಿ, ಶಿವತತ್ವದೊಡನೆ ಕೂಡುವದೀಗ ಲಿಂಗಾಂಗಯೋಗ. ಇನ್ನು

ಕರ್ಮಕಾಂಡಿಗಳು ಮಾಡುವ ಕರ್ಮಯೋಗಗಳು ಆವಾವೆಂದಡೆ, ಯಮನಿಯ ಮಾಸನ ಪ್ರಾಣಾಯಾಮ ಪ್ರತ್ಯಾಹಾರವೆಂಬೀ ಐದನು ಲಿಂಗವಿರಹಿತವಾಗಿ ಮಾಡುತಿಪ್ಪರಾಗಿ, ಈ ಐದು ಕರ್ಮಯೋಗಂಗಳು. ಅವರು ಲಕ್ಷಿಸುವಂಥ ವಸ್ತುಗಳು ಉತ್ತರಯೋಗವಾಗಿ, ಮೂರು ತೆರನಾದವು. ಸಾಕ್ಷಾತ್ ಪರತತ್ವ ವೆಂದು ಲಕ್ಷಿಸುವದು. ಬಿಂದುವು ಆಕಾರ ಉಕಾರ ಮಕಾರ, ಈ ಮೂರು ಶುದ್ಧ ಬಿಂದು ಸಂಬಂಧವೆಂದು, ಆ ಶುದ್ಧ ಬಿಂದುವೇ ಕೇವಲ ದಿವ್ಯಪ್ರಕಾಶವೆಂದು, ಲಕ್ಷಿಸುವದು. ಚಂದ್ರನ ಕಲೆಯ ಹಾಗೆ, ಸೂರ್ಯನ ಕಿರಣಂಗಳ ಹಾಗೆ, ಮಿಂಚುಗಳ ಪ್ರಕಾಶದ ಹಾಗೆ, ಮುತ್ತು ಮಾಣಿಕ ನವರತ್ನದೀಪ್ತಿಗಳ ಹಾಗೆ, ಪ್ರಕಾಶಮಯವಾಗಿಹುದು, ಎಂದು ಲಕ್ಷಿಸುವದೀಗ ಕಲಾಕ್ಷ. ಈ ಎಂಟು ಇತರ ಮತದವರು ಮಾಡುವ ಯೋಗಂಗಳು. ಈ ಕರ್ಮಕೌಶಲ್ಯದಲ್ಲಿ ಲಿಂಗ ವಿಲ್ಲ ನೋಡಾ. ಇದು ಕಾರಣ ಇವ ಮುಟ್ಟಲಾಗದು. ಇನ್ನು ವೀರಮಾಹೇ ಶ್ವರರುಗಳ ಲಿಂಗಸಂಧಾನವೆಂತೆಂದೊಡೆ, ಬ್ರಹ್ಮರಂಧ್ರದಲ್ಲಿಪ್ಪ ನಾದ ಚೈತನ್ಯ ವಪ್ಪ ಪರಮ ಚಿತ್ಕಳೆಯುಳ್ಳ ಭಾವಮನಕರದಲ್ಲಿ ಶ್ರೀಗುರು ತಂದು ಸಾಹಿತ್ಯವ ಮಾಡಿದನಾಗಿ, ಭಾವದಲ್ಲಿ ಸತ್ಸ್ವರೂಪವಪ್ಪ ಇಷ್ಟಲಿಂಗವೆಂದೆನಿಸಿ, ಒಂದೇ ವಸ್ತು ತನುಮನಭಾವಂಗಳಲ್ಲಿ ಇಷ್ಟಪ್ರಾಣ ಭಾವವಾದ ಭೇದವನರಿಯದೆ, ಇಷ್ಟಲಿಂಗವ ದೃಷ್ಟಿಯಿಂದ ಗ್ರಹಿಸಿ, ಪ್ರಾಣಲಿಂಗವ ಮನಜ್ಞಾನದಿಂದ ಗ್ರಹಿಸಿ, ತೃಪ್ತಿಲಿಂಗವ ಭಾವಜ್ಞಾನದಿಂದ ಗ್ರಹಿಸಿ, ಈ ಲಿಂಗತ್ರಯವಿಡಿದು ಆಚರಿಸಿ, ಲಿಂಗದೊಡನೆ ಕೂಡಿ, ಲಿಂಗವೇ ತಾನು ತಾನಾಗಿ, ವಿರಾಜಿಸುತಿರ್ಪುದೀಗ ಶಿವ ಯೋಗ ನೋಡಾ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

---

## ಪ್ರಾಣಲಿಂಗಿಯ ಅಂಗಲಿಂಗ ಸಾಮರಸ್ಯ.

(೧). ತುಂಬಿ ಪರಿಮಳವನುಂಡಿತೋ? ಪರಿಮಳ ತುಂಬಿಯನುಂಡಿತೋ? ಲಿಂಗ ಪ್ರಾಣವಾಯಿತೋ ಪ್ರಾಣ ಲಿಂಗವಾಯಿತೋ? ಗುಹೇಶ್ವರಾ ಈ ಉಭಯದ ಭೇದವ ನೀನೇ ಬಲ್ಲೆ.

(೨). ಪ್ರಾಣಲಿಂಗ ಸಂಬಂಧಿಗಳೆಂದು ನುಡಿವುತಿಪ್ಪ ಅಣ್ಣಗಳಿರಾ, ನೀವು ಕೇಳಿರೋ. ಪ್ರಾಣಕ್ಕೆ ಲಿಂಗ ಮೊದಲೋ? ಲಿಂಗಕ್ಕೆ ಪ್ರಾಣ ಮೊದ

ಲೋ? ಇಂತೀ ಉ[illegible] ವಿಚಾರಿಸಿಕೊಂಡು ನುಡಿಯಿರಣ್ಣಾ. ಗಂಧವ ವಾಯು ಸೋಂಕಿತೋ? ವಾಯುಗಂಧವ ಸೋಂಕಿತೋ? ಮನವ ಲಿಂಗವರಿಯಿತೋ? ಲಿಂಗವ ಮನವರಿಯಿತೋ? ಕಾಯದಲ್ಲಿ ಸೋಂಕಿದ ಸುಖವ ಮನದಲ್ಲಿ ಅರಿವರಾರೋ? ಮನದಲ್ಲಿ ಮುಟ್ಟಿದ ಘನವ ಅರಿವಿನ ಅನುವಿನಿಂದ ಅರಿವರಾರೋ? ಇಂತೀ ಉಭಯುವನರಿತವರ ಪ್ರಾಣಲಿಂಗಿಗಳೆಂಬೆ. ಉರಿ ಸೋಂಕಿದ ಕರ್ಪುರ ನಿಲ್ಲುವದಕ್ಕೆ ನೆಲೆವನೆ ಇನ್ನಾವುದೋ? ಭ್ರಮರ ಸೋಂಕಿದ ಸುವಾಸನೆಗೆ ಕಡೆ ಮೊದಲಾವುದೋ? ಹುಳು ಕೊಂಡ ಜಲಕ್ಕೆ ನೆಲೆವನೆ ಇನ್ನಾವುದೋ? ಲಿಂಗ ವರಿತಮನವು ಹಿಂಗುವದಕ್ಕೆ ಠಾವು ಇನ್ನಾವುದೋ? ಇಂತೀ ಗುಣಂಗಳಲ್ಲಿ ಕಳೆದುಳಿದ ಮಹಾತ್ಮಂಗೆ ನಮೋ ನಮೋ ಎಂಬೆ ನಿಃಕಳಂಕಮಲ್ಲಿಕಾರ್ಜುನಾ.

(೩). ಅಂಗಲಿಂಗ, ಲಿಂಗವಂಗವೆಂದರಿದ ಬಳಿಕ, ಅಲ್ಲಿಯೇ ಕಾಣಿರೋ. ಕೂಡಲಚನ್ನಸಂಗಯ್ಯ ಲಿಂಗ ನಿರಂತರದಲ್ಲಿಯೇ ಕಾಣಿರೋ.

**ಅರ್ಥ**:—ಲಿಂಗಾಂಗವೆರಡಾದುದ ಒಂದೇ ಲಿಂಗವೆಂದರಿದು ಲಿಂಗಾಂಗ ಸಂಬಂಧದ ಅಭಿನ್ನಜ್ಞಾನಕ್ರಿ ತನ್ನಲ್ಲಿ ಅಳವಟ್ಟರೆ ಆ ಲಿಂಗವು ಬೇರಿಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

(೪). ಇಷ್ಟಲಿಂಗವ ಹಿಡಿದು ಪೂಜೆಯು ಮಾಡುವಲ್ಲಿ, ಕಷ್ಟಗುಣಕ್ಕೆ ಬಾರದಿರಬೇಕು. ಪ್ರಾಣಲಿಂಗವನರಿದು ಭಾವಿಸುವಲ್ಲಿ ಜಾಗ್ರತ್ ಸ್ವಪ್ನಸುಷುಪ್ತಿ ವಿಪತ್ತಿಲಯಕ್ಕೊಳಗಾಗದಿರಬೇಕು. ಹೀಗೆ ಉಭಯುವನರಿದು ದಗ್ಧವಾದಂಬರ ದಂತೆ, ವಾರಿಯು ಕೂಡಿದ ಕ್ಷೀರದಂತೆ, ಭಾವಕ್ಕೆ ಭ್ರಮೆ ಇಲ್ಲದೆ, ಸಾಕಾರದ ವಿಕಾರವ ಮರೆದು ಪದತ್ರಯದ ತುತ್ತಿಂಗೆ ತುಚ್ಛನಾಗದೆ ನಿಚ್ಚಯುವಾದ ಮಹಾತ್ಮಂಗೆ ನಮೋ ನಮೋ ನಿಷ್ಕಳಂಕ ಮಲ್ಲಿಕಾರ್ಜುನಾ.

**ಅರ್ಥ**:—ಇಷ್ಟಬ್ರಹ್ಮವನು ಪಿಡಿದು ಪೂಜಿಸುತ್ತಿರ್ದ ಬಳಿಕ ತನುವಿನ ಜಿಹ್ವಾಲಂಪಟ್ಯ, ಗುಹ್ಯಾಲಂಪಟತ್ವವೆಂಬ ಕ್ಷೀಣಗುಣಕ್ಕೊಳಗಾಗದಿರಬೇಕು. ಇಷ್ಟಲಿಂಗವೇ ಪ್ರಾಣಲಿಂಗವಾಗಿ ತಿಳಿದು, ಆ ಪ್ರಾಣಲಿಂಗವುಳ್ಳವನಾದ ಬಳಿಕ ಅವಸ್ಥಾತ್ರಯಂಗಳ ವರ್ತನೆ ಇಲ್ಲದಿರಬೇಕು. ಜನನಮರಣಂಗಳಿಗೆ ಈಡಾಗದಿರಬೇಕು. ಹೀಗೆ ಇಷ್ಟಪ್ರಾಣಲಿಂಗ ಸಂಬಂಧವನು ತಿಳಿದು ಸುಟ್ಟಸೀರೆಯು ಉಡುವದಕ್ಕೂ ತೊಳೆವುದಕ್ಕೂ ಬಾರದಿರುವ ಹಾಗೆ ಉದಕದಲ್ಲಿ ಬೆರೆದ ಹಾಲು

ಆ ಉದಕದಿಂದ ಬೇರಾಗದಿರುವ ಹಾಗೆ, ಪ್ರಾಣ[illegible] ಕೂಡಿದ ಚಿತ್ತಕ್ಕೆ ಇಂದ್ರಿಯ ವಿಷಯಂಗಳ ಭ್ರಾಂತಿಲ್ಲದೆ, ದೇಹ ಪ್ರಪಂಚವ ಮರೆದು ಬಿಟ್ಟು ಪರ ಲೋಕದ ಸಾಮೀಪ್ಯ ಸಾರೂಪ್ಯಂಗಳನನುಭವಿಸಬೇಕೆಂದು ಜೀವಭಾವವ ಮುಂದುಗೊಂಡು ಚರಿಸದೆ ಯಥಾರ್ಥವಾದ ಮಹಾಲಿಂಗದಲ್ಲಿ ಕೂಡಿ ಮಹಾ ಲಿಂಗವೇ ತಾನಾದ ಮಹಿಮಾಪದವನುಳ್ಳ ಶರಣಂಗೆ ಸಾಂದ್ರನಮಸ್ಕಾರವೆಂಬು ದರ್ಥ.

( ೫ ). ಅಂಗಲಿಂಗವೆಂಬನ್ನಕ್ಕರ, ಯೋಗಪೂಜೆ ಪುಣ್ಯಕ್ಕೆ ಬೀಜ. ಆತ್ಮನನರಿದಿಹೆನೆಂಬನ್ನಕ್ಕರ, ಉಭಯದೊಡಲಾಯಿತ್ತು. ಉಭಯದ ಗಜಿಬಜಿ ಯಲ್ಲಿ ಸಿಲುಕದೆ ನಿಂದ ನಿಜಗುಣಯೋಗಿ.

**ಅರ್ಥ:**—ಇದು ಅಂಗವು, ಇದು ಲಿಂಗವು ಎಂಬ ಪರಿಯಂತರ ಅಷ್ಟ ವಿಧಾರ್ಚನೆ ಷೋಡಶೋಪಚಾರಂಗಳ ಮಾಡುವದುಂಟಾಗಿರ್ಪುದು. ಆ ಭಿನ್ನ ಪೂಜಾಕ್ರಿಯೆಗಳು ಸುಕೃತಕ್ಕೆ ಕಾರಣವು. ಶೃತಜ್ಞಾನದಿಂದ ಆತ್ಮನೇ ಬ್ರಹ್ಮ ನೆಂದು ತಿಳಿದೆನೆಂಬ ಪರಿಯಂತರ, ಅರಿದಲ್ಲಿಯೇ ಬ್ರಹ್ಮವಾಗಿ, ಮರೆದಲ್ಲಿ ದೇಹ ದಲ್ಲಿ ದೇಹಿಕನಾಗಿರುವ ಅರಿವು ಮರವೆಗೀಡಾಯಿತ್ತು. ಅವನ ಜ್ಞಾನವು ವೇ ದಾಂತ ಸಿದ್ಧಾಂತಗಳೆಂಬೆರಡರ ಅಹುದು ಅಲ್ಲವೆಂದು ಹೋರಾಡುವ ಕೋಳಾ ಹಳ ಧ್ವನಿಗಳಲ್ಲಿ ಬೆರೆಯದೆ, ಅವಿರಳಜ್ಞಾನ ಕ್ರಿಯಾಚಾರದಲ್ಲಿ ಸ್ವಸ್ಥವಾದ ಶಿವ ಯೋಗಿಯಾದ ಶರಣನೆಂಬುದರ್ಥ.

## ( ಸತಿಪತಿ ಭಾವದ ವಚನಗಳು. )

( ೧ ). ಕೈಗಳ ಬಿಚ್ಚಿದಡೆ, ಮೈಗಳ ಹರಹಿದಡೆ, ನಿಮ್ಮ ಬೆನ್ನಬಿಡೆ. ತನುವಡೆದು ಜ್ಞಾನ ತನುವಿಂದ ಕೂಡುವೆ, ಕಪಿಲ ಸಿದ್ಧಮಲ್ಲಿನಾಥಯ್ಯ.

( ೨ ). ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವ? ಅಂಗವಿದ್ಯೆಯನೊಲ್ಲ. ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲೀಯ್ಯ. ಕೈದೊಳದಲ್ಲದೆ, ಮುಟ್ಟಲೀಯ್ಯ. ಕಾಲುದೊಳದಲ್ಲದೆ, ಹೊದ್ದಲೀಯ್ಯ. ಇಂತು ಸರ್ವಾಂಗ ಸಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡ ನವ್ವಾ.

(೭). **ಕಾಯಕ್ಕೆ** ಕಾಹ ಕೊಡುವದಲ್ಲದೆ, ಮನಕ್ಕೆ ಕಾಹ ಕೊಡುವರೇ ಅವ್ವಾ? ಇಂತಪ್ಪ ಸೋಜಿಗವನೆಲ್ಲಿಯೂ ಕಾಣೆನು. ಸದ್ಗುಣದ ಕಾಹ ಮನಕ್ಕೆ ಕೊಟ್ಟನು ಉರಿಲಿಂಗದೇವನು. ಸೋಜಿಗವವ್ವಾ!

(೯). ಮಚ್ಚು ಅಚ್ಚುಕವಾಗಿ ಒಪ್ಪಿದ ಪರಿಯ ನೋಡಾ. ಎಚ್ಚರವರಿತು, ಅರಿದು ನಡಿಸಬೇಕು. ಅಪ್ಪಿದರೆ ಅಸ್ಥಿಗಳು ನುಗ್ಗುನುರಿಯಾಗಬೇಕು. ಬೆಚ್ಚಡೆ ಬೆಸುಗೆಯರಿಯದಂತಿರಬೇಕು. ಮಚ್ಚು ಒಪ್ಪಿತ್ತು, ಚನ್ನಮಲ್ಲಿಕಾರ್ಜುನಯ್ಯನ ಸ್ನೇಹಾ.

(೧೦). ಕೇಳು ಕೇಳಿರೆ, ಕೇಳಿರಿ, ಎಲ್ಲರು. ಮನಕ್ಕೆ ಮನೋಹರವಾದ, ಕಂಗಳಿಗೆ ಮಂಗಳವಾದ ಶ್ರಂಗಾರದ ನಲ್ಲ ಬಂದು, ಎನ್ನ ತನ್ನೊಳಗೆ ಮಾಡಿಕೊಂಡ. ಅಂದು ವಿಪರೀತವ ಹೇಳುವೆ. ಮನಒಲಿದು ಆಲಿಸಿರವ್ವಾ. ಎನ್ನ ತನುವಿನೊಳಗೆ ತನ್ನ ತನುವನಿಟ್ಟು, ಮಹಾತನುವ ಮಾಡಿದ. ಎನ್ನ ಮನದೊಳಗೆ ತನ್ನ ಮನವನಿಟ್ಟು, ಘನಾ ಘನವ ಮಾಡಿದ. ಎನ್ನ ಪ್ರಾಣದೊಳಗೆ ತನ್ನ ಪ್ರಾಣವನಿಟ್ಟು, ಚಿತ್ಪ್ರಾಣವ ಮಾಡಿದ. ಎನ್ನ ಜೀವದೊಳಗೆ ತನ್ನ ಜೀವನಿಟ್ಟು, ಸದ್ಭಾವವ ಮಾಡಿದ. ಎನ್ನ ಕರಣಂಗಳೊಳಗೆ ತನ್ನ ಕರಣಂಗಳನಿಟ್ಟು, ಚಿತ್ಕರಣಂಗಳ ಮಾಡಿದ. ಎನ್ನಿಂದ್ರಿಯಂಗಳೊಳಗೆ ತನ್ನಿಂದ್ರಿಯಂಗಳನಿಟ್ಟು, ತನ್ನಿಂದ್ರಿಯಂಗಳ ಮಾಡಿದ. ಎನ್ನ ವಿಷಯಂಗಳೊಳಗೆ ತನ್ನ ವಿಷಯಂಗಳನಿಟ್ಟು, ನಿರ್ವಿಷಯಂಗಳ ಮಾಡಿದನು. ಆ ಅಖಂಡೇಶ್ವರನೆಂಬ ನಲ್ಲನೊಳಗೆ ಕರ್ಪುರ ವೆಣ್ಣುಉರಿಯ ಪುರುಷನ ನಪ್ಪಿ ತಾನಳಿದಂತಾದೆನವ್ವ, ಕೇಳಿರವ್ವಾ.

(೧೧). ಆರ ಪರಿಯಲ್ಲ ನಮ್ಮನಲ್ಲನು. ವಿಶ್ವವೆಲ್ಲ ಸತಿಯರು. ಚೋದ್ಯದ ಪುರುಷನು. ಅವರವರ ಪರಿಯಲ್ಲಿ ಅವರವರ ನೆರೆವನು. ಅವರವರಿಗೆ ಅವರಂತೆ ಸುಖಮಯನು ನೋಡಾ. ಅವರೆಲ್ಲರ ವಂಚಿಸಿ, ಎನ್ನನಗಲದ ಪರಿಯ ಹೇಳಾ ಕೆಳದಿ, ನೀನೊಳ್ಳಿದಳಾದರೆ. ಮಹಾಮಂತ್ರವ ಜಪಿಸಲು, ಎನ್ನನಗಲ, ನಿನ್ನಾಣೆ, ಉರಿಲಿಂಗದೇವ ತನ್ನಾಣೆ.

(೧೨). ನಲ್ಲನ ಕೂಡುವನ್ನಕ್ಕ, ಸುಖದ ಸುಗ್ಗಿಯ ನೇನೆಂದರಿಯೆ ಕೇಳಾ ಕೆಳದಿ. ಸುಖದ ಸವಿಗೆ ಸವಿಸಿ ಕೂಡಿದೆ, ನೋಡವ್ವಾ. ತವಕಕ್ಕೆ ತವಕ ಮಿಗೆ ಮೇಲುವರಿದು, ಕೂಡಿದಂತೆ ಕೊಡುವೆನು ಉರಿಲಿಂಗದೇವರಾ.

(೧೩). ಉರಿಯ ಸೆರಗನುಟ್ಟು, ಕಡೆಸೆರಗ ಬಿಡಿಸಿ, ಮಡದಿ ತನ್ನ ಕೆಳದಿಯರೊಡಗೂಡಿ ಪರಿತಂದು, ಮುಡಿ ಹಿಡಿದು, ಉಟ್ಟಸೀರೆಯನು ಸುಲಿದ. ಕೂಡಲಚನ್ನಸಂಗನಲ್ಲಿ ಎನ್ನ ಪರಮಗುರು ಬಸವಣ್ಣಂಗೆ ನಮೋ ನಮೋ ಎನುತಿರ್ದೆನು.

(೧೪). ಆತನ ನೋಡಿದಂದು, ದೆಸೆಗಳ ಮರೆದೆನಿನ್ನೆಂತವ್ವ. ಅವ್ವಾ, ಅವ್ವಾ, ಆತನ ನುಡಿಸಿದಡೆ, ಮೈಯಲ್ಲಾ ಬೆವತವಿನ್ನೆಂತವ್ವಾ. ಅವ್ವಾ, ಅವ್ವಾ, ಕಯ್ಯ ಹಿಡಿದಡೆ, ಎನ್ನನಿರಿಗಳು ಸಡಿಲಿದವಿನ್ನೆಂತವ್ವಾ. ಇಂದೆಮ್ಮ ಮಹಾಲಿಂಗ ಗಜೇಶ್ವರನಪ್ಪಿದನೆಂದಡೆ, ನಾನೆನ್ನ ಮರೆದೆನಿಂತವ್ವಾ.

(೧೫). ಇಂದುವಿನಲ್ಲಿ ಉದಯವಾದ ಕಲ್ಲಿನಂತೆ, ಮುನಿಸ ಮರೆದಿರ್ದಳವ್ವೆ. ಅವನ ಸುಖದಲ್ಲಿ ಸುಖಿಯಾದಳು. ಅಗಲಿದಡೆ ಕರಿಗೊಂಡಳು. ಮಹಾಲಿಂಗ ಗಜೇಶ್ವರ ದೇವರಲ್ಲಿ ಮನಸೋಂಕಿ, ಮನಲೀಯ್ಯವಾದಳವ್ವೆ.

(೧೬). ಹಗಲು ಮನಸಿಂಗಂಜಿ, ಇರುಳು ಕನಸಿಂಗಂಜಿ, ಧ್ಯಾನಮೌನಿಯಾಗಿರ್ದಳವ್ವೆ. ಸಖಿ ಬಂದು ಬೆಸಗೊಂಡಡೆ, ಏನೆಂದು ಹೇಳುವೆನವ್ವೆ. ಏನೆಂದು ನುಡಿವೆನವ್ವೆ. ಸಾಕಾರದಲ್ಲಿ ಸವೆದು, ನಿರಾಕಾರದಲ್ಲಿ ಅರ್ಪಿಸಿದಡೆ, ಮಹಾಲಿಂಗ ಗಜೇಶ್ವರದೇವನುಮೇಶ್ವರನಾಗಿರ್ದನವ್ವೆ.

(೧೭). ಮುನಿಸ ಮುನಿದಡೆ, ಶ್ರೀಗಂಧದ ಮುರುಡಿನ ಹಾಗಿರಬೇಕವ್ವಾ. ತೆಗೆದಪ್ಪಿದಡೆ, ಚಂದನದ ಶೀತಳದ ಹಾಂಗಾಗಬೇಕು. ಹೆಣಗುವಲ್ಲಿ, ಮೈಯ್ಯಲ್ಲಾ ಕಯ್ಯಾಗಿ ಹೆಣಗಬೇಕವ್ವಾ. ಮಹಾಲಿಂಗ ಗಜೇಶ್ವರನ ನೆರವ ಭರದಿಂದ ನೊಂದು ಅಂಕದ ಮೇಲೆ ಬಿದ್ದ ಹಾಂಗಿರಬೇಕವ್ವಾ.

---

## ಪ್ರಾಣಲಿಂಗಿಯ ಸಾಮರಸ್ಯ ಸುಖವು.

(೧). ಅಂಗದಿಂದ ಲಿಂಗ ಸುಖ. ಲಿಂಗದಿಂದ ಅಂಗ ಸುಖ. ಅಂಗ ಲಿಂಗ ಸಂಗದಿಂದ ಪರಮಸುಖ ನೋಡಯ್ಯ. ಅಂಗಲಿಂಗ ಸಂಗ ಸುಖವನು ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯನೇ ಬಲ್ಲ.

(೨). ಅಂಗದುದಯ ಲಿಂಗಸುಖವು. ಲಿಂಗದುದಯ ಅಂಗಸುಖವು. ಅಂಗ ಲಿಂಗ ಸಂಗ ಸುಖದಿಂದ ಮಿಕ್ಕಿಮೀರಿನಿಂದ ಪರಮಸುಖವನೇನೆಂಬೆನಯ್ಯ ? ಕೂಡಲಚನ್ನಸಂಗನ ಶರಣನನೇನೆಂಬೆನಯ್ಯ ?

(೩). ಅಂತರಂಗದಲ್ಲಿ ಅಯತವನರಿದವಂಗೆ, ಬಹಿರಂಗದಲ್ಲಿ ಹಮ್ಮೆಲ್ಲಿಯದಯ್ಯ? ಅಂತರಂಗದಲ್ಲಿ ಅನುಮಿಷನಾಗಿ, ನಿರಂತರ ಲಿಂಗಸುಖಿ ನೋಡಯ್ಯ. ಸರ್ವೇಂದ್ರಿಯ ಸನುಮತನಾಗಿ, ಮಹಾಘನ ಸೋಮೇಶ್ವರ ಮುಂತಾಗಿ, ತುಂಬಿದುದು ತುಳುಕದು ನೋಡಾ. ನಂಬಿದುದು ಸಂದೇಹಿಸದು ನೋಡಾ. ಒಲಿದುದು ಓಸರಿಸದು ನೋಡಾ. ನೆರೆಯರಿದುದು ಮರೆಯದು ನೋಡಾ. ಚೆನ್ನಮಲ್ಲಿಕಾರ್ಜುನಯ್ಯ, ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯ.

(೪). ಶ್ರೀಗುರು ಪ್ರಾಣಲಿಂಗವನು ಕರತಲಾಮಲಕ ಮಾಡಿ, ಕರಸ್ಥಲಕ್ಕೆ ತಂದುಕೊಟ್ಟನಾಗಿ, ಒಳಗೆನ್ನದೆ ಹೊರಗೆನ್ನದೆ, ಆ ಲಿಂಗವನಪ್ಪಿ ಮುಟ್ಟಿ ಹರುಷದೊಳೋಲಾಡುವೆನು. ಅದೆಂತೆಂದೊಡೆ, "ನಾದಬಿಂದು ಕಳಾತೀತಂ" ಇಂತೆಂದುದಾಗಿ, ಮಹಾಲಿಂಗವ ಪಡೆದು, ಆನಂದಿಸುವೆ, ಕೂಡಲಸಂಗಮದೇವಾ.

(೫). ಸ್ವಸ್ಥಾನ ಸುಸ್ಥಿರ ಸುಮನ ಮಂಟಪದೊಳಗೆ ನಿತ್ಯನಿರಂಜನದ ಪ್ರಭೆಯ ಬೆಳಗು ಶಿವಯೋಗದನುಭಾವವು ಏಕಾರ್ಥವಾಗಿ, ಗುಹೇಶ್ವರಾ, ನಿಮ್ಮ ಶರಣನು ಅನುಪಮ ಸುಖಿಯಾಗಿರ್ದ.

## (ಸತಿಪತಿಭಾವದ ವಚನಗಳು.)

(೧). ನಲ್ಲನ ರೂಪೆನ್ನ ನೇತ್ರವ ತುಂಬಿತ್ತು. ನಲ್ಲನ ನುಡಿ ಎನ್ನ ಶ್ರೋತ್ರವ ತುಂಬಿತ್ತು. ನಲ್ಲನ ಸುಗಂಧವೆನ್ನ ಘ್ರಾಣವ ತುಂಬಿತ್ತು. ನಲ್ಲನ ಚುಂಬನವೆನ್ನ ಜಿಹ್ವೆಯ ತುಂಬಿತ್ತು. ನಲ್ಲನಾಲಿಂಗನವೆನ್ನ ಸರ್ವಾಂಗವ ತುಂಬಿತ್ತು. ನಲ್ಲನ ಪ್ರೇಮವೆನ್ನ ಮನವ ತುಂಬಿತ್ತು. ನಲ್ಲನು ಅಂತರಂಗ ಬಹಿರಂಗದಲ್ಲಿ ಕೂಡಿ, ಸುಖಿಯಾದೆ ಉರಿಲಿಂಗದೇವಾ.

(೨). ಇಂಬಿನ ಚುಂಬನವಮೃತಾಹಾರ, ಆಲಿಂಗನವೇ ಆಭರಣ, ಸೋಂಕೇ ಸುವಸ್ತ್ರ ನೋಟವೇ ಕೂಟ, ಒಡನಾಟವೇ ಅಷ್ಟಭೋಗವೆನಗೆ. ಉರಿಲಿಂಗದೇವನ ಕೂಟ ಪರಾಪರವಾಙ್ಮನಾತೀತ ಪರಮಸುಖವು.

(೩). ನಲ್ಲನ ಕೂಡುವನ್ನಕ್ಕ ಸುಖದ ಸುಗ್ಗಿಯನೇನೆಂದರಿಯೆ, ಕೇಳಾ ಕೆಳದಿ. ಸುಖದ ಸವಿಗೆ ಸವಿಸಿ ಹರಿಯಿತ್ತು. ಹೇಳಲು ನಾಚಿಕೆ ಕೇಳಾ ಕೆಳದಿ. ಸುಖರಸ ಮಡುಗಟ್ಟದಲ್ಲಿ, ಉರಿಲಿಂಗದೇವನ ಕೂಡಿ ಸುಖಸಾಗರದಲ್ಲಿ ಕ್ರೀಡಿಸುತ್ತಿರ್ದೆ ಕೆಳದಿ.

(೯). ನಲ್ಲನ ಬೇಟದ ಕೂಟದ ಸುಖವನು ಏನೆಂದು ಹೇಳುವೆ! ವಿಪರೀತ ಕೆಳದಿ! ಪುರುಷಶಕ್ತಿಯಾಗಿ, ಶಕ್ತಿಪುರುಷನಾಗಿ, ನೆರೆವೆನು. ವಿಪರೀತ ಕೇಳಾ ಕೆಳದಿ! ಅತಿಕಾಮಿ ವಿಪರೀತ ಉರಿಲಿಂಗದೇವನ ನೆರೆ ನೆರೆವುದು ಮನದಿಚ್ಛೆ ಕೆಳದಿ.

(೧೦) ಆಲಿಕಲ್ಲ ಹರಳಿನಂತೆ, ಅರಗಿನ ಪುತ್ತಳಿಯಂತೆ, ತನುಕರಗಿ ನೆರೆವ ಸುಖವ ನಾನೇನೆಂಬೆ? ಕಡೆಗೋಡಿವರಿದವೆನಗಯ್ಯ ನಯನದಶ್ರುಜಲಂಗಳು. ನಮ್ಮ ಕೂಡಲಸಂಗಮದೇವರ ಮನಮುಟ್ಟಿ ನೆರೆವ ಸುಖವ ನಾನಾರಿಗೆ ಉಸುರುವೆನು?

---

## ಕ್ರಿಯೆವಿರಹಿತ ಧ್ಯಾನವು ವ್ಯರ್ಥವು.

(೧). ಶಿವನ ನೆನೆದಡೆ, ಭವಹರಿವುದೆಂಬ ವಿವರಗೇಡಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದಡೆ, ಜ್ಯೋತಿಯ ನೆನೆದರೆ, ಕತ್ತಲೆ ಹರಿವುದೇ? ಮೃಷ್ಟಾನ್ನವ ನೆನೆದರೆ, ಹೊಟ್ಟೆ ತುಂಬುವದೇ? ರಂಭೆಯ ನೆನೆದರೆ, ಕಾಮದ ಕಳವಳ ಹಿಂಗುವದೇ? ನೆನೆದಡಾಗದು. ನಿರ್ಧರಿಸಿ ದ್ವಯಕುಳವಳಿದು ಬೆರೆಯ ಬಲ್ಲಡೆ, ಸದ್ಗುರು ಸಿದ್ಧ ಸೋಮೇಶ್ವರಲಿಂಗವು ತಾನೆ.

(೨). ಬೀಜದೊಳಗಿಹ ವೃಕ್ಷಫಲವ ಸವಿಯಬಹುದೇ? ಮಳೆವನಿಯೊಳಿಪ್ಪ ಹುರಮಂಜಿ ಮುತ್ತುಗಳಂ ಸರಗೊಳಿಸಿ, ಕೊರಳೊಳು ಧರಿಸಬಹುದೇ? ಹಾಲೊಳಗಿರ್ಪ ತುಪ್ಪವು ಅರಸಿದರೆ, ಸಿಕ್ಕುವದೇ? ಕಬ್ಬಿನೊಳಗಿರ್ಪ ಬೆಲ್ಲವು ಕಣ್ಣಿಗೆ ಕಾಣಿಸುವದೇ? ತನ್ನೊಳಗಿರ್ಪ ಶಿವತತ್ವವು ನೆನೆದಾಕ್ಷಣವೆ ಅನುಭವಕ್ಕೆ ಬರ್ಪುದೇ? ಭಾವಿಸಿ ತಿಳಿದು ಮಥಿಸಿ ಪ್ರಯೋಗಾಂತರದಿಂ ಪ್ರಸನ್ನತ್ವಮಂ ಮಾಡಿಕೊಂಡು ತದನುಭವಸುಖದೊಳೋಲಾಡುವದು ಅತಿ ಚತುರನಾದ ಶಿವಶರಣಂಗಲ್ಲದೆ, ಉಳಿದರ್ಗುಂಟೇ, ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೇ?

(೩). ಕೆಂಚ ಕರಿಕನ ನೆನೆದರೆ, ಕೆಂಚ ಕರಿಕನಾಗಬಲ್ಲನೇ? ಕರಿಕ ಕೆಂಚನ ನೆನೆದರೆ, ಕೆಂಚನಾಗಬಲ್ಲನೆ? ದರಿದ್ರನು ಸಿರಿವಂತನ ನೆನೆದರೆ ಸಿರಿವಂತನಾಗಬಲ್ಲನೇ? ಸಿರಿವಂತ ದರಿದ್ರನ ನೆನೆದರೆ, ದರಿದ್ರನಾಗಬಲ್ಲನೆ? ಮುಂದಿನ

ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ ರಂಜಕರ ನೇನೆಂಬೆ ಕೂಡಲ ಸಂಗಮದೇವಾ ?

(೪). ದೇವರ ನೆನೆದು ಮುಕ್ತರಾದೆವೆಂಬ ಯುಕ್ತಿಶೂನ್ಯರ ಮಾತ ಕೇಳಲಾಗದು. ಅದೇನು ಕಾರಣವೆಂದರೆ, ದೇವರ ನೆನೆದರೆ, ದೇವರುಂಟೇ ದೂರ? ದೂರದಲ್ಲಿದ್ದವರ ನೆನೆವರಲ್ಲದೆ ಸಮೀಪದಲ್ಲಿದ್ದವರ ನಾರೂ ನೆನೆವರಿಲ್ಲ. ಇದನರಿದು, ನಿನ್ನೊಳಡಗಿ, ನಾ ನಿನ್ನ ನೆನೆಯಲಿಲ್ಲ. ನನ್ನೊಳಡಗಿ ನೀನೆನಗೆ ಮುಕ್ತಿಯನೀಯಲಿಲ್ಲ. ಇದು ಕಾರಣ ನಾ ನಿನ್ನ ನೆನೆಯಲಿಲ್ಲ, ಮಹಾಲಿಂಗ ಗಜೇಶ್ವರಾ.

(೫). ಕುರೂಪಿ ಸುರೂಪಿಯ ನೆನೆದಡೆ, ಸುರೂಪಿಯಪ್ಪನೇ? ಆ ಸುರೂಪಿ ಕುರೂಪಿಯ ನೆನೆದಡೆ ಕುರೂಪಿಯಪ್ಪನೆ? ಧನವುಳ್ಳವರ ನೆನೆದರೆ, ದಾರಿದ್ರ್ಯ ಹೋಗುವದೇ? ಪುರಾತನರ ನೆನೆದು ಕೃತಾರ್ಥರಾದೆವೆಂಬರು. ತಮ್ಮಲ್ಲಿ ಭಕ್ತಿ ನಿಷ್ಠೆ ಇಲ್ಲದವರ ಕಂಡಡೆ, ಮೆಚ್ಚನು ಗುಹೇಶ್ವರಾ.

**ಅರ್ಥ:—** ಲಿಂಗನಿಷ್ಠೆವಿಡಿದು, ಪುರಾತನರ ಮೇಲುಪಂಕ್ತಿಯ ನೋಡಿ ಸತ್ಯ ಸದಾಚಾರದಲ್ಲಿ ನಡೆವಾತನು ಆ ಪುರಾತನರ ನೆನೆದರೆ, ಹೊಗಳಿದರೆ, ಕೃತಾರ್ಥನಹನಲ್ಲದೆ, ಬರುಮಾತಿನಲ್ಲಿ ಪುರಾತನರ ನೆನೆದಿಹೆನೆಂದರೆ, ಮುಕ್ತಿ ಇಲ್ಲವೆಂಬುದೀ ವಚನದ ಶಬ್ದಕ್ಕೇಕಾರ್ಥ.

(೬). ಕಾಯದ ಸುಳುಹನ್ನಕ್ಕ ಕರ್ಮ ಪೂಜೆಬೇಕೆಂಬರು. ಜೀವನ ಸಂಚಾರವುಳ್ಳನ್ನಕ್ಕರ, ಜ್ಞಾನಪನರಿಯಬೇಕೆಂಬರು. ಜ್ಞಾನ ಧ್ಯಾನಿಸಿ ಕಾಂಬಲ್ಲಿ, ಕಾಯದ ಜ್ಞಾನದಿಂದ ಮುಕ್ತಿಯೋ? ಜೀವಜ್ಞಾನದಿಂದ ಮುಕ್ತಿಯೋ? ಧ್ಯಾನ ಜ್ಞಾನದಿಂದ ಮುಕ್ತಿಯೋ? ಧ್ಯಾನಿಸಿ ಕಾಂಬ ಕುರುಹ ಎನಗೊಂದು ಬಾರೆ ತೋರಾ, ಕಯ್ಯುಳಿಗತ್ತಿ ಅಡಿಗೂಂಟ ಕೆಡೆಯಾಗಬೇಡ ಅರಿ ನಿಜಾತ್ಮ ರಾಮ ರಾಮನಾ.

**ಅರ್ಥ:—** ತನುವಿನ ಕ್ರಿಯೆಯುಂಟಾಗಿರುವ ಪರಿಯಂತರ, ಇಷ್ಟಲಿಂಗ ಪೂಜೆಯುಂಟಾಗಿರಬೇಕೆಂಬರು ಸಿದ್ಧಾಂತಿಗಳು. ಜೀವನವರ್ತನೆಯುಂಟಾಗಿರುವ ಪರಿಯಂತರ, ಪ್ರಾಣಲಿಂಗ ಸಂಬಂಧವ ತಿಳಿಯಬೇಕೆಂಬರು. ವೇದಾಂತಿಗಳು ಪ್ರಾಣಲಿಂಗವನು ನೆನೆದು ಸಾಕ್ಷಾತ್ಕಾರವ ಮಾಡಿ ಕೊಂಬಲ್ಲಿ ತನುವಿನ

ಕ್ರಿಯೆಯಿಂದಲಿ ಮೋಕ್ಷವೋ, ಜೀವನಲ್ಲಿರುವ ಪ್ರಾಣಲಿಂಗ ಸಂಬಂಧದಿಂದಲಿ ಮೋಕ್ಷವೋ, ಪ್ರಾಣಲಿಂಗದ ನೆನೆಹಿನಿಂದಲಿ ಮೋಕ್ಷವೋ? ಬಹಿರಂಗದ ಇಷ್ಟಲಿಂಗ ಸಂಬಂಧವಿಲ್ಲದೆ, ಅಂತರಂಗದಲ್ಲಿ ನೆನೆದು ಸಾಕ್ಷಾತ್ಕಾರವ ಮಾಡಿ ಕೊಂಬ ಪ್ರಾಣಲಿಂಗ ಸಂಬಂಧವು ಕಾಣಿಸದು ಎಂಬಲ್ಲಿ ದೊರೆಕೊಳ್ಳದು ಎಂಬುದರ್ಥ.

---

## ಲಿಂಗಾಂಗಯೋಗವಲ್ಲದ ಇತರ ಯೋಗ ಗಳನ್ನು ನಂಬಬಾರದು.

(೧). ಈಡಾ, ಪಿಂಗಳ, ಸುಷುಮ್ನ ನಾಡಿಗಳಲ್ಲಿ ಆತ್ಮನು ಸಂಚರಿಸ ಬಾರದೆಂಬ ಯೋಗಾಂಗದ ಅಣ್ಣಗಳು ನೀವು ಕೇಳಿರಯ್ಯ. ವಾಯುವನಧೋ ಮುಖಕ್ಕೆ ತರಬಾರದೆಂದು, ಊರ್ಧ್ವಮುಖಕ್ಕೆ ತಂದು ಅಮೃತವನುಂಡಿಹೆವೆಂಬ ಅಷ್ಟಾಂಗಯೋಗದ ಕರ್ಮಿಗಳು ನೀವು ಕೇಳಿರೋ. ಶರೀರದಲ್ಲಿ ಶುಕ್ಲಶೋಣಿತ ಮಜ್ಜೆ ಮಾಂಸ ಇದರೊಳಗಾದ ಸಾಕಾರದ ತಲೆಯುಲ್ಲಿ ನಿರಾಕಾರದ ಅಮೃತವ ನುಂಡಿಹೆನೆಂಬುದು ಹುಸಿಯಲ್ಲವೇ? ಬಂಜೆಯಾವಿನಲ್ಲಿ ಕ್ಷೀರದ ಕೆಚ್ಚಲುಂಟೇ? ಕಲ್ಲರೆಯಲ್ಲಿ ಚಿಲುಮೆಯ ಸಾರ ಉಂಟೇ? ಹೊಲ್ಲಹ ದೇಹದಲ್ಲಿ ನಲ್ಲ ಕ್ಷೀರ ಉಂಟೇ? ಇವೆಲ್ಲವನರಿಯದೆ, ಬಲ್ಲ ತನವ ಸೂರೆಗೊಟ್ಟು, ಗೆಲ್ಲಗೂಳಿಗೆ ಎಲ್ಲಿಯ ದೋ ಲಿಂಗಾಂಗಯೋಗ? ಹರಿವ ವಾರುಧಿಗೆ ನೊರೆ ಪಾವಸೆ ಮುಸುಕುವದೇ? ಸುಡುವನಲ ತೃಣದಿ ಕಟ್ಟುವಡೆವುದೇ? ಅರಿದ ಶರಣನು ತನುವ ದಂಡಿಸಿ ಕೊಂಡಿಹೆನೆಂಬ ಭ್ರಾಂತೆಲ್ಲಿಯದೋ ಅಯ್ಯ? ಆತ್ಮನ ಇರವು ಘಟಪಟದೊಳಗೆ ಗ್ರಹಿಸಿಪ್ಪ ಬಯಲಿನ ಇರವಿನಂತೆ, ರವಿಯೊಳಗೆ ಸೂಸುವ ಕಿರಣದಂತೆ ವಾಯು ವಿನ ಬೆಂಬಳಿಯ ಗಂಧದಂತೆ, ಬಿತ್ತಳಿದ ರಜ್ಜುವಿನಂತೆ, ತೈಲದೊಡನೆ ಬೆಳಗುವ ಕಳೆಯಂತೆ, ಕಾಯದ ಮಧ್ಯದಲ್ಲಿ ನಿಂದು ಓಂಕಾರ ಸ್ವರೂಪವನರಿಯದೆ ಕೆಟ್ಟ ರಲ್ಲ ಕರ್ಮಕಾಂಡಿಗಳು. ಸ್ಫಟಿಕದ ಸಿಲೆಯಲ್ಲಿ ನಿಂದ ವಾರಣದಂತೆ, ನಿನ್ನ ನೀನೇ ತಿಳಿಯಾ. ನಿಃಕಳಂಕ ಮಲ್ಲಿಕಾರ್ಜುನ ಲಿಂಗದಲ್ಲಿ ಸರ್ವಾಂಗಲಿಂಗಭರಿತವಾದ ವಂಗಲ್ಲದೆ ಇಲ್ಲ ಲಿಂಗಾಂಗಯೋಗ.

(೨). ಹಠಯೋಗ ಲಂಬಿಕೆ ಎಂದು ಆಕುಂಚನವಂ ಮಾಡಿ, ವಜ್ರ ಅಮರಿಯ ಕಲ್ಪವೆಂದು ಮಲಮೂತ್ರಂಗಳ ಸೇವಿಸುತ, ಇದು ಪೂರ್ವನವನಾಥ

ಸಿದ್ಧರ ಮತೋಕ್ತವೆಂದು, ಕಾಪಾಲಿಕಾಚರಣೆಯನಾಚರಿಸುವರಲ್ಲ ಶರಣರು. ಮೇಣು ತಲೆಯೊಳಗಣ ವಾತ ಪಿತ್ತ ಶ್ಲೇಷ್ಮವ ತೆಗೆದು ಅಮೃತವೆಂದು ಬಿನುಗು ದೃಷ್ಟವ ತೋರುವರಲ್ಲ ಶರಣರು. ದ್ರವಿಸುವದೆಲ್ಲ ಅಪ್ಪುವಿನ ಫಲ ರಸ ಕ್ಷೀರ ಘೃತ ಮೊದಲಾದವ ಸೇವಿಸುತ್ತ ಅನ್ನವ ಬಿಟ್ಟವೆಂಬ ಭೂತಚೇಷ್ಟಿಕರಲ್ಲ ಶರಣರು. ಇವೆಲ್ಲವು ಕಾಕು ಸಟೆ ಭ್ರಾಂತೆಂದು ತಿಳಿದು ನಿರ್ಧರ ನಿಜದಿನಿಂದರು. ಗುಹೇಶ್ವರಾ, ನಿಮ್ಮ ಶರಣರು ಅಗ್ರಗಣ್ಯರು.

(೩). ಶಿವಲಿಂಗಾರ್ಚನೆಯ ಕ್ರಿಯಾಶಕ್ತಿಗೆ ಅಭ್ಯಾಸಯೋಗದವರೆಲ್ಲ ಸರಿಯಲ್ಲ, ನೋಡಾ. ಯೋಗಬಲದಿಂದ ಸೇವಿಸುವ ಶ್ರೇಷ್ಠಾಮೃತವು ಶಿವ ಪ್ರಸಾದಾಮೃತಕ್ಕೆ ಸರಿಯಲ್ಲ ನೋಡಾ. ಪ್ರಾಣನ ಬ್ರಹ್ಮರಂಧ್ರದಲ್ಲಿ ಬಿಡುವ ಯೋಗವು ಪ್ರಾಣಲಿಂಗೈಕ್ಯ ಸಂಬಂಧ ಯೋಗಕ್ಕೆ ಸರಿಯಲ್ಲ ನೋಡಾ. ಶಿವಾನುಭಾವಕ್ಕೆ ಯೋಗಕ್ಕೆ ಎಷ್ಟು ಅಂತರವು ನೋಡಯ್ಯ ಸೌರಾಷ್ಟ್ರ ಸೋಮೇಶ್ವರಾ.

(೪). ಘಟಸರ್ಪನಂತೆ ಅತಿಶಯವು. ನಾಭಿ ಸರೋವರದ ಸ್ಥಾನಕವೇ ದಳವೆಂಟು. ನವದಶಕಮಳ ಊರ್ಧ್ವಮಂಡಲದ ಅಮೃತಸೇವನೆಯಾಗಿ, ಶಿವ ಯೋಗಿಯಾದೆನೆಂಬರು ಗುಹೇಶ್ವರಲಿಂಗವು ಪವನವಿಯೋಗಾ.

**ಅರ್ಥ:**—ಕುಂಡಲಿಸ್ಥಾನದ ಭುಜಂಗವನು ಹೃದಯ ಸರೋವರದ ಅಷ್ಟದಳಕಮಲದಲ್ಲಿ ಗ್ರಸ್ತಮುಖವಾಗಿ, ಸುಷುಮ್ನನಾಳದಲ್ಲಿ ಊರ್ಧ್ವಮಂಡಲದ ಅಮೃತಸೇವನೆಯ ಮಾಡಿ ಶಿವಯೋಗವ ಪಡೆದೆವೆಂಬುದು ಹುಸಿ. ಮತ್ತೆಂತೆಂದೊಡೆ, ಪ್ರಾಣಮಯಲಿಂಗವೆಂದರಿದಡೆ, ಅದೇ ಪ್ರಾಣಲಿಂಗ ಸಂಬಂಧವೆಂಬುದೀವಚನದರ್ಥ.

(೫). ಪದ್ಮದೊಳಗಣ ಪತ್ರದೊಳಗಣ ದ್ವಿದಳದೊಳಗಣ ಕರ್ನಿಕೆ ಕುಹರದೊಳಗಣ ಅಜಸ್ಥಾನದೊಳಗಣ ಅಹಿಮಧ್ಯದೊಳಗಣ ಹಲವು ಕೋಟಿ ಪತ್ರದ ಕುಮುದ ಕುಹರದ ಪದ್ಮಮಧ್ಯದೊಳಗೆ ಪ್ರಾಣವಿಪ್ಪುದೆಂದು ಆತ್ಮನ ನಿಶ್ಚೈಸುವೆವೆಂದು ಅನಂತಯೋಗಿಗಳು ಸಂಸಾರಧರ್ಮವ ಕೆಡಿಸಿಹೆವೆಂದು, ಅನಂತ ನಾಳಗಳಲ್ಲಿ ನಿರ್ಬಂಧವ ಮಾಡಿ, ಅಮೃತರಾಗಿಹೆವೆಂದು, ಅಮೃತವ ದಣಿಯಲುಂಡೆವೆಂದು ನಾನಾ ಕುಟಿಲಭಾವದಲ್ಲಿ ಸಂಸಾರಧರ್ಮವ ಕೆಡಿಸಿಹೆವೆಂದು,

ಯೋಗಿಗಳೆಂಬವರು ಭವದ ಬಾಗಿಲಲ್ಲಿ ಇದ್ದಾರೆ ನೋಡಾ ಅಯ್ಯಾ. ಶಿವಾಚಾರದ ಕುಳವನರಿಯದೆ ನಾನಾಯೋನಿಗಳಲ್ಲಿ ಜನಿಸಿದರು ಕಾಣಾ ಅಯ್ಯಾ. ಶಿವಾಚಾರದ ಕುಳವನರಿಯದೆ ಅನೇಕ ಬಂಧನಂಗಳಲ್ಲಿ ಸಿಲುಕಿದರು ಕಾಣಾ ಎಲೆ ಅಯ್ಯಾ. ನೀವು ಚತುರ್ವಿಧ ಸ್ಥಲದ ಮಂಟಪವ ಮಾಡಿ, ಚತುರಾಶ್ರಯದ ಸಿಂಹಾಸನದ ಮೇಲೆ ಕುಳ್ಳಿರ್ದು ನಿತ್ಯರಿಗೆ ಭಕ್ತಿಯನೀವುದ ಕಂಡು, ಭಕ್ತರು ನಿತ್ಯರು, ನಿಮಗೆ ಶರಣುವೊಕ್ಕು, ಮಹಾಪ್ರಸಾದ ದೇವಾ, ಆತ್ಮನು ಪರಿಭವಕ್ಕೆ ಬಪ್ಪನೇ ಎಂದು ಕೇಳಲು, ಅದು ಪುಸಿ ಕಾಣಿರೇ. ಆತ್ಮನಿಪ್ಪ ನೆಲೆಯ ಹೇಳುವೆ ಕೇಳಿರೇ, ಗುರುಭಕ್ತಿಯಲ್ಲಿಪ್ಪ, ಲಿಂಗಭಕ್ತಿಯಲ್ಲಿಪ್ಪ, ಜಂಗಮಭಕ್ತಿಯಲ್ಲಿಪ್ಪ, ಅರ್ಪಿತಪ್ರಸಾದದಲ್ಲಿಪ್ಪ, ತನುಮನಧನ ಒಂದಾಗಿ ನಿವೇದಿಸುವಲ್ಲಿಪ್ಪ. ಪರಿಪೂರ್ಣಾತ್ಮನೆಂದು ನಿತ್ಯರಿಗೆ ನೀವು ಕಾರುಣ್ಯವ ಮಾಡಿದಿರಿ. ನಿಮ್ಮ ಕಾರುಣ್ಯ ಕಟಾಕ್ಷದಲ್ಲಿ ಬಸವಣ್ಣನಲ್ಲದೆ ಮಾಡುವರಿಲ್ಲ. ಆ ಬಸವಣ್ಣ ಹೇಳಿದ್ದ ಮೀರೆ, ಕಾಣಾ ಕಲಿದೇವರ ದೇವಾ.

(೬). ಆಸನ ಬಂಧನರು ಸುಮ್ಮಗಿದ್ದರು. ಭಸ್ಮವ ಹೂಸಿ ಸ್ವರವ ಹಿಡಿವರು ಸಾಯದಿರ್ಪರೇ? ಕಾಲಕರ್ಮ ಪ್ರಳಯಂಗಳೊಳಗಾಗಿ ಸಾಯದಿರ್ಪರೇ? ನಿತ್ಯವನೆ ಮರೆದು, ಅನಿತ್ಯವನೆ ಹಿಡಿದು, ಸತ್ತು ಹೋದರು ಗುಹೇಶ್ವರಾ.

**ಅರ್ಥ:**—ಅಂತರಂಗ ಬಹಿರಂಗದಲ್ಲಿ ಪರಿಪೂರ್ಣವಾಗಿರ್ಪ ಪ್ರಾಣಲಿಂಗ ಸಂಬಂಧವನರಿಯದೆ ಪವನವಿಯೋಗ ಭೇದದಿಂದ ಲಿಂಗವನರಿದಿಹೆವೆಂಬವರು ಭವಕ್ಕೆ ಭಾಜನವಾದರೆಂಬುದೀ ವಚನದ ತಾತ್ಪರ್ಯಾರ್ಥ.

(೭). ಶ್ರುತಿಯ ನಂಬದಿರೋ, ಶ್ರುತಿಯ ನಂಬದಿರೋ. ಶ್ರುತಿ ತತಿಗಳು ಮುನ್ನವೇ ಶಿವನಡಿಯ ಕಾಣದೆ, 'ಚಕಿತಮಭಿಧತ್ತೆ' ಎನ್ನುತ್ತ, ಮುನ್ನವೇ ಅರಸಿ ತೊಳಲಿ, ಬಳಲುತ್ತಿದ್ದಾವೆ. ಶ್ರುತಿ ಹೇಳಿದತ್ತ, ಹರಿಹರಿದು ಬಳಲದಿರೋ. ಶೂನ್ಯಕ್ಕೆ ತಲೆಯನಿಕ್ಕದಿರೋ. ವಸ್ತು ಹೃದಯದಲುಂಟೆಂದು ನೆನೆಯದಿರೋ. ವಸ್ತು ಭ್ರೂಮಧ್ಯದಲ್ಲುಂಟೆಂದು ಭ್ರಮಿಸದಿರೋ. ವಸ್ತು ಬ್ರಹ್ಮರಂಧ್ರದಲ್ಲುಂಟೆಂದು ಹೊಲಬುಗೆಡದಿರೋ. ವಸ್ತು ನಿಶ್ಚಯವಕಾಂಬಡೆ, ಎನ್ನ ಸದ್ಗುರು ಅನುಮಿಷದೇವನಂತೆ ನಿನ್ನ ಕರಸ್ಥಲದಲ್ಲಿ ನಿಶ್ಚಯಿಸಿ, ವಸ್ತು ನಿಶ್ಚಯವ ಕಂಡು, ನಮ್ಮ ಗುಹೇಶ್ವರಲಿಂಗದಲ್ಲಿ ನಿಬ್ಬೆರಗಾಗೋ, ಮರುಳೇ.

(೮). ಯೋಗಾಭ್ಯಾಸ, ಯೋಗಾಭ್ಯಾಸವೆಂದೆಂಬಿರಿ. ಯೋಗವು ಅಭ್ಯಾಸವೇ, ಅಭ್ಯಾಸ ಯೋಗವೇ? ಯೋಗಾಭ್ಯಾಸವೆಂದೆಂಬನ್ನಕ್ಕರ, ಅನು ಯೋಗಿಯೇ? ಶ್ರೀಗುರು ಕಾರುಣ್ಯದಿಂದ ಸರ್ವವೂ ಬ್ರಹ್ಮವೆಂದರಿವುದು. ಶ್ರೀಗುರುವಿನ ಶ್ರೀಪಾದಧ್ಯಾನವೇ ಯೋಗಾಭ್ಯಾಸವಯ್ಯಾ, ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೯). ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆ ಎಂಬರು. ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೆಯ ಬಲ್ಲರೆ, ನೀವು ಹೇಳಿರೋ. ಅರಿವೆಯುಳ್ಳುದೇ ಆಧಾರ, ಅನಾಹತ ಕೂಡಿಪ್ಪುದೇ ಸ್ವಾಧಿಷ್ಠಾನ, ಮಣಿಯ ಬೆಳಗಿನಲ್ಲಿಪ್ಪುದೇ ಮಣಿಪೂರಕ, ಆಶೆ ಇಲ್ಲುದೇ ಅನಾಹತ, ಅಲ್ಲ, ಅಹುದು ಎಂಬುದನತಿಗಳೆದಿಪ್ಪುದೇ ವಿಶುದ್ಧಿ, ಸರ್ವ ಜೀವಂಗಳಲ್ಲಿ ದಯೆಯುಳ್ಳುದೇ ಆಜ್ಞೆ. ಇಂತಪ್ಪುದೀಗ ಶಿವಯೋಗ. ಉಳಿದ ಅಭ್ಯಾಸ ಯೋಗಿಗಳ ಕಂಡು, ನಗುತಿರ್ದನಯ್ಯಾ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ.

(೧೦). ಲಂಬಿಕಾಯೋಗಿಗಳ ಡೊಂಬರಿಗೆ ಸರಿ ಎಂಬೆ. ಹಠಯೋಗಿಗಳಿಗೆ ಅಟಮಟಕಾರರೆಂದೆಂಬೆ. ಅಷ್ಟಾಂಗಯೋಗಿಗಳ ಕಷ್ಟ ಕರ್ಮಿಗಳೆಂದೆಂಬೆ. ಪವನಯೋಗಿಗಳ ಪ್ರಪಂಚಿಗಳೆಂದೆಂಬೆ. ಲಯಯೋಗಿಗಳ ನಾಯಿಗಿಂತ ಕಡೆ ಎಂಬೆ. ಅದೇನು ಕಾರಣವೆಂದಡೆ, ಲಯಯೋಗವೆಂಬುದು ನಾನಾ ದರ್ಶನದಲ್ಲಿ ವರ್ತಿಸುವುದಾಗಿ, ಅದನು ಶಿವಯೋಗಿಗಳು ಒಲ್ಲರು. ಮಂತ್ರ ಯೋಗವೆಂಬುದು ಸರ್ವರ ಸಂದೇಹಕ್ಕಿಕ್ಕಿ ಕೊಲ್ಲುತಿಪ್ಪುದು. ಅದೇನು ಕಾರಣವೆಂದಡೆ, ಮಂತ್ರವೇ ಲಿಂಗ, ಲಿಂಗವೇ ಮಂತ್ರವೆಂದರಿದು ಲಿಂಗನೆನಹು ಸಂಬಂಧಿಸಿಕೊಳಲರಿಯದೆ, ಲಿಂಗವಿರಹಿತರಾಗಿ ಮಾಡುತಿರ್ಪರಾಗಿ, ಅದನು ಅಂಗಲಿಂಗ ಸಂಬಂಧಿಗಳು ಮೆಚ್ಚರು ನೋಡಾ. ರಾಜಯೋಗವೆಂಬುದು ಗಾಜು ಗೋಜು ನೋಡಾ. ಅದನು ಲಿಂಗವಿರಹಿತರಾಗಿ, ಜ್ಞಾತೃ ಜ್ಞೇಯ ಜ್ಞಾನ ಒಂದಾದಲ್ಲಿ ಯೋಗವೆನುತಿಪ್ಪರಾಗಿ, ಇವು ಒಂದು ಲಿಂಗಾಂಗದ ಹೆಜ್ಜೆಯಲ್ಲ. ಅದು ಕಾರಣ ಲಿಂಗನಿಷ್ಠರು ಮೆಚ್ಚರು. ಅದೇನು ಕಾರಣವೆಂದರೆ, ಲಿಂಗವ ತೆಗೆದರೆ ಅಂಗದೊಡನೆ ಪ್ರಾಣ ಹೋಗದಾಗಿ, ಅದೆಲ್ಲಿಯ ಯೋಗವಯ್ಯಾ ಭ್ರಾಂತಯೋಗ? ಇದು ಕಾರಣ ನಿಮ್ಮ ಶರಣರು ಲಿಂಗಪ್ರಾಣಿಗಳು, ಪ್ರಾಣ ಲಿಂಗಸಂಬಂಧಿಗಳು ಪ್ರಸಾದಮುಕ್ತರು. ಈ ಮೂರು ಪ್ರಕಾರದಲ್ಲಿ ಕೂಡುತಿ

ಷ್ಟರು ಶಿವಯೋಗಿಗಳು. ಅದು ಕಾರಣ, ನಿಮ್ಮ ಶರಣರು ಸ್ವಾನುಭಾವಜ್ಞಾನ, ಶುದ್ಧ ಶಿವಯೋಗದಲ್ಲಿ ಸ್ವರೂಪಜ್ಞಾನಿಗಳು ಕಾಣಾ ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ.

(೧೧). ದೃಷ್ಟವಪ್ಪ ಗುರುಕಾರುಣ್ಯದಲ್ಲಿ ಇಷ್ಟಲಿಂಗವ ಸಂಬಂಧಿಸಿ ಕೊಟ್ಟ ಬಳಿಕ, ಮರಳಿ ಯೋಗವುಂಟೇ? ಸರ್ವಯೋಗಕ್ಕೆ ಶಿವಯೋಗ ಮಹಾಯೋಗವೆಂದರಿದ ಬಳಿಕ, ಮತ್ತೆ ಕಿರಿದುಯೋಗವೆಂದು ಪಾದೋದಕ ಪ್ರಸಾದಕ್ಕೆ ಹೊರಗಾಗಿ, ಗುರುವಾಜ್ಞೆಯ ಮೀರಿದ ಗುರುದ್ರೋಹಿಗಳ ಎನ್ನತ್ತ ತೋರದಿರಯ್ಯ, ನಿಮ್ಮ ಧರ್ಮ. ದೀಕ್ಷಾತ್ರಯದಲ್ಲಿ ಸಂಪನ್ನರಾಗಿ, ಪ್ರಸಾದದಲ್ಲಿ ಲೋಲುಪ್ತರಾಗಿ ಜಂಗಮವೇ ಲಿಂಗವೆಂಬವರ ಎನಗೊಮ್ಮೆ ತೋರಾ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ, ನಿಮ್ಮ ಧರ್ಮ.

(೧೨). ನಾಲುಕೊಡಬೆಗೆ ಹೊಗದು. ಆರು ಕೊಡಬೆಗೆ ಬಾರದು. ಮೂರು ಕೂಳಿಗೆ ಸಿಕ್ಕದು ನೋಡಾ. ಬಸವಣ್ಣನ ಅಂಗದಲ್ಲಿ ಹರಿದು, ಚನ್ನಬಸವಣ್ಣನ ಹೃದಯದಲ್ಲಿ ಮೂಡಿ, ಪ್ರಭುದೇವರ ಕರದಲ್ಲಿ ಸಿಕ್ಕಿದೆಯುಲ್ಲ. ಸಿಕ್ಕಿ ನಿನ್ನ ಕುಲಿಸದ ಹೊಲಸೆಗೆ ಅಡಗದು. ಇಂತೀ ತ್ರಿವಿಧದ ಕಲಸಾಟವ ಬಿಡು. ಕದಕಿತನ ಬೇಡ ಕದಂಬಲಿಂಗಾ.

**ಅರ್ಥ**:—ವೇದ ಶಾಸ್ತ್ರ ಪುರಾಣ ಆಗಮುಗಳಿಂದ ಅಹಂಬ್ರಹ್ಮವೆಂದು ನುಡಿವ ಶೃತಜ್ಞಾನಕ್ಕೆ ಸಾಧ್ಯವಾಗದು. ಷಡಾಧಾರ ಚಕ್ರಂಗಳಲ್ಲಿ ಷಟ್‌ಸೋಪಾನವಿಟ್ಟು ಸಾಧಿಸುವೆನೆಂಬವರಿಗೂ ಸಾಧ್ಯವಾಗದು. ತ್ರಿಪುಟಿಜ್ಞಾನದಿಂದ ಸಾಧಿಸಿಹೆನೆಂದಡೂ ಸಾಧ್ಯವಾಗದು ಕಂಡ್ಯಾ. ಭಕ್ತಿಕಾಯದಲ್ಲಿ ಇಷ್ಟಲಿಂಗವಾಗಿ ಚರಿಸಿ, ಸೂಕ್ಷ್ಮತನುವಿನ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಮೂಡಿ, ಕಾರಣ ತನುವಿನ ಸದ್ಭಾವ ಹಸ್ತದಲ್ಲಿ ಭಾವಲಿಂಗವಾಗಿ ಸಂಬಂಧವಾದೆಯಲ್ಲಾ. ಹೀಗೆ ಸಂಬಂಧವಾಗಿರ್ದು ನೀನುಂಟು ಮಾಡಿದ ಅಭೇದ್ಯವಾದ ಮಲತ್ರಯಂಗಳ ಪ್ರಪಂಚು ನಷ್ಟವಾಗದು. ಇಂತೀ ಮಲತ್ರಯಂಗಳ ಪ್ರಪಂಚನುಂಟುಮಾಡುವದನು ವಿವರ್ಜಿಸು, ಕಾಪಟ್ಯ ಬೇಡ, ಎಲೇ ಲಿಂಗವೇ ಎಂಬುದರ್ಥ.

(೧೩). ನಿಜಗುಣ ಚಂದಿಮರಸರು ಕರಸ್ಥಲದ ನಾಗಿದೇವರೊಳಗಾದ ಎಲ್ಲ ವಿರಕ್ತರು ಆವ ಕ್ರಿಯೆಯಲ್ಲಿ ಆಚರಿಸಿ ಲಿಂಗೈಕ್ಯರಾದರೆಂದು ಕೆಟ್ಟು ನಡೆವ ಭವ ಹೇತುಗಳು ನೀವು ಕೇಳಿರೋ. ಅವರು ತುಂಬಿದ ತೊರೆಯ ಸಂಭ್ರಮ

ದಿಂದ ಹಾಯ್ದರು. ಶಕ್ತಿಯ ಮುಂದೆ ಹಾಲು, ಬೋನ, ಹಣ್ಣು, ಕಜ್ಜಾಯನಿಕ್ಕಿರಲು, ಆ ಶಕ್ತಿಯ ಮಾತನಾಡಿಸಿ ಉಂಡರು. ವಿಷದ ಪದಾರ್ಥವೆಂದು ಕೊಡಲು, ಉಂಡು ದಕ್ಕಿಸಿಕೊಂಡರು. ಪಚ್ಚೆಯ ಕಡಗಮಂ ತಿರುಗುಣಿಯ ಮಡುವಿನಲ್ಲಿಟ್ಟು ತಿರುಗಿ ಕರೆದುಕೊಂಡರು. ಎಳನೀರು ಕೆಂದಾವರೆಯ ಭಾವಾರ್ಪಣೆಯ ಮಾಡಿದರು. ದೇವೇಂದ್ರನ ಭೋಗಮಂ ಬಿಟ್ಟರು. ತನುವ ನಿಲಿಸಿ ಪ್ರಾಣವ ಕೊಂಡೊಯ್ದರು. ಉಂಗುಷ್ಠದಲ್ಲಿ ಧರಿಸಿದ ಲಿಂಗಮಂ ತೆಗೆಯಲು, ಆ ಲಿಂಗದೊಡನೆ ಪ್ರಾಣವ ಕಳುಹಿದರು. ಮಿಡಿವಿಲ್ಲಿನೊಳಗೆ ಲಿಂಗವನೆಚ್ಚು, ಆ ಲಿಂಗದೊಡನೆ ನಿರವಯವಾದರು. ಉಪಾಧಿಕೆಯ ಒಡಲಾಸೆಯುಂ ಸುಟ್ಟರು. ಚಳಿಮಳೆ ಎನ್ನದೆ, ಅರಣ್ಯದಲ್ಲಿದ್ದರು. ಹಸಿದರೆ ಕೆಸರು ಮೆದ್ದರು. ಅವರು ಲಿಂಗಾಂಗ ರೂಢರಾಗಿ ಲಿಂಗದಲ್ಲಿ ಐಕ್ಯರಾದರು. ನೀವು ಅವರಂತೆ ಲಿಂಗಾಂಗವ ತೋರಬೇಕು. ಅದಲ್ಲದಿರ್ದೊಡೆ, ಜ್ಞಾನಕ್ರಿಯೆಯಿಂದ ಆಚರಿಸಬೇಕು. ಅದಲ್ಲದಿರ್ದೊಡೆ ಸುಮ್ಮನಿರ್ದು ಶಿವಶರಣರ ಮನಸಿಂಗೆ ಬರಬೇಕು. ಹೀಗಲ್ಲದೆ ಈ ಹೊಟ್ಟೆಯಕಿಚ್ಚಿನ ಬಾಯಬಡುಕತನವೇಕಯ್ಯ ನಿಮಗೆ? ಆನೆಯು ಮದವೆದ್ದು ಸೋಮಬೀದಿಯ ಸೂರೆಮಾಡಿತೆಂದು, ಆಡು ಮದವೆದ್ದು ಬೇಡಗೇರಿಗೆ ಹೋಗಿ ಕೊರಳ ಮುರಿಸಿಕೊಂಬಂತೆ, ಅಂದಿನ ಕಾಲದ ಹನುಮ ಲಂಕೆಯ ದಾಂಟಿದನೆಂದು ಇಂದಿನ ಕಾಲದ ಕಪಿ ಕತ್ತೆಯ ದಾಂಟಿದಂತೆ, ಅರಸುವೆಣ್ಣು ಉಪ್ಪರಿಗೆಯನೇರಿದಳೆಂದು, ತೊತ್ತು ತಿಪ್ಪೆಯನೇರಿದಂತೆ, ಬಲಮುರಿಯ ಶಂಖ, ಧಿಗಿಲು ಭುಗಿಲೆಂದು ಝೇಂಕರಿಸಿತೆಂದು, ಕೆರೆಯೊಳಗಣ ಗುಳ್ಳೆ ಚಿಕ್ಕು ಚಿಕ್ಕೆಂಬಂತೆ, ತಮ್ಮಿರವ ತಾವರಿಯದೆ ಬಾಳುವ ಕಾಲದಲ್ಲಿ ಮರಣದ ಮದ್ದ ಕೊಂಬ ಈ ಕೊಳಕ ಮಾನವರ ಎನಗೊಮ್ಮೆ ತೋರದಿರಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

---

## ಲಿಂಗವಿರಹಿತ ಜಪ ತಪ ಧ್ಯಾನ ನಿತ್ಯ ನೇಮ ಶೀಲಗಳನ್ನು ಮಾಡಕೂಡದು.

(೧). ಅಂಗಲಿಂಗ ಸಂಬಂಧದ ನಿಲುಕಡೆಯನರಿಯದೆ, ಅಘೋರ ತಪವ ಮಾಡಿದಡೇನೋ? ಗಾಳಿಯಾಹಾರವ ಕೊಂಡರೇನೋ? ತರಗೆಲೆಯ ಮೆದ್ದರೇನೋ? ಅಂಗಲಿಂಗ ಸಂಬಂಧಿಗಳಾಗಬಲ್ಲರೇನೋ? ಅಂಗಲಿಂಗ ಸಂಗದಿಂದಲ್ಲದೆ, ಅಂತರಂಗದಲ್ಲಿ ಅರುಹು ತಲೆದೋರಿದಲ್ಲದೆ, ಆತ್ಮಲಿಂಗದ ಆದ್ಯಂತವ

ನರಿಯಬಾರದು. ಆತ್ಮಲಿಂಗದ ಆದ್ಯಂತವನರಿಯದೆ ಅಘೋರ ತಪವ ಮಾಡಿದರೆ, ಅದೇತಕ್ಕೂ ಪ್ರಯೋಜನವಿಲ್ಲ ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೨). ನದೀವಾಸಿಗಳು, ವನವಾಸಿಗಳು, ಗಿರಿವಾಸಿಗಳು, ಗುಹ್ಯವಾಸಿಗಳು, ಇಂದ್ರಿಯ ಭಯಗಳಿಗೆ ಅಂಜಿ, ಕಂದಮೂಲಂಗಳ ಭಕ್ಷಿಸುವ ಕಾನನದ ಮರುಳುಗಳೆಲ್ಲ ಲಿಂಗವಂತ ಪ್ರಾಣಿಗಳಿಗೆ ಪ್ರಾಣಲಿಂಗ ಸಂಬಂಧಿಗಳಾದ ಪರಮ ಶಿವಯೋಗಿಗಳಿಗೆ ಸರಿಯೇ? ಈ ಕಾರಣ ನಿಮ್ಮ ಶರಣರು ಅಂಗಪ್ರಾಣ ಇಂದ್ರಿಯಂಗಳೆಲ್ಲವು ಲಿಂಗನಿವಾಸಿಗಳಾಗಿ ಲಿಂಗದೊಳಡಗಿದ ಲಿಂಗಗ್ರಾಹಕರು ನೋಡಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೩). ಹೃದಯಕಮಲಮಧ್ಯದಲ್ಲಿ ಅಷ್ಟದಳ ಕಮಲವ ಮೆಟ್ಟಿ ಹಂಸನ ಕಟ್ಟಬೇಕೆಂಬರು. ಈ ಹೊಟ್ಟೆಯ ಕೂಳ ಅಣ್ಣಗಳೆಲ್ಲರೂ ಕಟ್ಟಬಲ್ಲರೇ? ನಿಜಹಂಸನ ಬೆಟ್ಟ ಗಟ್ಟವನೇರಿದ ಭೃಗು, ದಧೀಚಿ, ಅಗಸ್ತ್ಯ, ಕಶ್ಯಪ, ರೋಮಜ, ಕೌಂಡಿಲ್ಯ, ಚಿಪ್ಪಜ ಮುಂತಾದ ಸಪ್ತ ಋಷಿಗಳೆಲ್ಲರೊಳಗಾದ ಋಷಿಜನಂಗಳು ಬೆಟ್ಟವನೇರಿ ಕಟ್ಟಿದುದಿಲ್ಲ. ಮತ್ತೆಯೂ ಬಟ್ಟೆಗೆ ಬಂದು, ಮತ್ತರಾದರಲ್ಲದೆ, ಸುಚಿತ್ತವನರಿದುದಿಲ್ಲ. ವಿಷರುಹ ಕುಸುಮಜನಕ ಕಪಾಲವ ಹಿಡಿದಾತನ ಕಯ್ಯಲ್ಲಿ ಗಸಣಿಗೊಳಗಾದರು. ಆತ್ಮನ ರಸಿಕವನರಿಯದೆ ಈ ಹುಸಿಗರ ನೋಡಿ ದೆಸೆಯ ಹೊದ್ದೆನೆಂದೆ ಪಶುಪತಿಯಾದ ನಿಷ್ಕಳಂಕಮಲ್ಲಿಕಾರ್ಜುನಾ.

**ಅರ್ಥ**:—ದ್ವಾದಶ ದಳಕಮಲದ ಉರ್ಧ್ವಮುಖವಾಗಿಪ್ಪ ನಾಲ್ಕೆಸಳ ಕಮಲದಲ್ಲಿರುವ ಪರಮಾತ್ಮಲಿಂಗದಲ್ಲಿ ಅಧೋಮುಖವಾಗಿ ಎಂಟೆಸಳ ಕಮಲದಲ್ಲಿ ದಳ ಪ್ರಕೃತಿವಿಡಿದು ಚರಿಸುವ ಜೀವಹಂಸನ ಬಂಧಿಸಬೇಕೆಂಬರು. ಹೊಟ್ಟೆಗೆ ಮೃಷ್ಟಾನ್ನ ಪಾನಂಗಳ ಗಳಿಸಿಕೊಂಬ ಹಿರಿಯರುಗಳೆಲ್ಲರು ಜೀವಹಂಸನ ಪರಮಾತ್ಮಲಿಂಗದಲ್ಲಿ ಬಂಧಿಸಬಲ್ಲಡೆ ಅರಿಯರು. ಪರ್ವತಂಗಳನು ಬೆಟ್ಟಗುಡ್ಡಗಳನು ಅಲ್ಲಿಪ್ಪ ಗವಿಗಳು ಕೋಡುಗಲ್ಲುಗಳಲ್ಲಿ ನಿಂದು ತಪವ ಮಾಡುವ ಭೃಗುಮುನಿ, ದಧೀಚಿ, ಅಗಸ್ತ್ಯ, ಕಶ್ಯಪ, ರೋಮಜ, ಕೌಂಡಿಲ್ಯ, ಚಿಪ್ಪಜ ಮೊದಲಾದ ಸಪ್ತ ಋಷಿಗಳೇ ಮುಖ್ಯವಾದ ಎಂಬತ್ತೆಂಟು ಕೋಟಿ ಋಷಿ ಜನಂಗಳು ಪರ್ವತಂಗಳಲ್ಲಿ ಕೋಡುಗಲ್ಲು ಗವಿಗಳಲ್ಲಿ ನಿಂದು ಧ್ಯಾನಮೌನಂಗಳಂ ಮಾಡಿ, ಜೀವಹಂಸನನು

ಪರಮಾತ್ಮಲಿಂಗದಲ್ಲಿ ಬಂಧಿಸಲಿಲ್ಲ. ಬಳಿಕ ಕೆಲವು ದಿನಂಗಳ ಮೇಲೆ ಸಂಸಾರ ಮಾರ್ಗದಲ್ಲೆಯ್ದಿ, ದೇಹಭಾವದ ಮರವೆಯಿಂದ ಅಜ್ಞಾನಿಗಳಾದರಲ್ಲದೆ ನಿಃಸಂಸಾರಿಗಳಾಗಿ ಪರಮಾತ್ಮಲಿಂಗದಲ್ಲಿ ಕೂಡಿ ಜ್ಞಾನಿಗಳಾದುದಿಲ್ಲ. ಉದಕದಲ್ಲಿ ಹುಟ್ಟಿದ ಕಮಲ, ಆ ಕಮಲದಲ್ಲಿ ಹುಟ್ಟಿದ ಬ್ರಹ್ಮನ ಕಪಾಲವ ಪಿಡಿದ ರುದ್ರನಲಯದಲ್ಲಿ ಗಾಸಿಯಾದರು. ಜೀವಾತ್ಮನನು ಪರಮಾತ್ಮಲಿಂಗದಲ್ಲಿ ಕೂಡುವ ಪ್ರೌಢತ್ವವನು ತಿಳಿಯದೆ, ಈ ಮಿಥ್ಯಾ ಲಾಂಛನಿಗಳಂ ಕಂಡು ಅವರ ದಿಕ್ಕಿನಲ್ಲಿ ಬೆರೆಯನೆಂದೆ, ಅವರಿಗೆ ಶಿವಕೃಪೆ ಇಲ್ಲವೆಂಬುದರ್ಥ.

(೪). ಅಯ್ಯಾ ಒಂದು ಕೋಟಿ ವರ್ಷ ತಲೆ ಕೆಳಗಾಗಿ ತಪವ ಮಾಡಿದಕ್ಕಿಂತಲೂ ಒಂದು ದಿವಸ ಶಿವಭಕ್ತರಲ್ಲಿ ನಿರಹಂಕಾರನಾಗಿದ್ದರೆ ಸಾಕು ನೋಡಾ. ಒಂದು ಕೋಟಿ ವರ್ಷ ಊರ್ಧ್ವಮುಖನಾಗಿ ಸೂರ್ಯನ ನೋಡಿದ ಫಲವು ಒಂದು ದಿವಸ ಸದಾಚಾರಸದ್ಧರ್ಮ ಶಿವಭಕ್ತರ ನೋಡಿದುದಕ್ಕೆ ಸರಿಯಲ್ಲ ನೋಡಾ. ಒಂದು ಕೋಟಿ ವರ್ಷ ಅರುವತ್ತಾರು ಕೋಟಿ ನದಿಗಳ ಮಿಂದು ಮಡಿಯುಟ್ಟ ಫಲವು ಒಂದು ದಿವಸ ಸದ್ಭಕ್ತಜಂಗಮ ಶರಣಗಣ ತೀರ್ಥಕ್ಕೆ ಸರಿಯಲ್ಲ ನೋಡಾ. ಒಂದು ಕೋಟಿ ವರ್ಷ ವೇದಾಗಮ ಪುರಾಣ ಶಾಸ್ತ್ರ ಮಂತ್ರಗಳ ಓದಿದ ಫಲವು ಒಂದು ದಿವಸ ಶಿವಭಕ್ತಶರಣರ ಸಂಭಾಷಣಕ್ಕೆ ಸರಿಯಲ್ಲ ನೋಡಾ. ಒಂದು ಕೋಟಿ ವರ್ಷ ಮಹಾಯಾಗವ ಮಾಡಿದ ಫಲವು ಒಂದು ದಿವಸ ಶ್ರೀಗುರುಲಿಂಗ ಜಂಗಮಧ್ಯಾನಕ್ಕೆ ಸರಿಯಲ್ಲ ನೋಡಾ. ಪ್ರಾಣವ ಬ್ರಹ್ಮರಂಧ್ರದಲ್ಲಿ ಬಿಡುವ ಯೋಗವು ಪ್ರಾಣಲಿಂಗೈಕ್ಯ ಸಂಬಂಧಕ್ಕೆ ಸರಿಯಲ್ಲ ನೋಡಾ. ಸುಮ್ಮನೆ ಪ್ರಾಣಲಿಂಗ ಶೂನ್ಯಕ್ಕೆ ತಲೆವಾರನಿಕ್ಕದಿರೋ. ವಸ್ತು ಭ್ರೂಮಧ್ಯದಲ್ಲುಂಟೆಂದು ಕಣ್ಣ ಸಿಕ್ಕಿಸಿ ನೋಡಿ, ಭ್ರಮಿಸದಿರೋ. ವಸ್ತು ಹೃದಯದಲ್ಲುಂಟೆಂದು ನೆನೆಯದಿರೋ. ವಸ್ತು ಬ್ರಹ್ಮರಂಧ್ರದಲ್ಲುಂಟೆಂದು ಹೊಲಬುಗೆಡದಿರೋ. ವಸ್ತು ನಿಶ್ಚಯವಾಗೆ ಎನ್ನ ಸದ್ಗುರು ಅನುಮಿಷೇಶ್ವರನು ಕರನಯನ ಮುಖದಲ್ಲಿ ಕಂಡು ಅಕ್ಷಯ ಸುಖಿಯಾದ ಆ ಮಹಾಯೋಗೀಂದ್ರನ ಪಾದವ ನಂಬಿ ನಮ್ಮ ಗುಹೇಶ್ವರ ಲಿಂಗದಲ್ಲಿ ಕೂಟವ ನೋಡಾ ಸಿದ್ಧರಾಮಯ್ಯಾ.

(೫). ಮಠವೇಕೋ, ಪರ್ವತವೇಕೋ, ಜನವೇಕೋ, ನಿರ್ಜನವೇಕೋ ಸಮಾಧಾನವುಳ್ಳ ಶರಣಂಗೆ? ಮತ್ತೆ ಹೊರಗಣ ಚಿಂತೆ ಧ್ಯಾನ ಮೌನ ಜಪತಪವೇಕೋ ತನ್ನ ತಾನರಿದ ಶರಣಂಗೆ ಗುಹೇಶ್ವರಾ.

(೬). ಮಣಿಯನೆಣಿಸಿ ದಿನವ ಕಳೆಯಲು ಬೇಡ. ಕಣಿಯ ಪೂಜಿಸಿ ದಿನವ ಕಳೆಯಲು ಬೇಡ. ಕ್ಷಣವಾದರೂ ನಿಜದ ನೆನಹೇ ಸಾಕು. ಕ್ಷಣದೊಳಗಣ ಅರ್ಧವಾದರೂ ನಿಜದ ನೆನಹೇ ಸಾಕು. ಬೆಂಕಿಯೊಳಗುಳ್ಳ ಬಿಸಿನೀರೊಳಗುಂಟೇ ಗುಹೇಶ್ವರಾ?

(೭). ಕೋಟ್ಯಾನು ಕೋಟಿ ಜಪವ ಮಾಡಿ, ಕೋಟಲೆಗೊಳಲೇಕೆ ಮನವೇ? ಕಿಂಚಿದ್ಗೀತವನಂತಕೋಟಿ ಜಪ. ಜಪವೆಂಬುದೇಕೆ ಮನವೇ? ಕೂಡಲಸಂಗನ ಶರಣರ ಕಂಡು, ಅಡಿ ಹಾಡಿ, ಬದುಕು ಮನವೇ.

(೮). ಕಣ್ಣ ಮುಚ್ಚಿ ಕನ್ನಡಿಯ ತೋರುವಂತೆ ಇರುಳು ಹಗಲಿನ ನಿದ್ರೆ ಸಾಲದೇ? ಬೆರಳ ನೆಣಿಸಿ ಪರಮಾತ್ಮನ ಹಡೆವುದು ಚೋದ್ಯವಲ್ಲವೇ ಹೇಳಾ? ಮೂಗಮುಚ್ಚಿ ಮುಕ್ತಿಯನರಸುವರ ನಾನೇನೆಂಬೆ ಕೂಡಲಸಂಗಮದೇವಾ?

(೯). ಮಿಂಬುಲಿಗನ ಹಕ್ಕಿಯಂತೆ ನೀರ ತಡೆಯಲ್ಲಿರ್ದು, ಮೂಗ ಹಿಡಿದು ಧ್ಯಾನವ ಮಾಡುವರಯ್ಯಾ! ಬಿಟ್ಟ ಮುಡಿವೆರಸಿ, ಬಾಯ ಮಿಡುಕಿಸುತ್ತ, ಕಣ್ಣಮುಚ್ಚಿ, ಬೆರಳನೆಣಿಸುವರಯ್ಯಾ! ನಿಮ್ಮ ಕಯ್ಯಲ್ಲಿ ಕಟ್ಟಿರ್ದ ದರ್ಭೆಯ ಹುಲ್ಲು ಕೂಡಲಸಂಗಯ್ಯನನರಿಯದೆ ಮೊರೆ ಇಡುವಂತೆ.

(೧೦). ತಪವೆಂಬುದು ತಗಹು, ನೇಮವೆಂಬುದು ಬಂಧನ, ಶೀಲವೆಂಬುದು ಸೂತಕ, ಭಾಷೆ ಎಂಬುದು ಪ್ರಾಣಘಾತಕ, ಇಂತೀ ಚತುರ್ವಿಧದೊಳಗಲ್ಲ. ಗುಹೇಶ್ವರಾ ನಿಮ್ಮ ಶರಣರು ಅಗ್ರಗಣ್ಯರು.

(೧೧). ಹಾಲನೇಮ, ಹಾಲ ಕೆನೆಯ ನೇಮ, ಕೆನೆಯು ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ. ಅಂಬಲಿಯ ನೇಮದವರಾರನೂ ಕಾಣೆ. ಕೂಡಲಸಂಗಮದೇವರಲ್ಲಿ ಅಂಬಲಿಯ ನೇಮದವ ಮಾದಾರಚನ್ನಯ್ಯ.

(೧೨), ನಿಷ್ಠೆಯುಳ್ಳಾತಂಗೆ ನಿತ್ಯನೇಮದ ಹಂಗೇಕೆ? ಸತ್ಯವುಳ್ಳಾತಂಗೆ ತತ್ವವಿಚಾರದ ಹಂಗೇಕೆ? ಮನ ಶುದ್ಧವುಳ್ಳಾತಂಗೆ ಮಂತ್ರದ ಹಂಗೇಕೆ? ಅರಿವುಳ್ಳಾತಂಗೆ ಅಗ್ಗವಣಿಯ ಹಂಗೇಕೆ? ಭಾವ ಶುದ್ಧವುಳ್ಳಾತಂಗೆ ಹೂವಿನ ಹಂಗೇಕೆ? ಕೂಡಲಚನ್ನಸಂಗಯ್ಯ, ನಿಮ್ಮನರಿದಾತಂಗೆ ನಿಮ್ಮ ಹಂಗೇಕೆ?

(೧೩), ಅಶ್ವಮೇಧ ಯಾಗವದಂತಿರಲಿ. ಅಜಪೆಯುಪದೇಶ ಸಮಾಧಿಯದಂತಿರಲಿ. ಹೋಮ ಗಾಯಿತ್ರಿ ಜಪವಂತಿರಲಿ. ಜನಮೋಹನ ಮಂತ್ರತಂತ್ರವಂತಿರಲಿ. ಕೂಡಲಸಂಗಮದೇವರ ಶರಣರ ನುಡಿಗಡಣ ಇವೆಲ್ಲಕ್ಕಧಿಕ ನೋಡಯ್ಯ.

(೧೪). ದೇವದಾನವ ಮಾನವ ಋಷಿಜನಂಗಳೆಲ್ಲರು ಮಹಾಲಿಂಗವ ಕಂಡೆವೆಂದು ಅನೇಕ ಕಾಲಂಗಳಲ್ಲಿ ಜಪತಪ ಧ್ಯಾನವ ಮಾಡಿ, ಸಮಾಧಿಯಲ್ಲಿ ದುರ್ಗ ಕಾಣಲರಿಯದೆ ಬಳಲುತಿದ್ದಾರೆ. ಅವರಲ್ಲಿ ಸಾಮರ್ಥ್ಯಪುರುಷರಾಗಿ ಕಂಡಡೆಯೂ, ಕಂಡೇನು ಫಲ? ಘನಲಿಂಗಕ್ಕೆ ಒಲಿಯರು, ಲಿಂಗವನೊಲಿಸಿಕೊಳಲರಿಯರು, ಕೂಡಲರಿಯರು. ಅಲ್ಪ ಭೋಗಂಗಳ ನಿಶ್ಚೈಸಿ, ಭೋಗಪದವ ಪಡೆದು ಪುಣ್ಯಪಾಪಂಗಳ ಬಲೆಯಲ್ಲಿ ಬೀಳುತ್ತಿರಲು, ಅವರುಗಳ ಪರಿಯಂತಲ್ಲ. ಶಿವಶಿವ, ಮಹಾದೇವ, ಮಹಾಲಿಂಗದ ಕರುಣವನೇನೆಂದುಪಮಿಸಬಹುದು? ಶ್ರೀಗುರುವಾಗಿ ಕರುಣಿಸಿ ತಮ್ಮ ಪ್ರಸನ್ನ ಹಸ್ತದಿಂದೆನಗೆ ಜನನವ ಮಾಡಿದ ಮಾತಾಪಿತನು ತಾನೆ ಯಾದನು. ಮಹಾದೀಕ್ಷೆಯಂ ಮಾಡಿ ಶ್ರೀಗುರುವಾದನು. ಮಂತ್ರೋಪದೇಶವಂ ಮಾಡಿ ಮಂತ್ರರೂಪಾಗಿ ಕರ್ಣದಲ್ಲಿ ಭರಿತನಾದನು. ಪ್ರಸಾದ ರೂಪಾಗಿ ಜಿಹ್ವೆಯಲ್ಲಿ ಭರಿತನಾದನು. ಮಹಾವಿಭೂತಿಯಾಗಿ ಭಾಳದಲ್ಲಿ ಭರಿತನಾದನು. ಇಂತು ಸರ್ವಾಂಗದಲ್ಲಿ ಭರಿತನಾದನು. ಮತ್ತೆ ಮತ್ತೆ ಮಹಾ ಚೋದ್ಯ. ಶ್ರೀಗುರುಲಿಂಗ ಮೂರ್ತಿಯನ್ನು ಮಹಾಲಿಂಗಮೂರ್ತಿಯನ್ನು ಪ್ರಾಣವನು ಏಕೀಭವಿಸಿ, ಪ್ರಾಣಲಿಂಗವಾದಾತನಾಗಿ ಅಂಗದ ಮೇಲೆ ಬಿಜಯಂಗೈದು, ಅಂಗಲಿಂಗವಾದನು. ಮಹಾಲಿಂಗವಾಗಿ ಕರಸ್ಥಲದಲ್ಲಿ ನಿರಂತರ ಪೂಜೆಗೊಳ್ಳುತ್ತಿದ್ದನು. ಇಂತೀ ವಿಹಿತವಹ ಸುಜ್ಞಾನವ ಕರುಣಿಸಲೆಂದು ಶರಣ ಭರಿತವಾಗಿ ಬಂದು ಕರುಣಿಸಿದನು. ಇಂತೀ ಶ್ರೀಗುರುಲಿಂಗ ಜಂಗಮರೂಪಾಗಿ ಕರುಣಿಸಿ, ಪ್ರಸನ್ನವಾಗಿ ಪ್ರಸಾದವ ಕರುಣಿಸಿ, ಪ್ರಸಾದರೂಪಾಗಿ ಸಲಹಿದನು. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆನಿಪ ಚತುರ್ವಿಧಪದಕ್ಕೆ ಘನತರಪದ ದಾಸೋಹಪದದಲ್ಲಿ ನಿಲಿಸಿದನು. ಶಿವಶಿವಾ, ಮಹಾಪದವನೇನೆಂದುಪಮಿಸಲರಿಯೆ. ಸದ್ಗುರುವಿನ ಕೃಪೆ ವಾಙ್ಮನಾತೀತ ಮಹಾಘನ ಪರಿಣಾಮ ಸುಖವು. ಇಂತೀ ಸುಖವನು ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರ ತಾನೇ ಬಲ್ಲ.

(೧೫). ಜಪ, ತಪ, ಧ್ಯಾನ, ಮೌನ, ನಿಯಮ, ಶೀಲ ಕ್ರಿಯೆಗಳೆಂಬ ನಾನಾ ವ್ರತಂಗಳ ಕೈಕೊಂಡು ಹಲವು ಪ್ರಕಾರದ ಅರ್ಚನೆಪೂಜೆಯಂ ಮಾಡಿ ಒಲಿಸಿಕೊಂಡು, ಭಕ್ತಿ ಯುಕ್ತಿ ಶಕ್ತಿಯಿಂ ಚತುರ್ವಿಧ ಫಲಪದಂಗಳಂ ಪಡೆದು ಮೇಲೆ ಮುಕ್ತಿಯಾಗಬೇಕೆಂಬ ಆಶೆವಿಡಿದು ಭ್ರಮೆಗೊಳಗಾದ ಮರ್ಕಟರಂತಲ್ಲ ನೋಡಿರೋ. "ಶಿವಶಿವಾ, ಮಹಾದೇವ, ಶಂಕರ, ಶಾಂಭವಿ" ಎಂದು ಆ ಮಹಾವಸ್ತುವಿನಲ್ಲಿ ಬೆರೆದ ಆ ಬೇಡಶರಣಂಗೆ, ಜಪ ತಪ ಧ್ಯಾನ ಮೌನವೆಲ್ಲಿಯದೋ? ಜಪ ಕೈಸಾರಿದಂದೆ, ಧ್ಯಾನ ಮೌನವೆಲ್ಲಿಯದೋ? ಧ್ಯಾನವಳವಟ್ಟು ಆನಂದಿಪಂಗೆ ತಪದ ತಗಹು ಇನ್ನೆಲ್ಲಿಯದೋ? ಇಹಪರವೆರಡು ದೆಸೆಗೆಟ್ಟವಂಗೆ ವ್ರತನೇಮದ ನೋಂಪಿಯ ಸೂತಕವಿನ್ನೆಲ್ಲಿಯದೋ? ಸಂಪನ್ನ ಸತ್ಪುರುಷನ ಪಡೆದುಕೊಂಡು ತೆರಹುಮರಹಿಲ್ಲದೆ ಪತಿಭಕ್ತಿಯ ಮಾಡುವ ಸಜ್ಜನ ಸತಿಗೆ ಭಜನಪೂಜಾ ಕ್ರಿಯೆಗಳೆಂಬ ನೇಮದಿಂದರ್ಪಿಸಿ ಪೂಜಿಸಿ ಧ್ಯಾನವ ಮಾಡಬೇಕೆಂಬ ಸಂಭ್ರಮದ ದಂದುಗದ ಕೋಟಲೆ ಎಲ್ಲಿಯದೋ? ಮೊದಲೆ ಪುರಾತನರೆಂದರಿದು ಶಿವಯೋಗೀಶ್ವರರೆಂದು ಪರಶಿವಶರಣಗಣ ಸಮರ್ಪಣೆಯ ಮಾಡುವ ಸದ್ಭಕ್ತಂಗೆ ಅವಾಗಲೂ ಶ್ರೀಗುರುಸೇವೆಯ ಮಾಡುವ ಕಯ್ಯಲ್ಲಿ ಮಣಿಯ ಹಿಡಿದು ತಿರುಹಬೇಕೆಂಬ ಧಾವತಿಗೆ ಒಳಗಾಗಲೇಕೋ? ಸದಾಸನ್ನಿಹಿತನಾಗಿ ಅನುದಿನ ಶ್ರುತಿಗೆಯ್ಯೆ ಮನದ ನೆನಹ ಬಿಡಿಸಿ ಸಂಚರಿಸುವ ಸಂದೇಹವದೇತಕೋ? ಅನುಮಿಷನಾಗಿ ನೋಡುವ ದೃಷ್ಟಿಗೆ ಎವೆಯ ಮಂಜುಮಾಡಿಕೊಂಡು ಕಣ್ಣು ಮುಚ್ಚುವದೇತಕೋ? ಕರಮನ ನೇತ್ರವೆಂಬ ತ್ರಿಸ್ಥಾನದಲ್ಲಿರಿಸದೆ ಭೇದವ ಮಾಡಿ ಅಗಲಿಸುವ ಜಪತಪ ತಾನೇಕೋ? ಪರಿಪೂರ್ಣವಾದ ವಸ್ತು ಕರಕಮಲದಲ್ಲಿರಲಿಕ್ಕಾಗಿ ಅಗಲಿಸಿ ದೂರಕ್ಕಿಕ್ಕಿ ತೆರಹವ ಮಾಡಿ ಖಂಡಿಸಿ ಕಂಡಿಹೆವೆಂಬ ಧ್ಯಾನ ಮೌನವೇಕೋ? ಸರ್ವ ಸಂಪದವನೀವ ಸ್ವತಂತ್ರ ಕರ್ತುವೆನಿಸುವ ಸಮರ್ಥಿಕೆಯನುಳ್ಳ ವಸ್ತುವೆಂಬ ಪರಬ್ರಹ್ಮದೊಳಗಿರ್ದು, ಅಲ್ಪಪದವ ಸಾಧಿಸಿಹೆನೆಂದು ಕಾಯವ ದಂಡಿಸಿ, ಆತ್ಮನಿಗ್ರಹಂ ಮಾಡಿ ತನುವಂ ಹಣ್ಣಿ, ತಗಹನಿಕ್ಕಿ ಕುಳ್ಳಿರ್ದು, ಬೇಡಿಕೊಂಬ ತಪವು ತಾನೇಕೋ? ಮುಟ್ಟಿದೆಲ್ಲವೂ ಪವಿತ್ರ, ನೋಡಿದೆಲ್ಲವೂ ಪಾವನ, ನಿರ್ಮಳನೆಂಬ ನಿರ್ವಯಲಿಂಗೆ ಸದಾ ದಾಸೋಹದೊಳಿರುತ್ತ, ಸೂತಕ ಬಿಡದೆಂದು ಜಡಕ್ರಿಯೆಯಿಂದ ಭವಕ್ಕೊಡಲ ಗುರಿಮಾಡಿ, ಮೀಸಲಾಗಿಹ ಪ್ರಾಣವನರಿದು, ಸಾವಿರ ಸಂಕಟದ ವ್ರತನೇಮಗಳದೇಕೆ? ಪೂಜಿಸುವನು, ಪೂಜಿಸಿಕೊಂಬುವನು ತಾನೇ ಎಂದು ತಿಳಿದು, ಈ

ತ್ರಿವಿಧದ ಸೂತ್ರಧಾರಕ ತಾನೇ ಎಂಬ ಹವಣನರಿದು, ಆ ಅರಿವಿಂಗೆ ತಾನೇ ಆಶ್ರಯವಾಗಿ ಇದನರಿಯದೆ ನಾನಾಪರಿಯಿಂದೆ ಒಲಿಸಿ ಮೆಚ್ಚಿಸಿ, ಸ್ವರ್ಗದ ಭೋಗವೆಂದು ಧರ್ಮಕರ್ಮಂಗಳನುಂಬ ಕೈಕೂಲಿಕಾರನಂತೆ ಮಾಡುವ ಅರ್ಚನೆಯ ಪೂಜೆಯ ಸಾಹಸವೇಕೋ? ಜಪ ತಪ ಜಾಡ್ಯದ ಜಂಜಡದವನಲ್ಲ. ಧ್ಯಾನ ಮೌನದಿಂದೆ ಬಿಗಿದು ಬಿರ್‍ರನೆ ಬೀರುತಿಹ ಬಂಧನದವನಲ್ಲ. ನೆವದಿಂದ ತದ್ದಿನವ ಮಾಡಬೇಕೆಂಬ ಉದ್ದೇಶಿಯಲ್ಲ. ವರುಷಕ್ಕೊಂದು ತಿಥಿ ಎಂದು ಕೂಡಲಿಕ್ಕಿ ಮಾಡುವ ಕೀರ್ತಿವಾರ್ತೆಗೆ ಮಯ್ಯಾನುವವನಲ್ಲ. ಮಿಕ್ಕಿದ ಕಿರುಕುಳ ಹಾದಿಯವನಲ್ಲ. ಸದಾ ಹಾಲಸಾಗರದೊಳಗಿದ್ದು ವಾಳಿ ಆಕಳ ಬೆನ್ನ ಹರಿವವನಲ್ಲ. ಅತ್ಯಂತ ಸ್ನೇಹದಿಂದ ಮನಕ್ಕೆ ಬಂದು ನೆನಹು ನೆಲೆಗೊಂಡಿರಲು, ಆಹಾ ಎನ್ನ ಪುಣ್ಯವೇ, ಆಹಾ ಎನ್ನ ಭಾಗ್ಯವೇ, ಎಂದು ಕರಮನ ಭಾವತುಂಬಿ, ಕ್ರೀಡಿಸುವ ರತಿಸುಖ ಬಿಟ್ಟು ಬರಿಯ ನೆನಹಿನ ಆಶೆ ಎಂಬ ಚಿಂತೆಯಿಂದ ತೊಳಲಿ ಬಳಲುವ ಮರಹಿನ ತಂತ್ರಿಗಳಂತೆ ಭಿನ್ನವಿಟ್ಟು ಕಂಡೆಹೆನೆಂದು ಆಶೆಬಡುವವನಲ್ಲ ಕೂಡಲಚನ್ನಸಂಗಮದೇವಾ.

(೧೬). ಜಪವೇಕೋ ಅಪ್ರಮಾಣಂಗೆ? ತಪವೇಕೋ ಚತುರ್ವಿಧ ಪಥಕ್ಕೆ ಹೊರಗಾದವಂಗೆ? ನೇಮವೇಕೋ ನಿತ್ಯ ತೃಪ್ತಂಗೆ? ನಿತ್ಯವೇಕೋ ಅಷ್ಟವಿಧಾರ್ಚನೆ ಷೋಡಶೋಪಚಾರಭರಿತಂಗೆ? ಜಪಕ್ಕೊಳಗಾದ ರುದ್ರ, ತಪಕ್ಕೊಳಗಾದ ವಿಷ್ಣು, ನೇಮಕ್ಕೊಳಗಾದ ಬ್ರಹ್ಮ, ನಿತ್ಯಕ್ಕೊಳಗಾದ ಈಶ್ವರ, ಉಪಚರ್ಯಕ್ಕೊಳಗಾದ ಸದಾಶಿವ. ಇಂತಿವರೆಲ್ಲರೂ ಸೃಷ್ಟಿಯ ಮೇಲಣ ತಪ್ಪಲಲ್ಲಿ ಇದ್ದರೇಕೆ? ಎಲ್ಲರೂ ಬೆಟ್ಟವನೇರೆ, ಇಂತಿವರ ಬಟ್ಟೆಯ ಮೆಟ್ಟದೆ ನಿಶ್ಚಯವಾದ ಶರಣನು ಇಹದವನಲ್ಲ, ಪರದವನಲ್ಲ. ಆ ಶರಣ ನಡೆವಲ್ಲಿಯೂ ತಾನೆ, ಉಂಬಲ್ಲಿಯೂ ತಾನೆ, ಬೇರೊಂದಿಲ್ಲವಾಗಿ. ಕ್ಷೀರವ ಕೂಡಿದ ಜಲವ ಭೇದಿಸಬಹುದೇ ಅಯ್ಯಾ? ವಾರಿಧಿಯ ಕೂಡಿದ ಉದಕದ ಸಾರವ ಬೇರೆ ರುಚಿಸಲುಂಟೇ ಅಯ್ಯಾ? ಆರಡಿ ಕೊಂಡ ಗಂಧವ ಬೇರೆ ಮುಡಿಯಲಿಲ್ಲ. ತೋರಲಿಲ್ಲದ ರೂಹಿಂಗೆ ಆರಾಧಿಸುವದಕ್ಕೆ ಬೇರೆ ಒಡಲಿಲ್ಲ. ವಕ್ತ್ರದ ಸಾಕಾರಕ್ಕೆ ಅರ್ಪಿಕೆ ಇಲ್ಲದೆ, ಸತ್ತು ರೂಪಾದಲ್ಲಿಯೇ ಇಹದಲ್ಲಿ ಪರದಲ್ಲಿ ಪರಿಣಾಮಿಗಳಾಗಿ, ಇಂತವಕೆ ದೂರವಾಗಿ ಬಾಳುಗೆಟ್ಟೆ, ಬೀಳಾದೆ, ಹೇಳಹೆಸರಿಲ್ಲದಂತಾದೆನಯ್ಯಾ ನಿಃಕಳಂಕಮಲ್ಲಿಕಾರ್ಜುನಾ.

(೧೭). ನೇಮವ ಮಾಡುವರೆಲ್ಲರೂ ಬ್ರಹ್ಮಪಾಶಕ್ಕೊಳಗಾದರು. ನಿತ್ಯವ ಮಾಡುವರೆಲ್ಲರೂ ವಿಷ್ಣುಪಾಶಕ್ಕೊಳಗಾದರು. ಜಪವ ಮಾಡುವರೆಲ್ಲರೂ ರುದ್ರಪಾಶಕ್ಕೊಳಗಾದರು. ತಪವ ಮಾಡುವರೆಲ್ಲರೂ ರತಿಪಾಶಕ್ಕೊಳಗಾದರು. ಇಂತಪ್ಪ ಮೊದಲಾದ ನಾನಾಕೃತ್ಯವ ಮಾಡುವ ಸಂಕಲ್ಪ ಜೀವರೆಲ್ಲರೂ ನಾನಾ ಯೋನಿಯಲ್ಲಿ ಬಪ್ಪುದಕ್ಕೆ ತಮ್ಮ ತಾವೇ ಲಕ್ಷವಿಟ್ಟುಕೊಂಡರು. ಅಲಕ್ಷ, ಅತೀತ, ಅನಾಮಯ, ಅಮಲ, ಅದ್ವಯ, ಕಾಲಭೇದಚ್ಛೇದನಕುಠಾರ, ನಾನಾಶಾಸ್ತ್ರ ನಿರ್ಲೇಪ, ಸಕಲಕೃತ್ಯದವನಾದವನಲ್ಲ. ನಿಃಕಾರಣಮೂರ್ತಿ ಸಹಜಭರಿತಂಗೆ ಹಿಡಿಯಲಿಲ್ಲವಾಗಿ, ಬಿಡಲಿಲ್ಲ, ಅರಿಯಲಿಲ್ಲ. ಅರಿದೆನೆಂಬ ತೆರಹಿಲ್ಲವಾಗಿ ಮತ್ತೇನೂ ಕುರುಹಿನಿಂದ ಕಂಡ ಅರಿಕೆ ಇನ್ನೇಕೆ? ಸಿಪ್ಪೆಯ ಕಳೆದು ಸುಭಿಕ್ಷೆಯ ಸೇವಿಸಿ ಚಿತ್ತ ನಳಿದುದೇ ನಿತ್ಯ. ಅನಿತ್ಯವ ಕಳೆದು ಮತ್ತೇನೆನ್ನದಿಪ್ಪುದೇ ಲಿಂಗೈಕ್ಯವು, ನಿಃಕಳಂಕಮಲ್ಲಿಕಾರ್ಜುನಾ.

---

## ಮಂತ್ರತಂತ್ರ ಸಿದ್ಧಿಗಳನ್ನು ಮಾಡಕೂಡದು.

(೧). ಅಂಜನ ಸಿದ್ಧಿಗಳ ಸಾಧಿಸುವಣ್ಣಗಳ ಕಣ್ಣು ಮನಕ್ಕೆ ಮಂಜುಗವಿಸಿ ಹೊರಗಾದನು ನೋಡಾ ಪರಶಿವನು. ಘುಟಿಕಾಸಿದ್ಧಿಗಳ ಸಾಧಿಸುವಣ್ಣಗಳ ಕಂಗಳ ಮನಕ್ಕೆ ಸಟೆಯನು ತೋರಿ ಹೊರಗಾದನು ನೋಡಾ ಪರಶಿವನು. ಮಂತ್ರ ತಂತ್ರಗಳ ಸಿದ್ಧಿವಾದ ವಶ್ಯವ ಸಾಧಿಸುವಣ್ಣಗಳ ಕಣ್ಣುಮನಕ್ಕೆ ಕಾರಗತ್ತಲು ಗವಿಸಿ ಹೊರಗಾಗಿ ಹೋದನು ನೋಡಾ ಪರಶಿವನು. ಭಕ್ತಿಸಿದ್ಧಿಯ ಸಾಧಿಸುವಣ್ಣಗಳ ಕಣ್ಣುಮನಕ್ಕೆ ಮುಕ್ತಿ ಬೆಳಗನು ತೋರಿ ಒಳಗಿರ್ಪ ನೋಡಾ ನಮ್ಮ ಅಖಂಡೇಶ್ವರಾ.

(೨). ಗಿರಿಯ ಕರದಿಂದ ಎತ್ತಿದಡೇನು? ಹರಿವ ವಾರುಧಿಯ ಆಘೋಷಣವ ಮಾಡಿದಡೇನು? ಗಗನ ಗಮನದಲ್ಲಿ ಸುಳಿದಡೇನು? ಇವರೆಲ್ಲರು ಪವನ ಬಳಿಯಲಭ್ಯಾಸಿಗಳು. ಮರ್ತ್ಯದ ಲೌಕಿಕರ ಮೆಚ್ಚ ಸಕಳೇಶ್ವರದೇವನು.

(೩). ರಸವಾದಂಗಳ ಕಲಿತಲ್ಲಿ ಲೋಹಸಿದ್ಧಿಯಲ್ಲದೆ, ರಸಸಿದ್ಧಿಯಾದುದಿಲ್ಲ. ನಾನಾಕಲ್ಪಯೋಗ ಅದೃಶ್ಯ ಕರಣಂಗಳ ಕಲಿತಲ್ಲಿ ಕಾಯಸಿದ್ಧಿಯಲ್ಲದೆ ಆತ್ಮಸಿದ್ಧಿಯಾದುದುಂಟೇ? ನಾನಾ ವಾಗ್ವಾದಂಗಳಿಂದ ಹೋರಿ ಮಾತಿನ ಮಾಲೆಯಾಯಿತ್ತಲ್ಲದೆ, ಆತ್ಮವಿಹಿತವಾದುದಿಲ್ಲ. ನೀ, ನಾ, ಎಂದಲ್ಲಿ, ನೀನು

ನಾನಾದೆಯಲ್ಲದೆ, ನಾನು ನೀನಾದುದಿಲ್ಲ. ಗೋರಕ್ಷಪಾಲಕ ಮಹಾಪ್ರಭುಸಿದ್ಧ ಸೋಮನಾಥಲಿಂಗ ನೀ ನಾನಾದೆಯಾಲ್ಲದೆ, ಲೀಯ್ಯವಾಗಿ ನಾ ಆ ಲಿಂಗವೆ ಯಾದುದಿಲ್ಲ.

( ೪ ). ಕವಿಸಾಧಕರೆಲ್ಲರೂ ಕಳವಳಿಸಿ ಕೆಟ್ಟರು. ವಿದ್ಯಾಸಾಧಕರೆಲ್ಲರು ಬುದ್ಧಿಹೀನರಾದರು. ಪವನಸಾಧಕರೆಲ್ಲರು. ಹದ್ದುಕಾಗಿಗಳಾದರು, ಜಲಸಾಧ ಕರೆಲ್ಲರು ಕಪ್ಪೆ ಮೀನಗಳಾದರು. ಅನ್ನಸಾಧಕರೆಲ್ಲರು ಭೂತಪ್ರಾಣಿಗಳಾದರು. ಬಸವಣ್ಣ ಸದ್ಗುರುಸಾಧಕನಾಗಿ. ಸ್ವಯಲಿಂಗವಾದ ಕಾಣಾಗುಹೇಶ್ವರಾ.

( ೫ ). ಅಮೃತಸೇವನೆಯ ಮಾಡಿ, ಅಪ್ಯಾಯನ ಘನವಾಯಿತ್ತ ಕಂಡೆ. ಮರುಜೀವಣಿಯ ಹಣ್ಣಮೆದ್ದು, ಮರಣವಾಯಿತ್ತ ಕಂಡೆ. ಇವನೆ ಲ್ಲವ ಸಾಧಿಸಹೋದರೆ, ಏನೂ ಇಲ್ಲದಂತಾಯಿತ್ತು. ನಾನು ನಿಜವಸಾಧಿಸಿ, ಬದುಕಿದೆನು ಗುಹೇಶ್ವರಾ.

( ೬ ). ಧರೆಯ ಮೇಲುಳ್ಳ ಅರಿವು ಹಿರಿಯರೆಲ್ಲ ಮರುಳುಗೊಂಡು ಆಡು ತ್ತಿದ್ದಾರೆ ನೋಡಾ! ಮಂಜಿನ ಮಡಕೆಯೊಳಗೆ ರಂಜನೆಯ ಭಾಂಡವ ತುಂಬಿ, ಅಂಜದೆ ಪಾಕವ ಮಾಡಿಕೊಂಡುಂಡು ಭಾಂಡವಮಾರುತಿಪ್ಪರು ನೋಡಾ! ಸಂಜೀವನಿಯ ಬೇರಕಾಣದೆ ಮರಣಕ್ಕೊಳಗಾದರು, ಗುಹೇಶ್ವರನನರಿಯದ ಭವಭಾರಕರೆಲ್ಲರು.

( ೭ ). ನಾರುಬೇರಿನ ಕುಟಿಲಕುಹಕದ ಕಪಟಯೋಗವಲ್ಲಿದುನಿಲ್ಲಿರೋ. ಕಾಯಸಮಾಧಿ, ಕರಣಸಮಾಧಿ, ಜೀವಸಮಾಧಿಯ ಯೋಗವಲ್ಲಿದುನಿಲ್ಲಿರೋ, ನಿಜ ಸಹಜಸಮಾಧಿ, ಗುಹೇಶ್ವರಾ.

( ೮ ). ವಶ್ಯವ ಬಲ್ಲೆವೆಂದೆಂಬಿರಯ್ಯ. ಬುದ್ಧಿಯನರಿಯದ ಮನುಜರು ನೀವು ಕೇಳಿರಯ್ಯ. ವಶ್ಯವಾವುದೆಂದರಿಯದೆ ಮರುಳುಗೊಂಬಿರಿ, ಎಲೆ ಗಾವಿಲ ಮನುಜರಿರಾ. " ಓಂ ನಮಶ್ಶಿವಾಯ " ಎಂಬುದೇ ದಿವ್ಯಮಂತ್ರ. ಸಕಲಜನ ವಶ್ಯ ಕೂಡಲಸಂಗಮದೇವಾ.

( ೯ ). ಮಂತ್ರತಂತ್ರ ಜಪತಪ ನಿತ್ಯನೇಮವೆನಗೆ ಗುರು ಉಪದೇಶ. ನಿಮ್ಮ ನಾಮವೆನಗೆ ಮಂತ್ರ. ಶಿವನಾಮ ಎನಗೆ ತಂತ್ರ. ಕೂಡಲಸಂಗಮದೇ ವಯ್ಯ, ನಿಮ್ಮ ನಾಮ ಕಾಮಧೇನು ಎನಗೆ.

# ಶರಣಸ್ಥಲ.

## ಶರಣನ ಲಕ್ಷಣಗಳು.

### (೧) ಶರಣನು ಜ್ಞಾನಯುಕ್ತನು.

(೧). ನೆಲ ನೀರು ಕಿಚ್ಚು ಗಾಳಿ ಬಯಲು ಕೂಡಿ ಅದೇ ಪಿಂಡ ತಾನೆಂಬ ಮಿಥ್ಯಾ ಚರ್ಮದೇಹಿಗಳನೇನೆಂಬೆನಯ್ಯ? ನೆಲನಲ್ಲದ, ನೀರಲ್ಲದ, ಕಿಚ್ಚಲ್ಲದ, ಗಾಳಿಯಲ್ಲದ, ಬಯಲಲ್ಲದ, ಪ್ರಕೃತಿಯಲ್ಲದ, ಪುರುಷರಲ್ಲದ ಮೇಲಣ ಶುದ್ಧ ಸ್ವಯವೇ ತಾನೆಂದು ತಿಳಿದಾತನಲ್ಲದೆ ಶರಣನಲ್ಲ ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೨). ಪೃಥ್ವಿ ಆಕಾಶದ ಮಧ್ಯದಲ್ಲಿ ತೋರುವ ತೋರಿಕೆಗಳು, ಸ್ವರ್ಗ ಮರ್ತ್ಯ ಪಾತಾಳಂಗಳೆಂಬ ತ್ರಿಲೋಕದ ಮಧ್ಯದಲ್ಲಿ ಪುಣ್ಯ ಪಾಪ ಮೊದಲಾದ ಸರ್ವ ಕರ್ಮಂಗಳು, ಕೃತಯುಗ, ತ್ರೇತಾಯುಗ, ದ್ವಾಪರ, ಕಲಿಯುಗದಲ್ಲಿಯ ಆಗು ಚಾಗೆಗಳು, ಇದಲ್ಲದೆ ಪಂಚತತ್ವ ಮಿಶ್ರವಾದ ದೇಹದ ಪ್ರಕೃತಿ ಮನ ಮೊದಲಾದ ಅರುವತ್ತಾರು ಕೋಟಿ ಕರಣಂಗಳು ಇಂತಿವೆಲ್ಲವು ಪರಶಿವಲಿಂಗ ದಿಂದುದಯವಾದವಾಗಿ, ತೋರಿ ತೋರಿಯಡಗುವವಲ್ಲದೆ, ನಿಜವಲ್ಲವೆಂದು ಭಾವಿಸಿ, ಪರಶಿವತತ್ವ ಒಂದೇ ನಿಜ, ಉಳಿದವೆಲ್ಲ ಮಿಥ್ಯವೆಂದು ತಿಳಿವುದೇ ಅದೇ ಪರಮಜ್ಞಾನ. ಆ ಪರಮಜ್ಞಾನವೆಂಬುದು ತಾನೆಂದು ತಿಳಿದಾತನೇ ಶಿವಜ್ಞಾನಿ ಶರಣನೆಂದೆನಯ್ಯ ನಿಮ್ಮ ಶರಣ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬ ಲಿಂಗ ನಿರ್ಮಾಯಪ್ರಭುವೇ.

(೩). ಅಯ್ಯಾ, ಲೋಕಾರ್ಥ ಪರಮಾರ್ಥದ ಸಂದು ಸಂಶಯದವ ನಲ್ಲ ನೋಡಾ, ನಿರವಯ ಶೂನ್ಯಮೂರ್ತಿಯಾದ ಶರಣನು. ಅದೆಂತೆಂದೊಡೆ-ಮಳೆ ಹೊಯ್ದಡೆ ಆಕಾಶ ನೆನೆವುದೇ? ಬಿರುಗಾಳಿ ಬೀಸಿದಡೆ ಆಕಾಶ ನಲುಗು ವುದೇ? ಕಿತ್ತಲಗಿನಿಂದ ಹೊಯ್ದರೆ, ಆಕಾಶ ಹರಿವುದೇ? ನಿಜ ವಸ್ತುವ ಕುಶಾಸ್ತ್ರ ಖಂಡಿಸಬಲ್ಲುದೇ? ಭೂಮಿಗೂ ಆಕಾಶಕ್ಕೂ ಏಕತ್ವಮುಂಟೇ? ಕಿಚ್ಚಿ

ಗೂ ನೀರಿಂಗೂ ಏಕತ್ವ ಉಂಟೇ? ಗಾಳಿಗೂ ಧೂಳಿಗೂ ಏಕತ್ವ ಉಂಟೇ? ನೀರಿಗೂ ನೆಳಲಿಗೂ ಏಕತ್ವ ಉಂಟೇ? ಕನ್ನಡಿಗೂ ಪ್ರತಿಬಿಂಬಕ್ಕೂ ಏಕತ್ವ ಉಂಟೇ? ತಮಕ್ಕೂ ಬೆಳದಿಂಗಳಕ್ಕೂ ಏಕತ್ವ ಉಂಟೇ? ಅಂಗ ಮನ ಪ್ರಾಣ ಇಂದ್ರಿಯ ವಿಷಯ ಕರಣಂಗಳೆಲ್ಲ ಪರತತ್ವಮೂರ್ತಿ ಸಂಗನಬಸವಣ್ಣನ ಚಿದ್ಘನ ನಿಜಪ್ರಸಾದದಲ್ಲಿ ಐಕ್ಯವಾದ ಗುಹೇಶ್ವರ ಪ್ರಭುವೆಂಬ ಶರಣಂಗೆ ಇಹಪರಂಗಳ ಪ್ರಪಂಚಿನ ಹೊದ್ದಿಕೆ ಹೊದ್ದದು ನೋಡಾ.

(೪). ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ. ಶಿವನೇ ಚೈತನ್ಯಾತ್ಮಕನು, ಶಕ್ತಿಯೇ ಚಿತ್ತು, ಇಂತೀ ಚೈತನ್ಯಾತ್ಮಕನೇ ಚಿತ್‌ಸ್ವರೂಪೆಂದು ಅರಿಯಬಲ್ಲಡೆ, ಆತನೇ ಶರಣ ಗುಹೇಶ್ವರಾ.

**ಅರ್ಥ:**—ಶಿವಶಕ್ತಿಗಳೆಂಬ ಭಿನ್ನಪ್ರಕೃತಿಪುರುಷಂಗಳ ನಿವೃತ್ತಿ ಮಾಡಿ ಶಿವನೆಂಬುದೇ ಚೈತನ್ಯಾತ್ಮಕನೆಂದರಿದು ಆ ಚೈತನ್ಯಾತ್ಮಕನ ಚಿತ್ಪ್ರಭಾಸಾಮರ್ಥ್ಯವೇ ಶಕ್ತಿ ಅಂತು ಶಿವಚೈತನ್ಯವು ತನ್ನ ಚಿತ್‌ಪ್ರಭಾವತೆಯಿಂದ ಶರಣರೂಪಾದ ಶರಣ ತಾನೆಂದು ತನ್ನ ನಿಜವನರಿಯ ಬಲ್ಲಾತನೇ ಶರಣನೆಂಬುದೀವಚನದ ತಾತ್ಪರ್ಯಾರ್ಥ.

## ( ೨ ) ಶರಣನು ಲಿಂಗರೂಪನು.

(೫). ಲಿಂಗವೇ ಪತಿಯಾಗಿ ಅನ್ಯವನರಿಯದೆ, ಪಂಚೇಂದ್ರಿಯ ವಿರಹಿತನಾಗಿ, ತೆರಹಿಲ್ಲದ ಅರುಹು ತಾನಾಗಿ, ನೆರೆ ಅರುಹಿನೊಳು ನಿಬ್ಬೆರಗಾಗಿ ಹೃದಯ ಕಮಲಮಧ್ಯದಲ್ಲಿ ಪರಮೇಶ್ವರನೊಳಗಣ ಪರಮಸ್ನೇಹವೆರಸಿ ಅಗಲದಿಪ್ಪುದೀಗ ಶರಣಸ್ಥಲವೆಂದೆಂಬೆನಯ್ಯ, ಮಹಾಲಿಂಗ ಗುರುಶಿವಸಿದ್ಧೇಶ್ವರಪ್ರಭುವೇ.

(೬). ಅನಂತ ಹಸ್ತ, ಅನಂತ ಪಾದ, ಅನಂತ ಮುಖ, ಅನಂತ ನಯನ, ಅನಂತ ಕರ್ಣ, ಅನಂತ ಅಂಗ, ಅನಂತ ಮಿಂಚಿನ ಲತಾಪ್ರಕಾಶದಂತೆ, ಅನಂತ ಚಂದ್ರಸೂರ್ಯಪ್ರಕಾಶದಂತೆ, ಅನಂತ ವಜ್ರ ವೈಢೂರ್ಯ ಮಾಣಿಕದ ಪ್ರಕಾಶದಂತೆ ಇಂತೀ ನಿಲವಿನ ಪ್ರಕಾಶವನು ಗರ್ಭೀಕರಿಸಿಕೊಂಡು, ಆದಿ ಅನಾದಿ ಸುರಾಳ ನಿರಾಳ ಶೂನ್ಯ ನಿಶ್ಶೂನ್ಯದಿಂದತ್ತಲಾದ ಪರವಸ್ತು ಸ್ವಯಂಭುವಾಗಿರ್ದು ತನ್ನ ವಿನೋದಕ್ಕೆ ತಾನೇ ಶಂಭುರೂಪದಿಂ ಲೀಲಾಮೂರ್ತಿಯಾಗಿ ಇಂತೀ ಕಳೆಯನು ಧರಿಸಿ ಘನಮಹಾಲಿಂಗವಾಗಿರ್ಪನು. ಅಂತಪ್ಪ ಘನಮಹಾ

ಲಿಂಗವನು ಬಹಿಷ್ಕರಿಸಿ ಶ್ರೀಗುರುಶಿಷ್ಯನ ಕರಸ್ಥಲಕ್ಕೆ ಇಷ್ಟಲಿಂಗವನು ಮಾಡಿ ತೋರಿ ಕೊಟ್ಟ ಬಳಿಕ, ಆ ಲಿಂಗದಲ್ಲಿ ತನ್ನ ತನುವನಡಗಿಸಿ, ಆ ತನುವಿನಲ್ಲಿ ಆ ಲಿಂಗವ ಸಂಬಂಧಿಸಿ, ಶಿಖಿ ಕರ್ಪುರದ ಸಂಯೋಗದ ಹಾಗೆ ಅಂಗಲಿಂಗವೆಂಬ ಉಭಯ ನಾಮ ನಷ್ಟವಾಗಿರ್ಪಾತನೇ ಶಂಭು ಸ್ವಯಂಭುಗಿಂದತ್ತ ತಾನೇ ನೋಡಾ. ಶಂಭುವೆಂದಡೆ ಇಷ್ಟಲಿಂಗ, ಸ್ವಯಂಭುವೆಂದಡೆ ಪ್ರಾಣಲಿಂಗ, ಉಭಯದಿಂದತ್ತವೆಂದಡೆ ಭಾವಲಿಂಗ. ಅಂತಪ್ಪ ಭಾವಲಿಂಗ ಸ್ವರೂಪ ಶರಣ ತಾನೇ ನೋಡಾ ಎಂದೆನಯ್ಯ. ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

( ೭ ). ಅಂಗದ ಕಳೆ ಲಿಂಗದಲ್ಲಿ, ಲಿಂಗದ ಕಳೆ ಅಂಗದಲ್ಲಿ, ಅಂಗ ಕಳೆ ಲಿಂಗ ಕಳೆ ಎಂಬುಭಯವಳಿದು, ತನ್ನಂಗವೆಲ್ಲವೂ ಲಿಂಗಮಯವಾಗಿ ಅಂಗಲಿಂಗ ಪದಸ್ಥನಯ್ಯ ಶರಣನು. ಮನದಲ್ಲಿ ಲಿಂಗ, ಲಿಂಗದಲ್ಲಿ ಮನ ಬೆರಸಿ, ಮನವು ಮಹಾಘನವನಿಂಬುಗೊಂಡಿಪ್ಪುದಾಗಿ, ಪ್ರಪಂಚಪದಗಳನರಿಯನಯ್ಯ ಶರಣನು. ಮನ ಲಿಂಗ ಪದಸ್ಥನಾದ ಕಾರಣ, ಪ್ರಾಣದೊಡನೆ ಲಿಂಗ, ಲಿಂಗದೊಡನೆ ಪ್ರಾಣಕೂಡಿ, ಪ್ರಾಣನ ಗುಣವಳಿದು, ಪ್ರಾಣಲಿಂಗಪದಸ್ಥನಯ್ಯ ಶರಣನು. ಭಾವ ಬ್ರಹ್ಮವನಪ್ಪಿ ಜಾಗ್ರತ್ ಸ್ವಪ್ನಸುಷುಪ್ತಿ ಎಂಬ ಸರ್ವಾವಸ್ಥೆಯನಳಿದ ಪರಮ ಪದಸ್ಥನಯ್ಯ ಶರಣನು. ಎಲ್ಲ ಪದಂಗಳ ಮೀರಿದ ಮಹಾಘನವ ನಿಂಬುಗೊಂಡ ಘನಲಿಂಗ ಪದಸ್ಥನಯ್ಯಾ ಶರಣನು. ಇಂತಪ್ಪ ಘನಮಹಿಮ ಶರಣಂಗೆ ಆವಲೋಕದಲ್ಲಿಯೂ ಇನ್ನಾರು ಸರಿ ಇಲ್ಲ ಪ್ರತಿ ಇಲ್ಲದಪ್ರತಿಮ ಶರಣಂಗೆ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

( ೮ ). ಅಯ್ಯಾ ನಿಮ್ಮ ಶರಣರ ಇರವು ಉರಿಯ ಕಯ್ಯ ದೀವಿಗೆಯಂತಿರ್ದಿತಯ್ಯ. ಅಯ್ಯಾ ನಿಮ್ಮ ಶರಣರ ಸುಳುಹು ಪವನನ ಕಯ್ಯ ಪರಿಮಳದಂತಿರ್ದಿತ್ತಯ್ಯ. ಹುತಾಶನನೆಂಬ ಗದ್ದುಗೆಯ ಮೇಲೆ ಕರ್ಪುರದರಸುಕುಳ್ಳಿರಲು, ಅರಸು ಗದ್ದುಗೆಯ ನುಂಗಿದನೋ, ಗದ್ದುಗೆ ಅರಸನ ನುಂಗಿತ್ತೋ, ಎಂಬ ದೃಷ್ಟದಲ್ಲಿ ಕಂಗಳ ಗದ್ದುಗೆಯ ಮೇಲೆ ಮಹಾಗುರುಲಿಂಗವೆಂಬರಸು ಕುಳ್ಳಿರಲು, ಲಿಂಗ ಕಂಗಳ ನುಂಗಿತ್ತೋ, ಕಂಗಳು ಲಿಂಗವ ನುಂಗಿತ್ತೋ ಈ ಉಭಯವ ನುಂಗಿದ ಬೆಡಗಿನ ಬಿನ್ನಾಣವ ನಿಜಗುರು ಭೋಗೇಶ್ವರಾ ನಿಮ್ಮ ಶರಣರಲ್ಲೇ ಕಾಣಬಹುದು.

(೯). ಮಂಗಳದ ಸದ್ಭಕ್ತಿಲಿಂಗ ನೀನಾಗಿರಲು, ಕಂಗಳೆರಡೊಂದಕ್ಕೆ ಉಭಯಾರ್ಥವ್ರೆ ನಿನ್ನಯದೀಕ್ಷೆ ಸ್ವಾನುಭಾವದಲಾಗೆ ಲಿಂಗ ನಿನ್ನಯ ಮನವು ಯೋಗಿನಾಥಾ.

**ಅರ್ಥ:**—ಮಂಗಳವ್ರು ಎಂದರೆ ಮದುವೆ ಎಂಬ ಶಬ್ದಕ್ಕರ್ಥ. ಅಂತು ತನ್ನ ನಿಜವಪ್ಪ ಲಿಂಗವು ಶರಣನಂಗಕ್ಕೆ ಸಂಯೋಗಮಪ್ಪ ಶುಭಕಾಲವೀಗ ಮದುವೆ ಎನಿಸಿತ್ತು. ಅಂತು ಮದುವೆಯಾಗಿ ಲಿಂಗಾಂಗವೆರಡೂ ಕೂಡಿದ ಕೂಟಕ್ಕೆ ಭಕ್ತಿ ಎನಿಸಿತ್ತು ಎಂಬುದೀಗ ಮಂಗಳದ ಸದ್ಭಕ್ತಿಲಿಂಗ ನೀನಾಗಿರಲು ಎಂಬ ಶಬ್ದಕ್ಕರ್ಥ. ಅಂತು ಶರಣನು ತಾನೆಲ್ಲ ಲಿಂಗವೆಯಾಗಿಪ್ಪ ತನ್ನ ಲಿಂಗ ಸ್ವರೂಪಿನ ಇಷ್ಟಪ್ರಾಣವೆಂಬ ಉಭಯಾರ್ಥವಿಟ್ಟು ಮನಭಾವವೆಂಬೆರಡೂ ಕಣ್ಣಿಂದ ಹಿಂಗದೆ ನೋಡುತ್ತಿಹನೆಂಬುದೀಗ ಕಂಗಳೆರಡೂ ಅದಕ್ಕೆ ಉಭಯಾರ್ಥವ್ರೆ ಎಂಬ ಶಬ್ದಕ್ಕರ್ಥ. ಅಂತು ಶರಣನೆಲ್ಲ ಲಿಂಗವೆಯಾಗಿ ಲಿಂಗವನೆ ನೋಡುತ್ತಿಪ್ಪ ಲಿಂಗಭಾವ ಘಟಿಸಿದ ಪರಿ ಎಂತೆಂದೊಡೆ ಆ ಶರಣಂಗೆ ಮಹಾ ಘನಲಿಂಗವು ಸ್ವಾನುಭಾವದಿಂದ ಸರ್ವಾಂಗವೆಲ್ಲ ಲಿಂಗವೆಯಾದ ಕಾರಣ ಶರಣನ ಮನಭಾವಂಗಳೆಲ್ಲ ಲಿಂಗದೃಕ್ಕಾಗಿರ್ದವೆಂಬುದೀಗ ಲಿಂಗ ನಿನ್ನಯ ದೀಕ್ಷೆ ಸ್ವಾನುಭಾವದಲಾಗೆ ಲಿಂಗ ನಿನ್ನಯ ಮನವು ಯೋಗಿನಾಥಾ ಎಂಬ ಶಬ್ದಕ್ಕರ್ಥ.

(೧೦). ನಚ್ಚು ಬಿಚ್ಚದೆ ಮನ ಅಚ್ಚೊತ್ತಿದಂತಿದ್ದಿತ್ತು. ಲಿಂಗವೆನ್ನದು, ಜಂಗಮವೆನ್ನದು, ಅದು ತಾನಾಗಿ, ತಾನೇ ಭರಿತನು ಕೂಡಲಚನ್ನಸಂಗನ ಶರಣನು.

**ಅರ್ಥ:**—ಮಹಾ ವಸ್ತು ತಾನೆ ತನ್ನ ಸ್ವಲೀಲೆಯಿಂದ ಲಿಂಗಾಂಗವೆರಡಾಯಿತ್ತು. ಅಂತಾದ ಲಿಂಗಾಂಗವೆರಡೂ ಬಿಚ್ಚಿ ಬೇರಾಗದೆ ಎರಡೂ ಕೂಡಿ ಶರಣರೂಪಾಯಿತ್ತು. ಅಂತಾದಕಾರಣ ಶರಣನ ಅಂಗಮನಂಗಳಲ್ಲಿ ಲಿಂಗವು ಭಿನ್ನವಿಲ್ಲದೆ ಪ್ರಕಾಶಿಸುತ್ತಿಪ್ಪುದು. ಅಂತು ಮನಕ್ಕೆ ಭಿನ್ನವಿಲ್ಲದೆ ಬೆಳಗುತ್ತಿಪ್ಪ ಲಿಂಗವ ಶರಣನ ಮನವರಿದು ಭಿನ್ನಭಾವವಳಿದು ತನುಮನವೆಲ್ಲ ಲಿಂಗವೆಯಾಗಿರ್ದ ಶರಣನು ಅಂತು ಲಿಂಗವೆಯಾಗಿರ್ದ ಶರಣಂಗೆ ಅರಿವುದು ಮನ ಅರುಹಿಕೊಂಬುದು ಲಿಂಗವೆಂದು ಎರಡಿಟ್ಟು ನೆನೆಯಲಿಲ್ಲದೆ ಹೋಯಿತ್ತು. ಅಂತು ಮಹಾಘನವಸ್ತು ತಾನೇ ಶರಣನೆಂಬ ಅಂಗವಾಗಿ ಆ ಅಂಗದೊಳಗೆ ಲಿಂಗವು

ಪರಿಪೂರ್ಣವಾಗಿ ಭಿನ್ನವಿಲ್ಲದೆ ತೊಳಗಿ ತೋರುತ್ತ ಶರಣನೆಲ್ಲ ಲಿಂಗವೆಯಾಗಿರ್ಪನೆಂಬುದೀ ವಚನದ ತಾತ್ಪರ್ಯಾರ್ಥ.

(೧೧). ಆದಿ ಆರರ ಭೇದ ತನುಗುಣವು ಮೂವತ್ತಾರು ಮೀರಿ ತೋರದುದು ತೋರಿ ಮತ್ತೆ ಆರೂಢವಾದರೆ ಮೇಲೆ ನಿನ್ನಿಚ್ಛೆ ಕಾಣಾ ರಾಮನಾಥಾ.

**ಅರ್ಥ:**—ಅಂಗತತ್ವ ಮೂವತ್ತಾರನೊಳಕೊಂಡು ಕುರುಹುದೋರದೆ ಇರ್ದ ಮಹಾಘನಲಿಂಗವ ಗುರುಕರುಣದಿಂದ ತೋರಿಸಲು ಆ ತೋರಿದ ಮಹಾಘನಲಿಂಗದ ಮುಖವಾರುಲಿಂಗವಾದ ಭೇದವನರಿದು ಆ ಆರು ಲಿಂಗಕ್ಕೆ ಆರಂಗವನರ್ಪಿಸಿ ಅಂಗಲಿಂಗವೆಂಬ ಭೇದವಳಿದು ಶರಣನೆಲ್ಲ ಲಿಂಗವೆಯಾಗಿ ಲಿಂಗಪದದಲ್ಲಿ ನಿಂದ ಶರಣನ ತನ್ನ ಸ್ವ ಇಚ್ಛೆಯಿಂದ ಎಂತು ನಡೆವ ಚಾರಿತ್ರವೆಲ್ಲ ಸತ್ಕ್ರಿಯಾಚಾರಿತ್ರವೆಂಬುದೀ ವಚನದ ತಾತ್ಪರ್ಯಾರ್ಥ.

(೧೨). ಅಂಗ ಲಿಂಗದಲ್ಲಿ ತರಹರವಾಗಿ, ಮನಜ್ಞಾನದಲ್ಲಿ ತರಹರವಾಗಿ, ಭಾವನಿರ್ಭಾವದಲ್ಲಿ ತರಹರವಾಗಿ, ಸಮತೆ ಶಾಂತಿಯಲ್ಲಿ ತರಹರವಾಗಿ ಇರಬಲ್ಲಾತನೇ ಅಚ್ಚ ಶರಣಗುಹೇಶ್ವರಾ.

**ಅರ್ಥ:**—ಅಂಗಲಿಂಗ ಸಂಗಿಯಾದ ಶರಣನ ಅಂಗವೆಲ್ಲ ಲಿಂಗವೆಯಾಗಿಪ್ಪುದು. ಅಂತು ಅಂಗವೆಲ್ಲ ಲಿಂಗವೆಯಾದಲ್ಲಿ ಮನವೆಲ್ಲ ಲಿಂಗದಲ್ಲಿ ಅವಿರಳಜ್ಞಾನವೆಯಾಗಿಪ್ಪುದು. ಅಂತಪ್ಪ ಅವಿರಳಜ್ಞಾನವು ತನ್ನ ನಿಜವನೇ ಭಾವಿಸಿ, ಭಾವವಡಿಗಿ ನಿರ್ಭಾವವಾಗಿ ಸಮತೆಯಲ್ಲಿ ನಿಂದು, ಆ ಸಮತೆಯೇ ನಿಜಶಾಂತಿಯಾಗಿ ನಿಂದು ಲಿಂಗವೆಯಾಗಿರಬಲ್ಲಾತ ಶರಣನಲ್ಲದೆ ಮತ್ತಾರಿಗೂ ಇಲ್ಲವೆಂಬುದೀ ವಚನದ ತಾತ್ಪರ್ಯಾರ್ಥ.

(೧೩). ಸ್ಫಟಿಕದ ಘಟದೊಳಗೀಗ ಕುಟಿಲಸಂಗವ ಬಿಡು. ದಿಟಪುಟವನತಿಗಳೆಯುಲುಂಟೇ ಹೇಳಾ? ವಟವೃಕ್ಷ ವಟಕೋಟಿ ಫಲವನುಂಗಿದ ತೆರನು ಶರಣ ದೇಹಿಕದೇವ ಯೋಗಿನಾಥಾ.

**ಅರ್ಥ:**—ಸ್ಫಟಿಕದ ಘಟದಂತೆ ಸಮ್ಯಜ್ಞಾನೋದಯವಾದ ಶರಣನ ಅಂಗವೆಲ್ಲವು ನಿರ್ಮಲ ಪ್ರಕಾಶವೆಯಾಗಿ ಬೆಳಗುತ್ತಿಪ್ಪುದು. ಅಂತು ಬೆಳಗುತ್ತಿಪ್ಪಜ್ಞಾನಕಾಯವಾದ ಶರಣನು ಮಾಯಾಕುಟಿಲ ಸ್ವರೂಪನಾದ ಮನೋಗುಣಂಗಳ ನೋಡಿ ಮಾಡಿದನೆಂಬುದೀಗ ಸ್ಫಟಿಕದ ಘಟದೊಳಗೀಗ ಕುಟಿಲ

ಸಂಗವ ಬಿಡೆಂಬ ಶಬ್ದಕ್ಕರ್ಥ. ಅಂತು ಅನಾತ್ಮಕವಾದ ಮನಕರಣಂಗಳ ನೇತಿ ಮಾಡಿ ತನ್ನಾತ್ಮ ಚಿತ್ಕಲಾಸ್ವರೂಪ ಚೈತನ್ಯವೇ ನಿಜಲಿಂಗವೆಂದರಿದು ಗ್ರಹಿಸಿ, ಬಿಡದೆ ಇರ್ದ ಶರಣನೆಂಬುದೀಗ ದಿಟವುಟವನತಿಗಳೆಯುಲುಂಟೇ ಹೇಳಾ ಎಂಬ ಶಬ್ದಕ್ಕರ್ಥ. ಅಂತು ಸರ್ವಾಂಗವೆಲ್ಲ ಜ್ಞಾನಪ್ರಕಾಶಮಯವಾಗಿ ಆ ತನ್ನ ಆತ್ಮಸ್ವರೂಪವೇ ಲಿಂಗವೆಂದು ಅರಿದು ಮರೆಯದಿಪ್ಪ ಶರಣನ ಕಾಯವೇ ಬ್ರಹ್ಮ ವೃಕ್ಷ. ಅಂತು ಬ್ರಹ್ಮವೃಕ್ಷವಪ್ಪ ಶರಣನ ಕಾಯದ ಸರ್ವೇಂದ್ರಿಯಂಗಳಲ್ಲಿ ಪ್ರಭಾವಿಸಿ ತೋರುವ ಆಚಾರಾದಿ ಮಹಾಲಿಂಗಂಗಳೇ ಮುಕ್ತಿಫಲ ಸ್ವರೂಪಗ ಳಾಗಿಪ್ಪವು. ಅದು ಹೇಗೆಂದಡೆ, ವಟವೃಕ್ಷ ಹಲವು ಫಲಂಗಳ ಗ್ರಹಿಸಿ ತೋರು ತ್ತಿಹುದು, ಹಾಂಗೆಂಬುದೀಗ ವಟವೃಕ್ಷ ವಟಕೋಟಿ ಫಲವ ನುಂಗಿದ ತೆರನು ಎಂಬ ಶಬ್ದಕ್ಕರ್ಥ. ಅಂತು ಶರಣನ ದೇಹವೆಲ್ಲ ಲಿಂಗದೇಹವೆಂಬುದೀಗ ಶರಣ ದೇಹಿಕ ದೇವ ಯೋಗಿನಾಥಾ ಎಂಬ ಶಬ್ದಕ್ಕರ್ಥ.

## ( ೩ ) ಶರಣನು ನಿರ್ಲೇಪನು.

(೧೪). ನಿರಾಚರಣ, ನಿರ್ಜನಿತ, ನಿರ್ಲೇಪ, ನಿಃಕಪಟ, ನಿರ್ವಚ ನೀಯನನುಪಮಿಸಲಿಲ್ಲ ನಿಲ್ಲೋ. ನಿರಾಳ, ನಿರ್ಮಾಯೆ, ನಿಸ್ಸೀಮ, ನಿಸ್ಸಂಗಿ, ನಿರವಯನ ಅವಯವಕ್ಕೆ ತರಲಿಲ್ಲ ನಿಲ್ಲೋ. ಸಿಮ್ಮಲಿಗೆಯ ಚನ್ನರಾಮನೆಂಬ ಜಂಗಮ ಲಿಂಗವನುಪಮಿಸಲಿಲ್ಲ ನಿಲ್ಲೋ.

(೧೫). ಜಂಗಮ ಜಂಗಮವೆಂದರೆ ಬಾಯಲೆಕ್ಕಕ್ಕೆ ಜಂಗಮವೇ? ಜಂಗಮ ಜಂಗಮವೆಂದರೆ, ಉಪಾಧಿಕನೇ ಜಂಗಮ? ಜಂಗಮ ಜಂಗಮ ವೆಂದರೆ, ಸ್ತ್ರೀ ಲಂಪಟನೇ ಜಂಗಮ? ಎನ್ನೆನು. ಈ ಪಾತಕದ ನುಡಿಯ ಕೇಳ ಲಾಗದು. ಜಂಗಮವೆಂತಹನೆಂದಡೆ, ನಿರ್ಲೇಪಕ ಜಂಗಮ, ನಿರುಪಾಧಿಕ ಜಂಗಮ, ನಿರ್ಭೇದಕ ಜಂಗಮ, ನಿರಾಶ್ರಿತ ಜಂಗಮ. ನಿರ್ಲಂಪಟ ಜಂಗಮ, ಈ ಷಡ್ಗುಣಭರಿತನಾದಡೆ ಆತನಿರವಯ ಜಂಗಮ. ಸಾಕ್ಷಿ ॥ ನಿಸ್ಸಂಗನಿರಾಭಾರಂ ನಿಸ್ಸೀಮಂ ನಿರುಪಾಧಿಕಂ । ನಿರ್ದೇಹಂ ನಿರ್ಮಳಂ ನಿತ್ಯಂ ತಸ್ಯ ಜಂಗಮ ಲಕ್ಷಣಂ ॥ ನಿಷ್ಕಳಂ ನಿರಪೇಕ್ಷಂ ನಿರ್ಮಳಂ ನಿತ್ಯಂ ನಿರ್ದೋಷಿ ನಿಸ್ಪೃಹಂ ತಥಾ । ಸತ್ಯಪುಣ್ಯಾದಯಾಶಾಂತಿ ತಸ್ಯ ಜಂಗಮ ಲಕ್ಷಣಂ ॥ ಮುಗ್ಧತ್ವಂ ಮೂ ರ್ತಿನಾಂ ತತ್ವಂ ದೇಹಮೋಹ ವಿವರ್ಜಿತಃ । ಮಾಯಾ ದೇಹಮಲಂ ನಾಸ್ತಿ

ತಸ್ಯ ಜಂಗಮ ಲಕ್ಷಣಂ ॥ ಇಂತಪ್ಪ ದೇಹ ಕರಣ ಕಾರಣವಾಗಿ ಪ್ರಭುದೇವರು ಬಸವಣ್ಣನು ಅವರಿಬ್ಬರು ಅವರೊಕ್ಕುದಕೊಂಡು ನಾನು ಬದುಕಿದೆನು ಕಾಣಾ ಕೂಡಲಚನ್ನಸಂಗಮದೇವಾ

(೧೬). ಜಂಗಮವೇನು ಕಾಮಿಯೇ, ಕ್ರೋಧಿಯೇ, ಲೋಭಿಯೇ? ಅಲ್ಲ ಕಾಣಿರಣ್ಣಾ. ಮೋಹಿಯೇ, ಮದನೇ, ಮತ್ಸರನೇ? ಅಲ್ಲ ಕಾಣಿರಣ್ಣಾ. ಅಹಂಕಾರಿಯೇ, ಮಮಕಾರಿಯೇ ಪ್ರಪಂಚಿಯೇ? ಈ ಪ್ರಕೃತಿರೂಪನಲ್ಲ ಕಾಣಿರಯ್ಯಾ. ನಿಃಕಾಮಿ, ನಿಃಕ್ರೋಧಿ, ನಿರ್ಲೋಭಿ, ನಿರ್ಮೋಹಿ, ನಿರ್ಮದ ನಿರ್ಮತ್ಸರ, ನಿರಹಂಕಾರಿ, ನಿರ್ಮಮಕಾರಿ, ನಿಃಪ್ರಪಂಚಿ, ನಿರ್ಲೇಪನಯ್ಯಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೭). ಜಂಗಮವೇನು ಸಂಗಿಯೇ, ಭೂಭಾರಿಯೇ, ಸೀಮನೇ, ಉಪಾಧಿಕನೇ, ದೇಹಿಯೇ, ಮಲಿನನೇ, ಅನಿತ್ಯನೇ? ಅಲ್ಲ ಕಾಣಿರಯ್ಯಾ. ನಿಸ್ಸಂಗಿ, ನಿರಾಭಾರಿ, ನಿಸ್ಸೀಮ, ನಿರುಪಾಧಿಕ ನಿರ್ದೇಹಿಯಯ್ಯಾ. ನಿರ್ಮಲ ನಿತ್ಯ, ನಿರುಪಮ, ನಿರ್ಗುಣ, ನಿರಾಧಾರ, ನಿರಾಲಂಬ, ಸರ್ವಾಧಾರ, ಸದಾ ಆನಂದಿಯೇ ಜಂಗಮದೇವನಯ್ಯಾ. ಆ ಜಂಗಮವೇ ತಾನಾಗದೆ, ಜಂಗಮ ಜಂಗಮವೆಂದು ನುಡಿದುಕೊಂಡು ನಡೆವರೆ ನಾಚದವರನೇನೆಂಬೆನಯ್ಯಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ?

(೧೮). ಭ್ರಮಿಯಲ್ಲ, ಉದ್ದೇಶಿಯಲ್ಲ, ನಿದ್ರೆಗೆಟ್ಟವನು, ನಿಜವನೇ ಬೆಳಗುತ್ತಿಹನು. ನಿಶ್ಚಿಂತ ಶರಣ ಚಿಂತೆಗೆಟ್ಟು ಸ್ಥಿರವಾಗಿನಿಂದ ಸೀಮೆಯು ಕೆಡಿಸಿ, ನಿಸ್ಸೀಮನಾದ. ಬೋಧೆಯು ಕೆಡಿಸಿ ನಿರ್ಬೋಧನಾದ. ಕಾಯವ ಕೆಡಿಸಿ ಕರ್ಮಾದಿಗುಣ ವಿರಹಿತನಾದ. ಆಶೆಯು ಕೆಡಿಸಿ, ನಿರಾಶಕನಾದ. ಇದು ಕಾರಣ ಕೂಡಲ ಚನ್ನಸಂಗಾ ನಿಮ್ಮ ಶರಣಂಗೆ ಆರೂ ಸರಿ ಇಲ್ಲ.

(೧೯). ಹಣ್ಣಮೆದ್ದ ಬಳಿಕ, ಆಮರನ ಆರು ತರಿದಡೇನು? ಹೆಣ್ಣ ಬಿಟ್ಟ ಬಳಿಕ, ಆಕೆಯುನಾರು ಕೂಡಿಕೊಂಡರೇನು? ಮಣ್ಣ ಬಿಟ್ಟ ಬಳಿಕ, ಆಕೆಯುನಾರುತ್ತರೇನು? ಚನ್ನಮಲ್ಲಿಕಾರ್ಜುನನ ಅರಿದ ಬಳಿಕ ಆ ಕಾಯುವ ನಾಯಿ ತಿಂದರೇನು, ನೀರ ಕುಡಿದರೇನು?

(೨೦). ಉಷ್ಣತೆಯ ಒರತೆಯಂತೆ, ಉರಿಯ ನೆಳಲಂತೆ, ಮಂಜಿನ ಮಳೆಯಂತೆ, ಬಿಸಿಲ ಕುದುರೆಯಂತೆ, ಬೆಟ್ಟದ ಶಬ್ದದಂತೆ ಸುಳಿವ ಸಿದ್ಧ ಸೋಮ ನಾಥಲಿಂಗ ನಿಮ್ಮ ಶರಣ.

**ಅರ್ಥ:**—ಉಷ್ಣದ ಗಮ್ಮಕ್ಕೆ ಬೆವರ್ತು ಒರೆತ ಬೆವರು ಭೂಮಿಯ ಒರತೆಯಂತಲ್ಲ, ಅದು ಹೇಗೆ ಹಾಗೆ, ಕಿಚ್ಚಿನ ಉರಿಯ ನೆಳಲು ಹೇಗೆ ಎಲ್ಲ ವೃಕ್ಷಂಗಳ ನೆಳಲಂತಲ್ಲ, ಅದು ಹೇಗೆ ಹಾಗೆ, ಮಂಜಿನ ಮಳೆ ಎಲ್ಲ ಮಳೆಗಳಂತಲ್ಲ, ಅದು ಹೇಗೆ ಹಾಗೆ, ಬಿಸಿಲ ಕುದುರೆ ಎಲ್ಲ ಕುದುರೆಗಳಂತಲ್ಲ, ಅದು ಹೇಗೆ ಹಾಗೆ, ಬೆಟ್ಟದ ಶಬ್ದವೆಲ್ಲ ಶಬ್ದದಂತಲ್ಲ, ಅದು ಹೇಗೆ ಹಾಗೆ, ಶರಣ ದೇಹವಿಡಿದು ಆಚರಿಸಿದಡೆಯೂ ಎಲ್ಲ ದೇಹಿಗಳಂತೆ ದೇಹಿಯಲ್ಲ ಶರಣನು ನಿರ್ದೇಹಿ ಎಂಬುದೀ ವಚನದ ತಾತ್ಪರ್ಯಾರ್ಥ.

## ( ೪ ) ಶರಣನು ದ್ವೈತಾದ್ವೈತವನು ಮೀರಿದವನು.

(೨೧). ಏನೆಂದೆನಲಿಲ್ಲದ ಅಖಂಡ ಪರಿಪೂರ್ಣ ಪರಮಾನಂದ ಪರ ಬ್ರಹ್ಮವು ತಾನೆಂಬರವಿನ ಬಲದಹಂಕಾರವಿಲ್ಲಾಗಿ, ಅದ್ವೈತಿಯಲ್ಲ. ಉಭಯ ವಿಟ್ಟರಸುವ ಗಜಿಬಜಿಯಲ್ಲಿ ಸಿಲುಕನಾಗಿ ದ್ವೈತಿಯಲ್ಲ. ಇಂತೀ ದ್ವೈತಾದ್ವೈತ ವೆಂಬ ಉಭಯ ನಾಮನಷ್ಟವಾದ ಅಭೇದ್ಯ ಮಹಿಮನ ಕಪಿಲಸಿದ್ಧಮಲ್ಲಿಕಾ ರ್ಜುನಾ ನಿಮ್ಮ ಶರಣರೇ ಬಲ್ಲರು.

(೨೨). ಸಾವಯನಲ್ಲ ಸ್ವರೂಪು ಕುರುಹಿಡನಾಗಿ. ನಿರವಯನಲ್ಲ ನಿರೂ ಪಭಾವಿಸನಾಗಿ. ದ್ವೈತಿಯಲ್ಲ ಸೇವ್ಯಸೇವಕನೆಂಬ ಉಭಯವಳಿದುಳಿದನಾಗಿ. ಅದ್ವೈತಿಯಲ್ಲ ನಾಹಂ, ಕೋಹಂ, ಸೋಹಂಮೆಂಬ ಭ್ರಮೆಯಳಿದುಳಿದನಾಗಿ. ಇಂತೀ ಸಕಲ ಭ್ರಮೆಯಳಿದು ಮಹಾಘನದಲ್ಲಿ ನಿಃಪತಿಯಾಗಿಪ್ಪ ಸಿದ್ಧಸೋಮ ನಾಥಲಿಂಗಾ ನಿಮ್ಮ ಶರಣ ಚನ್ನಬಸವಣ್ಣನು.

(೨೩). ಮಾರ್ಗಕ್ರಿಯೆ ಸಂಪಾದಿಸನಾಗಿ ದ್ವೈತಿಯಲ್ಲ. ಜ್ಞಾನಾದೇವ ಮೋಕ್ಷವೆಂಬುದ ಸಂಪಾದಿಸನಾಗಿ ಅದ್ವೈತಿಯಲ್ಲ. ಮೀರ, ಜಾರ, ಹದುಳಿಗ ನಾಗಿ ಸ್ವರ್ಗಿಯೂ ಅಲ್ಲ, ಅಪವರ್ಗಿಯೂ ಅಲ್ಲ. ಕೂಡಲ ಚನ್ನಸಂಗಯ್ಯನಲ್ಲಿ ಸಾಹಿತ್ಯವನರಿದ ಪ್ರಸಾದಿಶರಣ.

**ಅರ್ಥ**:—ಎಂದೆಂದಿಗೂ ಮಲಮಾಯಾದಿಯುಕ್ತನಪ್ಪ ಜೀವ ತಾನೆಂದು ಭಿನ್ನ ಕ್ರಿಯೆಯನಾಚರಿಸಿ ಫಲಪದಂಗಳ ಪಡೆದು ಭಿನ್ನಯುಕ್ತನಾಗಿ ಮರಳಿ ಭವಕ್ಕೆ ಬಂದು ಸಂಸಾರಪಂಕದಲ್ಲಿ ಬಿದ್ದು ಹೊರಳುತ್ತಿಹ ಶೈವಸಿದ್ಧಾಂತದ ದ್ವೈತ ಮಾರ್ಗವನಾಚರಿಸುವನಲ್ಲ ಶರಣ. ಜ್ಞಾನಾದೇವ ಮೋಕ್ಷವೆಂದು, ಪುಣ್ಯಪಾಪವಿಲ್ಲೆಂದು, ಬ್ರಹ್ಮೋಹಂ ಮೆಂದು ವಾಗದ್ವೈತವ ನುಡಿದು ದೇಹವಾಸನೆಯುಳಿಯಲರಿಯದೆ ಸತ್ತು ಹುಟ್ಟುತ್ತಿಹ ವೇದಾಂತಮಾರ್ಗವನಾಚರಿಸುವನಲ್ಲ ಶರಣ. ಮತ್ತೆಂತೆಂದೊಡೆ, ಸತ್ತುವೆನಿಸಿದ ಚೈತನ್ಯ ಬ್ರಹ್ಮವೇ ಲಿಂಗವೆನಿಸಿತ್ತು. ಆ ಲಿಂಗ ಸಮೇತನಾಗಿಪ್ಪ ಚಿತ್ತುವೇ ಆತ್ಮನೆಂಬ ಅಂಗವಾಗಿ ಶರಣನೆನಿಸಿದ ಕಾರಣ, ಲಿಂಗ ಸಂಬಂಧದ ಅಭೇದ ಕ್ರಿಯೆಯನರಿದು ಆಚರಿಸಿ ಲಿಂಗವಾದ ಶರಣನೆಂಬುದೀಗ ಈ ವಚನದ ತಾತ್ಪರ್ಯಾರ್ಥ.

(೨೪). ಪರವೇ ಹಮ್ಮಿನಿಂದ ಜೀವವಾಯಿತ್ತೆಂಬುವನೊಬ್ಬ ವಾದಿ. ಆತ್ಮನು ಪಶುಪಾಶಬದ್ಧನು, ಅನಾದಿ ಮಲಯುಕ್ತನೆಂಬುವನೊಬ್ಬ ವಾದಿ. ಇವರಿಬ್ಬರೂ ತರ್ಕಕ್ಕೆ ಸಿಲುಕಿ ದುಃಖಕ್ಕೊಳಗಾದರು. ಅದೆಂತೆಂದೊಡೆ, ಆತ್ಮನು ಅನಾದಿ ಮಲಸಂಬಂಧಿಯಾದೊಡೆ, ಆತ್ಮಸ್ವರೂಪ ಮಲಸ್ವರೂಪ ಬಲ್ಲರೆ ನೀವು ಹೇಳಿರೇ. ಪೃಥ್ವಿಯಪ್ಪು ಕೂಡಿ ಸ್ಥೂಲ ತನು, ತೇಜವಾಯು ಕೂಡಿ ಸೂಕ್ಷ್ಮ ತನು, ಅಂಬರ ಅಹಂಕಾರ ಕೂಡಿ ಕಾರಣ ತನು. ಈ ತನುತ್ರಯವಿಲ್ಲದಂದು, ಪಂಚತತ್ವಂಗಳು ಶಾಖೆದೋರದಂದು, ಆದಿ ಅನಾದಿ, ಸ್ವರೂಪು ನಿರೂಪು, ಹಮ್ಮು ಬಿಮ್ಮು ಯುಗ ಜುಗ ಸುರಾಳ ನಿರಾಳವಿಲ್ಲದಂದು, ಆತ್ಮನಲ್ಲಿ ಮಲವು ಹುದುಗಿರ್ದ ಭೇದವ ತಿಳಿದು ರೂಹಿಸಿ ಹೇಳಬಲ್ಲರೆ ಸಿದ್ಧಾಂತಿ ಎಂಬೆ. ಹಮ್ಮಿನಿಂದ ಶಿವನೇ ಜೀವನು ಹಮ್ಮಳಿದ ಜೀವನೇ ಶಿವನಾದಡೆ, ಸೃಷ್ಟಿ ಸ್ಥಿತಿ ಸಂಹಾರಂಗಳೇಕಾದವು, ವಾಚ್ಯ ವಾಕ್ಯಂಗಳೇಕಾದವು, ಜಾತಿ ವಿಜಾತಿಗಳೇಕಾದವು, ಸ್ಥಾನಾಸ್ಥಾನಂಗಳೇಕಾದವು, ಪಕ್ಷಾಪಕ್ಷಂಗಳೇಕಾದವು, ಹೇಯಾಹೇಯಂಗಳೇಕಾದವು, ಅಂಡಜ, ಸ್ವೇದಜ, ಜರಾಯುಜ, ಉದ್ಭಿಜವೆಂಬ ಎಂಬತ್ತುನಾಲ್ಕು ಲಕ್ಷ ಜೀವಂಗಳೇಕಾದವು? ಆದಡೂ ಆಗಲಿ. ಆ ಬ್ರಹ್ಮಕ್ಕೆ ತಥ್ಯ ಮಿಥ್ಯ ರಾಗದ್ವೇಷ ಹಮ್ಮು ಬಿಮ್ಮು ಮದ ಮತ್ಸರ ನಾ ನೀನೆಂಬ ಭ್ರಾಂತಿ ಸೂತಕ ಉಂಟೇ? ಅದಲ್ಲ ನಿಲ್ಲು. ಬ್ರಹ್ಮಕ್ಕೆ ಹಮ್ಮು ಹೋಹ ಬಹ ಭೇದವ ತಿಳಿದು ಸಂಕಲ್ಪ ವಿಕಲ್ಪವಿಲ್ಲದೆ, ಸ್ತುತಿ ನಿಂದೆಗಳನರಿಯದೆ, ಪಕ್ಷಾಪಕ್ಷಂಗಳಿಲ್ಲದೆ,

ಕಾಮನಿಃಕಾಮವಿಲ್ಲದೆ, ಭೀತಿ ನಿರ್ಭೀತಿ ಇಲ್ಲದೆ ನಿರಂಗಸ್ವರೂಪನಾದರೆ ವೇದಾಂತಿ ಎಂಬೆ. ಈ ಉಭಯದ ಭೇದವ ಹೊದ್ದರು ನಮ್ಮ ಶರಣರು, ಆದಿ ಅನಾದಿ ಯಿಂದತ್ತತ್ತಣ ಶರಣಲಿಂಗ ಸಂಬಂಧವನರಿವರಾಗಿ. ಅದೆಂತೆಂದೊಡೆ, ಸತ್ತು ವೆನಿಸಿದ ಶಬ್ದ, ನಿಃಶಬ್ದಕ್ಕೆ ಬಾರದ ನಿಶ್ಶೂನ್ಯಲಿಂಗವೇ ಪ್ರಾಣವಾಗಿ, ಚಿತ್ತುವೆನಿ ಸಿ ನಾಮ ನಿರ್ನಾಮಕ್ಕೆ ಬಾರದ ಸ್ವರೂಪು ನಿರೂಪಿಲ್ಲದ ಶರಣನೇ ಅಂಗವಾಗಿ, ಉಭಯ ಸಂಪುಟದಿಂದ ಸಕಲ ನಿಃಕಲವೆನಿಸಿತ್ತು. ಆ ಸಕಲ ನಿಃಕಲ ತತ್ವವೇ ತನ್ನ ಶಕ್ತಿಯುಸಮರಸ ಸಂಭಾಷಣೆಯಿಂದ ಲೀಲೆದೋರಲಾಗಿ ತಾನೇ ಗುರು ವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ, ತಾನೇ ಜಂಗಮವಾದ, ತಾನೇ ಮಂತ್ರವಾದ, ತಾನೇ ಪ್ರಸಾದವಾದ, ತಾನೇ ಸರ್ವ ಚೈತನ್ಯಾತ್ಮಕವಾದ ಭೇದವ ತಮ್ಮಿಂದ ತಾವೇ ಅರಿದರಾಗಿ ವೇದಾಂತ ಸಿದ್ಧಾಂತವೆಂಬ ವಾಗ್ಜಾಲವ ನುಡಿ ಯರು. ಅದೆಂತೆಂದೊಡೆ, ತರ್ಕಕ್ಕತರ್ಕ್ಯರು, ಸಾಧ್ಯಕ್ಕಸಾಧ್ಯರು, ಭೇದಕ್ಕ ಭೇದ್ಯರು, ದ್ವೈತಾದ್ವೈತವ ಮೀರಿ ನಿಂದ ನಿಜ ಸುಖಿಗಳಯ್ಯ ನಿಮ್ಮ ಶರಣರು ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೨೫). ಏನೂ ಏನೂ ಇಲ್ಲದ ವಾಚ್ಯಾತೀತ ನಿರ್ನಾಮವಸ್ತು ತಾನೇ ತನ್ನ ಲೀಲಾವಿಲಾಸದಿಂದ ಪ್ರಭಾವಿಸಿದ ಪ್ರಭಾವದ ಸ್ಫುರಣವೇ ಮಹಾಪ್ರಕಾಶ. ಆ ಪ್ರಕಾಶದ ಆವರಣವೇ ನಿಜಾತ್ಮನು. ಆ ನಿಜಾತ್ಮನೇ ತನ್ನಿಂದಾದ ಸಮಸ್ತ ವಸ್ತುಗಳೆನಿಪ ತತ್ವಂಗಳಿಗೆ ತಾನೇ ಕಾರಣವಾದ. ಇದನರಿಯದೆ ಆತ್ಮಂಗೆ ಅನಾದಿ ಮಲ, ಪಶುತ್ವ, ಪಾಶಬದ್ಧನೆಂಬರು. ಅದು ಹುಸಿ. ಆ ಆತ್ಮನು ತನ್ನಿಂದ ಪ್ರವ ರ್ತಿಸುವ ಮಹದಾದಿ ತತ್ವಂಗಳಿಗೆ ತಾನೇ ಮೂಲ ಧ್ಯೇಯವಾದ ಕಾರಣ, ಮೂಲ ಪ್ರಕೃತಿರೂಪನೆನಿಸಿಕೊಂಡನು. ಈ ನಿಜಾತ್ಮನಲ್ಲಿ ಅನಾದಿ ಮಲ ಪಾಶಂಗಳು ತಥ್ಯವಲ್ಲ. ಅದು ಕಾರಣ ಈ ಆತ್ಮನ ಮೇಲಣ ಮಹಾಲಿಂಗವಾ ದುದು ತಾನೆ. ಅದು ತಾನೆ ಲಯಿಸುವದಕ್ಕೂ * * * ಸುವದಕ್ಕೂ ತಾನೇ ಕಾರಣವಾದುದಾಗಿ ಪಡಿಪದಾರ್ಥವಿಲ್ಲ. ಅದೆಂತೆಂದಡೆ, ಪರಾತ್ಪರತರವಪ್ಪ ಬ್ರಹ್ಮಕ್ಕೆ ಬಿಚ್ಚಿ ಬೇರಾಗದ ಕಾರಣ. ಅದು ದೀಪದೀಪದ ಪ್ರಭೆಯಂತೆ ರತ್ನ ಗಡಗದ ಕಾಂತಿಯಂತೆ, ಇಂತೀ ಸಹಜ ಸೃಷ್ಟಿಯನರಿಯದೆ, ಅನಾದಿ ಆತ್ಮಂಗೆ ಪಾಶಂಗಳುಂಟು. ಆತ್ಮನೆಂಬ ಪಶುವಿಂಗೆ ಪಾಶವೆಂಬ ಮಾಯೆಗೆ ಪತಿ ಶಿವ ನೆಂಬರು, ಇಂತೀ ತೆರದಲ್ಲಿ ತ್ರಿಪದಾರ್ಥಂಗಳ ಹೇಳುವರು. ಸೃಷ್ಟಿ ಮೊದಲು

ಅಂತ್ಯ ಕಡೆಯಾಗಿ ಅಭೇದವಿಲ್ಲದೆ ಬೇದವಿಲ್ಲ. ಇನ್ನು ಅದ್ವೈತಿಯ ಮತದಲ್ಲಿ ವೇದಾಂತಿ ಎಂಬಾತನೀಗ ನಿಜಸೃಷ್ಟಿಯನರಿಯನು. ಅದೆಂತೆಂದೊಡೆ, "ಶಕ್ತ್ಯಾದಿ ನ ಪ್ರಪಂಚಸ್ಯ" ಎಂದುದು ಶೃತಿ. ಎಂಬುದನರಿದು, ಆ ಶಕ್ತಿಯ ಆಧೇಯ ದಲ್ಲಿ ತೋರುವ ತತ್ವಂಗಳ ಪ್ರವರ್ತನೆ ವಿಶ್ವವೆನಿಸುವದು. ಆದನರಿಯದೆ ವೇದಾಂತಿ ದೃಗ್‌ದೃಶ್ಯವೆಂಬ, ದೃಕ್ಕೇವಸ್ತುವೆನಿಪ ಆತ್ಮನೆಂಬ, ದೃಶ್ಯವೇ ಮಾಯೆ ಎಂಬ. ಇದು ಹುಸಿ. ಆ ಶಕ್ತಿಯ ಆಧಾರದಲ್ಲಿ ತೋರುವ ವಿಶ್ವಪ್ರಪಂಚು, ಆ ಪ್ರಪಂಚಿನ ಮಧ್ಯದಲ್ಲಿ ತೋರುವ ಶಕ್ತಿಯ ಕ್ರಮವೆಂತೆಂದೊಡೆ, ಜಲಮಧ್ಯದಲ್ಲಿ ತೋರುವ ಇನಬಿಂಬದಂತೆ ಬಿಂಬಿಸುವದಾಗಿ, ಆ ಬಿಂಬವೇ ಜೀವ, ಆ ಜೀವನೇ ದೃಕ್ಕು, ಆ ಜೀವನಕಯ್ಯ ಕಾಣಿಸಿಕೊಂಬ ವಿಷಯವೇ ಮಾಯೆ, ಈ ಎರಡರ ವ್ಯವಹಾರ ಆ ಶಕ್ತಿಗೆ ಇಲ್ಲವಾಗಿ, ದೃಕ್, ದೃಶ್ಯವೆಂಬ ವೇದಾಂತಿಯ ಮತ ವಂತಿರಲಿ, ಇಂತೀ ದ್ವೈತಾದ್ವೈತದಲ್ಲಿ ಪ್ರವರ್ತಿಸರು ನಿಮ್ಮ ಶರಣರು. ದ್ವೈತಾ ದ್ವೈತದಲ್ಲಿ ಪ್ರವರ್ತಿಸುವ ಪ್ರವರ್ತನಕ್ಕೆ ತಾವೇ ಕಾರಣವೆನಿಸಿರ್ಪರು. ಇಂತೀ ಕಾರಣವೆನಿಸಿದ ಶರಣನೆಂತುಟೆಂದರೆ, ಸಕಲ ವಿಶ್ವವೇ ಸತಿಯರಾಗಿ, ತಾನು ತನ್ನ ನಿಜಕ್ಕೆ ಅಂಗವಾಗಿ, ಆ ನಿಜವೇ ಆತ್ಮಂಗೆ ಅಂಗವಾಗಿ, ನಿಂದ ನಿಜವೇ ಪರವಸ್ತುವಿನ ಪ್ರಭಾವ, ಆ ಪ್ರಭಾವವಾದ ಶರಣನ ನಿಲವೇ ಉರಿಲಿಂಗದೇವ ನೆಂಬ ಗಂಡನಾಗಿ ಬಂದು ತಪ್ಪದಿಪ್ಪದಾಗಿ, ನಾನೀನೆಂದು ನೆರೆದರೆ ತಾನೆಯಾಗಿ ಒಳಹೊರಗೆ ತೆರಹಿಲ್ಲದೆ ಕರತಳಾಮಳಕವಾಗಿ ಕರಸ್ಥಲದಲ್ಲಿ ಪ್ರಭಾವಿಸಿ ತೋರಿದನಯ್ಯ.

**ಅರ್ಥ:**—ಅಖಂಡ ಚಿತ್‌ಪ್ರಕಾಶವನುಳ್ಳ ಮಹಾಘನಲಿಂಗವು ತನ್ನ ಸ್ವಲೀಲೆಯಿಂದ ತನ್ನ ಚಿತ್‌ಪ್ರಭಾಸಾಮರ್ಥ್ಯಶಕ್ತಿಯೊಳೊಂದಂಶಮಂಬೇರ್ಪಡಿಸಿ ಆತ್ಮನೆಂಬ ಅಂಗವಾಯಿತ್ತು. ಅಂತಪ್ಪ ಆತ್ಮಾಂಗಸ್ವರೂಪೇ ಶರಣನೆಂಬ ಸತಿ ಯಾಗಿ ಆ ಶರಣನ ನಿಜವಪ್ಪ ಮಹಾಘನಲಿಂಗವೇ ಪತಿಯಾಗಿ ಲಿಂಗಾಂಗ ಸಂಬಂಧದ ಜ್ಞಾನಕ್ರಿಯೆ ನಟಿಸಿ ಭೇದವಳಿದು ಶರಣನ ಒಳಹೊರಗೆನ್ನದೆ ಕರ ಸ್ಥಲಕ್ಕೆ ಬಂದು ಇಷ್ಟಲಿಂಗವಾಗಿ ಬೆಳಗಿ ತೋರಿ ಅನಿಷ್ಟವ ನಷ್ಟವ ಮಾಡಿ ದರೆ ಶರಣಂಗೆ ಲಿಂಗ ನಿಜದೃಢ ಘಟಿಸಿ ಮುನ್ನಿನಂತೆ ಲಿಂಗವೆಯಾಗಿಪ್ಪ ಶರಣ ಅಂತಲ್ಲದೆ ಬರಿಯ ವೇದಾಂತದಿಂದ ಬರಿಯ ಸಿದ್ಧಾಂತದಿಂದ ಶಿವಪದ ಸಾಧ್ಯವ ಲ್ಲೆಂಬುದೀ ವಚನದ ತಾತ್ಪರ್ಯಾರ್ಥ.

## ( ೫ ) ಶರಣನು ದುಃಖರಹಿತನು.

( ೨೬ ). ಸ್ವಸ್ಥಾನ ಸುಸ್ಥಿರದ ಸುಮನ ಮಂಟಪದೊಳಗೆ ನಿತ್ಯನಿರಂಜನ ಪ್ರಭೆಯು ಬೆಳಗು. ಶಿವಯೋಗಾನುಭಾವವು ಏಕಾರ್ಥವಾಗಿ, ಗುಹೇಶ್ವರಾ ನಿಮ್ಮ ಶರಣ ಅನುಪಮ ಸುಖಿಯಾಗಿರ್ದನು.

( ೨೭ ). ತುಂಬಿದುದು ತುಳುಕದು ನೋಡಾ. ನಂಬಿದುದು ಸಂದೇಹಿಸದು ನೋಡಾ. ಒಲಿದುದು ಓಸರಿಸದು ನೋಡಾ. ನೆರೆಯರಿದುದು ಮರೆಯದು ನೋಡಾ. ಚನ್ನಮಲ್ಲಿಕಾರ್ಜುನಯ್ಯ ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯಾ.

( ೨೮ ). ಅತಿಶಯುವನತಿಗಳೆದು ನಿರತಿಶಯು ಸುಖದೊಳಗೆ ಪರಮ ಸುಖಿಯಾಗಿಪ್ಪವರಾರು ಹೇಳಾ? ನಿಜದ ನಿರ್ಣಯುವನರಿದು, ಭಜನೆ ಭಾವನೆಯಳಿದು, ತ್ರಿಜಗಪತಿಯಾಗಿಪ್ಪವರಾರು ಹೇಳಾ? ಕೋಡಗದ ಗಮನದೊಳಗೆ ಮನವಿರಹಿತನಾಗಿ ಗಮನಗೆಡದಿಪ್ಪವರಿನ್ನಾರು ಹೇಳಾ? ಹಗೆಯು ಹೊಕ್ಕು ಹಗೆಯಳಿದು ಸುಖಿಯಾಗಿ ತನಗೆ ತಾ ಕೆಳೆಯರಪ್ಪವರಾರು ಹೇಳಾ? ಒಳಹೊರಗು ಸರ್ವಾಂಗ ಲಿಂಗವಾಗಿರಬಲ್ಲ ಪರಮಾತ್ಮರಾರು ಹೇಳಾ? ಕಲಿದೇವ ನಿಮ್ಮ ಶರಣ ಚನ್ನಬಸವಣ್ಣನ ನಿಲವನರಿದು ಶರಣೆಂದು ಸುಖಿಯಾದೆನು.

**ಅರ್ಥ:—** ಅತಿಶಯುವೆಂದರೆ ಸ್ಥೂಲಸ್ವರೂಪವಾದ ಚತುರ್ವಿಧ ಪದಂಗಳು. ನಿರತಿಶಯುವೆಂದರೆ ತನ್ನ ನಿಜಸ್ವಭಾವವಲ್ಲಿ ನಿತ್ಯವಾಗಿಪ್ಪ ಶಿವಪದವು. ಅಂತು ಅನಿತ್ಯವಾಗಿರ್ದ ಚತುರ್ವಿಧ ಫಲವನೊಲ್ಲದೆ ತನ್ನ ನಿತ್ಯವಾದ ಶಿವಪದವ ಅಂತರಂಗದಲರಿದು ಸುಖಿಸುತ್ತಿರ್ಪ್ಪ ಇರವು ಸುಜ್ಞಾನಿಯಾದ ಶರಣಂಗಲ್ಲದೆ ಮತ್ತಾರಿಗಂಟೂ ಇಲ್ಲವೆಂಬುದೀಗ ಅತಿಶಯುವನತಿಗಳೆದು ನಿರತಿಶಯು ಸುಖದೊಳಗೆ ಪರಮಸುಖಿಯಾಗಿಪ್ಪವರಾರು ಹೇಳಾ ಎಂಬ ಶಬ್ದಕ್ಕರ್ಥ. ಅಂತು ಲಿಂಗವ ಭಿನ್ನವಿಟ್ಟು ಭಾವಿಸಿ ಪೂಜಿಸಿ ಫಲಪದಂಗಳ ಪಡೆಯಲೊಲ್ಲದೆ ಶಿವ ತಾನೆಂದು ತನ್ನ ನಿಜವನರಿದು ಶಿವನಾಗಿಪ್ಪ ಶಿವಭಾವ ಶರಣಂಗಲ್ಲದೆ ಮತ್ತಾರಿಗೂ ಇಲ್ಲವೆಂಬುದೀಗ ನಿಜದ ನಿರ್ಣಯುವನರಿದು ಭಜನೆ ಭಾವನೆಯಳಿದು ತ್ರಿಜಗಪತಿಯಾಗಿಪ್ಪವರಾರು ಹೇಳಾ ಎಂಬ ಶಬ್ದಕ್ಕರ್ಥ. ಕೋಡಗದ ಗಮನವೆಂದಡೆ ಮರ್ಕಟಜ್ಞಾನವಪ್ಪ ಷಟ್‌ಸ್ಥಲಜ್ಞಾನ. ಅಂತಪ್ಪ ಷಟ್‌ಸ್ಥಲಜ್ಞಾನಕ್ರಿಯಿಂದ

ತನುಮನ ಕರಣಂಗಳೆಲ್ಲವ ಲಿಂಗಕ್ಕೆ ಅರ್ಪಿಸಿ ಅಂಗಕರಣಂಗಳೆಲ್ಲ ಲಿಂಗವೆಯಾಗಿ, ಭಿನ್ನಜ್ಞಾನ ಕ್ರಿಯೆಯನರಿಯದೆ ಆಚರಿಸುತ್ತಿಪ್ಪುದು ಶರಣಂಗಲ್ಲದೆ ಮತ್ತಾರಿಗೂ ಇಲ್ಲವೆಂಬುದೀಗ ಕೋಡಗದ ಗಮನದೊಳಗೆ ಮನವಿರಹಿತನಾಗಿಪ್ಪವರಿನ್ನಾರು ಹೇಳಾ ಎಂಬ ಶಬ್ದಕ್ಕರ್ಥ. ಶರಣಂಗೆ ಹಗೆಯಾಗಿಪ್ಪವು ಅಜ್ಞಾನಮಾಯಾದೇಹ ಕರಣಂಗಳು. ಆ ಅಜ್ಞಾನಮಾಯಾದೇಹ ಕರಣಂಗಳಿಗೆ ಹಗೆಯಾಗಿಪ್ಪನು ಚಿತ್ಪ್ರಭಾಲಿಂಗವು. ಅಂತಪ್ಪ ಚಿತ್‌ಪ್ರಭಾಲಿಂಗದ ಒಳಹೊಕ್ಕ ಶರಣನು ಅಜ್ಞಾನಮಾಯಾದೇಹ ಕರಣಂಗಳೆಲ್ಲವನಳಿದು ನಿತ್ಯಸುಖಿಯಾಗಿಪ್ಪನೆಂಬುದೀಗ ಹಗೆಯಲ್ಲಿ ಹೊಕ್ಕು ಹಗೆಯಳಿದು ಸುಖಿಯಾಗಿ ಎಂಬ ಶಬ್ದಕ್ಕರ್ಥ. ಅಂತು ಅಂಗಭಾವವಳಿದು ತಾನೆಲ್ಲ ಲಿಂಗವೆಯಾಗಿ ಲಿಂಗವನರ್ಚಿಸುತ್ತಿಪ್ಪುದು ಶರಣಂಗಲ್ಲದೆ ಇಲ್ಲವೆಂಬುದೀಗ ತನಗೆ ತಾ ಕೆಳೆಯಪ್ಪವರಾರು ಹೇಳಾ ಎಂಬ ಶಬ್ದಕ್ಕರ್ಥ. ಅಂತುಜ್ಞಾನಕ್ರಿಯಿಂದ ಒಳಹೊರಗು ಸರ್ವಾಂಗಲಿಂಗವಾಗಿ ಲಿಂಗದ ಘನಸುಖವ ಸುಖಿಸುವನು ಶರಣನಲ್ಲದೆ ಮತ್ತಾರಿಗೂ ಇಲ್ಲವೆಂದರಿದು, ಶರಣನಪಾದಕ್ಕೆ ಶರಣುವೊಕ್ಕವರೆಲ್ಲರೂ ಮುಕ್ತರೆಂಬುದೀಗ ಒಳಹೊರಗು ಸರ್ವಾಂಗಲಿಂಗವಾಗಿ ಇರಬಲ್ಲ ಪರಮಾರ್ಥರಾರು ಹೇಳಾ ಕಲಿದೇವರ ದೇವಾ ನಿಮ್ಮ ಶರಣ ಚನ್ನಬಸವಣ್ಣನನರಿದು ಶರಣೆಂದು ಸುಖಿಯಾದೆನು ಎಂಬ ಶಬ್ದಕ್ಕರ್ಥ.

## ( ೬ ) ಬಂಕಣ್ಣಯ್ಯಗಳ ವಚನ.

### ( ಶರಣನ ಲಕ್ಷಣಗಳು. )

( ೨೯ ). ಎರಡೆಂಬತ್ತುಕೋಟಿ ವಚನದ ತಾತ್ಪರ್ಯದರ್ಥವನು ಈ ಒಂದು ವಚನದಲ್ಲಿ ನಿಕ್ಷೇಪಿಸಿ ಇದ್ದಿತ್ತು. ಈ ವಚನದನುಭಾವ ಅನಾದಿ ಶರಣಗಲ್ಲದೆ ಆರಿಗೂ ತಿಳಿಯಬಾರದು. ಅದೆಂತೆಂದೊಡೆ, ಗುರುವಿಗೆ ಗುರು ಉಂಟು. ಲಿಂಗಕ್ಕೆ ಲಿಂಗ ಉಂಟು. ಜಂಗಮಕ್ಕೆ ಗುರುವಿಲ್ಲ, ಲಿಂಗವಿಲ್ಲ, ಜಂಗಮವಿಲ್ಲ. ಈ ತ್ರಿವಿಧವೂ ನಾಸ್ತಿಯಾದ ಮಹಾಮಹಿಮಂಗೆ ಗುರು ಉಂಟು, ಲಿಂಗ ಉಂಟು, ಜಂಗಮ ಉಂಟು. ಇದರ ಶಾಶ್ವತಸ್ವರೂಪವೆಂತೆಂದೊಡೆ, ಮರ್ಕಟ, ಪಿಪೀಲಿಕ, ವಿಹಂಗ, ಕುಕ್ಕುಟ, ಶ್ವಾನ, ಗಜ ಈ ಷಡ್ವಿಧ ಶರಣಂಗೆ ಗುರುಲಿಂಗಜಂಗಮ ಸ್ವರೂಪವೆಂದು ಪೂರ್ವದ ವಚನಾರ್ಥದಲ್ಲಿಹುದು. ಅದೆಂತೆಂದೊಡೆ, ಮರ್ಕಟನು ಅವ್ರುದಾನೊಂದು ಫಲವಸ್ತುವ ಕೈಯ್ಯಿಂದ ಹಿಡಿದು ವಾಸಿಸಿ ನೋಡಿ, ಪಕ್ವವಾದುದ

ಹಿಡಿದು ಅಪಕ್ವವಾದುದ ಬಿಡುವುದು. ಶರಣ ತನ್ನಂತರಂಗಕ್ಕೆ ಸರಿ ಬಂದುದ ಹಿಡಿವನು, ಸರಿಬಾರದುದ ಬಿಡುವನು. ಪಿಪೀಲಿಕನು ಮರವ ಮೊದಲು ವಾಸಿಸಿ ನೋಡಿ, ಆ ಮರದ ಮೇಲಿಹ ಫಲಕೆ ಮೋಹನಂಗೈದು, ಅಲ್ಲಿಗೆ ಹೋಗಿ, ಆ ಫಲದ ರಸವ ಸೇವಿಸುವುದು. ಅದು ಕಾರಣ ಗುರುವಿರಲು ಶಿಷ್ಯನಾದೆನೆಂದು ಬರಲು ಆ ಶಿಷ್ಯನ ವಾಸನಧರ್ಮವನರಿದು ಆತನಲ್ಲಿಹ ಅಜ್ಞಾನವ ಶೋಧಿಸುವನಾದ ಕಾರಣ ಮರ್ಕಟಪಿಪೀಲಿಕ ಇವೆರಡೂ ಶರಣಂಗೆ ಗುರುಸ್ವರೂಪು ಎಂದು ಹೇಳಲ್ಪಟ್ಟಿತ್ತು. ವಿಹಂಗ ಕುಕ್ಕುಟವೆರಡು ಶರಣಂಗೆ ಲಿಂಗಸ್ವರೂಪೆಂದು ಪೂರ್ವವಚನಾರ್ಥದಲ್ಲಿಹುದು. ಅದೆಂತೆಂದೊಡೆ, ವಿಹಂಗ ಎಷ್ಟು ದೂರದಲಿರ್ದಡೂ, ನೆನೆದಲ್ಲಿ ಆ ಫಲವನರಿವುದು. ಆ ಹಾಗೆ ಶರಣ ತನ್ನ ಪ್ರಾಣಲಿಂಗವನರಿದ ಕಾರಣ, ಕುಕ್ಕುಟಸಮಯವರಿದು ಎಚ್ಚರಿಹುದು. ಶರಣ ತನ್ನ ಪ್ರಾರಬ್ಧ ಸ್ಥಾನವನರಿದ ಕಾರಣ, ವಿಹಂಗ ಕುಕ್ಕುಟ ಶರಣಂಗೆ ಲಿಂಗಸ್ವರೂಪವೆನಬೇಕಾಗುವದು. ಶ್ವಾನ ಗಜ ಎರಡು ಶರಣಂಗೆ ಜಂಗಮಸ್ವರೂಪೆಂದು ಪೂರ್ವವಚನಾರ್ಥದಲ್ಲಿಹುದು. ಅದೆಂತೆಂದೊಡೆ, ಶ್ವಾನ ನಿದ್ರೆಗೆಯ್ವಾಗ ತನ್ನ ಆದಿ ಮಧ್ಯಾವಸಾನವನರಿವುತ್ತಿಹುದು. ಶರಣ ತನ್ನ ಪ್ರಾರಬ್ಧವಿಸ್ತಾರವನರಿದು ಪ್ರಕಾಶಿಸುತ್ತಿಹನಾಗಿ, ಶ್ವಾನ ಜಂಗಮಸ್ವರೂಪವೆನಬೇಕು. ಗಜಮಲೆಯೊಳಗಿಂದ ಪುರದಲ್ಲಿಗೆ ಬಂದು, ಆ ಪುರದಲ್ಲಿ ಎಷ್ಟು ಸುಖಿಯಾಗಿರ್ದಡೂ ತನ್ನ ಮಲೆಯು ನೆನೆವುತ್ತಿಹುದು. ಆ ಜಂಗಮ ಮೊದಲು ಪರಬ್ರಹ್ಮದಿಂದ ದೇಹವಿಡಿದು ಬಂದನಾಗಿ, ಆ ದೇಹದಲ್ಲಿ ಎಷ್ಟು ಸುಖಿಯಾದಡೂ ಆ ಪರಬ್ರಹ್ಮವನೆ ನೆನೆವುತ್ತಿಹನು. ಅದು ಕಾರಣ ಮನವೇ ಮರ್ಕಟ, ಅರಿವೇಪಿಪೀಲಿಕ, ಮಹಾಜ್ಞಾನವೇ ವಿಹಂಗ, ನಿತ್ಯ ಎಚ್ಚರಿಹುದೇ ಕುಕ್ಕುಟ, ತನ್ನ ತಾನರಿವುದೇ ಶ್ವಾನ, ತನ್ನ ಬುದ್ಧಿಯೇಗಜ, ಇಂತೀ ಷಡ್ವಿಧವ ಬಲ್ಲಾತನೇ ಪರಬ್ರಹ್ಮಜ್ಞಾನಿ, ನಿಮ್ಮಾಣೆ ನಿಮ್ಮ ಪ್ರಮಥರಾಣೆ ಗುಹೇಶ್ವರಲಿಂಗಯ್ಯ.

## ( ೭ ) ಜಂಗಮದ ಮಹತ್ವ.

( ೩೦ ) ಜಂಗಮವೇ ಜಗತ್ಪಾವನ. ಆ ಜಂಗಮದ ನೆನಹೇ ಲಿಂಗವಾಯಿತ್ತು. ಅವರ ತನುವೇ ಎನ್ನಕಾಯವಾಯಿತ್ತು. ಅವರ ದರುಶನವೇ ಎನಗೆ ಪರುಷವಾಯಿತ್ತು. ಆ ಪರುಷವಿಡಿದು ಮನವಲಿಂಗದಲ್ಲಿ ಬೆರಸಿ ಕನಸು ಕಳವಳಿಕೆ ಹೆಸರುಗೆಟ್ಟು ಹೋದವಯ್ಯ ನಿಮ್ಮ ಜಂಗಮದಿಂದ ಅಪ್ಪಣಪ್ರಿಯ ಚನ್ನಬಸವೇಶ್ವರಾ.

(೩೧). ಜಂಗಮದ ಗುಣವನು, ಜಂಗಮದ ಭೇದವನು ಜಂಗಮದ ರೂಪನು ಕೇಳಿರಣ್ಣಾ. ಜಂಗಮವೆಂದರೆ ಪರಮಜ್ಞಾನ ಸ್ವರೂಪನು. ಒಂದಿನ ಉಂಟಾಗಿ, ಒಂದಿನವಿಲ್ಲದ ಉಪಜೀವಿತನಲ್ಲ ಕಾಣಿರೋ. ಸತ್ತು ಚಿತ್ತಾನಂದ ಭರಿತನು, ಭಕ್ತನ ಪ್ರಾಣವೇ ತಾನಾಗಿಪ್ಪ ನಿತ್ಯಪರಿಪೂರ್ಣ ಜಂಗಮದೇವ ನೆಂದರಿಯಲು ಯೋಗ್ಯ ಕಾಣಿರೋ. ಆ ಘನಚೈತನ್ಯವೆಂಬ ಜಂಗಮವ ಮನೋ ಭಾವದಲ್ಲಿ ಆರಾಧಿಸಿ ಸುಖಿಯಾದೆನು ಕಾಣಾ ಮಹಾಲಿಂಗ ಗುರುಶಿವ ಸಿದ್ಧೇ ಶ್ವರ ಪ್ರಭುವೇ.

(೩೨). ಬಟ್ಟಬಯಲೆಲ್ಲ ಗಟ್ಟಿಗೊಂಡರೆ, ಸ್ವರ್ಗ ಮರ್ತ್ಯಪಾತಾಳಕ್ಕೆ ಠಾವಿನ್ನೆಲ್ಲಿಯದೋ? ಮೇಘದ ಜಲವೆಲ್ಲ ನಿರ್ಮಳ ಮುತ್ತಾದರೆ, ಸಪ್ತಸಾಗರಕೆ ಉದಕವಿನ್ನೆಲ್ಲಿಯದಯ್ಯ? ಕಷ್ಟ ಜೀವಿ ಮಾನವರೆಲ್ಲ ನೆಟ್ಟನೇ ಶಿವಜ್ಞಾನಿಗಳಾ ದರೆ, ಭವದ ಬೆಳೆ ಇನ್ನೆಲ್ಲಿಯದಯ್ಯ? ಇದು ಕಾರಣ ಕೂಡಲಚೆನ್ನಸಂಗಯ್ಯ ನಲ್ಲಿ ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ.

---

# ಜ್ಞಾನ.

## (೧). ಜ್ಞಾನದ ಕಾರ್ಯಗಳು.

(೧). ಅನಲಂಗೆ ಉರಿ ಉಷ್ಣವಿಲ್ಲದಿದ್ದರೆ, ತೃಣಕಾಷ್ಠಗಳ ಸುಡುವ ಪರಿ ಇನ್ನೆಂತೋ? ಆತ್ಮಂಗರುಹಿಲ್ಲದಿರೆ, ಬಂಧಮೋಕ್ಷ ಕರ್ಮಂಗಳ ಹಿಂಗುವಪರಿ ಇನ್ನೆಂತೋ? ಇಂತೀ ದ್ವಂದ್ವಗಳನರಿದು ಮರೆದಲ್ಲಿ ಮನಸಂದಿತ್ತು ಮಾರೇಶ್ವರಾ.

(೨). ರಾಜನ ಭಕ್ತಿ ತಾಮಸದಿಂದ ಕೆಟ್ಟಿತ್ತು. ಪಂಡಿತನ ಯುಕ್ತಿ ಖಂಡನವಿಲ್ಲದೆ ನಿಂದಿತ್ತು. ಸುಸಂಗಿಯ ನಿರಂಗವು ದುಸ್ಸಂಗದಿಂದಲೇ ಕೆಟ್ಟಿತ್ತು. ಪತಂಗನಂತಾಗದೆ, ಮುನ್ನವೇ ನಿನ್ನ ನೀನರಿ. ಅರಿದಡೆ, ನಿನಗಿದಿರಿಲ್ಲ. ಮನ ಸಂದಿತ್ತು ಮಾರೇಶ್ವರಾ.

(೩). ಏನನೋದಿ, ಏನಕೇಳಿ, ಏನಹೇಳಿದಡೇನು ಫಲ, ತನ್ನಲ್ಲಿದ್ದ ವಸ್ತುವ ತಾನರಿಯದನ್ನಕ್ಕರ? ಚಿನ್ನದ ತೊಡಹದ ತಾಮ್ರದಂತೆ ಒಳಗೆ ಕಾಳಿಕೆ ಬಿಡದು. ನುಣ್ಣಗೆ ಬಣ್ಣಗೆ ನುಡಿವ ಅಣ್ಣಗಳೆಲ್ಲರು ಕಣ್ಣುಗಾಣದೆ ಕಾಡಬಿದ್ದರು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ, ನಿಮ್ಮನರಿಯದ ಅಂಧಕರೆಲ್ಲರು.

(೪). ಅರಿದು ಮಾಡುವದು ಗುರುಭಕ್ತಿ. ಅರಿದು ಮಾಡುವದು ಲಿಂಗ ಭಕ್ತಿ. ಅರಿದು ಮಾಡುವದು ಜಂಗಮಭಕ್ತಿ. ಅರಿವೆಯಿಂದ ಕಾಂಬುದು ಸದಾ ಶಿವ ಮೂರ್ತಿಲಿಂಗವನರಿವುದಕ್ಕೆ.

(೫). ಅಯ್ಯಾ ಕೊರಡು ಕೊನರಾಗಬಲ್ಲುದೇ? ಬರಡು ಹಯನಾಗ ಬಲ್ಲುದೇ? ಕುರುಡಂಗೆ ಕನ್ನಡಿಯ ತೋರಿದರೆ ನೋಡಬಲ್ಲನೇ? ಮೂಗಂಗೆ ರಾಗವ ಹೇಳಿದರೆ, ಹಾಡಬಲ್ಲನೇ? ಲೋಗರಿಗೆ ಉಪದೇಶವ ಹೇಳಿದರೆ, ಶಿವ ಸತ್ಪಥದ ಹಾದಿಯ ಬಲ್ಲರೇ? ಇದು ಕಾರಣ ಶಿವಸತ್ಪಥದ ಆಗೆಂಬುದು ಶಿವ ಜ್ಞಾನಸಂಪನ್ನಂಗಲ್ಲದೆ ಸಾಧ್ಯವಲ್ಲ ಕಾಣಾ. ಅಸಾಧ್ಯನಿರವಯ ಶೂನ್ಯವಸ್ತುವಿ ನೊಳಗಣ ಸತ್ಪಥನಿಜೈಕ್ಯವು ಅವಿವೇಕಿಗಳಿಗೆ ಅಳವಡುವದೇ ನಿಮ್ಮವರಿಗಲ್ಲದೆ, ಸಂಗನಬಸವಣ್ಣ?

(೬). ಜೀವಕುಳ ಕಳೆಯಿತ್ತು. ಜ್ಞಾನಕುಳ ಉಳಿಯಿತ್ತು. ಭವಪಾಶ ಹರಿಯಿತ್ತು. ಅಜ್ಞಾನ ಹಿಂಗಿತ್ತು. ಎಲೇ ಗೋಪತಿನಾಥ ವಿಶ್ವೇಶ್ವರಲಿಂಗ, ನಿಮ್ಮತ್ತ ಮನವಾಯಿತ್ತೆನಗೆ. ಕೃಪೆಮಾಡು, ಕೃಪೆಮಾಡು. ಶಿವಧೋ ಶಿವಧೋ.

(೭). ಹಿಂದಣ ಭವಸಾಗರವನು ದಾಂಟಿದೆ. ಮುಂದಣ ಮುಕ್ತಿಪಥ ಕ್ಕೆ ಜ್ಞಾನವಂಕುರಿಸಿತ್ತು. ಇನ್ನಂಜಿನಂಜಿನಯ್ಯಾ. ಎನ್ನ ಮನೋ ಮೂರುತಿ ಯಪ್ಪ ಚಂಡೇಶ್ವರನ ಕಾರುಣ್ಯವಾಯಿತ್ತು. ಗೆದ್ದೆ ಗೆದ್ದೆ ಮಹಾಮಾಯೆಯಾ.

(೮). ಬಿಸಜತಂತುವಿನ ಸಂಚದಿಂದ ಮದಗಜ ಬಂಧವಡೆಯಬಲ್ಲುದೇ? ತರಗೆಲೆ ಮುಸುಕಿದಡೆ, ದಾವಾನಲ ಕೆಡಬಲ್ಲುದೇ? ಮಂಜಿನ ಫೌಜು ಸೂರ್ಯನ ಮುತ್ತಬಲ್ಲುದೇ? ನಿಮ್ಮ ನರಿದಾತಂಗೆ ಪುಣ್ಯಪಾಪ ಕರ್ಮಲೇಪಿಸಬಲ್ಲುದೇ ನಿಜ ಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

(೯). ಅಗ್ನಿ ರಜ್ಜುವಿನಿಂದ ಕಟ್ಟುವಡೆವುದೇ ಅಯ್ಯ? ಸೂರ್ಯನ ಕತ್ತಲೆ ಬಾಧಿಸಲಾರ್ಪುದೇ ಅಯ್ಯ? ಆಕಾಶವು ರಜಧೂಮ್ರಗಳಿಂದ ಮಲಿನವ ಹುದೇ ಅಯ್ಯ? ನಿಮ್ಮನರಿದ ಶಿವಯೋಗಿಗೆ ಸಂಸಾರ ಬಂಧಿಸಬಲ್ಲುದೇ ಹೇಳಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ?

(೧೦). ಅಯ್ಯಾ ತನ್ನ ತಾನರಿದಡೆ, ತಾನೇ ಭಕ್ತ, ತಾನೇ ಮಹೇ ಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ನೋಡಾ. ತನ್ನಿಂದಧಿಕಮಪ್ಪ

ಘನವಿಲ್ಲಾಗಿ ಷಟ್‌ಸ್ಥಲ ಭ್ರಷ್ಟತಾನೆ. ನಾದ ಬಿಂದು ಕಳಾತೀತ ಮಹಾಘನ ಲಿಂಗೈಕ್ಯತಾನಲ್ಲದೆ ಮತ್ತಾರುಂಟು ಹೇಳಾ, ಅಪ್ರಮಾಣ ಅಗೋಚರ ಅಗಮ್ಯ ಕೂಡಲಸಂಗಮದೇವಾ?

(೧೧). ಅಯ್ಯಾ ತನ್ನ ನಿಜದಲ್ಲಿ ತಾನಿಂದು ನೋಡಿದಡೆ, ತಾನೇ ಇಷ್ಟಲಿಂಗ, ಪ್ರಾಣಲಿಂಗ ಭಾವಲಿಂಗ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ, ನಿಃಕಳಲಿಂಗ, ನಿಃಶೂನ್ಯಲಿಂಗ, ನಿರಂಜನಲಿಂಗ, ಅಣು, ಮಹದಣು, ಪರಮಾಣು, ಜ್ಯೋತಿರ್ಮಯಲಿಂಗ ಪ್ರಭು ನೋಡಾ, ಅಪ್ರಮಾಣ ಅಗಮ್ಯ ಅಗೋಚರ ಕೂಡಲಸಂಗಮದೇವಾ.

(೧೨). ತನ್ನ ನಿಜಾಚರಣೆಯ ನಿಲುಕಡೆಯಲ್ಲಿ ನಿಂದು ನೋಡಿದಡೆ, ತಾನೇ ಗುರುತತ್ವ, ತಾನೇ ಚರತತ್ವ, ಪರತತ್ವವಲ್ಲದೆ ಬೇರೆ ಪರಬ್ರಹ್ಮ ಉಂಟೆಂಬ ಭ್ರಾಂತು ಭ್ರಮಿತರ ನಾನೇನೆಂಬೆನಯ್ಯ, ಅಪ್ರಮಾಣ, ಅಗಮ್ಯ, ಅಗೋಚರ ಕೂಡಲಸಂಗಮದೇವಾ?

(೧೩). ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ. ಅದು ಜಗಕ್ಕಿಕ್ಕಿದ ವಿಧಿ. ನಿನ್ನೊಡವೆ ಎಂಬುದು ಜ್ಞಾನರತ್ನ. ಅಂತಪ್ಪ ದಿವ್ಯರತ್ನವ ಕೆಡೆಗುಡದೆ ಆ ರತ್ನವ ನೀನಲಂಕರಿಸಿದೆಯಾದಡೆ, ನಮ್ಮ ಗುಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು ಸಿರಿವಂತರಿಲ್ಲ ಕಾಣಾ ಎಲೆಮನವೇ.

(೧೪), ನರನ ಮುಟ್ಟಿ ಓಲೈಸಿದಲ್ಲಿ ಪರಿಪರಿಯ ಪದಂಗಳುಂಟು. ಪರ ಶಿವಮೂರ್ತಿಯನರಿದಲ್ಲಿ ಇಹಪರದಲ್ಲಿ ಪರಮಸುಖ ಉಂಟು. ಇದೇ ಪರತತ ದಿರವು. ಅಮರೇಶ್ವರ ಲಿಂಗವ ಬೆರಿಸಬಲ್ಲಡೆ, ಇದೇ ಸುಖ.

(೧೫). ಅರಿತವನೆಂತು ಸತ್ತನು? ಅರಿತವನೆಂತು ಹುಟ್ಟಿದನು? ಅರಿತ ವನೆಂತು ಅಘೋರಪಾಶಕ್ಕೆ ಒಳಗಾದನು? ಅರಿತವನೆಂದೂ ಸುಖಿಯಾದನು. ಅರಿತವನೇ ಚಿರಂಜೀವಿ ನೋಡಾ ಕಪಿಲ ಸಿದ್ಧಮಲ್ಲಿಕಾರ್ಜುನಾ.

(೧೬). ಪ್ರಾಣಕ್ಕೂ ಲಿಂಗಕ್ಕೂ ಅನುಸಂಧಾನವ ಮಾಡಬೇಕೆಂಬಲ್ಲಿ ಮಣಿಯುವಿರಳದಲ್ಲಿ ಏರುವ ನೂಲೆ? ರಾಗಾದಿ ವ್ಯಾಮೋಹ ತಥ್ಯೆಮಿಥ್ಯೆ ವಿಶ್ವ ಯವಾದಲ್ಲಿಯೇ ವಸ್ತುವಿನಲ್ಲಿ ಅನುಸಂಧಾನವಾದ ಚಿತ್ತವ ಸನ್ನೆ ಸಂಜ್ಞೆಯ ಮಾಡಿ ಪೂಜಿಸಲಿಲ್ಲ. ಆಯುಧದಲ್ಲಿ ಗಾಯವಾದ ಆತ್ಮನ ಸ್ವಸ್ಥದಂತೆ, ಅರಿದ

ಲ್ಲಿಯೇ ಮಾಯಾಹೀನ ಮಲಕರ್ಮವ ಬಿಟ್ಟುದು, ವೀರಶೂರ ರಾಮೇಶ್ವರ ಲಿಂಗ ವನರಿದುದು.

**ಅರ್ಥ**:— ಪ್ರಾಣಕ್ಕೂ ಪ್ರಾಣಲಿಂಗಕ್ಕೂ ಬೆಂಬಳಿಯಿಂದ ಕೂಡಿಸಬೇಕೆಂಬಲ್ಲಿ ಮಣಿಯು ಎಜ್ಜದಲ್ಲಿ ಏರುವ ನೂಲಿನ ಹಾಗೆ ಪ್ರಾಣಲಿಂಗವೇನು ವಿರಳವುಳ್ಳುದೇ? ಪ್ರಾಣವೇನು ಸೂತ್ರದ ಹಾಗೇ? ಅಲ್ಲವು. ಬಯಕೆ ಮೊದಲಾದ ಮಲತ್ರಯಂಗಳ ಮೇಲಣ ಮಮಕಾರವು ಅಹುದಾದುದನಲ್ಲವ ಮಾಡುವ, ಅಲ್ಲವಾದುದ ಅಹುದು ಮಾಡುವ ತಥ್ಯಮಿಥ್ಯವು ನಷ್ಟವಾದಲ್ಲಿಯೇ ಪ್ರಾಣನು ಪ್ರಾಣಲಿಂಗದಲ್ಲಿ ಕೂಟಸ್ಥವಾದನು. ಮನಸ್ಸನು ಲಕ್ಷದಿಂದ ಕುರುಹಿಟ್ಟು ತಪೋನಿಗ್ರಹಾದಿಗಳಿಂದ ದಂಡಿಸಲಿಲ್ಲ. ಆಯವಾದ ಸ್ಥಾನದಲ್ಲಿ ಗಾಯ.ವಾದಲ್ಲಿ ಆತ್ಮನು ಆಗಾಯದೊಡನೆ ಎಯ್ದುವ ಹಾಗೆ, ಜ್ಞಾನದಿಂದ ತನ್ನ ನಿಜವ ತಿಳಿದಲ್ಲಿಯೇ ಮನದ ಮರವೆ ಇಲ್ಲವೆಯಾಗಿ ಹೋಗುವದು. ಅದೀಗ ಕ್ಷೀಣವಾದ ಆಣವಾದಿ ಮಲತ್ರಯಗಳು ಪುಣ್ಯಪಾಪ ಕರ್ಮಗಳು ಬಿಡುಗಡೆಯಾದುದು. ಅದೇ ಮಹಾಲಿಂಗವೇ ತಾನೆಂದರಿವ ಶಿವಜ್ಞಾನವು ಎಂಬುದರ್ಥ

(೧೭). ಕೇಶಪಾಶಂಗೆಡಲಿ. ಸಾಸಿರಮುಖದಲ್ಲಿ ದೇಶವಿದ್ದೇಶವಾಗಿಪ್ಪ ಹದನಾ ಸಾಸಿರಮುಖದಲ್ಲಿ ಬ್ರಹ್ಮಲೋಕದ ಮಂತ್ರ ನಾನು ನೀನಾದೆನ್ನೈ ಯೋಗಿನಾಥಾ.

**ಅರ್ಥ**:— ಅಜ್ಞಾನಪಾಶವೆಂಬುದೀಗ ಕೇಶಪಾಶವೆಂಬ ಶಬ್ದಕ್ಕರ್ಥ. ಅಂತಪ್ಪ ಅಜ್ಞಾನಪಾಶ ಸಮ್ಯಜ್ಞಾನೋದಯವಾದಲ್ಲಿ ಅಳಿದು ಹೋಯಿತ್ತೆಂಬುದೀಗ ಕೇಶಪಾಶಂಗೆಡಲಿ ಎಂಬ ಶಬ್ದಕ್ಕರ್ಥ. ಅಂತು ಸಮ್ಯಜ್ಞಾನೋದಯವಾದ ಶರಣನ ತನುಕರಣಂಗಳೆಲ್ಲ ಜ್ಞಾನಸ್ವರೂಪವಾಗಿರ್ದವೆಂಬುದೀಗ ಸಾಸಿರಮುಖದಲ್ಲಿ ದೇಶವಿದ್ದೇಶವಾಗಿಪ್ಪ ಹದನಾ ಎಂಬ ಶಬ್ದಕ್ಕರ್ಥ. ಅಂತು ಶರಣನ ತನುಕರಣಂಗಳೆಲ್ಲ ಜ್ಞಾನಸ್ವರೂಪುಗಳಾಗಿ ಶಿವೋಹಂ ಶಿವೋಹಂ ಎನುತಿರ್ದವೆಂಬುದೀಗ ಸಾಸಿರಮುಖದಲ್ಲಿ ಬ್ರಹ್ಮಲೋಕದ ಮಂತ್ರವೆಂಬ ಶಬ್ದಕ್ಕರ್ಥ. ಅಂತು ಶರಣನ ಸರ್ವಕರಣಂಗಳೆಲ್ಲ ಶಿವೋಹಂ ಎನ್ನುತ್ತ ಜ್ಞಾನಕ್ರಿಯಿಂದ ಶರಣಲಿಂಗವೆಯಾದನೆಂಬುದೀಗ ಆನು ನೀನಾದೆನ್ನೈ ಯೋಗಿನಾಥಾ ಎಂಬ ಶಬ್ದಕ್ಕರ್ಥ.

## (೨) ಜ್ಞಾನದ ಸ್ವರೂಪು.

(೧). ಅಗಮ್ಯ ಅಗೋಚರವಾದ ಪರಬ್ರಹ್ಮವನು ಪ್ರಮಾಣಕ್ಕೆ ತಂದು ಹೇಳುವಿರಯ್ಯ! ಪ್ರಮಾಣಕ್ಕತೀತವಾಗಿರ್ಪುದು ಪರಬ್ರಹ್ಮವು. ಹಳದಿ, ಹಸರು, ಕೆಂಪು, ಬಿಳಿದು, ನೀಲ, ಮಾಣಿಕ್ಯವೆಂಬ ಷಡುವರ್ಣಂಗಳಿಂದ ವರ್ಣಿಸಿ ಹೇಳುವಿರಯ್ಯ! ವರ್ಣಾತೀತವಾದ ವಸ್ತುವನು ವರ್ಣಿಸುವ ಪರಿ ಇನ್ನೆಂತೋ ಹೇಳಿರಯ್ಯ. ಜಪತಪ ಮಂತ್ರ ಸ್ತೋತ್ರಂಗಳಿಂದ ವಾಚ್ಯಕ್ಕೆ ತಂದು ಹೇಳುವಿರಯ್ಯ! ವಾಚಾತೀತವಾದ ವಸ್ತುವನು ವಾಚ್ಯಕ್ಕೆ ತರುವದಿನ್ನೆಂತೋ ಹೇಳಿರಯ್ಯ. ಇಂತಿವೆಲ್ಲವನು ತನ್ನ ಪರಮಜ್ಞಾನ ದೃಷ್ಟಿಗೆ ಮಿಥ್ಯವೆಂದು ಕಳೆವುದೇ ಅದೇ ಶಿವಜ್ಞಾನ. ಆ ಶಿವಜ್ಞಾನವೆಂಬರುಹೇ ತಾನೆಂಬಾತನು ತನ್ನಲ್ಲಿ ತಾನೇ ತಿಳಿವುದೀಗ ಅದೇ ಬ್ರಹ್ಮಜ್ಞಾನವಯ್ಯ, ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

(೨). ಅವಲ್ಲಿ ಸರ್ವಪ್ರಪಂಚ ನಿವೃತ್ತಿಯಾಗಿಹುದು ಅದೀಗ ಬ್ರಹ್ಮಜ್ಞಾನ. ಅವಲ್ಲಿ ಕೇವಲ ನಿಶ್ಚಿಂತವಾಗಿಹುದು ಅದೀಗ ಬ್ರಹ್ಮಜ್ಞಾನ. ಅವಲ್ಲಿ ತಾನೆಂಬ ತೋರಿಕೆ ಹುಟ್ಟದಿಹುದು ಅದೀಗ ಬ್ರಹ್ಮಜ್ಞಾನ. ಅವಲ್ಲಿ ಕೂಡಲಚನ್ನಸಂಗಯ್ಯನಲ್ಲದೆ ಪೆರತೊಂದನರಿಯದಿಹುದು ಅದೇ ಬ್ರಹ್ಮಜ್ಞಾನವಯ್ಯ.

(೩). ಎಲೆಮನವೇ, ನೀ ನಿನ್ನ ನಿಜವ ತಿಳಿವಡೆ, ಆ ನಿನ್ನ ನಿಜವ ಹೇಳುವೆ. ಅದು ಕೇವಲ ಜ್ಯೋತಿ. ಅದು ವರ್ಣಾತೀತ. ನೀನದನರಸುವಾಗ ನಿನಗಾವಲ್ಲಿ ನಿಶ್ಚಯ ತೋರಿತ್ತು, ಅದೀಗ ನಿನ್ನ ಪರಿಪೂರ್ಣತ್ವದ ನೆಲೆ. ಆ ನಿನ್ನ ನಿಜವ ನಿಶ್ಚೈಸಿ ನಿರ್ಗಮನಿಯಾದಲ್ಲಿ ಅದೇ ಸಮ್ಯಜ್ಞಾನದ ತೋರಿಕೆ. ಆ ತೋರಿಕೆಯ ಅಖಂಡ ಬೆಳಗಿನ ಹೊಳಹಿನೊಳಗೆ ನೀ ನಮ್ಮ ಗುಹೇಶ್ವರ ಲಿಂಗದ ಚರಣವನರಸಿಕೊಂಡು ನಿಶ್ಚಿಂತನಾಗೆಲೆ ಮನವೇ.

(೪). ಎಲೆ ಮನವೇ, ಎಲ್ಲಿ ಹವಣಿಸಬಾರದ ಅಖಂಡ ಬೆಳಗು ತೋರುತ್ತಿಹುದು, ಅದೀಗ ನಿನ್ನ ನಿಜ. ಎಲೆ ಮನವೇ, ಅವಲ್ಲಿ ನೀನೆಂಬ ಸೆರೆ ಹಿಂಗಿ, ತಾನೇ ತೋರುತ್ತಿಹುದು, ಅದೀಗ ನಿನ್ನ ನಿಜ. ಎಲೆ ಮನವೇ, ನಿನ್ನ ನಿಜವನರಿಯಬಲ್ಲಡೆ, ಅದೇ ಬ್ರಹ್ಮಜ್ಞಾನ, ಅದೇ ಕೇವಲಮುಕ್ತಿ, ಅದೇ ನಮ್ಮ

ಗುಹೇಶ್ವರಲಿಂಗವನರಿವ ಸಹಜ ಭಕ್ತಿಯ ಕುಳ ಕಾಣಾ. ಎಲೇ ಮನವೇ, ನೀನಿದ ನಿಶ್ಚಯಿಸಿಕೋ ಮರೆಯದೆ.

(೫). ಬಲ್ಲನಿತ ಬಲ್ಲರಲ್ಲದೆ, ಅರಿಯದುದನೆಂತು ಬಲ್ಲರಯ್ಯಾ. ಅರಿವು ಸಾಮಾನ್ಯವೇ? ಅರಿಯದುದನಾರಿಗೂ ಅರಿಯಬಾರದು. ಗುಹೇಶ್ವರನೆಂಬ ಲಿಂಗವು ಅರಿಯದಿರ್ದಡೆರಡು, ಅರಿದಡೊಂದೇ.

(೬). ಸರ್ವತ್ರ ಸುಲಭನಾದಲ್ಲಿ, ನೀನು ನಾನು ಎನದಿರ್ಪುದೇ ಜ್ಞಾನ. ಆ ಜ್ಞಾನ ಎಂದಾದಲ್ಲಿ ಭಾವದ ಭ್ರಮೆಗೆ, ಆತ್ಮತೇಜಕ್ಕೆ, ತರ್ಕದಗೆಲ್ಲ ಸೋಲಕ್ಕೆ ಇಕ್ಕೆ ಹಕ್ಕೆಗೆ ಹಿಕ್ಕುಗೊಡದಿರ್ಪುದೇ ಅರಿವು. ಅರಿವು ಕರಿಗೊಂಡಲ್ಲಿ ಇದಿರೆಡೆ ಇಲ್ಲಾಗಿ, ದೃಢವೇ ತದ್ರೂಪವಾದಲ್ಲಿ, ತನಗೆ ಇದಿರಿಲ್ಲ, ಇದಿರು ತನಗಿಲ್ಲ. ದರ್ಪಣದ ಒಪ್ಪದಂತೆ ನಿಷ್ಕಳಂಕಮಲ್ಲಿಕಾರ್ಜುನಾ.

(೭). ಸುಖವ ಬಲ್ಲಾತ ಸುಖಿಯಲ್ಲ. ದುಃಖವ ಬಲ್ಲಾತ ದುಃಖಿಯಲ್ಲ. ಸುಖದುಃಖವೆರಡನೂ ಬಲ್ಲಾತ ಜ್ಞಾನಿಯಲ್ಲ. ಹುಟ್ಟದ ಮುನ್ನ ಸತ್ತವರ ಬಲ್ಲರೆ, ಅದೇ ಜ್ಞಾನ, ಅದೇ ಬಲ್ಲತನದ ಕುಳ ಗುಹೇಶ್ವರಾ.

**ಅರ್ಥ**:—ದುಃಖದಲ್ಲಿರ್ದ ಜೀವಂಗೆ ಆ ದುಃಖಬಿಡುಗಡೆಯಾಗಿ, ಸುಖವಾದಲ್ಲಿ ಸುಖವನರಿದು ಹೇಳುವನಾಗಿ ಆತಮುನ್ನ ಸುಖಿಯಲ್ಲವೆಂಬುದೀಗ ಸುಖವ ಬಲ್ಲಾತ ಸುಖಿಯಲ್ಲವೆಂಬ ಶಬ್ದಕ್ಕರ್ಥ. ಸುಖದಲ್ಲಿರ್ದ ಜೀವನು ದುಃಖ ಬಂದಲ್ಲಿ ದುಃಖವನರಿದು ಹೇಳುವನಾಗಿ, ಆತಮುನ್ನ ದುಃಖಿಯಲ್ಲವೆಂಬುದೀಗ ದುಃಖವ ಬಲ್ಲಾತ ದುಃಖಿಯಲ್ಲವೆಂಬ ಶಬ್ದಕ್ಕರ್ಥ. ಅಂತು ಸುಖ ದುಃಖವೆಂಬ ಪುಣ್ಯಪಾಪವನರಿದು ಮಾಡಿ ಅನುಭವಿಸುತ್ತಿಪ್ಪ ಜೀವಂಗೆ ತನ್ನ ನಿಜವನರಿವ ಜ್ಞಾನವಿಲ್ಲವೆಂಬುದೀಗ, ಸುಖದುಃಖವೆರಡನು ಬಲ್ಲಾತ ಜ್ಞಾನಿಯಲ್ಲವೆಂಬ ಶಬ್ದಕ್ಕರ್ಥ. ಸತ್ತುವೆಂದರೆ ಪರಬ್ರಹ್ಮ. ಅಂತಪ್ಪ ಪರಬ್ರಹ್ಮವೇ ಆತ್ಮನ ಪ್ರಥಮಜನನ ಸ್ಥಲವಾಗಿಪ್ಪುದಾಗಿ ಅಂತು ಆತ್ಮನು ಜನಿಸದ ಮೊದಲೇ ಇರ್ದ ಪರಬ್ರಹ್ಮವೆಂಬುದೀಗ ಹುಟ್ಟದ ಮುನ್ನ ಸತ್ತವರೆಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವು ತನ್ನ ನಿಜವೆಂದರಿದು ಸಮ್ಯಜ್ಞಾನಿಯಾದಾತನೇ ಬಲ್ಲಾತನೆಂಬುದೀಗ ಹುಟ್ಟದ ಮುನ್ನ ಸತ್ತವರ ಕುರುಹಬಲ್ಲಡೆ ಅದೇ ಜ್ಞಾನ, ಅದೇ ಬಲ್ಲತನದ ಕುಳವೆಂಬ ಶಬ್ದಕ್ಕರ್ಥ.

(೮). ಭಕ್ತಿ ಎಂಬುದು ಬೇರು, ವಿರಕ್ತಿ ಎಂಬುದು ಮರ, ಫಲವೆಂಬುದು ಜ್ಞಾನ, ಪಕ್ವಕ್ಕೆ ಬಂದಿತೆಂಬುದು ಅವಧಿಜ್ಞಾನ, ತೊಟ್ಟು ಬಿದ್ದಲ್ಲಿ ಪರಮಜ್ಞಾನ, ಸವಿದಲ್ಲಿ ಅಂತರ್ಯಜ್ಞಾನ, ಸುಖತನ್ಮಯವಾದಲ್ಲಿ ದಿವ್ಯಜ್ಞಾನ, ದಿವ್ಯತೇಜಸ್ಸು ಹಿಂಗಿದಲ್ಲಿ ಪರಿಪೂರ್ಣ, ಅದು ಮಹದೊಡಲೆಂಬುದಕ್ಕೆ ಎಡೆಇಲ್ಲ, ಚೆನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನ ಲಿಂಗವು ಅಪ್ರಮಾಣವಾದ ಕಾರಣ.

---

## (೩). ಜ್ಞೇಯವಸ್ತುವು ತನ್ನಲ್ಲಿಯೇ ಇದೆ.

(೧). ಬೀಜದಿಂದ ಅಂಕುರ ತೋರಿದ ಬಳಿಕ ಬೀಜನಾಶವಪ್ಪುದು ನೋಡಯ್ಯಾ. ಪುಷ್ಪದಿಂದ ಫಲತೋರಿದ ಬಳಿಕ ಪುಷ್ಪನಾಶವಪ್ಪುದು ನೋಡಯ್ಯಾ. ಸತ್ಕರ್ಮದಿಂದ ............ ಬಳಿಕ, ಕರ್ಮನಾಶವಪ್ಪುದು ನೋಡಯ್ಯಾ. ಈ ಪರಿಯಿಂದ ಅಂಕುರ ಫಲದಂತೆ, ತಮ್ಮಲ್ಲಿ ತನ್ಮಯವಾಗಿರ್ದ ತತ್ವವ ತಾವರಿಯದೆ, ಹಲವು ಶಾಸ್ತ್ರವನೋದಿ, ತಿಳಿವಿಲ್ಲದ ಮೂಢರೆಲ್ಲ ಹೊಲಬುಗೆಟ್ಟು ಹೋದರಲ್ಲಾ. ಅದೆಂತೆಂದೊಡೆ, ಗೋಪ ಕಕ್ಷೆಯಲ್ಲಿ ತನ್ನ ಮರಿಯನಿಟ್ಟು ಮರಿಯ ಕಾಣೆನೆಂದು ಭಾವಿಯ ನಿಲುಕಿ ನೋಡಿ, ಭಾವಿಯ ನೀರೊಳಗೆ ಮರಿಯ ಬಿಂಬವ ಕಂಡು ಭಾವಿಯ ಬೀಳುವ ಗೋಪನಂತೆ, ಉಭಯಕುಚ ಮಧ್ಯಕೋಟಾರದಲ್ಲಿ ನಿದ್ರೆಗೆಯ್ವುತ್ತಿರ್ದ ಸುತನ ಮರೆದು, ಸುತನ ಕಾಣೆನೆಂದು ರೋದನವ ಮಾಡುವ ಮೂಢ ಸ್ತ್ರೀಯಂತೆ, ತಮ್ಮಲ್ಲಿರ್ದ ನಿಜತತ್ವವ ತಾವರಿಯದವರು ಆತ್ಮಾರ್ಥವಾಗಿ ಕೆಟ್ಟು, ವ್ಯರ್ಥರಾದರಲ್ಲಾ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೨). ತನ್ನೊಳಗಣ ಅರಿವು ತನ್ನಲ್ಲಿ ತೋರಿದಲ್ಲದೆ, ಅನ್ಯರಲ್ಲಿ ತೋರಬಲ್ಲುದೇ? ತನ್ನಲ್ಲಿ ತಾನೇ ಇದ್ದಂತೆ ಇದ್ದಿತ್ತು. ತನ್ನ ತಾನೇ ಪಕ್ವಕ್ಕೆ ಬಂದು, ತನ್ನಲ್ಲಿ ಹುಟ್ಟಿದ ನೆನಹಿನ ಬಿನ್ನಾಣವನು ಏನೆಂಬೆನಯ್ಯ ರಾಮನಾಥಾ!

(೩). ನಿಮ್ಮಲ್ಲಿ ನೀವು ತಿಳಿದು ನೋಡಿರೇ, ಅನ್ಯವಿಲ್ಲ, ಕಾಣಿರಣ್ಣಾ. ಅರಿವು ನಿಮ್ಮಲ್ಲಿ ತದ್ಗತವಾಗಿ ಇದೆ. ಅನ್ಯಭಾವವ ನೆನೆಯದೆ, ತನ್ನೊಳಗೆ ತಾನೇ ಎಚ್ಚತ್ತರಿಯಲು, ಬಲ್ಲರೆ ತನ್ನಲ್ಲಿ ತನ್ಮಯ ಗುಹೇಶ್ವರ ಲಿಂಗವು.

(೪). ತನ್ನವ ಮರೆದು ದೇವರ ಕಂಡೆನೆಂಬ ಕಾರಣ, ಹರಿಹರಸುರ ಬ್ರಹ್ಮಾಧಿಗಳು ತಲೆ ಕೆಳಗಾಗಿ ಹೋದರು. ಆ ದೇವರ ಮರೆದು ತನ್ನವನರಿದು ದುಂಟಾದರೆ, ತಾನೇ ದಿಟವೆಂದನಂಬಿಗ ಚೌಡಯ್ಯಾ.

(೫). ತನ್ನವ ಹುಸಿಮಾಡಿ ಇನ್ನೊಂದುವ ದಿಟಮಾಡುವ ಅಣ್ಣಂಗೆ ನಂಬುಗೆ ಇನ್ನಾವುದಯ್ಯಾ? ತನ್ನೊಳಗಿರ್ದ ಘನವ ತಾ ತಿಳಿಯಲರಿಯದೆ ಪರಬ್ರ ಹ್ಮಕ್ಕೆ ತಲೆಇಕ್ಕಿ ತೆಗೆದೆನೆಂಬ ಅಣ್ಣ ಗಾವಿಲನೆಂದನಂಬಿಗಚೌಡಯ್ಯಾ.

(೬). ಖಂಡಿತವಿಲ್ಲದ ಅಖಂಡಿತನೇ ನಿಮ್ಮ ಕಂಡವರುಂಟೇ ಹೇಳ ಯ್ಯಾ? ಕಂಡೆನೆಂಬವರೆಲ್ಲ ಬಂಜೆಯ ಮಕ್ಕಳು. ನಿನ್ನಿಂದ ಹಜ್ಜೆಯ ಕೆಳಗೆ ಬಂದು ಬಂದು ಹುಟ್ಟಿ ಬೆಳಗುವ ಚಂದವ ಕಂಡು ಕಣ್ದೆರೆದೆ ಕಾಣಾ ರಾಮನಾಥಾ.

**ಅರ್ಥ:—** ಅಖಂಡಿತನಾಗಿಪ್ಪ ಪರಬ್ರಹ್ಮವ ವೇದಾಗ ಮಂಗಳಿಂದ ಸಾಧಿಸಿ **ಕಂಡವರಿಲ್ಲವೆಂಬುದೀಗ** ಖಂಡಿತವಿಲ್ಲದ ಅಖಂಡಿತನೇ ನಿಮ್ಮ ಕಂಡವರುಂಟೇ **ಹೇಳಯ್ಯಾ** ಎಂಬ ಶಬ್ದಕ್ಕರ್ಥ. ಅಜ್ಞಾನ ಸ್ವರೂಪಿಯಾದ ಮಾಯಾಂಗನೆಗೆ ಶಿವಜ್ಞಾನ ಎಂದೂ ಹುಟ್ಟಲಿಲ್ಲದ ಬಂಜೆಯಾದ ಕಾರಣ ಮಾಯೆ ಎಂಬವಳೀಗ ಬಂಜೆ ಎಂಬ ಶಬ್ದಕ್ಕರ್ಥ. ಅಂತು ಪರಬ್ರಹ್ಮವ ಶೃತಜ್ಞಾನದಿಂದ ಕಂಡೆನೆಂಬ ವರೆಲ್ಲ ಮಾಯೆಯ ಮಕ್ಕಳೆಂಬುದೀಗ ಕಂಡೆನೆಂಬವರೆಲ್ಲ ಬಂಜೆಯ ಮಕ್ಕಳೆಂಬ ಶಬ್ದಕ್ಕರ್ಥ. ಅಂತು ಪರಬ್ರಹ್ಮವು ಹೃದಯದಲ್ಲಿ ಬೆಳಗುತ್ತ ಚಿಚ್ಚಾರಿತ್ರನಾಗಿ ನಿಂದಿರ್ದನೆಂಬುದೀಗ ನಿನ್ನಿಂದ ಹಜ್ಜೆ ಎಂಬ ಶಬ್ದಕ್ಕರ್ಥ. ಅಂತು ಹೃದಯದಲ್ಲಿ ಬೆಳಗುತ್ತಿರ್ದ ಪರಮಲಿಂಗದ ಚಿಚ್ಚಾರಿತ್ರವೇ ಚಿತ್ತುವೆನಿಸಿ, ಆತ್ಮಾಂಗದಲ್ಲಿ ಪ್ರಭಾ ವಿಸಿತ್ತೆಂಬುದೀಗ, ನಿನ್ನಿಂದ ಹಜ್ಜೆಯ ಕೆಳಗೆ ಬಂದು ಬಂದು ಹುಟ್ಟಿತ್ತೆಂಬ ಶಬ್ದ ಕ್ಕರ್ಥ. ಅಂತಾದ ಜ್ಞಾನೋದಯದಿಂದ ಶಿವನ ಮಹಾಪ್ರಕಾಶವ ಕಂಡ ಶರಣ ಅಂತು ಕಾಂಬಜ್ಞಾನವ ಕಣ್ದೆರೆದು ತಾನೇ ತನ್ನ ನಿಜವ ಕಾಣಿಸಿಕೊಂಡ ಲಿಂಗವು ಕೃಪೆಯಿಂದಲೆಂಬುದೀಗ ಬೆಳಗುವ ಚಂದವ ಕಂಡು ಕಣ್ದೆರೆದು ಕಂಡೆ ಕಾಣಾ ರಾಮನಾಥಾ ಎಂಬ ಶಬ್ದಕ್ಕರ್ಥ.

## (೪). ಲಿಂಗಜ್ಞಾನವು.

(೧). ಮಾಯದ ಬಲೆಯಲ್ಲಿ ಸಿಲುಕಿದ ಮರುಳ ನಾನೆಂದರಿದ ಪರಿಯ ನೋಡಾ! ಇದನು ಬಿಟ್ಟು ಲಿಂಗವೆಂದರಿದ ಪರಿಯ ನೋಡಾ! ತನ್ನ ವಿನೋದಕ್ಕೆ ಬಂದು ನಿಶ್ಚಿಂತ, ನಿರಾಳ, ಗುಹೇಶ್ವರನೆಂದರಿದ ಪರಿಯ ನೋಡಾ!

(೨). ತನ್ನಲ್ಲಿ ತಾನು ಪ್ರತ್ಯಕ್ಷಾನುಭಾವದಿಂದ ತಿಳಿದು ನೋಡಿ, ಆ ತಿಳಿದ ತಿಳಿವಿನೊಳಗೆ ಲಿಂಗದ ನಿಜಪ ಕಂಡು, ಕಾಂಬಜ್ಞಾನ ತಾನೆಂದರಿದು, ಕಾಂಬುದು ಕಾಣಿಸಿಕೊಂಬುದು ಎರಡೊಂದಾದನಿಲವು ತಾನೆ ನಿಮ್ಮ ನಿಲವು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೩). ಎನ್ನಲ್ಲಿ ನಾನು ನಿಜವಾಗಿ ನಿಮ್ಮ ನರಿದೆನೆಂದರೆ, ಅದು ನಿಮ್ಮ ಮತಕ್ಕೆ ಬಪ್ಪುದೇ? ಎನ್ನನಾನು ಮರೆದು ನಿಮ್ಮ ನರಿದಡೆ, ಅದು ನಿನ್ನರೂಪೆಂಬೆ. ಎನ್ನ ನಿನ್ನೊಳು ಮರೆದಲ್ಲಿ ಕನ್ನಡಿಯೊಳಗಣ ಪ್ರತಿಬಿಂಬದಂತೆ ಭಿನ್ನವಿಲ್ಲದಿರ್ದನು ಕಾಣಾ ಗುಹೇಶ್ವರಾ.

**ಅರ್ಥ**:—ತಾನು ಶಿವನೆಂದು ತನ್ನ ನಿಜವ ತಿಳಿದು ಶಿವ ತಾನೆಂದಡೆ, ಶಿವನು ತಾನಾಗಲರಿಯ. ಮತ್ತೆಂತೆಂದೊಡೆ, ಅರಿವುದೇ ಅಂಗ, ಅರುಹಿಸಿಕೊಂಬುದೇ ಲಿಂಗ, ಅಂತಪ್ಪ ಲಿಂಗಾಂಗವೆರಡಕ್ಕೆ ಭೇದವಿಲ್ಲೆಂದರಿದು, ಲಿಂಗಾಂಗ ಸಂಯೋಗಿಯಾಗಿ ಭೇದವ ಮರೆದು, ಶರಣನೆಲ್ಲ ಲಿಂಗವೆಯಾಗಿ ತನ್ನ ಕಾಣುತ್ತಿಪ್ಪ ಅಭಿನ್ನದರಿವು ಘಟಿಸಿದ ಶರಣನೇ ಲಿಂಗಸ್ವರೂಪನು. ಅಂತು ಅಂಗಭಾವವ ಮರೆದು ಲಿಂಗಸ್ವರೂಪವಾಗಿರ್ದ ಶರಣನ ಪರಿ ಎಂತೆಂದೊಡೆ, ದರ್ಪಣದೊಳಗಣ ಪ್ರತಿಬಿಂಬವು ಆ ದರ್ಪಣಕ್ಕೆ ಭಿನ್ನವಿಲ್ಲದಿಪ್ಪಂತೆ, ಲಿಂಗದೊಳಗೆ ಶರಣ ಭಿನ್ನವಿಲ್ಲದಿಪ್ಪನೆಂಬುದೀವಚನದ ತಾತ್ಪರ್ಯಾರ್ಥ.

(೪). ವಾದ ಬುದ್ಧಿಯ ಬಲ, ವಾದ ಅಭ್ಯಾಸದ ಬಲ. ಮಹತ್ವ ಸುಕೃತದ ಬಲ, ಮಹತ್ವ ಸಿದ್ಧಿಯ ಬಲ. ಅರಿವು ಜ್ಞಾನದ ಬಲ, ಅರಿವು ಸಜ್ಜನರ ಸಹವಾಸದ ಬಲ. ಅರಿವು ಅಂತರಂಗದಲ್ಲಿ ಪ್ರಾಣಲಿಂಗ, ಅರಿವು ಭಾವದಲ್ಲಿ ಆತ್ಮಲಿಂಗ, ಅರಿವು ಬಾಹ್ಯದಲ್ಲಿ ಇಷ್ಟಲಿಂಗ. ಅದು ಕಾರಣ, ವಾದಿಸಿದಲ್ಲಿ ಹುರುಳಿಲ್ಲ, ಮಹತ್ವ ಮಾಡುವಲ್ಲಿ ಹುರುಳಿಲ್ಲ. ಲಿಂಗಜ್ಞಾನವೇ ಹುರುಳು ಕಪಿಲಸಿದ್ಧ ಮಲ್ಲಿಕಾರ್ಜುನಾ.

(೫). ಆತ್ಮೋಽಹಂ ಮೆಂಬರು. ತಾವಾತ್ಮ ವಿತ್ತುಗಳೆಲ್ಲ ಆತ್ಮ ನಿಂತವ ನಿಂತವನೆಂದು ಕಂಡವರುಂಟೇ ಅಯ್ಯ? ಆತ್ಮಜ್ಞಾತೋಽಹಂ ಎಂಬುದಕ್ಕೆ ಶೃತಿಪ್ರಮಾಣ ಉಂಟೇ? ಆತ್ಮನು ವಾಙ್ಮನಕ್ಕಗೋಚರನು. ಆತ್ಮನು ತತ್ವಮಸಿ ವಾಕ್ಯದಿಂದತ್ತತ್ತ. ಆತ್ಮನನರಿದಿಹೆನೆಂಬವರೆಲ್ಲ ಅರಿ ಮರುಳುಗಳಲ್ಲವೇ ಅಯ್ಯ? ಆತ್ಮ ತಾನಾದ ವಸ್ತು ನೀರು ನೀರು ಕೂಡಿದಂತೆ. ಆತ್ಮಪ್ರಾಣೇಶಲಿಂಗ, ಪ್ರಸಾದ ಕಾಯ. ಆತ್ಮನೆಂಬಾತ ನಮ್ಮ ಉರಿಲಿಂಗ ಪೆದ್ದಿ ಪ್ರಿಯವಿಶ್ವೇಶ್ವರನು.

(೬). ಲಿಂಗದ ಕಲೆಯನರಿದಲ್ಲದೆ ಭಕ್ತಿ ವಿರಕ್ತಿ ಎಂಬವು ದೊರೆಕೊಳ್ಳವು ನೋಡಾ. ಲಿಂಗದ ಕಲೆಯನರಿದಲ್ಲದೆ ಜ್ಞಾನಾನಂದವು ದೊರೆಕೊಳ್ಳದು ನೋಡಾ. ಲಿಂಗದ ಕಲೆಯನರಿದಲ್ಲದೆ ಕ್ಷಮೆ, ದಮೆ, ಸಮತೆ, ಸದಾಚಾರ ದೊರೆಕೊಳ್ಳವು ನೋಡಾ. ಲಿಂಗದ ಕಲೆಯನರಿದಲ್ಲದೆ ಸದ್ಗುಣಗಣ, ವಿನಯ, ಮೃದುವಚನ ದೊರೆಕೊಳ್ಳವು ನೋಡಾ. ಇಂತಪ್ಪನಂತ ಗುಣವಿಲ್ಲದಡೆ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಲಿಂಗವನರಿದುದಕ್ಕೆ ಚಿನ್ನವಲ್ಲ ನೋಡಾ.

(೭). ಕುರುಡ ಕನ್ನಡಿಯ ಹಿಡಿದಡೇನು? ತನ್ನ ಮುಖವ ತಾ ಕಾಣಲರಿಯದಂತೆ. ಜ್ಞಾನವಿಲ್ಲದವನ ಕಯ್ಯಲ್ಲಿ ಲಿಂಗವಿದ್ದಡೇನು? ಆ ಲಿಂಗದಲ್ಲಿ ತನ್ನ ನಿಜವ ತಾ ಕಾಣಲರಿಯ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನನರಿದವರು ಲಿಂಗವ ಹಿಡಿದಡೇನು ವ್ಯರ್ಥ ಕಾಣಿರಣ್ಣಾ.

(೮). ಸೂರ್ಯೋದಯವಾಗಿ ತಿಮಿರ ಉಂಟೇ ಹೇಳಾ? ಪರುಷವೇದಿಯ ಸಾಧಿಸಿದವಂಗೆ ದಾರಿದ್ರ್ಯ ಉಂಟೇ ಹೇಳಾ? ಶಿವಜ್ಞಾನಸಂಪನ್ನನಾದ ಜ್ಯೋತಿರ್ಮಯಲಿಂಗಿಗೆ ಅಂಗ ಉಂಟೇ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೇ ತಾನಾದವಂಗೆ?

(೯). ನಿನ್ನಿಂದ ಅರಿದೆನೆಂಬೆನೆ? ನಿನ್ನಿಂದ ಅರಿದವನಲ್ಲ. ನನ್ನಿಂದ ಅರಿದೆನೆಂಬೆನೆ? ನನ್ನಿಂದಲರಿದವನಲ್ಲ. ಅದೇನು ಕಾರಣವೆಂದಡೆ, ಕಣ್ಣ ಬೆಳಗು ಸೂರ್ಯನ ಬೆಳಗು ಕೂಡಿ ಕಾಂಬಂತೆ, ನನ್ನ ನಿನ್ನ ಅರಿವಿನ ಸಂಬಂಧದ ಬೆಂಬಳಿಯಲ್ಲಿ ಲಿಂಗವ ಅರಿದೆನು ಕಾಣಾ, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

## (೫). ಶರಣನ ಜ್ಞಾನವು ಹೇಳಲಿಕ್ಕೂ ಹೇಳಿಸಿ ಕೊಳ್ಳಲಿಕ್ಕೂ ಬಾರದು.

(೧). ಆತ್ಮನನರಿದಿಹೆವೆಂದು ಭೀಷ್ಮಿಸಿಕೊಂಡಿರ್ಪ ಜಗದಾಟದ ತ್ರಿವಿಧ ಕಾಟದ ನೀತಿವಂತರು ನೀವು ಕೇಳಿರೋ. ಆತ್ಮನ ಇರವು ಶ್ವೇತವೋ, ಹರಿತವೋ, ಕಪೋತವೋ, ಮಾಂಜಿಷ್ಟವೋ, ಕೃಷ್ಣಗೌರವಗಾತ್ರಕ್ಕೆ ಮೊದಲಾದ ಬಣ್ಣದ ವರ್ಣವೋ? ಇವೇಕೋ, ಬಾಯಲ್ಲಿ ಆಡುವ ಮಾತಲ್ಲದೆ ಭಾವಜ್ಞರನಾರನೂ ಕಾಣೆ. ಆತ್ಮನ ಕಂಡವನ ಇರವು ಮುಕುರದೊಳಗಣ ಪ್ರತಿಬಿಂಬದಂತೆ, ಶೃತಿಯೊಳಗಡಗಿದ ಗತಿ ನಾದದಂತೆ, ಸುಖದೊಳಗಡಗಿದ ಪ್ರತಿರೂಪದಂತೆ. ಇದರ ಎಸಕದ ಕುರುಹನರಿದವ ನೀನೋ ಅವ ತಾನೋ, ಇದನೇನೆಂದು ಹೇಳಲರಿಯೆ. ಭಾವಭ್ರಮೆಗೆ ದೂರ, ಜ್ಞಾನ ನಿರ್ಲೇಪ ತಾನು ತಾನೇ ನಿಷ್ಕಳಂಕ ಮಲ್ಲಿಕಾರ್ಜುನಾ.

(೨). ಅರಿವನರಿದಲ್ಲಿ ತಾನೆನ್ನದೆ, ಇದಿರೆನ್ನದೆ, ಮತ್ತೇನುವ ಸಂಪಾದಿಸದೆ ಅರುಣನ ಕಿರಣದಲ್ಲಿ ಅರತ ಸಾರದಂತೆ, ಕಾದ ಹಂಚಿನ ಮೇಲೆ ಬಿಟ್ಟ ನೀರಿನಂತೆ, ಬಧಿರನ ಕಾವ್ಯದಂತೆ, ಚದುರಿನ ಒಳ್ಪಿನಂತೆ ತಲೆದೋರದೆ ನಿಂದಾತನಡಿಗೆ ಎರಗುವೆನೆಂದಾತನಂಬಿಗ ಚೌಡಯ್ಯ.

(೩). ಆದಿಯಲ್ಲಿ ಗುರು ಬೀಜವಾದ ಪಿಂಡಕ್ಕೆ. ಅನಾದಿ ಎಂಬುದನು ಒಬ್ಬರು ತಿಳುಹಲುಂಟೇ? ಆದಿ ಕಾಯ ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ ತನ್ನೊಳಗೆ ತಾನೇ ತಿಳಿದು ನೋಡಲು; ಕೋಹಂಮೆಂಬುದು ತಾನೇ ಸತ್ಯ ನೋಡಾ. ಗುಹೇಶ್ವರ ಲಿಂಗದ ನಿಲವು ಹೇಳಿ ಕೂಡಿಹೆನೆಂದರೆ ಅಸಾಧ್ಯ ಕಾಣಾ ಸಿದ್ಧರಾಮಯ್ಯ.

(೪). ಬ್ರಹ್ಮವನರಿದ ಬಳಿಕ ಸುಮ್ಮನೆ ಇರಬೇಕು. ಬ್ರಹ್ಮ ಪ್ರಸಂಗಿಗಳು ಬಂದರೆ ಪರಬ್ರಹ್ಮದ ಪ್ರಸಂಗವ ಮಾಡಬೇಕು. ಹೀಗಲ್ಲದೆ ತನ್ನ ಅಗಮ್ಯವ ಮೆರೆಯಬೇಕೆಂದು ಬೀದಿಯ ಪಸಾರದಂತೆ ಮಾಡುವನ ಹಾಗೆ ಆಗಬೇಡ ಇದನರಿತು ಕಳ್ಳನ ಜೇಳೂರಿದಂತೆ ಸುಮ್ಮನೆ ಇರಬೇಕು ಸದಾಶಿವಮೂರ್ತಿ ಲಿಂಗವನರಿವುದಕ್ಕೆ.

(೫). ಶರಣರ ಆಚರಣೆ ಪತಿವ್ರತೆಯ ಅವಯವದಂತೆ. ಶರಣರ ಆಚರಣೆ ಮಾನಿಗಳ ಮಂತ್ರದಂತೆ. ಶರಣರ ಆಚರಣೆ ನಿಜಗುಣಯೋಗಿಯ

ಯೋಗದಂತೆ. ಶರಣರ ಆಚರಣೆ ಅಜಗಣ್ಣನ ಜಪದಂತೆ ಕೂಡಲಚನ್ನ ಸಂಗಮದೇವಾ.

---

## (೬). ಪರಿಪೂರ್ಣ ಜ್ಞಾನಿಯ ಸ್ಥಿತಿ.

(೧). ಸೂರ್ಯನ ಕರಜಾಲಂಗಳಂ ಸೂರ್ಯೋದಯವಾದಲ್ಲಿ ಹುಟ್ಟಿ, ಸೂರ್ಯನಸ್ತಮಿಸಲು ಕೂಡೆ ಅಡಗುವಂತೆ ಮನೋವಿಕಾರದಿಂದ ಲೋಕವೆಲ್ಲವು ತೋರಿ ಮನ ಲಯವಾದಡೆ, ಒಡನೆ ಆ ಲೋಕವೆಲ್ಲವು ಅಡಗಿ, ಜ್ಞಾನತತ್ವ ಒಂದೇ ತನ್ನ ಸ್ವರೂಪವಾಗಿ ಉಳಿದಿಹ ಯೋಗಿಗೆ ಮುಂದೆ ಅರಿಯ ಬೇಕಾದುದು ಒಂದೂ ಇಲ್ಲವಯ್ಯ. ಉಳಿದ ಉಳುಮೆ ಜ್ಞಾನರೂಪಾಗಿ ನಿಂದಿತ್ತಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣಂಗೆ

(೨). ಅರುಣೋದಯಕ್ಕೆ ಕತ್ತಲೆ ಹರಿದು ಬೆಳಗು ಪರಿಷ್ಕರಿಸಿದಂತೆ, ಸಮ್ಯಜ್ಞಾನೋದಯವಾಗಿ ಅಜ್ಞಾನಬೀಜ ಮಲಸಂಸಾರ ತೊಲಗಿ ಪರಮಾತ್ಮ ತಾನೆಂದರಿದು, ಆ ಅರಿದರಿವು ಕರಿಗೊಂಡು ಪರಶಿವನೊಡನೆ ಸಮಭಾವಿಯಾದಾತನೇ ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.

(೩). ಜ್ಞಾನಾರೂಢನಾದಲ್ಲಿ ಮಾನವರನಾಶ್ರಯಿಸಲಾಗದು. ಮಾನವರ ಇಚ್ಛೆಯ ನುಡಿಯಲಾಗದು. ಪೂಜೆಗೆ ಸಿಕ್ಕಿ ಬಾಧಿಸಿಕೊಳಲಾಗದು. ಸಾಧನೆಯ ಹೇಳಿ ಸಾವಂತೆ ಮಾಡಲಾಗದು. ಸಾವಧಾನದಿಂದ ಸೋಹೆಯ ತಿಳಿದು, ಏನೂ ಎನ್ನದಿಪ್ಪುದೇ ಲಿಂಗೈಕ್ಯ ನಿಃಕಳಂಕಮಲ್ಲಿಕಾರ್ಜುನಾ.

(೪). ಬೆಲ್ಲಕ್ಕೆ ಚದುರ ರಸವಲ್ಲದೆ ಸಿಹಿಗೆ ಚದುರ ರಸ ಉಂಟೇ? ಕುರುಹಿಗೆ ಪೂಜೆಯಲ್ಲದೆ ಅರುಹಿಗೆ ಪೂಜೆಯುಂಟೇ? ಅರಿವು ಕರಿಗೊಂಡಲ್ಲಿ ಕಯ್ಯ ಕುರುಹು ಅಲ್ಲಿ ಲೋಪವೆಂದನಂಬಿಗಚೌಡಯ್ಯ.

(೫). ಬೆಳಗಿನ ಬೀಜ ಮಹಾಬೆಳಗು. ಕತ್ತಲೆಯನೊಳಕೊಂಡು ಕಣ್ದೆರೆವ ಪರಿಯನೋಡಾ! ತಿಳಿವಡೆ ಬೆಳಗಲ್ಲ. ಒಳಗೊಳಗೆ ಹೊಳೆವ ಕಳೆಯು ದೇನೋ? ಅದೆಲ್ಲಿಂದ ಹುಟ್ಟಿ, ಅದೆಲ್ಲಿಂದ ತೋರಿತ್ತು, ಅಲ್ಲಿಯೇ ಆಗಾಗಿ, ಅಲ್ಲಿಯೇ ಬೆಳೆಯಿತ್ತು. ಸಿಮ್ಮಲಿಗೆಯ ಚನ್ನರಾಮನೆಂಬ ಮಹಾಘನಲಿಂಗದಲ್ಲಿಯೇ ಕಾಲೂರಿ ನಿಂದಪರಿಯನೇನೆಂಬೆ?

**ಅರ್ಥ:—** ಆತ್ಮಪ್ರಕಾಶವ ಪ್ರಕಾಶಿಸಿದ ಮೂಲ ಪ್ರಕಾಶವೇ ಶಿವಪ್ರಕಾಶವೆಂಬುದೀಗ ಬೆಳಗಿನ ಬೀಜ ಮಹಾಬೆಳಗು ಎಂಬ ಶಬ್ದಕ್ಕರ್ಥ. ಅಂತಪ್ಪ ಶಿವ ಪ್ರಕಾಶವು ತನು ಧರ್ಮದ ಮರವೆಯನೊಳಕೊಂಡು ಸಮ್ಯಜ್ಞಾನ ಪ್ರಕಾಶವಾಗಿ ತನ್ನ ನಿಜವ ಕಾಣಿಸಿದ ಪರಿ ಚೋದ್ಯವೆಂಬುದೀಗ ಮಹಾಬೆಳಗು ಕತ್ತಲೆಯನೊಳಕೊಂಡು ಕಣ್ದೆರೆವ ಪರಿಯನೋಡಾ ಎಂಬ ಶಬ್ದಕ್ಕರ್ಥ. ಅಂತಪ್ಪ ಸಮ್ಯಜ್ಞಾನೋದಯದಿಂದ ಶರಣ ತನ್ನ ನಿಜವ ತಿಳಿಯಲು ಆ ತಿಳಿದ ತಿಳಿವಿನ ಬೆಳಗಿನೊಳಗೆ ಶರಣ ತಾನೆಲ್ಲ ಚಿತ್ಕಲಾಸ್ವರೂಪವೆಯಾಗಿ ಕಾಣಿಸಲು ಆಶ್ಚರ್ಯಂಬಟ್ಟನೆಂಬುದೀಗ ತಿಳಿವಡೆ ಬೆಳಗಲ್ಲ, ಒಳಗೊಳಗೆ ಹೊಳೆವ ಕಳೆ ಇದೇನೋ ಎಂಬ ಶಬ್ದಕ್ಕರ್ಥ. ಅಂತು ಶರಣನೆಲ್ಲ ಚಿತ್ಕಲಾಸ್ವರೂಪವೆಯಾಗಿರ್ದ ತಾನೇ ಕಂಡು ಶರಣ ತನ್ನ ಚಿತ್‌ಸ್ವರೂಪಾದ ತೋರಿಕೆ ಎಲ್ಲ ಪರಬ್ರಹ್ಮದ ಲೀಲಾ ವಿಲಾಸದಿಂ ತೋರಿದ ತೋರಿಕೆ ಎಂದು ತನ್ನ ನೆಲೆಯನರಿದು ಶರಣ ತನ್ನ ಚಿತ್ತುವ ಪರಬ್ರಹ್ಮದಲ್ಲಿಯೇ ನೆಲೆಗೊಳಿಸಿ ಬ್ರಹ್ಮಭಾವ ನೆಲೆಗೊಂಡು ದೇಹ ಪ್ರಪಂಚಿನತ್ತ ಶರಣನ ಚಿತ್ತುವೆಳಸಿ ಗಮಿಸದೆ ಇದ್ದಿತ್ತೆಂಬುದೀಗ ಅದೆಲ್ಲಿಂದ ಹುಟ್ಟಿ ಅದೆಲ್ಲಿಂದ ತೋರಿತ್ತು ಅದಲ್ಲಿಯೇ ಆಗಾಗಿ ಅದಲ್ಲಿಯೇ ಬೆಳೆಯಿತ್ತು ಸಿಮ್ಮಲಿಗೆಯ ಚನ್ನರಾಮನೆಂಬ ಮಹಾಘನಲಿಂಗದಲ್ಲಿಯೇ ಕಾಲೂರಿದ ಪರಿಯನೇನೆಂಬೆನೆಂಬ ಶಬ್ದಕ್ಕರ್ಥ.

(೬). ಸತ್ತ ಕೋಳಿ ಎದ್ದು ಕೂಗಿತ್ತ ಕಂಡೆ. ಮೊತ್ತದ ಮಾಮರ ನುಲಿಯಿತ್ತ ಕಂಡೆ. ಕತ್ತಲೆ ಬೆಳಗಾಯಿತ್ತ ಕಂಡೆ. ಹೊತ್ತಾರೆ ಎದ್ದು ಹೊಲಬು ದಪ್ಪಿತ್ತ ಕಂಡೆ. ಇದೇನು ಹತ್ತಿತ್ತೆಂದರಿಯೆ ಗುಹೇಶ್ವರಾ.

**ಅರ್ಥ:—** ಪರಬ್ರಹ್ಮವೆಂಬುದೀಗ ಸತ್ತು ಎಂಬ ಶಬ್ದಕ್ಕರ್ಥ. ಅಂತಪ್ಪ ಪರಬ್ರಹ್ಮವು ತಾನೆಂಬ ನಿಜವ ನರುಹಿದ ಸಮ್ಯಜ್ಞಾನೋದಯದೆ ಕುಕ್ಕುಟನ ಗುಣ ಧರ್ಮ ಕರ್ಮವಪ್ಪ ಪ್ರಾತಜ್ಞಾನಧ್ವನಿ ಎಂಬುದೀಗ ಸತ್ತಕೋಳಿ ಎದ್ದು ಕೂಗಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತು ಸಮ್ಯಜ್ಞಾನೋದಯವಾದ ಶರಣ ನಂಗದ ಷಡುಚಕ್ರದ ಐವತ್ತೆರಡಕ್ಷರಂಗಳೆಲ್ಲ ಸದ್ವಿವೇಕ ವೃಕ್ಷಸ್ವರೂಪನೆಯ್ದಿ ಶಿವೋಹಂ ಶಿವೋಹಂ ಮೆಂದು ಧ್ವನಿಗೆಯ್ದುವೆಂಬುದೀಗ ಮೊತ್ತದ ಮಾಮರನುಲಿಯಿತ್ತ ಕಂಡೆನೆಂಬ ಶಬ್ದಕ್ಕರ್ಥ. ಅಂತಾದ ಕಾರಣ ಅಜ್ಞಾನತಿಮಿರವಳಿದು ಸುಜ್ಞಾನಪ್ರಕಾಶವಾಯಿತ್ತೆಂಬುದೀಗ ಕತ್ತಲೆ ಬೆಳಗಾಯಿತ್ತ ಕಂಡೆನೆಂಬ ಶಬ್ದ

ಕ್ಕರ್ಥ. ಆ ಸುಜ್ಞಾನೋದಯವೇ ಹೊತ್ತಾರೆ ಎಂಬ ಶಬ್ದಕ್ಕರ್ಥ. ಅಂತಪ್ಪ ಸುಜ್ಞಾನೋದಯದಿಂದ ಸರ್ವತೋಧಿಕನು ತಾನೆಯಾಗಿ ಖಂಡಿತದ ಹೊಲಬು ದಪ್ಪಿತ್ತೆಂಬುದೀಗ ಹೊತ್ತಾರೆ ಎದ್ದು ಹೊಲಬುದಪ್ಪಿತ್ತ ಕಂಡೆನೆಂಬ ಶಬ್ದಕ್ಕರ್ಥ. ಇಂತು ಲಿಂಗಗ್ರಾಹಕನಾದ ಶರಣನು ಇತರವನರಿಯದಿರ್ದನೆಂಬುದೀಗ ಏನು ಹತ್ತಿತ್ತೆಂದರಿಯನು ಗುಹೇಶ್ವರಾ ಎಂಬ ಶಬ್ದಕ್ಕರ್ಥ.

(೭). ಕಾಂಬುದು ಜೀವನಲ್ಲ, ಕಾಣಿಸಿಕೊಂಬುದು ಪರಮನಲ್ಲ, ಮುಟ್ಟಿ ಹರಿದಾಡುವವು ಕರಣಂಗಳಲ್ಲ, ಸುಖವನನು ಭವಿಸುವವು ಇಂದ್ರಿಯಂಗಳಲ್ಲ, ಇಂತೀ ಭೇದಂಗಳಲ್ಲಿ ಆರೆಂಬುದ ತಿಳಿದು, ಶಶಿವೃಕ್ಷಕ್ಕೆ ನೀರನೆರೆದಡೆ ನೀರ ಕುಡಿವುದು ಬೇರೋ, ಮರನೋ, ಮೀರಿ ಬೆಳೆವ ಫಲವೋ, ಎಂಬುದ ನರಿತಲ್ಲಿ ಅರಿದ ಅರಿಕೆಯ ನಿರಿಗೆಯ ಬಲ್ಲಾತನೇ ಕಮಠೇಶ್ವರ ಲಿಂಗ ತಾನಾದ ಶರಣ.

---

## ಜ್ಞಾನ ಮತ್ತು ಕ್ರಿಯೆ ಇವುಗಳ ಸಂಬಂಧ.

(೧). ಕ್ರಿಯೆ ಇಲ್ಲದ ಜ್ಞಾನ ಪ್ರಯೋಜನವಿಲ್ಲವಯ್ಯಾ. ಅದು ಹೇಗೆಂದಡೆ, ದೇಹವಿಲ್ಲದ ಪ್ರಾಣಕ್ಕೆ ಆಶ್ರಯ ಉಂಟೇ ಅಯ್ಯಾ? ಆ ಪ್ರಾಣವಿಲ್ಲದೆ ಕಾಯಕ್ಕೆ ಚೈತನ್ಯ ಉಂಟೇ ಅಯ್ಯಾ? ಅದು ಕ್ರಿಯೆ ಇಲ್ಲದೆ ಜ್ಞಾನಕ್ಕೆ ಆಶ್ರಯವಿಲ್ಲ. ಜ್ಞಾನವಿಲ್ಲದೆ ಕ್ರಿಯೆಗೆ ಆಶ್ರಯವಿಲ್ಲ. ಕ್ರಿಯಾಜ್ಞಾನಪ್ರಕಾಶವಿಲ್ಲದೆ ಲಿಂಗಕ್ಕೆ ಆಶ್ರಯವಿಲ್ಲ. ಇದು ಕಾರಣ ಜ್ಞಾನಕ್ರಿಯೋಪಚಾರಂಗಳಿರಬೇಕೆಂದೆನಯ್ಯ ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ.

(೨). ಕ್ರಿಯೆಯೋ ಅಧಿಕವೆಂಬ ದೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯ ಎನಗೆ. ಅದೇನು ಕಾರಣವೆಂದರೆ, ಆವುದಾನೊಂದು ಪಕ್ಷಿ ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ, ಅಂತರಂಗದಲ್ಲಿ ಸಮ್ಯಜ್ಞಾನ, ಬಹಿರಂಗದಲ್ಲಿ ಶಿವಸತ್ಕ್ರಿಯಾಸಮ್ಯಜ್ಞಾನ ಸಂಪನ್ನರಾದ ಶರಣರ ತೋರಿ, ಬದುಕಿಸಯ್ಯ ಎನ್ನ ಅಖಂಡೇಶ್ವರಾ.

(೩). ಅಹುದಹುದು, ಭಕ್ತಿಭಾವದ ಭಜನೆ ಎಂತೆಂತಿಹುದೋ? ಅಂತರಂಗದ ಅರಿವಿಂಗೆ ಆಚಾರವೇ ಕಾಯ. ಆಚಾರ ಕಾಯವಿಲ್ಲದಡೆ, ಅರಿವಿಂಗೆ

ಆಶ್ರಯವಿಲ್ಲ. ಅರಿವು ಆಚಾರದಲ್ಲಿ ಸಮವೇದಿಸಿದ ಲಿಂಗೈಕ್ಯನ ಕ್ರಿಯಾಬದ್ಧನೆಂದು ನುಡಿದರೆ ಪಂಚಮಹಾಪಾತಕ. ನಿನ್ನ ಅರಿವಿಂಗೆ ಅಜ್ಞಾಗಿ, ಆಚಾರಕ್ಕೆ ಆಳಾಗಿ, ನಿಮ್ಮ ಗುಹೇಶ್ವರನು ನಿನ್ನ ಕೈವಶಕ್ಕೆ ಒಳಗಾದನು. ನಿನ್ನ ಸುಖಸಮಾಧಿಯ ತೋರಬಾರಾ ಸಿದ್ಧರಾಮಯ್ಯಾ.

(೪). ಕ್ರಿಯೆ ಜಡವೆಂಬರು, ಜ್ಞಾನ ಅಜಡವೆಂಬರು. ಅದೆಂತಯ್ಯಾ? ನೀತಿಯು ಹೇಳಿದ್ದು ಜಡವೇ? ಕಷ್ಟವಿಲ್ಲದೆ ಬಂದಂತೆ ಬೊಗಳಿ, ಭೋಗಿಸಿ, ಭವಕ್ಕೆ ಹೋಗುವದು ಅಜಡವೇ? ಕ್ರಿಯಾಜ್ಞಾನವೆಂಬ ಉಭಯಶಬ್ದದರ್ಥವನರಿಯದೆ, ಕಂಡಕಂಡ ಹಾಗೆ ಬೊಗಳುವ ಹೊಲೆಮಾದಿಗರನು ಏನೆಂಬೆ ಕೂಡಲ ಚನ್ನಸಂಗಮದೇವಾ?

(೫). ಕ್ರಿಯೆಯೇ ಜ್ಞಾನ. ಜ್ಞಾನವೇ ಕ್ರಿಯೆ. ಜ್ಞಾನವೆಂದರೆ ತಿಳಿಯುವದು. ಕ್ರಿಯೆ ಎಂದರೆ, ತಿಳಿದಂತೆ ಮಾಡುವದು. ಪರಸ್ತ್ರೀ ಭೋಗಿಸಬಾರದೆಂಬುದೇ ಜ್ಞಾನ. ಅದರಂತೆ ಆಚರಿಸುವದೇ ಕ್ರಿಯೆ. ಅಂತು ಆಚರಿಸದಿದ್ದರೆ, ಅದೇ ಅಜ್ಞಾನ ನೋಡಾ ಕೂಡಲ ಚನ್ನಸಂಗಮದೇವಾ.

(೬). ಲಿಂಗಜಂಗಮ ಸಮುಮತವಾದ ಕ್ರಿಯೆ ಅಹುದಾಗದೆಂಬ ಸಂದೇಹಬೇಡ. ಕ್ರಿವಿಡಿದು ತನುವು ಗಮಿಸುವದು. ಅರಿವುವಿಡಿದು ಮನವು ಗಮಿಸುವದು. ಗ್ರಂಥ:—ಕ್ರಿಯಾದ್ವೈತ ನಕರ್ತವ್ಯಂ ಭಾವಾದ್ವೈತ ಸಮಾಚರೇತ್ । ಕ್ರಿಯಾ ನಿರ್ವಹತೆ ಯಸ್ತು ಭಾವಶುದ್ಧಂ ತುಶಾಂಕರೀ ॥ ಎಂದುದಾಗಿ ಕ್ರಿಯಾನುಭಾವದಿಂದ ಸಕಲೇಂದ್ರಿಯಂಗಳನು ಕೂಡಲಚನ್ನಸಂಗಯ್ಯನಲ್ಲಿ ತಲ್ಲೀಯ್ಯವಯ್ಯ, ತದ್ರೂಪು.

(೭). ಅಗ್ನಿ ಸುಡಲಲ್ಲದೆ ಸುಳಿಯಲರಿಯದು. ವಾಯು ಸುಳಿವುದಲ್ಲದೆ, ಸುಡಲರಿಯದು. ಆ ಅಗ್ನಿ ವಾಯುವ ಕೂಡಿದಲ್ಲದೆ, ಅಡಿ ಇಡಲರಿಯದು. ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನಭೇದ ರಾಮನಾಥಾ.

**ಅರ್ಥ:**—ಪಾವಕನು ಇದಿರಿಟ್ಟ ತರಗೆಲೆ ಕಾಷ್ಠಂಗಳನು ದಹಿಸಬಲ್ಲುದಲ್ಲದೆ ಮುಂದಕ್ಕೆ ಅಡಿ ಇಡಲರಿಯದು. ಮಾರುತನು ತರಗೆಲೆ ತೃಣಂಗಳನು ಸ್ವಸ್ಥಾನದಿಂದ ಪರಸ್ಥಾನಕ್ಕೆ ಹಾಕಬಲ್ಲುದಲ್ಲದೆ ದಹಿಸಲರಿಯದೆಲ್ಲವನು. ಆ ಪಾವಕನು ಮರುತ ಸಂಯೋಗದಿಂದಲ್ಲದೆ ಹೆಜ್ಜೆ ಇಟ್ಟು ಚರಿಸಲರಿಯದು. ಈ ಉಪ

ಮಾನದ ಹಾಗೆ ಬಹಿರಂಗದ ಕ್ರಿಯೆಯಿಂದ ಅಂತರಂಗದ ಜ್ಞಾನಪ್ರಭಾವಿಸಿ, ಸರ್ವಾಂಗಗಳ ಪ್ರಪಂಚ ದಹಿಸಿ, ಉಭಯ ಲಿಂಗ ಸಂಗಸಂಬಂಧವ ಮಾಡಿಕೊಂಡು ಜ್ಞಾನಕ್ರಿಯುಕ್ತನಾಗಿ ಆಚರಿಸುವ ವಿಚಾರವ ಪಶುಪ್ರಾಣಿಗಳು ಅರಿಯರೆಂಬುದರ್ಥ.

(೮). ಕಣ್ಣೂ ಕಾಲೂ ಎರಡುಳ್ಳವ ದೂರ ಎಯ್ದುವನಲ್ಲದೆ, ಕಣ್ಣೂ ಕಾಲೂ ಎರಡರೊಳಗೆ ಒಂದಿಲ್ಲದವನು ದೂರ ಎಯ್ದಲರಿಯನೆಂಬಂತೆ, ಜ್ಞಾನ ರಹಿತವಾಗಿ ಕ್ರಿಯೆಯನೆಷ್ಟು ಮಾಡಿದಡೇನು, ಅದು ಕಣ್ಣಿಲ್ಲದವನ ನಡೆಯಂತೆ. ಕ್ರಿಯಾರಹಿತವಾಗಿ ಜ್ಞಾನಿಯಾದಡೇನು, ಅದು ಕಾಲಿಲ್ಲದವನ ಇರವಿನಂತೆ. ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ನಿಜವ ಬೆರಸುವಡೆ, ಜ್ಞಾನವೂ ಕ್ರಿಯೆಯೂ ಎರಡೂ ಬೇಕು.

(೯). ಜ್ಞಾನದಲ್ಲಿ ಅರಿದರೇನಯ್ಯ, ಸತ್ಕ್ರಿಯಾಚಾರ ಸಂದನ್ನಕ್ಕರ? ನೆನೆದ ಮಾತ್ರದಲ್ಲಿ ಕಾಂಬುದೇ, ಕಾರ್ಯದಲಲ್ಲದೇ? ಕುರುಡ ಕಾಣಪಥವ. ಹೆಳವನಡೆಯಲರಿಯ. ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿಜಡನು. ಕ್ರಿಇಲ್ಲದ ಜ್ಞಾನಭ್ರಾಂತು. ಇದು ಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು.

(೧೦). ಅಂತರಂಗದ ಅರಿವು, ಬಹಿರಂಗದಕ್ರಿಯೆ, ಈ ಉಭಯ ಸಂಪುಟ ಒಂದಾದ ಶರಣಂಗೆ ಹಿಂಗಿತ್ತು ತನುಸೂತಕ, ಹಿಂಗಿತ್ತು ಮನಸೂತಕ. ಕೂಡಲಚನ್ನಸಂಗಯ್ಯನಲ್ಲಿ ಸಂಗವಾದದ್ದು ಸರ್ವೇಂದ್ರಿಯ.

(೧೧). ಕ್ರಿಯೆ ಮರೆದಲ್ಲಿ ಅರಿವು ಹೀನವಾಗಿಪ್ಪುದು. ಅರಿವು ಮರೆದಲ್ಲಿ ಜ್ಞಾನ ಹೀನವಾಗಿಪ್ಪುದು. ಜ್ಞಾನವ ಮರೆದಲ್ಲಿ ಬೆಳಗಿನ ಕಳೆ ಹೋಯಿತ್ತು. ಈಶಾನ್ಯಮೂರ್ತಿಮಲ್ಲಿಕಾರ್ಜುನಲಿಂಗವು ಅವರಿಗೆ ಮರೆಯಾಗಿ ತೊಲಗಿತ್ತು.

(೧೨). ಪೈರಿಗೆ ನೀರು ಬೇಕೆಂಬಲ್ಲಿ ಉಚಿತವನರಿದು ಬಿಡಬೇಕು. ಕ್ರಿಗೆ ಅರಿವು ಬೇಕೆಂಬಲ್ಲಿ ಉಭಯವನರಿದು ಘಟಿಸಬೇಕು. ಏರಿ ಹಿಡಿವನ್ನಕ್ಕ, ನೀರ ಹಿಡಿದಡೆ ಸುಖವಲ್ಲದೆ, ಮೀರಿದಡುಂಟೇ? ಕ್ರಿಯೆಬಿಡಲಿಲ್ಲ, ಅರಿವ ಮರೆಯಲಿಲ್ಲ. ಬೆಳೆಯಕೊಯ್ದು ಮತ್ತೆಹೊಲಕ್ಕೆ ಕಾವಲುಂಟೇ? ಫಲವಹೊತ್ತ ಪೈರಿನಂತೆ, ಪೈರನೊಳಕೊಂಡ ಫಲದಂತೆ, ಅರಿವು ಆಚರಣೆಯಲ್ಲಿ ನಿಂದು, ಆಚ

ರಣೆ ಅರಿವಿನಲ್ಲಿ ಲೇಪವಾದ ಮತ್ತೆ, ಕಾಮಭೀಮ ಜೀವದನದೊಡೆಯನೆಂಬುದ ಭಾವಿಸಲಿಲ್ಲ.

(೧೩). ಅರಿವನರಿದೆನೆಂದು ಕ್ರಿಯೆಯ ಬಿಡಬಾರದು. ಮಧುರಕ್ಕೆ ಮಧುರ ಒದಗಲಾಗಿ, ಸವಿಗೆ ಕೊರತೆಯುಂಟೇ? ದ್ರವ್ಯಕ್ಕೆ ದ್ರವ್ಯ ಕೂಡಲಾಗಿ, ಬಡತನ ಉಂಟೇ? ನೀ ಮಾಡುವಮಾಟ ಶಿವಪೂಜೆಯ ನೋಟ ಭಾವವಿರಬೇಕು. ಅದು ಕಲಿದೇವರ ದೇವಯ್ಯನ ಕೂಟ ಚಂದಯ್ಯ.

(೧೪). ಮಾಡುವ ಮಾಟದಿಂದಲೇ ಬೇರೊಂದನರಿಯಬೇಕು. ಅರುವಿಂಗೆ ನೆಮ್ಮುಗೆ ಒಡಗೂಡಬೇಕು. ಅರುವಿಂಗೆ ನೆಮ್ಮುಗೆ ಒಡಗೂಡಿದ ಬಳಿಕ, ಬಯಲಭ್ರಮೆಯು ಕಳೆದು, ನಮ್ಮ ಗುಹೇಶ್ವರ ಲಿಂಗದಲ್ಲಿ ನಿಜಪದವನ್ನೈದುವುದು ಮಾರಯ್ಯ.

(೧೫). ನಿಜದಿಂದ ಕ್ಷತ್ರಿಯನೆಂದು ತನ್ನ ನಿಜವನರಿದ ಕರ್ಣನ ವ್ಯಾಧಭಾವ ಬಿಡದಂತೆ, ತಾನು ತನ್ನ ನಿಜವನರಿದರೂ ಜಾತಿಯಾಶ್ರಮ ಗುಣಧರ್ಮ ಕರ್ಮ ಜೀವಾದಿ ಭೇದಂಗಳೊಳಗಾದ ಮಾಯಾಮಯಂಗಳೆಂಬ ಮುನ್ನಿನ ಭ್ರಮೆಗಳ ಬಿಡಲರಿಯದ ಬಡಮನದ ಮನುಜರೆಲ್ಲರೂ ನಿಜಗುಣ ನಿಜಭಾವದಲು ನಿಲ್ಲದವಂಗೆ ನಿಜಸುಖವು ಸಾಧ್ಯವಪ್ಪುದೇ ಹೇಳಾ ಸಿಮ್ಮಲಿಗೆಯ ಚನ್ನರಾಮಾ!

**ಅರ್ಥ**:— ಕ್ಷತ್ರಿಯನೆಂದು ತನ್ನ ಮುನ್ನಿನ ನಿಜವ ತಿಳಿದಡೆಯೂ ಕರ್ಣಂಗೆ ವ್ಯಾಧ ಧರ್ಮ ಗುಣ ಬಿಡದಿಪ್ಪಂತೆ ಜ್ಞಾನೋದಯದಿಂದ ತಾನು ಬ್ರಹ್ಮಾಂಶಿಕನೆಂದು ತನ್ನ ನಿಜವ ತಿಳಿದಡೆಯೂ ಮಾಯಾದೇಹ ಸಂಸಾರ ಭ್ರಾಂತಿ ಗುಣ ಧರ್ಮ ಕರ್ಮ ತನ್ನ ಬಿಡದಿಪ್ಪವಾಗಿ ಜೀವಂಗೆ ಅರಿದಮಾತ್ರದಲ್ಲಿ ಶಿವತತ್ವ ಘಟಿಸದು. ಮತ್ತೆಂತೆಂದೊಡೆ, ಸಮ್ಯಜ್ಞಾನೋದಯದಿಂದ ತನ್ನ ನಿಜವನರಿದರಿವಿಂದ ಸಂಸಾರ ಭ್ರಾಂತಿಯು ನೇತಿಮಾಡಿ ಶಿವಕ್ರಿಯೆಯನಾಚರಿಸಲು ದೇಹ ಸಂಸಾರವಾಸನೆಯಳಿವುದು. ಅದು ಕಾರಣ ಭಕ್ತಿಭಾವವಳಪಟ್ಟು ಶರಣಂಗೆ ತನ್ನ ನಿಜಪದ ಸಾಧ್ಯವಪ್ಪುದೆಂಬುದೀಗ ಈ ವಚನದ ತಾತ್ಪರ್ಯಾರ್ಥ.

(೧೬). ಸೀತವುಳ್ಳನ್ನಕ್ಕ ಉಷ್ಣವ ಪ್ರತಿಪಾದಿಸಬೇಕು. ಉಷ್ಣವುಳ್ಳನ್ನಕ್ಕ ಸೀತವ ಪ್ರತಿಪಾದಿಸಬೇಕು. ದಿವದಲ್ಲಿ ಎದ್ದು ರಾತ್ರಿಯಲ್ಲಿ ಒರಗುವನ್ನಕ್ಕ ಅದ್ವೈತ ಅಶಕ್ಯ ನೋಡಾ. ಇದು ಕಾರಣ ಕ್ರಿಯೆಯ ಮರೆಯಲಿಲ್ಲ. ಅರಿವು

ಶೂನ್ಯವೆಂದು ಬಿಡಲಿಲ್ಲ. ಅದು ಶಿಲೆಯ ಮರೆಯುಪಾವಕ, ತಿಲದೊಳಗಣ ತೈಲ. ಅವರ ಒಲವರಿದಲ್ಲಿ ಕೂಲವ ಕಾಣಬೇಕು, ಬಸವಣ್ಣಪ್ರಿಯ ನಾಗರೇಶ್ವರ ಲಿಂಗವನರಿವುದಕ್ಕೆ.

**ಅರ್ಥ:**—ಸೀತ ಉಂಟಾಗಿರುವ ಪರಿಯಂತರ, ಉಷ್ಣವ ಮಾಡಿಕೊಳ್ಳಲೇ ಬೇಕು. ಉಷ್ಣ ಉಂಟಾಗಿರುವ ಪರಿಯಂತರ ತನುವ ಮಾಡಿಕೊಳ್ಳಲೇ ಬೇಕು. ಉದಯದಲೆದ್ದು ರಾತ್ರೆ ಮಲಗುವ ಪರಿಯಂತರ ಬ್ರಹ್ಮದಲ್ಲಿ ಪರವಶವಾಗಿರುವದು ಸಹಿ. ದೇಹಸಂಚಾರ ಉಂಟಾಗಿಪ್ಪದು ಕಂಡ್ಯಾ. ಆ ಬ್ರಹ್ಮಾದ್ವೈತ ಘಟಿಸದ ಕಾರಣ, ಕ್ರಿಯೆಯು ಮರೆದು ಬಿಡಬಾರದು. ಜ್ಞಾನವು ನಿರಾಕಾರವೆಂದು ಬಿಡಬಾರದು. ಅದು ಹೇಗೆಂದಡೆ, ಕಲ್ಲಿನೊಳಗಿಪ್ಪ ಅಗ್ನಿಯನು, ಎಳ್ಳಿನೊಳಗಣ ಎಣ್ಣೆಯನು, ಅವರ ಪಕ್ಷಪಾತದಲ್ಲಿ ದೂಡಿ, ಚಕಮಕಿಯಿಂದ ಅಗ್ನಿಯನು, ಗಾಣದ ಮಥನದಿಂದ ಎಣ್ಣೆಯನು ಕಾಣಬೇಕು ಎಂಬ ಹಾಗೆ, ಇಷ್ಟಲಿಂಗ ಸಂಬಂಧವಾದ ಸತ್ಕ್ರಿಯೆಯಿಂದ ಪ್ರಾಣಲಿಂಗ ಸಂಬಂಧವ ನರಿಯಬೇಕು ಎಂಬುದರ್ಥ.

(೧೭). ವರುಣನ ಕಿರಣದಿಂದ ಅಪ್ಪುವಿನಸಾರ ಪೃಥ್ವಿಯೊಳಗಡಗಿದ್ದು, ಪೃಥ್ವಿಯ ತಪ್ಪಿಸಿ ತಾನೊಪ್ಪದಲ್ಲಿ ತೆಗೆವಂತೆ ಅರಿವುಮರವೆ ಪೃಥ್ವಿಯುಪ್ಪುವಿನಂತೆ ಇಪ್ಪ ಭೇದವ ತಾನರಿದು ಜಡ ಅಜಡವೆಂಬ ಉಭಯವ ಅರಿವುದು ಸಕಲವೋ, ನಿಷ್ಕಲವೋ, ಬೇರೊಂದು ಹೊಲಬೋ, ನಿನ್ನೊಲವರವ ನೀನೇ ಬಲ್ಲೆ, ಕಾಮಭೀಮಜೀವದನದೊಡೆಯ ನಾನೆಂದೂ ಅರಿಯೆ.

**ಅರ್ಥ:**—ಸೂರ್ಯನ ಗಭಸ್ತಿಯಿಂದ ಉದಕದ ಸಾರವು ಭೂಮಿಯೊಳಗಡಗಿಪ್ಪದು. ಮಣ್ಣನು ತೆಗೆದು ಆತ್ಮನು ಒಪ್ಪಿಗೆಯಿಂದ ಭಾವಿಯ ತೋಡಿ ಉದಕವ ತೆಗೆದುಕೊಂಡ ಹಾಗೆ ಜ್ಞಾನಕ್ರಿಗಳು ಪೃಥ್ವಿಯಲ್ಲಿ ಅಪ್ಪು ಅಡಗಿರುವ ಹಾಗೆ ಕ್ರಿಯಲ್ಲಿ ಜ್ಞಾನವಡಗಿಪ್ಪದನು ತಾನು ತಿಳಿದು, ಭೂಮಿಯನಗಿದು ಉದಕವ ತೆಗೆದುಕೊಂಬ ಹಾಗೆ, ಕ್ರಿಯಿಂದ ಜ್ಞಾನವ ಸಾಧಿಸಿಕೊಂಬುದು. ವಸ್ತುವು ಸಾಕಾರವಾಗಿಪ್ಪದೋ, ನಿರಾಕಾರವಾಗಿಪ್ಪದೋ, ಸಕಲ ನಿಃಕಲವಾಗಿಪ್ಪದೋ, ಎಲೇ ಶಿವನೇ, ನಿನ್ನ ನಿಲುಕಡೆಯು ನಿನಗೆ ತಿಳಿವುದು. ಶರಣನು ಸಕಲವೇ ಸಾರವೆಂದು ಆಚರಿಸಲರಿಯನು, ನಿಃಕಲವೇ ಪರವೆಂದು ಆಚರಿಸಲರಿಯನು ಎಂಬುದರ್ಥ.

# ಜ್ಞಾನಕ್ರಿಯೆಗಳಿಂದ ಲಿಂಗದ ಅರಿವು.

(೧). ತತ್ವಂಗಳ ಗೊತ್ತು ಗುಟ್ಟನರಿದೆನೆಂದು ಬಿಡಬಾರದು ಇಷ್ಟ ಲಿಂಗದ ಪೂಜೆಯು. ಆತ್ಮನ ಗೊತ್ತನರಿತೆನೆಂದು ಮರೆಯಲಾಗದು. ಪಾಪಪುಣ್ಯ ವಿಲ್ಲ ಎಂದು ನಿಃಕರಿಸಿ ನಡೆಯಲಾಗದು. ಈ ಗುಣ ಒಂದೂ ಇಲ್ಲ ಎಂದು ಬಿಡ ಬಹುದೇ? ನಾನೆಂಬುದ ಇದಿರೇನೆಂಬುದ ಅರಿವನ್ನಕ್ಕ ಶೃತಕ್ಕೆ ದೃಷ್ಟ, ದೃಷ್ಟಕ್ಕೆ ಅನುಮಾನ, ಅನುಮಾನಕ್ಕೆ ನಿಶ್ಚಯ, ನಿಶ್ಚಯ ನಿಜವಾದಲ್ಲಿ ಗೋಪತಿನಾಥ ವಿಶ್ವೇಶ್ವರ ಲಿಂಗದ ಕ್ರಿಯಾನುಗ್ರಹ ನಿರ್ವಾಹ.

(೨). ಅಂತರಂಗದಲ್ಲಿ ಅರುಹು ಪೂರ್ಣವಾಗಿ ಬಹಿರಂಗದಲ್ಲಿ ಸತ್ಕ್ರಿಯಾಸಂಪನ್ನನಾದ ಸುಚರಿತ್ರನು ನೋಡಾ ಭಕ್ತನು. ತನು ಮನ ಭಾವದಲ್ಲಿ ಇಷ್ಟಪ್ರಾಣ ಭಾವವನಿರಿಸಿ, ತನುಮನ ಭಾವವಿರಹಿತನಾಗಿ ನಿರ್ದೇಹಿ ನೋಡಾ ಭಕ್ತನು. ಕ್ರಿಯಾಜ್ಞಾನದಿಂದ ಭಾವಲಿಂಗವ ಮುಟ್ಟಿದ ನಿಭ್ರಾಂತನಯ್ಯ ನಿಮ್ಮ ಭಕ್ತನು ಮಹಾಲಿಂಗಗುರುಶಿವಸಿದ್ಧೇಶ್ವರಪ್ರಭುವೇ.

(೩). ಇಷ್ಟವ ಹಿಡಿದಾಡುವನ್ನಬರ ಪೂಜೆಯ ಕಟ್ಟು ಗೊತ್ತಿನಲ್ಲಿರ ಬೇಕು. ಇಷ್ಟವರತು ಅಂಗದಾಚರಣೆಯಳಿದು ಉಭಯ ನಷ್ಟವಾದಲ್ಲಿ ಮನ ಸಂದಿತ್ತು ಮಾರೇಶ್ವರಾ.

(೪). ಕಾಯದಿಂದ ಕರ್ಮವ ಕಂಡು ಭಾವದಿಂದ ಲಿಂಗವ ಕಂಡು, ಲಿಂಗದಿಂದ ಸ್ವಾನುಭಾವವಾಗಿ, ಅಂಗದ ಸಂಗಕ್ಕೆ ಹೊರಗಾಯಿತ್ತು ಕದಂಬ ಲಿಂಗವನರಿಯಲಾಗಿ.

**ಅರ್ಥ:**—ಅಂಗದಲ್ಲಿ ಲಿಂಗ ಸಂಬಂಧವಾಗಿರುವದರಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಂಗಳಿಂದ ಪೂಜೆಯ ಮಾಡಿ, ಅಂಗವು ಲಿಂಗವು ಒಂದೇ ಎಂಬ ಸಮರಸಭಾವದಿಂದ ಇಷ್ಟಲಿಂಗವನ್ನೇ ಅಂತರಂಗದಲ್ಲಿ ಪ್ರಾಣ ಲಿಂಗವಾಗಿ ಕಂಡು, ಪ್ರಾಣಲಿಂಗಕ್ಕೆ ಮಾಡುವ ನಿರ್ಗುಣ ಪೂಜೆಗಳಿಂದ ಸ್ವಾನು ಭಾವ ಜ್ಞಾನಸ್ವರೂಪವಾದ ಭಾವಲಿಂಗವು ಆತ್ಮನಲ್ಲಿ ಸಂಬಂಧವಾಗಿ, ಮಹಾ ಲಿಂಗವೇ ತ್ರಿವಿಧಾಂಗದಲ್ಲಿ ತ್ರಿವಿಧ ಲಿಂಗವಾಗಿಪ್ಪುದೆಂದು ಅರಿಯಲಾಗಿ, ಆ ಅರಿದ ಜ್ಞಾನವೇ ತನುತ್ರಯ ಷಡಿಂದ್ರಿಯಂಗಳ ಪ್ರಪಂಚಿಗೆ ಬೇರಾಗಿಪ್ಪು ದೆಂದರ್ಥ.

(೫). ಎಸುವರ ಬಲ್ಲೆ. ಎಚ್ಚ ಬಾಣ ತಿರುಗಿ ಬಪ್ಪಂತೆ ಎಸೆವರ ಕಾಣೆ. ಪೂಜಿಸುವರ ಬಲ್ಲೆ. ಪೂಜಿಸಿದ ಲಿಂಗ ಅಭಿಮುಖವಾಗಿ ಸರ್ವಾಂಗದಲ್ಲಿ ವೇಧಿಸುವರ ಕಾಣೆ. ಆ ನುಡಿಗೆ ನಡೆ, ಆ ನಡೆಗೆ ನುಡಿ, ಈ ಉಭಯವ ಭೇದಿಸುವರ ಕಾಣೆ. ಈ ಉಭಯವು ಸಿದ್ಧಿಯಾಗಿ ಸಿದ್ಧಾಂತವಾದಲ್ಲಿ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕಮಲ್ಲಿಕಾರ್ಜುನನು ಕ್ರಿಯಾಜ್ಞಾನ ನಿರುತನಾದವಂಗಲ್ಲದೆ ಸಾಧ್ಯವಲ್ಲ.

(೬). ಬೆಳಕು ನಷ್ಟವಾದಲ್ಲಿ ಕಳೆ ಪ್ರಜ್ವಲಿಸಲಿಲ್ಲ. ಕ್ರಿ ನಷ್ಟವಾದಲ್ಲಿ ಅರಿವಿನ ತೆರಪುಗೊಡಲಿಲ್ಲ. ಕ್ರಿಯಾ ಅಂಗಕ್ಕೆ, ಅರಿವು ಆತ್ಮಂಗೆ ಇಂತೀ ಉಭಯಾಕಾರವಾದಲ್ಲಿ ಲಕ್ಷ ನಿರ್ಲಕ್ಷವಾಗಿ ಗಾರುಡೇಶ್ವರ ಲಿಂಗವು ಗಾರುಡಕ್ಕೆ ಬಾರನು.

**ಅರ್ಥ:**—ದೀಪನಂದಿದಲ್ಲಿ ಪ್ರಕಾಶವು ಪ್ರಭಾವಿಸಲಿಲ್ಲ ಎಂಬ ಹಾಗೆ ಬಹಿರಂಗ ಕ್ರಿ ಬಿಟ್ಟಲ್ಲಿ ಜ್ಞಾನ ನಿಲುವುದಕೆ ಆಸ್ಪದವಿಲ್ಲ. ಅದು ಕಾರಣವಾಗಿ ಸತ್ಕ್ರಿಯು ಅಂಗದಲ್ಲಿ ಸಂಬಂಧವಾಗಿರಬೇಕು. ಸುಜ್ಞಾನವು ಆತ್ಮನಲ್ಲಿ ಸಂಬಂಧವಾಗಿರಬೇಕು. ಈ ಜ್ಞಾನಕ್ರಿಯೆಗಳು ಇಷ್ಟಪ್ರಾಣಲಿಂಗದಲ್ಲಿ ಸಮರಸವಾದಲ್ಲಿ ದೇಹಪ್ರಾಣಂಗಳು ಇಷ್ಟಪ್ರಾಣಂಗಳಲ್ಲಿ ಅಡಗಿ ಮಹಾಲಿಂಗವೇ ತಾನಾದ ಶರಣನು ಜ್ಞಾನಕ್ರಿಯೆಗಳಿಗೆ ಒಳಗಾಗನು ಎಂಬುದರ್ಥ.

(೭). ನಾ ತಿರುಹುವ ರಾಟೆಯು ಕುಲಜಾತಿಯ ಕೇಳಿರಣ್ಣಾ. ಅಡಿಯಣ ಹಲಿಗೆ ಬ್ರಹ್ಮ, ತೋರಣ ವಿಷ್ಣು, ನಿಂದ ಬೊಂಬೆ ಮಹಾರುದ್ರ, ರುದ್ರನ ಬೆಂಬಳಿಯುವೆರಡು ಸೂತ್ರದ ಕರ್ಣ, ಅರಿವೆಂಬ ಕದುರು, ಭಕ್ತಿ ಎಂಬ ಕಯ್ಯಲ್ಲಿ ತಿರುಹಲಾಗಿ, ಸುತ್ತಿತ್ತು ನೂಲು, ಕದಿರು ತುಂಬಿತ್ತು. ರಾಟೆಯು ತಿರುಹಲಾರೆ. ಎನ್ನ ಗಂಡ ಕುಟ್ಟಿಹ. ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ?

**ಅರ್ಥ:**—ಶಿವಜ್ಞಾನೋದಯವಾಗಿ ಶ್ರೀಗುರುಕಾರುಣ್ಯದಿಂ ಸರ್ವಾಂಗಲಿಂಗಸಂಬಂಧವಾಗಿರ್ಪ ಶರಣನ ಸರ್ವಾಚಾರ ಸಂಪತ್ತಿನ ಆಚರಣೆ ಎಂತೆಂದೊಡೆ, ಇಷ್ಟಲಿಂಗಸಂಬಂಧವಾದ ಆಚಾರವೆಂಬುದೀಗ ನಾ ತಿರುಹುವ ರಾಟೆಯು ಕುಲಜಾತಿಯ ಕೇಳಿರಣ್ಣಾ, ಅಡಿಯಣ ಹಲಿಗೆ ಬ್ರಹ್ಮವೆಂಬ ಶಬ್ದಕ್ಕರ್ಥ. ತನ್ನ ಹೃದಯಕಮಲ ಕರ್ಣಿಕಾ ಮಧ್ಯದಲ್ಲಿ ಚಿತ್‌ಪ್ರಕಾಶವಾಗಿ ತೊಳಗಿ ಬೆಳಗುವ ಪ್ರಾಣಲಿಂಗದಲ್ಲಿ ಆಚರಿಸುವ ನೈಷ್ಠಿಕಾಭಾವಂಗಳೆರಡು ತೋರಣವಾಗಿಹು

ದೆಂಬುದೀಗ ತೋರಣ ವಿಷ್ಣು ಎಂಬ ಶಬ್ದಕ್ಕರ್ಥ. ಆ ನೈಷ್ಠಿಕಾಭಾವಂಗಳ ನೊಳಕೊಂಡು ಪರಿಪೂರ್ಣ ಜ್ಞಾನ ತೋರುತ್ತಿಹುದೆಂಬುದೀಗ ನಿಂದ ಬೊಂಬೆ ಮಹಾರುದ್ರನೆಂಬ ಶಬ್ದಕ್ಕರ್ಥ. ಅಂತಪ್ಪ ಮಹಾಜ್ಞಾನದ ಬೆಂಬಳಿಯಲ್ಲಿ ತೋರುವ ಜ್ಞಾನಕ್ರಿಗಳೆರಡೂ ಭಿನ್ನವಿಲ್ಲದಿಹವೆಂಬುದೀಗ ರುದ್ರನ ಬೆಂಬಳಿಯು ವೆರಡು ಸೂತ್ರದ ಕರ್ಣವೆಂಬ ಶಬ್ದಕ್ಕರ್ಥ. ಅಂತು ಜ್ಞಾನಕ್ರಿಗಳನೊಳ ಕೊಂಡು ಸದ್ವಿವೇಕ ಜ್ಞಾನ ಸಂಬಂಧವಾದ ಶಿವಾದ್ವೈತ ಭಕ್ತಿಯಿಂದಾಚರಿ ಸುತ್ತಿಹನೆಂಬುದೀಗ ಅರಿವೆಂಬ ಕದಿರು ಭಕ್ತಿ ಎಂಬ ಕೈಯ್ಯಲ್ಲಿ ತಿರುಹಲಾಗಿ ಎಂಬ ಶಬ್ದಕ್ಕರ್ಥ. ಅಂತು ಸದ್ಭಕ್ತಿಯಿಂದ ಆಚರಿಸುತ್ತಿಹ ಶರಣನ ಸ್ವಾನುಭಾವ ಸೂತ್ರವು ಸದ್ವಿವೇಕ ಜ್ಞಾನದಲ್ಲಿ ಪರಿಪೂರ್ಣವಾಯಿತ್ತೆಂಬುದೀಗ ಸುತ್ತಿತ್ತು ನೂಲು ಕದಿರು ತುಂಬಿತ್ತು ಎಂಬ ಶಬ್ದಕ್ಕರ್ಥ. ಅಂತು ಅಭಿನ್ನ ಕ್ರಿಯಾಚಾರ ವಿಡಿದು ಆಚರಿಸುತ್ತಿರ್ದ ಶರಣನು ಭಿನ್ನ ಕ್ರಿಯಾಚಾರವಿಡಿದು ಆಚರಿಸಿದಡೆ ಆ ಮಹಾಘನಲಿಂಗವೆಂಬ ಪತಿ ಆಜ್ಞೆಯ ಮಾಡಿಹನೆಂದರಿದು ಭಿನ್ನ ಕ್ರಿಯಾಚಾರವ ವಿಸರ್ಜಿಸಿ ಸಾವಧಾನ ಸಂಪನ್ನನಾಗಿ ಉಪಾವಸ್ಥೆಯ ಮಾಡುತ್ತಿಹನೆಂಬುದೀಗ ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ ಇನ್ನೇಕೆ, ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ ಎಂಬ ಶಬ್ದಕ್ಕರ್ಥ.

---

## ಶರಣನ ಆಚರಣೆಗಳು.

### (೧) ಶರಣನು ಸದಾಚಾರಿಯಾಗಿರುವುದು.

(೧). ಜ್ಞಾನಿಗಳು ತಾವಾದ ಬಳಿಕ, ಮುಕುರದ ಬಿಂಬದಂತಿರಬೇಕು. ಜ್ಞಾನಿಗಳು ತಾವಾದ ಬಳಿಕ, ಜ್ಞಾನದಲ್ಲಿ ಕನಕದಂತಿರಬೇಕು. ಜ್ಞಾನಿಗಳು ತಾವಾದ ಬಳಿಕ, ಸಂಶಯರಹಿತರಾಗಿರಬೇಕು. ಜ್ಞಾನಿಗಳು ತಾವಾದ ಬಳಿಕ, ಪರಿಪೂರ್ಣ ಜಗತ್ತೆಂದು ಅರಿಯಬೇಕು. ಜ್ಞಾನಿಗಳು ತಾವಾದ ಬಳಿಕ, ಪಾಪ ವಾಸನೆ ತೋರದಿರಬೇಕು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ನುಡಿಗೊಳ ಗಾಗಬಾರದು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ನಿಂದೆಗೆ ಒಳಗಾಗಬಾ ರದು. ಜ್ಞಾನಿಗಳು ತಾವಾದ ಬಳಿಕ, ಗುರುಹಿರಿಯರಿಗಂಜಿ ನಡೆಯಬೇಕು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ಸ್ತ್ರೀ ಮಾತೆಯಂತಿರಬೇಕು. ಜ್ಞಾನಿಗಳು

ತಾವಾದ ಬಳಿಕ, ವಿಶ್ವಾಸಘಾತವ ಮಾಡಬಾರದು. ಜ್ಞಾನಿಗಳು ತಾವಾದ ಬಳಿಕ, ಪರದೂಷಣೆಯ ಮಾಡಬಾರದು ಜ್ಞಾನಿಗಳು ತಾವಾದ ಬಳಿಕ, ಪರ ದ್ರವ್ಯವಪಹರಿಸಬಾರದು. ಜ್ಞಾನಿಗಳು ತಾವಾದ ಬಳಿಕ, ಗುರುಸೇವೆ, ಲಿಂಗ ಪೂಜೆ, ಜಂಗಮದಾಸೋಹವ ಬಿಡಬಾರದು. ಜ್ಞಾನಿಗಳು ತಾವಾದ ಬಳಿಕ, ನುಡಿಕೊಟ್ಟು ತಪ್ಪಬಾರದು. ಜ್ಞಾನಿಗಳು ತಾವಾದ ಬಳಿಕ, ಅನ್ಯರ ಹಂಗಿನೊಳ ಗಾಗಬಾರದು. ಜ್ಞಾನಿಗಳು ತಾವಾದ ಬಳಿಕ, ವಚನವ ಕೊಡಬಾರದು. ಜ್ಞಾನಿ ಗಳು ತಾವಾದ ಬಳಿಕ, ಅಸತ್ಯವ ನುಡಿಯಬಾರದು. ಜ್ಞಾನಿಗಳು ತಾವಾದ ಬಳಿಕ, ರಾಜರ ಮುಂದೆ ಅಸತ್ಯಸಾಕ್ಷಿಯ ನುಡಿಯಬಾರದು. ಜ್ಞಾನಿಗಳು ತಾವಾದ ಬಳಿಕ, ಜನರಪವಾದಕ್ಕೆ ಅನುಕೂಲವಾಗಬಾರದು. ಜ್ಞಾನಿಗಳು ತಾವಾದ ಬಳಿಕ, ಮತಾಭಿಮಾನವ ತೋರಬಾರದು. ಜ್ಞಾನಿಗಳು ತಾವಾದ ಬಳಿಕ, ಕಪಿಲಸಿದ್ಧಮಲ್ಲಿಕಾರ್ಜುನಗೆ ಆವಮಾರ್ಗದಿಂ ಚ್ಯುತನಾಗಬಾರದು. ಇದರಂತೆ ವರ್ತಿಸಬೇಕು ಕೇಳಾ.

(೨). ಗುರುವಿಗಾದರೂ, ಅರುಹು ಆಚಾರಸತ್ಕ್ರಿಯೆ ಬೇಕು. ಲಿಂಗ ಕ್ಕಾದರೂ ಅರುಹು ಆಚಾರಸತ್ಕ್ರಿಯೆ ಬೇಕು. ಜಂಗಮಕ್ಕಾದರೂ ಅರುಹು ಆಚಾರಸತ್ಕ್ರಿಯೆ ಬೇಕು. ಅದೇನುಕಾರಣವೆಂದರೆ, ಅರುಹು ಆಚಾರಸತ್ಕ್ರಿಯೆ ಸನ್ನಿಹಿತ ಶಿವನಿರ್ಪನಾಗಿ. ಅರುಹುಗೆಟ್ಟು, ಆಚಾರದಪ್ಪಿ, ಸತ್ಕ್ರಿಯೆಹೀನನಾಗಿ ರ್ಪರು ಸಲ್ಲರಯ್ಯ ಶಿವಪಥಕ್ಕೆ ಅಖಂಡೇಶ್ವರಾ.

(೩). ಆಪ್ಯಾಯನಕ್ಕೆ ಅನ್ನವ ನೀಡುವೆ. ಲಾಂಛನಕ್ಕೆ ಶರಣೆಂಬೆ. ಲಾಂಛನಕ್ಕೆ ತಕ್ಕ ಆಚಾರವಿಲ್ಲದಿದ್ದರೆ, ನೀ ಸಾಕ್ಷಿಯಾಗಿ 'ಛೀ' ಎಂಬೆನು ಕೂಡಲಸಂಗಮದೇವಾ.

(೪). ಕಾಯದ ಕಳವಳದಲ್ಲಿ ಕಂಗೆಡುವನಲ್ಲ ಶರಣ. ಜೀವನೋ ಪಾಧಿಕೆಯ ಹೊದ್ದುವವನಲ್ಲ ಶರಣ. ಭಾವದ ಭ್ರಮೆಯಲ್ಲಿ ಸುಳಿವನಲ್ಲ ಶರಣ. ಮನದ ಮರವೆಯಲ್ಲಿ ಮಗ್ನನಲ್ಲ ಶರಣ. ಕಂಗಳ ಕತ್ತಲೆಯಲ್ಲಿ ಸುತ್ತಿ ಸುಳಿವ ನಲ್ಲ ಶರಣ. ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವನಲ್ಲ ಶರಣ. ಪರತರ ಲಿಂಗದ ಬೆಳಗಿನೊಳಗೆ ಬೆರೆದು, ತೆರಹಿಲ್ಲದೆ ಬೆಳಗುವ ಗಂಭೀರ ಶರಣನ ನಿಲು ವಿಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

(೫). ಶರಣಸ್ಥಲದ ಕುರುಹಿನ ಮಾರ್ಗವನರಿಯದೆ, ನಾನು ಶರಣ, ತಾನು ಶರಣನೆಂದು ನುಡಿವ ಕರ್ಮ ಜೀವಿಗಳ ಮುಖವ ನೋಡಲಾಗದು. ಅದೇನು ಕಾರಣವೆಂದಡೆ, ತಾವು ಶರಣರಾದೊಡೆ, ತಮ್ಮ ಚಿತ್ತದ ಕೊನೆಯಲ್ಲಿ ಮುಸುಕಿದ ಕತ್ತಲೆಯನೆಲ್ಲ ಕಳೆಯಬೇಕು. ತಾವು ಶರಣರಾದೊಡೆ, ತಮ್ಮ ಆತ್ಮನ ಸುತ್ತಿದ ಅಷ್ಟಮದಂಗಳ ಕತ್ತಲೆಯ ಕಡಿಯಬೇಕು. ತಾವು ಶರಣರಾದೊಡೆ, ತಮ್ಮ ಲಿಂಗದಲ್ಲಿ ಅತ್ತಿತ್ತ ಹರಿದಾಡುವ ಮನವ ಹಿಡಿತಂದು ನಿಕ್ಷೇಪವ ಮಾಡಬೇಕು. ತಾವು ಶರಣರಾದೊಡೆ, ನಿತ್ಯಾನಿತ್ಯವನರಿದು, ತತ್ವಾತತ್ವಂಗಳ ವ್ಯತಿಕರಿಸಿ, ಮಹಾಜ್ಞಾನ ಮೊತ್ತದಲ್ಲಿ ಸುಳಿಯಬೇಕು. ಇಂತೀ ಭೇದವನರಿಯದೆ, ತುತ್ತುಸವಿದುಂಡು ಮರ್ತ್ಯದ ವಿಷಯ ಪ್ರಪಂಚ ಸುಖದಲ್ಲಿ ವ್ಯವಹರಿಸಿ, ಅಜ್ಞಾನ ಕತ್ತಲೆಯಲ್ಲಿ ಸೆರೆಯಸಿಕ್ಕಿ, ಮುಂದುಗಾಣದೆ, ಮುಕ್ತಿಯ ಹೊಲಹು ತಪ್ಪಿ ಹೋಗುವ ವ್ಯರ್ಥ ಪ್ರಾಣಿಗಳ ಕಂಡು ನಗುತಿರ್ದನು ನೋಡಾ ನಮ್ಮ ಅಖಂಡೇಶ್ವರಾ.

(೬). ಕುಲಮದವೆಂಬುದಿಲ್ಲ, ಅಯೋನಿ ಸಂಭವನಾಗಿ. ಛಲಮದವೆಂಬುದಿಲ್ಲ, ಪ್ರತಿದೂರನಾಗಿ. ಧನಮದವೆಂಬುದಿಲ್ಲ, ತ್ರಿಕರಣಶುದ್ಧನಾಗಿ. ವಿದ್ಯಾಮದವೆಂಬುದಿಲ್ಲ, ಅಸಾಧ್ಯವ ಸಾಧಿಸಿದನಾಗಿ. ಮತ್ತಾವ ಮದವೆಂಬುದಿಲ್ಲ, ನೀನವ ಗ್ರಹಿಸಿದ ಕಾರಣ, ಚನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಅಕಾಯ ಚರಿತ್ರನಾಗಿ.

(೭). ಮನವಚನ ಕಾಯದಲ್ಲಿ ಆಶೆ ಇಲ್ಲದ ಶರಣನು, ಅರ್ಥಪ್ರಾಣಾಭಿಮಾನದಲ್ಲಿ ಲೋಭವಿಲ್ಲದ ಶರಣನು, ವಾಕ್ಕು, ಪಾಣಿ, ಪಾದ, ಪಾಯು, ಗುಹ್ಯವೆಂಬ ಕರ್ಮೇಂದ್ರಿಯಂಗಳ ಹೊದ್ದಲೀಯ್ಯದ ಶರಣನು, ಲಿಂಗಜಂಗಮ ಪ್ರಸಾದ ಸಾರಾಯ ಶರಣನು, ಕೂಡಲಚನ್ನಸಂಗನ ಅನುಭಾವ ಸಾರಾಯ ಶರಣನು.

(೮). ಕುಲಮದವಳಿಯದನ್ನಕ್ಕರ ಶರಣನಾಗಲೇಕೋ? ವಿಧಿವಶ ಬಿಡದನ್ನಕ್ಕರ ಭಕ್ತನಾಗಲೇಕೋ? ಹಮ್ಮಿನ ಬಿಮ್ಮು ಸೊಮ್ಮು ಸಂಬಂಧಬಿಟ್ಟು ಕಿಂಕರನ ಕಿಂಕರನಾಗಬೇಕು. ಹೆಪ್ಪನೆರೆದು, ಹಾಲುಕೆಟ್ಟು, ತುಪ್ಪವಪ್ಪಂತೆ ಇಪ್ಪರು ಕೂಡಲಸಂಗಮದೇವಾ ನಿಮ್ಮ ಶರಣರು.

(೯). ಕಾಯವಿಕಾರವಳಿದಲ್ಲದೆ, ಗುರುಸ್ಥಲಕ್ಕೆ ಸಲ್ಲ. ಮನೋವಿಕಾರವಳಿದಲ್ಲದೆ, ಲಿಂಗಪೂಜಕನಲ್ಲ. ತ್ರಿವಿಧಮಲದೂರ ಸ್ಥನಲ್ಲದೆ ವಿರಕ್ತ ಅನುಭಾವಿಯಲ್ಲ. ಇಂತೀ ಒಂದೊಂದರಲ್ಲಿ ಒಂದು ಕಲೆ ಇದ್ದ ಮತ್ತೆ, ನಿಂದಲ್ಲಿ ಸನ್ಮುಕ್ತನಲ್ಲ. ಇಂತೀ ಬಂಧ ಮೋಕ್ಷ ಕರ್ಮಂಗಳ ಬಿಟ್ಟು, ನಿಜಸಂದು, ಸುಖಿಯಾಗಬಲ್ಲಡೆ, ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗದಲ್ಲಿ ಸದ್ಭಾವವಂತ ಶರಣನಾದವನ ತೆರವು.

## ವಿದ್ಯಾವಂತನಾದರೂ ಸದಾಚಾರಿಯಾಗಿರುವುದು.

(೧೦). ವೇದಶಾಸ್ತ್ರ ಪುರಾಣಾಗಮ ಗ್ರಂಥಂಗಳ ನೋಡಿದವರೆಲ್ಲರೇನು ಹಿರಿಯರೆಂಬೆನೆ? ಅಲ್ಲಲ್ಲ, ನಿಲ್ಲು, ಮಾಣು. ಅವರೇ ಹಿರಿಯರಾದಡೆ, ನಟ್ಟುವ, ಗಳೆಯಾಟ, ಮಿಣಿಯಾಟ, ಅದೃಶ್ಯಕರಣ, ಅಗ್ನಿಸ್ತಂಭ, ಆಕರ್ಷಣ, ಚೌಷಷ್ಟಿ ಕಲಾವಿದ್ಯೆಯ ಸಾಧಿಸಿದ ಡೊಂಬನೇನು ಕಿರಿಯನೇ? ಇದು ಹಿರಿದು ಕಿರಿದಿನ ಪರಿಯಲ್ಲ. ಹಿರಿದು ಕಿರಿದಿನ ಪರಿ ಬೇರೆ ಕಾಣಿರಣ್ಣಾ. ಇವು ಉದರಪೋಷಣವಿದ್ಯೆ ಎನಿಸುವವು. ಅವರನೆಂತು ಸರಿ ಎಂಬೆನಯ್ಯ ಲಿಂಗವಂತಂಗೆ? ಇದು ಕಾರಣ, ಗುಣ, ಜ್ಞಾನ, ಧರ್ಮ, ಆಚಾರ, ಶೀಲ ಸಾಧಿಸಿದಾತನೇ ಹಿರಿಯ ಕಾಣಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೧೧). ವೇದಶಾಸ್ತ್ರ ಬಲ್ಲವರ ಹಿರಿಯರೆನ್ನೆ. ಮಾಯಾಭ್ರಾಂತು. ಕವಿತೆ ಗೀತಜ್ಞರ ಹಿರಿಯರೆನ್ನೆ. ಇವರು ಹಿರಿಯರುಗಳೇ ಯಾಗನಟ್ಟುವಿಗೆ ಪ್ರಾಣರು? ಇವರಿಂದಧಿಕವ ಸಾಧಿಸುವರೇನು ಕಿರಿಯರೇ? ಇಂತು ವಿದ್ಯಾ, ಗುಣ, ಜ್ಞಾನ, ಧರ್ಮ, ವಿಚಾರ, ಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯ ಸಾಧಿಸುವುದು.

(೧೨). ಚಿತ್ರದಬೊಂಬೆ, ರೂಪಾಗಿರ್ದರೇನು? ಅಚೇತನವಾದ ಕಾರಣ, ಪ್ರಯೋಜನಕಾರಿಯಾದುದಲ್ಲ. ಹಾವುಮೆಕ್ಕೆಯ ಹಣ್ಣು ನುಣುಪಾಗಿರ್ದರೇನು? ಕಹಿಬೆರೆದ ಕಾರಣ ಪ್ರಯೋಜನಕಾರಿಯಾದುದಲ್ಲ. ಅತ್ತಿಯ ಹಣ್ಣು ಕಳಿತಿರ್ದರೇನು? ಕ್ರಿಮಿಬಿಡದ ಕಾರಣ ಪ್ರಯೋಜನಕಾರಿಯಾದುದಲ್ಲ. ತಿಪ್ಪೆಯ ಹಳ್ಳ ತಿಳಿದಿದ್ದರೇನು? ಅಮೇಧ್ಯ ಬೆರೆದ ಕಾರಣ, ಪ್ರಯೋಜನಕಾರಿಯಾದುದಲ್ಲ. ವೇದಶಾಸ್ತ್ರ ಪುರಾಣಂಗಳನೋದಿ, ಎಲ್ಲರೂ ಅನುಭಾವಿಗಳಾದ

ರೇನು? ಆಶೆ ಎಂಬ ಪಾಶದಲ್ಲಿ ಕಟ್ಟುವಡೆದು ಪಾಶಬದ್ಧರಾದ ಕಾರಣ ಪ್ರಯೋಜನಕಾರಿಯಾದುದಲ್ಲ. ನುಡಿದಂತೆ ನಡೆಯದವರ, ನಡೆದಂತೆ ನುಡಿಯದವರ ಎಂತು ಶಿವಭಕ್ತರೆಂಬೆ? ವಾಚಾಲಕರ ಮೆಚ್ಚನು ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೩). ಮಾತಿನ ಮಾಲೆಯಿಂದ ಸುಜಾಣನಾಗಬಹುದು. ಶ್ರೋತ್ರದ ಸೊಗಸಿನ ಪ್ರಾಜ್ಞತೆಯಿಂದ, ಜಾಣನೆನಿಸಬಹುದು. ಅಂತರಂಗ ಬಹಿರಂಗವನರಿಯಬಹುದು. ಆಗಮ ಪುರಾಣಂಗಳ ಗಣನೆಯ ಗಣಿತವ ತಿಳಿದು, ಶ್ರುತಾಶ್ರುತಂಗಳಿಂದ ಶ್ರೇಷ್ಠನೆನಿಸಬಹುದು. ಭೂತವಿಕಾರದ ಪ್ರಕೃತಿಸ್ವಭಾವವ ತಿಳಿದು, ಆದರ ಭ್ರಾಂತಿಯನಳಿದಿರಬಹುದು- ಕಾಶೀ, ಕೇದಾರ, ರಾಮೇಶ್ವರ, ಶ್ರೀಶೈಲ ಮೊದಲಾದನಂತ ಕ್ಷೇತ್ರ ತೀರ್ಥಗಳಲ್ಲಿ ಗುಹ್ಯವಾಸಿಗಳಾಗಿರಬಹುದು. ನಮ್ಮ ಕೂಡಲ ಚನ್ನಸಂಗಯ್ಯನೆಂಬ ಮಹಾದಾನಿ ಲಿಂಗದ ಇಚ್ಛಾವಾಸಿಯಾಗಿರ್ಪುದು ಆ ಮಹಾಲಿಂಗದಲುದ್ಭವಿಸಿದ ದಿವ್ಯಜ್ಞಾನಿಗಳಲ್ಲದೆ ಇತರರ್ಗೆ ಸಾಧ್ಯವೇ?

(೧೪). ಅದ್ವೈತವ ನುಡಿವ ಬದ್ಧ ಭವಿಗಳಿರಾ, ಮನದ ಕ್ಷುದ್ರವಡಗದು ಕಾಣಿರೋ. ತತ್ವಾರ್ಥವ ನುಡಿವ ವ್ಯರ್ಥ ಕಾಯರುಗಳಿರಾ, ವಿಕಾರದ ಕತ್ತಲೆ ಹರಿಯದು ಕಾಣಿರೋ. ಶಿವಾನುಭವ ನಿಮಗೇಕೆ? ಸತ್ತಹಾಗೆ ಇರಿರೋ. ತತ್ವವತ್ತಲೆಯಾಗಿ ಮೃತ್ಯುವಿನ ಬಾಯ ತುತ್ತಾದಿರಿಯಲ್ಲ! ತತ್ವವಿತ್ತುಗಳು ವೃಥಾ ಸತ್ತುದ ಕಂಡು, ಮೃತ್ಯುಂಜಯನ ಶರಣರು ಕಂಡು ನಗುತಿರ್ಪರು ನೋಡಾ, ಮಹಾಲಿಂಗಗುರುಶಿವ ಸಿದ್ಧೇಶ್ವರಪ್ರಭುವೇ.

(೧೫). ವೇದ ಕಲಿತಲ್ಲಿ ಪಾಠಕನಲ್ಲದೆ, ಜ್ಞಾನಿಯಲ್ಲ. ನಿಲ್ಲು. ಶಾಸ್ತ್ರ ಪುರಾಣವನೋದಿದಲ್ಲಿ ಪಂಡಿತನಲ್ಲದೆ ಜ್ಞಾನಿಯಲ್ಲ. ನಿಲ್ಲು. ವ್ರತ ನೇಮ ಕೃತ್ಯ ಪೂಜಕನಾದಡೇನು, ದಿವ್ಯಜ್ಞಾನದ ಠಾವನರಿಯಬೇಕು. ಈ ಭೇದವ ತಿಳಿದರಿದಲ್ಲಿ ಮನಸಂದಿತ್ತು ಮಾರೇಶ್ವರಾ.

(೧೬). ವೇದಪಾಠಕ, ಶಾಸ್ತ್ರವಿತ್ತು, ಪುರಾಣ ಬಹುಶ್ರುತಿವಂತ, ವಾದಿ, ಭೇದಕ, ಸಂಸ್ಕೃತ, ಪ್ರಾಕೃತ, ಅಪಭ್ರಂಶ, ದೇಶ್ಯ ಮೊದಲಾದ ವಾಚಕ, ಚಾರ್ವಾಕ ಮುಖಂಗಳಿಂದ ಹೋರುವ ಮಾಯಾವಾದದ ತೆರನಲ್ಲ. ಮೂಲಿಕಾಸಿದ್ಧಿ, ರಸಸಿದ್ಧಿ, ಅದೃಶ್ಯಕರಣ, ಕಾಯಸಿದ್ಧಿ, ಇಂತೀ ಕುಟಿಲಂಗಳ ತೆರಕ್ಕೆ

ಅಗೋಚರ. ಅಂಗಲಿಂಗ ಸಂಬಂಧವಾದ ಶರಣನ ಇರವು ಎಂತೆಂದಡೆ, ಶಬ್ದ ಹತ್ತದ ಅಲೆಯಂತೆ, ಅನಿಲಮುಟ್ಟದ ಪುಷ್ಪದಂತೆ, ಕೈಮುಟ್ಟದ ಗತಿಯಂತೆ, ನೆಯಿಮುಟ್ಟದ ನಾಲಿಗೆಯಂತೆ, ಪವನಮುಟ್ಟದ ಪರ್ಣದಂತೆ, ಭಾವ ಭ್ರಮೆಯೊಳ ಗಿರ್ದು ಇಲ್ಲದ ಶರಣನ ಇರವು ಸದಾಶಿವಮೂರ್ತಿ ಲಿಂಗದಂಗವು ತಾನೆ.

(೧೭). ಅಕ್ಷರ, ಲೆಕ್ಕ, ಗಣಿತ, ಗಾಂಧರ್ವ, ಜ್ಯೋತಿಷ, ಆತ್ಮವಿದ್ಯೆ, ತರ್ಕ, ವ್ಯಾಕರಣ, ಅಮರಸಿಂಹ, ಛಂದಸ್ಸು, ನಿಘಂಟು, ಗೋತ್ರ, ಗ್ರಹವಾದ, ಗಾರುಡ, ದ್ಯೂತ, ವೈದಿಕಶಾಸ್ತ್ರ, ಸಾಮುದ್ರಿಕಾಶಾಸ್ತ್ರ, ಲಕ್ಷಣಶಾಸ್ತ್ರ, ಅಶ್ವಶಿಕ್ಷೆ, ಗಜಶಿಕ್ಷೆ, ಗೋಕರ್ಣಬಂಧ, ಮೂಲಿಕಾಸಿದ್ಧಿ, ಭೂಚರತ್ವ, ಖೇಚರತ್ವ, ಅತೀತ, ಅನಾಗತ, ವರ್ತಮಾನ, ಸ್ಥೂಲ, ಸೂಕ್ಷ್ಮ, ಇಂದ್ರಜಾಲ, ಮಹೇಂದ್ರಜಾಲ, ಒಡ್ಯಾಣಚೇಷ್ಟೆ, ಪರಕಾಯಪ್ರವೇಶ, ದೂರದೃಷ್ಟಿ, ದೂರಶ್ರವಣ, ಋಗ್ಯಜು ಸ್ಸಾಮಾಥರ್ವಣ, ಶೃತಿ, ಸ್ಮೃತಿ, ಆಯುದರ್ಾಯ, ಇಷ್ಟಕಾ, ಮುಷ್ಟಿಚಿಂತನ, ಚೋರವಿದ್ಯೆ, ಅಮೃತೋದಯ, ಭಾಷಾಪರೀಕ್ಷೆ, ವೀಣಾವಿದ್ಯೆ, ಭೃಂಗಿವಿದ್ಯೆ, ಮಲ್ಲವಿದ್ಯೆ, ಶಸ್ತ್ರವಿದ್ಯೆ, ಧನುರ್ವಿದ್ಯೆ, ಅಗ್ನಿಸ್ತಂಭ, ಜಲಸ್ತಂಭ, ವಾಯುಸ್ತಂಭ, ವಾದ, ವಶ್ಯ, ಅಂಜನಾಸಿದ್ಧಿ, ಘಟಿಕಾಸಿದ್ಧಿ, ಮಂತ್ರ, ತಂತ್ರ, ಸಿದ್ಧಿ, ಇವೆಲ್ಲವ ಕಲಿತಡೇನು? ಚೌಷಷ್ಟಿವಿದ್ಯಾ ಕಳಾಪ್ರವೀಣನೆನಿಸಿಕೊಂಬನಲ್ಲದೆ, ಲಿಂಗವಂತ ನೆನಿಸಿಕೊಂಬುದಿಲ್ಲ. ಲಿಂಗವುಳ್ಳ ಶಿವಭಕ್ತಂಗೆ ಇವರೆಲ್ಲರೂ ಕೂಡಿ ಸರಿಬಾರ ರೆಂದ ನಮ್ಮ ಕಲಿದೇವರ ದೇವನು.

(೧೮). ಲಿಂಗವನರಿತು ಲಿಂಗಾರ್ಚನೆಯ ಮಾಡಿ ಗುರುಲಿಂಗಜಂಗ ಮಕ್ಕೆ ತನು ಮನ ಧನವ ಸವಿಸಿ, ಲಿಂಗವಲ್ಲದ ಅನ್ಯವನರಿದಿರ್ಪ ಮಹಾಮಹಿ ಮನ ನಿಲವು ಸರ್ವಾಂಗಲಿಂಗಮೂರ್ತಿ. ಆತನ ನುಡಿಯೇ ವೇದ, ನಡೆಯೇ ಆಗಮ, ಮಾಡಿತ್ತೇ ಶಾಸ್ತ್ರ, ಹೇಳಿತ್ತೇ ಪುರಾಣ, ಆತನಿದ್ದುದೇ ದೇವಲೋಕ, ಆತನ ದರ್ಶನಸ್ಪರ್ಶನದಿಂದ ಪಾಪಕ್ಷಯ. ಹೀಗಲ್ಲದೆ ಲಿಂಗವನರಿಯದೆ, ಲಿಂಗಾ ರ್ಚನೆಯ ಮಾಡದೆ, ಆವನಾನೊಬ್ಬ ವೇದಾದಿ ಅಷ್ಟಾದಶಪುರಾಣಂಗಳನೋದಿ ಹೇಳಿ ಕೇಳಿದಡೇನೋ, ಗಿಳಿಯೋದಿದಂತೆ? ಸರ್ವಸಂಗ ಪರಿತ್ಯಾಗವಮಾಡಿ, ಅರಣ್ಯದಲ್ಲಿ ಚರಿಸಿದಡೇನೋ, ವನಚರು ವ್ಯಾಧರುಗಳಂತೆ? ಅಶನವ ಬಿಟ್ಟ ಡೇನೋ, ಪರಾಕಿಯಂತೆ? ವಿಷಯವ ಬಿಟ್ಟಡೇನೋ, ಅಶಕ್ತನಪುಂಸಕನಂತೆ? ನಿದ್ರೆಯ ಬಿಟ್ಟರೇನೋ, ಜಾರಚೋರರಂತೆ? ಸಾಮರ್ಥ್ಯಪುರುಷನೆಂದು ಖೇಚ

ರತ್ವದಲ್ಲಿ ಬಂದರೇನೋ, ಪಕ್ಷಿಯಂತೆ? ಜಲದಲ್ಲಿ ಚರಿಸಿದಡೇನೋ, ಮತ್ಸ್ಯಾದಿಗಳಂತೆ? ಭೂಪ್ರದಕ್ಷಣ ಬಂದಡೇನೋ, ಮೃಗಾದಿಗಳಂತೆ? ದಾನಾದಿಗಳ ಕೊಟ್ಟರೇನೋ, ಕ್ಷತ್ರಿಯರಂತೆ? ಅದೆಂತೆಂದೊಡೆ, ಪಯೋಹಾರೇತು ಮಾರ್ಜಾಲಃ ನಗ್ನೋ ಮುಗ್ಧಃ ಪಿಶಾಚವತ್ । ನಿತ್ಯಸ್ನಾನಶ್ಚ ಕಾಕಶ್ಚ ವಾಲ್ಮೀಕೀ ಸರ್ಪಜಾತಯಃ ॥ ತೃಣಂ ಭಕ್ಷ್ಯಂ ತಾ ಪಶವಃ ವನವಾಸೀ ಮೃಗಸ್ತಥಾ । ಏವಚೈತಾನಿ ಕಾರ್ಯಾಣಿ ಸಕರೋತಿ ಹಿ ಪಾರ್ವತೀ ॥ ಎಂದುದಾಗಿ ಅವಸಿದ್ಧಿಗಳಿಂದಲೂ ಫಲವಿಲ್ಲ. ಇಂತು ಏನನೋದಿ, ಏನ ಕೇಳಿ, ಏನ ಹೇಳಿಯೂ ಫಲವಿಲ್ಲ. ಅವ ಭಕ್ತಿಯೊಳಗಲ್ಲ. ಮುಕ್ತಿಗೆ ಸಲ್ಲವು. ಇದನರಿತು ಅವನಾನೊಬ್ಬನು ಲಿಂಗವನರಿದು, ಲಿಂಗಾರ್ಚನೆಯ ಮಾಡಿದಡೆ, ಅದೇ ಚಲ್ವಭಕ್ತಿ, ಅದೇ ಚಲ್ವಮುಕ್ತಿ, ಅದೇ ಸರ್ವಸಿದ್ಧಿ, ಅದೇ ಸರ್ವಕಾರಣವಯ್ಯಾ ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೧೯). ಸಕಲಾಗಮಂಗಳ ಕಲಿತು ಸರ್ವರಿಗೆ ಹೇಳಿ, ತಾ ನಿಃಕರುಣಿಯಾಗಿ, ತ್ರಿವಿಧಮಲಕ್ಕೆ ಹೊರಗಾಗೆಂದು ತಾನೊಳಗಾಗಿ ಬರಿ ಮಾತಿನ ಭಟನಂತೆ, ಅದೇತರರಿಕೆ, ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ?

---

## (೨) ಶರಣನ ಲಿಂಗಾನುಭವವು.

(೧). ಭಕ್ತಿಜ್ಞಾನ ವೈರಾಗ್ಯ ತಪ್ಪದೆ, ಷಟ್‌ಸ್ಥಲ ಮಾರ್ಗದಿರವ ತಪ್ಪದೆ, ಜ್ಞಾನಕ್ರಿಯೆಗಳಲ್ಲಿ ಪ್ರೇಮದಪ್ಪದೆ, ಶರಣಸತಿ ಲಿಂಗಪತಿ ಎಂಬ ಭಾವ ತಪ್ಪದೆ, ಇಷ್ಟ ಪ್ರಾಣ ಭಾವಲಿಂಗದ ಪೂಜೆ ತಪ್ಪದೆ, ಷಡ್ವಿಧಲಿಂಗಂಗಳಲ್ಲಿ ಅರ್ಪಿತ ಅವಧಾನ ತಪ್ಪದೆ, ತೀರ್ಥಪ್ರಸಾದದಲ್ಲಿ ಒಯ್ಯಾರ ತಪ್ಪದೆ, ಮಂತ್ರಂಗಳಲ್ಲಿ ಒಡೆವೆರೆದು, ಲಿಂಗಸಂಧಾನ ತಪ್ಪದೆ, ಹಿಡಿದ ವ್ರತನೇಮಂಗಳಲ್ಲಿ ನೈಷ್ಠೆತಪ್ಪದೆ, ನುಡಿಯಂತೆ ನಡೆವ ಭಾಷೆ ತಪ್ಪದೆ, ದ್ವೈತಾದ್ವೈತವನೂಕಿ, ಬರಿಯ ವೈರಾಗ್ಯವನೊಪ್ಪುಗೊಳ್ಳದೆ, ನಿಜವಿರಕ್ತಿಯ ಹೊಲಬುದಪ್ಪದೆ, ಸದ್ಯನ್ಮುಕ್ತಿಗೆ ಮನವಿಟ್ಟು ಅರ್ಥಿಯಿಂದ ಆಚರಿಸುವರಯ್ಯಾ ನಿಮ್ಮ ಶರಣರು ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೨). ಇಷ್ಟಲಿಂಗದಲ್ಲಿ ತನುವಸವಿಯದೆ, ಪ್ರಾಣಲಿಂಗದಲ್ಲಿ ಮನವಸವಿಯದೆ, ಭಾವಲಿಂಗದಲ್ಲಿ ಧನವಸವಿಯದೆ, ಬರಿದೆ ನಾನು ಜಂಗಮ, ತಾನು

ಜಂಗಮವೆಂದು ತಮ್ಮ ಅಗಮ್ಯವ ನುಡಿದುಕೊಂಡು, ಭಕ್ತಿಯ ಮರೆದು ಯುಕ್ತಿ ಶೂನ್ಯರಾಗಿ, ಮುಕ್ತಿಯ ಹೊಲಬುದಪ್ಪಿ, ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯಂಗಳ ಕಚ್ಚಿ ಮೂತ್ರದ ಕುಳಿಯಲ್ಲಿ ಮುಳುಗಾಡುತಿರ್ಪರಯ್ಯಾ! ಮೂಳ ಹೊಲೆಯರ ನೋಡಲಾಗದಯ್ಯ ಅಖಂಡೇಶ್ವರಾ.

(೩). ಬಹುಕ್ರಿಯೆವಿಡಿಯದೆ, ಬಹುಶಾಸ್ತ್ರಕ್ಕೆ ಮುಖವಾಗದೆ, ಬಹುವ್ಯಾಪಾರದಲ್ಲಿ ತೊಳಲದೆ, ಬಹುಭಾಷೆವಂತನಾಗದೆ, ಹುಸಿ, ಕಳವು, ಪರದಾರ, ಹಿಂಸೆಗೆ ಚಿತ್ತವೆಳಿಸದೆ, ಸುಖದುಃಖಕ್ಕೆ ಚಿಂತಿಸದೆ, ನಿಂದೆಸ್ತುತಿಗೆ ಹಿಗ್ಗಿ ಕುಗ್ಗದೆ, ಹಿಂದು ಮುಂದನೆಣಿಸದೆ, ಹಿರಿಯತನಕ್ಕೆ ಹೋಗದೆ, ಶಿವಜ್ಞಾನ ಸಂಪನ್ನನಾಗಿ, ಶಿವಮಂತ್ರದಲ್ಲಿ ಸುಯಿಧಾನಿಯಾಗಿ, ಶಿವಜ್ಞಾನದಲ್ಲಿ ಪರಾಯಣನಾಗಿ, ಏಕಾಂತವಾಸಿಯಾಗಿ, ಅಂಗಮನದಾಸೆ ಹಿಂದುಳಿದು, ಲಿಂಗನೆನಹು ಮುಂದುಗೊಂಡು, ಶಿವಾಣತಿಯಿಂ ಬಂದ ಪದಾರ್ಥವ ಲಿಂಗಾರ್ಪಿತವಮಾಡಿ, ಲಿಂಗದನಡೆ, ಲಿಂಗದನೋಟ, ಸರ್ವಾಂಗ ಲಿಂಗಭರಿತನಾಗಿ, ಕರ್ಪುರವು ಉರಿಯಪ್ಪಿ ನಿರ್ವಯಲಾದಂತೆ, ತನುವು ಇಷ್ಟಲಿಂಗವನಪ್ಪಿ, ಮನವು ಪ್ರಾಣಲಿಂಗವನಪ್ಪಿ, ಭಾವವು ಅಖಂಡಬಯಲು ಬ್ರಹ್ಮವನಪ್ಪಿ, ತಾನು ತಾನಾದ ಮಹಾಜ್ಞಾನ ಪರಮವಿರಕ್ತನ ಶ್ರೀಪಾದಕ್ಕೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ.

(೪). ದೇಶದೇಶಾಂತರದಲ್ಲಿ ತೊಳಲಿ ಬಳಲಿ, ಕೆಲರ ಹಳಿದು, ಕೆಲರ ಹೊಗಳಿ, ವ್ರಥಾ ಹೋಯಿತ್ತೆನ್ನ ಸಂಸಾರ. ಗಿರಿಯ ಶಿಖರದ ಮೇಲೆ ಲಿಂಗಧ್ಯಾನದಲ್ಲಿ ಮೌನಿಯಾಗಿರಿಸು ಸಕಳೇಶ್ವರಾ.

(೫). ಲಿಂಗಗ್ರಾಹಕ ಶರಣ ಅಂಗಗುಣಕ್ಕೆ ವಿರೋಧಿಯಯ್ಯ. ಜಂಗಮ ಗ್ರಾಹಕ ಶರಣ ಅರ್ಥ ಪ್ರಾಣಾಭಿಮಾನಕ್ಕೆ ವಿರೋಧಿಯಯ್ಯ. ಪ್ರಸಾದಗ್ರಾಹಕ ಶರಣ ಜಿಹ್ವೆಯರುಚಿಗೆ ವಿರೋಧಿಯಯ್ಯ. ಇಂತೀ ತ್ರಿವಿಧ ಗ್ರಾಹಕ ಕೂಡಲಚನ್ನಸಂಗಯ್ಯ ನಿಮ್ಮ ಶರಣ.

(೬). ಸತ್ತು ಚಿತ್ತಾನಂದ ನಿತ್ಯಪರಿಪೂರ್ಣ ಅಖಂಡವೆಂಬ ಲಕ್ಷಣಾಯುಕ್ತನಾದ, ಮಹಾಲಿಂಗವೇ ಪತಿ, ತಾನೇ ಶರಣ ಸತಿ, ಎಂಬ ದೃಢಬುದ್ಧಿ ನಿಶ್ಚಲವಾಗಿರಬೇಕು. ಮತ್ತು ತಾನೇ ಸರ್ವಾಧಾರ ಪರಮಸ್ವತಂತ್ರನೆಂಬ ಭಾವವು

ಇಂಬುಗೊಂಡಿರಬೇಕು. ಅಂಗಭೋಗೋಪಭೋಗಗಳೆಲ್ಲವೂ ಹಿಂಚುಳಿದು, ಲಿಂಗಭೋಗೋಪಭೋಗಗಳೇ ಮುಂದುಗೊಂಡಿರ್ಪನು ಶರಣ ನೋಡಾ. ಅದೆಂತೆಂದೊಡೆ, "ಪತಿರ್ಲಿಂಗ ಸತಿರ್ಭಕ್ತ ಹೃದಯುಕ್ತ ಸ್ವಯಂ ಪ್ರಭುಃ। ಪ್ರಪಂಚ ಸುಖಿಂನಾಸ್ತಿ ಶರಣಸ್ಥಲ ಮುತ್ತಮಂ ॥" ಎಂದುದಾಗಿ, ಇಂತಪ್ಪ ಮಹಾಶರಣರ ಸಂಗದಲ್ಲಿ ಇರಿಸಿ ಸಲಹಯ್ಯ ಎನ್ನ ಅಖಂಡೇಶ್ವರಾ.

(೭). ಕಕ್ಷೆ, ಕರಸ್ಥಲ, ಕಂಠ, ಉತ್ತಮಾಂಗ, ಮುಖಸೆಜ್ಜೆ, ಅಂಗ ಸೋಂಕೆಂಬುವು ಷಟ್‌ಸ್ಥಲದ ದರ್ಶನಾಂಗಗಳಿಗೆ ಬಹಿರಂಗದಲ್ಲಿ ವೇಷಲಾಂಛನ ವಯ್ಯ. ಅಂತರಂಗದಲ್ಲಿ ನಾಲ್ಕು ಸ್ಥಳ, ಬ್ರಹ್ಮರಂಧ್ರ, ಭ್ರೂಮಧ್ಯ, ನಾಸಿಕಾಗ್ರ, ಚೌಕಮಧ್ಯ, ಇಂತೀ ಸ್ಥಾನಂಗಳನರಿಯರಾಗಿ, ಬ್ರಹ್ಮರಂಧ್ರದಲ್ಲಿ ಲಿಂಗಸ್ವಾಯತ, ಭ್ರೂಮಧ್ಯದಲ್ಲಿ ಜಂಗಮಸ್ವಾಯತ, ನಾಸಿಕಾಗ್ರದಲ್ಲಿ ಪ್ರಸಾದಸ್ವಾಯತ, ಚೌಕ ಮಧ್ಯದಲ್ಲಿ ಅನುಭಾವ ಸ್ವಾಯತ, ಅಷ್ಟದಳ ಕಮಲದಲ್ಲಿ ಸರ್ವಸ್ವಾಯತ. ಇದು ಕಾರಣ ಗುಹೇಶ್ವರಾ, ನಿಮ್ಮ ಶರಣರು ಸದಾ ಸನ್ನಿಹಿತರು.

## ಲಿಂಗಾನುಭಾವಿಯ ಸ್ಥಿತಿ.

(೮). ಕೆರೆ ಹಳ್ಳ ಬಾವಿಗಳು ಮೈದೆರೆದರೆ, ಗೊಳ್ಳೆ, ಗೊರಚೆ, ಚಿಪ್ಪು ಗಳ ಕಾಣಬಹುದು. ವಾರುಧಿ ಮೈದೆಗೆದರೆ, ರತ್ನಂಗಳ ಕಾಣಬಹುದು. ನಮ್ಮ ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ, ಲಿಂಗವ ಕಾಣಬಹುದು.

(೯). ಸ್ಫಟಿಕದ ಘಟದೊಳಗೆ ಎತ್ತಿದ ಜ್ಯೋತಿ ಒಳಹೊರಗೊಂದೇ ಸ್ವಯವಾಗಿ ಪ್ರಜ್ವಲಿಸುವಂತೆ, ಎನ್ನೊಳಗಿಪ್ಪ ತನು, ಹೊರಗಿಪ್ಪ ತನು ಒಂದೇ ವಸ್ತುವೆಂದು, ಆದ್ಯಂತವ ಕಾಣಬಂದಿತ್ತು ನೋಡಾ. ಆ ಪರಶಿವತತ್ವವೇ ಶರ ಣನು ತಾನೇ ನೋಡಾ, ಬೇರೊಂದು ಸ್ವರೂಪಲ್ಲ ಕಾಣಾ, ಮಹಾಲಿಂಗ ಗುರು ಶಿವ ಸಿದ್ಧೇಶ್ವರಪ್ರಭುವೇ.

(೧೦). ಕಾಮಧೇನುವಿನಲ್ಲಿ ಕಲ್ಪಿಸಿದ ಸವಿ ಇಪ್ಪುದಲ್ಲದೆ, ಮರ್ತ್ಯದ ಪಶುವಿನಲ್ಲಿ ಉಂಟೇ ಅಯ್ಯ? ಮಹಾಶೇಷನಲ್ಲಿ ಮಾಣಿಕ್ಯ ಪ್ರಭಾವಿಸುತ್ತಿಪ್ಪು ದಲ್ಲದೆ, ಕೆರೆಯೊಳಗಣ ಒಳ್ಳೆಯಲ್ಲಿ ಉಂಟೇ ಅಯ್ಯ? ವಾರಣದ ಕುಂಭಸ್ಥಳ ದಲ್ಲಿ ಮೌಕ್ತಿಕ ಬೆಳಗುತಿಪ್ಪುದಲ್ಲದೆ, ಊರ ಹಂದಿಯಲ್ಲಿ ಉಂಟೇ ಅಯ್ಯ? ಶರಣರ ಮನೋಮಧ್ಯದಲ್ಲಿ ಶಿವನು ಮೂರ್ತಿಗೊಂಡು, ಆ ಶರಣರ ಜಿಹ್ವೆಯ

ಕೊನೆಯ ಮೊನೆಯ ಮೇಲೆ ವಚನವೆಂಬ ಪರಮಾಮೃತವ ಕರೆದು ಕೆಲ ಬಲದ ಗಣಂಗಳಿಗೆ ಸವಿಯ ತೋರಿ, ಆ ಶರಣರಲ್ಲಿ ಪರಿಪೂರ್ಣನಾಗಿಪ್ಪನಲ್ಲದೆ, ದ್ವೈತಾದ್ವೈತಿಗಳೆಂಬ ಶುನಕ ಸೂಕರರಲ್ಲಿ ಉಂಟೇ ಘನಲಿಂಗಿಯ ಮೋಹದ ಚನ್ನ ಮಲ್ಲಿಕಾರ್ಜುನಾ?

(೧೧). ಪೃಥ್ವಿಯಗೂಡಿ ನೆಲನಹನಲ್ಲ. ಅಪ್ಪುವಗೂಡಿ ಜಲನಹನಲ್ಲ. ಅಗ್ನಿಯಗೂಡಿ ಕಿಚ ಹನಲ್ಲ. ವಾಯುವಗೂಡಿ ಗಾಳಿಯಹನಲ್ಲ. ಆಕಾಶವ ಗೂಡಿ ಬಯಲಹನಲ್ಲ. ಆತ್ಮನಗೂಡಿ ಭವಕರ್ಮಿಯಹನಲ್ಲ. ಲಿಂಗವಗೂಡಿ ಲಿಂಗವಹ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.

(೧೨). ಕಾಯಾನುಭಾವಿಗಳು ಕಾಯದಲ್ಲಿಯೇ ಮುಕ್ತರು. ಜೀವಾನು ಭಾವಿಗಳು ಜೀವದಲ್ಲಿಯೇ ಮುಕ್ತರು. ಪವನಾನುಭಾವಿಗಳೆಲ್ಲ ಪವನದಲ್ಲಿಯೇ ಮುಕ್ತರು. ಯೋಗಾನುಭಾವಿಗಳೆಲ್ಲ ಯೋಗದಲ್ಲಿಯೇ ಮುಕ್ತರು. ಇವರ ನೆಂತು ಸರಿ ಎಂಬೆನಯ್ಯ ಲಿಂಗಾನುಭಾವಿಗಳಿಗೆ? ಶಿವಲಿಂಗಪ್ರಕಾಶದಲ್ಲಿ ಸದಾ ಸನ್ನಿಹಿತರು ನಮ್ಮ ಶರಣರು ಕೂಡಲಚನ್ನಸಂಗಮದೇವಾ.

(೧೩). ಪುರುಷನೆಂದು ಕರೆವುತ್ತಿರ್ಪುದು ಜಗವೆಲ್ಲ. ನಾನು ಪುರುಷನ ಲ್ಲವಯ್ಯ! ಅದೆಂತೆಂದೊಡೆ ಹೊರಗಣ ಸಾಕಾರವೇ ನೀನು. ಒಳಗಣ ನಿರಾಕಾ ರವೇ ನಾನು. ಮತ್ತು ಹೊರಗಣ ಸಾಕಾರ ಪುರುಷರೂಪು ನೀನಾಗಿ, ಒಳ ಗಣ ನಿರಾಕಾರವೇ ಸ್ತ್ರೀರೂಪು ನಾನಾಗಿ, ನಿಮಗೆ ರಾಣಿವಾಸವಾದೆನಯ್ಯ ಅಖಂಡೇಶ್ವರಾ.

(೧೪). ಶರಣಭರಿತ ಲಿಂಗ ಎಲ್ಲೆಡೆಯಲ್ಲಿ ಉಂಟು. ಲಿಂಗಭರಿತ ಶರ ಣನ ಪೂರ್ವ ನೋಡಾ. ಗಮನವುಳ್ಳ ಜಂಗಮ ಎಲ್ಲೆಡೆಯಲ್ಲಿ ಉಂಟು. ನಿರ್ಗ ಮನ ಜಂಗಮನಪೂರ್ವ ನೋಡಾ. ಸುಚೈತನ್ಯ ಲಿಂಗಕ್ಕೆ ನಿಜಚೈತನ್ಯ ಜಂಗಮ ಸಾಹಿತ್ಯ ನೋಡಾ. ಈ ಲಿಂಗ ಜಂಗಮದ ಸಕೀಲ ಸಂಯೋಗದಲ್ಲಿ ಪರಿಣಾಮಿ ಕೂಡಲಚನ್ನಸಂಗಾ ನಿಮ್ಮ ಶರಣ.

**ಅರ್ಥ:**—ಅಂಗಭಾವ ಮುಂದುಗೊಂಡು, ಲಿಂಗವ ಭಿನ್ನವಿಟ್ಟು ಅರಿದು ಪೂಜಿಸುವರ ಕಯ್ಯಲ್ಲಿ ಲಿಂಗವಿರ್ದು ಪೂಜೆಗೊಂಡು ಫಲಪದವನು ಕೊಡುತ್ತಿ ಹನು. ಅಂತು ಪೂಜೆಗೊಂಡು ಫಲಪದವ ಕೊಡುತಿಹ ಲಿಂಗ ಎಲ್ಲ ಎಡೆಯಲ್ಲಿ

ಉಂಟು, ಎಂಬುದೀಗ ಶರಣಭರಿತ ಲಿಂಗ ಎಲ್ಲ ಎಡೆಯಲ್ಲಿ ಉಂಟು ಎಂಬ ಶಬ್ದಕ್ಕರ್ಥ. ಮಹಾಘನಲಿಂಗವೇ ಅಂಗವನೊಳಕೊಂಡು, ಅಂಗಭಾವವಳಿದು, ಸರ್ವಾಂಗವೆಲ್ಲ ಲಿಂಗವೆಯಾಗಿರ್ಪ ಲಿಂಗಶರಣನಪೂರ್ವ ಎಂಬುದೀಗ ಲಿಂಗ ಭರಿತ ಶರಣನಪೂರ್ವ ನೋಡಾ ಎಂಬ ಶಬ್ದಕ್ಕರ್ಥ. ಮಹಾಘನಲಿಂಗ ತನ್ನಿಂದ ನ್ಯವಿಟ್ಟು ಅರಿದು ಲಿಂಗಪದವ ಸಾಧಿಸುತ್ತಿಹ ಭಿನ್ನಜ್ಞಾನ ಚರಿತ್ರವನುಳ್ಳ ಜಂಗಮ ಎಲ್ಲ ಎಡೆಯಲ್ಲಿ ಉಂಟು, ಎಂಬುದೀಗ ಗಮನವುಳ್ಳ ಜಂಗಮ ಎಲ್ಲ ಎಡೆಯಲ್ಲಿ ಉಂಟು ಎಂಬ ಶಬ್ದಕ್ಕರ್ಥ. ಸಮ್ಯಜ್ಞಾನದಿಂದೆ ಮಹಾಘನವಸ್ತುವೇ ತಾನೆಂದ ರಿದು, ಅಭಿನ್ನವಿಟ್ಟರಿದು, ಅರಿವಿನ ಗಮನವಿಲ್ಲದೆ, ಮಹಾಘನವಸ್ತುವೇ ತಾನಾ ಗಬಲ್ಲ ಜಂಗಮವಪೂರ್ವ ಎಂಬುದೀಗ ನಿರ್ಗಮನ ಜಂಗಮವಪೂರ್ವ ನೋಡಾ ಎಂಬ ಶಬ್ದಕ್ಕರ್ಥ. ಅಂತಾ ಶರಣ ತನ್ನ ಅರಿವಿನಿಂದ ತನ್ನ ಭಿನ್ನವಿಡದೆ ಅರಿದು ತಾನೆಲ್ಲ ಪರವಸ್ತುವಾಗಿ ಪರಮ ಪರಿಣಾಮದಲಿರ್ಪಾತನು ಶರಣನೆಂಬು ದೀಗ ಈ ಲಿಂಗಜಂಗಮದ ಸಕೀಲ ಸಂಯೋಗದಲ್ಲಿ ಪರಿಣಾಮಿ ಕೂಡಲಚನ್ನ ಸಂಗಾ ನಿಮ್ಮ ಶರಣನೆಂಬ ಶಬ್ದಕ್ಕರ್ಥ.

(೧೫). ಸದಾಚಾರಿಯಾದೊಡೆ, ಉಪ್ಪರಗುಡಿ, ಸಿಂಧುಪತಾಕೆ, ಒಬ್ಬರಿ ಗೊಬ್ಬರು ಶರಣೆಂಬುದೇ ಸರ್ವ ತೀರ್ಥ. ಆ ಭಕ್ತನ ದೇಹವೇ ತ್ರಿಕೂಟದ ಶಿವಾಲಯ. ಕಾಲೇ ಕಂಭ, ಶಿರವೇ ಸುವರ್ಣದ ಕಳಶ, ಶಿವಾಚಾರವೇ ಪೌಳಿ, ವಿಭೂತಿಯ ಧವಳಿಸಿ, ಪರದೈವವ ಹೊಗಳಿಸದೆ, ಪ್ರಣಮ ಪಂಚಾಕ್ಷರಿಯ ಗುಡಿ ಯ ದ್ವಾರವಾಟ ಒಪ್ಪುತ್ತಿದೆ. ವಿನಯವೇ ಅಗ್ಗಣಿ, ಸಜ್ಜನವೇ ಮಜ್ಜನ, ಸದಾ ನಂದ ಹಿತವೇ ಲಿಂಗಪೂಜೆ, ಸತ್ಯವೇ ಅಡ್ಡಣಿಗೆ, ಸಮತೆ ಹರಿವಾಣ, ಮನವೇ ಮೊಸಲು, ಗುರುವು ಲಿಂಗವಾರೋಗಣೆಯ ಮಾಡುತ್ತಿರಲು, ಹರುಷವೇ ಹಸ್ತ ಮಜ್ಜನ, ಪ್ರೀತಿಯೇ ಕರ್ಪುರದ ವೀಳ್ಯ, ಕಲಿತನವೇ ಜಾಗಟೆ, ವಿರಕ್ತಿಯೇ ಮದ್ದಳೆ, ಸಂಪ್ರದಾಯವೇ ಗೀತ, ಇದುಕಾರಣ ಕೂಡಲಚನ್ನಸಂಗಯ್ಯ ನಿಮ್ಮ ಶರಣರು ಸರ್ವಾಂಗಲಿಂಗಿಗಳು.

---

## (೩) ಶರಣನ ಸಾಮರಸ್ಯವು.

(೧). ಪೃಥ್ವಿಯ ಗುಣವ ಅಪ್ಪು ನುಂಗಿತ್ತಾಗಿ, ಪೃಥ್ವಿಯ ಗುಣವಿಲ್ಲ. ಅಪ್ಪುವಿನ ಗುಣವ ಅನಲ ನುಂಗಿತ್ತಾಗಿ, ಅಪ್ಪುವಿನ ಗುಣವಿಲ್ಲ. ಅನಲನ ಗುಣವ

ಅನಿಲ ನುಂಗಿತ್ತಾಗಿ, ಅನಲನ ಗುಣವಿಲ್ಲ. ಅನಿಲನ ಗುಣವ ಆಕಾಶ ನುಂಗಿತ್ತಾಗಿ, ಅನಿಲನ ಗುಣವಿಲ್ಲ. ಆಕಾಶದ ಗುಣವ ತನ್ನನೇ ನುಂಗಿತ್ತಾಗಿ, ಆಕಾಶದ ಗುಣವಿಲ್ಲ. ಇದುಕಾರಣ ಐದರ ಗುಣದಲ್ಲಿ ಅರ್ಪಿಸಿ, ಮುಕ್ತಿಯ ಕಂಡೆಹೆನೆಂಬ ನಿಷ್ಠೆ ನಿಮಗೆಲ್ಲಿಯದೋ? ಹೊಯ್ದಿರಿಸಿದ ಹೊಯ್ಲಿನಂತೆ, ಭೋಗಿಸಿಹೆನೆಂದಡೆ ಕರ್ತೃತ್ವವಿಲ್ಲ. ದರುಶನವ ಹೊತ್ತು ತಿರುಗುವದಕ್ಕಲ್ಲದೆ, ಜ್ಞಾನಕ್ಕೆ ಸಂಬಂಧಿಗಳಲ್ಲ. ಐದರ ಗುಣವಡಿಗಿ, ಮೂರರ ಗುಣ ಮುಗಿದು, ಆರರ ಗುಣ ಹಾರಿ, ಎಂಟರ ಗುಣದ ತೆಂಟತನವ ಬಂಧಿಸಿ, ತೋರುವದಕ್ಕೆ ಮುನ್ನವೇ ಮನ ಜಾರಿ ನಿಂದ ಮತ್ತೆ ಮೀರಲಿಲ್ಲವಾಗಿ, ಸ್ವಯ ಚರ ಪರ ತ್ರಿವಿಧವನರಿದು ಹೊರಗಾಗಿ ಮೂರು ಮಾಟದ ಬೆಡಗನರಿದು ವಿಚಾರಿಸದೆ ಉದರಘಾತಕತನಕ್ಕೆ ಹೊಟ್ಟೆ ಹೊರಕರೆಲ್ಲ ಜಂಗಮವೇ? ಅಂತಲ್ಲ, ನಿಲ್ಲಿರಣ್ಣಾ. ನೀನೇ ಲಿಂಗಜಂಗಮವಾಗ ಬಲ್ಲಡೆ ನಾನೆಂಬುದ ವಿಚಾರಿಸಿಕೊಳ್ಳಿರಣ್ಣಾ. ನೀವು ಪೂಜೆಯ ಮಾಡಿಸಿಕೊಂಬುದಕ್ಕೆ ವಿವರ. ಪೂಜೆಯ ಮಾಡುವ ಭಕ್ತಂಗೆ ಭಾರಣೆಯ ವಿದ್ಯೆಯ ಹೊತ್ತ ವಿಧಾಂತನಂತೆ ಇರಬೇಕು. ಜಲವನಂಬಿದ ಜಲಚರನಂತಿರಬೇಕು. ಇಂತಿವೆಲ್ಲರ ಕಳೆದುಳಿದು ಆಚಾರಲಿಂಗ ಮೂರ್ತಿ ತಾನಾಗಿ ನಿಂದಾತನೇ ಕಾಣಾ ನಿಷ್ಕಳಂಕಮಲ್ಲಿಕಾರ್ಜುನಾ.

**ಅರ್ಥ:**—ಚಿತ್‌ಪ್ರಥ್ವಿಯೇ ಅಂಗವಾದ ಭಕ್ತನ ಶ್ರದ್ಧಾಭಕ್ತಿಯನು ಚಿದಪ್ಪು ಅಂಗವಾದ ಮಹೇಶ್ವರನ ನೈಷ್ಠಿಕಾಭಕ್ತಿ ಒಳಕೊಂಡಿತ್ತಾಗಿ, ಚಿತ್ ಪೃಥ್ವಿಯಂಗವಾದ ಭಕ್ತನ ಶ್ರದ್ಧಾ ಭಕ್ತಿ ಇಲ್ಲ. ಆ ಶ್ರದ್ಧಾ ಭಕ್ತಿಯೇ ನೈಷ್ಠಿಕಾ ಭಕ್ತಿಯಲ್ಲಡಗಲು ಭಕ್ತನೇ ಮಹೇಶ್ವರನಲ್ಲಿ, ಆಚಾರಲಿಂಗವೇ ಗುರುಲಿಂಗದಲ್ಲಿ ಅಡಗಿಪ್ಪುದು. ಚಿದಪ್ಪುವೇ ಅಂಗವಾದ ಮಾಹೇಶ್ವರನ ನೈಷ್ಠಿಕಾ ಭಕ್ತಿಯನು ಚಿದಗ್ನಿಯೇ ಅಂಗವಾದ ಪ್ರಸಾದಿಯ ಸಾವಧಾನ ಭಕ್ತಿಯೊಳಕೊಂಡಿತ್ತಾಗಿ, ಚಿದಪ್ಪುವೇ ಅಂಗವಾದ ಮಾಹೇಶ್ವರನ ನೈಷ್ಠಿಕಾ ಭಕ್ತಿ ಇಲ್ಲ. ಆ ನೈಷ್ಠಿಕಾ ಭಕ್ತಿಯೇ ಸಾವಧಾನ ಭಕ್ತಿಯಲ್ಲಡಗಲು, ಮಾಹೇಶ್ವರನೇ ಪ್ರಸಾದಿಯಲ್ಲಿ, ಗುರುಲಿಂಗವೇ ಶಿವಲಿಂಗದಲ್ಲಿ ಅಡಗಿಪ್ಪುದು. ಚಿದಗ್ನಿಯೇ ಅಂಗವಾದ ಪ್ರಸಾದಿಯ ಸಾವಧಾನ ಭಕ್ತಿಯನು ಚಿದ್ವಾಯುವೇ ಅಂಗವಾದ ಪ್ರಾಣಲಿಂಗಿಯ ಅನುಭಾವ ಭಕ್ತಿ ಒಳಕೊಂಡಿತ್ತಾಗಿ, ಚಿದಗ್ನಿಯೇ ಅಂಗವಾದ ಪ್ರಸಾದಿಯ ಸಾವಧಾನ ಭಕ್ತಿ ಇಲ್ಲ. ಆ ಸಾವಧಾನ ಭಕ್ತಿ ಅನುಭಾವ ಭಕ್ತಿಯ

ಲ್ಲಡಗಲು, ಪ್ರಸಾದಿಯು ಪ್ರಾಣಲಿಂಗಿಯಲ್ಲಿ ಶಿವಲಿಂಗವು ಜಂಗಮದಲ್ಲಿ ಅಡಗಿಪ್ಪುದು. ಚಿದ್ವಾಯುವೇ ಅಂಗವಾದ ಪ್ರಾಣಲಿಂಗಿಯ ಅನುಭಾವ ಭಕ್ತಿಯ ಚಿದಾಕಾಶವೇ ಅಂಗವಾದ ಶರಣನ ಆನಂದಭಕ್ತಿಯೊಳಕೊಂಡಿತ್ತಾಗಿ, ಚಿದ್ವಾಯುವೇ ಅಂಗವಾದ ಪ್ರಾಣಲಿಂಗಿಯ ಅನುಭಾವಭಕ್ತಿ ಇಲ್ಲ. ಆ ಅನುಭಾವಭಕ್ತಿ ಆನಂದಭಕ್ತಿಯಲ್ಲಡಗಲು, ಪ್ರಾಣಲಿಂಗಿಯೇ ಶರಣನಲ್ಲಿ, ಜಂಗಮಲಿಂಗವೇ ಪ್ರಸಾದಲಿಂಗದಲ್ಲಿ ಅಡಗಿಪ್ಪುದು. ಚಿದಾಕಾಶವೇ ಅಂಗವಾದ ಶರಣನ ಆನಂದಭಕ್ತಿ ತನ್ನನು ಐಕ್ಯನ ಸಮರಸ ಭಕ್ತಿ ಒಳಕೊಂಡಿತ್ತಾಗಿ, ಆ ಚಿದಾಕಾಶವೇ ಅಂಗವಾದ ಶರಣನ ಆನಂದಭಕ್ತಿ ಇಲ್ಲ. ಆ ಆನಂದಭಕ್ತಿ ಸಮರಸಭಕ್ತಿಯಲ್ಲಡಗಲು ಶರಣನೇ ಐಕ್ಯನಲ್ಲಿ ಪ್ರಸಾದ ಲಿಂಗವೇ ಮಹಾಲಿಂಗದಲ್ಲಿ ಅಡಗಿಪ್ಪುದು. ಈ ಐಕ್ಯನು ಮಹಾಲಿಂಗದಲ್ಲಿ ಅಡಗಿದ ಕಾರಣ ಪಂಚೇಂದ್ರಿಯಂಗಳಲ್ಲಿ ಬರಲ್ಪಟ್ಟ ಪಂಚವಿಷಯಂಗಳನು ಪಂಚವಿಧಭಕ್ತಿಯಿಂದ ಸಮರ್ಪಿಸಿ, ಆ ಪಂಚಪ್ರಸಾದವ ಸ್ವೀಕರಿಸಿ ಮೋಕ್ಷವ ಡೆದೆನೆಂಬ ನಿಷ್ಠೆ ನಿಮಗಿಲ್ಲ. ದೋಸೆಯ ಹೊಯ್ದು ಕಡೆಗಿರಿಸಿದ ಹಂಚಿನ ಹಾಗೆ ಮಹಾಲಿಂಗದಲ್ಲಿ ಸಮರಸವಾದ ಶರಣನ ಹಾಗೆ, ಪಂಚೇಂದ್ರಿಯಂಗಳಲ್ಲಿ ಪಂಚವಿಧಲಿಂಗವ ಸಮರಸವ ಮಾಡಿಕೊಂಡು ಪಂಚವಿಷಯುಗಳನರ್ಪಿಸಿ ಆ ಪಂಚಪ್ರಸಾದವನನುಭವಿಸಿಹೆನೆಂದಡೆ ಜ್ಞಾನವಿಲ್ಲ, ಸ್ವತಂತ್ರವಿಲ್ಲ. ಲಾಂಛನ ಧಾರಕರಾಗಿ ಆಶೆ ಮುಂದುಗೊಂಡು ಚರಿಸುವದಕ್ಕೆ ಕಾರಣವಲ್ಲದೆ ಮಹಾಜ್ಞಾನ ವಿಡಿದಾಚರಿಸಿ, ಮಹಾಲಿಂಗದಲ್ಲಿ ಸಮರಸವಾಗುವ ಜ್ಞಾನ ಜಂಗಮಮೂರ್ತಿಗ ಳಲ್ಲಿ ಪಂಚೇಂದ್ರಿಯಂಗಳಲ್ಲಿ ಪಂಚವಿಧ ಲಿಂಗಸಂಬಂಧವ ಮಾಡಿಕೊಂಡು ಆಚರಿ ಸುವ ಆಚರಣೆಯು ನಿಷ್ಪತ್ತಿಯಾಗಿ, ತ್ರಿವಿಧಾಂಗದಲ್ಲಿ ತ್ರಿವಿಧಲಿಂಗ ಸಂಬಂಧವ ಮಾಡಿಕೊಂಡು ಆಚರಿಸುವ ಆಚರಣೆಯು ನಿಷ್ಪತ್ತಿಯಾಗಿ, ಷಡಾಧಾರಚಕ್ರಂಗಳಲ್ಲಿ ಷಡ್ವಿಧಲಿಂಗ ಸಂಬಂಧವ ಮಾಡಿಕೊಂಡು ಆಚರಿಸುವ ಆಚರಣೆಯು ನಿಷ್ಪತ್ತಿ ಯಾಗಿ ಅಷ್ಟಮದಂಗಳ ವರ್ತನೆಯ ಲೆಂಡತನವ ನಷ್ಟವ ಮಾಡಿ, ಅಷ್ಟವಿಧ ಭಕ್ತಿಯಾಗಿ ಅಳವಡಿಸಿಕೊಂಡು ಆಚರಿಸುವಲ್ಲಿ, ಆ ಅಷ್ಟಮದಂಗಳ ವರ್ತನೆ ಕಾಣಿಸುವದಕ್ಕೆ ಮೊದಲೆ ಮನೋಪ್ರಪಂಚಕ್ಕೆ ವಿಲಕ್ಷಣವಾಗಿ, ಲಿಂಗದಲ್ಲಿ ಕೂಡಿದ ಬಳಿಕ ಆ ಅಷ್ಟಮದಂಗಳು ಮನವಮೀರಿ ಚರಿಸಲಿಲ್ಲವಾಗಿ, ಸ್ವಯ ಸ್ಥಲ ಚರಸ್ಥಲ ಪರಸ್ಥಲವೆಂಬ ತ್ರಿವಿಧಸ್ಥಲದ ಆಚರಣೆಯನು ತಿಳಿದು ಉಪಾಧಿ

ಲಾಂಛನಕ್ಕೆ ವಿಲಕ್ಷಣವಾಗಿ, ಉಪಾಧಿ, ನಿರುಪಾಧಿ ಸಹಜ ಮಾಟದ ಕುಶಲತ್ವವನು ಜ್ಞಾನಗುರು ಬೋಧೆಯಿಂದ ತಿಳಿದು ಇವರು ಉಪಾಧಿಕರು, ನಿರುಪಾಧಿಕರು, ಸಹಜ ಮಾಟವನುಳ್ಳವರು ಎಂದು ಪರಾಂಬರಿಸದೆ, ಹೊಟ್ಟೆ ಹೊರಕತನಕ್ಕೆ ಒಡಲು ಹೊರಕರೆಲ್ಲ ಜಂಗಮವೇ? ಅಲ್ಲ. ಜ್ಞಾನಜಂಗಮಸ್ಥಲವು ಹಾಗಲ್ಲ. ನಿಲ್ಲಿರಣ್ಣಾ. ನೀವೇ ಶಿವಜಂಗಮಮೂರ್ತಿಗಳಾಗಬಲ್ಲಡೆ, ನಾವು ಸ್ವಯಸ್ಥಲ, ಚರಸ್ಥಲ, ಪರಸ್ಥಲದೊಳಗೆ ಇಂಥ ಆಚರಣೆಯುಳ್ಳವರು ಎಂದು ನಿಮ್ಮಾಚರಣೆಯನು ಪರಾಂಬರಿಸಿಕೊಳ್ಳಿ. ನೀವು ಭಕ್ತರಿಂದ ಭಕ್ತಿಯ ಮಾಡಿಸಿಕೊಂಬುದಕ್ಕೆ ವಿಚಾರವು ಹೇಗೆಂದಡೆ, ಭಕ್ತಿಯ ಮಾಡುವ ಭಕ್ತಂಗೆ ಭಾರಣೆಯ ವಿದ್ಯೆಯನು ತಳೆದಾಡುವ ಪದಾಂತನು ಸರ್ವಭಾರವನು ತಾನೇ ಹೊತ್ತಿಪ್ಪನು ಎಂಬ ಹಾಗೆ ಆ ಭಕ್ತನಲ್ಲಿ ಉಂಟಾದ ಗುಣಂಗಳನು ತಾನೇ ಒಳಕೊಂಡು ಭಕ್ತಿಯ ಕೈಕೊಳ್ಳುತ್ತಿರಬೇಕು. ಜಲವ ಗ್ರಹಿಸಿದ ಮೀನಿನ ಸಂಚಾರವು ಕುರುಹುಗಾಣಿಸದಿರುವ ಹಾಗೆ ತಾನು ಉಪಾಧಿ, ನಿರುಪಾಧಿ, ಸಹಜ ಮಾಟಂಗಳಲ್ಲಿ ಕುರುಹು ಹಿಡಿಸಿಕೊಳ್ಳದಿರಬೇಕು. ಒಬ್ಬಾತ್ಮನ ಎದೆಯ ಮೇಲೆ ನಿಂದು ಕಾಣಿಸುವ ಪಶುವೆಂಬುದು ತನ್ನ ಭಾರವ ಅವನ ಮೇಲೆ ಬಿಡದೆ ತನ್ನಲ್ಲಿಯೇ ಅಡಗಿಸಿಕೊಂಡಿರುವದು ಎಂಬ ಹಾಗೆ ತನ್ನಲ್ಲಿ ಹುಟ್ಟಿದ ಕೋಪ ಕ್ರೋಧಾದಿ ಗುಣಂಗಳನು ತನ್ನಲ್ಲಡಗಿಸಿಕೊಂಡಿರಬೇಕು. ಈ ಪ್ರಕಾರವಾದ ಉಪಾಧಿಗುಣಂಗಳೆಲ್ಲವನು ಬೇರ್ಪಡಿಸಿ ನಿರುಪಾಧಿಯುಲ್ಲವಶೇಷವಾಗಿ ಜ್ಞಾನ ಜಂಗಮಮೂರ್ತಿಯೇ ತಾನಾಗಿ ನೆಲೆಗೊಂಡಾತನೇ ಶಿವನೆಂಬುದರ್ಥ.

(೨). ನಿನ್ನ ಇರವು, ನಿನ್ನಿನ ದಿವಸ ಇರವು ಮೃತ್ತಿಕೆಯ ಚಕ್ರದಂತೆ. ನಿನ್ನಿನ ದಿವಸ ಇರವು ತಮಸಾರದ ಹಿಮದಾಶ್ರಯದಂತೆ. ನಿನ್ನಿನ ದಿವಸ ಇರವು ಲೋಹದವಹ್ನಿಯ ಸಂಗದಂತೆ. ಇದಾರಿಗೂ ಅಸಾಧ್ಯ ನೋಡಾ, ಅಸಮಾಕ್ಷ, ಅನಾಮಯ, ನಿಷ್ಕಳಂಕ ಮಲ್ಲಿಕಾರ್ಜುನಾ.

**ಅರ್ಥ**:—ಲಿಂಗದ ಸ್ವರೂಪವ ಆ ಲಿಂಗವನಂಗದಲ್ಲಿ ಸಂಬಂಧವ ಮಾಡಿಕೊಂಡು, ಸರ್ವಾಂಗಲಿಂಗ ಸಂಬಂಧವ ಮಾಡಿಕೊಂಡು ಚರಿಸುವ ಶರಣನ ಸ್ವರೂಪ ಹೇಗೆಂದಡೆ, ಕುಲಾಲನು ತಿಗರಿಗೆ ಮಣ್ಣಮಾಡಿ, ಕೋಲಿನಿಂದ ತಿರುಹಿ, ಮನದಲ್ಲಿ ನೆನೆದು, ಕೈಯ್ಯಲ್ಲಿ ಹಿಡದಲ್ಲಿ ಹಲವು ರೂಪಿನ ಭಾಂಡಗಳಾಗುವ ಹಾಗೆ, ಶರಣನು ಲಿಂಗಸಂಬಂಧವ ಮಾಡಿಕೊಂಡು ಚರಿಸುವಲ್ಲಿ ಆ ಲಿಂಗವು

ತ್ರಿವಿಧಾಂಗದಲ್ಲಿ ತ್ರಿವಿಧಲಿಂಗ, ಷಡ್ವಿಧಾಂಗದಲ್ಲಿ ಷಡ್ವಿಧಲಿಂಗ, ಮೂವತ್ತಾರಂಗ ದಲ್ಲಿ ಮೂವತ್ತಾರು ಲಿಂಗವಾಗಿ ಸಂಬಂಧವಾಗಿಪ್ಪದು. ಅಂಗದಲ್ಲಿ ಲಿಂಗ ಸಂಬಂಧವ ಮಾಡಿಕೊಂಡು ಸಕಲ ಪದಾರ್ಥವ ಲಿಂಗಕ್ಕರ್ಪಿಸಿ, ಆ ಪ್ರಸಾದವ ಸ್ವೀಕರಿಸುವ ಶರಣನ ನಿಲುಕಡೆಯು ವೃಕ್ಷದ ಬುಡಕ್ಕೆ ನೀರನೆರೆದಲ್ಲಿ ಆ ಉದಕ ಸಾರವು ಎಲೆ, ಹೀಚು, ಕಾಯಿ, ಹಣ್ಣುಗಳೊಳಗೆಲ್ಲ ವೇಧಿಸಿಕೊಂಡಿರುವ ಹಾಗೆ, ಸಕಲ ಪದಾರ್ಥವ ಲಿಂಗಕ್ಕರ್ಪಿಸಿ, ಆ ಲಿಂಗಪ್ರಸಾದವ ಸ್ವೀಕರಿಸುವ ಶರಣನ ಪ್ರಸಾದ ತೃಪ್ತಿಯು ತ್ರಿವಿಧಲಿಂಗ, ಷಡ್ವಿಧಲಿಂಗ, ಮೂವತ್ತಾರು ಲಿಂಗಂಗ ಳೆಲ್ಲಕ್ಕು ತೃಪ್ತಿಯಾಗುತ್ತಿಹುದು. ಸುವರ್ಣಕ್ಕೂ ಆಭರಣಂಗಳಿಗೂ ಭಿನ್ನವಿಲ್ಲದಿ ರುವ ಹಾಗೆ, ಕಾದ ಕಬ್ಬುನಕ್ಕೂ ಅಗ್ನಿಗೂ ಭಿನ್ನವಿಲ್ಲದಿರುವ ಹಾಗೆ, ಶರ ಣಂಗೂ ಲಿಂಗಕ್ಕೂ ಭಿನ್ನವಿಲ್ಲದಿಪ್ಪದು. ಇಂತಪ್ಪಾಚರಣೆ ಎಲ್ಲಕ್ಕೂ ಅಶಕ್ಯ ಕಂಡ್ಯಾ. ಬೆಸನಾದ ಲೋಚನವನುಳ್ಳ ಸಂಸಾರಾದಿ ರೋಗರಹಿತವಾದ ಎಲೇ ಶಿವನೇ ಎಂಬುದರ್ಥ.

(೩). ನೀರೊಳಗಿನ ಕಿಚ್ಚಿಗೆ ನೀರೇ ತಾಯಿ. ಕಲ್ಲೊಳಗಣ ಕಿಚ್ಚಿಗೆ ಕಲ್ಲೇ ತಾಯಿ. ಮರನೊಳಗಣ ಕಿಚ್ಚಿಗೆ ಮರನೇ ತಾಯಿ. ಅರಿವು ಹೊರಹೊ ಮ್ಮಿದಾಗ ತಾಯ ತಿಂದು, ತಾವು ತಲೆದೋರುವಂತೆ, ಕುರುಹಿಂದ ಅರಿವನರಿತು, ಅರಿವು ಕುರುಹು ನಷ್ಟವಮಾಡಿ ಸಂದಲ್ಲಿ ಐಘಟದೂರ ರಾಮೇಶ್ವರಲಿಂಗವು ಅಂಗವರಿತು ನಿಂದನಿಲವು.

(೪). ಉಂಕಿಯ ನಿಗುಚಿ, ಸರಿಗೆಯ ಸಮಗೊಳಿಸಿ, ಸಮಗಾಲನಿಕ್ಕಿ ಅಣಿಯೊಳು ಮೆಟ್ಟದೆ. ಹಿಡಿದ ಲಾಳಿಯ ಮುಳ್ಳು ಕಂಡಿಕೆಯ ನುಂಗಿತ್ತು. ಈ ಸೀರೆಯುನೆಯ್ದವ ನಾನೋ ನೀನೋ ರಾಮನಾಥಾ?

**ಅರ್ಥ:—** ಸುಜ್ಞಾನೋದಯವಾದ ಶರಣನು ದೇಹಪ್ರಪಂಚ ಬೇರ್ಪ ಡಿಸಿ ಆಚಾರಾಂಗಸ್ವರೂಪವನೆಯ್ದಿಸಿದನು. ಆಚಾರಾಂಗದಲ್ಲಿ ಶ್ರದ್ಧೆಯನಿಂಬು ಗೊಳಿಸಿದನು. ಜ್ಞಾನಕ್ರಿಯೆಗಳಲ್ಲಿ ಸ್ವಸ್ಥನಾಗಿ ಸಂಕಲ್ಪ ವಿಕಲ್ಪಂಗಳನು ಧ್ವಂಸ ಮಾಡಿ ತುಳಿದನು. ತಾನಂಗದಲ್ಲಿ ದೃಢವಿಡಿದ ಇಷ್ಟಲಿಂಗದ ಮೇಲಣ ನೈಷ್ಠೆ ಯನುಳ್ಳ ಮನಸ್ಸು ಪ್ರಾಣಲಿಂಗವನವಗ್ರಹಿಸಿತ್ತು. ಈ ಪ್ರಾಣಲಿಂಗವೇ ತನು ತ್ರಯ ಷಡಿಂದ್ರಿಯ ಮೂವತ್ತಾರು ತತ್ವ ಪ್ರತ್ಯೇಕ ಪ್ರತ್ಯೇಕ ತತ್ವಂಗಳಲ್ಲಿ ತ್ರಿವಿಧ

ಲಿಂಗ, ಷಡ್ವಿಧಲಿಂಗ, ಮೂವತ್ತಾರುಲಿಂಗ, ಪ್ರತ್ಯೇಕ ಲಿಂಗವಾಗಲು, ಆ ಸರ್ವಾಂಗಲಿಂಗ ಸಂಬಂಧವನುಂಟು ಮಾಡಿದಾತ ಶರಣನೋ, ಲಿಂಗವೋ, ಎಂಬಲ್ಲಿ ಎರಡರ ಸಮರಸದಿಂದಾಯಿತ್ತೆಂಬುದರ್ಥ.

## ಸಾಮರಸ್ಯವುಳ್ಳ ಶರಣನ ಸ್ಥಿತಿ.

(೫). ಲಿಂಗಾಭಿಮಾನಿಗೆ ಅಂಗಾಶ್ರಯವಿಲ್ಲ ನೋಡಾ! ಬಂದುದೇ ಪರಿಣಾಮ. ನಿಂದುದೇ ನಿವಾಸ. ಅದು ಇದು ಎಂಬುದಿಲ್ಲ ಕೂಡಲಚನ್ನಸಂಗನ ಶರಣರಿಗೆ.

(೬). ನಿಜವ ಬಲ್ಲವಂಗೆ ಜಲವು ಸರಿ, ನೆಲನು ಸರಿ. ಅರಿದು ನುಡಿಯುವಂಗೆ ಜಗವು ಸರಿ, ಸಮಯವು ಸರಿ. ಎನಗಾಮಿಥ್ಯವಿಲ್ಲ ಗುಹೇಶ್ವರಲಿಂಗವು ಪರಿಪೂರ್ಣವಾದಕಾರಣ.

(೭). ಕುಲವಳಿದು, ಛಲವಳಿದು, ಮತ್ಸರವಳಿದು, ಮದವಳಿದು, ಆತ್ಮಕ್ಕೆ ಜೀವವಳಿದು, ಸರ್ವಾಹಂಕಾರವಳಿದು, ನಿಜ ಉಳಿದು, ಲಿಂಗಜಂಗಮವೆಂಬ ಶಬ್ದವಿಡಿದು ಸಾಧ್ಯವಾಯಿತ್ತು ನೋಡಾ. ತಾನಳಿದು ತಾನುಳಿದು, ಸಹಜ ನಿಜ ಪದವಿಯಲ್ಲಿ ಕೂಡಲ ಚನ್ನಸಂಗನಲ್ಲಿ ತಾನು ತಾನಾದಾ.

(೮). ಘನಗಂಭೀರ ವಾರುಧಿಯೊಳಗೆ ತೋರುವ ತೆರೆಗಳು ಆ ವಾರುಧಿಯ ಬಿಟ್ಟು ತೋರಬಲ್ಲುವೇ? ತೋರಿದಗೆ, ಆ ವಾರುಧಿ ತನ್ನ ತಾ ಜರಿದುಕೊಂಬುದೇ? ಜಗದೊಳಗೆ ಕೂಡಿ ಪರಿಪೂರ್ಣವಾದ ಬಳಿಕ, ಇದಿರ ನೋಡಿ, ಜರಿದು ನುಡಿವ ಠಾವಾವುದು ಹೇಳಯ್ಯ? ಕೂಡಲಸಂಗಮದೇವಯ್ಯ, ನಿಮ್ಮ ನೀವು ಪರಿಣಾಮಿಸಿಕೊಂಬುದಲ್ಲದೆ, ಭಿನ್ನವ ಮಾಡಲುಂಟೇ?

(೯). ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ, ತೆರಹಿಲ್ಲದ ಸಂಭಾಷಣೆಯ ಸುಖವು, ತೆರಹಿಲ್ಲದ ನಂಬುಗೆ, ತೆರಹಿಲ್ಲದ ಸ್ವಾನುಭಾವ ಸುಖವು, ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ ಕೂಡಲಸಂಗಮದೇವಾ ನಿಮ್ಮ ಶರಣರಿಗೆ.

(೧೦). ಜಾಲಗಾರಂಗೆ ಸುವರ್ಣದ ವಳಿಯನರಿದು ತೊಳೆಯಬೇಕು. ಬಲೆಗಾರಂಗೆ ಮತ್ಸ್ಯದ ಬೆಂಬಳಿಯನರಿದು, ಕಲ್ಲಿಯ ಇಳಿಯು ಬಿಡಬೇಕು. ಶಬರಂಗೆ ಸಂಭ್ರಮವ ಬಿಟ್ಟು ತರು, ಲತೆ, ಪರ್ಣಗಳಂತಿರಬೇಕು. ಇಂತೀ ಹೊಲಬಿನ ತೆರನಂತೆ, ಗುಣವಿವರವನರಿದು, ಆರಾರ ಇರವಿನ ತೆರನರಿದು ಅನುಸರಿಸ

ಲಾಗಿ, ವಿರತಿಗಳ ನಿಜವನರಿದು, ವೇಷಗಳ್ಳರ ನಿಹಿತವ ನೋಡಿ, ವಂಚಕರ ಪರಿಹಾಸಕರ ನೀತಿಯ ತಿಳಿದು, ಮತ್ತಾವ ರೀತಿ ನೀತಿಗಳಲ್ಲಿಯೂ ಮನತಾರದೆ, ತನ್ನ ಸುನೀತಿಯನೆ ಬೀರಿ, ತನ್ನ ಸದ್ಗುಣರೀತಿಯನೆ ತೋರಿ, ತನ್ನ ಸದ್ಗುಣವಾಸನೆಯ ತೀವಿ, ಸತ್ಕುಲ ಭಕ್ತಿಯನೆ ತನ್ನ ಸತ್ಯವನೆ ಸಾರಿ, ಇಪ್ಪಾತ ತ್ರಿವಿಧದವನಲ್ಲ, ಅರಿಷಡ್ವರ್ಗಂಗಳೊಳು ನಿಲ್ಲ, ಪ್ರಪಂಚೇಂದ್ರಿಯಂಗಳ ಸಂಚಿನ ಸುಖದವನಲ್ಲ, ಮಿಕ್ಕಾದ ಬಹುವಿಷಯದ ಗೊಂಚಲ ತೊಂಬೆಯುವನಲ್ಲ, ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಳಿಕಾ ವಿಮಲ ರಾಜೇಶ್ವರಲಿಂಗವು ತಾನು ತಾನೇ.

(೧೧). ಮಠವೇಕೋ, ಪರ್ವತವೇಕೋ, ಜನವೇಕೋ, ನಿರ್ಜನವೇಕೋ, ಚಿತ್ತ ಸಮಾಧಾನವುಳ್ಳ ಶರಣಂಗೆ? ಮತ್ತೆ ಹೊರಗಣ ಚಿಂತೆ, ಧ್ಯಾನ, ಮೌನ, ಜಪತಪವೇಕೋ ತನ್ನ ತಾನರಿದ ಶರಣಂಗೆ ಗುಹೇಶ್ವರಾ?

(೧೨). ಕುಲವನೋಡದೆ, ಛಲವ ನೋಡದೆ, ನಿಲವನೋಡದೆ ಕೂಡಿದ ಬಳಿಕ, ಅಲ್ಲಿ ಹೆಚ್ಚು ಕುಂದನರಸಲುಂಟೇ? ಮುಂದುವರಿದು, ಜಂಗಮಕ್ಕೆ ನಿಮ್ಮ ಕಾರುಣ್ಯವನುಪದೇಶಮಾಡಿದ ಬಳಿಕ, ಬಂದುದ ಬಂದಂತೆ ಸಮನಿಸಿಕೊಳಬೇಕಲ್ಲದೆ ಅಂತಿಂತೆನಬಾರದು ಕೇಳಯ್ಯ. ನೀನು ನಿರಾಕಾರ ಸಾಕಾರವೆಂಬೆರಡು ಮೂರ್ತಿಯ ಧರಿಸಿಪ್ಪೆಯಾಗಿ ಒಂದು ಜರಿದು ಒಂದು ಹಿಡಿದಿಹೆನೆಂದರೆ, ಅದೇ ಕೊರತೆ ನೋಡಾ ಪ್ರಭುವೇ ಕೂಡಲಸಂಗಮದೇವಾ.

(೧೩). ದನುಜ, ಮನಜ, ದಿವಿಜರ ಅಲ್ಪಪದವಿಯನೇನೆಂದೆನು ನೋಡಾ ಶರಣನು? ಮನುಮುನಿಗಳ ಕ್ಷಣಿಕ ಪದವಿಗಿದವಿ ಬಗೆವನೇ ಶರಣನು? ಕಾಮಧೇನು, ಗೀಮಧೇನು, ಕಲ್ಪತರು ಗಿಲ್ಪತರು, ಚಿಂತಾಮಣಿ ಗಿಂತಾಮಣಿ, ಪರುಷಗಿರುಷವೆಂಬ ಪ್ರಪಂಚಗಳ ಎಣಿಸುವನೇ ನಿಭ್ರಾಂತ ಶರಣನು? ಇಹಲೋಕದ ಸುಖ, ಪರಲೋಕದಗತಿ ಎಂಬ ಇಹಪರವನೆಣಿಸುವನೇ? ಇಹಪರವೆಂಬ ಈ ದೆಸೆಗೆಟ್ಟು ಪರಾಪರವಸ್ತುವೇ ತಾನಾದ ಪರಮ ಪರಿಣಾಮ ಶರಣನು ನೋಡಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೪). ಸರ್ವಾತ್ಮ ಚೈತನ್ಯವಪ್ಪ ಜಂಗಮದ ಪರಿಯ ನೋಡಾ! ಅಖಂಡ ಬ್ರಹ್ಮದ ಬಯಲೇ ತಾನಾಗಿ, ಸುಳಿಯಲೆಡೆ ಇಲ್ಲದೆ, ನಿಂದು ನಿರ್ಗಮನಿಯಾದ, ಒಂದೆಸೆಯೊಳಿಲ್ಲದ ಅವಿರಳಜಜ್ಞಾನಿ, ಕುರಿತೊಂದಕ್ಕೆ ಸುಳಿವನಲ್ಲ, ಭಕ್ತಿ

ಗಮ್ಯ, ಚತುರಾಕಾರ ಭೂಮಿಯೇ ಮಂಚ, ಆಕಾಶವೇ ಮೇಲು ಕಟ್ಟು, ಚಂದ್ರ ಸೂರ್ಯರೇ ಉಭಯ ಭಾಗದಲ್ಲಿ ಬೆಳಗುವ ಜ್ಯೋತಿ, ಪರಿಣಾಮವೇ ತೃಪ್ತಿ, ದಿಕ್ಕುಗಳೇವಸನ, ಸದ್ಗುಣವಾಸನೆಯೇ ಪರಿಮಳ, ನಕ್ಷತ್ರವೇ ಪುಷ್ಪ, ಶಿವತತ್ವ ಕಾಂತಿಯೇ ಆಭರಣ, ತ್ರಿಗುಣ ಕೂಟವೇ ತಾಂಬೂಲ, ಜ್ಞಾನಶಕ್ತಿಯೇ ಸಂಗ, ಪ್ರಣವನಾದ ಕೇಳಿಕೆ, ಇಂತೀ ಅಷ್ಟಭೋಗ ಐಶ್ವರ್ಯದಲ್ಲಿಪ್ಪ ರಾಜಯೋಗಿ ಚರಲಿಂಗ ನಿಶ್ಚಿಂತ ನಿರ್ವಾಣಿ ನಿರಂಜನ ನಿರ್ಮಾಯೆ ನಿರ್ವ್ಯಸನಿ, ಪರಮ ಜಂಗಮ ಇಂತಲ್ಲದೆ ಕಾಯದಿಚ್ಛೆಗೆ ಸುಳಿದು ಕಳವಳಿಸಿ ತ್ರಿವಿಧಕ್ಕೆ ಬದ್ಧರಪ್ಪವ ರೆಲ್ಲ ಜಗತ್ಪಾವನರಪ್ಪರೇ ಹೇಳಾ ಗುಹೇಶ್ವರಾ ?

---

## ಪರಿಪೂರ್ಣ ಶರಣನ ಸ್ಥಿತಿಯು ವಿವರಣೆ.

### (೧) ಶರಣನು ನಿಃಕ್ರಿಯನು.

(೧). ಶರಣ ಇಹಪರನಲ್ಲ. ಪರಾಪರನಲ್ಲ. ಕಾಮಿಸಿ ಕಾಮಿಯಲ್ಲ. ಭಾವಿಸಿ ಭಾವಿಯಲ್ಲ. ಅನಾಮಯ ನಿರಂಜನನು. ಸಿದ್ಧಸೋಮನಾಥಲಿಂಗ, ನಿಮ್ಮ ಶರಣ ಬಳಸಿಯೂ ಬಳಸುವನಲ್ಲ.

(೨). ದೇಹಿಯಲ್ಲ, ನಿರ್ದೇಹಿಯಲ್ಲ. ಬೋಧಕನಲ್ಲ, ನಿರ್ಬೋಧಕ ನಲ್ಲ. ಕಾಮಿಯಲ್ಲ, ನಿಃಕಾಮಿಯಲ್ಲ. ಆಶೆವಿಡಿದು ಬಂದ ಅನುಮಿಷನಲ್ಲ. ಆವ ಗುಣವಿಲ್ಲದ ನಿರ್ಗುಣಿ ನೋಡಯ್ಯಾ. ಕೂಡಲ ಚನ್ನಸಂಗಾ ನಿಮ್ಮ ಶರಣ ನೋಡಯ್ಯಾ.

(೩). ಸಕಳ ನಿಃಕಳನಯ್ಯಾ. ನಿಃಕಳ ಸಕಳನಯ್ಯಾ. ಸಕಳನಾಗಿ ಸಂಸಾರಿಯಲ್ಲ. ನಿಃಕಳನಾಗಿ ವೈರಾಗ್ಯನಲ್ಲ. ಸಂಸಾರಿಯಲ್ಲದ ಸಂಗವು, ವೈರಾ ಗಿಯಲ್ಲದ ನಿಸ್ಸಂಗವು, ಉಭಯಸಂಗದಿಂದ ಮಹತ್ತನೈದಿಪ್ಪನಾಗಿ. "ಸ್ಥಾವರಂ ಜಂಗಮಶ್ಚೈವ ದ್ವಿವಿಧಂ ಲಿಂಗಮುಚ್ಯತೆ" ಎಂದುದಾಗಿ, ಕೂಡಲಚನ್ನಸಂಗನಂತಿ ದ್ದುದಂತೆ ಇಪ್ಪನಲ್ಲದೆ ನಿಮ್ಮ ಶರಣ ಕ್ಷೀಣನಲ್ಲ.

(೪). ಸುಖ ಬಂದರೆ, ಪುಣ್ಯದ ಫಲವೆನ್ನೆನು. ದುಃಖ ಬಂದರೆ ಪಾಪದ ಫಲವೆನ್ನೆನು. ನೀ ಮಾಡಿದಡೆ ಆಯಿತ್ತೆನ್ನೆನು. ಕರ್ಮಕ್ಕೆ ಕರ್ತೃವೇ ಕಡೆ ಎಂದೆ

ನ್ನೆನು. ಉದಾಸೀನವಿಡಿದು ಶರಣೆನ್ನೆನು. ಕೂಡಲಸಂಗಮದೇವಾ, ನೀಮಾಡಿ ದುಪದೇಶವು! ಎನಗೀಪರಿಯಲ್ಲಿ ಸಂಸಾರದ ಸವಿಯು ಬಳಸುವೆನು.

(೫). ಜಲದೊಳಗಣ ಮತ್ಸ್ಯವು ಜಲವ ತನ್ನ ನಾಸಿಕದತ್ತ ಹೊದ್ದ ಲೀಯ್ಯದ ಪರಿಯ ನೋಡಾ, ಅಯ್ಯ. ಶರಣನು ಸಂಸಾರ ಪ್ರಪಂಚಿಗಳೊಳಗೆ ಇದ್ದು, ಆ ಸಂಸಾರಪ್ರಪಂಚವು ತನ್ನ ಹೊದ್ದಲೀಯ್ಯದ ಪರಿಯ ನೋಡಾ ಅಯ್ಯಾ! ಶರಣಂಗೆ ಈ ಬುದ್ಧಿಯ, ಮತ್ಸ್ಯಂಗೆ ಆ ಬುದ್ಧಿಯ ನೀನು ಕರುಣಿಸಿದೆ ಯಲ್ಲ ಎನ್ನ ಕಪಿಲಸಿದ್ಧ ಮಲ್ಲಿನಾಥಯ್ಯ!

(೬). ಲೋಕವಿಡಿದು ಲೋಕವ ಹಿಂಗದಂತಿಪ್ಪೆನು. ಆಕಾರವಿಡಿದು ಸಾಕರ ಸಹಿತ ನಡೆವೆನು. ಹೊರಗೆ ಬಳಸಿ, ಒಳಗೆ ಮರೆದಂತಿಪ್ಪೆನು. ಬೆಂದ ನುಲಿಯಂತೆ ಹುರಿಗುಂದದಂತಿಪ್ಪೆನು. ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯ ಹತ್ತರೊಳಗೆ ಹನ್ನೊಂದಾಗಿ, ನೀರ ತಾವರೆಯಂತಿಪ್ಪೆನು.

(೭). ಕುಂಡಲಿಗನ ಕೀಟಕದಂತೆ ಮೈಮಣ್ಣಾಗದಂತೆ ಇರ್ದೆಯಲ್ಲ ಬಸವಣ್ಣ. ಜಲದೊಳಗಣ ತಾವರೆಯಂತೆ ಹೊದ್ದಿಹೊದ್ದದಂತೆ ಇರ್ದ್ದೆಯಲ್ಲ ಬಸವಣ್ಣ. ಜಲದಿಂದಾದ ಮೌಕ್ತಿಕದಂತೆ, ಜಲವು ತಾನಾಗದಂತೆ ಇರ್ದೆಯಲ್ಲ ಬಸವಣ್ಣ. ಗುಹೇಶ್ವರ ಲಿಂಗದಾಣತಿವಿಡಿದು ತನುಗುಣ ಮತ್ತರಾಗಿರ್ಪ ಐಶ್ವ ರ್ಯಾಂಧಕರ ಮತವನೇನ ಮಾಡಬಂದೆಯಯ್ಯಾ ಸಂಗನಬಸವಣ್ಣ?

(೮). ಇಹಪರವೆಂಬ ಈ ದೆಸೆ ಆ ದೆಸೆಯಾದವರ ಪರಿ ಹೊಸತು. ನೆಯಿಹತ್ತದ ನಾಲಿಗೆಯಂತೆ, ಹುಡಿಹತ್ತದ ಗಾಳಿಯಂತೆ, ಕಾಡಿಗೆ ಹತ್ತದ ಆಲಿ ಯಂತಿರ್ದೆನಯ್ಯ. ಸಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಆಚರಿಸುತ್ತ ಆಚರಿ ಸದಂತಿರ್ದೆನಯ್ಯ.

(೯). ಮಂಗಳ ಮಣ್ಣಬೆರಿಸದಂತೆ, ಗಾಳಿದೂಳು ಹತ್ತದಂತೆ, ಬಿಸಿಲು ಮಳೆಯಲ್ಲಿ ನೆನೆಯದಂತೆ, ಬಯಲು ಮೂರ್ತಿಗೊಳ್ಳದಂತೆ, ಸಿದ್ಧಸೋಮನಾಥ ನಿಮ್ಮ ಶರಣನು ಎಲ್ಲಿಯೂ ಬಳಸಿ, ಬಳಸದಂತಿರ್ಪನು.

(೧೦). ಮರಾಳನ ಮಾಟದಂತೆ, ಮಯೂರನ ನಿದ್ರೆಯಂತೆ, ಮಾರ್ತಾಂ ಡನ ಕಿರಣದಂತೆ, ಸ್ಫಟಿಕದ ಘಟದಂತೆ, ಹೊದ್ದಿಯೂ ಹೊದ್ದದಂತೆ, ಇದ್ದೂ

ಇಲ್ಲದಂತೆ, ಕಂಡೂ ಕಾಣದಂತೆ, ಕೇಳಿಯೂ ಕೇಳದಂತೆ, ಇಪ್ಪ ಸುಳುಹ ಜಂಗಮ ಮೂರ್ತಿಯ ಕಂಡು ನಮೋ ನಮೋ ಎಂಬೆ ನಾರಾಯಣ ಪ್ರಿಯ ರಾಮನಾಥಾ.

(೧೧). ಕಣ್ಗೆ ಕಾಂಬಡೆ ರೂಪಲ್ಲ. ಕೈಗೆ ಸಿಲುಕುವಡೆ, ದೇಹಿಯಲ್ಲ. ನಡೆದಡೆ ಗಮನಿಯಲ್ಲ. ನುಡಿದಡೆ ವಾಚಾಳನಲ್ಲ. ನಿಂದಿಸಿದವಗೆ ಹಗೆಯಲ್ಲ. ಹೊಗಳಿದವರಿಗೆ ಕೆಳೆಯಲ್ಲ. ಗುಹೇಶ್ವರನ ನಿಲವು ಮಾತಿನ ಮಾಲೆಗೆ ಸಿಲುಕು ವುದೇ? ಸಿದ್ಧರಾಮಯ್ಯಾ, ನೀನು ಮರುಳಾದೆಯಲ್ಲ!

(೧೨). ಸುಳಿದಡೆ ಒಡಲಿಲ್ಲ. ನಿಂದಡೆ ನೆಳಲಿಲ್ಲ. ನಡೆದಡೆ ಗಮನ ವಿಲ್ಲ. ನುಡಿದಡೆ ಶಬ್ದವಿಲ್ಲ. ದಗ್ಧಪಟನ್ಯಾಯದಂತೆ, ಉಂಡಡೆ ಉಪಾಧಿಯಲ್ಲ. ಉಣ್ಣದಿರ್ದಡೆ ಕಾಂಕ್ಷಿಯಲ್ಲ. ಯಥಾಲಾಭ ಸಂತುಷ್ಟನಾಗಿ, ಸ್ತುತಿ ಇಲ್ಲ, ನಿಂದೆ ಇಲ್ಲ, ಹಗೆ ಇಲ್ಲ, ಅರುಹಿಲ್ಲ, ಮರಹಿಲ್ಲ, ತಾನೆಂಬ ನೆನಹಿಲ್ಲಾಗಿ. ಇದಕ್ಕೆ ಶೃತಿ:—ಯತ್ಪ್ರಾಣಲಿಂಗ ಸಂಧಾನಂ ತಲ್ಲಿಂಗಂ ಪ್ರಾಣಸಂಯುಕ್ತಂ। ಪ್ರಾಣ ಲಿಂಗ ದ್ವಯೋರ್ಭೇದಂ ನಭೇದಂ ಚ ನಸಂಶಯಃ ॥ ದಗ್ಧಾಂಬರಂ ಕರ್ಮಸ್ಯ ಇಂದ್ರಿಯಾ ಮನಸಾವ ಚ । ಭಾವಸದ್ಭಾವ ನಿರ್ವಾಣಂ ಯತ್ಪದಾತ್ಪರಲೀ ಯತೆ ॥ ಇಂತೆಂದುದಾಗಿ ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು ಲಿಂಗ ಪ್ರಾಣಿಗಳಾಗಿ ಒಡಲ ಮರೆಗೊಂಡು, ಎಂತಿರ್ದಡಂ ಎಂತು ನಡೆದಡಂ, ಅಂತಂತೆ ಸಂದಿಹರು.

---

## ( ೨ ) ಶರಣರು ನಿರಾಕಾಂಕ್ಷಿಣ್ಯರು.

(೧). ಒಬ್ಬರು ನಡೆದಾಚರಣೆಯಲ್ಲಿ ನಡೆಯರು. ಒಬ್ಬರು ಹಿಡಿದ ಶೀಲವ ಹಿಡಿಯರು. ಒಬ್ಬರು ನುಡಿದ ಭಾಷೆಯ ನುಡಿಯರು. ಅದೇನು ಕಾರ ಣವೆಂದಡೆ, ತಮ್ಮ ಲಿಂಗಮಚ್ಚು ನಡೆವರು. ತಮ್ಮ ಲಿಂಗಮಚ್ಚು ನುಡಿವರು. ಇದು ಕಾರಣ ಅಖಂಡೇಶ್ವರಾ, ನಿಮ್ಮ ಶರಣರು ಪರಮಸ್ವತಂತ್ರ ಶೀಲರು.

(೨). ಲೋಕದಿಚ್ಛೆಯ ನಡೆವವನಲ್ಲ. ಲೋಕದಿಚ್ಛೆಯ ನುಡಿವವ ನಲ್ಲ. ಲೋಕವಿರಹಿತ ಶರಣ, ಶರಣವಿರಹಿತ ಲೋಕವೆಂಬುದು ಕಾಣಬಂದಿತ್ತು ನೋಡಾ! ಲಿಂಗವೇ ಗೂಡಾಗಿ, ಜಂಗಮವೇ ಸ್ವಾಯತವಾಗಿ, ಪ್ರಸಾದವೇ

ಪ್ರಾಣವಾಗಿ, ಪರಿಣಾಮದಲ್ಲಿ ಇಪ್ಪ ನೋಡಯ್ಯಾ! ಕೂಡಲಸಂಗಮದೇವಾ, ನಿಮ್ಮ ಶರಣ ಚನ್ನಬಸವಣ್ಣಂಗೆ ನಮೋ, ನಮೋ, ಎಂಬೆನು.

(೩). ನಿಜ ಜಂಗಮವೆಂದೆನಿಸಿರ್ಪರು. ಕುಂದುಕೊರತೆ ನುಡಿವರೇ? ಅನಾದಿ ಜಂಗಮವೆಂದೆನಿಸುವರು. ಆಚರಣೆಯ ಭೇದದಲ್ಲಿ ದಾಕ್ಷಿಣ್ಯ ವಿಡಿದಿರ್ಪರೇ? ಶೂರ ರಣಪ್ರಸಂಗದಲ್ಲಿ ಮಗನ ನೋಡುವನೇ? ಇದು ಕಾರಣ, ತಮ್ಮವರೇನು, ಅನ್ಯರೇನು, ಮೃದುವಾಗಿ ಮಾತಾಡರು, ಅಣತಿಯ ಲಿಂಗದ ಅಜ್ಞೆಯುಲ್ಲಿ.

(೪). ಲಿಂಗದ ನಡೆಯಂತೆ ನಡೆವನಲ್ಲದೆ, ಲೋಕದ ನಡೆಯಂತೆ ನಡೆವವನಲ್ಲ ನೋಡಾ ಶರಣ. ಲಿಂಗದ ನುಡಿಯಂತೆ ನುಡಿವನಲ್ಲದೆ, ಲೋಕದ ನುಡಿಯಂತೆ ನುಡಿವನಲ್ಲ ಶರಣ. ಲಿಂಗದ ಮಚ್ಚಿನಲ್ಲಿ ಸುಳಿವನಲ್ಲದೆ, ಲೋಕದ ಮಚ್ಚಿನಲ್ಲಿ ಸುಳಿವನಲ್ಲ ನೋಡಾ ಶರಣ. ಲಿಂಗದ ವ್ಯವಹಾರದಲ್ಲಿ ಇರುತ್ತಿಹನಲ್ಲದೆ, ಲೋಕದ ವ್ಯವಹಾರದಲ್ಲಿ ಇರುತ್ತಿಹನಲ್ಲ ನೋಡಾ ಶರಣ. ಇಂತಿದ ಲಿಂಗಾಂಗ ಸಮರಸವನರಿದ ಶಿವಶರಣರ ಶಿವನೆನಬೇಕಲ್ಲದೆ, ಲೋಕದವನೆಂದು ನುಡಿವ ಸೂತಕ ದೇಹಿಗಳಿಗೆ ಪಾತಕ ತಪ್ಪದಯ್ಯಾ ಅಖಂಡೇಶ್ವರಾ.

---

## (೩) ಶರಣರಲ್ಲಿ ಯಾವತರದ ಭೇದಗಳಿಲ್ಲ.

(೧). ಅಂದಿನವರು ಇಂದಿನವರು ಎಂದು ಸಂದೇಹಿಗಳಿಗೆ ಸಂದೇಹ ಮುಂದುಗೊಂಡಿಪ್ಪುದು ನೋಡಾ. ಅಂದೊಂದು ಪರಿ ಇಂದೊಂದು ಪರಿಯೇ ಗುರುಲಿಂಗಜಂಗಮ? ಅಂದೊಂದು ಪರಿ, ಇಂದೊಂದು ಪರಿಯೇ ಪಾದೋದಕ ಪ್ರಸಾದ? ಅಂದೊಂದು ಪರಿ, ಇಂದೊಂದು ಪರಿಯೇ ಶರಣಲಿಂಗಸಂಬಂಧ? ಅಂದೊಂದು ಪರಿ, ಇಂದೊಂದು ಪರಿಯೇ ಅರಿವು ಆಚರಣೆ? ಅಂದೊಂದು ಪರಿ, ಇಂದೊಂದು ಪರಿಯೇ ಸ್ಥಲಕುಲಂಗಳು? ಅಂದೊಂದು ಪರಿ, ಇಂದೊಂದು ಪರಿಯೇ ಸೌರಾಷ್ಟ್ರಸೋಮೇಶ್ವರಲಿಂಗವು?

(೨). ಅಂದಿನ ಶರಣರಿಗೆ ಇಂದಿನ ಶರಣರು ಸರಿಯಲ್ಲವೆಂದು ನುಡಿವ ಸಂದೇಹಸೂತಕ ಹೊಲೆಯರ ಮಾತು ಕೇಳಲಾಗದು. ಅದೆಂತೆಂದೊಡೆ, ತಾ ಮೂಕೊರೆಯನೆಂದರಿಯದೆ, ಕನ್ನಡಿಗೆ ಮೂಗಿಲ್ಲವೆಂಬಂತೆ, ತಾ ಕುಣಿಯಲಾರದೆ

ಅಂಗಣ ಡೊಂಕೆಂಬಂತೆ, ತನ್ನ ನಡೆನುಡಿ ಸಿದ್ಧಾಂತವಿಲ್ಲದೆ, ಇತರರ ಹಳಿವ ಅಧಮ ಮಾದಿಗರನೇನೆಂಬೆನಯ್ಯ? ಅಷ್ಟಾವರಣ ಪಂಚಾಚಾರವು ಅಂದೊಂದು ಪರಿ, ಇಂದೊಂದು ಪರಿಯೇ? ಷಟ್‌ಸ್ಥಲ ಸ್ವಾನುಭಾವವು ಅಂದೊಂದು ಪರಿ, ಇಂದೊಂದು ಪರಿಯೇ? ಭಕ್ತಿ, ವಿರಕ್ತಿ, ಮುಕ್ತಿ, ಉಪರತಿ, ಜ್ಞಾನ, ವೈರಾಗ್ಯ ಅಂದೊಂದು ಪರಿ, ಇಂದೊಂದು ಪರಿಯೇ? ನಡೆ ನುಡಿ ಸಿದ್ಧಾಂತವಾದ ಶರಣನ ಘನವು ಅಂದೊಂದು ಪರಿ, ಇಂದೊಂದು ಪರಿಯೇ? ಇಂತೀ ವಿಚಾರವನರಿಯದೆ, ಪರ ಸಮಯದವನಾದರೂ ಆಗಲಿ, ಶಿವಸಮಯದವನಾದರೂ ಆಗಲಿ, ಮರ್ಮ ಗೆಟ್ಟು ನಡೆವ ಕರ್ಮಜೀವಿಗಳ ಬಾಯಲ್ಲಿ ಬಾಲ್ಹುಳು ಸುರಿಯದೆ ಮಾಣ್ಬವೇ ಹೇಳಾ ಅಖಂಡೇಶ್ವರಾ?

(೩). ಶರಣನು ಗಮನಿಯಾದರೆ ಹಿರಿದೆಂಬರು. ನಿರ್ಗಮನಿಯಾದರೆ ಕಿರಿದೆಂಬರು. ನಾವಿದನರಿಯೆವಯ್ಯ. ಶರಣನು ಆಶ್ರಮವಂತನಾದರೆ ಕಿರಿದೆಂಬರು, ನಿರಾಶ್ರಮವಂತನಾದರೆ ಹಿರಿದೆಂಬರು. ನಾವಿದನರಿಯೆವಯ್ಯ. ಶರಣನು ಸರ್ವ ವ್ಯಾಪಾರಿಯಾದಡೆ ಕಿರಿದೆಂಬರು, ನಿರ್ವ್ಯಾಪಾರಿಯಾದಡೆ ಹಿರಿದೆಂಬರು. ನಾವಿದ ನರಿಯೆವಯ್ಯ. ಶರಣನು ಭೋಗಿಯಾದಡೆ ಕಿರಿದೆಂಬರು, ನಿರ್ಭೋಗಿಯಾದಡೆ ಹಿರಿದೆಂಬರು. ನಾವಿದನರಿಯೆವಯ್ಯ. ಹುರಿದ ಬೀಜವು ಮರಳಿ ಹುಟ್ಟಬಲ್ಲುದೇ? ಬೆಂದನುಲಿ ಕಟ್ಟುವಡೆವುದೇ? ಹುಟ್ಟುಗೆಟ್ಟ ಶರಣ ಸತಿಯ ದೇಹವ ಧರಿಸಿ ಸಾಕಾರವೆನಿಸಿ ಲೋಕದೊಳಗಿರ್ದಡೇನು? ಲೋಕದಂತಾದನೇ? ಅಲ್ಲಲ್ಲ. ಆತನ ಪರಿ ಪ್ರಕಾರ ಬೇರೆ ಕಾಣಿರೋ. ಅದೆಂತೆಂದೊಡೆ, ಬಿರಿಸಿನೊಳಗಣ ಮದ್ದು ಅಗ್ನಿಯ ಸೋಂಕಿ, ಅಗ್ನಿ ಸ್ವರೂಪವಾಗಿ ತೋರುವಂತೆ, ಆ ಶರಣನ ತನು ಮನ ಭಾವ ಸರ್ವ ಕರಣೇಂದ್ರಿಯಂಗಳೆಲ್ಲ ಲಿಂಗವನಪ್ಪಿ ಲಿಂಗಮಯವಾಗಿ ತೋರುತಿರ್ಪನಾಗಿ, ಆತ ಆವಾವ ಕ್ರಿಯೆಯಲ್ಲಿ ಇರ್ದಡೇನು, ಆವಾವ ಭೋಗ ದಲಿರ್ದಡೇನು, ಕುಂದುಕೊರತೆ ಇಲ್ಲ, ಹಿಂದೆ ಶಂಕೆ ಇಲ್ಲ, ಮುಂದೆ ಜನ್ಮವಿಲ್ಲ. ಆ ಶರಣನು ಎಂತಿರ್ದನೆಂದೊಡೆ ಸಹಜ ಬ್ರಹ್ಮನಾಗಿರ್ಪನು ನೋಡಿರೋ ನಮ್ಮ ಅಖಂಡೇಶ್ವರಾ.

———

# ಜಂಗಮರ ನಿಜಾಚರಣೆ.

## ( ಟೀಕಾತ್ಮಕ ವಿವೇಚನೆ. )

### ( ೧ ) ವಿರಕ್ತ, ಗುರು, ಚರ, ಪಟ್ಟದಯ್ಯ, ಮಹಂತರು.

(೧). ವಿರಕ್ತ ವಿರಕ್ತರೆಂದು ನುಡಿದುಕೊಂಬ ಅಣ್ಣಗಳೇ, ನಿಮ್ಮ ವಿರಕ್ತಿಯ ಪರಿ ಎಂತುಟು ಹೇಳಿರೇ. ಅರಿಯದಿದ್ದರೆ, ಕೇಳಿರೇ. ವಿರಕ್ತನಾದ ಬಳಿಕ, ಅಶನವ್ಯಸನ ವಿಷಯ ವಿಕಾರಕ್ಕೆ ದೂರನಾಗಿರಬೇಕು. ವಿರಕ್ತನಾದ ಬಳಿಕ ಮುನ್ನ ಹೇರಿಸಿಬಿಟ್ಟ ಹೊನ್ನು ಹೆಣ್ಣು ಮಣ್ಣು ಎಂಬವ ಮರಳಿ ಮುಟ್ಟದಿರಬೇಕು. ವಿರಕ್ತನಾದ ಬಳಿಕ ಅಷ್ಟಮದ ಅರಿಷಡ್ವರ್ಗಂಗಳ ನಷ್ಟಮಾಡಬೇಕು. ವಿರಕ್ತನಾದ ಬಳಿಕ ಹಮ್ಮು ಬಿಮ್ಮು ಗರ್ವ ಅಹಂಕಾರವ ಕಡೆಮೆಟ್ಟಿರಬೇಕು. ವಿರಕ್ತನಾದ ಬಳಿಕ ಅಂಗಮನ ಪ್ರಾಣೇಂದ್ರಿಯಂಗಳಲ್ಲಿ ಅಜ್ಞಾನ ಕತ್ತಲೆಯ ಕಳೆದು ಸರ್ವಾವಸ್ಥೆಯಲ್ಲಿ ಲಿಂಗವನರ್ಪಿಸಬೇಕು. ವಿರಕ್ತನಾದ ಬಳಿಕ ಸಂಕಲ್ಪವಿಕಲ್ಪವನುಳಿದು, ಮನವು ಮಹಾಲಿಂಗದಲ್ಲಿ ನಿಕ್ಷೇಪವಾಗಿರಬೇಕು. ವಿರಕ್ತನಾದ ಬಳಿಕ ಚಿಂತೆ ಭ್ರಾಂತಿಗಳಳಿದು, ಭಾವನಿರ್ಭಾವವಾಗಿ ಮಹಾಭಾವವು ನಿಜವಾಸವಾಗಿರಬೇಕು. ಇಷ್ಟುಳ್ಳರೆ, ಪರಮ ವಿರಕ್ತನೆಂಬೆನು, ಪಾಶವಿರಹಿತನೆಂಬೆನು, ವೀರಮಾಹೇಶ್ವರನೆಂಬೆನು. ಹೀಗಲ್ಲದೆ ಭ್ರಾಂತಿ ಬುದ್ಧಿಯಿಂದ ಪರರೊಡವೆ ಪರಸ್ತ್ರೀ ಪರದಾರ ಗಮನಗಳಲ್ಲಿ ಹರಿದಾಡುವಂಥ ಸೂಳೆಯ ಮಕ್ಕಳ ವಿರಕ್ತರೆಂದರೆ ನಗುವರಯ್ಯ ನಮ್ಮ ಶರಣರು ಅಖಂಡೇಶ್ವರಾ.

(೨). ಷಡ್ವರ್ಗಂಗಳ ಸಡಿಲಿಸಿ, ಒಡಲುಪಾಧಿಕೆಯ ನುರುಹಿ, ಷಡುಸ್ಥಲದನುವನರಿದು ಷಡ್ಲಿಂಗದ ಸಂಯೋಗವನರಿಯದೆ, ಬೊಡವಿ ಪ್ರಪಂಚದಲ್ಲಿ ಸಿಕ್ಕು ಹೊಡೆದಾಡಿ ಹೊತ್ತುಗಳೆದು ಮಡಿದು ಹೋಗುವ ಕಡುಪಾತಕರ ವಿರಕ್ತರೆನ್ನಬಹುದೇ ಅಯ್ಯಾ ಅಖಂಡೇಶ್ವರಾ ?

(೩). ವಿರತಿ, ವಿರತಿ ಎಂದು ವಿರತಿಯ ಹೊಲಬನರಿಯದೆ ಹಂಬಲಿಸಿ ಹಲುಬುತಿಪ್ಪಿರಣ್ಣಾ! ಕಠಿಣ ಪದಾರ್ಥವ ಸವಿದಡೆ ವಿರತಿಯೇ? ಕಠಿಣ ಪದಾರ್ಥವನೊಲ್ಲೆನೆಂದು ಕಳೆದರೆ ವಿರತಿಯೇ? ವೃಕ್ಷದಡಿಯ ಫಲಂಗಳ ಮೆದ್ದರೆ, ವಿರತಿಯೇ? ಬಿದ್ದ ಫಲಂಗಳ ಮುಟ್ಟೆನೆಂದು ಭಾಷೆಯ ಮಾಡಿದರೆ ವಿರತಿಯೇ? ಕ್ರಿಯೆಯುಲ್ಲಿ ಮುಳ್ಳಾಗಿದ್ದರೆ ವಿರತಿಯೇ? ನಿಃಕ್ರಿಯೆಯ ಮಾಡಿದರೆ ವಿರತಿಯೇ?

ಮೌನಗೊಂಡರೆ ವಿರತಿಯೇ? ನಿರ್ಮೌನನಾದರೆ ವಿರತಿಯೇ? ಕ್ರಿಯೆಯನಾಚರಿಸಿ, ಅರಿವಿನ ಮಾತ ಬಣ್ಣವಿಟ್ಟು ನುಡಿದರೆ ವಿರತಿಯೇ? ಇಂತಿವೆಲ್ಲವು ವಿರತಿಯ ನೆಲೆಯನರಿಯದೆ ತಲೆಬಾಲಗೆಟ್ಟು ಹೋದವು! ಇನ್ನು ಮುಕ್ತಿಯ ಪದವ ತೋರುವ ವಿರತಿಯ ಬಗೆ ಯಾವುದೆಂದಡೆ, ಷಟ್ಸ್ಥಲಕ್ಕೆ ಒಪ್ಪವಿಟ್ಟು ಎತ್ತಿ ಮಾರ್ಗಮಂ ಇಳುಹದೆ ಹಿಡಿದ ವ್ರತನೇಮಂಗಳಲ್ಲಿ ನೈಷ್ಠೆಯಾಗಿ, ಈಷಣ ತ್ರಯಂಗಳ ಗಾಸಿಮಾಡಿ, ಬಹಿರಂಗ ಮದಂಗಳ ಬಾಯಸೀಳಿ, ಅಂತರಂಗ ಮದಂಗಳ ಸಂತೋಷಮಂ ಕೆಡಿಸಿ, ಅಷ್ಟಮೂರ್ತಿ ಮದಂಗಳ ನಷ್ಟಮಾಡಿ, ಎಂಟು ದಿಕ್ಕಿನಲ್ಲಿ ಹರಿವ ದಶವಾಯುಗಳ ಗಂಟಲ ಮುರಿದು ಸುಗುಣ ನಿರ್ಗುಣಂಗಳ ನೆನೆಗೊಳಗು ಮಾಡಿ, ನವನಾಳಂಗಳ ಮುಂಬಾಗಿಲಲ್ಲಿ ಲಿಂಗಂಗಳ ಸಿಂಗರಿಸಿ, ತನುಮನವ ಸೋಂಕಿದ ಸಾಕಾರ ನಿರಾಕಾರವೆಂಬ ದ್ರವ್ಯಪದಾರ್ಥಂಗಳಂ ವಂಚಿಸದೆ, ಆಯಾಯ ಲಿಂಗಂಗಳಿಗೆ ತೃಪ್ತಿಯಂ ಮಾಡಿ, ನಡೆವಲ್ಲಿ ನುಡಿವಲ್ಲಿ ಕಣ್ಣಿಲ್ಲದೆ ಕಂಡು ಗಂಗೆ ಯಮುನೆ ಸರಸ್ವತಿ ಎಂಬ ಮೂರು ಗಂಗೆಯು ಕೂಡಿದ ಮಧ್ಯವಿನ ಸಂಗಮಕ್ಷೇತ್ರ, ಆ ಸಂಗಮಕ್ಷೇತ್ರದ ರತ್ನಮಂಟಪದಲ್ಲಿ ನೆಲಸಿಪ್ಪ ತೋಂಟದ ಅಲ್ಲಮ:ನೆಂಬ ಪರಬ್ರಹ್ಮದ ದಿವ್ಯ ಶ್ರೀ ಚರಣಮಂ ಭಾವ ಪುಷ್ಪಂಗಳೆಂಬ ಜಾಜಿಕೆಂದಾವರೆಯಲ್ಲಿ ಪೂಜೆಯಂ ಮಾಡಿ, ಭವಂ ನಾಸ್ತಿಯಾದುಡೀಗ ನಿಜವಿರತಿ. ಇಂತಪ್ಪ ವಿರತಿಯನಳವಡಿಸಿಕೊಳ್ಳದೆ ಮಾತಿಗೆ ಮಾತು ಕೊಟ್ಟು, ಮಾತಿಂಗೆ ಅರಿವಿಯನಿಕ್ಕುವರಿಗಂಜಿ, ನಾನು ಶರಣೆಂಬೆನಯ್ಯ ಘನ ಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೪). ಬಿಲ್ಲು ಕೋಲ ಹಿಡಿದು ಮನಬಂದ ಪರಿಯಲ್ಲಿ ಎಚ್ಚಾಡುವಾತ ಅರ್ಥಿಕಾರನಲ್ಲದೆ, ಬಿಲ್ಲುಕಾರನಲ್ಲವಯ್ಯ. ಹೊನ್ನು ಹೆಣ್ಣು ಮಣ್ಣು ಬಿಟ್ಟು ಚನ್ನಾಗಿ ಮಂಡೆಯ ಬೋಳಿಸಿಕೊಂಡು, ಹಾಡಿದ ವಚನಗಳನೆ ಹಾಡಿಕೊಂಡು, ಮುಂದೆ ವಸ್ತುವ ಸಾಧಿಸಿಕೊಳ್ಳದೆ, ಹಸಿದರೆ ತಿರಿದುಂಡು, ಮಾತಿನ ಮಾಲೆಯ ಕಲಿತಾತ ವಿರಕ್ತನೆಂಬ ನಾಮಕ್ಕೆ ಅರ್ಹನಲ್ಲದೆ, ಸಂಧಾನಕ್ಕೆ ಅರ್ಹನಲ್ಲ. ಅದೇನು ಕಾರಣ ವೆಂದಡೆ, ಮುಕ್ತಿ ಎಂಬ ಬಿಲ್ಲು ಹಿಡಿದು, ಸಮ್ಯಜ್ಞಾನವೆಂಬ ಹೆದೆಯನೇರಿಸಿ, ಲಿಂಗನಿಷ್ಠೆ ಎಂಬ ಬಾಣವ ತೊಟ್ಟು, ಆಕಾಶದ ಮೇಲಣ ಮುಪ್ಪುರದ ಮಧ್ಯದ ಮಾಣಿಕದ ಕಂಭ ಮುಳುಗಲೆಚ್ಚು, ಮಾಯಾ ಬಲವ ಗೆಲಿದ ಶರಣನೀಗ ಲಿಂಗ ಸಂಧಾನಿಯಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

( ೫ ). ಇಕ್ಕಿದ ಕಳಕ್ಕೆ ಕೊಲಗದ ವೀರನೆಂದು ಬಿರುದನಿಕ್ಕಿ ಹುಯ್ಯಲ ಕಂಡು ಓಡಿ ಬರುವಂಗೆ ಆ ಬಿರುದೇತಕಯ್ಯ? ಬತ್ತೀಸಾಯುಧದ ಸಾಧನೆಯ ಕಲಿತು, ಕಾಳಗದಲ್ಲಿ ಕೈಮರೆದು ಗಾಯವಡೆದವಂಗೆ ಆ ಸಾಧನೆ ಏತಕಯ್ಯ? ಆದ್ಯರ ವಚನಂಗಳ ಸದಾ ಕಾಲದಲ್ಲಿ ಓದಿ ಶಿವತತ್ವ ಆತ್ಮತತ್ವಂಗಳನರಿದು, ವಿದ್ಯಾ ತತ್ವ ಆರಕ್ಕೆ ಆರ ನೆಲೆಯ ಮಾಡಿ, ಮೂರಕ್ಕೆ ಮೂರ ಸಂಬಂಧಿಸಿ, ಅದಕ್ಕೆ ಇನ್ನು ಪ್ರತಿ ಇಲ್ಲವೆಂದು ಅರಿದು ವಿರಕ್ತರು ಪುರಾತನರಂತೆ ಸಮ್ಯಜ್ಞಾನ ಕ್ರಿಯಿಂದಲೇ ಆಚರಿಸುವದು. ಭಕ್ತ ವಿರಕ್ತರ ಆಚರಣೆ ಎಲ್ಲ ಒಂದೇ. ಅದು ಹೇಗೆಂದಡೆ, ಭಕ್ತಂಗೆ ಬಹಿರಂಗ ದಾಸೋಹ, ವಿರಕ್ತಂಗೆ ಅಂತರಂಗದಾಸೋಹ. ಈ ಆಚರಣೆ ಯನತಿಗಳೆದು ಮನಬಂದ ಪರಿಯಲ್ಲಿ ನಡೆದು ಕೆಡುವಂಗೆ ಆದ್ಯರ ವಚನವೇತ ಕಯ್ಯಾ? ಆದ್ಯರ ವಚನವೆಂಬುದು ಸಂತೆಯ ಮಾತೆ, ಪುಂಡರ ಪುರಾಣವೇ, ಲೋಕದ ಜನರ ಮೆಚ್ಚಿಸುವ ಬೀದಿವಾತೇ? ಶಿವಶಿವಾ, ನೀವು ಶಿವಶರಣಂಗಳ ಕೂಡಾಡಿದ ವಚನಂಗಳ ಕಲಿತು, ಆ ವಚನಂಗಳ ನಿಮ್ಮ ಊಟದ ವೆಚ್ಚಕ್ಕೆ ಈಡು ಮಾಡಿಕೊಂಡಿರಲ್ಲದೆ, ಮುಂದಣ ಮುಕ್ತಿಯ ಪದವ ಕಾಣದೆ ಹೋದಿರಿ. ಇದು ಕಾರಣ ಶಿವಜ್ಞಾನ ಉದಯವಾದ ಲಿಂಗಾಂಗಿಗಳಿಗೆ ಹಾಲು ಸಕ್ಕರೆಯನುಂಡಂತೆ ಸವಿದೋರುತ್ತಿದೆ. ವೇಷಧಾರಿ ವಿಶ್ವಾಸಘಾತಕರಿಗೆ ಎನ್ನ ನುಡಿ ಅಲಗಿನ ಮೊನೆ ಯಂತೆ ಇರಿವುತ್ತಿದೆ ಅಯ್ಯಾ, ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

( ೬ ). ಹಲವು ವೇಷವ ಧರಿಸಿ, ಹಲವು ಭಾಷೆಯ ಕಲಿತು, ಹಲವು ವಿಷಯಕ್ಕೆ ಹರಿದಾಡಿದಡೇನು? ನಿಜವಿರಕ್ತನಲ್ಲ ನೋಡಾ. ಅದೇನು ಕಾರಣ ವೆಂದಡೆ, ತನುವಿನ ಆಸೆ ಹಿಂಗದಾಗಿ. ಊರಾಶ್ರಯ ಬಿಟ್ಟು, ಕಾಡಾಶ್ರಯಗಿರಿ ಕಂದರದಲ್ಲಿರ್ದಡೇನು? ಹಗಲು ಕಣ್ಣು ಕಾಣದ ಗೂಗೆಯಂತಲ್ಲದೆ, ನಿಜವಿರ ಕ್ತಿಯಲ್ಲ ನೋಡಾ. ಅದೇನು ಕಾರಣವೆಂದಡೆ ಮನದ ಪರಿಯುಡಗದಾಗಿ. ಹಸಿವು ತೃಷೆಯ ಬಿಟ್ಟು ಮಾತನಾಡದೆ ಮೌನಗೊಂಡಿರ್ದಡೇನು? ಕಲ್ಲುಮರ ಮೋಟೆ ಗುಲ್ಮಂಗಳಂತಲ್ಲದೆ, ನಿಜವಿರಕ್ತಿಯಲ್ಲ ನೋಡಾ. ಅದೇನು ಕಾರಣ ವೆಂದಡೆ, ವಿಷಯ ವ್ಯವಹಾರ ಹಿಂಗದಾಗಿ. ನಿದ್ರೆ ತೊರೆದು ಎದ್ದು ಕುಳಿತಿರ್ದ ಡೇನು? ಕಳ್ಳ ಪುರಹೊಕ್ಕು ಉಲುಹು ಅಡಗುವನಕ ಮರೆಯಲ್ಲಿ ಕುಳಿತಂತಲ್ಲದೆ. ನಿಜವಿರಕ್ತಿಯಲ್ಲ ನೋಡಾ. ಅದೇನು ಕಾರಣವೆಂದಡೆ, ಅಂತರಂಗದ ಘನ ಗಂಭೀರ ಮಹಾಬೆಳಗಿನಶಿವ ಸಮಾಧಿಯನರಿಯದ ಕಾರಣ. ಇಂತಪ್ಪ ಹೊರ

ವೇಷದ ಡಂಭ ಜೊಳ್ಳು ಮನದವರಿಗೆ ವಿರಕ್ತರೆಂದಡೆ ಮೆಚ್ಚರಯ್ಯಾ ನಿಮ್ಮ ಶರಣರು ಅಖಂಡೇಶ್ವರಾ.

(೭). ಭಕ್ತರು ಬಯಕೆಯ ನಿರಿಸಿದರೆ, ಅದು ಸತ್ತನಾಯ ಮಾಂಸ. ವಿರಕ್ತರು ದ್ರವ್ಯವ ಮುಟ್ಟಿದರೆ, ಅದು ಕತ್ತೆಯ ಹಡುಹು. ಹೀಗೆ ತಪ್ಪಿದರೆಂಬೆ. ಇದು ಸತ್ಯ, ತ್ರಿಪುರಾಂತಕ ಲಿಂಗದಲ್ಲಿ ಗಾವುದಿ ಮಾಚಯ್ಯ ಹೇಳಿದುದು ಸತ್ಯವೆನ್ನಿರಣ್ಣಾ.

(೮). ಅರ್ಥ ಸನ್ಯಾಸಿಯಾದಡೇನಯ್ಯಾ? ಅವಂಗದಿಂ ಬಂದಡೆಯೂ, ಕೊಳ್ಳದಿರಬೇಕು. ರುಚಿ ಸನ್ಯಾಸಿಯಾದಡೇನಯ್ಯಾ? ಜಿಹ್ವೆಯ ಕೊನೆಯಲ್ಲಿ ಮಧುರವನು ಅರಿಯದಂತಿರಬೇಕು. ಸ್ತ್ರೀ ಸನ್ಯಾಸಿಯಾದಡೇನಯ್ಯಾ? ಜಾಗ್ರತ್ ಸ್ವಪ್ನ ಸುಷುಪ್ತಿಯಲ್ಲಿ ತಟ್ಟಲ್ಲದಿರಬೇಕು. ದಿಗಂಬರಿಯಾದಡೇನಯ್ಯಾ? ಮನ ಬತ್ತಲೆ ಇರಬೇಕು. ಇಂತೀ ಚತುರ್ವಿಧದ ಹೊಲಬನರಿಯದೆ ವ್ರಥಾ ಕೆಟ್ಟರು ಕಾಣಾ ಚನ್ನಮಲ್ಲಿಕಾರ್ಜುನಾ,

(೯). ಮರ್ತ್ಯದಲ್ಲಿ ಪಾವನ ಮಾಡಬೇಕೆಂದು ಸುಳಿವ ವಿರಕ್ತ ಜಂಗಮದಿರವು ಹೇಗಿರಬೇಕೆಂದಡೆ, ಕಲ್ಲಿನ ಮೇಲೆ ಹೊಯ್ದರೆ, ನಿಲ್ಲದ ನೀರಿನಂತೆ ಇರಬೇಕು. ಪಥವಿಲ್ಲದ ದಾರಿಯಲ್ಲಿ ಹೋಗಿ, ಗತಿಗೆಟ್ಟವನಂತಿರಬೇಕು. ಶೃತಿಯುಲಡಗಿದ ನಾದದಂತಿರಬೇಕು. ಹುರಿದ ಬೀಜದೊಳಗಣ ತಿರುಳಿನಂತಿರಬೇಕು. ಇದಾರಿಗೂ ಅಸಾಧ್ಯ ನಾರಾಯಣಪ್ರಿಯ ರಾಮನಾಥಾ.

(೧೦). ಹೊನ್ನು ಹೆಣ್ಣು ಮಣ್ಣು ಅವರಿಸಿಕೊಂಡು, ವಸ್ತ್ರ ಒಡವೆ ಆಭರಣಂಗಳ ಹಲ್ಲಣಿಸಿಕೊಂಡು ಬಂದು ಸರ್ವರಿಗೆ ಶಾಸ್ತ್ರೋಪದೇಶವ ಹೇಳುವರು ವೇಷಧಾರಿಗಳು ಸೂಳೆಯರಂತೆ ಒಡಲಾಸೆಗೆ ಹಿತವಚನವ ನುಡಿವರು. ಇಂತಪ್ಪ ಪ್ರಪಂಚಿನ ವೇಷಡಂಭಕ ಧೂರ್ತಲಾಂಛನ ಧಾರಿಗಳಿಗೆ ಮಹಂತಿನ ದೇವರೆನ್ನಬಹುದೇ? ಎನಲಾಗದು. ಅದೇನು ಕಾರಣವೆಂದಡೆ ತಮ್ಮ ಆದಿಯ ನಿಲವ ತಾವರಿಯರು. ಷಟ್‌ಸ್ಥಲದ ನಿರ್ಣಯವ ಏನೆಂದರಿಯರು. ಆಚಾರ ದನುಭಾವದ ಅಂತರಂಗದ ಮೂಲವ ಮುನ್ನವೇ ಅರಿಯರು. ಇಂತಿ-ದನರಿಯದ ಪಶು ಪ್ರಾಣಿಗಳಿಗೆ ಜಂಗಮವೆನ್ನಬಹುದೇ? ಎನಲಾಗದಯ್ಯಾ ಕಲಿದೇವರದೇವಾ.

(೧೧). ಮುನ್ನವೇ ಮೂರ ಹರಿದು ಗುರುಚರ ತಾನಾಗಿ ಬಂದಲ್ಲಿ, ಇನ್ನು ಮೂರ ರಾಸೆ ಏಕೆ? ಆವ ಜೀವಿಯು ತಮ್ಮ ಮಲವ ತಾವು ಮುಟ್ಟ

ವಾಗಿ, ಬಿಟ್ಟುದ ಹಿಡಿವ ಮಿಟ್ಟಿಯ ಭಂಡರನೊಪ್ಪ. ಸದಾಶಿವ ಮೂರ್ತಿಲಿಂಗವು ನಿರ್ಧರವಿಲ್ಲದವರ ನೊಲ್ಲ.

(೧೨). ಶಿವಶಿವಾ, ನಾವು ಗುರುಗಳು, ನಾವು ಜಂಗಮ ಲಿಂಗ ಪ್ರೇಮಿಗಳು, ನಾವು ಪಟ್ಟದಯ್ಯಗಳು, ನಾವು ಚರಂತಿ ಹಿರಿಯರು ನಾವು ಸದಾ ಚಾರ ಸತ್ಯಸದ್ಭಕ್ತರು ಎಂದು ಬೊಗಳುತ್ತಿಪ್ಪಿರಿ! ಅದೆಲ್ಲಿಯದೋ ಸದಾಚಾರ? ಮಣ್ಣ ಹಿಡಿದವಂಗೆ ಗುರುವಿಲ್ಲ, ಹೆಣ್ಣ ಹಿಡಿದವಂಗೆ ಲಿಂಗವಿಲ್ಲ, ಹೊನ್ನು ಹಿಡಿ ದವಂಗೆ ಜಂಗಮವಿಲ್ಲ. ಇಂತೀ ತ್ರಿವಿಧ ಮಲವ ಕಚ್ಚಿದ ಸೂಕರ ಶುನಿಗಳಿಗೆ ತೀರ್ಥ ಪ್ರಸಾದವೆಲ್ಲಿಯದೋ? ಮೇಲಾಗಿ ಅಷ್ಟಾವರಣವೂ ಇಲ್ಲ. ಇಂತಪ್ಪ ಪಂಚಮಹಾಪಾತಕರು ನಾವು ಮೋಕ್ಷವ ಹಡೆಯಬೇಕೆಂದು ಗುರುಲಿಂಗ ಜಂಗ ಮವ ತಮ್ಮಂಗದ ಇದಿರಿಟ್ಟು ಪೂಜೋಪಚಾರವ ಮಾಡಿ, ಸಾಲೋಕ್ಯ, ಸಾಮಿಪ್ಯ, ಸಾರೂಪ್ಯ, ಸಾಯುಜ್ಯವೆಂಬ ಚತುರ್ವಿಧ ಖಂಡಿತ ಫಲಪದವಪ ಡೆದು ಅನುಭವಿಸಿ, ಕಡೆಯಲ್ಲಿ ಎಂಬತ್ತುನಾಲ್ಕುಲಕ್ಷಭವಮಾಲೆಯಲ್ಲಿ ಬಪ್ಪುದು ತಪ್ಪದು. ಇಂತಪ್ಪ ವಿಚಾರವನು ಸ್ವಾನುಭಾವ ಗುರುಮುಖದಿಂದ ತಿಳಿದು ವಿಚಾ ರಿಸಿ ಸಕಲ ಪ್ರಪಂಚವನೆಲ್ಲವನು ನಿವೃತ್ತಿಯ ಮಾಡಿ, ದ್ವೈತಾದ್ವೈತವ ನಷ್ಟ ಮಾಡಿ, ಸಕಲ ಸಂಸಾರ ವ್ಯಾಪಾರದ ವ್ಯಾಕುಲದ ಚಿಂತನೆಯ ಬಿಟ್ಟು ನಿಶ್ಚಿಂತ ನಾಗಿ, ಏಕಾಗ್ರ ಚಿತ್ತದಲ್ಲಿ ಸ್ವಸ್ಥಿರವಾಗಿ ಮುಂದೆ ಶಿವಪಥವ ಸಾಧಿಸಬೇಕಲ್ಲದೆ, ಇದನರಿಯದೆ ತನುಮನಧನದ ಪ್ರಕೃತಿಯಲ್ಲಿ ಹರಿದಾಡಿ, ಮಾತಾಪಿತರು, ಸತಿ ಸುತರು, ಸ್ನೇಹಿತರು, ಬಾಂಧವರು, ಎನ್ನವರು ಎಂದು ಹೊನ್ನು ಹೆಣ್ಣು ಮಣ್ಣೆಂಬ ತ್ರಿವಿಧಮಲವ ತಿಂದು ಸಂಸಾರದ ರಸೋದಕವೆಂಬ ನೀರ ಕುಡಿದು ಹಾಳುಗೇರಿ ಹಂದಿ ಜಪ ಇಟ್ಟ ಹಾಗೆ ಈ ಸಂಸಾರವೆಂಬ ಹಾಳುಗೇರಿಗೆ ಜೀವನೆಂಬ ಹಂದಿ ಮಚ್ಚಿ ಮರುಳಾಗಿ ಹೊಡೆದಾಡಿ ಹೊತ್ತುಗಳೆದು ಸತ್ತುಹೋಗುವ ಹೇಸಿ ಮೂಳ ಹೊಲೆ ಮಾದಿಗರಿಗೆ ಶಿವಪಥವು ಎಂದಿಗೂ ಸಾಧ್ಯವಿಲ್ಲವೆಂದಾತ ವೀರಾದಿವೀರ ನಿಮ್ಮ ಶರಣ ಕಾಡಿನೊಳಗಾದ ಶಂಕರಪ್ರಿಯ ಚನ್ನಕದಂಬಲಿಂಗ ನಿರ್ಮಾಯ ಪ್ರಭುವೇ.

(೧೩). ಅಯ್ಯಾ ನಾವು ಪರಮ ವಿರಕ್ತರು ಪಟ್ಟದೊಡೆಯರೆಂದು, ಪರದೇಶಯ್ಯಗಳು ಅತೀತ ಚರಮೂರ್ತಿಗಳೆಂದು ಶಂಖಗಿಳಿಲು ದಂಡಾಗ್ರವ ಪಿಡಿದು, ಕಾವಿಕಾಷಾಯಾಂಬರವ ಹೊದ್ದು, ಮಹಾಘನಲಿಂಗ ಚರಮೂರ್ತಿ

ಗಳಿಂದು ಚನ್ನಾಗಿ ನುಡಿದುಕೊಂಬ ತೊನ್ನ ಹುಲಿಮಾದಿಗರ ಪ್ರಸಂಗಕ್ಕೆ ಮನವೆಳಸದೆ ಮುಖವೆತ್ತಿ ನೋಡದೆ ಶಬ್ದ ಮುಗ್ಧನಾಗಿ ಸುಮ್ಮನೆ ಕುಳಿತಿರ್ದನು ಕಾಣಾ ನಿಮ್ಮ ಶರಣ! ಅದೇನು ಕಾರಣವೆಂದರೆ, ತನ್ನ ತಾನಾರೆಂದರಿಯದೆ, ತನ್ನ ಇಷ್ಟ ಮಹಾಘನಲಿಂಗದ ಗೊತ್ತಮುಟ್ಟದೆ, ತನುಮನಧನವೆಂಬ ತ್ರಿವಿಧ ಪದಾರ್ಥವನರ್ಪಿಸಿ, ತ್ರಿವಿಧ ಪ್ರಸಾದವ ಗರ್ಭೀಕರಿಸಿಕೊಂಡ ಪ್ರಸನ್ನ ಪ್ರಸಾದವ ಸ್ವೀಕರಿಸಿ ಪರತತ್ವ ಪ್ರಸಾದಮೂರ್ತಿ ತಾನಾಗಲರಿಯದೆ, ಉಚ್ಚಂಗೀದುರ್ಗೆ ಬಿಟ್ಟ ಪೋತರಾಜನಂತೆ ಮೂರು ಮೂರು ಜಡೆಮುಡಿ ಗಡ್ಡಗಳ ಬಿಟ್ಟುಕೊಂಡು, ಡೊಂಬ ಜಾತಿಕಾರರಂತೆ ವೇಷವ ತೊಟ್ಟು, ಸಂಸ್ಕೃತಾದಿ ಪ್ರಾಕೃತಾಂತ್ಯಮಾದ ನಾನಾಶಾಸ್ತ್ರವ ಹೇಳಿ ಸುಡುಗಾಡಸಿದ್ಧಯ್ಯಗಳಂತೆ ಕುಟಿಲ, ಕುಹಕ, ಯಂತ್ರ ತಂತ್ರಗಳ ಕಟ್ಟುತ, ಪುರಜನರ ಮೆಚ್ಚಿಸಬೇಕೆಂದು, ಅಯ್ಯಾ ನಾವು ಕೆರೆ, ಭಾವಿ, ಮಠಮಾನ್ಯ, ಮದುವೆ, ಮಾಂಗಲ್ಯ ದೀಕ್ಷೆ, ಪಟ್ಟಪ್ರಯೋಜನ, ಅಯ್ಯತನ, ಅನ್ನಕ್ಷೇತ್ರ, ಅರವಟಿಗೆ, ದಾಸೋಹ, ಪುರಾಣಪುಸ್ತಕ ಮಾಡಿಸಬೇಕೆಂದು ಗುರುಲಿಂಗ ಜಂಗಮಕ್ಕಲ್ಲದೆ ನಿರಾಭಾರಿ ವೀರಶೈವಕ್ಕೆ ಹೊರಗಾಗಿ, ದುರಾಸೆ ಮುಂದುಗೊಂಡು ನಾನಾದೇಶವ ತಿರುಗಿ ಅರಸಗಳಾದಿ ದೇಸಾಯಿಗಳಂತ್ಯಮಾದ ಹೊಲೆ ಮಾದಿಗರ ಕಾಡಿ ಬೇಡಿ, ಹುಸಿಯ ಬೊಗಳಿ ವ್ಯಾಪಾರದ ಮರೆಯಿಂದು ನಡ ಊರ ಬೀದಿ ಬಾಜಾರದ ನಡುವೆ ಕುಳಿತು ಪರರೊಡವೆಯು ಅಪಹರಿಸುವ ಶೆಟ್ಟಿವರ್ತಕ ಮುಂತಾದ ಸಮಸ್ತ ಕಳ್ಳರ ಮಕ್ಕಳ ಕಾಡಿ ಬೇಡಿ, ಅವರು ಕೊಟ್ಟರೆ ಹೊಗಳಿ, ಕೊಡದಿರ್ದಡೆ ಬೊಗಳಿ, ಆ ಭ್ರಷ್ಟ ಹೊಲೆಮಾದಿಗರು ಕೊಟ್ಟ ದ್ರವ್ಯಗಳ ಕೊಂಡು ಬಂದು, ಕಡೆಗೆ ಚೋರರೊಯ್ದರೆಂದು ಮಠದೊಳಗೆ ಮಡಗಿಕೊಂಡು, ಪರಸ್ತ್ರೀಯರ ಹಡಿಕಿ ಯೋನಿಯೊಳಗೆ ಇಂದ್ರಿಯ ಬಿಟ್ಟು, ದುರ್ಗುಣ ದುರಾಚಾರಿಗಳ ಶ್ರೀಗುರು ಲಿಂಗಜಂಗಮವೆಂದು ಕರೆತಂದು ತೀರ್ಥಪ್ರಸಾದವ ತೆಗೆದುಕೊಂಬುವವರಿಗೆ ಇಪ್ಪತ್ತೆಂಟುಕೋಟಿ ಯುಗಪರಿಯಂತರದಲ್ಲಿ ನರಕಕೊಂಡದಲ್ಲಿಕ್ಕುವ ಕಾಣಾ ನಿಮ್ಮ ಶರಣ ಕಲಿದೇವರ ದೇವಾ.

(೧೪). ಅಯ್ಯಾ, ತಂಬಾಕು ಭಕ್ಷಣೆಯು ಮಾಡಿದಡೆ, ಹಂದೀ ನರಕವ ಕೊಂಡ ಸಮಾನ. ನಾಸೀ ಭಕ್ಷಣವ ಮಾಡಿದಡೆ, ನಾಯು ನರಕವ ಕೊಂಡ ಸಮಾನ. ಭಂಗೀ ಭಕ್ಷಣವ ಮಾಡಿದಡೆ, ಮಾರ್ಜಾಲನ ಮಲವ ತಿಂದ ಸಮಾನ. ಗಾಂಜೀ ಭಕ್ಷಣವ ಮಾಡಿದಡೆ, ಹದಿನೆಂಟು ಜಾತಿ ನೂರೊಂದು ಕುಲದ ಮಲವ

ತಿಂದ ಸಮಾನ. ಇದು ಕಾರಣ, ತಂಬಾಕು ಸಾಸಿ ಭಂಗಿ ಗಾಂಜಿ ಭಕ್ಷಿಸಿ, ಅಂಗದ ಮೇಲೆ ಇಷ್ಟಲಿಂಗವ ಕಟ್ಟಿ, ಅನ್ಯದೈವಕ್ಕೆ ಜಗಲಿಯ ಕಟ್ಟಿ, ಮನೆಯೊಳಗಿಟ್ಟು ಪೂಜಿಸುವ ಭ್ರಷ್ಟ ಹೊಲೆ ಮಾದಿಗರಿಗೆ ಪರಮ ನಿರಂಜನ ಶ್ರೀಗುರುಲಿಂಗ ಜಂಗಮವೆಂದು ಕರೆತಂದು ಅವರ ಪಾದೋದಕ ಪ್ರಸಾದ ತೆಗೆದುಕೊಂಬುವರಿಗೆ ಹದಿನೆಂಟು ಕೋಟಿಯುಗ ಪರಿಯಂತರ ನರಕದ ಕೊಂಡದಲ್ಲಿಕ್ಕುವದು ಕಾಣೆಂದ ರೇಕಣ್ಣ ಪ್ರಿಯ ನಾಗಿನಾಥಾ.

(೧೫). ಅಯ್ಯಾ ಕಂಡವ ತಿಂದು, ಹೆಂಡವ ಕುಡಿದು, ರಂಡಿಯ ಸಂಪರ್ಕವ ಮಾಡಿ, ತಪ್ಪಿಗೆ ದಂಡವ ಕೊಡುವ, ಜಂಗಭಂಡ ತಾಯಿಗ್ಗಂಡ ಹೆಂಡಗಾರರಿಗೆ, ಸದ್ಭಕ್ತರು ಸಿದ್ಧವೀರ ಮಾಹೇಶ್ವರರು, ಎಂದು ಮನದಲ್ಲಿ ಭಾವಿಸಿದಡೆ ಹುಳುಗೊಂಡದಲ್ಲಿಕ್ಕುವ ಕಾಣಾ ನಿಮ್ಮ ಶರಣ ಕಲಿದೇವರ ದೇವಾ.

(೧೬). ಭಕ್ತಂಗೆ ಹೆಣ್ಣು ಬೇಡ, ಹೊನ್ನು ಬೇಡ, ಮಣ್ಣು ಬೇಡ ಎಂದು ಹೇಳಿ, ತಾ ಮುಟ್ಟುವನ್ನ ಬರಲಿ, ಆ ಬೋಧೆ ಹುಸಿ. ತಾನು ಮುಟ್ಟದೆ ತನ್ನ ಮುಟ್ಟಿಪ್ಪ ಭಕ್ತನ ತಟ್ಟದೆ, ಕರ್ಮಕ್ಕೆ ಕರ್ಮವ ನಿತ್ತು, ತಾವರ್ಮಿಗನಾಗ ಬಲ್ಲಡೆ, ಹೊಳೆಯಲ್ಲಿ ಹಾಕಿದ ಸೋರೆಯಂತೆ, ಅನಿಲಕೊಂಡೊಯ್ದ ಎಲೆಯಂತೆ. ಏತಕ್ಕೂ ಹೊರಗಾಗಿ ಜಗದಾಸೆ ಇಲ್ಲದಿರ್ಪ ವೇಷಕ್ಕೆ ಒಳಗಲ್ಲ, ಆತ ಜಗದೀಶನೆಂಬೆ, ನಿಷ್ಕಳಂಕ ಮಲ್ಲಿಕಾರ್ಜುನಾ.

**ಅರ್ಥ**:—ಭಕ್ತರುಗಳಿಗೆ ಹೆಣ್ಣಿನ ಮೇಲೆ ಕಾಂಕ್ಷೆಯು ಬೇಡ, ಹೊನ್ನಿನ ಮೇಲಿನ ಕಾಂಕ್ಷೆಯು ಬೇಡ, ಮಣ್ಣಿನ ಮೇಲಿನ ಕಾಂಕ್ಷೆಯು ಬೇಡ ಎಂದು ಬೋಧಿಸಿ, ತಾ ಮಲತ್ರಯಂಗಳ ಹಿಡಿವ ಪರಿಯಂತರದಲ್ಲಿ ತಾ ಬೋಧಿಸುವ ಬೋಧೆ ಶಠೆ ಎಂದು ಹೇಳುವೆನು. ತಾ ಮಲತ್ರಯಂಗಳ ಪ್ರಪಂಚಕ್ಕೊಳಗಾಗದೆ ಜಂಗಮ ಭಕ್ತಿಯಲ್ಲಿ ಕೂಡಿಪ್ಪ ಭಕ್ತನ ಭಕ್ತಿಯಲ್ಲಿ ಅಶಕ್ತನಾಗದೆ ಉಪಾಧಿ ಭಕ್ತರಿಗೆ ಉಪಾಧಿ ಭಕ್ತಿಯನೇ ಬೋಧಿಸಿ, ತಾನು ಜ್ಞಾನಿಯಾಗಿರಬಲ್ಲಡೆ, ನದಿಯೊಳಗೆ ಹಾಕಿದ ಸೋರೆಯ ಕಾಯಿ ಮುಳುಗದೆ ತೇಲಿ ಹೋಗುವ ಹಾಗೆ, ವಾಯು ಹಾರಿಸಿಕೊಂಡು ಹೋದ ಪತ್ರವು ಆವಾಯುವಿನತ್ತ ಎಯ್ದದೆ ಮರಳಿ ಭೂಮಿಯಲ್ಲಿಯೇ ಬೀಳುವ ಹಾಗೆ, ಸಕಲ ಪ್ರಪಂಚಿಗೆ ವಿಲಕ್ಷಣನಾಗಿ ಜಗದಾತ್ಮರುಗಳಿಂದ ಒಂದು ವಸ್ತುವ ಪಡೆಯಬೇಕೆಂಬ ಬಯಕೆ ಇಲ್ಲದೆ ಇರುತ್ತಿಹನು,

ಆತನು ಉಪಾಧಿ ಲಾಂಛನಕ್ಕೊಳಗಲ್ಲ. ಆತನು ಜಗತ್ಕರ್ತುವಾದ ಪರಶಿವನೆಂಬುದರ್ಥ.

(೧೭). ಮುನಿಯದಿರಿ, ಮುನಿಯದಿರಿ. ನಿಮಗೊಂದು ಯುಕ್ತಿಯ ಪೇಳುವೆನು. ಅದೆಂತೆಂದೊಡೆ, ನೀವೆನ್ನ ವಂಶೀಭೂತರಾದ ಕಾರಣ, ನಿಮ್ಮ ಹೆಚ್ಚು ಕುಂದು ಎನ್ನದಾಗಿ, ನಮ್ಮ ಅಸ್ತಿನಾಸ್ತಿ ಎನ್ನದಾಗಿ, ನಿಮ್ಮ ಹಾನಿವೃದ್ಧಿ ಎನ್ನದಾಗಿ. ಹಾವ ಹಿಡಿವರು ಬೇಲಿಯ ಹೊಗದೆ, ಹೋಹರೇ ಅಯ್ಯಾ? ವ್ಯಾಧನು ಸೂಸಲ ಚಲ್ಲಿ, ಜಂತ್ರವ ಹಣ್ಣಿ, ಅದಿಗಲ್ಲನೊಡ್ಡಿ ಹೋದ ಬಳಿಕ, ಸೂಸಲ ಕಂಪಿಂಗೆ ಹೆಗ್ಗಣ ಬಂದು ಬಿದ್ದಂತೆ, ಬಿದ್ದಿರಲ್ಲಾ ಮಾಯದ ಬಲೆಯಲ್ಲಿ! ಕೋಪವೆಂಬ ರಾಡನೊಡ್ಡಿ, ತಾಪವೆಂಬ ಅದಿಗಲ್ಲನಿರಿಸಿ, ಹುಸಿ ಎಂಬ ಮೀಟುಗಣೆಯ ಜಂತ್ರಿಸಿ, ಹೊನ್ನು, ಹೆಣ್ಣು, ಮಣ್ಣೆಂಬ ಅದಿಗಲ್ಲ ನೊಡ್ಡಿ ಕೆಡಹಿದನಲ್ಲಾ ನಿಃಕರುಣಿ ಮುಕ್ಕಣ್ಣ ವ್ಯಾಧನು. ಅದೆಂತೆಂದೊಡೆ, ಶಿವರಹಸ್ಯದಲ್ಲಿ:— ನಿಸ್ಸಂಗತ್ವ ನಿರಾಭಾರಿ ನಿಸ್ಸೀಮಂ ನಿರುಪಾಧಿಕಂ । ನಿರ್ದೇಹಂ ನಿರ್ಮಲಂ ನಿತ್ಯ ಸತ್ಯಂ ಜಂಗಮ ಲಕ್ಷಣಂ ॥ ಇಂತೆಂಬ ಶೃತ್ಯರ್ಥವ ಕೇಳದೆ, ಜಂಗಮವಾಗಿ ಸುಳಿವ ಮರುಳುಗಳಿರಾ, ಮತ್ತೆಯೂ, ಶ್ಲೋ ॥ ಸುಖಂಬಿಂದು ಮಾತ್ರೇಣ ದುಃಖಂ ಪರ್ವತ ಏವಚ । ಹರಣೀಪಾದ ಮಾತ್ರೇಣ ಬಂಧನಂ ಚ ಜಗತ್ರಯಂ ॥ ಇಂತೆಂಬ ಶೃತಿಗೊಳಗಾಗದೆ, ಹೊನ್ನು ಹೆಣ್ಣು ಮಣ್ಣಿನಾಶೆಯುಂಬಿಟ್ಟು, ಕೋಪ ತಾಪವಂಬಿಟ್ಟು, ಭ್ರಾಂತಿ ಭ್ರಮೆಯುಂಬಿಟ್ಟು ಜಂಗಮವಾಗಬೇಕು ಕಾಣಿರೋ ಮರುಳುಗಳಿರಾ. ಇಂತೀ ಷಡುಲೋಭದ ರುಚಿಯು ಹಿಂಗಿ ಜಂಗಮವಾದಲ್ಲದೆ ಭವಹಿಂಗದು ಕಾಣಾ ಗುಹೇಶ್ವರಾ.

---

## ( ೨ ) ಜಂಗಮನ ವೇಷಲಾಂಛನಗಳು.

(೧). ಈಶವೇಷವ ಧರಿಸಿದಡೇನು? ವೇಷಕ್ಕೆ ಈಶನಂಜಿ ಒಲಿವನೇ? ಹೊರವೇಷ ಚನ್ನಾಯಿತ್ತಲ್ಲದೆ, ಒಳಗೆ ಅರಿವಿಲ್ಲ. ವೇಷವೇನು, ಗ್ರಾಸಕ್ಕೆ ಭಾಜನವಾಯಿತ್ತಲ್ಲದೆ, ಲಿಂಗಕ್ಕೆ ಭಾಜನವಾದುದಿಲ್ಲ. ಮತ್ತೆಂತೆಂದೊಡೆ, ಅರಿವು ಆಚಾರ ಅನುಭಾವ ಭಕ್ತಿ ವಿರಕ್ತಿ ನೆಲೆಗೊಂಡ ರೂಪಿನಲ್ಲಿ ಶಿವನೊಲಿದಿಪ್ಪನು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನು.

(೨). ವೇಷವ ಹೊತ್ತ ಹಿರಿಯರು ಈಶ್ವರ ಧ್ಯಾನದಲ್ಲಿರಬೇಕು. ವೇಷವ ತೋರಿ ಗ್ರಾಸಕ್ಕಾಗಿ ಆಶೆಮಾಡಿ, ಲೋಗರ ಮನೆಯ ಕಾಯ್ದು, ಗ್ರಾಸವಪಡೆದು ಉದರವ ಹೊರೆವ ವೇಷವು ವೇಶಿಯಿಂದಲೂ ಕರಕಷ್ಟ ಕಾಣಾ ರಾಮನಾಥಾ.

(೩). ವೇಷವ ಹೊತ್ತು ದೋಷದಲ್ಲಿ ನಡೆದಡೆ, ದೋಷಕ್ಕೆ ವೇಷ ಭಂಡ. ವೇಷವ ಕಂಡು, ಮೊದಲೇಲೇಸೆಂದು ಕೊಂಡಾಡುವ ದೋಷಿಗಳ ನರಕದಲ್ಲಿಕ್ಕುವ ಕಾಣಾ ರಾಮನಾಥಾ.

(೪). ವೇಷವನೂ ವೇಶಿಯನೂ ಸರಿ ಎಂಬೆ. ವೇಷವು ಲೋಕವ ಹಾರುವದು. ವೇಶಿಯೂ ಲೋಕವ ಹಾರುವಳು. ವೇಷವ ಹೊತ್ತು ಲೋಕವ ಹಾರದಿರ್ದಡೆ, ಆತ ಈಶ್ವರನೆಂಬೆ ರಾಮನಾಥಾ.

(೫). ಈಶ ಲಾಂಛನವ ತೊಟ್ಟು ವೇಷ ಲಾಂಛನವ ತೊಡಲೇತಕ್ಕೆ? ಇದು ನಿಮ್ಮ ನುಡಿ ನಡೆಗೆ ನಾಚಿಕೆಯಲ್ಲವೇ? ಅಂದಣ ಛತ್ರಾಭರಣ ಕರಿತುರಗಂಗಳ ಗೊಂದಣವೇತಕ್ಕೆ? ಅದು ಘನಲಿಂಗದ ಮೆಚ್ಚಲ್ಲೆಂದ ಅಂಬಿಗ ಚೌಡಯ್ಯ.

(೬). ಸಚರಾಚರ ಚತುರ್ವಲಯದೊಳಗೆ ತಿರುಗುವ ವೇಷಧಾರಿಯ ನೆನಗೆ ತೋರದಿರಯ್ಯ. ಗ್ರ ॥ ಆಶಾಬದ್ಧತೇ ಲೋಕೇ । ಕರ್ಮಣಾಂ ಬಹು ಚಿಂತಯಾ ॥ ಆಯುಕ್ಷೀಣಂ ನ ಜಾನಾತಿ । ವೇಣು ಸೂತ್ರವಿಧೀಯತೆ ॥ ಎಂದುದಾಗಿ, ಆಶೆಯ ಧಿಕ್ಕರಿಸಿ, ನಿರಾಶೆಯ ಪತಿಕರಿಸಿದ ವೇಷವ ಕಂಡಡೆ ನೀಸರಿ ಎಂಬೆ ಕೂಡಲಚನ್ನಸಂಗಯ್ಯ.

(೭). ಘಟಸಂಸ್ಕಾರದಲ್ಲಿ ಪಟಲಹರಿವುದೇ, ಜೀವ ಸಂಸ್ಕಾರವಿಲ್ಲದ ನ್ನಕ್ಕರ? ವೇಷಧಾರಿ ತನ್ನಲ್ಲಿ ಗ್ರಾಸವಹುದೆಂದಲ್ಲವೇ? ಜ್ಞಾನಸಂಸ್ಕಾರವಿಲ್ಲದ ನ್ನಕ್ಕರ ಭವವೆಂತು ಹರಿವುದು? ಅಂಗಭವಿ ಲಿಂಗಭವಿಯ ಕಳೆದುಳಿದಲ್ಲದೆ ಕೂಡಲಚನ್ನಸಂಗಯ್ಯನ ಹೊದ್ದಬಾರದು.

(೮). ಅಷ್ಟಮದಂಗಳೆಂಬ ಆನೆಯ ಮೆಟ್ಟಿ, ಅವಿನಾಶವೆಂಬ ಕಂಥೆಯ ತೊಟ್ಟು, ಅನಾಹತವೆಂಬ ಖರ್ಪರಮಂ ಕೊಂಡು, ಅಕಾಯ ಕಲ್ಪಿತವೆಂಬ ಯೋಗದಂಡಮಂ ಪಿಡಿದು, ಕಾಯಕಲ್ಪಿತ ಜೀವನೋಪಾಯಮನತಿಗಳೆದು,

ಮಾಯಾಪ್ರಪಂಚಃನಾಸ್ತಿಯಾಗಿ, ಶಿವಧ್ಯಾನಕಾರಣ ಸದಾಚಾರ ಎಡೆಗೊಂಡು ಸಮ್ಯಜ್ಞಾನವೆಂಬ ಶಿವಪುರಮಂ ಪೊಕ್ಕು, ಸಮತೆಯೆಂಬ ಓಗರವನೆತ್ತುತ್ತ, ಅಜ್ಞಾನವೆಂಬ ವಾಯು ಹೊಡೆವುತ್ತ, ಶ್ಲೋ॥ ಪಾತಕಕೋಟಿ ಬ್ರಹ್ಮಹತ್ಯ ಯುತಾನಿ ಚ । ದಹತ್ಯಶೇಷಪಾಪಾನಿ ಶಿವಭಕ್ತಸ್ಯ ದರ್ಶನಾತ್ ॥ ಎಂದುದಾಗಿ, ಸಕಲ ಜೀವಂಗಳ ಕರ್ಮಕ್ಷಯುವ ಮಾಡಲೆಂದು ಸುಳಿವನಯ್ಯ ಮಹಾಂತ ಸಕಳೇಶ್ವರದೇವಾ ನಿಮ್ಮ ಶರಣ.

(೯). ಮಾಡುವ ಭಕ್ತನಲ್ಲಿ ಕೂಡಿಪ್ಪ ಜಂಗಮವು ಖೊಡಿಗಳೆವುತಿಪ್ಪರು, ಒಬ್ಬರನೊಬ್ಬರು ತಮ್ಮ ತಾವರಿಯದ ಖಂಡಿತರು, ಒಡಲು ಗುಣಧರ್ಮದಿಂದ ಹೊಟ್ಟೆ ಹೊರೆವವರಿಗೇಕೆ ಶಿವವೇಷ? ಜಂಗಮವೆನಿಸಿಕೊಳ್ಳುವ ವೇಷಧಾರಿಗಳು ಅರಸನ ಹೆಸರು ಕರಿಸಿಕೊಂಬ ಅನಾಮಿಕನಂತೆ, ನಾಮರೂಪಿರ್ದರೇನಾಯಿತು? ಅಲ್ಲಿ ಶಿವನಿಲ್ಲ. ಎಲ್ಲ ಅವನಿಯಲ್ಲಿ ಹೇಮವಿಪ್ಪುದೇ? ಇಪ್ಪುದು ಒಂದು ಠಾವಿನಲ್ಲಿ. ಪರಮನವೇಷಕ್ಕೆ ತಕ್ಕ ಚಾರಿತ್ರ್ಯವುಳ್ಳಲ್ಲಿ ಶಿವನಿಪ್ಪನು. ಅದೆಂತೆಂದೊಡೆ, ಶ್ಲೋ॥ ಧಾರಯೇತ್ಸಮಕಂಥಾ । ಕ್ಷಮಾಖ್ಯಭಸ್ಮಘಂಟಾ । ದಯಾಕಮಂಡಲು ಮೆವಪ್ರೋಕ್ತಾ । ಜ್ಞಾನದಂಡಮನೋಹರಂ । ವೈರಾಗ್ಯ ಭಿಕ್ಷಾ ಮಾತ್ರಂ ಚ ಭಕ್ತಿಭಿಕ್ಷಾ ಚ ಯಾಚಯೇತ್ ॥ ಎಂದುದಾಗಿ, ಅರಿವಿನ ವೇಷವ ಜ್ಞಾನದಲ್ಲಿ ಧರಿಸಿ, ಕುರುಹಿನ ವೇಷವ ಅಂಗದಲ್ಲಿ ಧರಿಸಿ, ಭಕ್ತಿ ಭಿಕ್ಷಾಂದೇಹಿಯಾದ ಅರಿವು ಮೂರ್ತಿಗೆ ವೇಷ ವ್ರತಬೇಡ, ಗುಹೇಶ್ವರಲಿಂಗದ ಆಣತಿಯುಂಟಾಗಿ.

## ಜಂಗಮನ ಜಡೆ, ಮುಡಿ, ಬೋಳು.

(೧೦). ತನು ಬತ್ತಲೆ ಇದ್ದರೇನು, ಮನಶುಚಿಯಾಗದನ್ನಕ್ಕರ? ಮಂಡೆ ಬೋಳಾದರೇನು, ಭಾವ ಬಯಲಾಗದನ್ನಕ್ಕರ? ಭಸ್ಮವ ಹೂಸಿದರೇನು ಕರಣಾದಿಗುಣಂಗಳನೊತ್ತಿ ಮೆಟ್ಟಿ ಸುಡದನ್ನಕ್ಕರ? ಇಂತೀ ಆಶೆಯ ವೇಷದ ಭಾಷೆಗೆ ಗುಹೇಶ್ವರ, ನೀ ಸಾಕ್ಷಿಯಾಗಿ, ‘ ಛೀ ’ ಎಂಬೆನು.

(೧೧). ಮಂಡೆ ಬೋಳಾದರೇನೋ, ಹುಟ್ಟು ಬೋಳಾಗದನ್ನಕ್ಕರ? ತನುನಿರ್ವಾಣವಾದರೇನೋ, ಆಶೆ ನಿರ್ವಾಣವಾಗದನ್ನಕ್ಕರ? ಇಂದ್ರಿಯನಿ

ಗ್ರಹ ಮಾಡಿದರೇನೋ, ಷಟ್‌ಸ್ಥಲ ಅನುಗ್ರಹವಾಗದನ್ನಕ್ಕರ? ಸೌರಾಷ್ಟ್ರ ಸೋಮೇಶ್ವರಲಿಂಗ ಬರಿದೆ ಒಲಿವನೇ?

(೧೨). ಕೇಶ ಕಾಷಾಯಾಂಬರವನಿಕ್ಕಿದಡೇನೋ? ವಿಭೂತಿ ರುದ್ರಾಕ್ಷಿಯ ಧರಿಸಿದಡೇನೋ? ಸಾಕಾರದಲ್ಲಿ ಸನ್ಮತನಲ್ಲ. ನಿರಹಂಕಾರದಲ್ಲಿ ನಿರುತನಲ್ಲ. ಪಾರಮಾರ್ಥದಲ್ಲಿ ಪರಿಣಾಮಿಯಲ್ಲ. ಇದು ಕಾರಣವಾಗಿ, ಕೂಡ ಲಚನ್ನಸಂಗಮದೇವಾ, ತುರುಬಾಗಲಿ, ಜಡೆಯಾಗಲಿ, ಬೋಳಾಗಲಿ, ಅರಿವು ಆಚಾರವುಳ್ಳಡೆ ಜಂಗಮ.

(೧೩). ಧಾತುಗೆಟ್ಟು ಬೋಳಾದರೇನು? ನಿಜವನೆಯ್ದ ಬಲ್ಲುದೇ ಅಯ್ಯ? ವಿಕೃತವೇಷವ ತೋರಿ, ಉದರವ ಹೊರೆವ ವೇಷಕ್ಕೆಂತಯ್ಯ? ಉಪಾಧಿವಿಡಿದು ಮಾಡುವ ಕ್ರಿ ಸಕಳೇಶ್ವರಂಗೆ ದೂರವಯ್ಯ.

(೧೪). ಜಡೆ ಮುಡಿ ಬೋಳು ಹೇಗಿದ್ದರೇನೋ? ನಡೆನುಡಿ ಸಿದ್ಧಾಂತವಾದರೆ ಸಾಕು. ಆತಸ್ವಯಂ ಜ್ಯೋತಿ ಗುರುವಹ. ಈ ಇರವ ನಿನ್ನ ನೀನರಿ, ಪಾಪಾರಣ್ಯ ದಹನ ಭೀಮೇಶ್ವರ ಲಿಂಗ ನಿರಂಗಸಂಗಾ.

(೧೫). ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆ ಎಂಬುದೇ ಯೋಗದಾಗು ನೋಡಾ. ಈಸುವನರಿಯದೆ ಲೋಚು ಬೋಳಾದರೆ ಮಹಾಲಿಂಗ ಕಲ್ಲೇಶ್ವರ ದೇವರು ನಗುವರು.

(೧೬), ಒಳಗೆ ಬೋಳಾಗಲರಿಯದೆ, ಹೊರಗೆ ವೇಷದ ಬೋಳಿನಲ್ಲಿ ಸುಳಿವ ಅಣ್ಣಗಳ ಕಂಡು ಬೆರಗಾದೆನಯ್ಯ! ಅದೇನು ಕಾರಣವೆಂದರೆ, ತನ್ನ ಕರಣೇಂದ್ರಿಯ ವಿಷಯಾದಿಗಳ ಘನಮಹಾಲಿಂಗದಲ್ಲಿ ತರಹರವಾಗಿರಬಲ್ಲರೆ ಬೋಳು, ಹಮ್ಮು ಬಿಮ್ಮು ಗರ್ವ ಅಹಂಕಾರಗಳನಳಿದುದೇ ಬೋಳು, ಅನಂತ ಕೋಟಿ ಬ್ರಹ್ಮಾಂಡಗಳೊಳ ಹೊರಗೆ ತುಂಬಿ ತೊಳಗಿ ಬೆಳಗುವ ಅಖಂಡ ಪರಿಪೂರ್ಣವಾದ ಪರಬ್ರಹ್ಮದಲ್ಲಿ ಭಾವ ತುಂಬಿರಬಲ್ಲಡೆ ಬೋಳು. ಇಂತೀ ಬೋಳಿನ ಘನವನರಿಯದೆ, ಗಂಡುದೊತ್ತಿನಂತೆ ಮಂಡೆಯ ಬೋಳಿಸಿಕೊಂಡು, ದಿಂಡೆಯತನದಿಂದ ಕಂಡ ಕಂಡವರ ಕೂಡೆ ಕೆಲೆದಾಡುತ್ತ, ಮದಮತ್ಸರಂಗಳು ಮುಂದುಗೊಂಡು ಚರಿಸುತ್ತ, ಬಂದ ಭವದಲ್ಲಿ ಮುಳುಗಾಡುತ್ತ ಇರ್ಪವರು ಬೋಳುಗಳಲ್ಲ. ಜಾಳು ಬೋಳು ನೋಡಾ ಅಖಂಡೇಶ್ವರಾ.

(೧೭). ಹೊನ್ನು ಹೆಣ್ಣು ಮಣ್ಣು ಬಿಟ್ಟು ಮಂಡೆಯ ಬೋಳಿಸಿಕೊಂಡು ಬೋಳಾದ ಬಳಿಕ, ನಿರಾಸಕ್ತನಾಗಿ ಶಿವಧ್ಯಾನ ಪರಾಯಣನಾಗಿಪ್ಪುದೀಗ ಪ್ರಥಮ ಬೋಳು. ಲಿಂಗಾಣತಿಯಿಂದ ಬಂದುದ ಕೈಕೊಂಡು ಲಿಂಗಸಾವಧಾನವಾಗಿಪ್ಪುದೀಗ ದ್ವಿತೀಯ ಬೋಳು. ಶರಣ ಸತಿ ಲಿಂಗ ಪತಿ ಎಂಬ ಭಯವಳಿದು ಪರಮಾನಂದದಲ್ಲಿಪ್ಪುದೀಗ ತೃತೀಯ ಬೋಳು. ಬೋಳಿನ ಅನುವ ಕೂಡಲಚೆನ್ನಸಂಗಯ್ಯನಲ್ಲಿ ಅಲ್ಲಯ್ಯ ಬಲ್ಲ.

---

## (೩) ಜಂಗಮನು ಕಾಯಕವನ್ನು ಮಾಡತಕ್ಕದ್ದು. ‡

(೧). ಗುರುವಾದಡೂ ಕಾಯಕದಿಂದವೇ ಜೀವನ್ಮುಕ್ತಿ. ಲಿಂಗವಾದಡೂ ಕಾಯಕದಿಂದವೇ ಶಿಲೆಯ ಕುಲಹರಿವುದು. ಜಂಗಮವಾದಡೂ ಕಾಯಕದಿಂದವೇ ವೇಷದ ಪಾಶವು ಹರಿವುದು. ಇದು ಚೆನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗದ ಅರಿವು.

(೨). ನೇಮವ ಮಾಡಿಕೊಂಡು ಭಕ್ತರ ಭವನಂಗಳ ಹೊಕ್ಕು, ಕಾಯಕಬಿಟ್ಟು, ಹೊನ್ನು ಬೇಡಿಹೆನೆಂಬುದು ಕಷ್ಟವಲ್ಲವೇ? ಆ ಗುಣ ಅಮಳೇಶ್ವರಲಿಂಗಕ್ಕೆ ದೂರ.

(೩). ಬೇಡಲೇತಕ್ಕೆ ಕಾಯಕವ ಮಾಡಿಹೆನೆಂದು? ಕೊಡದೊಡೆ ಒಡಗೂಡಿ ಬಯ್ಯಲೇತಕ್ಕೆ? ಭಕ್ತರು ಮಾಡಿಹರೆಂದು, ಗಡಿತಡಿಗಳಲ್ಲಿ, ಕವಾಟ ಮಂದಿರ ಮುಂದೆ, ಗೊಂದಿಗಳಲ್ಲಿ, ನಿಂದು ಕಾಯಲೇತಕ್ಕೆ? ಈ ಗುಣಕಾಯಕದಂದವೇ? ಈ ಗುಣ ಹೊಟ್ಟೆಗೆ ಕಾಣದ ಸಂಸಾರದ ಘಟ್ಟುವನ ಇರವು. ಉಭಯ ಭ್ರಷ್ಟಂಗೆ ಕೊಟ್ಟ ದ್ರವ್ಯ ಮೋಖಲೇಶ್ವರ ಲಿಂಗಕ್ಕೆ ಮುಟ್ಟದೇ ಹೋಯಿತ್ತು.

(೪). ಕಾಯಕಕಾರದೆ, ಮೈಸೊಂಬತನದಿಂದ ಬೇರೆ ಕೂಳ ಗಳಿಸಲಾರದೆ ಹಸಿದಿಪ್ಪರಯ್ಯಾ! ಒಡಲು ಸೀರೆಯ ಗಳಿಸಲಾರದೆ ಕಚ್ಚುಟವ ಕಟ್ಟಿಕೊಂಡಿಪ್ಪರಯ್ಯಾ! ಮಿಂಯಲು ಎಣ್ಣೆಯಗಳಿಸಲಾರದೆ, ಮಂಡೆ ಬೋಳಾಗಿಪ್ಪರಯ್ಯಾ!

---

‡ ಇದರೊಡನೆ, ೩೪೪ ರಿಂದ ೩೫೨ ರವರೆಗೆ ಇರುವ ಪುಟಗಳಲ್ಲಿಯ ವಚನಗಳನ್ನೂ ನೋಡಬೇಕು.

ದಿಟದಿಂದ ಬಿಡಿಸಲರಿಯದೆ ಸಂಸಾರದ ಶರೆಯುನವಧರಿಸಿಕೊಂಡಿಪ್ಪವರಿಗೆ ನಾನಂಜುವೆನಯ್ಯ ಸಕಳೇಶ್ವರಾ.

## ಜಂಗಮನು ಭಿಕ್ಷೆಯನ್ನು ಬೇಡಕೂಡದು.

(೫). ಪರಮಾರ್ಥವ ನುಡಿದು ಪರರ ಕಯ್ಯಂತು ಬೇಡುವದು ಕಷ್ಟ ನೋಡಯ್ಯ. ಪುರಾತನರಂತೆ ನುಡಿಯಲೇಕೆ? ಕಿರಾತರಂತೆ ನಡೆಯಲೇಕೆ? ಆಶೆ ಇಚ್ಛೆಗೆ ಏನು ನುಡಿವಿರಿ? ಇಚ್ಛೆಯ ನುಡಿವುದು, ಉಚ್ಚೆಯ ಕುಡಿವುದು ಸರಿ ಕಾಣಿರೋ. ಇಚ್ಛೆಯ ನುಡಿವನೇ ಶಿವಶರಣ? ಮಾತಿನ ಬೊಮ್ಮವ ನುಡಿದು ಮನದಲ್ಲಿ ಆಶೆಯ ಸೊನೆಯು ಕರೆವುತಿಪ್ಪುದು. ಈ ವೇಷವ ಕಂಡು ಎನಗೆ ಹೇಸಿಕೆಯಾಯಿತ್ತು ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೬). ಮಂಡೆಯ ಬೋಳಿಸಿಕೊಂಡು, ನುಡಿದು ಗೋಷ್ಠಿಯ ಕಟ್ಟಿದ ಡೇನು? ಕಂಡ ಕಂಡವರಿಗೆ ಕಯ್ಯೊಡ್ಡಿ ಬೇಡುವ ಭಂಡರನೊಲ್ಲ ನಮ್ಮ ರಾಮನಾಥಾ.

(೭). ಬ್ರಹ್ಮಕ್ಕೆ ಬಾಯ್ದೆರೆದು ಮಾತನಾಡಿ, ಪರಬೊಮ್ಮದ ವೇಷವ ನುಡಿದು ಒಮ್ಮನ ಅಂಬಿಲಿಯನಿಕ್ಕೆಂದು ಹಲುಬುತ, ಹೊಲಬುಗೆಟ್ಟವರ ಕಂಡು ಅವರಿಗೆ ಫಲಪದವಿಲ್ಲೆಂದನಂಬಿಗ ಚೌಡಯ್ಯ.

(೮). ನೇಮಸ್ತನರಿವು ಪ್ರಪಂಚಿನಲ್ಲಿ ಹೋಯಿತ್ತು. ಭಕ್ತನರಿವು ಸಮಾಧಾನದಲ್ಲಿ ಹೋಯಿತ್ತು. ಜಂಗಮದರಿವು ಬೇಡಿದಲ್ಲಿ ಹೋಯಿತ್ತು. ಕ್ರಿಯಾಗಮದೊಳಗೆ ಈ ಯಿಂಗವಿಲ್ಲ ಗುಹೇಶ್ವರಾ ನಿಮ್ಮ ಶರಣರಪೂರ್ವ.

(೯). ಕರ್ತನಿದ್ದೆಡೆಗೆ ಭೃತ್ಯಬಂದೊಡೆ, ಭೃತ್ಯಾಚಾರವ ಮಾಡಿಸಿ ಕೊಂಬ ಕರ್ತಂಗೆ ಕರ್ತೃತ್ವವಲ್ಲಡೆ, ಭೃತ್ಯನಿದ್ದೆಡೆಗೆ ಕರ್ತನೆಯ್ತಂದು ಭೃತ್ಯಾ ಚಾರವ ಮಾಡಿಸಿಕೊಂಬ ಕರ್ತಂಗೆ ಕರ್ತೃತ್ವವೆಲ್ಲಿಯದೋ? ಮೂಜಗದ ಕರ್ತನ ವೇಷವಧರಿಸಿ ಕರ್ತನಾದ ಬಳಿಕ, ಭಕ್ತನಿದ್ದೆಡೆಗೆ ಬಂದು, ಭಕ್ತಿಯ ಮಾಡಿದಡೆ, ತನ್ನ ಕರ್ತಕ್ಕೆ ಅದೇ ಹಾನಿ ನೋಡಯ್ಯ. ಲಿಂಗಾಣತಿಯಿಂದ ಬಂದ ಪದಾರ್ಥವ ಲಿಂಗಾರ್ಪಿತವ ಮಾಡುವದಲ್ಲದೆ, ಅಂಗದಿಚೆಗೆ ಅಂಗವಿಸಿ

ಬೇಡಿದೆನೆಂದಡೆ, ಎನ್ನ ಲಿಂಗಾಭಿಮಾನಕ್ಕೆ ಅದೇ ಹಾನಿ ನೋಡಯ್ಯಾ. ದೇಹ ಮನ ಪ್ರಾಣ ನಿಮ್ಮದಾಗಿ, ಹೆರರ ಬೇಡುವಯಾಚಕರನೊಲ್ಲ. ಲಿಂಗಾಭಿಮಾನಿಗಳಲ್ಲದೆ, ತ್ರಿಭುವನ ಮುಖದಲ್ಲಿ ಬಂದುದನಲ್ಲದೆ ಕೈಕೊಳ್ಳರು, ಕೂರ್ಮಶಿಶುವಿನ ಆಪ್ಯಾಯನದಂತೆ ಆರಾಧ್ಯ ಸಕಳೇಶ್ವರ ದೇವರಲ್ಲಿ ದಯಾಮೃತವನುಂಬ ಶರಣರು.

(೧೦). ಅನೇಕ ಪರಿಯ ಭಕ್ತಿಯ ವೇಷವನಳವಡಿಸಿಕೊಂಡು, ಮನೆ ಮನೆದಪ್ಪದೆ ತಿರುಗುವೆನು. ಅವರಿಚ್ಛೆಗೆ ಅನುಮಾನವಿಡಿದು ನುಡಿವೆನು. ಅವರ ಮನಧರ್ಮವನರಿಯದೆ ನುಡಿದೆನಾದರೆ, ಅನೇಕಪರಿಯಲ್ಲಿ ಭಂಗಬಡುವೆನು. ದಿಟದ ಭಕ್ತನಂತೆ ಪುರಾತನರ ವಚನಂಗಳ ಉದರನಿಮಿತ್ಯವಾಗಿ ಬಳಸುವೆನು. ಕಡುಪಾಪಿ, ಇನ್ನೇನು ಹದನಯ್ಯ ಬಸವಪ್ರಿಯ ಕೂಡಲ ಚನ್ನಸಂಗಮದೇವಾ?

(೧೧). ಒಡೆಯರನೊಡಗೊಂಡು ಬಂದು ಕೈಗಡಿಗೆಯ ನೀರ ಕಯ್ಯಲ್ಲಿ ಕೊಟ್ಟು, ಒಡೆಯರೇ ಕಾಲತೊಳಕೋ, ಎಂಬವರ ಮನೆಗೆ ಅಡಿ ಇಡಲಾಗದಯ್ಯ ಮೃಡಶರಣರು. ಒಡಲಿಚ್ಛೆಗೆ ಬಡಮನವ ಮಾಡಿ ಹೊಕ್ಕುಂಬುವರ ಎನ್ನೆಡೆಗೆ ತೋರದಿರಾ, ರಾಮನಾಥಾ.

## ಜಂಗಮನು ಭಿಕ್ಷಾರ್ಥಿಯಾಗಿ ದೇಶಾಂತರಿಯಾಗಬಾರದು.

(೧೨). ಅಯ್ಯಾ ತಮ್ಮ ತಾವರಿಯದೆ, ತನ್ನಿಷ್ಟಲಿಂಗದ ಹೊಲಬು ತಿಳಿಯದೆ, ಕಾಮವ ತೊರೆಯದೆ, ಹೇಮವ ಜರಿಯದೆ, ನಾವು ಹರಗುರು ಚರ ಷಟ್‌ಸ್ಥಲ ವಿರಕ್ತರೆಂದು ಚನ್ನಾಗಿ ನುಡಿದುಕೊಂಡು ಕಾವಿಕಾಷಾಯಾಂಬರವ ಹೊದ್ದು, ಶಂಖ ಗಿಳಿಲುದಂಡಾಗ್ರವ ಹೊತ್ತು ಮಿಂಚುಗೂಳಿಯಂತೆ ನಾನಾ ದೇಶವ ತಿರುಗಿ ಕಾಂಚನಕ್ಕೆ ಕಯ್ಯೊಡ್ಡುವ ಪಂಚಮಹಾಪಾತಕರನ್ನು ಕಾಗೀ ಗರ್ಭದಲ್ಲಿ ಹುಟ್ಟಿಸಿ 'ಕಾ, ಕಾ' ಎಂದು ಕೂಗಿಸುತಿರ್ಪನು ಕಾಣಾ ಕಲಿದೇವರದೇವಾ.

(೧೩). ತನಗುಂಟಾಗಿ ಶಿಷ್ಯನ ಮನೆಗೆ ಹೋಗಿ ಕಟ್ಟಳೆಯ ವರುಷಕ್ಕೆ ತಪ್ಪದೆ ಅಂಗವಸ್ತ್ರವೆಂದು ಲಿಂಗವಸ್ತ್ರವೆಂದು ಕನಕಪರಿಮಳವೆಂದು, ಅಂದಣಛತ್ರ ಚಾಮರ ಕರಿತುರಗಂಗಳೆಂದು ಇವು ಬಂದುದಿಲ್ಲ ಎಂದು ಸಂದಣಿಯಲಂದಣಕಾರರ ಕಯ್ಯಲ್ಲಿ ಹೇಳಿಸಿ, ಅವು ಬಾರದಿರೆ ಬಂಧಿಸುವ ಲಿಂಗಮಾರಿಗೆ ಗುರು

ಸ್ಥಲ ಎಂದಿಗೂ ಇಲ್ಲ. ಶಂಭುಗಿಂದಿತ್ತ ಸ್ವಯಂಭುಗಿಂದತ್ತ ಅತಿಬಳ ನೋಡಾ. ಮಾತುಳಂಗಮಧುಕೇಶ್ವರನು.

(೧೪). ಮನದಲ್ಲಿ ಹವಣನರಿದು ಮನನಿರ್ದೇಶವಾಗಿ ದೇಶಾಂತರಿಯಾಗದೆ, ಮನವಿಕಳವಾಗಿ ಹೊರಹೊಂಟುದು ವೇಷಾಂತರವಯ್ಯಾ. ಕಂಡವರ ಕಾಡಿ, ನಿಂದವರ ಬೇಡಿ, ಅಜಾತಿ ಎನ್ನದೆ, ಅಚಾರವೆನ್ನದೆ, ಅನಾಚಾರವೆನ್ನದೆ, ತಿರಿದುಂಡು ವೇಷಡಂಭಕತ್ವದಿಂ ಲಾಂಛನವ ಹೊತ್ತು ಕಂಡಲ್ಲಿ ಲಜ್ಜೆಗೆಡುವುದು ತನ್ನ ಮುನ್ನಿನ ದುಷ್ಕೃತ ಪೂರ್ವಕರ್ಮದ ಫಲವಯ್ಯಾ. ಮತ್ತೆಂತೆಂದೊಡೆ, ಮನ ನಿರ್ವಾಣವಾಗಿ ವಿವೇಕಜ್ಞಾನ ಪರಮಾರ್ಥದಲ್ಲಿ ಪರಿಣಾಮಿಯಾಗಿ ಸುಳಿದು ಸೂತಕಿಯಲ್ಲದೆ, ನಿಂದು ಬದ್ಧನಲ್ಲದೆ, ಸುಜ್ಞಾನದಲ್ಲಿ ಸುಳಿದು, ನಿರ್ಮಲದಲ್ಲಿ ನಿಂದವರು, ಅವರು ಪರದೇಶಾಂತರಿಗಳು, ಅವರು ನಿಜನಿವಾಸಿಗಳು ಅವರುಗಳಿಗೆ ನಮೋ ನಮೋ ಎಂಬೆ ಉರಿಲಿಂಗಪೆದ್ದಿ ಪ್ರಿಯವಿಶ್ವೇಶ್ವರಾ.

(೧೫). ದೇಶಾಂತರಿ ದೇಶಾಂತರಿ ಎಂದು ನುಡಿವ ಹುಸಿಭ್ರಷ್ಟರ ನಾನೇನೆಂಬೆನಯ್ಯಾ? “ಏಕಮೂರ್ತಿಸ್ತ್ರಯೋಭಾಗಂ ಗುರೋರ್ಲಿಂಗಂತು ಜಂಗಮಃ” ಎಂಬುದನರಿಯದೆ ದೇಶಾಂತರಿ ಎಂದರೆ ಅರು ಮೆಚ್ಚುವರಯ್ಯಾ? ಸುಮ್ಮನಿರಿ ಭೋ, ಬರುಕಾಯರುಗಳಿರಾ. ದೇಶಾಂತರಿಯಾದರೆ ಮೂರು ಲೋಕದ ಕರ್ತನಂತೆ ಶಾಂತನಾಗಿರಬೇಕು. ಜಲದಂತೆ ಶೈತ್ಯವ ತಾಳಿರಬೇಕು. ಸೂರ್ಯನಂತೆ ಸರ್ವರಲ್ಲಿ ಪ್ರಭೆ ಸೂಸುತಿರಬೇಕು. ಪೃಥ್ವಿಯಂತೆ ಸರ್ವರ ಭಾರವ ತಾಳಿರಬೇಕು. ಹೀಗಾದರೆ ಮಹಾಂತಿನ ಕೂಡಲ ದೇವರೆಂಬೆನಯ್ಯಾ. ಹೀಗಲ್ಲದೆ ತ್ರಿವಿಧಮಲಂಗಳ ಭುಂಜಿಸುತ್ತ ಗುರುಲಿಂಗಜಂಗಮಕ್ಕೆ ತನುಮನಧನ ಸವಿಯದೆ, ತಾನೇ ದೇವರೆಂದು ತಮ್ಮುದರವ ಹೊರೆವ ಶುನಿಸೂಕರನಂತೆ ಪ್ರಪಂಚಿನ ಗರ್ವಿಗಳ ದೇಶಾಂತರಿ ಮಹಂತು ಎನಬಹುದೇನಯ್ಯಾ? ಎನಲಾಗದು ಕಾಣಾ ಕಲಿದೇವರ ದೇವಾ.

---

## (೪). ಬೇಡುವಾತ ಜಂಗಮನಲ್ಲ, ಬೇಡಿಸಿ ಕೊಂಬಾತ ಭಕ್ತನಲ್ಲ.

(೧). ಬೇಡುವಾತ ಜಂಗಮವಲ್ಲ. ಬೇಡಿಸಿಕೊಂಬಾತ ಭಕ್ತನಲ್ಲ. ಬೇಡದೆ ಆ ಭಕ್ತ ತಾನೇ ಮಾಡಿದ ಮಾಟವ ಪರಿಣಾಮಿಸಬಲ್ಲಡೆ ಜಂಗಮ.

ಬೇಡಿಸಿಕೊಳ್ಳದೆ, ಆ ಜಂಗಮದ ಇಂಗಿತವನರಿದು ಮಾಡಬಲ್ಲಡೆ ಆತನೇ ಸದ್ಭಕ್ತನು. ಆ ಭಕ್ತನ ಇಂಗಿತವನರಿದು, ಅವರ ಮನದಿಚ್ಛೆಯ ಸಲಿಸಬಲ್ಲಡೆ ಆತನೇ ಪರಮಜಂಗಮ. ಆ ಭಕ್ತ ನನ್ನದು ನಾನೆಂದು ನುಡಿದಡೆ ನಾಯಿ ಮಾಂಸ, ಸತ್ತ ಹೆಣನ ಮಲವು. ಇದು ಕಾರಣ ನಮ್ಮ ಕೂಡಲ ಚನ್ನಸಂಗಯ್ಯನಲ್ಲಿ ಬೇಡದೆ ಮಾಡುವ ಭಕ್ತನುಂಟಾದಡೆಯೂ, ಬೇಡದೆ ಮಾಡಿಸಿಕೊಂಬುವ ಜಂಗಮವ ಪೂರ್ವವಯ್ಯಾ.

(೨). ಬೇಡದ ಮುನ್ನ ಮಾಡಬಲ್ಲಡೆ ಭಕ್ತ. ಬೇಡುವನೇ ಲಿಂಗ ಜಂಗಮ? ಬೇಡುವವರಿಗೆಯೂ ಬೇಡಿಸಿಕೊಂಬುವವರಿಗೆಯೂ ಪ್ರಸಾದವಿಲ್ಲ ಗುಹೇಶ್ವರಾ.

(೩). ಬೇಡುವನೇ ಲಿಂಗಜಂಗಮ? ಬೇಡಿಸಿಕೊಂಬನೇ ಭಕ್ತ? ಈ ಮರ್ಮವನರಿಯದ ಹಿರಿಯರು ನರಮಾಂಸ ಭಕ್ಷಕರಯ್ಯ! ತನುವನೆತ್ತಿ ಮನ ಉಬ್ಬಿ ಮಾಡಿದರೆ, ಲಿಂಗಾರ್ಪಿತವಾಯಿತ್ತು. ಮಾಡಿ ಮನವಿಲ್ಲದಿರ್ದಡೆ, ನೀಡಿ ನಿಜವಿಲ್ಲದಿರ್ದಡೆ, ಕೊಟ್ಟು ಕರಿಗೊಂಡಡೆ, ಮಾಡಿ, ನೀಡಿ, ಕೊಟ್ಟು, ಕೊಂಡುದು ಅನರ್ಪಿತವಾಯಿತ್ತು. ಇದುಕಾರಣ ಕೂಡಲಚನ್ನಸಂಗಮದೇವಾ ಲಕ್ಷಕ್ಕಾದರೂ ಒಬ್ಬ ಭಕ್ತನುಂಟು, ಕೋಟಿಗಾದರೂ ಒಬ್ಬ ಜಂಗಮವಿಲ್ಲ.

(೪). ಅರ್ಥ ಪ್ರಾಣಾಭಿಮಾನ ಭಕ್ತಂಗೆ ಹೊಲ್ಲಹದೆಂಬರು. ತಮ್ಮ ಹೊದ್ದಿದ ಮಲಿನವನರಿಯರು. ಕರುಳು ಕೊಳ್ಳದ ದಾನವ ಮರಳಿ ಅರ್ಪಿತವೆಂದು ಕೊಳ್ಳಬಹುದೇ? ಬೇಡುವಾತ ಜಂಗಮವಲ್ಲ, ಬೇಡಿಸಿಕೊಂಬಾತ ಭಕ್ತನಲ್ಲ. ಬೇಡದೆ, ಭಕ್ತ ತಾನೇ ಮಾಡಿದ ಮಾಟವ ಪರಿಣಾಮಿಸಬಲ್ಲಡೆ, ಆತನೇ ಜಂಗಮ. ಬೇಡಿಸಿಕೊಳ್ಳದೆ ಜಂಗಮದಿಂಗಿತವನರಿದು ಮಾಡಬಲ್ಲಾತನೇ ಭಕ್ತನು. ಓಡಲಾರದ ಮೃಗ ಶುನಕಂಗೆ ಮಾಂಸವ ನೀವಂತೆ ಇದು ಕಾರಣ ಚನ್ನಸಂಗಯ್ಯನಲ್ಲಿ ಬೇಡದೆ ಮಾಡುವಾತನುಂಟಾದರೇನು, ಬೇಡದೆ ಮಾಡಿಸಿಕೊಂಬ ಜಂಗಮವ ಪೂರ್ವ.

(೫). ಭಕ್ತನ ಮಠಕ್ಕೆ ಜಂಗಮ ಬಂದು, ಆ ಭಕ್ತ ಮಾಡಿದಂತೆ ಭಕ್ತಿಯ ಮಾಡಿಸಿಕೊಂಡು ಕ್ಷಮಿಸಬಲ್ಲಡೆ ಜಂಗಮ. ಆ ಕ್ಷಮೆಯೊಳಗೆ ಮಗ್ನನಾಗಬಲ್ಲಡೆ ಭಕ್ತ. ಹೀಗಲ್ಲದೆ ಉಪಾಧಿಯಿಂದ ಹೇಳಿ ಮಾಡಿಸಿಕೊಂಬನ್ನಕ್ಕರ, ಭೂತ

ಪ್ರಾಣಿ. ಬಂದ ಪರಿಯಲ್ಲಿ ಪರಿಣಾಮಿಸಬಲ್ಲಡೆ ಲಿಂಗಪ್ರಾಣಿ. ಬೇಡಿದಲ್ಲದೆ ಮಾಡೆನೆಂಬನ್ನಕ್ಕರ ಫಲದಾಯಕ. ಬಂದ ಜಂಗಮದ ಇಂಗಿತವನರಿದು, ಬೇಡದ ಮುನ್ನವೇ ಮಾಡಬಲ್ಲಡೆ ಭಕ್ತನೆಂಬೆನು. ಬೇಡದ ಮುನ್ನವೇ ಮಾಡುವ ಭಕ್ತನು, ಬೇಡದೆ ಮಾಡಿಸಿಕೊಂಬ ಜಂಗಮವು ಇಂತೀ ಎರಡರ ಸಮ್ಮೇಳ ಸನ್ನಿಧಿಯಲ್ಲಿರ್ದು ನಾನು ಸುಖಿಯಾದೆನು ಕಾಣಾ ಮಹಾಲಿಂಗಗಜೇಶ್ವರಾ.

---

## (೫). ಜಂಗಮನು ಸದಾ ತೃಪ್ತಿಯುಳ್ಳವನಾಗಿರತಕ್ಕದ್ದು.

(೧). ಅದು ಬೇಕು, ಇದು ಬೇಕೆಂಬ ಎದೆಗುದಿಹತನ ಬೇಡ. ಸಮಾಧಾನಿಯಾಗಿ ಇರ್ದಡೆ ಸಾಕು. ಪಡಿಪದಾರ್ಥ ತಾನಿರ್ದೆಡೆಗೆ ಬಹುದು. ನಿಧಿನಿಕ್ಷೇಪಂಗಳು ಇರ್ದೆಡೆಗೆ ಬಹವಯ್ಯ. ಹೃದಯಶುದ್ಧವಾಗಿ ಸಕಳೇಶ್ವರದೇವ ಶರಣೆಂದಡೆ ನಿಜಪದವನೀವನು.

(೨). ತಾ ದೇವರಾದ ಮತ್ತೆ, ಪೂಜೆಗೊಂಬವರಲ್ಲ ಅಡಿಗಡಿಗೆ ಗಡಿತಡಿಗೆ ಬರಲೇತಕ್ಕೆ? ತಾ ಪರಮನಿರ್ವಾಣದಲ್ಲಿ ತಿರುಗಿ, ಆಡುವವರ, ಕೊಡುವವರ ಒಳ್ಳಿತ್ತು ಸಡಗರಿಸಿ ನುಡಿವವರ ಒಡಗೂಡಿ, ಬಾಗಿಲು ಚಾವಡಿ ಮನೆಗಳಲ್ಲಿ, ನಿಲ್ಲು, ಹೋಗು ಎನಿಸಿಕೊಳ್ಳಲೇತಕ್ಕೆ? ಅವರನೆಲ್ಲಿ ಕಂಡಲ್ಲಿಯೇ ನೋಡಿ ಅವರು ಸಲ್ಲೀಲೆಯಿಂ ಮಾಡುವದ ಕೇಳಿ, ಅಲ್ಲಿಯೇ ಪರಮಾನಂದ ಸುಖಿಯಾಗಿಪ್ಪ ಮಹಾತ್ಮಂಗೆ ಅಲ್ಲಿ ಇಲ್ಲಿ ಎಂಬ ಭಾವದ ಭ್ರಮೆ ಇಲ್ಲ, ಗಾರುಡೇಶ್ವರ ಲಿಂಗವು ತಾನಾದ ಶರಣಾ.

(೩). ದೇಶಮಾತಿನ ಬಿನ್ನಾಣಿಗಳಿಗೆ ಗ್ರಾಸ ಉಂಟಲ್ಲದೆ, ನಿಜವಿಲ್ಲ. ಇಂತೀ ಉಭಯುವನತಿಗಳೆದ ನಿರತಿಶಯ ಲಿಂಗಾಂಗಿಗೆ ಗ್ರಾಸದಾಶೆ ಇಲ್ಲ. ಸರ್ವಸುಖದಾಲಯದ ಪಾಶದ ಕಟ್ಟಿಲ್ಲ. ಅವರವರ ಕಂಡಲ್ಲಿಯೇ ಸುಖಿ, ನಿಧಾನಿಸಿ ಕೂಡಿದಲ್ಲಿಯೇ ತೃಪ್ತಿ. ಆತ ತ್ರಿವಿಧ ಮಲದ ಹಂಗಿನವನಲ್ಲ, ಗ್ರಾಮನಿಳಯ ಬಂಧಂಗಳಿಲ್ಲ, ಮಾತಿನ ರಚನೆಯ ಪಾಶವನೊಲ್ಲ, ಆತ ಸರ್ವಾಂಗ ಲಿಂಗಸನ್ನುತ, ನಿಃಕಳಂಕ ಮಲ್ಲಿಕಾರ್ಜುನನ ಒಡಗೂಡಿದ ಪರಮ ವಿರಕ್ತನ ಭೇದಾ.

---

## (೬) ಜಂಗಮನು ಪರಸೇವೆ ಮಾಡಕೂಡದು.

(೧). ಜಂಗಮ ಲಿಂಗವಾದಲ್ಲಿ ಜಗದ ಜಂಗುಳಿಯ ಬಾಗಿಲ ಕಾಯದಿರಬೇಕು. ಒಡೆಯನೋಲಗವ ಬಂಟ ಕಾಯಬೇಕಲ್ಲದೆ, ಬಂಟನ ವೇಳೆಯವ ಒಡೆಯ ಕಾಯಬಲ್ಲನೇ? ಇಂತಿದನರಿತು ರಾಜಮಂದಿರದಲ್ಲಿ ಗೃಹಸ್ಥಾಶ್ರಮವಲ್ಲಿ ವೇಳೆಯವನರಿತು ಭುಂಜಿಸಿಹೆನೆಂಬ ವೇಷದರ್ಶನ ಜಂಗುಳಿಗೆ ಜಂಗಮಸ್ಥಲವಿಲ್ಲವೆಂದೆ. ಸದಾಶಿವ ಲಿಂಗಮೂರ್ತಿ ಲಿಂಗವು ಅವರಂಗಕ್ಕೆ ಮುನ್ನವೇ ಇಲ್ಲವೆಂಬೆ.

(೨). ಭಕ್ತನ ಮಂದಿರದಲ್ಲಿ ಪೂಜಿಸಿಕೊಂಬ ಜಂಗಮವ ನೋಡಿರೇ ಅಯ್ಯ. ಜಂಗಮವೆಂಬುದಕ್ಕೆ ನೀವು ನಾಚಿರೇ ಅಯ್ಯ. ಭಕ್ತನ ಮನೆಗೆ ಹೂ, ಕಾಯಿ, ಹಣ್ಣು, ಹುಲ್ಲು, ಹೊರೆ, ಬೊಕ್ಕಸ, ಪಹರಿ, ಬಾಗಿಲು ಮುಂತಾದ ಶುಶ್ರೂಷೆಯಂ ಮಾಡಿ ಉಂಬಾಗ ಒಡೆಯರೆನಿಸಿಕೊಂಬ ತುಡುಗುಣಿಗೆಲ್ಲಿಯದೋ ನಿಜಜಂಗಮಸ್ಥಲ? ಹೊಟ್ಟೆಯ ಕಕ್ಕುಲಿತೆಗೆ ಕಷ್ಟಜೀವವ ಹೊರೆವ ಹೆಬ್ಬೊಟ್ಟೆಯ ಡೊಂಬರ ಕಂಡು ಬಟ್ಟಬಯಲಾದೆಯೋ ನಿಃಕಳಂಕ ಮಲ್ಲಿಕಾರ್ಜುನಾ.

(೩). ಮಾಡಿ ನೀಡುವ ಭಕ್ತರ ಕಂಡರೆ, ನಿಧಿನಿಧಾನವ ಪಡೆದಂತೆ ಆಯಿತಯ್ಯ. ಪಾದೋದಕ ಪ್ರಸಾದ ಜಿಹ್ವೆಯರ ಕಂಡರೆ, ಹೋದ ಪ್ರಾಣ ಬಂದಂತಾಯಿತ್ತಯ್ಯ. ಅನ್ಯರ ಮನೆಗೆ ಹೋಗಿ, ತನ್ನ ಉದರವ ಹೊರೆಯದ ಅಚ್ಚ ಶರಣರ ಕಂಡರೆ ನಿಶ್ಚಿತದಿಂದೆ ಕೂಡಲಚನ್ನಸಂಗಯ್ಯನೆಂಬೆ.

---

## (೭) ಜಂಗಮನು ಭಕ್ತರಿಗೆ ಸತ್ಪಥವನ್ನು ತೋರಿಸುವುದು.

(೧). ಹೊನ್ನಿಂಗೆ ಬಂದಾತನಲ್ಲ, ಹೆಣ್ಣಿಂಗೆ ಬಂದಾತನಲ್ಲ, ಮಣ್ಣಿಂಗೆ ಬಂದಾತನಲ್ಲ, ಅಶನಕ್ಕೆ ಬಂದಾತನಲ್ಲ, ವ್ಯಸನಕ್ಕೆ ಬಂದಾತನಲ್ಲ, ಕೂಡಲಚನ್ನ ಸಂಗಯ್ಯ, ಭಕ್ತಿಯ ಪಥವ ತೋರಬಂದನಯ್ಯ ಪ್ರಭುದೇವರೂ.

(೨). ಸಮತೆ ಎಂಬ ಕಂಥೆಯ ತೊಟ್ಟು, ಸುಬುದ್ಧಿ ಎಂಬ ಟೊಪ್ಪರವ ನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡನೆಡಹದೆ, ಮರವೆ ಎಂಬ ಚಳ ಮೆಟ್ಟದೆ, ಗುಹೇಶ್ವರನ ಶರಣ ಬಂದೆನು ಭಕ್ತಿ ಭಿಕ್ಷೆಯನಿಕ್ಕು ಸಂಗನಬಸವಣ್ಣ.

(೩). ಧನದ ಮೇಲೆ ಬಂದವರೆಲ್ಲರು ಅನುಸಾರಿಗಳಲ್ಲದೆ ಅನುವ ಮಾಡಬಂದವರಲ್ಲ. ಮನದ ಮೇಲೆ ಬಂದು ನಿಂದು, ಜರಿದು, ನುಡಿದು ಪಥವ

ತೋರಬಲ್ಲಡೆ, ತಾನೇ ಸಂಬಂಧಿ. ಹೀಗಲ್ಲದೆ ಅವರಿಷ್ಟಿಯ ನುಡಿದು ತನ್ನುದರವ ಹೊರೆವನಕ, ಬಚ್ಚಣಿಗಳ ಮೆಚ್ಚುವನೇ ಚನ್ನಮಲ್ಲಿಕಾರ್ಜುನಾ?

(೪). ಕರ್ತು ಭೃತ್ಯನವಾಸಕ್ಕೆ ಎಯ್ದಿದಲ್ಲಿ, ಆತನ ಭಕ್ತಿಯನರಿತು ತಾನೊಡಗೂಡಿದಲ್ಲಿ, ಆತಕೊಟ್ಟುದ ತಾಮುಟ್ಟದೆ, ಆತನಲ್ಲಿ ದುರ್ವಾಕ್ಯ, ದುಶ್ಚರಿತ್ರ, ಪಗಡಿ, ಪರಿಹಾಸಕಂಗಳಂ ಮಾಡದೆ ಆತನ ಚಿತ್ತನೋವಂತೆ ಮತ್ತಾವಬಂಧನದ ಕಷ್ಟವನಿಕ್ಕದೆ, ಕೃತ್ಯ ಎನಗೊಂದು ಮಾಡೆಂಬುವ ನೇಮವ ಲಕ್ಷಿಸದೆ, ಆತ ತನ್ನ ತಾನರಿದು ಮಾಡುವಲ್ಲಿ ಅದು ತನಗೆ ಮುನ್ನಿನ ಸೋಕೆಂಬುದನರಿದು ಗನ್ನಗತುಕಿನಿಂ ಬಿನ್ನಾಣದಿಂ ಒಂದುವ ಮುಟ್ಟದೆ ಆ ಪ್ರಸನ್ನವಪ್ಪ ವಸ್ತುಮಹವಾಗಿರುವ ಕಲ್ಲೇಶ್ವರ ಲಿಂಗವು ತಾನಾದ ಶರಣ.

(೫). ಹೊರಗೆ ವೇಷದ ಸೊಂಪು, ಒಳಗೆ ರೋಷದ ಮೊಟ್ಟೆ. ಅಯ್ಯಾ, ಅಶನವನಿಕ್ಕಿ ಹಣಕೊಡದವರ ಕಂಡರೆ, ಶಾಪಿಸಿ, ಕೋಪಿಸಿ, ಪಾಪಿಗಳೆಂಬರಯ್ಯ. ನಿಮ್ಮ ಕಿಚ್ಚಿಗೆ ಶಾಪಿಸಿ ಕೋಪಿಸಿ, ಹೊಯ್ದು ಕುತಾಪಿಸುವರು. ನೀವು ಪಾಪಿಗಳಲ್ಲದೆ, ಅವರು ಪಾಪಿಗಳೇ? ತಿಳಿದು ನೋಡಿರಯ್ಯ. ಜಗದ ಕರ್ತುವಿನ ವೇಷವಧರಿಸಿ, ಜಗದ ಕರ್ತು ನೀವಾದ ಬಳಿಕ, ಮಾನವರು ಕೊಟ್ಟಾರು ಕೊಂಡಾರು ಎಂಬ ಭ್ರಾಂತಿ ಏಕೆ? ಅರಿಮರುಳುಗಳಿರಾ, ಕೊಡುವಾತ ಶಿವನೆಂದರಿಯದ ಉದರ ಘಾತಕ ಖುಲ್ಲರನೊಲ್ಲ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೬). ಹುಟ್ಟಿದಮರ, ನೆಟ್ಟಕಲ್ಲು ಮತ್ತೆಚರ, ಇಷ್ಟವ ಒತ್ತಿದ ಲಿಂಗಮುದ್ರೆ ಇರಲಿಕ್ಕೆ ಕಿತ್ತುಕೊಂಡವ ದ್ರೋಹಿ ಎಂಬರು. ದೃಷ್ಟದಲ್ಲಿ, ಜಂಗಮ ಭಕ್ತರ ಕೊಲ್ಲುತ್ತ, ಇಂತೀ ಉರುಲುಗಳ್ಳರ ಭಕ್ತರು ಜಂಗಮವೆಂದರೆ ಒಪ್ಪರಯ್ಯ. ಚಿಕ್ಕಯ್ಯ ಪ್ರಿಯಸಿದ್ಧಲಿಂಗ ಇಲ್ಲ, ಇಲ್ಲ, ಎಂಬೆ.

(೭). ಕಲ್ಪಿತದಿಂದ ಪೂಡುವ ಭಕ್ತನಿರ್ಧನಿಕನಾದರೆ ತನ್ನ ಕೈಧನವವೆಚ್ಚಿಸಿ, ದಾಸೋಹವಂ ಮಾಡಿಸಿ ಆ ಭಕ್ತನ ಕೂಡಿಕೊಂಡು ಲಿಂಗಾರ್ಚನೆಯಂ ಮಾಡಿ, ಅವರ ದಾಸೋಹಕ್ಕೆ ನಿಲಿಸಿ, ತಾಕರ್ತೃವಾಗಿ ನಿಂದು ಪರಿಣಾಮಿಸಬಲ್ಲಡೆ, ಜಂಗಮವೆಂಬೆ. ಅವರಿಗೆ ನಮೋ, ನಮೋ. ಅಂತಲ್ಲದೆ, ಮುನ್ನ ಮಾಡಿರಿ, ಈಗ ಮಾಡಿರಿ, ಇದೇನು ಭೋ ಎಂದು ಜರಿದು ಝುಂಕಿಸಿ ಹೋಹರ

ಜಂಗಮವೆಂಬೆನೇ? ಎನ್ನೆನು. ಆತ ಸೂನೆಗಾರ, ಆತದ್ರೋಹಾರ್ಥಿ, ಆತಭವ ಭಾರಿ ಕೂಡಲಚನ್ನಸಂಗಮದೇವಾ.

(೮). ಲಿಂಗಜಂಗಮ ಭಕ್ತಿಯ ಮಾಡಿಸಿಕೊಂಬಲ್ಲಿ ವಿವರ ಉಂಟು. ಲೌಕಿಕ, ಅಲೌಕಿಕ, ಸಹಜವೆಂಬ ಮಾಟತ್ರಯವನರಿದು ಲೌಕಿಕ ಭಕ್ತರಲ್ಲಿ ಅವರಿಚ್ಛೆಯಲ್ಲಿರ್ದು ಭಕ್ತಿಯ ಮಾಡಿಸಿಕೊಂಬುದು. ಅಲೌಕಿಕ ಭಕ್ತರಿಗೆ ತಾ ಕರ್ತನಾಗಿ ಅವರು ಭೃತ್ಯರಾಗಿ ಭಕ್ತಿಯ ಮಾಡಿಸಿಕೊಂಬುದು. ಸಹಜ ಭಕ್ತರಲ್ಲಿ ಕರ್ತೃತ್ವ ಭೃತ್ಯತ್ವವಿಲ್ಲದೆ ಭಕ್ತಿಯ ಮಾಡಿಸಿಕೊಂಬುದು. ಇಂತಿದು ಲಿಂಗ ಜಂಗಮದ ಜಾಣ್ಮೆ ಕೇಳಿರೋ. ಹೀಗಲ್ಲದೆ ಅವರ ಕಾಡಿ, ಕರಕರಿಸಿ, ಅವರ ಭಂಡುಮಾಡಿ ತಾ ಭಂಡನಹ ಭಂಡನ ಮುಖವ ತೋರದಿರು ಕೂಡಲಚನ್ನ ಸಂಗಮದೇವಾ.

(೯). ಅಯ್ಯಾ, ಲಿಂಗವಿನೋದಾರ್ಥವಾಗಿ ಏಕಾಂತಸ್ಥಲಕ್ಕೆ ಹೋಗಿ ಸ್ವಸ್ಥಿಂತವಾಗಿ ಕುಳಿತಿರಲು ಆ ಸಮಯದಲ್ಲಿ ಗ್ರಾಮದೊಳಗೋರ್ವ ಭಕ್ತ ಸದಮಲಭಕ್ತಿಯಿಂದ ನಮಸ್ಕರಿಸಿ ಎನ್ನ ಕೈವಿಡಿದು ತನ್ನ ಮಠಕ್ಕೆ ಕರೆದೊಯ್ದು, ಎನ್ನ ಪಾದಪ್ರಕ್ಷಾಲನವ ಮಾಡಿ ಹಾವಿಗೆಯ ಮೆಟ್ಟಿಸಿ ಒಳಯಕ್ಕೆ ಬಿಜಯಂಗೈಯ್ಯಿರಿ ಸ್ವಾಮಿ ಎಂದು ನವರತ್ನಖಚಿತವಾದ ಸಿಂಹಾಸನದ ಮೇಲೆ ಕುಳ್ಳಿರಿಸಿ ಅಷ್ಟ ವಿಧಾರ್ಚನೆ ಷೋಡಶೋಪಚಾರದಿಂದ ಅರ್ಚಿಸಿ ಪೂಜೆಯನಿಳುಹಿ, ಸಾಷ್ಟಾಂಗ ವೆರಗಿ, ಆ ಮೇಲೆ ಭಂಗಾರದ ಹರಿವಾಣದಲ್ಲಿ ಪರಮಾನ್ನಪಾಯಸ ಪಂಚಾಮೃತವ ನೀಡಿ ಶರಣಾರ್ಥಿ ಸ್ವಾಮಿ ಲಿಂಗಾರ್ಪಿತವಾಗಲೆಂದು ಸಾಷ್ಟಾಂಗವನಿಕ್ಕಲು, ಆ ಮೇಲೆ ನಾನು ಎನ್ನ ಇಷ್ಟಬ್ರಹ್ಮವ ಅನಿಮಿಷ ದೃಷ್ಟಿಯಿಂದ ನಿರೀಕ್ಷಣವ ಮಾಡಿ, ಆ ಇಷ್ಟಲಿಂಗಕ್ಕೆ ಎನ್ನ ತನು ಮನ ಧನ ಮುಟ್ಟದಕ್ಕಿಂತ ಮುನ್ನವೇ ಎನ್ನ ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯವೆಂಬ ಷಡಿಂದ್ರಿಯಂಗಳು ಮುಟ್ಟದಕ್ಕಿಂತ ಮುನ್ನವೇ ಲಿಂಗಾರ್ಪಿತ ಮಾಡುವ ಸಮಯದಲ್ಲಿ ಆ ಮನೆಯ ಒಡೆಯ ಬಂದು ಮಹಾರೌದ್ರದಿಂದ ಎನ್ನ ರಟ್ಟೆಯ ಹಿಡಿದೆಬ್ಬಿಸಿ, ಜೋಲಿಯ ಹೊಡೆದು, ತಪರಾಕಿಯಲ್ಲಿ ಹೊಡೆದು, ತಾನೇ ಪಟ್ಟದ ಗದ್ದಿಗೆಯಲ್ಲಿ ಕುಳಿತು ಆತ ಹರಿವಾಣದಲ್ಲಿಯ ಪಂಚಾಮೃತವನುಣ್ಣುತ್ತ ಎನ್ನ ಕದವಿನ ಮರೆಯಲ್ಲಿ ಕುಳ್ಳಿರಿಸಿ ಒಡದೋಡಿನಲ್ಲಿ ಹಳಸಿದಂಬಲಿಯ ನೆರೆಯಲು, ಎಲೆ ದೇವಾ, ಎನ್ನ ಮನದಲ್ಲಿ ನೊಂದೆನಾದಡೆ ನಾನು ಕರಪಾತ್ರನಲ್ಲ, ಗುರು ಕಲ್ಪಿತ ಭಿಕ್ಷುಕ

ನಲ್ಲ, ಅಪಾತ್ರನು. ಅದೇನು ಕಾರಣವೆಂದಡೆ, ನಾನು ಜನನಿಯ ಜಠರಾಗ್ನಿ ಎಂಬ ಸೆರೆಮನೆಯಲ್ಲಿ ಮೂರಾರು ತಿಂಗಳು ಸಿಲ್ಕಿರುವಾಗ ಎನಗೆ ಸಹ ಉಣ ಕೊಟ್ಟು ಸಲಹಿದಾತ ನೀನೋ, ಅವನೋ? ಆ ಸೆರೆಮನೆಯಿಂದ ಕೈವಿಡಿದು ಕರೆ ತಂದು ಶಿವಲಾಂಛನಮಂ ಕರುಣದಿಂದಿತ್ತು, ಮತ್ತೆ ಲೋಕದಲ್ಲಿ ಪೂಜ್ಯನ ಮಾಡಿ ದಾತ ನೀನೋ ಅವನೋ? ಅದುಕಾರಣ ಎಚ್ಚ ವನಿದ್ದಂತೆ ಅಂಬಿಗೆ ಮುನಿವರೇ ಅಯ್ಯ? ನಾನು ಉಂಡುಟ್ಟು ಸುಖಿಯಾಗಿದ್ದರೆ ನಿನ್ನ ಹಾಡಿ ಹರಿಸುವೆನಯ್ಯ. ನಾನು ಹಸಿದು ನೊಂದೆನಾದರೆ ನಿನ್ನ ಜರಿದು ಝುಂಕಿಸಿ ಬೈವೆನಲ್ಲದೆ, ಮಾನವರ ಹಂಗು ಎನಗೇತಕಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ?

---

## (೮) ವಾಗದ್ವೈತವನ್ನು ಆಚರಿಸಬಾರದು.

(೧). ಅರಿವು ಸಾಧ್ಯವಾಯಿತ್ತೆಂದು ಗುರುಲಿಂಗ ಜಂಗಮವ ಬಿಡಬಹುದೇ? ಸಂದು ಸಂಶಯವಳಿದು ಅಖಂಡಜ್ಞಾನವಾಯಿತ್ತೆಂದು ಪರಧನ ಪರಸ್ತ್ರೀಗೆ ಅಳುಪಬಹುದೇ? "ಯತ್ರ ಜೀವಸ್ತತ್ರ ಶಿವಃ" ಎಂಬ ಅಭಿನ್ನಜ್ಞಾನವಾಯಿತ್ತೆಂದು, ಶುನಕ ಸೂಕರ ಕುಕ್ಕುಟ ಮಾರ್ಜಾಲಂಗಳ ಕೂಡಿ ಭುಂಜಿಸಬಹುದೇ? ಭಾವದಲ್ಲಿ ತನ್ನ ನಿಜದ ನೆಲೆಯನರಿವುದು, ಸುಜ್ಞಾನ ಸತ್ಕ್ರಿಯಾ ಸುನೀತಿ ಸುಮಾರ್ಗದಲ್ಲಿ ವರ್ತಿಸುವುದು, ಹೀಗಲ್ಲದೆ ಜ್ಞಾನವಾಯಿತ್ತೆಂದು ತನ್ನ ಮನಕ್ಕೆ ಬಂದಹಾಗೆ ಮೀರಿ ನುಡಿದು ನಡೆದೆನಾದಡೆ, ಶ್ವಾನನ ಗರ್ಭದಲ್ಲಿ ಹುಟ್ಟಿಸದೆ ಬಿಡುವನೇ ಚನ್ನಮಲ್ಲಿಕಾರ್ಜುನಯ್ಯನು?

(೨). ಬ್ರಹ್ಮೋಪದೇಶವಾಯಿತ್ತೆಂದು ಬ್ರಹ್ಮದೊಡನೆ ಧಿಕ್ಕರಿಸಬೇಡ. ಶಿವಜ್ಞಾನ ದೀಪ್ತಿಯಾಯಿತ್ತೆಂದು ಶಿವಶರಣರೊಡನೆ ಧಿಕ್ಕರಿಸಬೇಡ. ಕರ್ಮಜ್ಞಾನವಾಯಿತ್ತೆಂದು ಕರ್ಮವ ಹಳಿಯಬೇಡ. ಇದು ಕಾರಣ ಕೂಡಲಸಂಗಯ್ಯ ಸಾಕ್ಷಿಯಾಗಿ ಇವರೆಲ್ಲರೂ ಸಜ್ಜನ ಶುದ್ಧ ಶಿವಾಚಾರಕ್ಕೆ ಹೊರಗು.

(೩). ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ರಾಗ, ದ್ವೇಷವೆನಿಪ ಒಡಲಿರೆ, ರಾಗದ್ವೇಷಗಮನಾಗಮನಂಗಳಿರುತ್ತಿರೆ, ಬ್ರಹ್ಮವಾನೆಂಬ ಬರಿಯವಾಗದ್ವೈತದಲ್ಲಿ ಫಲವಿಲ್ಲ. ನಂಬು, ಸುಖ ಸಾಗರವನರಿ, ಉರಿಲಿಂಗಪೆದ್ದಿ ಪ್ರಿಯ ವಿಶ್ವೇಶ್ವರಾ.

(೪). ಶೂನ್ಯವನುಡಿದು ದುರ್ಗತಿಗಿಳಿವರ, ಅದ್ವೈತವ ನುಡಿದು ಅಹಂಕಾರಿಗಳಾದವರ, ಬ್ರಹ್ಮವ ನುಡಿದು ಭ್ರಮಿತರಾದವರ, ತ್ರಿಕಾಲ ಲಿಂಗ ಪೂಜೆಯ ಮಾಡದವರ, ಬ್ರಹ್ಮದ ಅನವರತ ಮಾತ ಕೇಳಿ ಹಿಡಿದ ವ್ರತನೇಮ ಗಳ ಬಿಡುವ, ದುರಾಚಾರಿಗಳ ಮೆಚ್ಚ ಕೂಡಲಚನ್ನಸಂಗಾ ನಿಮ್ಮ ಶರಣ.

(೫). ಹೊನ್ನು ತೂಗುವ ತ್ರಾಸ ಕಟ್ಟಳೆ ಹೊನ್ನಿಂಗೆ ಸರಿಯ ಪ್ಪುದೇ? ಸನ್ನಿಹಿತರಾದೆವೆಂಬ ನುಡಿಗೆ ನಾಚರು ನೋಡಾ! ಅರ್ನದಲ್ಲಿ ಸವೆದ ಕಬ್ಬುನದಂತೆ, ಮುನ್ನ ಹೋದ ಹಿರಿಯರು ಲಿಂಗದ ಸುದ್ದಿಯನರಿಯರು. ಇನ್ನಾರು ಬಲ್ಲರು ಹೇಳಾ ಗುಹೇಶ್ವರಾ?

(೬). ಬಯಲ ಬೊಮ್ಮವ ನುಡಿವ. ಆ ನುಡಿಯ ಭ್ರಮೆಯಲ್ಲಿ ಬಿದ್ದ ಜಡರುಗಳು ಬಲ್ಲರೇ ಶಿವನಡಿಗಳನು? ಗುರುಲಿಂಗ ಜಂಗಮ ಪಾದೋದಕ ಪ್ರಸಾದವೆಂಬ ಪರಮಾಮೃತವ ಸವಿದು ಪರವಶನಾದ ಪರಮ ಮುಗ್ಧಂಗಲ್ಲದೆ ಪದವು ಸಾಧ್ಯವಾಗದು, ಮಹಾಲಿಂಗ ಕಲ್ಲೇಶ್ವರನ ಶರಣ ಪೂರ್ವಾಚಾರಿ ಸಂಗನ ಬಸವಣ್ಣಂಗಲ್ಲದೆ.

(೭). ವಿಷಮ ದಶಪವನವ ತನ್ನ ವಶಕ್ಕೆ ತಂದು ನಿಲಿಸಿ, ಸುಷುಮ್ನನಾ ಳದ ಉರ್ಧ್ವಪಥವನು ಅರಿದೆವೆಂದು, ನಾಲಿಗೆಯ ನಲಿನ ಕೊನೆಯಲಂಬಿಕಾ ಸ್ಥಾನವಾಗಿ ಸವಿಯ ಅಮೃತವ ದಣಿಯುಂಡು ಸುಖಿಯಾದೆವೆಂಬ ಮಾಯೆ ರೆಲ್ಲರು ಉಪಾಧಿಯಾದಿಯನರಿಯದೆ ಹೋದರು! ನಿಮ್ಮಲಿಗೆಯ ಚನ್ನರಾಮನೆಂಬ ಲಿಂಗದಲ್ಲಿ ಬಯಲಾದ್ವೈತದ ನುಡಿಯ ನುಡಿವರು!

(೮). ವ್ಯಾಧನಂತೆ, ಜಾಲಗಾರನಂತೆ, ಹೇಮಚೋರನಂತೆ, ಇಂತೀ ಗಾಹುಗಳ್ಳರಂತೆ ಮಾತಿನಲ್ಲಿ ಬ್ರಹ್ಮವ ನುಡಿದು ಸರ್ವಸಂಸಾರದಲ್ಲಿ ಏಳುತ್ತ, ಮುಳುಗುತ್ತ, ಬೇವುತ್ತ, ನೋವುತ್ತ, ಮತ್ತೆ ಬ್ರಹ್ಮದ ಸುಮ್ಮಾನದ ಸುಖಿಗ ಳೆಂತಪ್ಪರೋ? ಇಂತು ನುಡಿಯಬಾರದು, ಸಮಯವ ಬಿಡಬಾರದು, ಕ್ರಿಯೆಯ ರಿದು ಮರೆಯಬಾರದು ಜ್ಞಾನ. ಇಂತೀ ಭೇದವನರಿದು ಹರಿವಂಗಲ್ಲದೆ ಕಾಲ ಕರ್ಮವಿರಹಿತ ತ್ರಿಪುರಾಂತಕ ಲಿಂಗವು ಸಾಧ್ಯವಲ್ಲ.

(೯). ಜಲದ ಸತ್ವ ಜಲಚರಾದಿಗಳಿಗಲ್ಲದೆ ಬಲುಹಿಲ್ಲ. ವಾಗದ್ವೈತಿಗಳ ಅದ್ವೈತ ಸ್ವಯವ ಮುಟ್ಟಬಲ್ಲುದೇ? ಗುಹೇಶ್ವರಲಿಂಗಕ್ಕೆ ದೂರ ಸಂಗನಬಸವಣ್ಣ.

# ಐಕ್ಯಸ್ಥಲ.

## ಐಕ್ಯಸ್ಥಲದ ಲಕ್ಷಣಗಳು.

(೧). ಕ್ಷುತ್ಪಿಪಾಂಸೆ, ಶೋಕ, ಮೋಹ, ಮದ, ಮತ್ಸರವೆಂಬ ಷಡ್ವರ್ಗಂಗಳು ಇಲ್ಲದೆ ಇರುತಿರ್ಪನು. ನಾಹಂ ಕೋಹಂ ಸೋಹಂ ಎಂಬ ಭಾವ ವಿರಹಿತನಾಗಿರ್ಪನು. ಅಷ್ಟವಿಧಾರ್ಚನೆ ಷೋಡಶೋಪಚಾರರಹಿತನಾಗಿರ್ಪನು. ಕರ್ಪೂರ ಅಗ್ನಿಸಂಯೋಗವಾಗಿ, ಕರ್ಪೂರದ ಗುಣವಳಿದು ಅಗ್ನಿಯಾದಂತೆ, ಲಿಂಗವ ನೆನೆನೆನೆದು ಲಿಂಗವೇ ತಾನಾಗಿಪ್ಪುದೀಗ ನಿಜೈಕ್ಯ ಸ್ಥಲವೆಂದೆಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ.

(೨). ಘೃತ ಘೃತವ ಬೆರಿಸಿದಂತೆ, ಕ್ಷೀರ ಕ್ಷೀರವ ಬೆರಿಸಿದಂತೆ, ತೈಲ ತೈಲವ ಬೆರಿಸಿದಂತೆ, ನೀರು ನೀರ ಬೆರಿಸಿದಂತೆ, ಜ್ಯೋತಿ ಜ್ಯೋತಿಯ ಬೆರಿಸಿದಂತೆ, ಬಯಲು ಬಯಲ ಬೆರಿಸಿದಂತೆ, ಪ್ರಾಣ ಪ್ರಾಣ ಸಂಯೋಗವಾದ ಲಿಂಗ ಸಮರಸವನೇನೆಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ!

(೩). ಮುಗಿಲ ಮರೆಯ ಸೂರ್ಯನಂತೆ, ನೆಲದ ಮರೆಯ ನಿಧಾನದಂತೆ, ಒರೆಯ ಮರೆಯ ಅಲಗಿನಂತೆ, ಹಣ್ಣಿನೊಳಗಣ ರಸದಂತೆ ಶರಣ ಶರೀರವ ಮರೆಗೊಂಡು ಪರಮಪಾವನ ಮೂರ್ತಿ ಪರಾಪರ ತಾನು ತಾನಾಗಿರ್ದುದನೇನೆಂಬೆನಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರಪ್ರಭುವೇ!

(೪). ಅಲಿಕಲ್ಲ ತರಿದು ಪುತ್ಥಳಿಯ ಕಂಡಿರಸುವಂತೆ, ಒಪ್ಪಿನ ಒಟ್ಟಣವನು ಉದಕದಲ್ಲಿರಿಸುವಂತೆ, ಕರ್ಪೂರದ ಪ್ರಣುತೆಯಲ್ಲಿ ಜ್ಯೋತಿಯು ಬೆಳಗುವಂತೆ ಸಿದ್ಧ ಸೋಮನಾಥಲಿಂಗ ಗ್ರಾಹಿ ಅವಗ್ರಾಹಕ.

(೫). ದಿನದಿನವು ಕೂಡಿದಂತೆ, ಬಯಲು ಬಯಲ ಬೆರೆದಂತೆ, ಮಾತು ಮಾತು ಕಲಿತಂತೆ, ಜ್ಯೋತಿ ಜ್ಯೋತಿ ಒಂದಾದಂತೆ, ನಿಮ್ಮೊಳೊಡವೆರೆದ ನಿಜೈಕ್ಯನ ಕುರುಹು ಇಂತುಟಯ್ಯ.

(೬). ಸ್ಥಲವಿಡಿದು ಸರ್ವದಲಾಯತವಾಗಿ ಸಮ ಉದಯವಿದೆಂದು ಸಹಜ ವಳವಟ್ಟಲ್ಲಿ ಅದು ಇದು ಎಂದೆನಲುಂಟೇ? ಭಾವವಳಿದು ನಿರ್ಭಾವ

ಉಳಿದಲ್ಲಿ, ಅದು ಇದು ಎಂದೆನಲುಂಟೇ? ಕದಂಬ ಕಳಶ ಕೂಡಲಚನ್ನಸಂಗ ಸರ್ವಾಂಗಮಯವಾಗಿರ್ದಲ್ಲಿ.

(೭). ಖಂಡಿತವಳಿದು ಅಖಂಡಿತ ಪರಬ್ರಹ್ಮದಲ್ಲಿ ಅವಿರಳ ಸಮರಸದಿಂದ ಕ್ರಿ ಎಂಬುದೇನು, ಧ್ಯಾನ ಮೌನವೆಂಬುದೇನು, ನೇಮ ನಿತ್ಯವೆಂಬುದೇನು, ತಪವೆಂಬುದೇನು, ಅರುಹು ಆಚಾರವೆಂಬುದೇನು, ಕುರುಹು ಪೂಜೆ ಎಂಬುದೇನು, ಇಂತೀ ಮರವೆಯುಳ್ಳನ್ನಕ್ಕ ಭಿನ್ನಫಲದ ಪ್ರಾಪ್ತಿಯಲ್ಲದೆ, ಅವಿರಳ ಸಮರಸ ಸೌಖ್ಯ ನಿರ್ವಯಲ ಪದವು ಎಲ್ಲಿಯದೋ? ಇದನರಿದು ಇಂತಿವೆಲ್ಲ ಹಾಳ ಸಂಕಲ್ಪ ವಿಪರೀತ ಭ್ರಾಂತಿಜ್ಞಾನವೇ ತನ್ನ ನಿಜ ನಿಲವೆಂದು ತಿಳಿದು, ದೇಹವಿರ್ದು, ನಿರ್ದೇಹಿಯಾಗಿರ್ಪೆನಯ್ಯಾ ಅಖಂಡೇಶ್ವರಾ.

(೮). ಧರೆ ಗಗನ ದಶದಿಕ್ಕು ಎಂಬುದನಾನರಿಯೆನಯ್ಯಾ. "ಲಿಂಗಮಧ್ಯೇ ಜಗತ್ಸರ್ವಂ" ಎಂಬುದನಾನರಿಯೆನಯ್ಯಾ. ಲಿಂಗ ಸೋಂಕಿನ ಸುಖದೊಳಗೆ ಕೂಡಲಸಂಗಮದೇವಯ್ಯ ಅಂಬುಧಿಯೊಳಗೆ ಬಿದ್ದ ಆಲಿಕಲ್ಲಿನಂತೆ ಭಿನ್ನಭಾವವನರಿಯದೆ. "ಶಿವಶಿವಾ" ಎನುತಿರ್ದೆ ನಾನು.

(೯). ಲಿಂಗವ ಪೂಜಿಸಿ ಫಲವೇನಯ್ಯಾ? ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕರ ಲಿಂಗವ ಪೂಜಿಸಿ ಫಲವೇನಯ್ಯಾ? ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿ ಬೆರಿಸಿದಂತಾಗದನ್ನಕ್ಕರ?

(೧೦). ಕದಳಿ ಎಂಬುದು ತನು, ಕದಳಿ ಎಂಬುದು ಮನ, ಕದಳಿ ಎಂಬುದು ವಿಷಯಂಗಳು, ಕದಳಿ ಎಂಬುದು ಭವಘೋರಾರಣ್ಯ, ಕದಳಿ ಎಂಬುದಗೆದ್ದು, ಬದುಕಿ ಬಂದು, ಕದಳಿಯಬನದಲ್ಲಿ ಭವಹರನ ಕಂಡೆನು. ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿಯಪ್ಪಿದಡೆ, ಚನ್ನಮಲ್ಲಿಕಾರ್ಜುನನಲ್ಲಿ ಹೃದಯಕಮಲದಲ್ಲಿ ಅಡಗಿದೆನು.

(೧೧). ಮನದ ಕಾಲತ್ತಲು, ತನುವಿನ ಕಾಲಿತ್ತಲು. ಅನುಭವದನುವನು ನೆನೆವುತ್ತ, ನೆನೆವುತ್ತ ಗಮನ ಕೆಟ್ಟುದೋ! ಲಿಂಗಮುಖದಲಾದ ಸೂಚನೆಯ ಸುಖವ ಕಂಡು ಗಮನ ಕೆಟ್ಟುದೋ! ಅನುವಾಯಿತ್ತು, ಅನುವಾಯಿತ್ತು, ಅಲ್ಲಿಯೋ ತಲ್ಲೀಯ್ಯವಾಯಿತ್ತು ಗುಹೇಶ್ವರನೆಂಬ ಲಿಂಗೈಕ್ಯಂಗೆ.

(೧೨). ಅರಿಯಲಿಲ್ಲದ ಅರಿವು, ಮರೆಯಲಿಲ್ಲದ ಮರಹು, ನೋಡಲಿಲ್ಲದನೋಟ, ಬೆರಿಸಲಿಲ್ಲದ ಬೆರಗು, ನಿಂದುದು ಕೂಡಲಚೆನ್ನಸಂಗಯ್ಯ ಲಿಂಗೈಕ್ಯಂಗೆ.

(೧೩). ಮಾಡಿದ ಮಾಟವನರಿಯದಭಕ್ತ, ಕೂಡಿದ ಕೂಟವನರಿಯದ ಭಕ್ತ, ಮಾಟಕೂಟವೆಂಬ ಕೋಟಲೆಯಳಿದು, ನಿಸ್ಸಂಗತ್ವ, ನಿರಾಭಾರಿ, ನಿಸ್ಸೀಮ, ನಿರ್ದೇಹಿ, ನಿಜದಲ್ಲಿ ಅಡಗಿದ ನಿತ್ಯ ಮುಕ್ತನಯ್ಯ ಭಕ್ತನು ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೪). ಎನ್ನ ಕಾಲಕಲ್ಪಿತಗಳು ಹೊರಗಾದವಯ್ಯ. ಎನ್ನ ಭವ ಬಂಧನಗಳು ಹೊರಗಾದವಯ್ಯ. ಎನ್ನ ಉತ್ಪತ್ತಿ ಸ್ಥಿತಿಲಯಗಳು ಹೊರಗಾದವಯ್ಯ. ಇಂತಿವೆಲ್ಲವು ಹೊರಗಾದವಾಗಿ, ಅಖಂಡೇಶ್ವರಾ ನಾನೊಬ್ಬನೇ ನಿಮ್ಮೊಳಗಾದೆನಯ್ಯ.

(೧೫). ಅಂಗದೊಳಗೆ ಅಂಗವಾಗಿ, ಅಂಗ ಲಿಂಗೈಕ್ಯವ ಮಾಡಿದೆ. ಮನದೊಳಗೆ ಮನವಾಗಿ ಮನಲಿಂಗೈಕ್ಯವ ಮಾಡಿದೆ. ಭಾವದೊಳಗೆ ಭಾವವಾಗಿ ಭಾವಲಿಂಗೈಕ್ಯವ ಮಾಡಿದೆ. ಅರಿವಿನೊಳಗೆ ಅರಿವಾಗಿ, ಅರಿವ ಲಿಂಗೈಕ್ಯವ ಮಾಡಿದೆ. ಕ್ರಿಯೆಗಳೆಲ್ಲವ ನಿಲಿಸಿ ಕ್ರಿಯಾತೀತವಾಗಿ ನಿಷ್ಪತ್ತಿ ಲಿಂಗೈಕ್ಯನಾದೆ. ನಾನೆಂಬುದ ನಿಲಿಸಿ, ನಿಜವೆಂಬುದ ಕೆಡಿಸಿ, ಉಭಯ ಲಿಂಗೈಕ್ಯವ ಮಾಡಿದೆ. ಚೆನ್ನಮಲ್ಲಿಕಾರ್ಜುನನೊಳಗೆ ನಾನಿಳಿದೆನಾಗಿ ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಬಸವಣ್ಣ.

(೧೬). ಅಂತರಂಗದೊಳಗಿರ್ದ ನಿರವಯ ಲಿಂಗವನು ಸಾವಯ ಲಿಂಗವ ಮಾಡಿ, ಶ್ರೀಗುರು ಸ್ವಾಮಿ ಕರಸ್ಥಲಕ್ಕೆ ತಂದು ಕೊಟ್ಟಿಷ್ಟ ಲಿಂಗವು ಅಂತರಂಗವನಾವರಿಸಿ, ಅಂತರಂಗದ ಕರಣಂಗಳೇ ಕಿರಣಂಗಳಾಗಿ ಬೆಳಗುವ ಚಿದಂಶವೇ ಪ್ರಾಣಲಿಂಗವು. ಆ ಮೂಲ ಚೈತನ್ಯವೇ ಭಾವಲಿಂಗವು. ಇದ ಸರಿದು ನೋಡುವ ನೋಡುವ ನೋಟ ಭಾವಪರಿಪೂರ್ಣವಾಗಿ ತಾನೂ ತಾನಾದಲ್ಲದೆ ಇದಿರಿಟ್ಟು ತೋರುವದಿಲ್ಲವಾಗಿ ಅಖಂಡ ಪರಿಪೂರ್ಣಮಪ್ಪ ನಿಜವು ತಾನೇ ಕೂಡಲಸಂಗಮದೇವಾ.

(೧೭). ಬೆಳಗು ಕತ್ತಲೆಯನುಂಗಿ, ಒಳಗೆ ನಾನೊಬ್ಬನೆ ಆದೆ. ಕಾಂಬ ಕತ್ತಲೆಯ ಕಳೆದುಳಿದು ನಿಮಗಾನು ಗುರಿಯಾದೆ ಗುಹೇಶ್ವರಾ.

(೧೮). ಬಾಲಕಿ ಹಾಲ ಸವಿದಂತೆ, ಮರುಳನ ಮನದ ನೆನಹಿನಂತೆ, ಮೂಗ ಕಂಡ ಕನಸಿನಂತೆ, ಮೆಯ್ಮರೆಯದ ನೆಳಲಿನಂತೆ, ಬಂಜೆಯ ಮನದ ಸ್ನೇಹದಂತೆ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು.

---

## ಸ್ಥಲಗಳ ನಿಃಸ್ಥಲತ್ವವು.

(೧). ಭಕ್ತಿಸ್ಥಲ ಮಾಹೇಶ್ವರಸ್ಥಲದೊಳಡಗಿ, ಮಾಹೇಶ್ವರಸ್ಥಲ ಪ್ರಸಾದಿಸ್ಥಲದೊಳಡಗಿ, ಪ್ರಸಾದಿಸ್ಥಲ ಪ್ರಾಣಲಿಂಗಿಸ್ಥಲದೊಳಡಗಿ, ಪ್ರಾಣ ಲಿಂಗಿಸ್ಥಲ ಶರಣಸ್ಥಲದೊಳಡಗಿ, ಶರಣಸ್ಥಲ ಐಕ್ಯಸ್ಥಲದೊಳಡಗಿ, ಇಂತೀ ಷಡಂಗಯೋಗ ಸಮರಸವಾಗಿ, ಷಟ್‌ಸ್ಥಲವ ಮೀರಿ, ನಿರವಯ ಸ್ಥಲವನೈದಿ, ಆ ನಿರವಯಸ್ಥಲ ನಿರಾಳದಲ್ಲಿ ಅಡಗಿ, ಆ ನಿರಾಳ ನಿತ್ಯನಿರಂಜನವಸ್ತು ತಾನು ತಾನಾಗಿತ್ತಾಗಿ, ಕ್ರಿಯಾನಿಷ್ಪತ್ತಿ, ಜ್ಞಾನನಿಷ್ಪತ್ತಿ, ಮತ್ತಾವ ಕ್ರಿಯೆಗಳೆಲ್ಲವೂ ನಿಷ್ಪತ್ತಿಯಾಗಿ ಅರಿವು ಅರುಹದಲ್ಲಿ ಅಡಗಿ, ಭಾವವೆಲ್ಲ ನಿರ್ಭಾವವಾಗಿ ನಿರ್ಲೇಪ ನಿರಂಜನ ವಸ್ತು ತಾನೇ ತಾನಾದಲ್ಲದೆ, ಧ್ಯಾನಿಸಲ್ಕೆ ಏನೂ ಇಲ್ಲ. ಮಹಾ ಲಿಂಗ ಗುರುಶಿವ ಸಿದ್ಧೇಶ್ವರಪ್ರಭು ತಾನೇ ಷಟ್‌ಸ್ಥಲಸಾರಾಯ ಸ್ವರೂಪನೆಂದು ಹೇಳಲ್ಪಟ್ಟನು.

(೨). ಸತ್ಕ್ರಿಯಾವಂತಂಗೆ ಭಕ್ತಿಸ್ಥಲವಿಲ್ಲ. ನಿರ್ಮಳಚಿತ್ತಂಗೆ ಮಹೇಶ್ವರ ಸ್ಥಲವಿಲ್ಲ. ಪರಿಪೂರ್ಣಭಾವಿಗೆ ಪ್ರಸಾದಿ ಸ್ಥಲವಿಲ್ಲ. ಉಭಯವಳಿದವಂಗೆ ಪ್ರಾಣಲಿಂಗಿಸ್ಥಲವಿಲ್ಲ. ಶ್ರುತದೃಷ್ಟ ಅನುಮಾನಕ್ಕೊಳಗಾಗಿ ಶರಣಸ್ಥಲವಿಲ್ಲ. ಕೂಡಿಹೆ ಕೂಡಿಹೆನೆಂಬ ಭಾವವಿಲ್ಲಾಗಿ ಐಕ್ಯಸ್ಥಲವಿಲ್ಲ. ಇಂತೀ ಸ್ಥಲದಿಂದ ನಿಃಸ್ಥಲವನೆಯ್ದಿ ಏಕವಾದಲ್ಲಿ ನೀನೇ ಎನುತಿರ್ದೆ ನಿಃಕಳಂಕಮಲ್ಲಿಕಾರ್ಜುನಾ.

(೩). ಕೂಟದ ಲಕ್ಷಣವುಳ್ಳನ್ನಕ್ಕ ಐಕ್ಯಸ್ಥಲ. ಭಾವಕಲ್ಪಿತಂಗಳುಳ್ಳನ್ನಕ್ಕ ಶರಣಸ್ಥಲ. ಕೊಂಡಿಹೆ, ಕೊಟ್ಟಿಹೆನೆಂಬನ್ನಕ್ಕ ಪ್ರಾಣಲಿಂಗಿಸ್ಥಲ, ಉಂಡಿಹೆ ಉಟ್ಟಿಹೆನೆಂಬನ್ನಕ್ಕ ಪ್ರಸಾದಿಸ್ಥಲ. ಅರಿದೆನು ಅರಿಯೆನು ಎಂಬನ್ನಕ್ಕ, ಮಹೇಶ್ವರಸ್ಥಲ. ಗುರುವಿಂಗೆ ತನು, ಲಿಂಗಕ್ಕೆ ಮನ, ಜಂಗಮಕ್ಕೆ ಧನವ, ಕೊಟ್ಟಿಹೆ

ನೆಂಬನ್ನಕ್ಕ ಭಕ್ತಿಸ್ಥಲ. ಇವನಿಶ್ಚೈಸಿ ನಿಜವೇಕವೆಂದರಿದಲ್ಲಿ ಷಟ್‌ಸ್ಥಲ ನಿರ್ಲೇಪ ನಿಃಕಳಂಕ ಮಲ್ಲಿಕಾರ್ಜುನಾ.

(೪). ಭಕ್ತಂಗೆ ಬೀಜ ರೂಪು, ಮಹೇಶ್ವರಂಗೆ ಅಂಕುರ ರೂಪು, ಪ್ರಸಾದಿಗೆ ಸಸಿ ರೂಪು, ಪ್ರಾಣಲಿಂಗಿಗೆ ಫಲ ರೂಪು, ಶರಣಂಗೆ ಆ ಕಾಯ ಕೊಯ್ವ ರೂಪು, ಐಕ್ಯಂಗೆ ಹುಲ್ಲು ಒಕ್ಕಿ ಮೆಟ್ಟಿಸಿ ತೂರುವಾಗ, ಹೊಟ್ಟ ಕಳೆದು, ಬತ್ತನಿಂದು, ಹುಲ್ಲು ಹೊರೆಗಟ್ಟಿತ್ತು, ಒಕ್ಕಿದ ಮೇಟಿ ಕಿತ್ತಿತ್ತು, ಹುಲ್ಲು ಮೆದಿಗೆ ಹೋಯಿತ್ತು, ಹುಲ್ಲು ಗೂಡು ಬಿದ್ದಿತ್ತು, ನಿಂದಬತ್ತ ಪುನರಪಿ ಬೀಜವಹುದಕ್ಕೆ ಮುನ್ನವೇ, ನಿಃಕಳಂಕಮಲ್ಲಿಕಾರ್ಜುನನೆಂಬ ಹಗೆಯಲ್ಲಿ ಹೋಯಿತ್ತು.

(೫). ಭಕ್ತ ನಾನಪ್ಪೆನಯ್ಯಾ, ಕರ್ತೃ ಭೃತ್ಯತ್ವವನರಿಯೆ. ಮಹೇಶ್ವರ ನಾನಪ್ಪೆನಯ್ಯಾ, ವ್ರತ ನಿಯಮ ಫಲವನರಿಯೆ. ಪ್ರಸಾದಿಯಾನಪ್ಪೆನಯ್ಯಾ, ಅರ್ಪಿತ ಅನರ್ಪಿತವ ಮುನ್ನರಿಯೆ. ಪ್ರಾಣಲಿಂಗಿಯಾನಪ್ಪೆನಯ್ಯಾ, ಅನುಭಾವದ ಗಮನವನರಿಯೆ. ಶರಣೆಯಾನಪ್ಪೆನಯ್ಯಾ, ಸತಿಪತಿ ಎಂಬ ಭಿನ್ನವನರಿಯೆ. ಐಕ್ಯ ಳಾನಪ್ಪೆನಯ್ಯಾ ಬೆರಸಿ ಭೇದವನರಿಯೆ. ಚನ್ನಮಲ್ಲಿಕಾರ್ಜುನಯ್ಯಾ, ಷಟ್‌ಸ್ಥಲದಲ್ಲಿ ನಿಃಸ್ಥಲದ ವರ್ತನೆಯ ಪರಿಜ್ಞಾನಿಯಾಗಿಪ್ಪೆನಯ್ಯಾ.

(೬). ಮತಿಜ್ಞಾನ, ಶೃತಿಜ್ಞಾನ, ಖಂಡಜ್ಞಾನ, ಕೇವಲಜ್ಞಾನ, ಜ್ಯೋತಿ ಜ್ಞಾನ, ಮಹಾಜ್ಯೋತಿಜ್ಞಾನವೆಂದಿತ್ತು. ಜ್ಞಾನವಾರುತೆರನು. ಮತಿಜ್ಞಾನದಿಂದ ಶೃತಿಜ್ಞಾನವಹುದು. ಶೃತಿಜ್ಞಾನದಿಂದ ಖಂಡಜ್ಞಾನವಹುದು. ಖಂಡಜ್ಞಾನದಿಂದ ಕೇವಲಜ್ಞಾನವಹುದು. ಕೇವಲಜ್ಞಾನದಿಂದ ಜ್ಯೋತಿಜ್ಞಾನವಹುದು. ಜ್ಯೋತಿ ಜ್ಞಾನದಿಂದ ಮಹಾಜ್ಯೋತಿಜ್ಞಾನವಹುದು. ಮಹಾಜ್ಯೋತಿಜ್ಞಾನದಿಂದ ನಿರಾ ಲಂಬವಹುದು. ಮತಿಜ್ಞಾನವೇ ಭಕ್ತ, ಶೃತಿಜ್ಞಾನವೇ ಮಹೇಶ್ವರ, ಖಂಡಜ್ಞಾ ನವೇ ಪ್ರಸಾದಿ, ಕೇವಲಜ್ಞಾನವೇ ಪ್ರಾಣಲಿಂಗಿ, ಜ್ಯೋತಿಜ್ಞಾನವೇ ಶರಣ, ಮಹಾಜ್ಯೋತಿಜ್ಞಾನವೇ ಐಕ್ಯ, ಈ ಷಟ್‌ಸ್ಥಲದ ನೆಲೆಯ ಬಲ್ಲಾತನೇ ಕೂಡಲ ಚನ್ನಸಂಗಯ್ಯನಲ್ಲಿ ಐಕ್ಯನು.

(೭). ನೀರ ಕೂಡಿ ಕ್ಷೀರ ಬೆಂದಲ್ಲದೆ, ಮತ್ತಾ ನೀರರಸವರತು ಹೊತ್ತ ದೆ ಉಳಿದ ಉಳುಮೆಯಂತೆ, ಇಕ್ಷುವಿನ ಸಾರ ಅಪ್ಪುವಿನ ಕೂಟದಿಂದ ಪಕ್ವವಾಗಿ ಮೇಲೆ ಉಳಿದುದು ಸಕ್ಕರೆಯಾದಂತೆ, ಎಣ್ಣೆ ನೀರು ಕೂಡಿ ಬೆಂದು ಬಿನ್ನಾಣದಿ

ಮೇಲೇರಿ ಆ ಉಭಯಕ್ಕೆ ಅನ್ಯವಿಲ್ಲದೆ ಬೆರೆದಂತೆ, ಇಂತೀ ಸ್ಥಲವನ್ನೈದಿ ನಿಃಸ್ಥಲ ವಾಗಬೇಕು ನಿಃಕಳಂಕ ಮಲ್ಲಿಕಾರ್ಜುನನಲ್ಲಿ ಷಟ್‌ಸ್ಥಳ ಸಂಪೂರ್ಣ.

(೮). ಸಕಲ ಗುಣಂಗಳನರಿತು ಸರ್ವ ಜೀವಕ್ಕೆ ದಯಾಪರವಾಗಿಪ್ಪುದು ಭಕ್ತಿಸ್ಥಲ. ಸಕಲ ದೇಹಭಾವಂಗಳಲ್ಲಿ ತಲೆದೋರದಿಪ್ಪುದು ಗುರುಸ್ಥಲ. ಉತ್ಪತ್ತಿ ಸ್ಥಿತಿ ಲಯಕ್ಕೆ ಹೊರಗಾದುದು ಲಿಂಗಸ್ಥಲ. ಆ ಮೂರು ಹೆರೆಹಿಂಗಿ ನಿಂದುದು ಜಂಗಮಸ್ಥಲ. ಈ ಚತುರ್ವಿಧವನೊಳಕೊಂಡುದು ಶರಣಸ್ಥಲ. ಐದುವ ನವಗ್ರಹಿಸಿನಿಂದುದು ಐಕ್ಯಸ್ಥಲ. ಇಂತೀ ಷಟ್‌ಸ್ಥಲವ ಭಕ್ತ ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯನೆಂದು ನಿಂದುದು ಒಂದೇ ಸ್ಥಲ. ಮರೆದು ಅರಿದಲ್ಲಾಯಿತ್ತು. ಈಶಾನ್ಯಮೂರ್ತಿ ಮಲ್ಲಿಕಾರ್ಜುನಲಿಂಗವು ಷಡಂಗಲೇಪ ವಾಗಿ ಸ್ವಯಂಭುವಾಯಿತ್ತು.

(೯). ತನುವಿಡಿದು ನಡೆವ ತ್ರಿವಿಧ, ತ್ರಿವಿಧ ಸಂಪತ್ತುಗಳು, ಭಕ್ತ, ಮಹೇಶ, ಪ್ರಸಾದಿ. ಮನವಿಡಿದು ನಡೆವ ತ್ರಿವಿಧ, ತ್ರಿವಿಧ ಸಂಪತ್ತುಗಳು, ಪ್ರಾಣಲಿಂಗಿಶರಣ ಐಕ್ಯ. ಈ ಉಭಯದನುಭವವಿಡಿದು, "ಸ್ಥಾವರಂ ಜಂಗ ಮಶ್ಚೈವ ದ್ವಿವಿಧಂ ಲಿಂಗಮುಚ್ಯತೆ" ಎಂಬ ಈ ಭೇದವ ಭೇದಿಸಬಲ್ಲಡೆ, ಹಿಂದಿಲ್ಲ, ಮುಂದಿಲ್ಲ, ಇಹಪರ ಒಂದೇ, ಕರ್ಮನಾಸ್ತಿ, ಭವನಾಸ್ತಿ, ಕೂಡಲಚನ್ನಸಂಗ ಸ್ವಾಯತವಾದಂಗೆ ಇದು ಸಹಜ.

(೧೦). ಭೃತ್ಯ ರೂಪೊಂದು ಭಕ್ತಿಸ್ಥಲ, ಕರ್ತು ರೂಪೊಂದು ವಸ್ತು. ಈ ಉಭಯ ಜಗದ ಹಾಗೆ ನಡೆಯಬೇಕಾದಲ್ಲಿ, ಮೂರು ಭಕ್ತಿ ಸ್ಥಲವಾಯಿತ್ತು, ಮೂರು ಕರ್ತು ಸ್ಥಲವಾಯಿತ್ತು. ಭಕ್ತ, ಮಹೇಶ, ಪ್ರಸಾದಿ ಈ ಮೂರು ಭಕ್ತಿ ಸ್ವರೂಪು. ಪ್ರಾಣಲಿಂಗಿ, ಶರಣ, ಐಕ್ಯ ಈ ತ್ರಿವಿಧ ಕರ್ತುಸ್ವರೂಪು. ಇಂತೀ ಉಭಯ ಭೇದದ ವಸ್ತು ಮರ್ತ್ಯಕ್ಕೆ ಬಂದು, ಮುಂದೆ ಆಶ್ರಯವ ಕಟ್ಟಿದ ಕಾರಣ, ಭಕ್ತಿಗೆ ಬಸವಣ್ಣನಾಗಿ, ಆ ಭಕ್ತಿಯನೊಪ್ಪುಗೊಂಬುದಕ್ಕೆ ವಸ್ತು ಪ್ರಭು ರೂಪಾಗಿ ಬಂದ ಕಾರಣ, ಉಭಯ ಸ್ಥಲ ಗೋಚರಿಸದೆಂದು ಷಟ್‌ಸ್ಥಲವಾಯಿತ್ತು. ಆ ಸ್ಥಲದ ನಾಮರೂಪು ನಾನಾ ಸ್ಥಲದ ಒಡಲಾಯಿತ್ತು. ಪೂರ್ವಗತಿಯಾದಲ್ಲಿ ಸ್ಥಲ, ಉತ್ತರ ಗತಿಯಾದಲ್ಲಿ ನಿಃಸ್ಥಲ. ಉಭಯ ನಾಮ ರೂಪು ಲೇಪವಾದಲ್ಲಿ ನಿಃಕಳಂಕ ಮಲ್ಲಿಕಾರ್ಜುನನು ನಿರ್ಲೇಪವಾದನು.

( ೧೧ ). ಗುರುಸ್ಥಲ, ಲಿಂಗಸ್ಥಲ, ಜಂಗಮಸ್ಥಲ, ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲ, ಇಂತೀ ನವಗುಣ ಸ್ಥಲಂಗಳಲ್ಲಿ ಸಾಧಕಸ್ಥಲ ಮೂರು, ಸಾಧ್ಯ ಮೂರು, ಅಸಾಧ್ಯ ಮೂರು. ಸಾಧಕದಿಂದ ಸಾಧ್ಯ, ಸಾಧ್ಯದಿಂದ ಅಸಾಧ್ಯ, ಅಸಾಧ್ಯದಿಂದ ಭೇದ ಕತ್ವ ಇಂತೀ ದಶಗುಣ ಸಿದ್ಧಿಯಾದಲ್ಲಿ, ಮೂವತ್ತಾರುಭೇದ, ಇಪ್ಪತ್ತೈದುತತ್ವ ನೂರೊಂದುಸ್ಥಲ ಒಂದು ಸ್ಥಲದಲ್ಲಿ ನಿಂದು ಐಕ್ಯವಾಗಲಾಗಿ ಬೀಜದೊಳಗೆ ಫಲಪರ್ಣ ಅಂಕುರ ವಿಭೇದವಿಲ್ಲದೆ ಅಡಗಿದಂತೆ ಈಗುಣ, ಸರ್ವಸ್ಥಲ ಸಂಪೂರ್ಣನಲ್ಲಿ ಐಕ್ಯ, ಗೋಪತಿನಾಥ ವಿಶ್ವೇಶ್ವರ ಲಿಂಗದಲ್ಲಿ ಉಭಯುವಳಿದ ನಿರ್ವೀಜ.

---

## ನಿಃಸ್ಥಲತ್ವದ ಸ್ಥಿತಿಯು.

( ೧ ). ಭಕ್ತಂಗೆ ಸ್ಪರ್ಶನವಿಷಯುವಳಿದು, ಮಹೇಶ್ವರಂಗೆ ಅಪ್ಪುವಿನ ವಿಷಯುವಳಿದು, ಪ್ರಸಾದಿಗೆ ರುಚಿವಿಷಯುವಳಿದು ಪ್ರಾಣಲಿಂಗಿಗೆ ಉಭಯ ಭೇದವಿಷಯುವಳಿದು, ಶರಣಂಗೆ ಸುಖದುಃಖ, ವಂದನೆ ನಿಂದನೆ, ಅಹಂಕಾರ ಭ್ರಮೆವಿಷಯುವಳಿದು, ಐಕ್ಯಂಗೆ ಇಂತೀ ಅದರ ಭೇದದಲ್ಲಿ ಹಿಂದಣಮುಟ್ಟು ಮುಂದಕ್ಕೆ ತಲೆದೋರದೆ, ಮುಂದಣ ಹಿಂದಣ ಸಂದೇಹದ ವಿಷಯುನಿಂದು, ಕರ್ಪುರವುಳ್ಳನ್ನಕ್ಕ ಉರಿಯಭೇದ, ಉರಿಯುಳ್ಳನ್ನಕ್ಕ ಕರ್ಪುರದಂಗ ಉಭಯ ನಿರಿಯಾಣವಾದಲ್ಲಿ ಐಕ್ಯಸ್ಥಲ ನಾಮನಿರ್ಲೇಪ ಚನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನ ಲಿಂಗದಲ್ಲಿ.

( ೨ ). ಹೊಸ ಮದುವೆಯು ಹಸೆಯಡಗದ ಮುನ್ನ, ಹೂಸಿದ ಅರಿಸಿನ ಬಿಸಿಲಿಂಗೆ ಹರಿಯುದ ಮುನ್ನ, ತನು ಸಂಚಲವಡಗಿ ಮನವು ಗುರುಕಾರುಣ್ಯವ ಪಡೆದು ಹುಸಿ ಇಲ್ಲದಿರ್ದಡೆ ಭಕ್ತನೆಂಬೆ. ಹಿಡಿಯುಲಿಲ್ಲದಿರ್ದಡೆ, ಮಹೇಶ್ವರನೆಂಬೆ. ತನುವಿಲ್ಲದಿರ್ದಡೆ ಪ್ರಸಾದಿ ಎಂಬೆ. ಜೀವವಿಲ್ಲದಿರ್ದಡೆ ಪ್ರಾಣಲಿಂಗಿ ಎಂಬೆ. ಆಶೆ ಇಲ್ಲದಿರ್ದಡೆ ಶರಣನೆಂಬೆ. ಐದರ ಸಂಪರ್ಕವಿಯೋಗವಾದಡೆ, ಐಕ್ಯನೆಂಬೆ. ಐಕ್ಯದ ಸಂತೋಷ ಹಿಂಗಿದಡೆ, ಜ್ಯೋತಿರ್ಮಯನೆಂಬೆ. ಇಂತಾಗಬೇಕೆಂಬ ಈ ಮನದ ದೇಹವನಿರಿದಡೆ ಅರಿಯುದು, ತರಿದಡರಿಯುದು, ಬೈದಡರಿಯುದು, ಹೊಯ್ದಡರಿಯುದು, ನಿಂದಿಸಿದಡರಿಯುದು, ಸ್ತುತಿಸಿದಡರಿಯುದು, ಸುಖವನರಿಯುದು,

ದುಃಖವನರಿಯದು, ಈ ಚತುರ್ವಿಧದ ತಾಗು ನಿರೋಧವನರಿಯದಿರ್ದಡೆ ಆತನೇ ಮಹಾಲಿಂಗ ಗಜೇಶ್ವರನೆಂಬೆ.

(೩). ಭಕ್ತನಾದರೆ, ಭಕ್ತಿಸ್ಥಲವನರಿದು ಅರಿಯದಂತಿರಬೇಕು. ಮಹೇಶನಾದರೆ, ನಿಷ್ಠೆಯ ಕುಳವನರಿತು, ಅರಿಯುದಂತಿರಬೇಕು. ಪ್ರಸಾದಿಯಾದರೆ, ಪ್ರಸಾದಸ್ಥಲವನರಿತು, ಅರಿಯದಂತಿರಬೇಕು. ಪ್ರಾಣಲಿಂಗಿಯಾದರೆ, ಅಂತಸ್ಥವನರಿತು, ಅರಿಯದಂತಿರಬೇಕು. ಶರಣನಾದರೆ, ಸತಿಪತಿ ಎಂದರಿತು ಅರಿಯದಂತಿರಬೇಕು. ಐಕ್ಯನಾದರೆ, ತಾನು ತಾನಾಗಿ ಅಗಲದಂತಿರಬೇಕು. ಇಂತೀ ಷಟ್‌ಸ್ಥಲದ ನಿರ್ಣಯುವ ನಿಶ್ಚಯಿಸದೆ, ಆನು ಬಲ್ಲೆನೆಂಬ ಲಜ್ಜೆಗೆಟ್ಟ ಲಾಂಛನಧಾರಿಯನೇನೆಂಬೆ ಕೂಡಲಚನ್ನಸಂಗಮದೇವಾ?

(೪). ಅಂಗಭವಿ ಭಕ್ತಂಗೆ, ಮನಭವಿ ಮಹೇಶ್ವರಂಗೆ, ರುಚಿಭವಿ ಪ್ರಸಾದಿಗೆ, ಕುರುಹುಭವಿ ಪ್ರಾಣಲಿಂಗಿಗೆ, ತ್ರಿವಿಧನಾಮಭವಿ ಶರಣಂಗೆ, ಕೂಟಸ್ಥಭವಿ ಐಕ್ಯಂಗೆ, ಇಂತೀ ಸ್ಥಲಂಗಳ ಕುರುಹ ಕುರುಹಿನಲ್ಲಿ ಕಂಡು, ಅರುಹ ಅರುಹಿನಲ್ಲಿ ತಿಳಿದು, ಐಕ್ಯ ಐಕ್ಯವಾದ ಮೇಲೆ, ಅದು ಕಲ್ಲಿನೊಳಗಣ ಬೆಳಗು, ಮುತ್ತಿನೊಳಗಣ ಅಪ್ಪು, ಕರ್ಪುರದೊಳಗಣ ಉರಿಯಂತೆ, ದೃಷ್ಟಾ ದೃಷ್ಟನಿಷ್ಪತ್ತಿಯಾಗಬೇಕು ನಿಃಕಳಂಕ ಮಲ್ಲಿಕಾರ್ಜುನಾ.

(೫). ಬೀಜ ವೃಕ್ಷವ ನುಂಗಿತ್ತೋ, ವೃಕ್ಷ ಬೀಜವ ನುಂಗಿತ್ತೋ ಎಂದರಿದಾಗಲೇ ಭಕ್ತಿಸ್ಥಲ. ಮುತ್ತು ಜಲವ ನುಂಗಿತ್ತೋ, ಜಲವು ಮುತ್ತ ನುಂಗಿತ್ತೋ ಎಂಬುದನರಿದಾಗಳೇ ಮಹೇಶ್ವರ ಸ್ಥಲ. ಪ್ರಭೆಯು ಪಾಷಾಣವ ನುಂಗಿತ್ತೋ ಪಾಷಾಣವು ಪ್ರಭೆಯ ನುಂಗಿತ್ತೋ ಎಂಬುದನರಿದಾಗಳೇ ಪ್ರಸಾದಿ ಸ್ಥಲ. ವಹ್ನಿಯು ಕಾಷ್ಠವ ನುಂಗಿತ್ತೋ, ಕಾಷ್ಠವು ವಹ್ನಿಯ ನುಂಗಿತ್ತೋ, ಎಂಬುದನರಿದಾಗಳೇ ಪ್ರಾಣಲಿಂಗಿ ಸ್ಥಳ. ಸಾರ ಬಲಿದು ಶರಧಿಯ ಕೂಡಿದಾಗಳೇ ಶರಣಸ್ಥಲ. ವಾರಿ ಬಲಿದು ವಾರಿಧಿಯ ಕೂಡಿದಾಗಳೇ ಐಕ್ಯಸ್ಥಲ. ಹೀಗಲ್ಲದೆ ಷಟ್‌ಸ್ಥಲ ಬ್ರಹ್ಮಿಗಳೆಂತಾದಿರಣ್ಣಾ? ಕರೆಯದ ಪಶುವಿಂಗೆ ತೃಣವನಿರಿಸುವಂತೆ, ಗೆಲ್ಲಸೋಲಕ್ಕೆ ಹೋರುವನಲ್ಲಿ ಬಲ್ಲ ತನವನರಸುವನಂತೆ, ಒಲಿದ ವಂಶದಲ್ಲಿ ಕಳಲೆಯನರಸುವನಂತೆ, ಬರು ಮಾತಿಂಗೆ ಎಡೆಯಾದುದುಂಟೇ? ಬಯಲು ಕೊಂಡ ಘನಕ್ಕೆ ಅವಧಿಯ ಕೊಡಲಿಲ್ಲ. ಉರಿಕೊಂಡ ಕರ್ಪುರಕ್ಕೆ ರೂಪಿನೆಡೆ ಇಲ್ಲ.

ಬಯಲು ಬಡಿದವಂಗೆ, ಕೈಗೆ ಮೆತ್ತಗಿಲ್ಲ. ಮನವು ಮಹದಲ್ಲಿನಿಂದವಂಗೆ ಆರ ನೆಣಿಸಲಿಲ್ಲ, ಮೂರ ಮುಟ್ಟಲಿಲ್ಲ. ಮೀರಿ ತೋರಿದ ಘನವದು ತನ್ನಲ್ಲಿಯೇ ನಿರ್ಲೇಪ ನಿಷ್ಕಳಂಕ ಮಲ್ಲಿಕಾರ್ಜುನಾ.

(೬). ಭಕ್ತಿ ಸ್ಥಲ ಬ್ರಹ್ಮನಾಶನ, ಮಹೇಶ್ವರ ಸ್ಥಲ ವಿಷ್ಣುನಾಶನ, ಪ್ರಸಾದಿಸ್ಥಲ ರುದ್ರನಾಶನ, ಪ್ರಾಣಲಿಂಗಿಸ್ಥಲ ಈಶ್ವರನಾಶನ, ಶರಣಸ್ಥಲ ಸದಾ ಶಿವ ನಾಶನ, ಐಕ್ಯಸ್ಥಲ ಪರವಸ್ತು ನಾಶನ, ಇಂತೀ ಸ್ಥಲಂಗಳ ಆರೋಪಿಸುವಲ್ಲಿ ಪೂರ್ವವನಾ ಧರಿಸಿ ಉತ್ತರವ ನಿರೀಕ್ಷಿಸಿ, ಮೇಲಣ ನಿಶ್ಚಯ ಪದ ನಿಜವೆಂದು ನಿಶ್ಚೈಸಿದಲ್ಲಿ ನಿಃಕಳಂಕ ಮಲ್ಲಿಕಾರ್ಜುನನ ಸ್ಥಲ ನಿಃಸ್ಥಲವಾಯಿತ್ತು.

(೭). ಭಕ್ತನಾದಲ್ಲಿ ಬ್ರಹ್ಮನ ಒಡಲೊಡೆಯಬೇಕು. ಮಹೇಶ್ವರ ನಾದಲ್ಲಿ ವಿಷ್ಣುವಿನ ಚೇತನಕ್ಕೆ ಸಿಕ್ಕದಿರಬೇಕು. ಪ್ರಸಾದಿಯಾದಲ್ಲಿ ರುದ್ರನ ಬಂಧನಕ್ಕೆ ಹೊದ್ದದಿರಬೇಕು. ಪ್ರಾಣಲಿಂಗಿಯಾದಲ್ಲಿ ಈಶ್ವರನ ಗೊತ್ತು ಮುಟ್ಟ ದಿರಬೇಕು. ಶರಣನಾದಲ್ಲಿ ಸದಾಶಿವನ ಮೂರ್ತಿಯ ತಪ್ಪಲ ತಪ್ಪಿರಬೇಕು. ಐಕ್ಯನಾದಲ್ಲಿ ಪರಶಿವನೆಂಬ ಪ್ರಮಾಣು ನಷ್ಟವಾಗಿರಬೇಕು. ಇಂತೀ ಸ್ಥಲಂಗಳ ನೆಮ್ಮಿ ಉಭಯ ನಷ್ಟವಾದುದೇ ಅತ್ತಲೇ ತಾ ನಷ್ಟ ನಿಷ್ಕಳಂಕಮಲ್ಲಿ ಕಾರ್ಜುನಾ.

---

## ತನು ಮನ ಪ್ರಾಣಭಾವಗಳ ನಿವೃತ್ತಿ.

(೧). ತನು ನಿಮ್ಮನಪ್ಪಿ ಮಹಾಲಿಂಗವಾದ ಬಳಿಕ, ತನುವೆಂಬುದು ಮತ್ತೆಲ್ಲಿಯದೋ? ಮನ ನಿಮ್ಮನಪ್ಪಿ, ಘನಮನವಾದ ಬಳಿಕ, ಮನವೆಂಬುದು ಮತ್ತೆಲ್ಲಿಯದೋ? ಪ್ರಾಣ ನಿಮ್ಮನಪ್ಪಿ, ಪ್ರಾಣ ಪದದಲ್ಲಿ ಸಿಲುಕಿದ ಬಳಿಕ, ಪ್ರಾಣವೆಂಬುದು ಮತ್ತೆಲ್ಲಿಯದೋ? ಇಂತೀ ತ್ರಿವಿಧವು ಲಿಂಗದಲ್ಲಿ ನಿರ್ಲೇಪ ವಾಗಿ, ಮನದೋರದಿರವ ಕೂಡಲ ಚನ್ನಸಂಗಯ್ಯನೇ ಬಲ್ಲ.

(೨). ನಿಮ್ಮ ಪೂಜಿಸಿಹೆನೆಂದಡೆ ತನುವಿಲ್ಲವಯ್ಯಾ ಎನಗೆ. ಅದೇನು ಕಾರಣವೆಂದಡೆ, ಎನ್ನ ತನುವೇ ನೀವೆಯಾದಿರಾಗಿ. ನಿಮ್ಮ ನೆನೆಹಿದೆನೆಂದರೆ, ಅರುಹಿಲ್ಲವಯ್ಯಾ ಎನಗೆ. ಅದೇನು ಕಾರಣವೆಂದಡೆ, ಆ ಅರುಹೇ ನೀವೆಯಾದಿ ರಾಗಿ. ಅಖಂಡೇಶ್ವರಾ ನಿಮ್ಮೊಳಗೆ ನಾನು ಉರಿಗೊಂಡ ಕರ್ಪೂರದಂತಿರ್ದೆನಯ್ಯ.

(೩). ತನು ತನ್ನ ಕಾಣದು, ಮನವು ತನ್ನ ಕಾಣದು, ಇದೇನಯ್ಯಾ! ತನುವು ಕೆಟ್ಟು, ಮನವು ಕೆಟ್ಟು, ನಷ್ಟವಾಗಿ ಹೋಯಿತ್ತಿದೇನಯ್ಯಾ! ಹಿಂದು ಮುಂದುಗಾಣದು, ಮುಂದು ಹಿಂದುಗಾಣದು. ಜೀವವಿತ್ತುಗಳೆಲ್ಲ ಮಾಡಿ ಕೆಟ್ಟು ನಿಂದವು. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲವಾಗಿ.

(೪). ತನು ಸೋಂಕಿ, ತನು ನಷ್ಟವಾಯಿತ್ತು. ಮನ ಸೋಂಕಿ, ಮನ ನಷ್ಟವಾಯಿತ್ತು. ಭಾವ ಸೋಂಕಿ, ಭಾವ ನಷ್ಟವಾಯಿತ್ತು. ಇದು ಕಾರಣ ಕೂಡಲ ಚನ್ನಸಂಗಯ್ಯಾಲಿಂಗ ಸೋಂಕಿ ಶರಣನ ಸಂದು ನಷ್ಟವಾಯಿತ್ತು.

(೫). ಕಾಯವಿಲ್ಲದ ಭಕ್ತ, ಜೀವವಿಲ್ಲದ ಭಕ್ತ, ಮಾಯೆ ಇಲ್ಲದ ಭಕ್ತ, ಮರಹಿಲ್ಲದ ಭಕ್ತ, ಅರುಹಿಲ್ಲದ ಭಕ್ತ, ಒಳಗಿಲ್ಲದ ಭಕ್ತ, ಹೊರಗಿಲ್ಲದ ಭಕ್ತ, ತಾನಿಲ್ಲದ ಭಕ್ತ, ಇದಿರಿಲ್ಲದ ಭಕ್ತ, ತಾನಿದಾರೆಂಬುದೇನೂ ಇಲ್ಲದ ಪರಮ ನಲ್ಲಿ ಬೆರಿಸಿ ಬೇರಿಲ್ಲದ ಪರಮ ಭಕ್ತನಯ್ಯಾ, ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೬). ಭಾವ ಭಾವಿಸಬಲ್ಲುದೇ? ಭಾವ ಭಾವಿಸಲರಿಯದು. ಅದೇನು ಕಾರಣ? ಭಾವದಲ್ಲಿ ಭಾವಿಸುವ ಭಾವಿಕ ತಾನಾಗಿ. ನೇತ್ರ ನೋಡಬಹುದೇ? ನೇತ್ರ ನೋಡಲರಿಯದು. ಅದೇನು ಕಾರಣ? ನೇತ್ರದ ಬಾಗಿಲಲ್ಲಿ ನಿಂದು ನೋಡುವಾತ ತಾನಾಗಿ. ಶ್ರೋತ್ರ ಕೇಳಬಲ್ಲುದೇ? ಶ್ರೋತ್ರ ಕೇಳಲರಿಯದು. ಅದೇನು ಕಾರಣ? ಶ್ರೋತ್ರದ ಬಾಗಿಲಲ್ಲಿ ನಿಂದು ಕೇಳುವಾತ ತಾನಾಗಿ. ನಾಸಿಕ ಪರಿಮಳವ ವಾಸಿಸಬಲ್ಲುದೇ? ವಾಸಿಸಲರಿಯದು. ಅದೇನು ಕಾರಣ? ನಾಸಿಕದ ಬಾಗಿಲಲ್ಲಿ ನಿಂದು ವಾಸಿಸುವಾತ ತಾನಾಗಿ. ಜಿಹ್ವೆ ರುಚಿಸಬಲ್ಲುದೇ? ಜಿಹ್ವೆ ರುಚಿಸಲರಿಯದು. ಅದೇನು ಕಾರಣ? ಜಿಹ್ವೆಯ ಕೊನೆಯಲ್ಲಿ ನಿಂದು, ರುಚಿಯ ನಿಶ್ಚೈಸುವಾತ ತಾನಾಗಿ. ಜಂತ್ರಗಳಾಡಬಲ್ಲವೇ? ಜಂತ್ರಗಳಾಡಲರಿಯವು. ಅದೇನು ಕಾರಣ? ಜಂತ್ರಗಳನಾಡಿಸುವ ಯಂತ್ರವಾಹಕ ತಾನಾಗಿ. ಇದು ಕಾರಣ ಕೂಡಲ ಚನ್ನಸಂಗಯ್ಯಾ ನಿಮ್ಮ ಶರಣ ಸರ್ವಾಂಗಲಿಂಗಿ.

(೭). ಆಕಾಶದಿಂದಲಾಯಿತ್ತು ನಿರಾಕಾರ. ಆ ನಿರಾಕಾರ ಚಿದಾಕಾಶದ ಮೇಲೆ ನಿಂದಿತ್ತು. ಆ ನಿರಾಕಾರದಿಂದಲಾಯಿತ್ತು ಭಾವ. ಆ ಭಾವ ಕಾರಣದ ಮೇಲೆ ನಿಂದಿತ್ತು. ಆ ಭಾವದಿಂದಲಾಯಿತ್ತು ಮನ. ಆ ಮನ ಸೂಕ್ಷ್ಮದ

ಪೇಲೆ ನಿಂದಿತ್ತು. ಆ ಮನದಿಂದಲಾಯಿತ್ತು ತನು. ಆ ತನು ಸ್ಥೂಲದ ಮೇಲೆ ನಿಂದಿತ್ತು. ಆ ತನು ಮನವ ಕೂಡಿದಲ್ಲಿಯೇ ತನು ನಷ್ಟವಾಯಿತ್ತು. ಮನ ಭಾವವ ಕೂಡಿದಲ್ಲಿಯೇ ಮನ ನಷ್ಟವಾಯಿತ್ತು. ಭಾವ ನಿರಾಕಾರವ ಕೂಡಿದ ಲ್ಲಿಯೇ ಭಾವ ನಷ್ಟವಾಯಿತ್ತು. ಇಂತೀ ತ್ರಿವಿಧ ನಷ್ಟವಾದಲ್ಲಿಯೇ ಶರಣನ ಹುಟ್ಟು ನಷ್ಟವಾಯಿತ್ತಯ್ಯ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ.

(೮). ಅಂಗ ಲಿಂಗವವೇಧಿಸಿ, ಅಂಗಲಿಂಗದೊಳಗಾಯಿತ್ತು. ಮನ ಲಿಂಗವವೇಧಿಸಿ, ಮನ ಲಿಂಗದೊಳಗಾಯಿತ್ತು. ಭಾವ ಲಿಂಗವವೇಧಿಸಿ, ಭಾವ ಲಿಂಗದೊಳಗಾಯಿತ್ತು. ಚನ್ನಮಲ್ಲಿಕಾರ್ಜುನ ನಿನ್ನ ಒಲುಮೆಯ ಸಂಗದಲ್ಲಿರ್ದು ಸ್ವಯ ಲಿಂಗವಾಯಿತ್ತು.

(೯). ಕಾಯಗುಣ ಕೆಟ್ಟು, ಮತ್ತೆ ಅರ್ಚನೆ ಹಿಂಗಿತ್ತು. ಪ್ರಾಣಗುಣ ಕೆಟ್ಟು ಮತ್ತೆ ಅರ್ಪಿತ ಹಿಂಗಿತ್ತು. ಭಾವಗುಣ ಕೆಟ್ಟು, ಮತ್ತೆ ಉಭಯ ಜಂಜಡ ಹಿಂಗಿತ್ತು. ಇದು ಕಾರಣ ನಮ್ಮ ಗುಹೇಶ್ವರನ ಶರಣರು ಲಿಂಗಭೋಗೋಪ ಭೋಗವೆಂಬ ಖಂಡಿತ ಬುದ್ಧಿಯ ಮೀರಿ, ಅಖಂಡಾದ್ವೈತ ಬ್ರಹ್ಮದಲ್ಲಿ ಲೀಯ ವಾದರು.

---

## ಗುರು, ಲಿಂಗ, ಜಂಗಮದ ನಿವೃತ್ತಿ.

(೧). ತನ್ನ ತಾನರಿದಡೆ ತನ್ನರಿವೆ ಗುರು, ತಾನೇ ಲಿಂಗ, ತನ್ನ ನಿಷ್ಠೆಯೇ ಜಂಗಮ. ಇಂತೀ ತ್ರಿವಿಧವು ಒಂದಾದಡೆ, ರಾಮೇಶ್ವರ ಲಿಂಗವು ತಾನೆ.

(೨). ಕ್ರಿಯೆಯರಿದವಂಗೆ ಗುರುವಿಲ್ಲ. ಆಚಾರವನರಿದವಂಗೆ ಲಿಂಗ ವಿಲ್ಲ. ಉತ್ಪತ್ತಿ ಸ್ಥಿತಿಲಯವನರಿದವಂಗೆ ಜಂಗಮವಿಲ್ಲ. ಪರಬ್ರಹ್ಮವನರಿದವಂಗೆ ಸರ್ವೇಂದ್ರಿಯವಿಲ್ಲ. ತನ್ನನರಿದವಂಗೆ ಹಿಂದೆ ಮುಂದೆ ಕಾಂಬುವದೊಂದೂ ಇಲ್ಲವೆಂದನಂಬಿಗ ಚೌಡಯ್ಯ.

(೩). ಉಪದೇಶ ನಷ್ಟವಾದಡೆ ಗುರುವೆಂಬೆ, ಭಾವನಷ್ಟವಾದಡೆ ಲಿಂಗವೆಂಬೆ, ಗಮನನಷ್ಟವಾದಡೆ ಜಂಗಮವೆಂಬೆ, ಮನನಷ್ಟವಾದಡೆ ಭಕ್ತ ನೆಂಬೆ, ಅರ್ಪಿತ ನಷ್ಟವಾದಡೆ ಪ್ರಸಾದಿ ಎಂಬೆ, ಆಚಾರ ನಷ್ಟವಾದಡೆ ಐಕ್ಯ

ನೆಂಬೆ. ಇಂತೀ ಷಟ್‌ಸ್ಥಲದ ನಿಂದ ನಿಲವಿನ ಪರಿಭಾವಪದವ ಕೂಡಲಚೆನ್ನ ಸಂಗಾ, ನಿಮ್ಮ ಶರಣಬಲ್ಲ.

(೪). 'ನೆನೆ', 'ನೆನೆ' ಎಂದಡೆ, ಏನ ನೆನೆವೆನಯ್ಯ. ಎನ್ನ ಕಾಯವೇ ಕೈಲಾಸವಾಯಿತ್ತು. ಎನ್ನ ಮನವೇ ಲಿಂಗವಾಯಿತ್ತು. ಎನ್ನತನುವೇ ಸಜ್ಜೆಯಾ ಯಿತ್ತು. ನೆನೆವಡೆ ದೇವನುಂಟೇ? ಗುಹೇಶ್ವರ ಲಿಂಗ ಲೀಯವಾಯಿತ್ತು.

(೫). ಕುರುಹಿಲ್ಲ, ಕುರುಹಿಲ್ಲ, ಲಿಂಗವೆಂದೆಂಬಡೆ. ತೆರಹಿಲ್ಲ, ತೆರಹಿಲ್ಲ, ಜಂಗಮವೆಂದೆಂಬಡೆ. ಇದೇ ನೋಡಾ ಶಿವಾಚಾರ. ಇದೇ ನೋಡಾ ಶಿವದೊ ಡಕು. "ಆತ್ಮನಾಂ ಪ್ರಕೃತಿ ಸ್ವಭಾವ" ಎಂದುದಾಗಿ, ಮುಟ್ಟಬಾರದ ಠಾವ ಮರೆಗೊಂಡಿರ್ಪ ಮಮಕರ್ತು ಕೂಡಲಸಂಗಮದೇವಾ.

---

## ಕ್ರಿಯೆಗಳ ನಿವೃತ್ತಿ.

(೧). ಅಹುದೆನಲಮ್ಮೆ, ಅಲ್ಲವೆನಲಮ್ಮೆ, ಇಲ್ಲವೆನಲಮ್ಮೆ, ಬೇಕೆನಲ್ಲ ಮ್ಮೆ, ಬೇಡೆನಲಮ್ಮೆ. ಅಖಂಡೇಶ್ವರಾ, ನೀವೆಂತಿರ್ದಂತೆ ಸಹಜನಾಗಿರ್ಪೆನಯ್ಯ.

(೨). ಅಲ್ಲೆನ್ನೆ, ಅಹುದೆನ್ನೆ, ಎಲ್ಲವೂ ತನ್ನಿಂದಾಯಿತ್ತಾಗಿ. ಬೇಡೆನ್ನೆ, ನಿತ್ಯ ತೃಪ್ತ ತಾನೆಯಾಗಿ. ಆಕಾರ ನಿರಾಕಾರವೆನ್ನೆ, ಉಭಯವನೊಳಕೊಂಡ ಗಂಭೀರ ತಾನೆಯಾಗಿ. "ನಿಶ್ಶಬ್ದ ಬ್ರಹ್ಮ ಮುಚ್ಯತೆ" ಎಂಬ ಶೃತಿಯು ಮತ ದಿಂದ ನುಡಿಗೆಟ್ಟವನಲ್ಲ. ಬೆಳಗು ಬೆಳಗನ್ನೈದಿ, ಮಹಾ ಬೆಳಗಾದ ಬಳಿಕ, ಹೇಳ ಲಿಲ್ಲದ ಶಬ್ದ, ಕೇಳಲಿಲ್ಲದ ಕೇಳು, ರೂಹಿಲ್ಲದ ಕೂಟ, ಕೂಟವಿಲ್ಲದ ಸುಖ, ಸುಖವಿಲ್ಲದ ಪರಿಣಾಮ, ಪರಿಣಾಮವಿಲ್ಲದ ಪರವಶ, ಪರವಶ ಪರಮಾನಂದ ನೆಂಬುವದಕ್ಕೆ ಎರವಿಲ್ಲವಾಗಿ, ಆತ ಲಿಂಗೈಕ್ಯನು. ಇಂತಪ್ಪ ಲಿಂಗೈಕ್ಯನೊಳಗೆ ಏಕವಾಗಿ ಬದುಕುವೆನು ಕಾಣಾ, ಪರಮ ಪಂಚಾಕ್ಷರ ಮೂರ್ತಿ ಶಾಂತ ಮಲ್ಲಿ ಕಾರ್ಜುನಯ್ಯ.

(೩). ಅನಂತ ಸಾಧನಂಗಳ ಕಲಿತು ಐಗಾರನು ಅಭ್ಯಾಸವ ಕಲಿಸುವ ನಲ್ಲದೆ, ಆತ ಮರಳಿ ಅಭ್ಯಾಸವ ಮಾಡುವನೇ ಅಯ್ಯಾ? ಅಖಂಡ ಪರಿಪೂರ್ಣ ಪರಬ್ರಹ್ಮವನೊಡಗೂಡಿ ಮಹಾ ಘನ ಪರಶಿವ ಶರಣನು ಸತ್ಕ್ರಿಯೆಯನಾಚ ರಿಸಡಡೆಯೂ, ಉಪಚಾರವಾಗಿ ಆಚರಿಸುವನಲ್ಲದೆ, ಮರಳಿ ತಾನು ಫಲವಹ

ಮುಕ್ತಿಯ ಪಡೆವೆನೆಂದು ಆಚರಿಸುವನೇನಯ್ಯಾ! ಇದು ಕಾರಣ ನಿಮ್ಮ ಶರಣನು ಎಷ್ಟು ಸತ್ಕ್ರಿಯೆಯನಾಚರಿಸಿದಡೂ, ಘೃತಸೋಂಕಿದ ರಸನದಂತೆ ನಿರ್ಲೇಪನಾಗಿಪ್ಪನಯ್ಯಾ ಅಖಂಡೇಶ್ವರಾ.

(೪). ಸಗುಣ ನಿರ್ಗುಣನಲ್ಲ ನೋಡಾ ಲಿಂಗೈಕ್ಯನು. ಸಾಕಾರ ನಿರಾಕಾರನಲ್ಲ ನೋಡಾ ಲಿಂಗೈಕ್ಯನು. ಶೂನ್ಯನಲ್ಲ, ನಿಃಶೂನ್ಯನಲ್ಲ ಲಿಂಗೈಕ್ಯನು ನೋಡಾ. ಜ್ಞಾನಿಯಲ್ಲ, ಅಜ್ಞಾನಿಯಲ್ಲ ನೋಡಾ ಲಿಂಗೈಕ್ಯನು. ಕಾಮಿಯಲ್ಲ, ನಿಷ್ಕಾಮಿಯಲ್ಲ ನೋಡಾ ಲಿಂಗೈಕ್ಯನು. ದ್ವೈತನಲ್ಲ, ಅದ್ವೈತನಲ್ಲ ನೋಡಾ ಲಿಂಗೈಕ್ಯನು. ಇಂತೀ ತೆರನಲ್ಲಿ ತೋರುವ ತೋರಿಕೆ ಎಲ್ಲವೂ ತಾನೆಯಾಗಿ, ಇಹಪರ ಗತಿಗೆಡಿಸಿ, ಪರಿಪೂರ್ಣ ಬ್ರಹ್ಮವಾಗಿ, ತನ್ನ ಕುರುಹಡಗಿಸಿ, ನಿರ್ವಯಲಾಗಿರ್ಪ ನಿಜಲಿಂಗೈಕ್ಯನ ಏನೆಂದುಪಮಿಸಬಹುದಯ್ಯಾ ಅಖಂಡೇಶ್ವರಾ?

(೫). ಇದ್ದುದು ಬದ್ಧನಲ್ಲ, ಸುಳಿದು ಸೂತಕಿಯಲ್ಲ, ಆವ ಸಂಗವೂ ಇಲ್ಲದ ನಿಜೈಕ್ಯನು. ಬೇಕು ಬೇಡೆನ್ನದೆ, ಅಳಿದುಳಿದು ಕರ್ಪುರದ ಗಿರಿಯನು ಉರಿ ತಾಗಿದಂತೆ, ಕೂಡಲ ಚನ್ನಸಂಗಯ್ಯನಲ್ಲಿ ಲಿಂಗೈಕ್ಯವು.

(೬). ಸತ್ಯನಲ್ಲ, ಅಸತ್ಯನಲ್ಲ, ಕರ್ಮಿಯಲ್ಲ, ಧರ್ಮಿಯಲ್ಲ, ನಿಷ್ಕಾಮಿಯಯ್ಯ ಭಕ್ತನು. ಆಚಾರನಲ್ಲ, ಅನಾಚಾರನಲ್ಲ, ಪುಣ್ಯ ಪಾಪ ವಿರಹಿತನಾಗಿ, ನಿಃಪಾಪಿಯಯ್ಯಾ ಭಕ್ತನು. ವ್ರತ, ಸೀಮೆ, ಮಂತ್ರ, ತಂತ್ರ, ಭವಿ, ಭಕ್ತನೆಂಬುದಿಲ್ಲ ಲಿಂಗೈಕ್ಯಂಗೆ. ಸಂಕಲ್ಪ ವಿಕಲ್ಪನಲ್ಲ, ಸೀಮನಲ್ಲ, ನಿಃಸ್ಸೀಮನಲ್ಲ, ಪರಮ ನಿರಂಜನನು ತಾನೇ ನೋಡಾ ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೇ.

(೭). ಜಗ ಒಂದೆಸೆ, ತಾನೊಂದೆಸೆ, ಮತ್ತಾ ಜಗದೊಳಗೆ ತಾ, ತನ್ನೊಳಗೆ ಜಗ. ಆಗಮ ಒಂದೆಸೆ, ತಾನೊಂದೆಸೆ, ಮತ್ತಾ ಆಗಮದೊಳಗೆ ತಾ, ತನ್ನೊಳಗೆ ಆಗಮ. ವಿಧಿ ಒಂದೆಸೆ, ತಾನೊಂದೆಸೆ, ಮತ್ತಾ ವಿಧಿಯೊಳಗೆ ತಾ, ತನ್ನೊಳಗೆ ವಿಧಿ. ಕ್ರಿಯೊಂದೆಸೆ, ತಾನೊಂದೆಸೆ, ಮತ್ತಾ ಕ್ರಿಯೊಳಗೆ ತಾ, ತನ್ನೊಳಗೆ ಕ್ರಿ. ಇಂತೀ ಜಗ, ಆಗಮ, ವಿಧಿ, ಕ್ರಿ ನಿಷೇಧವಾಗಿ, ಹೊದ್ದಿಯೂ ಹೊದ್ದನು, ನೀರು ತಾವರೆಯಂತೆ, ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ.

(೮). ಆಯತ, ಸ್ವಾಯತ, ಸಂಯೋಗ ಸಂಬಂಧಿಯ ಆಚಾರವಡಗಿತ್ತು, ಅನುಭಾವ ತೊಡೆಯಿತ್ತು, ಕ್ರಿಯಾತೀತ ನಿಷ್ಪತ್ತಿಯಾಯಿತ್ತು, ಕೂಡಲ ಚನ್ನಸಂಗಯ್ಯ ತ್ರಿವಿಧಸಂಬಂಧಿಗೆ.

(೯). ಕಣ್ಣು ತನ್ನ ಕಾಣಲರಿಯದಂತೆ, ಹಣ್ಣು ತನ್ನ ರುಚಿಯ ತಾನ ರಿಯದಂತೆ, ಉರಿ ತನ್ನುಷ್ಣವ ತಾನರಿಯದಂತೆ, ಬಯಲು ತನ್ನ ತೆರಪ ತಾನರಿ ಯದಂತೆ, ಲಿಂಗೈಕ್ಯ ತನ್ನೊಳಗಣ ಲಿಂಗವ ತಾನರಿಯದಂತೆ, ನಾಸತ್ತೆನೆಂಬ ಹೆಣವಿಲ್ಲವಾಗಿ, ತನ್ನ ಮರೆದು ಲಿಂಗವ ಮರೆದ ಲಿಂಗೈಕ್ಯನು ಸೌರಾಷ್ಟ್ರ ಸೋಮೇಶ್ವರನಲ್ಲಿ ಅನುಭಾವವ ಮಾಡಲಿಲ್ಲ, ನುಡಿದು ಹೇಳಲಿಲ್ಲ, ನಡೆದು ತೋರಲಿಲ್ಲ.

(೧೦). ಭಿತ್ತಿ ಇಲ್ಲದ ಚಿತ್ರದಂತೆ, ಭಕ್ತಿ ಇಲ್ಲದ ಪ್ರಮಥನಾಗಿ, ಎಂದಿ ಪ್ಪೆನಯ್ಯ! ಸತ್ಯವಿಲ್ಲದ ಶರಣನಾಗಿ ಎಂದಿಪ್ಪೆನಯ್ಯ! ಗೆರೆ ಇಲ್ಲದ ಕೋಲಿನಲ್ಲಿ ಉದ್ಧರೆಯನಿಕ್ಕಿದ ಭಂಡಾರದ ಹರದನಂತೆ ಇದ್ದೆನಯ್ಯ ಕೂಡಲಸಂಗಮದೇವಾ.

(೧೧). ಸುಳಿದು ಸುತ್ತುವ ಮನದ ವ್ಯವಹರಣೆಯುಳ್ಳನ್ನಕ್ಕರ, ಅರಿಯ ನರಿಯೆ ನೆರೆಶಿವ ಪಥವ, ನಾನರಿಯೆನರಿಯೆ. ಗುಹೇಶ್ವರನ ನಿಜವನರಿದ ಬಳಿಕ, ಲೋಕದ ಗತಿಯನರಿಯೆನರಿಯೆ.

(೧೨). ಶಿವಶಿವಾ, ಮೂರ್ತಿಗೆ ಸತ್ಯಶುದ್ಧ ಉಂಟೆಂಬಿರೇ? ಸತ್ಯಶುದ್ಧ ವುಳ್ಳವಂಗೆ ಲಿಂಗವಿಲ್ಲ. ಸತ್ಯಶುದ್ಧವುಳ್ಳವಂಗೆ ಜಂಗಮವಿಲ್ಲ. ಸತ್ಯಶುದ್ಧವುಳ್ಳ ವಂಗೆ ಪ್ರಸಾದವಿಲ್ಲ. ಸತ್ಯಶುದ್ಧವುಳ್ಳವಂಗೆ ಗಣತ್ವವಿಲ್ಲ, ಕೇಳಿರೇ. ಸತ್ಯಶುದ್ಧ ಲಿಂಗಕ್ಕೆ ಉಪಚಾರವುಂಟು. ಸತ್ಯಶುದ್ಧ ಗುರುವಿಗೆ ಧ್ಯಾನ, ಮೌನ, ಅನು ಷ್ಠಾನ ಉಂಟು. ಸತ್ಯಶುದ್ಧ ಉಪದೇಶಕ್ಕೆ ಜಪತಪ ಸಂಧ್ಯಾ ಸಮಾಧಿ ಹೋಮ ನೇಮನಿತ್ಯ ಅಷ್ಟವಿಧಾರ್ಚನೆ ಷೋಡಶೋಪಚಾರ ಉಂಟು. ಇಂತಪ್ಪ ಸತ್ಯ ಶುದ್ಧ ಗುರುವಿಂಗೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಲಿಂಗಕ್ಕೆ ಶರಣೆನ್ನೆ. ಇಂತಪ್ಪ ಸತ್ಯಶುದ್ಧ ಪ್ರಸಾದಕ್ಕೆ ಕೈಯ್ಯಾನೆ. ಇವರೆಲ್ಲರೂ ಬ್ರಹ್ಮನ ಮಕ್ಕಳು. ಎನಗೆ ಸತ್ಯವೂ ಇಲ್ಲ, ಅಸತ್ಯವೂ ಇಲ್ಲ, ಆವ ಸಹಜವೂ ಇಲ್ಲದ ಲಿಂಗೈಕ್ಯ ಕಾಣಾ ಕೂಡಲ ಸಂಗಮದೇವಾ.

(೧೩). ಘನಕ್ಕೆ ಘನವಾದ ವಸ್ತುವಿನಲ್ಲಿ ಮನವಡಗಿದ ಮಹಾಮಹಿ ಮಂಗೆ, ಮರಳಿ ನೆನೆಯಬೇಕೆಂಬುದಿಲ್ಲ, ನೆನೆದು ಧ್ಯಾನಿಸಬೇಕೆಂಬುದಿಲ್ಲ, ಧ್ಯಾನಿ ಸಿಕಾಣಬೇಕೆಂಬುದಿಲ್ಲ, ಕಂಡು ಕೂಡಬೇಕೆಂಬುದಿಲ್ಲ. ಅಖಂಡೇಶ್ವರಾ, ನಿಮ್ಮ ನೊಡಗೂಡಿದ ಶರಣಂಗೆ ಏನೆಂದೇನೂ ಇಲ್ಲ.

(೧೪). ಲಿಂಗವೆನ್ನೆ, ಲಿಂಗೈಕ್ಯವೆನ್ನೆ, ಸಂಗವೆನ್ನೆ, ನಿಸ್ಸಂಗವೆನ್ನೆ, ಆಯಿತ್ತೆನ್ನೆ, ಆಗದೆಂದೆನ್ನೆ, ನೀನೆನ್ನೆ, ನಾನೆನ್ನೆ, ಚನ್ನಮಲ್ಲಿಕಾರ್ಜುನ ಲಿಂಗದಲ್ಲಿ ಘನ ಲಿಂಗೈಕ್ಯವಾದ ಬಳಿಕ ಮತ್ತೇನೂ ಎನಲೊಲ್ಲದೆ ಇದ್ದೆನು.

(೧೫). ಉಟ್ಟುದ ತೋರದವಂಗೆ ಊರೇನು ಕಾಡೇನು? ನಷ್ಟ ಸಂತಾನಕ್ಕೆ ಕುಲವೇನು, ಛಲವೇನು? ಹುಟ್ಟು ಗೆಟ್ಟಾತಂಗೆ ಪುಣ್ಯವೇನು, ಪಾಪವೇನು? ಅದು ಕೆಟ್ಟುದು, ಕೆಟ್ಟುದು, ತನ್ನ ತಾನರಿಯದೆ. ಬಟ್ಟಬಯಲಲ್ಲಿ ಬಿದ್ದ ನಮ್ಮ ಅಜಗಣ್ಣ ತಂದೆ.

(೧೬). ಆಚಾರ ಅನಾಚಾರ ಎಂಬುದು ಇಲ್ಲ. ಸೀಮೆ, ನಿಸ್ಸೀಮೆ ಎಂಬುದು ಇಲ್ಲ. ಗಮನ ನಿರ್ಗಮನವೆಂಬುದು ಇಲ್ಲವಯ್ಯಾ. ಕರ್ಮ ಧರ್ಮ ಸುಖದುಃಖ ಪುಣ್ಯಪಾಪ ಭಯಮೋಹ ಇಹಪರವೆಂಬ ಉಭಯ ಸಂದೇಹವಿಲ್ಲವಯ್ಯಾ. ಏನೂ ಇಲ್ಲದ ಪರಮ ನಿರ್ವಾಣ ನಿರ್ವಯವೇ ಶರಣಲಿಂಗ ಸಮರಸವಯ್ಯ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ.

(೧೭). ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ನಾಸಿಕವಾಯಿತ್ತು. ತಾನಲ್ಲದನ್ಯ ವಾಸನೆ ಇಲ್ಲವಾಗಿ, ಅಲ್ಲಿಯೇ ಮಹತ್ತಪ್ಪ ಪೃಥ್ವಿಯಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಜಿಹ್ವೆಯಾಯಿತ್ತು. ತಾನಲ್ಲದನ್ಯ ರುಚಿ ಇಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಅಪ್ಪುವಡಗಿತ್ತು. ಖಂಡಿತವಿಲ್ಲವಾಗಿ, ಸರ್ವಾಂಗವೆಲ್ಲವೂ ನೇತ್ರವಾಯಿತ್ತು. ತಾನಲ್ಲದನ್ಯ ರೂಹಿಲ್ಲವಾಗಿ, ಅಲ್ಲಿಯೇ ಮಹತ್ತಪ್ಪ ಅಗ್ನಿಯಡಗಿತ್ತು. ಖಂಡಿತವಿಲ್ಲಾಗಿ, ಸರ್ವಾಂಗವೆಲ್ಲ ತ್ವಕ್ಕಾಯಿತ್ತು. ತಾನಲ್ಲದನ್ಯ ಸೋಂಕಿಲ್ಲವಾಗಿ ಅಲ್ಲಿಯೇ ಮಹತ್ತಪ್ಪವಾಯು ಅಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಶ್ರೋತ್ರವಾಯಿತ್ತು. ತಾನಲ್ಲದನ್ಯ ಶಬ್ದವಿಲ್ಲಾಗಿ ಅಲ್ಲಿಯೇ ಮಹತ್ತಪ್ಪ ಆಕಾಶವಡಗಿತ್ತು. ಇಂತು ಪಂಚಭೌತಿಕಂಗಳಡಗಿದರೆ, ಪಂಚಬ್ರಹ್ಮಮಯವಾಯಿತ್ತು. ಅದರೊಳಗೆ ಜಗತ್ತಡಗಿದ ಭೇದ ಅದೇ ಪಂಚವರ್ಣಾತೀತವಾಗಿ ಮಹತ್ತು ಮಹತ್ತನೊಳಕೊಂಡ ಆ ಶರಣನ ಭೇದವನೇನೆಂದುಪಮಿಸುವೆನಯ್ಯ ಗುಹೇಶ್ವರಾ?

(೧೮). ಜ್ಞಾತೃವೇ ಅರುಹಿಸುವುದು. ಜ್ಞಾನವೇ ಅರಿವುದು. ಜ್ಞೇಯವೇ ನಿಶ್ಚಯಿಸುವುದು. ಈ ಜ್ಞಾತೃ ಜ್ಞಾನ ಜ್ಞೇಯವೆಂಬ ತ್ರಿವಿಧ ಸಾಧನದಿಂದ

ಲಿಂಗವನರಸಿ, ಲಿಂಗವನರಿದು ಲಿಂಗವ ಬೆರೆದು ಲಿಂಗವಾದ ಮಾತ್ರೆ, ಜ್ಞಾತೃ, ಜ್ಞಾನ, ಜ್ಞೇಯವೆಂಬ ತ್ರಿವಿಧ ಭ್ರಾಂತಿ ಸೂತಕವಡಗಿ ನಿಜವಾಯಿತ್ತು ಕಾಣಾ ಗುಹೇಶ್ವರಾ.

(೧೯). ಸಮರಸದೊಳಗಣ ಸ್ನೇಹ ಮತ್ಸ್ಯ ಕೂರ್ಮ ವಿಹಂಗದಂತೆ ಸ್ನೇಹದ ನೋಟದಲ್ಲಿಯೇ ತೃಪ್ತಿ. ಸ್ನೇಹದ ನೆನಹಿನಲ್ಲಿಯೇ ತೃಪ್ತಿ. ಸ್ನೇಹದ ಸ್ಪರ್ಶನದಲ್ಲಿಯೇ ತೃಪ್ತಿ. ಈ ಪರಿಯಲ್ಲಿ ಎಮ್ಮ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು. ವಾರಿಕಲ್ಲು ಪುತ್ತಳಿಯು ಅಪ್ಪುವ ನೊಡಗೂಡಿದಂತಾಯಿತ್ತು.

---

## ಕ್ರಿಯೆಯೊಳಗಣ ಐಕ್ಯತೆಯು.

(೧). ಮಾಡುವ ಭಕ್ತನು ನೀನೇ, ಮಾಡಿಸಿಕೊಂಬ ದೇವನು ನೀನೇ ಎಂದರಿದೆ. ಇದು ಕಾರಣ ಅಖಂಡೇಶ್ವರಾ ನಿಮ್ಮ ಫಲಪದವ ಬೇಡಲಿಲ್ಲ, ನೀವು ಒಲಿದು ಎನಗೆ ಕೊಡಲಿಲ್ಲ.

(೨). ಮಾಟ ಕೂಟ ಫಲ ಪ್ರಾಪ್ತಿ ಎಂಬ ಮಾತ ಕೇಳಲಾಗದು. ಶಿವಶಿವಾ, ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು ಶ್ರೀಗುರುಲಿಂಗವು ಕೃಪೆಮಾಡಿದ ಕಾರಣ, ಅಲ್ಲಿ ಮಾಡುವನು, ಮಾಡಿಸಿಕ್ಕೊಂಬಾತನು ನೀನೇ ಅಯ್ಯಾ ಕೂಡಲಸಂಗಮದೇವಾ.

(೩). ಮಾಟವಿಲ್ಲದ ಕೂಟವದೇತಕೋ? ಕೂಟವಿಲ್ಲದ ಮಾಟವದೇತಕೋ? ಮಾಟಕೂಟವೆಂಬೆರಡರ ಅನುವನರಿಯಬೇಕು. ಸತಿ ಇಲ್ಲದೆ, ದಿಟ ಘಟಿಸಿ, ಸ್ವಯವಾಗಬೇಕು. ಮಾಟಕೂಟವೆಂಬೆರಡರ ಅನುವರಿತಾಗಳೇ ಭಕ್ತಿ, ಇದೇ ಕೂಟ ಕೂಡಲಸಂಗಮದೇವಾ.

(೪). ಕರ್ಮ ಧರ್ಮಂಗಳಿಗೊಳಗಾಗಿ ಮಾಡುವ ಮಾಟಂಗಳೆಲ್ಲವು ಕರ್ಮಶಕ್ತಿಗೆ ಬೀಜ. ಆ ಉಭಯವನತಿಗಳೆದು ಮಾಡುವದೆಲ್ಲ ಜ್ಞಾನಶಕ್ತಿಗೆ ಬೀಜ. ಸಕಲವ ವಿಚಾರಿಸಿ, ಅಹುದಲ್ಲವೆಂದು ಮಾಡುವದೆಲ್ಲವು ಮುಂದೊಂದು ಕುರಿತು ವಸ್ತುವೆಂಬೊಡಲಿಗೆ ರೂಪಾಯಿತ್ತು. ಸ್ವಯವೆಂಬ ಭಾವ ನಿಜದಲ್ಲಿ ನಿಂದಲ್ಲಿ ಮನಸಂದಿತ್ತು ಮಾರೇಶ್ವರಾ.

(೫). ಮಾಡುವಂತಿರಬೇಕು, ಮಾಡದಂತಿರಬೇಕು. ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು. ಕೂಡಲಸಂಗಮದೇವರ ನೆನೆವುತ್ತ, ನೆನೆವುತ್ತ, ನೆನೆಯದಂತಿರಬೇಕು.

(೬). ಮಾಡುವ ಮಾಡಿಸಿಕೊಂಬವೆರಡರ ಉಭಯ ಒಂದೇ. ಗುರು ಒಂದೇ, ಲಿಂಗ ಒಂದೇ, ಜಂಗಮ ಒಂದೇ, ಪ್ರಸಾದ ಒಂದೇ. ಒಂದಾದಲ್ಲಿ ಎರಡಾಗಿ ಮಾಡುವ ಭಕ್ತ ನೀನೇ ಕೂಡಲಚನ್ನಸಂಗಮದೇವಾ.

---

## ಲಿಂಗೈಕ್ಯನ ಸ್ಥಿತಿ.

(೧). ಹಿಂದಣ ಸಂಚಿತವ ಹರಿದು, ಮುಂದಣ ಭಯವ ಮರೆದು, ಉಭಯ ಸಂಧಿಗಡೆದು, ಅಖಂಡ ಬ್ರಹ್ಮವೇ ತಾನಾದ ಶರಣಂಗೆ ಜನನವಿಲ್ಲ, ಮರಣವಿಲ್ಲ, ಕಾಲವಿಲ್ಲ, ಕಲ್ಪಿತವಿಲ್ಲ, ಸುಖವಿಲ್ಲ, ದುಃಖವಿಲ್ಲ, ಪುಣ್ಯವಿಲ್ಲ, ಪಾಪವಿಲ್ಲ, ಪ್ರಳಯ ಮಹಾಪ್ರಳಯಂಗಳು ಮುನ್ನವೇ ಇಲ್ಲ. ಇದು ಕಾರಣವಾಗಿ, ಅನಂತಕೋಟಿ ಅಜಾಂಡವಳಿದು ಹೋದರೂ, ಅಖಂಡೇಶ್ವರಾ, ನಿಮ್ಮ ಶರಣ ನಿತ್ಯನಾಗಿ ಉಳಿದಿಹನು. ಇಂದ್ರ ಚಂದ್ರರು ಪ್ರಳಯವಾಗಿ ಹೋದರೂ ಶರಣನೇನೆಂದೂ ಅರಿಯನು. ಹರಿವಿರಿಂಚಿಗಳು ಪ್ರಳಯವಾಗಿ ಹೋದರೂ ಶರಣನೇನೆಂದೂ ಅರಿಯನು. ಮನು ಮುನಿಗಳು ಪ್ರಳಯವಾಗಿ ಹೋದರೂ, ಶರಣನೇನೆಂದೂ ಅರಿಯನು. ಪಂಚಾಶತ್ ಕೋಟಿ ಬ್ರಹ್ಮಾಂಡ ಪ್ರಳಯವಾಗಿ ಹೋದರೂ, ಶರಣನೇನೆಂದೂ ಅರಿಯನು, ಅಖಂಡೇಶ್ವರಾ ನಿಮ್ಮ ಶರಣನೇನೆಂದೂ ಅರಿಯನು.

(೨). ಅಂಡಾಭರಣರು ಘನವೆಂಬೆನೆ? ಅಂಡಾಭರಣರು ಘನವಲ್ಲ. ರುಂಡಾಭರಣರು ಘನವೆಂಬೆನೆ? ರುಂಡಾಭರಣರು ಘನವಲ್ಲ. ಗಂಗಾಧರರು ಘನವೆಂಬೆನೆ? ಗಂಗಾಧರರು ಘನವಲ್ಲ. ಗೌರೀವಲ್ಲಭರು ಘನವೆಂಬೆನೇ? ಗೌರೀವಲ್ಲಭರು ಘನವಲ್ಲ. ಚಂದ್ರಶೇಖರರು ಘನವೆಂಬೆನೆ? ಚಂದ್ರಶೇಖರರು ಘನವಲ್ಲ. ನಂದಿವಾಹನರು ಘನವೆಂಬೆನೇ? ನಂದಿವಾಹನರು ಘನವಲ್ಲ. ತ್ರ್ಯಂಬಕರು ಘನವೆಂಬೆನೇ? ತ್ರ್ಯಂಬಕರು ಘನವಲ್ಲ. ತ್ರಿಪುರವೈರಿಗಳು ಘನವೆಂಬೆನೇ?

ತ್ರಿಪುರವೈರಿಗಳು ಘನವಲ್ಲ. ಪಂಚಮುಖರು ಘನವೆಂಬೆನೇ? ಪಂಚಮುಖರು ಘನವಲ್ಲ. ಫಣಿಕುಂಡಲರು ಘನವೆಂಬೆನೇ? ಫಣಿಕುಂಡಲರು ಘನವಲ್ಲ. ಶೂಲಪಾಣಿಗಳು ಘನವೆಂಬೆನೇ? ಶೂಲಪಾಣಿಗಳು ಘನವಲ್ಲ. ನೀಲಲೋಹಿತರು ಘನವೆಂಬೆನೇ? ನೀಲಲೋಹಿತರು ಘನವಲ್ಲ. ಅದೇನು ಕಾರಣವೆಂದೊಡೆ, ಇಂದಿನವರಾದಿಯಾಗಿ ಅನಂತಕೋಟಿ ರುದ್ರಗಣಂಗಳು ಶರಣನ ಸರ್ವಾಂಗದಲ್ಲಿ ಅಡಗಿಹರಾಗಿ, ಅಖಂಡೇಶ್ವರಾ, ನಿಮ್ಮ ಶರಣರ ಘನಕ್ಕೆ ಘನವೆಂಬೆನಯ್ಯ.

( ೩ ). ನಾದ ನಿಜವೆಂಬೆನೇ? ನಾದ ನಿಜವಲ್ಲ. ಬಿಂದು ನಿಜವೆಂಬೆನೇ? ಬಿಂದು ನಿಜವಲ್ಲ. ಕಳೆ ನಿಜವೆಂಬೆನೇ? ಕಳೆ ನಿಜವಲ್ಲ. ಆ ನಾದಬಿಂದು ಕಳೆಗಳೊಂದಿದ ಜಗವು ನಿಜವಲ್ಲ. ಆ ಜಗದ ಮಧ್ಯದಲ್ಲಿ ತೋರಿದ ಲೀಲೆ ನಿಜವೆಂಬೆನೇ? ಆ ಲೀಲೆಯು ನಿಜವಲ್ಲ. ಇನ್ನಾವುದು ನಿಜವೆಂದಡೆ, ಅಲ್ಲ, ಅಹುದು, ಇಲ್ಲ, ಉಂಟು, ಬೇಕು, ಬೇಡ ಎಂಬ ಭಾವಕ್ಕೆ ಬಲ್ಲತೆ, ತಾನಿದಿಲೆಂಬ ಶಂಕೆದೊರೆದು ಅಖಂಡ ಪರಿಪೂರ್ಣವಾದ ಮಹಾಘನವೇ ನಿಂದ ನಿಜದ ನಿಲವಯ್ಯ ಅಖಂಡೇಶ್ವರಾ.

( ೪ ). ಅಂತರಂಗದಲ್ಲಿ ಭಾವಿಸುವನಲ್ಲ. ಬಹಿರಂಗದಲ್ಲಿ ಬಯಸುವನಲ್ಲ. ಎರಡುವನತಿಗಳೆದು ತನ್ನಲ್ಲಿ ತಾನೇ ಸಹಜ ನೋಡಾ. ಅಂತರಂಗ ಬಹಿರಂಗವಿಲ್ಲ, ಕೂಡಲಚೆನ್ನಸಂಗಾ ನಿಮ್ಮ ಶರಣಂಗೆ.

( ೫ ). ಅಂಗದ ಮೇಲೆ ಲಿಂಗವರತು, ಲಿಂಗದ ಮೇಲೆ ಅಂಗವರತು, ಭಾವತುಂಬಿ, ಪರಿಣಾಮವರತು, ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೊ ಗುಹೇಶ್ವರಾ ?

( ೬ ). ಸ್ವಯಲಿಂಗದನುಭಾವ ತನಗೆ ದೊರೆಕೊಂಡ ಬಳಿಕ, ದೇವಲೋಕವೆಂಬುದೇನೋ, ಮರ್ತ್ಯಲೋಕವೆಂಬುದೇನೋ ? ಆವುದರಲ್ಲಿ ಭೇದವೇನಯ್ಯಾ ? ಕೂಡಲಸಂಗಮದೇವಾ, ಸರ್ವವೂ ನೀವಾದ ಬಳಿಕ, ಆಲಸ್ಯ ಉಂಟೇ ?

( ೭ ). ಭೂ, ತೋಯ, ಪಾವಕ, ಸಮೀರಣ, ಅಂಬರಾದಿಗಳೆಲ್ಲ ಆದಿಯಾಧಾರ ಪರಮಾತ್ಮಲಿಂಗದಲ್ಲಿ. ಆದಿಮಧ್ಯಾವಸಾನವನರಿಯದಗಮ್ಯ ವೇ

ದಾದಿ ಸಕಲ ಶಾಸ್ತ್ರ ಪ್ರಮಾಣರು ಅದನಿಂತೆಂದುಪಮಿಸಲಿಲ್ಲ ಮಹಾಂತ ಕೂಡ ಲಸಂಗಮದೇವಾ.

(೮). ಸತ್ತು ಹುಟ್ಟುವನಲ್ಲ. ಸಂದೇಹ ಸೂತಕಿಯಲ್ಲ. ಆಕಾರ ನಿರಾಕಾರನಲ್ಲ ನೋಡಯ್ಯಾ. ಕಾಯವಂಚಕನಲ್ಲ ಜೀವವಂಚಕನಲ್ಲ. ನಿರಂತರ ಸಹಜ ನೋಡಯ್ಯಾ. ಶಂಕೆ ಇಲ್ಲದ ಮಹಾಮಹಿಮ ನೋಡಯ್ಯಾ. ಕೂಡಲ ಸಂಗನ ಶರಣರು ಉಪಮಾತೀತರು ನೋಡಯ್ಯಾ.

(೯). ಶ್ವೇತ, ಪೀತ, ಹರಿತ, ಕಪೋತ, ಮಾಂಜಿಷ್ಟ, ಕೃಷ್ಣವೆಂಬ ಷಡುವರ್ಣವೆಂದೆನ್ನ. ಉಂಡು ಉಪವಾಸಿ ಎಂದೆನ್ನ. ಬಳಸಿ ಬ್ರಹ್ಮಚಾರಿ ಎಂದೆನ್ನ. ಲಿಂಗವೆಂತುಂಟೆನ್ನ. ಲಿಂಗೈಕ್ಯವ ನುಡಿಯ. ಅಭಂಗನ ನಿಲವ ಭಂಗಿತರೆತ್ತ ಬಲ್ಲರು ಗುಹೇಶ್ವರಾ ?

(೧೦). ನೋಟವುಳ್ಳನ್ನಕ್ಕರ ಕೂಟ ಉಂಟು. ಭಾವವುಳ್ಳನ್ನಕ್ಕರ, ಭ್ರಮೆಯುಂಟು. ನೋಟಗೆಟ್ಟು ಭಾವನಷ್ಟವಾಗಿ ಮನಲೀಯ್ಯವಾದ ಬಳಿಕ, ಕೂಡಲಚನ್ನಸಂಗಾ, ನಿಮ್ಮ ಶರಣ ಒಳಗು ನೋಡಾ, ಹೊರಗು ನೋಡಾ.

(೧೧). ಬಿಂದುವ ಹರಿದು, ನಾದವನತಿಗಳೆದು, ಕಳೆಯ ಬೆಳಗ ಸಾಧಿಸಿ, ಅಸಾಧ್ಯ ಸಾಧಕನಾದೆಯಲ್ಲ ಬಸವಣ್ಣ. ಕಾಯವ ಹೊದ್ದದೆ, ಮಾಯವ ಸೋಂಕದೆ, ನಿರಾಳದಲ್ಲಿ ನಿಂದೆಯಲ್ಲ ಬಸವಣ್ಣ. ನೀನೆನ್ನವನವ ಗ್ರಹಿಸಿ, ನಾನಿನ್ನನವಗ್ರಹಿಸಿ, ಸಂದು ಭೇದವಿಲ್ಲದಿಪ್ಪಲ್ಲಿ ಹೊಗಳಲಿಂಬುಂಟೇ ಬಸವಣ್ಣ ? ಕಲಿದೇವರದೇವನು ಕಾಯಗೊಂಡಿಪ್ಪುದ ನಿನ್ನಿಂದ ಕಂಡೆನು ಕಾಣಾ ಸಂಗನಬಸವಣ್ಣ.

(೧೨). ಎಲ್ಲಿ ನೋಡಿದಡಲ್ಲಿ ನೀನೇ ದೇವಾ. ಎಲ್ಲಿ ಮುಟ್ಟಿದಲ್ಲಿ ನೀನೇ ದೇವಾ. ಎಲ್ಲಿ ಭಾವಿಸಿದಲ್ಲಿ ನೀನೇ ದೇವಾ. ಎಲ್ಲೆಡೆಯಲ್ಲಿ ನಿಮ್ಮ ಮಹಾಪ್ರಭೆ ಯೋ ಮುಸಕಿತಾಗಿ, ಅಖಂಡೇಶ ನಾನು ನೀನೆಂಬುದಕ್ಕೆ ತೆರಹಿಲ್ಲ ದೇವಾ.

(೧೩). ಉಪಾಧಿಕ ಮನವು, ಉಪಾಧಿರಹಿತ ಮನವು, ನಿಂದಲ್ಲಿ ನಿವಾತವಾಯಿತ್ತು. ಆನಂದಭಾವವು ಬಂದು ತಾನಳಿದು ನಿಂದಲ್ಲಿ ನಿವಾತವಾಯಿತ್ತು. ಲಿಂಗೋದಯ ಪ್ರಜ್ವಲಿಸುತ್ತಿದೆ, ಗುಹೇಶ್ವರ ಲಿಂಗವು ತಾನೆಯಾಗಿ!

(೧೪). ನಿರ್ವಿಕಲ್ಪಿತವೆಂಬ ನಿಜದೊಳಗಯ್ಯ. ನಿರಹಂಭಾವದಲ್ಲಿ ನಾನಿರ್ದೆನಯ್ಯ. ನೋಡಿಹೆನೆಂದಡೆ ನೋಡಲಿಲ್ಲ. ಕೇಳಿಹೆನೆಂದಡೆ ಕೇಳಲಿಲ್ಲ. ಘನನಿರಂಜನ ಬೆಳಗಿಂಬಾದುದನು ಏನೆಂಬೆ ಗುಹೇಶ್ವರಾ?

(೧೫). ವಿಶ್ವತನು, ದನುಜಜಿತನು, ಸರ್ವಜಿತನು, ಸುತ್ರಾಮಜಿತನು, ಸುಸಂವೇದ್ಯನು, ವೇದನಾದಾತೀತನು, ತುರೀಯ ಪರಮಾನಂದ ನಿರವಯ ಕೋಟಿ ಸೂರ್ಯಪ್ರಭೆಯ ಬೆಳಗಿನ ಸಹಸ್ರ ಕಿರಣದಗ್ರ ಪಟಲದ ಬೆಳಗು ಕೂಡಲಸಂಗಮದೇವಾ.

(೧೬). ಪಶ್ಚಿಮಗಿರಿಯ ಚಿತ್‌ಸೂರ್ಯ ಉದಯವಾದುದ ಕಂಡೆ! ಸುತ್ತುಮುತ್ತಿನ ಕತ್ತಲೆಯೆಲ್ಲ ಅತ್ತಿತ್ತ ಹರಿದು ಹೋಹುದ ಕಂಡೆ! ಹತ್ತುದಿಕ್ಕಿನ ಒಳಹೊರಗೆಲ್ಲ ಬೆಳಗಿನ ಮೊತ್ತವೇ ತುಂಬಿ ತುಂಬಿದ್ದ ಕಂಡು, ಮುಚ್ಚಿದ ಕಮಲಂಗಳೆಲ್ಲ ಬಿಚ್ಚಿ ಅರಳಾಗಿ, ಅಚ್ಚ ಹೊಸ ಗಂಧವು ದೆಸೆದೆಸೆಗೆ ಎಸೆದುದ ಕಂಡೆ! ಇಂತಿದರ ಕೌಶಲವ ಕಂಡು ಬೆರಗಾದೆನಯ್ಯ ಅಖಂಡೇಶ್ವರಾ.

(೧೭). ಬೆಳಗಿನೊಳಗಿನ ಬೆಳಗು ಮಹಾ ಬೆಳಗೆಂಬೆ. ಪ್ರಸಾದದಲ್ಲಿ ಒದಗಿದ ಪ್ರಸಾದಿಯ ಪರಿಣಾಮದ ಪರಮಾನಂದವನೇನೆಂದುಪಮಿಸುವೆನಯ್ಯ? ಪರಮಾಶ್ರಯವೇ ತಾನಾಗಿ, ಕೂಡಲಸಂಗಮದೇವಯ್ಯ, ಚನ್ನಬಸವಣ್ಣನೆಂಬ ಮಹಾ ಪ್ರಸಾದಿ ಎನ್ನ ವಾಙ್ಮನಕ್ಕೆ ಅಗೋಚರನಾಗಿರ್ದುದ ನಾನೇನೆಂದುಪಮಿಸುವೆನಯ್ಯ?

(೧೮). ಅಜಹರಿಗಳರಿತಕ್ಕೆ ಅಗೋಚರವಾದ ನಿಜವನರಿದು, ಸಹಜಾತ್ಮನಾದ ಶರಣಂಗೆ ಏಕವೆಂಬುದು ಅನೇಕವೆಂಬುದು ತೋರದೆ, ಸ್ಥೂಲವೆಂಬುದು ಸೂಕ್ಷ್ಮವೆಂಬುದು ತೋರದೆ, ಚರಾಚರವು ನಾಸ್ತಿಯಾಗಿ, ಸಮಸ್ತ ಭುವನಂಗಳು ಶಕ್ಯವಾಗಿ ತೋರದೆ, ನಿಃಶೂನ್ಯವಾಗಿ ತೋರದೆ, ಜ್ಞಾನರೂಪಾಗಿ ತೋರದೆ, ಮತ್ತೊಂದು ರೂಪಾಗಿಯೂ ತೋರದೆ, ಭೂಮಿ ಜಲಾಗ್ನಿ ಮರುತಾಕಾಶ ಚಂದ್ರ ಸೂರ್ಯರೆಂಬರೇನೂ ತೋರದೆ, ಸರ್ವಸಾಕ್ಷಿಯಾದ ಸಮ್ಯಜ್ಞಾನ ಒಂದೇ ಪರಿಪೂರ್ಣವಾಗಿ, ತನ್ನ ಸ್ವರೂಪಿನಿಂದ ತೋರುತ್ತಿಹುದು, ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣಂಗೆ.

(೧೯). ನಾನು ನಾನೆಂಬ ಅಹಂಕಾರ ಭಾವವಳಿದು ಜ್ಞಾನಾನಂದ ಮಯ ತಾನಾದ ಬಳಿಕ, ತನ್ನಿಂದನ್ಯವಾದುದೊಂದಿಲ್ಲವಾಗಿ, ಕಾಣಲೊಂದಿಲ್ಲ, ಕೇಳಲೊಂದಿಲ್ಲ, ಅರಿಯಲೊಂದಿಲ್ಲ. ಅನಾದಿ ಅವಿದ್ಯ ಮೂಲ ಮಾಯಾಜಾಲ ಚರಾಚರ ನಾಸ್ತಿಯಾಯಿತ್ತು. ಇನ್ನೇನ ಹೇಳಲುಂಟೀ ನಿಜಲಿಂಗೈಕ್ಯಂಗೆ? ವಿಷಯ ವಿಷಯಂಗಳೆಂಬ ಉಭಯಭಾವವಡಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನೇ ತಾನಾಗಿಹನು.

(೨೦). ಇಷ್ಟಲಿಂಗ ಸಂಬಂಧವಾದ ಬಳಿಕ, ಕಾಯಗುಣ ಕೆಟ್ಟು ಲಿಂಗ ಕಾಯವಾಯಿತ್ತು. ಪ್ರಾಣಲಿಂಗ ಸಂಬಂಧವಾದ ಬಳಿಕ, ಕರಣ ಗುಣ ಕೆಟ್ಟು ಲಿಂಗಕಿರಣಂಗಳಾದವು. ಭಾವಲಿಂಗ ಸಂಬಂಧವಾದಲ್ಲಿ, ಇಂದ್ರಿಯ ಗುಣ ಕೆಟ್ಟು, ಲಿಂಗೇಂದ್ರಿಯಂಗಳಾದವು. ಇದು ಕಾರಣ ಶರಣಂಗೆ ಬೇರೆ ಅಂಗವಿಲ್ಲ. ಬೇರೆ ಅಂಗವಿಲ್ಲಾಗಿ, ಅರ್ಪಿತ ಅನರ್ಪಿತವೆಂಬುಭಯ ಶಂಕೆ ಹೋಗಿ ನಿಂದಿತ್ತು, ಕೂಡಲ ಚನ್ನಸಂಗಯ್ಯ, ನಿನ್ನೊಳಡಗಿದ ನಿಜೈಕ್ಯಂಗೆ.

(೨೧). ಕರಸ್ಥಲದ ಲಿಂಗವು ಕಾಯಕ್ಕೆ ವೇಧಿಸಿದಲ್ಲಿ, ಕಾಯಲಿಂಗವಾಯಿತ್ತು. ಅಂತಾದ ಮಹಾಘನಲಿಂಗವೇ ಪ್ರಾಣಕ್ಕೆ ವೇಧಿಸಿದಲ್ಲಿ, ಪ್ರಾಣ ಲಿಂಗ ವಾಯಿತ್ತು. ಅಂತಾದ ಮಹಾಘನಲಿಂಗವೇ ಭಾವಕ್ಕೆ ವೇಧಿಸಿದಲ್ಲಿ, ಭಾವ ಲಿಂಗ ವಾಯಿತ್ತು. ಅಂತಾದ ಮಹಾಘನಲಿಂಗವೇ ಜ್ಞಾನಕ್ಕೆ ವೇಧಿಸಿದಲ್ಲಿ, ಜ್ಞಾನ ಲಿಂಗವಾಯಿತ್ತು. ಅಂತಾದ ಕಾರಣ ನಮ್ಮ ಗುಹೇಶ್ವರನ ಶರಣಂಗೆ ಅರಿವ ರತು ಕುರುಹು ನಿಃಪತಿಯಾಗಿ, ತಾನೆಂಬ ಭಾವ ಉರಿಯುಂಡ ಕರ್ಪೂರ ದಂತಾಯಿತ್ತು.

(೨೨). ವಾಙ್ಮನಕ್ಕೆ ಬಾರದ ಅಪ್ರತಿಮ ಲಿಂಗವ ಕೂಡಿ ಅಚಲಾನಂದದೊಳಗಿಪ್ಪ ಪರಮ ನಿರ್ಲೇಪಿಗೆ ಭಾವವಿಲ್ಲ. ಭಾವವಿಲ್ಲಾಗಿ ಜ್ಞಾನವಿಲ್ಲ. ಜ್ಞಾನವಿಲ್ಲಾಗಿ, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ, ಇಲ್ಲ, ಇಲ್ಲ, ನಿಲ್ಲು, ಮಾಣು.

(೨೩). ಉದಕದೊಳಗಣ ಕಿಚ್ಚಿನಂತೆ ಲಿಂಗೈಕ್ಯವು. ವಾಯು ನುಂಗಿದ ಪರಿಮಳದಂತೆ ಲಿಂಗೈಕ್ಯವು. ಉರಿಯೊಳಡಗಿದ ಕರ್ಪೂರದಂತೆ ಲಿಂಗೈಕ್ಯವು. ಭಾವವನರಿಪಿದ ಬಯಲಿನಂತೆ ಲಿಂಗೈಕ್ಯವು. ಅರಿವು ನುಂಗಿದ ಮರಹಿನಂತೆ

ಲಿಂಗೈಕ್ಯವು. "ಯತೋ ವಾಚೋ ನಿವರ್ತಂತೆ ಅಪ್ರಾಪ್ಯ ಮನಸಾ ಸಹ" ಎಂದುದಾಗಿ ವಾಙ್ಮನಕ್ಕೆ ಅಗೋಚರವಾದ ಮಹಾಘನ ಶರಣವನೊಳಕೊಂಡು ಥಳಥಳಿಸಿ ಬೆಳಬೆಳಗಿ ಹೊಳೆವುತ್ತ ನಿಃಶಬ್ದ ಬ್ರಹ್ಮವಾಗಿರ್ಪನಯ್ಯ ನಮ್ಮ ಶಂಭು ಜಕ್ಕೇಶ್ವರನು.

(೨೪). ಮಣ್ಣಿನಲ್ಲಿ ಹುಟ್ಟಿದ ಹೊನ್ನು, ಕಲ್ಲಿನಲ್ಲಿ ಹುಟ್ಟಿದ ರತ್ನ, ಚಿಪ್ಪಿನಲ್ಲಿ ಹುಟ್ಟಿದ ಮುತ್ತು, ವೃಕ್ಷದಲ್ಲಿ ಹುಟ್ಟಿದ ಗಂಧ, ಅವು ತಮ್ಮ ಸ್ವಸ್ಥಳಗಳ ಮೀರಿ, ಪರಸ್ಥಾನಂಗಳಲ್ಲಿ ನಿಂದು, ಪ್ರಾಪ್ತಿಯನೈದುವಂತೆ, ಪಿಂಡ ಅಂಡದಲ್ಲಿ ಹುಟ್ಟಿ, ಅಂಡವನತಿಗಳೆದು ನಿಜಪಿಂಡವಾದಂತೆ, ಗುರುವಿನ ಕರಕಮಲದಲ್ಲಿ ಹುಟ್ಟಿ, ಲಿಂಗಮೂರ್ತಿಯು ಸರ್ವಾಂಗದಲ್ಲಿ ಬೆಳೆದು, ಜಂಗಮವಪ್ಪ ನಿರಂಗ ಪ್ರಸಾದದಲ್ಲಿ ಬೆರೆದು, ಅವಿರಳನಾದವಂಗೆ ಬಂಧಮೋಕ್ಷ ಕರ್ಮಂಗಳ ಬೆಂಬಳಿಗೆ ಸಲ್ಲ. ಅದು ನಿರಂಗವಸ್ತು, ಶಂಭುವಿಗಿಂದಿತ್ತ, ಸ್ವಯಂಭುವಿಗಿಂದತ್ತ ಅತಿಬಳ ನೋಡಾ ಮಾತುಳಂಗ ಮಧುಕೇಶ್ವರನು.

---

## ಲಿಂಗದೊಡನೆ ಐಕ್ಯವು.

### (ಸತಿಪತಿಭಾವದ ವಚನಗಳು.)

(೧). ನಲ್ಲನೊಲ್ಲನೆಂದು ಮುನಿದು ನಾನಡಗಲು, ಅಡಗುವ ಎಡೆಯಲ್ಲಿ ತಾನೇ ಕಾಣವ್ವ. ಅಡಗಲಿಕ್ಕೆ ತೆರಹಿಲ್ಲ. ಮುನಿದು ನಾನೇವೆ? ಶರಣು ಹೋಗುವೆ ನಾನು ಉರಿಲಿಂಗ ದೇವಗೆ.

(೨). ನೆನಹಿನ ನಲ್ಲ ಮನೆಗೆ ಬಂದರೆ, ನೆನವುದಿನ್ನಾರನು ಹೇಳೆ ಎಲೆ ಅವ್ವ? ನೆರೆವ ಕ್ರಿಯಲ್ಲಿ ನೆರೆದು, ಸುಖಿಸುವ ಕ್ರಿಯಲ್ಲಿ ಸುಖಿಸುವದಲ್ಲದೆ, ನೆನೆವುದಿನ್ನಾರನು ಹೇಳೆಲೆ ಅವ್ವ? ನೆನಹಿನ ನಲ್ಲನುರಿಲಿಂಗದೇವನು ತಾಬಂದ ಬಳಿಕ ನೆನವುದಿನ್ನಾರನು ಹೇಳೆಲೆ ಅವ್ವ?

(೩). ನಲ್ಲನ ಕೂಡಿಹೆನೆಂದು ಮೇಲುವಾಯುವನ್ನಬರ, ಮೇಲು ವಾಯ್ದು ನೋಡವ್ವ. ಮನದೊಳಗೆ ಮನವಾಗಿ, ಪ್ರಾಣದೊಳಗೆ ಪ್ರಾಣವಾಗಿ,

ಕಾಯದೊಳಗೆ ಕಾಯವಾಗಿ, ಕೂಡಿದ ನೋಡವ್ವ. ತವಕಕ್ಕೆ ತವಕ ಮಿಗೆ, ಮೇಲುವರಿದು ಕೂಡಿದಂತೆ ಕೂಡುವೆವ್ವ ಉರಿಲಿಂಗದೇವನ.

(೪). ಕಂಗಳ ಕಳೆ, ಮನದನೋಟ, ಮಸಕದ ಮಿಂಚಿನ ಗೊಂಚಲು ಸೂಸಿದಂತೆ, ತಾರಕಿ ತಳಿದಂತೆ ಅರಳಿನ ಬಳ್ಳಿ ಹಬ್ಬಿದಂತೆ. ಅಲ್ಲದಿರೆ ಕೊರೆ ಕೆಂಪ ತಿದ್ದುವ ಆಳುಗಳಿನ್ನಾರನು ಕಾಣೆ. ಐದು ರೂಹನೊಂದು ಮಾಡಿ, ಕಾದಿಗೆಲಿದು, ಸೋತು ಹೊರಹೊಂಟು ಹೋದನವ್ವ. ಮಹಾಲಿಂಗ ಗಜೇಶ್ವರ ಕಂಗಳಕಾಳಗದ ಮಾಸಾಳು.

(೫). ನೇಹದ ಸನ್ನೆಯ ಮನವನರಿಯಲೊಡನೆ, ನೋಡಲಮ್ಮೆನವ್ವಾ. ಕಂಗಳು ಹಿಸುಣವ ಹೇಳಿಹವೆಂದು ನೋಡಲಮ್ಮೆನವ್ವಾ. ಕಜ್ಜಲ ಕಲಕಿದಡೆ, ಕುರುಹಳಿದಿತ್ತೆಂದು ನೋಡಲಮ್ಮೆನವ್ವಾ. ಕಂಗಳು ಮಹಾಲಿಂಗ ಗಜೇಶ್ವರನೊಲವು, ಎನಗೆ ಕಲುದೇಹ, ತನಗೆ ಸುಖದ ಮೊದಲು ನೋಡವ್ವಾ.

(೬). ಅಗಲಲಿಲ್ಲದ ನಲ್ಲನನಗಲಿ ನೆರೆವೆನೆಂಬ ಕಾಮಿನಿಯರ ಭಂಗವ ನೋಡಾ. ಆ ನಮ್ಮನಲ್ಲನ ಅನುವಿನೊಳಿರ್ದು, ನೆರೆದಿಹೆನೆಂಬ ಭರವೆನಗವ್ವಾ. ಮಹಾಲಿಂಗ ಗಜೇಶ್ವರಯ್ಯನ ಕೂಡಿದ ಬಳಿಕ ಅಗಲ ಲೆಡೆಯುಂಟೇ ಅವ್ವಾ?

(೭). ನಲ್ಲನ ಕೂಡಲು ಸುಖಭೋಗ ದ್ರವ್ಯವನೆಲ್ಲಿಂದ ತಪ್ಪೆನು ಹೇಳಾ ಕೆಳದಿ. ನಲ್ಲನ ಬೇಡಲು ನಾಚಿಕೆ ಎನಗೆ. ಮತ್ತೆ ಆರೂ ಇಲ್ಲ. ಇನ್ನು ಕೊಡುವ ಶಕ್ತರನಾನರಿಯೆನು ಕೇಳಾ ಕೇಳದಿ. ಹೆಣ್ಣು ಹೆಣ್ಣು ಕೂಡುವ ಸುಖವನು ಮಣ್ಣಿನಲ್ಲಿ ನೆರಹುವೆನು ಉರಿಲಿಂಗದೇವಾ.

(೮). ಕಂಗಳ ಬಲದಲ್ಲಿ ಮುನಿದೆನೆಂಬೆನೆ ? ಕಂಗಳು ತನ್ನನಲ್ಲದೆ ನೋಡವು. ಮನದ ಬಲದಲ್ಲಿ ಮುನಿದೆನೆಂಬೆನೆ ? ತನುಮನ ತಾಳಲಾರವವ್ವಾ. ಇಂತು ಮನಪ್ರೇರಕ, ಮನಚೋರಕ ತನ್ನಾಧೀನವಾಗಿ ಸಾಧನವಪ್ಪೊಡೆ, ಮನದವಳ ಮೆಚ್ಚುವನವ್ವಾ. ಮನದಲ್ಲಿ ಬಯಸುವೆ, ಭಾವದಲ್ಲಿ ಬೆರಿಸುವೆನು. ಮರಹಿಂಗೆ ಪ್ರಾಣನಾಥನಾಗಿ ಮಹಾಲಿಂಗ ಗಜೇಶ್ವರ ದೇವ ಮುನಿಸಿಂಗೆ ಮನತರಲೀಸನವ್ವ.

(೯). ಉದರ ತಾಗಿದ ಮಾತು ಅಧರ ತಾಗಿದಲ್ಲಿ, ಬೀಸರವೋದುದೆಂದು ಅಧರವ ಮುಚ್ಚಿಕೊಂಡಳವ್ವೆ. ಕಂಗಳ ಕೊನೆ ಬೀಸರವೋದಿತೆಂದು ಕಂಗಳ ಮುಚ್ಚಿಕೊಂಡಳವ್ವೆ. ಪರಿಮಳ ಬೀಸರವೋದಿತೆಂದು ಆಳಿಗೆ ಬುದ್ಧಿಯ ಹೇಳಿದಳವ್ವೆ. ಮನ ಬೀಸರವೋದಿತೆಂದು ದಿನಕರನ ಕಾವಲ ಕೊಟ್ಟಳವ್ವೆ. ಇಂದು ನಮ್ಮ ಮಹಾಲಿಂಗಗಜೇಶ್ವರನ ನೆರೆವ ಭರದಿಂದಾ.

(೧೦). ಎಲು ಒಡೆದು, ತನುಕರಗಿ, ಮನವು ಜಜ್ಝರಂಬೋಗಿ, ಲಿಂಗದಲ್ಲಿ ನೀರು ನೀರು ಕೂಡಿದಂತಿರಬೇಕು. ಜಂಗಮದೊಳಗೆ ಆಲಿಕಲ್ಲಿನಂತೆ ಕರಗಬೇಕು. ಸರ್ವಾಂಗ ಪುಳಕಂಗಳೊಡೆದು ಕಡಲುಗಳಾಗಿ ಸದ್ಗುರುವಿನೊಳು ಬೇರಿಲ್ಲದಂತೆ ಬೆರಿಸಬೇಕು. ಇಂತೀ ತ್ರಿವಿಧ ಲಿಂಗವ ಕೂಡಿದಲ್ಲದೆ, ಸುಖವಿಲ್ಲ ನೋಡಾ. ಇಂತಪ್ಪ ನಿರ್ವಾಣಪದವು ಎನಗೆಂದಿಂಗೆ ದೊರೆಕೊಂಬುವದೋ ಉಳಿಯುಮೇಶ್ವರಾ?

(೧೧). ಅಗಲದ ನಲ್ಲನ ಅಗಲಿ, ನೆರೆದೆನೆಂಬ ಕಾಮಿನಿಯರ ಭಂಗವ ನೋಡಾ. ಆ ನಮ್ಮ ನಲ್ಲನ ಅನುವಿನಲ್ಲಿರ್ದು, ನೆರೆದೆನೆಂಬ ಭರವೆನಗೇಕೆ? ಮಹಾಲಿಂಗ ಗಜೇಶ್ವರ ದೇವರನಗಲುವಡೆ, ನಾನೇನೂ ಕಲ್ಲುಮರದವಳೇ ಅವ್ವಾ?

(೧೨). ಎಲವೋ, ಎಲವೋ ನಲ್ಲ, ನಿಮ್ಮ ಕೂಡದ ಮುನ್ನ ಕಾಣೆ; ಕೂಡಿದ ಬಳಿಕ ಮತ್ತೆ ಕಾಣೆನಯ್ಯಾ. ಕೂಟದ ಸುಖದಿಂದ ನಾನೀನೆಂದರಿಯೆ, ಕಪಿಲಸಿದ್ಧ ಮಲ್ಲಿನಾಥಯ್ಯಾ.

(೧೩). ಕೂಡಿ ಕೂಡುವ ಸುಖದಿಂದ, ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು ಕೆಳದಿ. ಒಚ್ಚತ ಅಗಲಿರೆ, ಕಾಣದೆ ಇರಲಾರೆ. ಎನ್ನ ದೇವ ಚನ್ನ ಮಲ್ಲಿಕಾರ್ಜುನನ ಅಗಲಿಯಗಲದ ಸುಖವೆಂದಪ್ಪುದೋ?

(೧೪). ನಾಲಿಗೆ ತಾಗಿದ ರುಚಿಗೆ ಮನವೇ ಸಾಕ್ಷಿ ಸಾಲದೇ ಅಯ್ಯಾ? ಮಾಲೆಗಾರನ ಮಾತು ಕೇಳಿ ನನೆಯುರಳುವದೇ? ಅಗಮವನಿದಿರಿಂಗೆ ತೋರುವದು ಆವಾಚಾರವು ಅಯ್ಯಾ? ನಿಮ್ಮ ಕೂಡಲಸಂಗನ ಕೂಡಿದ ಕೂಟದ ತಿರುಳ ಕಲೆಯನಿದಿರಿಂಗೆ ತೋರುವದು ಆಚಾರವೇನಯ್ಯಾ?

(೧೫). ಆತನ ನೋಡಿದಡೆ, ಎಂಟು ದೆಸೆಗಳ ಮರೆದೆನಿನ್ನೆಂತವ್ವಾ. ಅವ್ವಾ, ಅವ್ವಾ, ಆತನ ನುಡಿಸಿದಡೆ, ಮೆಯ್ಯೆಲ್ಲಾ ಬೆವರ್ದವಿನ್ನೆಂತವ್ವಾ, ಅವ್ವಾ. ಕೆಯ್ಯಹಿಡಿದಡೆ, ಎನ್ನ ನಿರಿಗಳು ಸಡಿಲಿದವಿನ್ನೆಂತವ್ವಾ. ಇಂದೆಮ್ಮ ಮಹಾಲಿಂಗ ಗಜೇಶ್ವರನಪ್ಪಿದನೆಂದಡೆ, ನಾನಪ್ಪಿ ಮರೆದೆ ನಿನ್ನೆಂತವ್ವಾ.

(೧೬). ನಲ್ಲನ ಕೂಡುವ ಭರದಲ್ಲಿ ಎನ್ನುವ ಇದಿರುವನೇನೆಂದರಿಯೆ. ನಲ್ಲನ ಕೂಡುವಾಗಲು ಎನ್ನುವ ನಲ್ಲನ ಏನೆಂದರಿಯೆ. ಉರಿಲಿಂಗ ದೇವನ ಕೂಡಿದ ಬಳಿಕ, ನಾನೋ, ತಾನೋ ಏನೆಂದರಿಯೆ.

# ನಿರವಯ.

## ಬಯಲು.

(೧). ನಾಮ ನಾಮವೆಂದು ನೀನು ನಾಮಕ್ಕೆ ಬಳಲುವೆ. ನಾಮ ಸೀಮೆಯೊಳಗಿಪ್ಪುದು ಹೇಳೆಲೆ ಮರುಳೇ? ನಾಮವೂ ಇಲ್ಲ, ಸೀಮೆಯೂ ಇಲ್ಲ, ಒಡಲೂ ಇಲ್ಲ, ನೆಳಲೂ ಇಲ್ಲ, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ನಾನೂ ಇಲ್ಲ, ನೀನೂ ಇಲ್ಲ.

(೨). ಏನೆಂದೆನಲಿಲ್ಲ. ನುಡಿದು ಹೇಳಲಿಕ್ಕಿಲ್ಲ. ನಿಜದಲ್ಲಿ ನಿಂದ ಬೆಳಗು ಕುರುಹು ಹರಿವುದೇ ಮರುಳೇ? ಅದು ತನ್ನಲ್ಲಿ ತಾನಾದ ಬಯಲು. ತಾವಾದ ಘನವು ಇನ್ನೇನೂ ಅರಸಲಿಲ್ಲ. ಅದು ಮುನ್ನವೇ ತಾನಿಲ್ಲ, ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ, ಇಲ್ಲ, ಇಲ್ಲ.

(೩). ಕಾಲನ ಕಳೆದು, ಕಪ್ಪೆಯ ಹೊಡೆದೆನು. ಕಲ್ಪಿತವೆಂಬವನ ನೊಸಲಾಕ್ಷರವ ತೊಡೆದೆನು. ಇನ್ನೇನೋ? ಇನ್ನೇನೋ? ಮುಂದೆ ಬಯಲಿಂಗೆ ಬಯಲು ಸನ್ನೆದೋರುತ್ತಿದೆ. ಹಿಂದಿಲ್ಲ, ಮುಂದಿಲ್ಲ, ಮತ್ತೇನೂ ಇಲ್ಲ. ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ, ನಾನೂ ಇಲ್ಲ, ನೀನೂ ಇಲ್ಲ.

(೪). ನೆಳಲುಸತ್ತಿತ್ತು. ಭ್ರಾಂತು ಬೆಂದಿತ್ತು. ಅರಿವು ಮರೆಯಿತ್ತು. ಕುರುಹುಗೆಟ್ಟಿತ್ತು. ಗತಿಯನರಸುವರೇ ಅವರಲ್ಲಿ? ಮತಿಯನರಸುವರೇ ಅವರಲ್ಲಿ? ಅಂಗವೆಲ್ಲ ನಷ್ಟವಾಗಿ ಲಿಂಗಲೀಯ್ಯವಾಗಿರ್ದವರಲ್ಲಿ ಕಂಗಳಂಗದ ಕಳೆಯು ಬೆಳಗಿನ ಭಂಗಹಿಂಗಿತ್ತು ಗುಹೇಶ್ವರಾ.

(೫). ಬಯಲು ಬಯಲು ಬೆರೆದಲ್ಲಿ, ಮೇರೆಯುಂಟೇ ಅಯ್ಯ? ಕ್ಷೀರ ಕ್ಷೀರ ಕೂಡಿದಲ್ಲಿ, ಮರಳಿ ರೂಹಿಸಿ ಹಿಡಿಯಲುಂಟೇ ಅಯ್ಯ! ನಿಮ್ಮೊಳೊಡವೆರೆದ ನಿಜೈಕ್ಯನ ಕುರುಹು ಮರಳಿ ತೋರಲುಂಟೇ ಅಯ್ಯ. ಅಖಂಡೇಶ್ವರಾ ?

(೬). ಏನೆಂಬೆ ನೇನೆಂಬೆ, ಏನೆಂಬೆನೇನೆಂಬೆ, ಎರಡೊಂದಾದುದ? ಏನೆಂಬೆನೇನೆಂಬೆನವಿರಳ ಘನವ? ಮಹಾದಾನಿ ಕೂಡಲ ಸಂಗಮದೇವ ತಾನೇ ಬಲ್ಲ.

(೭). ಬಯಲ ಸ್ತ್ರೀಯಳ ನಿರವಯಲ ಪುರುಷ ಬಂದು ಕೂಡಲು, ಚಿದ್ಘನವೆಂಬ ಶಿಶುಹುಟ್ಟಿತ್ತು. ಆಶಿಶುವಿನ ಮಹಾನುಭಾವವೆಂಬ ಬಯಲ ತೊಟ್ಟಿಲೊಳಗೆ ಮಲಗಿಸಿ, ನಿರಾಳ ನಿಶ್ಶೂನ್ಯವೆಂಬ ನೇಣುಗಳ ಕಟ್ಟಿ, ತೂಗಿ, ಜೋಗುಳವ ಪಾಡಲು, ಆ ಶಿಶುವು ತನ್ನಿಂದ ತಾನೇ ತಂದೆತಾಯಿಗಳ ಇಬ್ಬರ ನುಂಗಿತ್ತು. ಆ ತಂದೆತಾಯಿಗಳ ನುಂಗಲೊಡನೆ, ಜೋಗುಳ ಉಲುಹು ಅಡಗಿತ್ತು. ಆ ಜೋಗುಳ ಉಲುಹು ಅಡಗಲೊಡನೆ, ನಿರಾಳ ನಿಃಶೂನ್ಯವೆಂಬ ನೇಣುಗಳು ಹರಿದವು. ಆ ನಿರಾಳನಿಶ್ಶೂನ್ಯ ನೇಣುಹರಿಯಲೊಡನೆ, ಆಶಿಶುವು ತೊಟ್ಟಿಲ ಸಹವಾಗಿ, ಬಟ್ಟಬಯಲಾಯಿತ್ತು. ಆ ಶಿಶುವು ತೊಟ್ಟಿಲ ಸಹವಾಗಿ, ಬಟ್ಟಬಯಲಾಗಲೊಡನೆ, ಅಖಂಡೇಶ್ವರನೆಂಬ ಬಯಲು ಬಚ್ಚಬರಿಯಚ್ಚ ಘನಗಂಭೀರ ಮಹಾಬಯಲೊಳಗೆ ನಾನೆತ್ತ ಹೋದೆನೆಂದರಿಯೆನು.

(೮). ಆದಿ ಇಲ್ಲದ ಬಯಲು, ಅನಾದಿ ಇಲ್ಲದ ಬಯಲು, ಶೂನ್ಯವಿಲ್ಲದ ಬಯಲು, ನಿಶ್ಶೂನ್ಯವಿಲ್ಲದ ಬಯಲು, ಸುರಾಳವಿಲ್ಲದ ಬಯಲು, ನಿರಾಳವಿಲ್ಲದ ಬಯಲು, ಸಾವಯವಿಲ್ಲದ ಬಯಲು, ನಿರವಯವಿಲ್ಲದ ಬಯಲು, ಅಖಂಡೇಶ್ವರನೆಂಬ ಬಯಲಲ್ಲಿಯ ಬಯಲು ಮಹಾಘನ ಬಚ್ಚ ಬರಿಯ ಬಯಲೊಳಗೆ ಎಚ್ಚರವಡಗಿ, ನಾನೆತ್ತ ಹೋದೆನೆಂದರಿಯೆ.

(೯). ಅಂತರಂಗ, ಬಹಿರಂಗ, ಆತ್ಮಸಂಗ ಒಂದೇ ಅಯ್ಯ. ನಾದ ಬಿಂದು ಕಳಾತೀತ, ಆದಿಯಾಧಾರ ನೀನೇ ಅಯ್ಯ. ಆರೂಢದ ಕೂಡಿದ ಕೂಟದ ಸುಖವ ಕೂಡಲಸಂಗಯ್ಯ ತಾನೇ ಬಲ್ಲ.

(೧೦). ಘನಗಂಭೀರ ಮಹಾಘನದೊಳಗೆ ಘನಕ್ಕೆ ಘನವಾಗಿರ್ದೆನಯ್ಯ. ಕೂಡಲಸಂಗಮ ದೇವನೆಂಬ ಮಹಾ ಬೆಳಗಿನೊಳಗಿರ್ದು ಶಬ್ದಮುಗ್ಧವಾದುದನೇನೆಂಬೆನಯ್ಯ?

(೧೧). ಸಮಸ್ತ ಕತ್ತಲೆಯ ಮಸಕವ ಕಳೆದಿಪ್ಪ ಇರವ ನೋಡಯ್ಯ-

ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗು ಕೂಡಿದ ಕೂಟವ ಕೂಡಲ ಸಂಗಯ್ಯಾ ತಾನೇ ಬಲ್ಲ.

(೧೨). ಬಯಲು ಬಯಲನೇ ಬಿತ್ತಿ, ಬಯಲು ಬಯಲನೇ ಬೆಳೆದು, ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ಬಯಲು ಜೀವನ ಬಯಲು ಭಾವನೆ ಬಯಲು ಬಯಲಾಗಿ ಬಯಲಾಯಿತ್ತಯ್ಯಾ. ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು. ನಾ ನಿಮ್ಮ ಪೂಜಿಸಿ ಬಯಲಾದೆ ಗುಹೇಶ್ವರಾ.

(೧೩). ತನು ಬಯಲು ನಿರವಯದೊಳಗಡಗಿತ್ತು. ಮನ ಬಯಲು ನಿರವಯದೊಳಡಗಿತ್ತು. ಭಾವ ಬಯಲು ನಿರವಯದೊಳಡಗಿತ್ತು. ಬಯಲು ಬಯಲು ಬೆರಸಿ, ಬಯಲೇಯಾಯಿತ್ತು. ಕೂಡಲ ಚನ್ನಸಂಗಯ್ಯನೆಂಬ ನುಡಿಯಡಗಿತ್ತು.

(೧೪). ತನು ನಷ್ಟ, ಮನ ನಷ್ಟ, ನೆನಹು ನಷ್ಟ, ಭಾವ ನಷ್ಟ, ಜ್ಞಾನ ನಷ್ಟ, ಇಂತೀ ಪಂಚ ನಷ್ಟದೊಳಗೆ ನಷ್ಟವಾದೆನು. ಆ ನಷ್ಟದೊಳಗೆ ನೀನು ನಷ್ಟವಾದೆ. ಕಲಿದೇವರ ದೇವನೆಂಬ ನುಡಿ ನಿಶ್ಶಬ್ದ ಬ್ರಹ್ಮಮುಚ್ಯತೆ.

(೧೫). ತನುವಳಿಯಿತ್ತು, ಮನವಳಿಯಿತ್ತು, ಭಾವವಳಿಯಿತ್ತು, ಬಯಕೆಯಳಿಯಿತ್ತು, ನಿಜವೆಂಬುದಳಿಯಿತ್ತು. ನಾನು ಸೀಮೆಯ ಬಯಲಲ್ಲಿ ಕಲಿದೇವರ ದೇವನಲ್ಲಿ ಬೆರಸಿ ಬೇರಿಲ್ಲದಿರ್ದೆನು.

(೧೬). ಮರನುರಿದು ಬೆಂದು ಕರಿಯಾದ ಮತ್ತೆ, ಮತ್ತೆ ಉರಿಗೊಡಲಾದುದ ಕಂಡು, ಆತ್ಮಪರಿಭವಕ್ಕೆ ಬಪ್ಪುದಕ್ಕೆ ಇದೇ ದೃಷ್ಟ. ಕರಿಭಸ್ಮವಾದ ಮತ್ತೆ ಉರಿಗೊಡಲಿಲ್ಲ. ಅರಿಕೆನಿಂದಲ್ಲಿ ಆತ್ಮಪರಿಭವಕ್ಕೆ ಬರಲಿಲ್ಲ. ಉರಿಯೊಳಗೊಡಗೂಡಿದ ತಿಲ ಸಾರ ತುಪ್ಪ ಮರಳಿ ಅಳತಕ್ಕುಂಟೇ? ವಸ್ತುವಲ್ಲಲ್ಲಿ ಕರಿಗೊಂಡು, ಚಿತ್ತ ತ್ರಿವಿಧ ಮಲಕ್ಕೆ ಹೊರಳಿ ಮರಳುವದೇ? ಈ ಗುಣ ನಡೆನುಡಿ ಸಿದ್ಧಾಂತವಾದವನ ಇರವು ಗಾರುಡೇಶ್ವರ ಲಿಂಗವ ಕೂಡಿದವನ ಕೂಟಾ.

**ಅರ್ಥ:—** ಕಾಷ್ಠವು ಅಗ್ನಿಯ ಸಂಯೋಗದಿಂದುರಿದು ದಹನವಾಗಿ ಇದ್ದಲಿಯಾದ ಬಳಿಕ, ಬಳಿಕಾ ಅಗ್ನಿ ಅಂಗವಾದುದನರಿದುದ ಎಂಬ ಹಾಗೆ ಆತ್ಮನು ಹುಟ್ಟಿ ಬರುವದಕ್ಕೆ ಇದೇ ತಾರ್ಕಣೆ. ಇದು ಹೇಗೆಂದಡೆ, ಕಾಷ್ಠ ಸುಟ್ಟು ಇದ್ದಲಿಯಾದ ಹಾಗೆ, ತಪೋದಂಡಣೆಯಿಂದ ದೇಹವು ನಿಗ್ರಹವಾಗಿ

ಆತ್ಮನ ಪ್ರಪಂಚು ಉಳಿದಿದ್ದಲ್ಲಿ, ಆ ಇದ್ದಲಿ ಅಗ್ನಿಸಂಗವಾದ ಹಾಗೆ, ಆತ್ಮನು ಹುಟ್ಟಿಬರುವನು. ಇದ್ದಲಿ ಅಗ್ನಿಯಿಂದ ಸುಟ್ಟು ಬೂದಿಯಾದ ಬಳಿಕ ಅಗ್ನಿಗಂಗವಾಗಲಿಲ್ಲ ಎಂಬ ಹಾಗೆ, ಆತ್ಮನ ಪ್ರಪಂಚು ನಷ್ಟವಾದಲ್ಲಿ, ಆತ್ಮನು ಹುಟ್ಟಿಬರಲಿಲ್ಲ. ಅಗ್ನಿಯಲ್ಲಿ ಸಮರಸವಾದ ಎಣ್ಣೆ ಘೃತ ಪುನರಪಿಯಾಗಿ ಪ್ರಮಾಣಿಸುವದಕ್ಕೆ ಬಂದವೇ? ಬಾರವು. ಎಂಬ ಹಾಗೆ ಮಹಾಲಿಂಗದಲ್ಲಿ ಇಂಬುಗೊಂಡ ಆತ್ಮನು ಮಲತ್ರಯಂಗಳ ನಿಶ್ಚೈಸಿ ಹುಟ್ಟಿಬರುವನೇ? ಮಹಾಲಿಂಗದಲ್ಲಿ ಕೂಡಿ ಬಾರದಿದ್ದವನು ಜ್ಞಾನಕ್ರಿಯಗಳು ಪ್ರಸಿದ್ಧವಾದ ಶರಣನ ನಿಲುಕಡೆ, ಅದು ಮಹಾಲಿಂಗದಲ್ಲಿ ಕೂಡಿದ ಶರಣನ ಆಚರಣೆ ಇದು ಎಂಬುದರ್ಥ.

(೧೭). ಅಯ್ಯಾ ಒಳಗೆ ನೋಡಿದರೆ ಬಯಲು, ಹೊರಗೆ ನೋಡಿದರೆ ಬಯಲು, ನೆನೆದಿಹೆನೆಂದರೆ ಮನ ಬಯಲು, ನೆನಹಿಸಿಕೊಂಡಿಹೆನೆಂದರೆ ನೀನಿಲ್ಲಾಗಿ ನಾನು ಬಯಲು, ನೀನು ಬಯಲು ನೋಡಾ. ಭಾವಿಸಿಕೊಂಬ ವಸ್ತುವಿಲ್ಲಾಗಿ ಭಾವ ಬಯಲೆಂಬೆನು ನೋಡಾ. ಮರಹು ನಷ್ಟವಾಯಿತ್ತಾಗಿ, ಅರುಹು ಶೂನ್ಯವಾಯಿತ್ತು ನೋಡಾ. ತನುವುಳ್ಳನ್ನಕ್ಕ, ನಿನ್ನ ಸಾವಯವೆಂದೆ. ಮನವುಳ್ಳನ್ನಕ್ಕ, ನಿನ್ನ ಸಾವಯವ ನಿರವಯನೆಂದೆ. ಅನುಭಾವವುಳ್ಳನ್ನಕ್ಕರ ನಿನ್ನ ನಿರವಯನೆಂದೆ. ನಾನುಳ್ಳನ್ನಕ್ಕರ ನೀನೆಂದೆ. ನಾಸತ್ತ ಬಳಿಕ, ನೀನೆಲ್ಲಿಯವನು ಹೇಳಾ? ಇದುಕಾರಣ ಸಾವಯವೆನ್ನೆ. ನಿರವಯವೆನ್ನೆ ನೋಡಾ. ನಿಶ್ಚಲವೆಂಬ ನಿರ್ದೇಹಿಯ ಮೇಲೆ ಸಚ್ಚಿದಾನಂದವೆಂಬ ಪದವು ಬಂದೆರಗಿ ಖಿದಿ ನುಂಗಿತ್ತು ನೋಡಾ. ಖಿದಿ ನುಂಗಲಾಗಿ, ಕಾರ್ಯವೆನಲಿಲ್ಲ, ಕಾರಣವೆನಲಿಲ್ಲ, ಪರಮ ಕಾರಣವೆನಲಿಲ್ಲ, ಜೀವವೆನಲಿಲ್ಲ, ಪರಮನೆನಲಿಲ್ಲ, ಜೀವ ಪರಮೈಕ್ಯವನೊಳಕೊಂಡು ತೀವಿ ಪರಿಪೂರ್ಣ ಪರಾಪರನೆನಲಿಲ್ಲ, ಲಕ್ಷನೆನಲಿಲ್ಲ, ನಿರ್ಲಕ್ಷನೆನಲಿಲ್ಲ, ಅಲಕ್ಷನದ್ವಯ ನಿಶ್ಶೂನ್ಯನೆನಲಿಲ್ಲ, ಮಹಾಶೂನ್ಯನೆನಲಿಲ್ಲ, ಏನೂ ಎನಲಿಲ್ಲದ ನಿರಾಕಾರಬಯಲು, ನಿಶ್ಶಬ್ದಮಯ ಪರಬ್ರೊಮ್ಮನು, ಚಿದಾದಿತ್ಯ ಸಂಗನಬಸವಣ್ಣನ ಬಯಲ ಬೆಳಗಿನೊಳು ಬಯಲಾದ ಗುಹೇಶ್ವರ ಲಿಂಗಕ್ಕಾವ ತೊಡಕುಂಟು ಹೇಳಾ?

(೧೮). ಅಯ್ಯ ಸವಿಕಲ್ಪ ನಿರ್ವಿಕಲ್ಪನೆಂಬ ಗರ್ವವಳಿದು, ತೆರಹಿಲ್ಲದ ಮಹಾಘನದೊಳಡಗಿತ್ತಾಗಿ, ಸಾಧ್ಯನಲ್ಲ ಸಾಧಕನಲ್ಲ, ಪೂಜ್ಯಪೂಜಕನಲ್ಲ, ದೇವಭಕ್ತನಲ್ಲ, ಇವು ಏನೇನೂ ಇಲ್ಲವಾಗಿ, ನಾನು ನಿರ್ನಾಮನಲ್ಲ, ಸೀಮೆ

ನಿಸ್ಸೀಮನಲ್ಲ, ಕಲ್ಪ ಆಕಲ್ಪನಲ್ಲದ ಪರಿಪೂರ್ಣನು. ಕಾಯದರೂಪನು ಕಂಗಳು ನುಂಗಿತ್ತು. ಪ್ರಾಣದ ರೂಪನು ನೆನಹು ನುಂಗಿತ್ತು. ಭಾವದ ರೂಪ ಅರುಹು ನುಂಗಿತ್ತು. ಇವೆಲ್ಲ ರೂಪನು ನಿರೂಪುನುಂಗಿತ್ತು. ಇವೆಲ್ಲ ರೂಪು ನಿರೂಪವ ಸ್ವರೂಪೀಕರಿಸಿದ ಸರ್ವ ಶೂನ್ಯನಿರಾಲಂಬ ನಿರವಯ ನಿರಾಕಾರ ಪರವಸ್ತು ಚಿದ್ರೂಪು ಚಿನ್ಮಯ ಸಂಗನಬಸವಣ್ಣನ ನಿಜಚಿದ್ಬೆಳಗಿನೊಳಗೆ ಬಯಲಾದ ಗುಹೇಶ್ವರಲಿಂಗಕ್ಕಾವ ಸಂಕಲ್ಪ ವಿಕಲ್ಪ ಉಂಟೇ ಹೇಳಾ ?

(೧೯). ಅವನಿಯ ಪಿಂಡವ ನುಂಗಿ, ಉದಕವ ಪಾನವ ಮಾಡಿ, ಅಗ್ನಿಯ ಮೆಟ್ಟಿ, ವಾಯುವ ಹಿಡಿದು, ಆಕಾಶವನಡರಿ, ಮಹದಾಕಾಶದ ಬಯಲೊಳಗೆ ನಿಂದು ನೋಡಲು, ಸರ್ವಶೂನ್ಯ ನಿರಾಕಾರವೆಂಬ ಬಯಲು ಕಾಣ ಬಂದಿತ್ತು. ಆ ಬಯಲ ಬೆರಸಿಹೆನೆಂದು ಬಸವ ಪ್ರಬು ಮೊದಲಾದ ಗಣಂಗಳ ಮಹಾನುಭಾವ ಸಂಪಾದನೆಯನರಿದು ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ನೆಂಬ ಬಯಲ ಬೆರಿಸಿದೆನು.

(೨೦). ಕಪ್ಪುರದ ಕಳ್ಳನ ಹುಲ್ಲಿನಲ್ಲಿ ಕಟ್ಟಲು, ಅಗ್ನಿ ಎಂಬ ಹಿತವು ಬಂದು ಬಿಡಿಸಲೊಡನೆ, ಪಾಶಬೆಂದು ಕಳ್ಳ ತನ್ನೊಳಲ್ಲಿಯೇ ಅಡಗಿದನು. ಬಯಲ ಶರಣಂಗೆ ಬಯಲ ಪಾಶಬಂದು ಕಟ್ಟಲು, ಬಯಲ ಲಿಂಗ ಬಂದು ಬಿಡಿ ಸಲು, ಬಯಲು ಬಯಲ ಏಕವಾಯಿತ್ತು, ಮಹಾಲಿಂಗ ಕಲ್ಲೇಶ್ವರನೆಂಬ ಸಂಪತ್ತು ಸರ್ವ ಶೂನ್ಯವಾಯಿತ್ತು.

**ಅರ್ಥ:**— ಬಯಲೆಂದಡೆ, ಮಹಾಘನಲಿಂಗ. ಅಂತಪ್ಪ ಲಿಂಗದ ತದಂಶವೇ ಶರಣನೆಂಬುದೀಗ ಬಯಲ ಶರಣನೆಂಬ ಶಬ್ದಕ್ಕರ್ಥ. ಅಂತಪ್ಪ ಶರ ಣಂಗೆ ಶಿವನ ಬಯಲೆಂಬ ಮಿಥ್ಯಾಮಾಯಾಪಾಶ ಬಂದು ಕಟ್ಟಲು, ಆ ಬಯ ಲೆಂಬ ಮಹಾಘನಲಿಂಗವೇ ಬಂದು ಶರಣನ ಅಂಗವೆಲ್ಲವ ನಂಗೀಕರಿಸಿ, ಮಹಾ ಪಾಶಂಗಳ ನಳಿಯಲು, ಶರಣ ಲಿಂಗದೊಳೈಕ್ಯವಾಗಿ, ಶರಣನೆಂಬ ಪೂಜಕನೆಲ್ಲ ಲಿಂಗವೆಂಬ ಪೂಜ್ಯನಾಗಿ ಅಂಗದ ಪೂಜಾ ವೈಭವದ ಭಿನ್ನಕ್ರಿಗಳೇನೂ ಇಲ್ಲದೆ ಹೋಯಿತ್ತು, ಶಿಖಿ ಕರ್ಪುರ ಯೋಗದಂತೆ ಎಂಬುದೀ ವಚನದ ತಾತ್ಪರ್ಯಾರ್ಥ.

(೨೧). ಭಾವವಿಲ್ಲದ ಬಯಲು, ಜೀವವಿಲ್ಲದ ಬಯಲು, ಮೌನವಿಲ್ಲದ ಬಯಲು, ಅಖಂಡೇಶ್ವರನೆಂಬ ಬಯಲೊಳಗೆ ನಿವೃತ್ತಿಯಾಗಿದ್ದೆನು.

(೧೨). ಮಾಡಿಮಾಟವ ಮರೆದು, ಕೂಡಿಕೂಟವ ಮರೆದು, ಬಯಲು ಸಮರಸಕ್ಕೆ ಮರುಳಾಯಿತ್ತಲ್ಲಾ! ಜೀವಪ್ರಾಣನ ಭೇದವ ತಿಳಿದು ನಿಜವದಕ್ಕಾಯಿತ್ತಲ್ಲಾ! ಅನ್ಯ ಚಿಹ್ನವಡಗಿ ತನ್ನ ತಾ ಮರೆಯಿತ್ತು ಕೂಡಲಚೆನ್ನಸಂಗಾ.

---

# ಬಯಲು ಅನಿರ್ವಚನೀಯವು.

## ಸತಿಪತಿ ಭಾವದ ವಚನಗಳು.

(೧೩). ಎಮ್ಮನಲ್ಲನು ಕೂಡಿದ ಕೊಟವನು ಇದಿರಿಂಗೆ ಹೇಳಬಾರದವ್ವಾ. ನೀವೆಲ್ಲ ನಿಮ್ಮನಲ್ಲನ ಕೂಡಿದ ಸುಖವ ಬಲ್ಲಂತೆ ಹೇಳುವಿರಿ. ಉರಿಲಿಂಗದೇವ ಬಂದೆನ್ನ ನಿರಿಯನುಚ್ಚಿದರೆ, ನಾನೋ, ತಾನೋ, ಏನಂದರಿಯೆನು.

(೧೪). ತಮ್ಮ ತಮ್ಮ ಗಂಡರು ಚಲುವರೆಂದು ನೋಡಿ ಕೊಂಡಾಡುವ ಹೆಣ್ಣುಗಳು ಥೃಣ್ಯ ಜೀವಿಗಳವ್ವಾ. ನಾ ನಮ್ಮನಲ್ಲನೆಂತವನೆಂದರಿಯೆನವ್ವ. ಮಹಾಲಿಂಗ ಗಜೇಶ್ವರ ದೇವನು ನಿರಿಯ ಸೆರಗ ಸಡಲಿಸಲೊಡನೆ, ಆನೇನೆಂದರಿಯೆನವ್ವಾ.

(೧೫). ಆತನ ಬೆರಸಿದ ಕೂಟವನೇನೆಂದು ಹೇಳುವೆನವ್ವಾ. ಕೇಳಲು ಬಾರದು, ಹೇಳಲುಬಾರದು. ಏನು ಹೇಳುವೆನವ್ವಾ. ಶಿಖಿ ಕರ್ಪುರ ಬೆರಸಿದಂತೆ, ಮಹಾಲಿಂಗ ಗಜೇಶ್ವರನ ಕೂಡಿದ ಕೂಟವ ಹೇಳಬಾರದು.

(೧೬). ಎಲವ್ವೋ, ಎಲವ್ವೋ, ನಿನ್ನ ಕೂಡದನ್ನಕ್ಕರ ಮುನ್ನ ಕಾಣೆ. ಕೂಡಿದ ಬಳಿಕ, ಮತ್ತೆ ಕಾಣೆನಯ್ಯ. ನಿನ್ನ ಕೂಡಿದ ಸುಖದಿಂದ ನಾನೇನೆಂದರಿಯೆನವ್ವಾ. ಎನ್ನ ಕಪಿಲ ಸಿದ್ಧಮಲ್ಲಿಕಾರ್ಜುನಯ್ಯ ನೀನೇ ಬಲ್ಲೆ.

(೧೭). ಹೊಳೆವ ಕೆಂಜೆಡೆಗಳು, ಮಣಿಮುಕುಟ, ಒಪ್ಪುವ ಸುಲಿಪಲ್ಲ, ನಗೆಮೊಗದ ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ. ನಾನು ಕಂಡೆನ್ನ ಕಂಗಳ ಬರ ಹಿಂಗಿತ್ತೆಂದು, ಕಂಡ ಕಂಡರೆಲ್ಲರ ಹೆಂಡಿರಾಗಿ ಆಳುವ ಗುರುವನ ಕಂಡೆ. ನಾನು ಜಗದಾದಿಶಕ್ತಿಯೊಳು ಬೆರಸಿ, ಪರಮ ಗುರು ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು.

## ಪರಿಶಿಷ್ಟ ( ಅ ).

# ಕಠಿಣ ಶಬ್ದಗಳ ಅರ್ಥ.

ಅಂಕ=ಗುರುತು, ( ೨ ) ಕಾಳಗ.
ಅಂಕಕಾರ=ಶೂರ.
ಅಂಕೆ=ಆಜ್ಞೆ.
ಅಖಂಡ=ಸಂಪೂರ್ಣ.
ಅಗಡು=ತುಂಟತನ, ಕ್ಷುದ್ರತನ.
ಅಗಮ್ಯ=ತಿಳಿಯಲಸಾಧ್ಯ, ಶ್ರೇಷ್ಠ್ಠತೆ.
ಅಗ್ಗವಣಿ=( ಅಗ್ಗಣಿ, ಅಘವಣಿ ) ಪವಿತ್ರವಾದ ನೀರು.
ಅಂಗವಿಸು=ಕೂಡು, ಹಿಡಿ, ಸಂಬಂಧಿಸಿಕೊಳ್ಳು, ( ೨ ) ಇಚ್ಛಿಸು, ಸೇರು, ( ೩ ) ಯತ್ನಿಸು.
ಅಘ=ಪಾಪ.
ಅಚಲ=ಸ್ಥಿರತ್ವವುಳ್ಳ.
ಅಚ್ಚು=ಗುರ್ತು, ಮುದ್ರೆ.
ಅಚ್ಚುಕ ( ಅಚ್ಚುಗ )=ಸ್ವರೂಪ, ಆಕೃತಿ, ( ೨ ) ಗಟ್ಟಿಯಾಗಿರುವ ಸ್ಥಿತಿ.
ಅಜ=ಬ್ರಹ್ಮ.
ಅಜಾಂಡ=ಬ್ರಹ್ಮಾಂಡ.
ಅಟಮಟ=ಕಾಪಟ್ಯ, ಠಕ್ಕುತನ.
ಅಟ್ಟಿಟ್ಟಿಕೆ=ಬೆನ್ನು ಹತ್ತುವದು, ತೊಂದರೆ ಕೊಡುವದು, ಒತ್ತುವದು.
ಅಟ್ಟೆ=ಮುಂಡವಿಲ್ಲದ ಶರೀರ.
ಅಡಕು=ಗಟ್ಟಿಯಾಗಿ ಇಡು.
ಅಡಗ=ಮಾಂಸ.

ಅಡಸು=ಮೇಲೆ ಬರು.
ಅಂಡಲೆ=ಒತ್ತು, ತೊಂದರೆ ಕೊಡು, ( ೨ ) ತೊಂದರೆ.
ಅಣಕ=ಗಟ್ಟಿಯಾಗಿರುವ ಸ್ಥಿತಿ, ( ೨ ) ಗೂಢಾರ್ಥ, ಇಂಗಿತಾರ್ಥ,
ಅಣಿ=ಸಿದ್ಧ, ( ೨ ) ಪಡೆ, ದಂಡು.
ಅಣ್ಣು=ದುರ್ಬಲಮಾಡು, ( ೨ ) ಸ್ತ್ರೀ.
ಅತಿಗಳೆ=ದೂರ ಸರಿಸು, ತಿರಸ್ಕರಿಸು, ಮೀರಿನಿಲ್ಲು, ಅತಿಕ್ರಮಿಸು.
ಅತೀತ=ಮೀರಿದ.
ಅದಟ=ವೀರ.
ಅದ್ದಲಿಸು=ಮುಳುಗಿಸು, ಕೆಡವು, ( ೨ ) ಅಂಜಿಸು.
ಅದ್ದು=ಕೆಡವು, ಮುಳುಗಿಸು.
ಅಂದ=ಸ್ಥಿತಿ, ರೀತಿ, ಸೌಂದರ್ಯ, ( ೨ ) ಹಾಗೆ.
ಅಂದಣ=ಪಲ್ಲಕ್ಕಿ.
ಅಂದು=ಅಗ್ಗೆ.
ಅಧಿಷ್ಠಾತೃ=ಆಶ್ರಯಸ್ಥಾನ.
ಅಧ್ಯಾತ್ಮಿಕ=ಆತ್ಮಜ್ಞಾನಕ್ಕೆ ಸಂಬಂಧಿಸಿದ
ಅರ್ಥಿ=ಇಚ್ಛೆಯುಳ್ಳವ, ಆಶೆಯುಳ್ಳವ, ದೈನ್ಯಭಾವವುಳ್ಳವ, ಸೇವಕ, ಯಾಚಕ.
ಅನಲ=ಬೆಂಕಿ.

ಅನವರತ=ಯಾವಾಗಲೂ.
ಅನ್ನಕ್ಕರ (ಅನ್ನಕ್ಕ)=ತನಕ,
ಅನ್ನಬರ=ವರೆಗೆ.
ಅನಾಮಯ=ಶುದ್ಧ, ಹೊಲಸು ಇಲ್ಲದ,
ಅನಾಮಿಕ=ನೀಚ, ಪಾಪಿಷ್ಠ,
(೨) ಅಪ್ರಸಿದ್ಧ.
ಅನಾಯತ=ಸ್ವೈರವೃತ್ತಿ, ಅನಾಚಾರ.
ಅನಾಹತ=ಅಭೇದ್ಯವಾದದ್ದು.
ಅನಿಲ=ವಾಯು.
ಅನುಕರಿಸು=ಒಂದು ಪದಾರ್ಥದಂತೆ ಇರು, ಕೂಡಿರು, (೨) ಅಂಗೀಕರಿಸು.
ಅನುದಪ್ಪು=ರೀತಿಯನ್ನು ತಪ್ಪು.
ಅನುಭಾವ=ಜ್ಞಾನ.
ಅನುಭಾವಿ=ಜ್ಞಾನಿ.
ಅನಿಮೇಷ (ಅನುಮಿಷ)=ಎವೆ ಇಕ್ಕದ, (೨) ದೇವ.
ಅನುವು=ರೀತಿ, ಸ್ಥಿತಿ, ಅನುಕೂಲವುಳ್ಳದ್ದು, ಯೋಗ್ಯವುಳ್ಳದ್ದು, ಸೌಂದರ್ಯವುಳ್ಳದ್ದು, (೨) ಯೋಗ್ಯ ಮಾರ್ಗ.
ಅನುಸರಣೆ=ಅನಾಚಾರ.
ಅನುಸರಿಸು=ಹಿಂಬಾಲಿಸು, (೨) ವಿಷಯಗಳಿಗೆ ಒಳಗಾಗು.
ಅನುಜ್ಞೆ=ಉಪದೇಶ.
ಅನ್ನೆವರ=ವರೆಗೆ, ಅಷ್ಟರಲ್ಲಿ.
ಅಪವರ್ಗ=ಬಿಟ್ಟುಬಿಡೋಣ, ಪೂರ್ಣತೆ ಮೋಕ್ಷ.
ಅಪಸ್ಮಾರಿ=ಮರೆಯುವವ.
ಅಪ್ರಮಾಣ=ಮೇರೆ ಇಲ್ಲದ.

ಅಭಿಜ್ಞ=ಜ್ಞಾನಿ.
ಅಭ್ಯಂತರ=ವಿರೋಧ, (೨) ಒಳಗಿನದು.
ಅಮೇಧ್ಯ=ಅಶುದ್ಧ ವಸ್ತು, ಮಲ.
ಅಮ್ಮು=ಸಮರ್ಥನಾಗು.
ಅರತು ಹೋಗು=ಅಡಗು, ನಾಶವಾಗು.
ಅರಸು=ಹುಡುಕು.
ಅರಳು=ಹೂವು.
ಅರಿಕೆ=ಜ್ಞಾನ, (೨) ಬಿನ್ನಹ.
ಅರಿದು=ಆಶ್ಚರ್ಯ, ಅಸಾಧ್ಯ.
ಅರಿವು=ಜ್ಞಾನ.
ಅರುಹು=ತಿಳಿಸು.
ಅರೆ=(೧) ತಿಕ್ಕು, (೨) ಅರ್ಧ, (೩) ಕಲ್ಲು, ಕಲ್ಲುಬಂಡೆ, ಕಲ್ಲುಹಾಸಿಕೆ.
ಅರೋಚಕ=ಹ್ಯೇಯಭಾವ, ರುಚಿ ಇಲ್ಲದ್ದು, ಹೇಸಿಕೆ.
ಅಲಗು=ಕತ್ತಿ.
ಅಲರು=ಹೂವು.
ಅಲಸು=ಬೇಸರಪಡು.
ಅಲೆ=ತೆರೆ, (೨) ಸಂಚರಿಸು.
ಅವಗವಿಸು (ಅವಗ್ರಹಿಸು)=ತುಂಬು, ಸ್ವೀಕರಿಸು, ಹಿಡಿಯು.
ಅವಧರಿಸು=ಲಕ್ಷಿಸು, ವಿಚಾರಮಾಡು, (೨) ಸ್ವೀಕರಿಸು.
ಅವಧಾನ=ಮನಸ್ಸಿನ ಏಕಾಗ್ರತೆ.
ಅವಧಿ=ವೇಳೆ, (೨) ಅಳತೆ, (೩) ಅಂತ್ಯ.
ಅವಸರ=ವೇಳೆ.
ಅವಸಾನ=ಅಂತ್ಯ.
ಅವ್ಯಯ=ಕೆಡದಂಥ.

ಅವಿರಳ=ಗಟ್ಟಿಯಾದ, ದಟ್ಟ, ಕೂಡಿ ಕೊಂಡ.
ಅವಿರಳಾತ್ಮಕ=ಒಟ್ಟುಗೂಡಿದ.
ಅಹರ್ನಿಶ=ಯಾವಾಗಲೂ.
ಅಳಲು=ದುಃಖ, (೨) ದುಃಖಪಡು.
ಅಳವಡು=ಸಂಬಂಧಪಡು.
ಅಳವು=ಸಾಮರ್ಥ್ಯ.
ಅಳಿ=ಕ್ಷುದ್ರ, (೨) ನಾಶಮಾಡು.
ಅಳಿವು=ನಾಶ.
ಅಳುಕು=ಅಂಜು.
ಅಳುರ್=ವ್ಯಾಪಿಸು.
ಅಳುಪು=ತೊಂದರೆ ಕೊಡು, ಕಂಗೆಡಿಸು.
ಆಗು=ಸ್ಥಿತಿ.
ಆಡಂಬರ=ವೈಭವ, (೨) ಗುಡುಗು.
ಆಣತಿ=ಆಜ್ಞೆ.
ಆಣ್ಮ=ಯಜಮಾನ, (೨) ಪತಿ.
ಆಧಿ=ಚಿಂತೆ.
ಆಪೋಷಣ=ಸೇವುವದು. (೨) ಆಹಾರ.
ಆಪ್ಯಾಯನ=ತೃಪ್ತಿ.
ಆಮಿಷ=ಆಶೆ.
ಆಯುತ=ಸುತ್ತುಗಟ್ಟಲ್ಪಟ್ಟ, ಬಂಧಿಸಲ್ಪಟ್ಟ, ಒಳಗಾದ.
ಆಯಿಲ=ಕೆಟ್ಟನಡತೆ.
ಆರಡಿ=ಜೇನುಹುಳ, (೨) ತೊಂದರೆ.
ಆರಂಬ=ಒಕ್ಕಲುತನ.
ಆರು=ಶಕ್ತನಾಗು.
ಆರೈ=ಕಾಪಾಡು, (೨) ಲಕ್ಷಿಸು, (೩) ಆಲೋಚಿಸು.
ಆರೋಗಣೆಮಾಡು=ಊಟಮಾಡು.
ಆಲಿ=ಕಣ್ಣು, (೨) ಆಣೇಕಲ್ಲು (ಆಲಿಕಲ್ಲು)
ಆಲಿಸು=ಕೇಳು.
ಆವರಿಸು=ಆಚ್ಛಾದಿಸು, ತುಂಬು.
ಆಳ್=ಶೂರತನ, (೨) ಮುಳುಗು.
ಆಳಿ=ದಾಸಿ.
ಆಳಿಗೊಳ್ಳು=ಅಂಕಿತಮಾಡಿಕೊಳ್ಳು.
ಆಳು=ಮುಳುಗು, ಸೇವಕ.
ಆಳುತನ=ಒಡೆತನ.
ಆಳ್ದ=ಒಡೆಯ.
ಇಕ್ಕೆ=ಮನೆ, ವಾಸಸ್ಥಳ.
ಇಡು=ಒಗೆ.
ಇದಿರು=ಭಿನ್ನತೆ, ವಿರುದ್ಧ.
ಇನಿಸು=ಇಷ್ಟು.
ಇಂದ್ರಚಾಪ=ಕಾಮನಬಿಲ್ಲು.
ಇಂಬಿಡು = ನೆಲೆಗೊಳ್ಳು.
ಇಂಬು=ಸ್ಥಳ, ಅವಕಾಶ.
ಇಂಬುಗೊಳ್ಳು=ಸೇರು, (೨) ಒದಗು.
ಇರವು=ಸ್ಥಿತಿ.
ಈಡು=(೧) ಎಳೆಯುವದು, ಇಡುವದು; (೨) ಉದ್ದೇಶ, ಗುರಿ; (೩) ಹೆಚ್ಚಾಗುವಿಕೆ; (೪) ಯೋಗ್ಯವಾದದ್ದು; (೫) ಜಾಮೀನು.
ಈಯು=ಕೊಡು.
ಈರೇಳು=ಹದಿನಾಲ್ಕು.
ಈಷಣ=ಲೋಭ, ಆಶೆ.
ಈಸಕ್ಕಿಯ=ಇಂಥ.
ಈಸು=ಗೊಡು,

ಉಗ್ಗಡಿಸು=ಗಟ್ಟಿಯಾಗಿ ಅನ್ನು, ಸಾರು.
ಉಚ್ಛಹ=ಉತ್ಸಾಹ, ಆನಂದ.
ಉಚ್ಛಳಿಸು=ಹೊರಗೆ ಬೀಸು.
ಉಚ್ಚು=ತಿಕ್ಕು.
ಉಡುಗು=ಕ್ಷೀಣವಾಗು.
ಉಂಡಲಿಗೆ=ಅನ್ನದ ಮುದ್ದೆ.
ಉಂಡಿಗೆ=ಗುರ್ತು, ಮುದ್ರೆ, ಮೊಹರು.
ಉತ್ತಮಾಂಗ=ತಲೆ.
ಉತ್ತು=ತಿಕ್ಕು.
ಉದ್ದಂಡ=ಗರ್ವವುಳ್ಳ, ಸೊಕ್ಕಿನ.
ಉನ್ಮೀಲನ=ಕಣ್ಣುತೆರೆಯುವದು, ಎಚ್ಚತ್ತಿರುವದು.
ಉಪಚರ್ಯೆ=ಸೇವೆ.
ಉಪದೃಷ್ಟ=ದೃಷ್ಟಾಂತ, ಉದಾಹರಣೆ.
ಉಪಾಧಿ (ಉಪಾಧಿಕೆ)=ಮೇಲೆ ಇರುವದು, ತೋರಿಕೆ, ಸುಳ್ಳು.
ಉಪಾವಸ್ಥೆ=ಅಭಿಲಾಷೆ, ಚಿಂತೆ, ದುಃಖ.
ಉಬ್ಬಸ=ಸಂಕಟ, ದುಃಖ.
ಉಮ್ಮಳಿಸು=ಬಿಸಿಯಾಗು, ದುಃಖಪಡು.
ಉಯ್ಯಾಲೆ=ಜೋಕಾಲಿ.
ಉರಗ=ಹಾವು.
ಉರುತರ=ಶ್ರೇಷ್ಠವಾದ.
ಉರುವಣೆ=ಮೇಲೆಬೀಳುವದು, ಹಲ್ಲೆ.
ಉಲಿ=ಅಲುಗಾಡು.
ಉಲುಹು=ಸಪ್ಪಳ, ಧ್ವನಿ, ಗುಲ್ಲು.
ಉಳ್=ರೆಂಟೆಹೊಡೆ.
ಉಳಿವು=ಅಸ್ತಿತ್ವ, ಇರುವಿಕೆ.
ಉಳುಮೆ=ಉಳಿದದ್ದು, ಬಾಕಿ.
ಊಡಿಸು=ಉಣ್ಣಿಸು.
ಊಣೆಯ=ನ್ಯೂನತೆ.
ಊನ=ದೋಷ.
ಊರ್ಮಿ = ತೆರೆ.
ಎಕ್ಕಲ=ದೊಡ್ಡ, ಘನತರವಾದ, (೨) ಕಾಡಹಂದಿ.
ಎಗ್ಗ=ದಡ್ಡ, ಅಜ್ಞಾನಿ, ಹುಚ್ಚ.
ಎಟ್ಟು=ಹತ್ತು, ಮುಟ್ಟು, ಮೇಲಿನ ಪದಾರ್ಥವನ್ನು ನಿಲುಕಿಸು.
ಎಡರು=ಸಂಕಟ.
ಎಡೆ=ಸ್ಥಳ (೨) ನೈವೇದ್ಯ.
ಎಡ್ಡಿಸು=ಚೇಷ್ಟೆಮಾಡು, ಬಯ್ಯು.
ಎಣಿಸು=ವಿಚಾರಮಾಡು.
ಎಣೆ=ಸಮಾನ.
ಎರಕ=ಬೆಸಿಕೆ (೨) ಪ್ರೀತಿ.
ಎರವು=ಕಡತೆಗೆದುಕೊಳ್ಳೋಣ. (೨) ಭೇದ, ವಿರೋಧ.
ಎಲ್ಲೆಡೆ=ಎಲ್ಲಕಡೆ.
ಎಸಕ=ಪ್ರಕಾಶ, ರೂಪ (೨) ಉದ್ಯೋಗ (೩) ಅತಿಶಯ.
ಎಳತಟ=ದುರ್ಬಲಸ್ಥಿತಿ.
ಏಕಭುಕ್ತ=ಒಂದೊತ್ತು.
ಏಕೀಭವಿಸು=ಒಂದಾಗು, ಕೂಡಿಸು.
ಏಕೋಗ್ರಾಹಿ=ಒಂದನ್ನೇ ಹಿಡಿಯುವವ.
ಏಡಿಸು=ಅಪಶಬ್ದವನ್ನು ನುಡಿ, ಚೇಷ್ಟೆಮಾಡು.
ಏತ=ಮಟ್ಟಿ, ಯಾತ.
ಏರ್=ಗಾಯ.

ಏರಿ=ದಿನ್ನೆ ಎತ್ತರಸ್ಥಳ (೧) ಒಡ್ಡು, (೩) ಊರ್ಜಿತಾವಸ್ಥೆ.

ಏವೆ=ಏನು ಮಾಡಲಿ.

ಏಸು=ಎಷ್ಟು.

ಐ=ಅಲ್ಲವೇ.

ಒಕ್ಕು=ಬಿಡು, ಹೊರಚಲ್ಲು, ಕೊಡು.

ಒಕ್ಕುಡಿತೆ=ಒಂದೆ ಬೊಗಸೆ.

ಒಗತನ=ಬಾಳುವೆ, ನಡತೆ.

ಒಗು=ಹೊರಚಲ್ಲು.

ಒಗುಮಿಗೆ=ಅತ್ಯಂತವಾಗಿ.

ಒಚ್ಚತ=ಆನಂದ, ಪ್ರೀತಿ, ಒಪ್ಪಿಗೆ.

ಒಟ್ಟಣ=(ಒಟ್ಟಿಲು), ಸಮೂಹ

ಒಡತನ=ಕೂಟ, ಸ್ನೇಹ.

ಒಡಲು=ದೇಹ.

ಒಡವೆರೆ=ಕೂಡು.

ಒಡಂಬಡಿಕೆ=ಒಪ್ಪಿಗೆ.

ಒಡ್ಡು=ಸಮೂಹ.

ಒಡೆತನ=ಯಾಜಮಾನ್ಯ.

ಒಂದು=ಕೂಡು, ಸಂಬಂಧಿಸು.

ಒಪ್ಪ=ರೂಪು, ಸೌಂದರ್ಯ ಸರಿಯಾದದ್ದು.

ಒಪ್ಪಚ್ಚಿ=ಸ್ವಲ್ಪ. ತುಸು.

ಒಬ್ಬುಳಿ=ಸಮುದಾಯ, ಕೂಟ.

ಒಯ್ಯನೆ=ಸಾವಕಾಶವಾಗಿ, ಸುಮ್ಮನೆ.

ಒರಗು=ಮಲಗು.

ಒರಸೊರಸು=ಸರಿ, ಸಮ.

ಒರೆ=ತಿಕ್ಕು (೧) ಹೊರಬೀಳು ಒಸರು (೩) ತಿಳಿಸು (೪) ಆಚ್ಛಾದನ.

ಒಲವರ=ಪ್ರೀತಿ, ಪಕ್ಷಪಾತ.

ಒಲುಮೆ=ಪ್ರೀತಿ.

ಒಸೆ=ಇಚ್ಛಿಸು (೧) ಆನಂದಪಡು (೩) ಪ್ರೀತಿಸು.

ಒಳಗು=ಪಾತ್ರ.

ಒಳರು=ಶಕ್ತ.

ಒಳವು=ಸಾಧ್ಯ.

ಒಳ್ಪು=ಸೌಂದರ್ಯ, ಸಾರ.

ಓಗರ=ಅನ್ನ.

ಓಜ=ಆಚಾರ್ಯ, ಗುರು.

ಓಜೆ=ನಿಯಮ, ಸಾಲು, ಯೋಗ್ಯ, ರೀತಿ, ಕ್ರಮ.

ಓಡು=ಮಣ್ಣಿನ ಗಡಿಗೆ.

ಓಪ=ಗಂಡ.

ಓರಣ=ಓಳಿ, ಸಮವಾದ ಸ್ಥಿತಿ, ಶಿಸ್ತು, ವಿಶ್ವಾಸ.

ಓರಂತೆ=ಸಮಾಧಾನ ವೃತ್ತಿಯಿಂದ.

ಓಲಾಡು=ತೂಗಾಡು.

ಓಲೈಸು=ಸೇವಿಸು.

ಓವರಿ=ಒಳಕೋಣೆ.

ಓವು=ಕಾಪಾಡು.

ಓಸರಿಸು=ಹಿಂಜರಿ.

ಓಳಿ=ಸಾಲು.

ಕಕ್ಕುಲಿತೆ=ಆಶೆ, ಪ್ರೀತಿ.

ಕಕ್ಕಸ=ಕರ್ಕಶ, ಗಟ್ಟಿ.

ಕಂಕಾಳ=ಕಂಕಣ,

ಕಚ್ಚು=ಕಡಿ (೧) ಕೂಡಿಕೊಳ್ಳು.

ಕಚ್ಚುಟ=ಲಂಗೋಟಿ.

ಕಂಚು=ಪಾತ್ರೆ.

ಕಜ್ಜಲ=ಕಾಡಿಗೆ (೧) ನೋಡ

ಕಟಕ=ಆಭರಣ.
ಕಟ್ಟಣೆ ( ಕಟ್ಟಳೆ )=ನಿಯಮ.
ಕಡಗು=ಬಯಸು ( ೨ ) ಪ್ರಯತ್ನಿಸು.
ಕಡಹ=ಒಂದು ತರದ ಗಿಡ ( ೨ ) ಕಡಿಯುವದು, ಮಂಥನ ಮಾಡುವದು ( ೩ ) ಬಲೆ.
ಕಡುಹು=ಶಕ್ತಿ, ಶೌರ್ಯ, ರೋಷ, ವೇಗ.
ಕಣ್ಗೊಳಿಸು=ಮನೋಹರವಾಗಿ ಕಾಣು.
ಕಂಥೆ=ರಗಟಿ, ದಪ್ಪಾದ ಅರಿವೆ.
ಕದನಬಡು=ಶಿಟ್ಟಾಗು, ಉಮ್ಮಳಿಸು.
ಕದಳಿ=ಬಾಳೇಗಿಡ ( ೨ ) ಅರಣ್ಯಮಧ್ಯ
ಕನಲಿಕೆ=ಶಿಟ್ಟು.
ಕರ್ನಿಕೆ=ದೇಟು.
ಕಂಧರ=ಕುತ್ತಿಗೆ.
ಕಪ್ಪಟ=ಅರಿವೆ, ಬಟ್ಟೆ.
ಕಪಾಲ=ತಲೆಡವಿಗೆ.
ಕಪಿಲೆ=ಆಕಳು, ಆವು.
ಕಂಪಣಿಗ=ಕಾವಲುಗಾರ, ಆಳು.
ಕಂಪಲ ( ಕಂಪಣ )=ದೇಶ.
ಕಬ್ಬಿಲ=ಮೀನುಗಾರ.
ಕಮಂಡಲು=ಪಾತ್ರೆ.
ಕಂಬಳ=ದಿನಗೂಲಿ.
ಕಂಬು=ಶಂಖ.
ಕರ=ಅತಿಶಯ, ಬಹಳ, ದೊಡ್ಡ.
ಕರಕರೆ=ವ್ಯಾಕುಲ, ಚಿಂತೆ.
ಕರಣ=ಇಂದ್ರಿಯ.
ಕರಿ=ಕರಕಾದ ಸ್ಥಿತಿ.
ಕರಿಕ=ಕಪ್ಪು ಮನುಷ್ಯ.
ಕರಿಗೊಳ್ಳು=ಸುಡು, ಕರಕಾಗು. ( ೨ ) ಸಮರಸವಾಗು.
ಕರಿಪೆ=ಇದ್ದಲಿ, ಕರಕಾದ ಸ್ಥಿತಿ.
ಕರುಳು=ಪ್ರೀತಿ, ದಯೆ.
ಕಲು=ಚಿಂತೆ.
ಕಲ್ಯಾಣ=ಲಗ್ನ.
ಕಲೆ ( ಕಳೆ )=ಶಕ್ತಿ.
ಕಲ್ಲಿ=ಜಾಳಿಗೆಯ ಚೀಲ.
ಕವರಿಡು=ಗಾಬರಿಯಾಗು ( ೨ ) ಬಲಾತ್ಕಾರದಿಂದ ತೆಗೆದುಕೊಳ್ಳು.
ಕವಲು=ಎರಡು.
ಕವಾಟ=ಬಾಗಿಲು.
ಕಷ್ಟರು=ದುಷ್ಟಮನುಷ್ಯರು.
ಕಳ=ರಣರಂಗ.
ಕಳಲೆ=ಸಣ್ಣದಾಗಿರುವ ಸ್ಥಿತಿ, ಕೋಮಲತೆ.
ಕಳ್ಳ=ಹೆಂಡ, ಸಾರಾಯಿ.
ಕಳಾಕುಳ=ಚಿಂತೆಯಿಂದ ತುಂಬಿದ.
ಕಾಕು=ಕೀಳು.
ಕಾತರ=ಆತುರ.
ಕಾತರಿಸು=ಅಂಜು, ಆಶೆಮಾಡು.
ಕಾಪು=ಕಾವಲು.
ಕಾಮ=ಇಚ್ಛೆ, ಬಯಕೆ.
ಕಾರ್ಪಣ್ಯ=ಕೃಪಣತೆ, ಜೀನತನ.
ಕಾವಳ=ಕಗ್ಗತ್ತಲೆ ( ೨ ) ನೆಳಲು.
ಕಾಷಾಯ=ಕಪನಿ.
ಕಾಹು=ಸಂರಕ್ಷಣೆ, ಕಾವಲು.
ಕಾಳಿಕೆ=ಕಪ್ಪು ( ೨ ) ದೋಷ.
ಕಿಗ್ಗಡಲು=ಸಣ ಸಮುದ್ರ.

ಕಿರುಗುಣಿ=ತಗ್ಗು, ಸಣ್ಣವಾಡ.
ಕಿಲ್ಬಿಷ = ಹೊಲಸು, ಪಾಪ, ರೋಗ.
ಕಿಸುಕುಳ=ಹೊಲಸು.
ಕ್ರಿ=ಕ್ರಿಯೆ, ಕಾರ್ಯ.
ಕೀಲಿಗ=ಬಡಿಗ.
ಕೀಲ್ಗೈಸು=ಗಟ್ಟಿಯಾಗಿ ಹತ್ತಿಕೊಳ್ಳು.
ಕೀಳಾಳು=ದುರ್ಬಲಮನುಷ್ಯ.
ಕುಂಜರ=ಆನೆ.
ಕುಟಿಲ=ಕಾಪಟ್ಯ, ಸುಳ್ಳು.
ಕುಡು=ದಾನ, ದೇಣಿಗೆ.
ಕುಣಿಕೆ=ಗಂಟು.
ಕುದಿಹ=ಕುದಿಯುವ ಸ್ಥಿತಿ.
ಕುಧರ=ದಿನ್ನೆ, ಪರ್ವತ.
ಕುಪ್ಪಳಿಸು=ನೆಲಕ್ಕೆ ಬೀಳು.
ಕುಂಭಿನಿ=ಪೃಥ್ವಿ.
ಕುರಿ=ಗುರ್ತು, ಉದ್ದೇಶ.
ಕುರಿತು= ಇಚ್ಛಿಸಿ, ಉದ್ದೇಶಿಸಿ.
ಕುರುಳು=ತಲೆಗೂದಲು.
ಕುಲಜ=ಹೆಚ್ಚಿನ ಕುಲದವ.
ಕುಲಾಲ=ಕುಂಬಾರ.
ಕುಹಕ=ಕಾಪಟ್ಯ, ಠಕ್ಕಿಸುವವ. (೨) ಡೊಂಬ.
ಕುಹರ=ತಗ್ಗು.
ಕುಳಿ=ತಗ್ಗು.
ಕುಳ್ಳಿ=ಪೆಂಟಿ.
ಕೂಚ=ಡೊಂಕಾದ.
ಕೂಟಸ್ಥ=ಮೇಲೆನಿಲ್ಲುವದು (೨) ಎಂದೂ ಬದಲಾಗದ ಸ್ಥಿತಿ.

ಕೂನಿ=ಗಣೆ.
ಕೂಪ=ಪ್ರೀತಿಸುವವ, ಪ್ರಿಯಕರ.
ಕೂರ್=ಪ್ರೀತಿಸು.
ಕೂರ=ತೀಕ್ಷ್ಣ.
ಕೂಸು=ಕನ್ನಿಕೆ.
ಕೃತಕ=ಕಾಪಟ್ಯ.
ಕೃಷೆ=ಒಕ್ಕಲುತನ.
ಕೆಚ್ಚು=ಬಲಿಷ್ಠನಾಗು (೨) ಸೊಕ್ಕು, ಗರ್ವ.
ಕೆಂಚ=ಕೆಂಪು ವರ್ಣದವ.
ಕೆನ್ನೆ=ಗಲ್ಲ.
ಕೆಮ್ಮನೆ=ನಿರರ್ಥಕವಾಗಿ.
ಕೆಯಿ=ಹೊಲ.
ಕೆರಳಿಕೆ= ಸಿಟ್ಟು, (೨) ಗರ್ವ.
ಕೆಲೆ=ಸಿಟ್ಟಿನಿಂದ ಕೂಗಾಡು, ಅಬ್ಬರಿಸು.
ಕೆಳದಿ=ಸ್ನೇಹಿತಳು.
ಕೆಳೆ (ಕೆಳೆಯ)=ಸ್ನೇಹಿತ.
ಕೆಳೆಗೊಳ್ಳು=ಸ್ನೇಹಮಾಡು.
ಕೇಣ=ಸಿಟ್ಟು (೨) ಮತ್ಸರ.
ಕೈಗೈಯ್ಯು=ಅಧೀನಕ್ಕೆ ಬರು, (೨) ಹುಟ್ಟಿಸು.
ಕೈದು=ಶಸ್ತ್ರ.
ಕೈವಲ್ಯ=ಮೋಕ್ಷ.
ಕೈವಾರ=ಅಧೀನ.
ಕೈಸಾರು=ಅಧೀನವಾಗು.
ಕೊಕ್ಕರಿಸು=ಹೇಸು.
ಕೊಟ್ಟಣ=ಬತ್ತ ಕುಟ್ಟುವದು.
ಕೊಡಗೂಸು=ಕನ್ಯೆ.
ಕೊಂಡೆ=ಚಾಡಿ.

ಕೊನರು=ಮೊಳಕೆ ಒಡೆ.
ಕೊಳ=ಹೊಂಡ.
ಕೊಳುಕೊಡೆ=ಕೊಡತಗೊಳ್ಳುವ ವ್ಯವ
ಹಾರ, ಲೇವಾದೇವಿ.
ಕೊಳ್ಳು=ಸ್ವೀಕರಿಸು.
ಕೋಟಲೆ=ತೊಂದರೆ.
ಕೋಡಂಗಿ=ವಿದೂಷಕ.
ಕೋಡಿವರಿ=ತುಂಬಿಹರಿ.
ಕೋಲು=ಬಾಣ.
ಖಂಡಿತ=ಭಿನ್ನ, ಭೇದ.
ಖರ್ಪರ=ತಲೆಡವಿಗೆ.
ಗಜಿಬಜಿ=ಶಬ್ದ, ಸಪ್ಪಳ, (೨) ತೊಂದರೆ.
ಗಡಣ=ಸಮೂಹ (೨) ಸ್ನೇಹ.
ಗಡಣಿಸು=ಕೂಡಿಸು, ಗುಂಪುಮಾಡು,
(೨) ಸಿದ್ಧಮಾಡು.
ಗತಕ=ಸಂಚಾರ, ವೃತ್ತಿ, ನಡತೆ.
ಗನ್ನ=ಮೋಸ, ಕಪಟ, (೨) ಠಕ್ಕು.
ಗಭಸ್ತಿ=ಕಿರಣ.
ಗರಳ=ವಿಷ.
ಗರುಡಿ=ವ್ಯಾಯಾಮಶಾಲೆ (೨) ಶಸ್ತ್ರ
ಶಾಲೆ.
ಗರುವ=ಶ್ರೇಷ್ಠ.
ಗರ್ಭೀಕೃತ=ಒಳಕೊಂಡ.
ಗಸಣಿ=ಚಿಂತೆ, ತೊಂದರೆ.
ಗಳಹು=ಬಹು ಭಾಷಣಮಾಡು.
ಗಂಜಳ=ಹೊಲಸು, ರಾಡಿ.
ಗಂಡು=ಧೈರ್ಯ, ಆವೇಶ, ರಭಸ.
ಗಂಧರಾಜ=ಆನೆ.
ಗಂಭೀರ=ಆಳವಾದ, ಉದ್ದ,
(೨) ಒಳಸೇರಿದ.
ಗಾರುಡ=ಮಂತ್ರ ವಿದ್ಯೆ, ಕಣ್ಣುಕಟ್ಟು.
ಗಾರುಮಾಡು=ನಾಶಮಾಡು.
ಗಾವಿಲ=ಹಳ್ಳಿಯ ಮನುಷ್ಯ, (೨)
ತುಂಟ.
ಗಾಹು=ಕಾಪಟ್ಯ.
ಗಿಣಿಲು (ಗಿಳಿಲು)=ಗಿಂಡಿ.
ಗುಡ್ಡ=ಶಿಷ್ಯ.
ಗುಣ=ದಾರ.
ಗುಲ್ಮ=ಕಂಟಿ, (೨) ಗಿಡಗಳ ಗುಂಪು.
ಗುಳಿ=ತಗ್ಗು.
ಗುಂಡಿಗೆ=ತಗ್ಗು.
ಗುಂಪಿಸು=ಹಿಂಜರಿ.
ಗುಂಭಿತ=ಸೊಕ್ಕಿನ.
ಗೂಡು=ಮನೆ.
ಗೆಲ್ಲ (ಗೆಲ)=ಜಯ.
ಗೋಜು=ಗೊಂದಲ.
ಗೊತ್ತು=ಗುರುತು, (೨) ನೇಮ, (೩)
ಜ್ಞಾನ, (೪) ಮನೆ, ಆಶ್ರಯ.
ಗೊಂದಣ=ಗುಂಪು, ಸಮೂಹ, (೨)
ತೊಂದರೆ, (೩) ಸಂಭ್ರಮ.
ಗೊಂದಿ=ಮೂಲೆ.
ಗೋಪ=ದನಕಾಯುವವ,
(೨) ಕಾಯುವವ.
ಗೋರಿಗೊಳಿಸು=ಮನವೆಳಿಸು, ಎಳೆಯು
ಲ್ಪಡು.
ಗೊಲ್ಲ=ದನಕಾಯುವವ.
ಗೋವಳ=ದನಕಾಯುವವ.

ಘಟ=ಗಡಿಗೆ, (೨) ಶರೀರ.
ಘಟಿಸು=ಒದಗು.
ಘಟ್ಟು=ಹೊಂದಿಸು, ಮುಟ್ಟು.
ಘನಸಾರ=ಕರ್ಪೂರ.
ಚಕ್ಕಳಿ=ಸಣ್ಣಾಗಿ ಕಡಿ, (೨) ತುಣುಕು.
ಚನ್ನ = ಸುಂದರ.
ಚಪ್ಪರ = ಹಂದರ.
ಚಮ್ಮಾವುಗೆ=ಮಚ್ಚೆಯ ಜೋಡು.
ಚರಣಾಯುಧ=ಕೋಳಿ.
ಚಲುವೆ (ಚಿಲುವೆ)=ಸಣ್ಣ ತಗ್ಗು, (೨) ಒರತೆ, (೩) ಝರಿ, ಬುಗ್ಗೆ.
ಚಲ್ಲ=ಚೇಷ್ಟೆ.
ಚಲ್ಲಣ=ಚಣ್ಣ.
ಚಾಗು=ಸ್ಥಿತಿ, (೨) ಸುಸ್ಥಿತಿ.
ಚಿತ್=ಚೈತನ್ಯ, ಶಕ್ತಿ, (೨) ಜ್ಞಾನ, ತಿಳಿವಳಿಕೆ, (೩) ಇಚ್ಛೆ.
ಚಿತ್ರಿಕ=ಚಿತ್ರಕಾರ.
ಚುಳುಕು=ಸೂಕ್ಷ್ಮ, ಸಣ್ಣ.
ಚೇಗು=ಶಕ್ತಿ, ಸಾರ, ಮರ್ಮ, (೨) ಹೃದಯ.
ಚೇಷ್ಟೆ=ಕ್ರಿಯೆ, ಕಾರ್ಯ.
ಚೋದ್ಯ=ಆಶ್ಚರ್ಯ.
ಚೋಹ=ಸೋಗು, ವಸ್ತ್ರ, ವೇಷ, ಪೋಷಾಕು.
ಚೋಹರಿಸು=ಹೊರಗೆ ಹಾಕು. (೨) ಉಡುಗು.
ಜಕ್ಕವಕ್ಕಿ=ಚಕ್ರವಾಕಪಕ್ಷಿ.
ಜಡ=ಅಜ್ಞಾನಿ.
ಜವ=ಯಮನು.
ಜವನಿಕೆ=ತೆರೆ, ಪಡದೆ.
ಜವ್ವನ=ಯೌವ್ವನ.
ಜವ್ವದಿ=ಕಸ್ತೂರಿ.
ಜವುಗು=ಜವುಳು.
ಜಂಗುಳಿ=ಸಮುದಾಯ.
ಜಂಜಡ=ತೊಂದರೆ
ಜಂಬುಕ=ನರಿ.
ಜಾತವೇದಿ=ಅಗ್ನಿ.
ಜಾತಿಗಾರ=ಬಹುರೂಪಿ.
ಜಾಳುಬೋಳು=ಉಪಯೋಗವಿಲ್ಲದ ಮನುಷ್ಯ.
ಜೀವಾಳ=ಚೈತನ್ಯ ಕೊಡುವಂಥಾದ್ದು, ಸಾರ, ಆಧಾರ, ಆಶ್ರಯ.
ಜೊಳ್ಳು=ಪೊಳ್ಳಾದ, (೨) ಅಂಜು.
ಜೊಂಪಿಸು=ನಡುಗು (೨) ಹೌಹಾರು, ಅಂಜು, ಮೂರ್ಛೆಹೋಗು.
ಜೋಗೈಸು=ಸಿದ್ಧಪಡಿಸು, ಸರಿಮಾಡು.
ಜೋಹ (ಚೋಹ)=ವೇಷ, ಸೋಗು.
ಜೌಗು=ಜವುಳು.
ಝುಂಕೆ=ಬೆದರಿಕೆ.
ಟೊಣೆ=ಸುಳ್ಳು ಹೇಳು, ಠಕ್ಕಿಸು.
ಟೊಪ್ಪರ=ಕುಲಾಯಿ, (೨) ಶಿರಸ್ತ್ರಾಣ.
ಡಿಂಗರಿಗ=ಸೇವಕ.
ಡಿಂಬ=ಹೊಡೆದಾಟ (೨) ಸಂಕಟ.
ಡೊಂಗುರ=ಕಾಡು, ಗುಡ್ಡ.
ತಕ್ಕರು=ಯೋಗ್ಯರಾದವರು.
ತಗರ=ಕುಡುಗ (೨) ಅಯೋಗ್ಯವಾದದ್ದು (೩) ಟಗರು
ತಗಹು=ಪ್ರತಿಬಂಧ (೨) ತೊಂದರೆ.

ತಗು=ಯೋಗ್ಯವಾಗು, ಸರಿಮಾಡು.
ತಡೆ=ದಂಡೆ.
ತಣಿ=ತೃಪ್ತಿಹೊಂದು,ಸಮಾಧಾನಗೊಳ್ಳು
ತತ್ತರಂದರಿದು=ಮನಬಂದಂತೆ ಕತ್ತರಿಸಿ
ತತಿ=ಸಮೂಹ.
ತಂದಲ್=ವೃಷ್ಟಿ.
ತದ್ದಿನ=ಮೃತ ತಿಥಿ, ಶ್ರಾದ್ಧ.
ತನೂರುಹ=ಮೈಗೂದಲು.
ತಪ್ಪಲು=ಪರ್ವತ ಪ್ರದೇಶ (೨) ಪರ್ವತದ ಮೇಲಿನ ಸಮವಾದ ಸ್ಥಳ.
ತಬ್ಬಿಬ್ಬು=ಗಾಬರಿ.
ತಮಂಧ=ಕಗ್ಗತ್ತಲೆ.
ತರಕಟ=ಕಠೋರತನ, ನಿಷ್ಠುರತೆ.
ತರಗು=ಒಣಗಿದ.
ತರಹರ=ತಾಳಿಕೊಳ್ಳುವದು, ಸ್ತಬ್ಧತೆ, ಶಾಂತತೆ, ತಾಳ್ಮೆ (೨) ತೀವ್ರವಾಗಿ.
ತರಂಗ=ತೆರೆ.
ತವಕ=ಅವಸರ, ಉತಾವಳಿ.
ತವನಿಧಿ=ಧನರಾಶಿ (೨) ಪುಣ್ಯ.
ತವರಾಜ=ಸಕ್ಕರೆ, (೨) ಅಮೃತ.
ತಸ್ಕರಿಸು=ತುಡುಗುಮಾಡು.
ತಾಗು=ನಿರೋಧ, ಸಂಕಟ, ಕಷ್ಟ.
ತಾಣ=ಸ್ಥಳ, ಆಶ್ರಯ.
ತಾತಿ=ತಾಯಿತ.
ತಾಮಸ=ದುಷ್ಟಗುಣವುಳ್ಳ.
ತಾರ್ಕಣೆ=ಸರಿಯಾಗಿ ಕೂಡುವದು, ಸಂಘಟ್ಟನೆ, ಪ್ರತ್ಯಕ್ಷವಾಗಿ ತಿಳಿಯುವದು, ಪ್ರತ್ಯಕ್ಷಪ್ರಮಾಣ.
ತಿಮಿರ=ಕತ್ತಲೆ.
ತಿರಿ=ಅಡ್ಡಾಡು, (೨) ಭಿಕ್ಷೆಬೇಡು.
ತಿರುಳು=ಸಾರ, ಮರ್ಮ.
ತಿರೋಧಾನ=ಮುಚ್ಚುವದು, ವ್ಯವಧಾನ
ತಿರ್ಯಗ್ಜಾತಿ=ಪಕ್ಷಿಗಳು.
ತಿಳಿವು=ಜ್ಞಾನ.
ತಿಂಥಿಣಿ=ಸಮೂಹ, (೨) ದಟ್ಟ.
ತೀರ್ಚು=ತೀರಿಸು, ಮುಗಿಸು, (೨) ದೂರಮಾಡು.
ತೀವು=ತುಂಬು.
ತುರಿ=ಕಜ್ಜಿ.
ತುರು=ಆಕಳು.
ತುಂಬೆ=ಗುಂಗೀಹುಳ.
ತುಂಬು=ಕೆರೆಯು ಕೋಡಿ.
ತೂರ್ಯ (ತುರೀಯ)=ಸಂತೋಷ, ಪರಮಸುಖ, ಮೋಕ್ಷಸುಖ.
ತೂಳ್=ಮುಂದಕ್ಕೆ ಹೋಗು, (೨) ಹೊರಗೆ ಹಾಕು.
ತೂಳು=ಮೇಲೆ ಬರುವದು, ಉರವಣೆ, ಹಲ್ಲೆ.
ತೆತ್ತಿಗ=ಹಿತಸ್ತ, ಮಿತ್ರ.
ತೆರ=ರೀತಿ.
ತೆರಹು=ಸ್ಥಳ, (೨) ಬರಿದಾದ ಸ್ಥಿತಿ, (೩) ವೇಳೆ.
ತೆರು=ಕೊಡು.
ತೆರೆ = ನಿರಿಗೆ.
ತೆಂಟು=ಅಲುಗಾಡಿಸು.
ತೈಲ=ಎಣ್ಣೆ.
ತೊತ್ತಳ=ತುಳಿಸಲ್ಪಡುವದು.

ತೊಡರು=ಸರಪಳಿ, (೨) ಪದಕ, (೩) ಆಭರಣ (೪) ಬೇಡಿ, ಶೃಂಖಲೆ.
ತೊಡಹು=ಲೇಪ, (೨) ಆಭರಣ.
ತೊಡು=ಬೀಳು, (೨) ವಹಿಸು.
ತೊಡೆ=ಅಳಿಕಿಸು, ಒರಿಸು, ತೊಳೆ
ತೊಡೆಹ=ಮೇಲೆ ಹಚ್ಚುವದು, (೨) ಗಿಲಾಯಿ, ಗಿಲೀಟು.
ತೊರೆ=ನದಿ.
ತೊಂಟಿ=ಗೊಂಚಲು.
ತೋಟಿ=ಕಾಳಗ.
ದಕ್ಕನೆ=ಕೂಡಲೆ, (೨) ರಭಸದಿಂದ.
ದಮೆ=ಮನಸ್ಸು ಬಿಗಿಹಿಡಿಯುವದು.
ದರದುರ=ಶಂಕೆ, ಅಂಜಿಕೆ.
ದನಿ=ಮೊಣಚಾದ ಗೂಟ.
ದಳ್ಳುರಿ=ದೊಡ್ಡ ಉರಿ.
ದಂದುಗ=ತೊಂದರೆ, ಶ್ರಮ.
ದ್ವಂದ್ವ=ಪರಸ್ಪರ ವಿರೋಧ, (೨) ಭಿನ್ನತೆ.
ದಾವರ=ದಾಹ, ಉಷ್ಣತೆ, ನೀರಡಿಕೆ, (೨) ಬಯಕೆ, ಇಚ್ಛೆ.
ದಾವಾನಲ=ಬೇಗೆ.
ದ್ವಾರವಟ್ಟ=ಹೊಸ್ತಿಲ.
ದಿಕ್ಕರಿ=ದಿಗ್ಗಜ.
ದಿಟಪುಟ=ನಿಶ್ಚಯ, ಗಟ್ಟಿತನ, ಧೈರ್ಯ.
ದಿಬ್ಯ=ದಿವ್ಯ, ದೇವರಿಗೆ ಸಂಬಂಧಿಸಿದ, (೨) ಶ್ರೇಷ್ಠವಾದ, ಸುಂದರ.
ದಿಮ್ಮಿತ್ತು=ಗಡುತರವಾದ, ದೊಡ್ಡ, ಭಾರವಾದ.
ದಿಂಡು=ತಲೆಹೋದ ಶರೀರ.
ದಿಂಡುಗೆಡೆ=ತೊಲೆಯಂತೆ ನೆಲಕ್ಕೆ ಬೀಳು
ದಿಂಡೆ=ದುಂಡಾದ ದೊಡ್ಡ ಕಲ್ಲು, (೨) ಬುದ್ಧಿ ಇಲ್ಲದವ, ಅಜ್ಞಾನಿ.
ದೀಪ್ತಿ = ಪ್ರಕಾಶ.
ದುಕೂಲ=ವಸ್ತ್ರ.
ದೃಢೀಕರಿಸು=ನಿಶ್ಚಯಿಸು.
ದೃಷ್ಟ=ಕಾಣುವ ಪದಾರ್ಥ, (೨) ಉದಾಹರಣೆ, ದೃಷ್ಟಾಂತ.
ದೇಸಿವಡೆ=ಶ್ರೇಷ್ಠವಾಗು.
ದೇಹಾರ=ಕೆಟ್ಟಗತಿ.
ದೈವ=ದೇವರು.
ದೊರೆ=ಶ್ರೇಷ್ಠವಾದ, ಮಹತ್ತಾದ, (೨) ಸಮವಾದದ್ದು, (೩) ಹೋಲಿಕೆಯುಳ್ಳದ್ದು.
ಧವಳ=ಶುಭ್ರ, ಬಿಳೀ.
ಧಾತು=ಧೈರ್ಯ, ಗಟ್ಟಿತನ.
ಧಾವತಿ=ಶ್ರಮ.
ನಚ್ಚು=ನಂಬು.
ನಟ್ಟ=ಮಧ್ಯ.
ನಟ್ಟುವ=ಕುಣಿಯುವವ.
ನಡೆವೆಣ=ನಡೆಯುವ ಹೆಣ.
ನನೆ=ಮೊಗ್ಗು, ಹೂವು.
ನನ್ನಿ=ಪ್ರೀತಿ, (೨) ಸತ್ಯ.
ನಮ=ಸೂಕ್ಷ್ಮ, (೨) ಮೆತ್ತನ್ನ.
ನಮೆ=ಕೃಶವಾಗು.
ನಲ್ಲ=ಸವಿಯಾದ, (೨) ಗಂಡ.
ನಲುಗು=ಅಲುಗಾಡು, ಮುದ್ದಿಯಾಗು, ಅಶಕ್ತನಾಗು.

ನವನೀತ=ಬೆಣ್ಣೆ.
ನಳಿ=ಮೃದು.
ನಂಜು=ವಿಷ.
ನ್ಯಸ್ತ=ಇಡಲ್ಪಟ್ಟ.
ನಾಡೆ = ಅಧಿಕವಾಗಿ.
ನಾಣು=ನಾಚಿಕೆ.
ನಾಣ್ನುಡಿ=ಗಾದೇಮಾತು.
ನಾಯಕ=ಒಡೆಯ, (೨) ಶ್ರೇಷ್ಠ
ನಿಚ್ಚ=ನಿತ್ಯ.
ನಿಚ್ಚನಿಚ್ಚ=ಯಾವಾಗಲೂ.
ನಿಡು=ಸರಳವಾದ, ನೆಟ್ಟನ್ನ.
ನಿಧಾನ=ದ್ರವ್ಯ ಸಂಚಯ.
ನಿಬ್ಬಿಗ=ಶಾಂತ, ಸೌಮ್ಯ.
ನಿಬ್ಬೆರಗು=ಗಟ್ಟಿಯಾಗಿ ಕೂಡುವದು. (೨) ಐಕ್ಯತೆ.
ನಿಬ್ಬೆರಿಸು=ಪೂರ್ಣವಾಗಿ ಕೂಡು, ಸಮರಸವಾಗು.
ನಿಯತ=ಬಿಗಿಯಾದ, ಬಿಗಿಹಿಡಿದ.
ನಿರವಯ=ನಿರಾಕಾರ, ಬಯಲು.
ನಿರಾಳ=ಅಲುಗಾಡದ ಸ್ಥಿತಿ, ಸಮಾಧಾನ ಸ್ಥಿತಿ, (೨) ಸ್ವಚ್ಛ, ಶುದ್ಧ.
ನಿರಿಗೆ=ರೀತಿ, ಸ್ಥಿತಿ, ವ್ಯವಸ್ಥೆ.
ನಿರುತ=ಸತ್ಯವಾದದ್ದು (೨) ತಪ್ಪದಿರುವದು.
ನಿರೂಪ=ಆಜ್ಞೆ, ಅಪ್ಪಣೆ.
ನಿರಂಜನ=ಶುದ್ಧವಾದ.
ನಿರ್ಮಾಲ್ಯ=ಅರ್ಪಿಸಿ ಉಳಿದದ್ದು.
ನಿರ್ಮೋಹ=ಮೋಹರಹಿತವಾದ ಸ್ಥಿತಿ.
ನಿರ್ಲೇಪ=ಸಂಬಂಧವಿಲ್ಲದ್ದು.
ನಿರ್ವಾಣ (ನಿರ್ಯಾಣ)=ಮೋಕ್ಷ, ಕೈವಲ್ಯ.
ನಿಲವು=ಸ್ಥಿತಿ.
ನಿಲುಗಡೆ=ಸ್ಥಿತಿ, ರೀತಿ, ಸ್ವರೂಪ.
ನಿವಾಳಿ=ತಿರುಗಿಸುವದು.
ನಿಶ್ಚಟ=ಯೊಯಿದಾಡದ.
ನಿಷ್ಪತ್ತಿ=ತಿಳಿದುಕೊಳ್ಳುವದು (೨) ಜ್ಞಾನ, (೩) ತೋರಿಕೆ.
ನಿಸ್ಪೃಹ=ಆಶೆ ಇಲ್ಲದವ (೨) ನಿರ್ಭಿಡೆ.
ನಿಸ್ಸೀಮ=ಮೇರೆ ಇಲ್ಲದ.
ನಿಹಿತ=ಇಡಲ್ಪಟ್ಟ.
ನಿಕ್ಷೇಪ=ಇಡಲ್ಪಟ್ಟ ವಸ್ತು, (೨) ದ್ರವ್ಯ.
ನೀಗು=ದೂರಮಾಡು.
ನೀಳ=ಉದ್ದ, ದೊಡ್ಡ.
ನುಸಿ=ದೂಳು, (೨) ನಿರ್ಬಲತೆ.
ನೆಗಳಿಸು=ತೋರಿಸು.
ನೆನಹು=ಕಲ್ಪನೆ, (೨) ಧ್ಯಾನ.
ನೆಯಿ=ತುಪ್ಪ.
ನೆರವಿ=ಸಮೂಹ.
ನೆರಳು (ನೆಳಲು)=ಆಶ್ರಯ.
ನೆರೆ=ಕೂಡು (೨) ವಿಶೇಷವಾಗಿ.
ನೆಲೆ=ಮರ್ಮ.
ನೆಲೆವನೆ=ಉಪ್ಪರಿಗೆ.
ನಿವಾತ=ಹವೆ ಇಲ್ಲದ ಸ್ಥಳ.
ನೇಣು=ಹಗ್ಗ.
ನೇಹ=ಪ್ರೀತಿ.
ನೊಸಲು=ಹಣೆ.
ನೋನು (ನೂನು)=ಬೇಡಿಕೊಳ್ಳು (೨) ಹರಿಕೆಹೊರು (೩) ಪೂಜೆಮಾಡು.

ನೋಂಪಿ=ಹರಿಕೆ (೨) ಪೂಜೆ.
ನಿಃ=ಹೊರಗೆ (೨) ದೂರ (೩) ವಿಶೇಷ (೪) ಹೊರ್ತು (೫) ಮೀರಿದ.
ಪಚ್ಛಡಿಸು=ಅಲಂಕರಿಸು (೨) ಛೋವಾ ಖು ಹಾಕು.
ಪಜ್ಝಳಿಸು=ತಳತಳಿಸು.
ಪಟುತರ=ತೀಕ್ಷ್ಣ.
ಪಡಿಪುಚ್ಚ=ಸಂಶಯು.
ಪತ್ತಿಗ=ಸ್ನೇಹಿತ (೨) ಭಾಗೀದಾರ.
ಪತ್ರ=ಎಲೆ.
ಪತಿಕರಿಸು=ತಿರುಗಿ ಕೊಡು (೨) ಸಹಾ ಯುಮಾಡು (೩) ಅನುಕೂಲಮಾಡಿಕೊಳ್ಳು
ಪದೆ=ಇಚ್ಛೆ ಪಡು.
ಪದ್ಮ=ಕಮಲ.
ಪರ=ಮೀರಿದ, ಶ್ರೇಷ್ಠ, (೨) ಎರಡನೆ.
ಪರಾಂಬರಿಸು=ಲಕ್ಷಗೊಡು (೨) ಶೋಧಿ ಸು.
ಪರಿಚ್ಛೇದ=ಭಾಗಮಾಡುವದು (೨) ತಿಳು ವಳಿಕೆ (೩) ಯುಕ್ತವಾದದ್ದು.
ಪರಿಣಮಿಸು=ಫಲವಾಗು (೨) ಆನಂದ ಪಡು.
ಪರಿಣಾಮ=ಅಂತ್ಯ (೨) ಸಂತೋಷ.
ಪರಿತೋಷ=ಆನಂದ.
ಪರದಾರ=ವ್ಯಭಿಚಾರ.
ಪರಿಜು=ವೇಷ.
ಪರಿಭವ=ಅಪಮಾನ.
ಪರಿಭಾವ=ವಿಚಾರ (೨) ಅಲಕ್ಷಮಾಡು ವದು (೩) ಅವಮಾನ.
ಪರಿಮಳ=ಸುವಾಸನೆ.
ಪರಿವರ್ತನೆ=ತಿರುಗುವದು.
ಪರಿಷ್ಕರಿಸು=ಸಿದ್ಧಗೊಳಿಸು (೨) ಪೂರ್ಣ ಮಾಡು.
ಪರ್ಯಾಯ=ರೀತಿ, ವಿಧ, ರೂಪ.
ಪಲಲ=ರೊಜ್ಜು, (೨) ಮಾಂಸ.
ಪಲ್ಲಟ=ಬದಲು, ಭೇದ.
ಪಲ್ಲಯಿಸು=ಮೊಳಕೆ ಒಡೆ.
ಪವಡಿಸು=ಮಲಗು.
ಪವನ=ಗಾಳಿ.
ಪಸಾರ=ಒಡಿವೆ, (೨) ಮಾರತಕ್ಕ ಪದಾರ್ಥ.
ಪಂಕ=ಕೆಸರು.
ಪ್ರಕೃತಿ=ನಿಜಸ್ಥಿತಿ, (೨) ಸ್ವಭಾವ, (೩) ಮೂಲದ್ರವ್ಯ.
ಪ್ರಚ್ಛನ್ನ=ಗುಪ್ತ.
ಪ್ರಣುತೆ=ಪಣತೆ.
ಪ್ರತಿ=ಎರಡು, ಇದಿರು, ವಿರುದ್ಧ, ಸಮ ವಾದ, ಜೋಡು.
ಪ್ರತಿಷ್ಠ=ಸ್ಥಾಪಿಸಲ್ಪಟ್ಟದ್ದು, (೨) ಶ್ರೇಷ್ಠವಸ್ತು.
ಪ್ರಭವಿಸು=ಹುಟ್ಟು.
ಪ್ರಭೆ=ಪ್ರಕಾಶ
ಪ್ರಮೇಯ=ತಿಳಿಯತಕ್ಕ ವಸ್ತು.
ಪಾಕ=ಕುದಿಸಿದ.
ಪಾಕುಳ=ಪ್ರಕಾಶ, (೨) ತರ, ರೀತಿ.
ಪಾತೆ=ಮಡಿ.
ಪಾಯು=ಶಿಶ್ನ.
ಪಾರಂಪರ್ಯ=ಕ್ರಮಕ್ರಮವಾಗಿ,

ಬಂದೇಸವನೆ, (೨) ಅಂತ್ಯ.
ಪಾರು=ಇಚ್ಛಿಸು, (೨) ಜಿಗಿ.
ಪಾವುಗೆ=ಮಚಿ ಜೋಡು.
ಪಾವುಡ=ಪಡದೆ.
ಪಾಂಸೆ=ಹಾವಸೆ.
ಪಿಪಾಂಸೆ=ನೀರಡಿಕೆ.
ಪಿಪೀಲಿಕ=ಇರುವೆ.
ಪಿಸುಣ=ಜೀನತನ, (೨) ಚಾಡಿಕಾರ.
ಪೀತ=ಹಳದಿ.
ಪುಂಜ=ಗುಂಪು.
ಪುಟ=ಹಾರುವ, (೨) ಹಾರುವಿಕೆ.
ಪುಟವಿಡು=ಬೆಂಕಿಯಲ್ಲಿ ಹಾಕು.
ಪುದುಕುಳಿಗೊಳ್ಳು=ಆಚ್ಛಾದಿಸಲ್ಪಡು,
(೨) ತೊಂದರೆಗೆ ಒಳಗಾಗು.
ಪುನುಗು=ಕಸ್ತೂರಿ.
ಪುರುಳು=ಯೋಗ್ಯವಾದದ್ದು, ಶಕ್ತಿ, ಸಾರ
ಪೂರಣ=ತುಂಬಿದ.
ಪೂರ್ವಾಶ್ರಯ=ಹಿಂದಿನ ಸ್ಥಿತಿ.
ಪೆರತು=ಎರಡನೆಯದು.
ಪೆಂಪು=ಸೌಂದರ್ಯ.
ಪೊಣ್ಮು=ಏಳು, ಹೊರಬೀಳು.
ಪೊಡವಿ=ಪೃಥ್ವಿ.
ಪೊರ್ದು=ಹೊಂದು, (೨) ಬರು.
ಫೇನ=ಬುರುಗು.
ಬಗಿ=ಹರಿ, (೨) ಅಗಿ, (೩) ಇಬ್ಭಾಗ
ಮಾಡು.
ಬಗೆ=ಇಚ್ಛಿಸು, (೨) ತಿಳಿ, (೩) ಮನಸ್ಸು.
ಬಚ್ಚ=ತೆರೆದ.
ಬಚ್ಚಣಿ=ಸಣ್ಣ ಹುಡುಗ, (೨) ಅಜ್ಞಾನಿ.
ಬಜಾವಣೆ=ಬಾರಿಸುವುದು.
ಬಟ್ಟೆ=ದಾರಿ.
ಬಡ=ಕ್ಷುದ್ರ, ಸಣ್ಣ.
ಬಡತನ=ಸೂಕ್ಷ್ಮತೆ.
ಬಡಿವಡೆ=ಹೊಡೆಯಲ್ಪಡು.
ಬಣಬೆ=ಬಣಿವೆ.
ಬಣಗು=ಕ್ಷುಲ್ಲಕ.
ಬಣ್ಣಕ=ವೇಷಧಾರಿ.
ಬಧಿರ=ಕಿವುಡ.
ಬಯಚಿಡು=ಗುಪ್ತವಾಗಿಡು.
ಬಯಲು=ಆಕಾಶ.
ಬರಬರ=ತೀವ್ರವಾಗಿ.
ಬರು=ಬರಿದಾದ, (೨) ವ್ಯರ್ಥ.
ಬಲಗೊಳ್ಳು=ಪ್ರದಕ್ಷಿಣ ಹಾಕು.
ಬಲಿ=ಗಟ್ಟಿಯಾಗು.
ಬಲುಹು=ಗಟ್ಟಿತನ, ಶಕ್ತಿ, ಸಾಮರ್ಥ್ಯ.
ಬಲ್ಲತನ=ಜಾಣ್ಮೆ, (೨) ಗಟ್ಟಿತನ, (೩)
ಶೌರ್ಯ, (೪) ಜ್ಞಾನ.
ಬಲ್ಲಹ=ಜ್ಞಾನಿ.
ಬಲ್ಲಿದ=ಶಕ್ತಿಯುಳ್ಳವ.
ಬಸಿರು=ಹೊಟ್ಟೆ.
ಬಹಿಷ್ಕರಿಸು=ಹೊರಗೆಹಾಕು.
ಬಳಸು=ಉಪಯೋಗಿಸು (೨) ಸುತ್ತುಗಟ್ಟು
ಬಳಿ=ಒರಿಸು, ಹಚ್ಚು, (೨) ವಂಶ.
ಬಳಿವಳಿ=ಹಾದಿ, (೨) ವಂಶ.
ಬಳ್ಳ=ಶೇರು, (೨) ಮಾಪು.
ಬಂಕ=ಅಗಸೆಯ ಬಾಗಿಲು.
ಬಂಟ=ಸೇವಕ, (೨) ಶೂರ.
ಬಂದಿಗಟ್ಟೆ=ಬಂಧನಮಾಡುವವ.

ಬಂಡು=ಪರಾಗ.
ಬಂದುಗೆ=ಒಂದು ತರದ ಗಿಡ.
ಬ್ರತಿ=ವ್ರತಸ್ಥ.
ಬಾತೆ=ಸ್ಥಿತಿ, (೨) ಉದ್ಯೋಗ, (೩) ಉಪಯುಕ್ತತೆ.
ಬಾರ=ತೊಗಲಿನ ಪಟ್ಟಿ.
ಬಾಸಣಿಸು=ಮುಚ್ಚು.
ಬಾಹಿರ=ಹೊರಗೆ.
ಬಾಳ=ಖಡ್ಗ.
ಬಿಜಯಂಗೈಸು=ಬರು, ಆಗಮಿಸು.
ಬಿತ್ತು=ಬೀಜ.
ಬಿನುಗು=ಕ್ಷುದ್ರ.
ಬಿನ್ನಾಣ=ವಿಜ್ಞಾನ, ಜ್ಞಾನ (೨) ಜಾಣತನ (೩) ರೀತಿ, ಹದ, (೪)ಯುಕ್ತಿ.
ಬಿಮ್ಮು=ಹೆಚ್ಚುವಿಕೆ (೨) ಸೊಕ್ಕು.
ಬಿಸಜ=ಕಮಲ.
ಬಿಸವಂದ=ಆಶ್ಚರ್ಯ.
ಬೀಗಿವರೆ=ಹೆಚ್ಚಾಗು, ಬೆಳೆ.
ಬೀಗು=ಉಬ್ಬು, ಗರ್ವಿಸು.
ಬೀದಿವರೆ=ಮನಸ್ಸಿಗೆ ಬಂದಂತೆ ಪಸರಿಸು.
ಬೀರು=ಪಸರಿಸು, ತುಂಬು.
ಬೀಸರ=ನಾಶ (೨) ಬೇಸರ.
ಬೀಸು=ಒಗೆ, ತೊಳೆ.
ಬುದ್ಬುದ=ಗುಳ್ಳೆ.
ಬೂಟಕ=ಸುಳ್ಳುಹೇಳುವವ, (೨) ವೇಷಧಾರಿ, (೩) ಬಢಾಯೀ ಹೇಳುವವ.
ಬೆಕ್ಕಸ=ಆಶ್ಚರ್ಯ.
ಬೆಚ್ಚು=ಬೆರಸು, (೨) ಅಂಜು, (೩) ಬೆಸಿಗೆ.

ಬೆಟ್ಟವಾಗಿ=ಗಟ್ಟಿಯಾಗಿ (೨) ಹೆಚ್ಚಾಗಿ.
ಬೆಡಗು=ಸೌಂದರ್ಯ.
ಬೆನಕ=ವಿನಾಯಕ, ಗಣಪತಿ.
ಬೆಬ್ಬಳಿಸು=ವ್ಯಾಕುಲಪಡು.
ಬೆರಗು=ಕೂಟ, ಸಂಯೋಗ. (೨) ಎತ್ತರ. (೩) ಆಶ್ಚರ್ಯ.
ಬೆರಣಿ=ಕುಳ್ಳು.
ಬೆರಸಿ=ಕೂಡಿ.
ಬೆರೆ=ಕೂಡು, (೨) ಗಟ್ಟಿಯಾಗಿರು (೩) ಸೊಕ್ಕಿನಿಂದ ನಡೆ.
ಬೆವಹಾರ=ವ್ಯವಹಾರ, ವ್ಯಾಪಾರ.
ಬೆಸ=ಆಜ್ಞೆ, (೨) ಇಜ್ಜೋಡು, ಅಸಮ.
ಬೆಸಗೊಳ್ಳು=ಪ್ರಶ್ನೆಮಾಡು.
ಬೆಸಲು=ಹುಟ್ಟು.
ಬೆಳಗು=ಪ್ರಕಾಶ.
ಬೆಳಸು=ಬೆಳೆ.
ಬೆಳ್ಳಕ=ಬಿಳಿದಾದ ವರ್ಣ.
ಬೆಂಗುಂಡ=ಚುಕ್ಕಾಣಿ (೨) ಲಂಗರ.
ಬೆಂಬಳಿ=ಜೋಡು, (೨) ಸ್ನೇಹ, (೩) ಸಾಮೀಪ್ಯ.
ಬೇಗೆ=ಕಾವು.
ಬೇಟ=ಆಶೆ (೨) ವಿರಹ.
ಬೇಹ=ಬೇಕಾದ, (೨) ಬೇಡುವ.
ಬೇಹು=ಸುದ್ದಿಗಾರ.
ಬೇಳುವೆ=ಆಶ್ಚರ್ಯಚಕಿತವಾದ ಸ್ಥಿತಿ.
ಬೈಚಿಡು=ಮುಚ್ಚು.
ಬೊಕ್ಕಣ=ಕಿಸೆ, ಚೀಲ.
ಬೊಬ್ಬುಲಿ=ಜಾಲೀಗಿಡ.

ಬೊಳ್ಳಿಗ=ಬಢಾಯೀ ಹೇಳುವವ.
ಬೋಧಾ=ಉಪದೇಶ.
ಭವ=ಪ್ರಪಂಚ, ಸಂಸಾರ.
ಭವಿ=ಪ್ರಪಂಚದಲ್ಲಿ ಮುಳುಗಿದವ (೨) ಸಂಸಾರಿ.
ಭಂಗ=ಅಪಮಾನ.
ಭಂಡ=ನಾಚಿಕೆ ಇಲ್ಲದವ (೨) ಅಪಮಾನ (೩) ಚೇಷ್ಟೆ (೪) ಪಾತ್ರೆ.
ಭಾಜನ=ಪಾತ್ರ (೨) ಗುರಿ.
ಭಾರಣೆ=ಜಡವಾದದ್ದು.
ಭಾವಜ್ಞ=ಭಾವ ತಿಳಿದವ, ಜ್ಞಾನಿ.
ಭಿತ್ತಿ=ಗೋಡೆ.
ಭಿನ್ನವಿಡು=ಬೇರೆಯಾಗಿ ತಿಳಿ.
ಭುಕ್ತಿ=ಅನುಭೋಗ (೨) ಅನುಭವ.
ಭೂತಾಟಿಕೆ=ಸುಳ್ಳುತನ.
ಭೇಡುಕ=ಕಪ್ಪೆ.
ಭೇದಿಸು=ತಿಳಿ.
ಭೇರಿಗೆ=ನಗಾರಿ.
ಭೈತ್ರ=ನಾವು, ಡೋಣಿ.
ಮಚ್ಚು=ಪ್ರೀತಿ.
ಮಡಗು=ಇಡು (೨) ಮುಚ್ಚಿಡು.
ಮಡಲು=ಉಡಿ.
ಮಡಿಕೆ=ಗಡಿಗೆ.
ಮಣಿಹ=ಅಧಿಕಾರ (೨) ಕಾರ್ಯ.
ಮತ್ತರ=ಭೂಮಿಯ ಒಂದು ಅಳತೆ.
ಮಥನ=ಕಡೆಯುವದು.
ಮದ್ದು=ಔಷಧ.
ಮನದೆಗೊಳ್ಳು=ವಿಶ್ವಾಸಿಸು.
ಮನ್ನಣೆ=ಮಾನ.
ಮನ್ನೆಯ=ಶೂರ (೨) ಮಾನ್ಯ.
ಮಮಕರಿಸು=ಒಳಕೊಳ್ಳು (೨) ಪ್ರೀತಿಸು.
ಮರೀಚ=ಕಿರಣ.
ಮರೀಚಕಾಜಲ=ಬಿಸಿಲ್ಗುದುರೆ.
ಮರುಜೀವಣಿ=ತಿರುಗಿ ಜೀವಕೊಡುವಂಥಾದ್ದು, ಸಂಜೀವನೀ ಬೇರು.
ಮರೆಗನ್ನಡ=ರಾವುಗನ್ನಡಿ.
ಮಲೆ=ಅಡವಿ.
ಮಸಕ=ಮನಸ್ಸಿನ ಹೊಯ್ದಾಟ (೨) ಇಂದ್ರಿಯ ವಿಕಾರ (೩) ಸಿಟ್ಟು.
ಮಸಿ=ಕಾಡಿಗೆ (೨) ಇದ್ದಲಿ.
ಮಹ (ಮಹತ್)=ದೊಡ್ಡದು (೨) ಪರಮಾತ್ಮ.
ಮಹಂತರು=ದೊಡ್ಡವರು (೨) ಮಠಸ್ತರು.
ಮಂಡೆ=ತಲೆ.
ಮಾಟ=ಕ್ರಿಯೆ.
ಮಾಡ=ದೊಡ್ಡಮನೆ, (೨) ಅರಮನೆ.
ಮಾಣು=ಬಿಡು (೨) ಬೇಡ.
ಮಾಬುದು=ಬಿಡುವುದು.
ಮಾರಾಂತ=ಇದಿರಾಳಿ, ಶತ್ರು.
ಮಾರು=ಪ್ರತಿ, ಬದಲು.
ಮಾರ್ಗ=ಹುಡುಕುವದು (೨) ರೂಢಿ (೩) ದಾರಿ (೪) ದೃಶ್ಯವಾದದ್ದು, ಬಾಹ್ಯವಿದ್ದದ್ದು.
ಮಾಸಾಳು=ಶೂರ ಪುರುಷ.
ಮಾಳವಿ=ಶ್ರಾದ್ಧ.

ಮಾಳ್ಕೆ=ರೀತಿ.
ಮಾಂಜಿಷ್ಟ=ಕೆಂಪುವರ್ಣ.
ಮಿಟ್ಟೆ=ಎತ್ತರವಾದ ಸ್ಥಲ, ದಿನ್ನೆ.
ಮಿಸುನಿ=ಬಂಗಾರ.
ಮಿಳ್ತು=ಮೃತ್ಯು.
ಮೀನಕೇತನ=ಕಾಮ.
ಮೀಯು=ಸ್ನಾನಮಾಡು.
ಮೀಸಲ=ಶುದ್ಧ.
ಮುಡಿ=ಕೂದಲು.
ಮುಡಿಗೆ=ಬಾಗುವದು, (೨) ನಾಶ.
ಮುಡುಹು=ಭುಜ.
ಮುನ್ನ=ಮೊದಲು.
ಮುಪ್ಪುರ=ತ್ರಿಪುರ.
ಮುಯ್=ತಿರಿಗಿ ತೆಗೆದುಕೊಳ್ಳುವದು, (೨) ಲಾಭ.
ಮುರುಟು=ಮುರಿಗಿಯಾಗು.
ಮುರುಡು=ಹುರಬರಕುಸ್ಥಿತಿ.
ಮುರುಹ=ಮಾಂಸ.
ಮುಸುಡಿ=ಮೋರೆ.
ಮುಂಚು=ಮುಂದಕ್ಕೆ ಹೋಗು.
ಮುಂಡಿಗೆ=ಒಂದು ಆಹ್ವಾನಚಿನ್ಹ.
ಮೂಕೊರಿತೆ=ಮೂಗು ಕೊಯ್ಯಲ್ಪಟ್ಟವಳು.
ಮೂಗಿ=ಮೂಕಿ.
ಮೂಗುವಡು=ಮಾತನಾಡದಿರು.
ಮೂರ್ತಿಗೊಳ್ಳು=ಕಂಡುಬರು.
ಮೂಲಿಗ=ಪೂರ್ವಜ.
ಮೂಳೆ=ಎಲಬು.
ಮೃತ್=ಮಣ್ಣು.
ಮೆಟ್ಟು=ಹೆಜ್ಜೆ.
ಮೆಯ್ಗೆಡು=ಶರೀರವನ್ನು ಉಬ್ಬಿಸು, (೨) ಉಲ್ಹಾಸಬಡು.
ಮೆಯ್ದೆಗೆ=ಹಿಂದೆಸರಿ.
ಮೆಯ್ಯಾನು=ದುಡಿ, (೨) ಶರೀರವನ್ನು ತೋರಿಸು, (೩) ನಮಸ್ಕಾರ ಮಾಡು.
ಮೆಳೆ=ಗಿಡಗಳ ಗುಂಪು.
ಮೇಣು=ಮತ್ತು.
ಮೇಲು=ಶ್ರೇಷ್ಠಪದವಿ.
ಮೇಳ=ಸಮೂಹ, ಕೂಟ.
ಮೇಳಾಪ = ಸಮೂಹ.
ಮೈಸಿರಿ=ಶೃಂಗಾರ.
ಮೊಗೆ=ತುಂಬು.
ಮೊತ್ತ=ಗುಂಪು.
ಮೊದಲು=ಮೂಲಧನ, ಮುದ್ದಲು.
ಮೊನೆ=ಹದನ, (೨) ತುದಿ, (೩) ಕಾಳಗ.
ಮೊಗೆ=ದುಃಖ.
ಮೊಳಗು=ಗರ್ಜಿಸು.
ಮೋಟ=ಮೊಂಡ ಅವಯವಗಳುಳ್ಳವ.
ಮೋಟು=ಗಿಡದ ಬೊಡ್ಡಿ.
ಯಮಿ=ತಪಸ್ವಿ.
ರಚ್ಚೆ=ಬೈಯ್ಯುವದು, (೨) ಕೀಳುನುಡಿ.
ರವೆ=ಸೂಕ್ಷ್ಮ ಪದಾರ್ಥ.
ರಸ=ಪಾರಜ.
ರಸನೆ=ನಾಲಿಗೆ.
ರಾಟಣ=ಚಕ್ರ.
ರುಜೆ=ಬೇನೆ.

ರೂಹು=ರೂಪು, ಆಕಾರ.
ರೇಣು=ಧೂಳಿಯ ಕಣ.
ರಂಜನೆ=ಹೊರಗಿನ ಅಂದಚಂದ, ಡೌಲು.
ಲೇಪ=ಸಂಬಂಧ.
ಲೇಸಿಗ=ಹಿತಸ್ತ.
ಲೊಟ್ಟೆ=ಪೊಳ್ಳು, ಬರಿದಾದ.
ಲೋಕಾಚಾರ=ಜನರೂಢಿ.
ಲೋಕಿ=ಲೌಕಿಕ.
ಲೋಗರು=ಜನರು.
ಲೋಚು=ತುರಾಯಿ.
ಲೋಲುಪ್ತಿ=ಪ್ರೀತಿ, ಆಶೆ.
ಲೋಹ=ಕಬ್ಬಿಣ.
ಲಂಗಿಸು=ಹಾರು.
ಲಾಂಛನ=ಗುರ್ತು, ಚಿನ್ಹ.
ಲೆಂಕ=ಸೇವಕ.
ವರ್ಜಿ=ಬಾರಿಸುವದು.
ವಜಿಗೊಳಿಸು=ಬಿಟ್ಟುಬಿಡು.
ವಟ=ಆಲದ ಮರ.
ವರ್ಮ=ಮರ್ಮ.
ವಳಿ=ವಂಶ.
ವಾಯು=ಸುಳ್ಳು, (೨) ಕಾಪಟ್ಯ.
ವಾರಕ=ಅಡ್ಡಬರುವಂಥಾದ್ದು.
ವಾರಿಕಲ್ಲು=ಆಗೇಕಲ್ಲು.
ವಾಸನೆ=ಇಚ್ಛೆ, ಬಯಕೆ.
ವಾಹಕ=ನಡಿಸುವವ.
ವಿಕಳ=ಮನಸ್ಸಿನ ಉದ್ವೇಗ.
ವಿಕೃತಿ=ಪದಾರ್ಥದಲ್ಲಿಯ ಬದಲು, (೨) ಕೆಟ್ಟ ಪರಿಣಾಮ.
ವಿಗರ್ಭಣೆ=ಶಿಟ್ಟು, (೨) ನಿಂದೆ.
ವಿತರಣ=ದಾನ, ಔದಾರ್ಯ.
ವಿಭಾಡ=ನಾಶಮಾಡುವವ.
ವಿಮೋಚನ=ಬಿಡಿಸುವದು.
ವಿರಿಂಚಿ=ಬ್ರಹ್ಮ.
ವಿಲಗ್ನ=ಹೊಂದಿಸಲ್ಪಟ್ಟ.
ವಿವರಿಸಿನೋಡು=ಶೋಧಿಸಿನೋಡು.
ವಿಶ್ರಾಮ=ನಿಲ್ಲುವದು, (೨) ಅಂತ್ಯ, (೩) ವಾಸಸ್ಥಳ.
ವಿಸ್ಕಂದ=ಚಾಂಚಲ್ಯ.
ವಿಂಧ್ಯ=ಪರ್ವತ.
ವೆಜ್ಜ=ತೂತು.
ವೇದ್ಯ=ಗೊತ್ತಾದ.
ವೇಧಿಸು=ಸಂಬಂಧಿಸು.
ವೈತಿಕ=ಕಾಪಟ್ಯ, (೨) ಸುಳ್ಳುತನ, (೩) ಠಕ್ಕತನ.
ವ್ಯತಿಕರಿಸು=ಬೇರೆಮಾಡು.
ವ್ಯವಹರಣೆ=ನಡತೆ.
ವ್ಯಾಪ್ತಿ=ವಿಸ್ತಾರ.
ವ್ಯಾಳೇಶ=ಮಹಾಶೇಷ.
ವ್ಯೋಮ=ಆಕಾಶ.
ಶಠಗ=ಕೆಟ್ಟಮನುಷ್ಯ.
ಶಠೆ=ಸುಳ್ಳು.
ಶಮೆ=ಸಮಾಧಾನ ಸ್ಥಿತಿ.
ಶಿವದಾನ=ಮಜ್ಜಿಗೆ.
ಶುನಿ=ನಾಯಿ.
ಶೃಂಖಲ=ಬೇಡಿ.
ಶೋಣಿತ=ರಕ್ತ.
ಶೌಚ=ಶುದ್ಧಿ.

ಶ್ರಾಂತ=ದಣಿದ.
ಶ್ಲೇಷ್ಮ=ಉಗುಳು, ಲೊದಡಿ.
ಶ್ವೇತ=ಬಿಳೀವರ್ಣ.
ಸಕೃತ್=ಒಮ್ಮೆ.
ಸಣ್ಣಿಸು=ಅರಿ, (೨) ತೊಂದರೆಕೊಡು.
ಸತ್=ಇರುವ ಗುಣವುಳ್ಳದು, (೨) ಉತ್ತಮವಾದದ್ದು.
ಸತ್ತಿಗೆ=ಛತ್ರಿ.
ಸನ್ಮತ=ಒಪ್ಪಿಗೆ.
ಸಮನಿಸು=ಒದಗು.
ಸಮಯ=ಕೂಟ, ಗುಂಪು, ನಿಯಮ, ಸಂಸ್ಥೆ, ಭೇದ, ಸಮಾಜ, ವರ್ಗ, ಜಾತಿ.
ಸಮವೇಧಿಸು=ಒಳಸೇರು.
ಸಮೀರಣ=ವಾಯು.
ಸಯ್=ನಿಲ್ಲಿಸು, ತಡೆ, (೨)ಶಾಂತಮಾಡು
ಸಯ=ಯೋಗ್ಯವಾದದ್ದು, (೨) ತಪ್ಪಿಲ್ಲದೆ ಇರುವ ಸ್ಥಿತಿ, (೩) ಸೌಂದರ್ಯ.
ಸಯ್ತಿಡು=ವ್ಯವಸ್ಥೆಯಿಂದ ಇಡು.
ಸಯ್ಪು=ಪುಣ್ಯ.
ಸರ=ಸ್ವರ.
ಸರಸ=ಚೇಷ್ಟೆ.
ಸರಿ=ಝರಿ, ಬುಗ್ಗೆ, (೨) ಮಳೆ.
ಸಲ್ (ಸಲು)=ಒಳಶೇರು (೨) ಸಾಕಾಗು (೩) ಒದಗು, (೪) ಬಂಧಿಸು.
ಸಸಿನೆ=ನೆಟ್ಟಗೆ, ಸರಳವಾಗಿ, ಕ್ಷೇಮವಾಗಿ, (೨) ಸಮೀಪವಾಗಿ.

ಸಂಚ=ಸಮೂಹ, ಕೂಟ, (೨) ಮರ್ಮ, (೩) ಗುಪ್ತ ವಸ್ತು.
ಸಂಚಲ=ಸಂಚಾರ, (೨) ಚಂಚಲತ್ವ.
ಸಂದಣಿ=ಕೂಡಿಸುವದು, (೨) ಗುಂಪು, (೩) ಸಂಧಾನ.
ಸಂದಿಲ್ಲದೆ=ಬಿಟ್ಟುಬಿಡದೆ
ಸಂದು=ಭೇದ, (೨) ಮರ್ಮ, (೩) ಎರಡು ಪದಾರ್ಥಗಳು ಕೂಡಿದ ಸ್ಥಳ.
ಸಂಪಾದನೆ=ದೊರಕಿಸುವದು, (೨) ಸಂಬಂಧ, (೩) ಸ್ನೇಹ.
ಸಂಪುಟ=ಕೂಡಿಕೊಳ್ಳುವದು, ಮಿಶ್ರವಾಗುವದು, (೨) ಸಂಬಂಧ, ಜೋಡು. (೩) ಪೆಟ್ಟಿಗೆ.
ಸಾರಾಯ=ಮರ್ಮಜ್ಞ.
ಸಾರು=ಸಮೀಪಕ್ಕೆ ಹೋಗು, (೨) ಗಟ್ಟಿಯಾಗಿ ಹೇಳು.
ಸಾಲಿಗ=ನೇಕಾರ.
ಸಾವಧಾನ=ಏಕಾಗ್ರತೆ.
ಸಾವಯ=ಅವಯವ ಸಹಿತವಾದದ್ದು, (೨) ಕಾಣಿಸತಕ್ಕ ಪದಾರ್ಥ.
ಸಾಹಿತ್ಯ=ಜೋಡಣೆ, (೨) ಸಂಬಂಧ,
ಸಾಂದ್ರ=ದಟ್ಟ.
ಸಿಕ್ಕು=ತೊಡಕು.
ಸಿತಗ=ವ್ಯಭಿಚಾರಿ, (೨) ದುಷ್ಟ, (೩) ಪುಂಡ.
ಸಿತಾಳ=ಎಡೆ, ನೈವೇದ್ಯ.
ಸಿಲೆ=ಕಲ್ಲು.
ಸುಗ್ಗಿ=ವಸಂತಕಾಲ, (೨) ಹಬ್ಬ.
ಸುಪ್ಪತ್ತಿಗೆ=ಹಾಸಿಕೆ.

ಸುಪ್ಪಾಣಿ=ಹೊಳವುಳ್ಳ.
ಸುಮ್ಮಾನ=ಆನಂದ, ಸುಖ, (೨) ಗರ್ವ.
ಸುಯಿಧಾನ=ಏಕಾಗ್ರತೆ, ಶಾಂತಿ, ಸಮಾ
ಧಾನ, ಸುಖ.
ಸುರಭಿ=ಆಕಳು.
ಸುರಾಳ=ಯೋಗ್ಯ ವರ್ತನೆ.
ಸುರಿಗೆ=ಕತ್ತಿ.
ಸುಷುಪ್ತಿ=ನಿದ್ರೆ, ಮರವು.
ಸುಳುಹು=ಗತಿ.
ಸೂತ್ರ=ಧಾರ, (೨) ಸಂಬಂಧ.
ಸೂನೆಗಾರ=ಕಟಕ.
ಸೂಸಲ=ಹೊರಚಲ್ಲಿದ್ದು, (೨) ಒಂದು
ತರದ ಅಡಿಗೆ.
ಸೂಳ್=ಸಾರೆ, ಬಾರೆ.
ಸೂಳು=ದೊಡ್ಡ ಧ್ವನಿ.
ಸೆಜ್ಜೆ=ಶಯ್ಯೆ.
ಸೆಳೆ=ಸಣ್ಣ ಕಟ್ಟಿಗೆ.
ಸೇವ್ಯ=ಸೇವಿಸಲ್ಪಟ್ಟ.
ಸೈವೆರಗು=ವಿಶೇಷ ಆಶ್ಚರ್ಯ.
ಸೊಕ್ಕು=ಅಮಲು, ಮದ.
ಸೊಗ=ಸುಖ.
ಸೊಡರು=ದೀಪ, ಬೆಳಕು.
ಸೊಣಗ=ನಾಯಿ.
ಸೊನೆ=ರಸ, (೨) ಮಳೆ.
ಸೊಪ್ಪು=ಎಲೆ.
ಸೊಮ್ಮು=ಒಡವೆ, ದ್ರವ್ಯ.
ಸೊಲ್ಲು=ಧ್ವನಿ.
ಸೊಂಬತನ=ಆಲಸ್ಯ, ಮಂದತ್ವ.
ಸೋಕು=ಸೋಂಕು, (೨) ಸಂಬಂಧ.
ಸೋರ್=ಅಸ್ತವ್ಯಸ್ತವಾದ.
ಸೋರೆ=ಈಸಗುಂಬಳಕಾಯಿ.
ಸೋವು=ಹಾರಿಸು.
ಸ್ನೇಹ=ಜಿಗಟು, (೨) ಮಿತ್ರತ್ವ,
(೩) ಎಣ್ಣೆ.
ಸ್ಫುರಿಸು=ಹಾರು.
ಸ್ವಚ್ಛಂಧ=ಸ್ವೈರ, ಸ್ವತಂತ್ರ.
ಸ್ವಯ=ತಾದಾತ್ಮ್ಯಭಾವವುಳ್ಳ.
ಸ್ವಯಂಭು=ತಾನಾಗಿಯೇ ಇರುವಂಥ
ಸ್ವಭಾವವುಳ್ಳದು.
ಸ್ವಾನುಭಾವ=ಆತ್ಮಜ್ಞಾನ.
ಸ್ವಾಯತ=ಒಳಕೊಂಡಂಥಾದ್ದು (೨)
ನಿಕಟ ಸಂಬಂಧವುಳ್ಳಂಥಾದ್ದು.
ಹಕ್ಕೆ=ವಿಶ್ರಮಿಸುವ ಸ್ಥಳ (೨) ಗೂಡು
ಹಗರಣ=ಚಕ್ಕಂದ, ಡೌಲು (೨) ಆನಂ
ದ (೩) ಡೌಲಿನ ಮಾತು.
ಹಡಲಿಗೆ=ಒಂದು ತರದ ಬುಟ್ಟಿ, ಹರಿ
ವಾಣ, ತಟ್ಟೆ.
ಹಡಿಕಿ=ಹೊಲಸು.
ಹಡುಹು=ಹೊಲಸು.
ಹಣತೆ=ಪಣತೆ.
ಹಣ್ಣು=ಸಿದ್ಧಪಡಿಸು.
ಹತ್ತೆ=ಸಮೀಪ.
ಹದುಳ=ಕ್ಷೇಮ, ಸುಖ
ಹದುಳಿಗ=ಸುಖವುಳ್ಳವ.
ಹಮ್ಮು = ನಾನೆಂಬ ಭಾವ, (೨) ಸೊಕ್ಕು
ಹರಕೆ=ಆಶೀರ್ವಾದ.

ಹರಸು=ಬೇಡಿಕೊಳ್ಳು.
ಹರಿ=ಸಿಂಹ, (೨) ಚಲನೆ, (೩) ವಿಸ್ತಾರ.
ಹರಿತ=ತೀಕ್ಷ್ಣ, (೨) ಒತ್ತರ,
(೩) ಹಚ್ಚನ್ನವರ್ಣ.
ಹರಿವರಿದು=ಸುತ್ತಲು, ವಿಸ್ತಾರವಾಗಿ.
ಹರಿಹಂಚುಮಾಡು=ಒಡೆದು ತುಂಡು ಮಾಡು.
ಹರೆ=ನಗಾರಿ.
ಹಲ್ಲಣ=ಥಡಿ.
ಹಲ್ಲಣಿಸು=ಸಜ್ಜುಗೊಳಿಸು.
ಹಲುಬು=ಶೋಕಮಾಡು.
ಹವಣಿಸು=ಸಿದ್ಧಮಾಡು, (೨) ವ್ಯವಸ್ಥೆ ಗೊಳಿಸು, (೩) ವಿಚಾರಮಾಡು.
ಹವಣು=ಪ್ರಮಾಣ, ಅಳತೆ.
ಹಸರ=ದ್ರವ್ಯ, ಪದಾರ್ಥ.
ಹಸೆ=ಆಸನ, (೨) ಶೃಂಗರಿಸಿದ ಸ್ಥಳ.
ಹಳಚು=ಹೊಡೆ, ಬಡಿ.
ಹಳಿಯ=ಸೇವಕ.
ಹಳು=ಮುರುಕಳಿಗೆ ಬಂದದ್ದು, ನಾಶ ವಾದದ್ದು.
ಹಂಗು=ಋಣದಲ್ಲಿರುವದು,
(೨) ಪರಸ್ಪರಾವಲಂಬನ.
ಹಾರು=ಇಚ್ಛಿಸು, (೨) ನಿರೀಕ್ಷಿಸು.
ಹಾಸು=ಅರಿವೆ, (೨) ಹಾಸಿಕೆ, (೩) ಶ್ರಮೆಪಡು, (೪) ನೇಯಲಿಕ್ಕೆ ಹಾಕಿದ ಉದ್ದ ಎಳೆಗಳು, ಸರಂಳಿ.
ಹಾಹೆ=ಗೊಂಬೆ, ಪಾಪೆ.
ಹಿಚು=ಹಿಂಜರಿಯುವದು

ಹಿಡಿಗೋಲ=ಒಂದು ತರದ ಆಯುಧ.
ಹಿಸುಣ=ಪಿಶುನ.
ಹಿಳಿ=ಹಿಂಡು, (೨) ಮುರಿ, ಒಡೆ.
ಹಿಂಗು=ನಾಶವಾಗು.
ಹೀಲಿ=ನವಿಲುಗರಿ.
ಹುತಾಶನ=ಅಗ್ನಿ.
ಹುದುಗು=ಶೇರು, ಮುಚ್ಚು, (೨) ರಕ್ಷಣೆ,
(೩) ಪಾಲುಗಾರ, (೪) ತುಂಬು.
ಹುದುವಾಳಿಗೆ=ಕೂಡಿ ಇರುವ ಸ್ಥಿತಿ.
ಹುಯ್ಯಲು=ರೋದನ, ಚೀರಾಟ.
ಹುರಮಂಜಿ=ಕೆಂಪುವರ್ಣ.
ಹುರುಡು=ಯೋಗ್ಯತೆ, ಸತ್ವ, ಶಕ್ತಿ, (೨) ಮತ್ಸರ, (೩) ಹೋರಾಟದ ಬುದ್ಧಿ.
ಹೂಸು=ಒರಿಸು, ಹಚ್ಚು.
ಹೂಳು=ಹುಗಿ.
ಹೆಕ್ಕಳಬಡು=ಹೆಚ್ಚಾಗು, (೨) ಮೀರು,
(೩) ಸೊಕ್ಕಿಗೆ ಬರು.
ಹೆಚ್ಚು=ಗರ್ವಿಸು, ಉಬ್ಬು.
ಹೆದ್ದೊರೆ=ದೊಡ್ಡ ಹೊಳೆ.
ಹೆರಸಾರು=ಹೊರಗೆ ಹೋಗು.
ಹೆರೆ=ಹಿಂಜರಿಯುವದು, (೨) ಹೊದಿಕೆ.
ಹೆರೆಹಿಂಗು=ಹಿಂದಕ್ಕೆ ಸರಿ,(೨)ಒಳಸೇರು
ಹೇಮ=ಬಂಗಾರ.
ಹೇರಡವಿ=ದೊಡ್ಡ ಅರಣ್ಯ.
ಹೇವರಿಸು=ಅಸಹ್ಯಪಡು.
ಹೇಳಿಗೆ=ಬುಟ್ಟಿ (೨) ಹಾವಿನ ಬುಟ್ಟಿ.
ಹ್ಯೇಯ=ತಿರಸ್ಕಾರಕ್ಕೆ ಪಾತ್ರ.
ಹೊಡಹೊಮು=ನಮಸ್ಕಾರಮಾಡು.

ಹೊಡೆಗಿರ್ಚು=ದೊಡ್ಡ ಕಿಚ್ಚು.
ಹೊಡೆಗೆಡು=ನೆಲಕ್ಕೆ ಬೀಳು.
ಹೊಡೆವಡು=ನಮಸ್ಕಾರಮಾಡು.
ಹೊದಕುಳಿ=ದುಃಖ, ಸಂತಾಪ.
ಹೊದ್ದು=ಸಂಬಂಧಿಸು, (೨) ಸಂಬಂಧ.
ಹೊನಲು=ಹಳ್ಳ.
ಹೊರಟಿ=ಪೊಳ್ಳಾದದ್ದು, (೨) ನಿರರ್ಥಕವಾದದ್ದು, ಹುರುಳಿಲ್ಲದ್ದು.
ಹೊರಹೊಮ್ಮು=ಹೊರಕ್ಕೆ ಬರು.
ಹೊರೆ=ಕಾಪಾಡು, (೨) ಸಾಮೀಪ್ಯ, ಸೆರೆ. (೩) ಭಾರವಾದದ್ದು, (೪) ತೊಂದರೆ (೫) ಕಾಪಟ್ಯ, (೬) ತಪ್ಪು, (೭) ಕೊಡುವದು.
ಹೊಲಬಿಗ=ಜ್ಞಾನಿ.
ಹೊಲಬು=ರೀತಿ, ಸ್ಥಿತಿ, ಮರ್ಮ, ದಾರಿ, ಜ್ಞಾನ.
ಹೊಲ್ಲ=ಅಯೋಗ್ಯ.
ಹೊಲ್ಲಹ=ಅಯೋಗ್ಯವಾದದ್ದು.
ಹೊಸೆ=ಕಡೆಯು, ಮಂಥನಮಾಡು.
ಹೊಳಹು=ಪ್ರಕಾಶ.
ಹೊಳ್ಳು=ಜೊಳ್ಳು, ಪೊಳ್ಳು.
ಹೋಳಾಗು=ಮುರಿ.
ಕ್ಷಣಿಕ=ಮಿಂಚು.
ಕ್ಷುತ್=ಹಸಿವೆ.
ಕ್ಷೇತ್ರ=ಸ್ಥಳ, (೨) ಹೊಲ.

# ಪರಿಶಿಷ್ಟ ಬ.

## ವಚನಕಾರರ ಹೆಸರುಗಳು ಮತ್ತು ಅವರ ಮುದ್ರಿಕೆಗಳು.

(ಈ ಗ್ರಂಥದಲ್ಲಿ ಉದಹರಿಸಲ್ಪಟ್ಟ ವಚನಕಾರರ ಮುದ್ರಿಕೆಗಳ ಹಿಂದೆ * ಈ ಗುರ್ತು ಮಾಡಲ್ಪಟ್ಟಿದೆ.)

(೧)

೧ ಅರ್ಕೇಶ್ವರ ಲಿಂಗ:—ಮಧುವಯ್ಯ.

* ೨ ಅಖಂಡೇಶ್ವರಾ:—ಷಣ್ಮುಖ ಸ್ವಾಮಿ.

೩ ಅಗಜೇಶ್ವರಲಿಂಗ:—**ಲಕ್ಷ್ಮಮ್ಮ**—ಕೊಂಡೇ ಮಂಚಣ್ಣಗಳ ಪತ್ನಿ.

(೨)

* ೪ ಅಜಗಣ್ಣ:—**ಮುಕ್ತಾಯಕ್ಕ.**

* ೫ ಅಣತಿಯಲಿಂಗ:—ಅಣತೀಚಂದಯ್ಯ.

೬ ಅನಂತಗುರು ಅಲ್ಲಮ ಮಹಾಪ್ರಭು:—ಅನಂತದೇವ.

* ೭ ಅಪ್ಪಣ್ಣ ಪ್ರಿಯ ಚನ್ನಬಸವೇಶ್ವರಾ:—

* ೮ ಅಪ್ರಮಾಣ ಕೂಡಲಸಂಗಮದೇವಾ:—

(೩)

* ೯ ಅಭಿನವ ಚನ್ನಮಲ್ಲಿಕಾರ್ಜುನಾ:—ಕಕ್ಕಯ್ಯ.

* ೧೦ ಅಮರಗುಂಡ ಮಲ್ಲಿಕಾರ್ಜುನಾ:—ಪುರದ ನಾಗಣ್ಣ.

(೪)

* ೧೧ ಅಮರೇಶ್ವರಲಿಂಗ:—

---

(೧) ಅರಿಕೇಶ್ವರ ಲಿಂಗವೆಂತಲೂ ಮುದ್ರಿಕೆಯು ದೊರೆಯುತ್ತದೆ.

(೨) ಅಜಗಣ್ಣ ತಂದೆ ಎಂತಲೂ ಸಿಗುತ್ತದೆ.

(೩) ಒಂದೊಂದು ಕಡೆಗೆ "ಅಭಿನವ ಮಲ್ಲಿಕಾರ್ಜುನಾ" ಎಂದು ಸಿಗುತ್ತದೆ. ಇದು ತಪ್ಪು ಇರುತ್ತದೆಂದು ನನಗೆ ತೋರುತ್ತದೆ. ಯಾಕಂದರೆ "ಮಲ್ಲಿಕಾರ್ಜುನಾ" ಎಂಬ ಅಂಕಿತವುಳ್ಳ ವಚನವು ಸಿಕ್ಕಿರುವದಿಲ್ಲ.

೧೨ ಅಮುಗೇಶ್ವರಲಿಂಗ:—**ರಾಯಮ್ಮ**, ರಾಯಸದ ಮಂಚಣ್ಣಗಳ ಪತ್ನಿ.

* ೧೩ ಅಂಬಿಗರ ಚೌಡಯ್ಯ:—ಚೌಡಯ್ಯ.

* ೧೪ ಅಲೇಕನಾದ ಶೂನ್ಯ ಕಲ್ಲಿನೊಳಗಾದ:—ಭಂಡಾರಿ ಶಾಂತಯ್ಯ.

* ೧೫ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ:—**ರೆಮ್ಮವ್ವೆ**.

* ೧೬ ಆತುರವೈರಿ ರಾಮೇಶ್ವರಾ:—ನಗಿಮಾರಿ ತಂದೆ.

* ೧೭ ಈಶಾನ್ಯ ಮೂರ್ತಿ ಮಲ್ಲಿಕಾರ್ಜುನಲಿಂಗ:—ಶಿವಲೆಂಕ ಮಂಚಣ್ಣ.

(೧)

* ೧೮ ಉರಿಲಿಂಗದೇವ;—ಉರಿಲಿಂಗದೇವ.

* ೧೯ ಉರಿಲಿಂಗ ಪೆದ್ದಿಗಳ ರಸ:—**ಕಾಳವ್ವೆ**, ಉರಿಲಿಂಗ ಪೆದ್ದಿಗಳ ಪತ್ನಿ.

* ೨೦ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ:—ಉರಿಲಿಂಗ ಪೆದ್ದಿ.

* ೨೧ ಉಳಿಯುಮೇಶ್ವರಾ:—ಚಿಕ್ಕಣ್ಣ.

೨೨ ಊರ್ಧ್ವರೇತೋ ಮೂರ್ತಿ ಶ್ವೇತ ಸ್ವಯಂಭು ಕಪಿಲೇಶ್ವರಲಿಂಗ:—ಮಲಹರ ಕಾಯಕದ ಚಿಕ್ಕದೇವಯ್ಯ.

* ೨೩ ಎನ್ನಯ್ಯ ಚನ್ನರಾಮಾ:—ಏಕಾಂತರಾಮಿ ತಂದೆ. (?)

* ೨೪ ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ:—**ಮಹಾದೇವಿ** ಮೋಳಿಗೆ ಮಾರಯ್ಯಗಳ ಪತ್ನಿ.

* ೨೫ ಏಲೇಶ್ವರಲಿಂಗ:—ಏಲೇಶ ಕೇತಯ್ಯ.

೨೬ ಏಕಾಂತರಾಮೇಶ್ವರಲಿಂಗ:—ಏಕಾಂತದ ರಾಮಯ್ಯ.

೨೭ ಏಣಾಂಕಧರ ಸೋಮೇಶ್ವರ:—ಬಿಬ್ಬಿ ಬಾಚಯ್ಯ.

* ೨೮ ಐಘಟದೂರ ರಾಮೇಶ್ವರ ಲಿಂಗ:—ಮೆರೆಮಿಂಡದೇವ.

(೨)

* ೨೯ ಐಘಂಟೇಶ್ವರ ಲಿಂಗ:—ಸತ್ತಿಗೆ ಕಾಯಕದ ಇಟ್ಟಪ್ಪಯ್ಯ.

೩೦ ಕದಂಬ ಕಲಶ ಕೂಡಲಚನ್ನಸಂಗಾ:—

* ೩೧ ಕದಂಬಲಿಂಗ:—ಕಂಭದ ಮಾರಯ್ಯ.

* ೩೨ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ:—ಕದಿರೀಕಾಯಕದ **ರೆಮ್ಮವ್ವೆ**.

---

(೧) ಉರಿಲಿಂಗ ತಂದೆ ಎಂತಲೂ ಇದೆ.

(೨) ಕೆಲವು ಗ್ರಂಥಗಳಲ್ಲಿ ಸತ್ತಿಗೆ ಕಾಯಕದ ಮಾರಿ ತಂದೆಗಳೆಂತಲೂ ಇದೆ.

೩೩ ಕನಕದ ನಾಚಿಲಿಂಗ:—ಕನಕದ ನಾಚಯ್ಯ.

* ೩೪ ಕಪಿಲ ಸಿದ್ಧಮಲ್ಲಿಕಾರ್ಜುನಾ:—ಸಿದ್ಧರಾಮ.

* ೩೫ ಕಮಠೇಶ್ವರ ಲಿಂಗ:—

* ೩೬ ಕಯ್ಯುಳಿಗತ್ತಿ ಅಡಿಗೂಂಟಿ ಕೆಡೆಯಾಗಬೇಡ ಅರಿ ನಿಜಾತ್ಮರಾಮ ರಾಮನಾ:—ಮಾದಾರ ಚನ್ನಯ್ಯ.

* ೩೭ ಕರ್ಮಹರ ಕಾಳೇಶ್ವರಾ:—**ಕಾಳವ್ವೆ**, ಬಾಚಿಕಾಯಕದ ಬಸವಯ್ಯಗಳ ಪತ್ನಿ.

(೧)

* ೩೮ ಕಲಿದೇವರ ದೇವಾ:—ಮಡಿವಾಳ ಮಾಚಿದೇವ.

* ೩೯ ಕಲ್ಯಾಣದ ತ್ರಿಪುರಾಂತಕ ಲಿಂಗದಲ್ಲಿ ಗಾವುದೀ ಮಾಚಯ್ಯ ಹೇಳಿದುದು ಸತ್ಯವೆನ್ನಿರಣ್ಣಾ:—ಗಾವುದೀ ಮಾಚಯ್ಯ.

* ೪೦. ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬ ಲಿಂಗ ನಿರ್ವಾಯ ಪ್ರಭುವೇ:—ಕಾಡಸಿದ್ಧೇಶ್ವರ.

೪೧ ಕಾಮಧೂಮ ಧೂಳೇಶ್ವರಲಿಂಗ:—ಮಾದಾರ ಧೂಳಯ್ಯ.

* ೪೨ ಕಾಮಭೀಮ ಜೀವದನ ದೊಡೆಯ:—ಒಕ್ಕಲು ಮುದ್ದಯ್ಯ.

* ೪೩ ಕಾಮಹರ ಪ್ರಿಯ ರಾಮನಾಥಾ:— ತಳವಾರ ಕಾಮಿದೇವ.

* ೪೪ ಕಾಮೇಶ್ವರಲಿಂಗ:—

* ೪೫ ಕಾಲಕರ್ಮ ವಿರಹಿತ ತ್ರಿಪುರಾಂತಕ ಲಿಂಗ:—ಕಿಲಾರದ ಭೀಮಣ್ಣ.

* ೪೬ ಕಾಲಾಂತಕ ಭೀಮೇಶ್ವರಲಿಂಗ:—ಢಕ್ಕೆಯ ಬೊಮ್ಮಣ್ಣ.

* ೪೭ ಕಾಳಿಲಿಂಗದೇವ:—ಕಾಳಿಲಿಂಗ.

೪೮ ಕಿರಾತೇಶ್ವರಲಿಂಗ:—ಕಿರಾತ ಸಂಗಯ್ಯ.

೪೯ ಕುಪ್ಪಸ ಚಂದೇಶ್ವರಲಿಂಗ:—ಕುಪ್ಪಸದ ಚಂದಯ್ಯ.

(೨)

* ೫೦ ಕುಂಭೇಶ್ವರಲಿಂಗ + ಜಗನ್ನಾಥ=ಹೊಡೆಹುಲ್ಲಬಂಕಣ್ಣ.

* ೫೧ ಕುಂಭೇಶ್ವರಾ:—**ರೇಚವ್ವೆ**, ಕಾಟಕೂಟಯ್ಯನ ಪತ್ನಿ.

೫೨ ಕುಮಾರಸಂಗ:—

---

(೧) 'ಕಲ್ಲಿನಾಥಾ' ಎಂತಲೂ ಇರುತ್ತದೆ.

(೨) ಉದಾ:—ಕುಂಭೇಶ್ವರಲಿಂಗದಲ್ಲಿದ್ದ ಜಗನ್ನಾಥಸಾಕ್ಷಿಯಾಗಿ.

* ೫೩ ಕೂಡಲಚನ್ನಸಂಗಮದೇವಾ:—ಚನ್ನಬಸವ.

(೧)

೫೪ ಕೂಡಲಚನ್ನಸಂಗಯ್ಯ + ಅಲ್ಲಯ್ಯ:—

* ೫೫ ಕೂಡಲಸಂಗಮದೇವಾ:—ಬಸವ.

(೨)

೫೬ ಕೂಡಲಸಂಗಮದೇವ + ಬಸವಣ್ಣ=ಬಿಬ್ಬಿದೇವಯ್ಯ.

* ೫೭ ಕೇದಾರಗುರುದೇವಾ:—ಕೇದಾರಗುರು.

೫೮ ಗಜೇಶ್ವರಾ:—

೫೯ ಗಂಗಾಪ್ರಿಯ ಕೂಡಲಸಂಗಮದೇವಾ:— **ಗಂಗಾಂಬಿಕೆ**—ಬಸವೇಶ್ವರನ ಪತ್ನಿ.

೬೦ ಗಂಗೇಶ್ವರಲಿಂಗ:—**ಗಂಗಮ್ಮ.**

* ೬೧ ಗಾರುಡೇಶ್ವರಲಿಂಗ:—ಉಪ್ಪರಗುಡಿಯ ಸೋಮಿದೇವಯ್ಯ.

* ೬೨ ಗುಡಿಯಗುಮ್ಮಟನೊಡೆಯ ಅಗಮ್ಯೇಶ್ವರಲಿಂಗ:—ಮನುಮುನಿ ಗುಮ್ಮಟಯ್ಯ.

* ೬೩ ಗುರುಚನ್ನಬಸವೇಶ್ವರ:—

* ೬೪ ಗುರುಪುರದ ಮಲ್ಲಯ್ಯ:—ಮಲ್ಲಯ್ಯ.

* ೬೫ ಗುರುಶಾಂತೇಶ್ವರಾ:—**ವೀರಮ್ಮ**, ದಸರಯ್ಯಗಳ ಪತ್ನಿ.

೬೬ ಗುರುಸಿದ್ಧಮಲ್ಲ:—

(೩)

೬೭ ಗುಹೇಶ್ವರಲಿಂಗ + ಸಂಗನಬಸವಣ್ಣ:—

* ೬೮ ಗುಹೇಶ್ವರಾ:—ಅಲ್ಲಮಪ್ರಭು.

(೪)

* ೬೯ ಗುಹೇಶ್ವರ + ಅಲ್ಲಮ—ಗಾಣದ ಕನ್ನಪ್ಪ.

* ೭೦ ಗೋಪತಿನಾಥ ವಿಶ್ವೇಶ್ವರಲಿಂಗ:—ತುರುಗಾಹಿ ರಾಮಣ್ಣ.

* ೭೧ ಗೋರಕ್ಷಪಾಲಕ ಮಹಾಪ್ರಭುಸಿದ್ಧ ಸೋಮನಾಥಲಿಂಗ:—ಗೋರಕ್ಷ.

---

(೧) ಉದಾ:—ಕೂಡಲಚನ್ನಸಂಗಯ್ಯನಲ್ಲಿ ಅಲ್ಲಯ್ಯ.

(೨) ಉದಾ:—ಕೂಡಲಸಂಗಮದೇವರಲ್ಲಿ ಬಸವಣ್ಣ.

(೩) ಉದಾ:—ಗುಹೇಶ್ವರನ ಶರಣ ಸಂಗನಬಸವಣ್ಣ.

(೪) ಉದಾ:—ಗುಹೇಶ್ವರಲ್ಲಯ್ಯ, ಗುಹೇಶ್ವರನ ಶರಣ ಅಲ್ಲಮ, ಗುಹೇಶ್ವರನಲ್ಲಯ್ಯ.

೭೨ ಗೋಳಕಾಕಾರ ವಿಶ್ವವಿರಹಿತಲಿಂಗ:—ಸಿದ್ಧಾಂತಿ ವೀರಸಂಗಯ್ಯ.

* ೭೩ ಗೌರೇಶ್ವರಾ:—ಮೇದಾರ ಕೇತಯ್ಯ.

೭೪ ಘನಗುರು ಪ್ರಿಯ ಸೋಮನಾಥಾ:—

* ೭೫ ಘನಲಿಂಗಿಯ ಮೋಹದ ಚನ್ನಮಲ್ಲಿಕಾರ್ಜುನಾ:—ಘನಲಿಂಗದೇವ.

೭೬ ಚನ್ನಕೂಡಲ ರಾಮೇಶ್ವರಲಿಂಗ:—ಭರಿತಾರ್ಪಣದ ಚನ್ನಬಸವಣ್ಣ.

* ೭೭ ಚನ್ನಬಂಕನಾಥ:—

೭೮ ಚನ್ನಬಸವಣ್ಣ ಪ್ರಿಯ ಕಮಳೇಶ್ವರ ಲಿಂಗ:—ಕನ್ನಡೀ ಕಾಯಕದ ಅಮ್ಮಿದೇವಯ್ಯ.

* ೭೯ ಚನ್ನಬಸವಣ್ಣ ಪ್ರಿಯ ಚಂದೇಶ್ವರ ಲಿಂಗ:—

* ೮೦ ಚನ್ನಬಸವಣ್ಣ ಪ್ರಿಯ ಭೋಗಮಲ್ಲಿಕಾರ್ಜುನ ಲಿಂಗ:—ಪ್ರಸಾದಿ ಭೋಗಣ್ಣ.

* ೮೧ ಚನ್ನಮಲ್ಲಿಕಾರ್ಜುನಾ:—ಉಡುತಡಿಯ **ಮಹಾದೇವಿ.**

* ೮೨ ಚನ್ನಸಿದ್ಧನಾಥ:—

* ೮೩ ಚನ್ನ ಹಂಪೆಯ ವಿರುಪಯ್ಯ:—

೮೪ ಗುರು ವರದ ವಿರೂಪಾಕ್ಷ:—

* ೮೫ ಚಂಡೇಶ್ವರ ಲಿಂಗ:—

* ೮೬ ಚಂದೇಶ್ವರ ಲಿಂಗ:—ನುಲಿಯ ಚಂದಯ್ಯ.

* ೮೭ ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ:—ಗಟ್ಟಿವಾಳಯ್ಯ.

* ೮೮ ಜಂಗಮಲಿಂಗ ಪ್ರಭುವೇ:—

* ೮೯ ಜಾಂಬೇಶ್ವರಾ:—ರಾಯಸದ ಮಂಚಣ್ಣ.

೯೦ ತರುಣ ಸಂಗಮಲಿಂಗ ದೇವಾ:—ಮಿಂಡಸಂಗಯ್ಯ.

* ೯೧ ತೆಲುಗೇಶ್ವರಾ?—ತೆಲುಗು ಜೊಮ್ಮಯ್ಯ.

೯೨ ತೋಂಟದ ಸಿದ್ಧಲಿಂಗದೇವಾ:—ಸಿದ್ಧವೀರದೇವ.

* ೯೩ ದಸರೇಶ್ವರ ಲಿಂಗ:—ದಸರಯ್ಯ.

೯೪ ದಹನ ಚಂಡಿಕೇಶ್ವರ ಲಿಂಗ:—ಪ್ರಸಾದಿಲೆಂಕ ಬಂಕಣ್ಣ.

೯೫ ಧರ್ಮೇಶ್ವರಾ:—

೯೬ ನಂದಗೋಪೀಯ ಕಂದಪ್ರಿಯ ನಿಸ್ಸಂಗಲಿಂಗ ರಾಮನಾಥಾ:—

೯೭ ನಾಗಯ್ಯ ಪ್ರಿಯ ಚನ್ನರಾಮೇಶ್ವರಾ:—ಶಿವನಾಗಮಯ್ಯ.

* ೯೮ ನಾಚಯ್ಯ ಪ್ರಿಯ ಚನ್ನರಾಮೇಶ್ವರಾ:—ಅನಾಮಿಕ ನಾಚಯ್ಯ.

* ೯೯ ನಾಚಯ್ಯ ಪ್ರಿಯ ಮಲ್ಲಿನಾಥಯ್ಯ:—ದಶಗುಣ ಸಿಂಗಿದೇವಯ್ಯ.

* ೧೦೦ ನಾರಾಯಣ ಪ್ರಿಯ ರಾಮನಾಥಾ:—ಗುಪ್ತ ಮಂಚಣ್ಣ.

* ೧೦೧ ಸಾಸ್ತಿನಾಥಾ:—**ಗೊಗ್ಗವ್ವೆ.**

* ೧೦೨ ನಿಜಗುಣಯೋಗಿ:—ನಿಜಗುಣ.

* ೧೦೩ ನಿಜಗುಣೇಶ್ವರಲಿಂಗ:—**ಮಸಣಮ್ಮ,** ಎಡೆಮಟದ ನಾಗಿದೇವನ ಪತ್ನಿ.

೧೦೪ ನಿಜಗುರು ಭೋಗಸಂಗ=ಭೋಗಣ್ಣ.

೧೦೫ ನಿಜಗುರು ಶಂಕರದೇವಾ:—ಶಂಕರದಾಸಿಮಯ್ಯ.

೧೦೬ ನಿಜಗುರು ಶಾಂತೇಶ್ವರಾ:—

* ೧೦೭ ನಿಜಗುರು ಸ್ವತಂತ್ರ ಕಪಿಲಸಿದ್ಧಮಲ್ಲೇಶ್ವರಾ:—

* ೧೦೮ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ:—

೧೦೯ ನಿಜಲಿಂಗೈಕ್ಯ ನಿಃಕಳಂಕ ನಿರ್ಮಾಯ ಪ್ರಭುವೇ:—

೧೧೦ ನಿರಂಜನಲಿಂಗ:—ನಿರಂಜನದೇವ.

೧೧೧ ನಿರಹಂಕಾರಭೀಮಯ್ಯ:—ಅಹಂಕಾರ ಭೀಮಯ್ಯ.

೧೧೨ ನಿರಾಲಂಬ:—ನಿರಾಲಂಬದೇವ.

* ೧೧೩ ನಿರ್ಭೀತಿ ನಿಜಲಿಂಗದಲ್ಲಿ:—ಕಾಲುಕಣ್ಣಿಯ **ಕಾಯಮ್ಮ.** (೧)

* ೧೧೪ ನಿರ್ಲಜ್ಜೇಶ್ವರಾ:—ಕೊಟ್ಟಣದ **ಸೋಮವ್ವೆ.**

* ೧೧೫ ನಿವೃತ್ತಿ ಸಂಗಯ್ಯ:—ನಿವೃತ್ತಿಸಂಗಯ್ಯದೇವರು.

* ೧೧೬ ನಿಸ್ಸಂಗ ನಿರಾಳಪ್ರಭುವೇ:—

* ೧೧೭ ನಿಂಬೇಶ್ವರಾ:—**ಗುಡ್ಡವ್ವೆ,** ಬತ್ತಲೇಶ್ವರನ ಪತ್ನಿ.

* ೧೧೮ ನಿಃಕಳಂಕ ಕೂಡಲಚನ್ನ ಸಂಗಮದೇವಾ:—ಹಡಪದ ರೇಚಣ್ಣ.

* ೧೧೯ ನಿಃಕಳಂಕ ಮಲ್ಲಿಕಾರ್ಜುನಾ:—ಮೋಳಿಗೆಯ ಮಾರಯ್ಯ.

೧೨೦ ಪಡಿಹಾರಿ ಪ್ರಿಯ ಕೂಡಲಸಂಗಮದೇವಾ:—ಪಡಿಹಾರಿ ಬಸವಣ್ಣ.

೧೨೧ ಪರ್ವತನಾಥಲಿಂಗ:—ಪರ್ವತನಾಥ

---

(೧) ಒಂದು ಕಡೆಗೆ ಸೂಳೆ ಸಂಕವ್ವೆ ಎಂತಲೂ ಶಿಗುತ್ತದೆ.

(೧)
* ೧೨೨ ಪುಣ್ಯಾರಣ್ಯ ದಹನ ಭೀಮೇಶ್ವರಲಿಂಗ ನಿರಂಗಸಂಗಾ:—ಕೋಲ ಶಾಂತಯ್ಯ.

೧೨೩ ಪ್ರಸನ್ನ ಕಪಿಲಸಿದ್ಧ ಮಲ್ಲಿಕಾರ್ಜುನಲಿಂಗ:— ಸೂಜೀಕಾಯಕದ ರಾಮಿತಂದೆ.

/* ೧೨೪ ಬಸವಪ್ರಿಯ ಕೂಡಲಚನ್ನಸಂಗಮದೇವಾ:—ಹಡಪದ ಅಪ್ಪಣ್ಣ.

/ ೧೨೫ ಬಸವಪ್ರಿಯ ಕೂಡಲಸಂಗಮದೇವಾ:—**ನೀಲಾಂಬಿಕೆ.**

/ ೧೨೬ ಬಸವಣ್ಣ ಪ್ರಿಯ ಚನ್ನಸಂಗಾ:—**ಅಕ್ಕನಾಗಾಯಿ.**

* ೧೨೭ ಬಸವಣ್ಣ ಪ್ರಿಯನಾಗರೇಶ್ವರಲಿಂಗ:—ಬೊಕ್ಕಸದ ಸಂಗಣ್ಣ.

೧೨೮ ಬಸವಣ್ಣಪ್ರಿಯ ನಿಃಕಳಂಕಸೋಮೇಶ್ವರಾ:—

* ೧೨೯ ಬಸವಣ್ಣಪ್ರಿಯ ವಿಶ್ವಕರ್ಮಟಕ್ಕೆ ಕಾಶಿಕಾವಿಮಲರಾಜೇಶ್ವರಲಿಂಗ:- ಬಾಚಿಕಾಯಕದ ಬಸವಣ್ಣ.

* ೧೩೦ ಬಳ್ಳೇಶ್ವರಲಿಂಗ:—ಬಳ್ಳೇಶಮಲ್ಲಯ್ಯ.

೧೩೧ ಬಂಕೇಶ್ವರಾ:—ಸುಂಕದ ಬಂಕಣ್ಣ.

* ೧೩೨ ಬ್ರಹ್ಮೇಶ್ವರಲಿಂಗ:—

೧೩೩ ಬಾಲಸಂಗಯ್ಯ ಪ್ರಿಯ ಕೂಡಲಸಂಗಮದೇವಾ:—

* ೧೩೪ ಬಿಡಾಡಿ:—**ಬೊಂತಾದೇವಿ.**

೧೩೫ ಬೋಳಬಸವೇಶ್ವರಾ:—ಗುಮ್ಮಳಾಪುರದ ಸಿದ್ಧಲಿಂಗದೇವ.

೧೩೬ ಭಾರೇಶ್ವರಲಿಂಗ:—ಕಾಮಾಟದ ಭೀಮಣ್ಣ.

* ೧೩೭ ಭೀಮೇಶ್ವರಲಿಂಗ:—ಪಾಕದ ಭೀಮಯ್ಯ.

* ೧೩೮ ಭೀಮೇಶ್ವರಾ:—**ಕಾಳವ್ವೆ,** ಸಿದ್ಧಬುದ್ಧಯ್ಯಗಳ ಪತ್ನಿ.

* ೧೩೯ ಭೋಗಬಂಕೇಶ್ವರಲಿಂಗ:—ಅಂಗಸೋಂಕಿನ ಲಿಂಗತಂದೆ.

* ೧೪೦ ಭೋಗೇಶ್ವರಾ:—

೧೪೧ ಭೌಂಭೇಶ್ವರಾ:—

೧೪೨ ಮತ್ಪ್ರಾಣನಾಥ ಮಹಾ ಶ್ರೀಗುರುಸಿದ್ಧಲಿಂಗೇಶ್ವರಾ:—

* ೧೪೩ ಮನಕ್ಕೆ ಮನೋಹರ ಶಂಖೇಶ್ವರಲಿಂಗ:—ಕರುಳಕೇತಯ್ಯ.

---

(೧) ಪಾಪಾರಣ್ಯ ದಹನ ಭೀಮೇಶ್ವರ ಲಿಂಗನಿರಂಗಸಂಗಾ ಎಂತಲೂ ಇರುತ್ತದೆ.

* ೧೪೪ ಮರುಳು ಶಂಕರಪ್ರಿಯ ಸಿದ್ಧರಾಮೇಶ್ವರಲಿಂಗ:—ವೈದ್ಯಸಂಗಣ್ಣ.

೧೪೫ ಮಸಣಯ್ಯ ಪ್ರಿಯ ಗಜೇಶ್ವರಾ:—

* ೧೪೬ ಮಹಾಘನ ದೊಡ್ಡ ದೇಶಿಕಾರ್ಯ ಗುರುಪ್ರಭುವೇ:—ಮುಮ್ಮಡಿ ಕಾರ್ಯೇಂದ್ರ.

೧೪೭ ಮಹಾದೇವ ಜ್ಯೋತಿರ್ಲಿಂಗ:—**ಮಹಾದೇವಿ.**

* ೧೪೮ ಮಹಾದೇವ ಲಿಂಗ:—ಘರಾರೇ ದೇವಯ್ಯ.

* ೧೪೯ ಮಹಾಲಿಂಗ ಕಲ್ಲೇಶ್ವರಾ:—ಹಾವಿನ ಹಾಳ ಕಲ್ಲಯ್ಯ.

* ೧೫೦ ಮಹಾಲಿಂಗ ಗಜೇಶ್ವರ:—ಗಜೇಶ ಮಸಣಯ್ಯ.

* ೧೫೧ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ:—ತೋಂಟದ ಸಿದ್ಧಲಿಂಗ.

೧೫೨ ಮಹಾಲಿಂಗ ಚನ್ನರಾಮಾ:—ಮೈದುನ ರಾಮಯ್ಯ.

* ೧೫೩ ಮಹಾಲಿಂಗ ತ್ರಿಪುರಾಂತಕ ದೇವ:—ಕಿನ್ನರೀ ಬ್ರಹ್ಮಯ್ಯ.

೧೫೪ ಮಾರದ ಮಹಾಲಿಂಗ:—

(೧)

೧೫೫ ಮಾರನವೈರಿ ಮಾರೇಶ್ವರಾ:—ಕನ್ನದ ಮಾರಿ ತಂದೆಗಳು.

(೨)

* ೧೫೬ ಮಾರಯ್ಯ ಪ್ರಿಯ ಅಮಳೇಶ್ವರಲಿಂಗ:—ಆಯುದಕ್ಕಿ ಮಾರಯ್ಯ.

* ೧೫೭ ಮಾರೇಶ್ವರಾ:—ಮಾರೇಶ್ವರೊಡೆಯರು.

೧೫೮ ಮುಕ್ಕಣ್ಣ ಸೊಡ್ಡಳಭಾಸ್ಕರಾ:—ಸೊಡ್ಡಳಭಾಸ್ಕರ.

೧೫೯ ಮುಗ್ಧಸಂಗಾ:—ಮುಗ್ಧಸಂಗಯ್ಯ.

೧೬೦ ಮುತ್ತಿನ ಸಂಗಲಿಂಗ:—ಮೌಕ್ತಿಕಸಂಗಯ್ಯ.

೧೬೧ ಮೂಲಪ್ರಣಮದೇವಾ:—ಮೂಲಪ್ರಣಮದೇವ.

* ೧೬೨ ಮೇಖಲೇಶ್ವರಲಿಂಗ:—ಕಲಕೇತಯ್ಯ.

* ೧೬೩ ಯೋಗಿನಾಥಾ:—

* ೧೬೪ ರಕ್ಕಸನೊಡೆಯ ಕೊಟ್ಟುದು ಬೇಡಾ:—ರಕ್ಕಸದ ಬೊಮ್ಮಣ್ಣ.

* ೧೬೫ ರಾಮನಾಥಾ:—ದೇವರ ದಾಸಿಮಯ್ಯ.

* ೧೬೬ ರಾಮೇಶ್ವರಲಿಂಗ:—ಮೆರೆಮಿಂಡದೇವ.

---

(೧) ಮದನಂಗೆ ದೂರಮಾರೇಶ್ವರಾ ಎಂತಲೂ ಇರುತ್ತದೆ.

(೨) ಮಾರಯ್ಯಪ್ರಿಯ ಅಮರೇಶ್ವರಲಿಂಗವೆಂತಲೂ ಇದೆ

* ೧೬೭ ರೇಕಣ್ಣ ಪ್ರಿಯನಾಗಿ ನಾಥಾ:—ಬಹುರೂಪಿ ಚೌಡಯ್ಯ.

೧೬೮ ರೇಕನಾಥಯ್ಯ:—

೧೬೯ ಲಲಾಮ ಭೀಮ ಸಂಗಮೇಶ್ವರ:—ವೇದಮೂರ್ತಿ ಸಂಗಣ್ಣ.

೧೭೦ ಲಿಂಗ ಸತ್ಯಣ್ಣ:—ಲಿಂಗಸತ್ಯಣ್ಣ.

* ೧೭೧ ವರದ ಶಂಕರೇಶ್ವರಾ:—ವರದಸಂಗಣ್ಣ.

೧೭೨ ವೀರಚಂಡಲಿಂಗಾ:—ವೀರಚಂಡ.

* ೧೭೩ ವೀರ ಬೀರೇಶ್ವರಲಿಂಗ:—ವೀರ ಗೊಲ್ಲಾಳಯ್ಯ.

೧೭೪ ವೀರ ರಾಚೋಟಿಲಿಂಗ:—ರತ್ನದ ರಾಚಯ್ಯ.

* ೧೭೫ ವೀರ ಶೂರ ರಾಮೇಶ್ವರಲಿಂಗ:—ಬಾಲ ಬೊಮ್ಮಣ್ಣ.

* ೧೭೬ ಶಂಭುಗಿಂದಿತ್ತ ಸ್ವಯಂಭುಗಿಂದತ್ತ ಅತಿ ಬಳ ನೋಡಾ ಮಾತುಳಂಗ
ಮಧುಕೇಶ್ವರನು:—ದಾಸೋಹದ ಸಂಕಣ್ಣ.

೧೭೭ ಶಂಭು ತೆಲುಗೇಶ್ವರಾ:—ತೆಲುಗೇಶ ಮಸಣಯ್ಯ.

* ೧೭೮ ಶಂಭುಜಕ್ಕೇಶ್ವರಾ:— ಸತ್ಯಕ್ಕ.

೧೭೯ ಶಂಭು ಭುಜಂಗೇಶ್ವರ ಲಿಂಗ:—

೧೮೦ ಶಂಭು ಸೋಮನಾಥಲಿಂಗ:—ಜೋಧರಮಾಯಣ್ಣ.

೧೮೧ ಶಾಂತ ಕೂಡಲಸಂಗಮದೇವಾ:—ಹಣದಾಸಿ ವೀರಣ್ಣ.

೧೮೨ ಶಾಂತರಾಮಲಿಂಗ:—ಶಾಂತರಾಮ.

* ೧೮೩ ಶಾಂತ ಮಲ್ಲಿಕಾರ್ಜುನಾ:—

೧೮೪ ಶಾರ್ದೂಲಲಿಂಗ:—ಶಾರ್ದೂಲಸಂಗಯ್ಯ.

೧೮೫ ಶಿವತಂತ್ರ ಗುರುಶಾಂತೇಶ್ವರಾ:—

೧೮೬ ಶಿವಪೂಜೆಯ ಭೀಮನಾಡಿದ ವಾಕ್ಯ:—ಶಿವಪೂಜೆಯ ಭೀಮಯ್ಯ.

೧೮೭ ಶಿವಶಾಂತಮಲ್ಲಿಕಾರ್ಜುನಾ:—ಶಾಂತಶೆಟ್ಟಿ.

೧೮೮ ಶಿವಾನಂದಲಿಂಗ:—ಶಿವಾನಂದದೇವ.

೧೮೯ ಶ್ರೀಗುರು ಪಂಚಾಕ್ಷರಲಿಂಗ:—ಪಂಚಾಕ್ಷರದೇವ.

* ೧೯೦ ಶ್ರೀಗುರುಲಿಂಗ ಜಂಗಮವೇ:—

* ೧೯೧ ಶ್ರೀಗುರು ಸಿದ್ಧೇಶ್ವರನು:—ರೇಕಮ್ಮ, ರೇವಣಸಿದ್ಧಯ್ಯಗಳ ಪತ್ನಿ.

* ೧೯೨ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗ:—ಎಚ್ಚರಿಕೆ ಕಾಯಕದ ಮುಕ್ತಿನಾಥಯ್ಯ.

* ೧೯೩ ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನಪ್ರಭುವೇ ಶಾಂತ ಚನ್ನಮಲ್ಲಿಕಾರ್ಜುನಾ:—ಮರುಳು ಶಂಕರದೇವ.

* ೧೯೪ ಸಕಳೇಶ್ವರದೇವ:—ಸಕಳೇಶ ಮಾದರಸ.

* ೧೯೫ ಸಗರದ ಬೊಮ್ಮನೊಡೆಯ ತನುಮನ ಸಂಗಮೇಶ್ವರಾ:—ಸಗರದ ಬೊಮ್ಮಣ್ಣ.

(೧)

* ೧೯೬ ಸಂಗನಬಸವಣ್ಣ + ಬ್ರಹ್ಮೇಶ್ವರಲಿಂಗ:—

* ೧೯೭ ಸಂಗನಬಸವೇಶ್ವರಾ:—

(೨)

೧೯೮ ಸಂಗಮೇಶ್ವರಲಿಂಗ:—

೧೯೯ ಸಂಗಯ್ಯ:—**ನೀಲಲೋಚನೆ.**

* ೨೦೦ ಸಂಗಯ್ಯ ಪ್ರಿಯ ಬಂಕೇಶ್ವರಾ:—

(೩)

* ೨೦೧ ಸದಾಶಿವಮೂರ್ತಿಲಿಂಗ:—ಅರುವಿನ ಮಾರಿ ತಂದೆಗಳು.

೨೦೨ ಸದ್ಗುರು ಸಂಗ ನಿರಂಗಲಿಂಗ:—ಕನ್ನಡಿಕಾಯಕದ **ರೇಮಮ್ಮ.**

* ೨೦೩ ಸದ್ಯೋಜಾತಲಿಂಗ:—ಅವಸರದ ರೇಚಣ್ಣ.

೨೦೪ ಸಾಂಬ ಸೋಮೇಶ್ವರಲಿಂಗ:—ಶಂಕರಸೋಮಯ್ಯ.

(೪)

* ೨೦೫ ಸಿದ್ಧಸೋಮನಾಥ:—ಅಮುಗಿದೇವ.

---

(೧) ಉದಾ:— ಸಂಗನಬಸವಣ್ಣ ಸಾಕ್ಷಿಯಾಗಿ ಬ್ರಹ್ಮೇಶ್ವರಲಿಂಗ, ಸಂಗನಬಸವಣ್ಣನಿಂದ ಬ್ರಹ್ಮೇಶ್ವರಲಿಂಗವ ನರಿ—ಇತ್ಯಾದಿ.

(೨) ಸಂಗಪ್ರಭು ಎಂತಲೂ ಇದೆ.

(೩) ಸದಾಶಿವಲಿಂಗಮೂರ್ತಿ ಎಂತಲೂ ಇದೆ

(೪) ಸದ್ಗುರುಸಿದ್ಧ ಸೋಮೇಶ್ಸರಲಿಂಗ, ಮಹಾಘನ ಸದ್ಗುರು ಸಿದ್ಧ ಸೋಮನಾಥಾ, ಶಂಭು ಸೋಮನಾಥಲಿಂಗ ಎಂತಲೂ ಸಿಗುತ್ತವೆ ಈ ಅಂಕಿತಗಳಲ್ಲಿ "ಶಂಭು ಸೋಮನಾಥಲಿಂಗ" ಇದು ಬೇರೊಂದು ವಚನವೊ ಹ್ಯಾಗೆ ಎಂಬದರ ಬಗ್ಗೆ ನನಗೆ ಸಂಶಯವಿದೆ.

(೧)

೨೦೬ ಸಿಮ್ಮಲಿಗೆಯ ಚನ್ನರಾಮಾ:--ಚಂದಿಮರಸ.

೨೦೭ ಸುಂದರ ಶಿವಲಿಂಗಯ್ಯಾ:--ಬೆಡಗಿನ ಸುಂದರಯ್ಯ.

೨೦೮ ಸುವರ್ಣಲಿಂಗ:--**ಸುವರ್ಣದೇವಿ.**

(೨)

೨೦೯ ಸೊಡ್ಡಳಾ:—ಸೊಡ್ಡಳ ಬಾಚರಸ.

೨೧೦ ಸೋಮೇಶ್ವರಲಿಂಗ:—ಪುಷ್ಪದ ಸೋಮಯ್ಯ.

(೩)

೨೧೧ ಸೌರಾಷ್ಟ್ರ ಸೋಮನಾಥಾ:—ಆದಯ್ಯ.

(೪)

೨೧೨ ಹುಲಿಗೆರಿಯ ಸೋಮೇಶ್ವರ:--

೨೧೩ ಕ್ಷೇತ್ರನಾಥಲಿಂಗ:—ಕ್ಷೇತ್ರನಾಥ.

---

(೧) ಸಿಮ್ಮಲಿಗೆಯ ಚನ್ನರಾಮಾ ಎಂತಲೂ ಇದೆ.

(೨) ದೇವರ ದೇವ ಸೊಡ್ಡಳಾ, ವೃಷಭದೇವ ಸೊಡ್ಡಳಾ, ಶಂಭು ಸೊಡ್ಡಳಾ, ಮುಕ್ಕಣ್ಣ ಸೊಡ್ಡಳಾ, ಸೊಡ್ಡಳ ಗರಳಧರಾ, ದೇವರಾಯ ಸೊಡ್ಡಳಾ, ಮಹಾದಾನಿ ಸೊಡ್ಡಳಾ, ಚನ್ನ ಸೊಡ್ಡಳಾ, ಏಕಾಂತವೀರ ಸೊಡ್ಡಳಾ ಎಂಬ ಅಂಕಿತಗಳೂ ಸಿಗುತ್ತವೆ ಇವುಗಳಲ್ಲಿ "ಏಕಾಂತವೀರ ಸೊಡ್ಡಳಾ" ಎಂಬದು ಸ್ವತಂತ್ರ ವಚನವೋ ಹ್ಯಾಗೆ ಎಂಬದರ ಬಗ್ಗೆ ನನಗೆ ಸಂಶಯವಿದೆ.

(೩) ಸೌರಾಷ್ಟ್ರ ಸೋಮೇಶ್ವರಾ ಎಂತಲೂ ಇದೆ.

(೪) ಮಹಾಘನಲಿಂಗ ಹುಲಿಗೆರಿಯ ಸೋಮೇಶ್ವರ, ಹುಲಿಗೆರಿಯ ವರದ ಸೋಮನಾಥ ಎಂತಲೂ ಮುದ್ರಿಕೆಗಳು ಇವೆ.